START

START

MICRO FILMED
BY
KARNATAKA STATE
ARCHIVES
1992

MICRO FILMED
BY
KARNATAKA STATE
ARCHIVES
1991

ARS 38 A PP 90-91

"ಜಯಂತಿ" ಮಾಸ ಪತ್ರಿಕೆ
ಮಾರ್ಚ್ 1955 ಪುಟ
365 ರಿಂದ ಮುಂದುವರಿದಿದೆ.

ARS 38 APP 90-91

"ಜಯಂತಿ" ಮಾಸ ಪತ್ರಿಕೆ
ಮಾರ್ಚ 1955 ಪುಟ
365 ರಿಂದ ಮುಂದುವರಿದಿದೆ.

. . . .

ಶ್ರೀ 'ಆನಂದಕಂದರು' (ಬೆಟಗೇರಿ ಕೃಷ್ಣಶರ್ಮಾ) ಇಂಥ ಒಳ್ಳೆಯ ರೂಪಕಗಳನ್ನು ಪುಸ್ತಕರೂಪದಲ್ಲಿ ತಂದು ಕನ್ನಡಿಗರಿಗೆ ಉಪಕಾರಮಾಡಿದ್ದಾರೆ. ಅವರ ಆಕರ್ಷಕ ಸಂಭಾಷಣೆಗೆ, ತಿಳಿಯಾದ ನಗೆಯ ಬುಗ್ಗೆಗೆ, ಮನಮೆಚ್ಚುವ ಪಾತ್ರನಿರೂಪಣೆಗೆ, ಪ್ರತಿಯೊಬ್ಬರೂ ಓದಲೇಬೇಕಾದ ಕೃತಿ 'ಬೆಂದ ಹೃದಯ'.

—ಪುಸ್ತಕಪ್ರಪಂಚ (ಸಪ್ಟಂಬರ್ ೧೯೫೪)

ಕ್ರಾ. ೮. ೧೨೦ ಪುಟಗಳು

ಬೆಲೆ ೧-೪-೦

ಶರತ್ ಪ್ರಕಾಶನಮಂದಿರ, ವಿಜಯರೋಡ್, ಧಾರವಾಡ.

Printed by N. A. Hoskeri at the Vijaya Press, Dharwar, and published for the Proprietors Jayanti publications, by S. D. Dharmatti, at the Jayanti Office, Dharwar

ಜಯಂತಿ

ಾರ್ಚ್ ೯

೯೫೫

ಬೆಲೆ:

ಆಣೆಗಳು

ಕರ್ಮ-ಯೋಗಗಳ ಸಮನ್ವಯವೇ

ಮಾನವತೆಯ ಪೂರ್ಣತೆ!

ಭೋಗವಿಚಾರವು ಬೇಕು ನೃಪತಿಗಾತ್ಮ-
ಯೋಗವಿಚಾರವು ಬೇಕು...
ರಾಗರಸಿಕನಾಗಬೇಕು — ಭಾವಿಸೆ ವೀತ
ರಾಗರಸಿಕನಾಬೇಕು !

— ಕವಿ ರತ್ನಾಕರಸಿದ್ಧ

* * *

ಎಲ್ಲಿ ಯೋಗೀಶ್ವರ ಶ್ರೀಕೃಷ್ಣನಿರುವನೊ
ಬಿಲ್ಲಾಳು ಪಾರ್ಥನೆಲ್ಲಿಹನೊ
ಅಲ್ಲೆಲ್ಲ ಐಶ್ವರ್ಯ-ವಿಜಯ-ಕುಶಲಗಳು
ಉಲ್ಲಸದಾಟವಾಡುವುವು!

ಯೋಗೀಶ್ವರ ವ್ಯಾಸ

ಭದ್ರಂ! ಶುಭಂ!! ಮಂಗಲಂ!!

ಪುಟ
೭.

JAYANTI

ಸಂಚಿಕೆ
೧೦

ಪರಿವಿಡಿ

●

ಸಂಪಾದಕೀಯ ೩೬೫

ನಾವೆಸರ ೩೬೭

ಸಾಹಿತ್ಯ ವಿಮರ್ಶೆಯ ಶಿಲ್ಪಾರಂಗ ೩೬೮

ಪುನರ್ಜನ್ಮ (ಸಣ್ಣ ಕತೆ)
ಶ್ರೀ ವೆಂಕಟರಾವ ಕೃಷ್ಣ, ಮುಂಬಯಿ ೩೬೯

ಕವಿಃ ಕವಯಿತ್ರಿಃ ಫ್ರಾನ್ಸಿಸ್ (ಕವನ)
ಎಸ್. ಕೆ. ಉಪಾಧ್ಯಾಯ, ಎಂ. ಎ. ಹೈದರಾಬಾದ. ೩೭೯

ಬಡವನ ಮೊರೆ (ಕವನ)
ಶ್ರೀ. ವೆಂಕಟರಾವ ಪುರೋಹಿತ್ಯಮ, ಪುಣೂರ ೩೭೯

ಅಪ್ಪನಿಲ್ಲದ ಹೋಟ (ಜೀವನ ಪರಿಚಯ)
ಶ್ರೀ ಬಿ. ಆರ್. ನಾಡಗೀರ ಬಿ. ಎಸ್ಸಿ., ಮುಂಬಯಿ ೩೮೦

ಸಾಹಿತ್ಯದ ಮಹತ್ವ (ವಿಚಾರ ಪ್ರಬಂಧ)
ಶ್ರೀ ಎಸ್. ವ್ಹಿ. ಕೊಣ್ಣೂರ, ಶಿವಮೊಗ್ಗ ೩೮೬

ಧರ್ಮಶಕ್ತಿ (ನಾಟಕ ವಿವೇಚನೆ)
ಶ್ರೀ ಪ್ರಾಣೇಶಾಚಾರ್ಯ ಮಲಗಾವಡಿ,
ಬಿ. ಎ., ಎಲ್‌ಎಲ್. ಬಿ., ಬಾಗಲಕೋಟೆ ೩೮೯

ಹಕ್ಕಿ ಬಿಡಿಸುವ ಹಾಡು (ಜಾನಪದ ಚಿತ್ರ)
ಶ್ರೀ. ಪ್ರ ಕಪ್ಪಣ್ಣ, ಧಾರವಾಡ ೩೯೬

ಗಣೇಶನ ಮೂಲಸ್ವರೂಪ (ಸಂಶೋಧನಾತ್ಮಕ)
ಶ್ರೀ ವ್ಹಿ. ಕೆ. ರಾಘವೇಂದ್ರಾಚಾರ್ಯ, ಧಾರವಾಡ ೩೯೭

ಅಕ್ಕರಜ್ಜನ (ಕವನ)
ಶ್ರೀ ನರಸಿಂಹ ಮಾಳೀಪಾಟೀಲ, ಬಿ. ಎ., ಧಾರವಾಡ ೪೦೦

ಸಾದರ ಸ್ವೀಕಾರ (ಹೊದಿಕೆಯ ಮೂರನೆಯ ಪುಟ)

ಜಯಂತಿ

ಸಂಪುಟ ೧೭ ಸಂಚಿಕೆ ೧೦

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾಸದ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಸಾಹಿತ್ಯಿಕ ಮತ್ತು ಅವನ ಭಾಷಾಭಿಜ್ಞತೆ

ಸಾಹಿತ್ಯವು ಇಂದು ಸರ್ವರ ಸೊತ್ತಾಗುತ್ತ ನಡೆದಿದೆ. ಅದನ್ನು ನಿರ್ಮಿಸುವ ಮತ್ತು ಓದುವ ಅಧಿಕಾರವು ಎಲ್ಲರಿಗೂ ಉಂಟು. ಸಾಹಿತ್ಯ ನಿರ್ಮಿತಿಗಾಗಿ ಜಾತಿ-ಮತ-ಪಂಥ-ಪಂಗಡಗಳ ಯಾವ ಅಡೆ-ತಡೆಗಳು ಎಂದೂ ಇರಲಿಲ್ಲ. ಸಾಹಿತ್ಯವು ಒಂದು ಕಲೆ. ಸೌಂದರ್ಯಾನುಭೂತಿಯೆ ಅದರ ಮುಖ್ಯ ಗುರಿ. ಸ್ವರ-ಲಯ-ರಾಗಗಳಿಂದ ತುಂಬಿರುವ ಸಂಗೀತವು ಯಾರ ಮುಖದಿಂದ ಬಂದರೇನು? ಅದು ಸಹೃದಯರೆಲ್ಲರಿಗೂ ಆಪ್ಯಾಯನಕಾರಿಯಾಗಿರುತ್ತದೆ. ಅದೇ—ಸ್ವರಶುದ್ಧಿ, ಲಯಶುದ್ಧಿ, ರಾಗಶುದ್ಧಿಗಳಿಲ್ಲದ ಸಂಗೀತವನ್ನು ಎಂತಹ ಪ್ರಾಜ್ಞಬ್ರುವನು ಹಾಡಿದರೂ, ಯಾರ ಮನಸ್ಸನ್ನೂ ಅದು ಹಿಡಿಯಲಾರದಷ್ಟೇ ಅಲ್ಲ, ಕಲೆಯ ಆದರ್ಶವನ್ನೂ ಸಾಧಿಸಲಾರದು.

ಸಂಗೀತಕ್ಕೆ ಸ್ವರಪ್ರಭುತ್ವವು ಮುಖ್ಯ ಸಾಧನವಾಗಿರುವಂತೆ, ಸಾಹಿತ್ಯಕ್ಕೆ ಭಾಷಾ ಪ್ರಭುತ್ವವು ಪ್ರಧಾನಸಾಧನವಾಗಿರುವುದು. ಭಾಷೆಯೊಂದೇ ಸಾಹಿತ್ಯಶಕ್ತಿಯ ಪ್ರಮುಖವಾದ ವಾಹಕ. ಈ ವಾಹಕವು ಸಮರ್ಥವಾಗಿದ್ದು ತನ್ನ ಕಾರ್ಯವನ್ನು ಸರಿಯಾಗಿ ನೆರವೇರಿಸಿತೊ, ಸಾಹಿತ್ಯಿಕನ ಕೃತಿನಿರ್ಮಿತಿಗೆ ಒಂದು ಸಾರ್ಥಕತೆಯುಂಟಾಗುವುದು; ಓದಿ ರಸ-ಭಾವಗಳನ್ನು ಸವಿಯಬೇಕೆನ್ನುವ ಸಹೃದಯರ ಬಳಗವೂ ಅದರಿಂದ ಪ್ರಯೋಜನವನ್ನು ಪಡೆಯುವುದು.

ಹಿಂದಿನಕಾಲದಲ್ಲಿ ಸಾಹಿತ್ಯ ನಿರ್ಮಾತೃಗಳಾಗಬೇಕೆನ್ನುವವರೂ, ಸಾಹಿತ್ಯ ರಸಿಕರಾಗಬೇಕೆನ್ನುವವರೂ ಲಕ್ಷಣಶಾಸ್ತ್ರವನ್ನು ಚೆನ್ನಾಗಿ ಅಭ್ಯಾಸಮಾಡಿಕೊಂಡಿರುತ್ತಿದ್ದರು. ಲಕ್ಷಣಶಾಸ್ತ್ರದಲ್ಲಿಯ ಮೊದಲನೆಯ ವಿಷಯವೇ ವ್ಯಾಕರಣ. ಮಾತಿನಿಂದಲೇ ಸಾಹಿತ್ಯವನ್ನು ನಿರ್ಮಿಸಬೇಕಾಗಿರುವಾಗ, ಮಾತಿನ ಮರ್ಮವನ್ನೆಲ್ಲ ಚೆನ್ನಾಗಿ ಅರಿತುಕೊಳ್ಳಲೇಬೇಕಲ್ಲವೆ? ಅದಕ್ಕಾಗಿ ಶಬ್ದಸಂಗ್ರಹಬೇಕು; ಶಬ್ದಾರ್ಥಗಳ ಸಂಪೂರ್ಣವಾದ ತಿಳಿವಳಿಕೆ ಬೇಕು. ಮಾತಿನಲ್ಲಿ ಬಳಸುವಾಗ ಅನೇಕ ಶಬ್ದಗಳು ಪಡೆಯುವ ವಿಶಿಷ್ಟ ಅರ್ಥಗಳ ಸೂಕ್ಷ್ಮ ತಿಳಿವಳಿಕೆಬೇಕು. ವಾಕ್ಯಗಳನ್ನು ಅಂದವಾಗಿ ರಚಿಸುವ ಚಾತುರ್ಯಬೇಕು. ಉಚಿತ ಪದಗಳನ್ನು ಉಚಿತ ಸ್ಥಳಗಳಲ್ಲಿ ಇರಿಸಬಲ್ಲ ಜಾಣ್ಮೆಬೇಕು. ತಾನು ರಚಿಸಬೇಕಾದ ಸಾಹಿತ್ಯದ ಭಾಷೆಯ ದೇಶಿಯ ಪರಂಪರೆ, ಮಾರ್ಗಪರಂಪರೆ ಇವೆರಡನ್ನೂ ಚೆನ್ನಾಗಿ ಅರಿತುಕೊಂಡವನಾಗಿರಬೇಕು. ಭಾಷೆಯ ಸಂಪೂರ್ಣ ಜ್ಞಾನವಿಲ್ಲದೆ ಸಾಹಿತ್ಯನಿರ್ಮಿತಿಗೆ ಕೈಯಿಕ್ಕಬೇಕೆನ್ನುವವನ ಹಂಬಲವು ಗಾಂಧಾರಿದೇವಿಯ ಮಕ್ಕಳ ಹಂಬಲದಂತೆ ಪರಿಣಮಿಸುವುದು. ಕುಂತಿ ಹೆತ್ತಳೆಂದು ತಾನೂ ತನ್ನ ಅಪೂರ್ಣ—ಅಪಕ್ವ ಗರ್ಭವನ್ನವಳು ಒಡೆದುಕೊಂಡಳು. ಹುಟ್ಟಿದ ಕೂಸುಗಳೇನೋ ನೂರಾಒಂದ; ಆದರೆ ಒಂದರಲ್ಲಿಯೂ ಪ್ರಾಣವಿಲ್ಲ, ತ್ರಾಣವಿಲ್ಲ. ಅಂಗಾಂಗಗಳ ವಿಕಾಸವಿಲ್ಲ. ವೇದವ್ಯಾಸರಂತಹ ಮಹನೀಯರು ಬಂದು, ಆ ಭ್ರೂಣಗಳಿಗೆ ಸಂಸ್ಕಾರವನ್ನು ಕೊಟ್ಟು ಅವುಗಳಿಗೊಂದು ವ್ಯಕ್ತರೂಪವನ್ನಿತ್ತರೂ, ಅವು ದುರ್ಯೋಧನ—ದುಶ್ಶಾಸನ ಮೊದಲಾಗಿ ನೂರೊಂದು ಕೌರವಸ್ವರೂಪವನ್ನು ತಾಳಿ, ಲೋಕಕಂಟಕವಾಗಿ ಬಾಳಿದುವು. ಸುಸಂಸ್ಕೃತಿಯನ್ನು ವಿರೋಧಿಸಿ ಹೋರಾಟಹೂಡಿ ತಾವೇ ಅಳಿದುವು. ಅಳಿದುವಾದರೂ ಅವುಗಳ ನಿರ್ಮಿತಿಯ ದುಷ್ಟ ಫಲವನ್ನು ಜಗತ್ತು ಬಹುಕಾಲದ ವರೆಗೂ ಅನುಭವಿಸಬೇಕಾಗಿಬಂದಿತು.

ಯಾವುದೇ ನಾಗರಿಕ ದೇಶದಲ್ಲಿಯೂ ಬರೆಯುವ ಭಾಷೆಗೂ ಮಾತನಾಡುವ ಭಾಷೆಗೂ ಅಲ್ಪ ಸ್ವಲ್ಪ ವ್ಯತ್ಯಾಸಗಳಿದ್ದೇ ಇರುವುವು. ಮಾತನಾಡುವ ಭಾಷೆಯಲ್ಲಿ ಹತ್ತು ಹತ್ತು ಹರದಾರಿಗಳ ಪ್ರದೇಶದಲ್ಲಿಯೂ, ಪದೋಚ್ಚಾರ ವ್ಯತ್ಯಾಸವೂ ಪ್ರಯೋಗ ವ್ಯತ್ಯಾಸವೂ ಕಂಡುಬರುವುವು. ಈ ವ್ಯತ್ಯಸ್ತ ಭಾಷಾಸಂಪ್ರದಾಯಗಳನ್ನೇ ದೇಶಿಗಳೆಂದು ಹೇಳುವರು. ಈ ದೇಶಿವ್ಯತ್ಯಾಸಗಳೂ ಭಾಷಾಶಾಸ್ತ್ರಕ್ಕೆ ಒಂದು ಬಗೆಯಿಂದ ಹೊಂದಿಕೆಯಾಗಿರುವುವೇ ಹೊರತು ತೀರ ದೂರದುವಾಗಿ

ಇರುವುದಿಲ್ಲ. ಸಾಹಿತ್ಯವನ್ನು ನಿರ್ಮಿಸುವವನು ದೇಶಿನುಡಿಗಳ ಬೆನ್ನು ಹತ್ತಿ ಹೊರಟರೆ, ಅದೊಂದು ಸಂಕುಚಿತ ಪ್ರಾದೇಶಿಕ ವ್ಯಾಪ್ತಿಯುಳ್ಳ ದಾದೀತೇ ಹೊರತು. ಸಮಗ್ರ ದೇಶವ್ಯಾಪ್ತಿಯನ್ನು ಪಡೆಯುವ ಯೋಗ್ಯತೆಯು ಅದಕ್ಕೆ ಬರಲಾರದು.

ಇನ್ನೊಂದು ಮಾತೆಂದರೆ, ದೇಶಿ ನುಡಿಗಳು ಕೇವಲ ವ್ಯಾವಹಾರಿಕವಾಗಿರುವುವು. ಯಾವುದೇ ಒಂದು ಜ್ಞಾನದ ವಿಷಯವನ್ನಾಗಲಿ, ವಿಜ್ಞಾನದ ವಿಷಯವನ್ನಾಗಲಿ, ಜೀವನ ಸಮಸ್ಯೆಗಳ ವಿಚಾರವನ್ನಾಗಲಿ ಕುರಿತು ಚರ್ಚಿಸುವುದಕ್ಕೆ ದೇಶಿನುಡಿಗಳಲ್ಲಿ ಸಾಕಷ್ಟು ಶಬ್ದಸಂಪತ್ತಿಯೂ ಇರುವುದಿಲ್ಲ; ವಾಕ್ಯರಚನಾ ವೈಶಿಷ್ಟ್ಯವೂ ಇರುವುದಿಲ್ಲ. ಅಲ್ಲದೆ ಇಂತಹ ಪ್ರಯೋಜನಕಾರಿಯಾದ ವಿಷಯಗಳು, ಕೇವಲ ಪಂಚಕ್ರೋಶಿಯೊಳಗಿನ ಜನತೆಗಲ್ಲದೆ, ಆ ದೇಶದ ಜನತೆಗೆಲ್ಲ ಸರಿಯಾಗಿ ಅರ್ಥವಾಗಬೇಕಾಗುವುದು. ಎಲ್ಲ ಸ್ಥಳದ ಎಲ್ಲ ಕಾಲದ ಜನರಿಗೂ ಅದು ಸಮಾನಾರ್ಥಬೋಧಕವಾಗಿ ಇರಬೇಕಾಗುವುದು. ಹೀಗೆ ಆಗಬೇಕೆಂದೇ ಅಧಿಕಾರಿಗಳಾದ ಅಭಿಜ್ಞರು— ಮಾತನಾಡುವ ಭಾಷಾಪದ್ಧತಿ ನೂರೆಂಟು ಬಗೆಯದಾಗಿದ್ದರೂ ಒಂದೆ ಬಗೆಯ ಲೇಖನ ಭಾಷಾಪದ್ಧತಿಯನ್ನು ಸೃಷ್ಟಿಸಿ, ಅದನ್ನು ಪ್ರಚಾರದಲ್ಲಿ ತಂದಿರುವರು. ಇದನ್ನೇ ನಮ್ಮ ಲಾಕ್ಷಣಿಕರು 'ಮಾರ್ಗಪದ್ಧತಿ' ಎಂದು ಹೇಳಿರುವರು. ಆದಿಶೇಷನ ಸಾಸಿರ ನಾಲಗೆಗಳಿಂದಲೂ ಎಣಿಸಲಿಕ್ಕೆ ಅಸಾಧ್ಯವಾದ ಕನ್ನಡದೇಶಿಗಳನ್ನು ಬಿಟ್ಟು, ನಮ್ಮ ಕವಿಗಳಿಗೊಂದು ರಾಜಮಾರ್ಗವನ್ನು ಹಾಕಿಕೊಟ್ಟ ನೃಪತುಂಗ ಕವಿರಾಜನು, ಇದೇ ಮಹೋದ್ದೇಶದಿಂದ ತನ್ನ ಕಾಲದಲ್ಲಿ ಕಾರ್ಯ ಮಾಡಿರುವನು.

ಇಂದು ನಮ್ಮ ನಾಡಿನಲ್ಲಿ ಸಾಹಿತ್ಯಸಂತಾನಾಪೇಕ್ಷಿಗಳು ಹೆಚ್ಚುತ್ತಿರುವರು. ಇದು ನಾಡಿಗೆ ಅನಿಷ್ಟವಾದ ವಿಷಯವೇನೂ ಅಲ್ಲ. ಒಳ್ಳೆಯ ಸಾಹಿತ್ಯ ಸಂತಾನದ ಸೃಷ್ಟಿಯಾದರೆ, ನಮ್ಮ ಜನತೆಯ ಸಂಸ್ಕೃತಿಯು ಹುಟ್ಟಿ ಬೆಳೆದೀತು; ಇಷ್ಟೇ ಅಲ್ಲ, ನಮ್ಮ ಸಾಹಿತ್ಯದಿಂದ ಹೊರಹೊಮ್ಮುವ ಸತ್ಯ-ಸೌಂದರ್ಯಗಳ ಪ್ರಭಾವ ನೆರೆಹೊರೆಯ ನಾಡಿಗರ ಮೇಲೂ ಬಿದ್ದೀತು.

ಸಾಹಿತ್ಯತತ್ತ್ವದ ಪ್ರಾಣವನ್ನು ಧರಿಸುವಂತಹ ದೇಹದ ಅಧಿಷ್ಠಾನವು ಭಾಷೆಯೇ ಆಗಿದೆ. ಪ್ರಾಣವನ್ನು ಧರಿಸುವಂತಹ ದೇಹವು ಬಲಶಾಲಿಯಾಗಿರಬೇಕು; ಆರೋಗ್ಯಯುತವಾಗಿರಬೇಕು; ಸುಬದ್ಧವೂ ಸೌಂದರ್ಯಪೂರ್ಣವೂ ಆಗಿರಬೇಕು. ಹೀಗಿದ್ದರೆಯೆ ಮಾನವನ ದೇಹವು ಅವನ ವ್ಯಕ್ತಿತ್ವಕ್ಕೆ ಒಂದು ಪೂರ್ಣತೆಯನ್ನು ತಂದುಕೊಡುವುದು. ಹೀಗಿಲ್ಲದ ದೇಹವು ಪ್ರಾಣವನ್ನು ಬಹುಕಾಲ ಬಾಳಿಸಲೂ ಆರದು; ಜನತೆಯ ಕಣ್ಮನಗಳನ್ನು ಆಕರ್ಷಿಸಲೂ ಆರದು. ಎಂತಲೇ ಅಂತಹ ದೇಹಿಯ ವ್ಯಕ್ತಿತ್ವ ಪ್ರಕಟನೆಗೆ ಅವಕಾಶವಿಲ್ಲದೆ ಹೋಗುವುದು. ಸಾಹಿತ್ಯದ ದೇಹವಾದ ಭಾಷೆಯಾದರೂ ಮೇಲೆ ಹೇಳಿದ ಗುಣಗಳಿಂದ ಕೂಡಿರದೆ ಹೋದರೆ, ಮೊದಲನೆಯದಾಗಿ ಅದು ಸಾಹಿತ್ಯಪ್ರಾಣಗಳಿಂದ ಸತ್ಯ-ಸೌಂದರ್ಯಗಳನ್ನು ಧರಿಸಲು ಸಮರ್ಥವಾಗಲಾರದು. ಇನ್ನೊಂದೆಂದರೆ ಸಹೃದಯರ ಹೃದಯಗಳನ್ನು ಆಕರ್ಷಿಸುವಂತಹ ಸತ್ತ್ವದಿಂದಲೂ ಅದು ಕೂಡಿರಲಾರದು.

ನಮ್ಮ ಜೀವನವು ಒಂದು ನಿಯಮಬದ್ಧವಾಗಿದ್ದರೆಯೇ ಅದರಲ್ಲಿ ಸೌಂದರ್ಯ-ಸಂಸ್ಕೃತಿಗಳು ತಲೆದೋರುವುವು. ಇರಲು ನೆರಳಾದರೆ ಸಾಕು ಎಂದು ನಾವು ಮನೆಯನ್ನು ಹೇಗೆ ಹೇಗಾದರೂ ಕಟ್ಟಿಕೊಂಡರೆ ಆಗುವುದೆ? ನಾಗರಿಕರಿರುವಲ್ಲಿ ಅಂತಹ ಅವ್ಯವಸ್ಥಿತವಾದ ಮನೆಗೆ ಅವಕಾಶ ದೊರೆತೀತೆ? ದೊರೆಯುವುದಿಲ್ಲವೆಂತಲೇ ನಾವು ನಮ್ಮ ಮನೆಯು ಬಹುಕಾಲ ಬಾಳುವಂತಹದೂ ಸುಂದರವಾದುದೂ ಆಗಿರುವಂತೆ ಎಚ್ಚರಿಕೆಯನ್ನು ವಹಿಸುವೆವು. ಹೀಗೆಯೆ ನಮ್ಮ ವಿಚಾರ-ಸೌಂದರ್ಯಾನುಭೂತಿಗಳು ಶಾಶ್ವತವೂ ಸುಂದರವೂ ಎನಿಸಿದಾಗಲೇ ಅಲ್ಲವೆ ಅದು ಸುಸಂಸ್ಕೃತ ನಾಗರಿಕರಿಗೆ ಪ್ರಿಯವಾಗಿ ನಿಲ್ಲುವುದು? ಎಂದಮೇಲೆ ಸಾಹಿತ್ಯದೇಹವಾದ ಭಾಷೆಯನ್ನು ಸಾಹಿತ್ಯ ನಿರ್ಮಾಪಕರು ದುರ್ಲಕ್ಷಿಸಿ ನಡೆದರೆ ಆಗುವುದೆ?

ದೇಶನುಡಿ, ಲೇಖನಭಾಷೆ ಎರಡರಲ್ಲಿಯೂ ನಮ್ಮ ಸಾಹಿತ್ಯಕರು— ವಿಷಯದ ಔಚಿತ್ಯವನ್ನರಿತು— ಸಾಹಿತ್ಯವನ್ನು ನಿರ್ಮಿಸಬಹುದು. ಆದರೆ ತಾವು ವಾಹಕವನ್ನಾಗಿ ಆಯ್ದುಕೊಳ್ಳುವ ಭಾಷೆಯ ಶಬ್ದೋಚ್ಚಾರಕ್ರಮವನ್ನೂ, ಪದಗಳ ಅರ್ಥಗಳನ್ನೂ, ವಾಕ್ಯರಚನಾ ಪದ್ಧತಿಯನ್ನೂ ಕೂಲಂಕಷವಾಗಿ ಅಭ್ಯಾಸಮಾಡಿ ಸಾಹಿತ್ಯಿಕರು ಅರಿತುಕೊಂಡಿರಬೇಕು. ಹಾಗೆ ಮಾಡದೆ ಹೋದರೆ, ದೇಶಿನುಡಿಯಲ್ಲಿ ಲೇಖನದ ಭಾಷೆ ಎಂದರೆ ಮಾರ್ಗಭಾಷಾಕ್ರಮವೂ, ಮಾರ್ಗಭಾಷಾಕ್ರಮದಲ್ಲಿ ದೇಸಿನುಡಿಯೂ ಬೆರೆತು, ಕೃತಿಯ ದೇಹವು ಹೇಸರಗತ್ತೆಯ ರೂಪವನ್ನು ಪಡೆಯುವುದು. ಇಂತಹ ವಿಕೃತ ದೇಹವು ಪಕ್ಕದ್ದರ್ಶನಕ್ಕೇ ಜನರಲ್ಲಿ ಜುಗುಪ್ಸೆಯನ್ನು ಉಂಟುಮಾಡುವುದು. ಒಳಗಿನ ವಿಚಾರಗಳೂ ಭಾವನೆಗಳೂ ಎಂತಹ ಉಚ್ಚತರಗತಿಯವುಗಳಿದ್ದರೂ ಅವು 'ರಸದ ಹೊರಲೇಪದಲಿ ಹುದುಗಿದ ಪಿಸುನಿಯಂತೆ' ಕಳಾಹೀನವಾಗುವುವು; ಜನತೆಯಲ್ಲಿ ಬೆಲೆಯನ್ನು ಪಡೆಯದೆ ಹೋಗುವುವು. ಇಂದು ನಿರ್ಮಿತವಾಗುತ್ತಲಿರುವ ಅನೇಕ ಕೃತಿಗಳನ್ನು ಇಂತಹ ಅಭ್ಯಾಸಕ್ಕೆ ಉದಾಹರಣೆಗಳನ್ನಾಗಿ ಹೇಳಬಹುದು. ಅನೇಕ ಸಾಹಿತ್ಯಿಕರ ಕೃತಿಗಳಲ್ಲಿ, ಅವರ ಅಭಿಪ್ರಾಯವನ್ನು ಸರಿಯಾಗಿ ತಿಳುಹುವಂತಹ ಭಾಷೆಯು ಇರುವುದಿಲ್ಲ; ತಮ್ಮ ಭಾಷೆ ಇಂತಹ ಅಸಮರ್ಥತೆಯಿಂದ ಕೂಡಿರುವುದೆಂಬುದರ ಅರಿವೂ ಆ ಸಾಹಿತ್ಯಿಕರಿಗಿರುವುದಿಲ್ಲ.

ಇಂದು ನಮ್ಮ ತರುಣರಿಗೆ ಕನ್ನಡದಲ್ಲಿ ಸಾಹಿತ್ಯವನ್ನು ನಿರ್ಮಿಸಬೇಕೆಂದು ತುಂಬ ಎನಿಸುತ್ತಲಿದೆ; ಆದರೆ ಅವರು ತಮಗೆ ಬಂದಷ್ಟು ಭಾಷೆಯೆ ಸಾಕೆಂದು ಹೊರಟರೆ, ಅವರ ಸಾಹಿತ್ಯ ಸರ್ವಜನಸಹಜವೂ ಸಾರ್ವಕಾಲಿಕವೂ ಆಗಲಾರದು. ಆದುದರಿಂದ ಅವರು ಮೊದಲು ಭಾಷಾಭಿಜ್ಞತೆಯನ್ನು ಪಡೆದುಕೊಳ್ಳಲು ಪ್ರಯತ್ನಿಸಬೇಕು. ಅದಕ್ಕಾಗಿ ಕೋಶ, ವ್ಯಾಕರಣ, ಶಬ್ದವ್ಯುತ್ಪತ್ತಿ, ಶಬ್ದಾರ್ಥವೈಶಿಷ್ಟ್ಯ ಪಡೆನುಡಿ ಇವುಗಳನ್ನೆಲ್ಲ ಚೆನ್ನಾಗಿ ಅಭ್ಯಾಸಮಾಡಬೇಕು.

ನಾಡನುಡಿ

ಹೊರನಾಡ ಕನ್ನಡಿಗರ ಸಮ್ಮೇಳನ

ಬೆಂಗಳೂರಿನ ಮಾನ್ಯ ನಿಟ್ಟೂರ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ, ಕಳೆದ ತಿಂಗಳ ಕೊನೆಯ ವಾರದಲ್ಲಿ, ಬಡೋದಾ ನಗರದಲ್ಲಿ ಹೊರನಾಡ ಕನ್ನಡಿಗರ ಸಮ್ಮೇಳನ ಸಮಾರಂಭವು ಜರುಗಿದುದು ಸಂತೋಷದ ಸಂಗತಿ. ಕೆಲವು ವರ್ಷಗಳ ಹಿಂದಿನ ಸಂಗತಿ; ಆಗ ಹೊರನಾಡಿಗರಿಗೆ ಕನ್ನಡ ನಾಡುನುಡಿಗಳ ಅಸ್ತಿತ್ವದ ಕಲ್ಪನೆಯೆ ಆಗುವಂತಿರಲಿಲ್ಲ. ಆಗಲೂ ಕನ್ನಡಿಗರು ಕೆಲಸಕ್ಕಾಗಿ ಹೋಗಿ ಹೊರನಾಡುಗಳಲ್ಲಿ ಹೋಗಿ ಇರಲಿಲ್ಲವೆಂತಲ್ಲ; ಆದರೆ ಕನ್ನಡತನದ ಜಾಗೃತಿಯು ಅವರಿಗೆ ಉಂಟಾಗಿರಲಿಲ್ಲ. ಎಂತಲೇ ಹೊರನಾಡುಗಳಲ್ಲಿ 'ಕರ್ನಾಟಕ' 'ಕನ್ನಡ' ಇವುಗಳ ಹೆಸರಿನಿಂದ ಹೊರಟ ಸಂಘಗಳೇ ಇರುತ್ತಿರಲಿಲ್ಲ. ಉತ್ತರಕರ್ನಾಟಕದ ಜನರು ಯಾರಾದರೂ ಇದ್ದು ಅವರಿಗೆ ಸಾಮಾಜಿಕ ಜೀವನವು ಬೇಕೆನಿಸಿದರೆ, ಅಂತಹರು ಅಲ್ಲಿಯ ಮಹಾರಾಷ್ಟ್ರ ಸಂಘಕ್ಕೆ ಸೇರಿಕೊಂಡುಬಿಡುತ್ತಿದ್ದರು. ಮೈಸೂರಿಗರು ಬಹುಸಂಖ್ಯಾಕರಾಗಿದ್ದರೆ ಅವರು, 'ಮೈಸೂರು ಅಸೋಸಿಯೇಶನ್' ಎಂದೋ, 'ಮೈಸೂರು ಸಂಘ' ಎಂದೋ ಮಾಡಿಕೊಂಡು, ಕರ್ನಾಟಕ ಕನ್ನಡಗಳ ಹೆಸರನ್ನೇ ಎತ್ತದೆ ಚಟುವಟಿಕೆ ನಡೆಸುತ್ತಿದ್ದರು. ಒಬ್ಬಿಬ್ಬರೇ ಇದ್ದರೆ, ಅವರು ಮದ್ರಾಸಿಗರ ಕೂಡ ಕೂಡಿಕೊಂಡುಬಿಡುತ್ತಿದ್ದರು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳವರು ಹೊರನಾಡುಗಳಲ್ಲಿ ಇದ್ದರೆ 'ಕ್ಯಾನರಾ ಕ್ಲಬ್' 'ಕ್ಯಾನರಾ ಅಸೋಸಿಯೇಶನ್' ಎಂದು, ವಿದೇಶೀಯವಾಗಿ ಕಾಣುವಂತಹ ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಿದ್ದರು. ಆದರೆ ಹೊರನಾಡ ಕನ್ನಡಿಗರ ಸಂಘವು ಪ್ರಾರಂಭವಾಗಿ ಕಾರ್ಯ ಮಾಡಲು ತೊಡಗಿದಂದಿನಿಂದ ಅವೆಲ್ಲ ಕನ್ನಡ-ಕರ್ನಾಟಕಗಳ ಮುದ್ರೆಯನ್ನೇ ಪಡೆದುಕೊಂಡು, ಹೊರನಾಡ ಕನ್ನಡಿಗರ ಸಂಘದ ಚಟುವಟಿಕೆಗಳನ್ನು ಅಲ್ಲಲ್ಲಿ ನಡೆಸುತ್ತಲಿವೆ. ಕನ್ನಡ ನಾಡು-ನುಡಿಗಳಿಗೆ ಸಂಬಂಧಿಸಿದ ಸುಶಿಕ್ಷಿತ ಜನರೆಲ್ಲ ಆ ಸಂಘ-ಸಂಸ್ಥೆಗಳ ಸದಸ್ಯರಾಗುತ್ತಲಿದ್ದಾರೆ. ಆದುದರಿಂದಲೇ ಹೊರನಾಡಿಗರಿಗೆ ಕನ್ನಡಿಗರ ಅಸ್ತಿತ್ವದ ಕಲ್ಪನೆಯು ಉಂಟಾಗತೊಡಗಿದೆ. ಅಲ್ಲಲ್ಲಿಯ ಕನ್ನಡಿಗರ ಸಂಸ್ಥೆಗಳು, ಕನ್ನಡ ಸಾಂಸ್ಕೃತಿಕ ಚಟುವಟಿಕೆಗಳ ಪರಿಚಯವು ಹೊರಗಿನವರಿಗಾಗುವಂತೆ ಒಳ್ಳೊಳ್ಳೆಯ ವಾಚನಾಲಯ, ಗ್ರಂಥಾಲಯ, ನಾಟಕ-ಸಂಘ— ಇವುಗಳನ್ನು ನಡೆಸಿಕೊಂಡು ಹೋಗುತ್ತಿರಬೇಕು. ಹೊರನಾಡುಗಳಲ್ಲಿಯ ಕನ್ನಡಿಗರು ಹೊರಗಿನ ವ್ಯವಹಾರಕ್ಕಾಗಿ ಬೇರೆ ಯಾವ ಭಾಷೆಯನ್ನು ಬಳಸಬೇಕಾಗಿ ಬಂದರೂ, ಮನೆಯಲ್ಲಿ ಕನ್ನಡ ಭಾಷೆಯನ್ನೇ ಬಳಸುತ್ತಿರಬೇಕು. ಚಿಕ್ಕಮಕ್ಕಳ ಪ್ರಾಥಮಿಕ ಶಿಕ್ಷಣವು ಕನ್ನಡ ಭಾಷೆಯಲ್ಲಿಯೆ ನಡೆಯುವಂತೆ ಜಾಗ್ರತಿ ವಹಿಸಬೇಕು. ಪರಿಸ್ಥಿತಿಯ ಮೂಲಕ ಸಾಧ್ಯವೇ ಇಲ್ಲದಲ್ಲಿ ಮನೆಯಲ್ಲಿಯೆ ಅವರಿಗೆ ಕನ್ನಡ ಓದು-ಬರೆಹಗಳನ್ನು ಕಲಿಸುವ ಏರ್ಪಾಡು ಮಾಡಬೇಕು. ಬೇರೆ ಭಾಷೆಯ ಪ್ರಾಥಮಿಕ ಶಿಕ್ಷಣದ ಮೂಲಕ ಕರ್ನಾಟಕವು ಅನೇಕ ಬುದ್ಧಿವಂತ ವ್ಯಕ್ತಿಗಳನ್ನೂ ಸುಸಂಸ್ಕೃತ ಕುಟುಂಬಗಳನ್ನೂ ಕಳೆದುಕೊಂಡ ಇತಿಹಾಸವಿದೆ ನಮಗೆ. ಹಿಂದೆ ಆದಂತಹ ತಪ್ಪುಗಳು ಇಂದು ನಮ್ಮಿಂದ ಆಗಕೂಡದು. ಆದುದರಿಂದ, ಹೊರನಾಡುಗಳಲ್ಲಿಯ ಕನ್ನಡಿಗರು ತಮ್ಮ ಮನೆಗಳಲ್ಲಿ ಸಂಪೂರ್ಣ ಕನ್ನಡ ವಾತಾವರಣವನ್ನು ಇರಿಸಿ ಸಂರಕ್ಷಿಸಿಕೊಂಡು ಹೋಗಬೇಕು. ಪ್ರತಿವರುಷವೂ ಸೇರುವ ಹೊರನಾಡ ಕನ್ನಡಿಗರ ಸಮ್ಮೇಲನವು ಈ ಮಾತನ್ನು ಮತ್ತೆ ಮತ್ತೆ ಸಾರಿ ಸಾರಿ ಹೇಳುತ್ತಿರಬೇಕೆಂದು ನಮ್ಮ ಆಶೆ. ಮಾತೃಭಾಷೆಯಿಂದ ಮನುಷ್ಯ ಒಮ್ಮೆ ವಿಮುಖನಾದರಾಯಿತು; ಅವನು ಮರಳಿ ಅದನ್ನು ಪುರಸ್ಕರಿಸುವುದು ಅಸಂಭವವಾಗಿರುವುದು. ಹೊರನಾಡಿನ ಕನ್ನಡಿಗರ ಕುಟುಂಬಗಳ ಬಗೆಗಿರುವ ನಮ್ಮ ಅನುಭವವೆಂದರೆ, ತಾಯಿ ತಂದೆಗಳಲ್ಲಿರುವಂತಹ ಕನ್ನಡ ನಾಡು ನುಡಿಗಳ ಪ್ರೀತ್ಯಾದರಗಳು ಅವರ ಮಕ್ಕಳಲ್ಲಿ ಇರುವುದಿಲ್ಲ. ಇದು ಅಸ್ವಾಭಾವಿಕವೇನೂ ಅಲ್ಲ. ಆದರೆ ಈ ವಿಷಯದ ಕಡೆಗೆ ದುರ್ಲಕ್ಷ್ಯ ಮಾಡಿದಲ್ಲಿ ಕನ್ನಡದ ಭವ್ಯಭವಿಷ್ಯಕ್ಕೆ ದೊಡ್ಡ ಹಾನಿಯಿದೆ. ಹೊರನಾಡಿನ ಕನ್ನಡಿಗರ ಸಂಘದ ಸದಸ್ಯರೆಲ್ಲ ಇದೊಂದು ತಾಯ್ನಾಡಿನ ಸೇವೆಯೆಂತಿಳಿದು ಮನೆಯಲ್ಲಿ ಕನ್ನಡತನವನ್ನು ಕಾಯ್ದುಕೊಂಡು, ಮೊದಲಿನಿಂದಲೂ ತಮ್ಮ ಮಕ್ಕಳಲ್ಲಿ ಕನ್ನಡ ನಾಡು-ನುಡಿಗಳ ಬಗೆಗೆ ಶ್ರದ್ಧೆ-ನಿಷ್ಠೆಗಳು ಉಂಟಾಗುವಂತೆ ನೋಡಿಕೊಳ್ಳಬೇಕು.

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ— ಮಿರಜೆಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಂಶ, ಉಷ್ಣ, ಸೊಂಟನೋವು, ಉಪದಂಶ ಮೇಹರೋಗಗಳಿಂದುಂಟಾಗುವ ಕ್ಷೀಣತೆ— ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧ ಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦ ಶೀಘ್ರ-ಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦, ಅಂಚೆಯ ವೆಚ್ಚ ೪-೭ ೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರಪೇಟೆ

ಮು. ಪೋ. ಮಿರಜ

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ಸಹವಾಸ' ಕತೆಯನ್ನು ಕುರಿತು ಒಂಭತ್ತು ಜನರಿಂದಲೂ, 'ಮಾಯಾಕವಚ' ಶ್ರುತಿರೂಪಕವನ್ನು ಕುರಿತು ಒಬ್ಬರಿಂದಲೂ ವಿಮರ್ಶೆಗಳು ಬಂದಿವೆ.

'ಸಹವಾಸ' ಕತೆಯ ವಿಮರ್ಶಕರು :

೧. ಶ್ರೀ. ಗಣೇಶ ಗ್ರಾಮಪುರೋಹಿತ, ಜ್ಯೂ. ಬಿ. ಎ. ಧಾರವಾಡ, ೨. ಶ್ರೀ. ಕೆ. ಎಸ್. ಶರ್ಮ ಕಾಸರಗೋಡು, ೩. ಶ್ರೀ. ಹಾ. ಕಸ್ತೂರಿ, ಸುರಪುರ. ೪. ಶ್ರೀ. ಚಿತ್ರಗೆ ರಾಮನ್, ಧಾರವಾಡ. ೫. ಶ್ರೀ. ಎಮ್. ಎಸ್. ಆಚಾರ, ಕುಳ್ಯಾ ಸುರತ್ಕಲ್. ೬. ಶ್ರೀ. ಕೆ. ಗುರುರಾವ್, ಹೈದರಾಬಾದ. ೭. ಶ್ರೀ. ಲಕ್ಷ್ಮೀಕಾಂತ, ಹುಬ್ಬಳ್ಳಿ. ೮. ಶ್ರೀ. ಅನಂತ ಪದ್ಮನಾಭ ಜಹಾಗೀರದಾರ, ಕಲಬುರ್ಗಿ. ೯. ಶ್ರೀ. ರಾಘವೇಂದ್ರ ಗುಮಾಸ್ತೆ, ಚಿಂಚೋಳಿ.

'ಮಾಯಾಕವಚ'ದ ವಿಮರ್ಶಕರು: ೧. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು.

ಈ ಎಲ್ಲ ವಿಮರ್ಶೆಗಳನ್ನು ಸಂಪಾದಕ ಸಮಿತಿಯವರು ನೋಡಿ, ತೀರ್ಮಾನವನ್ನು ಈ ರೀತಿ ಕೊಟ್ಟಿದ್ದಾರೆ- ಶ್ರೀಮಾನ್ ಗಣೇಶ ಗ್ರಾಮಪುರೋಹಿತ ಮತ್ತು ಶ್ರೀಮಾನ್ ಕೆ. ಎಸ್. ಶರ್ಮಾ, ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಹಾ. ಕಸ್ತೂರಿ ಅವರ ವಿಮರ್ಶೆಯೂ ಚೆನ್ನಾಗಿದೆ. ಮಿಕ್ಕವು ಸಾಮಾನ್ಯ.

ಉತ್ತಮವೆಂದು ತೀರ್ಪುಗೊಂಡ ಎರಡು ವಿಮರ್ಶೆಗಳಲ್ಲಿ ಶ್ರೀ. ಗಣೇಶ ಗ್ರಾಮಪುರೋಹಿತ ಅವರ ವಿಮರ್ಶೆಯನ್ನು ಈ ಸಂಚಿಕೆಯಲ್ಲಿ ಪ್ರಕಟಿಸಬಹುದು.

ಮುಂದಿನ ತಿಂಗಳ ವಿಮರ್ಶೆಯ ಮೇಲಾಟಕ್ಕಾಗಿ, ಈ ಸಂಚಿಕೆಯಲ್ಲಿ ಪ್ರಕಟವಾದ 'ಪುನರ್ಜನ್ಮ' ಎಂಬ ಕತೆಯನ್ನಾಗಲಿ; 'ಧರ್ಮಶಕ್ತಿ' ಎಂಬ ನಾಟಕವನ್ನಾಗಲಿ ವಿಮರ್ಶಿಸಿ, ಇದೇ ಮಾರ್ಚ ೨೫ನೆಯ ದಿನಾಂಕದೊಳಗೆ ತಲ್ಪುವಂತೆ ವಿಮರ್ಶೆಗಳನ್ನು ಕಳಿಸಬೇಕು. ಮೊದಲನೆಯ ಕ್ರಮಾಂಕವನ್ನು ಪಡೆದ ವಿಮರ್ಶಕರಿಗೆ ಎರಡು ರೂಪಾಯಿ ಬೆಲೆ ಬಾಳುವ — ಅವರು ಅಪೇಕ್ಷಿಸಿದ ಕನ್ನಡ ಪುಸ್ತಕವೊಂದನ್ನು ಬಹುಮಾನವಾಗಿ ಕೊಡಲಾಗುವುದು

— ಸಂಪಾದಕ

ಸಹವಾಸ

(ಒಂದು ಜೀವನ ಕಥೆಯ ವಿಮರ್ಶೆ)

ಶ್ರೀ. ಗಣೇಶ ಗ್ರಾಮಪುರೋಹಿತ, ಜ್ಯು ಬಿ. ಎ. ಧಾರವಾಡ

ವ್ಯಕ್ತಿಯ ಜೀವನದ ಮೇಲೆ ಸುತ್ತಲಿನ ವಾತಾವರಣವು ಎಷ್ಟರ ಮಟ್ಟಿಗೆ ಪರಿಣಾಮವನ್ನುಂಟುಮಾಡುತ್ತದೆ ? ಮತ್ತು ವ್ಯಕ್ತಿಯು ಯಾವ ರೀತಿಯಾಗಿ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಲ್ಲನು ? ಎಂಬ ಪ್ರಶ್ನೆಗಳನ್ನು ಹಲವರು ಕೇಳಿದ್ದಾರೆ. ಉತ್ತರವನ್ನು ಕೊಡುವದು ಅಷ್ಟು ಸುಲಭವಲ್ಲದಿದ್ದರೂ ಕೆಲವರು ಪ್ರಯತ್ನಿಸಿದ್ದಾರೆ; ಪ್ರಯತ್ನಿಸಿ ಮುಗ್ಗರಿಸಿಯೂ ಇದ್ದಾರೆ. ಮಾನವ ಜೀವನಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಪೂರ್ಣ ಉತ್ತರ ಕೊಡುವದು ಹಾಸ್ಯಾಸ್ಪದವಾದ ಮಾತು. ಜೀವನವೆಂದರೆ ಒಂದು ಪ್ರವಾಹ ಕ್ಷಣಕ್ಷಣಕ್ಕೂ ಹೊಸ ರೂಪ ತಾಳುತ್ತಿರುತ್ತದೆ. ಹಳೆಯ ಶಬ್ದಕ್ಕೆ ಹೊಸ ಅರ್ಥ ಬರುತ್ತದೆ. ವಿಚಾರಗಳಲ್ಲಿ ಕ್ರಾಂತಿಯಾಗುತ್ತದೆ. ಪ್ರಕೃತಿಯ ಮಡಿಲಲ್ಲೇ ಮಾನವನು ಬೆಳೆಯುತ್ತಾನೆ ಬಹುಮಟ್ಟಿಗೆ ಅವನು ನಿಸರ್ಗದ ಮಗು ಆದರೆ ತನ್ನಲ್ಲಿ ಅಡಕವಾಗಿರುವ ಅಜೇಯ ಚೇತನಶಕ್ತಿಯಿಂದ ಪ್ರಕೃತಿಯ ಕಪ್ಪಳೆಯನ್ನು ಕೆಲಮಟ್ಟಿಗೆ ಹರಿದೊಗೆದು ತನ್ನದೇ ಅ… ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬಲ್ಲನು. ಸ್ವತಂತ್ರ ವ್ಯಕ್ತಿತ್ವವಿಲ್ಲ… ಮನುಷ್ಯನಲ್ಲಿ ಚೇತನಶಕ್ತಿ ಸುಪ್ತವಾಗಿರುತ್ತದೆ. ಆಗ ಸಹಾಯಕ್ಕ… ಇನ್ನೊಂದು ಶಕ್ತಿಯುತ ವ್ಯಕ್ತಿಯ ಅವಶ್ಯಕತೆ ಉಂಟಾಗುತ್ತದೆ. ಇಂಥದೇ ಒಂದು ಸಮಸ್ಯೆಗೆ ಶ್ರೀ ಬಳ್ಕೂರು ಸುಬ್ರಾಯ ಅಡಿಗ… ತಮ್ಮ "ಸಹವಾಸ"ದಲ್ಲಿ ಕಥೆಯ ರೂಪ ಕೊಟ್ಟಿದ್ದಾರೆ.

ಆಗರ್ಭ ಶ್ರೀಮಂತನಾದ ಮನೋಹರನು, ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡು, ತಾಯಿ ಕಮಲಮ್ಮನ ಮಮತೆಯ ಮಗುವಾಗಿ, 'ಅವಳ ಅಸೀಮ ಪ್ರೀತಿಯ ಕೇಂದ್ರವಾಗಿ' ಬೆಳೆದವನು S. S. L. C. ಗೆ ಕಾಲಿಟ್ಟಾಗ ಪೋಲೀ ಹುಡುಗರ ಸಹವಾಸ… ಬಿದ್ದು ದುಶ್ಚಟಗಳಿಗೆ ಬಲಿಯಾಗುತ್ತಾನೆ. ಇಷ್ಟು ಬೆಳೆದವನಾದರೂ ತಾಯಿಗೆ ಆಜ್ಞಾಧಾರಕ ಮಗನಾಗಿರುತ್ತಾನೆ. ಅವಳ ಮುಂದೆ ಸು… ಹೇಳಲಾರನು. ತಾಯಿಯೂ ಮಗನನ್ನು ಗದರಿಸಿದಳು. ಅವನ…

(೪೦ನೆಯ ಪುಟ ನೋಡಿರಿ)

ಪುನರ್ಜನ್ಮ

(ಸಣ್ಣ ಕತೆ)

ಶ್ರೀ. ವೆಂಕಟರಾಯ ಪ್ರಭು, ಜ್ಯು. ಎಂ. ಎ. ರಾಮನಾರಾಯಣ ರುಯಿಯಾ ಕಾಲೇಜು, ಮುಂಬಯಿ

●

ತರುಣ-ತರುಣಿಯರ ಪ್ರಾಕೃತಜೀವನದಲ್ಲಿ ಕಾಮದೇವನು ತನ್ನ ಲೀಲೆಗಳನ್ನು ಅನೇಕ ಮುಖದಿಂದ ನಡೆಸುವನು. ಆ ಲೀಲೆಗೆ ಮೋಹಗೊಂಡು ಬಾಯ್ದೆರೆದು ಹೊರಟರೆ ಸಾಂಸ್ಕೃತಿಕ ದೃಷ್ಟಿಯಿಂದ ಅವರ ಜೀವನದ ಪತನವೇ ಖಂಡಿತ. ಕಾಲೇಜಿನ ಶಿಕ್ಷಣವೇ ಸಂಸ್ಕೃತಿಯಲ್ಲವೆಂಬುದು ಸರಳೆಯ ಅನುಭವಕ್ಕೆ ಬಾರದೆ ಹೋಗಲಿಲ್ಲ.

ಅಂದು ಸರಳೆಯ ಸಂಭ್ರಮಕ್ಕೆ ಪಾರವಿರಲಿಲ್ಲ. S. S. L. C ಪರೀಕ್ಷೆಯಲ್ಲಿ ಆಕೆಯು ಪ್ರಥಮ ತರಗತಿಯಲ್ಲಿ ಉತ್ತೀರ್ಣಳಾಗಿದ್ದಳು. ಬೆಳಗಿನಿಂದ ಒಂದೇ ಸವನೆ ಆಕೆಯ ಮಾತೇ ಮನೆಯಲ್ಲಿ ಪ್ರತಿಧ್ವನಿಸುತ್ತಿದ್ದಿತು. ಒಮ್ಮೆ ತಾಯಿಯ ಇದಿರಿನಲ್ಲಿ ತನ್ನ ಭರವಸೆ, ವಿಶ್ವಾಸಗಳ ಬಗ್ಗೆ ಹೇಳುವಳು. ಇನ್ನೊಮ್ಮೆ ತಂದೆಯ ಕೋಣೆಗೆ ಓಡಿ 'ಕಾಲೇಜಿಗೆಂದು ಸೇರಿಸುವಿರಿ' ಎಂದು ತಡೆಯಿಲ್ಲದೆ ಪ್ರಶ್ನೆಗಳನ್ನು ಒಮ್ಮಿಂದೊಮ್ಮೆಗೆ ಕೇಳುತ್ತಿದ್ದಳು. ಅವಳ ತಂದೆ ಸುಂದರರಾಯರು ಅವಳ ಪ್ರಶ್ನೆಗಳಿಗೊಂದಕ್ಕೂ ಉತ್ತರಕೊಡಲು ಅಸಮರ್ಥರಾಗಿದ್ದರೂ, ನಗುಮುಖದಿಂದ ಆಕೆಯ ಸಂಭ್ರಮಸಡಗರಗಳನ್ನು ನಿರೀಕ್ಷಿಸುತ್ತಿದ್ದರು.

ಅಂದು ರವಿವಾರವಾಗಿದ್ದಿತು. ಸುಂದರರಾಯರ ಆಫೀಸಿಗೆ ರಜೆಯ ದಿನ. ಮಧ್ಯಾಹ್ನ ಎರಡಕ್ಕೆ ಚಾ ಮುಗಿಸಿ ಸಿಗರೇಟಿನ ಮಂಡಳಾಕಾರವಾದ ಹೊಗೆ ಹರಿಯುವುದನ್ನು ನೋಡುವುದರಲ್ಲಿ ತಲ್ಲೀನರಾಗಿದ್ದರು. ಸರಳೆಗಂತೂ ಅಂದು ನಿಂತಲ್ಲೇ ಒಂದು ನಿಮಿಷ ನಿಲ್ಲಲು ಕೂಡಾ ಸಾಧ್ಯವಾಗುತ್ತಿರಲಿಲ್ಲ. ಮಧ್ಯಾಹ್ನದ ಊಟ ಮುಗಿಸಿದವಳೇ ಗೆಳತಿ ಮನೋರಮೆಯ ಮನೆಗೆ ಗಾಳಿಯಂತೆ ಹಾರಿದ್ದಳು. ಮನೋರಮೆ ಕೂಡಾ ಪ್ರಥಮ ತರಗತಿಯಲ್ಲಿಲ್ಲದಿದ್ದರೂ ದ್ವಿತೀಯ ಶ್ರೇಣಿಯಲ್ಲಿ ಪಾಸಾಗಿದ್ದಳು. ಫಲಿತಾಂಶ ಬರುವ ಮುನ್ನವೇ ಆಕೆ ಕಾಲೇಜಿಗೆ ಸೇರುವುದು ನಿಶ್ಚಿತವಾಗಿದ್ದಿತು. ಅದಕ್ಕಾಗಿ ಮುಂಗಡ ಹಣವನ್ನು ಕಟ್ಟಿಯೂ ಆಗಿದ್ದಿತು. ಸರಳೆಯ ಮುಂದಿನ ಭವಿಷ್ಯವು ಇನ್ನೂ ನಿಶ್ಚಿತವಾಗಿರದಿದ್ದರೂ, ಸರಳೆಯು ಮನಸ್ಸಿನಲ್ಲಿ ತಾನು ಕಾಲೇಜನ್ನು ಖಂಡಿತವಾಗಿಯೂ ಸೇರುವವಳೆಂದು ನಿರ್ಧರಿಸಿಕೊಂಡಿದ್ದಳು. ಅದಕ್ಕಾಗಿ ಅಂದು ಊಟ ಮುಗಿಸಿದವಳೇ ಮನೋರಮೆಯ ಮನೆಗೆ ಹೋಗಿದ್ದಳು.

ಸರಳೆಯು ಹೋದ ಸಂದರ್ಭವು ಜಾನಕೀಬಾಯಿಯವರಿಗೆ ಅನುಕೂಲವಾಗಿ ಕಂಡಿತು. ಮಗಳ ಮುಂದಿನ ಭವಿಷ್ಯವನ್ನು ನಿರ್ಣಯಿಸುವುದು ಇಂದು ಅವಳ ಮುಖ್ಯ ವಿಷಯವಾಗಿದ್ದಿತು. ಸುಂದರರಾಯರು ಈಜೀ ಚೆಯರಿನಲ್ಲಿ ಒರಗಿ ಸಿಗರೇಟುಪಾನದಲ್ಲಿ ಮಗ್ನರಾಗಿರುವಾಗ ಜಾನಕೀಬಾಯಿಯವರು ಬಂದು ಮಾತು ತೆಗೆದರು.

"ಏನಂದ್ರೆ, ಮಗಳು ಪಾಸಾದರೂ ಇನ್ನೂ ತಲೇಲಿ ಏನೂ ಯೋಚನೆ ಹೊಗ್ಸಿಕೊಂಡಿಲ್ಲಾಂತ ತೋರುತ್ತೆ?" ಎಂದು ಪೀಠಿಕೆ ಹಾಕಿದರು.

'ಸರಳೂ ಕಾಲೇಜಿಗೆ ಹೋಗಬೇಕನ್ನುತ್ತಾಳೆ' ಎಂದು ರಾಯರು ಉಸುರುಗರೆದರು.

'ಹೌದ್ಹೌದು, ಇನ್ನು ಮಗಳನ್ನ ಬಿ. ಎ ಪಾಸುಮಾಡಿ ಆಫೀಸಿಗೆ ಕಳ್ಸುವ ಯೋಚ್ನೆನೂ ತಲೆಗೆ ಬರುತ್ತೆ! ಈ ರಜೆಯಲ್ಲಿ ಆಕೆಗೊಂದು ಲಗ್ನಮಾಡಿ ಗಂಡನ ಮನೆಗೆ ಮುಟ್ಟಿಸಿದರೆ ನನ್ನೊಂದು ಭಾರ ತಪ್ಪುತ್ತೆ" ಎಂದು ಎಲ್ಲಾ ಭಾರವನ್ನು ಹೊತ್ತವರಂತೆ ಬಾಯಿಯವರು ನುಡಿದರು.

"ಅಂದ್ರೆ ಏನೇ, ಆಕೇನ್ನ ಕಾಲೇಜಿಗೆ ಕಳ್ಸೂದು ಬೇಡವೆಂದೇ ನಿನ್ನ ಅಭಿಮತ?"

"ಕಾಲೇಜಿಗೆ! ಈಗಿನ ಹುಡುಗಿಯರಿಗೆ ಅದಷ್ಟು ಬೇಗ್ನೇ ಮದ್ವೆ ಮಾಡೋದೇ ಉತ್ತಮ. ಇಲ್ದಿದ್ರೆ ಇಲ್ಲದ ಚಾಳಿ ಕಲ್ತು ಮನೆಗೆ ಕೀರ್ತಿ ತರ್ತಾವೆ!" ಎಂದು ತಾವು ಹುಡುಗಿಯರಾಗಿದ್ದಾಗಿನ ತಮ್ಮ ಸುಗುಣವನ್ನು ಸಮರ್ಥಿಸಿಕೊಂಡರು.

"ಏನೇ, ಎಲ್ಲಾ ಹುಡುಗಿಯರೂ ಹಾಳಾಗ್ತವೇನೇ? ಅಪ್ಪ, ಅಮ್ಮ ಕೈಬಿಟ್ಟ ಕೆಲವರು ಬೀದಿ ಹಿಡೀತಾರಂತ ಸರಳೇನ್ನ ಕಾಲೇಜಿಗೆ ಕಳ್ಸದೇ ಬಿಡೂದೆ? ಆಕೆಯ ಅಪ್ಪ ನಾ ಜೀವಂತ ಇದ್ದೀನಿ, ಅಮ್ಮ ನೀನು ಗಟ್ಟಿಮುಟ್ಟೆಯಾಗಿರ್ತಿ. ಮತ್ತೆ ಯೋಚ್ನೆ ಏನು?"

"ಅದೇ ಸುಬ್ಬಣ್ಣಯ್ಯನವರ ಮಗಳು ಹೆಸರಿಗೆ ಬಂದೂದು .."

"ತಂದೆ ತಾಯಿಗಳ ಹಿಡಿತವಿಲ್ಲ. ನೇರೆ ಕೆಟ್ಟ ಹುಡುಗಿಯರ

ಪರಿಚಯ. ಎಲ್ಲಾ ಕೂಡಿ ಕುಲಾನ್ನ ಉದ್ಧಾರ ಮಾಡಿ ಬಿಟ್ಟಿತು. ಆದರೆ ನಮ್ಮ ಸರಳೂ ಹಾಗೇನಿಲ್ಲಲ್ಲಾ ?"

ಜಾನಕೀಬಾಯಿಯವರ ಮನಸ್ಸಿನಲ್ಲಿ ಮಗಳು ಕಾಲೇಜಿಗೆ ಹೋಗುವುದು ಬೇಡವೆಂದು ಇರದಿದ್ದರೂ, ಕಾಲೇಜಿಗೆ ಸೇರಿದ ಎಲ್ಲಾ ಹುಡುಗಿಯರು ಹಾಳಾಗುತ್ತಾರೆ ಎಂದು ಭೀತಿಯೊಂದು. ಅದೇ ಭೀತಿಯು ಅವರಿಗೆ ಸರಳೆಯ ವಿಷಯದಲ್ಲಿಯೂ ಹಿಡಿದಿದ್ದಿತು. ಹುಡುಗಿಯರ ಕಾಲೇಜೊಂದು ಇರುತ್ತಿದ್ದರೆ ಅವರು ಮಗಳನ್ನು ಕಾಲೇಜಿಗೆ ಕಳುಹಿಸಲು ಸದಾ ಸಿದ್ಧರು. ಆದರೆ ಸುಂದರರಾಯರು ಸುಧಾರಿತರು. ಅವರಿಗೆ ಸರಳೆಯ ವಿಷಯದಲ್ಲಿ ತುಂಬು ಭರವಸೆ. ಸರಳೆ ಯಾವ ಪರಿಸ್ಥಿತಿಯಲ್ಲಾದರೂ ಮಾನವಂತೆ. ಮಾನಿನಿಯಾಗಿ ಬಾಳಲಿಚ್ಛಿಸುವವಳು ಎಂದು ಅವರ ಅಂತರಾತ್ಮ ಸಾರುತ್ತಿದ್ದಿತು. ಮೇಲಾಗಿ, ಅವಳ ಮೇಲೆ ತಾವು ಚೆನ್ನಾಗಿ ಬಿಡಿತವಿಟ್ಟುಕೊಂಡರೆ ಹೆದರಿಕೆ ಏನು ? ಅಂತೂ ಅಂದಿನ ಮಾತುಕತೆಯು ರಾಯರು ತಿರುಗಾಟಕ್ಕೆ ಹೊರಡುವ ಸಂಭ್ರಮದಲ್ಲಿ ತೊಡಗಿದಾಗ ಕೊನೆಗೊಂಡಿತು. ಸರಳೆಯ ಮುಂದಿನ ಓದು ಅನಿಶ್ಚಿತವಾಗಿಯೇ ಉಳಿಯಿತು. ರಾಯರೇನೋ ಮನಸ್ಸಿನಲ್ಲಿ ದೃಢಪಡಿಸಿಕೊಂಡಿದ್ದರು. ಜಾನಕೀಬಾಯಿಯವರು ಕೊನೆಗೆ ರಾಯರಮಾತಿಗೆ ಸಮ್ಮತಿಸುವಂತಿದ್ದರೂ ಸರಳೆಗೆ-ನಾಲ್ಕು ಬುದ್ಧಿವಾದದ ಮಾತುಗಳನ್ನು ಹೇಳಿ ಒಂದು ವಿಧದ ಆಕೆಯ ಸ್ವಾತಂತ್ರ್ಯವನ್ನು ಬಂಧಿಸಿಡಬೇಕೆಂದು ನಿಶ್ಚಯಿಸಿಕೊಂಡರು.

ರಾತ್ರಿ, ಸರಳೆ ತಾಯಿಯೊಡನೆ ತನ್ನ ಮುಂದಿನ ಓದಿನ ಕುರಿತು ಅಪ್ಪ ಏನು ಹೇಳುತ್ತಾನೆಂದು ಕೇಳಿದಾಗ, ಜಾನಕೀಬಾಯಿಯವರು ಸುತ್ತಿನದಾರಿ ಬಳಸಿ ಮೊದಲು ಬೇಡ—ಒಳ್ಳೆಯದಲ್ಲವೆಂದು ವಾದಿಸಿ, ಕೊನೆಗೆ ಅದರ ಇಂದಿನ ದುಷ್ಪರಿಣಾಮಗಳನ್ನು ಅರುಹಿ, ಮಗಳ ಆಶ್ವಾಸನೆಯನಂತರ ಅರ್ಧ ಮನಸ್ಸಿನಲ್ಲಿ ಸಮ್ಮತಿಸಿದರು. ಆದರೂ, ಅಷ್ಟಕ್ಕೆ ಮಾತನ್ನು ಬಿಡದೇ ಮಗಳಿಗೆ ನಾಲ್ಕು ಬುದ್ಧಿಯ ಮಾತುಗಳನ್ನು ಹೇಳಿ, 'ಸದ್ಗೃಹಿಣಿಯಾಗಿ ಪತಿಯ ಮನೆಯನ್ನು ತುಂಬುವವಳಾಗಬೇಕೆಂದು ಹರಸುವಾಗ ಅವರ ಕಣ್ಣಂಚಿನಲ್ಲಿ ನೀರು ಮಿನುಗಿತು. ಅದನ್ನು ಕಂಡು ಸರಳೆಗೂ ಫಕ್ಕನೇ ಅಳು ಬರುವಂತಾಯಿತು. ಆಕೆಗೆ ಅಂದು ವಿಜಯದೊರಕಿದ್ದರೂ, ಆಕೆಯ ಮನಸ್ಸಿನಲ್ಲಿ ಅದೊಂದು ಬಗೆಯ ಕಿರುಕುಳ ಚಿಂತೆಯು ಆಗ ಕಾಡಲಾರಂಭಿಸಿತು.

ಅಂದಿನಿಂದ ಗಂಡಸರಮೇಲೆ ಒಂದು ವಿಧದ ಅಸಮಾಧಾನ, ಹಠ, ಕಠೋರಬುದ್ಧಿಯು ಆಕೆಯ ಚಿತ್ತದಲ್ಲಿ ಬೇರೂರಿಕೊಂಡಿತು. ಹಿಂದೆ ಕೆಲವರ ವಿಷಯದಲ್ಲಿದ್ದ ಆಕೆಯ ಅಭಿಪ್ರಾಯವು ಇಂದು ಎಲ್ಲರ ಮೇಲೂ ವಿರಾಜಮಾನವಾಯಿತು. ಎಲ್ಲರನ್ನೂ ತಿರಸ್ಕೃತ ದೃಷ್ಟಿಯಿಂದ ನೋಡುವುದೇ ಅಭ್ಯಾಸವಾಯಿತು. ಆದರೆ ಆಕೆಯ ನಿರ್ಧಾರವು ಎಷ್ಟು ಬಲವಾಗಿದ್ದರೂ ಏಳು ವರ್ಷದ ತಮ್ಮನ ಪುಟ್ಟ ಹಸುಳೆಯ ಗಂಡುಮುಖದ ನಿಷ್ಕಳಂಕತೆಯನ್ನು ಕಂಡಾಗ ಓಡಿ ಹೋಗಿ ಬಿಡುತ್ತಿದ್ದಿತು. ತಂದೆಯ ಅಪಾರ ದಯೆ, ತುಂಬಿದ ಮುಖವನ್ನು ಕಂಡಕೂಡಲೇ ಆಕೆಯ ಜೀವ ನೆಲದಡಿಗಿಳಿದಂತೇ ಆಕೆಗನಿಸುತ್ತಿದ್ದಿತು.

× × × ×

ಜೂನ್ ೧೫ ರಂದು ಕಾಲೇಜು ಆರಂಭ ಅಂದು ಬೆಳಿಗ್ಗೆ ೫||ಗೆ ಸರಳೆ ಎದ್ದು ಸ್ನಾನ, ಉಪಹಾರವನ್ನು ತೀರಿಸಿ ಅಲಂಕಾರವನ್ನು ಮುಗಿಸಿಕೊಂಡಳು. ಕುಂಕುಮವನ್ನು ಸ್ವಲ್ಪ ದೊಡ್ಡದಾಗಿಯೇ ಇಟ್ಟುಕೊಳ್ಳುವಂತೆ ತಾಯಿ ಹೇಳಿದರು. ಜಾನಕೀಬಾಯಿಯವರಿಗೆ ಈಗಿನ ಕಾಲದ ಹುಡುಗಿಯರ ಕುಂಕುಮದ ಮೇಲೆ ಕಣ್ಣು. ಆದರೆ ಸರಳೆಯ ಉತ್ತರ ಇದೊಂದೆ: "ಅಜ್ಜಿ ಹಣೆತುಂಬಾ ಕುಂಕುಮ ಹಚ್ಚಿಕೊಳ್ಳುತ್ತಿದ್ದರು. ನೀನು ಸ್ವಲ್ಪ ಚಿಕ್ಕದು. ನಾನು ಅದಕ್ಕಿಂತಲೂ...." ಎಂದು ನಗುವಳು. ಜಾನಕೀಬಾಯಿಯವರು ಅಲ್ಲಿಂದ ಮತ್ತೆ ಕಣ್ಣನ್ನು ಬೇರೆ ಕಡೆಗೆ ತಿರುಗಿಸುತ್ತಿದ್ದರು.

೭ ಹೊಡೆಯುವ ಮೊದಲೇ ಮನೋರಮೆ ಸರಳೆಯ ಮನೆಯಲ್ಲಿ ಹಾಜರಿದ್ದಳು. ಗೆಳತಿಯರಿಬ್ಬರೂ ಟ್ರಾಮ್ ಸ್ಟಾಪಿನ ಬಳಿ ಬರುವಾಗ, ಮೇಲಿನ ಗಡಿಯಾರದ ದೊಡ್ಡ ಮುಳ್ಳು ಸರಿಯಾಗಿ ಹನ್ನೆರಡರಲ್ಲಿದ್ದು ಏಳಾಯಿತೆಂದು ಸೂಚಿಸುತ್ತಿದ್ದಿತು. ಕಿಂಗ್ಸ ಸರ್ಕಲಿಗೆ ಹೋಗುವ ಟ್ರಾಮು ಬಂದ ಕೂಡಲೇ ಗೆಳತಿಯರಿಬ್ಬರೂ ಟ್ರಾಮಿನಲ್ಲಿ ನುಗ್ಗಿದ್ದರು ಹೆಂಗಸರ ಸೀಟಿನಲ್ಲಿ ಒಂದೇ ಸ್ಥಳವು ಖಾಲಿಯಿದ್ದುದರಿಂದ ಸರಳೆ ನುಸುಳಿ ಬಂದು ಅಲ್ಲೇ ಕುಳಿತಳು.

ಟ್ರಾಮಿನಲ್ಲಿ ಹೆಚ್ಚಾಗಿ ವಿದ್ಯಾರ್ಥಿಗಳನ್ನೇ ಜಮೆಹಾಕಿದಂತಿತ್ತು. ಕಾಲೇಜ ಹತ್ತಿರದ ಸ್ಟಾಪು ಬಂದ ಕೂಡಲೇ ಗೆಳತಿಯರಿಬ್ಬರೂ ಇಳಿದು ಮಾತಿನ ಮಳೆಯಲ್ಲಿ ಕಾಲೇಜನ್ನು ಸೇರಿದರು. ಇಬ್ಬರ ಉತ್ಸಾಹಕ್ಕೂ ಎಣೆಯಿರಲಿಲ್ಲ. ಆದರೆ ಸರಳೆಯ ಮನಸ್ಸನ್ನು ಯಾವುದೋ ವಿಕೃತ ಬುದ್ಧಿಯು ಹಿಂದಕ್ಕೆ ಜಗ್ಗುತ್ತಿದ್ದಿತು. ಭೀತಿ ಧೈರ್ಯಗಳ ತುಮುಲ ಯುದ್ಧವು ನಡೆಯುತ್ತಿದ್ದಿತು.

ಪ್ರಿನ್ಸಿಪಾಲರ ಸ್ವಾಗತ ಭಾಷಣವನ್ನೂ ಅತಿಥಿಗಳ ಭಾಷಣವನ್ನೂ ಕೇಳುತ್ತಿರುವಂತೆಯೇ ಸರಳೆಯ ಮನಸ್ಸಿನಲ್ಲಿ ಒಂದೊಂದು ವಿಧದ ಭಾವನೆಗಳೆ ಏಳುತ್ತಿದ್ದವು. ಎದ್ದು ನಿಂತು ಮಾತನಾಡಲು ಶಕ್ತಿಯಿಲ್ಲದ ಮುದುಕನ ಸಾರವತ್ತಾದ ಮಾತುಗಳನ್ನು ಕೇಳುವಾಗ ಸರಳೆಗೆ ಅಮಿತಾನಂದವಾಗುತ್ತಿದ್ದಿತು. ಕಾಲೇಜೆಂದರೆ ಸಮೃದ್ಧಿಯ ತವರೂರೆಂದು ಆಕೆಯು ನೆನೆದುಕೊಳ್ಳುವಂತಾಯಿತು. ಪಾಪ, ಇನ್ನು ಒಂದೇ ವರ್ಷದಲ್ಲಿ ಆಕೆಯ ಮನಪ್ರವಾಹವು ಎತ್ತ ಹರಿಯಲಿದೆ ಎಂದು ಆಕೆಗೆ ಆಗಲೇ ಅನಿಸಿದ್ದರೆ!

ಬರೀ ಒಂದು ಗಂಟೆಯ ಸಾಂಪ್ರದಾಯಿಕ ಸಭೆಯು ಮುಗಿದು ಪ್ರಿನ್ಸಿಪಾಲರು ನಾಳಿನಿಂದ ಕ್ರಮವಾಗಿ ಪಾಠಗಳು ಆರಂಭವಾಗುತ್ತವೆಯೆನ್ನುವಾಗ, ಇನ್ನು ಸಭೆಯು ಮುಕ್ತಾಯಗೊಂಡಿತೆಂದು ತಿಳಿದುಕೊಂಡಳು. ಹಾಗೆಯೇ ಮನೋರಮೆಯತ್ತ ತಿರುಗಿದಳು. ಮನೋರಮೆಯ ಕಣ್ಣುಗಳೇನೋ ಹಾರುವ ಪತಂಗಗಳಂತೇ ಕುಣಿಯುತ್ತಿದ್ದುವು. ಮುಖವು ಪೂರ್ಣಿಮೆಯ ಚಂದ್ರನಂತೆ ಬಣ್ಣವೇರಿದ್ದಿತು

ಪ್ರಕಟವಾಗುವವು ! ಶೀಘ್ರ ಪ್ರಕಟವಾಗುವವು !!

ಅಭಿನವ ಗಣಿತ

ಲೇ. : ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ "ಅಭಿನವ ಗಣಿತ" ಗಳನ್ನು ಹೊರಡಿಸಲಾಗಿದೆ. ಮಕ್ಕಳ ಪರಿಚಯದ ವಾತಾವರಣವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹೇವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆ ಮಾಗಿದೆ. ಮುಖ್ಯವಾಗಿ ೧೯೫೫ರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ, ಬರೆದಿರುವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗಲ್ಲವು. ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿದೆಯೆಂಬುದನ್ನು ಅಭಿನವ ಗಣಿತಗಳ ಅನುಸರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನಿರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ಯಾವ ಯೋಚನೆಯೂ ಇಲ್ಲದೇ ಹರಿವ ತೊರೆಯಲ್ಲಿ ತಾನೂ ಹರಿಯುವ ಅವಳ ಬುದ್ಧಿಗೆ ಸರಳೆಗೆ ಬೇಸರ ಬಂದಿತೋ ಏನೊ! ಆದರೆ ಮೂರು ವರ್ಷಗಳ ಸಂಪೂರ್ಣ ಪರಿಚಯ ಆಕೆಯ ಮನಸ್ಸನ್ನು ಕಠಿಣಗೊಳಿಸಬಿಡಲಿಲ್ಲ. ಹಾಲಿ (Hall)ನಿಂದ ಹೊರಬರುವಾಗ ಸರಳೆಗೆ ಹುಸು ಬವಳಿಕೆ ಬಂದಂತಾಯಿತು. ಆದರೂ ಸುಧಾರಿಸಿಕೊಂಡು ಕಾಲೇಜಿನ ಚಿಕ್ಕ ರೂಮುಗಳನ್ನೆಲ್ಲಾ ತಿರುಗಾಡಿ, ಮನಸ್ಸಿಲ್ಲದ ಮನೋರಮೆಯನ್ನು ಎಳೆದುಕೊಂಡು ಹಿಂದೆ ಬರುವಾಗ ಆಕೆಗೆ ಅಂದಿನ ಕೆಲಸ ಮುಗಿಸಿದಂತೆನಿಸಿತು.

೨

ಇದೀಗ ಟರ್ಮಿನಲ್ ಪರೀಕ್ಷೆ ತೀರಾ ಸಮೀಪಿಸಿದೆ. ಇಂದು ಸೋಮವಾರ. ಬರುವ ಸೋಮವಾರದಿಂದ ಅದು ಆರಂಭವಾಗಲಿದೆ. ಬೆಳಗಿನ ಕ್ಲಾಸುಗಳನ್ನೆಲ್ಲಾ ಮುಗಿಸಿ ಸರಳೆ ಆದೇ ತಾನೇ ತನ್ನ ಖೋಲಿಗೆ ಮರಳಿದ್ದಳು. ಆದಿನ ಇದ್ದ ಎರಡು ಪಾಠಗಳಲ್ಲಿ ಒಂದಕ್ಕೆ ಪ್ರೊಫೆಸರ್ ಬಾರದುದರಿಂದ. ಕೊನೆ ಪೀರೀಯಡ್ಡಿನವರೆಗೆ ಕಾದು ಅದನ್ನು ಮುಗಿಸಿ ಮರಳುವಾಗ ಸರಳೆಗೆ ತಲೆ ಚಿಟ್ಟು ಹಿಡಿದಿತ್ತು. ಏನೋ ಮುಸಕು, ಮುಸುಕು ಯೋಚನೆಗಳು ಉದ್ಭವಿಸಿ ಶಕ್ತಿಯಿಲ್ಲದೇ ಅಲ್ಲಿಯೇ ಕಮರುತ್ತಿದ್ದುವು.

ತಂದೆ ತಮ್ಮ ಉದ್ಯೋಗಕ್ಕೆ ತೆರಳಿದ್ದರು. ತಮ್ಮ ಶಾಲೆಗೆ ಹೋಗಿದ್ದ. ಜಾನಕೀಬಾಯಿಯವರು ಸ್ನಾನಗೃಹದಲ್ಲಿದ್ದರು. ಪುಸ್ತಕಗಳನ್ನು ಓರಣವಾಗಿಟ್ಟು ಕುರ್ಚಿಯ ಮೇಲೆ ಬಿದ್ದುಕೊಂಡವಳಿಗೆ ನಿದ್ದೆ ಬರುವಂತೆ ತೋರಿತು. ಆದರೂ ಬರಲಿಲ್ಲ. ಬದಲು, ತನ್ನ ಕಾಲೇಜು ವಿದ್ಯಾಭ್ಯಾಸದ ಕಳೆದ ಆ ತಿಂಗಳ ಚಿತ್ರ ಕಣ್ಣೆದುರಿನಲ್ಲಿ ಬಂದು ನಿಂತಿತು. ಈ ಸಲದ ಪರೀಕ್ಷೆ ಮುಗಿಯಿತೆಂದರೆ ರಜೆ. ಕೊನೆಗೆ ಬರೇ ಎರಡು ಮೂರು ತಿಂಗಳ ಕಾಲೇಜವಿದೆ. ಆಮೇಲೆ ಪುನಃ ಪರೀಕ್ಷೆ; ರಜೆ. ಕೊನೆಗೆ ಇಂಟರ್ ಕ್ಲಾಸು. ಆಕೆಯು ಶಾಲೆಯಲ್ಲಿ ಕಲಿಯುತ್ತಿದ್ದಾಗ ಕಾಲೇಜಿನ ವಿಷಯದಲ್ಲಿ ಆಕೆಯ ಅಭಿಪ್ರಾಯವು ಎಂತಹದಾಗಿದ್ದಿತು? ಕ್ಲಾಸು, ಲೆಕ್ಚರು, ಲೈಬ್ರರಿ, ಪರೀಕ್ಷೆ—ಹೆಚ್ಚಿನ ಮಾರ್ಕುಗಳೇ ಆಕೆಯ ಆದರ್ಶವಾಗಿದ್ದುವು. ನಡನಡುವೆ ಓದಿದ ಕೆಲವು ಕಾದಂಬರಿಗಳಲ್ಲಿಯೂ ಆಕೆಯು ಕಾಲೇಜಿನ ಪರಿಚಯ ಹೊಂದಿದ್ದಳು. ಅವುಗಳಲ್ಲೇನಿತ್ತು?—ಕಾಲೇಜು ಪ್ರೇಮ, ಅದರ ಬಣ್ಣಬಣ್ಣದ ಕಣ್ಣು ಕೋರೈಸುವ ವರ್ಣನೆ. ಅದೆಲ್ಲಾ ಸರಳೆಗೆ ಹಿತನೆನಿಸದಿದ್ದರೂ ಓದುತ್ತಿದ್ದಾಗ ಅದು ಆಕೆಗೆ ಬೇಡವೆನಿಸುತ್ತಿರಲಿಲ್ಲ. ಓದಿ ನಕ್ಕಿದ್ದಳು; ಆದರೂ ಓದುವುದನ್ನು ಬಿಟ್ಟಿರಲಿಲ್ಲ. ಅದೆಲ್ಲಾ ಗಾಳಿಗೋಪುರವೆಂದೇ ಆಕೆಯ ಭಾವನೆ. ಇಲ್ಲದಿದ್ದರೆ, "ಅದೆಲ್ಲಾ" ಸಾಧ್ಯವೇ ಅನ್ನುತ್ತಿದ್ದಳು. "ಅದೆಲ್ಲಾ" ಅನ್ನುವುದರಲ್ಲಿ ಆಕೆ ಯಾವ ಯಾವುದನ್ನು ಸೇರಿಸಿದ್ದಳು ಅದು ಆಕೆಗೆ ಮಾತ್ರ ಗೊತ್ತು.

ಇಂದು ಆಕೆ ಪ್ರತ್ಯಕ್ಷವಾಗಿ ಕಂಡ ಚಿತ್ರವೇನು? ತೀರಾ ಭಿನ್ನವೆನ್ನುವಂತಿರಲಿಲ್ಲ. ಅಂತಹ ನಿದರ್ಶನಗಳ ಪ್ರದರ್ಶನವಿರದಿದ್ದರೂ, ಭಾವಿಕ ಬರಹಗಾರರ ಬುರುಡೆಯಲ್ಲಿ ಬರುವುದು ಸಹಜವೆನಿಸಿತ್ತು ಆಕೆಗೆ. ವಿದ್ಯಾರ್ಥಿವಿದ್ಯಾರ್ಥಿನಿಯರು ಬೇಕುಬೇಕೆಂದೇ ಒಂದೇ ಬೆಂಚಿನಲ್ಲಿ ಕೂಡುವದಿಲ್ಲವೇ? ನಕ್ಕು ನಗಿಸಿ ಪಾಠವನ್ನು ಹಾಳುಗೆಡಹುವುದಿಲ್ಲವೇ? ಆದರೆ ಆಕೆಗೆ ಇಂದಿಗೂ ಸಮಸ್ಯೆಯಾಗಿ ಉಳಿದ ವಿಷಯಗಳು ಇವೆ. ಪ್ರೇಮದ ವ್ಯಭಿಚಾರ ಚಿತ್ರಣದ ಕಾದಂಬರಿಗಳಲ್ಲಿ ಬೇರೆ ವಿಧದ ಚಿತ್ರಣ ಕೊಡಲು ಸಾಧ್ಯವಿರುವುದಿಲ್ಲವೇ ಎಂಬುದು ಆಕೆಯ ವಾದ. ಅದೆಂತಹ ಚಿತ್ರವೆಂದು ಆಕೆಗೆ ನಿಚ್ಚಳವಾಗಿ ಹೊಳೆಯದಿದ್ದರೂ "ಏನೋ ಇದೆ" ಎಂದು ಅನಿಸುತ್ತಿದ್ದಿತು.

ಕಾಲೇಜು ಸೇರುವ ಮೊದಲೇ ಆಕೆಯು ಮನಸ್ಸನ್ನು ಕಠಿಣ ಪಡಿಸಿದ್ದಳು. ಅದು ಇಂದಿಗೂ ಕಡಿಮೆಯಾಗಿಲ್ಲ. ತಾನು ತಾನೇ ಆಗಿ ಕುಳಿತ ಸಮಯದಲ್ಲಿ ಮಾತ್ರ ಆಕೆಗೆ ತನ್ನಲ್ಲೇ ಅಳುವಂತಾಗುತ್ತದೆ. ಅನ್ಯಾಯ ಮಾಡಿದವರಿಗೆ ಪಶ್ಚಾತ್ತಾಪದಿಂದ ಅಳುಬರುವುದು ಸಹಜವೇ? ಆದರೆ ತಾನು ತಪ್ಪುಮಾಡಿಲ್ಲವೆಂದು ಆಕೆಗೆ ಖಂಡಿತವಾಗಿಯೂ ಅನಿಸುತ್ತದೆ. ಏಕೆ? ತಾನೀವರೆಗೆ ಕಾಲೇಜಿನ ಯಾವ ವಿದ್ಯಾರ್ಥಿಯೊಂದಿಗೆ ನಿರ್ವಾಹವಿಲ್ಲದೇ ಮಾತನಾಡಿರುವೆನೇ? ಕಾಲೇಜಿನಲ್ಲಿ ಯಾವಾಗಲೂ ಅಭಿಮಾನಿ ಸರಳೆ ಮುಖದಲ್ಲಿ ಕಠಿಣತೆ ಕಾಯುತ್ತಿದ್ದಳು. ಮನೋರಮೆಯ ನಡತೆಯಲ್ಲಿಯೂ ಆಕೆಗೆ ಕೋಪಬರುತ್ತಿದ್ದಿತು. ಇಲ್ಲವಾದರೆ ತನ್ನ ಸಹ ವಿದ್ಯಾರ್ಥಿಗಳೊಂದಿಗೆ ಆಕೆಯು ನಗುತ್ತಾ, ಮಾತನಾಡುತ್ತಾ, ಕೆಲೆಯುವುದೆಂದರೇನು? ಕಾಲೇಜಿನ ಆ

ಅಲೆಯುವ ಕಣ್ಣುಗಳ ವಿದ್ಯಾರ್ಥಿಗಳೊಂದಿಗೆ ತನಗೆ ಒಂದು ನಿಮಿಷವೂ ಕಳೆಯಲು ಸಾಧ್ಯವಿಲ್ಲವೆಂದು ಆಕೆಯ ಅಭಿಪ್ರಾಯ. ಒಂದು ಮಾತನ್ನಾಡುವ ಮುಂಚೆಯೇ ಅವರ ಕಣ್ಣುಗಳು ತಮ್ಮ ಇಡಿಯ ಮೈಯನ್ನು ಸುಳಿದಾಡಿ ಮುಖದಲ್ಲಿ ಕಾಣುತ್ತವೆಂದು ಹೇಳುತ್ತಿದ್ದಳು. ಬಣ್ಣಬಣ್ಣದ ಸಿಲ್ಕಿನ ವಸ್ತ್ರ ಧರಿಸಿ ಕಾಲೇಜಿನ ಬಾಗಿಲು ಕಾಯುವ ವಿದ್ಯಾರ್ಥಿಗಳನ್ನು ಕಂಡಾಗ ಕಾಲೇಜೊಂದು ಪಶುಗಳ ದೊಡ್ಡಿಗಿಂತ ಬೇರಿಲ್ಲವೆಂದು ಮನೋರಮೆಯೊಂದಿಗೆ ಹಲವು ಬಾರಿ ಅಂದಿದ್ದಳು. ಅಂತಹ ಮಾತುಗಳನ್ನು ಕೇಳಿಯೇ ಇಂದು ಮನೋರಮೆಗೆ ಸರಳೆಯೊಂದಿಗೆ ಸಮಯ ಕಳೆಯಲು ಉದಾಸೀನತೆ, ದುಗುಡ, ದುಮ್ಮಾನಗಳು ಬರುತ್ತವೆ.

ಕಾಲೇಜು ಆರಂಭವಾದ ಕೆಲವು ಸಮಯ ಆಕೆ ತನ್ನ ಪಾಠಗಳ ಗಡಿಬಿಡಿಯಲ್ಲಿದ್ದಳು. ಇಂದು ಆಕೆಗೆ ಪಾಠಗಳ ಬಗ್ಗೆ ನಿರಾಶೆಬಂದಿದೆ. ಒಂದು ದಿನ ಎರಡಿದ್ದರೆ ಇನ್ನೊಂದು ದಿನ ಒಂದು. ಶನಿವಾರ ಕ್ಲಾಸೇ ಇಲ್ಲ! ಇಂತಹ ಕಾಲೇಜುಗಳಲ್ಲಿ ಕಲಿಯುವುದು ಮರೆಯುವುದಕ್ಕೆಂದು ಆಕೆ ತೀರ್ಮಾನಿಸಿದ್ದಳು. ಲೈಬ್ರರಿಯೊಂದೇ ಆಕೆಗೆ ಕಾಲೇಜಿನಲ್ಲಿ ಕಾಣುವ ವಸ್ತು. ದಿನಕ್ಕೊಂದು ಪುಸ್ತಕ ಕಂಡು ಹೋದರೂ ಇನ್ನೂ, "ಅಷ್ಟೊಂದು" ಇದೆ ಎಂದು ಚಿಂತಿಸುವಳು. ಒಮ್ಮೊಮ್ಮೆ ಓದುವುದಕ್ಕಿಂತ ಪ್ರೊಫೆಸರ್‌ದೇವನ ಮಾತಿನಲ್ಲಿ ಕೇಳಿದ್ದರೆ ಇನ್ನೂ ಉತ್ತಮವಿತ್ತೆಂದು ಆಕೆಗೆ ಅನಿಸಿದ್ದರೂ, ನಾರಕ್ಕಿದ್ದುದು ಒಂದೇ ಕ್ಲಾಸು ಆ ಪ್ರೊಫೆಸರನದು.

ಈ ರೀತಿ ಮೊದಲನೆಯ ಮೂರುತಿಂಗಳುಗಳು ಕಳೆದಿದ್ದುವು. ಅಲ್ಲಿಯವರೆಗೆ ಆಕೆಯ ಅಭ್ಯಾಸವು ಸುಸೂತ್ರವಾಗಿಯೇ ಸಾಗಿದ್ದಿತು. ಪಾಠಗಳಲ್ಲಿ ಒಂದು ಬಗೆಯ ಉತ್ಸಾಹಗೊಳ್ಳುತ್ತಿದ್ದ ಸರಳೆಯಲ್ಲಿ ಅನಂತರ ಒಂದು ವಿಧದ ಬದಲಾವಣೆಯೇ ಕಾಣತೊಡಗಿತು. ಕ್ಲಾಸಿನಲ್ಲಿ ಕೂತುಕೊಂಡಿದ್ದಾಗ ಆಕೆಯ ಮನಸ್ಸೆಲ್ಲೊ ಆಕಾಶದ ನೀಲಿಮೆಯಲ್ಲಿ ಸೇರಿ ಏನೋ ಕಳೆದುಹೋದುದನ್ನು ಅರಸುವಂತೆ ತಳಮಳಗೊಳ್ಳುತ್ತಿದ್ದಿತು. ಏನೆಂದು ಆಕೆಗೇ ಸರಿಯಾಗಿ ತಿಳಿಯುತ್ತಿರಲಿಲ್ಲ ಒಮ್ಮೊಮ್ಮೆ ಹಿಂದಿನ ಬೆಂಚಿನ ವಿದ್ಯಾರ್ಥಿಗಳ ಅಶ್ಲೀಲ ಶಬ್ದ ಕೂಗುಗಳನ್ನು ಕೇಳಿದಾಗ ಮನಸ್ಸು ತೀರಾ ಜಿಗುಪ್ಸೆಗೊಂಡು ತಳಕ್ಕಿಳಿಯುತ್ತಿದ್ದಿತು. ಆದರೆ ಹಿಂದಿನಂತೆ ಆಕೆಯ ಮನಸ್ಸು ಕ್ರೋಧಗೊಳ್ಳುತ್ತಿರಲಿಲ್ಲ. ಏನೋ ಅಪರಿಚಿತ ತಾರುಣ್ಯವು ಆಕೆಯಲ್ಲಿ ನೆಲೆಗೊಂಡಿದ್ದಿತು ಒಮ್ಮೊಮ್ಮೆ "ಸಹಜವದು" ಎಂದು ಮರೆತುಬಿಡುತ್ತಿದ್ದಳು. ಅಂತಹ ಕ್ಷುಲ್ಲಕ ವಿಚಾರಗಳಿಗೆ ಇಂದಾಕೆಯ ಮನಸ್ಸಿನಲ್ಲಿ ಎಡೆಯಿರುತ್ತಿರಲಿಲ್ಲ. ಕ್ಲಾಸಿನಿಂದ ಮನೆಗೆ ಮರಳಿದರೂ ಅಷ್ಟೆ ಮನಸ್ಸೆಲ್ಲೊ ಅಂಕೆ ಮೀರಿ ಹೋಗಿರುತ್ತಿದ್ದಿತು. ಜಿಗುಪ್ಸೆದುಂಬಿದ ಜೀವದಿಂದ ಮನೆಯಲ್ಲಿ ನರ್ತಿಸುತ್ತಿದ್ದಳು. ಆಕೆಯ ಮನಸ್ಸಿನ ಸೂಕ್ಷ್ಮ ಬದಲಾವಣೆಯನ್ನು ಅರಿಯುವಷ್ಟು ಸುಸಂಸ್ಕೃತವಾಗಿರಲಿಲ್ಲ ಜಾನಕೀಬಾಯಿಯವರ ಮನಸ್ಸು ಮತ್ತು ಸುಂದರರಾಯರ ಗಮನಕ್ಕೆ ಅದು ಅಷ್ಟೊಂದು ಕೊಳೆದಿರಲಿಲ್ಲ. ಒಂದು ವಿಧದ ಜಡತೆ ಆಕೆಯ ದೈನಂದಿನ ಕೆಲಸಗಳಲ್ಲಿ ತೋರುತ್ತಿದ್ದಿತು.

ಅದಕ್ಕೆ ಕಾರಣವೇನು? ಆಕೆಗೇ ತಿಳಿದಿರಲಿಲ್ಲ! ಆಕೆಯ ಮನರಂಗದಲ್ಲಿ ಅಪರಿಚಿತರ ಆಗಮವಾಗಿರಬಹುದೇ? "ಇಲ್ಲ"ವೆಂದು ಕೊಳ್ಳುವಳು ತನ್ನೊಳಗೆ. ಯಾವುದರ ಅಥವಾ ಯಾರ ವಿಷಯವಾಗಿ ಆಕೆಯ ಮನಸ್ಸು ಅಷ್ಟೊಂದು ತಳಕಿಳಿದುಹೋಗಿದೆ? ಒಮ್ಮೊಮ್ಮೆ ಆಕೆಯ ಕಣ್ಣೆದುರಿನಲ್ಲಿ ಇನ್ನೊಂದು ಚಿತ್ರವೂ ಸುಳಿದುಹೋಗುವುದು ಉಂಟು. ಅದನ್ನು ನೆನೆಯುವಾಗಲೇ ಆಕೆಗೆ ತೀರಾ ಲಜ್ಜೆಯೆನಿಸುವುದು; ಮತ್ತೆ ಅಳು ಬಂದಂತಾಗುವುದು. ಪುನಃ ಅದನ್ನು ಮರೆಯಲು ಯತ್ನಿಸುವಳು. ಆದರೆ ಅಷ್ಟೊಂದು ಸುಲಭವಾಗಿರಲಿಲ್ಲ. ಕೊನೆಗೆ ತನ್ನ ಮೇಲೆ ಕೋಪಗೊಂಡು ಅದೇ ಚಿತ್ರವನ್ನು ದೊಡ್ಡದಾಗಿ ಕಣ್ಣೆದುರು ಚಿತ್ರಿಸುವುದೂ ಉಂಟು.

ಆ ದಿನ ಟ್ರಾಮಿನಲ್ಲಿ ಹತ್ತಿದಾಗ ಆಕೆಯ ಬೆಂಚಿನೆದುರು ಇನ್ನೊಬ್ಬ ವಿದ್ಯಾರ್ಥಿಯು ಕೂತುಕೊಂಡಿದ್ದ. ಆತನನ್ನು ತನ್ನ ಕ್ಲಾಸಿನಲ್ಲೊಮ್ಮೆ ಕಂಡ ನೆನಪು ಸರಳೆಗೆ. ಮಾಟುಂಗವನ್ನು ಸೇರುವರೆಗೂ ಆತ ತನ್ನತ್ತ ಕಣ್ಣನ್ನು ಸುಳಿದಿರಲಿಲ್ಲ. ಅದು ಸರಳೆಗೆ ಹೊಸ ವಿಷಯ. ಕಾಲೇಜಿನಲ್ಲಿಯೂ ಇಂತಹ ವಿದ್ಯಾರ್ಥಿಗಳಿರುವರೇ ಎಂದು ಸೋಜಿಗ. ಆತನೇನು ಅಂತಹ ಸ್ಫುರದ್ರೂಪಿಯಲ್ಲದಿದ್ದರೂ ಮುಖ ಒಂದೇ ಕ್ಷಣಕ್ಕೆ ಆಕರ್ಷಗೊಳಿಸಲ್ಪಡುವಂತಿತ್ತು. ಮೇಲಾಗಿ ಆತನ ಮಿಂಚು ಕಣ್ಣುಗಳೆರಡು! ಅದ್ಭುತ ಕಾವ್ಯದ ಕಲೆಯನ್ನು ಇಂಗಿಸಿ ಕೊಂಡವುಗಳಂತಿದ್ದವು ಸರಳೆ ಒಂದೆರಡು ಕ್ಷಣ ಆತನನ್ನೇ ದಿಟ್ಟಿಸಿ ನೋಡಿದ್ದಳು— ಆತನು ತನ್ನೆಡೆಗೆ ನೋಡುವುದಿಲ್ಲೆಂಬ ಧೈರ್ಯದಿಂದ ಆದರೆ ಆ ಸಮಾಧಾನವೇ ಇಂದು ಕೊರಗಾಗಿ ನಿಂತಿದೆ ಆಕೆಯಲ್ಲಿ ಆತನು ತನ್ನೆಡೆಗೆ ನೋಡುವುದರಲ್ಲಿ ತಪ್ಪಿಲ್ಲವೆಂಬ ಭಾವವು ಆಕೆಯಲ್ಲಿ ಉದಿತವಾಗಿದೆ. ಕ್ಲಾಸಿನಲ್ಲಿ ಮುಂದೆ ಕುಳಿತಿರುತ್ತಿದ್ದರೂ ಒಂದು ಬಾರಿ ತನ್ನತ್ತ ನೋಡಿದ ನೆನಪೇ ಇಲ್ಲ ಸರಳೆಗೆ ಆತನ ದೃಷ್ಟಿಯು ಪ್ರೊಫೆಸರರಲ್ಲಿ ನಟ್ಟು ಹೋಗಿರುತ್ತಿದ್ದಿತು. ಈ ಬೇಟೆಯಲ್ಲೇ ಸರಳೆಯ ಕೆಲವು ಕ್ಷಣ ಆತನ ದೃಷ್ಟಿ ನಿರೀಕ್ಷಣೆಯಲ್ಲಿ ಕಳೆಯುತ್ತಿದ್ದವು ಹೀಗಾಗಿ ಒಂದೆರಡು ಬಾರಿ ಆತನ ದೃಷ್ಟಿಗಳನ್ನು ಸಂಧಿಸುವ ಪ್ರಸಂಗವೂ ಬಂದಿದ್ದಿತು. ಆದರೆ ಆಕೆಗೆ ತನ್ನ ಕಣ್ಣುಗಳನ್ನು ಬೇರೆ ಕಡೆಗೆ ಚಲಿಸಲಿಕ್ಕಾಗದುದೇ ಆಶ್ಚರ್ಯ! ಏನೊಂದೂ ಮುಖ ಬದಲಾವಣೆಯಿಯಿಲ್ಲದೇ ಕೆಲವು ಕ್ಷಣ ಅವರ ದೃಷ್ಟಿಗಳು ಒಂದಾಗಿರುತ್ತಿದ್ದವು.

ಇಂದು ಆಕೆಗೆ ತನ್ನ ಮನಸ್ಸು ಬೇಡುತ್ತಿರುವುದೇನೆಂದು ತಿಳಿಯುತ್ತಿರಲಿಲ್ಲ. ತಮ್ಮಿಬ್ಬರ ಕಣ್ಣುಗಳು ಸಂಧಿಸುತ್ತಿರುವುದು ನಿಜ ಆದರೆ ಅದರಲ್ಲೇನು? ಮನುಷ್ಯ ಮನುಷ್ಯನನ್ನು ನೋಡುವುದು ತಪ್ಪೆ ಎಂದು ಆಕೆಯ ತರ್ಕ ಗತಿ ಹಿಡಿದಿದ್ದಿತು. ಇಂದು ಅಂತಹ ಭಾವನೆಗಳಿಗೆ ಮಾನವ್ಯ, ದೈವೀಕ (Humane, Divine) ಎಂಬ ತಾನು ಸಂಪೂರ್ಣವಾಗಿ ಅರಿಯದ ಶಬ್ದಗಳನ್ನು ಪ್ರಯೋಗಿಸುತ್ತಿದ್ದಳು "ಆತ್ಮದ ಕರೆ" ಎಂಬ ಹೊಸ ಪದಸಂಕ್ತಿಯನ್ನೂ ಕಂಡು ಹಿಡಿದಿದ್ದಳು. ಇಷ್ಟೆಲ್ಲಾ ಬರೇ ಆಕೆಯ ಸಮಾಧಾನಕ್ಕಾಗಿ. ಆ

ದಿನದಿಂದಲೂ ಆಕೆಗೆ ಸಮಾಧಾನ ಸಿಕ್ಕಿರಲಿಲ್ಲ. ಬದಲು ಮನಸ್ಸು ಇಡೀ ದಿನ ಅಲ್ಲೋಲವಾಗಿ ಕುಣಿದಾಡುತ್ತಿದ್ದಿತು.

ಈ "ಆತ್ಮದ ಕರೆ"ಯು ಕೊನೆ ಎಲ್ಲಿಯೆಂದು ಒಮ್ಮೊಮ್ಮೆ ತನ್ನನ್ನೇ ತಾನು ಪ್ರಶ್ನಿಸುವಳು. ಇದು ಸಹಜವಾದ ಸ್ತ್ರೀಪುರುಷರ ಆಕರ್ಷಣೆಯೆಂದು ಆಕೆಯು ಖಂಡಿತವಾಗಿಯೂ ಒಪ್ಪುತ್ತಿರಲಿಲ್ಲ. ಆಕೆಯ ಕಣ್ಣೆದುರಿನಲ್ಲಿ ಆಕೆಗೇನೂ ಕಾಣಿಸದಿದ್ದರೂ ಆಕೆಯ ಮನಸ್ಸು ಯಾವುದೋ ಅಕಲ್ಪಿತವನ್ನು ಕಲ್ಪಿಸಲು ಪ್ರಯತ್ನಿಸುತ್ತಿದ್ದಿತು. ಇಂದು ಆಕೆಯ ಎದೆಯಲ್ಲಿ ಇದೊಂದು ನಿತ್ಯದ ನೋವಾಗಿದೆ. ಒಮ್ಮೊಮ್ಮೆ ಇದನ್ನೇ ಯೋಚಿಸಿ ಕಣ್ಣೀರನ್ನು ಸುರಿದುದೂ ಉಂಟು!

× × × ×

ಟರ್ಮಿನಲ್ ಪರೀಕ್ಷೆಯ ಭರಾಟವು ಮುಗಿಯಿತು. ಅನಂತರದ ರಜೆಯ ಶಾಂತಿಯೂ ಅಶಾಂತಿಯಲ್ಲಿ ಕಳೆಯಿತು. ಈಗ ಪುನಃ ಕಾಲೇಜು ಆರಂಭವಾಗಿದೆ. ಎರಡನೇ ಟರ್ಮು ಬರೀ ಮೂರು ತಿಂಗಳ ಅವಧಿಯದಿದ್ದು ನಂತರ ಪರೀಕ್ಷೆಯೊಂದಿಗೆ ಪ್ರಥಮ ವರ್ಷದ ಮುಕ್ತಾಯ.

ಸರಳೆಯು ಆ ವರ್ಷದ ಕೊನೆಯ ತಿಂಗಳಲ್ಲಿದ್ದಳು. ಎರಡನೆಯ ಟರ್ಮಿನ ಆರಂಭದಿಂದ ಆಕೆಯಲ್ಲೊಂದು ದೊಡ್ಡ ಕ್ರಾಂತಿಯು ನಡೆದಿದ್ದಿತು. ಇಂದು ಆಕೆಯ ನಿರ್ಧಾರ ಯಾವ ಪರಿಣಾಮಕ್ಕೂ ಸಿದ್ಧವಾಗಿ ನಿಂತಿದ್ದಿತು. ಕ್ಲಾಸಿನಲ್ಲಿ ಕುಳಿತಾಗ ಆಕೆಯ ಕಣ್ಣುಗಳು ಆ ವಿದ್ಯಾರ್ಥಿಯಿಂದ ತಳ ಕೀಳುತ್ತಿರಲಿಲ್ಲ. ಇಂದು ಆತನೂ ಆಕೆಯ ದೃಷ್ಟಿಯೊಂದಿಗೆ ಸಮರಸವಾಗಿ ನೋಡುತ್ತಿದ್ದನು. ಇದು ಕೆಲವೊಂದು ಸಂದರ್ಭದಲ್ಲಿ ಕೆಲವು ವಿದ್ಯಾರ್ಥಿಗಳ ಕುಚೋದ್ಯದ ಸಂಗತಿಯಾಗಿದ್ದಿತು. ಆದರೆ ಅತ್ತ ಆಕೆಯು ಲಕ್ಷ್ಯವಿರಲಿಲ್ಲ—ಅದೊಂದು ಬಗೆಯ ದಿಟ್ಟತನದಿಂದ. ಆತನು ಕ್ಲಾಸಿಗೆ ಬಾರದ ದಿನಗಳಲ್ಲಿ ಆಕೆ ಲೈಬ್ರರಿಯಲ್ಲಿ ಕುಳಿತು ಸಮಯ ಕಳೆದುದೂ ಉಂಟು.

ಒಂದೊಂದು ದಿನ ಕಳೆದಂತೆ ಕಾಲೇಜಿನ ಅವಧಿಯು ತೀರಾ ಸಮೀಪಿಸಿದಂತೆ ಆಕೆಗೆ ಅನಿಸುತ್ತಿದ್ದಿತು. ಪರೀಕ್ಷೆಯ ನಂತರ ಮೂರು ತಿಂಗಳವರೆಗೆ ಬೇಸಗೆಯ ಬಿಡುವು ದೊರೆಯುತ್ತದೆ. ಆ ಅವಧಿಯು ಮುಗಿಯುವವರೆಗೆ ನಡುವಿನಲ್ಲಿ ಆತನನ್ನು ಕಾಣಬಹುದಾದ ಸಂದರ್ಭವಿರುವುದಿಲ್ಲವೆಂದು ನೆನೆಯುವಾಗಲೇ ಆಕೆಗೆ ಅಸಹ್ಯ ವೇದನೆಯಾಗುತ್ತಿದ್ದಿತು. ಇದೇ ರೀತಿಯಲ್ಲಿ ಅನಿರ್ದಿಷ್ಟ ಸಮಯದವರೆಗೆ ಇರಲಾಗುವುದಿಲ್ಲೆಂಬುದನ್ನು ಆಕೆಯು ಎಂದೊ ಮನಗಂಡಿದ್ದಳು. ಪ್ರಕೃತಿಯು ಸ್ಥಾಯಿಯಾಗಿ ನಿಲ್ಲಬೇಕೆಂದು ಆಕೆಯ ಬಯಕೆಯೋ ಏನೋ!

ಮನಸ್ಸಿನ ಈ ವಿಧದ ತುಮುಲಯುದ್ಧದಲ್ಲಿ ಪರೀಕ್ಷೆಯೊಂದು ಬೇಗನೇ ಮುಗಿದುಬಿಡುತ್ತಿದ್ದರೆ ಮುಂದೆ ರಜೆಯಲ್ಲಿ ಕೆಲವು ತಿಂಗಳ ಸ್ವಾಸ್ಥ್ಯವನ್ನಾದರೂ ಪಡೆಯಬಹುದೆಂದು ಆಕೆಯು ಹಾರೈಸುತ್ತಿದ್ದಳು. ನಿರೀಕ್ಷಣೆಯಂತೆ ಪರೀಕ್ಷೆಯೂ ಬಂದಿತು; ಉತ್ತಮರೀತಿಯಿಂದಿಲ್ಲದಿದ್ದರೂ ಎಂದೂ ತೇರ್ಗಡೆಯಾಗುವ ಸರಳೆಗೆ ಅಟಕಸ್ನುಂಟುಮಾಡಲಿಲ್ಲ. ಪರೀಕ್ಷೆಯ ಮುಕ್ತಾಯದೊಂದಿಗೆ ರಜೆಯ ದಿನಗಳೂ ಬಂದುವು. ಆದರೆ ಮಾನಸಿಕ ಸ್ವಾಸ್ಥ್ಯವು ಮಾತ್ರ ಆಕೆಯನ್ನು ತೊರೆದುಬಿಟ್ಟಿದ್ದಿತು.

ರಜೆಯ ದಿನಗಳಲ್ಲಿ ಸರಳೆ ತನ್ನನ್ನೊಮ್ಮೆ ಪುನರಾಮರ್ಶಿಸಿಕೊಂಡಳು. ತನ್ನ ತಪ್ಪು ಒಪ್ಪುಗಳನ್ನು ತಾನೇ ತೂಗಿಕೊಂಡಳು. ತಾನೇಕೆ ಈ ವಿಧದಲ್ಲಿ ಅಸಹಜ ವೃತ್ತಿಯನ್ನನುಸರಿಸಿರುವೆನು? ರಜೆಯ ವಿರಾಮ ವಾತಾವರಣದಲ್ಲಿ ಆಕೆಯ ಮನಸ್ಸಿನಲ್ಲೊಂದು ಹೊಸ ಬೆಳಕು ಬಿದ್ದಿತು. ತಾನು ತನ್ನ ಮೇಲೆ ಹೇರಿಕೊಂಡಿರುವ ಮಾನಸಿಕ ಕಾಠಿಣ್ಯವು ಅಸಹಜವೆಂದು ಆಕೆಗೆನಿಸಿತು. ನಿಯಂತ್ರಣವು ದುರುಪಯೋಗದಲ್ಲಿ ಕೊನೆಗೊಳ್ಳುವದೆಂದು ಆಕೆ ಕಂಡುಹಿಡಿದಳು. ತಾನು ಮಾನಸಿಕ ಸಹಜ ಬೆಳವಣಿಗೆಗೆ ಎಡೆ ಬಿಟ್ಟಿದ್ದರೆ ಕಳವಳಕ್ಕೆ ಕಾರಣವಿರಲಿಲ್ಲ. ಅಲ್ಲದೇ ಅದರಿಂದ ತಾನು ತಪ್ಪು ಹಾದೀ ಹಿಡಿಯಲೇಬೇಕೆಂಬ ನಿಯಮವೇನೂ ಇಲ್ಲ. ಮನೋರಮೆಯಂತೆ ಹರಿವ ತೊರೆಯಾಗಿ ಧುಮುಕದಿದ್ದರೂ ಮನಸ್ಸಿನ ಸಹಜಗತಿಗೆ ತಡೆಯೊಡ್ಡಿದರೆ ಅನಾಹುತಕ್ಕೆ ಕಾರಣವಾಗುವುದೆಂದು ಆಕೆ ತೀರ್ಮಾನಿಸಿದಳು. ಈ ವಿಧದ ಮಾನಸಿಕ ಪರಿವರ್ತನೆಯಿಂದ ಮುಂದಿನ ವರುಷದ ನಿರೀಕ್ಷಣೆಯಲ್ಲಿದ್ದ ಆಕೆಗೆ ರಜೆಯ ದಿನಗಳು ಅಷ್ಟೊಂದು ಭಾರವಾಗಿ ಕಂಡುಬರಲಿಲ್ಲ. ಮಗಳ ಒಂದು ವರ್ಷದ ಓದಿನ ಪರಿಣಾಮವನ್ನು ಸೂಕ್ಷ್ಮವಾಗಿ ಪರಾಮರ್ಶಿಸಿದಾಗ ಜಾನಕೀಬಾಯಿಯವರಿಗೆ ಮಗಳ ವಿಷಯದಲ್ಲಿ ಅಭಿಮಾನವೆನಿಸುತ್ತಿದ್ದಿತು; ಅವರ ಒಂದು ಬಗೆಯ ಉತ್ತೇಜನವೂ ಸರಳೆಯ ಮನಸ್ಸಿಗೆ ಹೆಚ್ಚಿನ ಉತ್ಸಾಹವನ್ನೀಯುವುದರಲ್ಲಿ ಸಹಕಾರಿಯಾಗಿದ್ದಿತು.

೩

ಈಗ ಸರಳೆ ಇಂಟರ್ ಕ್ಲಾಸಿನಲ್ಲಿ ಓದುತ್ತಿರುವಳು. ಕಾಲೇಜು ಆರಂಭವಾದ ಮೊದಲಿನ ಎರಡು ತಿಂಗಳುಗಳಲ್ಲಿ ಮಳೆಗಾಲದ ಪ್ರಭಾವವೆಂಬಂತೆ, ಕಾಲೇಜಿನಲ್ಲಿ ಅನೇಕ ಸಂಘ ಸಂಸ್ಥೆಗಳು ಹುಟ್ಟುತ್ತಿದ್ದುವು. ಅದಕ್ಕಾಗಿ ಸಭೆ, ಮತದಾನಗಳ ಸಮಾರಂಭವೂ ಉತ್ಸಾಹದಿಂದ ಕಾಲೇಜಿನ ವಾತಾವರಣದಲ್ಲಿ ತುಂಬಿರುತ್ತಿದ್ದಿತು. ಕಳೆದ ವರುಷದ ಸರಳೆ ಇಂದು ಹೊಸ ಸರಳೆಯಾಗಿರುವಳು. ಆಕೆಯೂ ಇಂದು ಇಂತಹ ಸಂಘಸಂಸ್ಥೆಗಳಲ್ಲಿ ಆಸಕ್ತಿಯನ್ನು ವಹಿಸಿದ್ದಳು. ಪರಿಣಾಮವಾಗಿ ಆಕೆಯು ಮನರಂಜನಾ ಸಮಿತಿಯ ಸದಸ್ಯಳಾಗಿ ಆಯ್ಕೆ ಹೊಂದಿದ್ದಳು

ಸರಳೆ ನಿರೀಕ್ಷಿಸಿದಂತೆ ಮನೋರಮೆಯಲ್ಲಿ ಹೆಚ್ಚಿನ ಉತ್ಸಾಹ ಆಕೆ ಕಾಣಲಿಲ್ಲ. ವಿದ್ಯಾಲಯದ ಪರೀಕ್ಷೆಯಿದೆ ಎಂಬ ಸೋಗನ್ನು ಧರಿಸಿಕೊಂಡು ತನ್ನ ಪಾಠಗಳಲ್ಲೇ ಮಗ್ನಳಾಗಿರುತ್ತಿದ್ದಳು. ಸರಳೆಯ ಈ ವರ್ಷದ ಉತ್ಸಾಹವನ್ನು ಆಕೆ ಅಸೂಯಾದೃಷ್ಟಿಯಿಂದ ನೋಡುತ್ತಿದ್ದಳಲ್ಲದೇ, ತಾನೂ ಮುಂದೆ ಬರುತ್ತಿರಲಿಲ್ಲ. ಅಲ್ಲದೇ ಹಿಂದಿನ ವರ್ಷ ಸರಳೆ ಮತ್ತೂ ಮನೋರಮೆಯರ ನಡುವಿನ ಸ್ನೇಹ ಶೈಥಿಲ್ಯವನ್ನು ಪಡೆದಿದ್ದಿತು. ಆದುದರಿಂದ ಇಬ್ಬರೂ ಒಬ್ಬರನ್ನೊಬ್ಬರು

ವಿಚಾರಿಸದೇ ತಂತಮ್ಮ ಕಾರ್ಯರಂಗಗಳಲ್ಲಿ ತಮಗೆ ತಿಳಿದಂತೆ ಮುಂದುವರಿಯುತ್ತಿದ್ದರು.

ಮನೋರಮೆಯು ಸರಳೆಗೆ ಒಂದು ವಿಧದ ಮುಂಜಾಗ್ರತೆಯ ಸೂಚನೆಯನ್ನು ಕೊಟ್ಟಿರಬಹುದಿತ್ತು. ಆಕೆಯ ಹಿಂದಿನ ವರುಷದ ಅನುಭವವು ಆಕೆಯ ವ್ಯಕ್ತಿ ಜೀವನದಲ್ಲಿ ಉಜ್ವಲಾಗದ ಸ್ಥಳವನ್ನು ಪಡೆದಿದ್ದಿತು. ಹಿಂದಿನ ವರುಷ ಆಕೆಯು ಒಂದು ವೇಗಪೂರ್ಣವಾದ ಹೊನಲಿನಂತೆ ಹರಿದ, ನೈಸರ್ಗಿಕ ಜಲಪಾತವನ್ನುಂಟುಮಾಡಿ, ಈ ವರುಷದಿಂದ ಸೌಮ್ಯಗತಿಯಲ್ಲಿ ಹರಿಯುತ್ತಿದ್ದಿತು. ಆದರೆ ಸರಳೆಯ ಮನಸ್ಪ್ರವಾಹವು ಕಳೆದ ವರ್ಷ ಜಲಸಂಚಯದಲ್ಲಿ ಕಳೆದು ಇಂದು ಮೈತುಂಬಿ ಹರಿಯುತ್ತಿದ್ದಿತು.

ಸರಳೆಗೆ ಸೋಜಿಗದ ವಿಷಯವೆಂದರೆ, ಮನರಂಜನೆಯ ಸಮಿತಿಯಲ್ಲಿ ಆತನೂ— ವಿಜಯನೆಂದು ಆತನ ಹೆಸರು ಆಕೆಗೆ ತಿಳಿದು ಬಂದಿದ್ದಿತು – ಸದಸ್ಯನಾಗಿದ್ದನು. ಕಾರ್ಯಕಾರೀ ಸಭೆ ಕೂಡಿದಾಗ ವಿಚಾರವಿನಿಮಯ ಮಾಡುವಾಗ ತಾನು ಬರೀ ಶಿಲಾಪ್ರತಿಮೆಯಂತೆ ಸರಳೆಗೆ ಕುಳ್ಳಿರಲಾಗುತ್ತಿರಲಿಲ್ಲ. ಎಲ್ಲರೊಂದಿಗೆ ಸರಿಸಮಾನವಾಗಿ ಮಾತಾಡಬೇಕಾಗುತ್ತಿದ್ದಿತು. ಅಂತೆಯೇ ಆತನೊಂದಿಗೂ ಸರಳೆಯು ಮಾತನಾಡುತ್ತಿದ್ದಳು. ಆದರೆ ಇತರರೊಡನೆ ಮಾತನ್ನಾಡುತ್ತಿರುವಾಗಿನ ಸಹಜತೆಯಿಲ್ಲದೇ ಸಂಕೋಚವಾಗುತ್ತಿದ್ದಿತು. ಮಾತುಗಳು ಮನಸ್ಸಿನಿಂದ ಹೊರಕ್ಕೇಳುತ್ತಿರಲಿಲ್ಲ. ಸಾನ್ನಿಧ್ಯ ಸಾಮೀಪ್ಯ ಯಾವಾಗಲೂ ಸಂಕೋಚದ ಸಂಕಲೆಯನ್ನು ಬಿಗಿಯುತ್ತದೆ! ಅಂದಿನ ಮಾತನಾಡಬೇಕೆಂಬ ಆತುರ ಇಂದು ಹೆದರಿಕೆಯನ್ನು ಹುಟ್ಟಿಸುತ್ತಿದ್ದಿತು. ಆದರೆ ಅವರಿಬ್ಬರ ಕಣ್ಣುಗಳು ಅವರಿಗರಿವಿಲ್ಲದಂತೆ ಸಂಭಾಷಣೆಯಲ್ಲಿ ಮಗ್ನವಾಗಿರುತ್ತಿದ್ದವು. ಮನರಂಜನೆಯ ಸಮಿತಿಯ ಕಾರ್ಯಕಲಾಪಗಳು ಹೆಸರಿಗೆ ಅನ್ವರ್ಥಕವಾಗಿದ್ದು ವಾರ್ಷಿಕೋತ್ಸವದ ಸಮಾರಂಭದಲ್ಲಿ ಮನರಂಜನೆಯ ಸಿದ್ಧತೆಯನ್ನೇರ್ಪಡಿಸುವುದು, ಅಲ್ಲದೇ ವರುಷದ ಬಿಡುವಿನ ಸಮಯದಲ್ಲಿ ಕೆಲವು ಬಾರಿ ಇಂತಹ ನೃತ್ಯ ಸಂಗೀತಗಳನ್ನೊದಗಿಸುವುದು. ಸರಳೆಯ ಮಧುರ ಕಂಠ ಇಲ್ಲಿ ಮನ್ನಣೆಯನ್ನು ಪಡೆದಿದ್ದಿತು. ಆ ಸ್ನೇಹಿತ ನೃತ್ಯಗಾರನಾಗಿದ್ದ. ಅಭಿಲಾಷೆ ಪಟ್ಟಿದ್ದರೆ ಆಕೆಯು ನೃತ್ಯವನ್ನೂ ಅಭ್ಯಸಿಸಬಹುದಿತ್ತು. ಆದರೆ ಇಂತಹ ಅಭ್ಯಾಸಗಳಿಗೆ ಹೆಚ್ಚಿನ ಬಿಡುವು ದೊರೆಯುತ್ತಿರಲಿಲ್ಲವಾದುದರಿಂದ ಆಕೆಯು ಇದ್ದುದರಲ್ಲೇ ತೃಪ್ತಿ ಪಡೆಯಬೇಕಾಗಿದ್ದಿತು.

ಯುನಿವರ್ಸಿಟಿ ಎಕ್ಸಾಮ್ ಎಂಬ ಹೆದರಿಕೆಯು ಇಂಟರಿನವರಿಗೆ ಇದ್ದುದೇ. ಆದರೆ ಸರಳೆ ಕ್ಲಾಸುಗಳಿಗೆ ತಪ್ಪದೇ ಹಾಜರಿರುತ್ತಿದ್ದುದರಿಂದ ಕೊನೆಯ ಎರಡು ತಿಂಗಳುಗಳಲ್ಲಿ ಅಭ್ಯಾಸವನ್ನು ಮುಗಿಸಬಹುದೆಂದು ಅಭಿಪ್ರಾಯಪಟ್ಟಿದ್ದಳು. ಆದುದರಿಂದ ಸಮಿತಿಯ ಕಾರ್ಯಕ್ರಮಗಳಲ್ಲಿ ಪರೀಕ್ಷೆಯ ಭೀತಿಯಿಲ್ಲದೇ ಆಕೆಯು ಸಹಕರಿಸುತ್ತಿದ್ದಳು.

ಸರಳೆಯಲ್ಲಿನ ಈ ವಿಧದ ಬದಲಾವಣೆಯು ಆಕೆಯ ಮನೆಯವರ ತಿಳಿವಿಗೆ ಬಂದಿರಲಿಲ್ಲ. ಓದಿಗೆಂತ ಲೈಬ್ರರಿಗೆ ಆಕೆ ಹೋದರೂ ಸಂಜೆ ಆರರೊಳಗೆ ಆಕೆ ತಪ್ಪದೇ ಮನೆಯನ್ನು ಸೇರುತ್ತಿದ್ದಳು. ಅಲ್ಲದೇ ಆಕೆಯ ಸ್ವಭಾವದಲ್ಲಿಯೂ ಅಂತಹ ಬದಲಾವಣೆಯೇನೂ ಆಗಿಲ್ಲ. ಉಲ್ಲಸಿತ ವೃತ್ತಿಯನ್ನು ಹೀಗಳೆಯುವಂತಹ ಕ್ಷುದ್ರ ಮನಸ್ಸು ತಾಯಿತಂದೆಗಳದಾಗಿರಲಿಲ್ಲ; ಅದು ಅವರಿಗೂ ಹಿತವನ್ನುಂಟು ಮಾಡಿದ್ದಿತು. ಮನೋರಮೆ ಒಂದೆರಡು ಬಾರಿ ಜಾನಕೀಬಾಯಿಯವರೆದುರು ಸರಳೆಯ ಸ್ನೇಹಿತನ ಕುರಿತು ಸಾಂಕೇತಿಕ ಸಂಭಾಷಣೆ ಮಾಡಿದ್ದರೂ, ಅವರು ಆ ಬಗ್ಗೆ ವಿಶೇಷ ಗೊಡವೆಯನ್ನು ತೆಗೆದುಕೊಂಡಿರಲಿಲ್ಲ. ಒಮ್ಮೊಮ್ಮೆ ಇಬ್ಬರೇ ಇದ್ದ ಸಂದರ್ಭದಲ್ಲಿ ಸರಳೆಗೆ ಗೃಹಕೃತ್ಯದ ಮಾರ್ಮಿಕ ಬೋಧೆಯನ್ನು ಕೊಡುತ್ತಿದ್ದರಲ್ಲದೇ ಆಕೆಯ ವಿಷಯದಲ್ಲಿ ಅವಿಶ್ವಾಸವನ್ನು ಪಟ್ಟಿರಲಿಲ್ಲ

× × × ×

ಅಂದು ವಾರ್ಷಿಕೋತ್ಸವದ ದಿನವಾಗಿದ್ದಿತು. ಸರಳೆಗೆ ಅಂದು ಒಂದು ನಿಮಿಷದ ಬಿಡುವೂ ಇರಲಿಲ್ಲ. ಸಮಿತಿಯ ಸದಸ್ಯಳಾಗಿದ್ದುದರಿಂದ ಹಲವು ವಿಧದ ಜವಾಬದಾರಿಯು ಆಕೆಯ ಮೇಲೆ ಇದ್ದಿತು. ಮಧ್ಯಾಹ್ನ ಒಂದರೊಳಗಾಗಿಯೇ ಆಕೆ ಕಾಲೇಜಿಗೆ ಬಂದಿದ್ದಳು. ಆಕೆಯು ಸಿಂಗರಿಸುತ್ತಿರುವಾಗ ಜಾನಕೀಬಾಯಿಯವರು ವಿನೋದವಾಗಿ "ಕಾಡಿಗೆಯನ್ನು ಹಚ್ಚಿಕೊಳ್ಳೇ; ದೃಷ್ಟಿ ತಾಗೀತು! ಎನ್ನುವಾಗ ಸರಳೆಯ ಗಲ್ಲಗಳು ಉಬ್ಬಿಕೊಂಡಿದ್ದವು. ಆಕೆಯ ತಾಯಿಯು ಕೂಡಾ ಮನಸ್ಸಿನಲ್ಲೇ ಸರಳೆಗೆ ಬೇಗನೇ ಲಗ್ನ ಮಾಡಿಸುವುದೊಳ್ಳೆಯದೆಂಬ ಅಭಿಪ್ರಾಯಪಟ್ಟಿದ್ದರು. ಸರಳೆಯನ್ನು ನೋಡುತ್ತಿದ್ದ ಅವರ ದೃಷ್ಟಿಯಲ್ಲಿ ಇಂದು ಫಕ್ಕನೇ ಬದಲಾವಣೆಯಾಗಿದ್ದಿತು ಎಂದಿನಂತೆ ಸರಳೆ ಅವರಿಗೆ ಹುಡುಗಿಯಾಗಿ ತೋರಲಿಲ್ಲ. ಬದಲು ವರಸನ್ನು ಕಾದಿರುವ ಜವ್ವನೆಯಂತೇ ಕಂಡುಬಂದಳು.

ಆ ವರ್ಷ ಮನೋರಂಜನಾ ಸಮಿತಿಯು ಹೊಸದಾಗಿ ಸ್ಥಾಪಿಸಲ್ಪಟ್ಟುದುದರಿಂದ ವಾರ್ಷಿಕೋತ್ಸವದಲ್ಲಿ ವಿಶೇಷ ಕಾರ್ಯಕ್ರಮ ಏರ್ಪಾಟು ನಡೆದಿದ್ದಿತು. ಭಾಷಣಗಳು, ಬಹುಮಾನ ವಿತರಣೆ ಮುಂತಾದ ಕಾರ್ಯಕ್ರಮಗಳನಂತರ ಸುಮಾರು ಐದು ತಾಸು ಕಾರ್ಯಕ್ರಮವು ಇಡಲ್ಪಟ್ಟಿದ್ದಿತು. ಉತ್ತಮವಾದ ಎಂಟು ನೃತ್ಯಗಳು ಕೆಲವು ಹಾಡುಗಳಲ್ಲದೇ ಹಿಂದೀ, ಇಂಗ್ಲಿಷ್‌ನಲ್ಲಿ ಎರಡು ನಾಟಕಗಳು ಇದ್ದುವು. ಸರಳೆಯ ಹಾಡಿನ ಕಾರ್ಯಕ್ರಮವೂ ಇಡಲ್ಪಟ್ಟಿದ್ದಿತು.

ಸುಂದರರಾಯರು ಮತ್ತು ಜಾನಕೀಬಾಯಿಯವರು ಮಗಳ ಕಾಲೇಜಿನ ವಾರ್ಷಿಕ ಹಬ್ಬಕ್ಕೆ ಬಂದಿದ್ದರು. ಜಾನಕೀಬಾಯಿಯವರು ಬರಲು ಮುಖ್ಯ ಕಾರಣ ಮಗಳ ಹಾಡಿನ ಕಾರ್ಯಕ್ರಮವಿದ್ದುದು. ಸರಳೆಯು ಹಾಡುತ್ತಿದ್ದಾಗ ಅವಳ ಮುಖವನ್ನೇ ಜಾನಕೀಬಾಯಿಯವರು ಗಮನಿಸುತ್ತಿದ್ದು, ಆಕೆಯ ಕಣ್ಣುಗಳನ್ನು ಸಂಧಿಸಿದಾಗ ಮುಖವು ಅರಳಿ ಮಲ್ಲಿಗೆಯಾಯಿತು. ನೃತ್ಯಗಳ ಹೆಚ್ಚಿನ ಪರಿಚಯವಿಲ್ಲದ ಬಾಯಿಯವರಿಗೆ ಬೆಳೆದ ತರುಣ ತರುಣಿಯರ ನೃತ್ಯಗಳು ಕಾಣುವಾಗ ಅಸಹ್ಯವೆನಿಸುತ್ತಿದ್ದಿತು. ಅಂತೆಯೇ ಅವರು ಉಳಿದ ಕಾರ್ಯಕ್ರಮಗಳನ್ನು ನೋಡುವ ಸಿದ್ಧತೆಯಲ್ಲಿರಲಿಲ್ಲ.

ಸರಳೆಯದೂ ಚಿಕ್ಕ ಕಾರ್ಯಕ್ರಮವಿದ್ದುದರಿಂದ ಆಕೆ

ಗ್ರೀನ್ ರೂಮಿನ ಬಳಿ ವೊಲಂಟಿಯರ್ ಆಗಿ ನಿಂತಿದ್ದಳು. ರಂಗಭೂಮಿಯ ಮೇಲೆ ಬರುವ ಮೊದಲಿನ ಅಪಕ್ವ ಸಿದ್ಧತೆಯನ್ನೆಲ್ಲಾ ಆಕೆಯು ನೋಡುತ್ತಿದ್ದಳು. ಮನಸ್ಸು ತುಂಬಾ ಉಲ್ಲಾಸಗೊಂಡಿದ್ದುದರಿಂದ ಕನಸಿನ ರಾಜ್ಯದಲ್ಲಿ ವಿಹರಿಸುತ್ತಿದ್ದಂತೆ ಆಕೆಗನಿಸುತ್ತಿದ್ದಿತು.

ನೃತ್ಯಗಳಲ್ಲಿ ಒಂದು ರಾಧಾಕೃಷ್ಣರ ಮಿಲನವಾಗಿದ್ದಿತು. ವಿಜಯ ಮತ್ತು ಸರಳೆಯ ಸಹ-ವಿದ್ಯಾರ್ಥಿನಿ ಶಾಂತಿ ಅದರಲ್ಲಿ ಭಾಗ ವಹಿಸುವವರು. ಸರಳೆಯ ಹಾಡಿನ ಕಾರ್ಯಕ್ರಮವಾದನಂತರ ಆಕೆ ಗ್ರೀನ್ ರೂಮಿಗೆ ಮರಳಿದಾಗ ಆಕೆ ಕಂಡುದು ಕೃಷ್ಣನ ವೇಷದಲ್ಲಿನ ವಿಜಯನನ್ನು. ಆತನನ್ನು ಕಂಡ ಒಂದು ಕ್ಷಣ ಆಕೆಯ ಮನಸ್ಸು ಸ್ತಬ್ಧವಾಯಿತು. ಕಚ್ಚೆಹಾಕಿ ಪೀತಾಂಬರವನ್ನುಟ್ಟಿದ್ದನು. ಎದೆ ಮೈಕೈಗಳೆಲ್ಲಾ ಬರಿದು. ಕೊರಳಲ್ಲಿ ದೊಡ್ಡದೊಂದು ಹೂವಮಾಲೆ, ತಲೆಗೆ ಚಿಕ್ಕದೊಂದು ಕಿರೀಟ, ಮೈಯೆಲ್ಲಾ ನೀಲವರ್ಣ, ಮುಖದಲ್ಲಿ ಮುಗುಳು ನಗೆ! ಸರಳೆಯನ್ನು ಕಂಡ ಆತನು ಹುಬ್ಬು ಮಣಿಸಿ ನಸುನಕ್ಕನು. ಇನ್ನೊಂದು ಬದಿಯಲ್ಲಿ ಶಾಂತಿಯೂ ರಾಧೆಯ ವೇಷದಲ್ಲಿ ಸಾರ್ಶಟ್ಟಿದ್ದಳು ಜರತಾರಿ ಸೀರೆಯನ್ನು ಕಚ್ಚೆಹಾಕಿ ಉಟ್ಟಿದ್ದಳು. ಎದೆಯ ಮೇಲೆ ಸೆರಗಿಲ್ಲ ಹೊಳೆಯುವ ಕುಪ್ಪಸವೊಂದು ಉಬ್ಬಿದ ಎದೆಯನ್ನು ತಬ್ಬಿಕೊಂಡಿದ್ದಿತು. ತಲೆಗೆ ಬಾಸಿಂಗದಂತಹ ಚಿಕ್ಕ ಕಿರೀಟ. ಕೊರಳಲ್ಲಿ ಹೂಮಾಲೆ, ಬಣ್ಣಬಳಿದ ಮುಖದ ಮೇಲೆ ವಿಲಾಸಯುಕ್ತವಾದ ನಗೆ. ಶಾಂತಿಯನ್ನು ಕಂಡ ಮೊದಲಗಳಿಗೆಗೆ ಸರಳೆಗೆ ಅಸಹ್ಯವೆನಿಸಿತು. ಹೆಣ್ಣು ದೇಹದ ಮಾಟವನ್ನು ಪ್ರೇಕ್ಷಕರಿಮರಿಗೆ ನಲಿಸುವಂತಿದ್ದಿತು. ಆ ನೋಟ, ಆ ಬಾಗು, ಆ ಬಳಕು ಪ್ರತಿಯೊಂದನ್ನು ನಿರೀಕ್ಷಿಸುತ್ತಿದ್ದಂತೆ ಸರಳೆಗೆ ಶಾಂತಿಯ ಮೇಲೆ ಕೋಪ ಉಕ್ಕೇರುತ್ತಿದ್ದಿತು ರಂಗಭೂಮಿಯ ಮೇಲೆ ಪ್ರದರ್ಶನಕ್ಕೆ ಇನ್ನೂ ಹತ್ತದಿನೈದು ನಿಮಿಷಗಳಿದ್ದುದರಿಂದ ಗ್ರೀನ ರೂಮಿನಲ್ಲೇ ಒಂದು ಸಣ್ಣ ರಿಹರ್ಸಲ್ ನೃತ್ಯಮಾಡುತ್ತಿದ್ದರು. ಅವರಿಬ್ಬರೂ ಮೈಕೈಗಳನ್ನು ಮುಟ್ಟಿ ನೃತ್ಯಮಾಡುವಾಗ, ಕಣ್ಣನ್ನು ಮಣಿಸುವಾಗ, ದೇಹವನ್ನು ಬಳುಕಿಸುವಾಗ ಮಂದಹಾಸವನ್ನು ತುಳುಕಿಸುವಾಗ ಶಾಂತಿಯ ಕೆನ್ನೆಗೊಂದೇಟನ್ನು ಕೊಡಬೇಕೆಂದು ಅನಿಸಿತು. ಅಸೂಯೆ ಮತ್ತು ಉರಿಯುವ ಕೋಪದಿಂದ ಆಕೆಯು ಮುಖಗಂಟಿಕ್ಕಿಕೊಂಡು ಅವರ ಅಭ್ಯಾಸವನ್ನು ನೋಡುತ್ತಿದ್ದಳು. ಅದರಲ್ಲೂ ವಿಜಯನು ಪೇಕುಬೇಕೆಂದೇ....…… ಸರಳೆಯ ಕೈಗಳು ನಡುಗುತ್ತಿದ್ದವು. ಅವರಿಬ್ಬರೂ ಸರಳೆಯು ನಿಂತುದುದನ್ನೇ ಮರೆತಂತೆ ವರ್ತಿಸುತ್ತಿದ್ದರು.

ಸರಳೆಗೆ ನಿಂತಲ್ಲಿಯೇ ಹುಚ್ಚು ಹಿಡಿದಂತೇ ಅನಿಸುತ್ತಿದ್ದಿತು. ನಿಜವಾಗಿಯೂ ಆಕೆ ಆ ಸಂದರ್ಭದಲ್ಲಿ ಹಿಪ್ನೊಟೈಸ್ (Hypnotised) ಗೊಂಡಿದ್ದಳು. ಬರುವಾಗಲೇ ಆಕೆಯು ಉಲ್ಲಸಿತ ಮನಸ್ಸಿನಲ್ಲಿ ಇದ್ದಳು; ಆಕೆಯಂತೂ ತೀರ ಸೂಕ್ಷ್ಮ (acutely sensitive) ಮನಸ್ಸಿನವಳು. ರಾಧಾಕೃಷ್ಣರ ವಿಲಾಸಮಯವಾದ ನೃತ್ಯವನ್ನು ಕಾಣುತ್ತಿದ್ದಂತೆ ಆಕೆಯು ಭ್ರಾಂತಿಗೊಂಡಳು. ಹಿಪ್ನೊಟೈಸ್ ಆದ ಕ್ಷಣ ವಯಸ್ಸಿಗೆ ತಕ್ಕುದಾದ ಸುಪ್ತ ಆಶೆ ಆಕಾಂಕ್ಷೆಗಳು ಆಕೆಯಲ್ಲಿ ಕೆರಳಿದವು. ವಿಜಯನು ಯುವಕ; ಆತನು ಕೃಷ್ಣನಾಗಿ ನಿಂತಾಗ ಆತನ ಹರವಾದ ಎದೆ, ಬಲವಾದ ದೇಹ ಸೌಷ್ಟವ, ಮುಖದ ವಿಲಾಸಯುಕ್ತವಾದ ನಗುವನ್ನು ಕಂಡಾಗ ಸರಳೆಯು ಕಲ್ಲಿನಂತೆ ಸ್ತಬ್ಧವಾದಳು. ಆದರೆ ತನ್ನಂತೆ ಯುವತಿಯಾದ ಶಾಂತಿಯು ರಾಧೆಯ ವೇಷದಲ್ಲಿ ಬಂದಾಗ ಆಕೆಯು ಕೋಪಗೊಂಡಿದ್ದಳು. ತಾನು ಯಾವುದರಲ್ಲಿಯೂ ಆಕೆಗೆ ಕಡಿಮೆಯಿರಲಿಲ್ಲ. ತಾನೂ ಚೆಲುವೆ, ತರುಣಿ ಹೀಗಿರುವಾಗ ಶಾಂತಿಯೇ ರಾಧೆಯೇತಕಾಗಬೇಕೆಂದು ಆಕೆ ಭ್ರಾಂತಿಯಲ್ಲಿ ಯೋಚಿಸುತ್ತಿದ್ದಳು ಆದುದರಿಂದ ವಿಜಯನು ಶಾಂತಿಯ ಮೈಕೈ ಮುಟ್ಟಿದಾಗ ಆತನಿಗೆ ಎಡೆಗೊಟ್ಟುದುದಕ್ಕಾಗಿ ಶಾಂತಿಯ ಕೆನ್ನೆಗೆ ಎರಡೇಟನ್ನು ಬಿಗಿಯಬೇಕೆಂದು ಸರಳೆಗನಿಸಿತು. ಅದರಲ್ಲೂ ವಿಜಯನು…. .. ಕ್ಷಣದಿಂದ ಸರಳೆಯ ಕಣ್ಣುಗಳು ಆ ಸ್ಥಳವನ್ನು ಕೀಳಿಗಲಿಲ್ಲ. ಹದಿನೆಂಟರ ಯುವತಿ ಶಾಂತಿಯ ವಕ್ಷಸ್ಥಳದ ಬಣ್ಣನೆಯೇತಕ್ಕೆ?

ಸರಳೆಯೀಗ ಸರಳೆಯಾಗಿರಲಿಲ್ಲ. ಹಿಪ್ನೊಟೈಸ್‌ಗೊಂಡುದುದರಿಂದ ಆಕೆಯ ಅದುಮಿಟ್ಟ ವಯಸ್ಸಿನ ಬಯಕೆಗಳೆಲ್ಲಾ ಆಕೆಯ ಇದಿರು ಅಲ್ಲೋಲವಾಗಿ ನರ್ತಿಸುತ್ತಿದ್ದವು. ರಂಗಭೂಮಿಯ ಮೇಲೆ ಬಂದಾಗಲೂ ಆಕೆಯ ಕಣ್ಣು ಶಾಂತಿಯ ಎದೆಯ ಮೇಲೆಯೇ ನಟ್ಟಿದ್ದಿತು. ಕುಪಿತಳಾಗಿ ಆಕೆ ಗ್ರೀನ್‌ರೂಮಿಗೆ ಪುನಃ ಬಂದು ಬೇಲೂರು ಬಾಲಿಕೆಯಂತೆ ನಿಂತಳು. ಯೋಚಿಸುತ್ತಿದ್ದಳು. ಒಮ್ಮೆ ಸುತ್ತೆಲ್ಲ ನೋಡಿದಳು. ಗ್ರೀನ್‌ರೂಮಿನ ಈ ಕೊಟಡಿಯು ಇಡೀ ಬರಿದಾಗಿದೆ ವೇಷಬಳೆಯುವ ಕೆಲವು ಸಾಧನಗಳು ಮೇಜಿನ ಮೇಲೆ ಇಡಲ್ಪಟ್ಟಿವೆ. ಹೊಳೆಯುವ ವಸ್ತ್ರ ರಾಶಿಯು ಹೊರಚೆಲ್ಲಿಕೊಂಡು ಬಿದ್ದಿದೆ. ಆ ಗೋಡೆಯನ್ನೊತ್ತಿಕೊಂಡು ನಿಲುಗನ್ನಡಿಯೊಂದು ನಿಂತಿದ್ದಿತು. ನಿಲುಗನ್ನಡಿಯನ್ನು ನೋಡುತ್ತಿದ್ದಂತೆ ಸರಳೆಯ ಮನಸ್ಸಿನಲ್ಲಿ ಏನೋ ಹೊಳೆದಂತಾಯಿತು. ಮೆಲ್ಲನೇ ಹೆಜ್ಜೆಯನ್ನು ಕಿತ್ತು ಕನ್ನಡಿಯ ಇದಿರುಬಂದು ನಿಂತಳು. ತನ್ನ ಪ್ರತಿಛಾಯೆಯನ್ನೊಂದೇ ನೋಡಿಕೊಂಡಳು. ತನ್ನದು ಶಾಂತಿಗಿಂತಲೂ ಚೆಲುವಿನ ಮುಖ, ಬಣ್ಣವೂ ಆಕೆಗಿಂತ ಬಿಳುಪು; ತಾನು ಪ್ರತಿಯೊಂದರಲ್ಲಿಯೂ ಆಕೆಗೆ

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯ ಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ ಪೌಡರ ಉಪಯೋಗಿಸಿ

ಮೇಲುಗೈ ಅಂತೆಯೇ ಸರಳೆಯ ಕಣ್ಣುಗಳು ತನ್ನ ಪ್ರತಿಬಿಂಬದ ವಕ್ಷಸ್ಥಳದ ಬಳಿ ಸುಳಿದವು. ಆದರೆ ಸೆರಗಿನಿಂದ ಮುಚ್ಚಿದ್ದಿತು. ಶಾಂತಿಯ ನೆನಪಾಯಿತು. ಸೆರಗಿನಿಂದ ಆಕೆಯ ಸೌಂದರ್ಯವು ಮರೆಮಾಚಿರಲಿಲ್ಲ. ಹೆದೆಯೇರಿದ ಬಿಲ್ಲೊನೆಯಂತೆ...... ಸರಳೆಯ ಕೈಗಳು ಮೆಲ್ಲಗೇ ಮೇಲೆ ಸರಿದವು. ಸೆರಗನ್ನು ತುಸು ಸರಿಸಿದಳು. ಎದೆಯ ಪಾರ್ಶ್ವನೋಟದಿಂದ ಸರಳೆಗೆ ತುಸು ಸಮಾಧಾನವಾಯಿತು. ಬಾಗಿಲಿನತ್ತ ಬಂದು ಕ್ಷಣ ನೋಡಿದಳು. ಅದು ಮುಚ್ಚಿದ್ದಿತು. ಜನರ ಸುಳಿವಿರಲಿಲ್ಲ. ಎಲ್ಲರೂ ನಾಟಕ ನೋಡುವುದರಲ್ಲಿ ತಲ್ಲೀನರಾಗಿರಬೇಕೆಂದು ಯೋಚಿಸಿಕೊಂಡಳು. ಅಂತೆಯೇ ಮರುಕ್ಷಣದಲ್ಲಿ ಎದೆಯ ಮೇಲಿನ ಸೆರಗನ್ನು ಸಂಪೂರ್ಣವಾಗಿ ಸರಿಸಿ ತನ್ನ ಪ್ರತಿಚ್ಛಾಯೆಯನ್ನೊಮ್ಮೆ ನೋಡಿದಳು. ವಯಸ್ಸಿನ ಬೆಳವಣಿಗೆಯೊಂದಿಗೆ ಎದೆಯು ಪಕ್ವಗೊಂಡಿದ್ದಿತು. ಸರಳೆಯು ನೆಟ್ಟನೋಟದಿಂದ ತನ್ನನ್ನೇ ನೋಡುತ್ತಾ ನಿಂತಿದ್ದಳು.

ಬಾಗಿಲು ತೆರೆದ ಶಬ್ದವಾಯಿತು. ವಿಜಯ ಏತಕ್ಕೋ ಒಳಗೆ ಬಂದವ ಒಂದು ಕ್ಷಣ ಸ್ತಬ್ಧನಾಗಿ ನಿಂತನು. ಮತ್ತೆ ವಿನೋದವಾಗಿ, "ಏನು, ತಮ್ಮ ಸೌಂದರ್ಯವನ್ನು ತಾನೇ ನೋಡುತ್ತಾರೆಯೋ ?" ಎಂದನು. "ಹೇಳುವವರು ಇರದಾಗ ತಾವೇ ನೋಡಬೇಕಾಗುತ್ತದೆ" ಎಂದು ಸರಳೆ ದಿಟ್ಟತನದಿಂದ ಉತ್ತರವಿತ್ತಳು. ವಿಜಯನು ಮರು ಮಾತನಾಡಲಿಲ್ಲ. ಆತನ ಕೈಗಳು ಆತನ ಯೋಚನೆಯಷ್ಟು ಮುಂದುವರಿಯಲು ಹಿಂಜರಿದವು.

ಸುಂದರರಾಯರೂ ಜಾನಕೀಬಾಯಿಯವರೂ ಮನೆಗೆ ಹೊರಡುವಾಗ ಎಂಟು ಗಂಟೆಯಾಗಿದ್ದಿತು. ಇನ್ನೂ ಎರಡು ಗಂಟೆಯ ಕಾರ್ಯಕ್ರಮವಿದ್ದಿತು. ಹೊರಡುವ ಮುಂಚೆ ಸರಳೆಯನ್ನೊಮ್ಮೆ ಕಾಣ ಬಂದರು. ಸರಳೆ ಒಂದು ದಿನದ ಮಟ್ಟಿಗೆ ತನಗೆ ತಡವಾಗಿ ಬರಲು ಅನುಮತಿ ಕೊಡಬೇಕೆಂದು ಬಿನ್ನವಿಸಿದಳು. ಸುಂದರರಾಯರು ಸಂತೋಷದಿಂದ ತಲೆದೂಗುತ್ತಾ "ಚೆನ್ನಾಗಿ ಹಾಡಿದಿಯಮ್ಮಾ; ಮೊದಲೇ ತಿಳಿದಿರುತ್ತಿದ್ದರೆ ಸಂಗೀತ ಕಲಿಸಲಿಕ್ಕಾದರೂ ಏರ್ಪಾಡು ಮಾಡುತ್ತಿದ್ದೆ" ಎಂದು ತಂದೆಯ ಅಭಿಮಾನದಿಂದ ನುಡಿದರು. ಜಾನಕೀಬಾಯಿಯವರು ಹಳೆಯಕಾಲದ ಹೋಲಿಕೆಯೊಂದಿಗೆ "ಸುಬ್ಬುಲಕ್ಷ್ಮಿಗಿಂತ ನಮ್ಮ ಸರಳೆಯೇ ಮೇಲುಗೈ" ಎಂದು ಆಕೆಯ ಗಲ್ಲವನ್ನು ಹಿಡಿದರು. ಆದರೆ ಸರಳೆ ಇನ್ನೂ ಭ್ರಾಂತಿರಾಜ್ಯದಲ್ಲೇ ಇದ್ದಳು ಆಕೆಯ ಬಾಯಿಯಿಂದ ಶಬ್ದವೂ ಹೊರಬರಲಿಲ್ಲ. ಆಕೆಯನ್ನು ಬಿಟ್ಟು ಹೋಗುವಾಗ ಜಾನಕೀಬಾಯಿಯವರು ನಸುನಕ್ಕು ಸರಳೆಯ ತುಸು ಸರಿದ ಸೆರಗನ್ನು ಸರಿಪಡಿಸಿ ತಾಯಿತನದ ಹಿರಿಮೆಯನ್ನು ವಹಿಸಿಕೊಂಡರು.

ಹತ್ತುವರೆ ಗಂಟೆಗೆ ಅಂದಿನ ಕಾರ್ಯಕ್ರಮ ಮುಗಿದವು. ಕಲಾಕಾರರೊಬ್ಬೊಬ್ಬರಾಗಿಯೇ ಹೊರಡತೊಡಗಿದರು. ಶಾಂತಿ ಮೊದಲೇ ಹೋಗಿದ್ದಳು. ಸರಳೆ ವಿಜಯನನ್ನೊಮ್ಮೆ ನೋಡಿದಳು. ಆತನು ಅರಿತವನಂತೆ "ಹೊರಡೋಣವೇ ?" ಎಂದು ಕೇಳಿದನು. ಮರುಕ್ಷಣದಲ್ಲಿ ಇಬ್ಬರೂ ಜತೆಯಾಗಿ ಹೊರಟಿದ್ದರು. ವಿಜಯನ ಜತೆಯಲ್ಲಿ ಮಾಳಿಗೆಯನ್ನು ಇಳಿಯುತ್ತಿದ್ದಾಗಲೂ ಸರಳೆಯು ಭ್ರಾಂತಿರಾಜ್ಯದಿಂದ ಹೊರಬಂದಿರಲಿಲ್ಲ.

ಟ್ಯಾಕ್ಸಿಯೊಂದನ್ನು ಬಾಡಿಗೆಗೆ ಕಟ್ಟಿಕೊಂಡರು. ಹಿಂಬದಿಯ ಸೀಟಿನಲ್ಲಿ ಇಬ್ಬರೂ ಕುಳಿತು ಹೊರಟರು. ಚಳಿಗಾಲದ ರಾತ್ರಿಯಾಗಿದ್ದುದರಿಂದ ಮುಂಬಯಿ ರಸ್ತೆಗಳು ನಿಶ್ಶಬ್ದ ನೀರವವಾಗಿದ್ದುವು. ಅಲ್ಲೊಂದು ಇಲ್ಲೊಂದು ಜನ ನಡೆಯುತ್ತಿದ್ದಿತು. ಟ್ರಾಮನ್ನು ಹದಿನೈದು ನಿಮಿಷಗಳಿಗೊಂದಾವರ್ತಿ ಹಿಂದೆ ಹಾಕುವಾಗ 'ಕಟ್ ಕಟ್' ಎಂಬ ಶಬ್ದವಾಗುತ್ತಿದ್ದಿತು. ರಸ್ತೆಯ ಪ್ರಕಾಶಭರಿತವಾದ ದೀಪಗಳು ಬೆಳದಿಂಗಳನ್ನು ಚೆಲ್ಲಿದ್ದವು. ಅವಕ್ಕೂ ಮೇಲೆ ಸಪ್ತಮಿಯ ಚಂದ್ರ ಅಣಕಿಸಿ ಇಬ್ಬನಿಯ ಉಯ್ಯಾಲೆಯಲ್ಲಿ ತೂಗುತ್ತಿದ್ದನು. ಶರದೃತುವಿ ಕೊರೆಯುವ ಗಾಳಿಯು ಬಲವಾಗಿ ಬೀಸುತ್ತಿದ್ದಿತು. ಡ್ರೈವರ ಸರ್ದಾರಜೀಯು ವಿಮಾನದಂತೆ ಶಬ್ದವಿಲ್ಲದೇ ಟ್ಯಾಕ್ಸಿಯನ ಮುಂಬಯಿಯ ಟಾರ್ ರೋಡಿನಮೇಲೆ ನಡೆಸುತ್ತಿದ್ದನು. ಟ್ಯಾಕ್ಸಿಯ ಮುಂದೆ ಸಾಗುತ್ತಿದ್ದಿತು.

ಟ್ಯಾಕ್ಸಿಯು ಹೊರಟ ಮರುಕ್ಷಣದಲ್ಲಿ ವಿಜಯನು ಸರಳೆಯ ಬದಿಗೆ ಸರಿದುಕೊಂಡನು. ಆಕೆಯ ಕೈಯನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡನು. ಆಕೆಯು ಪ್ರತಿಭಟಿಸದ ಕಾರಣ ಆತನ ಕೈಗಳು ಮೆಲ್ಲಗೆ ಮುಂದೆ ಸರಿದು ಆಕೆಯ ನಡುವನ್ನು ಆವರಿಸಿಕೊಂಡವು. ಆಕೆಯ ಸೆರಗು ಎಡಭುಜದಿಂದ ಕೆಳಗಿಳಿದಿದ್ದಿತು. ವಿಜಯನ ಕೈಗಳು ಸ್ವಾತಂತ್ರ್ಯದ ಮೇರೆಮರಿದಿದ್ದವು. "ನೋಡುವವರಿಲ್ಲವೆಂದೆಯಲ್ಲ ಆಗ ತೋರಿಸುವವರಿದ್ದರೆ ತಾನೆ ?" ಎಂದು ಆಕೆಯ ಕಿವಿಯಲ್ಲಿ ಪಿಸುಗುಟ್ಟಿದನು. ಸರಳೆ ಮಾತನಾಡಲಿಲ್ಲ; ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ. ಆಕೆ ಅರಿವಿಲ್ಲದ ಭ್ರಾಂತಿರಾಜ್ಯದಲ್ಲಿದ್ದಳು. ಎಲ್ಲಿಗೆ ಹೋಗುತ್ತೇವೆ ಎಂಬುದನ್ನೂ ಲಕ್ಷಿಸಿರಲಿಲ್ಲ. ಟ್ಯಾಕ್ಸಿಯು ಸಾಗುತ್ತಿದ್ದಿತು ಸುಯ್ಯನೇ.... ...ಮತ್ತೆ ಮುಂಬಯಿಯಲ್ಲಿ ಟ್ಯಾಕ್ಸಿ ಡ್ರೈವರನನ್ನು ಮನುಷ್ಯನೆಂದು ಪರಿಗಣಿಸಿದರಲ್ಲವೇ ? ಆಗ ಸಮಯ ಹತ್ತು ಮುಕ್ಕಾಲು.

ಟ್ಯಾಕ್ಸಿಯು ನಿಂತಿತು. ಸರ್ದಾರಜೀಗೆ ಬಾಡಿಗೆಯ ಹಣವ ಕೊಟ್ಟು, ವಿಜಯನು ಸರಳೆಯ ಕೈ ಹಿಡಿದು ನಡೆದಿದ್ದನು, ಒಂದನೇ ಮಾಳಿಗೆಯ ತನ್ನ ಕೊಟಡಿಗೆ. ಸರಳೆಯು ಮಂತ್ರಿಸಲ್ಪಟ್ಟ ಪ್ರಾಣಿಯಂತೆ ಆತನ ಹಿಂದೆ ನಡೆದಿದ್ದಳು. ಸರಳೆಯಾಗಿ ಅಲ್ಲ, ಅಭಿಸಾರಿಯಾಗಿ !

ರೂಮಿನಲ್ಲಿ ಕಾಲಿಟ್ಟ ಮರುಕ್ಷಣ ವಿಜಯನು ಸರಳೆಯ ಬಲವಾಗಿ ತಬ್ಬಿಕೊಂಡು, ಆಕೆಯ ಮುಖವನ್ನು ಮುತ್ತಿನ ಮಳೆಯಿ ಮುಚ್ಚಿದನು. ಎರಡು ಕ್ಷಣದ ಈ ಸಂಭ್ರಮದ ನಂತರ ಆಕೆಯ ಕುರ್ಚಿಯೊಂದರ ಮೇಲೆ ಕೂಡಿಸಿ, ಆತನು ತನ್ನ ಕಾಲ ಶೂಜ್‌ಗಳ ಬಿಚ್ಚಲಾರಂಭಿಸಿದನು.

ಸರಳೆಗೆ ತಲೆಯೆಲ್ಲ ತಿರುಗುತ್ತಿದ್ದಿತು. ತಾನು ನೋಡುತ್ತಿ ಗೋಡೆ, ಕಿಟಕಿ, ಬಾಗಿಲು, ಮೇಜು, ಮಂಚ ಯಾವುದೂ ಸ್ಥಿರ

ನಿಂತಂತೇ ತೋರುತ್ತಿರಲಿಲ್ಲ. ಎಲ್ಲವೂ ತಿರುಗುತ್ತಿದ್ದವು; ಬಳಲಿಕೆಯಿಲ್ಲದೇ ಸುತ್ತ ಗರ್ರನೇ ತಿರುಗುತ್ತಿದ್ದವು. ಆಕೆಗೆ ತನ್ನ ಸಂಭಾನನಿರಲಿಲ್ಲ. ವಿಜಯನು ತಬ್ಬಿಕೊಂಡುದುದು, ಮುದ್ದಿಸಿದುದೂ ಆಕೆಯ ಅರಿವಿನಲ್ಲಿರಲಿಲ್ಲ. ಆಕೆಯು ಸುತ್ತಲೂ ನೋಡುತ್ತಿದ್ದಳು—ಅಸಹಾಯಳಾಗಿ, ಅನಾಥಳಾಗಿ, ಆರ್ತಳಾಗಿ ನೋಡುತ್ತಿದ್ದಳು— ಯಾವುದಾದರೊಂದು ಆಸರೆಗಾಗಿ. ಈ ಗೋಡೆಯಲ್ಲಿ ಕೆಲೆಂಡರೊಂದು ಬಿಟ್ಟು ಬೇರೇನಿರಲಿಲ್ಲ. ಕೆಲೆಂಡರಿನ ಚಿತ್ರವು ರಾಧೆ ಕೃಷ್ಣರದು, ಈ ಗೋಡೆ ಬರಿದು. ಅಲ್ಲಿ ಬಾಗಿಲು. ಮತ್ತೆ ಈ ಗೋಡೆಯಲ್ಲಿ ಎರಡು ಪಟಗಳನ್ನು ತೂಗಹಾಕಿದ್ದರು. ಹೌದು, ಎರಡು ಪಟಗಳು; ಯಾರದ್ದೆಂದು ತಿಳಿಯುತ್ತಿರಲಿಲ್ಲ. ಚಿತ್ತಭ್ರಮಣದಿಂದಾಗಿ ಮುಖಗಳು ಸರಿಯಾಗಿ ತೋರುತ್ತಿರಲಿಲ್ಲ. ಸುಪ್ತಚಿತ್ರದಲ್ಲಿ (Sub-conscience) ಆಕೆಯ ಮನೆಯಲ್ಲಿರುವ ಎರಡು ಪಟಗಳ ನೆನಪಾಯಿತು. ಅವು ಅವಳ ತಂದೆತಾಯಿಯವರದು. ಆದರೆ ಇವು? ಅಲ್ಲ,? ಸರಿಯಾಗಿ ತೋರುವುದಿಲ್ಲ....... ಇಲ್ಲಿ ಸರಿಯಾಗಿ ತೋರುವುದಿಲ್ಲ. ನಿಟ್ಟಿಸಿದಳು. ಒಂದು ಪಟದ ವ್ಯಕ್ತಿ ತಂದೆಯಂತೆ ಕಾಣುತ್ತಿದ್ದಿತು. ಮತ್ತೊಮ್ಮೆ ಕಣ್ಣು ಬೊಂಬೆ ಹೊರಬರುವಂತೆ ದೃಷ್ಟಿಸಿದಳು. ಹೌದು, ಅದು ಆಕೆಯ ತಂದೆಯ ಚಿತ್ರ. ಅದೇ ವೇಷ, ಅದೇ ಮುಖ, ಅದೇ ಕಣ್ಣುಗಳು! ಅದೇ ದಯಾಭಾವ ಮುಖದ ಮೇಲೂ! ಕಣ್ಣುಗಳು ಅಷ್ಟೊಂದು ಸೌಜನ್ಯಭರಿತವಾಗಿವೆ....ಅದೂ ತನ್ನನ್ನೇ ನೋಡುವಂತೆ ಭಾಸವಾಗುತ್ತದೆ. ತನ್ನಮೇಲೆ ಅವರಿಗೆಷ್ಟು ದಯೆ, ವಿಶ್ವಾಸ, ಅಭಿಮಾನಗಳು!

ಸರಳೆ ಇನ್ನೊಂದು ಪಟವನ್ನು ದೃಷ್ಟಿಸಿ ನೋಡಿದಳು. ಈಗ ಅದು ಸ್ಪಷ್ಟವಾಗಿ ತೋರುತ್ತಿದ್ದಿತು. ಅದು ಮತ್ತಾರ ಪಟವಾಗಿರದೇ ಜಾನಕೀಬಾಯಿಯವರದೇ ಎಂದು ಸರಳೆ ನೋಡಿದಳು. ತನ್ನ ತಾಯಿಗೂ ಅಂತಹುದೇ ಬನಾರಸ್ ಸೀರೆಯಿದೆ. ಅದೇ ಬಗೆಯ ಫೆಶನ್ ಇರದ ಬರಿಗಯ್ಯ ರವಕೆ. ಮುಖ? ಪ್ರತಿರೂಪ! ಅಗಲವಾದ ಹಣೆ, ದೊಡ್ಡ ಕುಂಕುಮದ ಚುಕ್ಕೆ. ನಿಡುಬೈತಲೆ, ತುಂಬು ಗಲ್ಲಗಳು, ಪುಟ್ಟ ಬಾಯಿ ಸಣ್ಣ ಮೂಗು—ಕಣ್ಣುಗಳು? ಮತ್ತೆ ತನ್ನ ತಾಯಿಯೆಂದು ಬೇರೆ ಹೇಳಬೇಕೆ? ಎಷ್ಟೊಂದು ವಾತ್ಸಲ್ಯಪೂರಿತವಾದ ಮುಖ; ಕಣ್ಣಲ್ಲಿ ಪ್ರೀತಿಯು ಉಕ್ಕುತ್ತದೆ. ಆದರೆ ಕಣ್ಣ ಕೊನೆಗಳು ತುಸುವೆ ಅರ್ಥಗರ್ಭಿತವಾಗಿವೆ! ಎಚ್ಚರಿಕೆಯ ಅರಸಿನ ಬಣ್ಣವಿದೆ ಆದರೂ ಮುಖ ತುಂಬಾ ವಿಶ್ವಾಸ, ಕರುಣೆ, ಪ್ರೀತಿ ತುಂಬಿಕೊಂಡಿದ್ದವು.

ಸರಳೆಗೆ ಚಿತ್ತಭ್ರಮಣ ಬಲವಾಯಿತು. ಗೋಡೆತುಂಬಾ ಅತ್ತ, ಇತ್ತ, ಎಲ್ಲೆಲ್ಲೂ ಆ ಎರಡು ಚಿತ್ರಗಳೇ ಕಾಣಲಾರಂಭಿಸಿದವು. ತನ್ನನ್ನು ಪ್ರೀತಿಯಿಂದ ಕರೆದಂತೆ ಕೇಳಿಸುತ್ತಿದ್ದಿತು. ಎಲ್ಲೆಲ್ಲೂ ಒಂದೇ ಚಿತ್ರ, ಎಲ್ಲೆಲ್ಲೂ ಒಂದೇ ನಾದ. ಸರಳೆಗೆ ಹೆದರಿಕೆಯಿಂದ ಅಳು ಬಂದಿತು. ಕಣ್ಣೀರು ಏಕಶ್ರೇಣಿಯಿಂದ ಹರಿಯಲಾರಂಭಿಸಿತು. ಮನಸ್ಸು ಕ್ಷಿಪ್ರ ವೇದನೆಯಿಂದ ಕೂಗುತ್ತಿದ್ದಿತು. ಅಯ್ಯೋ!

ಒಂದು ಕ್ಷಣ ಕಳೆಯಿತು ವಿಜಯನು ಬೂಟುಗಳನ್ನು ತೆಗೆದಿಟ್ಟು ವಸ್ತ್ರಗಳನ್ನು ಬದಲಾಯಿಸಿ ಸರಳೆಯ ಕುರ್ಚಿಯ ಹಿಂಬದಿಯಲ್ಲಿ

ಮಕ್ಕಳ ಸದೃಢತೆಗಾಗಿ — "ಬಗನ ಬಾಲಾಮೃತ"

ಹಲ್ಲು ಬರುವಾಗ — "ಎಸ್ಸನ್ ಗ್ರಾಇಪ್ ಹೀಲರ್"

ಜಂತು ಆದರೆ — "ವರ್ಮ ಆಯಿಲ್"

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗಬೀಳುವ ಔಷಧಗಳು

The National Pharmacies & Pharmaceuticals Ltd., Dharwar

ಬಂದುನಿಂತನು. ಆತನ ಆತುರವು ತಡೆಯನ್ನು ಕೆಡೆದಿದ್ದಿತು. ಸರಳೆಯ ಕಣ್ಣೀರನ್ನು ಆತ ಕಂಡಿರಲಿಲ್ಲ. ಆಕೆಯ ಚಿತ್ತಭ್ರಮಣವನ್ನೂ ಅರಿತಿರಲಿಲ್ಲ. ಆತನು ಇಲ್ಲೊಂದು ಲೋಕದಲ್ಲಿದ್ದನು. ಆದರೆ ಸರಳೆ....?

ಸರಳೆ ಸುತ್ತ ತಾಯಿತಂದೆಗಳನ್ನು ಕಾಣುತ್ತಿದ್ದಳು. ಅವರ ವಾತ್ಸಲ್ಯ ಕರುಣೆ, ವಿಶ್ವಾಸ ಆಕೆಯನ್ನು ಕರೆಕರೆದು ಕೂಗುತ್ತಿದ್ದವು. ವಿಜಯನು ಆಕೆಯನ್ನು ಸ್ಪರ್ಶಿಸಿದಾಗ ಆಕೆಗೆ ತನ್ನ ತಾಯಿಯೇ ಸೆರಗನ್ನು ಸರಿಪಡಿಸುವಂತೆ ತೋರಿತು. ಆನುವರಿಂದ ಪ್ರೀತಿಯ ಉತ್ತರದಿಂದ ಆ ಸ್ಪರ್ಶಿಸಿದ ವ್ಯಕ್ತಿಯನ್ನು ನೋಡಿದಳು. ಆದರೆ ಅದು ತನ್ನ ತಾಯಿಯಲ್ಲ. ವಿಕೃತ ರಾಕ್ಷಸ ಸ್ವರೂಪ! ಕಣ್ಣುಗಳು ಕೆಂಡದಂತೆ ಕೆಂಪಾಗಿವೆ! ಕೂದಲು ಕತ್ತಲೆಯಂತೆ ಕರಾಳವಾಗಿದೆ. ಮುಖದಲ್ಲಿ ಮನುಷ್ಯತೆಯ ಲೇಶವಿರಲಿಲ್ಲ. ಸ್ಪರ್ಶವೂ ಅಷ್ಟು ನೋವನ್ನುಂಟುಮಾಡಿದ್ದಿತು. ಧಿಮ್ಮನೆ ಕುರ್ಚಿಯಿಂದೆದ್ದು ಸರಳೆಯು ಚೀರಿ, ಸಮೀಪಿಸಿದ ವ್ಯಕ್ತಿ (ವಿಜಯನೆಂದು ಆಕೆಗೆ ತಿಳಿದಿರಲಿಲ್ಲ)ಯ ಕೆನ್ನೆಗೊಂದೇಟನ್ನು ಬಿಟ್ಟು ರೂಮಿನಿಂದ ಹೊರಗೋಡಿದಳು. ಅಲ್ಲೇ ಇನ್ನೂ ನಿಂತಿದ್ದ ಟ್ಯಾಕ್ಸಿಯಲ್ಲಿ ಕುಳಿತು "ದಾದರ" ಎಂದು ತನಗೆ

ದನ್ನರಿಯಿಲ್ಲದೇ ಅಪ್ಪಣೆಕೊಟ್ಟಳು. ವಿಜಯನು ಕಿಟಕಿಯಿಂದ ಹೊರ-ನೋಡುತ್ತಿದ್ದ ಪೆಚ್ಚನಾಗಿ!

ಸರಳೆಗೆ ಹಿಪ್ನಾಟಿಸಿನಿಂದ ಎಚ್ಚರವಾದುದು ಟ್ಯಾಕ್ಸಿಯಲ್ಲಿ ಕುಳಿತ ಮೇಲೆಯೇ. ಆಕೆಗೆ ಮೆಲ್ಲಮೆಲ್ಲನೇ ಅರಿವಾಗತೊಡಗಿತು. ಆಕೆಯು ಇನ್ನೂ ಕಾಣುತ್ತಿದ್ದುದು ತನ್ನ ಅಕ್ಕರೆಯ ತಾಯ್ತಂದೆಗಳ ರೂಪವನ್ನೆ. ಮತ್ತೊಂದು ಘೋರ ರಾಕ್ಷಸ ರೂಪ! ದಾದರಿನಲ್ಲಿ ಇಳಿದು ಸರಳೆಯು ಮನೆಯ ಬಾಗಿಲನ್ನು ತೆರೆದು ತಾಯಿಯನ್ನೊಮ್ಮೆ ಗಟ್ಟಿಯಾಗಿ ತಬ್ಬಿಕೊಂಡು ತಿಂಡಿತೀರ್ಥಗಳನ್ನಪೇಕ್ಷಿಸದೇ ಜಾನಕೀ-ಬಾಯಿಯವರು ಆಕೆಗಾಗಿ ಆದಾಗಲೇ ಹಾಸಿಟ್ಟ ಹಾಸಿಗೆಯ ಮೇಲೆ ಹೊರಳಿಕೊಂಡಳು. ಮರುದಿನ ಬೆಳಿಗ್ಗೆ ಏಳುವಾಗ ಸರಳೆಯು ಎಂದಿನ ಸರಳೆಯೇ ಆಗಿದ್ದಳು! ಆದರೆ ದುಃಸ್ವಪ್ನವನ್ನು ಕಂಡ ಬಳಲಿಕೆಯು ಆಕೆಯ ಮುಖದಲ್ಲಿ ಕಂಡುಬರುತ್ತಿದ್ದಿತು!

೪

ವಾರ್ಷಿಕೋತ್ಸವವಾದಂದಿನಿಂದ ಸರಳೆ ಕಾಲೇಜಿಗೆ ಹೋಗುತ್ತಿ-ದ್ದರೂ ಒಂದು ಕ್ಷಣ ಹೆಚ್ಚಿಗೆ ಇರುತ್ತಿರಲಿಲ್ಲ. ವಿಜಯನನ್ನು ಕಂಡಾ-ಗೊಮ್ಮೆ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ. ವಿಶ್ವವಿದ್ಯಾಲಯದ ಪರೀ-ಕ್ಷೆಯು ತೀರ ಸಮೀಪಿಸಿದುದರಿಂದ ಓದೂ ಒತ್ತರದಿಂದ ಸಾಗಬೇಕಾ-ಗಿದ್ದಿತು. ಬಹುಶಃ ಇದೇ ಕಾರಣದಿಂದಲೋ ಏನೋ, ಮುಂದೆ ಆಕೆ ಮನರಂಜನೆ ಸಮಿತಿಯ ಕಾರ್ಯಕಾರೀ ಸಭೆಗೆ ಒಂದಕ್ಕೂ ಬಂದಿ-ರಲಿಲ್ಲ.

ಸರಳೆಯ ಅಭ್ಯಾಸವು ಒತ್ತರದಿಂದ ಸಾಗಿದಂತೆ ಅತ್ತ ಆಕೆಯ ಮದುವೆಯ ಪ್ರಸ್ತಾಪವೂ ಒತ್ತರದಿಂದ ಸಾಗುತ್ತಿದ್ದಿತು. ಅವಳು ಜಾನಕೀಬಾಯಿಯವರಿಗೆ ಜವ್ವನೆಯಾಗಿ ಕಂಡುಬಂದಂದಿನಿಂದ ಅವರ ತಲೆಯಲ್ಲಿ ಬಹಳ ಯೋಚನೆಗಳು ಸುಳಿದುಹೋಗಿದ್ದುವು. “ಬೆಳೆದ ಜೀವವನ್ನು ಎಷ್ಟೆಂದು ದಣಿಸುವುದು” ಎಂದು ಸುಂದರರಾಯರನ್ನು ಪೀಡಿಸತೊಡಗಿದರು. ಇದರಿಂದ ಅವರೂ ತುಂಬಾ ಪ್ರಯತ್ನಿಸಬೇ-ಕಾಯಿತು. ಅವರು ಬಯಸಿದಂತಹ ವರನು ಸಿಕ್ಕಿದುದರಿಂದ ಅವರೂ ಹಿಗ್ಗಿದರು. ಜಾನಕೀಬಾಯಿಯವರ ಸಂತಸಕ್ಕೆ ನೆಲೆಯಿರಲಿಲ್ಲ. ಆದರೆ ಸರಳೆಯ ಪರೀಕ್ಷೆಯು ಮುಗಿಯುವ ವರೆಗೆ ಮಾತ್ರ ಆಕೆಗೆ ಇದನ್ನು ತಿಳಿಸಕೂಡದೆಂದು ನಿಶ್ಚಯಿಸಿದ್ದರು.

ಪರೀಕ್ಷೆಯ ದಿನಗಳು ಸಂದ ನೆನಪೇ ಸರಳೆಗಿರಲಿಲ್ಲ. ಅವಳು ಅಭ್ಯಾಸದಲ್ಲಿ ಅಷ್ಟು ಮಗ್ನಳಾಗಿದ್ದಳು. ದಿನಗಳೆದವು; ಪರೀಕ್ಷೆಯೂ ಮುಗಿಯಿತು. ಸರಳೆಯು ಉತ್ತಮ ರೀತಿಯಲ್ಲಿ ಉತ್ತ-ರಿಸಿದ್ದುದರಿಂದ ಮೊದಲ ತರಗತಿಯ ಆಸೆಯಲ್ಲಿದ್ದಳು. ಮನೋ-ರಮೆಗೆ ಈ ನಡುವೆ ವಿವಾಹವಾಗಿದ್ದುದರಿಂದ ಈ ಪರೀಕ್ಷೆಯ ತೊಡಕೇ ಉಳಿದಿರಲಿಲ್ಲ.

ಪರೀಕ್ಷೆ ಮುಗಿದ ನಂತರ ಒಂದು ದಿನ ಸಂಜೆ ಸುಂದರರಾಯರು ಹೆಂಡತಿ ಮಗಳನ್ನು ಕೂಡಿಸಿಕೊಂಡು ಮದುವೆಯ ಪ್ರಸ್ತಾಪವನ್ನು ತೆಗೆದರು. ಎಲ್ಲ ರೀತಿಯಿಂದಲೂ ಉತ್ತಮವಿದೆಯೆಂದು ಹೇಳಿ ಕೊನೆಗೆ ಸರಳೆಗೆ “ನಿನಗೆ ಇಷ್ಟೊಂದು ಬೇಗ ಮದುವೆಗೆ ಒಪ್ಪಿಗೆಯಿಲ್ಲದಿದ್ದರೆ ನಾನು ಖಂಡಿತವಾಗಿಯೂ ಮುಂದುವರಿಯುವವನಲ್ಲ. ನಿನ್ನ ತಾಯಿಯ ಅವಸರವಂತೂ ಇದ್ದೇ ಇದೆ. ಆದರೆ ನಿನ್ನ ಒಪ್ಪಿಗೆ ಮಾತ್ರ ಅಗತ್ಯ” ಎಂದು ಆಶ್ವಾಸನೆಯಿತ್ತರು.

ಸರಳೆ ತಲೆತಗ್ಗಿಸಿ ಮೌನವಾಗಿದ್ದಳು. ಒಂದು ಕ್ಷಣ ಮೆಲ್ಲನೆ ತಲೆಯೆತ್ತಿ ತಾಯಿಯ ಕಣ್ಣಿನಲ್ಲಿ ಕಣ್ಣಿಟ್ಟು ನೋಡಿ ಪುನಃ ತಲೆತಗ್ಗಿಸಿದಳು. ಜಾನಕೀಬಾಯಿಯವರಿಗೆ ಮಗಳ ಮೂಕ ಭಾಷೆ ತಿಳಿಯಲು ತಡವಾಗಲಿಲ್ಲ. ಅವರು ನಗುತ್ತ “ಸರಳೆಯ ಒಪ್ಪಿಗೆಯಿದೆ ಅಂದೆ!” ಎಂದರು. ಸರಳೆ ಇನ್ನೊಮ್ಮೆ ಕೃತಜ್ಞತಾ ಭಾವದಿಂದ ತಾಯಿಯ ಮುಖವನ್ನು ವೀಕ್ಷಿಸಿದಳು. ಮರುಕ್ಷಣ ಆಕೆಯ ಕಣ್ಣುಗಳಲ್ಲಿ ನೀರು ತುಂಬಿದ್ದಿತು. ಆಕೆ ಅಲ್ಲಿಂದ ಗೆಲರಿಯಲ್ಲಿ ಹೋಗಿ ನಿಂತಳು.

ಆಕೆಯ ಕಣ್ಣಿನಲ್ಲಿ ನೀರನ್ನು ಕಂಡ ಸುಂದರರಾಯರು ಆಕೆಯನ್ನು ಕರೆಯುವುದರೊಳಗಾಗಿ ಜಾನಕೀಬಾಯಿಯವರು ಸಂಜ್ಞೆಯಿಂದ ಬೇಡವೆಂದರು. ಸುಂದರರಾಯರು ಕೇಳಿದಾಗ ಅದು ಸಂತೋಷದ ಕಣ್ಣೀರೆಂದು ಮಾತೃತನದ ತಿಳುವಳಿಕೆಯಲ್ಲಿ ಹೇಳಿದರು. ಅವರಿಗೆ ತಮ್ಮ ಬಾಲ್ಯದ ಸಂಗತಿ ನೆನಪಾಗಿರಬೇಕು. ಸುಂದರರಾಯರು ಹೊಸ ಸಂಗತಿ ಕಂಡುಹಿಡಿದವರಂತೆ ಬೆರಗಾಗಿದ್ದರು! ಅದರೊಂದಿಗೆ ಮಗಳ ಒಪ್ಪಿಗೆಯ ಸಂತೋಷವೂ ಕಂಡಿದ್ದಿತು.

× × ×

ಮೇ ತಿಂಗಳ ಕೊನೆಯಲ್ಲಿ ಸರಳೆಯ ವಿವಾಹವು ಸಂಭ್ರಮದಲ್ಲಿ ನೆರವೇರಿತು. ಮುಂದೇ ಕೆಲವೇ ದಿನಗಳಲ್ಲಿ ಆಕೆಯ ಪರೀಕ್ಷೆಯ ಫಲಿತಾಂಶವು ಬಂದಿತು. ಆಕೆಯ ನಿರೀಕ್ಷಣೆಯು ಆಕೆಯ ಕೈ ಬಿಟ್ಟಿರಲಿಲ್ಲ. ಮುಂದಿನ ಓದಿನ ಪ್ರಶ್ನೆ ಬಂದಾಗ ಪತಿಯ ಒಮ್ಮನದ ಒಪ್ಪಿಗೆಯಿಂದ— ಅಲ್ಲ ಒತ್ತಾಯದಿಂದ ಜೂನಿನಲ್ಲಿ ಕಾಲೇಜನ್ನು ಸೇರಿದಳು. ಆದರೆ ಈ ಬಾರಿ ಸರಳೆಯು ಪುನರ್ಜನ್ಮವನ್ನು ಪಡೆ-ದಿದ್ದಳು.

ಮುಂದೊಂದು ದಿನ ವಿಜಯನನ್ನು ಕಂಡಾಗ ಮುಖವೆತ್ತಿ ಸೌಜನ್ಯದಿಂದ ನಕ್ಕಿದ್ದಳು ಸರಳೆಯಾಗಿ!

———

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಶಮೀ ಶಮಯತೇ ಭೀತಿಮ್

ಶ್ರೀ. ಎಚ್. ಜಿ. ಉಪಾಧ್ಯಾಯ ಎಂ ಎ, ಹೈದರಾಬಾದ

ದುಶ್ಶಕ್ತಿಗಳ ಸತ್ತ್ವ ಶಿವಶಕ್ತಿಯಿಂದಡುಮಿ
ಹೊಸ ಗೆಲುವ ತರಲೆಂದು ವಿಜಯದಶಮಿ—
ವಿಧ್ವಂಸ ರಾಕ್ಷಸನ ತುಳಿದು ಬಾ ದೇವಿ ಶಮಿ!
ಕರುಣಿಸುತೆ ಶಾಂತತೆಯ ಅಮೃತರಶ್ಮಿ. ೧

ಶತಮಾನಗಳ ಸತ್ತ್ವ ಸಾಹಸದ ಇತಿಹಾಸ
ಬರೆಯುತಿದೆ ಶಿವಶಕ್ತಿ ವಿಜಯಕಥೆಯ
ಲೋಕ ಹಿಂಸಕರಾದ ಖಳರ ಕೊಬ್ಬಿದ ಮದವ
ಧೀರತೆಯಲಿದಿರಿಸುವ ಸತ್ತ್ವಕಥೆಯ. ೨

ಮುಷ್ಟಿಯುದ್ಧದಿ ಮಲ್ಲಗಾಳಿಗದಿ ಪುಂಡರನು
ಹಿಂದಿ ಹಿಪ್ಪೆಯಗೊಳಿಸಿ ಮೆರೆದವಂದು—
ಶತ್ರುಪ್ರನಿಷ್ಠೆಯ ಭೀಷ್ಮಪಣದಿಂದೆ ಮಾರ್ಮಲೆದು
ಉನ್ಮತ್ತ ಕುಟಿಲತೆಯ ಮುರಿಯಬೇಕೆಂದು. ೩

ದೇಶ ಧರ್ಮದ ನ್ಯಾಯ ನೀತಿ ವಿದ್ರೋಹಿಗಳ
ಸೊಕ್ಕು ಸವರಿದೆವಂದು ಶಸ್ತ್ರಬಲದಿಂದೆ—
ಸಾಮ್ರಾಜ್ಯಲೋಭಿಗಳ ಭೀಕರ ಪ್ರಪಾತಗಳ
ಎದುರಿಸಲು ಬೇಕೆಂದು ನಿಶ್ಚಲತೆಯಿಂದೆ. ೪

ಅಣುಬಾಂಬು ಜಲಜನಕ ಮೊದಲಾದ ಬಾಂಬುಗಳ
ವಿಧ್ವಂಸ ವಿಪ್ಲವವು ನಿಲ್ಲಬೇಕು—
ವಿಶ್ವಕ್ಷೇಮಕ್ಕಾಗಿ ದುಡಿದು ದಣಿಯುವ ಜನಕೆ
ಶಾಂತಿ ಸಹಕಾರಗಳು ಸಲ್ಲಬೇಕು. ೫

ಜಾತಿಮತಗಳ ಕೊಳಕು ಕೊಳ್ಳಿಗಳ ತಡೆಹಾಯ್ದು
ವರ್ಣಭೇದದ ಕಿಚ್ಚುಕಾಡುಗಳ ತೊಡೆದು
ಪೂರ್ವ ಪಶ್ಚಿಮವೆಂಬ ಕೃತಕ ಗಡಿಗಳ ದಾಟಿ
ವಿಶ್ವನಾಗರಿಕತೆಯ ತುತ್ತುತುದಿಯನು ಮುಟ್ಟಿ
ಪ್ರೇಮತೀರ್ಥದಿ ಮಿಂದು ಮಾನವತೆ ಒಂದೆಂದು
ವಿಶ್ವಶಾಂತಿಯ ಗುರಿಗೆ ತಪಿಸಬೇಕೆಂದು.
ಶಾಂತಿ ಸಮನಿಸಿದಂದು ಹಿರಿಯನವಮಿ
ಅಂದೆ ಮಾನವಕುಲದ ವಿಜಯದಶಮಿ

ಶಮೀ ಶಮಯತೇ ಭೀತಿಂ ಶಮೀ ಶತ್ರುವಿನಾಶಿನೀ
ಅರ್ಜುನಸ್ಯ ಧನುರ್ಧಾರೀ ರಾಮಸ್ಯ ಪ್ರಿಯದರ್ಶಿನೀ
ಆದಿರಾಜಾ ಮಹಾರಾಜಾ ವನರಾಜಾ ವನಸ್ಪತೇ
ಇಷ್ಟದರ್ಶನಮಿಷ್ಟಾರ್ಥಂ ಕಾರ್ಯಸಿದ್ಧಿಫಲಂ ಭವೇತ್ ೬

ಬಡವನ ಮೊರೆ

ಶ್ರೀ. ವೆಂಕಟರಾಜ ಪುಣಿಂಚಿತ್ತಾಯ, ಪುಂಡೂರು

ತನಗೀ ಕಡು ಕ್ಲೇಶವ ಕೊಡುತಿಹ ಬಡ-
ತನವೆಂದಿನ ತನಕಿರುವುದು ಹಾ!
"ತನುವಿದು ನಶ್ವರವಹುದಿದ ಯಾವಾ-
ತನು ಧರಿಸಿಹನವ ಕೆಟ್ಟನು" ಹಾ!

ಉಣ್ಣಲು ತಿನ್ನಲು ಸೊನ್ನೆಯೆ ಅವರೆ
ಚಿಣ್ಣರ ಕೂಗದು ನಿಲ್ಲುವುದೇ?
ಸಣ್ಣವರಿಗೆ ಬಡ ಕುನ್ನಿಗಳಿಗೆ ಯೇಂ-
ಮಣ್ಣನೆ ಕೊಡುವೆನೆ ಅಕಟಕಟಾ!

ದುಡಿಯಲು ನಡೆದರೆ ದುಡುಕುವರೆನ್ನೊಳು
ನುಡಿಯುವೆನೇನನು ಪೊರೆದೇವ!
ಬಡಿವವರೆಲ್ಲರು ದಯೆಯಿನಿಲ್ಲವು
"ಬಡವನೊಳಿಲ್ಲವೆ ಬಡಿವಾರ"

ಇಂತೋರ್ವನು ಬಡ ಪುರುಷನು ಮನದಲಿ
ಚಿಂತಿಸುತಿರ್ದನು ಶಿಲೆಗೊರಗಿ
ಸಂತಸವೆಂಬುದನೇನೆಂದರಿಯನು
ಹಂತಹ "ಕಷ್ಟವು ಬಡತನವು!"

ಲ್ಯೂವೆನ್ ಹೋಕ್

(ವೈಜ್ಞಾನಿಕ ವ್ಯಕ್ತಿಯ ಜೀವನ ಪರಿಚಯ)

ಶ್ರೀ. ಟಿ. ಆರ್. ನಾಡಿಗೇರ ಬಿ. ಎಸ್‌ಸಿ. (ಆನರ್ಸ್), ಬಿ. ಎಸ್‌ಸಿ (ಟೆಕ್). ಮುಂಬಯಿ

ಹಾಲಂಡ್ ದೇಶದಲ್ಲಿ ಇನ್ನೂರು ಎಪ್ಪತ್ತೈದು ವರ್ಷಗಳ ಹಿಂದೆಯೆ ಹುಟ್ಟಿದ ವಿಜ್ಞಾನಿ ಲ್ಯೂವೆನ್‌ಹೋಕ್ ತನಗಿರುವ ಜ್ಞಾನೇಂದ್ರಿಯಗಳ ಉಪಯೋಗವನ್ನು ಸರಿಯಾಗಿ ಮಾಡಿಕೊಂಡರೆ, ಮನುಷ್ಯ ಅನೇಕ ಪ್ರಾಕೃತಿಕ ಸತ್ಯಗಳನ್ನು ಕಂಡುಹಿಡಿಯಬಹುದು. ಆದರೆ ಅಂತಹನ ಸತ್ಯದ ಆವಿಷ್ಕಾರಗಳು, ವರ್ತಮಾನ ಸಮಾಜದ ಮೂಢವಿಶ್ವಾಸಗಳಿಂದ ಏಟನ್ನು ತಿನ್ನಬೇಕಾಗುವುದು.

ಇಂದಿಗೆ ಸುಮಾರು ೨೭೫ ವರ್ಷಗಳ ಹಿಂದಿನ ಸಂಗತಿ. ಸಾಮಾನ್ಯ ಮನುಷ್ಯನು ಅದ್ಭುತ ಪ್ರಪಂಚವನ್ನೇ ಶೋಧಿಸಿದನು. ಆ ಅದ್ಭುತ ಪ್ರಪಂಚದಲ್ಲಿ, ಸಹಸ್ರಾರು ಬಗೆಯ ವಿಚಿತ್ರ ಜೀವಿಗಳಿದ್ದುವು. ಈ ಅದ್ಭುತ ಪ್ರಪಂಚದ ವಿಚಿತ್ರ ಜೀವಿಗಳಲ್ಲಿ ಕೆಲವು, ಕಾಲ ಗತಿಸಿದಂತೆ, ಮಾನವ ಕುಲಕ್ಕೆ ಮಾರಕವಾಗಿ ಪರಿಣಮಿಸಿದುದೂ ಹಾಗೆಯೇ ಅವುಗಳಲ್ಲಿ ಮತ್ತೆ ಕೆಲವು ಮಾನವ ಕುಲಕ್ಕೆ ಲೋಕೋಪಕಾರ ಮಾಡುವುವೆಂಬುದೂ, ಇಂದಿನ ಸುಜ್ಞಾನಿಗಳಿಗೆ ಗೊತ್ತಿರಬಹುದಾದ ಸಂಗತಿ. ಈ ಅದ್ಭುತ ಪ್ರಪಂಚವನ್ನು ಕಂಡುಹಿಡಿದ ಸುದ್ದೈವಿ ಲೂವೆನಹೋಕ್. ಸೂಕ್ಷ್ಮ ಜೀವಿಶಾಸ್ತ್ರಕ್ಕೆ ಪೀಠಿಕೆ ಹಾಕಿದ ಶ್ರೇಯಸ್ಸು ಅವನಿಗೆ ಸಲ್ಲುತ್ತದೆ. ಇಂದು ಆ ಶಾಸ್ತ್ರ ವಿಸ್ತಾರಗೊಂಡು ತನ್ನದೇ ಆದ ಒಂದು ವಿಶಿಷ್ಟ ಸ್ಥಾನವನ್ನು ಗಳಿಸಿರುವುದು ಸರ್ವಶ್ರುತವಿದೆ. ಅದ್ಭುತ ಪ್ರಪಂಚದ ದರ್ಶನ ಮಾಡಿಸಿದ ಮಹಾಮಹಿಮ ಲೂವೆನ್‌ಹೋಕನ ಹೆಸರನ್ನು—ಆತನ ಪ್ರಯೋಗಗಳ ಕುರಿತು ಹೇಳುವುದಿರಲಿ—ಹೇಳಬಲ್ಲವರು ಇಂದು ತೀರ ಕಡಿಮೆ.

ಇದೀಗ 'ವಿಜ್ಞಾನದ ಅಭ್ಯಾಸಿ' ಎಂಬುದೇ ಹೆಮ್ಮೆಯ ವಿಷಯ. ಇಂದು ಬಹುಶಃ ಎಲ್ಲ ಪಟ್ಟಣಗಳಲ್ಲಿ ಪ್ರಯೋಗ ಶಾಲೆಗಳಿಲ್ಲದಿಲ್ಲ, ಬಿ. ಎಸ್‌ಸಿ. ಆದೊಡನೆಯೇ ಎಮ್. ಎಸ್‌ಸಿ. ಕೈಕೊಳ್ಳುವುದು ಇಂದಿನ ಯುವಕರಲ್ಲಿ ತೀರ ಸಾಮಾನ್ಯವಾಗಿದೆ. ಇಂದು ಯಾವುದಾದರೊಂದು ಪ್ರಯೋಗ ಕಲಮಟ್ಟಿಗೆ ಫಲಪ್ರದವೆಂದು ಕಂಡುಬಂದರೆ ಸಾಕು, ಫಲಿತಾಂಶದ ಪ್ರಕಟಣೆ ಸುಪ್ರಸಿದ್ಧ ಪತ್ರಿಕೆಗಳ ಮೊದಲ ಪುಟದಲ್ಲಿಯೆ ದಪ್ಪ ಅಕ್ಷರಗಳಲ್ಲಿ ಪ್ರಸಿದ್ಧವಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ ಇಂದು. ಸಂಶೋಧನೆ (ರಿಸರ್ಚ್) ಕೈಕೊಳ್ಳುವುದು ತೀರ ಸಾಮಾನ್ಯ ಸಂಗತಿಯಾಗಿದೆ. ಅದು ಹೇಗೋ ಎಮ್. ಎಸ್‌ಸಿ. ಅಥವಾ ಪಿಎಚ್. ಡಿ. ಪಡೆದುಕೊಂಡು, ಪ್ರಾಧ್ಯಾಪಕರಾಗಬಯಸುವ ಯುವಕರ ಸಂಖ್ಯೆ ಇಂದು ಹೆಚ್ಚುತ್ತಾ ನಡೆದಿದೆ

ಇಂಥ ಸುಸ್ಥಿತಿ, ಇಂಥ ಸುಲಭ ಪ್ರಸಿದ್ಧಿ ೨೭೫ ವರ್ಷಗಳ ಹಿಂದೆ ಇದ್ದಿಲ್ಲ. ಮೂಢ ನಂಬಿಕೆಗಳು ಪ್ರಭಾವವಾಗಿದ್ದುವು ಅಂಧಶ್ರದ್ಧೆಗಳಲ್ಲಿಯೇ ಅಂದಿನ ಜನಾಂಗಕ್ಕೆ ಅಚಲ ವಿಶ್ವಾಸ. ಅಜ್ಜ ನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಳ್ಳುವ ಸ್ವಭಾವ ಅವರದು. ಯಾರಾದರೂ ಅಂಧಶ್ರದ್ಧೆಗಳನ್ನು ಪ್ರತಿಭಟಿಸಿದರೆ, ಅವರ ಕತೆ ಮುಗಿದಂತೆಯೆ. ಮೊದಮೊದಲು ಪೊಳ್ಳು ಬೆದರಿಕೆ ಹಾಕುವುದೂ ಆ ಮೇಲೆ ಮನೆಯಿಂದ ಹೊರಗೆ ಹಾಕಿಸುವುದು, ದಂಡನೆ, ಅದಕ್ಕೂ ಬಗ್ಗದ ಸಾಮಾಜಿಕ ಬಹಿಷ್ಕಾರ—ಇವು ಅಂದಿನ ಜನಾಂಗದ ರೀತಿ ನೀತಿ. ಈ ಜನರ ಏಕೈಕ ಆಧಾರ—ಅರಿಸ್ಟಾಟಲ್; ಆತನು ಸಾರಿದ್ದು ಎಲ್ಲ ಸತ್ಯ—ತ್ರಿಕಾಲಾಬಾಧಿತ ಸತ್ಯ. ಈ ಸತ್ಯಕ್ಕೆ ಅಪಚಾರ ಮಾಡಬಹುದೆ? ಈ ಬಗೆಯ ಅಂಧಶ್ರದ್ಧೆಯಿಂದಾಗಿ ಸರ್ವೆಟಸ್ (Servetus) ಸಜೀವ ಸಾಯಬೇಕಾಯಿತು; ಗೆಲಿಲಿಯೋ ಆಜನ್ಮ ಕಾರಾಗ್ರಹದಲ್ಲಿರಬೇಕಾಯಿತು.

ಆ್ಯಂಟೋನಿಯೊ ಲೂವೆನಹೋಕನು ೧೬೩೨ರಲ್ಲಿ ಡೆಲ್ಫ (Delf) ದಲ್ಲಿ ಗೌರವಸ್ಥರ ಕುಟುಂಬದಲ್ಲಿ ಜನಿಸಿದನು. ಡೆಲ್ಫ ಇದು ಹಾಲಂಡದಲ್ಲಿಯ ಒಂದು ಸಾಮಾನ್ಯ ಪಟ್ಟಣ. ಈತನ ತಾಯಿ—ತಂದೆಗಳು ಬುಟ್ಟಿದ ಕೈಗಾರಿಕೆಯನ್ನೇ ತಮ್ಮ ವ್ಯವಸಾಯವನ್ನಾಗಿ ಮಾಡಿಕೊಂಡಿದ್ದರು. ಹಾಗೆಯೆ, ಮದ್ಯವನ್ನು ತಯಾರಿಸುತ್ತಿದ್ದರು. ಹಾಲಂಡದಲ್ಲಿ ಮದ್ಯ ತಯಾರಿಸುವವರಿಗೆ ಹೆಚ್ಚಿನ ಮರ್ಯಾದೆ. ಲೂವೆನಹೋಕ್ ಪಡೆದುಬಂದಿರಲಿಲ್ಲವೆನೊ, ಬಾಲ್ಯದಲ್ಲಿಯೆ ತಂದೆಯನ್ನು ಕಳೆದುಕೊಂಡನು. ಆತನ ಸಂಗೋಪನೆಯ ಸಂಪೂರ್ಣ ಹೊಣೆ ಆತನ ತಾಯಿಯೆ ನಿರ್ವಹಿಸಬೇಕಾಯಿತು. ಆಕೆಗೆ

ಮಗನು ದೊಡ್ಡವನಾದ ಮೇಲೆ ಸರಕಾರೀ ಅಧಿಕಾರಿಯಾಗಬೇಕೆಂಬ ಆಶೆ. ಆದರೆ ಈತ ೧೬ನೇ ವಯಸ್ಸಿನಲ್ಲಿಯೇ ಶಾಲೆಗೆ ಶರಣು ಹೊಡೆದು ಆಮ್‌ಸ್ಟರಡ್ಯಾಮಿನಲ್ಲಿಯ ಬಟ್ಟೆ ಮಾರುವ ಅಂಗಡಿಯೊಂದರಲ್ಲಿ ಕೆಲಸಕ್ಕೆ ಸೇರಿದ; ಅದೂ ವೇತನವಿಲ್ಲದ ಕೆಲಸ. ಈ ಅಂಗಡಿಯಲ್ಲಿಯೇ ೬ ವರ್ಷ ದುಡಿದು ಮುಂದೆ ತನ್ನ ೨೧ನೇ ವಯಸ್ಸಿನಲ್ಲಿ ಡೆಲ್ಫ್ ಸೇರಿ ಅಲ್ಲಿಯೇ ತನ್ನದಾದ ಮದ್ಯದ ಅಂಗಡಿಯೊಂದನ್ನು ತೆರೆದನು. ಡೆಲ್ಫ್‌ಕ್ಕೆ ಬಂದ ಕೆಲ ಕಾಲದಲ್ಲಿಯೇ ಮದುವೆಮಾಡಿಕೊಂಡನು. ಈತನಿಗೆ ಇಬ್ಬರು ಹೆಂಡರಂತೆ. ಅವರಿಂದಾಗಿ ಅವನಿಗೆ ಅನೇಕ ಮಕ್ಕಳಾಗಿ, ಅವುಗಳಲ್ಲಿ ಬಹಳ ಮಕ್ಕಳು ಸತ್ತವಂತೆ. ಇದಿಷ್ಟೇ ಆತನ ವೈಯಕ್ತಿಕ ಜೀವನದ ಬಗ್ಗೆ ಗೊತ್ತಿದ್ದುದು. ಇಲ್ಲಿ ಮಾತ್ರ ಗಳೇ ಲೋಲಕ (Lens)ಗಳ ಗುಣ ಧರ್ಮಗಳ ಪರಿಚಯ ವಾಯಿತು. ಈತನಿಗೆ ಬರುತ್ತಿದ್ದ ಭಾಷೆಯೆಂದರೆ ಡಚ್ ಒಂದೇ. ಈ ಭಾಷೆ ಅಂದು ಸಾಮಾನ್ಯರ ಭಾಷೆ—ಕೀಳುಗಳ ಭಾಷೆಯಾಗಿತ್ತು. ಅಂದಿನ ಸುಸಂಸ್ಕೃತರು ಲ್ಯಾಟಿನ ಬಳಸುತ್ತಿದ್ದರು.

ಲೂವೆನಹೋಕ್‌ನಿಗೆ ಲೋಲಕಗಳಲ್ಲಿ ತುಂಬಾ ಆಸಕ್ತಿ. ಡೆಲ್ಫ್‌ದಲ್ಲಿಯ ಕನ್ನಡಕ ನಿರ್ಮಾತೃಗಳಿಂದ ಲೋಲಕಗಳನ್ನು ಕನ್ನಡಕಗಳನ್ನಾಗಿ ಹೇಗೆ ಪರಿವರ್ತಿಸುವರೆಂಬುದನ್ನು ತಿಳಿದುಕೊಂಡು, ತಾನೂ ಮಾಡಿ ನೋಡಲಾರಂಭಿಸಿದ. ಲೋಲಕಗಳಲ್ಲಿಯ ಆತನ ಆಸ್ಥೆ ನಿರ್ದಿಷ್ಟವಾದುದಾಗಿರಲಿಲ್ಲ. ಕೈಗೆ ಸಿಕ್ಕ ವಸ್ತುವನ್ನು ಲೋಲಕಗಳಿಂದ ನೋಡುತ್ತಿದ್ದ. ಅವೇ ಲೋಲಕಗಳನ್ನು ಉಜ್ಜಿ ಉಜ್ಜಿ ನುಣುಪಾಗಿಸಿ ಮತ್ತೆ ನೋಡಿದಾಗ, ವಸ್ತುಗಳು ಹೆಚ್ಚು ಸ್ಪಷ್ಟವಾಗಿ ಕಂಡುಬರಲಾರಂಭಿಸಿದವು. ಆ ಮೇಲೆ ೨ ಲೋಲಕಗಳನ್ನು ತನಗೆ ತೋಚಿದಂತೆ ಸಿದ್ಧಗೊಳಿಸಿ, ಅವೆರಡನ್ನು ತನ್ನದೇ ಆದ ರೀತಿಯಲ್ಲಿ ತಾಮ್ರದ ಕೊಳವೆಗಳಲ್ಲಿ ಕೂಡಿಸಿದನು. ಇದೇ ಆತನ ಮೊಟ್ಟ ಮೊದಲಿನ ಸೂಕ್ಷ್ಮದರ್ಶನಿ (ಮೈಕ್ರೊಸ್ಕೋಪ). ಈ ಸೂಕ್ಷ್ಮದರ್ಶನಿಯನ್ನು ನಿರ್ಮಿಸುವಾಗ್ಗೆ ಆತನಿಗೆ ಯಾವುದರ ಪರಿವೆಯೂ ಇದ್ದಿಲ್ಲ. ರಾತ್ರಿ ಕಳೆದು ದಿನವಾಗಿ, ಸಂಜೆಯಾಗಿ, ಮತ್ತೆ ರಾತ್ರಿಯಾಗಿ, ದಿನಗಳುರುಳುತ್ತಿದ್ದುದನ್ನು ಆತ ಗಮನಿಸಲಿಲ್ಲ. ಏಕಚಿತ್ತದಿಂದ ಸೂಕ್ಷ್ಮದರ್ಶನಿಯನ್ನು ನಿರ್ಮಿಸಿದನು.

ಸರಿ—ಸೂಕ್ಷ್ಮದರ್ಶನಿಯಂತು ಸಿದ್ಧವಾದಂತಾಯಿತು. ಆತನು ಪರೀಕ್ಷಿಸಿದ್ದು ಏನೇನ್ನುವಿರಾ? ಎತ್ತಿನ ಕಣ್ಣು, ಕುರಿಯ ಕೂದಲು, ನೊಣದ ಮಿದುಳು, ಭ್ರಮರದ ಕಾಲು, ಮೀಸೆ- ಒಂದೇ, ಎರಡೇ ಒಟ್ಟಾರೆ ಕೈಗೆ ಸಿಕ್ಕುದನ್ನು ತೆಗೆದುಕೊಂಡು ಗಾಜಿನ ಪಟ್ಟಿಯ ಮೇಲಿಟ್ಟು ಸೂಕ್ಷ್ಮದರ್ಶನಿಯಿಂದ ನಿರೀಕ್ಷಿಸುವುದೆಂದರೆ ಆಟವಾಗಿತ್ತು. ಒಂದೇ ಸೂಕ್ಷ್ಮದರ್ಶನಿಯಿಂದ ಆತ ತೃಪ್ತಿಪಡಲಿಲ್ಲ. ಏನಿಲ್ಲೆಂದರೂ ೧೫೦ ಸೂಕ್ಷ್ಮದರ್ಶನಿಗಳನ್ನು ಆತನು ನಿರ್ಮಿಸಿರಬಹುದು. ಅವುಗಳೆಲ್ಲದರಿಂದಲೂ, ಒಂದೇ ವಸ್ತುವಿನ ಪರೀಕ್ಷೆ ನಡೆದಾಗ, ಅದರ ಪರಿಣಾಮ ಒಂದೇ ಬಗೆಯಾಗಿದ್ದುದನ್ನು ಕಂಡುಕೊಂಡನು. ಅವರಿಗೆ ಸೂಕ್ಷ್ಮದರ್ಶನಿಯನ್ನು ನೋಡುವುದೇ ಗೊತ್ತಿಲ್ಲ. ಸೂಕ್ಷ್ಮದರ್ಶನಿಯಲ್ಲಿ ಕಣ್ಣಿಟ್ಟು ನಾನು ಕಳೆದ ಸಮಯವನ್ನು ಹೇಳಿದರೆ ಅವರಿಗೆ ನಂಬಿಕೆಯಾಗದು. ಅವರ ನಂಬಿಕೆಯಿಂದ ನನಗೇನಾಗಬೇಕಾಗಿದೆ? ನಾನು ಈ ಕಾರ್ಯವನ್ನು ಸ್ವಸಂತೋಷದಿಂದ ಕೈಕೊಂಡಿದ್ದೇನೆ. ಈ ಬಗೆಯ ಪರಿಶ್ರಮದ ಪುರುಷಾರ್ಥವೇನೆಂದು ಕೇಳಿದ್ದಾರೆ. 'ಅವರಿಗೆ ಗೊತ್ತೇ ಇದರ ಮರ್ಮ?' ಎಂದು ಅದೆಷ್ಟೋ ಬಾರಿ ಸೂಕ್ಷ್ಮದರ್ಶನಿಯಲ್ಲಿ ನಿರೀಕ್ಷಿಸುತ್ತಿದ್ದಾಗ್ಗೆ ವಿಚಾರಮಾಡುತ್ತಿದ್ದ. ಈ ಬಗೆಯ ನಿರೀಕ್ಷಣೆ ೨೦ ವರ್ಷಗಳ ವರೆಗೆ ಎಂದರೆ ಆತನ ೪೧-೪೨ನೇ ವರ್ಷದ ವರೆಗೆ ನಡೆದರೂ ಇದರ ವಿಷಯ ವಿಶ್ವಕ್ಕೆ ಗೊತ್ತಿರಲಿಲ್ಲ. ಡೆಲ್ಫದ ಜನಕ್ಕೆ ಇದು ಗೊತ್ತಿತ್ತಾದರೂ, ಅವರು ಅವನಿಗೆ ಪ್ರೋತ್ಸಾಹನವನ್ನೀಯಲಿಲ್ಲ. ಪ್ರತಿಯಾಗಿ—'ಶುದ್ಧ ಮೂರ್ಖ, ಇಲ್ಲದ ಹವ್ಯಾಸ ಇವನಿಗೇಕೆ? ಮಹಾ ಪಂಡಿತ!' ಮುಂತಾಗಿ ಹೀಗಳೆಯುತ್ತಿದ್ದರು.

೧೭ನೇ ಶತಮಾನದಲ್ಲಿ ಜಗತ್ತಿನಲ್ಲಿ ಮಹತ್ತ್ವದ ಸಂಗತಿಗಳು ಜರುಗಿದವು. ಫ್ರಾನ್ಸ್, ಇಟಲಿ ಮತ್ತು ಇಂಗ್ಲಂಡಗಳಲ್ಲಿಯ ಕೆಲ ಸುಸಂಸ್ಕೃತರು ಗುಪ್ತವಾಗಿ ಅಂಧಶ್ರದ್ಧೆಯ ವಿರುದ್ಧ ಬಂಡು ಸಾರಿದರು. ಈ ಜನ ಅರಿಸ್ಟಾಟಲನ ಹೇಳಿಕೆಯೇ ನಿತ್ಯ ಸತ್ಯವೆಂದು ಒಪ್ಪುತ್ತಿದ್ದಿಲ್ಲ. ಪ್ರತಿಯೊಂದಕ್ಕೂ ಇವರಿಗೆ ಅನುಭವ, ಪ್ರಯೋಗಗಳೇ ಮೂಲ.

'ಅರಿಸ್ಟಾಟಲನ ಎಲ್ಲ ಹೇಳಿಕೆಗಳು ನಮಗೆ ಮಾನ್ಯವಿಲ್ಲ ನಾವೂ ಅವನ್ನು ಪ್ರಯೋಗಿಸಿ, ಪ್ರಮಾಣಿಸಿ ನೋಡುವೆವು' ಎಂಬ ಈ ಜನರ ಸಿದ್ಧಾಂತ ಬಹು ಜನರ ರೋಷವನ್ನು ಕೆರಳಿಸಿತು. ಎಂತಲೇ ಈ ಜನರು ಗುಪ್ತವಾಗಿ ಕಾರ್ಯ ಕೈಕೊಂಡರು. ಇಂಗ್ಲಂಡಿನಲ್ಲಿ ಇಂಥ ಕೆಲ ಜನರು ಸೇರಿ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಹೆಸರೆಂದರೆ 'ಅದೃಶ ವಿದ್ಯಾಲಯ' (Invisible College). ಆಗ್ಗೆ ಉಕ್ಕಿನ ಮನುಷ್ಯ ಕ್ರಾಮವೆಲ್ಲ ಆಳುತ್ತಿದ್ದುದರಿಂದ, ಈ ಸಂಸ್ಥೆ ಗರಿಗೆದರುವಂತಿರಲಿಲ್ಲ. ಅದೇ ೨ನೇ ಚಾರ್ಲಸನು ಸಿಂಹಾಸನಸ್ಥನಾಗುವದೊಂದೆ ತಡ—ಬೆಳಕಿಗೆ ಬಂದಿತು. ಈ ಸಂಸ್ಥೆಯಲ್ಲಿ ರಾಬರ್ಟ ಬಾಯ್ಲ (Robert Boyle) ಮತ್ತು ನ್ಯೂಟನ್ನ (Newton)ರು ಪ್ರಮುಖರು. ಈ ಸಂಸ್ಥೆಯೇ ಇಂದಿನ ಸುಪ್ರಸಿದ್ಧವಾದ Royal Society of England. ಈ ಸಂಸ್ಥೆಗೇನೆ ಲೂವೆನಹೋಕ್ ತನ್ನ ಪ್ರಯೋಗಗಳ ವರದಿ ಒಪ್ಪಿಸಿದ್ದು. ಈ ಅವಕಾಶ ಕಲ್ಪಿಸಿದವನು, ಡೆಲ್ಫದಲ್ಲಿಯ ರೇನಿಯರ ಡಿ ಗ್ರಾಫ್ (Regnier de Graffe) ಎಂಬವನು. ಡೆಲ್ಫದಲ್ಲಿ ಗ್ರಾಫ್‌ನೊಬ್ಬನೇ ಲೂವೆನ್ಹೋಕನಿಗೆ ಪ್ರೋತ್ಸಾಹನ ಕೊಡುತ್ತಿದ್ದ. ಒಂದು ದಿನ ಲೂವೆನಹೋಕ ಗ್ರಾಫ್‌ನನ್ನು ತನ್ನಲ್ಲಿಗೆ ಬರಮಾಡಿಕೊಂಡು ತಾನು ನಿರ್ಮಿಸಿದ ಸೂಕ್ಷ್ಮದರ್ಶನಿಯನ್ನು ಮತ್ತು ತಾನು ಪರೀಕ್ಷಿಸಿದ ವಸ್ತುಗಳನ್ನು ತೋರಿಸಲಾಗಿ, ಗ್ರಾಫ್ ದಿಗ್ಭ್ರಾಂತನಾದುದಲ್ಲದೆ, ಲೂವೆನಹೋಕನ ಪ್ರಯೋಗಗಳಿಗೆ ತನ್ನಿದುವರೆಗಿನ ಶೋಧ ಸಾಟಿಯಲ್ಲವೆಂದೂ ಸಾರಿ ಲೂವೆನಹೋಕನ ಸೂಕ್ಷ್ಮದರ್ಶನಿಯ ಕುರಿತು ರಾಯಲ ಸೊಸಾಯಟಿಗೆ ಓಲೆ ಬರೆದನು. ಆ

ಸಂಸ್ಥೆಯವರು ಲೂವೆನಹೋಕನಿಗೆ ಮಾರೋಲೆ ಬರೆದು ಪ್ರಯೋಗಗಳ ಪರಿಚಯ ಮಾಡಿಕೊಡಲು ಪ್ರಾರ್ಥಿಸಿದರು. ಲೂವೆನಹೋಕನು ಪ್ರಾರ್ಥನೆಗೆ ಓಗೊಟ್ಟು ತನ್ನ ಪ್ರಯೋಗಗಳ ವರದಿಯನ್ನೊಪ್ಪಿಸಿದನಲ್ಲದೆ, ತನ್ನ ಪ್ರಯೋಗಕ್ಕೆ ಡಿಲ್ಫದ ಜನ ಹೇಗೆ ಅಡ್ಡಿಯಾದರು, ಅವರ ಅಜ್ಞಾನವೇ ಥದೆಂಬುದನ್ನು ವಿವರಿಸಿದ್ದ. ಲೂವೆನಹೋಕ ವರದಿ ಒಪ್ಪಿಸಿದುದು ಸರಳ ಸುಂದರ ಡಚ್ಚ ಭಾಷೆಯಲ್ಲಿ. ಅದನ್ನು ಲ್ಯಾಟಿನ್ನಿಗೆ ಅನುವಾದಿಸಿ, ಓದಿಯಾದ ಮೇಲೆ ಸೊಸಾಯಟಿಯ ಜನ ಲೂವೆನಹೋಕನ ಪ್ರಯೋಗಗಳಲ್ಲಿ ಕುತೂಹಲ ತಾಳಿದರು. ಲೂವೆನಹೋಕನ ಬರಹದ ತಲೆಬರಹ ಹೀಗಿತ್ತು 'A specimen of some observations made by a Microscope contrived by Mr. Leeuvenhock, concerning mould upon the Skin, flesh, etc; the sting of a bee etc. ಈ ಬರಹ ಓದಿಯಾದ ಮೇಲೆ ಸೊಸಾಯಟಿಯ ಕಾರ್ಯದರ್ಶಿಯು ಮೇಲಿಂದಮೇಲೆ ತಮ್ಮ ಸಂಸ್ಥೆಗೆ ತನ್ನ ಪ್ರಯೋಗಗಳ ಪರಿಚಯ ಮಾಡಿಕೊಡಬೇಕೆಂದು ಬಿನ್ನವಿಸಿದನು. ಅದಕ್ಕೆ ಮನ್ನಣೆಯನ್ನಿತ್ತು ಲೂವೆನಹೋಕ ತನ್ನ ಜೀವಮಾನದ ಮುಂದಿನ ೫೦ ವರ್ಷಗಳಲ್ಲಿ ಸಂಸ್ಥೆಗೆ ಇಂಥ ನೂರಾರು ಓಲೆಗಳನ್ನು ಬರೆದನು.

ಒಂದು ದಿನ ಅದೇಕೋ ಮಳೆಯ ನೀರನ್ನು ಪರೀಕ್ಷಿಸಬೇಕೆಂಬ ಇಚ್ಛೆಯಾಯಿತು ಲೂವೆನಹೋಕನಿಗೆ. ಸರಿ, ಮಳೆಯ ನೀರನ್ನು ಒಂದು ಪಾತ್ರೆಯಲ್ಲಿ ಸಂಗ್ರಹಿಸಿ, ಅದರಲ್ಲೊಂದು ಹನಿಯನ್ನು ಎತ್ತಿ ಗಾಜಿನ ಪಟ್ಟಿಯಲ್ಲಿಟ್ಟು ಸೂಕ್ಷ್ಮದರ್ಶನಿಯಲ್ಲಿ ನೋಡಿದನು. 'ಓಹೊ! ಎಷ್ಟೊಂದು ಸೂಕ್ಷ್ಮ ಜೀವಿಗಳಿವೆಯಲ್ಲ ಈ ನೀರಿನ ಬಿಂದುವೊಂದರಲ್ಲಿ!' ಮತ್ತೆ ಮತ್ತೆ ಸೂಕ್ಷ್ಮದರ್ಶನಿಯಲ್ಲಿ ಕಣ್ಣಿಟ್ಟ. ಆ ಸೂಕ್ಷ್ಮದರ್ಶನಿಯನ್ನು ಆಗಾಗ್ಗೆ ಸಂಪಡಿಸಿ ಕೈಗಳು ಬೇಸುತ್ತಿದ್ದರೂ, ನೋಡಿ ನೋಡಿ ಕಂಣುಗಳು ಉರಿಯುತ್ತಿದ್ದರೂ, ಲೂವೆನಹೋಕನ ಕುತೂಹಲ ಕೇಳಲಿಲ್ಲ. 'ಇಲ್ಲೊಂದು ಬಗೆಯ ಜೀವಿ ಇದೆ; ಅಲ್ಲಿ ಮತ್ತೊಂದು, ಹಾಂ, ಅಗೋ ಅಲ್ಲಿ ಇನ್ನೊಂದು, ಮೊದಲಿನದಕಿಂತ ದೊಡ್ಡದು! ಅತ್ತಿತ್ತ ಕಂಗಳನ್ನೋಡಿಸಿ ನಿರುಕಿಸಿದ. 'ಇವೆಲ್ಲಕ್ಕೂ ಜೀವವಿದೆ ಎಂತಲೇ ಅತ್ತಿತ್ತ ಹರಿದಾಡುತ್ತವೆ. ಏನು ಅವುಗಳ ಓಡಾಟ. ಅದ್ಭುತ; ಆಶ್ಚರ್ಯ!' ಇನ್ನು ಸೂಕ್ಷ್ಮಜೀವಿಗಳು ಮಳೆಯ ನೀರಿನಲ್ಲಿ ಹೇಗೆ ಬಂದವೆಂಬುದೇ ಸಮಸ್ಯೆಯಾಯಿತು. ನೇರವಾಗಿ ಆಕಾಶದಿಂದ ಬಂದವೆ? ಅಥವಾ ಭೂಮಿಯಿಂದಲೆ? ಅಥವಾ ದೇವರಿಂದ ಅಕಸ್ಮಾತ್ತಾಗಿ ನಿರ್ಮಿತವಾದವುಗಳೆ? ಇದೇ ಪ್ರಕಾರವಾಗಿ, ಬಾವಿಯ ನೀರು, ಕೆರೆಯ ನೀರು, ಕಾಲುವೆಯ ನೀರು—ಪರೀಕ್ಷಿಸಿದಾಗ್ಯೂ ಸೂಕ್ಷ್ಮಜೀವಿಗಳು ಕಾಣಬಂದವು. ಸೂಕ್ಷ್ಮ ಜೀವಿಗಳು ಧೂಳಿಯ ಕಣದಲ್ಲಿರುವವೆಂದೂ, ಅಲ್ಲಿಂದಲೇ ನೀರಿನಲ್ಲಿ ಸೇರಿದವೆಂಬುದೂ ಆತನು ಅನಂತರ ಕಂಡುಕೊಂಡನು.

ಬರಿ ಸೂಕ್ಷ್ಮ ಜೀವಿಗಳ ಅವಲೋಕನ ಮಾತ್ರದಿಂದ ತೃಪ್ತನಾಗಲಿಲ್ಲ. ಲೂವೆನಹೋಕ. ಅದು ಹೇಗೋ ಲೆಕ್ಕ ಹಾಕಿ, ಅವುಗಳ ಗಾತ್ರವನ್ನು ಇಷ್ಟೇ ಎಂದು ಹೇಳಿದ. ಆಶ್ಚರ್ಯವೆಂದರೆ, ಅಂದಿನ ಆತನ ಎಣಿಕೆ ಇಂದಿನ ಸುಧಾರಿತ ಸಾಧನೆಗಳಿಂದ ಕಂಡುಹಿಡಿದಾಗಿನ ಸಂಖ್ಯೆಗೆ ಹೋಲುತ್ತದೆ. ಲೂವೆನಹೋಕನ ಕಾರ್ಯದಲ್ಲಿ ಹೃತ್ಪೂರ್ವಕವಾಗಿ ಭಾಗ ವಹಿಸಿದವಳೆಂದರೆ ಆತನ ೧೯ ವರ್ಷದ ಮಗಳು ಮೇರಿಯಾ. ತಂದೆಯ ಹುಚ್ಚಾಟವನ್ನು ಆತನ ಬಡಬಡಿಕೆಯನ್ನು ಕಂಡು, ತಾಳ್ಮೆಯಿಂದ ಸಹಿಸಿದಳು.

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ
ಗಾಂಧಿಚೌಕ, ಧಾರವಾಡ

ಲೂವೆನಹೋಕನದು ಶೋಧಕ ಬುದ್ಧಿ ಎಂಬುದು ಈಗಾಗಲೇ ವಿದಿತವಾಗಿದೆಯಷ್ಟೆ! ಉಗ್ಗೆ ಮೆಣಸು ಖಾರವಾಗಿರುವದೇಕೆಂಬ ಪ್ರಶ್ನೆಯು ಇತ್ಯರ್ಥ ಮಾಡಬಯಸಿದನು. ಬಹುಶಃ ಅದಕ್ಕೆ ಕಾರಣ ಮೆಣಸಿನಲ್ಲಿಯ ಸೂಕ್ಷ್ಮವಾದ, ಮೊನೆಯಾದ ಕಣಗಳಿರಬಹುದೆಂದೂಹಿಸಿದನು. ಆದರೆ ಆ ಕಣಗಳನ್ನು ಬೇರ್ಪಡಿಸುವದೆಂತು? ಮೆಣಸನ್ನು ಕೆಲವು ವಾರಗಳ ವರೆಗೆ ನೆನೆಸಿಯಾದ ಮೇಲೆ ಸೂಕ್ಷ್ಮವಾದ ಸೂಜಿಯಿಂದ, ಕಣವೊಂದನ್ನೆತ್ತಿ ಸೂಕ್ಷ್ಮದರ್ಶನಿಯಲ್ಲಿ ನಿರೀಕ್ಷಿಸಿದನು. ಹೀಗೆ ನಿರೀಕ್ಷಿಸುತ್ತಿದ್ದಾಗ್ಗೆ ಆತನ ಲಕ್ಷ್ಯ ಚಲಿಸುತ್ತಿದ್ದ ಹಲವಾರು ಬಗೆಯ ಅಸಂಖ್ಯಾತ ಸೂಕ್ಷ್ಮ ಜೀವಿಗಳತ್ತ ಹರಿಯಿತು. ಬಾಲಕಸಹಜವಾದ ಕುತೂಹಲದಿಂದ, ಆ ಸೂಕ್ಷ್ಮ ಜೀವಿಗಳ ಚಲನವಲನವನ್ನು ಮೈಯಲ್ಲಾ ಕಣ್ಣಾಗಿ ನಿರುಕಿಸಿದನು. ಇದುವರೆಗಿನ ಆತನ ನಿರೀಕ್ಷಣೆಯ ವಿವರವನ್ನು ಲಂಡನ್ನದಲ್ಲಿಯ ಮಿತ್ರರಿಗೆ ಡಚ್ಚ ಭಾಷೆಯಲ್ಲಿ ಬರೆದು ತಿಳಿಸಿದನು. ಆತನ ಈ ಓಲೆಯನ್ನು ಇಂಗ್ಲೀಷಿಗೆ ಪರಿವರ್ತಿಸಿ Royal Society ಯ ಸೊಸಾಯಟಿಯ ಸದಸ್ಯರೆದುರು ಇಡಲಾಗಿ, ಅವರೆಲ್ಲ ಸಾಮಾನ್ಯ ಡಚ್ಚನೊಬ್ಬನ ಬುದ್ಧಿ ಪ್ರಖರತೆಯನ್ನು, ಸೂಕ್ಷ್ಮಗ್ರಾಹಕತೆಯನು ಬಹುವಾಗಿ ಶ್ಲಾಘಿಸಿದರು. ಆದರೆ ಕೆಲವರು ಆತನ ಓಲೆಯಲ್ಲಿಯ ಕೆಲ ವಿವರಣೆ ಬರಿ ಬುರುಡೆಯೆಂದು ಜರಿದರೆ, ಮತ್ತೆ ಕೆಲವರು ಅದೇ ವಿವರಣೆ ನಿಜವಿರಬಹುದಾಗಿ ಭಾವಿಸಿದರು. ಅವರ ನಂಬಿಕೆಗೆ ಆಧಾರವೆಂದರೆ ಲೂವೆನಹೋಕನ ಇದುವರೆಗಿನ ವಿವರಣೆಯಲ್ಲಿ ಅಸತ್ಯವಾಗಲಿ ಪೊಳ್ಳುತನವಾಗಲಿ ಇರಲಿಲ್ಲ. ಎಂತಲೇ ಅವರು ಲೂವೆನಹೋಕನಿಗೆ ಓಲೆ ಬರೆದು ಸೂಕ್ಷ್ಮದರ್ಶನಿಯ ಬಗೆ ಮತ್ತು ನಿರೀಕ್ಷಣೆಯ ಕ್ರಮ ಕುರಿತು ವಿಸ್ತೃತ ವರದಿ ಕಳುಹಿಸಲು ಬಿನ್ನವಿಸಿದರು.

ಅವರ ಓಲೆ ಕೈಸೇರಿದಾಗ ಲೂವೆನಹೋಕ ಹೌಹಾರಿದನು. ಆತನೇನೊ ಲಂಡನದ ಮಿತ್ರರು ದಾರ್ಶನಿಕರೆಂದೂ ಸದ್ಗೃಹಸ್ಥರೆಂದೂ ಭಾವಿಸಿದ್ದ. ತನ್ನ ಸೂಕ್ಷ್ಮದರ್ಶನಿಯ ರಚನೆಯ ಗುಟ್ಟನ್ನು ಇವರಿಗೆ ಹೇಳಬೇಕೆ? ಅಥವಾ ಆ ರಹಸ್ಯ ಗೌಪ್ಯವಾಗಿಡಬೇಕೆ? ಬಗೆಹರಿಯದಾಯಿತು ಲೂವೆನಹೋಕನಿಗೆ. 'ದೇವರೆ, ಎಂಥ ಇಕ್ಕಟ್ಟಿನಲ್ಲಿ ನಾನು ಸಿಕ್ಕಿರುವೆನಲ್ಲ? ಏನು ಮಾಡಲಿ? ಈ ಸೂಕ್ಷ್ಮದರ್ಶಿನಿ ರೂಪುಗೊಳ್ಳಲು ನಾನು ಪಟ್ಟ ಪರಿಶ್ರಮದ ಅರಿವು ಯಾರಿಗೆ ತಾನೆ ಇದೆ? ಇಷ್ಟು ದಿನಗಳ ನನ್ನ ರಹಸ್ಯ ಇಂದು ಪ್ರಕಟಿಸಲೆ?' ಡೋಲಾಯಮಾನವಾಗಿತ್ತು ಆತನ ಮನಸ್ಸು. ಆದರೆ ವಿವೇಕ ಕೇಳಬೇಕಲ್ಲ—'ಪ್ರೀತಿಯಿಂದ ಬೆನ್ನು ತಟ್ಟಿ ಮುಂದೆ ಬಾ ಎಂದು ಕರೆದು ನನ್ನನ್ನು ಬೆಳಕಿಗೆ ತಂದ ನನ್ನ ಮಿತ್ರರಿಗೂ ನಾನು ಹೀಗೆ ಹೇಳಬಹುದೆ?' ಅದೆಲ್ಲಿಯದೋ ಹಟ ಮುಂದೆ ಬಂದಿತು. 'ಆದದ್ದಾಗಲಿ, ವಿದ್ವಜ್ಜನರಿಗೆ ಹಾಗೆ ನೇರವಾಗಿ ಹೇಳಬಹುದೆ? ಹಾಗೆ ಹೇಳುವದು ಧಾರ್ಷ್ಟ್ಯತನವಲ್ಲವೆ? ಲೂವೆನಹೋಕ ಸೂಚ್ಯವಾಗಿ ಹೇಳಿದ ' ಓ! ಅದರಲ್ಲೇನು ಅಂಥ ವಿಶೇಷ! ಅದೇನು ಅಂಥ ಅಪೂರ್ವವಾದುದು?' Roya Society ಯವರು ಕೇಳಿದ ಮೂಲಭೂತ ಪ್ರಶ್ನೆಗೆ ಹಾರಿಕೆಯ ಉತ್ತರ ಕೊಟ್ಟನಾದರೂ ಆ ಸೂಕ್ಷ್ಮ ಜೀವಿಗಳ ಗಾತ್ರ ಕಂಡುಹಿಡಿಯುವ ವಿಧಾನವನ್ನು ಮಾತ್ರ ವಿವರಿಸಿದ. ಆಕಾಶದಲ್ಲಿ ವಿಹರಿಸುತ್ತಿರುವ ಚಂದ್ರನನ್ನು ಅಳುವ ಮಗನಿಗೆ ಕನ್ನಡಿಯಲ್ಲಿ ಹಿಡಿದುಕೊಟ್ಟಂತೆ ಕಡೆಗೆ ರಾಯಲ ಸೊಸಾಯಟಿಯವರು ರಾಬರ್ಟ ಹುಕ್ (Robert Hooke) ಮತ್ತು ನೆಹೆಮಿ ಗ್ರ್ಯು (Nehemiah Grew) ರಿಗೆ ಒಂದು ಸೂಕ್ಷ್ಮ ದರ್ಶನಿಯನ್ನು ರಚಿಸಲು ಕೇಳಿಕೊಂಡರಲ್ಲದೆ ಮೆಣಸಿನ ಪರೀಕ್ಷೆಯನ್ನು ಮಾಡಲು ಕೇಳಿಕೊಂಡರು. ೧೬೭೭ ನವ್ಹಂಬರ ೧೫ ರಂದು ರಾಬರ್ಟ ಹುಕ್ ತಾನು ನಿರ್ಮಿಸಿದ ಸೂಕ್ಷ್ಮದರ್ಶನಿಯನ್ನು ರಾಯಲ್ ಸೊಸಾಯಟಿಗೆ ತಂದು, ಲೂವೆನಹೋಕನ ವಿವರಣೆ ಚಾಚೂ ತಪ್ಪಿಲ್ಲವೆಂದು ಮರಳಿ ಒಪ್ಪಿಸಿದನು. ಹುಕ್ಕನ ಅಭಿಪ್ರಾಯವನ್ನು ಖಚಿತಪಡಿಸಿಕೊಳ್ಳುವದಕ್ಕಾಗಿ ಸದಸ್ಯರೆಲ್ಲ ಸ್ವಸ್ಥಾನದಿಂದ ಚಂಗನೆ ನೆಗೆದು ಸೂಕ್ಷ್ಮದರ್ಶಿನಿಯ ಸುತ್ತ ನೆರೆದು, ಕಾತುರದಿಂದ ನಿರೀಕ್ಷಿಸಿ ಬೆರಗಾದರು. ಅಂದಿನ ದಿನ ಲೂವೆನಹೋಕನ ಜೀವನದಲ್ಲಿ ಅಮೂಲ್ಯವಾದ ದಿನ. ಅದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕು. ಕೆಲ ದಿನಗಳಲ್ಲಿಯೇ ರಾಯಲ್ ಸೊಸಾಯಟಿಯವರು ಆತನನ್ನು ತಮ್ಮ ಸಂಸ್ಥೆಯ ಸಭಾಸದ (Fellow) ನನ್ನಾಗಿ ಮಾಡಿಕೊಂಡರಲ್ಲದೆ ರಜತ ಕರಂಡಕದಲ್ಲಿ ಪ್ರಶಸ್ತಿಯನ್ನರ್ಪಿಸಿದರು. ಇದಕ್ಕೆ ಪ್ರತಿಯಾಗಿ ಲೂವೆನಹೋಕ ಸಂಸ್ಥೆಗೆ ಅಭಿನಂದನೆಗಳನ್ನು ಸಲ್ಲಿಸಿದನಲ್ಲದೆ, ಸಂಸ್ಥೆಯ ಸೇವೆಯನ್ನು ವಿಶ್ವಾಸಪೂರ್ವಕವಾಗಿ ಮಾಡುವದಾಗಿ ಹೇಳಿದನು. ಇದೇ ಸಂದರ್ಭವನ್ನು ಸಾಧಿಸಿ ರಾಯಲ್ ಸೊಸಾಯಟಿಯವರು ಆತನಿಗೆ ಸೂಕ್ಷ್ಮದರ್ಶನಿಯ ರಚನೆಯ ಕ್ರಮ ವಿವರಿಸಲು ಮತ್ತೆ ಪ್ರಾರ್ಥಿಸಿದರೂ, ಲೂವೆನಹೋಕ ತನ್ನ ಹಟ ಬಿಡಲಿಲ್ಲ. ಕಡೆಗೆ ಆತನ ಸೂಕ್ಷ್ಮದರ್ಶನಿಯನ್ನಾದರೂ ನೋಡೋಣವೆಂದು ಬಯಸಿದ ಸಭಾಸದರು ಡಾಕ್ಟರ್ ಮಾಲಿನ್ಯೂ (Molyneux) ರನ್ನು ಹಾಲಂಡಿಗೆ ಕಳಿಸಿದರು. ಡಾಕ್ಟರರು ಲೂವೆನಹೋಕನಿಗೆ ಹೇರಳ ಹಣ ಕೊಡುವದಾಗಿ ಆಮಿಷ ತೋರಿಸಿದರು. ಆದರೂ ಆತ ಬಲೆ ಬೀಳಲಿಲ್ಲ. ಹಾಗೆ ನೋಡಿದರೆ ಲೂವೆನಹೋಕ ತಾನು ನಿರ್ಮಿಸಿದ್ದ ನೂರಾರು ಸೂಕ್ಷ್ಮದರ್ಶನಿಗಳಲ್ಲೊಂದನ್ನು ದಾನವಾಗಿ ಕೊಡಬಹುದಾಗಿತ್ತು. ಡಾಕ್ಟರ ಮಾಲಿನ್ಯೂರಿಗೆ ತನ್ನ ಎಲ್ಲ ಸೂಕ್ಷ್ಮದರ್ಶನಿಗಳನ್ನೂ ತಾನು ನಿರೀಕ್ಷಿಸಿದ ವಸ್ತುಗಳನ್ನೂ ಮತ್ತು ನಿರೀಕ್ಷಣೆಯ ಕ್ರಮವನ್ನು ವಿವರಿಸಿದ. ಡಾಕ್ಟರರು ಲೂವೆನಹೋಕನ ತಾಳ್ಮೆ ಮತ್ತು ಸತತೋದ್ಯೋಗ ಕೊಂಡಾಡಿದರಲ್ಲದೆ, ಇಂಗ್ಲಂಡದಲ್ಲಿ ಸೊಸಾಯಟಿಯವರು ನಿರ್ಮಿಸಿದ ಸೂಕ್ಷ್ಮದರ್ಶನಿ, ಲೂವೆನಹೋಕನ ಸೂಕ್ಷ್ಮದರ್ಶನಿಗೆ ಸಾಟಿಯಲ್ಲವೆಂದು ಅಭಿಪ್ರಾಯ ವ್ಯಕ್ತಪಡಿಸಿದರು. ಡಾಕ್ಟರ ಮಾಲಿನ್ಯೂರು ಇಂಗ್ಲಂಡಿಗೆ ತೆರಳುವ ಮುನ್ನ ಲೂವೆನಹೋಕನು ತನ್ನ ಮನಸ್ಸಿನ ದುಗುಡವನ್ನು ತೋಡಿಕೊಂಡಿದ್ದ. 'ಮಾನ್ಯರೆ, ನಿಮ್ಮ ವಿನಂತಿಯನ್ನು ಅಮಾನ್ಯ ಮಾಡಲು ನನಗೆ ಬಹು ವಿಷಾದವೆನಿಸುತ್ತದೆ. ಆದರೇನು ಮಾಡಲಿ? ರಹಸ್ಯವನ್ನು ಪ್ರಕಟಿಸಲು ಅಂತರಾತ್ಮ ಅಡ್ಡಿ ಪಡಿಸುತ್ತಿದೆ. ಈ ನನ್ನ ರಹಸ್ಯವನ್ನು ನಾನು ನನ್ನ ಮಕ್ಕಳಿಗೂ ವಿವರಿಸುವದಿಲ್ಲವೆಂದರೆ ನಿಮಗೆ ನಂಬಿಕೆ ಬಾರದು. ನನ್ನ ಹಟಮಾರಿತನ ನಿಮಗೆ ಜುಗುಪ್ಸೆಯುಂಟು ಮಾಡಿರಬಹುದು. ವಿಶಾಲ ಹೃದಯರಾದ ತಾವು ನನ್ನನ್ನು ಕ್ಷಮಿಸುವಿರಾಗಿ ಭಾವಿಸಿದ್ದೇನೆ.'

ಲೂವೆನಹೋಕನಿಗೆ ವಯಸ್ಸು (೫೦) ಐವತ್ತಾಗಿದ್ದರೂ ದೃಢಕಾಯನಿತ್ತು. ಆತನ ಹಲ್ಲುಗಳು ಗಟ್ಟಿಯಾಗಿದ್ದವು. ತನ್ನ ಶರೀರ ಸೌಷ್ಠವ ಮತ್ತು ಸದೃಢ ಹಲ್ಲುಗಳ ಕುರಿತು ಲಂಡನ್ನಿನ ಮಿತ್ರರಿಗೆ ಹೀಗೆ ಬರೆದಿದ್ದ. 'ನಾನು ಐವತ್ತರ ಹೊಸ್ತಿಲಲ್ಲಿದ್ದರೂ, ನನ್ನ ಹಲ್ಲುಗಳು ಅಲುಗಾಡುತ್ತಿಲ್ಲ. ಇದರ ಕಾರಣವೇನೆಂದರೆ ನಾನು ನಿತ್ಯವೂ ಹಲ್ಲುಗಳನ್ನು ಉಪ್ಪಿನಿಂದ ಉಜ್ಜಿ, ನಂತರ ನೀರಿನಿಂದ ತೊಳೆದು, ಆ ಮೇಲೆ ವಸ್ತ್ರದಿಂದ ಒರೆಸುತ್ತೇನೆ. ಇದೇ ನನ್ನ ಹಲ್ಲುಗಳು ಗಟ್ಟಿಯಾಗಿರಲು ಕಾರಣ.' ವೃದ್ಧಾಪ್ಯ ಧಾವಿಸುತ್ತಿದ್ದರೂ ತರುಣರಲ್ಲಿಯ ಉತ್ಸಾಹ ಆತನಲ್ಲಿ ಉಕ್ಕುತ್ತಿತ್ತು. ಮೊದಲಿನ ಶೋಧಕ ಬುದ್ಧಿ ಈಗ್ಯೆ ತೀವ್ರವಾಗಿತ್ತು. ಒಂದು ದಿನ ಆಕಸ್ಮಾತ್ತಾಗಿ ಕನ್ನಡಿಯಲ್ಲಿ ಬಾಯ್ದೆರೆದಾಗ ತನ್ನ ಹಲ್ಲುಗಳ ಸಂದಿನಲ್ಲಿ ಹಿಟ್ಟಿನಂಥ ಬಿಳಿಯ ವಸ್ತುವನ್ನು ಕಂಡನು. ಅದೇನಿರಬಹುದೆಂದು ಕಾಣಬಯಸಿ, ಅದನ್ನು ಹೊರದೆಗೆದು, ಗಾಜಿನ ಪಟ್ಟಿಯಮೇಲಿಟ್ಟು, ಒಂದು ಬಿಂದು ನೀರು ಬೆರಸಿ ತನ್ನ ಸೂಕ್ಷ್ಮದರ್ಶನಿಯಲ್ಲಿ ನಿರೀಕ್ಷಿಸಿದನು. 'ಓಹೊ! ಇಲ್ಲಿಯೂ ಸೂಕ್ಷ್ಮ ಜೀವಿಗಳಿರುವವಲ್ಲ? ನಾನು ಇವುಗಳನ್ನು ಈ ಮೊದಲು ಕಂಡಿರಲಿಲ್ಲ. ಅದೋ ಅಲ್ಲಿ ನೋಡಿ ಹೇಗೆ ಈಸುತ್ತಿವೆ.' ಕಂಣುರಿಯೆನಿಸುವವರೆಗೂ ನೋಡಿದರೂ ಆತನಿಗೆ ತೃಪ್ತಿಯಾಗಲಿಲ್ಲ; ಕೈಗಳು ನೋಯಿಸಲಾರಂಭಿಸಿದವು. ಅನಿವಾರ್ಯವಾಗಿ ವಿರಾಮ ಪಡೆಯಬೇಕಾಯಿತು. ಡೆಲ್ಫದ ಹೊರಗೆ ವಾಯುಸೇವನೆಗೆ ಹೊರಟ. ತಂಗಾಳಿ ತೀಡುತ್ತಿತ್ತು. ದಾರಿಯ ಇಕ್ಕೆಲದ ದೊಡ್ಡ ಎಲೆಗಳು ಅಲ್ಲಲ್ಲಿ ಬೀಳುತ್ತಿದ್ದವು. ದಾರಿಯಲ್ಲಿ ಲೂವೆನಹೋಕನಿಗೆ ಒಬ್ಬ ವೃದ್ಧ

ಭೆಟ್ಟಿಯಾದ. ಆ ವೃದ್ಧ ತುಂಬ ಒಳ್ಳೆಯ ಮನುಷ್ಯ; ನಿರ್ವ್ಯಸನಿ. ಆತನೊಂದಿಗೆ ಮಾತನಾಡುತ್ತಿದ್ದಂತೆ, ಲ್ಯೂವೆನಹೋಕನ ದೃಷ್ಟಿ ವೃದ್ಧನ ಹಲ್ಲುಗಳತ್ತ ಹರಿಯಿತು. ಅವು ಪೀತವರ್ಣವನ್ನು ತಳೆದಿದ್ದವು. ಆತನ ಹಲ್ಲಿನ ಸಂದಿನಲ್ಲಿಯ ಹಿಟ್ಟಿನಂಥ ವಸ್ತುವನ್ನು, ಆತನನ್ನು ಬೇಡಿ ಕಾಡಿ ಪಡೆದನು. ಆ ವೃದ್ಧ ಅದುವರೆಗೆ ಹಲ್ಲುಗಳನ್ನೇ ತಿಕ್ಕಿದಿಲ್ಲವಂತೆ! ನೀವು ನಂಬುವಿರಾ? ಆದರೆ ಇದು ವಸ್ತುಸ್ಥಿತಿ. ಎಂಥ ಕಾಡು ಸ್ಥಿತಿಯಲ್ಲಿದ್ದರೆಂದು ನೀವು ಮರುಕಪಡಬಹುದು.

ಸರಿ, ಲೂವೆನಹೋಕನ ಬೇಸರ ಕಳೆದುಹೋಯಿತು. ಕಣ್ಣಿನ ನೋವು ಇಲ್ಲದಾಯಿತು. ಶರೀರದಲ್ಲಿ ನವೋತ್ಸಾಹ ಸಂಚರಿಸಿತು. ಲೂವೆನಹೋಕ ಆ ಹಿಟ್ಟಿನಂಥದನ್ನು ನೀರಿನಲ್ಲಿ ಸೇರಿಸಿ ಸೂಕ್ಷ್ಮದರ್ಶನಿಯಲ್ಲಿ ನೋಡಿದಾಗ ನಿಬ್ಬೆರಗಾದ. ತನ್ನ ಹಲ್ಲಿನಲ್ಲಿ ಕಾಣಬಂದ ಸೂಕ್ಷ್ಮ ಜೀವಿಗಳು ಮಾತ್ರವಲ್ಲದೆ, ಅನೇಕ ಬಗೆಯ ವಿವಿಧಾಕಾರದ ಸಹಸ್ರಾರು ಸೂಕ್ಷ್ಮ ಜೀವಿಗಳಿದ್ದವು. ಕೆಲವು ಆಕಾರದಲ್ಲಿ ಅಂಬಿನಂತೆ, ಕೆಲವು ಹಾವಿನಂತೆ. ಒಟ್ಟಿಗೆ ಆ ವೃದ್ಧನ ಬಾಯಿ ವಿವಿಧ ಬಗೆಯ ವಿವಿಧಾಕಾರದ ಅಸಂಖ್ಯ ಸೂಕ್ಷ್ಮ ಜೀವಿಗಳ ಆಗರವೆಂದು ಭಾವಿಸಿದನು. ಲೂವೆನಹೋಕ ತನ್ನೀ ಪರೀಕ್ಷೆಯ ವರದಿಯನ್ನು (Royal Society) ಗೆ ಒಪ್ಪಿಸಿದನು. ದಿನಗಳೆದಂತೆ ಸೂಕ್ಷ್ಮ ಜೀವಿಗಳನ್ನು ಮತ್ತು ಶುಕ್ರ ಕೀಟಗಳನ್ನು ಗುರುತಿಸಿದ.

ರಾಯಲ್ ಸೊಸಾಯಿಟಿಯಿಂದಾಗಿ ಲೂವೆನಹೋಕ ಬಹು ಬೇಗ ಪ್ರಸಿದ್ಧಿಯ ಗೌರೀಶಂಕರಕ್ಕೇರಿದ. ರಶಿಯಾದ ದೊರೆ ಆತನನ್ನು ಗೌರವಿಸಿದರೆ ಇಂಗ್ಲಂಡದ ರಾಣಿ, ಬಕಿಂಗಹ್ಯಾಮ ಅರಮನೆಯಿಂದ ಡೆಲ್ಫಕ್ಕೆ ಪ್ರವಾಸ ಕೈಕೊಂಡು ಲೂವೆನಹೋಕನ ಸೂಕ್ಷ್ಮದರ್ಶನಿಗಳನ್ನೂ, ಆತನ ನಿರೀಕ್ಷಣೆಯ ಬಗೆಯನ್ನು ಕಣ್ಣಾರೆಕಂಡು ಕೌತುಕಪಟ್ಟುದಲ್ಲದೆ, ಆತನನ್ನು ಬಹುವಾಗಿ ಕೊಂಡಾಡಿದಳು. ಅಂದಿನ ಸುಪ್ರಸಿದ್ಧ ವಿಜ್ಞಾನಿಗಳಾದ ನ್ಯೂಟನ್ ಮತ್ತು ಬಾಯ್ಲರ ಶ್ರೇಣಿಯಲ್ಲಿ ಲೂವೆನಹೋಕ ಸೇರಿದ. ಇಷ್ಟೆಲ್ಲ ಗೌರವ ಆತನಿಗೆ ದೊರೆತರೂ ಗರ್ವ ಆತನನ್ನು ಗುರುತಿಸಲಿಲ್ಲ, ಎಂದಿನಂತೆ ಸಾಮಾನ್ಯ ಡಚ್ಚನೊಬ್ಬ.

ಲೂವೆನಹೋಕನ ಹಟಮಾರಿತನಕ್ಕೆ ಒಂದು ಮರ್ಯಾದೆ ಇತ್ತು. ತನ್ನದೇ ಸತ್ಯವೆಂಬ ಮಿಥ್ಯ ಹಟ ಆತನದಿರಲಿಲ್ಲ. ಯಾರಾದರೂ ಆತನದು ತಪ್ಪೆಂದು ಮನಗಾಣಿಸಿದಾಗ, ಅದನ್ನು ಉದಾರ ಮನಸ್ಸಿನಿಂದ ಒಪ್ಪುತ್ತಿದ್ದ. ದೇವರಲ್ಲಿ ಆತನಿಗೆ ಅನನ್ಯ ವಿಶ್ವಾಸ. ರಾಯಲ್ ಸೊಸಾಯಿಟಿಗೆ ಬರೆದ ಒಂದು ಓಲೆಯಲ್ಲಿ ಹೀಗಿದೆ— 'ನನ್ನ ವಿಚಾರಗಳೇ, ನನ್ನ ಕ್ರಮವೇ ಸರಿಯಾದವೆಂಬ ಭ್ರಾಮಕ ಕಲ್ಪನೆ ನನಗಿಲ್ಲ. ನನ್ನ ಪ್ರಯೋಗಗಳು ಪರಿಪೂರ್ಣವೆಂದು ನಾನು ಸಾರಬಯಸುವದಿಲ್ಲ. ನನ್ನದು ಇಲ್ಲಿ ತಪ್ಪಿದೆ ಎಂದು ಯಾರಾದರೂ ತೋರಿಸಿಕೊಟ್ಟಲ್ಲಿ, ತಿದ್ದಿಕೊಳ್ಳಲು ಸದಾಸಿದ್ಧ.' ಎಕೆಂದರೆ ಹಟ ಎಂದೂ ಗೆಲ್ಲದು. ಸತ್ಯಕ್ಕೆ ಶಾಶ್ವತ ಜಯ ಕಟ್ಟಿಟ್ಟದ್ದು. ಇಂಥ ವಿನಯ, ಈ ಸರಳತೆ, ಇಂಥ ಮಹಾ ಪದವಿಗೇರಿದ ಇಂದಿನ ವಿಜ್ಞಾನಿಗಳಲ್ಲಿ ನಾವು ಇಂದು ಕಾಣಬಹುದೆ!

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್

ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!

ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: ಬಿ. ಜಿ. ಮುತ್ತಗಿ

ಲೂವೆನಹೋಕ ಸಶಕ್ತನಿದ್ದನೆಂಬುದು ವಿದಿತವಷ್ಟೆ? ವಯಸ್ಸು ೮೦ ಆಗಿದ್ದರೂ, ಆತನ ಕೈಗಳು ನಡುಗುತ್ತಿರಲಿಲ್ಲವೆಂದರೆ ನಂಬಿಕೆಯಾಗದು. ಡಾಕ್ಟರರನ್ನು ಕಂಡರೆ ಆತನಿಗಾಗದು. ಬಿಸಿಬಿಸಿ ಕಾಫಿ ಕುಡಿಯುವದೆಂದರೆ ಆತನಿಗೆ ಬಲು ಪ್ರಿಯವು. ಈ ಕಾಫೀ ಚಟಕ್ಕೆ ಮಿತಿ ಇರಲಿಲ್ಲ. ಈ ಬಿಸಿ ಕಾಫಿಯೇ ಒಂದು ದಿನ ಹೊಸ ಶೋಧಕ್ಕೆ ಕಾರಣವಾಗಬಹುದೆಂದು ಯಾರು ಕಂಡಿದ್ದರು.

ಒಂದು ದಿನ ಲೂವೆನಹೋಕ ಆದೇ ತಾನೆ ಬಿಸಿ ಕಾಫಿ ಕುಡಿದ ಮೇಲೆ, ಮುಂದಿನ ಸಾಲಿನ ಹಲ್ಲುಗಳ ಸಂಧಿಯಿಂದ ಸ್ವಲ್ಪ ಹಿಟ್ಟಿನಂಥ ವಸ್ತುವನ್ನು ಹೊರಗೆ ತೆಗೆದು ಸೂಕ್ಷ್ಮದರ್ಶನಿಯಲ್ಲಿ ನಿರುಕಿಸಿದ. ಆಶ್ಚರ್ಯ! ಒಂದಾದರೂ ಸೂಕ್ಷ್ಮ ಜೀವಿ ಅಲ್ಲಿರಲಿಲ್ಲ. ಈ ಮೊದಲು ಅಸಂಖ್ಯವಾಗಿದ್ದವಲ್ಲ. ಕೆಲಹೊತ್ತು ತಡೆದ ಮೇಲೆ ಸಿಗಬಹುದೆಂದು ಲೂವೆನಹೋಕ ತಿಳಿದನು. ಆದರೆ ಸೂಕ್ಷ್ಮ ಜೀವಿಗಳು ಅಲ್ಲಿರಲಿಲ್ಲ. ಈಗ್ಗೆ ಹಿಂದಿನ ಸಾಲಿನಲ್ಲಿಯ ಹಲ್ಲುಗಳನ್ನು ಪರೀಕ್ಷಿಸಿದಾಗ, ಅಲ್ಲಿ ಸೂಕ್ಷ್ಮ ಜೀವಿಗಳು ಅಸಂಖ್ಯಾತವಾಗಿದ್ದವು. ಬಹುಶಃ ಅವು ಬಿಸಿ ಕಾಫಿಯಿಂದ ನಾಶವಾಗಿರಬಹುದೆಂದು ಊಹಿಸಿದ. ಆ ಊಹೆ ನಿಜವಾಯಿತು. ಅಂದಿನ ಆತನ ಊಹೆ ಪ್ರಯೋಗಗಳಿಂದ ಪುಟಗೊಂಡು ಇಂದಿನ ಸಿದ್ಧಾಂತಕ್ಕೆ ನಾಂದಿಯಾಗಿದೆ. ಅದೆಂದರೆ ಬಹುಶಃ ಎಲ್ಲ ಸೂಕ್ಷ್ಮ ಜೀವಿಗಳು ಹೆಚ್ಚಿನ ಉಷ್ಣತೆಯನ್ನು ಸಹಿಸಲಾರವೆಂದೂ, ಹೆಚ್ಚಿನ ಉಷ್ಣತೆ ಮಾರಕವೆಂದು ತಿಳಿಯಲಾಗಿದೆ.

೮೫ ವರ್ಷಗಳಾದರೂ ಸತತ ಅಭ್ಯಾಸ ಆತ ಬಿಟ್ಟಿರಲಿಲ್ಲ. ಆತನ ಮಿತ್ರರು ಅಭ್ಯಾಸ ಬಿಟ್ಟುಕೊಟ್ಟು ವಿಶ್ರಾಂತಿ ಪಡೆಯುವ ಸಲಹೆ ಕೊಟ್ಟರು. ಅವರ ಸಲಹೆಗೆ ಲೂವೆನಹೋಕ ಹೇಳಿದ್ದಿಷ್ಟೆ— 'ಶರದೃತುವಿನಲ್ಲಿ ಮಾಗಿದ ಹಣ್ಣು ಹೆಚ್ಚುಕಾಲ ತಾಳುವದೆಂಬುದು ನಿಮಗೆ ಗೊತ್ತಷ್ಟೆ?' ಆಗಿನ ಆತನ ಕಂಣುಗಳಲ್ಲಿ ಪ್ರಭೆಯನ್ನು ಕಂಡು ಮಿತ್ರರು ಚಕಿತರಾದರು. ೮೫ ವರ್ಷವೆಂದರೆ ಆತನ ಜೀವನದ ಶರದೃತುವಂತೆ!

ತತ್ತ್ವಜ್ಞಾನಿ ಲೆಬ್ನಿಝುನೊಂದಿಗೆ ಲೂವೆನಹೋಕನಿಗೆ ಸಖ್ಯವಿತ್ತು. ಈ ಸಖ್ಯದಿಂದಾಗಿಯೇ ಲೆಬ್ನಿಝು ಒಮ್ಮೆ ಆತನನ್ನು ಕೇಳಿದನು.

'ಲೂವೆನ್, ಆದೇಕೆ ನೀವು ಇದುವರೆಗೆ ನಿಮ್ಮ ಸೂಕ್ಷ್ಮದರ್ಶಿನಿಯ ರಚನೆಯನ್ನು ಪ್ರಕಟಪಡಿಸಿಲ್ಲ? ಇಂದಿನ ತರುಣರಿಗೆ ನೀವು ಇದನ್ನು ತಿಳಿಸುವದವಶ್ಯ.'

'ಅಹುದು. ಅವಶ್ಯವಿದೆಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ನಾನು ಬೋಧಕನಲ್ಲ, ಸಾಧಕ.' ಲೆಬ್ನಿಝು ಬೆರಗಾದನು.

'ನಿಜ. ತರುಣರಿಗೆ ನೀವು ನಿಮ್ಮ ಕ್ರಮ ತಿಳಿಸದಲ್ಲಿ ನಿಮ್ಮ ಪರಿಶ್ರಮದ ಸಾರ್ಥಕ್ಯವೇನು?' 'ಸಾರ್ಥಕ್ಯವೇ? ಲಿಡಾನ್ ವಿದ್ಯಾನಿಲಯದಲ್ಲಿ ನನ್ನ ಸೂಕ್ಷ್ಮದರ್ಶನಿಗಾದ ಗತಿ ನಿಮಗೆ ಗೊತ್ತಿಲ್ಲವೆ? ಇಂದಿನ ತರುಣರು ವಿದ್ಯಾನಿಲಯಕ್ಕೆ ಹೋಗುತ್ತಿರುವದು ವಿದ್ಯೆಗಾಗಿ ಅಲ್ಲ. ಆ ವಿದ್ಯೆಯಿಂದ ಹೊಟ್ಟೆ ಹೊರೆಯುವದಕ್ಕಾಗಿ. ಅದೇ ವಿದ್ಯೆಯಿಂದ ಸುಸಂಸ್ಕೃತರೆಂಬ ಮುಖವಾಡವನ್ನು ಧರಿಸಿ ಮೆರೆಯುವದಕ್ಕಾಗಿ. ಪರಿಶ್ರಮ ಇಂದಿನ ಯುವಕರಿಗೆ ಗೊತ್ತಿಲ್ಲ. ಶೋಧಕ ಬುದ್ಧಿಯಂತೂ ಇಲ್ಲವೇ ಇಲ್ಲ. ಎಲ್ಲ ಗಿಳಿಯೋದು. ನನಗೆ ಗೊತ್ತಿದೆ, ಸಾವಿರ ವಿದ್ಯಾರ್ಥಿಗಳಲ್ಲೊಬ್ಬನು ಕೂಡ ಇಂಥ ಅಭ್ಯಾಸವನ್ನು ಕೈಕೊಳ್ಳಲಾರನೆಂಬುದು. ಏಕೆಂದರೆ ಇಂಥ ಕಾರ್ಯಕ್ಕೆ ಅಹರ್ನಿಶಿ ಶ್ರದ್ಧೆಯಿಂದ, ತಾಳ್ಮೆಯಿಂದ ದುಡಿಯಬೇಕಾಗುವದು. ಆ ಎದೆಗಾರಿಕೆ ಯಾರಲ್ಲಿದೆ?'

ಲೂವೆನಹೋಕನ ಅಭಿಪ್ರಾಯ ಇಂದೂ ನಮ್ಮ ನಾಡಿಗೆ ಅನ್ವಯಿಸುವದಿಲ್ಲವೆ?

ಆ ಮೇಲೆ ಲೂವೆನಹೋಕ ಬಹುಕಾಲ ಬದುಕಲಿಲ್ಲ. ಆತನ ೯೧ನೇ ವಯಸ್ಸಿನಲ್ಲಿ ಎಂದರೆ ೧೭೨೩ರಲ್ಲಿ ಮರಣ ಹೊಂದಿದನು. ಸಾಯುವ ಮುನ್ನ ಆತ ರಾಯಲ್ ಸೊಸಾಯಟಿಗೆ ತನ್ನ ವರದಿ ಒಪ್ಪಿಸದಿರಲಿಲ್ಲ. ಆತ ಮೃತ್ಯುಶಯ್ಯೆಯಲ್ಲಿದ್ದಾಗ ಮಿತ್ರನಾದ ಹೂಗ್ವಿಲಾಯ್ಟ (Hoogvliet)ನನ್ನು ಕರೆದು ತನ್ನ ಕೊನೆಯ ಬಯಕೆಯನ್ನು ತೋಡಿಕೊಂಡನು; 'ಹೂಗ್ವಿ, ಆ ಟೇಬಲ್ಲಿನ ಮೇಲಿರುವ ನನ್ನ ಎರಡು ಓಲೆಗಳನ್ನು ದಯಮಾಡಿ ಲ್ಯಾಟಿನ್ನಿಗೆ ಪರಿವರ್ತಿಸುವೆಯಾ—ಮಾತು ಕೊಡು. ಅವುಗಳನ್ನು ನನಗಾಗಿ ರಾಯಲ್ ಸೊಸಾಯಟಿಗೆ ಕಳಿಸುವೆನೆಂದಷ್ಟೆ. ಹೇಳು' ಗೆಳೆಯನ ಆರ್ತತೆಗೆ ಹೂಗ್ವಿಯ ಕಣ್ಣೀರಿನ ಅಭಿಷೇಕವಾಯಿತು. ಲೂವೆನಹೋಕನು ಸಮಾಧಾನದ ನಿಟ್ಟುಸಿರನ್ನು ಬಿಟ್ಟು, 'ಗೆಳೆಯಾ, ನಾನೀಗ ಸಂತೋಷದಿಂದ ಸಾವನ್ನಪ್ಪುವೆ' ಎಂದನು. ಆತನ ಕಂಗಳ ಕಾಂತಿ ಬಾಡುತ್ತ ನಡೆದಿತ್ತು. ರೆಪ್ಪೆಗಳು ಮುಚ್ಚಿಕೊಳ್ಳಲು ಕ್ಷಣಗಳ ಎಣಿಕೆ ನಡಿಸಿದ್ದವು. ನಂದುವ ಮೊದಲು ಜಾಜ್ವಲ್ಯವಾಗಿ ಉರಿಯುವ ಜ್ಯೋತಿಯಂತೆ; ಆತನ ಕಂಗಳಲ್ಲಿ ಪ್ರಭೆ ಮಿಂಚಿ ಮಾಯವಾಯಿತು. ಇನ್ನಿಲ್ಲ ಲೂವೆನಹೋಕ!

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧-೮-೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನ ಸಂಗ್ರಹ) ೦-೮-೦
ಶ್ರೀ. ಬಾಳ ಬಿ ಉಪಾಧ್ಯೆ

ಮೂಲ ಶಿಕ್ಷಣದ ಮೌಲ್ಯಮಾಪಣ ೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು

ಭರತೇಶನ ನಾಲ್ಕು ಚಿತ್ರಗಳು ೧-೪-೦
ಶ್ರೀ. ಮಿರ್ಜಿ ಅಣ್ಣಾರಾಯರು

ಶ್ರೀ ಶಾಂತಿಸಾಗರ ೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು
ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. ಉಗಾರ ಬದ್ರುಕ್ (ಜಿಲ್ಲಾ ಬೆಳಗಾಂವಿ)

ಹೂಗ್ವಿಲಾಯ್ಟ ವಚನವಿತ್ತಂತೆ ಆತನ ೨ ಓಲೆಗಳನ್ನು ಲ್ಯಾಟಿನ್ನಿಗೆ ಪರಿವರ್ತಿಸಿ ರಾಯಲ್ ಸೊಸಾಯಟಿಗೆ ಕಳಿಸಿದನು. ಆ ಓಲೆಗಳೊಂದಿಗೆ ಆತನದೂ ಒಂದು ಚಿಕ್ಕೋಲೆ ಇತ್ತು. 'ವಿದ್ವನ್ಮಣಿಗಳೆ, ನಾನಿಂದು ನನ ಮಿತ್ರನ ಆಶಯದಂತೆ ೨ ಓಲೆಗಳನ್ನು ಕಳಿಸಿದ್ದೇನೆ. ಇವು ನನ್ನ ಗೆಳೆಯನ ಕೊನೆಯ ಕಾಣಿಕೆ. ಆತನ ಕೊನೆಯ ಬಯಕೆ ತಮಗೆ ಮಾನ್ಯವಾದೀತೆಂದು ಹಾರೈಸಬಹುದಷ್ಟೆ!'

ಗತಕಾಲದ ವೈಜ್ಞಾನಿಕ ಸಿದ್ಧಾಂತಗಳಾಗಲಿ, ಪ್ರಯೋಗಗಳಾಗಲಿ ನಮಗಿಂದು ತೀರ ಸಾಮಾನ್ಯವೆಂದೂ, ಸ್ವಯಂವಿದಿತವೆಂದೂ ತೋರಬಹುದಾದರೂ, ಅವು ರೂಪುಗೊಂಡು, ಚಿರಸ್ಥಾಯಿಯಾಗುಳಿಯಲು ಆ ಜನ ಪಟ್ಟ ಪರಿಶ್ರಮದ ಅರಿವು ನಮಗಿರುವುದು ಅಗತ್ಯವಾಗಿದೆ. ಇಂದೇನೋ ಸೂಕ್ಷ್ಮದರ್ಶನಿಗಳಿಲ್ಲದ್ದ ಶಿಕ್ಷಣ ಸಂಸ್ಥೆಗಳಿಲ್ಲ. ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಯೂ ಕೂಡ ಅದನ್ನು ಸಲೀಲವಾಗಿ ಉಪಯೋಗಿಸಬಹುದು. ಆದರೆ ಆ ಸೂಕ್ಷ್ಮದರ್ಶಿನಿ ರೂಪುಗೊಂಡು, ಪರಿಪೂರ್ಣವಾದ ಬಗೆ ಮಾತ್ರ ಅವರರಿಯರು. ಮಾನವ ಕುಟುಂಬಕ್ಕೆ ಅಮೋಘ ಉಪಕಾರ ಮಾಡಿದ ಲೂವೆನಹೋಕನಂಥವರು ಪ್ರಾತಃಸ್ಮರಣೀಯರು. ಇಂದಿನ ವಿದ್ಯಾರ್ಥಿಗಳಿಗೆ, ಮುಂದಿನ ನಾಡಶಿಲ್ಪಿಗಳಿಗೆ ಇಂಥ ಪುಣ್ಯ ಪುರುಷರ ಪರಿಚಯವಿರುವದು ಅಗತ್ಯ ತಾನೆ!

★ ಸಾಹಿತ್ಯದ ಮಹತ್ತ್ವ ★

(ವಿಚಾರ ಪ್ರಬಂಧ)

ಶ್ರೀ. ಎಸ್. ವಿ. ಕೋನೇರಿಪುರ ಶಿವಮೊಗ್ಗ

卐

ಮಾನವನ ಪೂರ್ಣತೆಯ ಲಕ್ಷಣವೆಂದರೆ ಆತನ ಬಹಿರಂಗವಾದ ಶರೀರ, ಅಂತರಂಗವಾದ ಆತ್ಮ ಎರಡರ ಸಂಪೂರ್ಣ ವಿಕಾಸವಾಗ ಬೇಕು. ಶರೀರದ ಪೋಷಣೆಗೆ ಆಹಾರಬೇಕು; ಆತ್ಮದ ಪೋಷಣೆಗೆ ಸದಭಿರೋಚಕವಾದ ಸಾಹಿತ್ಯಬೇಕು. ಸಾಹಿತ್ಯ ಸಂಸ್ಕಾರವಿಲ್ಲದವನ ಜೀವನವೆಂದರೆ ಅರ್ಧಾಂಗವಾತ ತಗಲಿದ ರೋಗಿಯಂತೆ!

卐

ನಮ್ಮ ರಾಷ್ಟ್ರಭಾಷೆ 'ಹಿಂದಿ'ಯಲ್ಲಿ ಸಾಕಷ್ಟು ಪರಿಜ್ಞಾನವುಳ್ಳವರೆಲ್ಲರಿಗೂ ಸ್ವರ್ಗೀಯ 'ಆಚಾರ್ಯ ಪಂಡಿತ ಮಹಾವೀರ ಪ್ರಸಾದ ದ್ವಿವೇದೀ'ಯವರ ಹೆಸರು ಗೊತ್ತಿರಲಿಕ್ಕೇ ಬೇಕು. ಹಿಂದೀ ಭಾಷಾಸಂಪಾದಕರಲ್ಲಿ ಪ್ರಥಮ ಗೌರವ ಶ್ರೀಯುತರಿಗೆ ಸಲ್ಲುತ್ತದೆ. ಇವರು ಸುಮಾರು ಇಪ್ಪತ್ತು ವರ್ಷ 'ಸರಸ್ವತಿ' ಮಾಸಪತ್ರಿಕೆಯ ಸಂಪಾದಕತ್ವದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರು. ಇವರ ಪರಿಶ್ರಮದ ಪರಿಣಾಮಸ್ವರೂಪವಾಗಿಯೇ 'ಸರಸ್ವತಿ' ಇಂದಿಗೂ ಅಲಹಾಬಾದಿನಿಂದ ಪ್ರಕಾಶಿತವಾಗುತ್ತಿದೆ. ಇವರು ಸಂಪಾದಕರಷ್ಟೇ ಅಲ್ಲ; ಉಚ್ಚಕೋಟಿಯ ಆಲೋಚಕರೂ ಆಗಿದ್ದರು. 'ಸರಸ್ವತಿ' ಸಂಪಾದಕತ್ವದ ಕಾಲದಲ್ಲಿ ಅನೇಕರಿಗೆ ಪ್ರೋತ್ಸಾಹವಿತ್ತು, ಲೇಖಕರನ್ನಾಗಿ ಮಾಡಿದ ಶ್ರೇಯ ಇವರಿಗೆ ಸಲ್ಲುತ್ತದೆ. ಇವರು ರಾಷ್ಟ್ರೀಯ ವಿಚಾರವಾದಿಗಳು ಹಾಗು ಸುಧಾರಣಾವಾದಿಗಳು ಆಗಿದ್ದರು. 'ಮಾತೃಭಾಷೆಯ ಸೇವೆಯನ್ನು ಮಾಡದವನು ಹತ್ಯಗಾರ. ನಮ್ಮ ದೇಶ ಹಾಗು ಧರ್ಮದ ಕಲ್ಯಾಣ ಮಾತೃಭಾಷೆಯಲ್ಲಿ ರಚಿಸಲ್ಪಟ್ಟ ಸಾಹಿತ್ಯವೊಂದರಿಂದ ಮಾತ್ರ ಸಾಧ್ಯ"— ಎಂದು ಅಭಿಪ್ರಾಯ ಪಟ್ಟಿರುತ್ತಾರೆ, ತಮ್ಮ ಒಂದು ಪ್ರಬಂಧವಾದ 'ಸಾಹಿತ್ಯದ' ಮಹತ್ತ್ವವೆನ್ನುವುದರಲ್ಲಿ. ಆ ಪ್ರಬಂಧದ ರಸಭೂಯಿಷ್ಟವಾದ ಭಾಗಗಳನ್ನು ಇಲ್ಲಿ ಆಯ್ದು ಹೇಳಿದ್ದೇನೆ

ಜ್ಞಾನರಾಶಿಯ ಸಂಚಿತ ಕೋಶವೇ ಸಾಹಿತ್ಯ. ಭಾವಪ್ರಕಟನಾಯೋಗ್ಯವಾದ ಹಾಗು ನಿರ್ದೋಷಯುಕ್ತವಾದ, ಯಾವುದೇ ಭಾಷೆಯಾಗಲಿ, ಅದರಲ್ಲಿ ಸ್ವ-ಸಾಹಿತ್ಯವಿಲ್ಲದಿದ್ದಲ್ಲಿ, ಅದು ರೂಪವತಿಯಾದ ಭಿಕಾರಿಯಂತೆ, ಎಂದಿಗೂ ಆದರಣೀಯವಾಗುವುದಿಲ್ಲ. ಆ ಭಾಷೆಯ ಶೋಭೆ ಶ್ರೀಸಂಪನ್ನತೆ, ಮಾನ-ಮರ್ಯಾದೆಗಳೆಲ್ಲವೂ, ಅದರ ಸಾಹಿತ್ಯದ ಮೇಲೆಯೆ ಅವಲಂಬಿತವಾಗಿರುತ್ತದೆ ಒಂದು ಜನಾಂಗದ ಉನ್ನತಿ-ಅವನತಿ, ಉಚ್ಚ-ನೀಚ ಭಾವನೆಗಳು, ಧಾರ್ಮಿಕ ವಿಚಾರ, ಸಾಮಾಜಿಕ ಸಂಘಟನೆ, ಐತಿಹಾಸಿಕ ಘಟನಾಚಕ್ರ, ಮತ್ತು ರಾಜನೈತಿಕ ಸ್ಥಿತಿ-ಇವುಗಳೆಲ್ಲವನ್ನೂ ಪ್ರತಿಬಿಂಬಿಸುವ ಒಂದೇ ಒಂದು ಸಾಧನಸಂಪತ್ತೆಂದರೆ, ಆ ಜನಾಂಗದ ಭಾಷೆಯ ಗ್ರಂಥಸಾಹಿತ್ಯ. ಸಾಮಾಜಿಕ ಶಕ್ತಿ-ಅಶಕ್ತಿ; ಸಜೀವತೆ-ನಿರ್ಜೀವತೆ; ಸಭ್ಯತೆ-ಅಸಭ್ಯತೆ— ಇವೆಲ್ಲವನ್ನೂ ನಿರ್ಣಯಿಸುವ ಒಂದೇ ಒಂದು ಸಾಧನವೆಂದರೆ ಸಾಹಿತ್ಯ. ಯಾವ ಒಂದು ಸಮಾಜ ವಿಶೇಷತೆಯಲ್ಲಿಯೇ ತೆಗೆದುಕೊಳ್ಳಿ. ಸಾಹಿತ್ಯದ ಅಭಾವ ಅಥವಾ ನ್ಯೂನತೆ ಕಂಡು ಬಂದಿತೆಂದರೆ ಸಾಕು. ಅಂತಹ ಸಮಾಜ 'ಅಸಭ್ಯ' ಅಥವಾ 'ಅಪೂರ್ಣಸಭ್ಯ' ಎಂಬುದನ್ನು ನೀವು ನಿಸ್ಸಂದೇಹವಾಗಿ ಅರಿತುಕೊಳ್ಳಬಹುದು.

ಒಂದು ರಾಷ್ಟ್ರದ ಸಾಮಾಜಿಕ ಅವಸ್ಥೆಗೆ ಅನುಗುಣವಾಗಿ ಅದರ ಸಾಹಿತ್ಯವೂ ಇರುತ್ತದೆ. ಒಂದು ಭಾಷೆಯ ಸಜೀವತೆಯನ್ನು ನೋಡಬೇಕೆಂದರೆ, ಅದರ ಸಾಹಿತ್ಯರೂಪೀ ದರ್ಪಣದಲ್ಲಿ ಮಾತ್ರ ಸಾಧ್ಯ. ಆ ಸಾಹಿತ್ಯದರ್ಪಣದ ಮುಂದೆ ಹೋದೆವೆಂದರೆ ತೀರಿತು, ಒಂದು ಭಾಷೆಯ ಶಕ್ತಿ ಪ್ರಕೃತ ಹೇಗಿದೆ; ಹಿಂದೆ ಹೇಗಿತ್ತು ಎಂಬುದು ಸ್ಪಷ್ಟವಾಗಿ ಗೋಚರಿಸಿಬಿಡುತ್ತದೆ. ನೀವು ಆಹಾರ ತೆಗೆದುಕೊಳ್ಳುವುದನ್ನು ನಿಲ್ಲಿಸಿಬಿಡಿ. ನಿಮ್ಮ ಶರೀರ ಕ್ಷೀಣತೆಹೊಂದುತ್ತ ಬರುತ್ತದೆ. ಅನಂತರ, ಕಾಲಾನುಕಾಲಕ್ಕೆ ನಾಶಹೊಂದುತ್ತದೆ. ಇದೇ ರೀತಿ ನಿಮ್ಮ ಮೆದುಳನ್ನು, ಸಾಹಿತ್ಯರಸಾಸ್ವಾದನದಿಂದ ವಂಚಿತಗೊಳಿಸಿ ಬಿಡಿ; ಆಗ ಅದು ನಿಷ್ಕ್ರಿಯವಾಗಿ, ಕಾಲಾನುಕಾಲಕ್ಕೆ ಯಾವ ಕೆಲಸಕ್ಕೂ ಬಾರದಂತಾಗುತ್ತದೆ. ನಮ್ಮ ಶರೀರದ ಯಾವ ಅಂಗದಿಂದ ಯಾವ ಕೆಲಸವನ್ನು ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳದೆ ಹೋದಲ್ಲಿ ಆ ಅಂಗಕ್ಕೆ ಆ ಕ್ರಿಯಾಶಕ್ತಿಯೇ ನಷ್ಟವಾಗಿ ಹೋಗುವುದು. ಶರೀರಕ್ಕೆ ಪೋಷಕವಸ್ತು ಉತ್ತಮ ಆಹಾರ, ಮೆದುಳಿಗೆ ಪೋಷಕವಸ್ತು ಉತ್ತಮ ಸಾಹಿತ್ಯ, ಆದ್ದರಿಂದ ನಮ್ಮ ಬುದ್ಧಿಶಕ್ತಿಯನು ಕುಂಠಿತಗೊಳಿಸಿ ಕಾಲಾಂತರದಲ್ಲಿ ಶಕ್ತಿವಿಹೀನವಾಗುವಂತೆ ಮಾಡಲು ನಮ್ಮ ಅಪೇಕ್ಷೆಯಿಲ್ಲದಿದ್ದಲ್ಲಿ, ನಾವು ಮಾಡಬೇಕಾದ ಕರ್ತವ್ಯವೆಂದರೆ ಸಾಹಿತ್ಯವನ್ನು ಯಾವಾಗಲೂ ಅಭ್ಯಾಸ ಮಾಡುತ್ತಿರಬೇಕು; ಸಾಹಿತ್ಯ

ದಲ್ಲಿ ಸ್ವಾಧೀನ್ಯತೆಯನ್ನು ತರಲು, ಅದನ್ನು ಪುಷ್ಟಿಗೊಳಿಸಲು, ಅದರ ಸೃಷ್ಟಿಯನ್ನು ಹೆಚ್ಚಿಸುತ್ತಾ ಹೋಗಬೇಕು.

ಆದರೆ ಒಂದು ಮಾತನ್ನು ನಾವು ಜ್ಞಾಪಕದಲ್ಲಿಟ್ಟುಕೊಂಡು, ಎಚ್ಚರಿಕೆಯಿಂದ ವರ್ತಿಸಬೇಕು ಅಶುದ್ಧ ಆಹಾರದಿಂದ, ಶರೀರವು ರೋಗ ಪೀಡಿತವಾಗುವಂತೆ, ಅಶುದ್ಧ ಸಾಹಿತ್ಯದಿಂದ ನಮ್ಮ ಬುದ್ಧಿಶಕ್ತಿಯು ವಿಕಾರ-ಗ್ರಸ್ತವಾಗಿ ರೋಗಪೀಡಿತವಾಗುತ್ತದೆ. ಬುದ್ಧಿಶಕ್ತಿಯನ್ನೇ ಬಲಿಸುವ, ಶಕ್ತಿಸಂಪನ್ನಗೊಳಿಸುವ ಉತ್ತಮ ಸಾಹಿತ್ಯ ನಿರ್ಮಾಣವೇ ನಮಗೆ ಬೇಕು. ಬುದ್ಧಿಶಕ್ತಿಯ ವಿಕಾಸಕ್ಕೆ ಏಕಮೇವ ಸಾಧನೆಯೆಂದರೆ ಸಾಹಿತ್ಯವೆಂಬುದು ನಿರ್ವಿವಾದವಾದಂತಾಯಿತು ನಾವೂ ಜೀವಿಸಬೇಕು, ಸಭ್ಯತೆಯಲ್ಲಿ ನಾವೂ ಇತರ ದೇಶದವರನ್ನು ಸರಿಗಟ್ಟಬೇಕು ಎಂದು ಅಪೇಕ್ಷೆಯಿದ್ದಲ್ಲಿ, ನಾವೂ ಶ್ರಮಪೂರ್ವಕವಾಗಿ ಅತ್ಯಂತ ಉತ್ಸಾಹದಿಂದ ಸಾಹಿತ್ಯದ ಉತ್ಪಾದನೆ ಮತ್ತು ನಮ್ಮ ಪ್ರಾಚೀನ ಸಾಹಿತ್ಯದ ರಕ್ಷಣೆ ಮಾಡಲು ತೊಡಗೋಣ; ಅನಲ್ಲದೆ ಮಾನಸಿಕ ಶಕ್ತಿಯನ್ನು ಕಳೆದುಕೊಂಡು, ನಮ್ಮ ಇಂದಿನ ದಯನೀಯ ದೆಸೆಯಲ್ಲಿಯೇ ಬಿದ್ದುಕೊಂಡಿರಬೇಕೆಂದು ಇದ್ದರೆ, ಇಂದಿನಿಂದಲೇ ಸಾಹಿತ್ಯನಿರ್ಮಾಣದ ಆಡಂಬರವನ್ನು ವಿಸರ್ಜಿಸೋಣ!

ನಮ್ಮ ದೃಷ್ಟಿಯನ್ನೊಮ್ಮೆ ಇತರ ದೇಶಗಳ ಕಡೆಗೆ ಬೀರೋಣ. ಸಾಹಿತ್ಯವು ಅಲ್ಲಿಯ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಯಲ್ಲಿ ಎಂತೆಂತಹ ಪರಿವರ್ತನೆಯನ್ನು ಮಾಡಿದೆಯೆಂಬುದು ಗೋಚರವಾಗುವುದು. ಸಾಹಿತ್ಯವು ಅಲ್ಲಿ ಏನೇನು ಮಾಡಿದೆ? ಶಾಸನಪ್ರಬಂಧದಲ್ಲಿ ಬಿರುಗಾಳಿಯನ್ನೆಬ್ಬಿಸಿದೆ. ಧಾರ್ಮಿಕ ಆಚಾರ ವ್ಯವಹಾರಗಳ ಜಡವನ್ನೇ ಹಿಡಿದು ಅಲುಗಾಡಿಸಿದೆ ಸಾಹಿತ್ಯದಲ್ಲಿ ಅಡಗಿರುವ ಶಕ್ತಿ ತೋಪು, ತಲವಾರುಗಳಲ್ಲಿಯಾಗಲಿ, ಬಾಂಬು, ಅಣು ಶಕ್ತಿಗಳಲ್ಲಿಯಾಗಲಿ ಅಡಗಿಲ್ಲ. ಯುರೋಪಿನಲ್ಲಿ ಹಾನಿಕಾರಕವಾದ ಧಾರ್ಮಿಕ ರೂಢಿಗಳನ್ನು ಬೇರುಸಹಿತ ಕಿತ್ತೆಸೆದಿದೆ ಸಾಹಿತ್ಯ! ಜಾತೀಯ ಸ್ವಾತಂತ್ರ್ಯದ ಬೀಜ ಬಿತ್ತಿದೆ ಸಾಹಿತ್ಯ!! ವ್ಯಕ್ತಿಗತ ಸ್ವಾತಂತ್ರ್ಯ ಭಾವನೆಯನ್ನು ಕೂಡ ರೂಪಿಸಿ, ಪೋಷಿಸಿ, ಬೆಳಸಿದೆ ಸಾಹಿತ್ಯ! ಪತಿತ ದೇಶಗಳನ್ನುದ್ಧರಿಸಿದೆ ಸಾಹಿತ್ಯ! ಪೋಪ್ ಪ್ರಭುತ್ವವನ್ನು ತಡೆಗಟ್ಟಿದುದು ಯಾವುದು? ಫ್ರಾನ್ಸಿನಲ್ಲಿ ಪ್ರಜಾಸತ್ತೆಯ ಉತ್ಪಾದನೋನ್ನತಿಯನ್ನು ಮಾಡಿದುದು ಯಾವುದು? ಪದಾಕ್ರಾಂತ ಇಟಲಿಯ ಮಸ್ತಕವನ್ನು ಮೇಲೆತ್ತಿದುದಾವುದು? ಸಾಹಿತ್ಯ! ಸಾಹಿತ್ಯ!! ಸಾಹಿತ್ಯ!!!

ಶವಗಳಲ್ಲಿಯೂ ಜೀವಶಕ್ತಿ ಸಂಚಾರಗೊಳಿಸಬಲ್ಲ ಸಂಜೀವಿನಿಯ ಆಸವ ಸಾಹಿತ್ಯ. ಪತಿತರನು ದ್ಧರಿಸುವುದು ಸಾಹಿತ್ಯ! ಉನ್ನತಿಗೊಂಡವರನು ಇನ್ನಷ್ಟು ಉನ್ನತಿಯ ಶಿಖರಕ್ಕೊಯ್ಯುವುದು ಸಾಹಿತ್ಯ. ಇಂತಹ ಸಾಹಿತ್ಯ ಸೃಷ್ಟಿ ಮತ್ತು ರಚನೆಯನ್ನು ಯಾವ ದೇಶ, ಯಾವ ಜನತೆ ಮಾಡುವುದಿಲ್ಲವೊ, ಅದು ಅಜ್ಞಾನಾಂಧಕಾರದ ಕೂಪದಲ್ಲಿ ಬಿದ್ದು, ಒಂದಲ್ಲ ಒಂದು ದಿನ ತನ್ನ ಅಸ್ತಿತ್ವವನ್ನೆ ಕಳೆದುಕೊಳ್ಳುತ್ತದೆ; ಇದು ಸತ್ಯ. ಆದುದರಿಂದ ಸಮರ್ಥನಾಗಿದ್ದರೂ ಯಾವನು ಇಂತಹ ಮಹತ್ವಶಾಲಿಯಾದ ಸಾಹಿತ್ಯದ ಸೇವೆ ಹಾಗು ಅಭಿವೃದ್ಧಿಯನ್ನು ಮಾಡುವುದಿಲ್ಲವೋ, ಅದು ಸಾಧ್ಯವಿಲ್ಲದಿದ್ದರೆ ಅದರ ವಿಷಯದಲ್ಲಿ ಆಸಕ್ತಿಯನು ತೋರುವುದಿಲ್ಲವೋ ಅಂತಹನು ಸಮಾಜದ್ರೋಹಿ, ಜಾತಿದ್ರೋಹಿ. ಹೆಚ್ಚು ಹೇಳುವುದರಿಂದೇನು? ಅವನು ಆತ್ಮದ್ರೋಹಿ ಹಾಗು ಆತ್ಮಹಂತ!!

ಕೆಲವು ಬಾರಿ ಜರ್ಮನ್, ರಷ್ಯನ್, ಇಟಾಲಿಯನ್ ಇತ್ಯಾದಿ ದೇಶಭಾಷೆಗಳ ಮೇಲೆ ಫ್ರೆಂಚ್ ಭಾಷೆಯು ಬಹುಕಾಲದವರೆಗೆ, ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿದ್ದಂತೆ ಒಂದು ಸಮೃದ್ಧಶಾಲಿ ಭಾಷೆ ತನ್ನ ಸಾಹಿತ್ಯಸಂಪತ್ತಿನ ಬಲದಿಂದ, ಇತರ ಭಾಷೆಗಳ ಮೇಲೆ ಆಧಿಪತ್ಯ ನಡೆಸುತ್ತದೆ. ಇಂಗ್ಲೀಷ್ ಭಾಷೆಯೂ ಫ್ರೆಂಚ್ ಮತ್ತು ಲ್ಯಾಟಿನ್ ಭಾಷಾ ಪ್ರಭಾವದಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಕೆಲವು ವೇಳೆ ಇಂತಹ ಒಂದು ಪರಿಸ್ಥಿತಿ, ರಾಜನೈತಿಕ ಪ್ರಭಾವದಿಂದಲೂ ಉಂಟಾಗುತ್ತದೆ. ಅಪಜಯ ಹೊಂದಿದ ದೇಶಗಳ ಭಾಷೆಗಳು, ಜಯ ಸಾಧಿಸಿದ ದೇಶದ ಭಾಷೆಯ ಪ್ರಭಾವಕ್ಕೆ ಒಳಗಾಗುವುದುಂಟು. ಆಗ ಆ ದೇಶಭಾಷೆಗಳಲ್ಲಿ ಸಾಹಿತ್ಯರಚನೆಯು ನಿಂತುಹೋಗದೆ ಇದ್ದರೂ, ಅವುಗಳ ಅಭಿವೃದ್ಧಿಯು ಮುಂದಗತಿಯ್ಯೈದುವುದರಲ್ಲಿ ಸಂಶಯವಿಲ್ಲ. ಈ ರೀತಿಯ ಅಸ್ವಾಭಾವಿಕ ಒತ್ತಡದ ಪರಿಸ್ಥಿತಿಯು ಯಾವಾಗಲೂ ಇರುವುದಿಲ್ಲ. ಈ ರೀತಿ ಅಧಃಪತಿತ ಭಾಷೆಯ ಜನಾಂಗ ಎಚ್ಚೆತ್ತುಕೊಂಡಿತೆಂದರೆ, ಈ ಅನೈಸರ್ಗಿಕ ಆಚ್ಛಾದನೆಯನ್ನು ಕಿತ್ತೆಸೆದುಬಿಡುತ್ತವೆ. ಜರ್ಮನ್, ರಷ್ಯನ್, ಇಟಾಲಿಯನ್ ಮತ್ತು ಇಂಗ್ಲೀಷ್ ಸಹ ಬಹುಕಾಲದವರೆಗೆ ಫ್ರೆಂಚ ಮತ್ತು ಲ್ಯಾಟಿನ್ ಭಾಷೆಯ ಮಾಯಾಜಾಲದಲ್ಲಿ ಸಿಕ್ಕಿ ತೊಳಲುತ್ತಿದ್ದುವು. ಆದರೆ ಈ ಮಾಯಾಜಾಲವನ್ನು ಅವು ಕಿತ್ತೆಸೆದು, ಈಗ ಬಹುದಿನಗಳಾಗಿಹೋದವು ಈಗ ಅವು ತಮ್ಮ ಭಾಷೆಯಲ್ಲಿಯೇ ಸಾಹಿತ್ಯವನ್ನು ಅಭಿವೃದ್ಧಿಗೊಳಿಸುತ್ತಿವೆಯಲ್ಲದೆ, ವಿದೇಶೀ ಭಾಷೆಗಳಲ್ಲಿ ಮರೆತೂ ಗ್ರಂಥರಚನೆ ಹಾಗಿರಲಿ, ಅದರ ಬಗೆಗೆ ವಿಚಾರವನ್ನು ಕೂಡ ಮಾಡುತ್ತಿಲ್ಲ. ಸ್ವಭಾಷೆಯ ಸಾಹಿತ್ಯರಚನೆಯೇ ತನ್ನ ಸಮಾಜ ಹಾಗು ದೇಶೋನ್ನತಿಯ ಸಾಧನೆ. ಪರಭಾಷೆಯಲ್ಲಿ ಪರಿಪೂರ್ಣ ಜ್ಞಾನಪ್ರಾಪ್ತಿಹೊಂದಿ, ಅದರಲ್ಲಿ ಮಹತ್ವಪೂರ್ಣ ಗ್ರಂಥರಚನೆ ಮಾಡಿದಾಗಲೂ, ಅದರಿಂದ ವಿಶೇಷ ಫಲಪ್ರಾಪ್ತವಾದಂತಾಗಲಿಲ್ಲ. ಆದರಿಂದ ತನ್ನ ದೇಶಕ್ಕೆ ಕಿಂಚಿತ್ತಾನರೂ ಲಾಭವಾಗುವುದಿಲ್ಲ. ತನ್ನ ತಾಯಿಯನ್ನು ನಿಸ್ಸಹಾಯ, ನಿರುಪಾಯ ಹಾಗು ನಿರ್ಧನ ಸ್ಥಿತಿಯಲ್ಲಿ ಬಿಟ್ಟು, ಪರರ ಸೇವಾ ಶುಶ್ರೂಷೆಯನ್ನು ಅತ್ಯಂತ ಭಕ್ತಿಯಿಂದ ಮಾಡುವಂತಹ ಅಧಮ ಕೃತಘ್ನನಿಗೆ ಎಂತಹ ಪ್ರಾಯಶ್ಚಿತ್ತವಾಗಬೇಕೆಂಬುದನ್ನು ಮನು, ಯಾಜ್ಞವಲ್ಕ್ಯ ಅಥವಾ ಆಪಸ್ತಂಭರೇ ನಿರ್ಣಯಿಸಬೇಕಲ್ಲದೆ, ಸಾಮಾನ್ಯರಿಂದ ಅದು ಶಕ್ಯವಿಲ್ಲ

ಹಾಗೆಂದಮಾತ್ರಕ್ಕೆ ಪರಭಾಷೆಗಳನ್ನು ಅಭ್ಯಾಸ ಮಾಡಲೇಕೂಡದೆಂದು ನನ್ನ ಅಭಿಪ್ರಾಯವಲ್ಲ. ಅವಶ್ಯಕತೆ, ಅನುಕೂಲ ಮತ್ತು ಅವಕಾಶಗಳಿದ್ದಲ್ಲಿ, ಒಂದಲ್ಲ ಹತ್ತು ಭಾಷೆಗಳನ್ನಾದರೂ ಕಲಿತು ನಮ್ಮ ಜ್ಞಾನಾರ್ಜನೆಯನ್ನು ಹೆಚ್ಚಿಸಿಕೊಳ್ಳೋಣ, ಬೇಡವೆನ್ನುವುದಿಲ್ಲ. ಯಾವ ಭಾಷೆಯಲ್ಲಿಯೂ ನಮಗೆ ದ್ವೇಷ ಬೇಡ; ಜ್ಞಾನ ಎಲ್ಲಿ

ದೊರೆತರೂ ಸರಿಯೆ. ಅದನ್ನು ಗ್ರಹಿಸಲೇಬೇಕು. ಆದರೆ ನಮ್ಮ ಭಾಷೆ, ನಮ್ಮ ನುಡಿ, ನಮ್ಮ ತಾಯಿನುಡಿಯಲ್ಲಿಯ ಸಾಹಿತ್ಯಕ್ಕೆ ಹೆಚ್ಚು ಪ್ರಾಧಾನ್ಯ ಕೊಡಬೇಕಾದುದು ನಮ್ಮ ಕರ್ತವ್ಯಧರ್ಮ. ಏಕೆಂದರೆ ನಮಗೆ, ನಮ್ಮ ದೇಶಕ್ಕೆ, ನಮ್ಮ ಸಮಾಜಕ್ಕೆ ಉಪಕಾರ ಹಾಗು ಕಲ್ಯಾಣ, ನಮ್ಮ ಸಾಹಿತ್ಯೋನ್ನತಿಯಿಂದಲೇ ಆಗಲು ಸಾಧ್ಯವಲ್ಲದೆ ಬೇರೆಯಲ್ಲ ಜ್ಞಾನ, ವಿಜ್ಞಾನ, ಧರ್ಮ ಹಾಗು ರಾಜಕೀಯ ಇವುಗಳ ಜ್ಞಾನ ನಮ್ಮ ತಾಯಿನುಡಿಯಲ್ಲಿಯೇ ಆಗಲಿ ಆದುದರಿಂದ ಸ್ವಭಾಷಾ ಸಾಹಿತ್ಯಸೇವೆ, ರಚನೆ, ಅಭಿವೃದ್ಧಿ, ವ್ಯಾಸಂಗ, ರಕ್ಷಣೆ ಸರ್ವ ದೃಷ್ಟಿಯಿಂದಲೂ ನಮಗೆ ಪರಧರ್ಮ, ಶ್ರೇಷ್ಠ ಕರ್ತವ್ಯ.

ನಮ್ಮವು ಕೆಲವು ಮಾತು

ಆಚಾರ್ಯ ಶ್ರೀ ಮಹಾವೀರಪ್ರಸಾದ ದ್ವಿವೇದಿಯವರ ಅಭಿಪ್ರಾಯಗಳು ಭಾರತದಲ್ಲಿಯ ಎಲ್ಲ ಪ್ರಾದೇಶಿಕರ ಭಾಷಾಸಾಹಿತ್ಯಗಳಿಗೂ ಅನ್ವಯಿಸುವಂತಿವೆ. ನಮ್ಮ ದೇಶದಲ್ಲಿ ಜೇತೃಗಳ ಭಾಷೆಯಾದ ಇಂಗ್ಲಿಷ್ ಭಾಷೆಯ ಮೋಹವು ನಮ್ಮಲ್ಲಿಯ ಅನೇಕ ಬುದ್ಧಿವಂತರೆನ್ನಿಸಿಕೊಳ್ಳುವವರನ್ನೂ ವಿಚಾರಗೇಡಿಗಳನ್ನಾಗಿ ಮಾಡಿದೆ. ಅವರು ಓದಿದರೂ ಇಂಗ್ಲಿಷ್ ಭಾಷೆಯಲ್ಲಿಯೇ ಗ್ರಂಥಾದಿಗಳನ್ನು ಬರೆಯುವರು. ತಂತಮ್ಮ ಪ್ರಾದೇಶಿಕ ಭಾಷಾಸಾಹಿತ್ಯವು ಎಂತಹದಿದೆಯೆಂಬುದನ್ನು ಕಣ್ಣುಬಿಟ್ಟು ನೋಡುವುದಿಲ್ಲ; ಆ ಭಾಷೆಯಲ್ಲಿ ಬರೆಯುವ ಮನಸ್ಸನ್ನು ಮಾಡುವುದಿಲ್ಲ.

ಭಾಷೆಯ ಅಭ್ಯಾಸವೆಂಬುದು ನಮ್ಮ ಜೀವನವನ್ನು ಪರಿವರ್ತನಗೊಳಿಸುವಂತಹ ಪ್ರಭಾವ ಶಾಲಿಯಾದ ಒಂದು ಸಾಧನವಾಗಿದೆ. ಯಾವ ಭಾಷಾಜ್ಞಾನದೊಂದಿಗೆ ನಮಗೆ ಜಗತ್ತಿನ ಪರಿಚಯವಾಗುತ್ತ ಹೋಗುವುದೊ, ಆ ಭಾಷೆಯ ವಿಷಯದಲ್ಲಿ ಒಂದು ಬಗೆಯ ಆಸಕ್ತಿ-ಆತ್ಮೀಯತೆಗಳು ತಲೆದೋರುತ್ತವೆ. ಅದರಂತೆಯೆ ಯಾವ ಭಾಷೆಯ ಸಾಹಿತ್ಯವು ನಮ್ಮ ಹೃದಯ-ಮನಸ್ಸುಗಳನ್ನು ವಿಕಾಸಿಸುತ್ತ ಹೋಗುತ್ತದೊ. ಆ ಭಾಷೆಯ ಸಾಹಿತ್ಯವೇ ನಮಗೆ ಪ್ರಿಯವಾಗಿ ನಿಲ್ಲುತ್ತದೆ. ಪರಿಸ್ಥಿತಿಯ ಮೂಲಕ ನಮ್ಮ ದೇಶದ ಸುಶಿಕ್ಷಿತ ಜನತೆ ಇಂಗ್ಲಿಷ್ ಭಾಷೆಯ ಮೂಲಕವೇ ಲೋಕಪರಿಚಯವನ್ನು ಮಾಡಿಕೊಂಡಿತು; ಇಂಗ್ಲಿಷ್ ಸಾಹಿತ್ಯವನ್ನೋದಿಯೆ ಹೃದಯ-ಮನಗಳನ್ನು ಹಿಗ್ಗಿಸಿಕೊಂಡಿತು. ಇದರಿಂದ ಆದ ಒಂದು ದೊಡ್ಡ ನಷ್ಟವೆಂದರೆ ನಮ್ಮಲ್ಲಿಯ ಕಲಿತ ಜನರೆಲ್ಲ ಸಾಂಸ್ಕೃತಿಕ ಗುಲಾಮಗಿರಿಗೆ ಒಳಗಾದರು; ಪ್ರಾದೇಶಿಕ ಭಾಷಾ ಸಾಹಿತ್ಯದಲ್ಲಿ ಕಾಲಾನುಗುಣವಾದ ಸಾಹಿತ್ಯ ನಿರ್ಮಿತಿಯ ಕೊರತೆ ತಲೆದೋರಿತು. ಈಗ ಭಾರತೀಯರಿಗೆ, ರಾಜಕೀಯ ಸ್ವಾತಂತ್ರ್ಯವೇನೋ ಬಂದಿದೆ. ಆದರೆ ನಮ್ಮ ಸುಶಿಕ್ಷಿತ ವರ್ಗದ ಸಾಂಸ್ಕೃತಿಕ ಪಾರತಂತ್ರ್ಯ ಇದುವರೆಗೂ ಇದ್ದ ಹಾಗೆಯೆ ಇದೆ.

ಬಿಸ್ಕೀಟು-ಕೇಕುಗಳು ನಮಗೆ ಹೊಸ ಬಗೆಯಾಗಿ ಕಂಡುವು. ಪಾಶ್ಚಿಮಾತ್ಯರು ನಮಗೆ ಅವುಗಳನ್ನು ಒದಗಿಸಿಕೊಟ್ಟರು; ತಿನ್ನುವ ರುಚಿಯನ್ನು ಹಚ್ಚಿದರು ಅಂತಹ ಕೇಕು-ಬಿಸ್ಕೀಟುಗಳನ್ನು ನಮ್ಮ ಮನೆಯಲ್ಲಿಯೇ ನಮ್ಮ ಗೃಹಿಣಿಯರಿಂದ ಮಾಡಿಸಿ ತಿನುವುದು ಸ್ವಾತಂತ್ರ್ಯವೆನಿಸುವುದೊ; ಇಲ್ಲವೆ ಅವುಗಳನ್ನು ಮಾಡುವ ರೀತಿಯನ್ನೇ ಅರಿತುಕೊಳ್ಳದೆ ವಿದೇಶಗಳಿಂದ ಅವುಗಳನ್ನು ತರಿಸಿ ತಿನ್ನುವುದು ಸ್ವಾತಂತ್ರ್ಯವೆನಿಸಿಕೊಳ್ಳುವುದೊ? ಹೀಗೆ ತರಿಸಿ ತಿನ್ನುವ ನಾಗರಿಕರು ರಾಷ್ಟ್ರೀಯ ಭಾವನೆಯುಳ್ಳವರೆಂದು ಎನಿಸಿಕೊಳ್ಳುವರೊ? ರಾಷ್ಟ್ರೀಯ ಭಾವನೆಯು ಇಲ್ಲದ ನಾಗರಿಕನು ತನ್ನ ಅಭಿರುಚಿಯ ಸ್ವಾರ್ಥವನ್ನು ಪೂರಯಿಸಿಕೊಳ್ಳಲು ಎಂತಹ ಅರಾಷ್ಟ್ರೀಯ ಕಾರ್ಯವನ್ನೂ ಮಾಡಲಿಕ್ಕೆ ಹಿಂದೆ ಮುಂದೆ ನೋಡಲಾರ. ತನ್ನ ದೇಶದ ಸಾಹಿತ್ಯದಿಂದ ಪರಾಙ್ಮುಖನಾಗಿ ನಿಂತು ಅನ್ಯ ಭಾಷಾ ಸಾಹಿತ್ಯದ ಬೆನ್ನನ್ನು ಹತ್ತಿದವನ ಹಣೆಬರಹವೂ ಹೀಗೆಯೆ ಆಗುವುದೆಂದು ಹೇಳಬಹುದು. ಆದುದರಿಂದಲೇ ನಮ್ಮ ನಾಡಿನ ಬಾಲಕರಿಗೆ ಲೋಕದ ಪರಿಚಯವೂ ಅನುಭವಜ್ಞಾನವೂ ಅವರವರ ಪ್ರಾದೇಶಿಕ ಭಾಷೆಯಲ್ಲಿಯೇ ಆಗುವುದರ ಆಗತ್ಯದ ಕಡೆಗೆ ನಮ್ಮ ಸರಕಾರವೂ ಮುಂದಾಳುಗಳೂ ಹೆಚ್ಚು ಹೆಚ್ಚಾಗಿ ಲಕ್ಷ್ಯ ಕೊಡುತ್ತ ಹೋಗಬೇಕು. ಯಾವ ಮಗುವೂ ಮೊಲೆ ಹಾಲನ್ನುಣ್ಣಲು ತನ್ನ ತಾಯಿ ಬಳಿಗೇ ಹಾರಯಿಸಿ ಹೋಗುವುದಲ್ಲದೆ ಚೆಲುವೆಯೆಂದೊ ಹಣಗಾತಿಯೆಂದೊ. ಬೇರೆಯ ಸ್ತ್ರೀಯರ ಬಳಿಗೆ ಹೋಗದು ಅಲ್ಲದೆ ತಾಯಲ್ಲದ ಆ ಸ್ತ್ರೀಯು ಮಗುವನ್ನು ಮುಂದೆ ಕರೆದು ಮೊಲೆಯುಣಿಸುವುದರಲ್ಲಿ ಯಾವುದಾದರೊಂದು ಸ್ವಾರ್ಥಸಾಧನೆಯ ಉದ್ದೇಶವಾದರೂ ಇರಬೇಕು; ಇಲ್ಲವೆ ಪೂತನಿಯಂತೆ ವಿಷಸ್ತನ್ಯವನ್ನೂಡಿ ಮಗುವನ್ನು ಕೊಲ್ಲುವ ಉದ್ದೇಶವಾದರೂ ಇರಬೇಕು. ರಾಷ್ಟ್ರೀಯತ್ವವನ್ನು ಕೊಲ್ಲುವುದೆಂದರೆ ವ್ಯಕ್ತಿಯನ್ನು ಕೊಂದಂತೆಯೆ ಅಲ್ಲವೆ?

ಜ್ಞಾನೋಪಾಸನೆಗಾಗಿ ಬೇರೆ ಬೇರೆ ಭಾಷೆಯನ್ನು ಕಲಿಯಲಿ, ಆ ಭಾಷೆಯಲ್ಲಿಯ ಉತ್ತಮೋತ್ತಮ ಗ್ರಂಥಗಳನ್ನೋದಲಿ; ಆದರೆ ವ್ಯಕ್ತಿ ತನ್ನ ಪ್ರಾದೇಶಿಕ ಭಾಷೆಯ ಮಮತೆ, ಅದರ ಸಾಹಿತ್ಯದ ಉನ್ನತಿ ಇವುಗಳ ಕಡೆಗೆ ಸಂಪೂರ್ಣವಾದ ಎಚ್ಚರಿಕೆಯನ್ನು ಕಾಯ್ದುಕೊಳ್ಳಲಿ ಇಂತಹ ಜಾಗೃತಿಯಿರುವ ವ್ಯಕ್ತಿಗಳು ಎಂದೂ ಅರಾಷ್ಟ್ರೀಯರಾಗಲಾರರು. ತನ್ನಲ್ಲಿ ಇಲ್ಲದುದನ್ನು ತನ್ನ ನಾಡಿನ ಜನರ ಅನುಕೂಲತೆಯ ದೃಷ್ಟಿಯನ್ನಿರಿಸಿಕೊಂಡು, ಇನ್ನೊಂದು ಕಡೆಯಿಂದ ಸಂಪಾದಿಸಿ ಒದಗಿಸುವುದು ಎಂದೂ ಅರಾಷ್ಟ್ರೀಯತೆಯೆನಿಸದು.

ಜ್ಞಾನಸಂಪಾದನೆಗಾಗಿ ಪರಭಾಷೆಯ ಅಪೂರ್ವ ಸಾಹಿತ್ಯವನ್ನು ಓದುವವರನ್ನು ನಾವು ಬಿಟ್ಟುಬಿಟ್ಟರೂ, ಇಂದು ದೈನಂದಿನ ಪತ್ರಿಕೆಗಳನ್ನೂ, ಕತೆ-ಕಾದಂಬರಿಗಳನ್ನೂ, ಇಂಗ್ಲಿಷಿನಲ್ಲಿಯೆ ಓದಬೇಕೆಂಬ ಚಟವನ್ನಿರಿಸಿಕೊಂಡವರು, ಒಂದು ರೀತಿಯಿಂದ ದೇಶೀಯ ಸಾಹಿತ್ಯಗಳ ವಿದ್ರೋಹಿಗಳೆಂದೇ ಹೇಳಬೇಕಾಗುವುದು. ಇವರ ಹಣವು ವಿದೇಶಗಳಿಗೆ ಹೋಗುವುದಿಷ್ಟೇ ಹೊರತು, ಸ್ವಂತದ ರಾಷ್ಟ್ರದ ಸಾಂಸ್ಕೃತಿಕ ಜ್ಞಾನವಾಗುವುದಿಲ್ಲ. ಇವರಲ್ಲೆಲ್ಲ ಸ್ವಸಾಹಿತ್ಯದ ಪ್ರೇಮವು ಮೂಡದೆ ಹೋದರೆ, ಯಾವ ಪ್ರಾದೇಶಿಕ ಭಾಷಾ ಸಾಹಿತ್ಯವೂ ಸಮೃದ್ಧಿಯನ್ನು ಪಡೆಯಲಾರದು. ಅಸಮೃದ್ಧ ಸಾಹಿತ್ಯವು ನಾಡಿನ ಜನತೆಗೆ ಸರಿಯಾದ ಬೆಳಕನ್ನು ಒದಗಿಸಲಾರದು.

— ಸಂಪಾದಕ 'ಜಯಂತಿ'

ಧರ್ಮಪತ್ನಿ

(ಸಾಮಾಜಿಕ ವಿಡಂಬನೆ)

ಶ್ರೀ ಧಾರವಾಡಕರ ಯಲಗುರ್ದರಾಯರು, ಬಿ. ಎ., ಎಲ್‌ಎಲ್. ಬಿ., ಬಾಗಲಕೋಟೆ

ಪಾತ್ರವರ್ಗ

ಅಜಮಿಳ — ಅವ – ಪಾಪ, ಬಡಶಾಲೆಯ ಮಾಸ್ತರು.
ಸಾವಿತ್ರಿ — ಇಕೆ – ಅಜಮಿಳನ ಹೆಂಡತಿ. ಕೇವಲ ಪುರಾಣ ಬ್ರಾಹ್ಮಣರಲ್ಲಿ ಶ್ರದ್ಧೆ ಇದ್ದ ಅಜ್ಞಾನಿ.
ನಾರಾಯಣ — ಪುತ್ರ
ಗೋವಿಂದ, **ರಾಮು** } — ಅಜಮಿಳನ ಶಿಕ್ಷಕ ಸ್ನೇಹಿತರು.
ಕಾಲ : — ಇಂದಿನ ಗಂಡನ ಆಪತ್ಕಾಲ.
ಸಮಯ :— ಸಮಾಜದ ಸಂಧಿವಾತದ ಸಮಯ

卐

ಪ್ರವೇಶ ೧.

(ಮನೆಯ ಒಂದು ಕೋಣೆ. ಅದರೊಳಗೆ ಒಂದು ಕೋಣೆ; ಹೊರಗಿನ ಒಂದು ಕೋಣೆಯಲ್ಲಿ ಒಂದು ಪಲ್ಲಂಗ, ಒಂದು ಸಣ್ಣ ಮೇಜು, ಅದರ ಮೇಲೆ ಒಂದೆರಡು ಮಾಸಿಕ ಪತ್ರಗಳು; ಒಂದು ದೀಪದ ಸ್ಟ್ಯಾಂಡು, ಒಂದು ಮುಖ ನೋಡುವ ಕನ್ನಡಿ, ಔಷಧದ ಬಾಟ್ಲಿ, ನಾಲ್ಕು ಕಪ್ಪು ಬಸಿಗಳು, ಅದರ ಕೆಳಗೆ ಒಂದು ಸ್ಟೌ, ೨ ಪಾತ್ರೆಗಳು, ಚಹಾ ಸಕ್ಕರಿ ಡಬ್ಬಿಗಳು.)

(ಅಜಮಿಳನು ಪಲ್ಲಂಗದ ಮೇಲೆ ಮಲಗಿರುತ್ತಾನೆ. ಜಡ್ಡಿಗೆ ಹಣ್ಣಾಗಿ ಸ್ವಲ್ಪ ನರಳುತ್ತಾನೆ.)

ಅಜಮಿಳ : – ಏನು ವಿಚಿತ್ರ! ನಾಲ್ಕು ದಿವಸಗಳಲ್ಲಿ ಹಣ್ಣಾಗಿ ಬಿಟ್ಟೆ. ಇಷ್ಟಾದರೂ ಶಾಲಿ ಎಲ್ಲಿ ಬಿಡುತ್ತದೆ! ಏಳು ದಿವಸ ರಜೆ ಬೇಡಿದರೆ.... ನಾಲ್ಕು ದಿವಸ ಕೊಟ್ಟಾನ. ಇನ್ನು ಮೂರು ದಿವಸ ಕೊಟ್ಟಿದ್ದರೆ ಇವರ ಅಪ್ಪನ ಗಂಟು ಏನು ಹೋಗುತ್ತಿತ್ತೋ ದೇವರಿಗೇ ಗೊತ್ತು. ಸಂನ್ಯಾಸಿ, ಹೆಂಡರಿಲ್ಲ, ಮಕ್ಕಳಿಲ್ಲ. ಎರತಿನಿಯ ಸನ ಸುಖದುಃಖ ಇವನಿಗೆ ಹ್ಯಾಗೆ ತಿಳಿಯಬೇಕು? ಪ್ರಪಂಚ ಬೇಸರನಾಗಿ ಹೋಗಿದೆ. ಒಂದು ದಿವಸವಾದರೂ ಊಟಮಾಡಿ ಶಾಲೆಗೆ ಹೋಗಿಲ್ಲ; ಶಾಲೆ ಬಿಟ್ಟು ಸಂಜೆಯಾದ ಮೇಲೆ ಮನೆಗೆ ಬಂದು ಎರಡು ತುತ್ತು ಬಾಯಲ್ಲಿ ಹಾಕುವುದು. ಮನೆಯ ನಾರಿಯೆಂದರೆ ಒಂದು ಮಾರಿಯೇ ಸರಿ. ಆಕೆಯ ವೇಳಾಪತ್ರಿಕೆ ನೋಡಿರಿ! ಇಲ್ಲಿಯೇ ಗೂಟಕ್ಕೆ ಹಾಕೀನಿ; ಮುಂಜಾನೆ ೬ಕ್ಕೆ ಏಳುವುದು; ಏಳರವರೆಗೆ ಪ್ರಾತರ್ವಿಧಿ; ಅಲ್ಲಿಂದ ದೇವರ ಮುಂದೆ ರಂಗೋಲಿ; ಅವಲ್ಲದೆ ಹನ್ನೆರಡು ಹೊಸ್ತಿಲುಗಳಿಗೆ ರಂಗೋಲಿ; ಎಂಟರಿಂದ ಉಪಗಾರಣೆ, ಉತಸಾರಣೆ! ಒಂಭತ್ತಕ್ಕೆ ಹತ್ತೀಬುಟ್ಟಿ ಬಗಲಲ್ಲಿಟ್ಟುಕೊಂಡು ಪುರಾಣಕ್ಕೆ ಹೋಗುವನು; ತಿರುಗಿ ೧೨ಕ್ಕೆ ಮನೆಗೆ ಬರುವದು; ಅಲ್ಲಿಂದ ಮೈ ತೊಳೆದುಕೊಂಡು ಗೌರಿಯ ಪೂಜೆ, ಗಂಗೆಯ ಪೂಜೆ, ತುಳಸಿಯ ಪೂಜೆ— ಇವೆಲ್ಲ ಮುಗಿಯಬೇಕು. ಆ ಮೇಲೆ ೧ ಗಂಟೆಗೆ ಅಡಿಗೆಗೆ ಪ್ರಾರಂಭ. ನಾಲ್ಕಕ್ಕೆ ಸರಿಯಾಗಿ ಬ್ರಾಹ್ಮಣರ ಕೂಡ ಪಂಕ್ತಿ. ನನ್ನ ಪಂಕ್ತಿಯಂತೂ ತಿಂಗಳಲ್ಲಿ ಒಮ್ಮೆ-ಯಾಗಲೀ, ಎರಡು ಸಾರೆಯಾಗಲೀ ಮನೆಯಲ್ಲಿ. ದಿನಾಲು ನನ್ನ ಪಂಕ್ತಿ ಪದ್ಮನಾಭ ಭವನದಲ್ಲೋ Guest Houuse ನಲ್ಲೋ! ಆರಕ್ಕೆ ಸಾಲೆಯಿಂದ ಬಂದು ಊಟ ಮಾಡುವುದು. ಪ್ರತಿನಿತ್ಯ ಏಕಭುಕ್ತ ಆಯ್ತು, ಇತ್ತ ಧರ್ಮ ಸಾಧನೆಯಾದಂತಾಯಿತು; ಮೇಲಾಗಿ ವೆಚ್ಚದಲ್ಲಿ ಉಳಿತಾಯವೂ ಆಯ್ತು. ರೇಶನ್ ದಿನ.... ಇದೊಂದು ಅನುಕೂಲತೆಯೇ. ಇನ್ನು ನನ್ನ ವೇಳಾಪತ್ರಿಕೆ ನೋಡಿ. ಮುಂಜಾನೆ ೬ರಿಂದ ೭ರ ವರೆಗೆ ಪ್ರಾತರ್ವಿಧಿ. ಆ ಮೇಲೆ ಸ್ನಾನ. ದಿನಾಲು ತಣ್ಣೀರಿನ ಸ್ನಾನವೇ. ಸಂಧ್ಯಾವಂದನೆ ಮುಗಿಸಿ ದೇವರ ತಲೆಯಮೇಲೆ ನೀರು ಹಾಕಿ ತೀರ್ಥ ಮಾಡಿಸುವುದು. ಇಬ್ಬರು ಬ್ರಾಹ್ಮಣರು ಪ್ರತಿನಿತ್ಯ ಊಟಕ್ಕೆ ಬಂದರೂ, ಪೂಜೆಯು ನನ್ನದೇ. ಪ್ರತಿಷ್ಠಿತ ಆಚಾರ್ಯರು ದೇವರ ಪೂಜೆಯನ್ನು ಮಾಡಬಾರದೆಂದು ಶಾಸ್ತ್ರನಿರ್ಬಂಧವಿದೆಯಂತೆ! ಆದ್ದರಿಂದ ಆ ಕೆಲಸವೆಲ್ಲ ನನ್ನದೇ ಆಗಿದೆ. ಪೂಜೆ ಮಾಡಿ ಸ್ಟೌ ಹೊತ್ತಿಸಿ ಚಹಾ ಮಾಡುವದು. ನಾನೇ ಹುಡುಗರಿಗೆ ಚಹಾದ ಗುಟಕ ಕುಡಿಸುವದು, ಹುಡುಗರ ಮೋರೆ ತೊಳೆಸಿ ಅಂಗಿಹಾಕಿ ಆಡಲಿಕ್ಕೆ ಕಳಿಸುವದು, ಅಥವಾ ಶಾಲೆಗೆ ಕಳಿಸುವದು. ಅಲ್ಲಿಂದ ಪೇಟೆಗೆ ಹೋಗಿ ಪಲ್ಲೆಕಾಯಿ ತರಬೇಕು. ಪಲ್ಲೆಕಾಯಿ ಹೆಚ್ಚಿ ಒಲೆಯಮುಂದೆ ಇಡುವದು. ಒಲೆಗೆ ಬೆಂಕಿಹಾಕಿ, ಬೇಳೆ ಕುದಿಸುವ ಪಾತ್ರೆಯನ್ನು ಅದರ ಮೇಲಿಡಬೇಕು. ಇವೆಲ್ಲ ಕೆಲಸಗಳು ಈಗ ಗಂಡಸರ ಪಾಲಿಗೇ ಬಂದಿವೆ. ಆ ಮೇಲೆ ಶಾಲೆಯ ಪಠ್ಯ ಪುಸ್ತಕಗಳನ್ನು ಓದಬೇಕು. ಅಷ್ಟರಲ್ಲಿಯೇ ಆ ಶಾಲೆಯ ಯಮನ ಗಂಟೆಯಾಗುತ್ತದೆ. ಓಡಿಯೋಡಿ ಶಾಲೆಗೆ ಹೋಗಬೇಕು. ಹೆಡ್-ಮಾಸ್ತರನು ಹಾದಿನೋಡುತ್ತ ಹೊಂಗೇ ನಿಂತಿರುತ್ತಾನೆ. ಹನ್ನೊಂದು

ಹೊಡಿಯುವದಕ್ಕೆ ಸರಿಯಾಗಿ ಅವನ ಕೈಮುಟ್ಟಿ "ಘಾಜಾರಿಗೋ" ಅಂದರೆ ಆಯಿತು. ಮುಂದೆ ಹುಡುಗರಿಗೆ ಕಲಿಸಲಿ, ಕಲಿಸದಿರಲಿ; ಸರ್ಕಾರಕ್ಕೆ ಬಾಧ್ಯಸ್ಥನಾದಂತಾಯಿತು. (ಅಷ್ಟರಲ್ಲಿ ಮಗ ನಾಣಪ್ಪ ಬರುವನು.) ಯಾಕೆ ತೀವ್ರ ಬಂದಿ ಈ ದಿನ ಸಾಲಿ ಇಲ್ಲವೇನು?

ನಾರಾಯಣ:— ಕಾಕಾ ನಿನಗೆ ಗೊತ್ತಿಲ್ಲವೇ! ಈ ದಿನ ಸ್ವಾತಂತ್ರ್ಯದ ದಿನ. ಈ ದಿವಸ ಸಾಲೆಗೆ ಸೂಟಿ ಅದೆ. ಧ್ವಜವಂದನೆ ಮಾಡಿ ತಿರುಗಿ ಬಂದೆವು. ಇದು ನೋಡು ಬೆಂಡು ಬತ್ತಾಸ. ಎಷ್ಟು ಕೊಟ್ಟಿರುವರು!

ಅಜಮಿಳ:— ಇಬ್ಬರೂ ಕೂಡಿ ತಿನ್ನಿರಿ. ಬಿಸಿಲಲ್ಲಿ ಹೋಗಬೇಡಿರಿ. ತಮ್ಮನಿಗೂ ಸ್ವಲ್ಪ ಕೊಡು. ಇಬ್ಬರೂ ನಿಮ್ಮ ಆಯಿ ಮನೆಯಲ್ಲಿಯೇ ಆಡಿರಿ. (ನಾರಾಯಣ ಹೋಗುವನು.)

ಪ್ರವೇಶ ೨.

(ನಾಲ್ಕು ಮಂದಿ ಸ್ನೇಹಿತರು. ಗೋವಿಂದ ಶಾಮು, ರಾಮು, ಭೀಮು ಕೂಡಿ ಒಳಗೆ ಬರುವರು.)

ಗೋವಿಂದ:— ನಮಸ್ಕಾರ; ನಿನ್ನ ಪ್ರಕೃತಿ ಈಗ ಹೇಗಿದೆ ಅಜಮಿಳಾ?

ಅಜಮಿಳ:— ಹ್ಯಾಂಗ ಏನು? ಕೂತುಕೊಳ್ಳಿರಿ. ನೀವು ಬಂದದ್ದೇ ಆಶ್ಚರ್ಯ! ಬಡವರ ಮನೆಗೆ ಭಾಗೀರಥಿ ಬಂದಂತಾಯಿತು. ನಾಲ್ಕು ದಿವಸ ಮೈಮೇಲೆ ಎಚ್ಚರವೇ ಇದ್ದಿಲ್ಲ. ಊಟವಿಲ್ಲ, ಉಡಿಗೆ ಇಲ್ಲ, ಸ್ನಾನವಿಲ್ಲ, ಮಿತ್ರದರ್ಶನವೂ ಇಲ್ಲ. ನಿಮ್ಮನ್ನು ಕಾಣುವೆನೋ ಇಲ್ಲವೋ ಅಂತಾ ಅನಿಸುತ್ತಿತ್ತು. ಇಕಾ ಈಗ ದರ್ಶನ ಕೊಟ್ಟಿರಿ ಸಾಕು!

ಗೋವಿಂದ:— ನಿನಗೆ ಗೊತ್ತಿದೆಯಲ್ಲ! ಆ ಅಸಿಸ್ಟ ಹೆಡ್‌ಮಾಸ್ತರನು ಒಂದು ಗಳಿಗೆ ಕೂಡ ನಮ್ಮನ್ನು ಹೊರಗೆ ಹೋಗಗೊಡುವದಿಲ್ಲ. ಆಡಬಾರದು, ಉಣಬಾರದು, ತಿನಬಾರದು, ತನ್ನ ಹತ್ತಿರವೇ ಸಾಲೆಯಲ್ಲಿ ಯಾವಾಗಲೂ ಕುಳಿತುಕೊಳ್ಳಬೇಕು. ಈ ದಿವಸ ಸಾಲೆ ಸೂಟಿಯಾಯಿತು. ನಿನ್ನ ಭೆಟ್ಟಿಯಾಗದೆ ನಾಲ್ಕೈದು ದಿವಸಗಳಾಗಿದ್ದವು. ನಿನ್ನನ್ನು ಕಾಣಲು ಮನಸ್ಸು ಹಾತೊರೆಯುತ್ತಿತ್ತು. ರಾಷ್ಟ್ರಧ್ವಜವಂದನೆ ಮುಗಿಸಿ ನಿನ್ನನ್ನು ನೋಡಬೇಕೆಂತಲೇ ಎಲ್ಲರೂ ಇಲ್ಲಿಗೇ ಬಂದೆವು. ನಿನ್ನ ಪ್ರಕೃತಿ ಹೇಗಿದೆ? ಏನು? ನಿನ್ನ ಧರ್ಮಪತ್ನಿಯಾದ ಸಾವಿತ್ರಿಬಾಯಿಯು ಮನೆಯಲ್ಲಿ ಕಾಣುವದಿಲ್ಲವಲ್ಲ; ಎಲ್ಲೆ ಹೊರಗೆ ಹೋಗ್ಯಾಳೇನು?

ಅಜಮಿಳ:— ಈಗಿನ ಧರ್ಮಪತ್ನಿಯೆಂದರೆ ಇಂಥವರೇ ನೋಡು. ಪತ್ನಿ ಎನಿಸಿಕೊಳ್ಳುವ ಪತ್ನಿತ್ವವೂ ಇಲ್ಲ. ನಿಜವಾದ ಧರ್ಮವೂ ಇಲ್ಲ. ಇಂಥ ಪತ್ನಿಯರಿಂದಲೇ ಮತಿಗಳೆಲ್ಲ 'ಗಣಪತಿ' ಆಗೂದೂ ನಿನಗೆ ಗೊತ್ತಿಲ್ಲವೇ? ಅಕಿ ಹೋಗೂದೆಲ್ಲಿ? ವೆಂಕಟೇಶ ದೇವರ ಆ ಕೊಂಡವಾಡಕ್ಕೆ. ಕಡ್ಡೀ ಕಡಬಿನ ಕೃಷ್ಣಾಚಾರ್ಯರ ಪುರಾಣ. ಅವರಿಗೇನು ಚಿಂತೆ?— ಆರುತಾಸಾದರೂ ಪುರಾಣ ಹೊಡೆದೇ ಹೊಡಿತಾರ. ಅವರಿಗೆ ಮನೆಯಲ್ಲಿ ಊಟವಿಲ್ಲ, ಉಡಿಗೆಯಿಲ್ಲ. ಯಾವಾಗಾದರೂ ಯಜಮಾನರ ಮನೆಯ ಊಟ. I. S. W. Free service; ಆಚಾರ ಮನೆಯೆಂದರೆ ಕೇವಲ ಒಂದು ಧರ್ಮಶಾಲೆ. ಊಟ ಮಾ[ಡಿ] ಮನೆಗೆ ಬಂದು, ಹೊತ್ತು ಮುಳುಗುವ ವರೆಗೆ ಗೊರಕೇ ಹೊಡೆಯುತ್ತ ನಿದ್ರೆ ಮಾಡುವುದು. ಮನೆಯಲ್ಲಿ ಅಡಿಗೆಯಿಲ್ಲ, ಊಟವಿಲ್ಲ. ಹೊ[ಸ] ಯುಗ, ಸ್ವಾತಂತ್ರ್ಯ ದಿನ. ಈ ಅವಿವೇಕತನವನ್ನು ಇನ್ನು ಮಾತ್ರ ತಡೆಯುವುದು ಸಾಧ್ಯವಿಲ್ಲ. ಇವರಿಗೇನು ಪುರಾಣ ತಿಳಿಯದೆಯೇ! ಅಲ್ಲಿ ಬರೇ ತೂಕಡಿಸುವುದು, ಬಹಳವಾದರೆ ಒಂದು ಕಟ್ಟು ಬತ್ತಿ ಮಾಡುವುದು. ಮನೆಯಲ್ಲಿ ಹುಡುಗರು ಕೂಳು ಕೂಳು ಅಂ[ತ] ಪಾಂಚಜನ್ಯ ಹೊಡೀತಾವೆ. ಇನ್ನಂತೂ ಸ್ವರಾಜ್ಯ! ಸ್ತ್ರೀಯರದೆ ಸ್ವೇಚ್ಛಾಚಾರ! ಯಾರೂ ಕೇಳುವಂತಿಲ್ಲ. ಹೆಂಡಂದಿರು ಇನ್ನು ಗಂಡಂದಿರನ್ನು ಗೋದಲೆಯಲ್ಲಿ ಕಟ್ಟುತ್ತಾರೆ. ನಾನಂತೂ ಬೇಸತ್ತು ಹೋಗಿನಿ ಮಹಾರಾಯಾ! ನಿಮ್ಮ ಪ್ರಪಂಚ ಹ್ಯಾಗದ?

ಗೋವಿಂದ:- ಒಂದು ಹಾಸು, ಒಂದು ಹೊಚ್ಚು, ಯಾವುದೂ ಮಾತಾಡುವ ಹಾಗಿಲ್ಲ. ಕೆಲವು ಹೆಂಗಸರು ಪುರಾಣ-ಪುಣ್ಯ ಕಥೆಗಳಲ್ಲಿ ಕಾಲ ಕಳೆದು ಗಂಡಸರನ್ನು ಹೊಯ್ಯುತ್ತಾರೆ; ಇನ್ನು ಕೆಲವರು ಮುಂಜಾನೆ ಸಂಜೆಗೆ ವಾಕಿಂಗಿಗೆ ಹೋಗುವುದು; ಟೆನ್ನೀಸ್ ಆಡುವುದು, ಕ್ಲಬ್ಬಿಗೆ ಹೋಗುವುದು, ಹೆದರಿಕೆಯಿಲ್ಲದೇ ಪರ ಪುರುಷರ ಕೂಡ ತಿರುಗಾಡುವುದು. ಈ ರೀತಿ ಕಾಲ ಕಳೆಯುತ್ತಾರೆ. ಅಂತು ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲ, ಗಂಡಸರ ಅವಸ್ಥೆ ನೆಟ್ಟಗಿಲ್ಲ.

ಶಾಮುಲ:— ಅಜಾ, ಇದೊಂದು ವಿಚಿತ್ರ ಕಾಲ. ಗಂಡಂದಿರ ಅಡಿಗೀ ಮಾಡೂದನ್ನು ಒಪ್ಪಿಸಿದರೆ ಅದನ್ನೇ ಸಂತೋಷದಿಂದ ಮಾಡುತೀವಿ. ಹೆಂಗಸರು ಹೊರಗೆ ಹೋಗಲಿ; ಆಡ್ತಾಡಲಿ; ರೊಕ್ಕ ತರಲಿ; ನಾವು ಮನೆಯಲ್ಲೇ ಕುಳಿತು ಅಡಿಗೆ ಮಾಡುತ್ತೇವೆ. ಪೂರ್ವದಲ್ಲಿ ನಳರಾಜ ಅಡಿಗೆ ಮಾಡಲಿಲ್ಲವೇ? ಭೀಮಸೇನ ಅಂತೂ distinction ಪಡೆದಿದ್ದ. ಅವರಿಗಿಂತ ಹೆಚ್ಚು ಚೆನ್ನಾಗಿ ಮಾಡುತೀವಿ; ಅರಿವೆ ಒಗೀತೀವಿ; ಮುಸರೀ ತಿಕ್ಕುತೀವಿ. ಯಾವ ಕೆಲಸಕ್ಕೂ ಹಿಂಜರಿಯುವದಿಲ್ಲ. ಈ ಪುರುಷ ಸಿಂಹ.

ಅಜಮಿಳ:— ನನಗಂತೂ ಯಾವುದೂ ತಿಳಿಯದು. ಸಣ್ಣವನಿದ್ದಾಗಲೇ ಹಿರಿಯರು ಮದಿವೀ ಮಾಡಿಬಿಟ್ಟರು. ಒಲ್ಲೆನೆಂದರೂ ಕೇಳಲಿಲ್ಲ. ಸೋದರಮಾವನ ಮಗಳು; ಉಭಯತರ ತಾಯಂದಿರೂ ಸಣ್ಣವರಿದ್ದಾಗಲೇ ತೀರಿಕೊಂಡಿದ್ದರು. ನಮ್ಮ ಸೋದರಮಾವನ ಮನೆಯಿಂದ ನೆಟ್ಟಗಿದ್ದ. ಮಗಳನ್ನು ನನ್ನ ಕೊಳ್ಳಿಗೆ ಹಿಡಿದು ಕಟ್ಟಿದ. ಎರಡು ವರ್ಷದಲ್ಲಿ—ಮೂರು ಮಕ್ಕಳು—ಅಲ್ಲಾ, ಮೂರು ವರ್ಷದಲ್ಲಿ ಎರಡು ಮಕ್ಕಳಾದುವು. ನನ್ನ ಹೆಂಡತಿಗಂತೂ ಮಕ್ಕಳ ಚಿಂತೆಯಿಲ್ಲ. ಪ್ರಪಂಚದ ಚಿಂತೆಯಿಲ್ಲ. ತನ್ನ ತಾಯಿಯ ಹತ್ತರ ಹುಡುಗರನ್ನು ಬಿಟ್ಟುಬಿಡುವುದು; ಪುರಾಣ-ಪುರಾಣ-ಅಂತ ಸಂಜೆಯವರೆಗೆ ಒಡೆದುಕೊಳ್ಳುವುದು! ಹುಡುಗರು ಆಯಿಯ ಮನೆಯಲ್ಲಿಯೇ ಆಡಬೇಕು. ಅಲ್ಲಿಯೇ ದೊಡ್ಡವಾಗಬೇಕು. ಕರುವ ಕೆಲಸ, ಮನೆಯ ಕೆಲಸ ಎಲ್ಲವನ್ನೂ ನಾನೇ ಮಾಡಬೇಕು. ಮಾಡುವುದೇನು? ಪ್ರಾರಬ್ಧ!

ರಾಮು:— ನೆಹರೂನ ಕಡೆಗೆ ಒಂದು ಅರ್ಜಿ ಅರಿ ಮಾಡೋಣ. ಮಹಾರಾಯ ಖರೆ ಮುಖ್ಯ ಮಂತ್ರಿ ಅವನಮಗ ನೆಟೆನ್ನಿ ಕಾಯದೆ ಆಗಿ ಮಾಲಕರ ಅವತಾರ ಸಮಾಪ್ತಿಯಾಯಿತು; ಯಣ ವಿಮೋಚನ ಕಾಯದೆಯಿಂದ ಸಾವುಕಾರನ ಅವಸ್ಥೆಯಾಯಿತು. ಹಿಂದೂ ಕಾಯದೆ ದುರಸ್ತಿಯಾಗಿ ಗಂಡನ ಅವತಾರವೂ ಮುಗಿಯಲಿಕ್ಕೆ ಬಂದಿದೆ. "ನಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂದು ನಮ್ಮ ಶಾಸ್ತ್ರಕಾರರು ಒದರಿಕೊಂಡರು. ಆದರೆ, ಈಗಿನ ಶಾಸ್ತ್ರಕಾರರು ಸ್ತ್ರೀಯರನ್ನು ತಲೆಯಮೇಲೆ ಕೂಡಿಸಿಕೊಳ್ಳ ಹತ್ತಿದ್ದಾರೆ. ಮೊದಲೇ ಮಂಗ, ಹೆಂಡ ಕುಡಿಸಿದ ಮೇಲೆ ಕೇಳುವುದೇನು? ದೇವರೇ! ಕಣ್ಣು ಮುಚ್ಚಿಬಿಡಪ್ಪಾ! ಇದೆಲ್ಲ ಇನ್ನ ನೋಡುವುದು ಸಾಧ್ಯವಿಲ್ಲ.

ಭೀಮು:— ಕೇಳಿದೆಯಾ! ನಮ್ಮ ಹುಡುಗಿಯರೇ ಏನೂ ಅಂಜಿಕೆ ಇಲ್ಲದೆ ಆ ಸಲೂನದಲ್ಲಿ ಎಲ್ಲರ ಎದುರೂ ಕಾಲುಚಾಚಿ ಕುರ್ಚಿಯ ಮೇಲೆ ಕೂಡತಾರೆ. ಬಾಬಿಂಗ್ ಮಾಡಸ್ತಾರಂತೆ ಮಕ್ಕಸ್ಸ ನಡದದೆ. ಅಲ್ಲೇ ಮಗ್ಗಲಲ್ಲಿ ಎಷ್ಟೋ ಗಂಡಸರು ಕೂತಾರೆ ಏನೂ ಭಯವಿಲ್ಲದೆ ಕೂದಲು ಕತ್ತರಿಸಿಕೊಂಡು ಹೋಗ್ತಾರೆ! ಕಲಿಯುಗ ಒಳ್ಳೇ ಹದಕ್ಕೆ ಬಂದಂತೆ ಕಾಣುತ್ತದೆ.

ಅಜಮಿಳ:— ಯಾರಿಗೂ ಯಾವುದೂ ಅನ್ನುವಹಾಗಿಲ್ಲ. ನಾವು ಒಂದು ಅಂದರೆ ಅವರು ನಾಲ್ಕು ಅನ್ನುವರು. ಬೀಡಿ-ಸಿಗರೇಟು ಗಳು ಬೆಂಡು ಬತ್ತಾಸಗಳಾಗಿವೆ. ಚಹಾ ಅಂತೂ ತೀರ್ಥವಾಗಿದೆ ಮದಿರೆಯು ಪ್ರತಿ ಮನೆಯಲ್ಲಿಯೂ ಪ್ರವೇಶ ಮಾಡಿದ್ದಾಳೆ. ನೋಡಿರಿ, ಮದಿರಾ ನಿರ್ಬಂಧ ಕಾಯದೆಯಲ್ಲವೂ ಸರಕಾರದ ಬದಿಯಲ್ಲಿಯೇ ಇದೆ. ಮೊದಲು ಸರಕಾರೀ ಅಮಲದಾರರನ್ನು ನೋಡಿ. ೧೦೦ಕ್ಕೆ ೯೯ ಮಂದಿ ಅಮಲಿನಲ್ಲಿರುವವರು. ತೀರ್ಥಪ್ರೇಮಿಗಳು ಹಾಂಗ ನಡೀಬೇಕು ಸರಕಾರದ ಅಮಲು ಅಂದಮ್ಯಾಲೆ ಈ ಕಾಯದೇ ಪರಿಣಾಮವು ಜನರ ಮೇಲೆ ಹೇಗೆ ಆಗಬೇಕು? ಎಂಥ ಅನ್ಯಾಯ! ಎಲ್ಲವೂ ವಿಚಿತ್ರವಾಗಿ ನಡೆದಿದೆ. ಹೆಚ್ಚು ಮಾತೇಕೆ? ಪರಸ್ತ್ರೀಯ ಹಿಂದೆ ನಾವು ತಾಳ ಕುಟ್ಟುತ್ತ ನಡೆದರಾಯಿತು. ಜಗತ್ತೇ ಅಡ್ಡದಾರಿ ಹಿಡಿದದೆ. ಒಂದು ಕಡೆಗೆ ಹುಚ್ಚು ಧರ್ಮಬಡಕ ಹೆಂಗಸರು; ಮತ್ತೊಂದು ಕಡೆಗೆ ಸುಖ ಲೋಲುಪರಾದ ಸ್ತ್ರೀಯರು! ಮಗದೊಂದು ಕಡೆಗೆ ಹೆಂಗಸರ ಪ್ರೀತಿಗಾಗಿ ಎಲ್ಲಾ ಮನೆಯ ಕೆಲಸಗಳನ್ನೂ ಮಾಡುವಂಥ ಪುರುಷರು! ನನ್ನ ಮನೆಯವರು ಬರುವ ವೇಳೆಯಾಯಿತಪ್ಪಾ ಗೋವಿಂದ.

ಗೋವಿಂದ:— ಅಜಮಿಳಾ, ಇನ್ನೂ ನಿಮ್ಮ ಮನೆಯವರು ಬಂದಿಲ್ಲ. ಪುರಾಣಿಕರು ಮುಗಿಸುವತನಕ ಪುರಾಣ ಹೇಳುವವನೋ ಏನೋ! ನಿಮ್ಮ ಮನೆಯ ಬ್ರಾಹ್ಮಣನ ಹೆಸರೂ ಒಂದು ವಿಚಿತ್ರವಾಗಿದೆ. ಅದರ ಮೂಲವೇನಾದರೂ ಗೊತ್ತಿದೆಯೆ? ಇವರಲ್ಲದೆ ಬ್ರಾಹ್ಮಣರಾರೂ ಈ ಊರಲ್ಲಿ ಇಲ್ಲವೇ ಹೇಗೆ? ನಿಮ್ಮ ಮನೆಯಿಂದನೆ ಇವರಿಗೆ ಗುತ್ತಿಗೆಯೋ ಆಗಿದೆ. ಅವರನ್ನು ಬಿಟ್ಟು ನಿಮ್ಮಲ್ಲಿ ಯಾರೂ ಚಿತ್ರಾಹುತಿ ಕೊಡತಿರುವಿಲ್ಲ. ಊರಲ್ಲಿ ಘನ ಪಂಡಿತರಿದ್ದಾರೆ, ಶಾಸ್ತ್ರ ಓದಿದವರಿದ್ದಾರೆ. ಅವರಿಗೆ ನಿಮ್ಮ ಮನೆಯ ಪರಿಚಯವೇ ಇಲ್ಲ. ಹೆಸರಾದರೂ ಚಮತ್ಕಾರವೇ ಆಗಿದೆ.

ಅಜಮಿಳ:— ಹೇಳತೇನಿ ಕೇಳಿರಿ, ಕಡ್ಲೀ ಕಡುಬಿನ ಕೃಷ್ಣಾಚಾರ್ಯರಿಗೆ ಈ ಹೆಸರು ನಮ್ಮ ಮನೆಯಿಂದಲೇ ಪ್ರಾಪ್ತವಾಗಿದೆ. ಇವರು ಒಂದು ದಿವಸ ನಮ್ಮ ತಾಯಿಗೆ 'ಕಡ್ಲೀ ಕಡುಬು ಮಾಡಿಸಿ ಇಚ್ಛಾಭೋಜನ ಮಾಡಿಸಿರಿ' ಅಂದರಂತೆ. ನಮ್ಮ ತಾಯಿಗೂ ಬ್ರಾಹ್ಮಣರಲ್ಲಿ ಭಕ್ತಿ ಭಾಳ ವಿತ್ತಪಾ. ಎರಡು ಸೇರು ಕಡ್ಲೀ ಹೂರಣ ಮಾಡಿ, ಗೇಣುದ್ದ ಕಡುಬು ಮಾಡಿದರು. ಆಚಾರ್ಯರು ಎಲೆಯ ಮೇಲೆ ಕುಳಿತವರು ಒಂದೊಂದರಂತೆ ಹನ್ನೆರಡು ಕಡಬು ಜಡಿದರೂ ಹದಿಮೂರನೆಯ ಕಡಬು ಗಂಟಲಲ್ಲೇ ಉಳಿಯಿತು. ಒಳಗೂ ಹೋಗಲಿಲ್ಲ. ಹೊರಗೂ ಬರಲಿಲ್ಲ. Traffic close ರಸ್ತಾ ಬಂದ್. ಆಚಾರ್ಯರ ಮೋರೆ ಬೆಳ್ಳಗಾಯಿತು. ಒಸ್ತರ ಡೊಳ್ಳಪ್ಪನ ಮನೆಯ ಹಾರೀ ತಂದು ಮೀಟಿ ನೋಡಿದರೂ ಸರಿಯಲೊಲ್ಲದು, ಆಗ ಮತ್ತೊಂದು ಕಡಬು ತಂದು ಗಂಟಲಿಗೆ ಇಟ್ಟು ಸುತ್ತಿಗೆಯಿಂದ ಹೊಡೆದರು. ಕೂಡಲೇ ಒಳಗೆ ಸರಿಯಿತು. ಅದುದರಿಂದಲೇ ಅವರಿಗೆ ಕಡ್ಲೀ ಕಡುಬಿನ ಕೃಷ್ಣಾಚಾರ್ಯರೆಂಬ ಹೆಸರು ಪ್ರಾಪ್ತವಾಯಿತು.

ಗೋವಿಂದ:— ಇವರದಾಯಿತು. ಇನ್ನೊಬ್ಬರು ಬರ್ತಾರಲ್ಲ ನಿಮ್ಮ ಮನಿಗೆ. ಆ ತುಪ್ಪದ ತ್ರಿವಿಕ್ರಮಾಚಾರ್ಯರು. ಅವರ ಇತಿಹಾಸವೇನು?

ಅಜಮಿಳ:— ಅದೂ ಹೀಗೆಯೇ. ಒಮ್ಮೆ ನಮ್ಮ ಮನೆಯಲ್ಲಿಯೇ ಊಟ ನಡೆವಾಗ ಕೂಡಿದ ಆಚಾರ್ಯರು ಜಿದ್ದು ಹಾಕಿದರು; 'ಆಚಾರ್ಯರೇ ಊಟವಂತೂ ಮುಗಿದಿದೆ. ನೀವು ಇನ್ನೆಷ್ಟು ತುಪ್ಪ ತೆಗೆದುಕೊಳ್ಳಬಹುದು?' ಎಂದು. ತ್ರಿವಿಕ್ರಮಾಚಾರ್ಯರೆಂದರು— 'ಒಂದು ಸೇರಿಗೆ ಒಂದು ರೂಪಾಯಿ ಕೊಟ್ಟರೆ ಹನ್ನೆರಡು ಸೇರು ಸಹಜವಾಗಿ ಅಟ್ಟಿಸಬಹುದು.' ಮಂದೀ ಮನೆಯ ತುಪ್ಪ ಉಳಿದವರಿಗೇನು ಚಿಂತೆ! ಆಗಲಿ ಎಂದರು. ಆಚಾರ್ಯರ ಕಂಠತ್ರಾಣ ಪ್ರಾರಂಭವಾಯಿತು. ಹನ್ನೆರಡು ಸೇರು ತುಪ್ಪ ಸಹಜವಾಗಿ ಅಟ್ಟಿಸಿದರು. ಆದರೆ ಊಟವಾದ ತಾಸಿನ ಮೇಲೆ ಆ ತುಪ್ಪ ಹೆಪ್ಪಿಯಿತು. ಕೆಳಗೂ ಹೋಗಲಿಲ್ಲ ಮೇಲೂ ಬರಲೊಲ್ಲದು. ಆಚಾರ್ಯರು ಕಸಬುಸ ಪಡಹತ್ತಿದರು ಬಡಿಗಿ ತಂದು ಉರಿ ಮಾಡಿದರು ಆಚಾರ್ಯರನ್ನು ತಲೆ ಕಡೆಗೆ ಇಬ್ಬರು ಕಾಲಿನ ಕಡೆಗೆ ಇಬ್ಬರು ಹಿಡಿದು ಚೆನ್ನಾಗಿ ಕಾಸಿದರು. ತುಪ್ಪ ಕರಗಿ ಕಡೆಗೆ ಬಂತು. ಆಚಾರ್ಯರು ಅಂತೂ ಪ್ರಾಣ, ತುಪ್ಪ ಎರಡೂ ಉಳಿಸಿಕೊಂಡರು. ಇವರೀರ್ವರೂ ನಮ್ಮ ಸನಾತನ ಮನೆಯ ಪೂಜ್ಯ. ನಮ್ಮ ಮಾವ ಎರಡು ವರ್ಷದ ಹಿಂದೆ ತೀರಿಕೊಂಡಕೂಡಲೆ ಇವರ ಮಾಸಾರ್ಧಿಂದ ನಮಗೆ ಬಂದಾರ ನಮ್ಮ ಕಂವೆಯವರೆಗೆ ಬಂದ ಆಸ್ತಿ. ಹಾಗೇ ನಡೆದಿದೆ. ಏಕೆಂದರೆ ನನಗೆ ಹೊಲದ ಉತ್ಪನ್ನ ವರ್ಷಕ್ಕೆ ಸಾವಿರ ರೂಪಾಯಿ ಬರತದೆ. ಅದರಲ್ಲಿಯೇ ಇದೆಲ್ಲ ವೆಚ್ಚ ನಡೆದಿದೆ.

ಹುಡುಗರು ಮುಂಜಿವಿಗೆ, ಮದುವಿಗೆ ಬಂದರೆ ಎಲ್ಲಾ ಮನೆಮಾರು ಮಾರುವುದೇ !

(ಅಷ್ಟರಲ್ಲಿ ಸಾವಿತ್ರಿಬಾಯಿ ಬಗಲಲ್ಲಿ ಪತ್ತಿಯ ಬುಟ್ಟಿ ಬಲಗೈಯಲ್ಲಿ, ಥಾಲಿ ಹಿಡಿದುಕೊಂಡು ಪುರಾಣದಿಂದ ಬರುವಳು.)

ಪುರಾಣ ಈಗ ಮುಗಿಯಿತೇ ? ಇವರು ನನ್ನ ಸ್ನೇಹಿತರು. ನನ್ನ ನೋಡಲಿಕ್ಕೆ ಬಂದಾರೆ. ಅಜಾರಿ ಅವ ಸ್ವಲ್ಪ ಚಹಾ ಆದರೂ ಮಾಡು.

ಸಾವಿತ್ರಿಬಾಯಿ : ನಿಮಗೆ ಗಂಡಸರಿಗೆ ಉದ್ಯೋಗ ಇಲ್ಲ. ಧಂದೆ ಇಲ್ಲ. ಹಗಲು ರಾತ್ರಿ ಚಹಾದ ವ್ಯಸನವೇ ವ್ಯಸನ. ತಾಸಿಗೆ ಹತ್ತು ಸಾರೆ ಚಹ. ಈಗಲೇ ಆರು ತಾಸು ಹೊತ್ತೇರಿದೆ. ಅಡಿಗೆ ಯಾಗಬೇಕು. ಈ ಹೊತ್ತಿನ ದಿವಸ ಆಚಾರ್ಯರು ಕೊತ್ತಳಪ್ಪನ ನೈವೇದ್ಯ ಮಾಡು ಅಂತಾ ಹೇಳ್ಯಾರ. ಆಚಾರ್ಯರಾದರೂ ಶೀಘ್ರ ಬರತೇವಿ ಅಂತ ಹೇಳ್ಯಾರೆ. ಪುರಾಣದಿಂದ ನಾನು ಮಡಿಯಿಂದಾನೇ ಬಂದೇನಿ. ನಾನೇನೂ ಮೈಲಿಗೆ ಆಗುವುದಿಲ್ಲ. ಬೇಕಾದರೆ ಅವರೇ ಮಾಡಿಕೊಳ್ಳಲಿ.

(ಹೋಗುವಳು.)

ಅಜಮಿಳ :– ನೋಡಿದಿರಾ ಈ ಅವತಾರ! ಕಾಳಿಕಾ ವಿಗ್ರಹ !! ಇವಳಿಗೆ ಆಚಾರ್ಯರ ಹೊರತಾಗಿ ಎರಡನೇ ವಿಚಾರವೇ ಇಲ್ಲ. ಏನು ಮಡಿ, ಏನು ಮೈಲಿಗಿ ಏನು ಆಕಾರ. ಭರಮಪ್ಪನನ್ನು ನೋಡಿದ ಹಾಗಾಗುತ್ತದೆ. ಏನು ಹಣೆಯ ಮೇಲಿನ ಕುಂಕುಮ, ಹುಬ್ಬಿನಿಂದ ಬೈತಲದ ವರೆಗೆ ಬಂದು ಕೆಂಪು ಗುಡಾರದ ಪಟ್ಟಿ ತೆಗೆದಂತಾಗಿದೆ ತುಳಜಾ ಭವಾನಿ ಭಂಡಾರ. ಇಕಾ ಗೋವಿಂದ—ನಮ್ಮ ನಿಮ್ಮೊಳಗೆ ಭೇದವಿಲ್ಲಾ ನನಗೆ ಏಳುವ ತ್ರಾಣ ಇಲ್ಲ ನೀವೇ ಚಹಾ ಮಾಡಿಕೊಳ್ಳಿರಿ. ಇಲ್ಲೇ ಸ್ಟೌ ಅದೆ. ಪುಡಿ ಸಕ್ಕರಿ ಇವೆ. ಹಾಲೂ ಇದೆ ಎಲ್ಲಾ ಇಲ್ಲೇ ಇವೆ.

ಗೋವಿಂದ : – ಅಜಮಿಳಾ, ನಮಗೆ ಯಾವುದೂ ಬೇಡ. ನಿನಗೆ ಗೊತ್ತೇ ಅದೆ ಅಲ್ಲಾ, ಚಹಾ ಅಂದರೆ ಅರಿಷಿಣಾ ಕುಂಕುಮ; ಮುಂಜಾನೆ ಮನೀ ಬಿಟ್ಟಾಗಿನಿಂದ ಹತ್ತು ಕಡೆಗೆ ಚಹಾ ಆಗೇದ. ಈಗ ಹೊತ್ತು ಹನ್ನೆರಡು. ನಮ್ಮ ಮನೆಯ ಭೂತವನ್ನೂ ಸಮಾಧಾನ ಪಡಿಸಬೇಕಲ್ಲವೇ ? ನಮ್ಮ ಮನೆಯಲ್ಲಿ ಒಲೆಯ ದರ್ಶನವೇ ಇಲ್ಲ. ಎಲ್ಲ ಅಡಿಗಿ ಸ್ಟೌವಿನ ಮೇಲೆಯೇ! ಅಜಾ, ಈ ಸ್ಟೌ ಮಾಡಿದವನಿಗೆ ಎಷ್ಟು ಪ್ರಣಾಮ ಮಾಡಿದರೂ ಸಾಲದು. ಇದು ಸಿಟ್ಟಿನ ಹೆಂಗಸರ ಗಂಡಸರಿಗೆ ಒಂದು ಸುದರ್ಶನವೇ ಆಗಿದೆ. ನನ್ನ ಹೆಂಡತಿ ಅದರ ಮೇಲೆ ಅಡಿಗೆ ಮಾಡಿ, ಆರು ತಾಸಿನ ವರೆಗೆ ಹಾದೀ ನೋಡುವಳು. ನಾನು ಬರಲಿಲ್ಲವಾದರೆ ಊಟಮಾಡಿ ಪಲ್ಲಂಗದ ಮೇಲೆ ಮಲಗಿಬಿಡುವಳು; ನಾನು ಬಂದು ಸವರಾಡಿಸಿ, ಇದ್ದದ್ದೂ ಇಲ್ಲದ್ದೂ ಹಾಕಿಕೊಳ್ಳಬೇಕು. ಅದೆಲ್ಲೇ ಅಜಾ! ಎಂಥಾ ಕಾಲ ಬಂತಪಾ! "ಕಲಿಯುಗದ ಮಹಿಮೆ ಕಾಣಬಂತೀಗ" ಎಂದು ಪುರಂದರದಾಸರು ಹಾಡಿದ್ದು ನೆನಪಿಗೆ ಬರುತ್ತದೆ. ಒಂದು ಕಡೆಗೆ ಗುತಾರಪಟ್ಟಿಯ ಕುಂಕುಮವಾದರೆ, ಮತ್ತೊಂದು ಕಡೆಗೆ ಸೂಜಿಯ ಕುಂಕುಮ, ಟಾಚಣೀ ಕುಂಕುಮ, microscopic ಕುಂಕುಮ, ಇರುವೇ ಕಾಲ ಕುಂಕುಮ, ಟಿಕಳೀ ಕುಂಕುಮ ಇವೆ. ಈ ಹೆಂಗಸರನ್ನು ನೋಡಿದರೆ ಮುತ್ತೈದೆಯರೋ, ಸಕೇಶಿಯರೋ, ಅನ್ನೂ ಲೇಬಲ್ಲೇ ಗೊತ್ತಾಗುದಿಲ್ಲ. ಮಡಿಯಲ್ಲಂತೂ ಒಬ್ಬರು ಮುಂಜಾನೆಯಿಂದ ಸಂಜೆಯವರೆಗೆ 'ಮಡಿ ಮಡಿ' ಎಂದು ಸಾಯುತ್ತಾರೆ. ಒಂದು ಕಲ್ಲಿನಿಂದ ಮತ್ತೊಂದು ಕಲ್ಲಿಗೆ ಹಾರುವುದು. ಪ್ರತಿಯೊಂದು ಕಲ್ಲಿಗೆ, ಕಟ್ಟಿಗೆಗೆ, ಅರಿವೆಗೆ ನೀರು ಉಗ್ಗುವುದು. ಇವರು ಮಡಿಗಾಗಿ ಗಂಡಸರಿಗೆ ಸಹ ನೀರ ಉಗ್ಗಲಿಕ್ಕೆ ಅಂಜುವುದಿಲ್ಲ. ಮತ್ತೊಂದು ಕಡೆ ನೋಡಿದರೆ, ನಾಲ್ಕು ದಿವಸವಾದರೂ ಮೈ ತೊಳೆಯುವಹಾಗಿಲ್ಲ. ಒಬ್ಬ ಹೆಣ್ಣುಮಗಳು 'ಪುರಾಣ ಪುರಾಣ' ಎಂದು ಪುರಾಣಿಕರ ಮನೆಯಲ್ಲೇ ಕುಳಿತರೆ, ಮತ್ತೊಬ್ಬಳು ಪ್ರತಿನಿತ್ಯ ಸಂಜೆಗೆ ನಾಟಕಾ, ಸಿನಿಮಾ ಗೃಹದಲ್ಲಿಯೇ ಇರುವಳು. ಒಂದೂ ತಿಳಿಯದಾಗಿದೆ. ಸಾವಿತ್ರ ಗಂಡಸರೂ ಅಲ್ಲ, ಹೆಂಗಸರೂ ಅಲ್ಲ, ನಾವೇ ಹೆಣ್ಣುಮಕ್ಕಳ ಪಾತ್ರ ಮಾಡಬೇಕೆಂದು ನಿರ್ಧಾರವಾದರೆ, ಈ ಕಚೇರಿ, ಸಾಲೆಗಳಾದರೂ ತಪ್ಪೈವು. ಆ ಸಂನ್ಯಾಸಿ ಹೆಡ್ ಮಾಸ್ತರನ ತ್ರಾಸವಾದರೂ ಹೋದೀತು. ಎಲ್ಲ ಗಂಡಸರೂ ಕೂಡಿ ನಮ್ಮ ದೂರುಗಳನ್ನು ಸರಕಾರಕ್ಕಾದರೂ ತಿಳಿಸಬೇಕು. ಈಗ ಚಳವಳಿ ದಿವಸ. ಚಳವಳಿ ಮಾಡಿದರೆ ಏನಾದರೂ ಆದೀತು !

ಅಜಮಿಳ :— ಈ ಹೆಂಡಿರ ದೆಸೆಯಿಂದ ನನಗೆ ಎಳ್ಳಷ್ಟು ಚಿಂತೆಯಿಲ್ಲ. ಹುಟ್ಟಿದ ಹುಡುಗರ ಸಲುವಾಗಿ ನನಗೆ ಸಂಕಟವಾಗುತ್ತದೆ. ಅವು ಪಾಪ! ಏನು ಮಾಡ್ಯಾವು? ಯಾವುದೋ ಮೋಹಕ್ಕಾಗಿ ಮದಿವೆ ಮಾಡಿಕೊಂಡು ಮಕ್ಕಳನ್ನು ಹಡೆದೆವು. ಶುಕಮುನಿಯೂ ಭೀಷ್ಮಾಚಾರ್ಯರೂ ಆಜನ್ಮ ಬ್ರಹ್ಮಚಾರಿಗಳಾಗಿ ಉಳಿಯಲಿಲ್ಲವೇ? ಅವರಿಗೆ ನನ್ನ ಅನಂತ ಪ್ರಣಾಮಗಳು! ಸಂಸಾರವೆಂದರೆ ಎಷ್ಟು ತಾಪ! ಮಕ್ಕಳಾದರಂತೂ ಆಯಿತು. ಗಂಗಾತಟಾಕದ ಮೇಲೆ ವಾನಪ್ರಸ್ಥಾಶ್ರಮಿಯಾಗಿ ಕುಳಿತ ಆ ಭರತ ಮಹಾರಾಜನು, ಒಂದು ಜಿಂಕೆಯ ಮರಿಯ ಮೂಲಕ ಜಿಂಕೆಯ ಜನ್ಮ ತಾಳಲಿಲ್ಲವೇ? ನನಗೂ ಎರಡು ಮಕ್ಕಳು. ಪ್ರಪಂಚ ಬಿಡಬೇಕೆಂದರೆ ಅವು ಮುಂದೆ ಬಂದು ನಿಲ್ಲುತ್ತವೆ. ಪರಮೇಶ್ವರಾ! ಈ ಸಂಸಾರ ಸಾಗರದಿಂದ ನನ್ನನ್ನು ನೀನೇ ರಕ್ಷಿಸು! .

ಗೋವಿಂದ :— ಅದು ಹೇಗೇ ಇರಲಿ. ಹೆಂಗಸರ ಹುಚ್ಚು ಬುದ್ಧಿಯನ್ನು ತೆಗೆಯಲಿಕ್ಕೆ ಏನಾದರೂ ಒಂದು ಯುಕ್ತಿಯನ್ನು ಹುಡುಕಬೇಕು

ಅಜಮಿಳ :— (ವಿಚಾರ ಮಾಡಿ) ಒಂದು ಯುಕ್ತಿಯನ್ನು ತೆಗೆದಿದ್ದೇನೆ. (ಕಿವಿಯಲ್ಲಿ ಹೇಳುವನು)

ಗೋವಿಂದ :— ಒಳ್ಳೇ ಯುಕ್ತಿ ತೆಗೆದಿ. ಹಾಗೇ ಆಗಲಿ.

(ಎಲ್ಲರೂ ಹೋಗುವರು ಪರದೆ ಬೀಳುವದು).

ಪ್ರವೇಶ ೩.

(ಸಾವಿತ್ರಿಬಾಯಿಯ ಪ್ರವೇಶ)

ಸಾವಿತ್ರಿ :— ಚಂಡಾಳ ಚೌಕಶಿ ಹೋಯಿತೇ? ಮುಂಜಾನೆ ಎದ್ದ ಕೂಡಲೇ ಮನೆಬಿಟ್ಟು ಹೊರಟರೆಂದರೆ, ಸಂಜೆಯ ವರೆಗೆ ಮನೆ ಮನೆ ತಿರಿಗ್ಯಾಡುವುದೇ. ಮನೆಯಲ್ಲಿ ಇವರ ಹೆಂಡಿರು ಇವರ ಹೆಸರಿಲೇ ಕಲ್ಲು ಒಡಿಯಬೇಕು. ಇವರು ಹೀಗೇ ಮೇಯುತಾ ತಿರಗಬೇಕು; ಹೆಂಡಿರು ಉಪವಾಸವಿರಬೇಕು. ಮೇಲಾಗಿ ಹೆಂಗಸರೇ ಕೆಟ್ಟವರು ತಾವು ಸ್ನಾನ ಮಾಡದೆ ನಾಲ್ಕು ದಿವಸಗಳಾದವು. ಈ ಹೊತ್ತಾದರೂ ಸ್ನಾನ ಮಾಡತೀರಾ?

ಅಜಮಿಳ :— ನಿನಗೆ ಯಾವುದೂ ಚಿಂತೆಯಿಲ್ಲ. ನಿನಗೆ ಪುರಾಣದ ಚಿಂತಿ, ಬ್ರಾಹ್ಮಣರ ಊಟದ ಚಿಂತೆ. ನನಗೆ ಈ ಪ್ರಪಂಚ ಸಾಕಾಗಿ ಹೋಗಿದೆ. ಬಂದ ತಪ್ಪಿಗೆ ಇರಬೇಕಾಗಿದೆ. ನನ್ನ ಜಡ್ಡಿನ ಚಿಂತಿ ನಿನಗೆ ಸ್ವಲ್ಪವೂ ಇಲ್ಲ. ಹಗಲೂ ಇರುಳೂ ಮಡಿಮಡಿ ಅನ್ನುತ್ತೀ. ಒಮ್ಮೆ ಮಡಿಯಾದರೂ ಆಗಿಬಿಡು; ಹೊಸ ಪ್ರಯೋಗ ನೋಡೋಣ. ನಿನ್ನಿನ ದಿವಸ ರಾತ್ರಿ ಕನಸಿನಲ್ಲಿ ಇಬ್ಬರು ಯಮ-ದೂತರು ಬಂದಿದ್ದರು; ಏನು ಭಯಂಕರ ಅವರ ಆಕಾರ! ಅವರನ್ನು ನೋಡಿದಕೂಡಲೇ ಎದೆ ಒಡೆದು ನೀರಾಯಿತು. ಅವರ ರೂಪವೇನು, ಆಕಾರವೇನು? ಈ ಹೊತ್ತು ನನ್ನನ್ನು ಕರೆದುಕೊಂಡು ಹೋಗಲಿಕ್ಕೆ ಬರತೀವಿ ಅಂತ ಹೇಳಿದರು. 'ನಮ್ಮ ಮನೆಯಲ್ಲಿ ನೇವೇದ್ಯವದೆ; ಕಡಬಿನ ಕೃಷ್ಣಾಚಾರ್ಯರೂ, ತುಪ್ಪದ ತ್ರಿವಿಕ್ರಮಾಚಾರ್ಯರೂ ಊಟಕ್ಕೆ ಬರುವವರಿದ್ದಾರೆ ಒಂದು ದಿನ ಬಿಟ್ಟು ಬನ್ನಿರಿ' ಅಂತ ಹೇಳಿದೆ. ನನಗೂ ಈ ಪ್ರಪಂಚ ಸಾಕಾಗಿ ಹೋಗಿದೆ. ಈ ಹುಡುಗರ ಸಲುವಾಗಿ ಜೀವ ತೊಳಲಾಡತದೆ, ಆಯಿತು. ನೀನೇ ಇದ್ದೀ. ಎಲ್ಲಾ ನೋಡಿಕೋ. ಸ್ನಾನಕ್ಕೆ ಹಾಕಿಬಿಡು. ಒಂದು ಚಾಪೀ ತೆಗೆದು-ಕೊಂಡು ಬಾ. ಅದರ ಮೇಲೆ ತುಳಸೀ ದಳ, ದರ್ಭೆ ಹಾಕಿ ಮಲಗಿಸಿ ಬಿಡು. ಕಡೆಯ ಕಾಲಕ್ಕಾದರೂ ಈ ದೇಹ ಮಡಿಯಿಂದ ಹೋಗಲಿ.

ಸಾವಿತ್ರಿ :— ಹುಚ್ಚುಚ್ಚು ಮಾತಾಡಬೇಡಿರಿ. ಏನು ತಂದೆ. ಯಪ್ಪಾ ದೇವರೇ! ನೀನೇ ನನಗೆ ಗತಿ. ಅಜನೂರಪ್ಪಾ, ತುಳಸೀ-ಗೇರಿಪ್ಪಾ, ನೀವೇ ನನ್ನನ್ನು ಈ ಸಂಕಟದೊಳಗಿಂದ ಪಾರು ಮಾಡಬೇಕು. ತಿರುಪತಿ ವೆಂಕಟರಮಣಾ! ಏನು ಮಾಡಲಿ? ನಿನಗೆ ನೂರು ಕಡಬು ಹಾಕಲೇ? ಇನ್ನೂ ಒಂದೂ ಹುಡುಗರು ಕೈಗೆ ಬಂದಿಲ್ಲ. ಮಕ್ಕಳ ಮುಂಜವಿ ಆಗಿಲ್ಲ. ನನ್ನನ್ನಾದರೂ ಕರೆದುಕೊಂಡು ಹೋಗ-ಬಾರದೇ? ಇದೆಲ್ಲ ಹೇಗೆ ನೋಡಲಿ? ಈ ದಿನ ಆಚಾರ್ಯರು ಊಟಕ್ಕೆ ಬರುವವರಿದ್ದಾರೆ. ಎಲ್ಲರ ಊಟವನ್ನಾದರೂ ಸುರಕ್ಷಿತವಾಗಿ ಮಾಡ್ಸಪ್ಪಾ. ದೇವರೇ! ಈ ಹೊತ್ತು ಮಾಡಿದ ನೇವೇದ್ಯ ನಿನಗೇ ಅದೆ. (ಹೋಗುವಳು)

ಅಜಮಿಳ :— ನಾಟಕವಂತೂ ಸುರೂಮಾಡೀನಿ. ಇನ್ನೂ ನನ್ನ ಹೆಂಡತಿಗೆ ಆ ಬ್ರಾಹ್ಮಣರ ಹುಚ್ಚು ಹೋಗಿಲ್ಲ. ಪ್ರಪಂಚವೆಂದರೇ ಒಂದು ನಾಟಕ. ಈ ಸಂಸಾರವೆಂದರೆ ಒಂದು ಭಯಂಕರವಾದ ಸಾಗರ. ಇದರಲ್ಲಿ ಎಷ್ಟೋ ಘೋರ ಪ್ರಾಣಿಗಳಿವೆ. ಆ ಶೇಷಶಾಯಿ ಕೃಷ್ಣನೇ ಇದರಿಂದ ನನ್ನನ್ನು ಪಾರು ಮಾಡಬೇಕು. ಹತ್ತು ಗಂಟೆಯಾಯಿತು. ದೂತರು ಬರುವ ವೇಳೆಯಾಯಿತು. ಹುಡುಗರು ಆಯಿಯ ಮನೆಗೆ ಹೋದದ್ದು ನೆಟ್ಟಗಾಯಿತು. ಈ ಸ್ಥಿತಿ ನೋಡಿದರೆ ಹುಡುಗರು ಗಾಬರಿಯಾದಾವು? ಅಲ್ಲಿಯೇ ಅಜ್ಜಿಯ ಮನೆಯಲ್ಲೇ ಆಡಲಿ.

(ಇಬ್ಬರು ಯಮದೂತರು ಕೋಣ ಹತ್ತಿಕೊಂಡು ಆಯುಧ ಹಿಡಿದು-ಕೊಂಡು ಬರುವರು.)

ಬರ್ರಿಪಾ, ನಿಮ್ಮ ಹಾದಿಯನ್ನೇ ನೋಡತಿದ್ದೆ. ಇನ್ನೂ ನಮ್ಮ ಗಡಿಯಾಳದಲ್ಲಿ ಹತ್ತಕ್ಕೆ ಐದು ನಿಮಿಷ ಕಡಿಮೆ ಅದೆ. ನಿಮ್ಮ ಸ್ವರ್ಗದ ಗಡಿಯಾಳ ಮುಂದೆ ಅದೆಯೋ ಏನೋ!

ಯಮದೂತ :— ನಿನ್ನನ್ನು ಹತ್ತು ಹೊಡೆಯಲಿಕ್ಕೆ ಸ್ವರ್ಗಕ್ಕೆ ತರುವದಕ್ಕೆ ಯಮದೇವರ ಅಪ್ಪಣೆಯಾಗಿದೆ. ಹೇಳಿ ಕೇಳುವದಕ್ಕೆ ಅವಕಾಶವಿರಲೆಂದು ಐದು ನಿಮಿಷ ಮೊದಲು ಬಂದೆವು. ಅಷ್ಟರಲ್ಲಿಯೇ ಎಲ್ಲಾ ಮುಗಿಸಿಕೋ!

ಅಜಮಿಳ :— ಏ, ಬಾರ! ಅವರು ಬಂದಾರ. ಶೀಘ್ರ ಹೋಗಬೇಕಂತ (ಸಾವಿತ್ರಿಬಾಯಿಯು ಬರುವಳು.)

ಸಾವಿತ್ರಿ :— ಅಯ್ಯ! ಇದೇನು ಅನರ್ಥ! ಯಾರಿವರು? ಯಮದೂತರಾಗ್ಯಾರ ದೇವರೇ, ನಿನಗೆ ಕರುಣವಿಲ್ಲವೇ, ಇವರಿಗೆ ಇನ್ನೂ ೩೫ ವರ್ಷ ಮೀರಿಲ್ಲ. ತೀರ ಚಿಕ್ಕವರು. ನನಗಂತೂ ಇನ್ನೂ ಮೂವತ್ತು ವರ್ಷ! ಏನ್ರಿಪಾ ದೂತರ, ನಿಮಗೆ ವಯಸ್ಸಾದವರು ಯಾರೂ ದೊರೆಯಲಿಲ್ಲವೇ? ಕುರುಡರು, ಕುಂಟರು, ಅಮ್ಮಗೋಳ್ಳು ಆಯಿಗೋಳು, ಬಡವರು, ಬಗ್ಗರು, ಮುದುಕರು, ತಡಕರು ಬಂದೇವೆಂದು ಹಾತೊರೆಯುತಾರೆ. ಅವರನ್ನು ಕರೆದುಕೊಂಡು ಹೋಗ-ಬಾರದೇ? ನನ್ನ ಗಂಡನನ್ನು ಬಿಟ್ಟು ನನ್ನನ್ನಾದರೂ ಕರಕೊಂಡು ಹೋಗ್ರಿ. ನಾಆಕೆ ಇದ್ದು ಏನು ಮಾಡುವವಳು? ನನ್ನ ಈ ಕೂಸುಗಳ ಸಂರಕ್ಷಣೆ ಮಾಡುವವರಾರು? ದೇವರಲ್ಲಿ ನ್ಯಾಯವಿಲ್ಲವೇ? ಅಯ್ಯೋ; ಏನು ಬಂತು ಅಂತೀನಿ.

ಯ. ದೂ :— ಅಮ್ಮಾ ನಮಗೆ ವೇಳೆಯಾಯಿತು ನಿಲ್ಲುವ ಹಾಗಿಲ್ಲ. ಇನ್ನು ಅರ್ಧ ತಾಸಿನಲ್ಲಿ ನಾವು ಇವನನ್ನು ಯಮದೇವರಿಗೆ ಒಪ್ಪಿಸಬೇಕು.

೨ನೇ ಯ. ದೂ :— ಇದು ನೋಡಿ. ಈ ಯಮನ ಯಾದಿ! ಇದರಲ್ಲಿ ಅಜಮಿಳನ ಹೆಸರೂ ಇದೆ. ಈಗ ಮುಂಜಾನೆಯಿಂದ ೫೦೦ ಜನರನ್ನು ಮುಟ್ಟಿಸಿಬಂದೆವು. ಇನ್ನು ಸಂಜೆಯೊಳಗಾಗಿ ೫೦೦ ಜನರನ್ನು ಮುಟ್ಟಸಬೇಕಾಗಿದೆ. ಶೀಘ್ರ ಬಿಡಿ.

ಸಾವಿತ್ರಿ :— ಹೇಗಾದರೂ ಮಾಡಿ ಬಿಡುವಹಾಗೆ ಮಾಡಿರಿ. ಏನಾದರೂ ನೆವ ಹೇಳಿರಿ. ಕಾಲು ಬೀಳ್ತೀನಿ. ಊರಲ್ಲಿದ್ದಿಲ್ಲ. ಪರ-ವೂರಿಗೆ ಹೋಗ್ಯಾರೆ, ಪತ್ತೆ ಗೊತ್ತಿಲ್ಲ ಅಂತಾ ಹೇಳಿ ಈ ಸಾರೆ ಬಿಡುವ

ಹಾಗೆ ಮಾಡ್ರಿ. ನಮ್ಮ ಅಕ್ಕವ್ವನ ಮನಿ ಅವರ ಕಚೇರಿ ಒಳಗ ಬೇಲೀಫ್ ಬಹದ್ದೂರರು ಬೇಕಾದಹಾಗೆ ಮುನುಸೂಫರು ಎದುರಿಗಿದ್ದರೂ 'ಊರಲ್ಲಿಲ್ಲ; ಎಲ್ಲಿ ಹೋಗ್ಯಾರೆ ತಿಳಿಯುವಂತಿಲ್ಲ!' ಅಂತಾ ನಿರ್ಭಯದಿಂದ ಬರೆದುಕೊಂಡು ಹೋಗತಾರಂತ. ನನ್ನ ಕೊರಳೊಳಗಿನ ಗುಂಡಿನ ಟಿಕ್ಕಿ ಕೊಡತೇನೆ. ಆದರ ಇದೊಂದು ಸಾರಿ ಪಾರು ಮಾಡಿ ಬಿಡ್ರಿ ಮಹಾರಾಯ್ರ.

ಯ. ದೂ :— ಅದು ಸಾಧ್ಯವಿಲ್ಲ ತಾಯಿ!

ಅಜಮಿಳ:— ಏನ್ರೆಪಾ ನಮ್ಮಲ್ಲಿಯಂತೆಯೇ ನಿಮ್ಮ ಸ್ವರ್ಗದೊಳಗೂ 'ಗೋಪಾಳ ಗೋವಿಂದ' ಸುರು ಆಗಿರತದೆ ಅಂತ ಕೇಳೀನಿ. ನೋಡ್ರಿ ಈಗ ಎಲ್ಲಾದರೂ ದುಡ್ಡೇ ಮೇಲು. ನಮ್ಮಲ್ಲಿ ಪೋಸ್ಟ ಆಫೀಸು, ಶಾಳಾ ಖಾತೆ ಗೋಮಾತಾ— ಅಂದರ ಲಂಚವಿಲ್ಲದ ಖಾತೆ ಅಂತ ಮಾಡಿದ್ವಿವಿ. ಈಗ ಅಲ್ಲಿಯೂ ಪ್ರಾರಂಭವಾಗಿದೆ. ಉಳಿದ ಖಾತೆಗಳ ಹೆಸರಂತೂ ತೆಗೆಯಬೇಡಿರಿ. ಎಲ್ಲಿ ಹೋದರೂ ಲಂಚದ ಮಾತೇ ಮಾತು. ಕೆಲಸ ಮಾಡಿ ತೆಗೆದುಕೊಳ್ಳುವವರೂ ಇದ್ದಾರೆ; ಕೆಲಸಕ್ಕೆ ಸರಿಯಾಗಿ ಬೇಡುವವರಿದ್ದಾರೆ; ಹೆಚ್ಚು ಬೇಡುವವರೂ ಇದ್ದಾರೆ. ನಿಮ್ಮಲ್ಲಿಯೂ ಇದೇ ರೀತಿ ನಡೆದಿರಬೇಕು. ಇಗಾ ಹಿಂಗ ಕೊಡ್ರೆಪಾ. ಏನ್ಹ ಮಂದಿಷ್ಟು ಚಾಪಿ ಹಾಸು. ಪಾಪ ದೂರಿಂದ ಬಂದವರು ಎಷ್ಟೊತ್ತು ನಿಂದರಬೇಕು. ಬೀಡಿ ತೆಗೆದು ಪಾಪ ದೂರಿಂದ ಬಂದವರು ಎಷ್ಟೊತ್ತು ನಿಂದಿರಬೇಕು. ಕೂತುಕೊಳ್ಳಿರಿ. ಅದು ಸೆಟ್ಟಗಸಿಸದಿದ್ದರ, ಕ್ಯಾಪ್ಸಟನ್ ಸಿಗರೇಟು ತಗೊಳ್ಳಿ! ಈ ಸಿಗರೇಟು ಸೇದಿದರೆ, ನಾಲ್ಕು ತಾಸು ತುಂಬಾ ಆರಾಮು. ಕೆ. ಟಿ. ಕುಡಿದ ಮೇಲೆ ಇದನ್ನು ಸೇದಿದರೆ, ನಿಮ್ಮ ಸ್ವರ್ಗ ಬೇಕೇ ಆಗಿಲ್ಲ. ನೀವೂ ಇಲ್ಲೇ ತಳ ಊರಬಾರದು.'

ಏ, ಎರಡು ಕಪ್ಪು ಚೆಲೋ (ಹೆಂಡತಿಗೆ) ಕೆ. ಟಿ. ಚಹಾ ಮಾಡು. ಯಮದೂತರಿಂದ ಗಂಡನನ್ನು ಬಿಡಿಸಿಕೊಂಡ ಸಾವಿತ್ರಿಯ ಕಥೆ ಗೊತ್ತಿಲ್ಲವೇ? ನೀನೂ ಅವಳಂತೆಯೇ ಇವರ ಕಾಲಿಗೆ ಬಿದ್ದು ಬೇಡಿಕೋ. ಇದನ್ನೂ ಕಲಿಸಬೇಕೆ! ಅತ್ತು ನಾನೇ ಬ್ಯಾಡಾಗೇದ ನಿನಗ. ಅಲ್ಲ ನಿನ್ನ ಸಲುವಾಗಿ ಅಲ್ಲದಿದ್ರೆ ನನ್ನ ಸಲುವಾಗ್ಯರ ಹೇಳಕೋಳ್ಳ!

ಸಾವಿತ್ರಿ:— ಏನು ಮಾತಾಡ್ತೀರಿ ನೀವು. ಇವರು ಬಹಳ ದೂರದಿಂದ ಬಂದಾರೆ. ಬಹಳೇ ದಣಿದಾರೆ. ಇವರಿಗೆ ಬೇಕಾದ್ದು ಮಾಡಿಕೊಡತೇನಿ. ಚಹಾ ಮಾಡತೇನಿ, ಕಾಫೀ ಮಾಡತೇನಿ, ಮೇಲೇನಾದರೂ ಬೇಕಾದರೂ ಮಾಡತೇನಿ. ನನ್ನ ಗಂಡನನ್ನು ಮಾತ್ರ ಬಿಡ್ರೆಪಾ. ದೇವರು ಬಂದಾಂಗ ಬಂದೀರಿ. (ಕಪ್ಪ ತೆಗೆದುಕೊಂಡು ಒಳಗೆ ಹೋಗುವಳು.)

ದೂತರು:— ಇದು ನಮ್ಮ ನಿಯಮಬಾಹ್ಯ. ಆದರೂ ಸಣ್ಣವರ ಅತಿಥಿ ಸತ್ಕಾರ ತಿರಸ್ಕರಿಸಲಾರೆ ತೀವ್ರ ಕಾರ್ಯ ಸುರು ಮಾಡಿರಿ! ವೇಳೆಯಾಗತದೆ. ನಮಗೆ ಕೂಡಲು ಅವಕಾಶವಿಲ್ಲ.

ಅಜಮಿಳ:— ಏನ್ರೆಪಾ ನಿಮ್ಮಲ್ಲಿಯೂ ಇದು ಪ್ರಾರಂಭವಾಗಿರಬಹುದು. ನಮ್ಮ ಭೂಮಿಯಲ್ಲಂತೂ ಈ ಚಹಾ ಮುಟ್ಟದ ಸ್ಥಳವಿಲ್ಲ. ಯಾತ್ರೆಗೆ ಹೋಗಲಿ; ಕರ್ಮ ಮಾಡಲು ಹೋಗಲಿ, ಕ್ಷೇತ್ರಕ್ಕೆ ಹೋಗಲಿ ಎಲ್ಲಕ್ಕೂ ಗಣಪತಿ ಪೂಜೆಯಂತೆ ಚಹಾ ತೆಗೆದುಕೊಂಡೇ ಮುಂದಿನ ಕೆಲಸ! ಯಾತ್ರಿಕರನ್ನು ಕರೆಯಲಿಕ್ಕೆ ಬಂದ ಯಾತ್ರಸ್ಥರೂ ಚಹಾದ ಅಂಗಡಿಯಲ್ಲೇ. ಉಭಯತರಿಗೂ ಭೆಟ್ಟಿ ಅಲ್ಲಿಯೇ. ನಿಮ್ಮಲ್ಲೂ ಸಹ ಇದರ ಹಾವಳಿ ಇರಬಹುದು. ಅಪ್ಸರೆಯರು ಸಹ ಚಹಾ ಇಲ್ಲದೆ ಹಾಸಿಗೆಯಿಂದ ಏಳುವದಿಲ್ಲವೆಂದು ಕೇಳಿದ್ದೇನೆ.

ಯ. ದೂ. :— ಎಲ್ಲ ಕಡೆಗೂ ಈ ಚಹಾದ ಭ್ರಮಲು ನಡೆದಿದೆ ನೂರಕ್ಕೆ ಒಬ್ಬರಾದರು ಕುಡಿಯದಿದ್ದವರು ದೊರೆಯುವದು ಕಠಿಣ. ಸಂನ್ಯಾಸಿಗಳಿಗೂ ಈ ಚಟ ಹತ್ತಿಬಿಟ್ಟಿದೆ. ಊರಲ್ಲಿ ಮದಿವೆ-ಮುಂಜಿವೆ ಎಲ್ಲಿ ನೋಡಿದರೂ ಚಹಾದ ಪ್ರಸ್ಥವೇ. ಇನ್ನು ಶ್ರಾದ್ಧದಲ್ಲಿ ಮಾಡುವುದು ಮಾತ್ರ ಉಳಿದಿದೆ. ನಮ್ಮ ಸ್ವರ್ಗದಲ್ಲಿಯಾದರೂ ಇದು ಸಂಪೂರ್ಣ ಸೇರಿಕೊಂಡಿದೆ. ತೀವ್ರ ಆಗಲಿ ವೇಳೆಯಾಗಿದೆ.

ಸಾವಿತ್ರಿ :— (ಚಹಾ ತಾಟಿನಲ್ಲಿಟ್ಟುಕೊಂಡು ಚೂಡಾದ ಎರಡು ಬಟ್ಟಲ ಸಹಿತ ಬರುವಳು.) ಇವೆರಡು ಚೂಡಾ ತೆಗೆದುಕೊಳ್ಳಿ; ಮತ್ತೇನಾದರೂ ಬೇಕಾದರೆ ಹೇಳ್ರಿ, ಚಟ್ಟನಗಿಟ್ನ!

ಯ. ದೂ. :— ಏನೂ ಬೇಡ. ನಿಮ್ಮ ಮಡಿ ಕೆಲಸ ಮುಗಿಯಿತೋ ಇಲ್ಲೊ? ನೀವು ಬಹಳೇ ಮಡಿವಂತರೆಂದು ಕೇಳಿದ್ದೇವೆ ಗಂಡನ ಕಡೆಗೆ ನೀವು ಸ್ವಲ್ಪವೂ ಲಕ್ಷ ಕೊಡುವದಿಲ್ಲವೆಂದು ಸ್ವರ್ಗದಲ್ಲಿ ನಿಮ್ಮ ಖ್ಯಾತಿಯಾಗಿದೆ. ಆದ್ದರಿಂದಲೇ, ಯಮರಾಯನು ನಮ್ಮನ್ನು ಕರೆದು "ಭೂಮಿಯಲ್ಲಿ ಅಜಮಿಳನಿಗೆ ಏನೂ ಸುಖವಿಲ್ಲ, ಅವನಿಗೆ ಚಹಾ ದೊರೆಯುವದಿಲ್ಲ. ಅವನ ಹೆಂಡತಿ ಮಡಿಮಡಿ ಎಂದು ಅವನನ್ನು ನೋಡುವಾಗೇ ಇಲ್ಲ. ಆದ್ದರಿಂದ, ನೀವು ಹೋಗಿ ಅವನನ್ನು ತೀವ್ರ ಕರೆದುಕೊಂಡು ಬನ್ನಿ" ಅಂತ ಕಳಿಸಿದ್ದಾನೆ. ಈ ಅಜಮಿಳನನ್ನು ಹಾದಿಯಲ್ಲಿ ಸುಖದಿಂದ ಕರೆದುಕೊಂಡು ಹೋಗುವೆವು. ಸರಿ, ಸಾವಿತ್ರೆವ್ವಾ, ನಮಗೆ ಹಾದೀ ಬಿಡು. ಹೋಗಲಿಕ್ಕೆ ವೇಳೆಯಾಗುತ್ತದೆ; ಯಮರಾಯನ ಮುಂದೆ ನಾವು ಏನೆಂದು ಹೇಳಬೇಕು? ಈ ಚಹಾ ಕೊಟ್ಟದ್ದು ಸಿಗರೇಟು ಕೊಟ್ಟದ್ದು ಯಾರಿಗೂ ಹೇಳಬೇಡಿರಿ. ನಮ್ಮ ಚಾಕರಿಗೆ ಕೊಡಲಿ ಬಿದ್ದೀತು. ತಿಳೀತೆ?

ಸಾವಿತ್ರಿ :— ನೋಡಿರೆಪ್ಪಾ, ಹೇಗಾದರೂ ಪಾರು ಮಾಡ್ರಿ ನಿಮಗೂ ಹೆಂಡಂದಿರಿರಬೇಕು; ಮಕ್ಕಳಿರಬೇಕು. ನಿಮಗೆ ಹೇಗೆ ಆಗತದೆಯೋ ಹಾಗೇ ನನಗೂ ಆಗತದೆ. ಸ್ವಲ್ಪ ಶಾಂತರಾಗಿ ವಿಚಾರ ಮಾಡಿರಿ. ನನ್ನ ಗಂಡನನ್ನು ಬಿಟ್ಟರೆ ಯಮನು ನಿಮ್ಮನ್ನು ಚಾಕರಿಯಿಂದ ತೆಗೆಯಬಹುದು. ತೆಗೆದರೇನಾಯಿತು? ಇಲ್ಲಿ ನಮ್ಮವರು ತಮ್ಮ ಶಾಲೆಯಲ್ಲಿ ಸಿಪಾಯಿ ಕೆಲಸವನ್ನಾದರೂ ಕೊಡಿಸತಾರೆ. ಚಿಂತೆ ಮಾಡಬೇಡಿರಿ! ಹೆಂಡರು-ಮಕ್ಕಳು ಸಹ ಸುಖವಾಗಿ ಇಲ್ಲಿಗೆ ಬನ್ನಿರಿ.

ಅಜಮಿಳ:– ನಾರಾಯಣಾ, ಕಡೆಯ ಸಾರೆಯಾದರೂ ಒಮ್ಮೆ ನಿನ್ನ ಮುಖವನ್ನು ತೋರಿಸು. ನನ್ನನ್ನಿವರು ಕರೆದುಕೊಂಡು ಹೋಗುವರು; ನಾನು ಹೋದಬಳಿಕ ನಿಮ್ಮ ತಾಯಿಯನ್ನು ಚೆನ್ನಾಗಿ ನೋಡಿಕೊಂಡು ಹೋಗು.

(ಅಷ್ಟರಲ್ಲಿ ವಿಷ್ಣುದೂತರು ಬರುವರು.)

ವಿಷ್ಣು ದೂತ:— ಇವನನ್ನು ಮುಟ್ಟಬೇಡಿರಿ. ಇವನ ದಿವಸಗಳು ಇನ್ನೂ ಮುಗಿದಿಲ್ಲ. ಇವನು ಮಹಾ ಪುಣ್ಯವಂತ! ಹರಿಭಕ್ತ! ಮರಣ ಸಮಯದಲ್ಲಿ ಇವನ ಬಾಯಿಂದ ನಾರಾಯಣನೆಂಬ ನಾಮೋಚ್ಚರಣೆಯಾದಕೂಡಲೇ ಶ್ರೀಹರಿಯು ನಮ್ಮನ್ನು ಕರೆದು 'ನೀವು ಶೀಘ್ರ ಭೂಲೋಕಕ್ಕೆ ಹೋಗಿರಿ. ಅಲ್ಲಿ ಅಜಮಿಳನನ್ನು ಯಮದೂತರು ಕರೆಯಲಿಕ್ಕೆ ಹೋಗಿದ್ದಾರೆ. ಅವನು ತನ್ನ ಮಗ ನಾರಾಯಣನನ್ನು ಕರೆದರೂ, ನನ್ನ ನಾಮೋಚ್ಚಾರಣೆಯನ್ನು ಗಟ್ಟಿಯಾಗಿ ಮಾಡಿದ್ದಾನೆ. ಅಲ್ಲಿ ಹೋಗಿ ಯಮದೂತರಿಗೆ ಹೇಳಿ. ಇವನ ಹೆಂಡತಿಯಾದ ಸಾವಿತ್ರಿಬಾಯಿಗೆ ಧರ್ಮೋಪದೇಶ ಮಾಡಿರಿ. ಪ್ರಪಂಚವೆಂದರೇನು? ಪ್ರಪಂಚದಲ್ಲಿ ಪತಿಯ ಸ್ಥಾನವೇನು? ಎಲ್ಲ ಧರ್ಮಕ್ಕಿಂತಲೂ ಸತಿಗೆ ಪತಿಸೇವೆಯೇ ಮುಖ್ಯವಾದದ್ದು. ಅವನಿಗೆ ಯಾವಾಗಲೂ ಅನುಕೂಲಳಾಗಿ ನಡೆಯತಕ್ಕದ್ದು. ಪ್ರಪಂಚವೊಂದು ಚಕ್ಕಡಿ. ಸತಿಪತಿಯರೆಂದರೆ ಎರಡು ಗಾಲಿಗಳು. ಎರಡೂ ಕೂಡಿಯೇ ನಡೆಯಬೇಕು. ಒಂದು ಹೋಳಾದರೆ ಚಕ್ಕಡಿಯೇ ಒಗ್ಗಾಲಿಯಾಗುತ್ತದೆ. ಪತಿಯ ಪ್ರೀತಿಯೇ ಹರಿಯ ಪ್ರೀತಿ. ಬ್ರಾಹ್ಮಣ, ದೇವರು ಎಲ್ಲದರಲ್ಲಿಯೂ ಪತಿಯ ಸೇವೆಯೇ ಮುಖ್ಯ. ಈ ಧರ್ಮವನ್ನು ಅವಳಿಗೆ ತಿಳಿಯಹೇಳಿ ಸಾವಿತ್ರಿಬಾಯಿಯನ್ನು ಅಜಮಿಳನ ಪಾದಕ್ಕೆ ಹಾಕಿರಿ. ಇನ್ನು ಮುಂದೆ ಪತಿಯ ಸೇವೆಯನ್ನೇ ಮಾಡುವೆನೆಂದು ಅವಳಿಂದ ವಚನ ತೆಗೆದುಕೊಂಡು, ಆ ಯಮದೂತರನ್ನು ನಾನು ಕಳಿಸಿರುವೆನೆಂದು ಹೇಳಿ, ಅವರನ್ನು ಹಿಂದೆ ಕಳಿಸಿರಿ! ನೀವು ತಿರುಗಿ ಬನ್ನಿರಿ. (ಯಮದೂತರಿಗೆ) ಅದಕ್ಕಾಗಿ ಇವನನ್ನು ನೀವು ಬಿಟ್ಟು ನಡೆಯಿರಿ.

ಯ. ದೂ. :– ನಮ್ಮಲ್ಲಿಯೂ ಈಗ ಟೆಲಿಫೋನ್ ಪ್ರಾರಂಭವಾಗಿದೆ. ನಮ್ಮ ಯಜಮಾನನನ್ನ ನಾವು ಕೇಳುತ್ತೇವೆ. (ಫೋನಿಗೆ ಕಿವಿ ಹಚ್ಚುವರು) " ಆ ವಿಷ್ಣು ಭಕ್ತ ಅಜಮಿಳನನ್ನು ಬಿಟ್ಟುಬಿಡಿ. ಅವನನ್ನು ಇಲ್ಲಿಗೆ ತರುವ ಕಾರಣವಿಲ್ಲ. "

ಅಜಮಿಳ:— ಎಲ್ಲರೂ ಸ್ವಲ್ಪ ನಿಲ್ಲಿ. ಇನ್ನೊಮ್ಮೆ ಚಹಾ ತೆಗೆದುಕೊಂಡು ಸಿಗರೇಟು ಸೇದಿ ಸಂತೋಷದಿಂದ ಹೋಗುವಿರಂತೆ.

ಸಾವಿತ್ರಿ:— ಹರಿಯು ಹೇಳಿ ಕಳಿಸಿದ ಮಾತು ಅಕ್ಷರಶಃ ಪಾಲಿಸುತ್ತೇನೆ. ಸಂತೋಷವಾಯಿತು. ಒಂದು ಹಂಡೆ ಚಹವಾದರೂ ಮಾಡತೇನಿ. ನನ್ನ ಕೂಸುಗಳು ಇಲ್ಲೇ ಇರಬಹುದು. ಈ ಸಂಭ್ರಮದ ಪ್ರಸಂಗದಲ್ಲಿ ಅವುಗಳನ್ನು ಕರೆದುಕೊಂಡು ಬರುತ್ತೇನೆ. ಸ್ವಲ್ಪ ತಡೆಯಿರಿ. ಚಹಾ ತೆಗೆದುಕೊಂಡು ಆನಂದದಿಂದ ಹೋಗಿರಿ.

(ಪರದೆ ಬೀಳುವದು ಯಮದೂತರೂ ವಿಷ್ಣುದೂತರೂ ಕೋಣೆಯಲ್ಲಿ ಹೋಗಿ, ವೇಷ ತೆಗೆದು ಹೊರಗೆ ಬಂದು ಕುರ್ಚಿಯ ಮೇಲೆ ಕೂಡುವರು. ಸಾವಿತ್ರಿಬಾಯಿ ಚಹಾ, ಬಾಳೇ ಹಣ್ಣು, ಸಜ್ಜಿಗೆ, ಅವಲಕ್ಕಿ ತೆಗೆದುಕೊಂಡು ಬರುವಳು. ಹುಡುಗರನ್ನು ಸಂಗಡ ತರುವಳು.)

ಸಾವಿತ್ರಿ:— ಏನಿದು ಆಶ್ಚರ್ಯ! ಅತಿಥಿಗಳು ಎಲ್ಲಿದ್ದಾರೆ? ಇವರೇ ನನಗೆ ಧರ್ಮದ ನಿಜವಾದ ಗೂಢವನ್ನು ಕಲಿಸಿದರೆ? ಒಳ್ಳೇದಾಯಿತು. ಒಂದು ಕಾರಣದಿಂದಾದರೂ ಅಜ್ಞಾನಿಯಾದ ಹೆಂಗಸಿಗೆ ಬುದ್ಧಿ ಬರತದೆ.

ಅಜಮಿಳ:— ಎಲ್ಲವೂ ನೆಟ್ಟಗಾಯಿತು. ನನ್ನ ಹೆಂಡತಿಗೆ ನಿಜವಾದ ಧರ್ಮದ ಜ್ಞಾನವಾಯಿತು. ಪರಮಾತ್ಮನಿಗೆ ಡಂಭಾಚಾರ ಬೇಕಾಗಿಲ್ಲ, ಸುಳ್ಳು ಧರ್ಮ ಬೇಕಾಗಿಲ್ಲ. ಜಗತ್ತಿನಲ್ಲಿಯ ಎಲ್ಲ ಪ್ರಾಣಿಗಳು ಅವನ ಸೃಷ್ಟಿಯೇ. ಧರ್ಮವೆಂದರೆ ಸೃಷ್ಟಿಯ ಎಲ್ಲ ಪ್ರಾಣಿಗಳು ಸಂತುಷ್ಟರಾಗಿ ಒಬ್ಬರಿಗೊಬ್ಬರು ಪ್ರೇಮದಿಂದಲೇ ಇರಬೇಕು. ಬ್ರಾಹ್ಮಣರು ಎಲ್ಲ ಸಮಾಜಗಳಲ್ಲಿಯೂ ಶ್ರೇಷ್ಠರೆಂದು ಗಣ್ಯರಾದದ್ದು ನಿಜ. ಆದರೆ, ಆ ಶ್ರೇಷ್ಠತೆಯು ದ್ರವ್ಯದಿಂದ ಅಥವಾ ಸ್ವಾರ್ಥಸಾಧನೆಯಿಂದ ಬಂದಿಲ್ಲ ಬ್ರಾಹ್ಮಣರು ಉಂಛ ವೃತ್ತಿಯಿಂದ ಜೀವಿಸಬೇಕೆಂಬ ಶಾಸ್ತ್ರವಿದೆ. ಇದರಂತೆಯೇ ಹಿಂದಿನ ಬ್ರಾಹ್ಮಣರಾದರೂ ಜೀವಿಸುತ್ತಿದ್ದು, ಸರ್ವ ಪ್ರಾಣಿಗಳ ಕ್ಷೇಮಚಿಂತನೆ ಮಾಡುತ್ತಿದ್ದರು. ದೇವರು ಸಹ ಇಂಥವರನ್ನು ಪೂಜೆ ಮಾಡಿರಬಹುದು. ಇಂಥವರಿಗೆ ಯಾರು ಮರ್ಯಾದೆ ಕೊಡಲಿಕ್ಕಿಲ್ಲ? "ಸಹನಾವವತು, ಸಹನೌ ಭುನಕ್ತು ಸಹವೀರ್ಯಂ ಕರವಾವಹೈ" ಇದೇ ಜಗತ್ತಿನ ಮಂತ್ರ. ಇದೇ ಪ್ರಕಾರ ಜಗತ್ತು ನಡೆದರೆ, "ಕಲಿಯುಗ ದ್ವಾಪರವಾಗುವುದು!" ಎಲ್ಲಿ ನೋಡಿದಲ್ಲಿ ಸ್ವರ್ಗ ಸಾಮ್ರಾಜ್ಯ ನೆಲೆಗೊಳ್ಳುವುದು. ಸತಿಪತಿಗಳು ಪ್ರೇಮದಿಂದ ಇರಲಿ; ಮಕ್ಕಳು ತಂದೆಯಲ್ಲಿ ವಿಧೇಯರಾಗಿರಲಿ, ಬಡವರಲ್ಲಿ, ಭಿಕ್ಷುಕರಲ್ಲಿ ಎಲ್ಲರೂ ಕರುಣ ತೋರಲಿ. ಇದೇ ಧರ್ಮ! ಇದೇ ಸ್ವರ್ಗ!

ಹತ್ತಿ ಬಿಡಿಸುವ ಹಾಡು

(ಜಾನಪದಚಿತ್ರ)

" ಪ್ರತಿಭಾಂಕುರ" ಧಾರವಾಡ

ಬಾಯಕ್ಕ ಹತ್ತೀಹೊಲಕ — ಬಾಯಕ್ಕ ನೀನು ಬಾಯಕ್ಕ ಹತ್ತೀ ಹೊಲಕ! ॥ ಪಲ್ಲ ॥

ಬಾಯಕ್ಕ ಹತ್ತೀ ಹೊಲಕ—
ನಾಯಕ್ಕ ಬಂದಿದಾಳು;
ನೀಯಾಕ ನಿಂತೀ ? ದಾರಿ-
ಕಾಯಾಕ ಹತ್ತಿದ್ದೀವು. ೧

ಹತ್ತಿಯ ಹೊಲಾ ಪೂಜೆಮಾಡಿ
ಮತ್ತೆ ಹಾಲಿನ ಎಡಿ ನೀಡಿ—
ಮುತ್ತೈದ್ಯಾರ‍್ರ ಕೈಲಿ ಕನ್ನಿ-
ಹತ್ತೀ ಬಿಡಿಸಿ ತರಬೇಕಂತ. ೨

ಅಳ್ಳು ಸೂರಿ ಮಾಡಿದ್ಹಾಂಗ
ಎಲ್ಲಾ ಹೊಲ ಒಡದೈತೀಗ—
ನಿಲ್ಲೂ ಹೊತ್ತೀನವ್ವಾ ಬ್ಯಾಗ
ಕಲ್ಲವ್ವನ ಕರೆದುಕೊಂಡು. ೩

ಹೊತ್ತು ಬಿಂದಿಗೀ ನೆತ್ತಿಯ ಮ್ಯಾಗ
ಬುತ್ತೀ ಗಂಟು ಅದರ ಮ್ಯಾಗ—
ಅತ್ತ ಕೂಸು ಬಗಲಿನ್ಯಾಗ
ಎತ್ತಿಕೊಂಡು ಹೋಗೋಣಂತ. ೪

ಚಳಚಳ ಬಿಸಲು ಬಡಿಸಿಕೊಂತ
ಗಳಗಳ ನೀರು ಇಳಿಸಿಕೊಂತ
ತೊಳತೊಳ ಹತ್ತೀ ಬಿಡಿಸಿ ಕಟ್ಟಿ
ತಲಿಯ ಭಾರ ತರವ್ರೋಣಂತ. ೫

ಶೆರಗು ತಲಿಗೀ ಸುತ್ತಿಕೊಂಡು
ಬರಿಯ ಜೆನ್ನ ಬಿಟ್ಟುಕೊಂಡು—
ಅರಿವೀನದಕ್ಕ ಕಟ್ಟಿಕೊಂಡು
ಬಿರಿದ ಹತ್ತೀ ಬಿಡಿಸೋಣಂತ. ೬

ನಾದಸುದ್ದೀ ಆಡಿಕೊಂತ
ಕೂಡಿ ಆಟ್ಯಾ ಹಾಡಿಕೊಂತ
ಮೋಡ ಆಗೂದ್ರಾಗ ಮೊದಲ—
ಬೇಡಿನ ಹತ್ತಿ ಬಿಡಿಸೋಣಂತ! ೭

ಬೆವರ ನೀರ‍್ರ ಒರಸಿಕೊಂತ
ಶಿವನ ನಾವಾ ಸೊರಸಿಕೊಂತ
ಕವಿದ ಮಳಿಯು ಬರೂದರೊಳಗ
ದವಡು ದವಡು ಬಿಡಿಸೂಣಂತ! ೮

ಕೆಳ್ಳನ ರೊಟ್ಟಿ ಕೈಯಾಗ್ಹಿಡದು
ಎಳ್ಳ ಹಿಂಡಿ ಮೊಸರು ತೊಡೆದು
ಉಳ್ಳೀಗಡ್ಡೀ ಕಡದುಕೊಂತ
ಎಲ್ಲಾರ್ ಕೂಡಿ ತಿನ್ನೋಣಂತ! ೯

ತಂದ ಬುತ್ತಿಯ ಗಂಟು ಬಿಚ್ಚಿ
ಮುಂದಿಗೆಲ್ಲಾ ಹಂಚೀ ಹಚ್ಚಿ
ಬಿಂದಿಗಿಯತ್ತಿ ನೀರು ಕುಡಿದು
ಕಂದನ್ನೆತ್ತಿ ಕುಂಡ್ರೋಣಂತ ! ೧೦

ಬಿಳಿಲ ಹತ್ತಿ ಬಿಂದಿಗ ಹತ್ತಿ
ಹಸಿದ ಹತ್ತೀ ಹಾಲ ಹತ್ತೀ
ಕಸಿದ ಹತ್ತೀ ಕಾಡಿ ಬೇಡಿ
ಮುಸಕುಮಾಡಿ ಮರಳೋಣಂತ ! ೧೧

ಕಾಳವ್ವಾ ಬಾಳವ್ವಾ ಬರ್ರೀ
ನೀಲವ್ವಾ ನಿಂಬೆವ್ವಾ ಬರ್ರೀ—
ಯಲ್ಲವ್ವಾ ಮಲ್ಲವ್ವಾ ಬರ್ರೀ
ಯಾಕೀ ಆತು, ಯಾವಾಗಿನ್ನ ? ೧೨

ಒಬ್ಬರಿಗೊಬ್ಬರು ಹೊರಿಸಿಕೊಂತ-
ಒಬ್ಬರದೊಬ್ಬರು ಇಳಿಸಿಕೊಂತ
ಮಬ್ಬುಗತ್ತಲಾಗೂದ್ರೊಳಗ
ಉಬ್ಬಿನಿಂದ ತಿರುಗೋಣಂತ. ೧೩

ಕೂಲೀ ಹತ್ತಿಯಲ್ಲಿ ಕೊಂಡು
ಹಾಳೀ ಕಡ್ಡಿದೇಟು ತಿಂದು
ಮ್ಯಾಲೆ ಯಾದವಾಡ ಹನುಮ-
ನಾಲಯಕ ಹೋಗೋಣಂತ! ೧೪

ಗಣಿತದ ಮೂಲಸ್ವರೂಪ

ಶ್ರೀ. ವ್ಹಿ. ಕೆ. ರಾಘವೇಂದ್ರಾಚಾರ್ಯ, ಜೂ. ಬಿ. ಎ. ಕರ್ನಾಟಕ ಕಾಲೇಜ ಧಾರವಾಡ

卐

ಶೂನ್ಯಕ್ಕೆ ಯಾವುದೇ ಬೆಲೆಯು ಇಲ್ಲವಾದರೂ, ಗಣಿತ ಪ್ರಪಂಚದಲ್ಲಿ ಅದರ ಬೆಲೆಯು ಅತ್ಯಮೂಲ್ಯವಾಗಿದೆ. ಶೂನ್ಯವು ಭಾರತೀಯ ಗಣಿತಜ್ಞರಿಂದ ಜಗತ್ತಿಗೆ ದೊರೆತ ಮಹತ್ತ್ವದ ಕಾಣಿಕೆಯಾಗಿದೆ. ಆದಕ್ಕಾಗಿ ಲೋಕದ ಗಣಿತಜ್ಞರೆಲ್ಲರೂ ಭಾರತೀಯರ ಬುದ್ಧಿಯನ್ನು ಕೊಂಡಾಡುತ್ತಾರೆ.

卐

ಹಿಂದಿನ, ಇಂದಿನ ಯುಗದಲ್ಲಿ ಗಣಿತ ವಿಷಯದ ಮೂಲ ಸ್ವರೂಪವನ್ನೂ ಅವರಲ್ಲಿಯ ಗಹನವಾದ, ಸಂದಿಗ್ಧಪೂರ್ಣವಾದ ವಿಷಯವನ್ನೂ ತಿಳಿದುಕೊಳ್ಳಲು ಪ್ರಾಚೀನ, ಮಧ್ಯಮ, ಆಧುನಿಕ ಗಣಿತಜ್ಞರು ಬಹಳ ಶ್ರಮವನ್ನು ಪಟ್ಟಿದ್ದಾರೆ. ಗಣಿತವು ಇಂದಿನ ಯುಗದಲ್ಲಿ ತುಂಬ ಮಹತ್ತ್ವದ್ದು; ಅಲ್ಲದೆ ಅದು ಮನುಷ್ಯನಿಗೆ ತೀರ ಅಗತ್ಯವಾದುದು. ಗಣಿತವು ಒಂದು ಮೂಲಭೂತವಾದ ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ಬಂದ ವಿಷಯವಾಗಿದೆಯೆಂದು ಹೇಳುವುದುಂಟು

ಗಣಿತವು ಮನಮೋಹಕವಾದ ಒಂದು ವಿಷಯ. ಅದು ಸಹಸ್ರಾರು ವರ್ಷಗಳಿಂದ ನಾನಾಮುಖವಾಗಿ ಬೆಳೆದು ಪಸರಿಸುತ್ತ ಬಂದಿದೆ. ಇದನ್ನು ಮೊದಲು ಕಂಡುಹಿಡಿದವರು ಪ್ರಾಚೀನ ಹಿಂದುಗಳು. ಗಣಿತ ಶಾಸ್ತ್ರವು ಎಲ್ಲ ಶಾಸ್ತ್ರಗಳಿಗೂ ಮೂಲ ಸ್ತಂಭದಂತಿರುವುದು. ಗಣಿತ ಶಾಸ್ತ್ರಕ್ಕೆ ಅಂಕಗಣಿತವೇ ತಳಹದಿ. 'ಅಂಕ' ಅಂದರೆ ಸಂಖ್ಯೆ ಅಥವಾ ಒಂದು ಎಂದು ಅರ್ಥವಾಗುವುದುಂಟು. ನಾಟಕಗಳಲ್ಲಿ, ಸಿನೆಮಾಗಳಲ್ಲಿ 'ಮೊದಲನೆಯ ಅಂಕವಾಯಿತು' 'ಎರಡನೆಯ ಅಂಕವಾಯಿತು' ಎಂದು ಹೇಳುತ್ತಾರೆ. ಅದರ ಅರ್ಥವೇನೆಂದರೆ ಮೊದಲನೆಯ ದೃಶ್ಯವಾಯಿತು—ಎಂದು ಅಂಕ ಗಣಿತವನ್ನು ಸುವ್ಯವಸ್ಥೆಗೆ ತಂದ ಹೊರತು ಶಾಸ್ತ್ರಗಳ, ಹಾಗೂ ನಾಗರಿಕತೆಯ ಪ್ರಗತಿಗೆ ಮಾರ್ಗವೆ ಇರಲಿಲ್ಲ. ಈ ಮಹತ್ಕಾರ್ಯವನ್ನು ನಮ್ಮ ಹಿರಿಯರು (ಪ್ರಾಚೀನರು) ಎಷ್ಟು ಶ್ಲಾಘ್ಯವಾದ ರೀತಿಯಲ್ಲಿ ನೆರವೇರಿಸಿದ್ದಾರೆ!

ಪ್ರಾಚೀನರು ಹಾಕಿಕೊಟ್ಟ ಅಂಕಿಗಳು ಇಂದಿನ ಜನಜೀವನ ಕ್ರಮದಲ್ಲಿ ಬೆರೆತುಹೋಗಿವೆ ನಾವು ಕೆಲವು ಕಾಲ ಆಹಾರವನ್ನು ಬಿಡಬಹುದು, ನಿದ್ರೆಯನ್ನು ಬಿಡಬಹುದು; ಆದರೆ ಅಂಕಗಣಿತವನ್ನು ಬಿಡಲಾರೆವು. ಅಂಕೆಗಳ ಕೈ ಬಿಟ್ಟರೆ ಹಣವನ್ನು ಎಣಿಸುವಹಾಗಿಲ್ಲ. ಕೋರ್ಟು, ಕಚೇರಿ, ದೊಡ್ಡ ದೊಡ್ಡ ಆಫೀಸುಗಳಲ್ಲಿ ಚಲಾವಣೆ ನಡೆಯುವ ಹಾಗಿಲ್ಲ. ಎಂದಮೇಲೆ ಅದು ಮನುಷ್ಯನಿಗೆ ಎರಡನೆಯ ಜೀವ ಇದ್ದ ಹಾಗೆ, ಅದಿಲ್ಲದಿದ್ದರೆ ತಾರೀಖನ್ನು ನೆನೆಯುವ ಹಾಗಿಲ್ಲ. ತೂಕ, ಅಳತೆ, ವ್ಯಾಪಾರ ಯಾವುದನ್ನೂ ಮಾಡುವ ಹಾಗಿಲ್ಲ; ಹೊಟ್ಟೆಯ ಮೇಲೆ ಗಣಿತವಿಲ್ಲದಿದ್ದರೆ ಮಾತನಾಡುವ ಹಾಗೆಯೆ ಇಲ್ಲ. ಹಾಲಿನ ಬಿಳಿಯ ಬಣ್ಣದಂತೆ ಅಂಕಿಗಳು ನಮ್ಮ ಜೀವನದಲ್ಲಿ ಲೀನವಾಗಿಬಿಟ್ಟಿವೆ.

ಹೀಗೆಯೆ ಸ್ವಲ್ಪ ಆಲೋಚನೆ ಮಾಡಿ ನೋಡಿದರೆ, ಅಂಕಿಗಳನ್ನು ಕೈ ಬಿಟ್ಟ ಮರುಕ್ಷಣದಲ್ಲಿ ನಮ್ಮ ನಾಗರಿಕತೆ, ನಮ್ಮ ಜೀವನ ಕಾಡು ಮನುಷ್ಯನ ದರ್ಜೆಗೆ ಹೋಗುತ್ತದೆ ಎಂಬುದು ಕಂಡುಬರುವುದು. ಅಂಕಿಗಳು ಬರುವುದಕ್ಕಿಂತ ಮುಂಚೆ ಮನುಷ್ಯನ ಸ್ಥಿತಿಯು ಯಾವ ರೀತಿಯಲ್ಲಿತ್ತು? ಅಧೋಗತಿಯಲ್ಲಿರಲಿಕ್ಕೇ ಬೇಕು! ಈ ಕೀಳು ದೆಸೆಯಲ್ಲೇ, ಮಾನವಕೋಟಿ ಸಹಸ್ರಾರು ವರ್ಷಗಳನ್ನು ತಳ್ಳಿ, ಅಲ್ಲಿಂದ ಮುಂದೆ ಏಕ, ಬಹು ಎಂಬ ವ್ಯತ್ಯಾಸದ ಅರಿವನ್ನು ಕಂಡುಕೊಂಡಿತು. ಅಲ್ಲಿಂದ **ಏಕ, ದ್ವಿ, ಬಹು** ಎಂಬ ವಿಭೇದದ ಅರಿವಾಗುವುದಕ್ಕೆ ಎಷ್ಟೋ ಕಾಲ ಬೇಕಾಯಿತು. ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಗಣಿತವನ್ನು ಅರಿಯದ ಜನರೇ ಇಲ್ಲ ಆದರೂ ಅಲ್ಲಲ್ಲಿ ಕೆಲವು ಉದಾಹರಣೆಗಳನ್ನು ವೃತ್ತಪತ್ರಿಕೆಯಲ್ಲಿ ಓದುತ್ತಿದ್ದೇವೆ; ಏನೆಂದರೆ:— ಉತ್ತರ-ದಕ್ಷಿಣ ಧ್ರುವ ಪ್ರದೇಶ ಮತ್ತು ಆಫ್ರಿಕೆಯಲ್ಲಿ, ಒಂದು ಪದಾರ್ಥವನ್ನು ಕೇಳಬೇಕಾದರೆ ಮೂಗನ್ನೋ ಕಾಲನ್ನೋ ಮುಟ್ಟಿ ತೋರಿಸಬೇಕಾಗುವುದಂತೆ. ಎಂತಹ ವಿಚಿತ್ರವಾದ ಕ್ರಿಯೆ ಎಂದು ಓದುಗರಿಗೆ ಕುತೂಹಲವೆನಿಸುವುದು ಸಹಜವೇ, ಅಹೆ. ಇದರ ಮೇಲಿಂದ ಅಲ್ಲಿಯ ವರಿಗೆ **ಒಂದು** ಎಂಬುದರ **ಅರಿವು** ಹೇಗೋ ಉಂಟಾಗಿ ಅದಕ್ಕೆ ಅವರು "ಅಂಗ" ಎಂಬ ಒಂದು ಧ್ವನಿ ಸಂಕೇತವನ್ನಿಟ್ಟುಕೊಂಡಿದ್ದಾರೆ. ಅವರ ಭಾಷೆಯಲ್ಲಿ 'ಎರಡು' ಎಂಬುದಕ್ಕೆ ಸಂಕೇತವಾಗಲಿ ಹೆಸರಾಗಲಿ ಇಲ್ಲವೇ ಇಲ್ಲ.

ಈಚೆಗೆ ಆಸ್ಟ್ರೇಲಿಯಾ ದ್ವೀಪ ನಿವಾಸಿಗಳ ಮೂವತ್ತು ಭಾಷೆಗಳನ್ನು ಪರಿಶೀಲಿಸಿದುದರಲ್ಲಿ, ಯಾವುದಕ್ಕೂ ನಾಲ್ಕಕ್ಕಿಂತ ಹೆಚ್ಚು ಅಂಕೆಯ ಹೆಸರೇ ಕಾಣಲಿಲ್ಲ. ಅವರ ನಾಗರಿಕತೆ ಅಲ್ಲಿಗೇ ನಿಂತುಹೋಗಿದೆ. ಭಾಷೆಯು ನಾಗರಿಕತೆಯ ಮಟ್ಟವನ್ನು ಬಹುಮಟ್ಟಿಗೆ

ಹತ್ತಿ ಬಿಡಿಸುವ ಹಾಡು

(ಜಾನಪದಚಿತ್ರ)

" ಪ್ರತಿಭಾಂಕುರ" ಧಾರವಾಡ

ಬಾಯಕ್ಕ ಹತ್ತೀಹೊಲಕ — ಬಾಯಕ್ಕ ನೀನು ಬಾಯಕ್ಕ ಹತ್ತೀ ಹೊಲಕ! ‖ ಪಲ್ಲ ‖

ಬಾಯಕ್ಕ ಹತ್ತೀ ಹೊಲಕ—
　　ಮಾಯಕ್ಕ ಬಂದಿದಾಳು;
ನೀಯಾಕ ನಿಂತೀ? ದಾರಿ.
　　ಕಾಯಾಕ ಹತ್ತಿದ್ದೀವು. ೧

ಹತ್ತಿಯ ಹೊಲಾ ಪೂಜಮಾಡಿ
　　ಮತ್ತೆ ಕಾಲಿನ ಎಡಿ ನೀಡಿ—
ಮುತ್ತೈದ್ಯಾರ್ತು ಕೈಲಿ ಕನ್ನಿ-
　　ಹತ್ತೀ ಬಿಡಿಸಿ ತರಬೇಕಂತ. ೨

ಅಕ್ಕ ಸೂರಿ ಮಾಡಿದ್ಹಾಂಗ
　　ಎಲ್ಲಾ ಹೊಲ ಒಡದ್ದೈತೀಗ—
ನಿಲ್ಲೂ ಹೊತ್ತೀನವ್ವಾ ಬ್ಯಾಗ
　　ಕಲ್ಲವ್ವನ ಕರೆದುಕೊಂಡು. ೩

ಹೊತ್ತು ಬಿಂದಿಗೀ ನೆತ್ತಿಯ ಮ್ಯಾಗ
　　ಬುತ್ತೀ ಗಂಟು ಆದರ ಮ್ಯಾಗ—
ಅತ್ತ ಕೂಸು ಬಗಲಿನ್ಯಾಗ
　　ಎತ್ತಿಕೊಂಡು ಹೋಗೋಣಂತ. ೪

ಚಳಚಳ ಬಿಸಲು ಬಡಿಸಿಕೊಂತ
　　ಗಳಗಳ ನೀರು ಇಳಿಸಿಕೊಂತ
ತೊಳತೊಳ ಹತ್ತೀ ಬಿಡಿಸಿ ಕಟ್ಟಿ
　　ತಲಿಯು ಭಾರ ತರವ್ವೋಣಂತ. ೫

ಕರಗು ತಲಿಗೇ ಸುತ್ತಿಕೊಂಡು
　　ಬರಿಯು ಬೆನ್ನು ಬಿಟ್ಟುಕೊಂಡು—
ಅರಿವೀ ನಡಕ್ಕ ಕಟ್ಟಿಕೊಂಡು
　　ಬಿಂದ ಹತ್ತೀ ಬಿಡಿಸೋಣಂತ. ೬

ನಾದಸುದ್ದೀ ಆಡಿಕೊಂತ
　　ಕೂಡಿ ಆಟ್ವು ಹಾಡಿಕೊಂತ
ನೋಡ ಆಗೂದ್ರಾಗ ನೊದಲ—
　　ಬೀಡಿನ ಹತ್ತಿ ಬಿಡಿಸೋಣಂತ! ೭

ಬೆವರ ನೀರ್ತು ಒರಸಿಕೊಂತ
　　ಶಿವನ ನಾಮಾ ಸೊರಸಿಕೊಂತ
ಕವಿದ ಮಳಿಯುತ್ತು ಬರೂದರೊಳಗ
　　ದವಡು ದವಡು ಬಿಡಿಸೂಣಂತ! ೮

ತೆಳ್ಳನ ರೊಟ್ಟಿ ಕೈಯ್ಯಾಗ್ಹಿಡದು
　　ಎಳ್ಳ ಹಿಂಡಿ ಮೊಸರು ತೊಡೆದು
ಉಳ್ಳೀಗಡ್ಡೀ ಕಡದುಕೊಂತ
　　ಎಲ್ಲಾರ್ ಕೂಡಿ ತಿನ್ನೋಣಂತ! ೯

ತಂದ ಬುತ್ತಿಯ ಗಂಟು ಬಿಚ್ಚಿ
　　ಮಂದಿಗೆಲ್ಲಾ ಹಂಡೀ ಹಚ್ಚಿ
ಬಿಂದಿಗಿಯತ್ತಿ ನೀರು ಕುಡಿದು
　　ಕಂದನ್ನೆತ್ತಿ ಕುಂಡ್ರೋಣಂತ! ೧೦

ಬಿಟಲ ಹತ್ತಿ ಬಿಂದಿಗ ಹತ್ತಿ
　　ಹಸಿದ ಹತ್ತೀ ಹಾಲ ಹತ್ತೀ
ಕಸಿದ ಹತ್ತೀ ಕಾಡಿ ಬೇಡಿ
　　ಮುಸಕುಮಾಡಿ ಮರಳೋಣಂತ! ೧೧

ಕಾಳವ್ವಾ ಬಾಳವ್ವಾ ಬರ್ರೀ
　　ನೀಲವ್ವಾ ನಿಂಬೆವ್ವಾ ಬರ್ರೀ—
ಯಲ್ಲವ್ವಾ ಮಲ್ಲವ್ವಾ ಬರ್ರೀ
　　ಯಾಳೇ ಆತು, ಯಾವಾಗಿನ್ನ? ೧೨

ಒಬ್ಬರಿಗೊಬ್ಬರು ಹೊರಿಸಿಕೊಂತ-
　　ಒಬ್ಬರದೊಬ್ಬರು ಇಳಿಸಿಕೊಂತ
ಮಬ್ಬುಗತ್ತಲಾಗೂದ್ರೊಳಗ
　　ಉಬ್ಬಿನಿಂದ ತಿರುಗೋಣಂತ. ೧೩

ಕೂಲೀ ಹತ್ತಿಯಲ್ಲಿ ಕೊಂಡು
　　ಹಾಳೀ ಕರ್ಜದಂಟು ತಿಂದು
ಮ್ಯಾಲೆ ಯಾದವಾಡ ಹನವು-
　　ನಾಲಯಕ ಹೋಗೋಣಂತ! ೧೪

ಗಣಿತದ ಮೂಲಸ್ವರೂಪ

ಶ್ರೀ. ವ್ಹಿ. ಕೆ. ರಾಘವೇಂದ್ರಾಚಾರ್ಯ, ಜೂ. ಬಿ. ಎ. ಕರ್ನಾಟಕ ಕಾಲೇಜ ಧಾರವಾಡ

卐

ಶೂನ್ಯಕ್ಕೆ ಯಾವುದೇ ಬೆಲೆಯು ಇಲ್ಲವಾದರೂ, ಗಣಿತ ಪ್ರಪಂಚದಲ್ಲಿ ಅದರ ಬೆಲೆಯು ಅತ್ಯಮೂಲ್ಯವಾಗಿದೆ. ಶೂನ್ಯವು ಭಾರತೀಯ ಗಣಿತಜ್ಞರಿಂದ ಜಗತ್ತಿಗೆ ದೊರೆತ ಮಹತ್ತ್ವದ ಕಾಣಿಕೆಯಾಗಿದೆ. ಅದಕ್ಕಾಗಿ ಲೋಕದ ಗಣಿತಜ್ಞರೆಲ್ಲರೂ ಭಾರತೀಯರ ಬುದ್ಧಿಯನ್ನು ಕೊಂಡಾಡುತ್ತಾರೆ.

卐

ಹಿಂದಿನ, ಇಂದಿನ ಯುಗದಲ್ಲಿ ಗಣಿತ ವಿಷಯದ ಮೂಲ ಸ್ವರೂಪವನ್ನೂ ಅದರಲ್ಲಿಯ ಗಹನವಾದ, ಸಂದಿಗ್ಧಪೂರ್ಣವಾದ ವಿಷಯವನ್ನೂ ತಿಳಿದುಕೊಳ್ಳಲು ಪ್ರಾಚೀನ, ಮಧ್ಯಮ, ಆಧುನಿಕ ಗಣಿತಜ್ಞರು ಬಹಳ ಶ್ರಮವನ್ನು ಪಟ್ಟಿದ್ದಾರೆ. ಗಣಿತವು ಇಂದಿನ ಯುಗದಲ್ಲಿ ತುಂಬ ಮಹತ್ತ್ವದ್ದು; ಅಲ್ಲದೆ ಅದು ಮನುಷ್ಯನಿಗೆ ತೀರ ಅಗತ್ಯವಾದುದು. ಗಣಿತವು ಒಂದು ಮೂಲಭೂತವಾದ ಪ್ರಾಚೀನ ಕಾಲದಿಂದಲೂ ಪರಂಪರಾಗತವಾಗಿ ಬಂದ ವಿಷಯವಾಗಿದೆಯೆಂದು ಹೇಳುವುದುಂಟು.

ಗಣಿತವು ಮನವೋಹಕವಾದ ಒಂದು ವಿಷಯ. ಅದು ಸಹಸ್ರಾರು ವರ್ಷಗಳಿಂದ ನಾನಾಮುಖವಾಗಿ ಬೆಳೆದು ಪಸರಿಸುತ್ತ ಬಂದಿದೆ. ಇದನ್ನು ಮೊದಲು ಕಂಡುಹಿಡಿದವರು ಪ್ರಾಚೀನ ಹಿಂದುಗಳು. ಗಣಿತ ಶಾಸ್ತ್ರವು ಎಲ್ಲ ಶಾಸ್ತ್ರಗಳಿಗೂ ಮೂಲ ಸ್ತಂಭದಂತಿರುವುದು. ಗಣಿತ ಶಾಸ್ತ್ರಕ್ಕೆ ಅಂಕಗಣಿತವೇ ತಳಹದಿ. 'ಅಂಕ' ಅಂದರೆ ಸಂಖ್ಯೆ ಅಥವಾ ಒಂದು ಎಂದು ಅರ್ಥವಾಗುವುದುಂಟು. ನಾಟಕಗಳಲ್ಲಿ, ಸಿನೆಮಾಗಳಲ್ಲಿ 'ಮೊದಲನೆಯ ಅಂಕವಾಯಿತು' 'ಎರಡನೆಯ ಅಂಕವಾಯಿತು' ಎಂದು ಹೇಳುತ್ತಾರೆ. ಅದರ ಅರ್ಥವೇನೆಂದರೆ ಮೊದಲನೆಯ ದೃಶ್ಯವಾಯಿತು—ಎಂದು ಅಂಕ ಗಣಿತವನ್ನು ಸುವ್ಯವಸ್ಥೆಗೆ ತಂದ ಹೊರತು ಶಾಸ್ತ್ರಗಳ, ಹಾಗೂ ನಾಗರಿಕತೆಯ ಪ್ರಗತಿಗೆ ಮಾರ್ಗವೆ ಇರಲಿಲ್ಲ. ಈ ಮಹತ್ಕಾರ್ಯವನ್ನು ನಮ್ಮ ಹಿರಿಯರು (ಪ್ರಾಚೀನರು) ಎಷ್ಟು ಶ್ಲಾಘ್ಯವಾದ ರೀತಿಯಲ್ಲಿ ನೆರವೇರಿಸಿದ್ದಾರೆ!

ಪ್ರಾಚೀನರು ಹಾಕಿಕೊಟ್ಟ ಅಂಕಿಗಳು ಇಂದಿನ ಜನಜೀವನ ಕ್ರಮದಲ್ಲಿ ಬೆರೆತುಹೋಗಿವೆ. ನಾವು ಕೆಲವು ಕಾಲ ಆಹಾರವನ್ನು ಬಿಡಬಹುದು, ನಿದ್ರೆಯನ್ನು ಬಿಡಬಹುದು; ಆದರೆ ಅಂಕಗಣಿತವನ್ನು ಬಿಡಲಾರೆವು. ಅಂಕಿಗಳ ಕೈ ಬಿಟ್ಟರೆ ಹಣವನ್ನು ಎಣಿಸುವಹಾಗಿಲ್ಲ. ಕೋರ್ಟು, ಕಚೇರಿ, ದೊಡ್ಡ ದೊಡ್ಡ ಆಫೀಸುಗಳಲ್ಲಿ ಚಲಾವಣೆ ನಡೆಯುವ ಹಾಗಿಲ್ಲ. ಎಂದಮೇಲೆ ಅದು ಮನುಷ್ಯನಿಗೆ ಎರಡನೆಯ ಜೀವ ಇದ್ದ ಹಾಗೆ, ಅದಿಲ್ಲದಿದ್ದರೆ ತಾರೀಖನ್ನು ನೆನೆಯುವ ಹಾಗಿಲ್ಲ. ತೂಕ. ಅಳತೆ, ವ್ಯಾಪಾರ ಯಾವುದನ್ನೂ ಮಾಡುವ ಹಾಗಿಲ್ಲ; ಒಟ್ಟಿನ ಮೇಲೆ ಗಣಿತವಿಲ್ಲದಿದ್ದರೆ ಮಾತನಾಡುವ ಹಾಗೆಯೆ ಇಲ್ಲ. ಹಾಲಿನ ಬಿಳಿಯ ಬಣ್ಣದಂತೆ ಅಂಕಿಗಳು ನಮ್ಮ ಜೀವನದಲ್ಲಿ ಲೀನವಾಗಿಬಿಟ್ಟಿವೆ.

ಹೀಗೆಯೆ ಸ್ವಲ್ಪ ಆಲೋಚನೆ ಮಾಡಿ ನೋಡಿದರೆ, ಅಂಕಿಗಳನ್ನು ಕೈ ಬಿಟ್ಟ ಮರುಕ್ಷಣದಲ್ಲಿ ನಮ್ಮ ನಾಗರಿಕತೆ, ನಮ್ಮ ಜೀವನ ಕಾಡು ಮನುಷ್ಯನ ದರ್ಜೆಗೆ ಹೋಗುತ್ತದೆ ಎಂಬುದು ಕಂಡುಬರುವುದು. ಅಂಕಿಗಳು ಬರುವುದಕ್ಕಿಂತ ಮುಂಚೆ ಮನುಷ್ಯನ ಸ್ಥಿತಿಯು ಯಾವ ರೀತಿಯಲ್ಲಿತ್ತು? ಅಧೋಗತಿಯಲ್ಲಿರಲಿಕ್ಕೇ ಬೇಕು! ಈ ಕೀಳು ದೆಸೆಯಲ್ಲೇ, ಮಾನವಕೋಟಿ ಸಹಸ್ರಾರು ವರ್ಷಗಳನ್ನು ತಳ್ಳಿ, ಅಲ್ಲಿಂದ ಮುಂದೆ ಏಕ, ಬಹು ಎಂಬ ವ್ಯತ್ಯಾಸದ ಅರಿವನ್ನು ಕಂಡುಕೊಂಡಿತು. ಅಲ್ಲಿಂದ ಏಕ, ದ್ವಿ, ಬಹು ಎಂಬ ವಿಭೇದದ ಅರಿವಾಗುವುದಕ್ಕೆ ಎಷ್ಟೋ ಕಾಲ ಬೇಕಾಯಿತು. ಇಂದಿನ ಇಪ್ಪತ್ತನೆಯ ಶತಮಾನದಲ್ಲಿ ಗಣಿತವನ್ನು ಅರಿಯದ ಜನರೇ ಇಲ್ಲ ಆದರೂ ಅಲ್ಲಲ್ಲಿ ಕೆಲವು ಉದಾಹರಣೆಗಳನ್ನು ವೃತ್ತಪತ್ರಿಕೆಯಲ್ಲಿ ಓದುತ್ತಿದ್ದೇವೆ; ಏನೆಂದರೆ :— ಉತ್ತರ-ದಕ್ಷಿಣ ಧ್ರುವ ಪ್ರದೇಶ ಮತ್ತು, ಆಫ್ರಿಕೆಯಲ್ಲಿ, ಒಂದು ಪದಾರ್ಥವನ್ನು ಕೇಳಬೇಕಾದರೆ ಮೂಗನ್ನೊ ಕಾಲನ್ನೊ ಮುಟ್ಟಿ ತೋರಿಸಬೇಕಾಗುವುದಂತೆ. ಎಂತಹ ವಿಚಿತ್ರವಾದ ಕ್ರಿಯೆ ಎಂದು ಓದುಗರಿಗೆ ಕುತೂಹಲವೆನಿಸುವುದು ಸಹಜವೇ, ಆದೆ. ಇದರ ಮೇಲಿಂದ ಅಲ್ಲಿಯ ನರಿಗೆ ಒಂದು ಎಂಬುದರ ಅರಿವು ಹೇಗೋ ಉಂಟಾಗಿ ಅದಕ್ಕೆ ಅವರು "ಅಂಗ" ಎಂಬ ಒಂದು ಧ್ವನಿ ಸಂಕೇತವನ್ನಿಟ್ಟುಕೊಂಡಿದ್ದಾರೆ. ಅವರ ಭಾಷೆಯಲ್ಲಿ 'ಎರಡು' ಎಂಬುದಕ್ಕೆ ಸಂಕೇತವಾಗಲಿ ಹೆಸರಾಗಲಿ ಇಲ್ಲವೇ ಇಲ್ಲ.

ಈಚೆಗೆ ಆಸ್ಟ್ರೇಲಿಯಾ ದ್ವೀಪ ನಿವಾಸಿಗಳ ಮೂವತ್ತು ಭಾಷೆಗಳನ್ನು ಪರಿಶೀಲಿಸಿದುದರಲ್ಲಿ, ಯಾವುದಕ್ಕೂ ನಾಲ್ಕಕ್ಕಿಂತ ಹೆಚ್ಚು ಅಂಕಿಯ ಹೆಸರೇ ಕಾಣಲಿಲ್ಲ. ಅವರ ನಾಗರಿಕತೆ ಅಲ್ಲಿಗೇ ನಿಂತುಹೋಗಿದೆ. ಭಾಷೆಯು ನಾಗರಿಕತೆಯ ಮಟ್ಟವನ್ನು ಬಹುಮಟ್ಟಿಗೆ

ಸೂಚಿಸುತ್ತದೆ. ಕೆಲವು ಪ್ರಾಚೀನ ಭಾಷೆಗಳಲ್ಲಿ ದ್ವಿವಚನವಿದೆ ಕೆಲವುಗಳಲ್ಲಿ ಇಲ್ಲ. ದ್ವಿವಚನವಿಲ್ಲದ ಭಾಷೆ ಹುಟ್ಟಿದಾಗ ಪ್ರಾಯಶಃ ಆ ಜನಾಂಗಕ್ಕೆ ಒಂದಕ್ಕಿಂತ ಹೆಚ್ಚಾದುದು 'ಬಹು' ಆಗಿತ್ತೆ ವಿನಾ, ಎರಡು ಎಂಬ ಅಂಕಿಯ ಅರಿವಿಗೆ ಅವರ ನಾಗರಿಕತೆಯು ಮುಟ್ಟಿ ಇನ್ನೂ ಮುಟ್ಟಿರಲಿಲ್ಲವೆಂದು ಕೆಲವರು ಊಹಿಸಿಕೊಂಡಿದ್ದಾರೆ. ಬಹುಶಃ ಇದು ನಿಜವೇ ಇರಬೇಕು.

ಮಾನವನ ಮೇಧಾಶಕ್ತಿ ಬೆಳೆದಂತೆಲ್ಲ, ಅವನ ಆವಶ್ಯಕತೆಗಳು (Necessary wants) ಹೆಚ್ಚಿದಂತೆಲ್ಲ, ಹೊಸ, ಹೊಸ ಅಂಕಿಗಳನ್ನು ಆತ ನಿರ್ಮಿಸಿಕೊಳ್ಳುತ್ತ ಬಂದನು. ಅಂಕಿಗಳ ಜನನ ಕಾಲ, ಮತ್ತು ಜನ್ಮ ಭೂಮಿಗಳನ್ನು ನಿರ್ಣಯಿಸುವ ಉದ್ಯಮವು 'ಪ್ರಪಂಚದಲ್ಲಿ ಅತ್ಯಂತ ಪ್ರಾಚೀನವಾದ ಸಂಸ್ಕೃತಿ ಯಾವುದು' ಎಂಬ ಪ್ರಶ್ನೆಯನ್ನು ಎಬ್ಬಿಸುತ್ತದೆ. ಇದಕ್ಕೆ ಈಜಿಪ್ಟ, ಮೆಸೋಪೊಟಿಮಿಯಾ, ಚೀನಾ, ಭಾರತ ಮುಂತಾದುವುಗಳು ತಮ್ಮ ತಮ್ಮ ನಾನಾ ಊಹೆಗಳನ್ನೂ ವಿಚಾರಗಳನ್ನೂ ಸಾರಿವೆ.

ಅಂಕಿಗಳನ್ನು ಹುಡುಕುವುವರಲ್ಲಿ ಈಜಿಪ್ಟನಲ್ಲಿ ಶೋಧನೆ ನಡೆದು, ಹೆಚ್ಚು ವಿವರಗಳು ಸಿಕ್ಕಿವೆ.

ಪ್ರಾಚೀನ ಭಾರತೀಯ ಸಂಸ್ಕೃತಿಯ ಕಡೆಗೆ ಸಂಶೋಧನಕಾರರ ಲಕ್ಷ್ಯ ತಿರುಗಿರುವುದು ಇತ್ತೀಚಿಗೆ. ಇಲ್ಲಿ ಸಂಶೋಧನೆ ಇನ್ನೂ ನಡೆಯಬೇಕಾಗಿದೆ; ಹೆಚ್ಚು ವಿವರಗಳು ಗೊತ್ತಾಗಿಲ್ಲ. ಇಲ್ಲಿಯವರೆಗೆ ಸಿಕ್ಕಿರುವ ಆಧಾರಗಳು ಸಾಲವು. 'ವೇದಗಳ ಕಾಲ ಯಾವುದು?' ಎಂದು ಕೇಳಿದರೆ, ಇಂದಿನ ಸಂಶೋಧನಕಾರರು, ಒಬ್ಬೊಬ್ಬರು ಒಂದೊಂದು ಬಗೆಯ ಉತ್ತರವನ್ನು ಕೊಡುತ್ತಾರೆ. ಆದರೆ ನಿಜವಾದುದಾವುದೆಂಬುದು ಗೊತ್ತಾಗುವುದೇ ಇಲ್ಲ. ಏಕೆಂದರೆ ಇನ್ನೂ ಅಷ್ಟು ಸಂಶೋಧನೆ ಕೂಲಂಕಷವಾಗಿ ನಡೆದಿಲ್ಲ. ಆದರೂ ಎಲ್ಲ ಸಂಶೋಧನಕಾರರು ಆಧಾರ ಸಹಿತವಾಗಿ ತಮ್ಮ ಸಿದ್ಧಾಂತಗಳನ್ನು ಮಂಡಿಸುತ್ತಾರೆ.

ಪೈಥಾಗೊರಸನ ಸಂಖ್ಯೆಗಳು, ಸಾಧನೆಗಳು ಅವನಿಗಿಂತ ಹಿಂದಿನದಾದ ನಮ್ಮ ಶುಲ್ವ ಸೂತ್ರದಲ್ಲಿಯೇ ಇವೆ. ಪೈಥಾಗೋರಸನು ಗ್ರೀಕ್ ದೇಶದವನು, ಗಣಿತಜ್ಞನು ಎಷ್ಟೋ ಸಿದ್ಧಾಂತಗಳನ್ನು ಸಿದ್ಧಮಾಡಿ ತೋರಿಸಿದವನು. ಉದಾ :- ಹಾಯಸ್ಕೂಲಿನಲ್ಲಿ ಹಚ್ಚಿದ "A modern School Geometry" ಯಲ್ಲಿ ಅವನು ಬರೆದ ಪ್ರಮೇಯವನ್ನು ನೋಡಬಹುದು. ಈಗ ಅನೇಕ ಪ್ರಮುಖ ಭಾಷೆಗಳಲ್ಲಿರುವ ಅಂಕಿಗಳ ಹೆಸರುಗಳು ಸಂಸ್ಕೃತ ಭಾಷೆಯಿಂದ ಉತ್ಪನ್ನವಾದುವು—ಎಂದು ಕೆಲವರು ಊಹಿಸಿರುತ್ತಾರೆ.

"ಅಂಕಿಗಳ ಜನ್ಮಭೂಮಿ ನಮ್ಮ ಭರತಖಂಡದಲ್ಲಿ ಆಗಿದೆ" ಎಂದು ಹೇಳಲು ತುಂಬ ಅವಕಾಶವಿದೆ. ಏಕೆಂದರೆ ಸಂಸ್ಕೃತದಲ್ಲಿ 'ಏಕ' ಎಂದಿದ್ದುದು (Unus) ಊನಸ್ ಎಂದು ಲಾಟಿನಿನಲ್ಲಿ ಆಯಿನಾಸ್ (oinos) ಎಂದು ಗ್ರೀಕಿನಲ್ಲಿ ಐನ್ (ein) ಎಂದು ಜರ್ಮನಿಯಲ್ಲಿ, ಯುನ್ (un) ಫ್ರೆಂಚ್ ಭಾಷೆಯಲ್ಲಿ, ಆನ್ (an) ಹಳೆಯ ಇಂಗ್ಲಿಷಿನಲ್ಲಿ ಮತ್ತು (one) ಒನ್ ಎಂಬುದು ಅರ್ಥಸಿಕ

ಇಂಗ್ಲಿಷಿನಲ್ಲಿ. ಅಂಕಿಗಳ ನಿರ್ಮಾಣವು ಯಾವ ಯಾವ ಕಾಲದಲ್ಲಿ, ಯಾವ ಯಾವ ದೇಶದಲ್ಲಿ ಎಷ್ಟೆಷ್ಟು ದೂರ ಸಾಗಿದ್ದಿತೆಂಬುದು ಖಚಿತವಾಗಿ ಗೊತ್ತಾಗುವಂತಿಲ್ಲ. ಕ್ರಿ. ಪೂ ೫೦೦ ವರ್ಷಗಳ ಪೂರ್ವದಲ್ಲಿಯೆ ಇಂಡಿಯಾ ಈಜಿಪ್ಟ್, ಚೀನಾ ಮುಂತಾದ ದೇಶಗಳವರಿಗೆ ಎಣಿಕೆ ಗೊತ್ತಿದ್ದಿತೆಂದು ಸ್ಥೂಲವಾಗಿ ಹೇಳಬಹುದಾಗಿದೆ.

ಅಂಕಿಗಳು ನಿರ್ಮಿತವಾದ ವಿವರಗಳೆಲ್ಲ ಕತ್ತಲೆಯಲ್ಲಿ ಅಡಗಿಕೊಂಡಿವೆ. ಪ್ರಾಯಶಃ ಅದು ಬಹುತರವಾಗಿ ಹೊರಗೆ ಬರುವ ಸಂಭವವೂ ಇಲ್ಲ. ಗಣಿತದ ವಿಷಯಗಳಿಗೆ ಸಂಬಂಧಪಟ್ಟ ಸ್ಥೂಲಮಾನಗಳ ಸಂಶೋಧನೆ ಇನ್ನೂ ನಡೆದೇ ಇದೆ. ಅಂಕಗಣಿತವನ್ನು ಸುವ್ಯವಸ್ಥಿತವಾದ ಮಾರ್ಗದಲ್ಲಿ ಮುಂದುವರಿಸಿ ಇಂದಿನ ಗಣಿತಶಾಸ್ತ್ರಕ್ಕೆ ತಳಹದಿಯನ್ನು ಹಾಕಿಕೊಟ್ಟವರು ಹಿಂದುಗಳೇ ಎಂಬುದನ್ನು ಸಾಮಾನ್ಯವಾಗಿ ಒಪ್ಪಲೇಬೇಕು. ಹಿಂದುಗಳು ನಿರ್ಮಿಸಿದ ಅಂಕಚಿಹ್ನೆಗಳನ್ನೂ ಅಂಕಗಣಿತ ಮಾರ್ಗವನ್ನೂ ಎಲ್ಲರೂ ಇಂದಿಗೂ ಉಪಯೋಗಿಸುತ್ತಿದ್ದಾರೆ. ಅವು ಎಷ್ಟೊಂದು ಪರಿಪೂರ್ಣತೆಯನ್ನು ಹೊಂದಿವೆ. ಹಿಂದುಗಳ ಕುಶಲತೆ ಎಂತಹ ಶ್ಲಾಘನೀಯವಾದುದು! 'ಹಿಂದುಗಳು ಹಾಕಿಕೊಟ್ಟ ಅಂಕಿಗಳ ಪದ್ಧತಿಯು ಬಹಳ ಆಶ್ಚರ್ಯ-

ಕರವಾದುದು' ಎಂದು ಕಜೋರಿಯವರು (Cajori) ಪ್ರಶಂಸಿದ್ದಾರೆ. ಅವರು ಹೇಳಿರುವುದೇನಂದರೆ:

"It is remarkable to what extent Indian Mathematics enters into the science of our time. Both the form and the spirit of the Arithmetic and algebra of modern times are essentially Indian and not Grecani Think of the most perfect of Mathematical symbolisms, the Hindu notation, think of the Indian Arithemetical operation nearly as perfect as our own, think of algebric methods and then jiudge whether the Brahmius on the banks of the Gauges are not entitled to some credit.

ಇದಲ್ಲದೆ D. Margan's ರವರು ಗಣಿತವೆಂದರೇನೆಂಬುದನ್ನು ಒಂದೇ ವಾಕ್ಯದಲ್ಲಿ ಹೇಳಿದ್ದಾರೆ. ಏಕೆಂದರೆ "Indian Arithemetic is that which we now use.' (ಹಿಂದುಗಳ ಅಂಕಗಣಿತವಾವುದೆಂದರೆ ಇಂದು ನಾವು ಉಪಯೋಗಿಸುತ್ತಿರುವುದು.) ಇಡಿಯ ಜಗತ್ತಿಗೆ ಶೂನ್ಯಾಂಕವನ್ನು (Zero) ದಾನಮಾಡಿದ, ಅಪಾರವಾದ ಶಾಶ್ವತವಾದ ಕೀರ್ತಿ ನಮ್ಮ ಹಿಂದುಗಳದು. ವಿಚಾರಮಾಡಿ ನೋಡಿದರೆ, ಇದೊಂದು ಹೆಚ್ಚಿನದಾದ ದಾನ ಸೊನ್ನೆಯ ಸಹಾಯವಿಲ್ಲದೆ ಬಿಡಿ, ಹತ್ತು, ಮೊದಲಾದ ಸ್ಥಾನಗಳು ಹುಟ್ಟಲಾರವು. ಸೊನ್ನೆಯು ನಿರ್ಮಿಸಲ್ಪಡದಿದ್ದರೆ, ಗಣಿತಶಾಸ್ತ್ರವು ಆದಿಯಲ್ಲಿಯೆ ನಿಂತುಹೋಗಬೇಕಾಗುತ್ತಿತ್ತು. ಈಗ ಗಣಿತ ಶಾಸ್ತ್ರದಿಂದ ಸೊನ್ನೆಯನ್ನು ಒಡಿಸಿಬಿಟ್ಟರೆ, ಆ ಶಾಸ್ತ್ರವೇ ಕುಸಿದುಬೀಳುತ್ತದೆ. ಸೊನ್ನೆಯು ನಿರ್ಮಾಣವು ಎಂತಹ ಕ್ರಾಂತಿಕಾರಿಯಾಯಿತೆಂಬುದನ್ನು ನೆನೆದರೆ, ಅದನ್ನು ನಿರ್ಮಿಸಿದವರ ಮೇಧಾಶಕ್ತಿ ಎಷ್ಟು ಪ್ರಚಂಡವಾದುದೆಂದು ಆಶ್ಚರ್ಯವಾಗುತ್ತದೆ ರೋಮನ್ನರು, ಗ್ರೀಕರು ಸೊನ್ನೆಯನ್ನು ಹುಡುಕಿ ತೆಗೆಯಲಾರದೆ ಹೋದರು. ಆದರೆ ನಮ್ಮ ಹಿಂದುಗಳು ಇದನ್ನು ಹುಡುಕಿ ತೆಗೆದರು; ಜಗತ್ತಿಗೆ ಆದರ್ಶಪ್ರಾಯರಾದರು, ಶ್ಲಾಘನೀಯರಾದರು. ಶಾಸ್ತ್ರಗಳಲ್ಲಿ ಮತ್ತು ಅದರ ಪ್ರಗತಿಗೆ ಸೊನ್ನೆಯಿಂದ ಆಗಿರುವಷ್ಟು ಉಪಕಾರ ಮತ್ಯಾವ ಶೋಧನೆಯಿಂದಲೂ ಆಗಿಲ್ಲ. ಸೊನ್ನೆಯ ವಿಷಯವಾಗಿ ಕಜೋರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಅವರು ಬರೆದ ಹೇಳಿಕೆಯನ್ನು ಅವರ 'History of Mathematics'ನಲ್ಲಿ ನೋಡಬಹುದು. ಅದನ್ನು ಇಲ್ಲಿ ಕೊಟ್ಟಿದೆ:—

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಗೌ. ಸಂಪಾದಕರು ಶ್ರೀ ಪಿ. ವೆಂಕೋಬಾಚಾರ್ಯ ಬಿ. ಎ. ಬಿ. ಟಿ

ವರುಷದ ಹೊಸ ಪ್ರಕಟನೆಗಳು

ಆ ರಾತ್ರಿ: (ಮೂರಂಕದ ನಾಟಕ) ೦—೧೪—೦
ಶ್ರೀ. ಗೋಪಾಲಕೃಷ್ಣ, ನಾಯಕ

ಗುಣ: (ಸರಸ ಸಾಮಾಜಿಕ) ೧—೬—೦
ಕಾದಂಬರಿ ಶ್ರೀ. ವೆಂಕೋಬಾಚಾರ್ಯ

ಕುಂಕುಮ ಬಲ
(ಹೆಣ್ಣಿನ ಬಾಳಿನ ಸಣ್ಣ ಕತೆಗಳು) ೧—೦—೦
ಶ್ರೀಮತಿ ಶಾಂತಾದೇವಿ ಮಾಳವಾಡ

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್.

ಸಂಚಾಲಕರು
ಆನಂದ ಗ್ರಂಥಮಾಲಾ

ಒಂದು ವರುಷದಲ್ಲಿ ಸುಂದರ ಐದು ಪುಸ್ತಕಗಳು
ವಾರ್ಷಿಕ ಚಂದಾ: ಸಾದಾ ಪ್ರತಿ ರೂ. ೫. ಬೈಂಡು ಪ್ರತಿ ೬ ರೂ.

"Having missed this principle (of position or Local Value) the anceint had no use tor a symbol to represent zero and were very far removed from an ideal notation In this matter even the Greeks and the Romans failed to achieve what remote notion in Asia, little known to the Europeans before the present century, accomplished most admirably...... of all Mathematical discoveries no one has contributed more to the general progress of intelligence thau this (zero)"

ಇತ್ತೀಚೆಗೆ Kannada Research Institute ಸ್ಥಾಪನೆ ಮಾಡಿ, ಕನ್ನಡದಲ್ಲಿ ಮೂಲ ಶಬ್ದಗಳ ಸಂಶೋಧನೆಯನ್ನು ಮಾಡಿದ್ದಾರೆ— ಮಾಡುತ್ತಲಿದ್ದಾರೆ. ಇಂತಹ ಎಷ್ಟೋ ಸಂಶೋಧನೆ ಶಾಖೆಗಳು ಜಗತ್ತಿನಲ್ಲಿ ಬೇರೆ ಭಾಷೆಗಳ ಸಂಶೋಧನೆ ನಡೆಸಿವೆ, ಅದರಂತೆಯೆ Mathematical Research Insitute ಕೂಡ ಇಲ್ಲಿ ತೆರೆಯತಕ್ಕದ್ದು.

— — — —

ಆತ್ಮರಕ್ಷಣೆ*

(ಕಥೆ)

ಲೇ. ಕು. ಸರೋಜನಿ ಮಳೀಬೆನ್ನೂರ ಬಿ. ಎ. ಧಾರವಾಡ

●

ಧರ್ಮಾಧರ್ಮವಿವೇಕದ ಪ್ರಶ್ನೆ ಬಂದಾಗ, ಧರ್ಮದಂಡವು ಕೈಯಲ್ಲಿರುವ ಅಧಿಕಾರಿಪುರುಷ 'ಇದೇ ಧರ್ಮ, ಇದು ಅಧರ್ಮ!' ಎಂದು ತಟ್ಟನೆ ನಿರ್ಣಯವನ್ನು ಕೊಡಬಾರದು. ಧರ್ಮವು ಬುದ್ಧಿಜನ್ಯವಾದುದಲ್ಲ; ಭಾವನಾಜನ್ಯವಾದುದು. ಧರ್ಮನಿರ್ಣಯವು ಬುದ್ಧಿಯ ಕೈಯಲ್ಲಿ ಸಿಕ್ಕಿಬಿಟ್ಟರೆ, ಲೋಕಕ್ಕೆ ಅದು ಎಷ್ಟೊಂದು ಆಪತ್ತಿಯನ್ನು ಒಡ್ಡೀತು?

●

ದಾಯಿ ಫಿಲೋಮಿನಳು ಪಾದರಿಯ ಹತ್ತಿರ ನಿಂತುಕೊಂಡು ಅತ್ಯಂತ ವಿನೀತ ಭಾವದಿಂದ ಹೇಳತೊಡಗಿದಳು—"ಪಾದರೀ ಸಾಹೇಬ್, ನಾನು ಪಾಪಮಾಡಿದ್ದೇನೆಂದು ನನಗೆ ಎನಿಸಲೊಲ್ಲದು. ನನ್ನ ಆತ್ಮವು ಆಗಾಗ ನಾನು ಪಾಪಮಾಡಿಲ್ಲವೆಂದು ಹೇಳುತ್ತದೆ; ಮತ್ತೆ ಕೆಲವು ಸಲ ಪಾಪಮಾಡಿದ್ದೇನೆಂದು ಹೇಳುತ್ತದೆ. ಪಾಪ ಮಾಡಿದ್ದೇನೆಂದು ಹೇಳುವುದರಿಂದ ಆಗುವ ವೇದನೆಗಿಂತ, ಪಾಪ ಮಾಡಿಲ್ಲವೆಂದು ಹೇಳುವುದರಿಂದ ಆಗುವ ವೇದನೆ ಹೆಚ್ಚಾಗಿದೆ.

ಪಾದರಿಗೆ ಯಾವುದೂ ತಿಳಿಯಲಿಲ್ಲ. "ಮಗಳೇ, ಹೆಚ್ಚು ಸ್ಪಷ್ಟವಾಗಿ ಹೇಳು. ನನಗೆಲ್ಲವನ್ನೂ ತಿಳಿಸಿ ಹೇಳು. ನೀನು ಇನ್ನೂ ಚಿಕ್ಕವಳಿರುವಿ. ಹದಿನೆಂಟು ವರ್ಷದ ಎಳೆಯ ಆತ್ಮದ ಮೇಲೆ ವಿಶ್ವಾಸವಿಡಲಾಗುವುದಿಲ್ಲ. ನಿರ್ಣಯ ಕೊಡಲು ನನಗೆ ಬಿಟ್ಟು ಕೊಡು. ಅದಕ್ಕಾಗಿ ದೇವರು ನನಗೆ ತಿಳಿವನ್ನು ಕೊಡುವನು."

"ಕೇಳಿರಿ, ನಾನು ಎಲ್ಲವನ್ನೂ ಸತ್ಯವಾಗಿಯೆ ಹೇಳುವೆನು; ಸೋಮವಾರ ದಿನ ಅರ್ಧರಾತ್ರಿಯ ಸಮಯದಲ್ಲಿ, ಜನೆಯ ವಾರ್ಡಿನ ೭ನೆಯ ನಂಬರಿನ ರೋಗಿಗೆ ಧಾರ್ಮಿಕ ಸಮಾಧಾನವನ್ನು ನೀಡಲಾಯಿತು. ನಾನು ಆಸ್ಪತ್ರೆಗೆ ಬಂದಾಗಿನಿಂದಲೂ, ದಾಯಿ ಮೇರಿಯ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೆ. ಆಗ ಅಲ್ಲಿ ಕೆಲಸ ಮಾಡುತ್ತಿದ್ದ ಡಾಕ್ಟರರು ಹೇಳಿದರು. "ಈಗ ಯಾವ ಆಶೆಯೂ ಉಳಿದಿಲ್ಲ. ತೊಂದರೆಯೂ ಬಹಳ ಹೊತ್ತು ಆಗಲಾರದು. ಸೂರ್ಯೋದಯಕ್ಕೆ ಮುಂಚಿತವಾಗಿಯೇ ಮೃತ್ಯುವಿನ ಸಂಭವವೇ ಹೆಚ್ಚಾಗಿದೆ." ಡಾಕ್ಟರರು ಪುನಃ ಹೇಳಿದರು; "ಪರಿಸ್ಥಿತಿಯಲ್ಲಿ ಹೆಚ್ಚು ಚಿಂತಾಜನಕವಾದ ಬದಲಾವಣೆಯಾಗುವುದಿಲ್ಲ. ಆದರೆ ನನ್ನ ಆವಶ್ಯಕತೆಯೆನಿಸಿದರೆ ನಿಃಸಂಕೋಚವಾಗಿ ನನ್ನನ್ನು ಕರೆಸಿರಿ. ಉಳಿದ ರೋಗಿಗಳ ಕಡೆಗೆ ಹೆಚ್ಚು ಗಮನಕೊಡಬೇಕಾದುದೇನೂ ಇಲ್ಲ. ಅವರು ನಿಮಗಾಗಲಿ, ನನಗಾಗಲಿ ಹೆಚ್ಚು ತೊಂದರೆಯನ್ನು ಕೊಡುವುದಿಲ್ಲ" ಇಷ್ಟು ಹೇಳಿ ಡಾಕ್ಟರರು ವಿಶ್ರಾಂತಿಗಾಗಿ ಹೊರಟು ಹೋದರು.

ಪ್ರತಿ ಅರ್ಧಗಂಟೆಗೆ ಅರ್ಧಚಮಚೆ ಔಷಧ ಕೊಡುವದನ್ನು ಬಿಟ್ಟು ಬೇರಾವ ಕೆಲಸವೂ ನನಗೆ ಇರಲಿಲ್ಲ. ನಾನು ಹಾಸಿಗೆಯ ಹತ್ತಿರ ನಿರ್ದಿಷ್ಟವಾದ ಸ್ಥಳದಲ್ಲಿ ಕುಳಿತುಕೊಂಡು, ಗಂಭೀರವಾದ ವಿಚಾರಗಳಲ್ಲಿ ತಲ್ಲೀನಳಾದೆ ಮತ್ತು ಸಂಸಾರದಿಂದ ದೂರ ಹೋಗುತ್ತಿರುವ ಆತ್ಮಕ್ಕಾಗಿ ಪರಮೇಶ್ವರನನ್ನು ಪ್ರಾರ್ಥಿಸತೊಡಗಿದೆ." "ಯಾರ ಆತ್ಮಕ್ಕಾಗಿ?" "ಆ ಬಡ ರೋಗಿ ಮನುಷ್ಯನ ಆತ್ಮಕ್ಕಾಗಿ." "ಆ ಬಡ ರೋಗಿ ಮನುಷ್ಯನ ಆತ್ಮಕ್ಕಾಗಿ ಎಂದರೆ ಅವನು ಪುರುಷನಿದ್ದನೋ?" "ಈ ಮಾತನ್ನು ಈ ಮೊದಲೇ ಹೇಳಲಿಲ್ಲವೇ?" "೭ನೆಯ ನಂಬರಿನ ಚರ್ಚೆಯನ್ನು ಮಾಡಿದೆ. ಮಗಳೇ? ನಂ. ೭ರಿಂದ ಯಾವ ಲಿಂಗದ ಬೋಧವೂ ಆಗುವುದಿಲ್ಲ. ಇರಲಿ, ಮುಂದೆ ಹೇಳು." "ಸುಮಾರು ಮೂರು ಗಂಟೆಯ ಸಮಯಕ್ಕೆ ಅತ್ಯಂತ ಕ್ಷೀಣ ಸ್ವರದಲ್ಲಿ, ಮರಣದ ಸಮಯದ ಮರ್ಮಾಂತಿಕ ವೇದನೆಯ ಶಬ್ದಗಳು ಕೇಳಬಂದುವು. ತೇಕುತ್ತ ತೇಕುತ್ತ, ರೋಗಿಯು ನುಡಿದ; "ದಾಯಿ ಫಿಲೋಮಿನಾ, ಅವಳು ಬಂದಳು." ಅರ್ಧರಾತ್ರಿಯಿಂದ ಅವನು ನಿಸ್ತಬ್ಧನಾಗಿಯೂ, ಅಚೇತನನಾಗಿಯೂ ಇದ್ದನು. "ಸಹೋದರನೆ, ಧೈರ್ಯ ತಾಳು" ಎಂದು ಅವನ ಕಿವಿಯಲ್ಲಿ ಸಾವಕಾಶವಾಗಿ ಹೇಳಿದೆ. ಆಗ ಅವನು ಮೆಲ್ಲಗೆ—ಆದರೂ ಪ್ರತಿಯೊಂದು ಶಬ್ದವನ್ನು ಸ್ಪಷ್ಟವಾಗಿ-ಈ ರೀತಿಯಾಗಿ ಹೇಳತೊಡಗಿದನು; "ನಾನು ಸಿದ್ಧನಿದ್ದೇನೆ. ಇಪ್ಪತ್ತೈದು ವರ್ಷಗಳ ಈ ವಯಸ್ಸಿನಲ್ಲಿ ಕಾಲನ ಬಾಯಲ್ಲಿ ಹೋಗುವುದು ನಿಜವಾಗಿಯೂ ದುಃಖದಾಯಕವಾದುದು. ಆದರೆ ಈಗ ನಾನು ಸಂಸಾರದ ಸಮಸ್ತ ಮಾಯಾ ಮೋಹವನ್ನು ಪರಿತ್ಯಾಗಮಾಡಿದ್ದೇನೆ. ಇದೇ ಉಚಿತವೆಂದು ತೋರುತ್ತದೆ. ನಾನು ಈ ಸಂಸಾರದಲ್ಲಿ ಒಬ್ಬೊಂಟಿಗನಾಗಿಯೂ, ನಿರ್ಧನನಾಗಿಯೂ, ಬಾಳಿದೆ. ನನ್ನನ್ನು ನಾನೇ ಕವಿಯೆಂದು ತಿಳಿದೆ. ಆದರೆ ನಾನು ಏನೂ ಆಗಿರಲಿಲ್ಲ. ಬೇರೆಯವರು ನನ್ನನ್ನು ಪ್ರೀತಿಸುತ್ತಿದ್ದರೆಂಬ ವಿಶ್ವಾಸ ನನಗಿದೆ. ಆದರೆ ನನ್ನ ಮೇಲೆ ಯಾರ ಪ್ರೇಮವೂ ಇರಲಿಲ್ಲ. ನೀನು ಈಗ ನನ್ನ ಹತ್ತಿರವಿರದಿದ್ದರೆ, ಮರುಭೂಮಿಯಲ್ಲಿದ್ದ ವ್ಯಕ್ತಿಯ ಹಾಗೆ ನನಗೆ ಮರಣವು ಬರಬಹುದಿತ್ತು." ಅವನು ಸುಮ್ಮನಾದ. ಎರಡನೆಯ ಸಲ ನಾನು ಹೇಳಿದೆ; 'ಧೈರ್ಯ ತಾಳಿರಿ, ಈಶ್ವರನು ನಿನ್ನ ಜೊತೆಗೆ ಇದ್ದಾನೆ" ಕೆಲವು ಕ್ಷಣಗಳ ನಂತರ ನಾನು ಅವನ ಆಳವಾದ ನೀಲನಯನದೊಳಗೆ ನೀರು ತುಂಬಿದ್ದುದನ್ನು ನೋಡಿದೆ. ಅವನು ಕೇಳಿದ.

"ದಾಯಿ ಫಿಲೋಮಿನಾ, ನೀವು ನನಗೊಂದು ಉಪಕಾರ ಮಾಡುವಿರಾ?" "

* ಇಟ್ಯಾಲಿಯನ್ ಕಥೆಯೊಂದರ ಅನುವಾದ

"ನಾನು ಶಾಂತಿಯಿಂದ ಪ್ರಾಣತ್ಯಾಗ ಮಾಡಬೇಕೆಂದು ನೀವು ಇಚ್ಛಿಸುವಿರಾ? ಅಂತ್ಯ ಸಮಯದಲ್ಲಿ ನನ್ನನ್ನು ಹುಟ್ಟಿಸಿದ ದೇವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತಾ ಸಾಯಬೇಕೆಂದು ನಿಮ್ಮ ಇಚ್ಛೆ ಇರುವುದೇ?"

"ಪ್ರತಿಯೊಬ್ಬ ಒಳ್ಳೆಯ ಕ್ರಿಶ್ಚನ್ನರು ಇದೇ ರೀತಿ ಪ್ರಾಣವನ್ನು ತ್ಯಜಿಸಬೇಕು" ಎಂದು ನಾನು ಉತ್ತರವಿತ್ತೆ.

"ಹಾಗಾದರೆ ಹಾಗೆ ಮಾಡುವದರಲ್ಲಿ ನನಗೆ ಸಹಾಯ ನೀಡು."

"ಈ ಸಂಬಂಧದಲ್ಲಿ ನಾನು ನಿಮಗೇನು ಸಹಾಯವನ್ನು ನೀಡಬಲ್ಲೆ?"

"ಈ ಜೀವನವನ್ನು ತ್ಯಜಿಸುವಾಗ ನನ್ನ ಹೃದಯದಲ್ಲಿ ಯಾವುದೇ ಪ್ರಕಾರದ ಇಚ್ಛೆಯಾಗಲಿ ಅಶಾಂತಿಯಾಗಲಿ ಉಳಿಯಬಾರದು. ಈ ವಿಷಯದಲ್ಲಿ ನನಗೆ ಸಹಾಯ ನೀಡು. ಮುಂದಿನ ಜೀವನದಲ್ಲಿ ನನ್ನ ಸಂಗಡ ಯಾವುದಾದರೊಂದು ದಯೆಯ ಸ್ಮೃತಿಯನ್ನು ತೆಗೆದುಕೊಂಡು ಹೋಗಗೊಡು. ದಾಯಿ ಫಿಲೋಮಿನಾ, ಮರಣಾಸನ್ನ ಪುರುಷನ ಮೇಲೆ ದಯೆದೋರು. ನನಗೆ ಒಂದು ಚುಂಬನವನ್ನು ನೀಡು!"

"ಚುಂಬನ?" ಪಾದರಿಯು ಆಶ್ಚರ್ಯದಿಂದ ಕೇಳಿದ.

"ಅಹುದು, ಆಮೇಲೆ ನಾನು ಪುನಃ ಹೇಳಿದೆ 'ಸಹೋದರ' ಧೈರ್ಯ ತಾಳು. ಈಶ್ವರನ ಚುಂಬನವನ್ನು ಪಡೆಯಲು ಸಿದ್ಧನಾಗಿರು."

"ಮಗಳೇ, ನೀನು ಬಹಳ ಸರಿಯಾಗಿ ಹೇಳಿದೆ.'

"ಆದರೆ ಶ್ವಾಸವು ಕ್ಷೀಣವಾಗುತ್ತ ಹೋದಹಾಗೆ ಅವನು ಪುನಃ ಪ್ರಾರ್ಥಿಸಿಕೊಂಡ—ನನಗೆ ಈ ಉಪಕಾರವನ್ನು ಮಾಡು. ದಾಯಿ ಫಿಲೋಮಿನಾ, ನೀನು ನನ್ನ ಮೋಕ್ಷದ ಸಾಧನೆಯಾಗುವೆಯೆಂಬ ಮಾತು ತಿಳಿಯದೇ? ಈ ಮಾತಿಗಾಗಿ ನೀನು ಕೊನೆಯವರೆಗೂ ಪಶ್ಚಾತ್ತಾಪಪಡಬೇಕೆಂದು ನಿನ್ನ ಇಚ್ಛೆಯೇ? ನನ್ನ ಆತ್ಮವು ನರಕದಲ್ಲಿ ಬೀಳಬೇಕೆಂದು ನೀನು ಆಶಿಸುವೆಯಾ? ನನ್ನ ಅಧಃಪತನಕ್ಕೆ ಕಾರಣಳಾಗುವೆಯಾ?"

"ಮಗಳೇ ಏನು ನೀನು—ನೀನು—?"

"ಪಾದರಿಗಳೇ, ನಾನು ಈ ಶಬ್ದಗಳನ್ನು ಕೇಳಿ ಭಯಭೀತಳಾದೆ, ಅಶಾಂತಿಯಿಂದ ಪ್ರಾಣವನ್ನು ಬಿಟ್ಟರೆ ಅವನ ಆತ್ಮದ ಅಧಃಪತನವೆಲ್ಲಿಂದ ಆಗುವುದೋ ಎಂದು ವಿಚಾರಮಾಡಿದೆ ಒಂದು ವೇಳೆ ನಾನೇ ಅವನ ಈ ಪತನಕ್ಕೆ ಕಾರಣಳಾದರೆ ಕೊನೆಯವರೆಗೂ ನನ್ನ ಆತ್ಮದ ಅಧಃಪತನವಾಗುವುದೆಂದು ಹೆದರಿದೆ. ಪ್ರತಿಕ್ಷಣಕ್ಕೆ ಮೃತ್ಯುವು ಅವನನ್ನು ಸಮೀಪಿಸುತ್ತಿರುವುದನ್ನೂ ವಿಚಾರಮಾಡಿದೆ. ಸೂರ್ಯೋದಯಕ್ಕೆ ಮುಂಚಿತವಾಗಿಯೇ ಅವನು, ಮೃತ್ಯುವಿನ ತೊಡೆಯಲ್ಲಿ ಅನಂತವಾದ ನಿದ್ರೆಗೈಯುವನೆಂಬುದರಲ್ಲಿ ಸ್ವಲ್ಪವೂ ಸಂದೇಹವಿರಲಿಲ್ಲ. ನಿಶ್ಶಬ್ದವಾದ ಕೋಣೆಯಲ್ಲಿ ಅವನ ಅಂತಿಮ ಶ್ವಾಸವು ಕೇಳಬರುತ್ತಿತ್ತು. ಆ ವಾರ್ಡಿನಲ್ಲಿದ್ದ ಬೇರೆ ರೋಗಿಗಳು ಶಾಂತಿಪೂರ್ವಕವಾಗಿ ಮಧುರವಾದ ನಿದ್ರೆಯಲ್ಲಿದ್ದರು ದೀಪವನ್ನು ಮಂದವಾಗಿ ಮಾಡಲಾಗಿತ್ತು. ಮಂದಪ್ರಕಾಶದಲ್ಲಿ ಬಿಳಿಯ ಹಾಸಿಗೆಯು ಗೋರಿಯಂತೆ ಕಾಣುತ್ತಿತ್ತು. ನಾನು ಬಹಳ ಉದಾಸೀನೆಯೂ ಖಿನ್ನಳೂ ಆದೆ. ಬಾಗಿ ಅವನಿಗೆ ಚುಂಬನವಿತ್ತೆ. "ಧನ್ಯವಾದ, ಧನ್ಯವಾದ!" ಎಂಬ ಶಬ್ದಗಳು ಸಾವಕಾಶವಾಗಿಯೂ ಅಸ್ಪಷ್ಟವಾಗಿಯೂ ಕೇಳಬಂದುವು. ಅನಂತರ ಪುನಃ ದೇವರನ್ನು ಪ್ರಾರ್ಥಿಸತೊಡಗಿದೆ."

"ನೀನು ಯಾವ ಸ್ಥಳದಲ್ಲಿ ಚುಂಬನವಿತ್ತೆ?" ಪಾದರಿಯು ಶಾಂತಸ್ವರದಲ್ಲಿ ತನ್ನ ಚಿಂತೆಯನ್ನು ಮುಚ್ಚಿಕೊಳ್ಳಲು ಪ್ರಯತ್ನಿಸಿದ. ಇದೇ ಚಿಂತೆಯು ಅವನ ನಿರ್ಣಯಕ್ಕೆ ಅಡ್ಡಿಯಾಗುತ್ತಿತ್ತು.

ಫಿಲೋಮಿನಳು ಶಾಂತಸ್ವರದಲ್ಲಿ ಉತ್ತರವಿತ್ತಳು. "ಎಲ್ಲಿಡೆಗೆ ಕತ್ತಲೆಯಿತ್ತು. ನನ್ನ ಅನುಮಾನದಲ್ಲಿ 'ತುಟಿಗೆ' ಎಂದು ಎನಿಸುತ್ತದೆ."

"ಅವಿವೇಕ! ಏನಿಲ್ಲೆಂದರೂ ಇದು ಅವಿವೇಕವೇ! ಪವಿತ್ರ ಭಾವನೆಯಿಂದ ಪ್ರೇರಿತಳಾಗಿ ನೀನು ಈ ಕೆಲಸವನ್ನು ಮಾಡಿರುವೆಯೆಂದು ನಾನು ತಿಳಿಯುವೆ. ನೀನು ಉಚ್ಚ ಭಾವನೆಯಿಂದ ಪ್ರೇರಿತಳಾಗಿಯೇ ಹೇಳುವೆ. ತಪ್ಪಲ್ಲ ಆದರೆ ಭಯೋತ್ಪಾದಕ ಭಾವನೆಯಿಂದ ಮಾಡಿರುವೆಯೆಂದು ನಾನು ಹೇಳುತ್ತೇನೆ. ತುಟಿಯ ಬದಲಾಗಿ ಬೇರೆ ಸ್ಥಳದಲ್ಲಿ (ಹುಬ್ಬಿಗೆ ಚುಂಬನವಿತ್ತಿದ್ದರೆ ಒಳ್ಳೆಯದಾಗುತ್ತಿತ್ತು. ಅವನ ಆತ್ಮದ ರಕ್ಷಣೆಗಾಗಿ ಇದಿಷ್ಟು ಸಾಕಾಗುತ್ತಿತ್ತು. ಆದರೂ ನೀನು ಮರಣಾಸನ್ನ ಮನುಷ್ಯನ ಚುಂಬನವನ್ನು ತೆಗೆದುಕೊಂಡಿರುವೆ.'

"ಇದೇ ಮಾತನ್ನೇ ನಾನು ಹೇಳಿರುವೆ."

"ಅವನು ಸತ್ತುಹೋಗಿದ್ದಾನೆ. ಅವನ ದಫನವಾಗಿದೆ. ಶಾಂತಿಯಿಂದ ನಿದ್ರಿಸುತ್ತಿದ್ದಾನೆ. ಈಗ ಆ ವಿಷಯವಾಗಿ ಯಾವ ಚರ್ಚೆಯನ್ನು ಮಾಡುವದಿಲ್ಲ."

"ಆದರೆ ಈ ಮಾತು ಸ್ವಲ್ಪ ಬೇರೆಯಾಗಿದೆ. ಅವನು ಇನ್ನೂ ಜೀವಂತವಾಗಿದ್ದಾನೆ."

"ಜೀವಂತವಾಗಿದ್ದಾನೆ?"

"ಅಹುದು. ಸೂರ್ಯೋದಯದವರೆಗೆ ಅವನು ಮರಣಾಸನ್ನನಾಗಿದ್ದ. ಸೂರ್ಯನ ಕಿರಣದ ಸಂಗಡ ಅವನು ನೆಟ್ಟಗಾಗುತ್ತಲೇ ಬಂದ. ಡಾಕ್ಟರರು ಬಂದು, ರೋಗಿಯ ಮುಖದಮೇಲಿನ ಮೃದುವಾದ ಮುಗುಳುನಗೆಯನ್ನು ಕಂಡು ತುಂಬ ಆಶ್ಚರ್ಯಚಕಿತರಾದರು. ಸೂಕ್ಷ್ಮವಾಗಿ ರೋಗಿಯನ್ನು ಪರೀಕ್ಷಿಸಿದರು. ಒಂದು ಚುಚ್ಚುಮದ್ದು ಕೊಟ್ಟು ಡಾಕ್ಟರರು ಸಾವಕಾಶವಾಗಿ ನುಡಿದರು.

“ ನಿಜವಾಗಿಯೂ ಇದು ತುಂಬ ಆಶ್ಚರ್ಯಜನಕವಾದುದು! ಆದರೆ ಈ ರೋಗದ ಮೇಲೆ ನಮಗೆ ವಿಜಯವು ಇನ್ನು ಅವಶ್ಯವಾಗಿ ಪ್ರಾಪ್ತವಾಗುತ್ತದೆ ”

ಪಾದರಿಯು ತೀರ ನಿರಾಶೆಯಿಂದ ಹೇಳಿದ; “ ಆದರೆ ಇದು ಭಯಂಕರವಾದ ಮಾತಾಯಿತು ”

“ ನೀವು ಏನು ಹೇಳುತ್ತಿರುವಿರಿ ? ”

“ ಮಗಳೇ, ಇದೊಂದು ಬಹಳೇ ಗಂಭೀರವಾದ ಪ್ರಶ್ನೆ. ನೀನು ಒಬ್ಬ ಪುರುಷನಿಂದ ಚುಂಬನ ತೆಗೆದುಕೊಂಡಿರುವಿ. ಅವನು ಜೀವಂತವಾಗಿದ್ದಾನೆ. ಈ ವಿಷಯದಲ್ಲಿ ಏನು ಮಾಡಬೇಕೆಂಬುದೇ ನನಗೆ ತಿಳಿಯದಾಗಿದೆ. ಮೃತ್ಯುವಿನ ಮುಖದಲ್ಲಿದ್ದ ಮಾತೇ ಬೇರೆಯಾಗಿತ್ತು. ಪರಮಾತ್ಮನು ಎಲ್ಲ ಮಾತುಗಳನ್ನು ಯಥಾಯೋಗ್ಯವಾಗಿಯೇ ವಿಚಾರಮಾಡುತ್ತಾನೆ. ಆದರೆ ಅವನು ಜೀವಂತನಾಗಿದ್ದರೆ, ದಯೆಯ ವಿಷಯದಲ್ಲಿ ಪರಮಾತ್ಮನಿಗೂ ಗೊಂದಲದಲ್ಲಿ ಬೀಳಬೇಕಾಗುವುದು. ನಾವು ಸ್ಪಷ್ಟವಾಗಿ ಎಲ್ಲ ಮಾತುಗಳನ್ನು ಹೇಳಬೇಕು ” ಸ್ವಲ್ಪ ವೇಳೆ ವಿಚಾರಮಾಡಿ ಅವನು ಪುನಃ ಹೇಳಿದ– “ ಮಗಳೇ, ಆ ಡಾಕ್ಟರನು ಎಂಥವನಿದ್ದಾನೆ? ”

“ ಕೇಳುವುದೇನು ? ಅವನು ತುಂಬ ಸಜ್ಜನ ಪುರುಷನಾಗಿದ್ದಾನೆ. ”

“ ರೋಗಿಯ ಸ್ಥಿತಿಯು ಈಗ ಹೇಗಿದೆ ? ”

“ ಹಾಗಾದರೆ ನಿನ್ನ ಸರ್ವನಾಶವಾಯಿತು ”

“ ಅಯ್ಯೋ ದೇವರೇ ! ”

“ ನೀನು ಈಗಲೂ ಅವನ ನಾಮೋಚ್ಚಾರಣೆಯ ಸಾಹಸ ಮಾಡುವೆಯಾ ”

“ ಪಾದರಿಗಳೇ ನಾನು ದುಷ್ಟ ಪಾಪಿನಿ. ”

“ ಈ ಸ್ವಭಾವವು ನಿಂದನೀಯವಾಗಿದೆ. ” ಆದರೆ ದಾಯಿ ಫಿಲೊಮಿನಳು ಬಿಕ್ಕಿ ಬಿಕ್ಕಿ ಅಳುತ್ತಿರುವದನ್ನು ನೋಡಿ, ಪಾದರಿಯು ಕೋಮಲ ಭಾವದಿಂದ ಮಾತನಾಡತೊಡಗಿದ; “ ನನಗೆ ಈಗಲೂ ಸ್ಪಷ್ಟವಾದ ಮಾರ್ಗವು ಕಾಣದಾಗಿದೆ. ಪಾಪಮಾಡಿಲ್ಲವೆಂದು ನೀನು ಈಗಲೇ ಹೇಳಿದೆ; ಇದರ ವಿರುದ್ಧ ಕಥನದ ತುಲನೆಯಿಂದ ನನಗೆ ಹೆಚ್ಚು ವೇದನೆಯಾಗುತ್ತದೆ. ಈ ವಿರೋಧಾಭಾಸವು ಹೇಗೆ ಸಾಧ್ಯ? ನಾನು ಇದನ್ನು ಹೇಗೆ ತಿಳಿದುಕೊಳ್ಳಲಿ ? ”

“ ನನ್ನಿಂದ ಹೇಳುವುದು ಸಾಧ್ಯವಿಲ್ಲ. ನನಗೆ ಎನಿಸಿದುದೆಲ್ಲವನ್ನೂ ನಿಮ್ಮೆದುರಿಗೆ ಸ್ಪಷ್ಟವಾಗಿ ಹೇಳಿದ್ದೇನೆ. ”

“ ಈಗ ನಿನ್ನ ಕರ್ಮಕ್ಕಾಗಿ ಪಶ್ಚಾತ್ತಾಪಮಾಡುವೆಯೇನು? ”

“ ನನ್ನಿಂದ ಪಾಪವಾಗಿದ್ದರೆ, ಅವಶ್ಯವಾಗಿ ಮಾಡಲೇಬೇಕಾಗುವುದು. ”

“ ಆದರೆ ಈಗಲೇ ನಾನು ನಿನ್ನನ್ನು ಕ್ಷಮಿಸುವೆನೆಂದು ತಿಳಿಯಬೇಡ. ಕೆಲವು ದಿನಗಳ ಪ್ರತೀಕ್ಷೆಯನ್ನು ಮಾಡಲೇಬೇಕಾಗುವುದು. ರೋಗಿಯ ಆಡ್ಡು ಯಾವ ಕಡೆಗೆ ಹೊರಳುವುದೆಂಬುದನ್ನು ನೋಡಬೇಕು. ಅದನ್ನು ಈಗಲೇ ಯಾರು ಹೇಳುವರು ? ಅನಂತರ ನಮ್ಮ ಕಾರ್ಯದ ವಿಧಿಯನ್ನು ಮಾಡಲು ನಿಶ್ಚಯಿಸಬಹುದು. ವಿಶ್ರಾಮಕ್ಕೆಂದು ಯಾವಾಗ ನೀನು ಹಾಸಿಗೆಯಮೇಲೆ ಒರಗುವೆಯೊ ಆಗ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬಹುದು. ನನ್ನ ಆಶಯವು ತಿಳಿಯಿತೇ ? ”

“ ಪಾದರಿಗಳೇ, ನಾನು ಯಾವಾಗಲೂ ಅದಕ್ಕೆ ಸಿದ್ಧ. ”

ಕೆಲವು ದಿನಗಳ ನಂತರ ಫಿಲೋಮಿನಾ ಪುನಃ ಪಾದರಿಗಳ ಕಡೆಗೆ ಬಂದಳು.

“ ೭ನೆಯ ನಂಬರ್ ಹೇಗಿದ್ದಾನೆ? ”

“ ಅವನ ಪರಿಸ್ಥಿತಿಯು ಬಹಳೇ ಸುಧಾರಿಸಿದೆ. ”

“ ಡಾಕ್ಟರರು ಅವನ ವಿಷಯವಾಗಿ ಏನು ಅನ್ನುತ್ತಾರೆ.

“ ಅವನು ನೆಟ್ಟಗಾಗುವನೆಂದು ಅವರ ಹೇಳಿಕೆ. ”

“ ಹಾಗಾದರೆ ನಿನಗೆ ಯಾವ ಆಶೆಯೂ ಉಳಿಯಲಿಲ್ಲ. ”

“ ನಾನು ಅವನಿಗೆ ಹೇಳಿದೆ. ”

“ ಏನು ಹೇಳಿದೆ ? ”

“ ನಿನ್ನ ಕಾರಣವಾಗಿಯೇ ನನ್ನ ಸರ್ವನಾಶವಾಯಿತು ನೀನು ಬದುಕಿ ಉಳಿಯುವೆಯೆಂದು ಎನಿಸಿದ್ದರೆ ನಿನಗೆ ಚುಂಬನವೀಯುತ್ತಿರಲಿಲ್ಲ – ಎಂದು ಹೇಳಿದೆ ’

“ ಆಗ ಆ ಕವಿಯು (ರೋಗಿಯು.) ಏನೆಂದು ಉತ್ತರವಿತ್ತ ? ”

“ ನಿನ್ನನ್ನು ನಾಶಮಾಡಬೇಕೆಂಬ ಇಚ್ಛೆ ನನಗಿಲ್ಲ—ಎಂದು ನುಡಿದ. ಇದಕ್ಕೆ ಪ್ರತಿಯಾಗಿ ನನ್ನ ಆತ್ಮವನ್ನು ರಕ್ಷಿಸುವೆನೆಂದೂ ಹೇಳಿದ. ”

“ ಅವನ ಮರಣದಿಂದಲೇ ಇದು ಸಾಧ್ಯವಿತ್ತು ”

“ ಅಹುದು ಪಾದರಿಗಳೇ, ಆದ್ದರಿಂದಲೇ ಅವನು ತಾನು ಎಂದು ಸಂಪೂರ್ಣವಾಗಿ ನೆಟ್ಟಗಾಗುವನೋ ಅಂದೇ ನನ್ನ ಸಲುವಾಗಿ ತನ್ನ ಆತ್ಮವನ್ನು ಬಲಿದಾನ ಮಾಡುವುದಾಗಿ ಪ್ರತಿಜ್ಞೆ ಮಾಡಿದ್ದಾನೆ.

“ ಇದೊಂದು ಹೊಸ ಸಮಸ್ಯೆ ” ಪಾದರಿಯು ಸ್ವಲ್ಪ ಹೊತ್ತು ವಿಚಾರಮಾಡಿದ. ಅನಂತರ ಗಂಭೀರಮುಖದವನಾಗಿ ಹೇಳತೊಡಗಿದ; “ ಮೊದಲಿನಿಂದ ಕೊನೆಯವರೆಗೆ ಘಟನೆಯ ಸಿಂಹಾವಲೋಕನ ಮಾಡಿದರೆ, ನಿನ್ನನ್ನು ಕ್ಷಮಿಸುವುದೇ ಉಚಿತವೆಂದು ತೋರುತ್ತದೆ. ”

ಜಯ

(೪೬ನೆಯ ಪುಟದಿಂದ ಮುಂದುವರಿದುದು)

ಮಗನು ಕಣ್ಣಮುಂದೆಯೇ ಹಾಳಾಗುವದನ್ನು ನೋಡಲಾರದೇ ತನ್ನ ತಂಗಿಯ ಸಹಾಯ ಕೋರುತ್ತಾಳೆ. ಅಕ್ಕನ ಕರೆಗೆ ಓಗೊಟ್ಟು ತಂಗಿಯು ತನ್ನ ಮಗ ವಾಸುದೇವನನ್ನು ಕಳುಹಿಸುತ್ತಾಳೆ. ವಾಸುದೇವನು ಉತ್ತಮ ತಂದೆಯ ಉತ್ತಮ ಮಗನು. "ಹದಿನಾರಾಣೆ ಗಾಂಧೀ ಭಕ್ತ"ರಾದ ತಂದೆ ಗಣೇಶರಾಯರ ಗರಡಿಯಲ್ಲಿ ಬೆಳೆದವನು. ಮತ್ತು ರಚನಾತ್ಮಕ ಕಾರ್ಯಗಳಲ್ಲಿ ವಿಶೇಷವಾದ ಒಲವು ಉಳ್ಳವನು. ಮನೋಹರನನ್ನು ತಿದ್ದಲು ಇವನು ಯೋಗ್ಯನೆಂಬ ಕಮಲಮ್ಮನ ಕನಸನ್ನು ಸತ್ಯವನ್ನಾಗಿ ಮಾಡುತ್ತಾನೆ. ಪಟ್ಟಣದ ರೀತಿ-ನೀತಿಗಳನ್ನರಿಯದ, ಸರಳ ಮುಗ್ಧಜೀವಿಯಾದ ವಾಸುದೇವನ ಗಂಭೀರ, ಪ್ರಸನ್ನ ಮುಖವು, ಮನೋಹರನ ಮೇಲೆ ಮಾಂತ್ರಿಕನಂತೆ ಕೆಲಸ ಮಾಡುತ್ತದೆ. ಅವನ ಗೆಳೆತನದ ಪರಿಣಾಮವಾಗಿ ಮನೋಹರನು ಒಳ್ಳೆಯ ದಾರಿಯನ್ನು ಹಿಡಿಯುತ್ತಾನೆ. ಆದರೆ.... ಜೀವನದ ಗತಿಯಲ್ಲಿ ಆಕಸ್ಮಿಕತೆ ಮತ್ತು ವೈಚಿತ್ರ್ಯಗಳು ಸೂಕ್ಷ್ಮವಾಗಿ ಅಡಗಿರುತ್ತವೆ. ಮನೋಹರನನ್ನು ತಿದ್ದಿದ ವಾಸುದೇವನೇ, ಪಟ್ಟಣದ ಪರಿಣಾಮವಾಗಿ ದುಶ್ಚಟಗಳಿಗೆ ಬಲಿಬಿದ್ದು, ಅಧಃಪತನ ಹೊಂದುತ್ತಾನೆ. ಇದು ಅವನಿಗೆ ತಿಳಿದಾಗ ತೀರ ತಡವಾಗಿ ಹೋಗಿರುತ್ತದೆ. ಪಟ್ಟಣವಾಸಕ್ಕೆ ಆಕಸ್ಮಿಕ ಅಂತವೊದಗಿ ಬಂದಾಗ, ನೆಲೆಯಿಲ್ಲದ ಜೀವಿಯಂತೆ ವಾಸುದೇವನು ದೂರ ಹೋಗಿಬಿಡುತ್ತಾನೆ. ಮನೋಹರನು, ಗೆಳೆಯನಾದ ಅದೂ "ತನ್ನ ಜೀವನದ ಗತಿಯನ್ನು ಬದಲು ಮಾಡುವದರ ಸಲುವಾಗಿಯೇ ಆತ್ಮಾರ್ಪಣ ಮಾಡಿದ ಗೆಳೆಯನ— ದುರಂತವನ್ನು ಅವನ ಪತ್ರದ ಮುಖಾಂತರ ತಿಳಿದಾಗ ಶಾಂತಿಗಾಗಿ ಗೀತೆಗೆ ಮೊರೆ ಹೋಗುತ್ತಾನೆ.

ಇದು ಕಥೆಯ ಸಾರಾಂಶ. ಕಥೆಯಲ್ಲಿ ಬರುವ ವ್ಯಕ್ತಿಗಳು ಮುಖ್ಯವಾಗಿ ಐದು. ಮನೋಹರ, ಅವನ ತಾಯಿ ಕಮಲಮ್ಮ, ಕಮಲಮ್ಮನ ತಂಗಿ, ವಾಸುದೇವ ಮತ್ತು ಗಣೇಶರಾಯರು. ಮನೋಹರನ ಅಧಃಪತನದಿಂದ ಆರಂಭವಾಗಿ ವಾಸುದೇವನ ಅಧಃಪತನದೊಂದಿಗೆ ಕಥೆ ಮುಗಿಯುತ್ತದೆ. ಇನ್ನು ಒಂದೊಂದೇ ವ್ಯಕ್ತಿಯನ್ನು ಪ್ರತ್ಯೇಕವಾಗಿ ಕಥೆಯ ಹಿನ್ನೆಲೆಯಲ್ಲಿ ನೋಡೋಣ.

ಮೊದಲನೆಯದಾಗಿ, ಮನೋಹರ ತಂದೆಯಿಲ್ಲದ ಯುವಕನು. ಕಡಿವಾಣವಿಲ್ಲದ ಕುದುರೆ, ವಾತ್ಸಲ್ಯಮೂರ್ತಿಯಾದ ತಾಯಿ, ಖಜಾನೆಯ ಬೀಗದ ಕೈ ಕೈಯಲ್ಲಿದೆ, "ಬೆಲ್ಲಕ್ಕೆ ಇರುವೆ ಮುತ್ತುವಂತೆ ಮುತ್ತುವ" ಗೆಳೆಯರಿದ್ದಾರೆ. ಸಿಗರೇಟು, ಬೀಡಿ, ಕಾಫಿ, ಇಸ್ಪೇಟು, ಜೂಜು ಎಲ್ಲ ಚಟಗಳಿವೆ. S. S. L. C. ಯಲ್ಲಿ ಎರಡು ಸಲ ಫೇಲಾಗಿದ್ದಾನೆ, ಮಂದಬುದ್ಧಿ—ಇಷ್ಟು ಸಾಕು ಅವನ ಅಧಃಪತನಕ್ಕೆ. ಅವನ ಅಧಃಪತನದ ಕಾರಣಗಳಲ್ಲಿ ತಾನು ತಾಯಿಯ ಅತಿ ವಾತ್ಸಲ್ಯವನ್ನೂ ಸೇರಿಸಿದ್ದನ್ನು ನೋಡಿ ಕೆಲವರಿಗೆ ವಿಚಿತ್ರವೆನಿಸಬಹುದು. ಆದರೆ ಅದೊಂದು ಸಬಲ ಕಾರಣವೆಂದು ನನಗೆ ತೋರುತ್ತದೆ. ಅವನು ಬೆಳೆದ ವಾತಾವರಣದಲ್ಲಿ ತಾಯಿಯ ವಾತ್ಸಲ್ಯವನ್ನು ತೆಗೆದುಹಾಕಿದರೆ ಉಳಿಯುವದು ತೀರ ಸ್ವಲ್ಪ. "ತಾಯಿಯ ಎದುರಿಗೆ ಸುಳ್ಳು ಹೇಳುವದು ಅವನಿಗೆ ಅಸಾಧ್ಯವೇ ಆಗುತ್ತಿತ್ತು" ಈ ದೌರ್ಬಲ್ಯವೇ ಅದರ ಕುರುಹು. ಅವನಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲದಿರುವದಕ್ಕೂ ಇದು ಬಹುಮಟ್ಟಿಗೆ ಕಾರಣವಾಗುತ್ತದೆ. ವಿಚಿತ್ರವೆಂದರೆ, ಮುಂದೆ ಈ ದೌರ್ಬಲ್ಯವೇ ಅವನ ಅಂತಸ್ಸಾಕ್ಷಿಗೆ ಮುಖವಾಗಿ, ಅವನ ಉದ್ಧಾರಕ್ಕೆ ಕಾರಣವಾಗುತ್ತದೆ. ಆ ಅಂತಃಸಾಕ್ಷಿಯನ್ನು ಎತ್ತಿ ಹಿಡಿಯಲು ಮತ್ತು ಅವನ ದೌರ್ಬಲ್ಯವನ್ನು ಹೋಗಲಾಡಿಸಲು ವಾಸುದೇವನ ಪ್ರಸನ್ನತೆಯ ಶಕ್ತಿಯ ಅವಶ್ಯಕತೆ ಉಂಟಾಯಿತು. ಆ ಶಕ್ತಿಯ ಸಹಾಯದಿಂದಾಗಿ ಅವನ ಜೀವನದ ಗತಿಯೇ ಬದಲಾಯಿತು. ಗಾಂಧೀ ಸಾಹಿತ್ಯ, ವಿನೋಬಾಜಿಯವರ ಲೇಖನಗಳು, ಖಾದಿ, ಗೀತೆ ಮುಂತಾದವುಗಳೆಡೆಗೆ ಅವನ ಮನಸ್ಸು ಹೊರಳಿತು. ಕೈತುಂಬ ಕೆಲಸವಾದಾಗ ಮನಸ್ಸಿಗೆ ಸುಖ-ಶಾಂತಿ ಲಭಿಸಿತು. ಅವನ ಪರಿವರ್ತನೆ ದೃಢವಾದುದು. ಏಕೆಂದರೆ ಅದು ಆಳವಾದ ಅನುಭವದ ಅಡಿಗಲ್ಲ ಮೇಲೆ ನಿಂತಿದೆ. ಜೀವನದ ಕಹಿಯನ್ನುಂಡು, ಅದರ ಕೊಳಚೆಯಲ್ಲಿ ಹೊರಳಾಡಿ, ಶುಭ್ರ ಪ್ರವಾಹದೆಡೆಗೆ ಮನೋಹರ ತಿರುಗಿದ್ದಾನೆ. ಇದರ ಚಿತ್ರಣವನ್ನು ಬಹಳ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಎರಡನೇದಾಗಿ, ವಾಸುದೇವ. ವಾಸುದೇವ ಮತ್ತು ಮನೋಹರ ಇವರಿಬ್ಬರನ್ನೂ; ಒಬ್ಬರ ಬದಿಗೊಬ್ಬರನ್ನು ನಿಲ್ಲಿಸಿ, ಒಬ್ಬರಲ್ಲೊಬ್ಬರನ್ನು ಬೆರೆಸಿ, ಒಬ್ಬರಿಂದೊಬ್ಬರನ್ನು ದೂರ ನಿಲ್ಲಿಸಿ ಲೇಖಕರು ಚಿತ್ರಿಸಿದ್ದಾರೆ. ಹಳ್ಳಿಯಲ್ಲಿಯೇ ಪ್ರಕೃತಿಯ ಕೂಸಾಗಿ ಬೆಳೆದವ ವಾಸುದೇವ. ಶುದ್ಧ, ಸರಳ ಜೀವಿಯಾದ ತಂದೆಯ ತೊಡೆಯಲ್ಲಿ ಬೆಳೆದವ. ಉದಾತ್ತ ವಿಚಾರಗಳನ್ನು ತಲೆಯಲ್ಲಿ ತುಂಬಿಕೊಂಡವ. ರಚನಾತ್ಮಕ ಕಾರ್ಯಗಳಲ್ಲಿ ಒಲವು ಉಳ್ಳವ. ಇವೆಲ್ಲ ರೂಪರೇಷೆಗಳು ಮನೋಹರನಿಂದ ದೂರವಿದ್ದ ಹಳ್ಳಿಯಲ್ಲಿನ ವಾಸುದೇವನ ವ್ಯಕ್ತಿತ್ವದವು. ಮನೋಹರನೊಂದಿಗೆ ಬೆರೆಯುವ ಅವಧಿಯಲ್ಲಿ ಒಂದೊಂದೇ ಮಾರ್ಪಾಟಾಗುತ್ತದೆ. ಅನಂತರ ಮನೋಹರನನ್ನು ಬಿಟ್ಟು ದೂರ ಹೋಗುವ ವಾಸುದೇವನು ತೀರ ಭಿನ್ನನಾಗಿದ್ದಾನೆ. ಇಲ್ಲಿ ಚಿತ್ರಣ ಸ್ವಲ್ಪ ತತ್ತರಿಸಿದೆ. ಏಕೆಂದರೆ, ವಾಸುದೇವನ ಚಿತ್ರದಲ್ಲಿ ಸ್ವಲ್ಪ ಆಭಾಸವನ್ನು ತುಂಬಿದ್ದಾರೆ ಲೇಖಕರು. ಪಟ್ಟಣದಲ್ಲಿ ಅಧಃಪತನ ಹೊಂದಿದ ವಾಸುದೇವನ ಜೀವನದ ಹಿಂದಿನ ಸನ್ನಿವೇಶ ಹಾಗೂ ಹಿನ್ನೆಲೆಯನ್ನು ವಿವರಿಸುತ್ತ, "ಅವನ ಆಸೆಯ ಬೆಂಕಿ ತಕ್ಕ ಆಸರೆಯಿಲ್ಲದೇ ಒಡಲೊಳಗೇ ಹುದುಗಿಕೊಂಡಿತ್ತು. ಬಲಾತ್ಕಾರವಾಗಿ ಹಾಕಿದ ಸಂಯಮದ ಬಂಧನ ಕಡಿದು, ನಿಯಮಪಾಲನೆ, ಗಾಂಧೀತತ್ತ್ವ, ಹಳ್ಳಿಯ ಉದ್ಧಾರ ಮೊದಲಾದವುಗಳೆಲ್ಲ ಮಹಾಪ್ರವಾಹದ ಸೆಳೆತಕ್ಕೆ ಸಿಕ್ಕಿ ತೇಲಿಹೋದವು" ಎಂದು ಹೇಳುತ್ತಾರೆ. ಈ ವಿವರಣೆಯನ್ನು ಓದಿದಾಗ ಒಮ್ಮಿಂದೊಮ್ಮೆಲೇ ಯಾವುದೋ ಕಪ್ಪು ಮುಸುಕು ವಾಸುದೇವನ ಮೊದಲಿನ ಗುಣಸಮೂಹದ ಮೇಲೆ ಬಿದ್ದಂತೆ ಭಾಸವಾಗಿ ಅವನ ಚಿತ್ರಣದಲ್ಲಿ ಆಭಾಸ ಕಂಡುಬರುತ್ತದೆ. ಅವನ ಗುಣಗಳೆಲ್ಲ ತೋರಿಕೆಯವು. ಎಲ್ಲ ಸುಪ್ತ ಭಾವನೆಗಳನ್ನು ಅವನು ಹತ್ತಿಕ್ಕಿ ಒಳ್ಳೆಯವನೆಂದು ತೋರಿಸಿಕೊಳ್ಳುತ್ತಿದ್ದನು, ಎಂಬ ಭಾವನೆ ಮೂಡುತ್ತದೆ. ಸುಪ್ತ ಭಾವನೆಗಳ ಪ್ರಕಟನೆಯಿಂದಲ್ಲ, ಆದರೆ ಪರಿಸ್ಥಿತಿಯ ಕೈವಾಡದಿಂದ ವ್ಯಕ್ತಿಯ ಗತಿ ಬದಲಿಸುತ್ತದೆ ಎಂಬುದನ್ನು ಚಿತ್ರಿಸಲು ಹೊರಟ ಲೇಖಕರು ಇಲ್ಲಿ ಅದನ್ನು ತಾವೇ ಮರೆತಂತೆ ಕಾಣುತ್ತದೆ. ಈ ವಿವರಣೆ ಇಲ್ಲದಿದ್ದರೆ ಇನ್ನೂ ಒಳ್ಳೆಯದಿತ್ತು. ಮನೋಹರನ ದೌರ್ಬಲ್ಯವೂ ವಾಸುದೇವನಲ್ಲಿ ಉಳಿಯುವದಿಲ್ಲ. ಧಾರಾಳವಾಗಿ ಸುಳ್ಳು ಹೇಳುವವನ್ನು ಕಲಿಯುತ್ತಾನೆ.

ಇವನಲ್ಲಿ ಸ್ವತಂತ್ರವಾದ ವ್ಯಕ್ತಿತ್ವವಿದೆ. ಆದರೆ ಮನೋಹರನ ಅನುಭವವಿಲ್ಲ ಈ ಅನುಭವವನ್ನೇ ಈಗ ಪಡೆಯುತ್ತಿದ್ದಾನೆ. ಮನಃಸಾಕ್ಷಿಯು ಕೈ ಮೇಲಾದಾಗ ದೂರ ಹೋಗಿರುತ್ತಾನೆ ವಾಸುದೇವನ ಪಾತ್ರ ಸೂಕ್ಷ್ಮವಾಗಿ ಜಟಿಲವಾಗಿ ಚಿತ್ರಿತವಾಗಿದ್ದರೂ ಸ್ವಲ್ಪ ಆಭಾಸವಿದೆ

ಇಬ್ಬರಲ್ಲೂ ಅಧಃಪತನದ ಹಾದಿ, ಉಡಾಳ ಹುಡುಗರ ಸಹವಾಸದಿಂದ ಮೊದಲಾಗಿ ಜೂಜಿನ ಪಡೆಗೆ ಹೋಗುತ್ತದೆ. ಯೌವನವಿದೆ, ಶಕ್ತಿಯಿದೆ, ಶಕ್ತಿಯಿದೆ, ಸಾಕಷ್ಟು ಹಣವಿದೆ, ಕೆಲಸವಿಲ್ಲ. ಜವಾಬ್ದಾರಿಯಿಲ್ಲ. ಪೋಲಿಗಳ ಸಹವಾಸವಿದೆ— ಇನ್ನೇನು ಬೇಕು? ಇಬ್ಬರ ದುಶ್ಚಟಗಳ ಯಾದಿಯಲ್ಲಿಯೂ 'ಹೆಣ್ಣಿನ' ಉಲ್ಲೇಖವೇ ಇಲ್ಲ ಲೇಖಕರು ಹೆದರಿದರೋ ಅಥವಾ ನಾಚಿದರೋ ತಿಳಿಯದು. ಇಬ್ಬರು ಯುವಕರೂ ಒಳ್ಳೆಯ ವಯಸ್ಸಿಗೆ ಬಂದವರಿದ್ದಾರೆ. ಅಲ್ಲದೆ ಅಲ್ಲಿಯವರೆಗೆ ಇಬ್ಬರಿಗೂ ಮದುವೆಯಾಗಿಲ್ಲ. (ಮನೋಹರನು ದಾರಿ ತಪ್ಪಿದಾಗ, ಕಮಲಮ್ಮನ ಮನಸ್ಸಿನಲ್ಲಿ "ಮಗನಿಗೆ ಮದುವೆ ಮಾಡಿದರೆ ಜವಾಬ್ದಾರಿ ಬಿದ್ದು ಒಳ್ಳೇ ಹಾದಿಗೆ ಬಂದಾನು" ಎಂಬ ವಿಚಾರ ಬರುವದಿಲ್ಲ.) ಇನ್ನು ಇಬ್ಬರೂ ಯುವಕರೇ ನಾಚಿರಬೇಕು. ಅದೂ ಒಳ್ಳೆಯದೇ ಬಹುಶಃ ಆ ಯುವಕರಿಬ್ಬರ ಅಧಃಪತನವು ಪರಿಪೂರ್ಣವಾಗಿಲ್ಲ ಎಂಬುದನ್ನು ಸೂಚಿಸುವವರ ಸಲುವಾಗಿಯೇ ಲೇಖಕರು "ಹೆಣ್ಣ"ನ್ನು ಉಲ್ಲೇಖಿಸಲಿಕ್ಕಿಲ್ಲ. ಆದರೂ ಅಷ್ಟರಮಟ್ಟಿಗೆ ಅದು ಅಸ್ವಾಭಾವಿಕ.

ಇನ್ನು ಗಣೇಶರಾಯರು. ಅವರು "ನಗುಮೊಗದ ಸೌಮ್ಯ ಮೂರ್ತಿ." ಶುದ್ಧ, ಸರಳ ಸ್ವಭಾವದ ಸಾತ್ವಿಕ ಜೀವಿ. ಆಡಿದ್ದನ್ನು ಮಾಡಿ ತೋರಿಸುವವರು. ಹಳ್ಳಿಗೆ ಹಳ್ಳಿಯನ್ನೇ ವಶಪಡಿಸಿಕೊಂಡ ಪ್ರೇಮಮಯಿ, ಮುಗ್ಧ ಮೂರ್ತಿ. ಗಣೇಶರಾಯರ ಚಿತ್ರಣ ಮಾಡುತ್ತ ಮಾಡುತ್ತ ಹಳ್ಳಿ-ಪಟ್ಟಣಗಳ ಬಗ್ಗೆ ಮತ್ತು ಸ್ವಾತಂತ್ರ್ಯಾನಂತರದ ಭಾರತದ ಬಗ್ಗೆ ತಮ್ಮ ಸೂಕ್ಷ್ಮ ನಿರೀಕ್ಷಣೆಯನ್ನು ವ್ಯಕ್ತ ಮಾಡಿದ್ದಾರೆ. ಅನನುಭವಿಗಳು ಮುಂದೆ ಬಂದು ಅನುಭವಿಗಳು ಹೇಗೆ ಹಿಂದುಳಿದರೆಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ "ಹುಟ್ಟಿದಾರಭ್ಯ ಹಳ್ಳಿಯನ್ನೇ ಕಾಣದವರು "ಹಳ್ಳಿಗರ ಏಳಿಗೆ"ಯ ಕುರಿತು ಚರ್ಚಿಸಿದರು ಎಂದು ಹೇಳುವಾಗ ಅವರ ಸಾಮಾಜಿಕ ಜೀವನದ ಸೂಕ್ಷ್ಮ ನಿರೀಕ್ಷಣೆಯು ವ್ಯಕ್ತವಾಗುತ್ತದೆ. ಹೂಗಿಡಗಳಿಗೆ ನೀರೆರೆಯುವದರಲ್ಲಿ ತಲ್ಲೀನರಾದ ಗಣೇಶರಾಯರ ಶಾಂತ ಜೀವನದ ಚಿತ್ರವು ಕಣ್ಣೆದುರ ನಿಲ್ಲುವಷ್ಟು ಸ್ಫುಟವಾಗಿ ಅಡಿಗರು ಚಿತ್ರಿಸಿದ್ದಾರೆ.

ಇನ್ನುಳಿದವರು ಇಬ್ಬರು ತಾಯಂದಿರು— ಕಮಲಮ್ಮ ಮತ್ತು ಅವಳ ತಂಗಿ. ಕಮಲಮ್ಮ ವಾತ್ಸಲ್ಯದ ಮೂರ್ತಿ. ಮಗನನ್ನು ಗದರಿಸಲಾರಳು. ಮಗ ಮನೋಹರನೇ ಅವಳ ಸರ್ವಸ್ವ. ಅವನ ಸಲುವಾಗಿ ಅವಳು ತನ್ನ ಗೆಳೆಯರಿಂದ, ನೆರೆಯವರಿಂದ, ಎಲ್ಲರಿಂದ ದೂರಾದಳು. ಈ ತನ್ನ ಅತಿ ವಾತ್ಸಲ್ಯವೇ ತನ್ನ ಮಗನ ಅಧಃಪತನಕ್ಕೂ ಒಂದು ಕಾರಣವಾಗಿ ಪರಿಣಮಿಸಿತೆಂಬುದನ್ನು ಪಾಪ, ಅವಳೇನು ಬಲ್ಲಳು. ತನ್ನ ಮಗನನ್ನು ತಿದ್ದುವ ಶಕ್ತಿ ತನ್ನಲ್ಲಿಯೇ ಇದ್ದರೂ ಅದರ ಮೇಲೆ ಬಿದ್ದ ಮಮತೆಯ ಮುಖವಾಡದ ಪ್ರಭಾವದಿಂದಾಗಿ ಅದು ಅವಳಿಗೆ ತಿಳಿಯದೇಹೋಯಿತು. ಕಮಲಮ್ಮನ ತಂಗಿಯ ವಿವರಣೆಯು ಹೆಚ್ಚಾಗಿ ಇಲ್ಲದಿದ್ದರೂ, ಚಿತ್ರ ಸ್ಫುಟವಾಗಿದೆ. ಒಳ್ಳೆಯ ತಾಯಿ, ಒಳ್ಳೆಯ ಹೆಂಡತಿ ಮತ್ತು ಒಳ್ಳೆಯ ತಂಗಿ ಎಂಬಂತೆ ಆಕೆ ಚಿತ್ರಿತಳಾಗಿದ್ದಾಳೆ. ಒಟ್ಟಿನಮೇಲೆ ಆಕೆಯ ಸ್ಥಾನ ಆಕೆಗೆ ಯೋಗ್ಯವಾಗಿದೆ. ಆಕೆಯು ಕಮಲಮ್ಮನಿಗೆ ಬರೆದ ಪತ್ರದಿಂದಲೇ ನಾವು ಆಕೆಯ ಅಂತರಂಗವನ್ನು ಅಳೆಯಬಹುದು.

ಇದೆಲ್ಲ ವಸ್ತು, ಕಥೆ ಮತ್ತು ವ್ಯಕ್ತಿಗಳ ಬಗ್ಗೆ ಆಯಿತು. ಇನ್ನು ಕಥನಕಲೆ ಮತ್ತು ಸನ್ನಿವೇಶಗಳು. ಈ ಕಥೆಯಲ್ಲಿ ಬಳಸಿದ ತಂತ್ರದಲ್ಲಿ ಏಕಸೂತ್ರತೆ ಕಂಡುಬರುವದಿಲ್ಲ. ಲೇಖಕರು, ಕಮಲಮ್ಮನ ತಲೆಯಲ್ಲಿ ಎದ್ದ ವಿಚಾರದ ಅಲೆಗಳನ್ನು ತಾವೇ ಕ್ರಮವಾಗಿ ಸಂಗ್ರಹಿಸುವದರಿಂದ ಕಥೆಯನ್ನು ಪ್ರಾರಂಭಿಸುತ್ತಾರೆ. ಈ ಸಂಗ್ರಹಿಸುವದಕ್ಕೆ ಕೊನೆ ಎಲ್ಲಿ? "ಹಾಳು ಬೆಕ್ಕು ಸಂದಿನಲ್ಲಿ ತಲೆ ಹಾಕಿ ದೂಡಿದಾಗ" ಕಮಲಮ್ಮನ ವಿಚಾರಸರಣಿಗೂ, ಲೇಖಕರ ಸಂಗ್ರಹಕ್ಕೂ ಸಂಚಕಾರ ಬರುತ್ತದೆ. ಕಮಲಮ್ಮನಿಗೆ ತಂಗಿಯ ನೆನಪಾದಾಗ ಲೇಖಕರ ಸಂಗ್ರಹ ಮುಗಿಯುತ್ತದೆ. ಏಕೆಂದರೆ, "ತಂಗಿಗೆ ಬರೆದ ಪತ್ರವನ್ನು ಕವರಿನೊಳಗಿಟ್ಟು ವಿಳಾಸ ಬರೆಯುತ್ತಿರುವಾಗಲೇ ಬಾಗಿಲ ದೂಡಿದ" ಸದ್ದಾಗುತ್ತದೆ. ಮನೋಹರನು ಒಳಗೆ ಬರುತ್ತಾನೆ. ಮುಂದೆಲ್ಲ ಲೇಖಕರು ಸನ್ನಿವೇಶಗಳ ಬದಲಾವಣೆಯ ತಂತ್ರವನ್ನು ಯಶಸ್ವಿಯಾಗಿ ಬಳಸಿದ್ದಾರೆ. ಒಂದೆಡೆಗೆ ಗಣೇಶರಾಯರ ಕುಟುಂಬದ ಚಿತ್ರ, ಇನ್ನೊಂದೆಡೆಗೆ ಅಧಃಪತನ ಹೊಂದಿದ ಮನೋಹರ ಮತ್ತು ಅವನನ್ನು ತಿದ್ದಲು ಬಂದ ವಾಸುದೇವರ ಚಿತ್ರ, ಮತ್ತೊಂದು ಕಡೆ ಪರಿವರ್ತಿತ ಮನೋಹರನ ಚಿತ್ರ ಕೊನೆಗೆ; ಅಧಃಪತನ ಹೊಂದಿ ದೂರ ಹೋದ ವಾಸುದೇವನ ಚಿತ್ರ; ಹೀಗೆ ಕಥೆಯ ಓಟಕ್ಕೆ ಹಿತಮಿತವಾಗುವಂತೆ ಸನ್ನಿವೇಶ ಚಿತ್ರಣವಿದೆ. ಸನ್ನಿವೇಶಗಳನ್ನು ಒಂದರಬದಿಗೊಂದು ಇಟ್ಟು ತಾರತಮ್ಯದ ರೀತಿಯನ್ನೂ ತೋರಿಸಿದ್ದಾರೆ. ಮನೋಹರನ ಕೌಟುಂಬಿಕ ಜೀವನದ ಹಿನ್ನೆಲೆಯೊಂದಿಗೆ ವಾಸುದೇವನ ಕೌಟುಂಬಿಕ ಜೀವನದ ಹಿನ್ನೆಲೆಯನ್ನು ಹಿಡಿದಿದ್ದಾರೆ. ಅಧಃಪತನ ಹೊಂದಿದ ಮನೋಹರನೊಂದಿಗೆ ಪ್ರಸನ್ನ ಮೂರ್ತಿ ವಾಸುದೇವನನ್ನು ನಿಲ್ಲಿಸಿದ್ದಾರೆ ಹೀಗೆ ಸನ್ನಿವೇಶ ಚಿತ್ರಣ ಬಹಳ ಮಾರ್ಮಿಕವಾಗಿದೆ. ವ್ಯಕ್ತಿಗಳೆಲ್ಲ ಜೀವಂತವಾಗಿದ್ದಾರೆ.

ಈ ಎಲ್ಲ ವ್ಯಕ್ತಿಗಳೊಂದಿಗೆ ಇನ್ನೊಂದು ವ್ಯಕ್ತಿಯನ್ನು—ಅಥವಾ ವ್ಯಕ್ತಿಯ ರೂಪ ತಾಳಬಹುದಾದ ಶಕ್ತಿಯನ್ನು—ಸೇರಿಸಬಹುದಾಗಿತ್ತು ಅದೆಂದರೆ ಪರಿಸ್ಥಿತಿ. (Environmnt). ಥಾಮಸ್ ಹಾರ್ಡಿಯ ಕಾದಂಬರಿಗಳಲ್ಲಿ ಬರುವ ಪ್ರಕೃತಿ (Nature)ಯಂತೆ, ಟಾಲಸ್ಟಾಯಿಯ ಅಮರ ಕಾದಂಬರಿ "ಯುದ್ಧ ಮತ್ತು ಶಾಂತಿ" (War and eace)ಯಲ್ಲಿ ಬರುವ ವಿಸ್ತಾರವಾದ ರಶಿಯದ ನೆಲ (Space)ದಂತೆ ಪರಿಸ್ಥಿತಿ ಮತ್ತು ಸಹವಾಸಗಳೇ ವ್ಯಕ್ತಿಯ ರೂಪ ತಾಳಬಹುದಿತ್ತು. ಆದರೆ ಲೇಖಕರು ಕೊಟ್ಟ ವಾಸುದೇವನ ಹೆತ್ತವರ ಸುಪ್ತ ಆಸೆಗಳ ವಿವರಣೆಯು ಹೀಗೆ ಮಾಡುವದಕ್ಕೆ ಅಡ್ಡಿ ಮಾಡುತ್ತದೆ ಆಗ "ಪರಿಸ್ಥಿತಿ"ಗೆ ಅರ್ಥವಿಲ್ಲದಂತಾಗುತ್ತದೆ

ಕಥೆಯಿದೆ, ಕಥನ ಕಲೆಯಿದೆ, ಒಳ್ಳೆಯ ಸನ್ನಿವೇಶ ನಿರೂಪಣೆಯಿದೆ, ಜೀವಂತ ವ್ಯಕ್ತಿಗಳಿದ್ದಾರೆ. ತಂತ್ರದಲ್ಲಿಯ ಮತ್ತು ಪಾತ್ರ ಚಿತ್ರಣದಲ್ಲಿಯ ಒಂದೆರಡು ತೀರ ಸಣ್ಣ ದೋಷಗಳನ್ನು ಬಿಟ್ಟರೆ "ಸಹವಾಸ" ಈಗೀಗ ಕನ್ನಡದಲ್ಲಿ ಹೊರಬಂದ ಕೆಲವೇ ಒಳ್ಳೆಯ ಜೀವನ ಕಥೆಗಳಲ್ಲಿ ಒಂದು.

ಸಾದರ ಸ್ವೀಕಾರ

೮೨. ರಾಗಿಣಿ (ಸಾಮಾಜಿಕ ಕಾದಂಬರಿ) ಬರೆದವರು : ' ಭಾರತೀಪ್ರಿಯ '. ಪ್ರಕಾಶಕರು: ಶಾರದಾ ಪ್ರಕಟನಾಲಯ, ಅರಳೇಪೇಟೆ, ಬೆಂಗಳೂರು. ೨. ಕ್ರೌ. ಅ. ೨೭೦ ಪುಟಗಳು. ಬೆ ೧|| ರೂ.

೮೩. ಮಧುಚಂದ್ರ (ಪ್ರೇಮಗೀತೆಗಳು). ಬರೆದವರು : ಶ್ರೀ. ಚನ್ನವೀರ ಕಣವಿ ಅವರು ಪ್ರಕಾಶಕರು: ಮೇಲಿನ ಶಾರದಾ ಪ್ರಕಟನಾಲಯದವರು. ಕ್ರೌ ಅ. ೬೦ ಪುಟಗಳು ಬೆಲೆ ೦–೧೨–೦.

೮೪. ಕರ್ನಾಟಕ ಸಾಹಿತ್ಯಮಂದಿರ, ಹೈದರಾಬಾದು (೧೦ನೆಯ ವರ್ಷದ ವರದಿ) ಅಧ್ಯಕ್ಷ: ನರಸಿಂಗರಾವ ಮಾನವಿ. ಕಾ. ದ. ಗಣೇಶ ಜೋಶಿ. ಕ್ರೌ. ಅ. ೩೦ ಪುಟಗಳು.

೮೫. ಮಹಾತ್ಮಾ ಗಾಂಧೀಜಿ. (ಲಾವಣಿ). ಬರೆದವರು : ಶ್ರೀ. ಮಾ. ಸ. ಮೂರ್ತಿ, ಕನ್ನಡ ಜಾಣ, ರಾ. ಭಾ. ವಿಶಾರದ. ಡೆ. ೧೬ ಪುಟಗಳು.

೮೬. ಶ್ರೀ ಬಂಥನಾಳ ಶಿವಯೋಗಿಗಳವರ ಬೋಧೆ. (ಉಪದೇಶ ಸಂಕಲನ) ಸಂಗ್ರಾಹಕರು: ಅಣ್ಣಪ್ಪ ಮಹಾರುದ್ರಪ್ಪ ಮೈದರಗಿ, ಕ್ಲಾರ್ಕ. ಶ್ರೀ. ಶಿದಗೊಂಡಪ್ಪ ಬಸಗೊಂಡಪ್ಪ ಸಾವಳಗಿ ವಿಜಾಪುರ. ಪ್ರಕಾಶಕರು : ವ್ಹಿ. ಡಿ. ಸವದಿ, ಪ್ರಕಾಶ ಪ್ರಿಂಟಿಂಗ ಪ್ರೆಸ್, ವಿಜಾಪುರ. ಕ್ರೌ. ಅ. ೩೦ ಪುಟಗಳು ಬೆಲೆ ೦-೫-೦.

೮೭. ಶ್ರೀ. ರಾಘವೇಂದ್ರ ವಾಚನಾಲಯ, ಮಂತ್ರಾಲಯ (೮ನೆಯ ವಾರ್ಷಿಕ ವರದಿ) ಅಧ್ಯಕ್ಷರು : ಶ್ರೀ. ಕುರಡಿ ರಾಘವೇಂದ್ರಾಚಾರ್ಯರು. ಕಾ. ದ. ಅರ್ಚಕ ವೆಂಕೋಬಾಚಾರ್ಯರು. ಫೂ ಕ್ಯಾ. ೧೨ ಪುಟಗಳು.

೮೮. ಪ್ರಥಮ ಪಂಚವಾರ್ಷಿಕ ಯೋಜನೆ ಹಾಗು ಒಕ್ಕಲತನ. (ಪರಿಚಯಾತ್ಮಕ ಕಿರುಹೊತ್ತಿಗೆ) ಲೇ : ಶ್ರೀ. ಎನ್ ಸಿ. ಪಾಟೀಲ, ಬಿ. ಎಸ್‌ಸಿ. (ಅಗ್ರಿ), ಪಿಎಚ್ ಡಿ. ಪ್ರಕಾಶಕರು: ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. ಫ್ರೂ. ಕ್ಯಾ. ೭೩ ಪುಟಗಳು ಬೆಲೆ ೦–೪–೧.

೮೯. ಸಹಕಾರಿ ಸ್ವರಾಜ್ಯ. (ಸಹಕಾರ ಪರಿಚಯಾತ್ಮಕ ಗ್ರಂಥ) ಲೇ: ಶ್ರೀ ಎಸ್. ವಿ. ಕಪೂರ, ಎಂ ಎ, ಎಫ್. ಆರ್ ಇ ಎಸ್. ಪ್ರಕಾಶಕರು: ಕರ್ನಾಟಕ ಡಿವ್ಹಿಜನಲ್ ಕೋಆಪರೇಟಿವ್ಹ ಬೋರ್ಡ ಲಿಮಿಟೆಡ್, ಧಾರವಾಡ. ಕ್ರೌ. ಅ. ೬೮ ಪುಟಗಳು. ಬೆಲೆ ೦–೮–೦.

೯೦. ಹರಪುರಿ ಶೆಗ್ಗಿನಮಠದ ಮನ್ಮಥನಾಮ ಸಂವತ್ಸರದ ಸಿದ್ಧಾಂತ ಪಂಚಾಂಗ. (ಪಂಚಾಂಗ) ಬೇರೆ ಬೇರೆ ಜ್ಯೋತಿರ್ವಿಜ್ಞಾನಿಗಳಿಂದ ರಚಿತವಾದುದು. ಪ್ರಕಾಶಕ: ಶ್ರೀ. ಬಿ. ಹಯಾತ ಸಾಹೇಬ, ಭಾರತ ಜ್ಯೋತಿಷ ವಿದ್ಯಾಲಯ, ಹರಪನಹಳ್ಳಿ, (ಬಳ್ಳಾರಿ) ಡೆ. ೧೬ ೨೪ ಪುಟಗಳು.

೯೧. ಮಂತ್ರಶಕ್ತಿ. (ಕಾದಂಬರಿ) ಲೇ : ' ಇಂದಿರಾತನಯ ' ಪ್ರಕಾಶಕರು: ಮೋಹನ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು

೯೨. ಜ್ಯೋತಿ (ಮಕ್ಕಳ ಮಾಸಪತ್ರಿಕೆ) ಸಂಪಾದಕರು : ಶ್ರೀ. ಕುಪ್ಪೇರಾವ ಉಕ್ಲಿ (ಅಧ್ಯಾಪಕ) ಪ್ರಕಾಶಕರು : ಶ್ರೀ ಕುಪ್ಪೇರಾವ ಉಕ್ಲಿ, ಜ್ಯೋತಿ ಪ್ರಕಾಶನ ಸಮಿತಿ ಕಾರ್ಯಾಲಯ, ಲಿಂಗಸುಗೂರ. ಕ್ರೌ ಅ. ೩೮ ಪುಟಗಳು. ಬೆಲೆ ೦–೪–೦.

೯೩. ಸಹಕಾರಿ ಪ್ರತ್ಯಕ್ಷ ದರ್ಶನ (ಸಹಕಾರ ಪರಿಚಯ ಗ್ರಂಥ) ಅನುವಾದಕರು : ಶ್ರೀ. ಶಂಕರ ಕಪೂರ ಎಂ ಎ. ಎಫ್ ಆರ್. ಇ. ಎಸ್. ಪ್ರಕಾಶಕರು: ಕರ್ನಾಟಕ ಡಿವ್ಹಿಜನಲ್ ಕೋಆಪರೇಟಿವ್ಹ ಬೋರ್ಡ ಲಿಮಿಟೆಡ್, ಧಾರವಾಡ. ಕ್ರೌ ಅ. ೮೦ ಪುಟಗಳು. ಬೆಲೆ ೦–೧೨–೦.

೯೪. ಲೋಕರಾಜ್ಯ (ಪ್ರಜಾರಾಜ್ಯದಿನ ವಿಶೇಷ ಸಂಚಿಕೆ) ಮುಂಬೈ ಶಾಖೆಯ ಪ್ರಸಿದ್ಧಿ ಶಾಖೆಯ ಪ್ರಕಟನೆ ಡೆ. ಕಾ. ೯೬ ಪುಟಗಳು.

೯೫. The Big Change (America transforms itself) By Shri Frederick Lewsy. Allen Publisher, Harper and Brokers, Newyork.

೯೬. ಗಿಳಿಯ ಪಂಜರ ಮತ್ತು ಇತರ ಏಕಾಂಕ ನಾಟಕಗಳು (ಏಕಾಂಕ ನಾಟಕಗಳ ಸಂಗ್ರಹ) ಲೇ. ' ಪರ್ವತವಾಣಿ ' ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು. ಕ್ರೌ. ಅ ೧೪೨ ಪುಟಗಳು. ಬೆಲೆ ೧–೦–೦.

೯೭. ಕಣ್ಣುಬಿಚ್ಚಾಲೆ ಮತ್ತು ಇತರ ಏಕಾಂಕ ನಾಟಕಗಳು (ಏಕಾಂಕ ನಾಟಕಗಳ ಸಂಗ್ರಹ) ಲೇ. ಶ್ರೀ. ಎಸ್ ಜಿ ಶಾಸ್ತ್ರಿ ಮತ್ತು ಶ್ರೀ. ಜಿ ಪಿ. ರಾಜರತ್ನಂ ಪ್ರಕಾಶಕರು: ಉಷಾ ಸಾಹಿತ್ಯಮಾಲೆ, ಮೈಸೂರು. ಕ್ರೌ ಅ. ೮೪ ಪುಟಗಳು. ಬೆಲೆ ೦–೧೨–೦.

೯೮. ಮುದ್ದಣಕವಿ ವಿರಚಿತ ಶ್ರೀರಾಮ ಪಟ್ಟಾಭಿಷೇಕಂ (ಕಾವ್ಯ) ಸಂಪಾದಕ: ಶ್ರೀ ಎಸ್ ವಿ ಪರಮೇಶ್ವರ ಭಟ್ಟ. ಪ್ರಕಾಶಕರು: ಉಷಾ ಸಾಹಿತ್ಯಮಾಲೆ ಮೈಸೂರು. ಕ್ರೌ. ಅ. ೮೪ ಪುಟಗಳು. ಬೆಲೆ ೧–೦ ೦.

— —

ಶರತ್ ಪ್ರಕಾಶನ ಮಂದಿರ, ಧಾರವಾಡ.

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ಕನ್ನಡ ನಾಡಿನ ವಾಚನಾಲಯಗಳ ಸಂಚಾಲಕರು ಜ್ಞಾಪಕದಲ್ಲಿ ಇರಿಸಿಕೊಳ್ಳ ಬೇಕು! ತಮ್ಮ ವಾಚನಾಲಯಕ್ಕೆ ಬೇಕಾಗುವ ಯಾವ ಕನ್ನಡ ಪುಸ್ತಕ ಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

"ಆನಂದಕಂದ"ರ ಎಲ್ಲ ಕೃತಿಗಳು ನಮ್ಮಲ್ಲಿ ದೊರೆಯುವವು. ವ್ಯಾಪಾರಿಗಳಿಗೆ ಧಾರಾಳ ಕಮೀಶನ್ ಕೊಡಲಾಗುವುದು.

ನಮ್ಮ ಮಂದಿರ ಪ್ರಕಟಿಸಿದ

೧ ಮಗಳ ಮದುವೆ

ಸಾಮಾಜಿಕ ಕಾದಂಬರಿ ಕ್ರಾ. ಅ. ೩೫೦ ಪುಟಗಳು ಸಾದಾ ಪ್ರತಿಗೆ ೪ ರೂ.

೨ ಬೆಳವಡಿ ಮಲ್ಲಮ್ಮ	೩ ಕಾರಹುಣ್ಣಿವೆ	೪ ಬೆಂದಹೃದಯ
(ತರಂಗ ನಾಟಕ)	(ಕವನ ಸಂಕಲನ)	ರೂಪಕ ಸಂಕಲನ
ಕ್ರಾ. ಅ ಪುಟ ೧೧೬ ಬೆಲೆ ೧-೮-೦	ಕ್ರಾ. ಅ. ೧೩೮ ಪುಟ ಬೆಲೆ ೨-೦-೦	ಕ್ರಾ. ಅ. ೧೧೨ ಪುಟ ೧-೪-೦

ಈ ನಾಲ್ಕೂ ಪುಸ್ತಕ ಒಮ್ಮೆಲೆ ತರಿಸಿಕೊಂಡರೆ ಏಳು ರೂ. ಮಾತ್ರ. ಅಂಚೆವೆಚ್ಚ ಬೇರೆ.

ನಮ್ಮಲ್ಲಿ ದೊರೆಯುವ 'ಆನಂದಕಂದ' ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
೧. ರಾಜಯೋಗಿ	ಒಡನಾಡಿ	ಬಡತನದ ಬಾಳು	ಕರ್ನಾಟಕ ಜನಜೀವನ
೨. ಸುದರ್ಶನ		ನಮ್ಮ ಬದುಕು	ಶ್ರೀ. ಬಸವಣ್ಣನವರು
೩. ಅಶಾಂತಿಪರ್ವ		ಸಂಸಾರ ಚಿತ್ರ	
		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುಡ್ಡಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by N. A. Hoskeri at the Vijaya Press, Dharwar and published for the Proprietors Jayanti publications, by S. D. Dharmatti at the Jayanti Office, Dharwar

ಜಯಂತಿ

ಏಪ್ರಿಲ್

೧೯೫೫

ಬೆಲೆ:

೮ ಆಣೆಗಳು

ಮಧುಪವನಾ!

ಮಲೆ-ಮಲೆಯಲೆಯುತ ಮಲರನು ಸುಲಿಯುತ
ಬಾರೈ, ಮಧುಪವನಾ !
ಮೆಲುಪನು ಬಲಿಯುತ ಇಳೆಯನು ಸಮೆಯೈ
ಸುರ-ಮಂದಾರವನ !

* * *

ಅರಳನು ತಳೆಯುವ ಗುರುತನೆ ಕಾಣದೆ
ಪಾರಿಜಾತ ಬಕುಲ....
ಒರಗಿನೆ ಬನದಲಿ ಮಲ್ಲಿಗೆ ಮಾಧವಿ
ಕುಂದದ ಕುಸುಮಕುಲ !

* * *

ಬಾ ಮೆಲುಗಾಳಿ, ಚೇತನ ತಾಳಿ—
ಶಿಶಿರದ ಎದೆ ಸೀಳಿ....
ಭೂಮಿಯು ಸುಗ್ಗಿಯ ಸಿರಿಮನೆಯಾಗಲಿ
ನಲಿಯಲಿ ಭ್ರಮರಾಳಿ !

* * *

ಮಲೆ-ಮಲೆಯಲೆಯುತ ಮಲರನು ಸುಲಿಯುತ
ಬಾರೈ ಮಧುಪವನಾ !
ಚೆಲುವನು ಹೊಸವರುಷಕೆ ನೀ ತಾರೈ
ನೀನೆ ಜಗದ ಪ್ರಾಣಾ !

—ಆನಂದಕಂದ

ಈ ಸಂಚಿಕೆಯಲ್ಲಿ:

●

ವಿಚಾರ-ಆಚಾರಗಳಲ್ಲಿಯ ವೈಷಮ್ಯ (ಸಂಪಾದಕೀಯ)

ಸಂಪಾದಕರು ೪೦೫

ನಾಡನಡೆ (ಪ್ರಾಸಂಗಿಕ ಟಿಪ್ಪಣಿಗಳು)

'ಕಾಲಭೈರವ' ೪೦೭

ಹಟವಾರಿ (ಸ್ವತಂತ್ರ ಕಥೆ)

ಶ್ರೀ. ಬಳ್ಕೂರ ಸುಬ್ರಾಯ ಅಡಿಗ. ಗಂಗೊಳ್ಳಿ, ... ೪೦೯

ಈಜಿಪ್ತಕ್ಕೆ ಬೆಳಕು ನೀಡಿದ ಕುರುಡ (ವ್ಯಕ್ತಿಪರಿಚಯ)

ಶ್ರೀ. ಚಿತ್ರಿಗೆ ರಾಮನ್. ಗೋಕರ್ಣ ೪೧೪

ಅಣುವಿನ ಗುಣುಗುಣು (ಕವನ)

ಶ್ರೀ. ಗೋವರ್ಧನಾಚಾರ್ಯ ಗಲಗಲಿ ಎಂ. ಎ., ಬಿ ಟಿ. ಧಾರವಾಡ ೪೧೭

ಬೆಳಗು (ಕವನ)

'ನಾರಂಗಿ'ಭಟ್ಟ, ಮುಂಬಯಿ ೪೧೭

ಆಶೆಯ ಶಿಶು (ಒಂದು ರೂಪಕಕಥೆ)

ಶ್ರೀ. ಕ. ವೆಂ. ರಾಜಗೋಪಾಲ ಬಿ. ಎ. ಧಾರವಾಡ ೪೧೮

ಮಾಯಾಕವಚ (ರೂಪಕದ ವಿಮರ್ಶೆ)

ಶ್ರೀ. ರಂಗರಾವ ಸ್ವಾ. ದೇಶಪಾಂಡೆ, ಆಲದಕಟ್ಟಿ ೪೨೫

ಯುಗಾದಿಯೊ, ಯುಗಾಂತವೊ ! (ಕವನ)

ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೨೮

ಧರ್ಮಸ್ಥಳದಿಂದ ವೈನಾಡಿಗೆ (ಪ್ರವಾಸ ಪರಿಚಯ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ ೪೨೯

ಪ. ಜರ್ಮನಿಯ ಸಮಾಜಜೀವನ (ಪರಿಚಯಾತ್ಮಕ ಪ್ರಬಂಧ)

ಡಾ. ಎಂ. ಕೆ. ವರಾಹಮೂರ್ತಿ ಎಂ. ಎಸ್‌ಸಿ., ಡಿ. ಎಸ್‌ಸಿ.

ಬಾಸೆಲ್—ಸ್ವಿತ್ಸರ್ಲಂಡ್ ೪೩೨

ಕಾಲಗತಿ (ನವ್ಯಕವನ)

ಶ್ರೀ. ಅರವಿಂದ ನಾಡಕರ್ಣಿ ಬಿ. ಎ., ಎಲ್‌ಎಲ್. ಬಿ. ಮುಂಬಯಿ ೪೩೫

ಭಾವತುರಂಗ (ಒಂದು ನಗೆಯ ಕಥೆ)

ಶ್ರೀ. ಸಂಗೀತ, ಕೂಡಲಿಗಿ (ಬಳ್ಳಾರಿ) ೪೩೭

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಶ್ರೀ. ಎಚ್. ಆರ್. ಶಾಸ್ತ್ರಿ ಸುರಪುರ, ನೈಝಾಮ್‌ಕಾಲೇಜು, ೪೪೦

ಸಾಹಿತ್ಯವಿಹಾರ (ಸಾಹಿತ್ಯಿಕ, ಭಾಷಾಭಿಜ್ಞತೆ)

ವಿದ್ವಾನ್ ಕೆ. ಎಸ್. ಶರ್ಮಾ, ಕಾಸರಗೋಡು ೪೪೩

ಸಾದರ ಸ್ವೀಕಾರ .... ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೭ ಸಂಚಿಕೆ ೧೧

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ವಿಚಾರ-ಆಚಾರಗಳಲ್ಲಿಯ ವೈಷಮ್ಯ

ಇಂದು ನಮ್ಮ ಸಾಹಿತ್ಯದಲ್ಲಿ ಹೊಸ ಹೊಸ ವಿಚಾರಗಳ ಪ್ರಚಾರವು ನಡೆದಿದೆ. ಆರ್ಥಿಕಸಮತೆ, ಮಾನವ ಬಂಧುತ್ವ, ಜಾತಿ-ಪಂಥಗಳ ನಿರ್ಮೂಲನ, ಸ್ತ್ರೀ-ಪುರುಷಜೀವನದಲ್ಲಿಯ ವೈಯಕ್ತಿಕ ಸ್ವಾತಂತ್ರ್ಯ, ಸರ್ವಜನಶಿಕ್ಷಣ— ಇವೇ ಮೊದಲಾದುವು ಪ್ರಚಾರ ಹೊಂದುತ್ತಿರುವ ಮುಖ್ಯ ವಿಚಾರಗಳು. ಹಳೆಯ ವಿಚಾರದ ಸಾಮಾಜಿಕ ಕಟ್ಟು-ಕಟ್ಟಳೆಗಳೆಲ್ಲ ಅಳಿದುದರಿಂದ, ಈಗ ನಮ್ಮ ರಾಷ್ಟ್ರದಲ್ಲಿ ಹೊಸಬಗೆಯ ಸಮಾಜದ ರಚನೆಯಾಗುವ ಅಗತ್ಯವೇನೋ ತುಂಬ ಇದೆ. ಸಮಾಜರಚನೆಯ ಮುಖ್ಯ ತಳಹದಿಯು ಆರ್ಥಿಕವ್ಯವಸ್ಥೆಯೇ ಆದುದರಿಂದ, ಸರ್ವರನ್ನೂ ಶಾಂತಿ-ತುಷ್ಟಿಗಳಿಂದ ಇರಿಸಲಿಕ್ಕೆ ಬರುವಂತಹ ಆರ್ಥಿಕವ್ಯವಸ್ಥೆಯು ಯಾವಬಗೆಯದಾಗಿರಬೇಕೆಂಬುದು ಕೇವಲ ಬುದ್ಧಿವಾದದಿಂದ ಬಿಡಿಸಲು ಬಾರದಂತಹ ಸಮಸ್ಯೆಯಾಗಿದೆ. ಇಂದು ಯಾವ ರಾಷ್ಟ್ರದಲ್ಲಿಯೂ ಈ ಸಮಸ್ಯೆಯು ತೃಪ್ತಿಕರವಾಗಿಬಿಟ್ಟಿದೆಯೆಂದು ಹೇಳಲು ಬರುವಂತಿಲ್ಲ.

ಇಂದು ನಮ್ಮ ನಾಡಿನ ಸಾಹಿತ್ಯಪ್ರಪಂಚದಲ್ಲಿ ಆರ್ಥಿಕವ್ಯವಸ್ಥೆಯ ಬೇಡಿಕೆಯು ಎಂತಹದಿದೆಯೆಂಬುದನ್ನು ನೋಡೋಣ. ಆರ್ಥಿಕ ಸ್ವಾತಂತ್ರ್ಯವಿಲ್ಲದ ತರುಣ ಸಾಹಿತ್ಯಿಕರೂ ಅರ್ಥದ ಕೊರತೆಯಿರುವ ಎಲ್ಲ ಸಾಹಿತ್ಯಿಕರೂ ಬಡತನದ ಕರುಣಾಜನಕ ಚಿತ್ರಗಳನ್ನು ತೆಗೆಯುತ್ತಾರೆ. ಸಿರಿವಂತಿಕೆಯ ಕಠೋರ—ಕರುಣಾಹೀನ ದೃಶ್ಯಗಳನ್ನು ಮೂಡಿಸುತ್ತಾರೆ. ಬಡವರೆಲ್ಲರು ಸದ್ಗುಣಿಗಳು, ಸಹೃದಯರು, ಸಜ್ಜನರು; ಶ್ರೀಮಂತರೆಲ್ಲರೂ ದುರ್ಗುಣಿಗಳು; ಹೃದಯಹೀನರು; ದುರ್ಜನರು! ಬಡವರ ರಕ್ತವನ್ನು ಹೀರಿ ಹೀರಿ ಡೊಳ್ಳನ್ನು ಬೆಳೆಸಿಕೊಳ್ಳುವ ಶೋಷಕಜೀವಿಗಳು! ಹೀಗೆ ತಮ್ಮ ಸಾಹಿತ್ಯದಲ್ಲಿ ಪ್ರಚಾರಕಾರ್ಯವನ್ನು ನಡೆಸಿರುವ ತರುಣರಿಗೆ ಆರ್ಥಿಕ ಸ್ವಾತಂತ್ರ್ಯವು ಬಂದಾಗ, ಅರ್ಥಹೀನ ಸಾಹಿತ್ಯಿಕರು ಹಣಗಾರರಾದಾಗ ಅವರ ಆಚಾರಗಳೇ ಬೇರೆಯಾಗಿಬಿಡುತ್ತವೆ. ಮೊದಲು ಕೂಡ ಅವರ ದೈನಂದಿನ ಜೀವನದಲ್ಲಿ, ಅವರು ಪ್ರಚಾರಮಾಡುತ್ತಿರುವ ವಿಚಾರಕ್ಕೆ ಅನುಗುಣವಾದ ಆಚಾರಗಳೇ ಇರುತ್ತವೆಂದಲ್ಲ; ಅದಕ್ಕೆ ವಿರೋಧವಾಗಿ ಅವರು ಆಚರಿಸುತ್ತಿರುವುದೇ ಹೆಚ್ಚಾಗಿ ಎಲ್ಲ ಕಡೆಗೂ ಕಂಡುಬರುವ ಸಂಗತಿಯಾಗಿದೆ.

ಬಡವರ ಕಷ್ಟ-ನಷ್ಟಗಳನ್ನು ಕರುಣಾಪೂರ್ಣವಾಗಿ ಚಿತ್ರಿಸಬಯಸುವ ಯಾವ ತರುಣ ಸಾಹಿತ್ಯಿಕನೂ, ಆ ಬಡವರ ಕಷ್ಟ-ನಷ್ಟಗಳಲ್ಲಿ ಪ್ರತ್ಯಕ್ಷವಾಗಿ ಸಹಕರಿಸಲಿಕ್ಕೆ ಎಂದೂ ಸಿದ್ಧನಾಗನು. ತಾವು ತಮ್ಮ ಉಡುಪು ತೊಡವುಗಳ ವೆಚ್ಚವನ್ನು ಕಡಿಮೆಮಾಡಿ, ಬಡವರ ಬರಿಮೈಯನ್ನು ಮುಚ್ಚಲು ನೆರವಾಗುವ ತರುಣ ಸಾಹಿತ್ಯಿಕರು ಎಷ್ಟು ಜನರಿದ್ದಾರೆ? ತಮ್ಮ ಊಟ-ತಿಂಡಿಗಳ ವೆಚ್ಚವನ್ನು ಮಿತಗೊಳಿಸಿಕೊಂಡು, ಬಡವರ ಬರಿಹೊಟ್ಟೆಯನ್ನು ತುಂಬಲು ಹವಣಿಸುವ ವಿವೇಕಿತರುಣರು ಎಷ್ಟು ಜನರಿದ್ದಾರೆ? ನಾಟಕ-ಚಲಚ್ಚಿತ್ರ ಮೊದಲಾದ ಮನೋರಂಜನೆಯ ಕಾರ್ಯಕ್ರಮಗಳಿಗೆ ವೆಚ್ಚಮಾಡುವ ಹಣವನ್ನು, ಬಡವರ ಕಷ್ಟಗಳ ನಿವಾರಣೆಗಾಗಿ ಕೊಡಬಲ್ಲ ಉದಾರಬುದ್ಧಿಯ ತರುಣರು ಎಷ್ಟು ಜನರಿದ್ದಾರೆ? ಇದೂ ಹೋಗಲಿ, ಬೇನೆ-ಬೇಸರಿಕೆಗಳಿಂದ ಬಳಲುತ್ತಿರುವ ಬಡವರನ್ನು ತಮ್ಮ ಸೇವೆ-ಶುಶ್ರೂಷೆಗಳನ್ನು ಸಲ್ಲಿಸಿ ಸಲಹುವ ತ್ಯಾಗಶೀಲ ತರುಣರು ಎಲ್ಲಿ ಇದ್ದಾರೆ? ಬಡಜನರ ಬಳಿಯಲ್ಲಿ ಕುಳಿತುಕೊಂಡು ಅವರೊಂದಿಗೆ ಪ್ರೀತಿ ವಿಶ್ವಾಸಗಳಿಂದ ಮಾತನಾಡಬಲ್ಲ ಸುಶಿಕ್ಷಿತ ತರುಣರು ಎಷ್ಟು ಜನರು ದೊರೆತಾರು? ಸಾಹಿತ್ಯದಲ್ಲಿ ಬಡಜನರಿಗಾಗಿ ಅಗ್ಗದ ಸಹಾನುಭೂತಿಯ ಮಾತುಗಳ ಸೂರೆಯಾಗಿರುವುವು. ಆಚರಣೆಯಲ್ಲಿ ಮಾತ್ರ ಆ ಬಗೆಯ ಸಹಾನುಭೂತಿಯ ಕುರುಹುಗಳೇ

ಕಾಣುವುದಿಲ್ಲ. ಇಂತಹ ಬಾಯಿ ಬಂಡಾಯದ ಬಯಲುವೇದಾಂತಿಗಳ ಸಾಹಿತ್ಯಸೃಷ್ಟಿಯು ಸಮಾಜಕ್ಕೆ ಯಾವ ಉಪಕಾರವನ್ನು ಮಾಡೀತು? ಇವರ ಸಾಹಿತ್ಯಪ್ರಚಾರದಿಂದ ಬಡವ ಶ್ರೀಮಂತನನ್ನು ದ್ವೇಷಿಸ ತೊಡಗಿದ್ದಾನೆ ಶ್ರೀಮಂತ ಬಡವನನ್ನು ತಿರಸ್ಕಾರ ಭೀತಿಗಳಿಂದ ನೋಡತೊಡಗಿದ್ದಾನೆ. ಇಬ್ಬರಲ್ಲಿಯೂ ವಾಸಿಸುತ್ತಿದ್ದ ಮಾನವಸಹಜ ದಯೆ-ದಾಕ್ಷಿಣ್ಯ, ಪ್ರೀತಿ-ಸಹಾನುಭೂತಿಗಳು ಶೂನ್ಯಪ್ರಮಾಣಕ್ಕೆ ಇಳಿಯತೊಡಗಿವೆ.

ಇನ್ನೊಂದು ಮಾನವಬಂಧುತ್ವದ ಪ್ರಚಾರ. ಇದಂತೂ ತೀರ ಅರ್ಥವಿಲ್ಲದ ಬುರುಡೆಯ ಮಾತು. ಮಾನವಬಂಧುತ್ವದ ಮಾತುಗಳನ್ನು ಗಾಳಿಯಲ್ಲಿ ಬಿಡುತ್ತಿರುವವನೇ ತನ್ನ ನಿತ್ಯಜೀವನದಲ್ಲಿ ಅನೇಕ ಸ್ವಾರ್ಥ-ಲೋಭ-ಮೋಹಗಳ ಬೆನ್ನುಹತ್ತಿರುವುದನ್ನು ನಾವು ನೋಡುತ್ತೇವೆ. ಕುಟುಂಬದ ಜನರು ನೆರೆ ಹೊರೆ ತನ್ನ ಓಣಿ, ತನ್ನ ಊರು ಇವುಗಳೊಂದಿಗೆ ಸರಿಯಾಗಿ ಹೊಂದಿಕೊಂಡು ಇರಲಿಕ್ಕೆ ಬಾರದವನಿಗೆ 'ಮಾನವಬಂಧುತ್ವ' ಎಂಬ ಮಾತನ್ನು ಎತ್ತಲಿಕ್ಕಾದರೂ ಅಧಿಕಾರವಿರುವುದೆ? ಇಂದು ಅಟಂ ಬಾಂಬು, ಹೈಡ್ರೋಜನ್ ಬಾಂಬುಗಳಂತಹ ಪ್ರಳಯಕಾರಿ ಶಸ್ತ್ರಗಳನ್ನು ನಿರ್ಮಿಸುತ್ತ ಯುದ್ಧದ ಸಂಪೂರ್ಣಸಿದ್ಧತೆಯನ್ನು ಮಾಡಿಕೊಳ್ಳುತ್ತಲೇ 'ವಿಶ್ವಶಾಂತಿ'ಯ ಪ್ರಚಾರ ನಡೆಸಿರುವ ಮಹಾರಾಷ್ಟ್ರಗಳ ವ್ಯಭಿಚಾರನೀತಿಗೆ ಸಮಾನವಾದುದು ನಮ್ಮ ಸಾಹಿತ್ಯಿಕರ ಈ ಮಾನವಬಂಧುತ್ವವಾದದ ಪ್ರಚಾರ. ವಸ್ತುತಃ ಮಾನವಬಂಧುತ್ವವು ಬುದ್ಧಿವಾದಿಗೆ ಪಚನವಾಗುವಂತಹ ಆಹಾರವಲ್ಲ. ನಮ್ಮ ಸರ್ವಜ್ಞಕವಿಯು ಒಂದು ಮುತ್ತಿನಂತಹ ತತ್ತ್ವದ ಮಾತನ್ನು ಹೇಳಿದ್ದಾನೆ: 'ಅಡವಿಯ ಮಾಡುವನು ರೂಢಿಯೊಳಗುತ್ತಮನು, ಅಡಿ ಮಾಡುವನು ಮಧ್ಯಮನು, ಅಧಮ ತಾನು ಅಡಿ ಮಾಡದವ' ಎಂದು. ಮಾನವಬಂಧುತ್ವದ ಮಾತು ಆಡುವಂತಹದಲ್ಲ; ಅದದ ಮಾಡಬೇಕಾದುದು. ಅದಕ್ಕೆ ಹೃದಯದ ಸಂಸ್ಕಾರ ಬೇಕಾಗುವುದೇ ಹೊರತು ತರ್ಕವಾಕ್ಯಗಳ ಗಾಳಿಗಳಲ್ಲ.

ಇನ್ನು ಜಾತಿ-ಮತ-ಪಂಥಗಳ ನಿರ್ಮೂಲನದ ಪ್ರಚಾರದ ವಿಷಯ: ನಮ್ಮ ಇಂದಿನ ಆರ್ಥಿಕವ್ಯವಸ್ಥೆಯು, ಉದ್ಯೋಗಗಳ ಮೂಲಕವಾಗಿ ತಲೆಯೆತ್ತಿ ನಡೆದುಕೊಂಡು ಬಂದಿದ್ದ ಜಾತಿಗಳನ್ನು ತಲೆಕೆಳಗೆ ಮಾಡಿಬಿಟ್ಟಿದೆ. ಈಗಾಗಲೆ ಇಂದು ಯಾವನೂ ಯಾವುದೇ ಉದ್ಯೋಗವನ್ನು ಮಾಡಿ ಉಪಜೀವನ ಸಾಗಿಸಬಹುದು. ಹೀಗಿರುವಾಗ, ಜಾತಿಗಳು ಉಳಿದಿವೆಯೆಂದು ಹೇಗೆ ಹೇಳಬೇಕು? ಯಾವ ಜಾತಿಯವರಿಗೂ ತಮ್ಮ ಜಾತಿಗೆ ಹೊಂದಿದ ಉದ್ಯೋಗದ ಬಗೆಗೆ ಪ್ರೀತಿ-ಆತ್ಮೀಯತೆಗಳೇ ಉಳಿದಿಲ್ಲವೆಂಬುದು ಸ್ಪಷ್ಟವಾಗಿ ಕಾಣುತ್ತಿರುವಾಗ ಅದರ ವಿರೋಧ ಪ್ರಚಾರವು ಬೇಕೇತಕೆ?

ಇನ್ನು ಮತ-ಪಂಥಗಳ ವಿಚಾರ. ಇದು ಬುದ್ಧಿಗಿಂತಲೂ ಹೆಚ್ಚಾಗಿ ಭಾವನೆಗೆ ಸಂಬಂಧಿಸಿದುದು ವ್ಯಕ್ತಿ-ವ್ಯಕ್ತಿಗಳ ಅಂತರಂಗದ ನಂಬುಗೆಗೆ ಸಂಬಂಧಿಸಿದುದು. ಇದನ್ನು ನೀರಸವಾದ ಪ್ರಚಾರೋಕ್ತಿಗಳಿಂದ ಕಳೆದುಬಿಡುವುದು ಸಾಧ್ಯವೇ ಇಲ್ಲ. ಇದರಿಂದ ವ್ಯಕ್ತಿಯ ಲೌಕಿಕ ಜೀವನದಲ್ಲಿ ಅಂತಹ ಯಾವ ದುಷ್ಟ ಪರಿಣಾಮವೂ ಆಗಲಾರದು. ಪ್ರತಿಯೊಂದು ಮತಪಂಥದ ಲೌಕಿಕಾಚರಣೆಯು ವ್ಯಕ್ತಿಯಲ್ಲಿ ಮಾನವತೆಯನ್ನು ವಿಕಾಸಗೊಳಿಸುವುದೇ ಹೊರತು ಬೇರೆ ಯಾವ ಪ್ರತಿಗಾಮಿಶಕ್ತಿಯನ್ನೂ ನಿರ್ಮಿಸುವುದಿಲ್ಲ. ಇಂತಹ ಪವಿತ್ರ ಭಾವನೆಗಳನ್ನು ಹರಡುವ ಮತ ಪಂಥಗಳ ಮೇಲೆ ನಮ್ಮ ಸಾಹಿತ್ಯಿಕರು ವಿಶೇಷವಾಗಿ ವಿರೋಧಪ್ರಚಾರದ ಗದೆಯನ್ನು ಎತ್ತಬೇಕೋ ತಿಳಿಯದಾಗಿದೆ. ಇಂದಿನ ರಾಜಕೀಯ ಮತ-ಪಂಥಗಳ ಪ್ರಚಾರದಷ್ಟೇನೂ ಹಳೆಯಕಾಲದ ಮತ-ಪಂಥಗಳ ಪ್ರಚಾರವು ನಮ್ಮ ಜನತೆಗೆ ನಷ್ಟವನ್ನುಂಟುಮಾಡಿಲ್ಲ. ಅದರಂತೆಯೆ ಇಂದಿನ ಸಮಾಜಸುಧಾರಕರ ತತ್ತ್ವಭಾವಗಳ ಪ್ರಚಾರದಷ್ಟೇನೂ ಹಿಂದಿನ ಮತ-ಪಂಥಗಳು ಜನತೆಯನ್ನು ಭ್ರಮೆಯಲ್ಲಿ ಕೆಡಹಿಲ್ಲ. ರಾಜಕೀಯ ಮತ-ಪಂಥಗಳ ಲೌಕಿಕ ಆಚಾರ-ವಿಚಾರಗಳಲ್ಲಿ ಅಭಿಪ್ರಾಯೈಕ್ಯವಿಲ್ಲ; ಸಮಾಜಸುಧಾರಕರ ಮತ-ಪಂಥಗಳ ಆಚಾರ ವಿಚಾರಗಳಲ್ಲಿಯೂ ಏಕವಾಕ್ಯತೆಯಿಲ್ಲ. ಹಿಂದಿನ ಕಾಲದ ಮತ-ಪಂಥಗಳ ಲೌಕಿಕ ಆಚಾರದ ಉಪದೇಶ ಸರ್ವಜನಸಾಮಾನ್ಯವೆನಿಸುವಂತಹವು.

'ಕಳಬೇಡ ಕೊಲಬೇಡ ಹುಸಿಯನುಡಿಯಲುಬೇಡ; ಮುನಿಯಬೇಡ ಅನ್ಯರಿಗೆ! ಅಸಹ್ಯಪಡಬೇಡ, ತನ್ನ ಹೊಗಳಲು ಬೇಡ, ಇದಿರ ನಿಂದಿಸಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗನನೊಲಿಸುವ ಪರಿ!'

ಎಂದು ಬಸವಣ್ಣನವರು ಹೇಳಿದ ನೀತಿಯನ್ನು ಭಾರತದೊಳಗಿನ ಯಾವ ಮತ-ಪಂಥ-ಸಂಗಡದವರು ಒಪ್ಪಲಾರರು?

"ಅವಿನಾಶಿತು ತದ್ವಿದ್ಧಿ ಯೇನ ಸರ್ವಮಿದಂ ತತಂ
ವಿನಾಶಮವ್ಯಯಸ್ಯಾಸ್ಯ ನಕಶ್ಚಿತ್ ಕರ್ತುಮರ್ಹತಿ ||"

ಎಂದು ಹೇಳಿದ ಶ್ರೀಕೃಷ್ಣನ ತತ್ತ್ವಸಾರವನ್ನು, ಭಾರತದಲ್ಲಿಯ ಯಾವ ಮತ-ಪಂಥದವರು ವಿರೋಧಿಸಬಹುದು?

ಸಾಹಿತ್ಯಿಕರು ವ್ಯಕ್ತಿಗಳ ಅಜ್ಞಾನದ ವಿರೋಧವಾಗಿ ಪ್ರಚಾರಗಳನ್ನು ನಡೆಯಿಸಬಹುದು; ಆದರೆ ಅಜ್ಞಾನವು ಧರ್ಮ-ಮತ-ಪಂಥಗಳಲ್ಲಿ ಇರುವುದಿಲ್ಲ; ಅವನ್ನು ಸರಿಯಾಗಿ ಅರ್ಥಮಾಡಿಕೊಂಡಿರದ ಸಾಮಾಜಿಕರಲ್ಲಿ ಇರುವುದು. ಹೀಗಿರುವಾಗ ನಾವು ಧರ್ಮ-ಮತ-ಪಂಥಗಳನ್ನೇಕೆ ದೂಷಿಸಿ ನುಡಿಯಬೇಕು? ಅವು ಸಮಾಜದಲ್ಲಿ ಗುಂಪುಗಳನ್ನು ಹುಟ್ಟಿಸುತ್ತಿವೆಯೆಂದರೆ, ಹೊಸಕಾಲದ ರಾಜಕೀಯ-ಸಾಮಾಜಿಕವಾದಗಳೂ ಗುಂಪುಗಳನ್ನು ಹುಟ್ಟಿಸುವುವಲ್ಲ! ವ್ಯಕ್ತಿ-ವ್ಯಕ್ತಿಗಳ ಹೃದಯವಿಕಾಸವು ಗುಂಪುಗಳನ್ನು ಸೃಷ್ಟಿಸುವುದೂ, ಗುಂಪು-ಗುಂಪುಗಳ ಹೃದಯವಿಕಾಸವು ಸಮಾಜವನ್ನು ನಿರ್ಮಿಸುವುದೂ ಸ್ವಾಭಾವಿಕನಿಯಮವಾಗಿದೆ. ಇನ್ನು ಈ ಹೊಸಕಾಲದ ರಾಜಕೀಯ ವಾದಿಗಳ ಮತ್ತು ಸಮಾಜಸುಧಾರಣಾವಾದಿಗಳ ಪ್ರಚಾರ ಮತ್ತು ಆಚಾರಗಳಲ್ಲಿ ಸಮತೆ-ಏಕವಾಕ್ಯತೆಗಳಿಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತಲಿದೆ. ಪ್ರಚಾರ ಮಾಡುತ್ತಲಿರುವ ನೀತಿ-ತತ್ತ್ವಗಳನ್ನು ವೈಯಕ್ತಿಕ ಜೀವನದಲ್ಲಿಯೂ ಅನುಷ್ಠಾನಕ್ಕೆ ತರಬಲ್ಲವರ ಅಭಾವವೇ ಎಲ್ಲೆಲ್ಲಿಯೂ ಕಾಣುತ್ತಿದೆ ಅದದ-

(೪೦೮ನೆಯ ಪುಟ ನೋಡಿರಿ)

ನಾಡನುಡಿ

●

ಶ್ರೀಮಾನ್ ದೀಕ್ಷಿತ ನರಸಿಂಗರಾಯರು

ದೀರ್ಘಾಯುಷಿಗಳಾಗಲಿ !

ಧಾರವಾಡ ಜಿಲ್ಲೆಯಲ್ಲಿ — ಅದೇಕೆ — ಉತ್ತರಕರ್ನಾಟಕದಲ್ಲಿ, ಶ್ರೀಮಾನ್ ದೀಕ್ಷಿತ ನರಸಿಂಗರಾಯರ ಹೆಸರು ಸರ್ವಶ್ರುತವಾದುದು. ವ್ಯವಸಾಯದಲ್ಲಿ ಹದಿನಾರಾಣೆಯ ಯಶಸ್ಸನ್ನು ಗಳಿಸಿದ ಸುಪ್ರಸಿದ್ಧ ವಕೀಲರೇನೋ ಅವರು ಸರಿಯೆ ಸರಿ! ಶ್ರೀಮಾನ್ ನರಸಿಂಗರಾಯರು ಬರಿ ವಕೀಲರಾಗಿಯೆ ಉಳಿದುಬಿಟ್ಟಿದ್ದರೆ, ನಾಡಿಗರ ಹೃದಯ-ಮನಗಳಲ್ಲಿ ಮನೆಮಾಡುತ್ತಿದ್ದರೊ ಇಲ್ಲವೊ! ನಮ್ಮ ನಾಡಿನಲ್ಲಿ ವಕೀಲಿಯ ವ್ಯವಸಾಯದಲ್ಲಿ ಇವರಷ್ಟೇ ಯಶಸ್ಸನ್ನು ಗಳಿಸಿದವರು ಇನ್ನೂ ಎಷ್ಟೋ ಜನರು ಇರಬಹುದು; ಆದರೆ ಅವರ ಹೆಸರು ಅವರ ಪಕ್ಷಗಾರರಿಗಷ್ಟೆ ಗೊತ್ತು; ಕೋರ್ಟು-ಕಚೇರಿಗಳ ಆವರಣದೊಳಗಿರುವ ಜನರಿಗಷ್ಟು ಗೊತ್ತು. ಶ್ರೀಮಾನ್ ದೀಕ್ಷಿತ ನರಸಿಂಗರಾಯರ ಹೆಸರು ಕರ್ನಾಟಕದಲ್ಲಿಯ ಸಾಂಸ್ಕೃತಿಕ ಪ್ರಪಂಚಕ್ಕೆಲ್ಲ ಗೊತ್ತಾದುದು. ಅವರಲ್ಲಿ ಜಾಗೃತವಾಗಿ ಕಾರ್ಯ ಮಾಡುತ್ತಿರುವ ಸಂಸ್ಕೃತಿ ವಿಷಯಕವಾದ ಅಭಿಮಾನವೆ ಇದಕ್ಕೆ ಮುಖ್ಯ ಕಾರಣವಾಗಿದೆ.

ಒಂದು ಕಾಲದಲ್ಲಿ ನಮ್ಮ ನಾಡಿನಲ್ಲಿ ವ್ಯಕ್ತಿಮಹತ್ತ್ವದ ಅಳತೆಗೋಲು ರಾಜಕೀಯ ಚಟುವಟಿಕೆಯ ಮೇಲೆ ಅವಲಂಬಿಸಿ ನಿಂತಿತ್ತು. ಸ್ವಾತಂತ್ರ್ಯದ ಹೋರಾಟದಲ್ಲಿ ಭಾಗವಹಿಸಿ ಸೆರೆಮನೆಯನ್ನು ಕಂಡು ಬಂದ ಎಂತಹ ಸಾಮಾನ್ಯ ವ್ಯಕ್ತಿಯೂ ಆಗ ಮಹತ್ತ್ವದ ಸ್ಥಾನವನ್ನು ಪಡೆಯುತ್ತಿತ್ತು. ಶ್ರೀಮಾನ್ ದೀಕ್ಷಿತ ನರಸಿಂಗರಾಯರನ್ನು ಆ ಅಳತೆಗೋಲಿನಿಂದ ಅಳೆಯ ಹೊರಡುವವರಿಗೆ ಅವರು ದೊಡ್ಡವರಾಗಿ ಕಾಣುವರೋ ಇಲ್ಲವೋ ಸಂದೇಹ! ಆದರೆ ಸ್ವಾತಂತ್ರ್ಯ ಹೋರಾಟಕ್ಕಾಗಿ ಶ್ರೀ. ನರಸಿಂಗರಾಯರು ಸಲ್ಲಿಸಿದ ಆಂತರಿಕ ಸಹಾಯ-ಸಹಕಾರಗಳ ವಿಷಯವು ಗೊತ್ತಿದ್ದವರು ಅವರ ದೇಶಭಕ್ತಿಯ ದೊಡ್ಡಿತೆಯನ್ನೂ ಒಪ್ಪಿಕೊಳ್ಳದೆ ಇರಲಾರರು.

ಹಿಂದುಳಿದ ಕನ್ನಡನಾಡಿನಲ್ಲಿ ರಾಜಕೀಯ ಚಟುವಟಿಕೆಗಿಂತಲೂ ಹೆಚ್ಚಾಗಿ ಸಾಮಾಜಿಕ-ಸಾಂಸ್ಕೃತಿಕ ಚಟುವಟಿಕೆಗಳ ಅಗತ್ಯವಿದ್ದಿತು; ಈಗಲೂ ಇದೆ. ಈ ಬಗೆಯ ಯಾವುದೇ ಚಟುವಟಿಕೆಯಲ್ಲಿಯೂ ಶ್ರೀ. ನರಸಿಂಗರಾಯರು ಒಂದಿಲ್ಲೊಂದು ಬಗೆಯಿಂದ ಭಾಗವಹಿಸಿರುವರು; ವಹಿಸುತ್ತಿರುವರು. ಅನುಕೂಲ್ಯವಿದ್ದುದರಿಂದ, ಈ ಬಗೆಯ ಚಟುವಟಿಕೆಗಳಿಗೆ ತನು-ಮನೋಧನಗಳಿಂದಲೂ ಅವರು ನೆರವನ್ನು ಸಲ್ಲಿಸುತ್ತಿರುವರು. ಆದುದರಿಂದಲೇ ಕನ್ನಡನಾಡಿನ ಯಾವುದೇ ಸಾಂಸ್ಕೃತಿಕ ಸಂಸ್ಥೆಯಲ್ಲಿಯೂ ಧಾರವಾಡದ ಯಾವುದೇ ಸಾಮಾಜಿಕ ಸಂಸ್ಥೆಯಲ್ಲಿಯೂ ಶ್ರೀಮಾನ್ ನರಸಿಂಗರಾಯರ ಅಂಗವು ಒಂದಿಲ್ಲೊಂದು ಬಗೆಯಿಂದ ಇದ್ದೇ ಇರುವುದನ್ನು ನಾವು ನೋಡಬಹುದು.

ಸಂಸ್ಥೆಗಳಂತೆಯೆ ಅನೇಕ ವ್ಯಕ್ತಿಗಳ ಒಡನೆಯೂ ಇವರು ಸ್ನೇಹ-ಸಹಕಾರಗಳ ಸಂಬಂಧವನ್ನು ಇರಿಸಿಕೊಳ್ಳಲು ಹವಣಿಸುವವರು. ನಾಡಿನ ಅಭ್ಯುದಯಕ್ಕೆ ಅವಶ್ಯಕವೆನಿಸುವ ಯಾವುದೇ ಒಂದು ಗುಣವು ಒಬ್ಬನಲ್ಲಿ ಕಂಡರೆ ಸಾಕು; ಶ್ರೀ ದೀಕ್ಷಿತರು ಅವನನ್ನು ಬಳಿಗೆ ಬರಮಾಡಿಕೊಳ್ಳುವರು. ಅವನ ಯೋಗ-ಕ್ಷೇಮವನ್ನು ವಿಚಾರಿಸುವರು. ಸಾಧ್ಯವಿದ್ದ ಸಹಾಯ-ಸಹಕಾರಗಳನ್ನೂ ಕೊಡುವರು. ಇವರಲ್ಲಿರುವ ಸಾಹಿತ್ಯ-ಸಂಗೀತ-ಕಲೆಗಳ ಪ್ರೀತಿಯು ಬಹಳ ಜನರಲ್ಲಿ ಕಂಡುಬಾರದಂತಹದು. ಅನುದಿನವಲೇ ಪಕ್ಷಗಾರರಿಗೆ ಕೊಡುವುದಕ್ಕಿಂತ ಹೆಚ್ಚಿನ ವೇಳೆಯನ್ನು ಕನ್ನಡ ಸಾಹಿತ್ಯಿಕರು, ಸಂಗೀತಜ್ಞರು, ಕಲಾಭಿಜ್ಞರು ಇವರ ಒಡನಾಟಕ್ಕೆ ಕೊಡುವರು.

ಕನ್ನಡನಾಡು ನುಡಿಗಳೆಂದರೆ ದೀಕ್ಷಿತರವರಲ್ಲಿ ತುಂಬ ಶ್ರದ್ಧೆ-ವಿಶ್ವಾಸಗಳು. ಕನ್ನಡಕ್ಕೆ ಸಂಬಂಧಿಸಿದ ಯಾವ ಸಣ್ಣ-ಪುಟ್ಟ ಚಟುವಟಿಕೆಗಳನ್ನೂ ಇವರು ಆಸ್ಥೆಯಿಂದ ನೋಡುವರು; ಸಾಧ್ಯವಿರುವ ಸಹಾಯ-ಸಹಕಾರಗಳನ್ನು ಸಲ್ಲಿಸುವರು. ಆರ್ಥಿಕ ದುರವಸ್ಥೆಗೆ ಗುರಿಯಾಗಿ ನಿಷ್ಕ್ರಿಯವಾಗಿ ಬಿದ್ದುಕೊಂಡಿದ್ದ ಧಾರವಾಡದ ವಿದ್ಯಾವರ್ಧಕ ಸಂಘದ ಸುವರ್ಣಮಹೋತ್ಸವವನ್ನು ಮಾಡಿ, ಅದರ ಋಣಭಾರವನ್ನು ಕಡಿಮೆಮಾಡಿದ ಕಾರ್ಯದಲ್ಲಿ ಹೆಚ್ಚಿನ ಹೊಣೆ ಹೊತ್ತವರೆಂದರೆ ಶ್ರೀಮಾನ್ ದೀಕ್ಷಿತ ವಕೀಲರು. ಕನ್ನಡ ವಿಶ್ವವಿದ್ಯಾನಿಲಯಸಂಸ್ಥೆಯಲ್ಲಿಯೂ, ಕರ್ನಾಟಕ ಪ್ರಾದೇಶಿಕ ವಾಚನಾಲಯದ ಚಟುವಟಿಕೆಯಲ್ಲಿಯೂ ಇವರು ಮಾಡಿರುವ ಕಾರ್ಯವು ಗಣನೀಯವಾದಂತಹದು.

ಈ ಬಗೆಯ ತಮ್ಮ ವಿವಿಧ ಸಾರ್ವಜನಿಕ ಕಾರ್ಯಗಳಿಂದಲೇ ಶ್ರೀಮಾನ್ ದೀಕ್ಷಿತರು ಕನ್ನಡಿಗರ ಹೃದಯ-ಮನಗಳಲ್ಲಿ ಮನೆಮಾಡಿ ನಿಂತರು. ಅವರಿಗೀಗ ವಯಸ್ಸಿನ ೬೦ ವರ್ಷಗಳು ಪೂರ್ತಿಯಾದುದು ಅವರನ್ನು ಸ್ನೇಹ-ಶ್ರದ್ಧೆಗಳಿಂದ ಕಾಣುವ ಜನರಿಗೆಲ್ಲ ತುಂಬ ಸಂತೋಷವನ್ನು ಉಂಟುಮಾಡಿದೆ. ಶ್ರೀಯುತರು ಪ್ರಾರಂಭದಿಂದಲೂ ಜಯಂತಿಯ ಹಿತಚಿಂತಕರಾದುದರಿಂದ, ಎಲ್ಲರಂತೆ ಜಯಂತಿಯ ಸಂಚಾಲಕ ವರ್ಗಕ್ಕೂ ತುಂಬ ಸಂತೋಷವಾಗಿದೆ. ದೈವಾನುಗ್ರಹ, ಸ್ವಂತದ ಕರ್ತೃತ್ವ ಶಕ್ತಿ ಇವುಗಳ ಮೂಲಕ ಶ್ರೀಮಾನ್ ದೀಕ್ಷಿತರಿಗೆ ಈ ಅರುವತ್ತು ವರ್ಷದುದ್ದಕ್ಕೂ ಶಾಂತಿ-ಸ್ವಾಸ್ಥ್ಯಗಳ ಸುಖಜೀವನವೇ ದೊರೆತಿದೆ. ಇಂತಹ ಸುಖಜೀವನವನ್ನೇ ಅನುಭವಿಸುತ್ತ ಶ್ರೀಯುತರು ಇನ್ನೂ ಹಲವು ಕಾಲ ಬದುಕಿಬಾಳಲೆಂದೂ ಅವರ ಸ್ನೇಹ ಸಹಕಾರಗಳ ಲಾಭವು ಹಲವು ಜನ ಕನ್ನಡಿಗರಿಗೆ ದೊರೆತು ಕನ್ನಡನಾಡು ಅಭ್ಯುದಯದ ದಾರಿಯಲ್ಲಿ ನಡೆಯಲೆಂದೂ ಆ ಪರಾತ್ಪರ ಶಕ್ತಿಯ ಬಳಿಯಲ್ಲಿ ನನ್ನ ಬೇಡಿಕೆಯಿದೆ.

ನಾಟಕಕಲೆಗೆ ಸರಕಾರದ ಸಹಾಯ :

ಭಾರತದ ಕೇಂದ್ರ ಸರಕಾರವೂ ರಾಜ್ಯಸರಕಾರಗಳೂ ನಾಟಕಕಲೆಗೆ ಸಹಾಯವನ್ನಿತ್ತು, ಅದನ್ನು ಪುನರುಜ್ಜೀವನಗೊಳಿಸಬೇಕೆಂದು ಸಂಕಲ್ಪಿಸಿರುವುದು ನಾಟಕಕಾರರಿಗೂ ನಟವರ್ಗಕ್ಕೂ ಸಮಾಧಾನವನ್ನುಂಟುಮಾಡುವಂತಹ ಸಂಗತಿಯಾಗಿದೆ. ಆ ಸಂಕಲ್ಪದ ಫಲವಾಗಿ

ನಮ್ಮ ಉತ್ತರಕರ್ನಾಟಕದಲ್ಲಿಯೆ ಎರಡು ದೊಡ್ಡ ನಾಟ್ಯೋತ್ಸವಗಳು ಜರುಗಿದುವು. ಪ್ರಾಥಮಿಕ-ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳ ನಾಟ್ಯೋತ್ಸವಗಳೂ ನಡೆದುಹೋದುವು.

ಉತ್ತರಕರ್ನಾಟಕದಲ್ಲಿ ನಡೆದ ಎರಡೂ ನಾಟ್ಯೋತ್ಸವಗಳಲ್ಲಿ ಪ್ರದರ್ಶಿತವಾದ ನಾಟಕಗಳನ್ನು ನೋಡಿದವರಿಗೆ, ನಾಟಕಕಲೆಯಲ್ಲಿ ನಾವಿನ್ನೂ ಎಷ್ಟು ಹಿಂದೆ ಇದ್ದೇವೆಂಬುದು ಚೆನ್ನಾಗಿ ಗೊತ್ತಾಯಿತು. ಒಳ್ಳೆಯ ನಾಟಕವೆಂದು ಇಲ್ಲಿಂದ ದಿಲ್ಲಿಗೆ ಕಳುಹಿದ ನಾಟಕವು ಅಲ್ಲಿ ಪ್ರದರ್ಶಿತವಾದ ಮಿಕ್ಕ ಭಾಷೆಯ ನಾಟಕಗಳೊಂದಿಗೆ ನಿಲ್ಲುವಂತಹ ಯಾವ ಗುಣವಿಂದಲೂ ಕೂಡಿರಲಿಲ್ಲ. ಈಗ ಮುಂಬಯಿಗೆ ಆರಿಸಿ ಕಳುಹಿದ ನಾಟಕಗಳೂ ಮೇಲಿನ ಸ್ಥಾನವನ್ನು ಪಡೆಯದೆ ಇರುವುದು ನಮ್ಮ ನಾಟಕಕಲೆಯ ಪರಾಗತಿಯ ಲಕ್ಷಣವೇ ಆಗಿದೆ. ಕನ್ನಡ ನಾಟಕಗಳಿಗೆ ಬಹುಮಾನಗಳನ್ನು ಕಲ್ಪಿಸಲೇ ಬೇಕಾಗಿದ್ದುದರಿಂದ, ಈಗ ದೊರೆತ ಮೂರು ಬಹುಮಾನಗಳು ಯಾರುಯಾರಿಗೋ ದೊರೆತಿವೆಯೆಂದು ಹೇಳಬಹುದು. ಒಂದುವೇಳೆ ದಿಲ್ಲಿಯಂತೆ ಮುಂಬಯಿಯಲ್ಲಿಯೂ ಮರಾಠಿ, ಗುಜರಾಥಿ, ಹಿಂದೀ ನಾಟಕಗಳೊಂದಿಗೆ ಸ್ಪರ್ಧೆಗೆ ನಿಲ್ಲುವ ಸಂದರ್ಭವಿದ್ದರೆ, ಈಗ ದೊರೆತ ಬಹುಮಾನಗಳು ಕನ್ನಡಿಗರಿಗೆ ದೊರೆಯುತ್ತಿದ್ದುವೋ ಇಲ್ಲವೋ ಎಂಬುದು ಸಂದೇಹದ ವಿಷಯ.

ಇನ್ನು ಮುಂದೆ ಪ್ರತಿವರ್ಷವೂ ಈ ಬಗೆಯ ನಾಟ್ಯೋತ್ಸವ, ನಾಟಕಸ್ಪರ್ಧೆಗಳು ನಡೆಯಲಿರುವುವಾದುದರಿಂದ, ಕನ್ನಡ ನಾಟಕಕಾರರೂ ಕನ್ನಡ ನಟರೂ ಇದರ ಬಗೆಗೆ ಗಂಭೀರರೀತಿಯಿಂದ ವಿಚಾರ ಮಾಡಿ ಮುನ್ನಡಿಯನ್ನು ಇಡಬೇಕಾಗಿದೆ.

ಮೊದಲನೆಯದಾಗಿ ನಮ್ಮ ನಾಡಿನಲ್ಲಿ, ರಂಗಭೂಮಿಯ ಸರ್ವಂಕಷ ದೃಷ್ಟಿಯನ್ನಿರಿಸಿಕೊಂಡು ಬರೆದ ಒಳ್ಳೆಯ ನಾಟಕಗಳ ಕೊರತೆಯಿದೆ. ಬಹಳ ಜನರು ತೀರ ಹಳೆಯ ಕಾಲದ ಕಂಪನಿ ನಾಟಕಗಳ ತಂತ್ರವನ್ನಿರಿಸಿಕೊಂಡು ನಾಟಕಗಳನ್ನು ಬರೆದಿರುವರಾದರೆ, ಒಂದು ಕೈಬೆರಳಿನ ಎಣಿಕೆಗೂ ಸಾಲದಷ್ಟು ಜನರು, ತೀರ ಹೊಸ ತಂತ್ರಗಳನ್ನು ಇರಿಸಿಕೊಂಡು ಬರೆದಿದ್ದಾರೆ. ಎರಡೂ ಬಗೆಯ ನಾಟಕಗಳಲ್ಲಿಯೂ ಕನ್ನಡಿಗರ ಜೀವನದ ನಿಜವಾದ ಚಿತ್ರವು ನೋಡಲು ದೊರೆಯುವುದೇ ಇಲ್ಲ. ನೆರೆನಾಡಾದ ಮಹಾರಾಷ್ಟ್ರದಲ್ಲಿ ನಾಟಕಕಾರರು ತಮ್ಮ ರಚನಾಕಾರ್ಯದಲ್ಲಿ ಯಶಸ್ಸನ್ನು ಪಡೆದಿರುವುದಕ್ಕೆ ಮುಖ್ಯ ಕಾರಣವೆಂದರೆ, ಅವರು ತಮ್ಮ ನಾಡಿನ ಸಂಸ್ಕೃತಿ-ಇತಿಹಾಸ-ಸಾಮಾಜಿಕಜೀವನಗಳನ್ನು ಯಥಾವತ್ತಾಗಿ ಚಿತ್ರಿಸಿ ತೋರಿಸುತ್ತಿರುವುದೇ ಆಗಿದೆ. ಇಂತಹ ನಾಟಕಗಳು ನಟವರ್ಗ-ಪ್ರೇಕ್ಷಕವರ್ಗಗಳ ಆತ್ಮೀಯತೆಗೆ ಪಾತ್ರವಾಗುತ್ತವೆ. ಅಭಿಮಾನ-ಆತ್ಮೀಯತೆಗಳನ್ನು ಹುಟ್ಟಿಸಬಲ್ಲ ನಾಟಕವು, ನಟನಲ್ಲಿ ಇಲ್ಲದ ಆವೇಶವನ್ನೂ ನೈಪುಣ್ಯವನ್ನೂ ತುಂಬಬಲ್ಲುವು. ಆದುದರಿಂದಲೇ ನಾಟಕದ ಪಾತ್ರದೊಡನೆ ನಟನು ಸಮರಸಗೊಂಡು ಅಭಿನಯಿಸಿ, ತಾನು ಹೆಸರು ಪಡೆವನಲ್ಲದೆ ನಾಟಕಕಾರನ ಹೆಸರನ್ನೂ ಮೆರೆಯಿಸುವನು.

ಪೌರಾಣಿಕ ಸಂಸ್ಕೃತಿಯ ಮಾಹಾತ್ಮ್ಯವನ್ನು ಕಂಡರಿಯದವರು ನಮ್ಮಲ್ಲಿ ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಇತಿಹಾಸದ ಪರಿಸ್ಥಿತಿ ಸಂಸ್ಕೃತಿಗಳ ಮುಖದರ್ಶನವಿಲ್ಲದವರೂ ಐತಿಹಾಸಿಕ ನಾಟಕಗಳನ್ನು ಬರೆಯುವ ಸಾಹಸ ಮಾಡಿದ್ದಾರೆ. ಸಾಮಾಜಿಕ ನಾಟಕಗಳ ಹಣೆಬರಹವನ್ನಂತೂ ಹೇಳಲಿಕ್ಕೇ ಬೇಡ. ತನಗೆ ಗೊತ್ತಿರುವ ಜನ, ಅವರ ನಡೆನುಡಿ ಪರಿಸ್ಥಿತಿಗಳನ್ನು ಬಿಟ್ಟು, ಗೊತ್ತಿರದ ಸಮಾಜವನ್ನು ಚಿತ್ರಿಸಲು ಹೋಗಿ ಭಾವಾಭಾಸಗಳನ್ನು ಹುಟ್ಟಿಸಿದ ಸಾಮಾಜಿಕ ನಾಟಕಕಾರರ ಸಂಖ್ಯೆಯೇ ಹೆಚ್ಚಾಗಿದೆ. ಇಂತಹ ಅಸ್ವಾಭಾವಿಕ ಜೀವನದಲ್ಲಿ ನಮ್ಮ ನಟವರ್ಗ ಸಮರಸರಾಗುವ ಬಗೆಯು ಹೇಗೆ? ಎಂದಮೇಲೆ ಅವರ ಅಭಿನಯದಲ್ಲಿ ಚಾತುರ್ಯ-ಪ್ರವೀಣತೆಗಳು ದೊರೆಯಬೇಕು ಹೇಗೆ? ಆದುದರಿಂದಲೇ ನಮ್ಮ ನಟರ ಹೆಸರು ಬೆಳಕಿಗೆ ಬರಲೊಲ್ಲದು. ನಾಟಕಕಾರರ ಹೆಸರೂ ಬೆಳಕಿಗೆ ಬರಲೊಲ್ಲದು.

ನಮ್ಮ ಇಂದಿನ ನಾಟಕದಲ್ಲಿ ನಮ್ಮ ಜೀವನವು ಚಿತ್ರಿತವಾಗಬೇಕಾಗಿದೆ. ನಮ್ಮ ಜೀವನದ ಸಮಸ್ಯೆಗಳ ವಿಶ್ಲೇಷಣವಿಚಾರಗಳು ಬೇಕಾಗಿವೆ. ಆ ಸಮಸ್ಯೆಗಳನ್ನು ಬಿಡಿಸಿ ತೋರಿಸಬಲ್ಲ ಸಹಜವಾದ ಹಂಚಿಕೆಗಳ ವಿಚಾರಚರ್ಚೆ ಬೇಕಾಗಿದೆ. ನಮ್ಮ ಅಭಿಮಾನವನ್ನು ಅರಳಿಸುವಂತಹ ನಮ್ಮ ಸಂಸ್ಕೃತಿಯ ಪ್ರಭಾವ-ಪ್ರಕಾಶಗಳ ಪ್ರದರ್ಶನವಲ್ಲಿ ಬೇಕಾಗಿವೆ. ಇಂತಹ ನಾಟಕಗಳು ರಚನೆಗೊಂಡು ಮುಂದೆ ಬಂದರೆ, ನಮ್ಮ ನಟವರ್ಗ ಶ್ರದ್ಧೆ, ಪ್ರೀತಿ, ಆತ್ಮೀಯತೆಗಳಿಂದ ಆಡಿ ತೋರಿಸಬಲ್ಲದು. ಅದರಿಂದ ನಮ್ಮ ನಟವರ್ಗ ಯಾವ ಮೇಲಾಟದಲ್ಲಿಯೂ ನೆಲವನ್ನು ಪಡೆಯಬಹುದಲ್ಲದೆ, ಕನ್ನಡ ನಾಟಕಕಾರರ ಕೀರ್ತಿಯೂ ನಾಡಿನಲ್ಲಿ ಹರಡುವಂತೆ ಅವರು ಮಾಡಬಹುದು.

(೪೦೬ನೆಯ ಪುಟದಿಂದ ಮುಂದುವರಿದುದು)

ರಿಂದಲೇ ಸಮಾಜಕ್ಕೆ ನೇತೃಗಳಾಗಬೇಕೆಂದು ಹವಣಿಸುತ್ತಿರುವ ಸಾಹಿತ್ಯಿಕರಲ್ಲಿ ಒಂದು ಬಿನ್ನಹ. ನುಡಿಯಂತೆ ನಡೆಯಬೇಕು, ಪ್ರಚಾರಮಾಡುವ ವಿಚಾರದಂತೆಯೆ ಆಚಾರ ಬೇಕು. ಹೊಸಕಾಲದ ಸಾಹಿತ್ಯಿಕನೂ ಬದನೆಕಾಯಿ ಪುರಾಣವನ್ನೇ ಹೇಳತೊಡಗಿದರೆ, ಅದರ ಪ್ರಭಾವ ಜನತೆಯ ಮನಸ್ಸು-ಹೃದಯಗಳ ಮೇಲೆ ಹೇಗೆ ಬಿದ್ದೀತು?

ಜಯಂತಿಯ ವಿಲಂಬಕ್ಕಾಗಿ ವಿಷಾದ.

ಒಂದೇ ವ್ಯಕ್ತಿಯ ಮೇಲೆ ಅವಲಂಬಿಸಿ ನಿಂತ ಕಾರ್ಯಗಳ ಗತಿಯೇ ಹೀಗೆ. ಸಂಪಾದಕರ ಕೌಟುಂಬಿಕ ಅಡಚಣೆಗಳ ಮೂಲಕ, ಜಯಂತಿಯ ಮಾರ್ಚ್-ಏಪ್ರಿಲ್ ಸಂಚಿಕೆಗಳು ಸಕಾಲದಲ್ಲಿ ಹೊರಪಡದೆ ೮-೧೦ ದಿನ ತಡವಾಗಿ ಹೊರಟುವು. ಈ ಅನಿವಾರ್ಯ ಅಪರಾಧವನ್ನು ಜಯಂತಿಯ ವಾಚಕವರ್ಗ ಸಹಾನುಭೂತಿಯಿಂದ ನೋಡಿ ಕ್ಷಮಿಸಬೇಕು. ಇನ್ನು ಮುಂದೆ ಹೀಗೆ ವಿಲಂಬವಾಗದಂತೆ ಏರ್ಪಾಡು ಮಾಡಲಾಗುವುದು.

—ಸಂಪಾದಕರು

ಹಟಮಾರಿ

ಶ್ರೀ. ಬಳ್ಕೂರು ಸುಬ್ರಾಯ ಅಡಿಗ, ಗಂಗೊಳ್ಳಿ

(ಒಂದು ಸ್ವತಂತ್ರಕಥೆ)

ಮಕ್ಕಳ ಮನಸ್ಸನ್ನು ರೂಪಿಸುವವರು ತಂದೆ-ತಾಯಿಗಳು, ಶಿಕ್ಷಕರು. ತಿಳಿವಳಿಕೆಯಿಲ್ಲದ ತಂದೆ-ತಾಯಿಗಳ ಮಗನು ಮನುಷ್ಯನಂತೆ ಬೆಳೆಯಬೇಕಾದರೆ, ಆತನಿಗೊಂದು ಬೇರೆ ಬಗೆಯ ವಾತಾವರಣವೇ ಬೇಕಾಗುತ್ತದೆ. ಪ್ರೊಫೆಸರರ ಸಂಬಂಧ ಸಕಾಲದಲ್ಲಿ ಬಾರದೆ ಹೋಗಿದ್ದರೆ, ಕೇಶವನ ಬಾಳು ಹಾಳಾಗದೆ ಇರುತ್ತಿರಲಿಲ್ಲ.

ಸಂಜೆಯ ವೇಳೆ. ಕೇಶವ ಮನೆಯಂಗಣದಲ್ಲಿ ನೆರೆಮನೆಯ ಗಣಿಯೊಡನೆ ಮಣ್ಣಾಟದಲ್ಲಿ ಮಗ್ನನಾಗಿದ್ದ. ತೊಟ್ಟಿದ್ದ ಬಟ್ಟೆಯೆಲ್ಲ ಮಣ್ಣಿನಿಂದ ಅಂದಗೆಟ್ಟಿತ್ತು. ಅತ್ತ ಪರಿವೆಯೇ ಇಲ್ಲದೆ ಆ ಪುಟ್ಟ ಬಾಲರಿಬ್ಬರೂ ತಮ್ಮದೇ ಆದ ವಿಚಿತ್ರಪ್ರಪಂಚದಲ್ಲಿ ವಿಹರಿಸುತ್ತಿದ್ದರು. ಬೀಸುತ್ತಿದ್ದ ತಂಗಾಳಿಗೆ ತಲೆಗೂದಲು ಕಣ್ಣಿಗ ಅಡ್ಡ ಬರಲು, ಆ ಮಣ್ಣು ತುಂಬಿದ ಕೈಯಿಂದಲೇ ಅದನ್ನು ಹಿಂದೆಸರಿಸುತ್ತಿದ್ದರು.

ಅವರೊಂದು ಮಣ್ಣಿನ ಮನೆ ಕಟ್ಟುವುದರಲ್ಲಿ ತಲ್ಲೀನರಾಗಿದ್ದರು. ಮಣ್ಣಿನ ರಾಶಿಗೆ ನೀರು ಸುರಿದು, ಹಸಿಮುದ್ದೆಯನ್ನು ಸಿದ್ಧಗೊಳಿಸಿದರು. ಸಣ್ಣ ಸಣ್ಣ ಕಡ್ಡಿಗಳೇ ಕಂಭಗಳು, ತರಗೆಲೆಗಳೇ ಹಂಚುಗಳು, ಕಲ್ಲಿನ ಮನೆ ಕಟ್ಟುವಷ್ಟು ದರಿದ್ರರೇ ಅವರು? ಮಣ್ಣಿನ ಗೋಡೆ ಕಟ್ಟಿದರು, ಕಡ್ಡಿಯ ಕಂಭ ಊರಿದರು, ಕಡ್ಡಿಗಳಿಂದಲೇ ಮಾಡು ಮಾಡಿದರು. ಎಲೆಯ ಹಂಚು ಹೊದಿಸಿದರು. ಆದರೆ ಬೀಸುವ ಗಾಳಿಗೆ ಅವರ ಹಂಚುಗಳೆಲ್ಲ ಹಾರಿಹೋದುವು, ಕಂಭಗಳೆಲ್ಲ ಓರೆಯಾದುವು, ಮಾಡು ನೆಲಕ್ಕುರುಳಿತು. ಧೀರರು ಸಾಹಸ ಬಿಡಲಿಲ್ಲ. ಪುನಃ ತಮ್ಮ ಕಾರ್ಯವನ್ನು ಮುಂದುವರಿಸಿದರು. ಕಂಭಗಳನ್ನು ದೃಢಗೊಳಿಸಿದರು. ಎಲೆಗಳು ಹಾರಿಹೋಗದಂತೆ ಮಾಡಿನ ಮೇಲೆ ಕಿರುಕೋಲುಗಳನ್ನಿಟ್ಟರು. ಅಂತೂ ಗಾಳಿಯ ಕಿರುಕುಳಕ್ಕೆ ಕಂಗೆಡದೆ, ಗಳಿಗೆಯೊಳಗೆ ಈ ಮಾಯಾಮಹಲನ್ನು ತಯಾರಿಸಿಯೇ ಬಿಟ್ಟರು.

ಅರಮನೆಯಾದರೆ ಸಾಕೆ? ಅದರೊಳಗೆ ಬಾಳುವ ಜನ ಬೇಡವೆ? ಅರಮನೆಯಿದ್ದರೆ ಮಕ್ಕಳಿಗೆ ಗೆಲವೆಲ್ಲಿ? ಅದರೊಳಗೋಡಾಡುವ ಮಂದಿ ಬೇಕು. ದನ-ಕರುಗಳಿಂದ ತುಂಬಿದ ಕೊಟ್ಟಿಗೆ ಇರಬೇಕು. ಆಗಲೇ ಅದು ನಿಜವಾದ ಮನೆ. ಕೇಶವ ಒಂದು ಕ್ಷಣಕಾಲ ಯೋಚಿಸಿದ; ಮತ್ತೆ ಮರುಮಾತಾಡದೆ ಮನೆಗೋಡಿದ. ಅಡುಗೆಮನೆಯಲ್ಲಿ ತಾಯಿ ರಾತ್ರಿಯಡುಗೆಯ ಸಿದ್ಧತೆಯಲ್ಲಿದ್ದಳು. ಮಗ ಸದ್ದಿಲ್ಲದೆ ತನ್ನ ಕಿರುಕೋಣೆಗೆ ನುಗ್ಗಿ ಆಟದ ಸಾಮಾನುಗಳನ್ನು ಹೊತ್ತು ತಂದ. ದನ, ಕುದುರೆ, ಆಡು, ಪುಟ್ಟಪುಟ್ಟ ಮಕ್ಕಳು, ದೊಡ್ಡ ದೊಡ್ಡ ರಾಜ-ಮಹಾರಾಜರು, ವೀರ ಸೇನಾಪತಿ ಎಲ್ಲರೂ ಇದ್ದರು. ಅವನ ಕೈಗೆ ಸಿಕ್ಕಿ ಆ ವಸ್ತುಗಳೆಲ್ಲ ವಿಚಿತ್ರರೂಪ ತಾಳಿದ್ದುವು. ಮಂಗನಬಾಲ ಮಾಯವಾಗಿತ್ತು; ಕುದುರೆಯ ಕಾಲು ಕಡಿದಿತ್ತು; ಸೇನಾಪತಿಯ ಮೂಗು ಮುರಿದಿತ್ತು. ಬಂದ ಹೊಸದರಲ್ಲಿ ಅವನ್ನು ಬಹು ಜಾಗ್ರತೆಯಿಂದ ಇಟ್ಟುಕೊಂಡಿದ್ದ; ಈಗ ಹಳೆಯವಾದುದರಿಂದ ಅವುಗಳ ಬಗ್ಗೆ ಅಲಕ್ಷ್ಯ; ಆದರೂ ಹೊಸದಾಗಿ ಕಟ್ಟಿದ ಮನೆಯನ್ನು ತುಂಬಿಸಲು ಇವುಗಳಿಲ್ಲದೆ ಹೇಗೆ? ಆ ಉತ್ಸಾಹದಿಂದ ಅವನ್ನೆಲ್ಲ ಹೊತ್ತು ಕಳ್ಳಹೆಜ್ಜೆಯಿಂದ ಓಡಿ ಬರುತ್ತಿದ್ದ. ಅವನ ದುರದೃಷ್ಟ; ಒಂದು ಬೊಂಬೆ ಕೆಳಗೆ ಬೀಳಬೇಕೆ? ತಾಯಿ ಮುಖ ತಿರುಗಿಸಿ ನೋಡಿದಳು; ಆಟದ ಸಂಸಾರವನ್ನೇ ಹೊತ್ತು ಸಾಗಿದ್ದಾನೆ ಪುತ್ರರತ್ನ; ಅವಳೂ ಅವನರಿಗರಿಯದಂತೆ ಹಿಂದೆ ಹಿಂದೆ ಬಂದಳು. ಬಾಗಿಲ ಮರೆಯಿಂದ ಅಂಗಳದ ದೃಶ್ಯವನ್ನು ವೀಕ್ಷಿಸಿದಳು.

ಮಕ್ಕಳಿಬ್ಬರೂ ನಿಶ್ಚಿಂತರಾಗಿ ಆ ಮಣ್ಣು-ಮರಗಳ ಪರಿವಾರವನ್ನು ತಕ್ಕ ಸ್ಥಾನದಲ್ಲಿ ಕುಳ್ಳಿರಿಸಿದರು. ರಾಜನಿಗೆ ಸಿಂಹಾಸನ ಬೇಡವೆ? ಆದರೆ ಅದನ್ನೆಲ್ಲಿಂದ ತರಬೇಕು? ಅದರ ಬದಲು ಶಿಲಾಸನವಾಯಿತು. ಸೇನಾಪತಿಯನ್ನು ರಾಜನೆದುರಿಗೆ ನಿಲ್ಲಿಸಲಾಯಿತು. ಪ್ರಾಣಿವರ್ಗವನ್ನೆಲ್ಲ ಇರಿಸಲು ಮನೆಯಲ್ಲೇ ಒಂದು ಭಾಗವನ್ನು ಗೊತ್ತುಮಾಡಲಾಯಿತು. ಆದರೆ ತುಂಟ ಮಂಗವನ್ನು ಎಲ್ಲಿ ಕಟ್ಟಿ ಹಾಕಬೇಕು? ಹತ್ತಿರದಲ್ಲಿ ಮರ-ಗಿಡಗಳೂ ಇಲ್ಲ. ಅವನ್ನು ಬಿಟ್ಟರೆ ಮನೆಯ ಮಾಡೇ ಗತಿ; ಕೇಶವ ಮಂಗನನ್ನು ಮಾಡಿನ ಮೇಲೆ ಕುಳ್ಳಿರಿಸಲು ಯತ್ನಿಸಿದ. ಅದರ ಮೇಲೆ ಮೆಲ್ಲನೆ ಮಂಗವನ್ನಿಟ್ಟ. ಆದರೆ ಈ ಹನುಮಂತನ ಭಾರವನ್ನು ತಾಳಲಾರದೆ ಮಾಡೇ ನೆಲಕ್ಕುರುಳಬಹುದೆಂಬ ಅಂಜಿಕೆಯಾಯಿತು.

ಅಂಜಿದುದೇ ತಡ-ಮಾಡು ಬಿದ್ದುಬಿಟ್ಟಿತು. ಕಂಭಗಳೆಲ್ಲ ದೂಳಿಪಿಡಿದಿದ್ದುವು. ಆದರೆ ಈ ದುಃಸ್ಥಿತಿಗೆ ಕಾರಣ ತುಂಟ ಮಂಗನೂ ಅಲ್ಲ; ಹುಚ್ಚು ಗಾಳಿಯೂ ಅಲ್ಲ; ಮಕ್ಕಳಿಬ್ಬರೂ ಹೆದರಿ ಹಿಂದಿರುಗಿ ನೋಡಿದರು. ಕೇಶವನ ತಾಯಿ ಸೀತಮ್ಮ ಸಿಡುಮೋರೆಯಿಂದ ನಿಂತಿದ್ದಳು. ಅವಳ ಪಾದಾಘಾತಕ್ಕೆ ತುತ್ತಾಗಿ ಅವರ ಮನೆ ನೆಲಸಮವಾಗಿತ್ತು; ಮನಸ್ಸು ಮುರಿದುಹೋಗಿತ್ತು.

ಸೀತಮ್ಮ ನಾಣಿಯ ಕಿವಿ ಹಿಂಡುತ್ತಾ ಗದರಿಸಿದಳು:—'ನಮ್ಮ ಮನೆಯ ಅಂಗಳಕ್ಕೆ ಕಾಲಿಡಬೇಡ! ಕೇಶವನೊಡನೆ ಆಡಬೇಡ ಎಂದು ನಾನೆಷ್ಟು ಸಲ ಹೇಳಿಲ್ಲ! ಇಷ್ಟಾದರೂ ನಿನ್ನ ದುರ್ಗುಣ ಹೋಗಲೊಲ್ಲದು. ದೊಡ್ಡವರ ಮಕ್ಕಳೊಡನೆ ಆಡಲು ಯೋಗ್ಯತೆ ಬೇಕು. ಇನ್ನೊಮ್ಮೆ ಬಂದರೆ ಕಾಲೇ ಮುರಿದುಹಾಕುತ್ತೇನೆ, ನೋಡಿಕೋ!'

ಅವಳು ಕೈ ಬಿಟ್ಟುದೇ ತಡ; ನಾಣಿ ಒಂದೇ ಓಟಕ್ಕೆ ಮನೆ ಸೇರಿದ.

ತಾಯಿ ಕೇಶವನನ್ನೂ ಸುಮ್ಮನೆ ಬಿಡಲಿಲ್ಲ ...' ಪೋಲಿಹುಡುಗ! ಆ ದರಿದ್ರ ನಾಣಿಯೊಡನೆ ಆಡಬೇಡವೆಂದು ಸಾವಿರ ಸಲ ಹೇಳಿದೆ. ಇದೆಂತಹ ಹೊಲಸು ಆಟ? ಮೈಮಂಡೆಯೆಲ್ಲ ಮಣ್ಣು; ನಾಳೆ ಕಾಯಿಲೆ ಬಿದ್ದರೆ ಯಾರು ನೋಡಿಕೊಳ್ಳುತ್ತಾರೆ? ಮಣ್ಣೆಂದರೆ ಏನು ಪ್ರೀತಿಯೋ ಈ ಮಕ್ಕಳಿಗೆ! ಸೆಂಟಿನಂತೆ ಹಚ್ಚಿಕೊಳ್ಳುತ್ತಾರೆ. .. ....

'ಹೂಂ; ನಡೆ ಬಚ್ಚಲುಮನೆಗೆ! ಸ್ನಾನ ಮಾಡಿಸುತ್ತೇನೆ. ತಣ್ಣೀರೇ ಗತಿ. ಬೇಡಬೇಡವೆಂದರೂ ಮಣ್ಣು ಬಳಿದುಕೊಂಡುದಕ್ಕೆ ತಕ್ಕ ಶಿಕ್ಷೆ! ನಿನಗೇನು ಕಡಮೆಯಾಗಿದೆ? ಆಡಲು ಬೊಂಬೆಗಳಿಲ್ಲವೆ? ಕೋಣೆತುಂಬ ಇದ್ದರೂ ಹೊಲಸು ಮಣ್ಣೇ ಬೇಕು. ಅನುಭವಿಸು, ನನಗೇನು? ಹೊತ್ತುಕೋ ಆ ಬೊಂಬೆಗಳನ್ನು! ಇಲ್ಲದಿದ್ದರೆ ಕಡೆಗೆ ನಾಣಿ ಬಂದು ಎಲ್ಲವನ್ನೂ ಮನೆಗೊಯ್ಯಾನು. ಎಂತಹ ಹುಡುಗನೋ ಅವನು? ಎಷ್ಟು ಬೆದರಿಸಿದರೂ ಕೇಳಲೊಲ್ಲ. ಅವನ ತಾಯಿ-ತಂದೆಗಳೂ ಕಿವಿಗೆ ಹಾಕಿಕೊಳ್ಳುವುದಿಲ್ಲ. ಇನ್ನು ಶಾಲಿಡಲಿ....ಪ್ರತಿಸಲಕ್ಕೂ ಹತ್ತು ಹತ್ತು ರೂಪಾಯಿ ಜುಲ್ಮಾನೆ ಹಾಕಿಸುತ್ತೇನೆ. ದೊಡ್ಡವರ ಮಕ್ಕಳನ್ನು ಕೆಡಿಸುವುದು ತಮಾಷೆಯಲ್ಲ; ಪಟ್ಟಣದಲ್ಲಿದ್ದರೆ ಈ ಪರಿಸ್ಥಿತಿ ಇತ್ತೆ? ಈ ಹಾಳು ಹಳ್ಳಿಯಲ್ಲಿ ಎಲ್ಲರೂ ಅನಾಗರಿಕರೇ! ಸಭ್ಯತೆಯೆಂದರೇನೆಂದು ಯಾರಿಗೂ ಗೊತ್ತಿಲ್ಲ.. ....' ಎಂದು ಗೊಣಗುತ್ತಾ ಕೇಶವನನ್ನು ಸ್ನಾನಗೃಹಕ್ಕೊಯ್ದಳು.

× × × ×

ಕೇಶವನ ತಂದೆ ಗೋಪಾಲರಾಯರು, ತಮ್ಮ ಜೀವನದ ೩೫ ವರ್ಷಗಳಲ್ಲಿ ಹೆಚ್ಚಿನವನ್ನು ಪಟ್ಟಣದಲ್ಲೇ ಕಳೆದವರು. ಬಾಲ್ಯದಲ್ಲೇ ತಾಯಿ ತೀರಿಹೋದುದರಿಂದ, ಪಟ್ಟಣದಲ್ಲಿ ಅಜ್ಜಿಯ ಮಮತೆಯ ಮೊಮ್ಮಗನಾಗಿ ಲಾಲನೆ ಹೊಂದಿದರು. ಅಲ್ಲಿಯೇ ಕಾಲೇಜು ವಿದ್ಯಾಭ್ಯಾಸವನ್ನೂ ಮುಗಿಸಿದರು; ಅಲ್ಲದೆ ಪಟ್ಟಣದ ವಾತಾವರಣದಲ್ಲಿ ಬೆಳೆದ ಸೀತಮ್ಮನೊಡನೆ ಅವರ ವಿವಾಹವೂ ನೆರವೇರಿತು.

ಅವರ ಪಿತ್ರಾರ್ಜಿತವಾದ ಮನೆ ಹಳ್ಳಿಯಲ್ಲಿತ್ತು. ಸುಮಾರು ಅರ್ಧ ಹಳ್ಳಿಯೇ ಅವರ ಒಡೆತನಕ್ಕೆ ಸೇರಿತ್ತು. ಇದೆಲ್ಲದರ ವಹಿವಾಟನ್ನು ಒಬ್ಬ ಗುಮಾಸ್ತನ ಸಹಾಯದಿಂದ ಅವರು ನೋಡಿಕೊಳ್ಳುತ್ತಿದ್ದರು. ಅಡಿಗೆಗಾಗಿ ಒಬ್ಬನನ್ನು ನೇಮಿಸಿಕೊಂಡಿದ್ದರು. ಮಗನ ಬೆಳೆವಣಿಗೆಗೆ ಈ ಗಂಭೀರ ವಾತಾವರಣ ಒಗ್ಗದೆಂದು, ಅವನನ್ನು ಅಜ್ಜನ ಮನೆಯಲ್ಲೇ ಬೆಳೆಯಿಸಿದ್ದರು. ಅವರಿಗೆ ಆ ಒಂಟಿಜೀವನ ಅಭ್ಯಾಸವಾಗಿತ್ತು.

ಮದುವೆಯಾದ ಬಳಿಕ ಗೋಪಾಲರಾಯರು, ಪಟ್ಟಣದಲ್ಲೇ ಯಾವುದಾದರೂ ನೌಕರಿ ಹಿಡಿದು ತಳವೂರಬೇಕೆಂದು ಲೆಕ್ಕ ಹಾಕಿದರು; ಆದರೆ ತಂದೆ ಅದಕ್ಕೊಪ್ಪದೆ ಊರಲ್ಲೇ ಇರಬೇಕೆಂದು ಒತ್ತಾಯಿಸಿದರು. 'ನೋಡು ಗೋಪು; ಇದ್ದ ನೀನೊಬ್ಬ ಪಟ್ಟಣದ ಹಾದೀ ಹಿಡಿದರೆ, ಇದನ್ನೆಲ್ಲ ನೋಡಿಕೊಳ್ಳುವವರಾರು? ಈ ಚಿನ್ನದಂಥ ಆಸ್ತಿ ಕಂಡವರ ಕೈಗೆ ಸಿಕ್ಕಿ ಹಾಳಾಗಿ ಹೋಗದೆ? ನಿನಗೆ ನೌಕರಿಯ ಹುಚ್ಚೇಕೆ? ಅನಾದಿಕಾಲದ ಮನೆಯಲ್ಲಿ ನಮ್ಮ ವಂಶದ ದೀಪ ಉರಿಯುತ್ತಿರಬೇಕೆಂದೇ ನನ್ನಾಸೆ'—ಎಂದು ಹೇಳಿದರು.

ಇದೆಲ್ಲ ೮–೧೦ ವರ್ಷಗಳ ಹಿಂದಿನ ಮಾತು. ಹಿತೋಪದೇಶ ಕೊಟ್ಟ ತಂದೆ ಈಗಿಲ್ಲ; ಕೆಲವು ವರ್ಷಗಳನ್ನು ಗಂಡ-ಹೆಂಡಿರಿಬ್ಬರೇ ಕಳೆಯಬೇಕಾಯಿತು. ಆ ಬರಡುಜೀವನವನ್ನು ಒಗ್ಗಿಸಿಕೊಳ್ಳಲು ಅವರಿಗೆ ತುಂಬಾ ಕಷ್ಟವೆನಿಸಿತು. ಪಟ್ಟಣದ ನಾಗರಿಕ ವಾತಾವರಣದಲ್ಲಿ ಹುರುಪಿನಿಂದ ಕಳೆದ ದಿನಗಳು, ಈ ಏಕಾಂತಜೀವನದ ವೇಳೆಯಲ್ಲಿ ಆಗಾಗ ನೆನಪಾಗುತ್ತಿದ್ದುವು. ಶಿಕ್ಷಿತ ಜನರೊಡನೆ ವ್ಯವಹರಿಸಿದ ಅವರಿಗೆ ಹಳ್ಳಿಗರೊಡನೆ ಅಂತಃಕರಣಪೂರ್ವಕವಾಗಿ ಬೆರೆಯುವುದು ಶಕ್ಯವಾಗಲಿಲ್ಲ. ಅಲ್ಲದೆ ಒಕ್ಕಲುಗಳೊಡನೆ ಬಿಗುವಾಗಿರಬೇಕೆಂದೂ, ಅವರಿಗೆ ಸ್ವಲ್ಪವೂ ಸಲುಗೆ ಕೊಡಬಾರದೆಂದೂ ಅವರಿಬ್ಬರ ಮನೋಭಾವನೆಯಾಗಿತ್ತು.

ತಂದೆ ತೀರುತ್ತಲೇ ಗೋಪಾಲರಾಯರು ಮನೆಯ ಸ್ವರೂಪವನ್ನೇ ಬದಲಾಯಿಸಿದರು. ಮನೆಯ ಹಳೆಯ ಆಕಾರವನ್ನು ಹೊಸ ಮಾದರಿಯನ್ನಾಗಿ ಮಾಡಿದರು. ಅವರ ಮನೆ ಊರಿಗೇ ಅಲಂಕಾರಪ್ರಾಯವಾಗಿತ್ತು. ಆಧುನಿಕ ಉಪಕರಣಗಳೆಲ್ಲ ಅಲ್ಲಲ್ಲಿ ಶೋಭಿಸುತ್ತಿದ್ದುವು.

ಇಂತಹ ವಾತಾವರಣದಲ್ಲಿ ಕೇಶವ ಜನ್ಮ ತಾಳಿದ. ನಾಲ್ಕೈದು ವರ್ಷಗಳೂ ಆದುವು. ಅವನ ಮನೋವಿಕಾಸಕ್ಕೆ ತಕ್ಕ ಆಸರೆ ಸಿಗಲಿಲ್ಲ. ಮನೆಯೆಂದರೆ ಗಾಂಭೀರ್ಯದ ಮೂರ್ತಿವಾನ್ ರೂಪವಾಗಿತ್ತು. ತಂದೆಯಾಗಲಿ ತಾಯಿಯಾಗಲಿ ಅವನಿಗೆ ಸಲುಗೆಕೊಡುತ್ತಿರಲಿಲ್ಲ. ಅವನ ನಡತೆಯು ಆದರ್ಶಪ್ರಾಯವಾಗಿರಬೇಕೆಂದೇ ಅವರಿಬ್ಬರ ಆಶೆ; ಅವನು ಸ್ವಲ್ಪವೂ ಹಾಳಾಗಬಾರದು; ಪುತ್ತಳಿ ಚಿನ್ನದಂತಿರಬೇಕೆಂದೇ ಅವರ ಯೋಜನೆ. ಮನೆಯಿಂದ ಹೊರಗೆ ಹೊರಡಲೂ ಬಿಡುತ್ತಿದ್ದಿಲ್ಲ. ಹೊರಟರೂ ತಂದೆ ಯಾ ತಾಯಿ ಒಟ್ಟಿಗಿರಲೇಬೇಕು. ಹಳ್ಳಿಗರೊಡನೆ ಸೇರಿ ಮುಕ್ತ ಮನಸ್ಸಿನಿಂದ ಆಡುವ ಸೌಭಾಗ್ಯ ಅವನಿಗಿಲ್ಲ. ತಾವು ನಾಗರಿಕರು, ಹಳ್ಳಿಗರೆಲ್ಲ ಹುಂಬರು—ಅವರ ಸಂಪರ್ಕದಿಂದ ಹುಡುಗ ಕೆಟ್ಟು ಹೋಗುತ್ತಾನೆಂಬ ಹುರುಳಿಲ್ಲದ ಹೆದರಿಕೆ. 'ಬೇಕಿದ್ದರೆ ಮನೆಯಲ್ಲೇ ಆಡಿಕೊಂಡಿರಲಿ' ಎಂದು ನೂರಾರು ಗೊಂಬೆಗಳನ್ನು ತರಿಸಿ ಕೊಟ್ಟಿದ್ದರು ತಂದೆ. ಆದರೆ ಆ ನಿರ್ಜೀವ ಬೊಂಬೆಗಳೊಡನೆ ಆಡಿ ಅವನಿಗೆ ಬೇಸರವಾಗದೆ?

ಹಳ್ಳಿಗಳಲ್ಲಿ ಮನೆಗಳೆಲ್ಲ ಇರುವುದು ಸಾಮಾನ್ಯವಾಗಿ ದೂರದೂರವೇ! ಪುಣ್ಯಕ್ಕೆ ಶೀನಪ್ಪನ ಮನೆ ಪಕ್ಕದಲ್ಲೇ ಇತ್ತು. ಶೀನಪ್ಪನ ಮಗ ನಾಣಿ ಆಗಾಗ ರಾಯರ ಮನೆಗೂ ಬರುತ್ತಿದ್ದ. ಅವನೂ ಕೇಶವನೂ ಸಮವಯಸ್ಕರು. ಸಂಗಾತಿಗಳ ಮುಖ ಕಾಣದ ಕೇಶವ ಅವನೊಡನೆ ಸೇರಿ, ದಿನಾಲೂ ತುಸು ಹೊತ್ತಾದರೂ ಆಡುತ್ತಿದ್ದ. ಆದರೆ ಹೆತ್ತವರ ಕಟ್ಟಾಜ್ಞೆ ಆದಕ್ಕೂ ಕಲ್ಲು ಹಾಕಿತು. ಶೀನಪ್ಪ ತಮ್ಮ ಒಕ್ಕಲಾಗಿದ್ದರೆ ಇಷ್ಟರೊಳಗೇ ಅಲ್ಲಿಂದ ಓಡಿಸಿಬಿಡುತ್ತಿದ್ದರು.

ಆದರೆ ಅವನು ಇವರ ಹಂಗಿನಲ್ಲಿರಲಿಲ್ಲ—ಎಂತಲೇ ಸೀತಮ್ಮ ಗಳಗಳ ಎಂದು ಒದರಾಡಿದುದು.

ಶೀನಪ್ಪ ಮನೆಯಲ್ಲಿ ಕುಳಿತು ಸೀತಮ್ಮನ ಕೃತ್ಯವನ್ನು ಕಾಣು-ತ್ತಿದ್ದ. ಅವನಿಗೆ ಮಗನ ಮೇಲೆ ವಿಪರೀತ ಸಿಟ್ಟು ಬಂದಿತ್ತು. ನಾಣಿ ಬರುತ್ತಲೇ ಅವನ ಬೆನ್ನಿನ ಮೇಲೆ ನಾಲ್ಕೈದು ಬಾರಿಸಿ—'ಮುಟ್ಠಾಳ, ಅವರ ಮನೆಗೆ ಹೋಗಬೇಡವೆಂದು ಸಾರಿ ಸಾರಿ ಹೇಳಿದರೂ ನೀನು ಕೇಳುವುದಿಲ್ಲ. ಲಜ್ಜೆಗೇಡಿ; ಅವರೆಲ್ಲಿ? ನಾವೆಲ್ಲಿ? ಇನ್ನು ಅತ್ತ ತಿರುಗಿದೆಯೆಂದರೆ ಬೆನ್ನಿನ ಚರ್ಮ ಸುಲಿದು ಬಿಡುತ್ತೇನೆ. ನೀನೇನು ಮನೆಯಿಲ್ಲದ ಪರದೇಶಿಯೆ? ಹಳ್ಳಿಯಲ್ಲಿ ಇಷ್ಟು ಹುಡುಗರಿರುವಾಗ ಅಲ್ಲಿಯೇ ನೀನು ಸಾಯಬೇಕೆ?' ಎಂದು ಸೀತಮ್ಮನ ಮೇಲಿನ ಸಿಟ್ಟನ್ನು ಮಗನ ಮೇಲೆ ತೀರಿಸಿಕೊಂಡ.

ಅಂದಿನಿಂದ ಕೇಶವನಿಗೆ ನಾಣಿಯ ಸಹವಾಸವೂ ತಪ್ಪಿ-ಹೋಯಿತು. ಸಂಜೆಯ ಸಮಯ; ಪೆಚ್ಚುಮೋರೆಯಿಂದ ಕೋಣೆ-ಯೊಳಗೆ ಕುಳಿತು ಕಿಟಕಿಯ ಮೂಲಕ ಆಕಾಶವನ್ನೋ ಗದ್ದೆಗಳನ್ನೋ ಶೂನ್ಯಮನಸ್ಕನಾಗಿ ನಿಟ್ಟಿಸುತ್ತಾ ಇರುವ ತಾಯಿ-ತಂದೆಗಳಿಬ್ಬರೂ ತಂತಮ್ಮ ಕಾರ್ಯದಲ್ಲಿ ತಲ್ಲೀನರಾಗಿರುತ್ತಿದ್ದರು; ಇವನನ್ನು ಮಾತನಾ-ಡಿಸುವವರು ಯಾರೂ ಇಲ್ಲದಾಯಿತು.

ಐದು ವರ್ಷ ತುಂಬುತ್ತಲೇ ಅವನನ್ನು ಶಾಲೆಗೆ ಕಳುಹುವ ಪ್ರಶ್ನೆ ಎದುರಾಯಿತು. ಆದರೆ ಶಾಲೆಯಿದ್ದುದು ಹಳ್ಳಿಯ ಒಂದು ಮೂಲೆಯಲ್ಲಿ! ಅಷ್ಟು ದೂರ ಕೆರೆಕುಂಟೆಗಳ ಮಾರ್ಗವಾಗಿ ಹಳ್ಳ-ತೋಡುಗಳನ್ನು ದಾಟಿ ದಿನಾಲೂ ಹೋಗಿ ಬರುವುದು ಕೇಶವನಿಗೆ ಸಾಧ್ಯವೆ? ಅಲ್ಲದೆ 'ಶಾಲೆಯ ಪೋಲಿಗಳೊಡನೆ ಬೆರೆತು ಅವನು ದುರ್ಗುಣ ಕಲಿತುಕೊಂಡರೆ........!' ಎಂಬ ಭಯ.

ಪಟ್ಟಣದಲ್ಲಿ ಅವನ ವಿದ್ಯಾಭ್ಯಾಸವು ಸುಗಮವಾಗಿ ಸಾಗಬಹು-ದಿದ್ದರೂ ಅವನನ್ನಗಲಿರಲು ತಾಯಿ-ತಂದೆಗಳು ಸಿದ್ಧರಿರಲಿಲ್ಲ. ಹೀಗಾಗಿ ಈಗಲೂ ಕೇಶವ ಗೆಳೆಯರಿಲ್ಲದೆಯೆ ಕಾಲಕಳೆಯ ಬೇಕಾಯಿತು.

ದಿನಾಲೂ ಶಾಲೆಯ ಉಪಾಧ್ಯಯರು ಮನೆಗೆ ಬಂದು ಪಾಠ-ಹೇಳಿ ಹೋಗುತ್ತಿದ್ದರು. ಅವರ ಹುಲಿಮೀಸೆ, ಉರಿಗಣ್ಣು, ಒರಟು ವರ್ತನೆಗಳಿಗೆ ಅವನು ಹೆದರಿ ಸಾಯುತ್ತಿದ್ದ. ಭಯವೇ ವಿದ್ಯೆಯ ಕಳಹದಿಯೆಂಬ ಸಿದ್ಧಾಂತದ ಮೇಲೆ ಅವರ ಅಭ್ಯಾಸ ಸಾಗುತ್ತಿತ್ತು. ಅದಕ್ಕೆ ಸಾಧನವಾದ ಬೆತ್ತ ಎದುರಿಗೇ ಇರುತ್ತಿತ್ತು. ಅದನ್ನು ನೋಡಿ ವಿದ್ಯೆಯ ಕಡೆಗಿದ್ದ ಕೇಶವನ ಅಲ್ಪಸ್ವಲ್ಪ ಒಲವೂ ಮಾಯವಾಯಿತು. ಉಪಾಧ್ಯಾಯರನ್ನು ಕಂಡೊಡನೆಯೆ ಅಡಗಿಕೊಳ್ಳಲಾರಂಭಿಸಿದ. ಒಂದು ದಿನ ಹೊಟ್ಟೆನೋವು, ಮತ್ತೊಂದು ದಿನ ಜ್ವರ— ಹೀಗೆ ನೆವನಗಳೇ ಮುಂದೆ ಬರುತ್ತಿದ್ದುವು. ಪಾಠಗಳು ತೀರ ನಿರುತ್ಸಾಹವಾಗಿ ಸಾಗುತ್ತಿದ್ದುವು.

ಒಂದೆಡೆ ಉಪಾಧ್ಯಾಯರ ಪೀಡೆ, ಮತ್ತೊಂದೆಡೆ ತಂದೆ-ತಾಯಂದಿರ ಒತ್ತಾಯ—ಇವೆರಡರ ನಡುವೆ ಸಿಕ್ಕು ಕೇಶವ ವಿಲಿವಿಲಿ ಒದ್ದಾಡುತ್ತಿದ್ದ. ಒಮ್ಮೆ ಈ ಗಂಡಾಂತರ ತಪ್ಪಿದರೆ ಸಾಕೆಂದು ಅವನು ಹಾರೈಸುತ್ತಿದ್ದ; ಆದರೆ ದಿನದಿನಕ್ಕೆ ಬಂಧನ ಬಲವತ್ತರ-ವಾಗುತ್ತ ಹೋಗುತ್ತಿತ್ತು.

ಇನ್ನು ಅವನಿಂದ ತಡೆಯಲಾಗಲಿಲ್ಲ; ಅವನ ಮನಸ್ಸು ವಿದ್ರೋಹ ಕೈಕೊಳಿಸಿತು. ಆ ಎಳೆಯ ಮೆದುಳು ಎಷ್ಟೆಂದು ಸಹಿಸಬಲ್ಲುದು? ಇದಕ್ಕೆಲ್ಲ ಹೆದರಬಾರದೆಂದು ಅವನು ದೃಢನಿರ್ಧಾರ ಮಾಡಿದ.

ಉಪಾಧ್ಯಾಯರು ಬಂದೊಡನೆಯೆ ಪಾಠ, ಮಗ್ಗಿ, ಲೆಕ್ಕ— ಎಲ್ಲ ಕೇಳುವರು. ಕೇಶವ ಯಾವುದನ್ನೂ ತೋರಿಸುವುದಿಲ್ಲ. ಪಾಠದ ಮೇಲೆ ಪ್ರಶ್ನೆ ಕೇಳುವರ; ಮನಬಂದಂತೆ ಉತ್ತರಿಸುವ. ಬೆತ್ತಕ್ಕೆ ಕೈಯಿಕ್ಕುವರು. ಅದಕ್ಕೂ ಇವನು ಅಂಜುವುದಿಲ್ಲ. 'ಬಂದದ್ದು ಬರಲಿ' ಎಂದು ಸುಮ್ಮನಾಗುವನು. ಒಂದೆರಡು ಪೆಟ್ಟು ಏರಿಸುವರು. ಇವನು ಧೀರಸೇನಾನಿಯಂತೆ ಹಾಗೆಯೇ ಕುಳಿತುಕೊಳ್ಳುವನು. ಏನನ್ನೂ ಹೇಳುವುದಿಲ್ಲ; ಯಾವ ಕೆಲಸವನ್ನೂ ಮಾಡುವುದಿಲ್ಲ.

ಉಪಾಧ್ಯಾಯರು ಮತ್ತೇನು ಮಾಡುವರು? 'ಭಯವೇ ಇಲ್ಲದ ಬಳಿಕ ವಿದ್ಯೆ ಎಲ್ಲಿ?' ಎಂದು ನಿರಾಶರಾಗುವರು. ರಾಯರಿಗೆ ಸವಿವರ-ವಾಗಿ ಈ ಘಟನೆಯನ್ನು ತಿಳಿಸಿದರು. ಅವರೂ ಹೆದರಿಸಿ ಗದರಿಸಿ ನೋಡಿದರು. ಹುಬ್ಬುಗಂಟಿಕ್ಕಿದರು; ಕೆಂಗಣ್ಣಿನಿಂದ ನಿಟ್ಟಿಸಿದರು. ಆದರೆ ಕೇಶವ ವೆಪ್ಪಬಡಿದವನಂತೆ ನಿಂತುಬಿಟ್ಟ.

ಒಂದಲ್ಲ, ಎರಡಲ್ಲ ಎಷ್ಟೋ ದಿನಗಳು ಕಳೆದುಹೋದುವು. ಉಪಾಧ್ಯಾಯರು ದಿನಾಲೂ ಬರುವರು—ಹೋಗುವರು. ಟ್ಯೂಶನ್ನಿನಿಂದ ನಾಲ್ಕು ಕಾಸು ಸಂಪಾದಿಸಬಹುದೆಂಬ ಅವರ ಆಶೆಗೆ ಈ ಸತ್ಯಾಗ್ರಹ ತಣ್ಣೀರು ಎರಚಿತ್ತು. 'ನನ್ನ ಮಗನಾಗಿದ್ದರೆ ಜೀವಂತಸಮಾಧಿ ಮಾಡುತ್ತಿದ್ದೆ!'—ಎಂದು ಹಲ್ಲು ಮಸೆಯುತ್ತ ಹಿಂತೆರಳುತ್ತಿದ್ದರು.

ಕೇಶವನ ಈ ಸಾಹಸದಿಂದಾಗಿ ಉಪಾಧ್ಯಾಯರ ಕಾಟ ತಪ್ಪಿ-ಹೋಯಿತು. ಆದರೆ ತಂದೆ-ತಾಯಂದಿರ ಮೂದಲಿಕೆ, ಆದರ್ಶಾತ್ಮಕ ಉಪದೇಶ, ಹೋದಲ್ಲಿ ಬಂದಲ್ಲಿ ನಡತೆಯ ಬಗ್ಗೆ ಎಚ್ಚರಿಕೆ ನಡೆದೇ ಇತ್ತು. ಹೆತ್ತವರೊಡನಲ್ಲದೆ ಮತ್ತಾರೊಡನೆಯೂ ಮಾತನಾಡುವ ಅನುಮತಿಯಿದ್ದಿಲ್ಲ. ದಿನಗಳೆದಂತೆ ಅವನಿಗೆ ಅವರ ಬಗ್ಗೆ ಬೇಸರ ಹೆಚ್ಚುತ್ತಿತ್ತು. 'ನನ್ನಿಚ್ಛೆಗೆ ವಿರುದ್ಧವಾಗಿ ಅವರು ನಿಯಮಗಳನ್ನು ಹೇರಿರುವರಲ್ಲ! ಅವರಿಚ್ಛೆಗೆ ವಿರುದ್ಧವಾಗಿ ನಾನೇಕೆ ನಡೆಯಬಾರದು?' ಎಂಬ ವಿಚಿತ್ರ ಪ್ರತೀಕಾರಪ್ರವೃತ್ತಿಯು ಅವನಲ್ಲಿ ಮೊಳೆತು ಬಲವಾಯಿತು.

ಅಂದಿನಿಂದ ಅವನು ಅಪಾಯಕಾರಿಯಾದ. ಕೈಗೆ ಸಿಕ್ಕಿದ ವಸ್ತುಗಳನ್ನು ದೂರಕ್ಕೆಸೆದು ಚೆಂದ ನೋಡುತ್ತಿದ್ದ. ಪಾತ್ರೆಗಳು ಕೆಳಗೆ ಬಿದ್ದು ಚೂರುಚೂರಾದಾಗ ಅವನು ಚಪ್ಪಾಳೆ ತಟ್ಟಿ ಕೇಕೆ ಹಾಕುತ್ತಿದ್ದ. ತಾಯಿಯ ಕಳವಳವನ್ನು ಕಂಡರೆ ಅವನಿಗೆಷ್ಟು ಸಂತೋಷ! ಅವಳು ಸಿಟ್ಟಾಗಿ ಹೊಡೆದರೂ ಇವನು ತುಟಿ ಪಿಟ್ಕೆನ್ನು-ತ್ತಿರಲಿಲ್ಲ.

ಕೆಲವೊಮ್ಮೆ, ಮನೆಯ ಹೊರಚಾವಡಿಯಲ್ಲಿ ಕುಳಿತು ಎದುರಿನ ಮೈದಾನವನ್ನು ದೃಷ್ಟಿಸುತ್ತಿದ್ದ. ದನಗಾಯುವ ಮಕ್ಕಳು ಉಲ್ಲಾಸದಿಂದ

ಇಜಿಪ್ತಕ್ಕೆ

ಬೆಳಕು ನೀಡಿದ ಕುರುಡ

(ಸಂಗ್ರಹಿತ ಜೀವನ ಪರಿಚಯ)

ಶ್ರೀ. ಚಿತ್ರಿಗೆ ರಾಮನ್, ಗೋಕರ್ಣ

ದೇಶ-ಜನತೆಯ ವಿಷಯಕನಾದ ಉತ್ಕಟಶ್ರದ್ಧೆಯು ಕುರುಡನಿಂದಲೂ ಎಂತೆಂತಹ ಮಹತ್ತ್ವದ ಕಾರ್ಯಗಳನ್ನು ಮಾಡಿಸುವುದೆಂಬುದಕ್ಕೆ ತಾಹಾಹುಸೇನನು ಪ್ರತ್ಯಕ್ಷ ಪ್ರಮಾಣವಾಗಿ ನಿಂತಿದ್ದಾನೆ. ಇಜಿಪ್ತದ ಕುರುಡುಜನತೆಗೆ ವಿದ್ಯೆಯ ಕಣ್ಣುಗಳನು ಕೊಡಿಸಿದವನೇ ಈ ಕುರುಡನಾದ ತಾಹಾಹುಸೇನನು !

ಮಧ್ಯಪೂರ್ವದಲ್ಲಿಯ ಅಜ್ಞಾನ ಹಾಗೂ ದಬ್ಬಾಳಿಕೆಯ ವಿರುದ್ಧವಾಗಿ ಮೂವತ್ತು ವರ್ಷಗಳಿಗೂ ಮಿಕ್ಕಿ ಹೋರಾಡಿದ ವ್ಯಕ್ತಿ—ತಾಹಾಹುಸೇನ್ ! ಫೆರೋಕನನ್ನು ಪಟ್ಟದಿಂದ ಕಿತ್ತೊಗೆಯುವುದರಲ್ಲಿ ಇತರರೆಲ್ಲರಿಗಿಂತಲೂ ಈತ ಹೆಚ್ಚು ಸಹಾಯಮಾಡಿದ್ದಾನೆ; ಇಜಿಪ್ತದ ಜನರಿಗೆ ಭಾಷಣಸ್ವಾತಂತ್ರ್ಯ ಮತ್ತು ಮುದ್ರಣಸ್ವಾತಂತ್ರ್ಯಗಳ ಬೆಲೆಯನ್ನು ತಿಳಿಸಿಕೊಟ್ಟಿದ್ದಾನೆ. ಎಲ್ಲಕ್ಕೂ ಹೆಚ್ಚಿನ ಸಂಗತಿಯೆಂದರೆ ಅರಬ ದೇಶದ ಇತರರಿಗಿಂತ ಮೊದಲು, ಇಜಿಪ್ತದ ಮಕ್ಕಳ 'ಪುಕ್ಕಟೆಯ ಶಿಕ್ಷಣ'ಕ್ಕಾಗಿ ಸರಕಾರದ ವಿರುದ್ಧ ಹೆಣಗಿದವನೇ ಈತ.

ಇವನು ಇಜಿಪ್ತದ ಒಂದು ಹಳ್ಳಿಯಲ್ಲಿ ಮಧ್ಯಮವರ್ಗದ ಒಬ್ಬ ಸಾಮಾನ್ಯನ ಮಗನಾಗಿ ಹುಟ್ಟಿದನು. ಈತನ ತಂದೆಗೆ ಹುಟ್ಟಿದ ಹದಿಮೂರು ಜನ ಮಕ್ಕಳಲ್ಲಿ ಈತನೊಬ್ಬ. ತನ್ನ ಮೂರನೆಯ ವರ್ಷದಲ್ಲಿ ತನ್ನ ಸೋದರ-ಸೋದರಿಯರು, ತನಗರಿವಾಗದಿರುವ ವಿಚಿತ್ರಸಂಗತಿಗಳ ಕುರಿತಾಗಿ ಮಾತನಾಡುತ್ತಿರುವುದನ್ನು ಆತ ಗಮನಿಸಿದನು. " ಅವು ನೋಡತಕ್ಕ ವಸ್ತುಗಳ ಕುರಿತಾದ ವಿಷಯ; ಆದರೆ ಅವುಗಳನ್ನು ನಾನು ನೋಡಿಲ್ಲ, ನೋಡುತ್ತಿಲ್ಲವೆಂಬುದರ ಕಲ್ಪನೆ ನನಗಿದೆ—" ಎಂದು ಆತ ಅಭಿಪ್ರಾಯಪಡುತ್ತಿದ್ದ.

ಹುಸೇನನು ಮೂರನೆಯ ವರ್ಷದಲ್ಲಿ ಕಾಲಿಡುತ್ತಲೆ, ಒಂದು ಬಗೆಯ ಕಣ್ಣಿನ ರೋಗಕ್ಕೆ ತುತ್ತಾಗಿ ಕುರುಡನಾದ. ಇಜಿಪ್ತದ ಹಳ್ಳಿಯ ಜನವಸತಿಯಲ್ಲಿ ನೂರಕ್ಕೆ ಐವತ್ತರಷ್ಟು ಜನರು ಈ ರೋಗಕ್ಕೆ ಆಹುತಿಯಾಗುತ್ತಿರುವಾಗ, ಅಂಥವರಲ್ಲಿ ಹುಸೇನನೂ ಒಬ್ಬನಾದ.

ತನ್ನ ಕುರುಡುತನವನ್ನು ಬದಿಗೊತ್ತಿ, ಅಥವಾ ಆ ಕುರುಡುತನದ ಮೂಲಕವಾಗಿ, ಆತ ತನ್ನಲ್ಲಿರುವ ಅಮೂಲ್ಯ ಜ್ಞಾನವನ್ನು ಹೊರಗೆಡವಿದ. ಊರ ಶಾಲೆಯೊಂದರಲ್ಲಿ ವಿದ್ಯಾರ್ಥಿಯಾಗಿ ಸೇರಿದ. ಮನೆಯಲ್ಲಿ ಇತರರಿಂದ ಓದಿಸಿ, ಅದನ್ನು ಕೇಳಿ ಅಭ್ಯಸಿಸುತ್ತಿದ್ದ. ಆತ ಕುರಾನವನ್ನು ಆಳವಾಗಿ ಅಭ್ಯಸಿಸಿ, ಕೇವಲ ತನ್ನ ಸ್ಮರಣಶಕ್ತಿಯಿಂದಲೇ ಅದರಲ್ಲಿ—ಪಾಂಡಿತ್ಯವನ್ನೂ ಜ್ಞಾನವನ್ನೂ ವ್ಯಕ್ತಪಡಿಸಿದ. ಆತನ ಜಾಣತನವು ಕಾಯರೋದಲ್ಲಿಯ ಧಾರ್ಮಿಕ ಯುನಿವರ್ಸಿಟಿಯ ಸ್ಕಾಲರಶಿಪ್ಪನ್ನು ಗೆಲ್ಲುವಂತೆ ಮಾಡಿತು. ಅಲ್ಲಿಂದ ಆತನು ಕಾಯರೋ ಯುನಿವರ್ಸಿಟಿಗೆ ಸ್ಥಳಾಂತರಿಸಲ್ಪಟ್ಟನು. ಕಾಯರೋ ಯುನಿವರ್ಸಿಟಿಯಲ್ಲಿ ಪಿಎಚ್. ಡಿ ಪದವಿಯು ಮೊಟ್ಟಮೊದಲು ದೊರೆತುದು ಹುಸೇನನಿಗೆ ! ಅಲ್ಲಿಂದ ಹೆಚ್ಚಿನ ಅಭ್ಯಾಸಕ್ಕಾಗಿ ಆತನನ್ನು (ಗಳಲ್ಲಿ) ಪ್ಯಾರಿಸಿಗೆ ಕಳುಹಲಾಯಿತು. ಅಲ್ಲಿಯೂ ಹುಸೇನನು ಇನ್ನೊಂದು ಪಿಎಚ್. ಡಿ ಪದವಿಯನ್ನು ಗಳಿಸಿದ್ದಲ್ಲದೆ, ಒರ್ವ ಫ್ರೆಂಚ್ ಸುಂದರ ತರುಣಿಯನ್ನು ತನ್ನ ಹೆಂಡತಿಯನ್ನಾಗಿ ಕೈಹಿಡಿಯುವ ಸುಯೋಗವನ್ನೂ ಪಡೆದನು. (ಅದೇನು ! ಹುಸೇನನಿಗೆ ನೋತ್ರವ ಭಾಗ್ಯ ಬೇಕಲ್ಲ !)

ಇಜಿಪ್ತಕ್ಕೆ ಮರಳಿದ ನಂತರ, ಕಾಯರೋ ಯುನಿವರ್ಸಿಟಿಯಲ್ಲಿ ಹುಸೇನನನ್ನು ಅರಬೀಭಾಷಾ ಸಾಹಿತ್ಯದ ಪ್ರೊಫೆಸರನನ್ನಾಗಿ ನಿಯಮಿಸಿಕೊಳ್ಳಲಾಯಿತು. ಕುರುಡನಾದರೂ ತನ್ನ ಮಾತಿನಲ್ಲಿ ವಿದ್ಯಾರ್ಥಿಗಳು ಆಕರ್ಷಿತರಾಗುವಂತೆ, ಯಾರ ಭಯವೂ ಇಲ್ಲದೆ ಆತ ನಿಸ್ಸಂಕೋಚ ಮನಸ್ಸಿನಿಂದ ಮಾತನಾಡುತ್ತಿದ್ದನು. ಅರಬೀ ಧರ್ಮದಲ್ಲಿಯ ಅನೇಕ ವಿಷಯಗಳು ಕಟ್ಟುಕಥೆಗಳಾಗಿವೆಯೆಂದೂ ಅವಕ್ಕೆಲ್ಲ ಮೂಢನಂಬಿಕೆಗಳೇ ಮೂಲವೆಂದೂ ವಾದಿಸಿ, ಆ ವಿಷಯವಾಗಿ ಒಂದು ಹೊತ್ತಗೆಯನ್ನೂ ಬರೆದನು.

ಅದರಲ್ಲಿಯ ವಿಮರ್ಶೆಯು ಸರಕಾರದ ವಿಚಾರಣೆಗೂ ಬರುವಂತಾಯಿತು. ಅದರ ವಿಚಾರಣೆಗಾಗಿ ನಿಯಮಿಸಲ್ಪಟ್ಟ ಸಮಿತಿಯು, ಆ ಹೊತ್ತಗೆಯ ವಿಷಯವು ಸರಿಯಾದುದೂ ಸರ್ವಮಾನ್ಯವೂ ಆಗಿದೆಯೆಂದು ವರದಿಯನ್ನೊಪ್ಪಿಸಿತು.

೧೯೩೦ರಲ್ಲಿ ಹುಸೇನನನ್ನು ಕಾಯರೋ ಯುನಿವರ್ಸಿಟಿಯು ಲೆಕ್ಚರನನ್ನಾಗಿ ನೇಮಿಸಿತು. ಇಲ್ಲಿ ಆತನ ವಾಕ್‌ಸ್ವಾತಂತ್ರ್ಯದ ವಿಚಾರವು ಆತನನ್ನು ತೊಂದರೆಗೀಡುಮಾಡಿತು ಇಜಿಪ್ತದ ಮುಖ್ಯ-ಮಂತ್ರಿಯಾದ ಇಸ್ಮಾಯಿಲ್ ಸಿಡ್ಕೀಯಿಂದ ಆತನಿಗೆ ಬಲವಾದ ಪೆಟ್ಟುಬಿತ್ತು. "ನೀನು ಸರಕಾರದ ಟೀಕೆಯನ್ನು ಯುನಿವರ್ಸಿಟಿಯಲ್ಲಿ ಮಾಡುವುದನ್ನು ನಿಲ್ಲಿಸಬೇಕು; ಇಲ್ಲವೆ ರಾಜೀನಾಮೆ ಕೊಡಬೇಕು"–ಎಂದು ಆಡಿದ ಮಂತ್ರಿಯ ಮಾತುಗಳಿಗೆ ಹುಸೇನನು ಹಿಂಜರಿಯಲಿಲ್ಲ. "ನೀವು ವೃಥಾ ಕಂಠಶೋಷಣೆಯನ್ನು ಮಾಡಿಕೊಳ್ಳುತ್ತಿರುವಿರಿ"— ಎಂದು ಒಂದೇ ಮಾತಿನಲ್ಲಿಯೆ ಮುಗಿಸಿಬಿಟ್ಟನು

ಮುಂದೆಯೂ ಹುಸೇನನು ತನ್ನ ನಿಷ್ಠುರಟೀಕೆಯ ಮಾತುಗಳನ್ನಾಡುವುದನ್ನು ನಿಲ್ಲಿಸಲಿಲ್ಲ. ಆತನು ತನ್ನ ಅಭಿಪ್ರಾಯಗಳನ್ನು ಸ್ಪಷ್ಟವಾಗಿ ಬರೆಯತೊಡಗಿದನು. ಒಂದೆಡೆ ಆತನ ಮಗನು ಬಲವಾದ ರೋಗಕ್ಕೊಳಗಾದುದರಿಂದ, ಆತನು ಗಳಿಸಿದುದೆಲ್ಲವೂ ಖರ್ಚಾಯಿತು. ಜೀವನನಿರ್ವಹಣೆಗಾಗಿ ಸಾಲಮಾಡಬೇಕಾಗಿ ಬಂತು. ಆಗ ಮೂರು-ವರ್ಷಗಳವರೆಗೆ ಅತ್ಯಂತ ಕಷ್ಟವನ್ನನುಭವಿಸಿ ಏಳು ಪುಸ್ತಕಗಳನ್ನು ಬರೆದನು. ಅವುಗಳಲ್ಲಿ ಕೆಲವು ಇಜಿಪ್ತದಲ್ಲಿ ಬಹಿಷ್ಕರಿಸಲ್ಪಟ್ಟುವು; ಆದರೆ ಅವೆಲ್ಲವೂ ಮಧ್ಯಪೂರ್ವದಲ್ಲಿ ಹುಸೇನನ ಕೀರ್ತಿಧ್ವಜವನ್ನು ಹಾರಿಸಿದುವು. ೧೯೩೩ರಲ್ಲಿ ಸಿಡ್ಕಿಯನ್ನು ಅಧಿಕಾರಚ್ಯುತನನ್ನಾಗಿ ಮಾಡಲಾಯಿತು. ಆಗ ಹುಸೇನನನ್ನು ಕಾಯರೋ ಯುನಿವರ್ಸಿಟಿಯು ಪುನಃ ರೆಕ್ಟರನನ್ನಾಗಿ ನಿಯಮಿಸಿಕೊಂಡಿತು. ಇಜಿಪ್ತದ ಕಾಲೇಜುಗಳಿಗೆ ಕಳೆದುಹೋದ ಸ್ವಾತಂತ್ರ್ಯದ ಕಳೆಯು ಮರಳಿ ದೊರೆಯಿತು.

ಕಳೆದ ಮೂರು ವರ್ಷಗಳಲ್ಲಿಯ ಕಷ್ಟವು ಆತನ ಮೇಲೆ ತುಂಬ ಪರಿಣಾಮವನ್ನು ಮಾಡಿತ್ತು "ಇಜಿಪ್ತಕ್ಕೆ ನಿಜವಾದ ಪ್ರಜಾಪ್ರಭುತ್ವವನ್ನು ದೊರಕಿಸುವುದು ಯೋಗ್ಯವಾದ ಶಿಕ್ಷಣದಿಂದಲೇ ಸಾಧ್ಯ— ಎಂಬುದನ್ನು ನಾನು ಕಂಡುಕೊಂಡೆ"— ಎಂದು ಹುಸೇನನು ಹೇಳುತ್ತಿದ್ದನು.

ಮಕ್ಕಳಿಗೆ ಪುಕ್ಕಟೆಯಾಗಿ ಶಿಕ್ಷಣವನ್ನು ಕೊಡುವುದವಶ್ಯವೆಂದು ಹಲವರು ಒಪ್ಪಬಹುದು; ಆದರೆ ಅಂದಿನ ಇಜಿಪ್ತ ಸರಕಾರವು ವರ್ಷಕ್ಕೆ ೨೦ ಪೌಂಡು ಫೀಯನ್ನು ತೆಗೆದುಕೊಳ್ಳುತ್ತಿದ್ದಿತು— ಪ್ರತಿಯೊಬ್ಬ ಪ್ರಾಥಮಿಕ ಶಾಲಾವಿದ್ಯಾರ್ಥಿಯಿಂದ.

ಹುಸೇನನು ಈ ಫೀ ವಿಷಯವಾಗಿ ತನ್ನ ಲೆಕ್ಕಣಿಕೆಯನ್ನು ಮಸೆದನು. "ವಿದ್ಯೆ ಹಾಗು ಕಲಿಯುವಿಕೆಗಳು ಸಂತೆಯಲ್ಲಿ ಸಿಗುವ ವಸ್ತುಗಳಲ್ಲ. ಅದು ಮಾರಾಟಕ್ಕಿಡುವ ವಸ್ತುವಾಗಬಾರದು. ವಿದ್ಯೆ ಹಾಗೂ ಕಲಿಕೆಗಳು ಸೂರ್ಯನ ಬೆಳಕು ಮತ್ತು ಬಯಲು ಹವೆ— ಇವುಗಳಂತೆ ಸಕಲರಿಗೂ ಪುಕ್ಕಟೆಯಾಗಿ ಸಿಗತಕ್ಕದ್ದು"— ಎಂದು ಪ್ರತಿಪಾದಿಸಿದನು. ಅದಕ್ಕೆ ಸರಕಾರವು "ದೇಶಕ್ಕೆ ಇಷ್ಟೊಂದು ಆರ್ಥಿಕಭಾರವನ್ನು ಹೊರುವ ಸಾಮರ್ಥ್ಯವಿಲ್ಲ" ಎಂದಿತಲ್ಲದೆ, "ವಿದ್ಯೆ ಹಾಗೂ ಕಲಿಯುವಿಕೆಯು ಐಷಾರಾಮದ ವಸ್ತುಗಳಲ್ಲ" ಎಂದೂ ಹೇಳಿತು. "ಕೇವಲ ಆರ್ಥಿಕಪರಿಸ್ಥಿತಿಯಷ್ಟೆ ಕಾರಣವಲ್ಲ, ಬಡವರು ಓದು-ಬರೆಯಲು ಕಲಿತರೆ ಅವರಲ್ಲಿ ಅತೃಪ್ತಿ-ಅಸಂತುಷ್ಟಿಯುಂಟಾಗುವುದು" ಎಂದೂ ಹೇಳಿತು. "ಅತೃಪ್ತಿ-ಅಸಂತುಷ್ಟಿಗಳಿಗೆ ಈಗೇನೂ ಕೊರತೆಯಿಲ್ಲ; ಅವುಗಳನ್ನು ಹೇಗೆ ನಿವಾರಿಸಬೇಕೆಂಬುದೇ ಸದ್ಯದ ಪ್ರಶ್ನೆಯಾಗಿದೆ" ಎಂದು ಹುಸೇನನು ಪ್ರತಿಭಟಿಸಿದನು

ಮೊದ-ಮೊದಲು ಸರಕಾರ ಹಾಗೂ ಪತ್ರಿಕೆಗಳೆರಡೂ ಹುಸೇನನನ್ನು, "ಕೆಟ್ಟಗಣ್ಣಿನ ಕುರುಡು ಕನಸಿಗ"— ಎಂದು ಕರೆದುವು. ಆದರೆ ಬರು-ಬರುತ್ತ ಜನತೆಯ ಬೆಂಬಲವು ಆತನಿಗೆ ವಿಪುಲವಾಗಿ ದೊರೆಯಿತಲ್ಲದೆ, ಜನತೆಯೂ ಸರಕಾರದೆದುರು ತನ್ನ ಹೇಳಿಕೆಯನ್ನು ಬಲವಾಗಿ ಮಂಡಿಸಿತು. ೧೯೪೩ ಅಕ್ಟೋಬರಿನಲ್ಲಿ ಬಂದ ಹೊಸ ಪಾರ್ಲಮೆಂಟು, "ಇಂದಿನಿಂದ ಪ್ರಾಥಮಿಕ ಶಿಕ್ಷಣವು ಪುಕ್ಕಟೆಯಾಗಿ ಕೊಡಲ್ಪಡುವುದು"–ಎಂದು ಸಾರಿತು; ಆದರೆ ಮಾಧ್ಯಮಿಕ ಶಾಲೆಗಳಲ್ಲಿಯೂ ಶಿಕ್ಷಣವು ಪುಕ್ಕಟೆಯಾಗಿ ಕೊಡಲ್ಪಡಬೇಕೆಂದು ಹುಸೇನನ ಮತವಾಗಿತ್ತು. ಒಟ್ಟಿನಲ್ಲಿ ಈ ಸಂದರ್ಭದಲ್ಲಿ ಶಿಕ್ಷಣರಂಗವನ್ನು ಯಶಸ್ವಿಗೊಳಿಸಲು ಶಿಕ್ಷಣಮಂತ್ರಿಗೆ ಸಹಾಯಕ ಸಲಹೆಗಾರನಾಗಿ ಕೆಲಸ ಮಾಡಲು ಹುಸೇನನು ಒಪ್ಪಿಕೊಂಡನು. ಹುಸೇನನು ಮಕ್ಕಳಿಗೆ ಪುಕ್ಕಟೆಯಾಗಿ ಫಲಾಹಾರ ಮತ್ತು ಔಷಧಿಗಳ ವ್ಯವಸ್ಥೆಯನ್ನು ಮಾಡಿದನು. ತನ್ನ ನೇತೃತ್ವದಲ್ಲಿ ಹುಸೇನನು ಅಲೆಗ್ಝಾಂಡ್ರಿಯಾ ಯುನಿವರ್ಸಿಟಿಯನ್ನು ಅತ್ಯಂತ ಯಶಸ್ವೀ ಸಂಸ್ಥೆಯನ್ನಾಗಿ ಮಾಡಿದನು. ಇಂದು ಅಲ್ಲಿ ಎಂಟು ಸಾವಿರಕ್ಕೂ ಹೆಚ್ಚಾಗಿ ವಿದ್ಯಾರ್ಥಿಗಳು ಶಿಕ್ಷಣವನ್ನು ಪಡೆಯುತ್ತಿರುವರು.

೧೯೫೦ರಲ್ಲಿ ಬಂದ ಹೊಸ ಆಡಳಿತವು, ಶಿಕ್ಷಣ ಮಂತ್ರಿಯಾಗಲು ಹುಸೇನನನ್ನು ಕೇಳಿಕೊಂಡಿತು. ಆಗ ಅವನು ಹೇಳಿದನು:—"ನಾನು ಮಂತ್ರಿಯಾಗುತ್ತೇನೆ; ಆದರೆ ಇಜಿಪ್ತಕ್ಕೆ ಅವಶ್ಯವಾಗುವಂತಹ ಶಿಕ್ಷಣ ಕ್ರಮವನ್ನನುಸರಿಸಲು ನನಗೆ ಸ್ವಾತಂತ್ರ್ಯವನ್ನು ಕೊಡಬೇಕು."

ಹೊಸ ಆಡಳಿತವು, ಆತನ ವ್ಯಕ್ತಿತ್ವ ಹಾಗೂ ಹೆಸರುಗಳ ಬಲದಿಂದಾಗಿ ಅದನ್ನು ಸಮ್ಮತಿಸಿತು. ಹುಸೇನನು ಮಾಧ್ಯಮಿಕ ಶಾಲೆಗಳಲ್ಲಿಯೂ ಪುಕ್ಕಟೆ ಶಿಕ್ಷಣಕ್ರಮವನ್ನು ತಂದನಲ್ಲದೆ, ಪ್ರತಿಯೊಬ್ಬ ವ್ಯಕ್ತಿಗೂ ೧೨ ವರ್ಷ ವಯಸ್ಸಿನ ವರೆಗೆ ಶಿಕ್ಷಣವು ಕಡ್ಡಾಯವಾಗಿ ಇರಬೇಕೆಂದು ಕಾಯದೆ ಮಾಡಿದನು. ಆದರೆ ಇದು ಸುಲಭವಾಗಿರಲಿಲ್ಲ—ಶಿಕ್ಷಕರ ಹಾಗೂ ಶಾಲೆಗಳ ಪ್ರಶ್ನೆಯು ಬೃಹದಾಕಾರವಾಗಿ ನಿಂತಿತು.

ಹುಸೇನನು ಕೆಲವು ಹಳ್ಳಿಗಳಲ್ಲಿ ಆಧುನಿಕ ಮಾದರಿಯ ಶಾಲೆಗಳನ್ನು ತೆರೆದನು. ಕೆಲವೆಡೆಗಳಲ್ಲಿ ಮನೆಗಳನ್ನೇ ಶಾಲೆಯ ಉಪಯೋಗಕ್ಕಾಗಿ ಬಳಸಿಕೊಂಡನು. ಅತ್ಯಲ್ಪ ಅವಧಿಯಲ್ಲಿ ೨,೦೦೦ಕ್ಕೂ ಹೆಚ್ಚಾಗಿ ವರ್ಗಕೋಣೆಗಳನ್ನು ಕಟ್ಟಿಸಿದನು.

ಯೋಗ್ಯ ಶಿಕ್ಷಣಕ್ಕಾಗಿ ೧೮ ತಿಂಗಳುಗಳಲ್ಲಿ ೧೨೦೦೦ ಹೊಸ ಶಿಕ್ಷಕರನ್ನು ತರಬೇತುಗೊಳಿಸಿದನು. ಸರಕಾರದಿಂದ ಹಣ ದೊರಕಿಸುವುದಕ್ಕಾಗಿ ಆತನು ಅನೇಕ ತಂತ್ರಗಳನ್ನು ಮಾಡಿದನು. ಯಾವಾಗಲೂ ತನ್ನ ಕೋಟಿನ ಕಿಸೆಯಲ್ಲಿ ರಾಜೀನಾಮೆಯ ಪತ್ರವನ್ನಿಟ್ಟುಕೊಂಡೇ ಹೊರಡುತ್ತಿದ್ದನು. ಶಿಕ್ಷಕರ ಸಂಬಳಕ್ಕಾಗಿ ಹುಸೇನನು

೫,೦೦,೦೦೦ ಪೌಂಡುಗಳನ್ನು ಕೊಡಬೇಕೆಂದು ಸರಕಾರವನ್ನು ಕೇಳಿದಾಗ, ದೊರೆಯದಿದ್ದುದಕ್ಕಾಗಿ ತನ್ನ ರಾಜೀನಾಮೆಯ ಅಸ್ತ್ರವನ್ನು ಬಿಟ್ಟನು! ಸರಕಾರವು ಹುಸೇನನನ್ನು ಕಳೆದುಕೊಳ್ಳಲಾರದೆ, ಕೂಡಲೆ ಅಷ್ಟು ಹಣವನ್ನು ಮಂಜೂರುಮಾಡಿತು.

ಶಿಕ್ಷಣಮಂತ್ರಿಯಾದ ಹುಸೇನನು ಇಜಿಪ್ತ ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ ಸುಧಾರಣಾಸಂಬಂಧಗಳನ್ನು ಸುಧಾರಿಸಿ ಹೆಚ್ಚಿಸಿದನು. ಇಂಗ್ಲಿಷ್ ಹಾಗೂ ಫ್ರೆಂಚ್ ಭಾಷೆಗಳಲ್ಲಿಯ ಉತ್ತಮ ಪುಸ್ತಕಗಳನ್ನು ಅರಬ್ಬೀ ಭಾಷೆಯಲ್ಲಿ ಅನುವಾದಿಸಿದನು. ನೂರಾರು ಜನ ಇಜಿಪ್ತ ಎಳೆಯರನ್ನು, ಹೆಚ್ಚಿನ ಅಭ್ಯಾಸಕ್ಕಾಗಿ ಯುರೋಪ ಮತ್ತು ಅಮೇರಿಕೆಗಳಿಗೆ ಕಳುಹಿದನು.

ಅಂದಿನ ಆತನ ವಿರೋಧಿಗಳಲ್ಲಿ ರಾಜನಾದ ಫರೋಕನು ಬಲವಾದ ವಿರೋಧಿಯಾಗಿದ್ದನು. ಹುಸೇನನು ಬಹಿರಂಗವಾಗಿ ಅವನನ್ನು ತಡೆದನು. ತನ್ನ ಪತ್ರಿಕೆಯಲ್ಲಿ ಸ್ವಾತಂತ್ರ್ಯದ ವಿಷಯವಾಗಿ ಆತ ಜನಸಾಮಾನ್ಯರ ಮೇಲೆ ಪರಿಣಾಮವಾಗುವಂತೆ ಬರೆಯುತ್ತಿದ್ದನು. ಒಮ್ಮೆ ಆತನು "ಸರಕಾರದಲ್ಲಿ ನಮ್ರತೆ" ಎಂಬ ಶಿರೋನಾಮೆಯಲ್ಲಿ ಒಂದು ಲೇಖನವನ್ನು ಪ್ರಕಟಿಸಿದ್ದಕ್ಕಾಗಿ, ಸರಕಾರದಿಂದ ಬಂಧಿತನಾದನು, ಹಾಗೂ ದಂಡಕ್ಕೂ ಗುರಿಯಾದನು.

೧೯೪೭ರಲ್ಲಿ ಫರೋಕನು ಉತ್ತಮ ಬರೆಹಗಾರರನ್ನಾರಿಸಿ ಅವರಿಗೆ ಬಿರುದನ್ನೂ ೧೦೦೦ ಪೌಂಡು ಬಹುಮಾನವನ್ನೂ ಕೊಡಲು ಒಂದು ಸಮಿತಿಯನ್ನು ನಿಯಮಿಸಿದನು. ಹುಸೇನನಿಗೆ 'ರಾಜಾ — ಹುಸೇನ್' ಎಂಬ ಬಿರುದುಕೊಟ್ಟು ಬಹುಮಾನವನ್ನು ಕೊಡತಕ್ಕದ್ದೆಂದು ಹೇಳಿದ ತನ್ನದೇ ಸಮಿತಿಯ ಮಾತನ್ನು ಫರೋಕನು ತಿರಸ್ಕರಿಸಿದನು.

೧೯೫೩ರಲ್ಲಿ ಜನರಲ್ ನಾಗಿಬ್‌ನು ಹುಸೇನನಿಗೆ ಕೊಟ್ಟ ಕಪ್ಪ (ಬಹುಮಾನ)ಗೂ ಹುಸೇನನಿಗೂ ಯಾವ ಸಂಬಂಧವೂ ಇರಲಿಲ್ಲ. ಅದು ಸೈನ್ಯದ ಚಳವಳಿಯ ಕಾಲವಾಗಿದ್ದು, ಆಗ ಹುಸೇನನು ಇಟಾಲಿಯಲ್ಲಿದ್ದನು. ಫರೋಕನನ್ನು ಪಟ್ಟದಿಂದಿಳಿಸಲು ಜನತೆಯಲ್ಲಿ ಕ್ರಾಂತಿಯನ್ನೆಬ್ಬಿಸಿ ಸಹಾಯ ಮಾಡಿದವನೆಂದು, ನಾಗಿಬ್‌ನು ಹುಸೇನನಿಗೆ ಆ ಕಪ್ಪನ್ನು ಕಳುಹಿದ್ದನು.

ನಾಗಿಬ್ಬನ ಆಡಳಿತವು ಪ್ರಜಾಪ್ರಭುತ್ವದ್ದಾಗಿರಲಿಲ್ಲ. ಆದರೆ ಅದು ಬೇಗನೆ ಪ್ರಜಾಪ್ರಭುತ್ವಕ್ಕೆ ತಿರುಗಬಹುದೆಂದು ಹುಸೇನನು ನಂಬಿದ್ದನು. ನಾಗಿಬ್ ಸರಕಾರವು ಹೊಸ ಪ್ರಜಾಪ್ರಭುತ್ವ ರಾಜ್ಯವನ್ನು ನಿರ್ಮಿಸುವುದಕ್ಕಾಗಿ ಹುಸೇನನನ್ನು ಒಳಗೊಂಡು ಒಂದು ಸಮಿತಿಯನ್ನೇರ್ಪಡಿಸಿತು.

ಜನರಲ್ ನಾಗಿಬ್ಬನು ಕುರುಡು ಹುಸೇನನನ್ನು ಹಾರ್ದಿಕವಾಗಿ ಅಭಿನಂದಿಸಿದನು. ಒಮ್ಮೆ ಕಾಯರೋದ ಜನರ ಕಡೆಗೆ ತಡವಾಗಿ ಮುಟ್ಟಿದ ನಾಗಿಬ್ಬನು ಅವರ ಕ್ಷಮೆಯನ್ನು ಕೇಳಬೇಕಾಯಿತು— "ಕ್ಷಮಿಸಿ, ನಾನು ಹುಸೇನರ ಭಾಷಣವನ್ನು ತಪ್ಪಿಸಿಕೊಳ್ಳುವಂತಿರಲಿಲ್ಲ; ಅದಕ್ಕಾಗಿ ತಡವಾಯಿತು" ಎಂದು ಹೇಳಿದ್ದಾನೆ.

ಹಳ್ಳಿ–ಪಟ್ಟಣಗಳಲ್ಲಿ, ಬೀದಿ–ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್–ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಪ್ರಕ್ಕಟೆಯ ಶಿಕ್ಷಣಕ್ಕಾಗಿ ನಾಗಿಬ್ಬನು ಹುಸೇನನಿಗೆ ಸಂಪೂರ್ಣ ಬೆಂಬಲವಿತ್ತನು. ಇಜಿಪ್ತದ ವಿದ್ಯಾರ್ಥಿಗಳ ಸಂಖ್ಯೆಯು ಎಣಿಸಲ್ಪಟ್ಟಾಗ ಅದು ೧೯,೦೦,೮೭೭ಕ್ಕೆ ಮುಟ್ಟಿತ್ತು.

ಇಂದು ಹುಸೇನನು ಕಾಯರೋದ ಜಿಲ್ಹೆಯೊಂದರಲ್ಲಿ ಹೆಂಡತಿಯೊಡನೆ, ಸುಂದರವಾದ ಮನೆಯಲ್ಲಿ ಬಾಳುತ್ತಿದ್ದಾನೆ. ಅವನ ಸುತ್ತಲೂ ಸಾವಿರಾರು ಫ್ರೆಂಚ್, ಗ್ರೀಕ್ ಹಾಗೂ ಅರಬ್ಬೀ ಪುಸ್ತಕಗಳು ಅಪಾರವಾಗಿ ನಿಂತಿವೆ! ಪ್ರತಿನಿತ್ಯವೂ ಯಾರಾದರೂ ಓದಿ ಹೇಳುತ್ತಾರೆ; ಆತನ ಇನ್ನೊಂದು ಆಸಕ್ತಿಯೆಂದರೆ ಹೆಚ್ಚಾಗಿ ಬ್ಯಾಚ್ (Bach) ಹಾಗೂ ಮೊಝಾರ್ಟ (Mozart) ಇವರ ಸಂಗೀತವನ್ನು ಕೇಳುವುದಾಗಿದೆ.

ಇಜಿಪ್ತದ ಏಳ್ಗೆ ಹಾಗೂ ಒಳ್ಳೆಯ ಆಡಳಿತಕ್ಕಾಗಿ ಆತನು ಭಾಷಣ ಮಾಡುವುದರಲ್ಲಿ ಹಾಗೂ ಇತರ ಮಹತ್ತ್ವದ ಕಾರ್ಯಗಳಲ್ಲಿ ಸಾಕಷ್ಟು ವೇಳೆಯನ್ನು ಉಪಯೋಗಿಸುತ್ತಾನೆ. ಬಹುಭಾಗವನ್ನು ಬರೆಯುವುದರಲ್ಲಿಯೇ ಕಳೆಯುತ್ತಾನೆ. ೧೯೪೭ರಲ್ಲಿ ನೋಬೆಲ್ ಪಾರಿತೋಷಕವನ್ನು ಪಡೆದ ಫ್ರೆಂಚ್ ಕಾದಂಬರಿಕಾರನಾದ **ಗಿಡೆ** ಎಂಬವನನ್ನು, ನೋಬೆಲ್ ಸಮಿತಿಯು ಮುಂದಣ ಬಹುಮಾನಕ್ಕಾಗಿ ಹತ್ತು ಜನರ ಹೆಸರನ್ನು ಸೂಚಿಸೆಂದು ಕೇಳಿದಾಗ ಆತನು, "ಹೇಳಬಹುದಾದ ಹತ್ತು ಜನರು ಯಾರೂ ನನಗೆ ಕಾಣುತ್ತಿಲ್ಲ; ಆದರೆ ತಾಹಾಹುಸೇನನ ಹೆಸರು ಮಾತ್ರ ಹೇಳಬೇಕಾದ ಹೆಸರು!" ಎಂದಿದ್ದಾನೆ.

"ಯುನೈಟೆಡ್ ನೇಶನ್ಸ್"ದ ವಿದ್ಯಾಖಾತೆಯ ಜನರಲ್ ಡೈರೆಕ್ಟರನಾಗಿ ಬರಬೇಕೆಂದು ಹುಸೇನನಿಗೆ ಕರೆಬಂತು. ಆದರೆ ಇಜಿಪ್ತ ಸರಕಾರವು ಅವನನ್ನು ಹೋಗಗೊಡಲಿಲ್ಲ. ನಾಗಿಬ್ಬನು ಅವನನ್ನು ತಡೆಹಿಡಿದನು.

"ಇಜಿಪ್ತವು ಹುಸೇನನನ್ನು ಕಳೆದುಕೊಳ್ಳುವುದಕ್ಕೆ ಸಿದ್ಧವಿಲ್ಲ!" ಎಂದು ಅಲ್ಲಿಯ ಸರಕಾರವು ಉತ್ತರಿಸಿತು.

ಅಣುವಿನ ಗುಣು ಗುಣು

ಡಾ. ಗೋವರ್ಧನಾಚಾರ್ಯ ಗಲಗಲಿ, M. A. B. T. ಧಾರವಾಡ

ಮನುಜರು ಪಶುಗಳು ಎಲ್ಲರು ತುಳಿಯುವ
ಚೇತನವಿಲ್ಲದ ನಿಶ್ಚಲ ನೀರವ
ಮಣ್ಣಿನ ಉದರದಿ ಅವಿರತ ತಿರುಗುವ
ಅಣುವಿನ ಗುಣು ಗುಣು ಕೇಳಿಸಿತು : ೧

" ಸಕಲಾಧಾರವು ಆಗಿಹ ಪೃಥಿವಿಯು
ಎಲ್ಲರ ಜೀವನವಾಗಿಹ ವಾರಿಯು
ಎತ್ತಲು ಸುಳಿವ ಅಗೋಚರ ಗಾಳಿಯು
ಮೂಲವು ಆಗಿಹೆ ಪರಮಾಣು ! ೨

" ಒಂದೇ ಮೇಲಿನ ಕಣದಲಿ ನಮ್ಮಯ
ಗಡಣವು ವಿಶಾಲ ಆಗಸದಲ್ಲಿಯ
ಸಮಗ್ರತಾರಾಪುಂಜದ ಸಂಖ್ಯೆಯ
ಮಿಕ್ಕುವುದೈ ಕೇಳ್ ವಿಸ್ಮಯ ! ೩

" ವಾತದಿ ತೇಲುವ ಧೂಲೀಕಣಕಣ
ವ್ಯೋಮದಿ ಧಾವಿಪ ಅಸಂಖ್ಯ ಉಡುಗಣ
ಎಲ್ಲವು ನಮ್ಮಯ ನರ್ತನದಂಗಣ
ಮುಟ್ಟದಿರೆನ್ನನು ಮಾನವನೆ! ೪

" ರಕ್ಕಸರನು ಮಣ್ಮುಕ್ಕಿಸಿದಾತನ
ಕರದೊಳಗಿರ್ಪಾ ದಿವ್ಯ ಸುದರ್ಶನ
ಎನ್ನಯ ಶಕ್ತಿಗದಾವ ನಿದರ್ಶನ?
ಮುಟ್ಟದಿರೆನ್ನನು ಮಾನವನೆ ! ೫

" ಲೋಕಗಳಂತ್ಯದಿ ತಾಂಡವ ಶೂಲಿಯ
ವಿಶ್ವವ್ಯಾಪಕ ವಿಲಯಜ್ವಾಲೆಯ
ಮೀರಿದುದೆನ್ನ ವಿನಾಶವು ಲೀಲೆಯು
ಮುಟ್ಟದಿರೆನ್ನನು ಮಾನವನೆ ! ೬

" ಸೃಷ್ಟಿಯ ಮೊದಲಿನ ಮೆಟ್ಟಲು ನಾನು
ಮುಷ್ಟಿಯೊಳೆನ್ನನು ಪಿಡಿಯುವ ನೀನು
ಭ್ರಷ್ಟನೆ ! ಬಯಸುವೆಯಂತವನೇನು ?
ಮುಟ್ಟದಿರೆನ್ನನು ಮಾನವನೆ ! ೭

" ತಾಯಿಯ ಬಸಿರನು ಬಗೆದಾ ಪಾಪಿಯೆ,
ಮುಗಿಲಿನ ಮಿಂಚನು ಸೆಳೆದ ಪ್ರತಾಪಿಯೆ,
ಎನ್ನನು ಸೀಳಲು ನೀ ತವಕಿಪೆಯ ?
ಕೆಣಕದಿರೆನ್ನನು, ಕೊನೆಗೂ ಕಪಿಯೆ ! " ೮

ಬೆಳಗು

" ನಾರಂಗಿ " ಭಟ್ಟ ಮುಂಬಯಿ

ಬೇನೆ.ಬಯಕೆಯನೆಲ್ಲ ಕಳೆದು—
ತಿಮಿರತಾಯಿಯು ಕಾಯಲು
ಹೊಸತುಸೃಷ್ಟಿಯ ಬರವನೋತು --
ನಿಮಿಷ-ನಿಮಿಷವನೆಣಿಸಲು—
ಅರುಣಕಾಂತಿಯು ಹೊಮ್ಮಿ ಬಂದಿತು
ಆಸೆನೋಟವ ಬೀರುತ
ತಂಬೆಲರು ಮೆಲುಮೆಲನೆ ಬೀಸಿತು
ಕಂಪನೇನೋ ಸೂಸುತ !— ೧

ಬೆರಗಿನಿಂದಲಿ ಬುವಿಯು.ಕಾಣಲು
ಬಾನು ಹೇಳಿತು " ಮೌನವ ".
" ಏನಿದೇನಿದು ! " ಗುಜುಗುಜಿಸಿದುವು
ಹಕ್ಕಿಗಳ ಕುಲ ತಮ್ಮೊಳು
ಎಲ್ಲಕಾಪರು, ತಮ್ಮೊಳೆಂದರು,
" ಬಂದೆ ಬರುವುದೆ ನವ್ಯವು ? "
ನಿತ್ಯ ಬರುವನೆ ಮತ್ತೆ ಮೂಡಿರೆ
ಜಗದ ಮೊಗ ಬೆಪ್ಪಾಯಿತು. ೨

ಆಶೆಯ ಶಿಶು

(ಒಂದು ರೂಪಕಕಥೆ)

ಶ್ರೀ. ಕ. ವೆಂ. ರಾಜಗೋಪಾಲ ಬಿ. ಎ. ಧಾರವಾಡ

卐

ಆಶೆಯೊಂದು ದೈವ್ವದ ಸಂತಾನ. ಮೊದಮೊದಲು ಅದು ಬೇಕಾದುದನ್ನು ಒದವಿಸಿಕೊಡುವಂತೆ ಮೋಹವನ್ನು ಹುಟ್ಟಿಸಿದರೂ, ಮುಂದೆ ಮುಂದೆ ತಂದೆ-ತಾಯಿಗಳನ್ನೂ ಹರಿದುತಿನ್ನುವಂತಹ ಹೃದಯಹೀನ ಕಾರ್ಯವನ್ನು ಮಾಡುವುದು. ಆಶೆಯೇ ದುಃಖದ ತಾಯಿ—ತಂದೆ!

卐

ಹೆಸರು ತಾರಣ: ದೃಢ ದೇಹ. ಹುರಿಗಟ್ಟಿದ ಕೈಕಾಲುಗಳೇ ಅವನ ಅಂದವನ್ನು ಹೆಚ್ಚಿಸಿವೆಯೆನ್ನಬೇಕು. ಆ ಮೀಸೆಯಾಗಲೇ ಬೆಳೆದು ಬಾಗಿ ಮಿಂಚುತ್ತಿದೆ. ಇಷ್ಟಪಟ್ಟರೆ ಕಠಾರಿಯ ಚೂಪೂ ಬಂದೀತು. ಆದರೆ ಅದು ಅವನಿಗೆ ತಿಳಿಯದು. ಇನ್ನು ಅದನ್ನು ಕನ್ನಡಿಯಲ್ಲಿ ನೋಡಿಕೊಂಡು ತೀಡುವ ವಿಚಾರವೆಲ್ಲಿ? ಎಣ್ಣೆ ಹಚ್ಚಿ ಬಾಚಿ, ತನ್ನ ಗೆಳತಿ-ಹೆಂಡತಿ-ಪಾರ್ಥಿವೆಗೆ ಮೊಗವೆತ್ತಿ ಮುಗುಳೆರೆಯುವ ಗೆಲವೆಲ್ಲಿ ಬಂದೀತು!

ಆದರೂ ಪಾರ್ಥಿವೆಯೆಂದರೇ ಅವನ ಪ್ರಾಣ! ಪಂಚಪ್ರಾಣ! ಅವಳ ಕಂಗಳಲ್ಲಿ ದುಂಬಿಗಳು ಎರಡು ಸೆರೆ ಸಿಕ್ಕಿರುವುವೆಂಬ ಭ್ರಮೆಯಂತೂ ಸಹಜವಾಗಿ ಅವಳ ತುಟಿಯಲ್ಲಿ ಮುಗುಳನ್ನರಳಿಸುತ್ತಿತ್ತೋ ಏನೆಂದು ಹೇಳಲಾರೆ! ಹೇಗೂ ಆ ನಯನಗಳು ಕಾತರವನ್ನು ಬೆಳಗುತ್ತಿದ್ದುವು. ಹತ್ತಿರ ಹತ್ತಿರವಾಗಿ ಸೂಕ್ಷ್ಮವಾಗಿ ಪರೀಕ್ಷಿಸಿ ಮುಚ್ಚಿಕೊಂಡುವೆಂದರೆ ಆನಂದಾಶ್ರು ಬಿಂದುವಾಗಿ ಹೊರಳಿ ಮುತ್ತಿನಂತೆ ಮಿರುಗುವುದು.

ತಾರುಣ್ಯದ ಮುಗುಳು ವ್ಯರ್ಥವೆನ್ನುವಂತೆ, ಹೃದಯದ ಕರೆ ಹುಸಿಯೆನ್ನುವಂತೆ, ಜೀವ ಮಾತ್ರ ಬಯಸಿದುದನ್ನು ನುಡಿಯಲಾರದಂತೆ ಅವರ ಸಂಬಂಧವಾಗಿದ್ದಿತೆನ್ನಬೇಕು!

ಅವರಿಬ್ಬರ ಬಾಳ್ವೆಯಲ್ಲಿ ಮತ್ತೊಂದು ಹೂವು ಮೂಡದೇ ಇದ್ದುದನ್ನು ಆ ಊರಿನವರೆಲ್ಲಾ ತಿಳಿದಿದ್ದರು. ಆದರೆ ಅವರಿಗೆ ತಾತ್ಸಾರವಿರಲಿಲ್ಲ. 'ಅಯ್ಯೋ ಮಂಕರೇ' ಎನ್ನಲು, ನಗೆಗೀಡು ಮಾಡಲು, ಸಾಧ್ಯವೇ ಇಲ್ಲವೆನ್ನುವಂತೆ ಪ್ರತಿಯೊಬ್ಬ ತಿಳಿದ ವ್ಯಕ್ತಿಯ ರೀತಿಯಾಗಿದ್ದಿತೆನ್ನಬೇಕು! ತಾರಣನೆಂದರೆ ಎಲ್ಲರಿಗೂ, ಯಾರಿಗೂ, ಅಂತಹ ಆಶೆ. ಅವನ ನಡಿಗೆಯೇ ಅವರನ್ನು ಬದಲಿಸಿ ಬಿಡುತ್ತಿತ್ತೋ ಹೇಗೋ!

ತಾರಣನ ತಂದೆ ತೀರಿಕೊಂಡು ಹತ್ತು ವರ್ಷಗಳುರುಳಿವೆ. ಪಾರ್ಥಿವೆಯಂತೂ ಹುಟ್ಟಿದಾಗಲೇ ತಂದೆ-ತಾಯಿಗಳನ್ನು ಕಳೆದುಕೊಂಡವಳು. ಸಾಕಿದಾತ ತಾರಣನಿಂದ ದವಸ-ದಕ್ಷಿಣೆ ಪಡೆದು ಕಳುಹಿಬಿಟ್ಟಿದ್ದ; ಇಬ್ಬರ ಬಾಳು ಸಂಗಮವಾಗಿದ್ದಿತು. ಇಬ್ಬರೂ ಹತ್ತಿರ ಹತ್ತಿರ ಸೇರಿದಾಗ, ಅವರ ನಯನಗಳಲ್ಲಿ ಒಬ್ಬರ ಮೂರ್ತಿ ಒಬ್ಬರಲ್ಲಿ ಮೂಡಿದಾಗ, ಆಶೆಯೊಂದು ಮೂಕವಾಗಿ ಕೊರೆಯುತ್ತಿತ್ತು. ಅದನ್ನು ಗುರುತಿಸಿ ಹೆಸರಿಡಲು ಬಹಳ ಕಾಲವೇ ಅವರಿಗೆ ಬೇಕಾಯಿತು. ಏಕೆಂದರೆ ಅವರ ಸ್ವಭಾವವೇ ಕಾರಣವೆನ್ನಬೇಕಷ್ಟೆ.

ಹೇಗೂ ತಾರಣ ತನ್ನ ಹೊಲದ ಹಸುರಿನ ಮೇಲೆ ನಿಂತಾಗಲಂತೂ ಪಾರ್ಥಿವೆ ಬಂದಳೆಂದರೆ ತೀರಿತು; ಅವನ ಜೀವ ದೇಹವನ್ನು ನಡೆಸುವುದು. ಅವನ ನಯನಗಳು ಮಿಂಚಿ ಅವಳ ನಯನಗಳಲ್ಲಿಯ ಬೆಳಕನ್ನು ಹುಡುಕುವುದು; ತೋಳುಗಳು ಅವಳ ಸುಕುಮಾರ ದೇಹವನ್ನು ಮೃದುವಾಗಿ ಬಳಸಿ ಹಿಡಿದುಬಿಡುವುವು.

ಒಂದು ಬಾರಿ ಗಗನದಲ್ಲಿ ಮುಗಿಲು ಕವಿದಿತ್ತು; ಬಿರುಗಾಳಿ ಬೆನ್ನೇರಿದ್ದಿತು. ಮಿಂಚು 'ಫಳಾರ್' ಎಂದು ಹರಿಯುತ್ತಿತ್ತು. ಆಗಲೇ ಆ ಜೋಳದ ಹೊಲದ ಬದುವಿನಲ್ಲಿ ತಾರಣ-ಪಾರ್ಥಿವೆ ಮೈಮರೆತಿದ್ದರು.

ಬಳ್ಳಿಮಿಂಚು ಹೊರಳಿತು. ಎತ್ತರವಾಗಿ ಬೆಳೆದಿದ್ದ ಜೋಳದ ಗರಿಗಳು ಮೈತೀಡಿಬಂದ ಗಾಳಿಗೆ ಅಲುಗತೊಡಗಿದ್ದುವು. ಒಮ್ಮೆ ನುಗ್ಗಿ ಬಂದ ಗಾಳಿಯಂತೂ ಇಡಿಯ ಹೊಲವನ್ನೇ ಬಾಗಿಸಿ ತೂಗಿಸಿಬಿಟ್ಟಿತು. ಮತ್ತೆ ಮಿಂಚು ಮುಗಿಲ ಮೈಯನ್ನೆಲ್ಲಾ ಬೆಳಗಿ ಮರೆಯಾಯಿತೋ ಇಲ್ಲವೋ, ಸಿಡಿಲು ಸಿಡಿಯಿತು—ಅಲ್ಲ; ಅವರಿಗೆ ಗಟ್ಟಿಯಾಗಿ ಹೇಳಿತು! ಏನೆಂದು ತಾರಣನೂ ಒಮ್ಮೆಗೇ ಹೇಳಲಾರದಾಗಿದ್ದ. ಪಾರ್ಥಿವೆಯನ್ನು ದಿಟ್ಟಿಸಿ ನೋಡಿದ. ಹೂವು-ಹನಿಗಳು ಪುಟಪುಟನೆ ಉದುರಿದುವು. ಇಬ್ಬರ ಮೈನಿಮಿರಿದ್ದಿತು.

"ನಿನ್ನಂತಹಳು..........ಬೇರೆಯಿಲ್ಲ .. ....ಪಾರ್ಥಿ!"

"ಅಲ್ಲ.......ನಿನ್ನಂತಹವರು ಇಲ್ಲವೇ ಇಲ್ಲ....!...."

"..... ...ನಮಗೆ ನಿನ್ನ ರೂಪಿನ ಬೇರೊಬ್ಬರು ಬೇಡವೇ? ..."

"......................"

" ....ಬೇಕೇ ಬೇಕು !...."
ಪಾರ್ಥಿವೆ ಉತ್ತರಿಸಲಿಲ್ಲ. ತನ್ನ ಕೈಯನ್ನು ಮೆಲ್ಲಗೆ ಅವನ ವಿಶಾಲವಾದ ಎದೆಯಮೇಲೆ ಸವರಿದಳು........

"............ದೇವರು ನಮಗೆ ಆ ಭಾಗ್ಯ ಕೊಡಲಿಲ್ಲ .. ...."
ತಾರಣನಿಗೆ ಈವರೆಗೂ ತಿಳಿಯದ ವಿಚಾರವಿದು. ತನ್ನಂತೆಯೆ ಪಾರ್ಥಿವೆಯದೂ ರೀತಿಯೆಂದು ಅವನಿಗೆನಿಸಿರಲಿಲ್ಲ. ಆದ್ದರಿಂದಲೇ ಅವನು ಕೊಂಚ ದಿಟ್ಟಿಸಿ ನೋಡಬೇಕಾಯಿತು. ಅವನ ಹೃದಯದಲ್ಲಿ ಚಿಮ್ಮಿದ ಬಗ್ಗೆಯೊಂದರ ಕುರುಹಾಗಿ ಗೆಳತಿಯನ್ನು ತನ್ನ ಎದೆಗೆ ಅವಚಿಕೊಂಡು ಗಗನವನ್ನು ನೋಡಿದ—

ಕಾರ್ಮುಗಿಲು ತಾವೇ ತಾವು ಹರಿಯುತ್ತಿದ್ದುವು. ಆದರೆ ಮಳೆಯು ಮಾತ್ರ ಸುರಿಯತೊಡಗಿರಲಿಲ್ಲ. ದಿಟ್ಟೆಯನ್ನು ಧರೆಗಿಳಿಸಿದ. ಹಸುರಾದ ಜೋಳದ ಸೊಬಗು ಅವನ ಮನಸ್ಸಿಗೆ ಚೇತನವನ್ನು ತುಂಬಿತೆನ್ನಬೇಕು.

" ....ನಾಳೆ ಸೋಮವಾರ ಶಿವನನ್ನು ಪ್ರಾರ್ಥಿಸೋಣ ..."
" ....ನಾನು ಅದನ್ನೂ ಮಾಡಿಯಾಯಿತು ... .."
ತಾರಣನಿಗೆ ಅಚ್ಚರಿಯಾಯಿತು. ಆದರೆ ಮಾನ ಮಗುಚಿಬಿಟ್ಟಿತು.
" ಇಬ್ಬರೂ ಮಾಡೋಣವಂತೆ.... ..."
"............ ...."
ಉತ್ತರ ಬರಲಿಲ್ಲವಾಗಿ ಕೈಗಳಿಂದ ಅವಳ ಮೊಗವನ್ನು ಹಿಡಿದು ನೋಡಿದ. ಇದ್ದಕ್ಕಿದ್ದಂತೆಯೇ ಕಂಬನಿ ಧಾರೆಯಾಗಿ ಹೊರಳಿತು. ಅವನ ಎದೆಯು ಕೊರಗಿತು; ನಯನವೂ ತುಂಬಿತು. ಒಡೆದ ಕಂಠದಿಂದ—

"............ಮತ್ತೇನು ?........ "
ಅವಳೇ ಕಂಬನಿಯನ್ನು ತೊಡೆದುಕೊಂಡಳು. ಮೆಲ್ಲಗೆ ಅವನ ನಯನವನ್ನೂ ಸವರಿದಳು.

" ಇಬ್ಬರೂ ಮಾಡೋಣವಂತೆ............ಆದರೆ...."
" ಹಾಗಾದರೆ ಬೇಡಬಿಡು.............."
" ಇಲ್ಲ......... ....ಮಾಡೋಣವಂತೆ...."
" ಹೋಗಲಿ ....ಇನ್ನೊಂದು.... ...ನಮ್ಮ ವಂಶದ ಕಾವಲಿಗೆ ಇರುವ ದೆವ್ವನ್ನ ಕೇಳೋಣಾ.... ...?...."

ಪಾರ್ಥಿವೆಯ ನಯನ ಒಮ್ಮೆಗೆ ಹೊಸ ವಿಚಾರದಿಂದ ಮಿಂಚಿತು. ಭಯದ ದನಿಯೊಂದು ಹೃದಯದ ಒಳಗೇ ಎದ್ದಿರಬಹುದು. ಆದರೂ ಚಿಂತೆಯ ಕಳೆ ಹಾರಿದಂತೆ ಮೊಗ ಬೆಳಗಿತು. ತಾರಣ ಅದನ್ನರಿತೇ ಹೇಳಿದ:—

" ನಮ್ಮ ವಂಶದ ಕಾವಲಿಗೆ.........ಆ ದೆವ್ವನಿದೆ....ಈ ವಾರ ಹಬ್ಬಮಾಡಿ ಕೇಳಿಕೊಳ್ಳೋಣವಂತೆ ... ತನಗೆ ಕಷ್ಟವಾದಾಗಲೆಲ್ಲಾ ಅಪ್ಪ ಮಾಡ್ತಿದ್ದರಂತೆ ... ಮಳೆಯೇ ಬೀಳದೆ ಹೊಲ ಸೀಯುವಾಗ ಒಂದು ಸಲ ನೀರು ಸುರಿದು ಉಳಿಸಿತ್ತಂತೆ .... ಈಗ .... ನಾವು ಕೇಳೋಣವಂತೆ............"

" ಹೂ........ಆಗಲಿ........"
ತಾರಣನಿಗೆ ಸಂತೋಷವಾಯಿತು ಅವನ ತೋಳುಗಳು ಸ್ವಲ್ಪ ಬಿಗಿಯಾದುವು ಪಾರ್ಥಿವೆಯ ಗಮನಕ್ಕೆ ಮಳೆ ಬಂದಿತು. ಒಮ್ಮೆಲೇ ಗಗನದ ಮಿಂಚು ಕಣ್ಣು ಮುಚ್ಚಿಸಿತು.
" ಮನೆಗೆ ಹೋಗೋಣ........"
ತಾರಣ ಮರುನುಡಿಯಲಿಲ್ಲ. ಎದ್ದು ನಿಂತು ತನಗಾಗಿಯೇ ಕಾದಿದ್ದ ಎತ್ತುಗಳ ಕಡೆಗೆ ಹೆಜ್ಜೆಯಿರಿಸಿದ. ಅವನ ಹಿಂದೆಯೇ ಪಾರ್ಥಿವೆ....... !

೨

ಹೊಲದ ಕಾವಲಿಗಾಗಿ ಬದುವಿನಲ್ಲಿದ್ದ ಆ ದೆವ್ವದ ಕಲ್ಲಿಗೆ ಹಬ್ಬ ಮಾಡಿದುದಾಯಿತು. ಅಳಗ-ಬಳಗದ ಹೋತವೊಂದರ ಬಲಿಯೂ ಆಯಿತು. ಅಮಾವಾಸ್ಯೆಯ ಇರುಳಿನಲ್ಲಿ ಆ ದೆವ್ವ ಸುಪ್ರೀತವಾಯಿತು

ಮರುದಿನ ನಸುಕಿನಲ್ಲಿ ತಾರಣನ ಬಾಗಿಲಲ್ಲಿ ಕೂಸೊಂದರ ಕ್ರಂದನ ಕರೆಯಿತು. ಕೂಸಿನ ಚಿಂತೆಯಲ್ಲೇ ಕಣ್ಮುಚ್ಚಿ ಮಲಗಿದ್ದ ಪಾರ್ಥಿವೆ ಜಗ್ಗನೆದ್ದು ಓಡಿಬಂದಳು. ಅಳುವ ಕಂದನನ್ನು ಎತ್ತಿಕೊಂಡ ಆ ತಾಯಿಯ ಎದೆ ತುಂಬಿ ಭಾರವಾಯಿತು. ಇನ್ನು ಅವಳ ಆನಂದಕ್ಕೆ ಬೇರೆಯ ಸಾಕ್ಷಿಯೇಕೆ !

ಹೇಳಿ ಹೆಣೆಯಿಸಿದ ತೊಟ್ಟಿಲು ಸಿದ್ಧವಾಯಿತು. ಕೇಳಿದವರಿಗೆಲ್ಲ ಕೂಸು ತನ್ನದೆಂದೇ ಹೇಳಿದಳು. ಕತ್ತಲ ಕೋಣೆಯಲ್ಲೇ ಹಾಸಿಗೆಯಲ್ಲಿ ಕುಳಿತುಬಿಟ್ಟಳು. ಮನೆಯ ದಾಸಿ ಲಂಚವನ್ನು ಸಂತೋಷದಿಂದ ಪಡೆದು ಊರಿನ ಹೆಂಗೆಳೆಯರಿಗೆಲ್ಲಾ ಹೇಳಿಬಂದಳು:—' ಅಂದು ರಾತ್ರಿಯೇ ತನ್ನ ಯಜಮಾನಿ ಗಂಡು ಹಡೆದಳು" ಎಂದು.

ಒಬ್ಬೊಬ್ಬರಾಗಿ ಬಂದು ಹಣತೆಯ ಕಿರುಬೆಳಕಿನಲ್ಲಿ ಕೂಸು ತಾಯಿಯ ಎದೆಹಾಲನ್ನು ಹೀರುವುದನ್ನು ಕಂಡು ಅನುಮಾನಪಡದೆ ಸಿಕ್ಕರೆ ತಿಂದು ಹೊರಟರು. ತಾರಣನ ಎದೆ ಮನೆಯಂತೆಯೇ ತುಂಬಿತು. ಅವನು ಮೂಕನಂತಾಗಿ ಬಿಟ್ಟಿದ್ದ !

ಹತ್ತು ದಿನಗಳ ಹೊಲೆತನ ಕಳೆಯಿತು. ತಾರಣ ಸಂಪ್ರದಾಯವನ್ನು ತಿಳಿದವರಲ್ಲಿ ವಿಚಾರಿಸಿದ. ಶಾಸ್ತ್ರವಿಧಿಗಳು ಸಾಂಗವಾಗಿ ನೆರವೇರಿದುವು. ಜೋಯಿಸರು ಮಗುವಿಗೆ ' ವ್ಯಯ ' ಎಂದು ನಾಮಕರಣ ಮಾಡಬೇಕೆಂದರು. ಪಾರ್ಥಿವೆಯೂ ಒಪ್ಪಿದಳು. ಶಾಸ್ತ್ರಘೋಷವಾಗಿ ಹೋಯಿತು.

ಅಂದಿನ ವರೆಗೆ ಕೂಡಿಸಿದ್ದ ಧನದಲ್ಲಿ ಎಷ್ಟು ವೆಚ್ಚವಾಯಿತೆಂದು ತಾರಣನೇ ಅರಿಯ. ಎಣಿಸಿ ನೋಡುವ ಇಚ್ಛೆಯೂ ಅವನನ್ನು ಕಾಡಿರಲಿಲ್ಲವೆನ್ನಬೇಕು.

ಕೂಸಿನ ಮೈ ತುಂಬಿದ್ದಿತು : ಅಗಲವಾದ ಕಣ್ಣುಗಳು; ದೊಡ್ಡ ಬಾಯಿ, ಮೂಗು; ದಪ್ಪನಾದ ಹುಬ್ಬು; ತಲೆಯ ತುಂಬ ಕೂದಲು; ಉದ್ದವಾದ ಕೈ-ಕಾಲುಗಳು; ನೋಡಿದವರಿಗೆ ಅಚ್ಚರಿಯಾಗುತ್ತಿತ್ತು. ಎದೆಯ ಹಾಲು ಸಾಲದೆಂದು ಅವನ ಅಳುವೇ ಸೂಚಿಸಿತು. ಹಸುವಿನ ಹಾಲೂ ಕ್ರಮವಾಗಿ ಹೆಚ್ಚಾಗಬೇಕಾಯಿತು. ಅಂತೂ ತಿಂಗಳು

ಕಳೆಯಿತು. ವರ್ಷವೂ ಆಯಿತೆನ್ನಲು ವ್ಯಯನಿಗೆ ತೊಟ್ಟಿಲು ಬೇರೆಯೆ ಬೇಕಾಯಿತು.

ಅವನ ಕಾಲಿನ ಒದೆತವಂತೂ ತಾಯಿಗೆ ನೋವು ಮಾಡುತ್ತಿತ್ತು. ಆದರೆ ಪಾರ್ಥಿವೆಗೆ ಅದು ಪ್ರೀತಿಯ ಪೆಟ್ಟು. ಮತ್ತೊಂದು ವರ್ಷ ಕಳೆಯುವ ಮುಂಚೆಗೆ ವ್ಯಯ ಹೆಜ್ಜೆಹಾಕುವಂತಾದ. ತಾಯಿಗೆ ಒಂದು ಕಷ್ಟವೇನೋ ತಪ್ಪಿತೆನ್ನಬಹುದು!

ಮೂರು ವರ್ಷ ತುಂಬಿದ ಮಗನ ಊಟವನು ನೋಡಿ ಪಾರ್ಥಿವೆಗೆ ಆಶ್ಚರ್ಯವಾಗದಿರಲಿಲ್ಲ ಅವಳಿಗೇಕೆ ಭಯವಾಗಲಿಲ್ಲವೋ ಹೇಳಬರದು. ಐದು ವರ್ಷದ ಬಾಲಕ ತಂದೆಯಷ್ಟೇ ಊಟಮಾಡತೊಡಗಿದ. ಆದರೆ ತಂದೆಯೂ ಮಗನ ಹೊಟ್ಟೆಯನ್ನು ಅಳೆವರೂ ಅಳೆಯದಂತೆ ಇದ್ದುಬಿಟ್ಟ. ಅವನಿಗೆ ಏನು ಹೇಳಲೂ ಸಂಕೋಚ.

ದಂತಾಗಿರಬೇಕು; ಇಲ್ಲವೇ, ಮಗನು ಪುಷ್ಟನಾಗಿ ತನ್ನಂತೆಯೇ ಬಲಶಾಲಿಯಾಗುವನೆಂದು ಆ ತಂದೆಯ ಧೋರಣೆಯಿರಬೇಕು!

ವ್ಯಯನಿಗೆ ಜೊತೆಗಾರರು ಸಿಕ್ಕತೊಡಗಿದ್ದರು. ಆದರೆ ಅವನ ಪೆಟ್ಟು ಸಹಿಸುವುದು ಮಾತ್ರ ಅವರಿಗೆ ಕಷ್ಟತರವಾಗಿತ್ತು. ಒಬ್ಬೊಬ್ಬರಾಗಿ ದೂರುಹೊತ್ತರು. ಪಾರ್ಥಿವೆಗೆ ಹೇಳಿಕೊಂಡರೂ ಪ್ರಯೋಜನವಾಗಲಿಲ್ಲ. ತಾವೇ ಹಿಂಜರಿಯತೊಡಗಿದರು. ಕಡೆಗೆ ತಾರಣ ಹೊಲದ ಕಡೆಗೆ ಹೊರಟಾಗ ಮಗನನ್ನೂ ಕರೆದೊಯ್ಯತೊಡಗಿದ. ಒಂದು ಕ್ಷಣವಾದರೂ ಅವನನ್ನು ಬಿಡದೆ ನೋಡಿಕೊಳ್ಳತೊಡಗಿದ.

ವ್ಯಯ ಕುಮಾರನಾದ. ಆದರೆ ತಂದೆಯ ಕೆಲಸದಲ್ಲಿ ನೆರವಾಗಿದ್ದನು. ಉಳುವುದು, ಅಗೆಯುವುದು, ಸೌದೆ ಸಿದ್ಧಮಾಡುವುದು, ... ಯಾವ ಕೆಲಸದಲ್ಲೂ ಅವನು ತಂದೆಯಂತೆಯೇ! ಅಂತೂ ಅವನ ಬೆಳವಣಿಗೆ ಯಾರಿಗೂ ಆಶ್ಚರ್ಯಕರವಾಗಿದ್ದಿತು. ಅವನ ಕೆಲಸವನ್ನು ಕಂಡವರೆಲ್ಲಾ ಮೂಗಿನ ಮೇಲೆ ಬೆರಳಿರಿಸಿ ಬೆರಗಾಗುವವರೇ! ಈ ಕಾರಣದಿಂದಲೇ ತಂದೆ-ತಾಯಿಗೆ ಎಲ್ಲಿಲ್ಲದ ಸಂತೋಷ!

ಆದರೆ ಕಾಲವು ಹೀಗೆಯೆ ಕಳೆಯಲಿಲ್ಲ ವ್ಯಯನ ಎತ್ತರಕ್ಕೆ ಮನೆಯ ಬಾಗಿಲೂ ಕಿರಿಯದಾಯಿತು. ಅವನ ಬೆಳೆಯಂತೂ ಕಣಜ ತುಂಬಿ ಅಂಗಳದಲ್ಲಿ ರಾಶಿಯಾದರೂ ಸಾಕು ಸಾಲದಂತಾಗಿತ್ತು–ತಿನ್ನುವುದಕ್ಕೆ. ಅದೇ ಚಿಂತೆ ತಾರಣವನ್ನು ಕೊರೆಯಿತೇನೋ; ಹೆಚ್ಚು ಜಮೀನು ಕೊಳ್ಳಲು ಯತ್ನಿಸಿದ. ಇದ್ದಬಿದ್ದ ಹಣವೆಲ್ಲಾ ಖರ್ಚಾಯಿತು.

ಒಂದು ದಿನ ಹೊಲದಿಂದ ಬಂದಾಗ, ಮನೆಯ ಬಾಗಿಲುವಾಡ ವ್ಯಯನ ತಲೆಗೆ ತಗುಲಿ ಅವನ ಕಣ್ಣುಗಳು ಕೆಂಪಾದುವು. ಕೂಡಲೇ ಬಾಗಿಲನ್ನು ಮುರಿದುಹಾಕಿದ. ಹಾರೆಯಿಂದ ಬಾಗಿಲುವಾಡವನ್ನೇ ಮೀಟಿಬಿಟ್ಟ.

ಹೊರಗೆ ಹೋಗಿದ್ದ ತಂದೆ ಬಂದು ನೋಡಿ ಬೆದರಿದ ಹೀಗೆ ಮಾಡಬಾರದಿತ್ತೆಂದು ಮಗನನ್ನು ನುಡಿಸಿದ. "ಬೇರೆಯ ಮನೆಯನ್ನೇ ಕಟ್ಟಿದರಾಯಿತು" ಎಂದು ಉತ್ತರ ಬಂದಿತು.

ಅಂತೆಯೇ ಹಗಲು-ರಾತ್ರಿಯ ದುಡಿಮೆಯಾಗಿ ಹೊಸ ಮನೆ ಬೆಳೆಯತೊಡಗಿತು. ತಾರಣನಂತೂ ಮಗನ ರೀತಿಗೆ ಬೆದರಿಕೊಂಡೇ ಸಹಾಯಕನಾದ. ಮನೆಯಲ್ಲಿದ್ದ ಒಡವೆ-ವಸ್ತುಗಳನ್ನೂ ಮಾರಿ ಮರ-ಮುಟ್ಟುಗಳನ್ನು ಒದಗಿಸಿದ.

ಹೊಸ ಮನೆಯ ಗೋಡೆಯನ್ನು ನೋಡಿಯೇ ಊರಿನ ಮಂದಿಗೆ ಬೆರಗಾಯಿತು. ಒಂದಿಬ್ಬರು 'ಅಬ್ಬಾ' ಎಂದುದೂ ಉಂಟು. ಅಲ್ಲಿಯೇ ಮಣ್ಣು ಕಲಸುತ್ತಿದ್ದ ವ್ಯಯನ ದಿಟ್ಟಿ ಅವರತ್ತ ಹೊರಳಿದುದನ್ನು ಕಂಡು ಒಳಗೊಳಗೇ ಉಡುಗಿಹೋಗಿದ್ದರು.

ದಾದಿಯು ಪಾರ್ಥಿವೆಯ ಬಳಿ ಕುಳಿತು "ಅಯ್ಯೋ ದೆವ್ವದ ಮನೆಯಾಯ್ತೇ?" ಎಂದು ಬಿಟ್ಟಳು. ಆ ತಾಯಿ–ಪಾರ್ಥಿವೆಯ ಮೈ 'ಜುಂ' ಎಂದು ಬೆವರುಕ್ಕಿತು.

"ಛೀ ಕೆಟ್ಟ ಮಾತಾಡ್ತೀಯ...... !"

"...................!"

ದಾಸಿ ಉತ್ತರಿಸಲು ಸಿದ್ಧಳಿದ್ದಳು. ಆದರೆ ವ್ಯಯ ಬಹಳ ದೂರದಿಂದಲೇ ಯಾವ ಕಾರಣಕ್ಕೋ ತನ್ನ ಕಡೆಗೆ ದಿಟ್ಟಿಸಿ ನೋಡಿದುದರಿಂದ, ಬಾಯಿ ಹಿಡಿದಳು. ಏನೋ ಅವಳನ್ನು ಅದುಮಿಬಿಟ್ಟಂತಾಗಿರಬೇಕು!

ಗೋಡೆಗಳು ಕೋಟೆಯೊಂದರ ನೆನಪು ತರುವಂತೆ ನಿಂದುವು. ದೊಡ್ಡ ದೊಡ್ಡ ತೊಲೆಗಳು ಸಿದ್ಧವಾದುವು. ವ್ಯಯನ ಹೇಳಿಕೆಯಂತೆ ಬಾಗಿಲನ್ನು ನಿರ್ಮಿಸಲು ಇಬ್ಬರು ಮೂವರು ಬಡಗಿಗಳು ಒಂದಾಗಿ ಕಲೆತರೂ ಕಷ್ಟವಾಯಿತು. ಅದನ್ನೆಲ್ಲಾ ನೋಡುತ್ತಿದ್ದ ವ್ಯಯನು ತನ್ನ ಮನೆಗೆ ಬಾಗಿಲೇ ಬೇಡವೆಂದು ಬಿಟ್ಟನು.

"ಹೇ ಎಲ್ಲಾದರೂ ಉಂಟೇ ... ಮಗು.......!"

"ಇಲ್ಲದೇನು ಮತ್ತೆ . ..."

"ಬಾಗಿಲಿಲ್ಲದೆ ಮನೆಯುಂಟೇ........?"

"ನಮಗೆ ಬೇಕಿಲ್ಲಪ್ಪ........!........"

ಅವನ ಗಡುಸಾದ ಉತ್ತರಕ್ಕೆ ತಾರಣ ತೆಪ್ಪಗಾದ. ಮತ್ತೆ ಮಾತೆತ್ತುವ ಧೈರ್ಯವೂ ಆಗಲಿಲ್ಲವೆನ್ನಬೇಕು.

ಪಾರ್ಥಿವೆಯು ಕಡೆಗೆ ಹೊರಳಿ ನೋಡಿದ. ಆದರೆ ಅವಳು ಯಾವಾಗಲೂ ಮಗನ ಪಕ್ಷಪಾತಿ. ಅವಳ ವಿರೋಧವಿರಲಿ, ಗಂಡನಿಗಾಗಿ ಒಂದು ಮಾತೂ ಇಲ್ಲವಾಯಿತು.

ಬಾಗಿಲಿಲ್ಲದ ಮನೆ ಭಯಂಕರವಾಗಿ, ಊರಿನ ಎಲ್ಲಾ ಮನೆಗಳಿಗೂ ಎತ್ತರವಾಗಿ ನಿಂತಿತು.

ಊರಿನ ಜನರು ಏನಾದರೂ ಅನ್ನುವವರೇ ಆದರೆ ವ್ಯಯನ ರೂಪು ನೆನಪಾಗಿ, ಯಾರೊಬ್ಬರ ನುಡಿಯೂ ಗಂಟಲಿನಿಂದ ಒಳಕ್ಕೇ ಜಾರಿಕೊಂಡು ಬಿಡುತ್ತಿದ್ದಿತೆನ್ನಬೇಕು. ವ್ಯಯನೊಬ್ಬನೆಂದರೆ ಮಾತೇ ಕೆಲಸ!.... . ಯಾವುದರಲ್ಲೂ ಇಪ್ಪತ್ತು ಮಂದಿಗೆ ಸವಾಲಂತೆ! ಅವನ ಹೆಜ್ಜೆಗಳ ಸಪ್ಪಳ ಕೇಳಿಸುವುದೇ ತಡವಾದೀತು!.... ...ಅವರು ಯಾವ ಮಾತನ್ನೂ ನಿಲ್ಲಿಸಿಬಿಡುವರು.

ವ್ಯಯನ ಕಾಯವಿರಲಿ; ಮನೆಯಿರಲಿ; ಹೊಲದಲ್ಲಿ ಬೆಳೆಯೂ ಅದ್ಭುತವಾದುದೇ! ತನಗೆ ಸಹಾಯಕ್ಕೆಂದು ಅವನು ಯಾರನ್ನೂ ಕರೆಯುತ್ತಿರಲಿಲ್ಲ; ಕೂರಿಯುತ್ತಿರಲಿಲ್ಲ. ತಂದೆಯನ್ನು ಏನಾದರೊಂದು

ಸಂಶಯದ ನಿವಾರಣೆಗಾಗಿ ಮಾತ್ರ ನುಡಿಸುವನು. ತನಗೆ ಸಮಾಧಾನ ತೋರದಿದ್ದರೆ ಹೇಗೋ ಕೆಲಸವನ್ನು ಸಾಧಿಸುವನು. ಬೇರೆಯ ರೈತರಲ್ಲಿ ಅವನು ವಿಚಾರನಪೇಕ್ಷಿಸಿದುದೇ ಇಲ್ಲ.

ಹಿಂದೆ ತಾರಣ ಬೆಳೆಯುತ್ತಿದ್ದುದಕ್ಕೆ ಹತ್ತುಮುಡಿ ಕಾಳುಕಡಿ ಮನೆಗೆ ಬಂದು ರಾಶಿಯಾಗುವುದು. ಆದರೆ ಅಷ್ಟು ಮೂವರ ಸಂಸಾರಕ್ಕೆ ಸಾಕಾದಷ್ಟು! ಮಗನ ವಿಚಾರವನ್ನು ತಂದೆ-ತಾಯಿಗಳು ಬೇರೆ ಯಾರಲ್ಲಿಯಾಗಲೀ ಹೇಳಿಕೊಳ್ಳುವುದಕ್ಕೆ, ನಾಚಿಕೆಯಲ್ಲವೇ ಭಯವೂ ತುಂಬಿದ್ದಿತೆನ್ನಬೇಕು. ಪಾರ್ಥವೆಯಂತೂ ಗಂಡನಿಂದಲೂ ಮರೆಮಾಚುವವಳು. ಮಗನನ್ನು ಪ್ರತ್ಯೇಕವಾಗಿಯೇ ಕುಳ್ಳಿರಿಸಿ ಮುದ್ದೆಗಳನ್ನು ಬಡಿಸುವಳು. ಒಂದು ದಿನಕ್ಕೆ ಎಷ್ಟು ಮುದ್ದೆಗಳನ್ನು ಮಗನೊಬ್ಬನೇ ಮುಗಿಸುವನೆಂದು ಎಣಿಸುವುದಕ್ಕೂ ಅವಳು ಹೆದರಿರಬೇಕು! ಆದರೆ ಮಗನು ಮಲಗಿ ನಿದ್ರೆಹೋದನೆಂದು ತಿಳಿದು, ಒಂದೊಂದು ದಿನ ದೀಪದ ಬೆಳಕಿನಲ್ಲಿ, ಅವನ ತುಂಬಿದ ಮೈಯನ್ನು ನೋಡಿ, ಮೆಲ್ಲಗೆ ತನ್ನ ಹಾಸಿಗೆಯತ್ತ ಜರುಗುವಳು. ಅವನ ಶಕ್ತಿಯ ಕುರುಹಾಗಿ ಮಿರಿಮಿರಿ ಮಿಂಚುವ ಹರಯದ ಮೀಸೆಯನ್ನು ನೋಡಲು ಅವಳಿಗಂತೂ ಆನಂದವಾಗಿ ಸಮಾಧಾನದಿಂದ ನಿದ್ದೆ ಬರುತ್ತಿದ್ದಿತೆಂದರೂ ಸರಿಯೆ!

ಒಮ್ಮೆ ತಾರಣ ಏಕಾಂತದಲ್ಲಿ ಮಗನ ವಿಚಾರವೆತ್ತಿದುದುಂಟು. ಆದರೆ ಅದು ತನ್ನ ಕಿವಿಗೆ ಬೀಳಲೇ ಇಲ್ಲವೆನ್ನುವಂತೆ ಪಾರ್ಥವೆಯಾಡಿದಳು.

"ನೋಡಿದ್ಯಾ ಮಗ....ಹಿಂಗಾದನೇ........"

"ಹೇಗಾದನು.... ....?"

ಹೆಂಡತಿಯ ದುರಗುಟ್ಟುವ ಮೊಗವನ್ನು ಕಂಡು ತಾರಣ ತಲೆ ತಗ್ಗಿಸಿಬಿಟ್ಟ. ಮತ್ತೆ ನೋಟವೆತ್ತಿ ಹೇಳಿದ........

"ಊರಿನ ಜನ..........."

ಅಂಗಳದಲ್ಲಿ ಏನೋ ಸದ್ದಾಯಿತು. ಅವನ ಬಾಯಿ ಕಟ್ಟಿತು. ಉಗುಳು ನುಂಗಬೇಕಾಯಿತು.

ಪಾರ್ಥವೆ ನಿಶ್ಶಬ್ದತೆಯನ್ನು ಮುರಿದಳು:—

"....ಏನಿಲ್ಲ ಬಿಡಿ........ಯಾರೇನಂತೆ........ಅವನೆಲ್ಲಾ ಸರಿಯಾಗಿದ್ದಾನೆ........" ಅಷ್ಟು ಹೇಳಿ ಅವಳು ಹೊರಳಿಕೊಂಡು ಮಲಗಿಬಿಟ್ಟಳು. ಅವಳ ಬೆನ್ನನ್ನು ಕಂಡ ತಾರಣ ತೆಪ್ಪಗಾದ. ಆದರೆ ನಿದ್ರೆ ಹತ್ತಲು ಮಗನ ಗೊರಿಕೆಯ ರಾಗ ಕ್ರಮೇಣ ಇಳಿಯುತ್ತಲೇ ಹೋಗಬೇಕಾಯಿತು!

ಹೇಗೂ ವ್ಯಯನ ಹರಯದ ದಿನಗಳು ಹೊರಳತೊಡಗಿದ್ದುವು. ಆ ಊರಿನ ಯುವಕರಲ್ಲಿ ಯಾರಿಗೂ ಅಸಾಧ್ಯವಾದಂತಹ ಹೊರೆಗಳನ್ನು ತಾನೇ ಹೊತ್ತು ತಂದು, ಅಂಗಳಕ್ಕೆ ಒಗೆದು, ಜಗುಲಿಯ ಮೇಲೆ ಕುಳಿತು; ಪಡುವಲಲ್ಲಿ ನೇಸರು ಬಾಗಿ ನೋಡಿ ಮರೆಯಾಗುವುದನ್ನು ಕಂಡರೂ, ಒಂದು ದಿನ ಉರುಳಿತೆಂದು ಅವನ ಮನಸ್ಸಿಗೆ ಬರುತ್ತಿದ್ದಿತೋ ಇಲ್ಲವೋ ಹೇಳಬರದು. ಅಂತೂ ಅವನ ಯೌವನವನ್ನು ಎಣಿಸುವುದೂ ಆ ಊರಿಗೆ ಅಸಾಧ್ಯ ಸಾಧ್ಯವಾಯಿತೆನ್ನಬೇಕು!

೩

ಹೇಗೂ ಕಾಲಚಕ್ರ ಮೌನದ ಮಳಲಿನಲ್ಲಿ ಉರುಳುತ್ತಿತ್ತು! ಜೀವಿಗಳ ಎದೆ ನಡುಗುವಂತೆ ಪ್ರಕೃತಿಯು ಇದ್ದಕ್ಕಿದ್ದಂತೆಯೇ ಮುನಿಯಿತು. ಗಗನದಲ್ಲಿ ಬರಿಯ ಬೆಳ್ಮುಗಿಲಿನ ಅಲೆಗಳೇ ಸಾಗತೊಡಗಿದ್ದುವು. ಜನ ಹೆದರಿಹೋದರು. ಮಳೆರಾಯನಿಗೆ ಹರಕೆಹೊತ್ತರು; ಮುಡುಪು ಮಾಡಿದರು. ಏನಾದರೂ ಆಗಸ ಕಣ್ಣುಬಿಟ್ಟು ನೋಡಲಿಲ್ಲ. ನೆಲದ ಬಾಯಾರಿಕೆ ಹಿಂಗುವಂತಾಗಲೇ ಇಲ್ಲ.

ಊರೆಲ್ಲ ಬೊಬ್ಬಿರಿದರೂ ವ್ಯಯ ತನ್ನ ಕಾರ್ಯದಲ್ಲಿ ನಿರತನಾಗಿ ಬಿಟ್ಟ. ಅವನು ಮಳೆರಾಯನಿಗೆ ಹರಕೆಯನ್ನೂ ಹೊರಲಿಲ್ಲ; ದೂಷಿಸಲೂ ಇಲ್ಲ.

ಹೊಲಕ್ಕೆ ನೀರು ಸಾಲದಾಯಿತು. ಬಾವಿಯೊಂದನ್ನು ಅಗೆದು ಬಿಟ್ಟು ನೀರುಹಾಯಿಸಿದ. ಊರಿಗೇ ಮಾರ್ಗದರ್ಶಕನಾದ. ಅನೇಕರು ಯತ್ನಿಸಿದರು. ವ್ಯಯನಂತೆ ಆಳವಾದ ಬಾವಿಯನ್ನು ತೋಡುವುದೇ ಅಸಾಧ್ಯವೆಂದು ಅರಿತರು. ತರುಬಿದವರೂ ಉಂಟು. ಆದರೆ ಅವನನ್ನು ಅಲುಗಿಸುವ ಯೋಗ್ಯತೆಯೂ ತಮಗಿಲ್ಲವೆಂದುಕೊಂಡಿರಬಹುದು!

ಮೊದಲು ಒಬ್ಬರು ಮೊರೆಹೊಕ್ಕರು. ವ್ಯಯ ನಿರಾಡಂಬರನಾಗಿಯೇ ನೆರವು ನೀಡಿದ. ಆದರೆ ಆ ಬಾವಿಯ ನೀರನ್ನು ಹಾಯಿಸಲು ಅವನೇ ನಿಲ್ಲಬೇಕಾಗಿತ್ತು. ವ್ಯಯನ ನೆರವು ದೊರಕಿದ್ದರೂ ತಾನು ಹಂದೆಯೆಂದುಕೊಂಡು ಆ ಯಜಮಾನ ಕೊರಗಿದ. ಆದರೆ ಊರಿನ ಜನಕ್ಕೆ ಕುಡಿಯಲು ಒಳ್ಳೆಯ ನೀರು ದೊರಕಿತೆಂದು ಅನೇಕರು ಅರಿತು ವ್ಯಯನನ್ನು ಹೊಗಳಿದರು

ಪಾರ್ಥವೆಯೂ ಅದೇ ಬಾವಿಗೆ ನೀರಿಗೆ ಹೋಗಬೇಕಾಯಿತು. ಒಂದು ಬೆಳಗಿನಲ್ಲಿ ಮನೆಯ ದಾಸಿ ನೀರುತರಲು ಹೋದಾಗ, ಅವಳ ಪರಿಚಯದಾಕೆಯೊಬ್ಬಳು ನುಡಿಸಿದಳು:—

"ಮಹಾರಾಯ ಎಂಥ ಕೆಲಸ ಮಾಡಿದ ನೋಡು.... .. ಸದ್ಯ ಸಾಯುವಾಗ ಒಂದು ಹನಿ ನೀರಾದರೂ ಇಲ್ಲವೆನ್ನುವಂತಿಲ್ಲ ಬಿಡು!...."

"ಅವನೇನು ಮನುಷ್ಯನೆಂದೀಯಾ....?...."

ಆಕೆ ಅಚ್ಚರಿಯಿಂದ ನೋಡಿದಳು—ಯಾವ ದೇವರ ದಯದಿಂದ ಈತ ಹುಟ್ಟಿದನೆಂದು ಕೇಳುವಂತೆ! ಆದರೆ ದಾಸಿಯ ನಗೆ ಹೊಗೆಯಾಡಿತು. ಗೃಹಸ್ಥೆಯ ಮನ ಮಿಡುಕಿದಂತೆ ಗಲ್ಲಕ್ಕೆ ಕೈಹತ್ತಿತು. ದಾಸಿ ಕೊಂಚ ಬಾಗಿ ಮೆಲುದನಿಯಲ್ಲಿ—

"ಅವಃ ಪಾರ್ಥವೆಯ ಮಗನಲ್ಲ........!"

"ಆಃ..........."

"ಹೌದು ....ಅವ ದೆವ್ವ........"

"ನಿನ್ನ ಬುದ್ಧಿಯೆಲ್ಲೋ ಕೆಟ್ಟಿರಬೇಕೆ........ಬಿಡು........ನಿನ್ನ ಒಡತೀನೇ ಕೇಳೇನು!"

"ಅಯ್ಯೋ ಬೇಡ ತಾಯಿ........ನಾನು ತಪ್ಪು ಅಂದೆ....... ನಮ್ಮ ನಿಮ್ಮ........ಮಕ್ಕಳಿಗೆ ಸಾಧ್ಯವಿಲ್ಲದ ಕೆಲಸ ಮಾಡ್ತಾನೇಂತ ಅಂದುಬಿಟ್ಟೆ.... ..."
ಕೂಡಲೇ ಅವಳ ನಗೆ ಕೊಳವಲ್ಲಿ ದುಂಡಾಗಿ ಹೊರಳುವ ಅಲೆಗಳಂತೆ ಮೋಹಕವಾಯಿತು. ಅವಳ ಜೊತೆಗಾತಿಯ ಕಣ್ಣುಗಳಲ್ಲಿ ಸಮಾಧಾನದ ಬೆಳಕು ಮಿರುಗಿತು.

ಇಬ್ಬರೂ ನೀರುಹೊತ್ತು ಕವಲುದಾರಿಗಳಲ್ಲಿ ಬೇರೆಯಾದರು. ಒಬ್ಬಾಕೆಗೆ ನೀರಿನ ಸಮಾಧಾನ; ಆದರೆ ಅನ್ನದ ಚಿಂತೆ! ಇನ್ನೊಬ್ಬಳಿಗೆ ಬಾವಿಯಲ್ಲಿ ಜಾರಿಬಿದ್ದು ಹೇಗೋ ಬದುಕಿದಂತೆ ಅನ್ನಿಸಿತ್ತು! ಆದರೂ ವ್ಯಯನ ಭಯವು ಬೆನ್ನಹಿಂದೆಯೇ ಸರಸರ ಬರುತ್ತಿರುವಂತೆಯೇ!

ವ್ಯಯನ ಬೆಳೆ ಹುಸಿಯುವಂತಿರಲಿಲ್ಲ. ಹುಸಿಯುವ ಬದಲು ಹಿರಿದಾಯಿತು. ಜೋಳವನ್ನು ತಂದು ಮನೆಯಲ್ಲಿ ಸುರಿದು ಹಿಗ್ಗಿದ. ಅಮ್ಮನ ಮುಂದೆ ಜಂಬದಿಂದ ತೋಳು ತಟ್ಟಿಕೊಂಡ. ಅವರಿಂದ ಆ ತಂದೆ-ತಾಯಿಗಳಿಗಂತೂ ಸಂತೋಷವಾಯಿತು.

ಕ್ಷಾಮ ತಲೆದೋರಿತ್ತು—ವಿಪರೀತಕ್ಕೂ ಏರಿತು. ಅನ್ನಕ್ಕಾಗಿ ಹಾಹಾಕಾರವೆದ್ದಿತು. ನೆಲ ಬಿರಿದು ಹೊಗೆಯೇಳುತ್ತಿದ್ದಿತಾದರೆ ಗಗನಾಂಗಣ ಕಾದು ಕಣಕಣವೆನ್ನುತ್ತಿದ್ದಿತು. ಇನ್ನು ಬೆಳೆಯೆಲ್ಲಿ ಬಂದೀತು! ಜೀವಿಗಳು ಪರಿತಪಿಸತೊಡಗಿದುವು.

ಆ ಊರಿನಲ್ಲೇ ವ್ಯಯನನ್ನುಳಿದರೆ ಯಾರಿಗೂ ಬೆಳೆಯಾಗಲಿಲ್ಲ. ಅನೇಕ ಕಣ್ಣುಗಳು ತಾರಣನ ಕಡೆ ತಿರುಗಿನಿಂತುವು. ಆದರೆ ವ್ಯಯನನ್ನು ಕೇಳಬೇಕು! ಊರಿನ ಪಟೇಲನೇ ಮುಂದುವರಿದ. ಮನೆಯ ಅಂಗಳದಲ್ಲೇ ಎತ್ತರವಾಗಿ ನಿಂತಿದ್ದ ವ್ಯಯನನ್ನು ನೋಡಿ ಅವನ ಗಂಟಲು ಒಣಗಿತು. ಒಂದು ಗಳಿಗೆ ನಿಂತು ಸಾವರಿಸಿಕೊಂಡು ಹೇಳಿದ:—

"ವ್ಯಯಣ್ಣ..............ನೋಡು..... .. ನಮ್ಮ ಬಾವಿಯಲ್ಲಿ....!"

"ಅದಕ್ಕೇನು ನಿಮಗೆ............?"
ದನಿ ಮೃದುವಾದುದೇ ಎನ್ನಬೇಕು! ಮೊಗದಲ್ಲಿಯೂ ಯಾವುದೋ ಚಿಂತೆಯ ತೆರೆ ಹಾಯ್ದು ಸೌಮ್ಯತೆಯಿತ್ತು.

"ನಿಮ್ಮ ಬಾವಿಯ ನೀರು ಕೊಡು ....ಊರಿಗೆ........"

"ಆಗಲಂತೆ.... ...."
ಯಜಮಾನನಿಗೆ ಸಂತೋಷವಾಯಿತು. ಅದ್ದರಿಂದಲೇ ಇನ್ನೊಂದು ಮಾತು ಕೇಳಬೇಕೆನ್ನಿಸಿರಬೇಕು—

"....ನಮಗೆ....ತಿನ್ನಲೂ ಇಲ್ಲವಣ್ಣ..............!"

"ಹೂ.... ...ಆಗಲಿ......."

ಕೂಡಲೆ ಅವನು ಮನೆಯ ಬಳಿಗೆ ಹೋಗಿ, ನಾಲ್ಕೈದು ಮೂಟೆ ಕಾಳು ತಂದು ಅಂಗಳದಲ್ಲಿ ರಾಶಿ ಹಾಕಿದ. ಜನ ಈ ವರೆಗೂ ದೂರ ಕಾಯ್ದಿದ್ದವರು ಒಬ್ಬೊಬ್ಬರಾಗಿ ಜೋಳಕ್ಕೆ ಬಾಗಿದರು. ಗೌಡನ ಅಪ್ಪಣೆಯಂತೆ ಅಳತೆಯ ಕಾಳು ತೆಗೆದುಕೊಳ್ಳತೊಡಗಿದರು.

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ
ಕೊಡುತ್ತದೆ.

ಇನ್ನೂ ಅರ್ಧ ರಾಶಿ ಉಳಿದಿತ್ತು. ಹಸಿದು ಕಂಗಾಲಾಗಿದ್ದ ನಾಲ್ವರಲ್ಲಿ ಕಿತ್ತಾಟವಾಗತೊಡಗಿತು. ಗೌಡನ ಆಜ್ಞೆ ಮೀರಿತು. ವ್ಯಯನ ಕೋಪ ಕೆರಳಿತು. ಒಬ್ಬನಿಗೆ ಬಿದ್ದ ಒಂದೇ ಪೆಟ್ಟು ಅವನ ಪ್ರಾಣ ಹರಣಮಾಡಿತು. ಉಳಿದವರೆಲ್ಲಾ ಬೆದರಿ ಓಡಿದರು. ಯಜಮಾನನೂ ಹೆದರಿ ಹೊರಟುಹೋದ.

ಮನೆಯ ದಾಸಿ ಒಳಗಿನಿಂದ ಬಂದಿದ್ದಳು. ಆಗಲೇ ವ್ಯಯ ಆ ಹೆಣವನ್ನು ಎತ್ತಿ ದೂರ ಒಗೆದುಬಿಟ್ಟ. ಮರುದಿನ ದಾಸಿ ಮನೆಯ ಕಡೆ ಬರಲಿಲ್ಲ. ಪಾರ್ಥಿವೆಯೇ ಹೋಗಿ ವಿಚಾರಿಸಿದಳು; ಮೌನವಾಗಿ ಹಿಂದಿರುಗಿದಳು. ದಾಸಿ ಎಲ್ಲಿ ಹೋದಳೆಂದು ಹೇಳುವವರು ಒಬ್ಬರಾದರೂ ಇಲ್ಲ. ಎಲ್ಲಿಗಾದರೂ ಹೋಗಲಿ, ಏನಾದಳೋ ಏನೊ!

ಪ್ರಕೃತಿಯ ಕೋಪ ಶಮನವಾಗಲೇ ಇಲ್ಲ. ಉಳಿದ ಜನಗಳು ವ್ಯಯನ ಬಳಿಗೆ ಬರುವುದಕ್ಕೂ ಹೆದರಿದರು. ಅವನ ನೋಟವೇ ಯಮನ ಸಾದೃಶ್ಯವನ್ನು ತರುತ್ತಿದ್ದಿರಬೇಕು! ಅವನೇ ಮೃತ್ಯುವೆಂದು ಅನೇಕರಿಗೆ ಎನ್ನಿಸಿರಬೇಕು!

ಊರಿನ ಪ್ರಾಣಿಗಳು ಸಾಯುತ್ತಲೇ ಇದ್ದುವು. ಜನರಂತೂ ಅವುಗಳನ್ನೂ ತಿಂದು ಸಾಯತೊಡಗಿದ್ದರು. ವ್ಯಯನ ಬಾವಿಯ



ನೀರೂ ಇಳಿದು ಹೋಗುತ್ತಿದ್ದುದರಿಂದ, ಉಳಿದುದನ್ನು ಕಾಯುತ್ತಲೇ ಅವನು ಕುಳಿತುಬಿಟ್ಟನು. ಯಾರಿಗೂ ಅವನನ್ನು ನುಡಿಸುವ ಧೈರ್ಯವಾಗಲಿಲ್ಲವೆನ್ನಬೇಕು. ಅವನ ನೋಟಕ್ಕೇ ಜೀವ ತತ್ತರಿಸುವಂತಾಗಿ ಬಿಡುತ್ತಿದ್ದಿರಬೇಕು!

ತಾರಣ-ಪಾರ್ಥಿವೆಯರಿಗೆ ಊರಿನ ಗತಿ ನೋಡಿ ಮರುಕವಾಗುತ್ತಿತ್ತು. ಆದರೆ ತಮ್ಮ ಸಂಸಾರದ ಉಳಿವಿನ ಚಿಂತೆಯೂ ಮೂಡಿ ತಡೆಯಾಗುತ್ತಿತ್ತು. ಅಭಿಮಾನವೂ ಸೇರಿ ವ್ಯಯನ ನಡತೆಯೇ ಸರಿಯಾದುದೆಂದು ಕಂಡಿತ್ತು. ಅಷ್ಟರಲ್ಲೇ ಅವರ ಚಿಂತೆ ಹರಿಯುವಂತಿರಲಿಲ್ಲ. ಮನೆಯ ಕಾಳು ಕಡ್ಡಿ ಮುಗಿಯುತ್ತ ಬಂದಿತ್ತು. ಅಲ್ಲದೇ ಒಂದೆರಡು ಬಾರಿ ಬಿತ್ತಿದ ಬೆಳೆಯೂ ಹುಸಿಯಿತು. ವ್ಯಯ ಏನೊಂದೂ ನುಡಿಯಲಿಲ್ಲ. ಅವನ ಊಟವಂತೂ ಕಡಿಮೆಯಾಗಲೇ ಇಲ್ಲ. ಒಂದು ದಿನ ತಾರಣನೇ ನುಡಿಸಿದ:—

"............ ಮಗು .... ಬೆಳೆ ಹುಸಿಯಾಯ್ತು. ಏನು ಮಾಡೋಣ . ..."

"ನೀರೂ ಇಂಗತಾ ಬಂತು........ಏನ್ಮಾಡ್ಲಿ........?"

"ಬೇರೇ ಬಾವಿಗಿಂತ ಇವನ್ನೇ ಸೋಸಬೇಕಪ್ಪ s.... ..."

"............ನಾಳೆ ಮಾಡ್ತೀನೆ............"

ಬಾವಿಯನ್ನು ಸೋಸುವ ಕೆಲಸವಾಯಿತು. ಆದರೆ ಜಲವೇ ಕುದುರಲಿಲ್ಲ. ತಾರಣ, ಬೆಳೆಯ ಆಶೆಯೂ ತೀರಿತೆಂದು ಮನೆಯನ್ನು ಸೇರಿದ.

ಬರಿದಾದ ಕಣಜದಲ್ಲಿ ಬಾಗಿ ನೋಡಿದ. ಆ ಕತ್ತಲಿನಿಂದ ಹಿಂಜರಿದು ಹೆಂಡತಿಯ ಕಡೆ ತಿರುಗಿದ. ಅವಳ ನೋಟ ತಗ್ಗಿತು. ಇವನ ನಿಟ್ಟುಸಿರು ಹೊರಳಿತು. ಮೌನವಾಗಿ ಒಂದೆಡೆ ಮಲಗಿಬಿಟ್ಟ. ಅವಳು ನಿರ್ಧಾರ ಮಾಡಿಕೊಂಡಳು. ತಾನೂ ಅಡುಮನೆಯತ್ತ ಜರುಗಿದಳು.

ಆ ನೀರವತೆಯಲ್ಲಿ ನಾಲ್ಕು ಗೋಡೆಯ ಮೌನವನ್ನು ಮುರಿಯಲು, ಒಂದೆರಡು ಗುಬ್ಬಿಗಳೂ ಸುಳಿಸಲ್ಲಿರಲಿಲ್ಲ. ಅವು ಎಂದೋ ಸತ್ತು ಕೆಟ್ಟು ಕಾಣದಂತಾಗಿದ್ದುವು. ಅನೇಕ ಊರುಗಳ ಗತಿಯೇ ಮಸಣದ ಕಡೆಗಾಗಿರಲು ಆ ಒಂದು ಮನೆಯ ನೆಳಲೇನದೇನು!

೪

ಒಂದು ದಿನ ಹೊಲದ ಕಡೆಗೆ ಹೋದ ಎತ್ತುಗಳು ಮನೆಗೆ ಬರಲಿಲ್ಲ. ಕತ್ತಲಾದರೂ ವ್ಯಯನು ಮನೆಗೆ ಬರಲಿಲ್ಲ. ಪಾರ್ಥಿವೆ ಅಂಗಳಕ್ಕೆ ಬಂದು ಬಂದು ನೋಡಿದಳು. ಕಡೆಗೆ ಹೇಗೋ ಹಾಸಿಗೆಯಲ್ಲಿ ಬಿದ್ದುಕೊಂಡಳು. ಮರುದಿನ ಮನೆಯ ಬಾಗಿಲಲ್ಲೇ ಮಲಗಿಬಿಟ್ಟಿದ್ದ ಮಗನನ್ನು ನೋಡಿ ಅವಳು ಬೆಚ್ಚಿದಳು.

ತಾರಣ ಚಿಂತಿಸುತ್ತಲೇ ಹೊಲದ ಕಡೆ ಹೋಗಿ ನೋಡಿದನು ಅವನ ಕಂಗಳು ತುಂಬಿಬಂದುವು. ಅವನ ಎತ್ತುಗಳನ್ನು ಹದ್ದುಗಳು ಕಿತ್ತಾಡುತ್ತಿದ್ದುವು. ಇನ್ನು ಅಲ್ಲಿ ನಿಲ್ಲಲಾರದೆ ಮನೆಗೆ ಬಂದುಬಿಟ್ಟನು.

ಒಂದು ವಾರ ಹೇಗೂ ಕಳೆಯಿತೆನ್ನಬೇಕು. ಈ ವೇಳೆಗೆ ಊರಿನ ಅರ್ಧ ಮಂದಿ ಗ್ರಾಮದ ಮಾರಿಗೆ ತುತ್ತಾಗಿದ್ದರು. ತಾರಣನಂತೂ ನಡೆಯಲಾರದವನಾಗಿದ್ದನು ತನ್ನಂತೆಯೇ ವ್ಯಯನೂ ಉಪವಾಸ. ಏರಬೇಕಾಯಿತೇ—ಎಂದು ಕೊರಗಿದ. ಮನೆಯ ಮೂಲೆಯಲ್ಲಿ ಪಾರ್ಥಿವೆಯಂತೆಯೇ ಬಿದ್ದುಕೊಂಡನು.

ಮನೆಯಲ್ಲಿ ಯಾರಿಗೂ ಊಟವಿಲ್ಲ. ವ್ಯಯನಲ್ಲಿ ಮಾತ್ರ ಒಂದು ರೀತಿಯ ಬದಲಾವಣೆ ಕಂಡಿತೆನ್ನಬೇಕು. ಎಂದರೆ ಅವನು ಯಾವಾಗಲೋ ಹೊರಟು ಹೋಗುವನು. ಎಲ್ಲಿಗೋ ಏನೋ ಯಾರಿಗೂ ತಿಳಿಯುವಂತಿಲ್ಲ!

ಒಂದು ಹಗಲಿನಲ್ಲೇ ಪಾರ್ಥಿವೆಯ ಕಣ್ಣಿಗೆ ಯಮದೂತರು ಗೋಚರಿಸಿದರು ಅವಳು ಬೆದರಿ ಮೆಲ್ಲಗೆ ತೆವಳಿಕೊಂಡು ಹೋಗಿ ತಾರಣನ ಪಾದಕ್ಕೆ ಮಸ್ತಕವಿಟ್ಟಳು. ಅವನನ್ನು ತಬ್ಬಿಕೊಳ್ಳಲು ಸಾಹಸಮಾಡಿ ಕಂಬನಿಗರೆದಳು. ವ್ಯಯನಂತೂ ಮನೆಯಲ್ಲೇ ಇರಲಿಲ್ಲ ಹಾಗೆಯೇ ಅವಳ ದೇಹ ಕೊರಡಾಯಿತು. ತಾರಣ ಚೀರಿಕೊಂಡುಬಿದ್ದನು.

ಆ ವೇಳೆಗೇ ವ್ಯಯನು ಮನೆಗೆ ಬಂದನು. ತಂದೆಯ ಸ್ಥಿತಿಯನ್ನು ಕಂಡನು. ಮೌನವಾಗಿ ತಾಯಿಯ ಹೆಣವನ್ನು ಎತ್ತಿಕೊಂಡು ಎತ್ತಲೋ ಹೊರಟುಹೋದನು.

ಈಗಲೂ ತಾರಣನಿಗೆ ಆ ಮೂಲೆಯಲ್ಲೇ ಬಿದ್ದಿರಲಾಗಲಿಲ್ಲ ಎನ್ನಬೇಕು. ತನ್ನ ಪಾರ್ಥಿವೆಯ ಸಮಾಧಿಯನ್ನು ಅರಸಿಕೊಂಡೇ ಮೆಲ್ಲಗೆ ತೆವಳತೊಡಗಿದನು.

ಹೇಗೂ ಹೊಲದ ಬಳಿ ಸೇರಿದಾಗ ಹೊತ್ತು ಏರಿತ್ತು. ಎದುರಿಗೇ ಯಾರೋ ಏನನ್ನೋ ತಿನ್ನುತ್ತಿದ್ದರು. ಏನೋ ಬರಬಾರದ ಯೋಚನೆ ಬಂದಿತು. ನಂಬಿಕೆಯಾಗಲಿಲ್ಲ. ಮತ್ತೆ ಮುಂದೆ ತೆವಳಿದನು.

ಇನ್ನೂ ಹತ್ತಿರಕ್ಕೆ ತೆವಳಿದನು. ಕಣ್ಣು ನಂಬಿಸಿತು—ಒಂದು ಮೂಳೆಗಳ ರಾಶಿಯ ಆಚೆಗೇ ವ್ಯಯ ಕುಳಿತಿದ್ದಾನೆ!.... ...ಏನನ್ನೋ ತಿನ್ನುತ್ತಿದ್ದಾನೆ . !

ತಾರಣನಿಗೆ ಮಾತು ಹೊರಡಲಿಲ್ಲ. ಉಸಿರೂ ಸಿಕ್ಕಿಕೊಂಡಂತಾಯಿತು. ಎದ್ದು ನಿಂತಿದ್ದವನು ಕುಸಿದುಬಿದ್ದನು.........ಜೀವಮಾತ್ರ 'ಟುಕು ಟುಕು' ಎನ್ನುತ್ತಿದ್ದಿರಬೇಕು!

ಈಚೆಗೆ ವ್ಯಯನ ಆಕ್ರಂದನದ ಅರಿವು ತಾರಣನಿಗೆ ಆಗಿರಲಿಲ್ಲವೆನ್ನಬೇಕು. ಅಲ್ಲದೆ ಮಗನು ನರಭಕ್ಷಕನಾದಾನೆಂದು ಕನಸಿನಲ್ಲಿಯೂ ಎಣಿಕೆಯಾಗಿರಲಿಲ್ಲ

ಮತ್ತೆ ತಾರಣ ಕಣ್ತೆರೆಯುವ ಹೊತ್ತಿಗೆ ತನ್ನ ಮನೆಯಲ್ಲೇ ಬಿದ್ದಿದ್ದನು ವ್ಯಯನೇ ಅವನನ್ನು ಬಾಗಿ ನೋಡುತ್ತಿದ್ದನು.

ತಾರಣ ಕಣ್ಣು ಬಿಟ್ಟುದನ್ನು ಕಂಡು, ಅವನ ಮೊಗದಲ್ಲಿ ಯಾವ ಬದಲಾವಣೆಯೂ ತೋರಲಿಲ್ಲವೆನ್ನಬೇಕು. ಎಲ್ಲಿಂದಲೋ ತಂದಿದ್ದ ಒಂದು ಕರಟ ನೀರನ್ನು ಮಾತ್ರ ಅವನ ಬಾಯಿಗೆ ಸುರಿದನು. ಹಾಗೆಯೇ ದಿಟ್ಟಿಸಿ ನೋಡಿದನು ಮರುಮಾತಾಡದೆ ಮತ್ತೆ ಅಲ್ಲಿಂದ ಹೊರಟುಹೋದನು.

ಅಂದು ಊರಿಗೆ ಊರೇ ಬರಿದಾಗಿದ್ದಿತೆನ್ನಬೇಕು. ಈ ವರೆಗೂ ವ್ಯಯನ ನಾಲಗೆಯ ರುಚಿಗೆ ಎಷ್ಟೋ ದೇಹಗಳು ಸಿಕ್ಕಿದ್ದುವು. ಅದೇ ಕೊನೆಯ ಬಾರಿಯೆನ್ನುವಂತೆ ಊರನ್ನೆಲ್ಲಾ ಬಳಸತೊಡಗಿದ್ದನು. ಮನೆ-ಮನೆಯನ್ನೂ ಅರಸಿದನು. ಎಲ್ಲಿಯೂ ಆಹಾರವಿಲ್ಲ. ಒಂದು ಪ್ರಾಣಿಯಾದರೂ ಇರಬೇಡವೇ! ಇವನ ನಡಿಗೆಯನ್ನು ಕಂಡು ರಣಹದ್ದುಗಳೂ ಚೀರಿಕೊಂಡು ದೂರ ದೂರ ಹಾರತೊಡಗಿದ್ದುವು.

ಒಂದು ಕ್ಷಣ ಮಾತ್ರ ಊರಿನ ಯಜಮಾನನ ಮನೆಯ ಮುಂದೆ ನಿಂತು ನೋಡಿದನು!

ಮರುಕ್ಷಣಕ್ಕೆ ತನ್ನ ಕೈಗೆ ಸಿಕ್ಕಿದುದನ್ನೆಲ್ಲಾ ಸೆಳೆಯ ತೊಡದನು. ನಾಲ್ಕೆಂಟು ಮನೆಗಳು ಬೋಳು-ಬೋಳಾಗಿ ನಿಂತುವು; ಅಷ್ಟೆ.

ವ್ಯಯನು ಇನ್ನು ನೇರವಾಗಿ ತನ್ನ ಮನೆಯತ್ತ ನಡೆದು ಅಂಗಳದಲ್ಲಿ ನಿಂತು ನೋಡಿದನು... ...ಒಳಹೊಕ್ಕು ಬಾಗಿ ನೋಡುತ್ತಾ ನಿಂತನು—ತಾರಣನಿನ್ನೂ ಜೀವದಿಂದ ಉಳಿದಿದ್ದಾನೆ! ... ... ಮೂಳೆಯ ಹಂದರವಾಗಿ ಅಲ್ಲಿಯೇ ಬಿದ್ದಿದ್ದಾನೆ!......... ...ಒಂದೇ ಸವನೆ ಬೆದರಿದಂತೆ ಪಿರುಪಿರು ನೋಡುತ್ತಿದ್ದಾನೆ... ...!.... ..

ವ್ಯಯನ ನೋಟ ಹೊರಳಲಿಲ್ಲ. ಅವನ ಕೈ ತಾನಾಗಿಯೇ ಮುಂದುವರಿಯಿತು!....... ...ಬೆರಳುಗಳು ಆಡಿದುವು!......... ...ಆ ಕೆಂಗಣ್ಣುಗಳನ್ನು ಕಂಡ ತಾರಣ ಚೀರಿಕೊಂಡನು; ಕೈಗಳು ನಡುಗು. ತ್ತಿದ್ದಂತೆಯೇ ಎತ್ತಿ ಮುಗಿದನು.

"........ಹ ಹ್ಹ........ಹ್ಹ ......ಹಾ ಽಽಽಽ.........! ..."

ವ್ಯಯನ ನಗೆಗೆ ಮನೆಯ ಗೋಡೆಯೆಲ್ಲಾ ನಡುಗಿದುವು. ಮರುಕ್ಷಣದಲ್ಲಿಯೇ ವ್ಯಯನ ಕೈ ತಾರಣನನ್ನು ಎತ್ತಿ ಹಿಡಿಯಿತು. ಆ ದೊಡ್ಡ ಕಣ್ಣುಗಳು ದಿಟ್ಟಿಸಿ ನೋಡಿದುವು.

ಆ ಹಿಡಿತಕ್ಕೆ ಮೂಳೆಗಳೂ ಮುರಿದುವು ಆ ಪುಟ್ಟ ಜೀವ ಬೆದರಿ ಹಾರಿಹೋಯಿತು!

× × × ×

ವ್ಯಯನು ಮತ್ತೆ ತನ್ನ ಮನೆಯ ಅಂಗಳದಲ್ಲೇ ನಿಂತಿದ್ದಾನೆ—ಒಮ್ಮೆ ಗಗನವನ್ನು ನೋಡಿದನು. ಬಿಳಿಮುಗಿಲೊಂದು ನೀಲಿಯಲ್ಲಿ ಕರಗಿ ಹೋಯಿತು; ಅಷ್ಟೆ. ಮರುಗಳಿಗೆಯಲ್ಲಿ ತನ್ನ ಮನೆಯ ಸೂರು

ಪ್ರಕಟವಾಗುವವು! ಶೀಘ್ರ ಪ್ರಕಟವಾಗುವವು!!

ಅಭಿನವ ಗಣಿತ

ಲೇ. : ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ "ಅಭಿನವ ಗಣಿತ"ಗಳನ್ನು ಹೊರಡಿಸಲಾಗಿದೆ ಮಕ್ಕಳ ಪರಿಚಯದ ವಾತಾವರಣವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹಲವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆಯಾಗಿದೆ. ಮುಖ್ಯವಾಗಿ ೧೯೬೫ರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದಿರುವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗಬಲ್ಲವು. ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿದೆಯೆಂಬುದನ್ನು ಅಭಿನವ ಗಣಿತಗಳ ಅನುಸರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನಿರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ಹಿಡಿದು ಜಗ್ಗಿದ. ಅದು ಸರಾಗವಾಗಿ ಕಿತ್ತುಬಂದು 'ದಢದಢ' ಎಂದು ಮಾತು ಉರುಳಿತು. ಎತ್ತರವಾಗಿ ನಿಂತ ಗೋಡೆಗಳನ್ನೂ ವ್ಯಯನಿಗೆ ನೋಡಿ ಸಹಿಸಲಾಗಲಿಲ್ಲವೆನ್ನಬೇಕು. ಒಮ್ಮೆ ಕೈ ನೀಡಿ ನೂಕಿಬಿಟ್ಟನು. ಗೋಡೆಯ ಮೇಲೆ ಗೋಡೆ ಬಿದ್ದು ಬಯಲಾಯಿತು.

ಅಲ್ಲೀದ ವ್ಯಯನನ್ನು ದಾಸಿಯೇ ಹಿಂಬಾಲಿಸಿದ್ದರೂ ಕಾಣಬಹುದಿತ್ತು. ಆದರೆ ಆ ಹಾಳು ಊರಿನಲ್ಲಿ ದೆವ್ವಗಳೂ ಉಳಿದಿರಲಿಲ್ಲ! ವ್ಯಯನು ತನ್ನ ಹೊಲದ ಮೈದಾನದಲ್ಲಿ ಮೈ ಚಾಚಿ ಮಲಗಿಬಿಟ್ಟನು.

ಆಗಲೇ ಆ ಮೂಳೆಯ ರಾಶಿಯನ್ನೂ ಹಾರಿಸುವಂತೆ ಬಿರುಗಾಳಿ ಬೀಸಿತು. ಅದರೆ ವ್ಯಯನ ನಿದ್ರೆಗೆ ಅದೂ ಸಹಾಯಕವಾಗಿದ್ದಿತೆನ್ನಬೇಕು. ನೀಲನಭದಂಚಿನಿಂದೀಚೆಗೆ ಕಪ್ಪು ಮುಗಿಲುಗಳು ಬರತೊಡಗಿದ್ದುವು ಆದರೆ ವ್ಯಯನ ನಯನಗಳಲ್ಲಿ ಮುಂದಿನ ಕತ್ತಲು ಕವಿದಿದ್ದಿತೆನ್ನಬೇಕು.

ಆ ಹೊಲದ ಕಾವಲಿಗಿದ್ದ ದೆವ್ವ ಎಮ್ಮೆ ಮುಗಿಲೆತ್ತರಕ್ಕೆ ನಿಂತು, ಮೌನವಾಗಿ ಒಂದು ಕ್ಷಣ ನೋಡಿ ಹೊರಳಿ ಎತ್ತಲೊ ಹೊರಟುಬಿಟ್ಟಿತು.... ... .

ಮಾಯಾ ಕವಚ

(ಶ್ರುತಿರೂಪಕದ ವಿಮರ್ಶೆ)

ಶ್ರೀ. ರಾ. ಸ್ವಾ. ದೇಶಪಾಂಡೆ, ಆಲದಕಟ್ಟಿ

卐

'ಮಾಯಾಕವಚ' ಎಂಬ ಶ್ರುತಿರೂಪಕವು ಜಯಂತಿಯ ಫೆಬ್ರುವರಿ ಸಂಚಿಕೆಯಲ್ಲಿ ಪ್ರಕಟವಾಗಿದೆ. ವಿಮರ್ಶೆಯ ಶಿಕ್ಷಣರಂಗಕ್ಕೂ ಆ ಶ್ರುತಿರೂಪಕವನ್ನು ಇರಿಸಲಾಗಿತ್ತು. ಅದರಲ್ಲಿಯ ವಿಷಯಗಾಂಭೀರ್ಯದ ಮೂಲಕವೋ ಏನೋ, ಇಬ್ಬರಿಗಿಂತ ಹೆಚ್ಚು ಜನರಿಂದ ಅದರ ವಿಮರ್ಶೆಗಳು ಬರಲಿಲ್ಲ. ಇಬ್ಬರಲ್ಲಿಯೂ ಒಬ್ಬರಿಂದ ವಿಲಂಬವಾಗಿ ಬಂದುದರಿಂದ, ಅದನ್ನು ತೀರ್ಮಾನದಲ್ಲಿ ಸೇರಿಸಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಅದೇ ಈ ವಿಮರ್ಶೆ. ಆ ಶ್ರುತಿರೂಪಕದ ವೈಶಿಷ್ಟ್ಯವನ್ನು ಈ ವಿಮರ್ಶೆಯು ತುಂಬ ಚೆನ್ನಾಗಿ ಸ್ಪಷ್ಟೀಕರಿಸುವುದು. ಆದುದರಿಂದಲೇ ಇದೊಂದು ವಿಶೇಷ ಲೇಖನವೆಂದು ಪರಿಗಣಿಸಿ ಇಲ್ಲಿ ಪ್ರಕಟಿಸಲಾಗಿದೆ. ಸಂ. ಜ.

卐

ಕೇವಲ ಒಂದು ಶ್ರುತಿರೂಪಕವಿದು. ಅತೀತ ಅನಾಗತ ಕಾಲ—ಅಂತರಾಳ ದೇಶ—ಅತೀಂದ್ರಿಯ ಪಾತ್ರಗಳು ಈ ಅಪೂರ್ವ ಸಂಯೋಜನೆಯಿಂದ, ಶ್ರುತಿ ಅಂದರೆ ವೇದತತ್ತ್ವಗಳ ನಿರೂಪಣೆಯನ್ನೇ ಗುರಿಯಾಗಿಟ್ಟುಕೊಂಡು ಬರೆದ ಕೇವಲ ಶ್ರಾವ್ಯರೂಪಕವಿದು. ಇದರಲ್ಲಿ ಮುಖ್ಯವಾದ ಮೂರೇ ಪಾತ್ರಗಳನ್ನಲ್ಲದೆ, ಪೈಶಾಚಿಕ ಲೋಕದ ಅವಾಂತರ ಪಾತ್ರಗಳ ರಚನೆಯ ತಂತ್ರದಿಂದ ಶ್ರೋತೃಗಳಿಗೆ ಸ್ವಲ್ಪದರಲ್ಲಿಯೇ ಸ್ವಾರಸ್ಯವನ್ನು ಒದಗಿಸಿಕೊಟ್ಟಿರುವರು—ಶ್ರೀ. ಶ್ರೀ. ವೆಂಗಲಗಲಿಯವರು.

ಅಧ್ಯಾತ್ಮವಿಷಯ ವೇ ಬಲು ಗಹನವಾದುದು. ಆದರೂ ಅದನ್ನೇ ವಸ್ತುವಾಗಿಟ್ಟುಕೊಂಡು ಸರಳಭಾಷೆಯಲ್ಲಿ ಮಂದರಿಗೂ ಮನದಟ್ಟಾಗುವ ಶೈಲಿಯಲ್ಲಿ ಈ ರೂಪಕವನ್ನು ರಚಿಸಿದ ಲೇಖಕರು ನಿಜವಾಗಿಯೂ ಅಭಿನಂದನಾರ್ಹರು.

ಕರ್ಮಗೀತಾದಿ ಶಾಸ್ತ್ರಪ್ರವಚನದ ಕಹಿ ಕಷಾಯವನ್ನೊಲ್ಲದ ಓದುಗರಿಗಿದೊಂದು ಶರ್ಕರಾವಗುಂಠಿತ ಮಾತ್ರೆ; ಅದರಂತೆಯೇ ಪ್ರಗತಿಪರ ಸಾಹಿತ್ಯದ ವಿಷವಾಯುದೂಷಿತ ವಾತಾವರಣದಲ್ಲಿ ವಾಸಿಸುವ ಆಸ್ತಿಕಜೀವಿಗಳಿಗೆ, ಇದೊಂದು ನವೀನ ಸಂಶೋಧಿತ ನಾಸ್ತಿಕ ರೋಗಪ್ರತಿಬಂಧಕ ಚುಚ್ಚುಮದ್ದು.

ಭೂಲೋಕದಲ್ಲಿ ಹಾಗು ಅಂತರಾಳದಲ್ಲಿ ನಡೆದ ಕಾಲ್ಪನಿಕ ಘಟನೆಗಳೇ ಇದರ ಕಥಾವಸ್ತು. ಇಲ್ಲಿ ಬೀಭತ್ಸ ಹಾಗು ಕರುಣಾರಸಗಳೇ ಪ್ರಧಾನವಾದುವುಗಳು. ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ರೇಖಿಸಿದ ಭೌತಿಕ ಜೀವನದ ಯಥಾರ್ಥ ಶಬ್ದಚಿತ್ರ! ಚಿತ್ರದ ಹಿನ್ನೆಲೆಯನ್ನು ಪೂರ್ಣವಾಗಿ ಅರ್ಥಮಾಡಿಕೊಂಡಲ್ಲಿ, ಚಿತ್ರದ ಗಭೀರತೆಯು ಮನಸ್ಸಿನ ಮೇಲೆ ಪರಿಣಾಮ ಮಾಡುವುದು. ಲೇಖಕರು ಈ ಚಿತ್ರಕ್ಕೆ ಅಳವಡಿಸಿಕೊಂಡ ಆಧ್ಯಾತ್ಮಿಕ ಹಿನ್ನೆಲೆ ಬಹು ವ್ಯಾಪಕವೂ ಜಟಿಲವೂ ಆಗಿದ್ದರೂ, ಪ್ರಸಂಗೋಚಿತವಾಗಿಯೂ ಹಿತಮಿತವಾಗಿಯೂ ಬಳಸಿಕೊಂಡದ್ದರಿಂದ, ಸಾಮಾನ್ಯ ಓದುಗರ ಮನಸ್ಸಿನ ಮೇಲೆಯೂ ಪರಿಣಾಮವಾಗಲಿಕ್ಕೆ ಸಾಕು.

ಸತ್ತ್ವ—ರಜ—ತಮಗಳೆಂಬ ತ್ರಿಗುಣಾತ್ಮಕ ಪ್ರಕೃತಿ ಹಾಗು ಪ್ರಕೃತಿನಿರ್ಮಿತವಾದ ಚೇತನಾಚೇತನ ಸಕಲವಿಶ್ವಕ್ಕೂ ಚೇತನಪ್ರದ ಶಕ್ತಿಯೊಂದಿದೆ. ಆ ಶಕ್ತಿಗೇ—ಶ್ರೀಹರಿ—ಪರಮಾತ್ಮ—ಪರಮೇಶ್ವರ—ಪರಬ್ರಹ್ಮ ಹೀಗೆ ಅನಂತನಾಮಗಳಿವೆ. ಅವನ ಇಚ್ಛಾನುಸಾರ ಸೃಷ್ಟಿಯು ಪ್ರಕೃತಿಮಾತೆಯ ದ್ವಾರಾ ನಡೆಯುವುದು. ಸೃಷ್ಟಿಯ ಕಾಲಕ್ಕೆ, ತಾಯಂದಿರು ಮಕ್ಕಳನ್ನು ಆಟವಾಡಲು ಕಳುಹುವಾಗ ಮಕ್ಕಳ ರೂಪ ಮುಚ್ಚುವಂತೆ ಒಂದರಮೇಲೊಂದು ತೊಡಗೆಯನ್ನು ತೊಡಿಸಿ ಕಳಿಸುವಂತೆ, ಜೀವಸ್ವರೂಪದ ಮೇಲೆ ಲಿಂಗ—ಸೂಕ್ಷ್ಮ—ಸ್ಥೂಲ ಶರೀರಗಳೆಂಬ ಸತ್ತ್ವ—ರಜ—ತಮೋಗುಣದ ಮಿಶ್ರಣದಿಂದಾದ ಮೂರು ಪದರುಗಳುಳ್ಳ ಕವಚವನ್ನು ತೊಡಿಸಿ ಕಳಿಸುವಳು ಪ್ರಕೃತಿಮಾತೆ. ಈ ತ್ರಿಗುಣಾತ್ಮಕ ಶರೀರಸಂಯೋಗವೇ ಶಾಸ್ತ್ರದಲ್ಲಿ ಉಪಾಧಿಯೆಂದು ಕರೆಯಲ್ಪಡುವುದು. ಇದೇ ಸ್ವರೂಪಾಚ್ಛಾದಕಕವಚವು—ಮಾಯಾಕವಚ!

ಅಹಂಕಾರ-ಮಮಕಾರಗಳ ಉತ್ಪತ್ತಿಗೂ ಜನನ-ಮರಣರೂಪ ಸಂಸಾರಚಕ್ರದ ಭ್ರಮಣಕ್ಕೂ ಇದುವೇ ಕಾರಣ. ಇದರ ಭಂಗವಾದಾಗಲೇ ಶಾಶ್ವತ ಸುಖ—ಶಾಂತಿ—ಮೋಕ್ಷ. ಆದರೆ ಅದು ತನ್ನಿಂದ ತಾನೇ ಆಗದು. ಸದಾಚಾರಸಂಪನ್ನರಾಗಿ, ಶಾಸ್ತ್ರವಿಹಿತ ಕರ್ಮಗಳನ್ನು ಮಾಡಿ, ಈಶಾನುಗ್ರಹ ಸಂಪಾದಿಸಿದಲ್ಲದೆ ಈ ಮಾಯಾಕವಚ ಕಳಚಿಬೀಳದು. ಅದರಲ್ಲಿಯೂ ಜೀವಸ್ವರೂಪಕ್ಕೆ—ದೇಹಕ್ಕೆ ನಿಕಟವಾಗಿ ಅಂಟಿಕೊಂಡಿರುವ ಲಿಂಗಶರೀರವು ಭಂಗವಾದಾಗಲೇ ಸಂಸಾರನಿವೃತ್ತಿ—ಶಾಶ್ವತ ಸುಖ—ಶಾಂತಿ—ಮೋಕ್ಷ; ಎಂದರೆ ಸ್ವರೂಪಾನಂದಾನುಭವ.

ಹಾಗಾದರೆ ಸತ್ತವರೆಲ್ಲರೂ ಮೋಕ್ಷಕ್ಕೆ ಹೋಗುವರೇನೆಂಬ ಆಕ್ಷೇಪಕ್ಕೆ ಶ್ರೀ. ಗಲಗಲಿಯವರು, ಮಾಯಾದೇವಿಯ ಹಾಗು ಮೃತಜೀವದ ನಡುವಣ ಸಂಭಾಷಣಾವಸರದಲ್ಲಿ "ಹುಟ್ಟಿದವರೆಲ್ಲ ಸಾಯುವಂತೆ ಸತ್ತವರೆಲ್ಲ ಮೋಕ್ಷಕ್ಕೆ ಹೋಗುವುದಿಲ್ಲ....ನಿಷ್ಕಾಮಕರ್ಮಗಳು

ಮಾತ್ರ ಮೋಕ್ಷಕ್ಕೆ ಹೋಗುವರು " ಎಂದು ಕರ್ಮಯೋಗದ ರಹಸ್ಯ ವನ್ನೂ ಮಾರ್ಮಿಕವಾಗಿ ಹೇಳಿರುವರು.

ಈ ಮಾಯಾಕವಚದ ಪ್ರಭಾವವು ಜಗತ್ತಿನಲ್ಲಿ ಜನಿಸಿದ ಯಾವತ್ತೂ ಜೀವಿಗಳಿಗೆ ಸುತ್ತಿಕೊಂಡಿರುವುದು. " ಮಾಯಾಕವಚ ವಿಲ್ಲದಿದ್ದರೆ ಭಾಸ-ಆಭಾಸ-ತರ್ಕ-ವಿತರ್ಕಗಳೇ ಭೂಮಿಯಲ್ಲಿ ಉಳಿ. ಯುತ್ತಿದ್ದಿಲ್ಲ" " ಮಾಯಾಕವಚ ಮೈಯಲ್ಲಿ ಇರುವವರೆಗೂ ಜೀವಿಗೆ ಜಗತ್ತಿನ ಮೋಹ ತಪ್ಪಿದ್ದಲ್ಲ ! "

ಈ ಮಾಯಾಕವಚದ ಸಂಯೋಗ-ವಿಯೋಗಗಳ ರೀತಿಯನ್ನು ಲೇಖಕರು ಬಹು ಸಮಂಜಸವಾಗಿ ವಿವೇಚಿಸುವರು — ಮಾಯಾ ಹಾಗು ನಿರ್ಮಾಯಾವಾಹಿನಿಗಳಲ್ಲಿ ಮುಳುಗೇಳುವ ಸನ್ನಿವೇಶದಿಂದ.

ಇನ್ನು ರೂಪಕದಲ್ಲಿ ಕೌಟುಂಬಿಕ, ಸಾಮಾಜಿಕ, ಹಾಗು ರಾಜಕೀಯಕ್ಷೇತ್ರಗಳಲ್ಲಿ ಕಂಡುಬರುವ ಅಸಹ್ಯ ದೋಷಗಳನ್ನೂ ಶ್ರೀಯುತರು ಬಹು ಮಾರ್ಮಿಕವಾಗಿ, ನಿರ್ದಾಕ್ಷಿಣ್ಯವಾಗಿ ಎತ್ತಿ ತೋರಿಸಿರುವರು.

" ಬದುಕಬೇಕು — ಬದುಕಿಸಗೊಡಬೇಕು " ಎಂಬ ಉದಾತ್ತ ತತ್ತ್ವ ಬರಿ ಬಾಯುಸಿರಿನಲ್ಲಿಯೇ ಹೊರತು ಆಚರಣೆಯಲ್ಲಿಲ್ಲ ಭೂ. ಲೋಕದಲ್ಲಿ,— ಎಂಬುದನ್ನು "ಭೂಲೋಕದ ಜನರು ಮಾಡುವ ಕ್ರೂರ ಕೃತ್ಯಗಳನ್ನು ನೆನಸಿಗೆ ತಂದರೆ ಭೀಭತ್ಸರವ್ಯವಾಗಿ ತೋರುವ ಪೈಶಾಚಿಕ ಲೋಕವೇ ಮೇಲ್ಗುರಗತಿಯದೆಂದು ಒಪ್ಪಿಕೊಳ್ಳಬೇಕಾ. ಗುತ್ತದೆ " ಎಂಬ ಮೃತಜೀವದ ಉದ್ಗಾರದಲ್ಲಿ, ಸದ್ಯದ ವರ್ಗಕಲಹ. ದಿಂದಾದ ಅಧೋಗತಿಯ ಯಥಾರ್ಥಚಿತ್ರದ ಮೂಲಕ ವಿವೇ. ಚಿಸಿರುವರು.

ವಿದ್ವತ್ತಿಯ ಗರ್ವದಿಂದ, ವಿದ್ವಾಂಸರ ಮುಖಭಂಗದ ಪಾಪದ ಫಲವಾಗಿ ಬ್ರಹ್ಮರಾಕ್ಷಸನ ಜನ್ಮಬಂದು, ಸಂಸ್ಕೃತಶಾಲಾ ಹಾಗು ಉಪನಿಷತ್ತಿನ ಶಾಂತಿಮಂತ್ರವನ್ನು ಪಠಣಮಾಡಿಸಿ, ಋಷಿ-ಮುನಿಗಳ ಗೋತ್ರಜರೆಂದು ಹೇಳಿಕೊಂಡು ಗೀರ್ವಾಣವಾಙ್ಮಯದ ಹಿರಿಮೆಯನ್ನು ಹೇಳಿಕೊಳ್ಳುವ ಭಾರತೀಯರು ಸಂಸ್ಕೃತಭಾಷೆಯ ಅಧ್ಯಯನದಲ್ಲಿ ಎಷ್ಟು ಅಜ್ಞಾನ-ಅಸಡ್ಡೆ ತೋರಿಸುವರೆಂಬುದನ್ನು ನಿರೂಪಿಸಿ ಎಚ್ಚರಿ. ಸಿರುವರು. ಲೇಖಕರು,

ಅಸಹನೆಯ ಮೂರ್ತಿಯಾದ ಗೃಹಿಣಿಯೊಬ್ಬಳ ಆತ್ಮಹತ್ಯೆ— ಅದಕ್ಕೆ ಸವತಿಯೇ ಕಾರಣಳೆಂದು ಮಾತ್ಸರ್ಯದಿಂದ ಮಾಡುವ ಆರೋಪ— ಈ ಶ್ರಾವ್ಯದಲ್ಲಿ, ಹದಗೆಟ್ಟ ವೈವಾಹಿಕ ಜೀವನದ ದೋಷ. ವನ್ನು ಆವಿಷ್ಕರಿಸಿರುವರು. ಇದರಲ್ಲಿಯೇ ಪಿಶಾಚಿಯ ಮುಖದಿಂದ ಜೋಗುಳಹಾಡಿಸಿ ಮಾತೃಹೃದಯದ ಪುತ್ರವಾತ್ಸಲ್ಯವನ್ನೂ "ಬಾಳುವ ಜೀವಿಗೆ ಬಲವೊಂದೇ ಅಮೃತ" " ಈಜಗದ ಜಂಜಾಟ ಧೈರ್ಯದಿ ತುಳಿ ಕಂದ " ಇತ್ಯಾದಿ ಶುಭೇಚ್ಛೆಯ ವಾಸನೆಯನ್ನೂ ಚಿತ್ರಿಸಿರುವರು.

ಹೀಗೆ, ಮದ-ಮತ್ಸರ-ಕ್ರೋಧ-ಮೋಹಗಳಿಗೊಳಗಾದ ಜೀವಗಳ ಭವಿತವ್ಯದ ಬವಣೆಯನ್ನು ವರ್ಣಿಸಿ, ಕಾಮ-ಲೋಭಗಳಿಂದ ಆಗುವ ನೈತಿಕ ಅಧಃಪತನವನ್ನು ಎತ್ತಿ ತೋರಿಸಲು ಶ್ರೀ. ಗಲಗಲಿಯವರ ಲೆಕ್ಕಣಿಕೆ ಹೊರಳಿದತ್ತ ನೋಡುವಾ :

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಂಜೀವಿನಿ
ದಿ ಸದ್ವೈದ್ಯಶಾಲಾ, ನಂಜನಗೂಡು
ಬ್ರಾಂಚುಗಳು : ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಹಲ್ಲುಪುಡಿಯನ್ನೇ ಉಪಯೋಗಿಸಿರಿ

ಲೋಭಕ್ಕೊಳಗಾದ ಜೀವಿ ಪ್ರಪಂಚದ ಸ್ಥಾನ-ಮಾನಗಳ ಎಂತಹ ಉಚ್ಚ ಹಂತದಲ್ಲಿದ್ದರೂ ವಂಚನೆ ಮೋಸ, ವಿಶ್ವಾಸಘಾತಗಳಂತಹ ಘೋರಪಾಪಗಳಿಗೊಳಗಾಗಿ, ಆ ಪಾಪದ ಪ್ರಾಯಶ್ಚಿತ್ತದ ಫಲವೆಂಬ ಜೀವದಿಂದಿರುವಾಗಲೇ ನರಕಯಾತನೆಯನ್ನನುಭವಿಸುವುದು ತಪ್ಪಿದ್ದಲ್ಲ ಎಂದು " ಥೂ ನಿನ್ನ ಬದುಕಿಗೆ ನಿತ್ತೂ ಅನ್ನದ ಅಗಳು ಹುಳ. ವ್ಹಾಂಗ ಕಾಣಿಸತಾವಲಾ ? ಕಾಣಸ್ತೇ ಏನು ಮಾಡ್ತ್ಯಾವು ......ನಿನ್ನೀ ಹಾರ ಹೊಡೀತಾವಲಾ ? " ಎಂಬ ಮಾತುಗಳಲ್ಲಿ ಸ್ಪಷ್ಟ ಮಾಡಿರು. ವರು. ಈ ಜಗತ್ತಿನಲ್ಲಿ ದುಡ್ಡಿನ ಮಹತ್ತ್ವವನ್ನೂ " ದುಡ್ಡು ಅಂದರೆ ದೊಡ್ಡಪ್ಪ....ದೇವರು ಅಂದೆ ...ಕಳಕೊಂಡು ಬದುಕುವದ್ಹ್ಯಾಂಗ ? " ಎಂಬ ಮಾತಿನಿಂದ ಲೋಭಿಗಳ ಮನದೊಲವನ್ನೂ ಚಿತ್ರಿಸಿರುವರು. ನ್ಯಾಯದಾನದಲ್ಲಿ ಸಹಾಯಮಾಡಲೆಂದು ಸರಕಾರದಿಂದ ಸನದು ಪಡೆದ ಕ್ರಿಮಿನಲ್ ಅಪರಾಧಗಳ ಕಾನೂನಿನ ಜ್ಞಾನವಿರುವ ಕಾಯ್ದೆ ಪಂಡಿತನ ಜೀವನಕ್ರಮವನ್ನು ವರ್ಣಿಸಿ ಸೃಷ್ಟಿಸಿದ ದೇವನಿಗೇ ಟೊಪ್ಪಿಗೆಹಾಕುವ ಕಾಯಕದ ಮಾದರಿಯೊಂದನ್ನು ಬಹು ಚಾಣಾಕ್ಷ ತನದಿಂದ ಹೆಣೆದಿರುವರು. ಹೃದಯಗುಹೆಯಲ್ಲಿದ್ದ ಪರಮಾತ್ಮನ ಆದೇಶವನ್ನು ಧಿಕ್ಕರಿಸಿ, ವಿಶ್ವಾಸದಿಂದ ತನ್ನಲ್ಲಿಟ್ಟ ಬಡಬ್ರಾಹ್ಮಣ. ನೊಬ್ಬನ ಹಣವನ್ನು ಎತ್ತಿಹಾಕಿ, ಆ ಹಣದಿಂದ ಗ್ರಾಮದ ಬಯ.. ಲೊಂದರಲ್ಲಿ ದೇವರಿಗೆ ಗುಡಿ ಕಟ್ಟಿಸುವ ಸನ್ನಿವೇಶದಿಂದ— ಪಾಪಿಗಳು ತಮ್ಮ ಪಾಪಕೃತ್ಯಕ್ಕೆ ದೇವರ ಒಪ್ಪಿಗೆ ಪಡೆಯಲೆಂದೋ, ಲೌಕಿಕದಲ್ಲಿ ಧಾರ್ಮಿಕರೆಂಬ ಗೌರವ ಪಡೆಯಲೆಂದೋ, ಧಾರ್ಮಿಕತನದ ಧರ್ಮದ ಸೋಗಿನಲ್ಲಿ ಆಚರಿಸುವ ಹೀನಕೃತ್ಯಗಳನ್ನು ಬಯಲಿಗೆಳೆದಿರುವರು.

ಇಲ್ಲಿಯವರೆಗೆ ಸಾಮಾನ್ಯ ಜೀವನಕ್ರಮದಲ್ಲಿರುವ ದೋಷ. ಗಳನ್ನು ಬೈಲಿಗೆಳೆದ ಶ್ರೀ ಗಲಗಲಿಯವರ ಲೆಕ್ಕಣಿಕೆಯಿಂದ ರೇಖಿ. ಸಲ್ಪಟ್ಟ ವ್ಯಕ್ತಿಸ್ವಾತಂತ್ರ್ಯದ ವ್ಯಂಗ್ಯಚಿತ್ರ ಎಷ್ಟು ಮನೋವೇಧಕವಿದೆ ನೋಡಿ : —

ಸ್ವಾತಂತ್ರ್ಯಪ್ರಾಪ್ತಿಯನಂತರ ಘಟನೆಯಿಂದಾಗಿ ಅಧಿಕಾ ಕೇಂದ್ರೀಕರಣ— ವಿಕೇಂದ್ರೀಕರಣ ಪ್ರೊಸೆಸ್ಸಿ (Process)ನಿ ತಯಾರಾದ ಕತ್ತರಿಯ (ಚುನಾವಣೆಯ) ಬಳಕೆಯಿಂದಾ ಸ್ಥಿತ್ಯಂತರಗಳಿಂದ ಬಂದ ಅಸಹಾಯಸ್ಥಿತಿಯನ್ನು ಸಹಿಸಲಾರ

ಜೀವವೊಂದು ಮೂರಂತಸ್ತಿನ ಮೇಲಿಂದ ಜಿಗಿದು ಆತ್ಮಹತ್ಯ ಮಾಡಿ. ಕೊಂಡ ಕಾರಣವು, " ಕತ್ತರಿಪೇಟಿನ ಕಾಯ್ದುದೊಳಗಿಂದ ಪಾರಾಗ. ಲಿಕ್ಕೆ.......ಈ ಜೀವ ನಂದೂ ಅಂತ ಸಿದ್ಧಮಾಡಲಿಕ್ಕೆ....ದೇಹತ್ಯಾಗ ಮಾಡಿಕೊಂಡೆ " ಎಂದು ಓದುವಾಗ, ಓದುಗರ ಮನಸ್ಸಿನಲ್ಲಿ ತುಂಬಿರುವ ಅಸಹಾಯ ಸ್ಥಿತಿಯನ್ನು ಉದ್ರೇಕಗೊಳಿಸಿ ಜೀವನವಲ್ಲಿ ಜುಗುಪ್ಸೆ ಹುಟ್ಟಿಸುವಷ್ಟು ಪರಿಣಾಮಕಾರಿಯಾಗಿದೆ.

ಮೃತಜೀವ-ತೇಜೋಜೀವಿಗಳ ನಡುವಣ ಸಂಭಾಷಣೆಯಲ್ಲಿ ಈಗಿನ " ಅಸ್ತವ್ಯಸ್ತ ಜೀವನಗಳ ಭಾವಚಿತ್ರ "ವನ್ನೇ ಚಿತ್ರಿಸಿರುವರು. " ಈಗಿನ ರಾಜ್ಯ ರಾಮರಾಜ್ಯವಲ್ಲ....ಆರಾಮರಾಜ್ಯವು. ಸುಳ್ಳಿನ ಸಂತೆ ಸ್ವಾರ್ಥದ ಕಂತೆ, ಅಹಂಕಾರದ ಸಾಕಾರ, ದುರಭಿಮಾನದ ಪ್ರಕಾರ ... ನೀತಿಗೆ ಆಧಾರವಿಲ್ಲ " ಈ ಮಾತುಗಳು ಎಷ್ಟು ತಥ್ಯವಾಗಿವೆ! ಸುಖ-ಶಾಂತಿಗಳು ಅಡಗಿ, ವಿಶ್ವಬಾಂಧವ್ಯ ಮರೆಯಾಗಿ ಧರ್ಮಶ್ರದ್ಧೆ ಅಡಗಿ ಜೀವನವು ದುರ್ಗಮವಾಗಿದೆ. ಪ್ರಾಚೀನ ಸಂಸ್ಕೃತಿಯಲ್ಲಿದ್ದ ಉತ್ತಮೋತ್ತಮ ಗುಣವಿಶೇಷಗಳು ಲೋಪವಾಗಿ, ಲೋಕಕಲ್ಯಾಣ ಮಾರಕವಾದ " ಧೃತರಾಷ್ಟ್ರನ ಕುರುಡುತನ .... ರಾವಣನ ಮೋಸತನ " "ಇವಿಷ್ಟೇ ಪ್ರಾಚೀನಸಂಸ್ಕೃತಿಯ ಅವಶೇಷಗಳು" ಎಂದ, ಲೇಖಕರಂದ ಮಾತುಗಳು ಎಷ್ಟು ಮನನೀಯವಾಗಿವೆ ನೋಡಿ!

ಇತ್ತೀಚೆಗೆ ಬೀಸಿದ ಸಮತಾವಾದದ ಗಾಳಿಯ ಸೋಕಿನಿಂದ ಜೀನೆಬಿದ್ದ " ಬಲಹೀನ—ತೇಜೋಹೀನ "ವಾದ ಸಮಾಜಪುರುಷನ ಅವಸ್ಥೆಯ ಕಡೆಗೆ ಓದುಗರ ಲಕ್ಷ್ಯವನ್ನು ಸೆಳೆಯುತ್ತಾ ಲೇಖಕರು, ಸಮಾಜಸ್ವಾಸ್ಥ್ಯಕ್ಕೆ ಅವಶ್ಯ ಉಪಾಯವಾದ ಗೀತಾಸಂದೇಶ (ಚಾತುರ್ವರ್ಣ್ಯಂಮಯಾಸೃಷ್ಟಂ ಗುಣ-ಕರ್ಮವಿಭಾಗಶಃ)ವನ್ನು ಕಡೆಗಣಿಸಿದ ಪರಿಣಾಮದ ಕಡೆಗೆಧುರೀಣರ ಲಕ್ಷ್ಯವನ್ನು ಎಳೆದಿದ್ದಾರೆ.

ಸರ್ವದೃಷ್ಟಿಯಿಂದಲೂ ಅಧೋಗತಿಗಿಳಿದ ಸಮಾಜ ಹಾಗು ಅದರ ಘಟಕನಾದ ವ್ಯಕ್ತಿಯ ಉದ್ಧಾರವು ಆಧ್ಯಾತ್ಮಿಕ ಬಲ. ಸಂಪಾದನೆಯಿಂದಲೇ ಸಾಧ್ಯವೆಂಬುದನ್ನು ಲೇಖಕರು ತೇಜೋಜೀವದ ಮುಖದಿಂದ " ಮನಸ್ಸು ಯಮ-ನಿಯಮಗಳಿಂದ ಪವಿತ್ರವಾಗಬೇಕು ....ಕ್ರಿಯಾರೂಪದಲ್ಲಿ ಇಳಿಯುವುದು " ಎಂದು ವೇದಾಂತದ ಸಾರವನ್ನೇ ಉಪದೇಶ ಮಾಡಿಸಿರುವರು.

ಈ ಪ್ರಕಾರ ಆಧ್ಯಾತ್ಮಿಕ ಹಿನ್ನೆಲೆಯಲ್ಲಿ ಕೌಟುಂಬಿಕ, ಸಾಮಾಜಿಕ ರಾಜಕೀಯ ಎಲ್ಲ ವಿಷಯಗಳ ಪರಾಮರ್ಶೆಯನ್ನು ಓದುಗರ ಮನಂಬು ಗುವಂತೆ ಮಾಡಿದ ಲೇಖಕರು ನಿಜವಾಗಿಯೂ ಅಭಿನಂದನಾರ್ಹರು.

ಇನ್ನು ಉತ್ತಮ ಕಲಾಕೃತಿಗೆ ದೃಷ್ಟಿದೋಷ ಪರಿಹಾರಾರ್ಥ ಏನಾದರೂ ಸ್ವಲ್ಪ ಕಲಂಕ ತೋರಿಸುವಂತೆ ಒಂದೆರಡು ದೋಷ. ಗಳನ್ನೂ ಲೇಖಕರು ಇಟ್ಟಿರುವರೋ ಏನೋ! " ಅವತಾರ ಪುರುಷ. ನಾದ ಶ್ರೀ ರಾಮಚಂದ್ರನಿಗೆ ಕನಕಮೃಗದ ಅಸತ್ಯತೆಯ ಅರಿವು ಏಕಾಗಲಿಲ್ಲ? ಅದೆಲ್ಲ ಮಾಯಾಕವಚದ ಪ್ರಭಾವ " ಈ ವಿಧಾನವು ಕೇವಲ ಆಧ್ಯಾತ್ಮಿಕ ಹಿನ್ನೆಲೆಯ ಈ ರೂಪಕಕ್ಕೆ ಸಮರ್ಪಕವಾದು. ದಲ್ಲವೆಂದು ನಮ್ಮ ಅಭಿಪ್ರಾಯ. ಉಪಾಧಿರಹಿತನಾದ ಪರಮಾತ್ಮನಿಗೆ ಮಾಯಾಕವಚದ ಉಪಾಧಿಯೇಕೆ? " ದಾರಿಯಲ್ಲಿ ಕವಿದ ಕಗ್ಗತ್ತಲೆಯಲ್ಲಿ ಸೂರ್ಯನಿಗೂ ಕೂಡ ದಾರಿ ತಪ್ಪಬಹುದು. " ಈ ಆತ್ಮೋಕ್ತಿ ಸಮಂಜಸವೆನಿಸದು.

ಒಟ್ಟಾರೆ ಸತ್ಯದ ವಿಷಮ ಸನ್ನಿವೇಶಗಳಲ್ಲಿ ದಾರಿತಪ್ಪಿದ ವ್ಯಕ್ತಿ-ಕುಟುಂಬ ಸಮಾಜ-ರಾಜಕೀಯ ಧುರೀಣರು ಎಲ್ಲರಿಗೂ ದಿಕ್ ಸೂಚಿಯಾದ ಈ ಕೃತಿರೂಪಕವು ಸರ್ವರಿಂದಲೂ ಆದರಿಸಲ್ಪಡಲು ಯೋಗ್ಯವಾಗಿದೆ. ಇಂತಹ ಆಧ್ಯಾತ್ಮಬೋಧಕ ರೂಪಕ ಸಾಹಿತ್ಯ ಕ್ಷೇತ್ರದಲ್ಲಿ ಶ್ರೀ. ಗಲಗಲಿ ಅವರಿಂದ ಕಾಣಿಸಿಕೊಂಡದ್ದು ದೇಶಕ್ಕೆ ಹಿತ.

ಮಕ್ಕಳ ಸದೃಢತೆ-ಗಾಗಿ

" ಬಗನ ಬಾಲಾ-ಮೃತ "

ಹಲ್ಲು ಬರುವಾಗ

" ಎಸ್ಸನ್ ಗ್ರೈಪ್ " ಹೀಲರ್

ದಂತು ಆದರೆ



" ವಮ್ " ಆಯಿಲ್

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ಉಪಯೋಗವೀಳುವ ಔಷಧಗಳು

The National Pharmacies &
Pharmaceuticals Ltd., Dharwar

ಯುಗಾದಿಯೋ! ಯುಗಾಂತವೋ!

ಶ್ರೀ. ಎಚ್. ಜಿ. ಉಪಾಧ್ಯಾಯ, ಎಂ. ಎ.,
ಹೈದರಾಬಾದ್—ದಕ್ಷಿಣ

ಯುಗಾದಿಯೋ! ಯುಗಾಂತವೋ!
ಬಗೆಯೆ ತಿಳಿಯದಂತಿದೆ.
ಪ್ರಲಯಕೋ—ಪ್ರಶಾಂತಿಗೋ!
ಜಗವು ಕಾದು ನಿಂತಿದೆ. ೧

ಒರೆಯಬಲ್ಲರಾರು? ಫಲವು
ಶುಭವೊ, ಅಶುಭಕಾರಿಯೊ!
ಅಳೆಯಬಹುದೆ? ಇದರ ಕ್ಷತಿಯು
ಅಲ್ಪವೊ, ಅಪಾರವೊ! ೨

ಮತ-ಮತಗಳ ನಿಶಿತಧಾರೆ-
ಯುಲಗು ಮಸೆದು ನಿಂತಿವೆ–
ಶರಣರಹಿತ ದೀನಜನರ
ಕೊರಳ ತರಿವೆನೆನುತಿವೆ. ೩

ಮಾನವತೆಯ ದೀನಶಿಶುವು
ಶಾಂತಿಗಾಗಿ ಅರಚಿದೆ.
ಸಮರ ನೆನೆದು ಕಂಗಳಲ್ಲಿ
ಭಯದ ನಡುಕನಾಂತಿದೆ. ೪

ವಿ-ಜ್ಞಾನಶರಧಿಮಥನದಿಂದೆ
ಸುಡುವ ನಂಜು ಒಗೆದಿದೆ;
ಅದನು ಕುಡಿವ ನೀಲಕಂಠ–
ರಾರು ಇಲ್ಲದಾಗಿದೆ. ೫

ಮತದ ಮೋಹ, ಸ್ವಾರ್ಥಕಾಮ,
ಪರರ ಮತದಸೂಯೆಯು,
ಫಲದ ಲೋಭ, ಬಲದ ಮದಕೆ
ಸಮರಕ್ರೋಧ ಹೆಚ್ಚಿದೆ. ೬

ಅಣುವಿನೊಂದೆ ಸಿಡಿತ ಸಾಕು
ಜಗದ ನಿರ್ವಾಣಕೆ–
ತೃಣದ ರಾಶಿಯಂತೆ ಜಗವು
ಮಹಾಪ್ರಲಯವಹ್ನಿಗೆ. ೭

ತಳೆದನೇನೊ ಮತ್ತೆ ಜನುಮ
ಅಳಿದ ಭಸ್ಮಾಸುರ–
ಮನುಜನಿಂದೆ ಮನುಜಕುಲದ
ನಾಶವಿಂದು ಸುಸ್ಥಿರ! ೮

ಹತ್ತು, ಮತ್ತೆ ಎಂಟು ದಿನದಿ
ನಡೆದ ಮಹಾಭಾರತ–
ಹತ್ತೆ ನಿಮಿಷದಲ್ಲಿ ಜಗವ
ತೊಡೆಯಲಿಹುದು ಅದ್ಭುತ! ೯

ಮಾತು ಮಾತು ಶಾಂತಿಪೂತ
ಮನವೊ ದ್ವೇಷ-ಭಯಾಕ್ರಾಂತ
ಮಾಕ್ಷಿಯೊ ಸಂಹಾರತಂತ್ರ
ಎಂತು ಬಹುದು ಶಾಂತಿಪ್ರೀತ? ೧೦

ಸಾಕು ನಿಲಿಸು ಮನುಜ, ದನುಜ–
ಮನದ ವಿಲಯನಾಟ್ಯವ,
ಯೋಚಿಸಯ್ಯ ಮನುಜಕುಲದ
ಶಾಂತಿ-ಸುಖದ ತತ್ತ್ವವ ೧೧

ದಾನವತೆಯ ಒಂದೆ ಕಿಡಿಗೆ
ಜಗವು ಭಸ್ಮವಪ್ಪುದು;
ಮಾನವತೆಯು ನೂರು ಮಡಿಗೆ
ಶಾಂತಿ-ಸುಖವು ಬರ್ಪುದು. ೧೨

ತೊರೆದು ಬಾರೊ! ಮೋಹಮದವ
ಅಳಿದು ಬರಲಿ ದಾನವ—
ಅರಿತು ನಡೆಯೊ ಶಿವದ ಮಹಿಮೆ
ಉಳಿದು ಬರಲಿ ಮಾನವ! ೧೩

ಧರ್ಮಸ್ಥಳದಿಂದ ವೈನಾಡಿಗೆ

(ಪ್ರವಾಸಪ್ರಬಂಧ)

ಶ್ರೀ. ಮಿರ್ಜಿ ಅಣ್ಣಾರಾಯರು, ಉಗಾರ

ವೈನಾಡು ಇಂದು ಮಲಬಾರ್ ಜಿಲ್ಲೆಗೆ ಸೇರಿಕೊಂಡಿದೆ; ಮಲಯಾಳು ಭಾಷೆ ಅಲ್ಲಿಯ ಜನರನ್ನು ಆಳುತ್ತಿದೆ. ಆದರೂ ವೈನಾಡು ಕರ್ನಾಟಕದ ಭಾಗವೆಂದ ತೋರಿಸ-ಬಹುದಾದ ಪ್ರತ್ಯಕ್ಷ ಕುರುಹುಗಳು ಈಗಲೂ ಅಲ್ಲಿ ಬೇಕಾದಷ್ಟು ಇರುವುವು.

ದಕ್ಷಿಣಕನ್ನಡ ಜಿಲ್ಲೆಯ 'ಧರ್ಮಸ್ಥಳ' ಕ್ಷೇತ್ರವು ನಿಜವಾಗಿಯೂ ದಕ್ಷಿಣಭಾರತದ ಧರ್ಮಸ್ಥಳವಾಗಿದೆ. ಇಲ್ಲಿಯ ಶ್ರೀ. ಮಂಜುನಾಥ ದೇವರು ಶೈವ, ವೈಷ್ಣವ ಮತ್ತು ಜೈನ ಸಂಪ್ರದಾಯದವರಿಗೆಲ್ಲ ಆರಾಧ್ಯದೇವನಾಗಿದ್ದಾನೆ. ಮೂಲದಲ್ಲಿ ಬೌದ್ಧಭಿಕ್ಷುವಾದ ಮಂಜುಘೋಷನ ಸ್ಮಾರಕವಾಗಿದ್ದ ಸ್ಥಳವು ಶೈವಪ್ರಭಾವಕ್ಕೆ ಒಳಗಾಗಿ ಶಿವಲಿಂಗವಾಯಿತು. ಅದನ್ನು ಕಾಲಕ್ರಮದಲ್ಲಿ ವೈಷ್ಣವರು ಪೂಜಿಸತೊಡಗಿದರು. ಅಲ್ಲಿ ನಡೆಯುವ ಧರ್ಮವನ್ನು ಜೈನ-ಹೆಗ್ಗಡೆಯವರು ನಡೆಯಿಸುತ್ತ ಬಂದರು ಹೀಗೆ ಧರ್ಮಸ್ಥಳ ಕ್ಷೇತ್ರವು ವಿವಿಧ ಧರ್ಮಗಳ ಸಮನ್ವಯ ಕ್ಷೇತ್ರವಾಗಿದೆ. ಈ ದೃಷ್ಟಿಯಿಂದ ಭಾರತದಲ್ಲಿ ಇದೊಂದು ಅದ್ವಿತೀಯ ಕ್ಷೇತ್ರವೆನಿಸಿದೆ.

ಇತ್ತಿತ್ತಲಾಗಿ ಧರ್ಮಸ್ಥಳದ ವಿವಿಧ ಧರ್ಮಸಮ್ಮೇಲನವು ಕನ್ನ-ಡಿಗರ ಮನೆಮಾತಾಗಿದೆ ಇಂದಿಗೆ ಇಪ್ಪತ್ತುನೂರು ವರ್ಷಗಳಿಂದ ಸತತವಾಗಿ ಧರ್ಮಸ್ಥಳದಲ್ಲಿ ದೀಪೋತ್ಸವದ ಸಮಯಕ್ಕೆ-ಕಾರ್ತಿಕ ಅಮಾವಾಸ್ಯೆಗೆ-ಧರ್ಮಸಮ್ಮೇಲನವು ಜರುಗುವದು ಇದು ಈಗಿನ ಹೆಗ್ಗಡೆಯವರಾದ ಶ್ರೀ. ಮಂಜಯ್ಯ ಹೆಗ್ಗಡೆಯವರ ವಿವಿಧ ಮತ-ಸಮನ್ವಯದೃಷ್ಟಿಯ ಫಲವಾಗಿ ನಡೆದು ಬಂದಿದೆ. ಮೊನ್ನೆ ಮೊನ್ನೆ ನಡೆದ 'ಮಹಾನಡಾವಳಿ' ಎಂಬ ಉತ್ಸವದಲ್ಲಂತೂ ಹೆಗ್ಗಡೆಯವರು ನಾಡಿನ ವಿವಿಧಭಾಗದ ಕಲಾವಿದರನ್ನೂ ಸಾಹಿತಿಗಳನ್ನೂ ಕರೆಯಿಸಿ, ಸತ್ಕರಿಸಿದರು. ನಿಜವಾಗಿಯೂ ನಾಡಿನ ಜನತೆಗೆ ಮಹಾನಡಾವಳಿಯ ಮಾರ್ಗದರ್ಶಕರಾದರು. ಇದರಿಂದಾಗಿ, ಮಲೆನಾಡಿನಲ್ಲಿ ನಾಲ್ಕು ಮನೆಗಳಿರುವ ಈ ಹಳ್ಳಿಯು ನಾಡಿನ ಧರ್ಮಸ್ಥಳವಾಗಿ ಪರಿ-ಣಮಿಸಿದೆ.

ಹೆಗ್ಗಡೆಯವರು ಸ್ವತಃ ಕಲೋಪಾಸಕರು. ಸಾಹಿತ್ಯ, ನೃತ್ಯ, ಸಂಗೀತಗಳಲ್ಲಿ ಅವರಿಗೆ ತುಂಬ ಪ್ರೀತಿ. ಚಿತ್ರಬರೆಹದಲ್ಲಂತೂ ಅವರು ಹೆಸರಾಗಿದ್ದಾರೆ. ನಾಡೋಜ ಪಂಪನ ಸುಂದರಚಿತ್ರವನ್ನು ಕನ್ನಡಿಗರಿಗೆ ಒದಗಿಸಿದವರು ಶ್ರೀ ಮಂಜಯ್ಯ ಹೆಗ್ಗಡೆಯವರೇ. ಅದರಂತೆ ಶೈಕ್ಷಣಿಕ ಕ್ಷೇತ್ರದಲ್ಲೂ ಅವರು ಪ್ರಯೋಗಶೀಲರು. ಅದಕ್ಕಾಗಿ ಭಾರತೀಯ ಪ್ರಾಚೀನ ಶಿಕ್ಷಣ ಪದ್ಧತಿಯನ್ನು ಯುಗಧರ್ಮಕ್ಕೆ, ಅನುಸರಿಸಿ, ಪುನರುಜ್ಜೀವನಗೊಳಿಸಲಿಕ್ಕೆ 'ಸಿದ್ಧವನ' ಗುರುಕುಲವನ್ನು ಸ್ಥಾಪಿಸಿದ್ದಾರೆ. ಮಕ್ಕಳಿಗೆ ಅನ್ನ-ಬಟ್ಟೆಗಳನ್ನೆಲ್ಲ ಒದಗಿಸಿ, ಅಲ್ಲಿ ಶಿಕ್ಷಣ ಕೊಡುವರು. ಅಲ್ಲದೆ ತಾವೇ ಐವತ್ತು ಸಾವಿರಕ್ಕೆ ಮಿಕ್ಕಿದ ಧನಸಹಾಯವನ್ನು ನೀಡಿ 'ಕರ್ನಾಟಕ ಹಾಯ್ ಸ್ಕೂಲ'ನ್ನೂ ಉಜಿರೆಯಲ್ಲಿ ಸ್ಥಾಪಿಸಿದ್ದಾರೆ. ಅಲ್ಲದೆ, ನೇತ್ರಾವತೀ ನದಿಗೆ ಸೇತುವೆ, ಸ್ನಾನಘಟ್ಟ, ಲಲಿತೋದ್ಯಾನ, ನಾಟ್ಯಮಂದಿರ, ಔಷಧಾಲಯಗಳನ್ನೆಲ್ಲ ನಿರ್ಮಿಸಿ, ಧರ್ಮಸ್ಥಳವನ್ನು ಒಂದು ಸುಂದರ ನಗರಿಯನ್ನಾಗಿ ಮಾಡಿದ್ದಾರೆ, ಹೆಗ್ಗಡೆಯವರು.

ಒಬ್ಬ ವ್ಯಕ್ತಿ ಒಳ್ಳೆಯವನಾದರೆ ನಾಡಿಗೆ ಎಷ್ಟು ಶ್ರೇಯಸ್ಕರ ಎಂಬುದನ್ನು. ಈ ಧರ್ಮಸ್ಥಳದ ಕ್ಷೇತ್ರಪಾಲಕರಿಂದ ನಾವು ಕಲಿತು ಕೊಳ್ಳುವಂತಿದೆ. ಧರ್ಮಕ್ಕಾಗಿ ಭಕ್ತರಿಂದ ಬಂದ ಧನವು ಹೀಗೆ ಲೋಕಹಿತದ ಕಾರ್ಯದಲ್ಲಿ ವ್ಯಯವಾಗುವುದರಿಂದ ಧರ್ಮದ ಸತ್ಫಲಗಳನ್ನು ಜನತೆಯು ಅನುಭವಿಸುವಂತಾಗುತ್ತದೆ. ಅದಕ್ಕಾಗಿ ಧರ್ಮ-ಬುದ್ಧಿ ಹೆಚ್ಚುತ್ತದೆ. ಧರ್ಮಕ್ಷೇತ್ರವು ಊರ್ಜಿತಾವಸ್ಥೆಗೆ ಬರುತ್ತದೆ. ಅಲ್ಲಿಯ ದೇವತ್ವ ಜಾಗೃತಗೊಳ್ಳುತ್ತದೆ. ಭಾವುಕರ ಮನಸ್ಸನ್ನು ಆಕರ್ಷಿಸುತ್ತದೆ.

ಹೀಗೆ ಆಕರ್ಷಣೆಗೆ ಒಳಗಾಗಿ ನಾನು ಆಗಾಗ ಧರ್ಮಸ್ಥಳಕ್ಕೆ ಹೋಗಿಬರಹತ್ತಿದೆ. ನಾನು ಹೋದಾಗಲೆಲ್ಲ ಧರ್ಮಸ್ಥಳದಲ್ಲಿ ಜಾತ್ರೆ. ನಾನು ಹೆಗ್ಗಡೆಯವರನ್ನು ಕಾಣುವುದು ಸಭೆ, ಸಮ್ಮೇಲನ, ದೇವಸ್ಥಾನ, ಪೂಜೆ, ಪುರಸ್ಕಾರಗಳ ಆವರಣದಲ್ಲಿ ಆದರಿಂದ ಇಷ್ಟು ಸಲ ಹೋದರೂ ಹೆಗ್ಗಡೆಯವರ ನಿಕಟ ಸಹವಾಸವಾಗಲಿ, ಅವರ ಕೂಡ ವಿವಿಧವಿಷಯಗಳನ್ನು ಕುರಿತು ಮಾತನಾಡುವುದಾಗಲಿ, ಆಗಿರಲಿಲ್ಲ. ಮೊನ್ನೆ ವೈನಾಡಿಗೆ ಹೋಗುವಾಗ ಎರಡು ಮೂರು ದಿನ ಧರ್ಮಸ್ಥಳದಲ್ಲಿ ಕಳೆಯುವ ಸಂದರ್ಭ ಒದಗಿತು. ಆದರಿಂದ ಹೆಗ್ಗಡೆಯವರ ಸಂಪರ್ಕ ಇನ್ನೂ ಹೆಚ್ಚುವಂತಾಯಿತು. ಅವರ ವಿಚಾರ,

ವ್ಯಕ್ತಿತ್ವಗಳ ಪರಿಚಯವು ಇನ್ನೂ ಬಹಳಷ್ಟು ನನ್ನ ಮೇಲೆ ಪ್ರಭಾವವನ್ನು ಬೀರಿತು. *

ಧರ್ಮಸ್ಥಳದ ಕಳೆದ ದೀಪೋತ್ಸವದ ಸಮ್ಮೇಲನವೇ ಕಾರಣವಾಗಿ ನಾನು ವೈನಾಡಿಗೆ ಹೋಗುವಂತಾದುದು. ಆಗಲೇ ವೈನಾಡಿನ ಕನ್ನಡಬಂಧುಗಳು ನನ್ನನ್ನು ತಮ್ಮಲ್ಲಿಗೆ ಬರಹೇಳಿದರು. ಮರಾಠಿಯ ಪ್ರಭಾವವನ್ನು ಎದುರಿಸುವ ಸೀಮೆಯ ನಾನು, ಮಲೆಯಾಳಿಯ ಆವರಣಕ್ಕೆ ಒಳಗಾದ ವೈನಾಡಿನ ಕನ್ನಡ ಜನಾಂಗವನ್ನು ಕಾಣಲಿಕ್ಕೆ ಉತ್ಸುಕನಾಗಿಯೇ ತೆರಳಲುದ್ಯುಕ್ತನಾದೆ. ಮಾರ್ಗದರ್ಶನಕ್ಕೆ ಮಂಗಳೂರಿನ ಶ್ರೀ. ಡಿ. ಪುಟ್ಟಸ್ವಾಮಿ ಬಿ. ಎ, ಬಿ. ಎಲ್. ಅವರು ಮುಂದಾದರು. ಬಲ್ಲವರಾದ ಅವರೇ ಅಧ್ಯಕ್ಷರಾಗಿದ್ದುಕೊಂಡು ಮಾತನಾಡಲಿಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟರು. ಅದರಿಂದ ಮಂಗಳೂರಿನ ಮಾರ್ಗವಾಗಿಯೇ ನಮ್ಮ ಪ್ರಯಾಣ ನಡೆಯುವಂತಾಯಿತು.

ಮಂಗಳೂರು ಈಗಿರುವ ಕರ್ನಾಟಕದ ಬಂದರಗಳಲ್ಲಿ ತಕ್ಕಮಟ್ಟಿಗೆ ಒಳ್ಳೆಯದು; ಕರಾವಳಿಯಲ್ಲಿ ತೆಂಗಿನ ಬನಗಳಿಂದ ಒಪ್ಪುವ ಸುಂದರ ನಗರವೂ ಆಗಿದೆ. ಕನ್ನಡದ ಉಳಿದೆಲ್ಲ ಜಿಲ್ಲೆಯ ಸ್ಥಳಗಳಿಗಿಂತ ಮುದ್ರಣ ವ್ಯವಸಾಯ, ಪತ್ರಿಕಾಪ್ರಪಂಚದಲ್ಲಿ ಮಂಗಳೂರು ಹೆಸರಾದುದು. ವಿವಿಧ ರಾಜಕೀಯ ಪಕ್ಷ–ಪಂಗಡಗಳ ಚಟುವಟಿಕೆಗಳನ್ನು ಇಲ್ಲಿ ಕಾಣಬಹುದು. ಈ ದೃಷ್ಟಿಯಿಂದ ಸ್ವಲ್ಪ ಜಾಗೃತ ಜಿಲ್ಲೆ ಎಂದರೂ ತಪ್ಪಾಗದು. ಇಂಥ ಎಚ್ಚತ್ತ ಕನ್ನಡ ಜನಾಂಗವು ಕನ್ನಡದ ಮಲೆಯಾಳಿ ಗಡಿಯಲ್ಲಿ ಇದ್ದುದು ಒಂದು ದೃಷ್ಟಿಯಲ್ಲಿ ಕರ್ನಾಟಕಕ್ಕೆ ಒಳ್ಳೆಯದೆಂದೇ ಹೇಳಬೇಕು.

ಮಂಗಳೂರಿಂದ ನಾವು ಮಲಬಾರಿನ ಅನಂತಕೃಷ್ಣಪುರಕ್ಕೆ ತೆರಳಬೇಕಾದರೆ, ಕಾಲಿಕತ್ತದವರೆಗೆ ಸುಮಾರು ೧೩೫ ಮೈಲುಗಳಷ್ಟು ಉಗಿಬಂಡಿಯಲ್ಲಿ ಪ್ರಯಾಣಮಾಡಬೇಕು. ಅದು ಸಾಗರದ ದಂಡೆಗುಂಟ ಸಾಗುವ ರೈಲು ದಾರಿಯು. ಒಂದು ಬದಿಗೆ ವಿಸ್ತಾರವಾದ ಸಮುದ್ರ; ಇನ್ನೊಂದು ಮಗ್ಗಲು ಉನ್ನತವಾದ ತೆಂಗಿನ ವೃಕ್ಷಗಳು. ಅವುಗಳ ಆಚೆಗೆ ಹಸುರು ಪರ್ವತಶ್ರೇಣಿಗಳು ಮುಗಿಲನ್ನು ಮುಟ್ಟುವಂತೆ ಶೋಭಿಸುವುವು. ಸುತ್ತಲೂ ಹತ್ತಿರದಲ್ಲಿ ಉಸುಕಿನ ನೆಲ, ಆದರೂ ಚಿರೂಟಿಗೆ ಉಪಯೋಗಿಸುವ ತಂಬಾಕಿನ ತರುಗಳಿಂದ ತುಂಬಿರುವುದು. ಅಲ್ಲಿಯ ಸೃಷ್ಟಿಯ ಸೊಬಗು ಎಂಥ ಅರಸಿಕರ ಮನಸ್ಸನ್ನೂ ಅಲ್ಹಾದಗೊಳಿಸುವಂತಹದು. ಅಲ್ಲದೆ ದಾರಿಯಲ್ಲಿ ಸಾಗರದ ನೆರೆಯಲ್ಲಿ ಇರುವ ಪ್ರಾಚೀನ ಕೋಟೆಗಳನ್ನು ನೋಡಿದರೆ, ಭಾರತೀಯರು ಐತಿಹಾಸಿಕ ಕಾಲದಲ್ಲಿ ಸಮುದ್ರಗಳ್ಳರಿಂದ, ಪರಚಕ್ರಗಳ ದಾಳಿಗಳಿಂದ ಸಂರಕ್ಷಿಸಿಕೊಳ್ಳಲು ಕೇವಲ ಸಾಗರ ಒಂದನ್ನೇ ನೆಚ್ಚಿ ಕುಳಿತಿರಲಿಲ್ಲವೆಂಬುದು ಯಾರಿಗೂ ಹೊಳೆಯುವಂತಿದೆ.

ಅನೇಕ ನದೀಮುಖಗಳನ್ನು ದಾಟುತ್ತ ನಮ್ಮ ರೈಲು ಕಲ್ಲಿಕೋಟೆಯ ಕಡೆಗೆ ಧಾವಿಸುತ್ತಿತ್ತು. ದಾರಿಯಲ್ಲಿ ಕಾಸರಗೋಡು, ಕಾಣಂಗೋಡುಗಳನ್ನು ದಾಟುವವರೆಗೆ ಕನ್ನಡಿಗರ ಪ್ರಾಬಲ್ಯ ಚೆನ್ನಾಗಿಯೇ ಇತ್ತು. ಮುಂದೆ ದಕ್ಷಿಣಕನ್ನಡ ಜಿಲ್ಲೆಯನ್ನು ದಾಟುತ್ತಲೇ, ಮಲೆಯಾಳಿಯ ಸೊಲ್ಲು ಹೆಚ್ಚುತ್ತ ಹೋಗುವುದು. ಕಾಣಂಗೋಡು ನಿಲ್ದಾಣದ ನೆರೆಯಲ್ಲಿ 'ಹೊಸದುರ್ಗ' ಎಂಬ ಊರಿದೆ. ಅದೊಂದು ತಾಲೂಕಿನ ಸ್ಥಳವು. ಅಲ್ಲಿ ನಮ್ಮ ಸ್ನೇಹಿತರಾದ ಶ್ರೀ. ವೈ ರವಿರಾಜರು ಮುನಸೀಫರಾಗಿದ್ದಾರೆ. ಅವರು, ನಾವು ಸಮೀಪದಲ್ಲಿರುವ ರಾಮನಗರವನ್ನು ನೋಡಿಯೇ ಹೋಗಬೇಕೆಂದು ಹೇಳಿದರು. ರಾಮನಗರವೆಂದರೆ 'ಆನಂದಾಶ್ರಮ'ವು. ಅಲ್ಲಿ ರಾಮದಾಸಸ್ವಾಮಿಗಳಿದ್ದಾರೆ. ನಿತ್ಯವೂ ಎರಡು ಹೊತ್ತು ರಾಮಭಜನೆ ನಡೆಯುತ್ತಿದೆ. ಬಂದು ಹೋಗುವ ಜನರಿಗೂ, ಅಲ್ಲಿಯೇ ವಾಸಿಸುವ ಭಕ್ತರಿಗೂ ಊಟವು ಪುಕ್ಕಟೆಯಾಗಿ ಸಿಕ್ಕುವುದು. ಆಶ್ರಮದಿಂದ ಇಂಗ್ಲೀಷಿನಲ್ಲಿ ಒಂದು ಮಾಸಪತ್ರಿಕೆಯೂ ಪ್ರಕಟವಾಗುತ್ತಿದೆ. ಆಶ್ರಮದ ಖ್ಯಾತಿಯು ಕರ್ನಾಟಕ–ಮದ್ರಾಸ ಪ್ರಾಂತಗಳಲ್ಲಿ ಇರುವುದಕ್ಕಿಂತ ಸೌರಾಷ್ಟ್ರದಲ್ಲಿ ಹೆಚ್ಚಾಗಿರುವಂತಿದೆ. ಅಲ್ಲಿಂದಲೇ ಹೆಚ್ಚಾಗಿ ಆಶ್ರಮಕ್ಕೆ ಧನಸಹಾಯ ಒದಗುತ್ತಿದೆ. ಆಶ್ರಮದಲ್ಲಿ ಭಾರತದ ಮಹಾಪುರುಷರ ಭಾವಚಿತ್ರಗಳಿಂದ ಅಲಂಕೃತವಾದ ಭಜನಮಂದಿರ, ಆಶ್ರಮದ ಆವರಣದ ಅಚ್ಚುಕಟ್ಟುತನಗಳು ಮನಸೆಳೆಯುವಂಥವು.

ಕಾಲಿಕತ್ತ ನಿಲ್ದಾಣದಲ್ಲಿ ನಮ್ಮನ್ನು ಸ್ವಾಗತಿಸಲಿಕ್ಕೆ ಶ್ರೀ. ಪಿ. ಎಸ್. ವರ್ಧಮಾನರು ಬಂದಿದ್ದರು. ಕಾಲಿಕತ್ತ ಮೂರುಲಕ್ಷ ಜನಸಂಖ್ಯೆಯ ದೊಡ್ಡ ನಗರ. ಕಟ್ಟಿಗೆಯ ವ್ಯಾಪಾರಕ್ಕೆ ಜಗತ್ತಿನಲ್ಲಿಯೇ ಪ್ರಸಿದ್ಧವಾದ ಪೇಟೆಯಿದು. ಇಲ್ಲಿ ಮಾಪಿಳ್ಳೆ ಜನರ ಪ್ರಭಾವ ಹೆಚ್ಚು. ಈ ನಗರದಲ್ಲಿ ಮಲೆಯಾಳಿ ಭಾಷೆಯ ಪ್ರಸಿದ್ಧ ದಿನಪತ್ರಿಕೆಯಾದ "ಮಾತೃಭೂಮಿ"ಯು ಪ್ರಕಟವಾಗುವುದು. ಇಲ್ಲಿ ಜೈನ ಧರ್ಮದ ಶ್ವೇತಾಂಬರ ಬಸದಿಯು ಸುಂದರವೂ ಭವ್ಯವೂ ಆಗಿದೆ. ನೋಡತಕ್ಕಂತಹದಾಗಿದೆ.

ಇಲ್ಲಿ ವಕೀಲ ವರ್ಧಮಾನರಲ್ಲಿ ಊಟ ತೀರಿಸಿಕೊಂಡು ಮುಂದೆ ಕಲ್ಪೆಟ್ಟಕ್ಕೆ ಕಾರಿನಲ್ಲಿ ತೆರಳಿದೆವು. ಅಂಥ ಮಹಾನಗರಿಯಲ್ಲಿ ಮಲೆಯಾಳಿಗಳ ಮಧ್ಯೆ ಸುಪ್ರಸಿದ್ಧ ವಕೀಲರಾಗಿದ್ದುಕೊಂಡು, ಕನ್ನಡಭಾಷೆಯ ಉಪಾಸಕರಾಗಿದ್ದ ವರ್ಧಮಾನರನ್ನು ನಾವು ಮೆಚ್ಚುತ್ತೇವೆ. ಅವರ ಮನೆಯವರೆಲ್ಲರೂ ಕನ್ನಡ ಮಾತನಾಡುತ್ತಾರೆ, ಓದುತ್ತಾರೆ. ಕಲಿಯುತ್ತಾರೆ. ಕನ್ನಡಪತ್ರಿಕೆಗಳನ್ನು ತರಿಸಿಕೊಳ್ಳುತ್ತಾರೆ. ಈ ಕನ್ನಡದ ಕೆಚ್ಚು ಹೇಗೆ ಬಾಳಿ ಬಂತು?— ಎಂಬ ಪ್ರಶ್ನೆಯು ಒಂದು ಕ್ಷಣ ನಮ್ಮಲ್ಲಿ ಮೂಡುವುದು. ಆದರೆ ಮುಂದೆ ವೈನಾಡಿನ ಕನ್ನಡಿಗರನ್ನೂ, ಜೈನಬಂಧುಗಳನ್ನೂ ನೋಡಿದಾಗ, ಈ ಪ್ರಶ್ನೆಗೆ ಸಮಾಧಾನ ಹೊಳೆಯುವುದು.

ಕಾಲಿಕತ್ತ ಬಂದರಿನಿಂದ ವೈನಾಡಿಗೆ ಹೋಗಬೇಕಾದರೆ ಮೂರು ಸಾವಿರ ಅಡಿ ಎತ್ತರದ ಘಟ್ಟವನ್ನು ಏರಬೇಕು. ಸುತ್ತಲೂ

* ಆ ಎರಡು ದಿನಗಳಲ್ಲಿ ಶ್ರೀ. ಹೆಗ್ಗಡೆಯವರೊಡನೆ ಚರ್ಚಿಸಿದ ಧರ್ಮ, ದರ್ಶನ, ಮೂರ್ತಿಪೂಜೆ, ಮುಕ್ತಿ ಮೊದಲಾದ ವಿಷಯಗಳನ್ನು 'ಸಂವಾದಮಾಲೆ' ಯಾಗಿ ಮುಂದೆ ಹೆಣೆಯುವೆ.—ಲೇ.

ರಬ್ಬರಿನ ಬನಗಳು, ಯಾಲಕ್ಕಿಯ ತೋಟಗಳು, ಮನ ಸೆಳೆಯುವ ಸೃಷ್ಟಿಸೌಂದರ್ಯದ ದೃಶ್ಯಗಳು! ನಾವು ಹೋದ ಕಾಲಕ್ಕೆ ಕಾಫಿಯ ಗಿಡಗಳಿಗೆ ಹೂವು ಬಂದಿದ್ದುವು. ಆದರಿಂದ ಹಸುರುಬನವೆಲ್ಲ ಮಲ್ಲಿಗೆಯ ಹಾಸಿಗೆಯಂತೆ ಒಪ್ಪುತ್ತಿತ್ತು. ಭೂದೇವಿಯ ಬೈತಲಿನ ಮುಂಭಾಗದಿಂದ ಹಿಂಭಾಗದ ಹೆಳಲಿನ ತುದಿಯವರೆಗೂ, ಹೆಣೆದ ಮಲ್ಲಿಗೆಯ ಹೂವಿನ ಸರದಂತೆ-ದಂಡೆಯಂತೆ-ಬೆಟ್ಟವನ್ನು ಆವರಿಸಿದ ಕಾಫಿಯ ಹೂವುಗಳು ಕಂಗೊಳಿಸುವುವು. ಬೇಲವಲದಿಂದ ಹೋದ ನಮಗೆ ಆ ಹೂವಿನ ಉಗ್ರವಾಸನೆಯು ಸಹಿಸಲಿಕ್ಕೆ ಆಗದೆಹೋಗುತ್ತದೆ. ಊಟದಲ್ಲಿ ಉಪಯೋಗಿಸುವ ತೆಂಗಿನ ಎಣ್ಣೆ, ಅನ್ನ ಸಾರುಗಳ ತಿನಿಸು ನಮಗೆ ಒಗ್ಗದು. ಆದರೂ ಆ ಜನರ ಕನ್ನಡದ ಒಲವು, ವಿಶಾಲಹೃದಯಗಳು ನಮ್ಮ ಮನಸ್ಸನ್ನು ಮುಗ್ಧಗೊಳಿಸುತ್ತವೆ. ಪ್ರಕೃತಿಸೌಂದರ್ಯವು ಮಾನವನ ಮನಸ್ಸಿನ ಮೇಲೆ ಮಾಡಿರುವ ಸುಪರಿಣಾಮವನ್ನು ನಾವಿಲ್ಲಿ ಕಾಣುತ್ತೇವೆ.

ಇಲ್ಲಿ ಮಾನವಜಗತ್ತಿಗೆ ನಿಸ್ಸರ್ಗವಿತ್ತ ಕೊಡುಗೆ ಬಹು ಹಿರಿಯದು. ಆ ಕಾಣಿಕೆಯನ್ನು ಸ್ವೀಕರಿಸಲು ಸಿರಿವಂತರು ಮನೆ-ಮನೆಗೂ ಆನೆಗಳನ್ನು ಸಾಕಿ-ನಮ್ಮಲ್ಲಿ ದನಗಳನ್ನು ಸಾಕುವಂತೆ-ಸನ್ನದ್ಧರಾಗಿರುತ್ತಾರೆ. ಪ್ರಕೃತಿಯಿಂದ ಕಾಫಿ, ಯಾಲಕ್ಕಿ, ಮೆಣಸು, ಕಟ್ಟಿಗೆ ಮೊದಲಾದುವುಗಳನ್ನು ಇವರು ವಿಪುಲವಾಗಿ ಪಡೆಯುವಂತೆ ತಮ್ಮ ಧನವನ್ನು ಸತ್ಕಾರ್ಯದಲ್ಲಿ ಧಾರಾಳವಾಗಿ ವ್ಯಯಿಸುತ್ತಾರೆ. ಇಲ್ಲಿ ಮಣಿಯಂಗೂಡು ಆಸ್ತಿಯ ಕೃಷ್ಣಯ್ಯಗೌಡರ ಮಕ್ಕಳು ಐವರು. ಅವರಲ್ಲಿ ಕಿರಿಯ ಬಂಧುವು ವೈನಾಡಿನ ಮಕ್ಕಳ ಶಿಕ್ಷಣಕ್ಕೆಂದು 'ಅನಂತಕೃಷ್ಣ' ಹಾಯ್‌ಸ್ಕೂಲವನ್ನು ನಡೆಯಿಸಿದ್ದಾರೆ. ಅವರೇ ಅಲ್ಲಿಯ ಕಾಂಗ್ರೇಸ್ ಮುಖಂಡರಾದ ಶ್ರೀ. ಎಂ. ಕೆ. ಜಿನಚಂದ್ರನ್ ಅವರು. ಇವರಣ್ಣ ವೈನಾಡಿನ ಕನ್ನಡವನ್ನು ಕಾಯ್ದುಕೊಳ್ಳುವ ಶ್ರೀ. ಅನಂತಯ್ಯ ಗೌಡರೆಂಬವರು. ಇವರು ತಮ್ಮನ ಮಾಧ್ಯಮಿಕ ಶಾಲೆಗೆ ಹೊಂದಿ, ಒಂದು ಲಕ್ಷಕ್ಕೂ ಮಿಕ್ಕಿ ಹಣವನ್ನು ವೆಚ್ಚಮಾಡಿ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ವಾಸಿಸಲು ವಸತಿಗೃಹ ನಿರ್ಮಿಸಿ ಕೊಟ್ಟಿದ್ದಾರೆ. ಅಲ್ಲದೆ ವಸತಿಗೃಹದಲ್ಲಿ ಮಕ್ಕಳಿಗೆ ಊಟ, ವಸತಿಗಳು ವಿನಾಮೂಲ್ಯವಾಗಿ ದೊರೆಯುವುದಕ್ಕಾಗಿ ಅಡವಿಯನ್ನು ಉಂಬಳಿಯಾಗಿ ಇತ್ತಿದ್ದಾರೆ. ಹಾಯ್‌ಸ್ಕೂಲಿನಲ್ಲಿ ಶಿಕ್ಷಣವು ಮಲೆಯಾಳಿ ಭಾಷೆಯಲ್ಲಿ ನಡೆಯುವುದು; ಆದುದರಿಂದ ವಸತಿಗೃಹದಲ್ಲಿ ಕನ್ನಡ ಕಲಿಸುವ ಏರ್ಪಾಡನ್ನು ಮಾಡಿದ್ದಾರೆ, ಅನಂತಯ್ಯ ಗೌಡರು. ಅಲ್ಲಿಯ ಸೌಕರ್ಯಪಡೆಯುವ ವಿದ್ಯಾರ್ಥಿಯು ಕನ್ನಡ ಕಲಿಯಲೇ ಬೇಕು. ಈ ಮನೆತನದ ಬಂಧುಗಳು ಈ ಸಂಸ್ಥೆಗೆ ಮೂರುಲಕ್ಷ ನಿಧಿಯ ವಿಶ್ವಸ್ತ-ಸಮಿತಿಯನ್ನು ನಿರ್ಮಿಸಿಬಿಟ್ಟಿದ್ದಾರೆ. ಇಂಥವರಲ್ಲಿ ಇನ್ನೊಬ್ಬ ಬಂಧುವು ಮದ್ರಾಸಿನಲ್ಲಿ ಕಮ್ಯುನಿಸ್ಟ ಪಾರ್ಟಿಯಿಂದ ಆಯ್ಕೆಯಾದ ಎಂ. ಎಲ್. ಎ.; ಇನ್ನೊಬ್ಬರು ಜಿನಮಂದಿರವನ್ನು ನಿರ್ಮಿಸಿದ ಧರ್ಮ-ವೀರರು. ಇವರೆಲ್ಲರ ಸೋದರಳಿಯ ವೈನಾಡಿನ ಹರಿಜನ ವಿಕಾಸ-ಮಂಡಳದ ಅಧ್ಯಕ್ಷರು. ಅವರೇ ಕಾಲಿಕತ್ತದಲ್ಲಿ ವಾಸಿಸುವ ವಕೀಲ ವರ್ಧಮಾನರು. ಹೀಗೆ ಕಲ್ಪಟ್ಟದ ಮಣಿಯಂಗೂಡು ಮನೆತನವು ಧರ್ಮ, ಭಾಷೆ, ರಾಷ್ಟ್ರ, ಜನಾಂಗಗಳ ಸೇವೆಯಲ್ಲೆಲ್ಲ ಮುಂದುವರಿದು ದುಡಿಯುವಂತಹದಾಗಿದೆ. ಹೀಗೆ ಇನ್ನಿತರ ಪ್ರಾಂತಗಳಲ್ಲಿ ವಾಸಿಸುವ ಕನ್ನಡಿಗರೂ ತಮ್ಮ ಭಾಷೆ,-ಸಂಸ್ಕೃತಿಗಳ ರಕ್ಷಣೆಗೆ ಹೆಣಗಿದಲ್ಲಿ ಕನ್ನಡಕ್ಕೆ ಯಾವ ಭಯವೂ ಇಲ್ಲ

ವೈನಾಡಿನ ಕನ್ನಡಿಗರಲ್ಲಿ ಎಂದಿನಂತೆ ಧಾರ್ಮಿಕಜೀವನ ದಲ್ಲೂ ವಿಶಾಲಭಾವನೆ ಹೆಚ್ಚಾಗಿದೆ. ಇಲ್ಲಿ ಜೈನ, ವೈಷ್ಣವ ಧರ್ಮ ಬಂಧುಗಳಲ್ಲಿ ಹೆಣ್ಣುಮಕ್ಕಳ ಕೊಡುಕೊಳ್ಳುವಿಕೆಯೂ ನಡೆಯುತ್ತದೆ. ಆಯಾ ಧರ್ಮದ ಮನೆತನಕ್ಕೆ ಸೇರಿದ ಹೆಣ್ಣುಮಕ್ಕಳು, ತಮ್ಮ ತಮ್ಮ ಪತಿಯ ಧರ್ಮವನ್ನು ಸ್ವೀಕರಿಸಿ ಬಾಳುವುದುಂಟು. ಇದರಿಂದ ಇಲ್ಲಿಯ ಕನ್ನಡಬಾಂಧವರಲ್ಲಿ ಇನ್ನೂ ಹೆಚ್ಚಿನ ಬಾಂಧವ್ಯ ಬೆಳೆದು ಬರಲಿಕ್ಕೆ ಕಾರಣವಾಗಿದೆ.

ಈ ನಮ್ಮ ಪ್ರಯಾಣವು ಕನ್ನಡನಾಡಿನ ಒಂದು ಮೂಲೆಯಿಂದ ಇನ್ನೊಂದು ತುದಿಗೆ ಹೋಗುವುದಾಗಿತ್ತಾದರೂ ಕನ್ನಡ ಸಂಸ್ಕೃತಿ, ಮನೋವೃತ್ತಿಗಳ ಅಖಂಡತ್ವದಿಂದ ಪರಕೀಯವೆಂಬಂತೆ ಎನಿಸಲಿಲ್ಲ. ಜೊತೆಯಲ್ಲಿ ಮಾನ್ಯ ಶ್ರೀ. ಡಿ. ಪುಟ್ಟಸ್ವಾಮಿಯವರ ಸರಸಸಜ್ಜನಿಕೆಯ ಸಹವಾಸ, ವೈನಾಡಿನ ಬಂಧುಗಳ ಆದರ ಆತಿಥ್ಯಗಳಿಂದಾಗಿ ಮನಸ್ಸು ತುಂಬ ಅರಳುವಂತೆ ಆಯಿತು. ವೈನಾಡು ಮಾನವತೆಯ ಅರಿವನ್ನುಂಟು ಮಾಡಿತು. ಹೃದಯಕ್ಕೆ ವಿಶಾಲತೆಯನ್ನು ನೀಡಿತು. ಪ್ರವಾಸದ ಫಲವೆಂಬುದು ಇದೇ ಅಲ್ಲವೆ ?

ಜಯಂತಿಯ ೧೫-೧೬ನೆಯ ಸಂಪುಟಗಳು!

ಕೆಲವೇ ಪ್ರತಿಗಳು ಉಳಿದಿವೆ. ಬೇಕಾದವರು ಬೇಗನೆ ಬರೆದು ತರಿಸಿಕೊಳ್ಳಿರಿ!

೪-೮-೦ ಗಳನ್ನು ಮನಿಯಾರ್ಡರು ಮೂಲಕ ಕಳುಹಿದರೆ, ಅಂಚೆಯ ವೆಚ್ಚವನ್ನು ಕಾರ್ಯಾಲಯವೇ ವಹಿಸಿ, ಸಂಚಿಕೆಗಳನ್ನು ಕಳುಹುವುದು.

ವ್ಯವಸ್ಥಾಪಕ 'ಜಯಂತಿ' ಕಾರ್ಯಾಲಯ, ಧಾರವಾಡ

ಪ. ಜರ್ಮನಿಯ ಇಂದಿನ ಸಮಾಜಜೀವನ

(ಪರಿಚಯಾತ್ಮಕ ಪ್ರಬಂಧ)

ಡಾ. ಎಂ. ಕೆ. ವರಾಹಮೂರ್ತಿ ಎಂ. ಎಸ್‌ಸಿ., ಡಿ. ಎಸ್‌ಸಿ., ಬಾಸೆಲ್-ಸ್ವಿಟ್ಸರ್ಲೆಂಡ್

ಪ್ರಗತಿಪರ ವಿಚಾರದ ಮತ್ತು ವ್ಯವಸಾಯಶೀಲರಾದ ಪಶ್ಚಿಮ ಜರ್ಮನ್ ಜನರ ಇಂದಿನ ಶಿಕ್ಷಣ ಪದ್ಧತಿ ಎಂತಹದಿದೆ ? ಕೌಟುಂಬಿಕ ಜೀವನವು ಹೇಗಿದೆ ? ಧಾರ್ಮಿಕ ಆಚಾರ ವಿಚಾರಗಳು ಯಾವ ಬಗೆಯವು ? ಇವೆಲ್ಲನನ್ನು ಜನರಲ್ಲಿ ಕುತೂಹಲವನ್ನು ಕೆರಳಿಸುವಂತಹ ವಿಷಯಗಳೇ ಆಗಿರುವುವು.

ಚಿಕ್ಕ ಬಾಲಕರ ಶಿಕ್ಷಣ:

ಬಾಲಕನು ತನ್ನ ೬ನೆಯ ವರುಷದಲ್ಲಿ ಪ್ರಾಥಮಿಕ ಶಾಲೆಯಲ್ಲಿ (Volkschule) ಶಿಕ್ಷಣಪಡೆಯಲು ಪ್ರಾರಂಭ ಮಾಡುತ್ತಾನೆ. ಮೊದಲಿನ ನಾಲ್ಕುವರುಷಗಳಲ್ಲಿ ಅಕ್ಷರಜ್ಞಾನ, ಓದು, ಬರೆಹ, ಹಾಡು, ಆಟವಾಡುವುದು ಮತ್ತು ಸಣ್ಣ ಸಣ್ಣ ಗಣಿತಗಳು (ಕೂಡಿಸುವುದು, ಕಳೆಯುವುದು, ಅಂಕಿಗಳು. ಭಾಗಿಸುವುದು ಇತ್ಯಾದಿ) ಇತ್ಯಾದಿ ವಿಷಯಗಳನ್ನು ಕಲಿಯುತ್ತಾನೆ. ಮುಂದಿನ ಶಿಕ್ಷಣ, ವಿದ್ಯಾರ್ಥಿಯ ಜೀವನದ ಗುರಿಯ ಮೇಲೆ ಅವಲಂಬಿಸಿರುವುದು. ಉದಾ: ಶಿಕ್ಷಕನಾಗುವುದು. ಕಲಾಕಾರನಾಗುವುದು, ಮೊಚ್ಚಿಗಾರನಾಗುವುದು, ಪ್ರೊಫೆಸರನಾಗುವುದು, ಡಾಕ್ಟರನಾಗುವುದು, ಇತ್ಯಾದಿ. ಅಲ್ಲದೆ ವಿಶ್ವವಿದ್ಯಾಲಯದ ಶಿಕ್ಷಣ ಮತ್ತು ಉದ್ಯೋಗಗಳ ಶಿಕ್ಷಣ. ಮೊದಲು ವಿಶ್ವವಿದ್ಯಾಲಯದ ಶಿಕ್ಷಣವನ್ನು ಕುರಿತು ವಿಚಾರಿಸೋಣ. ವಿದ್ಯಾರ್ಥಿಯು ನಾಲ್ಕುವರುಷ Volkchule ನಲ್ಲಿ ಶಿಕ್ಷಣದ ತಳಹದಿಯನ್ನು (Fundamentals) ಪಡೆದ ಮೇಲೆ Gymnasium ಶಾಲೆಗಾಗಲಿ ಅಥವಾ Oberschuie (High School) ಗಾಗಲಿ ಹೋಗುತ್ತಾನೆ. Gymnasium ಶಾಲೆಯಲ್ಲಿ ಮತ್ತು Oberschule ಶಾಲೆಯಲ್ಲಿ— ಎರಡೂ ಕಡೆಗೆ, ಭಾಷೆಯ ವಿಷಯಗಳನ್ನು ಬಿಟ್ಟು ಉಳಿದ ಎಲ್ಲ ವಿಷಯಗಳೂ, Mathemetics Biology, ರಸಾಯನ ಶಾಸ್ತ್ರ ಮತ್ತು ಭೌತಶಾಸ್ತ್ರ. ಇತಿಹಾಸ-ಭೂಗೋಲ ಇವೆಲ್ಲ ಕಲಿಸಲ್ಪಡುತ್ತವೆ. ಜಿಮ್ನಾಜಿಯಂ ಶಾಲೆಯಲ್ಲಿ ಪುರಾತನಭಾಷೆಗಳಾದ, ಲ್ಯಾಟಿನ್, ಗ್ರೀಕ್, ಹಳೆಯ ಜರ್ಮನ್‌ಭಾಷೆ ಮತ್ತು ಫ್ರೆಂಚ್ ಇವುಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಲೇ ಬೇಕಾದ ವಿಷಯಗಳು. Oberschule (high school) ನಲ್ಲಿ, ಇತ್ತೀಚಿನ (Modern) ಭಾಷೆಗಳಾದ ಇಂಗ್ಲೀಷ್, ಫ್ರೆಂಚ್, ಜರ್ಮನ್ ಮುಂತಾದುವನ್ನು ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಲೇ ಬೇಕು. ೮ವರುಷದ ವ್ಯಾಕರಣ ಶುದ್ಧವಾದ ಭಾಷೆಯ ತಳಹದಿ ಇವರಿಗೆ ಇರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೂ ೩-೩ ಭಾಷೆಗಳು, (ಮಾತೃಭಾಷೆಯಲ್ಲದೆ) ಉತ್ತಮವಾಗಿ ಬರುತ್ತವೆ. ೯ ವರುಷ ಈ ಶಾಲೆಗಳಲ್ಲಿ ಅಭ್ಯಾಸಮಾಡಿ ಕೊನೆಯ ವರುಷದ ಕೊನೆಯಲ್ಲಿ "Abitur" ಎಂಬ ಪರೀಕ್ಷೆಯನ್ನು ಪಾಸ್‌ಮಾಡುತ್ತಾರೆ Abitur ಪರೀಕ್ಷೆ ವಿಶ್ವವಿದ್ಯಾಲಯದ ಪ್ರವೇಶ-ಪರೀಕ್ಷೆಯೆನ್ನಬಹುದು Abitur ಪರೀಕ್ಷೆಯನ್ನು ನಮ್ಮಲ್ಲಿಯ ಹಾಗೆ, ಬಾಯಿಂದ ಮತ್ತು ಬರೆಹದಿಂದ ಎರಡೂ ಬಗೆಯಿಂದ ತೆಗೆದು-ಕೊಳ್ಳುತ್ತಾರೆ.

ಇನ್ನು ವಿಶ್ವವಿದ್ಯಾಲಯಕ್ಕೆ ಬರೋಣ: ವಿಶ್ವವಿದ್ಯಾಲಯದಲ್ಲಿ ಬೇರೆ ಬೇರೆ Faculties ಇವೆ. ಉದಾ: (Naturial sciences) ಪ್ರಾಕೃತಿಕಶಾಸ್ತ್ರಜ್ಞಾನ, Law, Medicine, Philology; Economics & sociology ಇತ್ಯಾದಿ. ವಿದ್ಯಾರ್ಥಿಗೆ ವಿಷಯಗಳನ್ನು ಆರಿಸಿಕೊಳ್ಳಲು ಕಡ್ಡಾಯವಿಲ್ಲ. ಉದಾ: Natural Science Faculty ಯ ವಿದ್ಯಾರ್ಥಿಯು, Philosopy ಯನ್ನು ಕೂಡ ಕಲಿಯಬಹುದು. ಅಥವಾ ಅರ್ಥಶಾಸ್ತ್ರವನ್ನು ಕಲಿಯಬಹುದು. Medicin ನಿನ ವಿದ್ಯಾರ್ಥಿಯು ತತ್ತ್ವಜ್ಞಾನವನ್ನು ಉಳಿದ ವಿಷಯಗಳ ಸಂಗಡ. ಕಲಿಯಬಹುದು. ವಿದ್ಯಾರ್ಥಿಯು ಎಂಜಿನಿಯರನಾಗಬೇಕೆಂಬ ಆಶೆಯಿದ್ದಲ್ಲಿ (Technische Höch Schule) ಟೆಕ್ನಿಕಲ್ ಹಾಯ್‌ಸೂಲಿಗೆ ಹೋಗಬೇಕಾಗುವುದು. ಟೆಕ್ನಿಕಲ್ ಹಾಯ್‌ಸ್ಕೂಲುಗಳು ಮುಖ್ಯವಾದುವು, ಇವು: ಬರ್ಲಿನ್. ಹನೋವ್ಹರ್. ಕಾರ್ಲ್‌ಸ್ರೂಹ, ಮುನ್‌ಶೆನ್ ಮತ್ತು ಬ್ರಾವುನ್ಸ್‌ವಾಯಿಕ್. ವಿದ್ಯಾರ್ಥಿಯು Civil Engineer, Mechanical Engineer, electrical or Chemical Engineer. ವಿಷಯದಲ್ಲಿ ಡಿಪ್ಲೋಮಾ ಅಥವಾ ಡಾಕ್ಟರ್ ಪದವಿಯನ್ನು ದೊರಕಿಸಬಹುದು. ಈಗ ಮತ್ತೆ ವಿಶ್ವವಿದ್ಯಾಲಯಕ್ಕೆ ಬರೋಣ. ಕಡಿಮೆ ಕಡಿಮೆ ಎಂದರೆ ೮-೧೦ ಸೆಮಿಸ್ಟರ್ (೪-೫ ವರುಷ), ಪ್ರತಿಯೊಬ್ಬ ವಿದ್ಯಾರ್ಥಿಯು ಕಲಿಯಲೇಬೇಕು. ಸೆಮಿಸ್ಟರ ಕೊನೆಯ ಭಾಗದಲ್ಲಿ Vordiplom (ಫೋರಡಿಪ್ಲೋಮ್) ಎಂಬ ಪರೀಕ್ಷೆಯನ್ನು ತೆಗೆದು

ಕೊಳ್ಳುತ್ತಾನೆ. (Vor diplom) ಈ ಪರೀಕ್ಷೆ Natural sciences Faculty ಯಲ್ಲಿ ಬೇರೆ ಬೇರೆ ಫ್ಯಾಕಲ್ಟಿಯಲ್ಲಿ ಈ ಪರೀಕ್ಷೆಗೆ ಬೇರೆ ಬೇರೆ ಹೆಸರುಗಳಿವೆ ಅಷ್ಟೆ! ಈ ಪರೀಕ್ಷೆ ಪಾಸಾದ ಮೇಲೆ ವಿದ್ಯಾರ್ಥಿಯು (Doctor Father) ತನ್ನ ಮನಸ್ಸಿಗೆ ಬಂದ ಪ್ರೊಫೇಸರರ ಕೈ ಕೆಳಗೆ ಸಂಶೋಧನೆ ಮಾಡಿ ೧–೨ ವರುಷಗಳಲ್ಲಿ Diplom ಪದವಿಯನ್ನು ದೊರಕಿಸುತ್ತಾನೆ. ಇದಾದಮೇಲೆ (Docter Arbeit) Ph. D ಯ ಸಲುವಾಗಿ ೧–೨ ವರುಷ ಹೆಚ್ಚಿನ ಸಂಶೋಧನೆ ಮಾಡಿ Doctor rer Natur (Natural Scienee ನಲ್ಲಿ ಡಾಕ್ಟರ ಪದವಿಯನ್ನು ಪಡೆಯುತ್ತಾನೆ.) ಎಂಬ ಉಚ್ಚ ಪದವಿಯನ್ನು ಪಡೆಯುತ್ತಾನೆ. ಇನ್ನು ಶಿಕ್ಷಣದ ಫಿ ವಿಷಯ. Volkschule ನ ಶಿಕ್ಷಣ ಫ್ರೀ. ಆದರೆ Highschool ಮತ್ತು ವಿಶ್ವವಿದ್ಯಾಲಯದ ಫೀಯನ್ನು ಪ್ರತಿ ಒಬ್ಬ ವಿದ್ಯಾರ್ಥಿಯು ಕೊಡಬೇಕಾಗುವುದು. ವಿಶ್ವವಿದ್ಯಾಲಯದಲ್ಲಿ ಬೇಕಾದಷ್ಟು ಶಿಷ್ಯವೃತ್ತಿಗಳಿವೆ. ಮಾಫಿ, ಅರ್ಧಮಾಪಿ ಇತ್ಯಾದಿ ಅನೇಕ ಸವಲತ್ತುಗಳಿವೆ ಒಂದೆರಡು ಪ್ರಾಂತಗಳಲ್ಲಿ, (ಉದಾ: ಚೆಸ್ಸೆನ್ ಪ್ರಾಂತದಲ್ಲಿ). ಅಲ್ಲಿಯೆ ನೆಲಸಿದ ಜನರ ಮಕ್ಕಳ ಶಿಕ್ಷಣ ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದ ಶಿಕ್ಷಣದ ಕೊನೆಯುವರೆಗೂ ಪುಕ್ಕಟೆ. ಈ ಸವಲತ್ತು ಆ ಪ್ರಾಂತದವರಿಗಷ್ಟೇ

ವಿದ್ಯಾರ್ಥಿಗಳಿಗೆ ಮಾತ್ರ ಇನ್ನೂ ಅನೇಕ ರೀತಿಯಿಂದ ಸವಲತ್ತುಗಳನ್ನು ಕೊಡುತ್ತಾರೆ. ಇಲ್ಲಿಯ ವಿದ್ಯಾರ್ಥಿ ವಸತಿಗೃಹಗಳಿಗೆ ಬಹಳ ಅಗ್ಗ ಬಾಡಿಗೆ. ಅಲ್ಲದೆ ಪ್ರತಿಯೊಂದು ವಿಶ್ವವಿದ್ಯಾಲಯದಲ್ಲಿ " Mensa " ಎಂಬ ಭೋಜನಾಲಯವನ್ನು " Studentenwrke " (ವಿದ್ಯಾರ್ಥಿ ಸಂಘದವರು) ತೆರೆದು, ವಿದ್ಯಾರ್ಥಿಗಳಿಗೆ ಅಗ್ಗವಾಗಿ ಊಟದ ವ್ಯವಸ್ಥೆ ಮಾಡುತ್ತಾರೆ. ಜರ್ಮನಿಯಲ್ಲಿಯ ಬೇರೆ ಬೇರೆ ಮುಖ್ಯ ಐತಿಹಾಸಿಕ, ಔದ್ಯೋಗಿಕ, ರಾಜಕೀಯ ಸುಪ್ರಸಿದ್ಧ ಸ್ಥಳಗಳನ್ನು ಅಥವಾ ಬೇರೆ ಬೇರೆ ಕಾರಖಾನೆಗಳನ್ನು ನೋಡಲು ಹೋಗಲಿಕ್ಕೆ, ಬಹಳೇ ಅಗ್ಗವಾದ ವ್ಯವಸ್ಥೆಯನ್ನು ಮಾಡುತ್ತಾರೆ. ಅಲ್ಲದೆ, ಯುರೋಪದಲ್ಲಿಯ ಬೇರೆ ಬೇರೆ ದೇಶಗಳನ್ನು ನೋಡಲು ಹೋಗಲು ಪ್ರತಿಯೊಂದು ವಿಶ್ವವಿದ್ಯಾಲಯವು ಬಹಳೇ ಅಗ್ಗವಾಗಿ ರೈಲ್ವೆ, ಬಸ್ಸು, ವಿಶ್ರಾಂತಿ ಗೃಹಗಳ ವ್ಯವಸ್ಥೆಯನ್ನು ಮಾಡುತ್ತಾರೆ. ಒಟ್ಟಿನ ಮೇಲೆ, ಎಲ್ಲ ವಿಶ್ವವಿದ್ಯಾಲಯಗಳವರೂ ವಿದ್ಯಾರ್ಥಿಗಳ ಅನುಕೂಲತೆಗಳ ಬಗ್ಗೆ ಹೆಚ್ಚಾಗಿ ಮನಸ್ಸು ಕೊಡುತ್ತಾರೆ.

ವಿಶ್ವವಿದ್ಯಾಲಯದ ಪರೀಕ್ಷೆಗಳು ಬರೆ ಬಾಯಿ ಪರೀಕ್ಷೆ. ವಿದ್ಯಾರ್ಥಿಯು Professor ನಾಗಬೇಕಾದರೆ, ತನ್ನ Doctor rer Natur ಪದವಿಧರನಾದಮೇಲೆ, ಸ್ವತಃ ಯಾವುದಾದರೊಂದು ವಿಷಯದ ಮೇಲೆ ಸಂಶೋಧನೆ ಮಾಡಿ ಕನಿಷ್ಠ ಪಕ್ಷಕ್ಕೆ ೩೦ ಪೇಪರ್ಸಗಳನ್ನು ಆ ವಿಷಯದ ಮೇಲೆ ಪ್ರಸಿದ್ಧಿಸಿ, " Habititation " ಎಂಬ ಪದವಿಯನ್ನು ದೊರಕಿಸಬೇಕು. ಆಮೇಲೆ Dorent ನಾಗಿ ೫ ವರುಷ ವಿಶ್ವವಿದ್ಯಾಲಯದಲ್ಲಿ ಶಿಕ್ಷಕನಾಗಬೇಕು. ಆಮೇಲೆ ಅವನು Professor ನಾಗಲು ಯೋಗ್ಯನು, Medicin ದಲ್ಲಿಯೂ ಇದೇ ರೀತಿಯಾಗಿದೆ. ಉಳಿದ ಭಾಗದಲ್ಲಿಯೂ ಹೀಗೆಯೆ ಇದೆ.

ಇನ್ನು ಬೇರೊಂದು ವಿಷಯ. ವಿದ್ಯಾರ್ಥಿಯು ಬರಿ ಶಿಕ್ಷಕನಾಗಬೇಕು ಅಥವಾ ಯಾವುದಾದರೊಂದು ಉದ್ಯೋಗ ಕಲಿಯಬೇಕು ಎಂಬ ಆಶೆಯಿದೆ. ಶಿಕ್ಷಕನಾಗಬೇಕಾದರೆ, Volksseule ನಲ್ಲಿ ನಾಲ್ಕು ವರುಷ ಮುಗಿಸಿ Mittel schule (ಮಿಡಲ್ ಸ್ಕೂಲ) ನಲ್ಲಿ ಭಾಷೆ (Latin, French, Mathematics, Geography, history ಇತ್ಯಾದಿ ವಿಷಯಗಳನ್ನು) ೬ ವರುಷ ಕಲಿತು Teherer Akedemy (ಶಿಕ್ಷಕರ ಅಕೆಡೆಮಿ) ಯಲ್ಲಿ ವಿಶೇಷವಾದ ತರಬೇತನ್ನು ಹೊಂದಿ Uolks schule ನಲ್ಲಿಯಾಗಲಿ ಅಥವಾ high school ನಲ್ಲಿಯಾಗಲಿ ಶಿಕ್ಷಕನಾಗುತ್ತಾನೆ.

ಇನ್ನು ಉದ್ಯೋಗದಲ್ಲಿ ಇಚ್ಛೆಯಿದ್ದ ವಿದ್ಯಾರ್ಥಿಯು Volkschule ನಲ್ಲಿ ೮ ವರುಷ ಅಭ್ಯಾಸ ಮಾಡಿ Berufs fach schule ನಲ್ಲಿ (ಔದ್ಯೋಗಿಕ ಶಾಲೆ) ತನಗೆ ಇಚ್ಛೆ ಇದ್ದ ಉದ್ಯೋಗವನ್ನು ಕಲಿಯುತ್ತಾನೆ. ಉದಾ: ಉಪ್ಪಾರನ ಕೆಲಸ, ಬಡಿಗತನ, ಬುಕ್ ಬಾಯಿಂಡಿಂಗ್, ತೋಟ ಮಾಡುವದು, ಒಕ್ಕಲತನ, ಕಾರಖಾನೆಯ ವಿಷಯಗಳು, clerical mecharic ಹೊಲಿಯುವದು ಇತ್ಯಾದಿ. ಪ್ರತಿಯೊಬ್ಬ ವಿದ್ಯಾರ್ಥಿಯ ಶಿಕ್ಷಣ ಪುಕ್ಕಟೆ. ಅಲ್ಲದೇ ಕೆಲವು ಕೆಲವು ಶಾಲೆಗಳಲ್ಲಿ ಊಟ ವಸತಿ ಪುಕ್ಕಟೆಯಾಗಿ ಸಿಗುತ್ತವೆ. ಇಲ್ಲಿಯೂ ಕೂಡ ೫–೬ ವರುಷ ಕಠಿಣವಾಗಿ ದುಡಿಯಬೇಕಾಗುವುದು. ಇನ್ನು ಕಡಿಮೆ ಕಡಿಮೆ ಅಂದರೆ ಪ್ರತಿಯೊಂದು ಹಳ್ಳಿಯಲ್ಲಿ Volks schule ಇದ್ದೇ ಇದೆ. ಅಲ್ಲದೇ ಕಡಿಮೆ ಕಡಿಮೆ ಎಂದರೆ ಪ್ರತಿಯೊಬ್ಬ ಜರ್ಮನ್ನನು ೮ ವರುಷ Volks schule ಗೆ ಹೋಗಲೇಬೇಕೆಂದು ಸರಕಾರದ ಕಟ್ಟಳೆಯಿದೆ.

ಕುಟುಂಬ ಮತ್ತು ಸಾಮಾಜಿಕ ಜೀವನ

ಎರಡನೆಯ ಮಹಾಯುದ್ಧದ ತರುವಾಯು, ಇಲ್ಲಿಯ ಕುಟುಂಬಗಳು ಬಹಳೇ ಚಿಕ್ಕವಾಗಿವೆ. ಕುಟುಂಬವೆಂದರೆ, ತಂದೆ ತಾಯಿ, ಹೆಚ್ಚೆಂದರೆ ಎರಡು ಮಕ್ಕಳು. ಒಟ್ಟಿನ ಮೇಲೆ ಕುಟುಂಬವು ಪೂರ್ವಯೋಜಿತವಾದದ್ದಿರುತ್ತದೆ. Planned family ಇದಕ್ಕೂ ಎಷ್ಟೋ ಅಪವಾದಗಳಿವೆ. ಶ್ರೀಮಂತರ ಕುಟುಂಬಗಳು ಸಾಧಾರಣವಾಗಿ ದೊಡ್ಡವು. ಆರ್ಥಿಕ ಪರಿಸ್ಥಿತಿಯು ಸಮಾಜವನ್ನು ವಿಭಾಗಿಸಿದೆ. ಶ್ರೀಮಂತರು, ಮಧ್ಯಮ ವರ್ಗದವರು ಅಲ್ಲದೇ ಬಡವರು. ಮಧ್ಯಮ ವರ್ಗಕ್ಕೆ ಸೇರಿದ ಜನರೇ ತುಂಬ. ಕೆಲವು ಭಾಗಗಳಲ್ಲಿ ಒಕ್ಕಲಿಗರು ಅತಿ ಶ್ರೀಮಂತರಾಗಿದ್ದಾರೆ. ಶ್ರೀಮಂತಿಕೆ, ಬಡತನ ಇವು ಸಮಾಜದ ಕಾರ್ಯಕ್ರಮಗಳಲ್ಲಿ, ಸಂಘಗಳ ಕಾರ್ಯಕ್ರಮಗಳಲ್ಲಿ (Fests-Religionsfmek ಇತ್ಯಾದಿ) ಕಂಡುಬರುವದಿಲ್ಲ. ಆದರೂ ಇದೆ. ಇಲ್ಲಿ ಲಗ್ನವಾಗುವ ರೀತಿಯೇ ಬೇರೆ. ಹುಡುಗ, ಹುಡುಗಿ ತಮ್ಮ ತಮ್ಮ ಜೊತೆಗಾರರನ್ನು ಆರಿಸಿಕೊಳ್ಳಲು ಸ್ವತಂತ್ರರು. ಇದೇನೂ ಮಾದರಿಯ ರೀತಿಯೆನಿಸುವುದಿಲ್ಲ. ಇದರಲ್ಲಿಯೂ ಎಷ್ಟೋ ಮರುಪ್ಲ

ಯೋಗಗಳಿವೆ. ಧಾರ್ಮಿಕ ಕಟ್ಟಳೆಯಿಂದ, ಗಂಡ ಹೆಂಡಿರು ವಿವಾಹ ವಿಚ್ಛೇದನ ಮಾಡಲು ನಿರ್ಬಂಧವಿದೆ; ಆದರೆ ಸಾಮಾಜಿಕವಾಗಿ ಎಷ್ಟೋ ವಿವಾಹ ವಿಚ್ಛೇದನಗಳನ್ನು ಕಾಣಬಹುದು. ಕುಟುಂಬದಲ್ಲಿ ಪ್ರತಿಯೊಬ್ಬ ಗಂಡಸು ಹಾಗೂ ಹೆಂಗಸು ದುಡಿಯುತ್ತಾರೆ. ಆದುದರಿಂದ ಸಂಸಾರದ ಭಾರ ಒಬ್ಬನ ಮೇಲೆ ಬೀಳುವದಿಲ್ಲ.

ಧಾರ್ಮಿಕ ಜೀವನ

ಇಲ್ಲಿ ಮುಖ್ಯವಾಗಿ ಧಾರ್ಮಿಕ ಪಂಗಡಗಳು ಎರಡು: ಥೋಲಿಕ್ ಮತ್ತು ಪ್ರೊಟೆಸ್ಟಂಟ್. ಪ್ರೊಟೆಸ್ಟಂಟ ಮತದ ಸಾಟಿಪಕರು ಮಾರ್ಟಿನ್ ಲ್ಯೂಥರ. ಮಾರ್ಟಿನ್ ಲ್ಯೂಥರನ ಸ್ಮಾರಕದ ಕುರುಹುಗಳು ಜರ್ಮನಿಯ ಎಷ್ಟೋ ಭಾಗಗಳಲ್ಲಿವೆ. ಅವುಗಳಲ್ಲಿ ಮುಖ್ಯವಾದದ್ದು "Worms" ದಲ್ಲಿಯ Matin Luthar ರ Monument. ಊರಿದ್ದಲ್ಲಿ ಹನುಮಪ್ಪನ ಗುಡಿಯಿದ್ದಂತೆ ಪ್ರತಿಯೊಂದು ಹಳ್ಳಿಯಲ್ಲಿ ಒಂದು ಪ್ರೊಟೆಸ್ಟಂಟ್ ಮತ್ತು ಒಂದು ಕ್ಯಾಥೊಲಿಕ್‌ರ ಚರ್ಚಗಳನ್ನು ಕಾಣಬಹುದು. ಈ ಎರಡೂ ಪಂಗಡಗಳು ಐತಿಹಾಸಿಕ ಪ್ರಸಿದ್ಧವಾದವುಗಳು. ಈ ಚರ್ಚುಗಳ ಉಪಜೀವನದ ಸಲುವಾಗಿ, ಪ್ರತಿಯೊಬ್ಬನೂ ತನ್ನ ಸಂಬಳದಲ್ಲಿ ೧-೨% ಹಣವನ್ನು ಕೊಡಲೇಬೇಕೆಂದು ಸರಕಾರದ ಕಟ್ಟಳೆಯಿದೆ. ಪ್ರತಿಯೊಬ್ಬನೂ ಧಾರ್ಮಿಕ ರೀತಿಯಿಂದ ಚರ್ಚಿನಲ್ಲಿ ಮದುವೆಯಾಗಬೇಕು. ಧಾರ್ಮಿಕ ಪಂಗಡಗಳು ಒಮ್ಮೊಮ್ಮೆ ರಾಜಕಾರಣದಲ್ಲಿ ಸಕ್ರಿಯ ಭಾಗವನ್ನು ತೆಗೆದುಕೊಳ್ಳುತ್ತಿವೆ. ಉದಾ: ಡಾ. ಕೆನ್‌ರಾಡ ಅಡೆನಾವರರು Chrishin Democratic Party ಯ ಮುಖ್ಯಸ್ಥರು. ಕಳೆದ ೭-೮ ವರುಷಗಳಿಂದ ಈ ಪಕ್ಷವು ಬಹಳೇ ಜನಾದರಣೀಯ ಪಕ್ಷವು. ಬಾಯಬಲನ್ನು ಶಬ್ದಕ್ಕೆ ಶಬ್ದವನ್ನು ಅನುಸರಿಸುವ ಜನರೂ ಇದ್ದಾರೆ. ಬಾಯಬಲ್‌ನ್ನು ಎಷ್ಟೋ ವರುಷಗಳಿಂದ ನೋಡದೇ ಇದ್ದ ಜನರೂ ಇದ್ದಾರೆ. ಬಹಳೇ ಜನರು ತಮ್ಮ ಧರ್ಮದ ಕಟ್ಟಳೆಗಳನ್ನು ಬಿಡದೆ (ಉಲ್ಲಂಘಿಸದೆ) ಬೇರೆ ಧರ್ಮವನ್ನು ಹೀಯಾಳಿಸದೆ, ಒಂದು ಉಚ್ಚತರವಾದ ಧಾರ್ಮಿಕ ಭಾವನೆಯನ್ನು ಇಟ್ಟುಕೊಂಡಿದ್ದಾರೆ.

ಜರ್ಮನಿಯು ಯುದ್ಧದಲ್ಲಿ ಸೋತರೂ ಕೂಡ, ಕಳೆದ ೭-೮ ವರುಷಗಳಲ್ಲಿ ಇಲ್ಲಿಯ ಆರ್ಥಿಕ ಪರಿಸ್ಥಿತಿಯು ಬಹಳೇ ಸುಧಾರಿಸಿದೆ. ಜೀವನದ ಪ್ರಮಾಣ (Std. of livirg) ಏರಿದೆ. ಪ್ರತಿ ಒಬ್ಬನ ಪ್ರತಿ ತಿಂಗಳ ಉತ್ಪನ್ನ ಕಡಿಮೆ ಕಡಿಮೆ ಎಂದರೆ 350/- ರೂಪಾಯಿ. ಉತ್ತಮವಾದ ಅರಿವೆ ಜನರು ಧರಿಸುತ್ತಾರೆ. ಊಟ ಊಡಿಗೆ ಕಾಲದ ಉಚ್ಚತರಗತಿಯವು. ಎಲ್ಲ ಕಾರಖಾನೆಗಳು ಯುದ್ಧದ ಮೊದಲಿನ ದಿನಗಳಂತೆ ಬಹಳ ಪ್ರಮಾಣದಲ್ಲಿ ಬೇರೆ ಬೇರೆ ಪದಾರ್ಥಗಳನ್ನು ತಯಾರಿಸುತ್ತವೆ. ವರುಷದಿಂದ ವರುಷ ಜರ್ಮನ್ನಿನ "mark" (ನಮ್ಮಲ್ಲಿಯ ರೂಪಾಯಿ ಇದ್ದ ಹಾಗೆ) ನ ಬೇಲೆ ಏರುತ್ತಿದೆ.

ಆದರೆ, ರಾಷ್ಟ್ರಿಯ ಭಾವನೆ ಇವರಲ್ಲಿ ವಿಪರೀತವಾಗಿ ತುಂ ತುಳುಕುತ್ತದೆ. ಇವರಿಗಿದ್ದಷ್ಟು ರಾಷ್ಟ್ರೀಯ ಭಾವನೆ ಜಗತ್ತಿನ ಯಾರಿಗೂ ಇಲ್ಲವೆನ್ನಬಹುದು ಜಗತ್ತಿನಲ್ಲಿ ಜನಾಂಗವೆಂದ ಜರ್ಮನ ಜನಾಂಗ ಒಂದೇ ಎಂಬ ವಿಪರೀತ ರಾಷ್ಟ್ರೀಯ ಭಾವ ಹುದಿಗಿಕೊಂಡು ಕೂತಿದೆ. ಹಿಂದೀಯನನ್ನು ಕಂಡರೆ ವಿಪರೀತ ಪ್ರೀ ಒಂದು ವಿಚಿತ್ರವಾದ ಆಕರ್ಷಣೆ. Indo Germanisch ಅಪ್ತತ್ವ ವಿಚಾರ ಇವರಲ್ಲಿ ತುಂಬಿದೆ. ಎಲ್ಲರೀತಿಯಿಂದಲೂ ಹಿಂದಿಯರೀ ಸಹಾಯಮಾಡಲು ಸಿದ್ಧರಾಗುತ್ತಾರೆ.

ಮನರಂಜನೆ

ದುಡಿಯಬೇಕಾದಾಗ ದುಡಿಯುವದು, ಆಡುವಾಗ ಆಡುವ ಎಂಬ ಗಾದೆಯ ಮಾತನ್ನು ತುಂಬ ಅನುಸರಿಸುತ್ತಾರೆ. ಪ್ರತಿಯೊಂದ ದೊಡ್ಡ ಪಟ್ಟಣಗಳಲ್ಲಿ ಉದಾ: "ಮಾಯಿನ್ಸ," "ವೀಸಬಾಡನ್, "ಕಲೋನ್," "ಡುಸೆಲ್ ಡೋರ್ಫ," "ಮುನ್‌ಶಿನ್," "ಡರ್ಮಸ್ಟಾಟ್ಟ" "ಸ್ಟುಟ್‌ಗಾರ್ಟ" ಮತ್ತು ಫ್ರಾಂಕಫುರ್ಟನಲ್ಲಿ "ಒಪೆರಾಹೌಸ್" ಗಳಿವೆ. ಇಲ್ಲಿ ಪ್ರಸಿದ್ಧ ಕಂಪ್ರೋಸಕಾರರಾ (Composers) Mofart, ಬೀಥಗೋಫನ್, ಜೋಹಾನೆಸ್ ಸ್ಟ್ರಾವುಸ್, ವೆರ್ದಿ ಮತ್ತು Gocthe ಅವರ Faust Wagner ಇವ Oper a ಮತ್ತು Operetta ಗಳನ್ನು ಮತ್ತು ಕೆಲವು ಕಾಲ ನಾಟ ಗಳನ್ನು ಮತ್ತು Ballats ಗಳನ್ನು ಏರ್ಪಡಿಸುತ್ತಾರೆ.

ರ್‍ಹಾಯಿನನದಿಯ ದಂಡೆಗುಂಟ ಮತ್ತು ನೊಸೆಲ್ ನದಿಯ ದಂಡೆಗುಂಟ ಎಷ್ಟೊ ಅನೇಕ ಚಿಕ್ಕ ಚಿಕ್ಕ ಹಳ್ಳಿಗಳಿವೆ. ಈ ಎರಡೂ ನದಿಯ ದಂಡೆಗುಂಟ (ಕೆಲವು ಭಾಗ) ದ್ರಾಕ್ಷಿಯ ವನಗಳಿವೆ. ಪ್ರತಿಯೊಂದು ಹಳ್ಳಿಯು ತನ್ನದೇ ಆದ ಶರೆಯ ರುಚಿಗೆ ಪ್ರಸಿದ್ಧವಾಗಿದೆ. ಪ್ರತಿ ವರುಷ ಹೊಸ ಶರೆಯು (Wine) ಬಂದ ಕೂಡಲೇ, ಈ ಸಮಯವನ್ನು ಸೂಚನೆ ಮಾಡುವದರ ಸಲುವಾಗಿ ಪ್ರತಿ ಒಂದು ಹಳ್ಳಿಯು Winefcst ಏರ್ಪಡಿಸುತ್ತದೆ. ಜರ್ಮನಿಯ ಬೇರೆಯಬೇರೆಯ ಭಾಗಗಳಿಂದ ಈ "Winefestival" ಗಳಿಗೆ ಜನರು ಬರುತ್ತಾರೆ. ಮುಖ್ಯವಾಗಿ, ಕುಣಿಯುವದು, ಕುಡಿಯುವದು ಅಲ್ಲದೇ ಇತರ ಮನೋರಂಜನ ಕಾರ್ಯಕ್ರಮಗಳಲ್ಲಿ ಭಾಗ ತೆಗೆದುಕೊಳ್ಳುವದು ಇತ್ಯಾದಿ. ಇವುಗಳಲ್ಲಿ Munchner October Bicr Fest, Ingelhcimer rotweinlest, Eltville Sekt Fest ಇತ್ಯಾದಿ ಮುಖ್ಯವಾದವುಗಳು.

ಇದಲ್ಲದೇ, ಕ್ರಿಸ್‌ಮಸ್, ಕಾರ್ನಿವ್ಹಾಲ್, Oster ಇತ್ಯಾದಿ ಧಾರ್ಮಿಕ ಹಬ್ಬಗಳು ಇವೆ. ಈ ಹಬ್ಬಗಳಲ್ಲಿ ಕುಣಿಯುವ ಮತ್ತು ಇನ್ನಿತರ ಮನೋರಂಜಕ ಕಾರ್ಯಕ್ರಮಗಳಿರುವುವು.

ಕಾಲಗತಿ.

(ನವ್ಯಕವನ)

ಶ್ರೀ. ಅರವಿಂದ. ನಾಡಕರ್ಣಿ, ಬಿ. ಎ., ಎಲ್‌ಎಲ್. ಬಿ.
ಮುಂಬಯಿ

(೧)

ಆಗ ನೀನಿನ್ನೂ ಪೋರಾ.
ಕೆಂದಳಿರ ಹಂದರದಿ ಕೂತು ಚಿಲಿಪಿಲಿಗುಡುವ
ಸಿಂಧುರಕೊಕ್ಕಿನ ಅರಗಿಣಿ ನೀನು.
ಶ್ರೀರಾಮ ಸುಗ್ರೀವ ರಕ್ಷೆಯಲಿ ಕಡಲ ಲಂಘಿಸುವ
ಮಾರುತಿ ಹುರುಪು ತುಳುಕುವ ಮಣಕ ನೈ.
ಮುಗುಳ ಕದ ತೆರೆದು ಮಧುಚೀಪುವ ರೇಶಿಮೆಮೈಯ
ಮರಿಚಿಟ್ಟೆ ನೀನು.
ತೃಣಾಂಕುರಪಥದಲಿ ಪದವಿಟ್ಟು ದಿಗ್ಭ್ರಮಿಸುವ ಮರಿಯಾನೆ.
ಕುಂಡಲಿಮಂಡಲವೇ ಅಮೃತಶಿಲಾಸೌಧವಿರೆ
ನೀನು ಕಂಡದ್ದು ಚೈತ್ರವನ ವಟ–ಅಶ್ವತ್ಥಮಂಟಪ–
ವೃಂದಾವನ ಕೋಲಾಟ.

ಕತ್ತಲಕಟುಕನನು ಸಂಕಲೆಬಿಗಿದು ಕಾವಲಿಟ್ಟಿತ್ತು
ವಿದ್ಯುದ್ದೀಪದ ಫೌಜು.
ಆಗ ಯೋಚಿಸಿದ್ದೇ ನೀ—
ಗುಂಡು ಹೊಡೆದರೆ ಸಾಕು ಉದುರುವವು
ಮಾಮಿಡಿಗೊನೆಗೊನೆ.
ಒಮ್ಮೆ ಏರಿದರೆ ಹಿಮಾಚಲಶೃಂಗದಿ ನೆಡುವೆ ತ್ರಿವರ್ಣಪತಾಕೆ.
ಮನಬಡಿದೆಬ್ಬಿಸಿ ಕಟ್ಟಿ ನೊಗ ಹೂಡುವುದು ಹೊಲಹೊಲ.
ಸಾವಿರಾರು ಮೈಲುಗಳನಕ.
ಅನಂತರ ತೆನೆತೆನೆಕೊಯಲು...............
ಹಸ್ತಿದಂತ ಮಂಚಕದ ರೇಶಿಮೆಯ ಸುಖಶಯ್ಯೆಯಲಿ
ಇರುಳ ಮೋಡಿಯಲಿ ರೆಕ್ಕೆಪಡೆದು ನುಗ್ಗಿದೆ ಮಯಮಂದಿರದಲ್ಲಿ.
ವಜ್ರವೈಡೂರ್ಯದ ನೆಲಗಟ್ಟು. ಚಿನ್ನ–ಮುತ್ತುಗಳ ದಾರವಟ್ಟ
ಮಾಣಿಕ–ಮರಕತಗಳ ತೊಲೆ–ಜಂತಿ–ರೀಪು.
ನೀಲ–ಹವಳಗಳ ಭಿತ್ತಿ ಬೋದಿಗೆ ಲೋವೆ.
ಛತ್ರ ಚಾಮರ ನೀಸಕ ಸಕಲಕಕುದ ಸಂಪನ್ನನಾಗಿ
ಮೂರ್ಧಾಭಿಷೇಚನೆ ಮಾಡಿಕೊಂಡೆ !...............
ಎಲಾ ಇವನ, ಶುದ್ಧಗೊಲ್ಲನೇ ನೀನು ?
ಘರ್ರಘರ‍್ರೆಂದು ಕಾಂಚನಕಾರು ಹಾಯುತಿರೆ ಚೆಲ್ಲಾಪಿಲ್ಲಿ
ಮುರಿವ ಚಕ್ರದ ಕಿರಲು ಕೇಳಲಿಲ್ಲ.
ಉತ್ತ ಗದ್ದೆಯ ಪೈರು ಒತ್ತಿ ಬೆಳೆದೆದ್ದಿರಲು
ಶಲಭ–ಕೀಟದ ಗಲಭೆ ಕಾಣಲಿಲ್ಲ.

(೨)

ಮುಂದೆ ಕಂಡೆಯಾ ಕಾಲಗತಿ ?
ಚಿತ್ರಕೂಟ ತೊರೆದಾಗ ತಿಳಿಯಿತೇನೊ ಪಂಚವಟಿರುಚಿ.
ವಾತಾಪಿಭೋಜನದ ಸಿಹಿ. ಕಬಂಧನ ತೋಳುಗಳ ಲಲ್ಲೆ.
ಶೂರ್ಪಣಖಿಯ ರತಿಭಾವೋನ್ಮಾದ ಮಾಧುರ್ಯ.
ಕಾಂಚನ ಹರಿಣದ ಬೇಟೆಯಾಟದ ಸೊಗಸು ಆಹಹಾ !
ಸ್ವಿಚ್ಚಿಗೆ ಕೈಯಿಕ್ಕಿದರೆ ಮೈಗೆ ಶಾಕು ಬಡಿಯಿತೇ ?
ಧೂಮ್ರಪಾನವಿನೋದದಿ ಉದ್ಯಾನದಿ ಕೂತಿರಲು
ಜಡಿಮಳೆಯೆ ಚಪ್ಪರಿಸಿ ಹೊಸಸೂಟು ಅದ್ದಿತೇ ?
ಹೊಚ್ಚಹೊಸಕಾರಿನಲಿ ಉಚ್ಚ ಸವಾರಿಯಾಗಿ ಸಾಗಿರಲು
ರೊಚ್ಚಿಗೇರಿದ ಗಾಡಿಗಪ್ಪಳಿಸಿ ಕಾರು ನುಚ್ಚುನೂರಾಯಿತೇ ?

ಕೈಹಾಕಿದಲ್ಲಿ ಅಗ್ನಿಕುಂಡ, ಕಾಲಿಕ್ಕಿದಲ್ಲಿ ಕೊಳಚೆಹೊಂಡ !
ಅರರೇ ನನ್ನಮನದ ವಿರುದ್ಧ ಈ ಯುದ್ಧ ಅಬದ್ಧ.
ಕಾಲೊತ್ತಿ ಗದ್ದರಿಸಿದೆ ಮೇಜನು ಗುದ್ದಿ “ ನೀನಾರು
ಎಲವೊ ಪೆದ್ದ ? ”
ಮೇಲೆ ನಕ್ಕನು ಸೂರ್ಯ ಸಪ್ತಾಶ್ವರಥದಲ್ಲಿ.
ನಗೆನಿಮಿಷಗಳಾಗಿ ಝುಗ್ಗನೆ ಮಿಂಚಿ ಲಯವಾದುವು
ಹಿಂದುಗಡೆ.
ರಥಚಕ್ರ ತಿರುಗುತಿವೆ ಮುಂದೆ ಮುಂದೆ.
ಆಗ ಕಾಣಿಸಿತು ಕೌರವರಣ.
ಶಾಕಿನಿ ಡಾಕಿನಿ ಚಂಡಿ ಚಾಮುಂಡಿಯರ ಪ್ರಚಂಡ ತಂಡ
ತೊವಲ ಸುಲಿದು ತುಂಡರಿಸಿ ಮುಕ್ಕಿತು ಕ್ರವ್ಯರುಧಿರವಸೆಮಜ್ಜೆ.
ಸುತ್ತಲೂ ಬೇತಾಳಕುಣಿತ ಬಾಂಬು-ಫಿರಂಗಿಗಳ ಮಹಾನಿಸ್ವನ.
ವೈರಪ್ರಹಾರಕ್ಕೆ ತತ್ತರಿಸಿತು ನಮ್ಮಸೇನೆ.
ಅವರೋ ಜರ್ಮನ್ ರಕ್ತದವರು.

ಯಾವ ಸ್ಥಳಕೆ ಯಾವಾಗ ಬಂದು ಗರ್ಜಿಸುವರೋ ತಿಳಿಯದು
ಭೂ-ವ್ಯೋಮ-ಪಾತಾಳಗಳಿಂದ ಎಲ್ಲಿಂದಲೂ ಮಿಂಚಿನಂತೆರಗಿ
ರುಂಡ-ರುಂಡಗಳ ಚೆಂಡಾಡಿ. ಮಾಯವಾಗುವರಪ್ಪ
ಮಹಾಘಾತುಕರು!
ಕೊನೆಗೊಮ್ಮೆ ರಣಹಾಯ್ದು ನೋಡಿದೆಯಾ ನಮ್ಮ
ಸೇನೆಯ ಗತಿ ?
ಅಲ್ಲಲ್ಲಿ ಬಿದ್ದಿವೆ ಅಟ್ಟೆ ರಟ್ಟೆ ಜಂಘೆ ಬುರುಡೆ ಮೂಳೆ ಕತ್ತು
ಮುರಿದ ಕೈದು ತುಬಾಕಿ; ಕುಸಿದ ಟ್ಯಾಂಕು ಹರಿದ ಸಿಂಘ -
ಸೀಸಕಹುಡಿ.
೫೯) ನೆತ್ತರಬುಗ್ಗೆ ಪ್ರೇತರಾಶಿ ಅಬ್ಬಬ್ಬ !

ಕುಸಿದು ಧೂಳಿಪಟವಾಯಿತೇ ಚಿನ್ನರನ್ನದ ಸೌಧ ?
ನಡುಬೀದಿಯಲಿ ರೊಚ್ಚುಗೊಜ್ಜಲಾಯಿತು ಹಂಪೆಕೊಂಪೆ!
ಸುಟ್ಟ ಕಾಷ್ಠದ ಮೇಲೆ ಬೂದಿದಿಂಬನ್ನಿಟ್ಟು ಗೊರಕೆಹೊಡೆ.
ದಗ್ಧಜೀವ ಕಿರಲುತಿದೆ ರುಗ್ಣಕಂಠ ವಿಷ್ಣೇಶ್ವರನ ಪಾದಕೆರಗಿ
ಇದು ಅವನ ಖುಶಿಯಪ್ಪ ಚಿಂತನವಿಲಾಸಭಂಗಿ.
೬೫) " As flies to wanton boys so are we to gods "

(೩)

ಅಜಧೇನುಮೂಕ ಭೂಲೋಕ
ಅದಕೆಡವಿ ಮೆಟ್ಟಿ ನಿಂತಿದೆ ಅಜಾಂಡವಜ್ರಡಿಂಬ
ಅದರ ಕಿರುಬೆರಳು ಸಾಕು ಕೈಲಾಸಾದ್ರಿಗಳ ಅಣು-ರೇಣು
ಹಾರಿಸಲು.
ನಿನ್ನ ಕೋದಂಡ ಗಾಂಡೀವ ಕುಲಿಶ ಪರಶು
ಅಣುಬಾಂಬು-ರಾಕೆಟ್ಟುಗಳನ್ನು ಧೂಳಿಗೊತ್ತಿ ಸಾಷ್ಟಾಂಗವೆರಗಿ
ಅದರ ಕಾಲನು ನೆಕ್ಕಿದರಷ್ಟೇ ಜೀವದುಳಿವು ನಿನಗೆ.
ನಿನ್ನ ಜಂಭಾರಿಪದಡೊಂಬನು ಕಳೆದು ಜೋಳಿಗೆ ಹಿಡಿ
ಅದರೆಡೆ ಕುಂಟತಟ್ಟೇ!
ಮರಳಮರಡಿಯ ಮೇಲೆ ಕಟ್ಟು ಜೇಕಾದಷ್ಟು ಭದ್ರಬಂಗಲೆ.
ಇಸ್ಪೀಟುರಾಣಿಯರ ಉಪವನದಿ ಹಾಕು ಮನವಾರೆ
ಧಾಂದಲೆ.
ಅದರೆಲವೋ ತ್ರೈಲೋಕ್ಯಚೌಪಟವಲ್ಲ.
ಶಿಖಂಡಿ-ಬಂಜೆಯರ ನಲ್ಲ
೭೭) ಎದುರುನಿಂತವನ ನೋಡು ರುಂಡಮಾಲಾಲಂಕೃತ
ಮಹಾಕಿರಾತ.
ಇದು ನಮ್ಮ ಕರ್ಣಾವತಾರಪರ್ವವಯ್ಯ.
ಏನು ಸಂದುಕದಿ ಎಳಮಗುವೊತ್ತಿ ಕಲ್ಲೋಲದಿ
ತೇಲಿಬಿಟ್ಟಳೇ ನಿಜಮಾತೆ?

ಕಾಲತಿಗುರಿ ಎಂಜಲಮುಕ್ಕಿದ ಶಿಷ್ಯನಿಷ್ಠೆಗೆ ಜಡಿಯಿತೇ
ನಿಷ್ಠುರಶಾಪ !
ಸ್ವಯಂವರಸಭೆಯಲಿ ಸೂತಬಿರುದು ಸೋಕಿಯಿತೇ
ರಾಜಪುತ್ರನನ್ನು ?
ರಣಾಂಗಣದಿ ಕುಂಡಲಾದಿ ಕವಚ ಸೆಳೆದರೇ ಇಂದ್ರಾದಿ
ದೇವಗಣ !
ವರೂಥಚಕ್ರ ನುಂಗಿತೇ ವಸುಂಧರೆ ? ಕಣ್ಕಂಬು ತಿವಿದನೇ
ನಿಜಾನುಜ !
ಅಯ್ಯೋ ಪಾಪ ! ಪಾಪ !
ವಿಟಪ ಚುಮುಕಿಸುತಿದೆ ಹಗಿನ ಚೌಧಾರೆ.
ಹೂದಳಕೆ ಕೈಯಿಡಲು ರೊಚ್ಚಿಗೆದ್ದ ಅಳಿಪಡೆಯ
ಧರಧುರ ದಾಳಿ.
೮೭) ಗಾಳಿಯಾಡುತಿದೆ ಮಣ್ಣುಬೂದಿ ಮುಗಿಲು ಕರೆವುದು
ಮಂಜುನಂಜು.

ಡಿಗ್ರಿಸಾಲಿನ ಮಿದುಳನು ಕೊಚ್ಚಿ ಬಗೆ ದೂರದೂರದರ
ಪುಡಿಪುಡಿ
ಲೋಕಭದ್ರ ಖಜಾನೆ ಹೂಳು ತಿಪ್ಪೆರಾಡಿಕೊಳೆ ಕುಣಿಯಲಿ.
ಮದನವದನಕೆ ಇಂಚು ಡಾಂಬರವ ಬಡೆ.
ಕೈಮೆಯ ನರನರ ಬಳ್ಳಿ ಕಿತ್ತು ತೊಡೆ!
ಪ್ರಮುಖ ಜನದ ಪಕ್ಕೆಲಿಗೆ ಬೆಂಕಿಹಚ್ಚು.
ಸಕಲಸದ್ಗುಣ ಮಣ್ಣು ಹುಳುಕೀಟ ಜಂತುಗಳಿಗೆ ಹಂಚು.
ವಜ್ರಾಂಗದಡಗು-ರುಧಿರ ಮೇಲೋಗರ ಹಾಕು ಗೃಧ್ರ-ಕಾಕ-
ಜಂಬುಕಗಳಿಗೆ.
ಸೂಟು-ಬೂಟುಗಳನ್ನು ಹರಿದು ಪರಪರ
ಆ ವಜ್ರಡಿಂಬದೆದುರಿಂಸು ದಂಡ ಉದ್ದಂಡ ದಿಗಂಬರ.
ನೊಸಲಗಣ್ಣನು ತೆರೆಯೆ ತತ್ತರಿಸಿ ಭಸ್ಮವಾಗು.
ಕಮಲಾಕ್ಷ ಅರಳೆ ಸಲಾಮನಿತ್ತು ಭಕ್ಷೀಸುಕೊಂಡು ಹೋಗು.
೯೯) " ಕಾಲಾಯ ತಸ್ಮೈ ನಮಃ "

(೪)

ಅಳಬೇಡ ಮಗು.
ನಿನಗೂ ಉಂಟು ಪಟ್ಟಾಭಿಷೇಕ
ಅಗೋ ಕಾದಿದೆ ಪುಷ್ಪಕವಿಮಾನ ಅಯೋಧ್ಯಾಮುಖವಾಗಿ.
ತುಟಿ ಮುಚ್ಚಿ ಕಳೆ ವನವಾಸ.
ದೂಷಿಸದಿರು ಹಾಲ್ಗಡಲದೊರೆಯನ್ನು
ಅವನ ಕರಕಮಲವೇ ಎತ್ತಿಕೊಡುವುದು ಮಧುಕುಂಭ.
೧೦೬) ಮುಖ್ಯ ಗ್ರಹಣಕಾಲ ಕಳೆಯಲಿ ಅನಂತರ ರವಿ ರವಿಯೇ.

ಭಾವತುರಂಗ

(ಒಂದು ಐತಿಹಾಸಿಕ ಛಾಯಾಚಿತ್ರ)

ಶ್ರೀ. ಸಂಗೀತ, ಕೂಡ್ಲಿಗಿ

—

ಕೇವಲ ಭಾವನಾತ್ಮಕನಾಗಿ ಬರೆದ ಕಾವ್ಯಗಳೂ ಚಿತ್ರಗಳೂ ಭಾವನೆಯಿಂದಲೆ ತಿಳಿದುಕೊಳ್ಳುವಂತಹವಾಗಿರುತ್ತವೆ. ತೆನ್ನಾಲಿ ರಾಮಕೃಷ್ಣನಂತಹ ಬುದ್ಧಿವಾದಿ ಅಂತಹ ಕಾವ್ಯವನ್ನೂ ಚಿತ್ರವನ್ನೂ ಒಪ್ಪುವನೆ ?

ವಿಜಯನಗರದ ಅತುಲವೈಭವದ ಕಾಲ. ಕನ್ನಡ, ಆಂಧ್ರ, ಸಂಸ್ಕೃತ, ತಮಿಳು ಮುಂತಾದ ಭಾಷೆಗಳಲ್ಲಿ ಪ್ರವೀಣರಾದ, 'ಆಮುಕ್ತ ಮಾಲ್ಯದ' ಎಂಬ ಅತ್ಯುತ್ತಮ ಆಂಧ್ರಗ್ರಂಥವನ್ನು ರಚಿಸಿ ಭೂಸಾರ್ವಭೌಮರಲ್ಲದೆ ಕವಿಸಾರ್ವಭೌಮರೂ ಆಗಿದ್ದ — ಶ್ರೀ ಕೃಷ್ಣದೇವ ರಾಯರು ಸಿಂಹಾಸನಾರೂಢರಾಗಿದ್ದರು. ಸಮಸ್ತ ಸಾಮಂತರಾಜರೂ ವಿನಯಾತಿಶಯದಿಂದ ಸಮ್ರಾಟನಿಗೆ ತಲೆಬಾಗಿ ಕುಳಿತಿರುವರು.

ಆಸ್ಥಾನವನ್ನು, ಅಷ್ಟದಿಗ್ಗಜರೆಂದು ಪ್ರಸಿದ್ಧಿ ಪಡೆದ ಕವಿಶ್ರೇಷ್ಠರೇ ತಮ್ಮ ಪ್ರಭೆಯಿಂದ ಬೆಳಗುತ್ತಿದ್ದರು. ಸಾಮ್ರಾಜ್ಯದ ಸಕಲದಿಕ್ಕುಗಳಿಂದ ಆಗಮಿಸಿದ್ದ ಕವಿಗಳಿಂದಲೂ, ರಸಿಕರಿಂದಲೂ, ಕಲೆಗಾರರಿಂದಲೂ ಚಿತ್ರ, ನೃತ್ಯ, ನಾಟಕ ಮುಂತಾದ ಲಲಿತಕಲೆಗಳಲ್ಲಿ ನಿಪುಣರಾದವರಿಂದಲೂ ಕಿಕ್ಕಿರಿದಿದೆ ಆಸ್ಥಾನ.

ಕವಿಗಳ ಕೃತಿಗಳನ್ನು ಸ್ವೀಕರಿಸುವ ಕಾರ್ಯವು ಮುಗಿದ ಮೇಲೆ, ಇತರ ಕಲೆಗಾರರ ಸನ್ಮಾನಕಾರ್ಯವು ನಡೆಯುತ್ತಿದ್ದಿತು. ಸಭಿಕರೆಲ್ಲರೂ ರಾಯನ ಉದಾರ ಆಶ್ರಯವನ್ನು ಮನಸಾರೆ ಹೊಗಳುತ್ತಿದ್ದರು.

ಆಗ ತಿರುಅನಂತಪುರದಿಂದ ಬಂದ ಆದಿತ್ಯಕುಮಾರನೆಂಬ ಚಿತ್ರಕಾರನು, ಒಂದು ತ್ರಿವರ್ಣ ತೈಲಚಿತ್ರವನ್ನು ಮಹಾರಾಜರಿಗೆ ಅರ್ಪಿಸಿದನು. ಮಹಾರಾಜರು ಚಿತ್ರವನ್ನು ನೋಡಿ ಸಂತೋಷಭರಿತರಾದರು, ಚಿತ್ರಕಾರನ ಕಲಾನೈಪುಣ್ಯವನ್ನು ಕೊಂಡಾಡಿದರು; ವಿಪುಲೈಶ್ವರ್ಯದಿಂದ ಬಹೂಕರಿಸಿದರು. ಸಭಾಸದರೆಲ್ಲರೂ ಚಿತ್ರಕಾರನ ಕೃತಿಚಾತುರ್ಯದ ಅದ್ಭುತಕ್ಕೆ ತಲೆದೂಗಿದರು; ಕಲಾವಂತನ ಕಲೆಗಾರಿಕೆಗೆ ತಕ್ಕ ಸನ್ಮಾನವನ್ನು ಮಾಡಿ ಮಹಾರಾಜರು ಸಭೆಯ ಗೌರವ-ಕೀರ್ತಿಗಳನ್ನು ಉತ್ತುಂಗಗೊಳಿಸಿದರೆಂದು ಹೊಗಳಿದರು.

ಆದರೆ ತೆನ್ನಾಲಿರಾಮಕೃಷ್ಣನಿಗೇಕೋ ಇದು ಸರಿಯೆನಿಸಲಿಲ್ಲ. ಎದ್ದು ನಿಂತು ಮಹಾರಾಜರಿಗೆ ಕೈಮುಗಿದು, ಆ ಚಿತ್ರದ ಬಳಿಸಾರಿ ಅದನ್ನು ದಿಟ್ಟಿಸಿ ನೋಡಲು ಪ್ರಾರಂಭಿಸಿದನು. ಸಭಿಕರೆಲ್ಲರೂ ಏಕಾಗ್ರತೆಯಿಂದ ನೋಡುತ್ತಿದ್ದರು. ರಾಜರೂ ಕುತುಹಲಿಗಳಾಗಿದ್ದರು. ಕೊನೆಗೆ ರಾಮಕೃಷ್ಣನು ರಾಜರನ್ನು ಉದ್ದೇಶಿಸಿ " ಮಹಾರಾಜರೆ! ಇದೇನು ಅಂತಹ ಅದ್ಭುತವಾದ ಚಿತ್ರವೆಂದು ತಾವು ಇದಕ್ಕೆ ಇಷ್ಟು ಸನ್ಮಾನವನ್ನು ಮನ್ನಿಸಿದಿರಿ," ಎಂದು ಪ್ರಶ್ನಿಸಿದನು. " ಏನು ಕವಿವರ್ಯ ! ಇದರಲ್ಲಿ ತಮಗೆ ಕಂಡು ಬಂದ ದೋಷವೇನು ? ಇದು ನಿಜವಾಗಿಯೂ ನಮ್ಮ ಸಭೆಗೆ ಅಲಂಕಾರಪ್ರಾಯವಾಗಿದೆಯಲ್ಲವೆ ?"

" ಮಹಾಪ್ರಭು ! ನನಗೇತಕ್ಕೋ ಈ ಚಿತ್ರದಲ್ಲಿಯ ಕುದುರೆಯು ಅಸಹಜವಾಗಿ ಕಾಣಿಸುತ್ತಿದೆ."

ಮಹಾಜರ ಕುತೂಹಲವು ಕೆರಳಿತು " ಅದೇಕೆ? " ಎಂದರು. " ಮಹಾಪ್ರಭು ! ಈ ಕುದುರೆ ಹಾರಲಿಕ್ಕೆಂದು ಹಿಂಗಾಲಿನ ಮೇಲೆ ನಿಂತು ಮುಂಗಾಲುಗಳನ್ನು ಎತ್ತಿ ಎಷ್ಟು ಸಮಯವಾಯಿತಲ್ಲ ! ಎತ್ತಿದ ಕಾಲುಗಳು ಎತ್ತಿದಂತೆಯೆ ಇವೆ. ಹಾರುತ್ತಲೇ ಇದೆ ಕುದುರೆ, ಆದರೂ ಇದ್ದ ಸ್ಥಳದಲ್ಲಿಯೇ ಇದೆ."

ರಾಯರಿಗೆ ಸ್ವಲ್ಪ ಮುನಿಸು ಬಂದಿತು. " ಹಾಸ್ಯಪ್ರಿಯ ಕವಿಗಳೆ! ತಾವು ಹಾಗೆಂದರೇನು ? ನೋಡಿ, ಕುದುರೆಯು ಕುಪ್ಪಳಿಸಿ ಧಾವಿಸುತ್ತಿದ್ದಾಗ, ಚಿತ್ರಕಾರನು ಅದನ್ನು ಬಿಡಿಸಿದ್ದಾನೆ. ಇದನ್ನು ಈ ಚಿತ್ರಕಾರನು ಬೇರೆ ಹೇಳಬೇಕೆ? ಅಷ್ಟು ಕಲ್ಪನಾಶಕ್ತಿ ಇಲ್ಲವೆ ?"

ರಾಮಕೃಷ್ಣನು ಚಿತ್ರದಲ್ಲಿಯ ಕುದುರೆಯ ಮೈಯನ್ನು ಮುಟ್ಟಿ ತನ್ನ ಕೈಯಿಂದ ತಡಹಿ ನೋಡಿದನು, ಸುತ್ತು ವ್ಯಗ್ರನಾಗಿ " ಮಹಾಸ್ವಾಮಿ ! ಇದೇನಿದು ! ಮೈದಡವಿದರೆ ಮೈಯನ್ನು ನಡುಗಿಸುವುದಿಲ್ಲ! ಇಂತಹ ಅಸಹಜವಾದ ಕುದುರೆಯ ಚಿತ್ರಕ್ಕೆ ಬಹುಮಾನವೆ ?" ಎಂದನು.

ಸಭಿಕರೆಲ್ಲರೂ ಸ್ವಲ್ಪ ಚಕಿತರಾಗಿಯೇ ಈ ಪ್ರಸಂಗವನ್ನು ಅವ-ಲೋಕಿಸುತ್ತಿದ್ದರು. ರಾಯರ ಮುನಿಸು ಕೋಪವಾಗಿ ಬೆಳೆಯಿತು:

" ಇದು ಚಿತ್ರವಯ್ಯಾ...... ಇದು ಚಿತ್ರ ! ನಿಜವಾದ ಕುದುರೆಯನ್ನು ಈ ಚಿತ್ರದಲ್ಲಿ ತಂದಿರಿಸಿಲ್ಲ. ನಿಮಗೆ ಹಾಸ್ಯವನ್ನೆಲ್ಲಿ, ಯಾವ ಸಮಯದಲ್ಲಿ ಹೇಗೆ ಮಾಡುವುದೆಂಬುದರ ಅರಿವೇ ಇಲ್ಲ. ಸುಮ್ಮನಿರಿ. ನೀವೇನು ಬಲ್ಲಿರಿ ಚಿತ್ರದ ಯೋಗ್ಯತೆ? " ಎಂದರು

ರಾಮಕೃಷ್ಣನೂ ತೀಕ್ಷ್ಣಭಾವದಿಂದಲೆ ಕೇಳಿದನು: " ಹೋಗಲಿ ಸ್ವಾಮಿ. ಈ ಕುದುರೆಗೆ ಒಂದೇ ಕಡೆಗೆ ಮೈ ಇದೆ. ಆಕಡೆ ಮೈಯಿಲ್ಲವೆ? ಇಂತಹ ಕುದುರೆಗೆ ತಾವು ಹೇಗೆ ಬಹುಮಾನವನ್ನು ಕೊಟ್ಟರೋ "

ರಾಯರು ಕ್ರುದ್ಧರಾದರು. " ಏನಿದು ತೆನ್ನಾಲಿ ! ಹೀಗೆನ್ನುವೆ? ಇದು ಚಿತ್ರವಲ್ಲವೆ? ಆ ಮಗ್ಗುಲು ಕಾಣಬರೊಲ್ಲದು ಎನ್ನುವೆಯಲ್ಲ? ಚಿತ್ರಪಟವನ್ನು ತಿಳಿಯಲು ಭಾವನೆ ಮಾಡಬೇಕು. ಭಾವಶೂನ್ಯನಿಗಿದು ಕುಧ್ಯಭಾವವೆಸಗುವುದು. " ಎಂದು ಬಿರುಸಾಗಿಯೇ ನುಡಿದರು. ಸಭಿಕರೆಲ್ಲರೂ ನಡು-ನಡುಗಿದರು. ತೆನ್ನಾಲಿ ರಾಮಕೃಷ್ಣನು ಮಾತ್ರ ತಲೆಯನ್ನು ತೂಗುತ್ತ ಎಡಗೈಯ ಬೆರಳುಗಳನ್ನು ಮಡಿಸಿಕೊಂಡು ಬಲಗೈ ಬೆರಳುಗಳಿಂದ ಬಾರಿಸಿಕೊಳ್ಳುತ್ತ ತನ್ನೊಳಗೆ ತಾನು " ಭಾವನೆ ಮಾಡಬೇಕು ಚಿತ್ರಪಟವನ್ನು ತಿಳಿಯಲು, ಭಾವಶೂನ್ಯನಿಗಿದು ಕುಧ್ಯಭಾವವೆಸಗುವುದು ! " ಎನ್ನುಕೊಳ್ಳುತ್ತ ರಾಜರಿಗೆ ಕೈಮುಗಿದು ಕುಳಿತುಕೊಂಡನು,

ಸಭಾಕಾರ್ಯಗಳು ಮುಂದಕ್ಕೆ ಸಾಂಗವಾಗಿ ನಡೆದುವು. ಸಭೆಯು ಕೊನೆಗೆ ಯಥಾವತ್ತಾಗಿ ಮುಕ್ತಾಯಗೊಂಡಾಗ, ಸಭಿಕರು ತಮ್ಮ ನಿಲಯಗಳಿಗೆ ತೆರಳಿದರು. ಅವರಲ್ಲಿ ಕೆಲವರು ರಾಮಕೃಷ್ಣನಿಗೆ ತಕ್ಕ ಮಂಗಳಾರತಿಯಾದುದು ಎಂದುಕೊಳ್ಳುತ್ತ ತೆರಳಿದರೆ, ಮತ್ತೆ ಕೆಲವರು, ಮರುದಿನವೇನಾದರೂ ಒಂದು ಸಂಘಟನೆಯಾಗಬಹುದೆಂದೂ ತೆನ್ನಾಲಿಯ ಮೌನಕ್ಕೆ ಏನಾದರೂ ಒಂದು ಭವಿಷ್ಯವಿರುತ್ತದೆಯೆಂದೂ ಎಂದುಕೊಳ್ಳುತ್ತ ತೆರಳಿದರು.

ಮರುದಿನ ಯಥಾಸಮಯಕ್ಕೆ ಯಥಾರೀತಿಯಾಗಿ ಸಭೆ ಸೇರಿತು. ಮಹಾರಾಜರ ಆಗಮನದ ಸೂಚನೆಯಾದೊಡನೆ ಸಭೆಯೆಲ್ಲವೂ ಎದ್ದು ನಿಂತಿತು. ಕೃಷ್ಣದೇವರಾಯರು ಸಿಂಹಾಸನಾರೂಢರಾದ ಮೇಲೆ ಸಭಿಕರೆಲ್ಲರೂ ಬಾಗಿ ನಮಿಸಿ, ತಮ್ಮ ತಮ್ಮ ಸ್ಥಾನಗಳನ್ನಲಂಕರಿಸಿದರು. ಸಿಂಹಾಸನಸ್ಥರಾದ ಮೇಲೆ ಮಹಾರಾಜರೊಮ್ಮೆ ಸಭಿಕರನ್ನೆಲ್ಲ ನೋಡಿದರು. ಹಾಗೆ ನೋಡುತ್ತ ತಮ್ಮ ದೃಷ್ಟಿಯನ್ನು ಸರಿಸುತ್ತ ನಡೆದಿದ್ದ ರಾಯರಿಗೆ, ತಮ್ಮ ಎದುರಿಗಿರುವ ಭವ್ಯವಾದ ಭಿತ್ತಿಯನ್ನು ನೋಡಿ, ಕೋಪವು ಆವೇಶದ ರೂಪವನ್ನು ತಾಳಿತು.

" ಕಂಚುಕಿ, ನಮ್ಮ ಸಭಾಭವನದ ಶುಭ್ರಶ್ವೇತಭಿತ್ತಿಯನ್ನು ಹೀಗೆ ಹೊಲಸು ಮಾಡಿದವರಾರು? " ಎಂದು ಗರ್ಜಿಸಿದಾಗ, ಪ್ರಜರೆಲ್ಲರೂ ರಾಯರ ಸಿಂಹಾಸನದತ್ತ ಕಡೆಯಿಂದ ತಮ್ಮ ಹಿಂದುಗಡೆಗೆ ತಲೆಗಳನ್ನು ತಿರುಗಿಸಿ ನೋಡಿದರು. ಅವರಿಗೂ ಆ ಕೆಲಸ ಅಸಹನೀಯವಾಯಿತು. ಮಹಾರಾಜರು ಮುಂದುವರಿಸಿದರು: " ಯಾರೇ ಇರಲಿ, ಈ ಹೇಯವಾದ ಕೆಲಸವನ್ನು ಮಾಡಿದವನಿಗೆ ಶಿಕ್ಷೆಯನ್ನು— ಉಗ್ರವಾದ ಶಿಕ್ಷೆಯನ್ನು ಕೊಡುವೆವು. !

ಸಭಿಕರಲ್ಲಿ ಪ್ರತಿಯೊಬ್ಬನೂ ತನ್ನ ಪಕ್ಕದಲ್ಲಿಯವನನ್ನು ಶಂಕಾಯುಕ್ತವಾಗಿ ನೋಡಿ ಸುಮ್ಮನಾಗುತ್ತಿದ್ದನು. ಆಗ ತೆನ್ನಾಲಿ ರಾಮಕೃಷ್ಣನು ಎದ್ದು " ಮಹಾಪ್ರಭು, ಅದನ್ನು ನಾನು ರಚಿಸಿದೆನು. ಅದೊಂದು ಚಿತ್ರ ! " ಎಂದು ನುಡಿದು ಕೈಮುಗಿದು ನಿಂತನು.

ಮಹಾರಾಜರ ಸಿಟ್ಟಿಗೆ ತಡೆಗಟ್ಟುವುದು ದುರ್ಲಭವಾಯಿತು. " ತೆನ್ನಾಲಿಯವರೆ, ನಿಮಗೆ ಸಮಯಾಸಮಯಗಳಾಗಲಿ, ಸ್ಥಳಾಸ್ಥಳಗಳಾಗಲಿ, ತಿಳಿಯವು. ತಾವು ಏನು ಮಾಡುತ್ತಿರುವಿರೆಂಬುದು ತಮಗೇ ತಿಳಿಯದಂತಿದೆ. ಕ್ಷೀರಸದೃಶಭಿತ್ತಿಯನ್ನು ಆ ಕಾಡಿಗೆಯಂತಹ ಕಪ್ಪನೆಯ ಮಸಿಯನ್ನು ಚೆಲ್ಲಿ ಹೊಲಸುಮಾಡಿ ಅದರ ನಡುವೆ ಸುಣ್ಣದ ಮುದ್ದೆಯನ್ನು ಒಗೆದಿರುವಿರಲ್ಲವೆ? ಅದನ್ನು ಚಿತ್ರವೆಂದು ಸಾಧಿಸುತ್ತಿರುವಿರಲ್ಲ ! ಇದು ವಿಚಿತ್ರವಾಗಿದೆ. ಎಂತಹ ಹೇಯವಾದ ಕಾರ್ಯವನ್ನು ಮಾಡಿರುವಿರಿ ತೆನ್ನಾಲಿಯವರೆ ! ಛೀ " ಎಂದರು ರಾಯರು.

"ಮಹಾಪ್ರಭುಗಳು ಕೋಪದಲ್ಲಿ ನನ್ನ ಚಿತ್ರಕಲಾನೈಪುಣ್ಯದ ಹದನರಿಯದೆ ಹೋಗುತ್ತಿರುವಿರಿ. ಅದೊಂದು ಪ್ರಗಲ್ಭ (ಭಾವನಾಪೂರ್ಣ) ಚಿತ್ರವು. ಅದನ್ನರಿಯಲು ಭಾವನೆ ಮಾಡಬೇಕು ಮಹಾರಾಜರೆ ! ಭಾವಶೂನ್ಯನಿಗೆ ಇದು ಕುಧ್ಯಭಾವವನ್ನು ಎಸಗುವುದು " ಎಂದು ಉತ್ತರವನಿತ್ತನು ವಿಕಟಕವಿ—ತೆನ್ನಾಲಿ. ರಾಯರ ಮಾತುಗಳು ಏಕವಚನಕ್ಕಿಳಿದುವು.

" ತೆನ್ನಾಲಿ, ನಿನ್ನ ವ್ಯವಹಾರವು ನಮ್ಮ ಕೋಪವನ್ನು ಹೆಚ್ಚಿಸುತ್ತಿದೆ. ನಿನ್ನ ಕುಹಕವನ್ನು ನೀ ಬಿಡೆ, ನಾವು ಆಡಿದ ಮಾತಿಗೆ ಮುಯ್ಯವನ್ನು ತೀರಿಸುವೆಯಾ ?

ಸಮ್ರಾಟರೆ, ತಾವಿಷ್ಟು ಕೋಪಾಟೋಪದಿಂದಿದ್ದರೆ ನಾನು ತಮ್ಮೆದುರು ನಿಂತು ಮಾತನಾಡುವುದಾದರೂ ಹೇಗೆ? ನನ್ನ ಮಾತನ್ನು ಶಾಂತವಾಗಿ ಚಿತ್ತೈಸುವಿರಾದರೆ, ನನ್ನ ಚಿತ್ರಪಟದ ಅರ್ಥವಾಗುತ್ತದೆ. ದಯೆಮಾಡಿ ಸಾದ್ಯಂತ ಕೇಳಿ, ಮಹಾಪ್ರಭು. ಗೋಡೆಯು ಹಾಳಾಯಿತೆಂದು ನುಡಿದಿರಲ್ಲ. ಗೋಡೆಯನ್ನು ಕಪ್ಪುಗೊಳಿಸಿದುದು ಮಸಿಯಲ್ಲ. ಅದರ ಮಧ್ಯದಲ್ಲಿರುವುದು, ತಾವು ದಯೆಪಾಲಿಸಿದಂತೆ ಸುಣ್ಣದ ಮುದ್ದೆಯಲ್ಲ ! "

" ಏನದು ಮತ್ತೆ ನಿನ್ನ ತಲೆಬುರುಡೆ ? "

" ಸ್ವಾಮೀ ! ಕೇಳಿ. ಪೂರ್ವಕಾಲದಲ್ಲಿ ಪರ್ವತಗಳಿಗೆಲ್ಲ ರೆಕ್ಕೆಗಳಿದ್ದುವೆಂಬುದನ್ನು ಭಾವಿಸಬೇಕು ಮಹಾರಾಜ ! ಅವು ತಮ್ಮ ರೆಕ್ಕೆಗಳ ಸಹಾಯದಿಂದ ಆಕಾಶಗಮನವನ್ನು ಮಾಡಿ, ದಿಗ್ದೇಶಗಳಲ್ಲಿರುವ

ಪಟ್ಟಣಗಳ ಮೇಲೆ ಆಶ್ರಮಗಳ ಮೇಲೆ ಇಳಿದು ಬಂದು ಕುಳಿತು ಬಿಡಲು ಪ್ರಾರಂಭಿಸಿದುವೆಂದು ಕಲ್ಪನೆಯನ್ನು ಮಾಡಬೇಕು ಮಹಾ ಪ್ರಭು! ಆಗ ದೇವಾಧಿದೇವರುಗಳು ಇಂದ್ರನಲ್ಲಿ ಮೊರೆಯಿಟ್ಟು ಕೊಂಡರೆಂದು ಭಾವಿಸಬೇಕು ಸ್ವಾಮಿ! ಆಗ ಇಂದ್ರನು ಶುಭ್ರಶ್ವೇತಾಶ್ವವಾದ ಉಚ್ಚೈಶ್ರವನನ್ನೇರಿ ವಜ್ರಾಯುಧವನ್ನು ಹಿಡಿದೆತ್ತಿ, ಪರ್ವತಗಳನ್ನು ಹಿಂಬಾಲಿಸಿ ಹೊರಟನೆಂದು ಕಲ್ಪಿಸಬೇಕು, ನಮ್ಮ ನಾಶ್ವ ಮಹಾರಾಜರು. ಆಗ ಪರ್ವತಗಳು ಹೆದರಿ ಇಂದ್ರನಿಂದ ದೂರ-ದೂರವಾಗಿ ಓಡಿ ಹೋಗಲು ಪ್ರಾರಂಭಿಸಿದುವು. ಆಕಾಶಮಾರ್ಗವಾಗಿ ಪಲಾಯನ ಮಾಡುತ್ತ ಮಾಡುತ್ತ ಪರ್ವತಗಳು ಒಮ್ಮೆ ಕಾರ್ಮೋಡಗಳನ್ನು ಹೊಕ್ಕುವು. ಅವುಗಳ ಹಿಂದೆಯೇ ಇಂದ್ರನು ತನ್ನ ಶ್ವೇತಾಶ್ವವನ್ನೇರಿ ಹೊರಟನು. ಪರ್ವತಗಳು ಮೋಡಗಳಲ್ಲಿ ತೂರಿಹೋದುವು. ಇಂದ್ರನೂ ಮೋಡಗಳನ್ನು ತೂರಿ ಹೋದನು. ನಾನು ಆ ಸ್ಥಿತಿಯಲ್ಲಿ ನೋಡಿ ಚಿತ್ರವನ್ನು ಬಿಡಿಸಿರುವೆನೆಂದು ಕಲ್ಪನೆಯನ್ನು ಮಾಡಿರಿ, ಮಹಾಪ್ರಭು!

"ಈಗ ನೋಡಿ. ಆ ಮಸಿಯೇ ಕರಿಯ ಮೋಡಗಳೆಂದು ಭಾವಿಸಿರಿ. ಪರ್ವತಗಳು ಅವುಗಳಲ್ಲಿ ತೂರಿಕೊಂಡು ಹೊರಟಿವೆ, ಹೋಗುತ್ತಲಿವೆಯೆಂದು ಭಾವಿಸಿರಿ. ನಾನು ನೋಡಿದಾಗ ಇಂದ್ರನು ಮೋಡಗಳನ್ನು ಹೊಕ್ಕಿದ್ದನು. ಇಂದ್ರನೂ ಆತನ ಕುದುರೆಯೂ ಮೋಡಗಳನ್ನು ತೂರಿಹೋಗಿದ್ದುವು. ಕೊನೆಗೆ ಆ ಉಚ್ಚೈಶ್ರವದ ಬಿಳಿಯ ಬಾಲದ ತುದಿಯು ಇನ್ನೂ ಉಳಿದಿತ್ತು ಎಂದು ಭಾವಿಸಿರಿ. ಆಗ ಅದನ್ನು ನೋಡಿದೆ ಎಂದು ಭಾವಿಸಿರಿ. ಆ ಸುಣ್ಣದ ಬೊಟ್ಟೇ ಕರಿ ಮೋಡಗಳಲ್ಲಿ ತೂರಿಹೋಗುತ್ತಲಿದ್ದ ಆ ಉಚ್ಚೈಶ್ರವದ ಬಿಳಿಯ ಬಾಲದ ತುದಿಯೆಂದು ಭಾವಿಸಿರಿ. ಚಿತ್ರಪಟವನ್ನು ತಿಳಿಯಬೇಕಾದರೆ ಭಾವನೆ ಮಾಡಬೇಕು ಮಹಾರಾಜರೆ, ಭಾವಶೂನ್ಯನಿಗೆ ಇದು ಶೂನ್ಯಭಾವವನ್ನೆ ನಗುವುದು!"

ಮಹಾರಾಜರು ರಾಮಕೃಷ್ಣನ ಭಾವನಾಲಹರಿಯನ್ನು ತಿಳಿದುಕೊಂಡರು. ಭಾವಕವಿತ್ವದಲ್ಲಿ ಓದುಗರು ಕಲ್ಪನೆಮಾಡಿಕೊಳ್ಳುವುದೇ ಅಧಿಕವಾಗಿರುತ್ತದೆ. ಭಾವಕವಿಗಳನ್ನೇ ಕೇಳಿದರೆ, ಅವರಿಗೂ ತಮ್ಮ ಕವಿತೆಯ ಅರ್ಥವಾಗದು ಒಮ್ಮೊಮ್ಮೆ "ಭಾವನೆ ಮಾಡಿ" ಎನ್ನುವರೆಂಬ ಭಾವನೆ ಮಾಡಿ ಎನ್ನುವರೆಂಬ ಭಾವನೆಯನ್ನು ಸೊಗಸಾಗಿ ವ್ಯಕ್ತಗೊಳಿಸಿದನೆಂದು ಮಹಾರಾಜರು ಸಂತೃಪ್ತರಾದರು. *

* ರಾಮಲಿಂಗಾರೆಡ್ಡಿಯವರ "ಶುಕ್ಲಪಕ್ಷವು" ಎಂಬ ಪದ್ಯಕಾವ್ಯದ "ಭಾವತರಂಗವು" ಎಂಬ ಒಂದು ಶೀರ್ಷಿಕೆಯ ಆಧಾರದ ಮೇಲೆ ಬರೆದುದು.

ರಣಹದ್ದು ಹೊಂಚುತಿದೆ!

ಶ್ರೀ. ಡಿ. ಮಹಾಲಿಂಗಭಟ್ಟ, ವಿದ್ವಾನ್, ಎಡನಾಡು, ಕುಂಬಳೆ; ದ. ಕ.

||೧||

ಮುಳ್ಳ ಬೇಲಿಯ ಸುತ್ತಿ, ಬೀಗಮುದ್ರೆಯನೊತ್ತಿ
ಇನ್ನೇನು? ಹೆದರಿಕೆಯ ಸುಳಿವು ಕಾಣ!
ಎಂದು ಮನದಲಿ ಬಗೆದು, ಬಳ್ಳಿವನೆಯೊಳ ಹೊಕ್ಕು
ಹಾಯಾಗಿ ಮೈಯೊರಗಲಿದುವೆ ತಾಣ! ||

||೨||

ಇಂತು ನಿರ್ಭೀತಿಯನೆ ಮನದಿ ನೆಲೆಗೊಳಿಸುತ್ತ
ಬಳ್ಳಿಯಡಿಯಲಿ ಸಗ್ಗಸೊಗವನುಂಡು
ಮೆಯ್ಮರೆವ ಬಯಕೆಯಲಿ ಬೀಗಿ ಕಣ್ ಕುರುಡಾಗಿ
ನೀ ಬಂದೆ ನಿಜ; ಒಮ್ಮೆ ಮೇಲೆ ನೋಡು! ||

||೩||

ನಿನ್ನ ತಾವಿನ ಮೇಲೆ ತಿರುತಿರುಗಿ, ಸರಸರನೆ
ಕೆಳಗಿಳಿಯುತಿದೆ ಒಂದು ಭಾರಿ ಹದ್ದು!
ಬಿಸಿನೆತ್ತರೊಳಗೊಂಡ ಹಚ್ಚಹಸಿರುಂಡವನೆ
ತಿಂಬ ಬರವಿನಲದರದೇನು ಸದ್ದು! ||

||೪||

ಮುಂಡ-ಕೈ-ಕಾಲುಗಳ ಬಿಟ್ಟು ದೇಹದೊಳೆಲ್ಲ
"ಉತ್ತಮಾಂಗ" ವಿದೆಂದುಕೊಂಡ ರುಂಡ
ಅದುವೆ ತನಗುಣಿಸೆನ್ನುತಿನಿಸು ಸವಿಯನು ಬಲ್ಲ
ರಣಹದ್ದು ಹೊಂಚುವುದದೊ! ಪ್ರಚಂಡ! ||

||೫||

ಬಾರಯ್ಯ! ಓ! ಗೆಳೆಯ! ನಾವಿಬ್ಬರೊಂದಾಗೆ
ಹದ್ದು ಬರವಾ ಸುದ್ದಿ ಕೇಳಲಿಹುದೆ?
ನಮ್ಮರಿಯ ಕುಲುಮೆಯಲಿ ಕೆಚ್ಚು ಪುಟಗೊಂಡಾಗ
ಬೆಚ್ಚ ಬೆಸುಗೆಯನೊಡೆಯಲದು ಬಲ್ಲುದೆ? ||

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ, '**ಪುನರ್ಜನ್ಮ**' ಕತೆಯನ್ನು ವಿಮರ್ಶಿಸಿ ೬ ಜನರಿಂದಲೂ '**ಧರ್ಮಪತ್ನಿ**' ವಿಡಂಬಕ ರೂಪಕವನ್ನು ವಿಮರ್ಶಿಸಿ ಐದು ಜನರಿಂದಲೂ ಬರೆಹಗಳು ಬಂದಿವೆ.

'ಪುನರ್ಜನ್ಮ' ಕತೆಯನ್ನು ವಿಮರ್ಶಿಸಿ ಬರೆದವರು:

೧. ಶ್ರೀ. ಗುರುನಾಥ ವಿ. ಕುಲಕರ್ಣಿ, ಸೀನಿಯರ್ ಬಿ. ಎ. ಜನತಾ ಕಾಲೇಜು, ಧಾರವಾಡ. ೨. ಶ್ರೀ. ಜೆ. ಮಲ್ಹಾರಿ ಭಟ್ಟ, ಹೊಸಪೇಟೆ. ೩. ಶ್ರೀ. ಎಚ್. ಆರ್. ಶಾಸ್ತ್ರಿ, ಸುರಪುರ. (ನೈಝಾಮ್ ಕಾಲೇಜ), ಹೈದರಾಬಾದ್. ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು (ದ. ಕ.) ೫. ಶ್ರೀ. ಕೆ. ಗೋವಿಂದರಾವ, ಕರ್ನೂಲ. ೬. ಶ್ರೀ. ಬಿ. ಜಿ. ಬೇವಿನ ಮಠದ, ಮು. ಹುಬ್ಬಳ್ಳಿ.

'ಧರ್ಮಪತ್ನಿ' ರೂಪಕವನ್ನು ವಿಮರ್ಶಿಸಿ ಬರೆದವರು:

೧. ಶ್ರೀ. ವೈ. ಎಲ್. ಇನಾಮದಾರ ಬಿ. ಎ. ಹೊಸಯಲ್ಲಾಪುರ, ಧಾರವಾಡ. ೨. ಶ್ರೀ. ರಾಘವೇಂದ್ರ ಗುಮಾಸ್ತೆ, ಚಿಂಚೋಳಿ. ೩. ಶ್ರೀ. ಲಕ್ಷ್ಮೀಕಾಂತ C/o. 'ಶ್ರೀಕೃಷ್ಣಭವನ' ಹುಬ್ಬಳ್ಳಿ. ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು—ದ. ಕ. ಜಿಲ್ಹಾ. ೫. ಶ್ರೀ. ಗುರುಲಿಂಗ ಸಿರ್ಸಾಣಿ, ಶಾಲಾಶಿಕ್ಷಕ ನಾಗನೂರು, ತಾ. ಗೋಕಾಕ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕಸಮಿತಿಯವರು ಓದಿನೋಡಿ ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ. 'ಪುನರ್ಜನ್ಮ' ಕತೆಯನ್ನು ವಿಮರ್ಶಿಸಿದ **ಶ್ರೀ. ಎಚ್. ಆರ್. ಶಾಸ್ತ್ರಿ, ಸುರಪುರ.** ಮತ್ತು **ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು.** ಇವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಗುರುನಾಥ ವಿ. ಕುಲಕರ್ಣಿ, ಧಾರವಾಡ. ಶ್ರೀ. ಕೆ. ಎಸ್. ಶರ್ಮಾ ಕಾಸರಗೋಡು, ಶ್ರೀ ವೈ. ಎಲ್. ಇನಾಮದಾರ ಬಿ. ಎ. ಧಾರವಾಡ, ಶ್ರೀ. ಲಕ್ಷ್ಮೀಕಾಂತ, ಹುಬ್ಬಳ್ಳಿ ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ.

ಒಟ್ಟಿನ ಮೇಲೆ ಈ ಸಲದ ವಿಮರ್ಶೆಯ ಮಟ್ಟ ಒಳ್ಳೆಯದಾಗಿದೆಯೆಂದು ಪರೀಕ್ಷಕರ ಅಭಿಪ್ರಾಯ. ಅವರ ಸೂಚನೆಯಂತೆಯೆ ಶ್ರೀ. ಎಚ್. ಆರ್. ಶಾಸ್ತ್ರಿಯವರ ವಿಮರ್ಶೆಯನ್ನು ಪ್ರಕಟಿಸಲಾಗಿದೆ.

ಮುಂದಿನ ತಿಂಗಳ ಮೇಲಾಟಕ್ಕಾಗಿ ಈ ಸಂಚಿಕೆಯಲ್ಲಿ ಪ್ರಕಟವಾದ 'ಆಶೆಯ ಶಿಶು' ಎಂಬ ರೂಪಕ ಕಥೆಯನ್ನು ವಿಮರ್ಶಿಸಿ ಬರೆಹಗಳನ್ನು ಕಳುಹಬೇಕು. ಇದೊಂದು ಮನೋವಿಶ್ಲೇಷಣೆಯ ರೀತಿಯಲ್ಲಿ ಕಟ್ಟಿದ ಅದ್ಭುತರಮ್ಯ ಕತೆಯಾಗಿದೆ. ವಿಮರ್ಶಕರು ಕತೆಗಾರರ ಆಶಯವನ್ನು ಚೆನ್ನಾಗಿ ಅರಿತುಕೊಂಡು ವಿಮರ್ಶೆಗಳನ್ನು ಬರೆಯಬೇಕು.

ಪುನರ್ಜನ್ಮ

(ಸಣ್ಣಕಥೆಯ ವಿಮರ್ಶೆ)

ಶ್ರೀ. ಎಚ್. ಆರ್. ಶಾಸ್ತ್ರಿ, ಸುರಪುರ (ನಿಜಾಮ ಕಾಲೇಜ)

ಜೀವನರಂಗದಲ್ಲಿ ತಾರುಣ್ಯವೊಂದು ಮಹತ್ತರವೂ ಮುಖ್ಯವೂ ಆದ ಭೂಮಿಕೆ. ಯೌವನೋದಯದ ಜೊತೆಗೆ ಜೀವಿಗೆ ಸೃಷ್ಟಿಯಲ್ಲೇ ನವೋದಯವಾದಂತೆ ಭಾಸವಾಗುತ್ತದೆ. ಈ ನವೋದಯಕ್ಕೆ ಪ್ರತಿಯೊಬ್ಬನಿಂದಲೂ ಸ್ವಾಗತವಿದೆ. ಆದರೆ ಇಲ್ಲಿಯ ಜೀವನ ಹಾವಿನೊಡನೆ ಸರಸವಾಡಿದಂತೆ—ಎಂಬುದನ್ನು ಅವನು ಮರೆಯಲಾಗದು: ಮಾಯಾರೂಪಿ ಸರ್ಪವು ನಮ್ಮನ್ನು ಕ್ಷಣ-ಕ್ಷಣವೂ ಕಚ್ಚುವ ಸಂಭವವಿದೆ. ಕಾಮನು ನಮ್ಮಜೀವಮಾನವನ್ನೆಲ್ಲ ಹೊಂಚುಹಾಕಿ ಮನಬಂದಂತೆ ನಮ್ಮನ್ನು ಕುಣಿಸಲು ಹವಣಿಸುತ್ತಾನೆ. ಆದರೆ ನಾವು ಮಾತ್ರ ಕಾಮಸೂತ್ರದ ಬೊಂಬೆಗಳಾಗಬಾರದು. ಆ ಸೂತ್ರಬಂಧನದಿಂದ ಬಿಡುಗಡೆ ಹೊಂದಿ ಬಂದವನೇ ಧನ್ಯ, ಯಶಸ್ವಿ! ಈವೊಂದು ಚಿತ್ರವನ್ನು ನಾವು 'ಪುನರ್ಜನ್ಮ' ಕತೆಯಲ್ಲಿ ಕಾಣಬಹುದು.

ಕತೆಯಲ್ಲಿ ಬರುವ ಮುಖ್ಯಪಾತ್ರಗಳೆಂದರೆ: ಸರಳೆ, ತಂದೆ ಸುಂದರರಾಯರು, ತಾಯಿ ಜಾನಕೀಬಾಯಿಯವರು, ಗೆಳತಿ ಮನೋರಮೆ, ಸಹವಿದ್ಯಾರ್ಥಿ ವಿಜಯ. ಕತೆಗೆ ಸರಳೆಯೇ ನಾಯಿಕೆ.

ವಿಜಯನನ್ನು ಪ್ರೇಮಿಸಿ, ಅಥವಾ ಇನ್ನೂ ಸಮಂಜಸವಾಗಿ ಹೇಳಬೇಕಾದರೆ ಕಾಮಿಸಿ, ತನ್ನನ್ನು ನಂಬಿದ ತಾಯಿ-ತಂದೆಗಳನ್ನು ಮೋಸಗೊಳಿಸಿ, ಜಾರಿ ಶೀಲಭ್ರಷ್ಟಳಾಗುವುದರಲ್ಲೇ-ಮೃತಳಾಗಿ ಪುನಃ ಬದುಕಿದವರಂತೆ, ಕಣ್ತೆರೆದು, ಎಚ್ಚೆತ್ತು ಸರಳೆ-ಶೀಲವನ್ನು ಕಾಯ್ದುಕೊಂಡು-ದರ ಚಿತ್ರವೇ 'ಪುನರ್ಜನ್ಮ' ದ ವಸ್ತು. ಇನ್ನು ಲೇಖಕರು ಅವಳ 'ಪುನರ್ಜನ್ಮ' ವನ್ನು ಹೇಗೆ ಸಾಧಿಸಿದ್ದಾರೆಂದು ನೋಡೋಣ.

ಸರಳೆ S. S. L. C. ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಮುಂದೆ?—ಎಂಬ ಚಿಂತೆ ಅವಳ ಮನೆಯವರನ್ನು ಕಾಡುತ್ತದೆ. ಮುಂದೆ ಓದಿಸಲು ಅನುಕೂಲವಿದೆ. ಓದುವವಳಿಗೂ ಇಚ್ಛೆ ಇದೆ. ಆದರೆ ಸರಳೆ ಕಾಲೇಜನ್ನು ಸೇರಿದ ಮೇಲೆ ಶೀಲವಂತಳಾಗಿರಬಲ್ಲಳೇ?—ಎಂಬ ಅನುಮಾನ. ಸುಶಿಕ್ಷಿತರಾದ ಸುಂದರರಾಯರಿಗೆ ಮಗಳ ಮೇಲೆ ನಂಬಿಕೆಯಿದ್ದರೂ ಜಾನಕೀಬಾಯಿಯವರಿಗೆ ತಮ್ಮ ಮುದ್ದು ಮಗಳನ್ನು ಸ್ವೇಚ್ಛಾವೃತ್ತಿಯ ಬೀಡಾದ ಅದರಲ್ಲೂ ಕೋ-ಎಜುಕೇಶನ್ (Co-ejucation) ಇರುವ ಕಾಲೇಜಿಗೆ, ಸೇರಿಸಲು ಹಿಂಜರಿಯುತ್ತಾರೆ. ಅನುಮಾನ ಸಹಜವಾದದ್ದೇ. ತಿಳಿದು ತಿಳಿದೂ ಯಾರಾದರೂ ತಮ್ಮ ಗಿಳಿಯನ್ನು ಬೆಕ್ಕಿನ ಕೈಯಲ್ಲಿ ಕೊಡುವರೇ?—ಆದರೆ ಕಾಲೇಜು ಸೇರಬೇಕೆಂಬ ಮಗಳ ಬಲವಾದ ಇಚ್ಛೆಯೂ ಅವಳ ಮೇಲಿನ ಮಮತೆಯೂ ಈ ಅನುಮಾನಕ್ಕೆ ಆಸ್ಪದಕೊಡುವುದಿಲ್ಲ. ಸರಳೆ ಮತ್ತು ಅವಳ ಗೆಳತಿ ಮನೋರಮೆ ಕಾಲೇಜನ್ನು ಸೇರುತ್ತಾರೆ.

ಸರಳೆಗೆ ಕಾಲೇಜೆಂದರೆ ಜ್ಞಾನಭಾಂಡಾರ. ಕಾಲೇಜು ಸಾರಸ್ವತ ಸ್ವರೂಪವೆಂದೇ ಅವಳ ಭಾವನೆ. ಅದರ ಸಾಧನೆಯೇ ತನ್ನ ಕರ್ತವ್ಯವೆಂದು ತಿಳಿದಿದ್ದಳು; ಆದರೆ ಅವಳು ಪ್ರತ್ಯಕ್ಷವಾಗಿ ಕಂಡುದು ಬೇರೊಂದನ್ನು. ಕತೆ-ಕಾದಂಬರಿಗಳಲ್ಲೋದಿದ "ಅದೆಲ್ಲಾ" ಕಾಲೇಜಿನಲ್ಲಿ ಬೇಕಾದಷ್ಟಿದೆ. ಪ್ರೇಮದ ಹೆಸರಿನಲ್ಲಿ ಕಾಮದ ಕಾಯಕ ನಡೆದಿದೆ. ತಾನು ಮಾತ್ರ ಆ ಬಲೆಗೆ ಬಲಿಯಾಗಬಾರದು. ಗಂಡಸರೆಂದರೆ ಅವಳಿಗೊಂದು ವಿಧದ ದ್ವೇಷ; ಆದ್ದರಿಂದ, ತನ್ನ ಮನಸ್ಸನ್ನು ಅಂಕಿತದಲ್ಲಿಟ್ಟುಕೊಳ್ಳಲು ನಿರ್ಧರಿಸಿದ್ದಾಳೆ. ಆದರೆ ಒಂದೊಂದು ಸಲ ಅಶಿಕ್ಷಿತ ಕುರಿಗಳ ದೊಡ್ಡಿಯಾದ ಕಾಲೇಜನ್ನು ನೆನೆದು, ಅವಳಿಗೂ ಭಯವಾಗುತ್ತದೆ. ಸರಳೆಯಲ್ಲಿ ಈ ತೆರನಾದ ಚಿತ್ರ ಕಂಡರೆ, ಮನೋರಮೆಯಲ್ಲಿ ಕಾಣುವ ಚಿತ್ರವೇ ಬೇರೆ. ಎಲ್ಲಾ ವಿದ್ಯಾರ್ಥಿ-ವಿದ್ಯಾರ್ಥಿನಿಯರೊಡನೆ ಕಲೆತು ನಕ್ಕು, ನಲಿದು, ನಗಿಸಿ, ತಿರುಗುವ ಸ್ವಚ್ಛಂದವೃತ್ತಿ ಮನೋರಮೆಯದು. ಸರಳೆಗೆ ಇದೆಲ್ಲಾ ಅಸಹ್ಯ.

ಇದೇ ರೀತಿಯಾಗಿ ಮೊದಲನೆಯ ಟರ್ಮು ಮುಗಿಯುವುದರೊಳಗಾಗಿ, ಸರಳೆಯ ಸ್ವರಕ್ಷಣೆಯ ನಿರ್ಧಾರ ಒಂದು ಮೆಟ್ಟಿಲು ಕೆಳಗಿಳಿಯುತ್ತದೆ. ಅವಳ ಮನಸ್ಸು ಕ್ರಮೇಣವಾಗಿ ಅವಳ ಹಿಡಿತದಿಂದ ಜಾರುತ್ತದೆ. ಅಂದು ಕಾಲೇಜು ವಿದ್ಯಾರ್ಥಿಗಳ ಅಶ್ಲೀಲ ವರ್ತನೆಯಲ್ಲಿ ಅವಳಿಗಿದ್ದ ಕ್ರೋಧಭಾವ ಇಳಿದು, ಇಂದು 'ಸಹಜವದು' ಎನ್ನುವ ಸ್ಥಿತಿಗೆ ಬಂದಿದ್ದಾಳೆ. ಅವಳ ಚಿತ್ತ ಚಂಚಲವಾಗಿದೆ. ಮನಸ್ಸಿಗೇಕೋ ಸಮಾಧಾನವಿಲ್ಲ. ಅವಳ ಮನಸ್ಸು ಅವಳಿಗರಿವಾಗದಂತೆ ಬೇರೊಂದು ಜೀವನವನ್ನು—ಅಂದು ಟ್ರಾಮಿನಲ್ಲಿ ಪ್ರಥಮದರ್ಶನದಲ್ಲೇ ಪ್ರೇಮಿಸಿದ ಸಹವಿದ್ಯಾರ್ಥಿ ವಿಜಯನ ಸ್ನೇಹವನ್ನು—ಬಯಸುತ್ತದೆ. 'ನೀನು ಮಾಡುತ್ತಿರುವುದು ತಪ್ಪು; ದುಡುಕಬೇಡ!' ಎಂದು ಅವಳ ಹೃದಯಾಂತರಾಳದ ಎಲ್ಲೋ ಮೂಲೆಯಲ್ಲಿ, ಅವಳ ಅಂತರಾತ್ಮದ ಕೂಗು ಮೊಳಗುತ್ತದೆ. ಆದರೆ ಅದು ತನಗೆ ಕೇಳಿಸದಷ್ಟು ಮುಂದುವರಿದಿರುತ್ತಾಳೆ ಸರಳೆ 'ಪ್ರೇಮಿಯನ್ನು ನೋಡುವುದು ತಪ್ಪೆ? ಆತ್ಮದ ಕರೆಯನ್ನು ಆದರಿಸದಿರುವುದು ಹೇಗೆ?' ಸರಳೆ ಇಲ್ಲಿ ಮತ್ತೊಂದು ಮೆಟ್ಟಿಲನ್ನು ಕೆಳಗಿಳಿಯುತ್ತಾಳೆ ಅಭೀಷ್ಟವಸ್ತುವನ್ನು ಹೊಂದಲು ಜೀವಿ ದುರ್ಮಾರ್ಗ ಪ್ರವೃತ್ತನಾದರೂ, ಅದಕ್ಕೆ ಯಾವುದಾದರೊಂದು ನೆವವೊಡ್ಡುವುದು ಸಹಜ.

ಬಾರಿದಂತೆಲ್ಲ ಸರಳೆಯ ಅಂತರಂಗದ ಹೋರಾಟ ಹೆಚ್ಚಾಗುತ್ತದೆ. ಮನಸ್ಸೊಂದು ಕಡೆ ಎಳೆದರೆ, ವಿವೇಕ (Conscience) ಇನ್ನೊಂದು ಕಡೆ ಎಳೆಯುತ್ತದೆ. ಈ ದ್ವಂದ್ವಯುದ್ಧದಲ್ಲಿ ಅವಳು ಜರ್ಜರಿತವಾಗುತ್ತಾಳೆ. ಅವಳ ಮೊದಲನೆಯ ವರ್ಷದ ಪರೀಕ್ಷೆ ಮುಗಿದು ರಜೆಯೂ ಹೋರಾಟದಲ್ಲೇ ಕೊನೆಗೊಳ್ಳುತ್ತದೆ. ಕೊನೆಗೆ ಆತ್ಮಶಕ್ತಿಹೀನಳಾದ ಸರಳೆಯನ್ನು ಅವಳ ಮನಸ್ಸು ಗೆಲ್ಲುತ್ತದೆ. ಸರಳೆ ಸೋತು ಮನಸ್ಸಿಗೆ ಕೈಮುಗಿಯುತ್ತಾಳೆ. ಕೊನೆಗೆ 'ತನ್ನಮೇಲೆ ಹೇರಿಕೊಂಡಿರುವ ಮಾನಸಿಕ ಕಾಠಿಣ್ಯವು. ಅಸಹಜವೆಂದೂ, ನಿಯಂತ್ರಣವು ದುರುಪಯೋಗದಲ್ಲಿ ಕೊನೆಗೊಳ್ಳುತ್ತದೆಂದೂ' ನಿರ್ಧಾರಕ್ಕೆ ಬರುತ್ತಾಳೆ. ಸರಳೆ ಇಲ್ಲಿ ಇನ್ನೂ ಆಳಕ್ಕೆ ಜಾರುತ್ತಾಳೆ.

ಈ ನಡುವೆ ಅವಳು ದ್ವಿತೀಯವರುಷದಲ್ಲಿ ಕಾಲಿಟ್ಟಾಗ, 'ಮನೋರಂಜನ ಸಮಿತಿ'ಯಲ್ಲಿ ಸರಳೆಯೂ ವಿಜಯನೂ ಸದಸ್ಯರಾಗಿದ್ದುದು, ಸರಳೆಯ ಹುಚ್ಚುಮನಸ್ಸಿಗೆ ಇನ್ನೂ ಸಹಾಯವಾಗುತ್ತದೆ. ಮುಂದೆ ವರ್ಷಾಂತ್ಯದಲ್ಲಿ ಸಮಿತಿಯ ವಾರ್ಷಿಕೋತ್ಸವದ ಸಮಯದಲ್ಲಿ ಸರಳೆ, ಸಂಪೂರ್ಣವಾಗಿ ಮನಸ್ಸಿಗೆ ಅಧಿಕಾರಕೊಡುತ್ತಾಳೆ. ಇನ್ನು ಯಾರಿಗೂ ಅಂಜುವುದಿಲ್ಲ ಅವಳು. ಉತ್ಸವದಲ್ಲಿ ಏರ್ಪಡಿಸಿದ 'ರಾಧಾಕೃಷ್ಣ'ರ ನೃತ್ಯದಲ್ಲಿ ವಿಜಯ-ಶಾಂತಿ ಪಾತ್ರಧಾರಿಗಳಾಗಿದ್ದುದು, ಸರಳೆಗೆ ಶಾಂತಿಯ ಮೇಲೆ ಅಸೂಯೆ ಹುಟ್ಟಿಸುತ್ತದೆ. ವಿಜಯ ಶಾಂತಿಯ ಅಂಗಾಂಗಗಳನ್ನು ಮುಟ್ಟುವುದು ಇವಳನ್ನು ಬೆಂಕಿಯಂತೆ ಸುಡುತ್ತದೆ. ಮಾತ್ಸರ್ಯ ಮೇರೆವರಿಯುತ್ತದೆ. ನಿಜ. 'ಪ್ರೇಮದೈಕಾಗ್ರ್ಯನೈರ್ಮಲ್ಯಗಳ ಕಾಯಲದು ಸೃಷ್ಟಿನಿಯಮಿತ ಗೃಹದ್ವಾರ ಶುನಕ'ವು ನಿಜ; ಆದರೆ ಇಲ್ಲಿ ಸರಳೆಯ ವಿಷಯದಲ್ಲಿ 'ಪ್ರೇಮ'ಕ್ಕಿಂತ ಕಾಮಭಾವನೆಯೇ ಹೆಚ್ಚಾಗಿತ್ತೆಂದು ಹೇಳಲು ಹಿಂಜರಿಯಬೇಕಿಲ್ಲ. ಅವಳು ವಿಜಯ-ಶಾಂತಿಯರ ನಟನೆಯಿಂದ ಉರಿದೇಳುತ್ತಾಳೆ. ಅವಳ ಕಾಮ ಕೆರಳುತ್ತದೆ. ಅದಕ್ಕಾಗಿಯೇ ಅವಳು ನಿಲುಗನ್ನಡಿಯ ಮುಂದೆ ನಿಂತು, ತನ್ನ ಎದೆಯನ್ನು ಮುಚ್ಚಿದ ಸೆರಗನ್ನು ಆಚೆ ಬಿಸಾಡಿ, ತನ್ನ ಅಂಗಸೌಷ್ಠವವನ್ನು ನೋಡುವಷ್ಟು ಮುಂದುವರಿಯುತ್ತಾಳೆ. ಅದೇ ವೇಳೆಗೆ ವಿಜಯ ಅಲ್ಲಿಗೆ ಬಾರದಿದ್ದರೆ

ಅವಳ ಕಾಮ ಇನ್ನೂ ವಿಕೃತವಾಗುತ್ತದೆ. ಆ ಸಮಯದಲ್ಲಿ ಅಲ್ಲಿಗೆ ಬಂದ ವಿಜಯ, ಅವಳಂತರಂಗವನ್ನರಿಯದಷ್ಟು ಮೂರ್ಖನಾಗಿರಲಿಲ್ಲ. ಅಂಗೈಯಲ್ಲಿಯ ಹಣ್ಣನ್ನು ಬಿಡುತ್ತಾರೆಯೇ ಯಾರಾದರೂ ?

ಕಾರ್ಯಕ್ರಮ ಮುಗಿದಮೇಲೆ ವಿಜಯ ಕಾಮಿಯನ್ನು ತನ್ನ ರೂಮಿಗೆಳೆದೊಯ್ಯುತ್ತಾನೆ. ಸರಳೆ ಇನ್ನು ಪಾತಾಳಕ್ಕಿಳಿಯಲು ಇನ್ನೂ ಒಂದೇ ಮೆಟ್ಟಲು. 'ಇನ್ನೇನು ಅವಳು ಬಿದ್ದಳು; ಮುಗಿಯಿತು ಅವಳ ಕತೆ' ಎನ್ನುವಷ್ಟರಲ್ಲಿಯೇ ಅವಳು ಸುದೈವದಿಂದ 'ಹಿಪ್‌ನೋಟಿಸ್ಮ್' (Hypnotism) ಅವಸ್ಥೆಯಿಂದ ಎಚ್ಚರಿಯುತ್ತಾಳೆ. ತನ್ನ ಮುಂದಿದ್ದ ಭಯಂಕರವಾದ ಪಾಪಕೂಪಕ್ಕಂಜಿ, ಹೇಸಿಗೆಯ ಕಾರ್ಯವನ್ನು ಬಿಟ್ಟು ಕಣ್ದೆರೆಯುತ್ತಾಳೆ. ಕೋಳಿಯಲ್ಲಿ ಕಾಲಿಡುವ ಮೊದಲೇ ಎಚ್ಚರಿಯುತ್ತಾಳೆ. ತನ್ನ ಅಸಹ್ಯ ಕೃತ್ಯಕ್ಕೆ ನಾಚಿ ಬದುಕುತ್ತಾಳೆ. ಕರಾಳೆಯಾಗಿದ್ದವಳು ಮತ್ತೆ ಸರಳೆಯಾಗುತ್ತಾಳೆ — ಪುನರ್ಜನ್ಮ ಪಡೆದು.

ಇಷ್ಟು ವಸ್ತುನಿರೂಪಣೆಯ ಪರಾಮರ್ಶೆ. ಕತೆಯನ್ನು ಹೆಣೆಯುವಾಗ ಲೇಖಕರು, ಒಂದೋ ಎರಡೋ ಎಡೆಗಳನ್ನು ಬಿಟ್ಟರೆ ಉಳಿದೆಡೆಯಲ್ಲಿಯೂ ತಪ್ಪಿಲ್ಲ. ಪಾತ್ರಗಳೆಲ್ಲವೂ ಚೆನ್ನಾಗಿ ಚಿತ್ರಿತವಾಗಿವೆ. ಸುಸಂಸ್ಕೃತ ತಂದೆ ಸುಂದರರಾಯರೂ, ಸುಧಾರಿತರೂ ಆದರೂ ಹಳೆಯ ಪದ್ಧತಿಯವರಂತೆ ಹಿಂದು ಮುಂದು ನೋಡಿ ನೂರು ಸಲ ಯೋಚಿಸುವ ಸ್ವಭಾವವುಳ್ಳ ಜಾನಕೀಬಾಯಿಯವರೂ, ಎಲ್ಲ ಕ್ಷೇಮ-ಭಾರವನ್ನು ತಾವೇ ಹೊತ್ತಂತಿದ್ದ ಅವರ ತಾಯಿಯ ಹೃದಯವೂ ಹಿತ-ಮಿತವಾಗಿ ವರ್ಣಿಸಲ್ಪಟ್ಟಿವೆ.

ಇನ್ನು ಮನೋರಮೆ. ಕತೆ ಸರಳೆಯದು. 'ಪುನರ್ಜನ್ಮ' ಸರಳೆಯದು. ಆದರೂ ಅವಳಿಗೊಂದು ವಿಶಿಷ್ಟ ಸ್ಥಾನವಿದೆ. ಸರಳೆಯಲ್ಲಿ ಆತ್ಮಶಕ್ತಿ ಕುಗ್ಗಿದೆ. ಅದನ್ನು ಮೆಟ್ಟಿ ಸರ್ವಸ್ವತಂತ್ರವಾಗಿ ಹುಚ್ಚು ಅಧಿಕಾರವನ್ನು ತೋರಿಸುತ್ತದೆ ಅವಳ ಮನಶ್ಶಕ್ತಿ. ಆದುದರಿಂದಲೇ ಅವಳು ಮೊದಲು ಮನಸ್ಸಿಗೆ ಬಾಗಿ, ಅಧೋಗತಿಗಿಳಿಯುವುದರಲ್ಲಿ ಕಣ್ದೆರೆಯುತ್ತಾಳೆ ಅದೂ ತನ್ನ ಶಕ್ತಿಯಿಂದಲ್ಲ; ವಿಜಯನ ರೂಮಿನಲ್ಲಿದ್ದ ಎರಡು ಚಿತ್ರಗಳಿಂದ. ಒಂದು ವೇಳೆ ಅಲ್ಲಿ ಆ ಚಿತ್ರಗಳಿಲ್ಲದಿದ್ದರೆ ಅವಳು ಮತ್ತೆ ಸುಧಾರಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲವೇನೋ! ಆದರೆ ಮನೋರಮೆ ಹಾಗಲ್ಲ. ಅವಳು ಕಾಲೇಜಿಗೆ ಸೇರಿದ ಮೊದಲನೆಯ ವರ್ಷದಲ್ಲೇ ಕಹಿಯುಂಡು ಸ್ವಶಕ್ತಿಯಿಂದಲೇ ಕಣ್ದೆರೆದು, ತಾನು ಮಾಡಿದ ಕಾರ್ಯಗಳಿಗೆ ಹೇಸಿ ಒಳ್ಳೆಯವಳಾಗುತ್ತಾಳೆ. 'ಪುನರ್ಜನ್ಮ' ಕೇವಲ ಸರಳೆಗಾಗಿಯೇ ಅಲ್ಲ. ಸರಳೆಯೂ ಪುನರ್ಜನ್ಮವನ್ನು ಪಡೆದಿದ್ದಾಳೆ. "ಆಕೆಯ ಹಿಂದಿನ ವರುಷದ ಅನುಭವವು, ಆಕೆಯ ವ್ಯಕ್ತಿಜೀವನದಲ್ಲಿ ಉಜ್ಜಲಾಗದ ಸ್ಥಳವನ್ನು ಪಡೆದಿದ್ದಿತು. ಹಿಂದಿನ ವರುಷ ಆಕೆಯ ಓದು ವೇಗಪೂರ್ಣವಾದ ಹೊನಲಿನಂತೆ ಹರಿದು, ನೈಸರ್ಗಿಕ ಜಲಪಾತವನ್ನು ಮಾಡಿ, ಈ ವರುಷದಿಂದ ಸೌಮ್ಯಗತಿಯಲ್ಲಿ ಹರಿಯುತ್ತಿದ್ದಿತು" ಎಂಬ ಮಾತಿನಲ್ಲಡಗಿದ ಧ್ವನಿಯಿಂದ, ಮೇಲಿನ ಮಾತನ್ನು ಸಮರ್ಥಿಸಬಹುದು.

ಸರಳೆಯ ಪುನರ್ಜನ್ಮವನ್ನು ಚಿತ್ರಿಸುವುದರಲ್ಲಿ ಲೇಖಕರ ಚತುರತೆ ಕಂಡುಬರುತ್ತದೆ. ಅವಳು ಮರುಹುಟ್ಟು ಪಡೆದುದು ವಿಜಯನ ರೂಮಿನಲ್ಲಿಯ ಆ ಎರಡು ಚಿತ್ರಗಳಿಂದ. ಅವು ನಿಜವಾಗಿಯೂ ಅವಳ ತಾಯಿ-ತಂದೆಯರ ಚಿತ್ರಗಳಾಗಿರಲಾರವು. ವಿಜಯನಿಗೂ ಅವರಿಗೂ ಏನೂ ಸಂಬಂಧವಿಲ್ಲ. ಅವು ಬೇರೆ ಯಾರವೋ ಚಿತ್ರಗಳಾಗಿದ್ದು, ಅವಳು 'ಹಿಪ್‌ನೋಟಿಸ್ಮ್' (Hypnotism) ಅವಸ್ಥೆಯಲ್ಲಿದ್ದುದರಿಂದ ಅವು ಅವಳಿಗೆ ತನ್ನ ತಾಯಿ-ತಂದೆಯರ ಚಿತ್ರಗಳೇ ಅಲ್ಲಿ ಬಂದು 'ಪಾಪಕಾರ್ಯ ಮಾಡಬೇಡ' ಎಂದು ಸಂಬೋಧಿಸುತ್ತಿದ್ದಂತೆ ತೋರುತ್ತದೆ. ಆದುದರಿಂದ ಅವಳು ಉಳಿಯುತ್ತಾಳೆ. ಇಲ್ಲಿ ಲೇಖಕರು ಆ ಚಿತ್ರಗಳಲ್ಲಿ ಅವಳ ತಾಯಿ-ತಂದೆಯರ ಚಿತ್ರಗಳೇ ಅವಳಿಗೆ ಕಂಡುವೆಂದು ಹೇಳುವ ಬದಲು, ಯಾವುದೋ ಕ್ರೂರ — ಕರಾಳವಾದ ರೂಪ ಕಂಡು ಅವಳನ್ನು ಅಸಹ್ಯಕಾರ್ಯಮಾಡಲು ಅಂಜಿಸಿದುದರಿಂದ ಸರಳೆ ಕೆಡಲಿಲ್ಲ—ಎಂದು ಹೇಳಬಹುದಾಗಿತ್ತು. ಆದರೆ ಅವಳು ಪಡೆಯಬೇಕಾದುದು ಪುನರ್ಜನ್ಮವನ್ನು. ಆದರೆ ತಂದೆ—ತಾಯಿಗಳಿತ್ತ ಜನ್ಮವೇ ನಿಜವಾದುದಲ್ಲವೇ ?

ಕತೆಗಾರರು ಸನ್ನಿವೇಶ ನಿರೂಪಣೆಯಲ್ಲಿ ಒಂದೆಡೆ ಸ್ವಲ್ಪ ಎಡವಿದ್ದಾರೆಂದು ಕಾಣುತ್ತದೆ. ವಿಜಯ-ಸರಳೆಯರು ಕಾರಿನಲ್ಲಿ ಹೋಗುವಾಗ "ಚಳಿಗಾಲದ ರಾತ್ರಿಯಾಗಿದ್ದುದರಿಂದ ರಸ್ತೆಗಳು ನೀರವವಾಗಿದ್ದುವು" ಎಂದು ಹೇಳುತ್ತಾರೆ. ವಾರ್ಷಿಕೋತ್ಸವವನ್ನು ಸಾಮಾನ್ಯವಾಗಿ ಏರ್ಪಡಿಸುವುದು ವರ್ಷಾಂತ್ಯದಲ್ಲಿ; ಎಂದರೆ ಫೆಬ್ರುವರಿ ಅಥವಾ ಮಾರ್ಚಿಯಲ್ಲಿ. ಚಳಿಗಾಲ ಸಾಮಾನ್ಯವಾಗಿ ಎಲ್ಲಾ ಕಡೆಗಳಲ್ಲಿಯೂ (ಭಾರತದಲ್ಲಿ) ಜನವರಿಯ ಸಂಗಡವೇ ಮುಗಿಯುವುದು. ಹೆಚ್ಚು ಚಳಿ ಇರುವ ಕೆಲವೆಡೆಗಳಲ್ಲಿ ಚಳಿ ಫೆಬ್ರುವರಿಯ ಕೆಲವು ದಿವಸಗಳವರೆಗಿದ್ದರೂ, ರಸ್ತೆ ನೀರವವಾಗಿರುವಷ್ಟು ಚಳಿ ಇರುವುದಿಲ್ಲ. ಆದ್ದರಿಂದ 'ಚಳಿಗಾಲ' ಎಂದು ಹೇಳುವುದು ಅಷ್ಟು ಚೆನ್ನಾಗಿರುವುದಿಲ್ಲ. ಅಲ್ಲದೆ ಆಗಿನ ಸಮಯ ರಾತ್ರಿ ೧೧ ಗಂಟೆಯಾಗಿದ್ದುದರಿಂದ, ರಸ್ತೆಗಳು ಯಾವ ನಗರದಲ್ಲಾದರೂ ನೀರವವಾಗಿರುತ್ತವೆ. ಆದ್ದರಿಂದ ಲೇಖಕರು ಅಷ್ಟು ಹೇಳಿದ್ದರೆ ಸಾಕಿತ್ತು.

ಕೊನೆಯದಾಗಿ ಕತೆಯ ಶೀಲ. ಸರಳೆ Hypnotised ಆದ ಸಮಯದಿಂದ ಅವಳಿಗೆ ಎಚ್ಚರ ಬರುವ ವರೆಗೂ ಅಶ್ಲೀಲವರ್ಣನೆಯಿದೆ. ಇಲ್ಲಿ ನಾನು ಶೀಲ ಯಾವುದು—ಅಶ್ಲೀಲ ಯಾವುದು—ಎಂಬುದನ್ನು ಬಿಡಿಸುವ ಗೊಡವೆಗೆ ಹೋಗುವುದಿಲ್ಲ. ಕಾಮ ಕೆರಳಿಸುವುದು ಅಶ್ಲೀಲವೆಂದು ಇಂದಿನ ಸಾಹಿತಿಗಳ ಮತವಾಗಿದ್ದರೆ, ಇಲ್ಲಿಯ ವರ್ಣನೆ ಅಶ್ಲೀಲವಾಗಿದೆ ಎಂದು ಹೇಳಲು ಅಂಜಬೇಕಾದುದಿಲ್ಲ. ಆದರೆ ಅಶ್ಲೀಲವಾಗುತ್ತದೆಂದು ವರ್ಣನೆಯನ್ನೇ ಮಾಡದಿದ್ದರೆ, ಸರಳೆಯ ಅಂತರಂಗದ ಹೋರಾಟವನ್ನು ನಿಷ್ಪಕ್ಷಪಾತಿಗಳಾಗಿ ಲೇಖಕರು ಚಿತ್ರಿಸದಿದ್ದರೆ 'ಪುನರ್ಜನ್ಮ'ಕ್ಕೆ ಅನ್ಯಾಯಮಾಡಿದಂತಾಗುತ್ತದೆ. ಕೊನೆಗೆ ಇದು ಈ ತೆರನಾದ ಸಾಹಿತ್ಯಸೃಷ್ಟಿಯೇ ತ್ಯಾಜ್ಯವೆಂಬಲ್ಲಿಯ ವರೆಗೂ ಹೋಗುತ್ತದೆ. ಹಾಗೆ ಮಾಡಿದರೂ ಹಾನಿ. ಅಂತೂ ಇದೊಂದು ಬಿಡಿಸದ ಕಗ್ಗವಾಗಿಯೇ ಉಳಿದಿದೆ.

ಸಾಹಿತ್ಯ ವಿಹಾರ

ಜಯಂತಿಯ ೧೯೫೫ ಮಾರ್ಚ್ ಸಂಚಿಕೆಯಲ್ಲಿ ಬರೆದ ಸಂಪಾದಕೀಯವನ್ನು ಕುರಿತು, ತರುಣವಿಮರ್ಶಕರಾದ ವಿದ್ವಾನ್ ಕೆ. ಎಸ್. ಶರ್ಮಾ 'ವಿಶಾರದ' ಅವರು ತಮ್ಮ ಅಭಿಪ್ರಾಯಗಳನ್ನು ಬರೆದು ಕಳುಹಿದ್ದಾರೆ. ಭಾಷಾಭಿಜ್ಞತೆಯ ವಿಚಾರದಲ್ಲಿ ನಡೆದ ಯಾವ ವಿಧದ ಚರ್ಚೆ-ವಿಚರ್ಚೆಗಳನ್ನೂ ನಮ್ಮ ವಾಚಕರೆದುರು ಇರಿಸಬೇಕೆಂದು ನಮ್ಮ ಅಪೇಕ್ಷೆಯಾದುದರಿಂದ, ಶ್ರೀಮಾನ್ ಶರ್ಮರ ಅಭಿಪ್ರಾಯವನ್ನಿಲ್ಲಿ ಪ್ರಕಟಿಸಲಾಗಿದೆ. ಸಂ. ಜ.

ದಿನದಿಂದ ದಿನಕ್ಕೆ ವೈವಿಧ್ಯಪೂರ್ಣವಾಗಿ ಸಾಗುತ್ತಿರುವ ಇಂದಿನ ಸಾಹಿತ್ಯಪ್ರವಾಹದಲ್ಲಿ—ಅಲ್ಲೂ 'ಕಾದಂಬರಿಯುಗ'ವೆಂದಾಡುವ ಈ ಪರಿಸ್ಥಿತಿಯಲ್ಲಿ, ಕೃತಿನಿರ್ಮಾಪಕನು ಅನುಭವ ಸಂಪದ್ಧಾನದೊಡನೆ-ಉದಾತ್ತಭಾಷಾಗೌರವವನ್ನೂ ಹೇಗೆ ಕಾಪಾಡಿಕೊಳ್ಳಬೇಕೆಂಬುದನ್ನು ಸಂಪಾದಕರು ಉತ್ತಮ ಹಾಗೂ ಉಪಯುಕ್ತ ನಿದರ್ಶನದ ಹಿನ್ನೆಲೆಯಲ್ಲಿ ಮಾರ್ಮಿಕವಾಗಿ ಸಾರಿರುವುದು ಗಮನಾರ್ಹವಾದ ವಿಚಾರವಾಗಿದೆ.

ಆರಂಭದಲ್ಲೇ ಸಂಪಾದಕರು, ಸಾಹಿತ್ಯದ ಗೌರವವನ್ನು ಸಂಗೀತದ ಮಧುರದೃಷ್ಟಾಂತದಿಂದ ಕಂಡಿದ್ದಾರೆ. ಸೌಂದರ್ಯಾನುಭೂತಿಯೆ ಜೀವನಸರ್ವಸ್ವವಾಗಿರುವ ಕಲೆಯಲ್ಲಿ ಆರಾಧಕನಿಗೆ ಭಕ್ತಿ-ಗೌರವಗಳಿದ್ದಂತೆ ಹೃದಯಸಂಪತ್ತಿಯೂ ಬೇಕು. ಸಂಗೀತಕಲೆಯು ಹೃದಯಸ್ಥಾಯಿಯಾಗಬೇಕಿದ್ದರೆ—ಸ್ವರಶುದ್ಧಿ, ಲಯಶುದ್ಧಿ, ರಾಗಶುದ್ಧಿಗಳು ಹೇಗೆ ಮುಖ್ಯವೋ ಅಂತೆಯೆ ಸಾಹಿತ್ಯಕಲೆಯಲ್ಲೂ ಭವ್ಯತೆಯು ನೆಲಸಬೇಕಾದರೆ, ಅನುಭವಸಂಪತ್ತನ್ನು ಬಿಂಬಿಸುವ ಭಾಷಾಗೌರವವೂ ಬೇಕು. ಭಾಷಾಶುದ್ಧಿಯಿರದ ಸಾಹಿತ್ಯ, ರಾಗಶುದ್ಧಿಯಿಲ್ಲದ ಸಂಗೀತದಂತೆ ನೀರಸವಮಾತ್ರವಲ್ಲ; ಹೇಯವಾಗಿದೆಯೆನ್ನುವುದು ಪ್ರಾಚೀನ ಸಾಹಿತ್ಯಪಥವನ್ನವಲೋಕಿಸಿದವನಿಗೆ ಹೊಸತೆನಿಸದು. ಸಹೃದಯ ಹೃದಯಾಪ್ಯಾಯನವಾಗಬೇಕಾದರೆ, ಸಜೀವಶಕ್ತಿ ನೆಲಸಬೇಕಾದರೆ ಉದಾತ್ತಕಲೆಯ ಜೀವನಸರ್ವಸ್ವವಾದ ತಳಹದಿ ಭದ್ರವಾಗಬೇಕೆಂಬುದನ್ನು ಸಂಗೀತದ ದೃಷ್ಟಾಂತದಿಂದ ನಿರೂಪಿಸುತ್ತ ಸಂಪಾದಕರು, ಸಾಹಿತ್ಯಗತಿಗೊಂದು ಸುಭದ್ರವಾದ ಪಂಚಾಂಗವನ್ನು ಬರೆದಿದ್ದಾರೆ.

ಸ್ವರಪ್ರಭುತ್ವದಿಂದ ಸಂಗೀತವು ಬೆಳಗಿದರೆ, ಭಾಷಾಪ್ರಭುತ್ವವು ಸಾಹಿತ್ಯದ ಹೊಂದೀವಿಗೆಯಾಗುವುದು. ಭಾಷಾವಾಹಕನಾದ ಸಾಹಿತ್ಯವು ಸುಪುಷ್ಟವಾದ ಭಾಷೆಯಿಂದ ವಾಹ್ಯವಾದರೆ ಮಾತ್ರ—ರಸಭಾವಗಳನ್ನು ಸವಿವ ಸಹೃದಯನು ಆನಂದದ ಪರಮಾವಧಿಗೆ ತಲುಪುವನು. ಅಲ್ಲಿಯೆ ಅವನಿಗೆ ನಿಜವಾದ ಆನಂದವು.

ಮುಂದೆ ಸಂಪಾದಕರು ಪ್ರಾಚೀನಸಾಹಿತ್ಯವನ್ನೂ, ಲಾಕ್ಷಣಿಕರ ಮತವನ್ನೂ ಗಂಭೀರವಾಗಿ ಚರ್ಚಿಸುತ್ತ, ವ್ಯಾಕರಣವೇ ಸಾಹಿತ್ಯದ ತಿರುಳೆಂದು ಸ್ಫುಟಗೊಳಿಸಿ, ಆದಿರದ ಸಾಹಿತ್ಯವನ್ನು—ಗಾಂಧಾರಿಯ ಮಕ್ಕಳಿಗೆ ಹೋಲಿಸಿ ಅಪೂರ್ಣತೆಯನ್ನು ನಾಶವನ್ನು ಸಾರಿದುದು—ವಿಚಾರಜ್ಞಾನಕ್ಕೊಂದು ಸುಲಭ ಹಾಗೂ ಮಾರ್ಮಿಕವಾದ ಪಥವಾಗಿದೆ. ಆತ್ಯಾತುರದಿಂದ ಗರ್ಭವನ್ನು ಹಿಸುಕಿ ನೂರು ಮಕ್ಕಳನ್ನು ಪಡೆದು: ಅಂಗಾಂಗ ವಿಕಾಸಗಳನ್ನೀರದ ಅವುಗಳಲ್ಲಿ ವೇದವ್ಯಾಸರಿಂದ ಸಂಸ್ಕಾರವನ್ನು ಕೊಡಿಸಿದರೂ, ಕೊನೆಗದರಿಂದ ಕಂಡ ದುಷ್ಫಲ—ಸಹನಾಶೀತವಾಗಿದೆಯೆನ್ನುವ ಈ ಒಂದೆ ದೃಷ್ಟಾಂತದಿಂದ, ಪೂರ್ಣತೆಗೆರವಾಗದ ಸಾಹಿತ್ಯವನ್ನು ತೋರಿದುದು ಗಮನೀಯವಿದೆ. ಈ ಮಧುರದೃಷ್ಟಾಂತವನ್ನಿತ್ತ ಸಂದರ್ಭವನ್ನು ಪರಿಭಾವಿಸಿದವ್ಥೂ—ಸಾಹಿತ್ಯ ಶಕ್ತಿಯ ಒಲವನ್ನು ಕಾಣಬಹುದು.

ಈ ವಿಚಾರದ ಬಳಿಕ ಸಂಪಾದಕರು, ಬರೆಯುವ ಭಾಷೆ ಮತ್ತು ಮಾತನಾಡುವ ಭಾಷೆಗಳ ವ್ಯತ್ಯಾಸವನ್ನು ತೋರಿ, ಸಾಹಿತ್ಯನಿರ್ಮಾಣದಲ್ಲಿ ದೇಶಿನುಡಿಗಳ ಬೆನ್ನುಹತ್ತಿ ಸಾಗುವುದು ತರವಲ್ಲವೆಂದೂ, ಅದರಿಂದ ಸಂಕುಚಿತ ಪ್ರಾದೇಶಿಕವ್ಯಾಪ್ತಿ ಮಾತ್ರ ಆಗಬಲ್ಲುದೆಂದೂ ಹೇಳಿ, ಸಮಗ್ರದೇಶವ್ಯಾಪ್ತಿಗೆ ಮಾತನಾಡುವ ಅರ್ಥಾತ್ ವ್ಯಾಕರಣಶುದ್ಧವಾಗಿ ಸಾರ್ವತ್ರಿಕವಾಗಿ ನೆಲೆಗೊಂಡ ಭಾಷೆಯೇ ಸಾಧನವೆಂದಾಡಿದುದು ಸತ್ಯವಿದೆ. ಸಾಹಿತ್ಯ' ಎಲ್ಲ ಸ್ಥಳದ-ಎಲ್ಲ ಕಾಲದ ಜನರಿಗೂ ಸಮಾನಾರ್ಥಬೋಧಕವಾಗಿ ಇರಬೇಕೆಂಬ ಭಾವನೆಯಿಂದಲೆ ಪ್ರಾಚೀನ-ಲಾಕ್ಷಣಿಕರು ಲೇಖನಭಾಷಾಪದ್ಧತಿಯನ್ನು ಸೃಷ್ಟಿಸಿ ಅದನ್ನೆ 'ಮಾರ್ಗಪದ್ಧತಿ' ಯೆಂದಾಡಿರುವುದು ಲಕ್ಷಣಗ್ರಂಥಗಳನ್ನು ಓದಿದ, ಕವಿರಾಜ ನೃಪತುಂಗನ ಕವಿರಾಜಮಾರ್ಗವನ್ನು ನೋಡಿದ ವಾಚಕನಿಗೆ ನೂತನವಲ್ಲ! ಪ್ರಾಚೀನ ಲಾಕ್ಷಣಿಕರ ಮತವನ್ನೇ ಹೊಂದಿಕೊಂಡು ಸಂಪಾದಕರು, ಉಪಯುಕ್ತ ಕಾರಣಗಳೊಂದಿಗೆ ದೇಶಿಯನ್ನು ಮಾರ್ಗಪದ್ಧತಿಯನ್ನು ವ್ಯಕ್ತವಾಗಿ ತೋರಿದ್ದಾರೆ.—

ನೆಲೆಯನ್ನು—ನೆರಳನ್ನು ಬಯಸುವ ಮನುಷ್ಯನು—ನಾಗರಿಕನು ಅದೆಂತು ಅವ್ಯವಸ್ಥಿತವಾದ ಮನೆಯಲ್ಲಿರಲು ಬಯಸದೆ, ತನ್ನ ಮನವೊಪ್ಪಿದ ಬಗೆಯಲ್ಲಿ ಅದರ ಸೌಂದರ್ಯವನ್ನು ಅಚ್ಚುಕಟ್ಟನ್ನು ಬಯಸುತ್ತಾನೋ, ಅಂತೆಯೆ ಕೃತಿನಿರ್ಮಾಪಕನು ತನ್ನ ಕೃತಿಯನ್ನು ಸಹೃ

ದಯರು ಮೆಚ್ಚಬೇಕಾದರೆ—ಮೊದಲಾಗಿ ತನ್ನ ಭಾಷೆಯ ಶುದ್ಧಿಯನ್ನು—ಹಿರಿಮೆಯನ್ನು ಅಭ್ಯಾಸಬಲದಿಂದ–ಲಕ್ಷಣಗಳಿಂದ ಕಾಯಬೇಕಾಗಿದೆ. ಇದಿಲ್ಲವಾದರೆ ದೇಸಿನುಡಿಗಳಿಂದಲೂ, ಮಾರ್ಗದ ನುಡಿಗಳಿಂದಲೂ ಬೆರೆತ ಸಾಹಿತ್ಯವು ಹೇಸರಕತ್ತೆಯಾಗಿ ರೂಪುಗೊಂಡು ಸಹೃದಯರ ನಿಂದೆಗೆರವಾಗಿ ನೀಚಗತಿಗಿಳಿವುದು. ದೇಸಿ ಮತ್ತು ಲೇಖನಭಾಷೆಗಳ ಒಲವನ್ನರಿತ ಲೇಖಕನು ವಿಷಯದ ಔಚಿತ್ಯವನ್ನರಿತು ಸಾಹಿತ್ಯವನ್ನು ನಿರ್ಮಿಸಿ ಧನ್ಯನಾಗುವನು. ಸಾಹಿತ್ಯವು ಕೆಡಬಾರದು-ಉಳಿಯಬೇಕು. ಪ್ರಾಚೀನಕಾಲದಿಂದಲೆ ಗೌರವಯುಕ್ತವಾಗಿ ಬಾಳಿಬಂದ ಸಾಹಿತ್ಯವಾಹಿನಿಯಲ್ಲಿ ಅಪಕ್ವ ಮನೋಭಾವದ ಸೆಳೆತ ಮೂಡಬಾರದು. ಮೂಡಿದರದನ್ನು ಕಟುವಾಗಿ ಟೀಕಿಸುವುದು, ಸಾಹಿತ್ಯದ ಬೆಳಕನ್ನು ಆಶಿಸುವ ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಇಂದಿನ ಅನೇಕ ಕೃತಿಗಳಲ್ಲಿ ಭಾಷಾಶುದ್ಧಿಯನ್ನುಳಿಸುವ ಸಾಹಸ ಕಾಣಿಸುವುದಿಲ್ಲ. ಲಲಿತವಾಗಲಿ, ಪ್ರೌಢವಾಗಲಿ– ಶೈಲಿಯಲ್ಲೊಂದು ಹದವಿರಬೇಕು. ಉತ್ತಮಕಾವ್ಯವನ್ನು ಓದಿ ಭಾಷಾಜ್ಞಾನವನ್ನು ಸಂಪಾದಿಸಿ ಅದನ್ನು ಸುಸ್ಥಿರನಾದ ವ್ಯಾಕರಣದಿಂದ ಬೆಳಗಿದರೆ ಮಾತ್ರ ಉಪಾತ್ತನಸ್ಪುವಿಗೊಂದು ಗೌರವವೂ ಸಿಗುವುದು. ಆದಕ್ಕೆಂದೇ ಉದಯೋನ್ಮುಖ ಸಾಹಿತ್ಯಿಕನಿಗೆ ಕೃತಿನಿರ್ಮಾಣವನ್ನು ಮಾಡುವ ಹಂಬಲವಿದ್ದಂತೆ–ವ್ಯಾಕರಣ–ಶಬ್ದವ್ಯುತ್ಪತ್ತಿ–ಶಬ್ದಾರ್ಥವೈಶಿಷ್ಟ್ಯ, ಷಡೆನುಡಿಗಳನ್ನು ಚೆನ್ನಾಗಿ ಅಭ್ಯಾಸ ಮಾಡುವ ಆಸಕ್ತಿಯೂ ಬೇಕೆಂದು ಸಂಪಾದಕರು ಅಂದಿದ್ದಾರೆ!

ಇವಿಷ್ಟು ವಿಚಾರಗಳನ್ನು ಸಂಪಾದಕರು ಹಲವಾರು ಸಮರ್ಥನೆಗಳಿಂದ ಸಮರ್ಥಿಸಿ ಉದಯೇಚ್ಛುಗಳಿಗೂ, ಎಡವಿಬಿದ್ದವರಿಗೂ ಬೀಳುವವರಿಗೂ ನ್ಯಾಯ್ಯವಾದೊಂದು ಪಥದರ್ಶನ ಮಾಡಿದ್ದಾರೆ. ಈ ಸಂಪಾದಕೀಯವನ್ನು ಪ್ರತಿಯೊಬ್ಬನೂ ಓದಲೇಬೇಕು. ಮುಖ್ಯವಾಗಿ ಇಂತಹ ಗಹನವಿಚಾರವನ್ನು ಮನೋವೇಧಕವಾಗಿ ತಿಳಿಸುವಲ್ಲಿ ಸಂಪಾದಕರೆತ್ತಿಕೊಂಡ ನಿದರ್ಶನಗಳನ್ನು ಮರೆಯದೆ ಮನಸ್ಸಿನಲ್ಲಿಡಬೇಕು. ಅಂಕೆ ಮೀರಿ ಸಾಗಿ ಭಾಷಾಗೌರವವನ್ನಳಿಸದೆ, ಮನಬಂದಂತೆ ಬರೆದು ಪುಟಗಳನ್ನು ತುಂಬುವ, ಕ್ಷಣಿಕ ಪರ್ಯವನಾಯಿ ಕೃತಿಗಳನ್ನಿಳಿಸುವ ಲೇಖಕರು ಆಗತ್ಯವಾಗಿ ಈ ಸಲಹೆಗಳನ್ನು ಕಾಣಬೇಕು; ಕಂಡರೆ ಸಾಲದು ಆಚರಿಸಬೇಕು. ಯಾರಿಗೂ ಅವಹೇಳನದ ನುಡಿಗಳನ್ನು ಆಡದೆ, ಸಾರ್ವತ್ರಿಕವಾಗಿ ಇಂದು ನೆಲೆನಿಂತ ಸಾಹಿತ್ಯರಾಶಿಯನ್ನಾಲೋಡಿಸಿ, ಕೃತಿನಿರ್ಮಾಪಕರನ್ನು ಬೆನ್ನು ಚಪ್ಪರಿಸಿ ಅನುಕೂಲ ಸಲಹೆಯಿತ್ತು ಪಥದರ್ಶನ ಮಾಡಿದ ಈ ಒಂದೇ ಒಂದು ಸಂಪಾದಕೀಯವು ಹಿರಿಯರಾದ ಸಾಹಿತ್ಯಿಕರಿಂದ ಬರೆದುಬಂದುದೆಂದರೆ ಇದನ್ನು ಗೌರವದಿಂದ ಕಾಣಬೇಕಾದುದು ಅಭ್ಯಾಸಿಯ ಆದ್ಯಕರ್ತವ್ಯವಾಗಿದೆ.

ಹೀಗೆ ಸಾಹಿತ್ಯಾಮೃತಸ್ಯಂದಿನಿ ಜಯಂತಿಯು ಆಗಾಗ ಕರ್ತವ್ಯಬೋಧೆಯನ್ನಿತ್ತು ಸಾಗಿ ಸಾಹಿತ್ಯಾಭ್ಯಾಸಿಗಳಿಗೊಂದು ಮಾರ್ಗದರ್ಶನ ಮಾಡಲೆಂದು ಹೇಳುತ್ತ, ಮನವಾರೆ ಈ ಸಂಪಾದಕೀಯವನ್ನು ಗೌರವದಿಂದ ಸ್ವಾಗತಿಸುತ್ತೇನೆ.

ಒಂದು ಕಿರುರೂಪಕ

ಹಣ್ಣೆಲೆ—ಹಸುರೆಲೆ

ಶ್ರೀ. ಮನೋಹರ ಸೊರಟೂರ, ಶಿರಹಟ್ಟಿ

ಹಸಿರು ಹೋಗಿ, ಹಳದಿಯಾಗಿ, ಹರುಷವಳಿದು, ನೀರಸತೆಯುಳಿದು ಜೀವನಯಾತ್ರೆಯ ಕೊನೆಯ ಹೊಂದುತಲಿತ್ತು ಹಣ್ಣೆಲೆಯೊಂದು.

ಅದೇ ಕಣ್ಣುತೆರೆದು, ತನ್ನ ಎಳಗಣ್ಣಿನಿಂದ–ಹರುಷದ ಹೊದಿಕೆಯಲ್ಲಿ ಜಗದ ಚೆಲುವನೀಕ್ಷಿಸುತ್ತಿದ್ದ ಹಸುರೆಲೆಯೊಂದು 'ಹಳದಿಯ ಹಣ್ಣೆಲೆ'ಯ ಕಂಡು ಕಂಡು ನಕ್ಕಿತು; ಗಹಗಹಿಸಿ ನಕ್ಕಿತು.

ಹಣ್ಣೆಲೆಯು ಉದುರುತ್ತಿತ್ತು.

ಹಸುರೆಲೆಯು ನಗುತ್ತಿತ್ತು.

'ಹಣ್ಣೆಲೆಯೊಮ್ಮೆ ಕಣ್ದೆರೆದು ನೋಡಿತು. 'ಹಸುರೆಲೆ'ಯ ಕಂಡು ಮಂದಹಾಸ ಸೂಸಿ ಉಸುರಿತು:

"ನಗು ಮಗು, ಗಹಗಹಿಸಿ ನಗು. ನಾನೂ ನಕ್ಕಿದ್ದೆ ಹೀಗೇ ಎಷ್ಟೋ ಜನ ಸಂಕಟದಲ್ಲಿ ಸಿಕ್ಕು ತೊಳಲಾಡುತ್ತಿರುವಾಗ; ಆದರೂ ಈ ಹುಚ್ಚು ನಗೆಗೆ ಪ್ರತಿಕಾರ ದೊರೆವುದೆಂದು ನೆನಸಿಡು! ನೀನೂ ನಾಳೆ ಕಹಿಯುಂಡು ಕೆಳಗೆ ಕುಸಿಯುತ್ತಿರುವಾಗ, ನಿನ್ನನ್ನೂ ನೋಡಿ ಹಲವು ಹೊಸ ಮುಖಗಳು ಮಂದಹಾಸವ ಸೂಸುತ್ತವೆ. ಅದು ನಿನ್ನ ಮೇಲಿನ ವೈರದಿಂದಲ್ಲ; ತಮ್ಮ ಮುಂದಿನ ಭೋಗಕ್ಕಾಗಿ.

'ನಗು, ಒಬ್ಬರ ಅಳುವಿನಲ್ಲಿ ನಗಬೇಡ. ನಾಳೆ ನೀನೂ ಅಳುತ್ತಿದ್ದಾಗ ಜಗವೆಲ್ಲ ನಕ್ಕೀತು.

ಸಾದರ ಸ್ವೀಕಾರ

೯೯ ಕರುಣಾಶ್ರಾವಣ (ಕವನ ಸಂಗ್ರಹ). ಬರೆದವರು ಶ್ರೀ. 'ಕಾವ್ಯಾನಂದ' ಪ್ರಕಾಶಕರು: ಸಹಜೀವನ ಪ್ರಕಾಶನ, ಕಾಚೀಗೂಡು, ಹೈದರಾಬಾದು (ದಕ್ಷಿಣ). ಕ್ರಾ. ಅ. ೧೦೦ ಪುಟಗಳು ಬೆಲೆ ೧—೮—೦.

೧೦೦ ಸಮ್ರಾಟ್ ಶ್ರೇಣಿಕ (ಐತಿಹಾಸಿಕ ಕಾದಂಬರಿ) ಬರೆದವರು ಶ್ರೀಮಾನ್ ಮಿರ್ಜಿ ಅಣ್ಣಾರಾಯರು. ಪ್ರಕಾಶಕರು: ಅಜಿತ ಪ್ರಕಾಶನ, ಬೆಳಗಾಂವಿ. ಕ್ರೌನ್ ಅ. ಪತ್ರದ ೮೬ ಪುಟಗಳು. ಬೆಲೆ ೧—೦—೦.

೧೦೧ ವಂಶವೃಕ್ಷ (ಕವನ ಸಂಕಲನ). ಬೇರೆ ಬೇರೆ ಕವಿಗಳ ಕವನಗಳು. ಪ್ರಕಾಶಕರು: ಕಮಲಮಂಡಲ ಪ್ರಕಾಶನ, ಕರ್ನಾಟಕ ಸಂಘ, ಕರ್ನಾಟಕ ಕಾಲೇಜು, ಧಾರವಾಡ. ಕ್ರಾ. ಅ. ೧೦೬ ಪುಟಗಳು ಬೆಲೆ ೧—೪—೦.

೧೦೨ ಎಂದೆಂದೂ ಮುಗಿಯದ ಕಥೆ (ಸಣ್ಣ ಕತೆಗಳ ಸಂಕಲನ). ಬರೆದವರು ಶ್ರೀಮಾನ್ ಯು ಆರ್. ಅನಂತಮೂರ್ತಿ. ಪ್ರಕಾಶಕರು: ಸುರುಚಿ ಪ್ರಕಾಶನ, ಮೈಸೂರು. ಕ್ರಾ. ಅ. [illegible] ಪುಟಗಳು. ಬೆಲೆ ೧—[illegible]—೦.

೧೦೩ ಪ್ರಭುವಿನ ಪ್ರಭೆ (ವ್ಯಕ್ತಿ ಮತ್ತು ಕೃತಿಯ ಪರಿಚಯ ಗ್ರಂಥ). ಬರೆದವರು ಶ್ರೀಮಾನ್ ಮ. ಶ್ರೀ. ದೇಶಪಾಂಡೆ ಎಂ. ಎ. ಅಥಣಿ. ಪ್ರಕಾಶಕರು ಶ್ರೀ. ಸಿ. ಸಿ. ಅಣ್ಣೆಪ್ಪನವರ, ನವಚೈತನ್ಯಮಾಲೆ, ಅಥಣಿ. ಕ್ರಾ ಅ. ೨೬೬ ಪುಟಗಳು. ಬೆಲೆ ೨—೦—೦.

೧೦೪ ಛಾಯಾಲೋಕ (ಚಲಚ್ಚಿತ್ರ ಪಕ್ಷಪತ್ರಿಕೆ). ಸಂಪಾದಕರು ಶ್ರೀಮಾನ್ ಪುಟ್ಟವೀರಪ್ಪ. ಪ್ರಕಾಶಕರು ಶ್ರೀ ವ್ಹಿ. ಎಸ್. ರತ್ನಂ, ಗಾಂಧೀಬಝಾರ್, ಬೆಂಗಳೂರು ನಗರ. ೮ ಪುಟಗಳು. ಬಿಡಿಸಂಚಿಕೆಯ ಬೆಲೆ ೦—[illegible]—೦.

೧೦೫ ಜ್ಯೋತಿರ್ಗನ್ನಡಿ (ಜಾತಕ–ಫಲಜ್ಯೋತಿಷ್ಯ ವಿಷಯಕ ಗ್ರಂಥ). ಬರೆದವರು ಶ್ರೀ. 'ರಮಾಕಾಂತ' ಅವರು. ಧಾರವಾಡದ ಪ್ರತಿಭಾಗ್ರಂಥಮಾಲೆಯ ೧೨ನೆಯ ವರ್ಷದ ೪ನೆಯ ಗ್ರಂಥವಿದು. ಕ್ರಾ. ಅ. ೩೩೬ ಪುಟಗಳು. ಬೆಲೆ ೨—೦—೦.

೧೦೬ ನಕ್ಷತ್ರದರ್ಶನ (ಆಕಾಶದ ಅಭ್ಯಾಸ ವಿಷಯಕಗ್ರಂಥ). ಬರೆದವರು ಶ್ರೀ. ಆರ್. ಎಲ್. ನರಸಿಂಹಯ್ಯನವರು ಪ್ರಕಾಶಕರು: ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು. ಕ್ರಾ. ಅ ೧೧೬ ಪುಟಗಳು. ಬೆಲೆ

೧೦೭ ಗಾಳಿಯಲ್ಲಿಯ ಅಗೋಚರ ಶತ್ರುಗಳು (ಆರೋಗ್ಯ-ವಿಷಯಕ ಗ್ರಂಥ). ಡಾ. ಎಸ್. ಟಿ. ಪುಟ್ಟಣ್ಣ ಬಿ. ಎಸ್‌ಸಿ, ಎಂ. ಬಿ. ಬಿ. ಎಸ್., ಡಿ. ಓ. ಎಂ. ಎಸ್ (ಲಂಡನ್). ಮೈಸೂರು ಮೆಡಿಕಲ್ ಸರ್ವಿಸ್. ಪ್ರಕಾಶಕರು: ಕನ್ನಡ ಸಾಹಿತ್ಯಪರಿಷತ್ತು, ಬೆಂಗಳೂರು. ಕ್ರಾ ಅ. ೧೧೬ ಪುಟಗಳು. ಬೆಲೆ ೧—೪—೦.

೧೦೮ ಸೂತಪುತ್ರಕರ್ಣ (ವಿಮರ್ಶಾತ್ಮಕ ಪ್ರಬಂಧ). ಬರೆದವರು ಶ್ರೀಮತಿ ಎನ್ ವೀರಮಂಗಳಾ, ಜ್ಯೂನಿಯರ್ ಬಿ. ಎ. ವೀರಶೈವ ಕಲಾಶಾಲೆ, ಬಳ್ಳಾರಿ. ಡೆ ಅ ೧೨ ಪುಟಗಳು. ವಿದ್ವಾನ್ ನಾಗೇಶಶಾಸ್ತ್ರಿಗಳು ಇದಕ್ಕೆ ಮುನ್ನುಡಿ ಬರೆದಿದ್ದಾರೆ.

೧೦೯ ದಿ ಫೋರ್ಡ್ ಫಾವುಂಡೇಶನ್ ಆ್ಯಂಡ್ ಫಾವುಂಡೇಶನ್ ಸಪೋರ್ಟೆಡ್ ಆ್ಯಕ್ಟಿವಿಟೀಜ್ ಇನ್ ಇಂಡಿಯಾ (ಸಚಿತ್ರವರದಿ). ಕಳುಹಿದವರು ಫೋರ್ಡ್‌ಫಾವುಂಡೇಶನ್ ೪೭೭, ಮ್ಯಾಡಿಸನ್ ಅವಿನ್ಯೂ, ನ್ಯೂಯಾರ್ಕ್

೧೧೦ ಕಂಬಿಯ ಹಾಡುಗಳು (ಜಾನಪದ ಸಾಹಿತ್ಯದ ಸಂಕಲನ) ಸಂಪಾದಕರು ಮತ್ತು ಮುನ್ನುಡಿಯ ಲೇಖಕರು ಡಾಕ್ಟರ್ ಬಿ ಎಸ್. ಗದ್ದಗಿಮಠ ಎಂ. ಎ, ಪಿಎಚ್. ಡಿ. ಬೆಳಗಾಂವಿ ಪ್ರಕಾಶಕರು ಶ್ರೀಮಾನ್ ಗುರುಸಿದ್ಧಯ್ಯಸ್ವಾಮಿ ಕಲ್ಲಯ್ಯಸ್ವಾಮಿ ಗೋಕುಲ, ಹಳೇಹುಬ್ಬಳ್ಳಿ. ಫೂಲ್ಸ್‌ಕ್ಯಾಪ್ ಅಕ್ಟೇವೋ ೪೪ ಪುಟಗಳು ಬೆಲೆ ೦—೬—೦.

೧೧೧ ವೀರಶೈವಚರಿತ್ರೆ (ವಿಮರ್ಶಾತ್ಮಕ ಇತಿಹಾಸ). ಬರೆದವರು ಶ್ರೀ. ಬಿ. ಎ. ಶ್ರೀನಿವಾಸರಾವ್ ಎಂ ಎ. ತುಮಕೂರು. ಪ್ರಕಾಶಕರು ಶ್ರೀ ಕೆ. ಪಿ. ಗುರುರಾಜಾರಾವ್, ಹೈಸ್ಕೂಲ್ ಎಕ್ಸ್‌ಟೆನ್ಶನ್. ತುಮಕೂರು. ಕ್ರಾ. ಅ. ೪೬ ಪುಟಗಳು. ಬೆಲೆ ೦—೬—೦.

೧೧೨ ವಿಜ್ಞಾನ ಜ್ಯೋತಿಷ (ಮಾಸಪತ್ರಿಕೆಯ ಯುಗಾದಿಯ ವಿಶೇಷಾಂಕ). ಸಂಪಾದಕರು ಮತ್ತು ಪ್ರಕಾಶಕರು: ಶ್ರೀಮಾನ್ ಬಿ ಎನ್. ಮಹದೇವರಾವ್ ಬಿ. ಎ; ೪೫–೪೬ ಸುಬೇದಾರರ ಛತ್ರದ ಬೀದಿ, ಬೆಂಗಳೂರು ೨. ಡೆ. ಅ. ಸುಮಾರು ೧೦೦ ಪುಟಗಳು. ಬೆಲೆ ೧—೦—೦.

ಇದರಲ್ಲಿ ಹೊಸವರ್ಷದ ಪಂಚಾಂಗ ವಿಷಯವೂ ರಾಶಿಗಳ ವರ್ಷಭವಿಷ್ಯ–ಮಾಸಭವಿಷ್ಯಗಳೂ ಬಂದಿವೆ. ಅಲ್ಲದೆ ಜ್ಯೋತಿಷ್ಯ ಶಾಸ್ತ್ರಕ್ಕೆ ಸಂಬಂಧಿಸಿದ ಬೇರೆ ಉಪಯುಕ್ತ ಲೇಖನಗಳೂ ಇವೆ. ಜ್ಯೋತಿಷ್ಯದಲ್ಲಿ ನಂಬುಗೆಯಿರುವವರಿಗೆ ತುಂಬ ಅನುಕೂಲವೆನಿಸುವಂತಿದೆ ಈ ವಿಶೇಷಸಂಚಿಕೆ.

೧೧೩ ಕುಂಕುಮಬಲ (ಸಣ್ಣ ಕತೆಗಳ ಸಂಕಲನ). ಬರೆದವರು ಶ್ರೀಮತಿ ಶಾಂತಾದೇವಿ ಮಾಳವಾಡ ಅವರು. ಹುಬ್ಬಳ್ಳಿಯ ಆನಂದ ಗ್ರಂಥಮಾಲೆಯ ೧೬ನೆಯ ಕುಸುಮ. ಕ್ರಾ. ಅ. ೧೦೪ ಪುಟಗಳು. ಬೆಲೆ ಸಾದಾ ಪ್ರತಿಗೆ ೧ ರೂಪಾಯಿ. ರಟ್ಟಿನ ಕಟ್ಟಿನ ಪ್ರತಿಗೆ ೧—೮—೦.

೧೧೪ ಹೂಗಂಪು (ಕವನಸಂಕಲನ). ಬರೆದವರು ಶ್ರೀಮಾನ್ ಶ್ರೀಧರ ಖಾನೋಳಕರರು. ಹುಬ್ಬಳ್ಳಿಯ ಆನಂದ ಗ್ರಂಥಮಾಲೆಯ ೧೭ನೆಯ ಕುಸುಮ. ಕ್ರಾ. ಅ. ೬೦ ಪುಟಗಳು. ಬೆಲೆ ಸಾದಾ ಪ್ರತಿಗೆ ೦—೧೨—೦. ರಟ್ಟಿನ ಕಟ್ಟಿನ ಪ್ರತಿಗೆ ೧—೦—೦.

ಶರತ್ ಪ್ರಕಾಶನ ಮಂದಿರ, ಧಾರವಾಡ.

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ವಾಚನಾಲಯಗಳಿಗೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರೈಸಲಾಗುವುದು.

ನಮ್ಮ ಮಂದಿರ ಪ್ರಕಟಿಸಿದ ಶ್ರೀ ಆನಂದಕಂದರ ಕೃತಿಗಳು

೧ ಮಗಳ ಮದುವೆ

ಸಾಮಾಜಿಕ ಕಾದಂಬರಿ, ಕ್ರಾ. ಆ. ೩೫೦ ಪುಟಗಳು ಬೆಲೆ ಸಾದಾ ಪ್ರತಿ ೪ ರೂ.

೨ ಬೆಳವಡಿ ಮಲ್ಲಮ್ಮ
(ತರಂಗ ನಾಟಕ)
ಪುಟ ೧೧೬ ಬೆಲೆ ೧-೮-೦

೩ ಕಾರಹುಣ್ಣಿವೆ
(ಕವನ ಸಂಕಲನ)
ಪುಟ ೧೨೮ ಬೆಲೆ ೨-೦-೦

೪ ಬೆಂದಹೃದಯ
ರೂಪಕ ಸಂಕಲನ
ಪುಟ ೧೧೨ ಬೆಲೆ ೧-೪-೦

ಈ ನಾಲ್ಕೂ ಪುಸ್ತಕ ಒಮ್ಮೆಲೆ ತರಿಸಿಕೊಂಡರೆ ಏಳು ರೂ. ಮಾತ್ರ. ಅಂಚೆವೆಚ್ಚ ಬೇರೆ.

ನಮ್ಮಲ್ಲಿ ದೊರೆಯುವ 'ಆನಂದಕಂದ' ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಒಡನಾಡಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ		ನಮ್ಮ ಬದುಕು	ಶ್ರೀ. ಬಸವಣ್ಣನವರು
ಅಶಾಂತಿಪರ್ವ		ಸಂಸಾರ ಚಿತ್ರ	
		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಸುಣ್ಣಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ ಕೊಡಲಾಗುವದು.

ಸಂಚಾಲಕ :

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by N. A. Hoskeri at the Vijaes Press, Dharwar and published for the Proprietors Jayanti publications, by S. D. Dharmatti at the Jayanti Office, Dharwar

ಜಯಂತಿ

ಮೇ
೯೫೫

ಬೆಲೆ:
...ಲ ಆಣೆಗಳು

ಇದುವೆ ಸರ್ವೋದಯವು!

ಒಡೆಯ-ಆಳೆಂಬ ವೈಷಮ್ಯ ಮರೆಯಾಗಲಿ !
ಬಡವ-ಬಲ್ಲಿದನೆಂಬ ಅರಿವು ಮರೆವಾಗಲಿ !
ಭೂದನಿಪತಿ-ಪ್ರಜೆಯೆಂಬ ನುಡಿಯುಡಗಿ ಹೋಗಲಿ !
ಹಸಿವೆಯೆಂಬಾ ಕೂಗು ಕೇಳದಿರಲಿ !

ಹಳ್ಳಿ-ಪಟ್ಟಣವೆಂಬ ಹೋರಾಟ ಹರಿಯಲಿ—
ಹಳ್ಳ-ತಿಟ್ಟುಗಳೆಲ್ಲ ಸಮಭೂಮಿಯಾಗಲಿ,
ಇದುವೆ ಸರ್ವೋದಯವು ಇದುವೆ ಸರ್ವರ ಉದಯ,
ಇದುವೆ ಸಂಪೂರ್ಣಸತ್ಯದ ಸೂರ್ಯನುದಯ !

ಭದ್ರಂ! ಶುಭಂ! ಮಂಗಲಂ!

ಸಂಪುಟ
...೨

JAYANTI

ಸಂ

ಶರತ್ ಪ್ರಕಾಶನ ಮಂದಿರ, ಧಾರವಾಡ.

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ವಾಚನಾಲಯುಗಳಿಗೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರೈಸಲಾಗುವುದು.

ನಮ್ಮ ಮಂದಿರ ಪ್ರಕಟಿಸಿದ ಶ್ರೀ ಆನಂದಕಂದರ ಕೃತಿಗಳು

೧ ಮಗಳ ಮದುವೆ

ಸಾಮಾಜಿಕ ಕಾದಂಬರಿ, ಕ್ರಾ. ಅ. ೩೫೦ ಪುಟಗಳು ಬೆಲೆ ಸಾದಾ ಪ್ರತಿ ೪ ರೂ.

೨ ಬೆಳವಡಿ ಮಲ್ಲಮ್ಮ

(ತರಂಗ ನಾಟಕ)

ಪುಟ ೧೧೬ ಬೆಲೆ ೧-೮-೦

೩ ಕಾರಹುಣ್ಣಿವೆ

(ಕವನ ಸಂಕಲನ)

ಪುಟ ೧೨೪ ಬೆಲೆ ೨-೦-೦

೪ ಬೆಂದಹೃದಯ

ರೂಪಕ ಸಂಕಲನ

ಪುಟ ೧೨೨ ಬೆಲೆ ೧-೪-೦

ಈ ನಾಲ್ಕೂ ಪುಸ್ತಕ ಒಮ್ಮೆಲೆ ತರಿಸಿಕೊಂಡರೆ ಏಳು ರೂ. ಮಾತ್ರ. ಅಂಚೆವೆಚ್ಚ ಬೇರೆ.

ನಮ್ಮಲ್ಲಿ ದೊರೆಯುವ 'ಆನಂದಕಂದ' ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಒಡನಾಡಿ	ಬಡತನದ ಬಾಳು	ಕರ್ನಾಟಕ ಜನಜೀವನ
ಸುದರ್ಶನ		ನಮ್ಮ ಬದುಕು	ಶ್ರೀ. ಬಸವಣ್ಣನವರು
ಅಶಾಂತಿಪರ್ವ		ಸಂಸಾರ ಚಿತ್ರ	
		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಮುದ್ವಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ ಕೊಡಲಾಗುವದು.

ಸಂಚಾಲಕ:

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by M. A. Hoskeri at the Vijaes Press, Dharwar and published for the Proprietors Jayanti publications, by S. D. Dharmatti at the Jayanti Office, Dharwar

ಜಯಂತಿ

ಮೇ

೧೯೫೫

ಬೆಲೆ:

ಆಣೆಗಳು

ಇದುವೆ ಸರ್ವೋದಯವು!

ಒಡೆಯ-ಆಳೆಂಬ ವೈಷಮ್ಯ ಮರೆಯಾಗಲಿ!
ಬಡವ-ಬಲ್ಲಿದನೆಂಬ ಅರಿವು ಮರೆವಾಗಲಿ!
ಪೊಡವಿಪತಿ-ಪ್ರಜೆಯೆಂಬ ನುಡಿಯುಡುಗಿ ಹೋಗಲಿ!
ಹಸಿವೆಯೆಂಬಾ ಕೂಗು ಕೇಳದಿರಲಿ!

ಹಳ್ಳಿ-ಪಟ್ಟಣವೆಂಬ ಹೋರಾಟ ಹರಿಯಲಿ—
ಹಳ್ಳ-ತಿಟ್ಟುಗಳೆಲ್ಲ ಸಮಭೂಮಿಯಾಗಲಿ,
ಇದುವೆ ಸರ್ವೋದಯವು ಇದುವೆ ಸರ್ವರ ಉದಯ,
ಇದುವೆ ಸಂಪೂರ್ಣಸತ್ಯದ ಸೂರ್ಯನುದಯ!

ಭದ್ರಂ! ಶುಭಂ! ಮಂಗಲಂ!

ಪುಟ ೨

JAYANTI

ಸಂ

ಈ ಸಂಚಿಕೆಯಲ್ಲಿ

卐

ಜಯಂತಿಯ ೧೬ನೆಯ ವರ್ಷ (ಸಂಪಾದಕೀಯ)
ಸಂಪಾದಕರು ೪೪೫

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೪೪೭

ವೈರಾಗ್ಯನಿಧಿ (ತರಂಗ ರೂಪಕ)
ಶ್ರೀ. ಕೆ ಎಸ್. ಶರ್ಮಾ 'ವಿದ್ವಾನ್' ಕಾಸರಗೋಡು ೪೪೯

ಮನೆಗೆಲಸದ ಹಾಡುಗಳು (ಭಾನುಲಿಭಾಷಣ)
ಡಾ. ಬಿ. ಎಸ್. ಗದ್ದಗಿಮಠ ಎಂ. ಎ , ಪಿಎಚ್. ಡಿ. ಬೆಳಗಾಂವಿ ೪೫೮

ಚೈತ್ರಾಗಮನ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ ೪೬೩

ಬೋರಿವಲಿ ಲೋಕಲ್ (ಸಣ್ಣಕಥೆ)
ಶ್ರೀ. ಹೇಮಂತರಾಜ, ಮಿತ್ರಮಂಡಲ, ಮಲಾಡ—ಮುಂಬಯಿ ೪೬೪

ಅಸ್ಪೃಶ್ಯತಾ ನಿವಾರಣೆಯ ಮಹಾಪುರುಷ—ಬುದ್ಧ (ಪರಿಚಯಾತ್ಮಕ ಪ್ರಬಂಧ)
ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ ಧಾರವಾಡ ೪೬೭

ಕವಿ ಕಾಳಿದಾಸ (ಕವನ)
ಶ್ರೀ. ಎನ್. ಎಸ್. ಗದಗಕರ ಬಿ. ಎ. ಧಾರವಾಡ ೪೬೯

ನವಜೀವನ (ಕವನ)
'ಆನಂದಕಂದ' ೪೭೨

ಬರೆದಗಾರನ ಭ್ರಮಣ (ಒಂದು ಅಣಕ)
ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ ೪೭೩

ನೀರೊ ಮತ್ತು ಮೂರು ಭಾವರೂಪಕಗಳು (ಕಿರುಗತೆಗಳು)
ಶ್ರೀ. ಹಾ. ವೆಂ. ನಾಗೇಶ, ಉಸ್ಮಾನಿಯಾ ಕಾಲೇಜ್, ಗುಲ್‌ಬರ್ಗಾ ೪೭೮

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ
ಶ್ರೀ. ಎಚ್. ಆರ್. ಶಾಸ್ತ್ರಿ, ಸುರಪುರ ೪೮೦

ಸಾಹಿತ್ಯ ವಿಹಾರ
ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು ೪೮೩

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೭ ಸಂಚಿಕೆ ೧೨

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು :
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು :
ಮತ್ತು
ಪ್ರಕಾಶಕರು :
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಜಯಂತಿಯ ೧೭ನೆಯ ವರ್ಷ

ಈ ಸಂಚಿಕೆಗೆ ಜಯಂತಿಯು ತನ್ನ ಹದಿನೇಳನೆಯ ವರ್ಷವನ್ನು ಮುಗಿಸಿತೆಂದು, ಇದ್ದುದರಲ್ಲಿಯೆ ಸಮಾಧಾನದ ಉಸಿರನ್ನು ಬಿಡುತ್ತ ಹೇಳಬೇಕಾಗಿದೆ. ನಮ್ಮ ದೇಶದಲ್ಲಿಯ ವರ್ತಮಾನ ಆರ್ಥಿಕ ಸಂಕ್ರಮಣಪರಿಸ್ಥಿತಿಯ ಪರಿಣಾಮ, ಜಯಂತಿಯ ಮೇಲೆ ತುಂಬ ಆಗಿದೆ-ಯಾದರೂ, ಅದು ಶಕ್ತಿಮೀರಿ ತನ್ನ ಸಾಹಿತ್ಯಕಾರ್ಯವನ್ನು ನಿರ್ವಹಿಸುತ್ತ ಮುಂದುವರಿದಿದೆ. ನಮ್ಮ ದೇಶದಲ್ಲಿ ಹಣವು ರಭಸದಿಂದ ಸ್ಥಾನಾಂತರವನ್ನು ಪಡೆಯುತ್ತಲಿದೆ. ಜಯಂತಿಯಂತಹ ಪತ್ರಿಕೆಯನ್ನು ಅಪೇಕ್ಷಿಸುವ ಸುಸಂಸ್ಕೃತ ಜನಸಮುದಾಯವು, ಇಂದು ಹಣಕ್ಕಾಗಿ ಬಾಯ್ಬಿಡು-ವಂತಾಗಿದೆ. ಹಣವು ಕೈಸೇರುತ್ತಿದ್ದಂತಹ ಜನರಿಗೆ ಜಯಂತಿಯಂತಹ 'ಮಡಿವಂತಿಕೆ'ಯ ಪತ್ರಿಕೆಯು ರುಚಿಸದಾಗಿದೆ. ಆದುದರಿಂದಲೇ ಮಹಾಯುದ್ಧಕಾಲದಲ್ಲಿ—ಒಂದಕ್ಕೆ ಇಪ್ಪತ್ತರಷ್ಟು ಕಾಗದ-ಮುದ್ರಣ ವೆಚ್ಚ ಬೆಳೆದರೂ— ಅನುಭವಿಸದಂತಹ ಆರ್ಥಿಕ ಆಪತ್ತಿಯನ್ನು ಜಯಂತಿ-ಯಿಂದು ಅನುಭವಿಸುತ್ತಲಿದೆ. ಇಷ್ಟಾದರೂ ಜಯಂತಿ ತನ್ನ ಎಂದಿನ ಸ್ವರೂಪಕ್ಕೆ ಕುಂದನ್ನು ತಂದುಕೊಂಡಿಲ್ಲ; ಇಷ್ಟೇ ಅಲ್ಲ, ಈ ಹದಿನೇಳನೆಯ ವರ್ಷದಲ್ಲಿ ಅದು ತನ್ನ ಅಂತರಂಗದ ಸತ್ತ್ವ-ವನ್ನು ಹೆಚ್ಚಿಸಿಕೊಂಡಿದೆಯೆಂಬುದನ್ನು, ಈ ವರ್ಷದ ಒಂದೊಂದು ಸಂಚಿಕೆಯಲ್ಲಿಯೂ ಕಾಣ-ಬಹುದು. ಇದರ ಸಂಪೂರ್ಣಶ್ರೇಯಸ್ಸು, ನಮ್ಮ ನಿರಪೇಕ್ಷಬುದ್ಧಿಯ ಲೇಖಕರಿಗೆ ಸಲ್ಲುವುದು.

ಜಯಂತಿ ತನ್ನ ಲೇಖಕರಿಗೆ ಪ್ರತಿಫಲವನ್ನೇನೂ ಕೊಡದೆ ಇದ್ದರೂ, ಅನೇಕ ಜನ ಲೇಖಕರು ಜಯಂತಿಯಲ್ಲಿಯೆ ತಮ್ಮ ಲೇಖನಗಳು ಪ್ರಕಟವಾಗಬೇಕೆಂದು ಹಾರಯಿಸುವರು. ಇದಕ್ಕೆ ಕಾರಣ, ಜಯಂತಿಯ ವಿಷಯದಲ್ಲಿ ಅವರು ಇರಿಸಿಕೊಂಡಿರುವ ಶ್ರದ್ಧೆ-ಗೌರವಗಳೇ ಆಗಿವೆ. ಅವರ ಶ್ರದ್ಧೆ-ಗೌರವಗಳ ಬಲದ ನೆರವಿನಿಂದಲೇ ಜಯಂತಿಗೆ ತನ್ನ ಬದುಕಿನ ವಿಷಯದಲ್ಲಿ ಮತ್ತೆ ಮತ್ತೆ ಆಶೆ-ವಿಶ್ವಾಸಗಳು ಉಂಟಾಗುತ್ತಿವೆ; ಈ ಆಶೆ-ವಿಶ್ವಾಸಗಳ ಮೂಲಕವೇ ಅದು ಮತ್ತೆ ಮತ್ತೆ ಕಾರ್ಯದ ಹೊಣೆಯನ್ನು ಹೊತ್ತು ಮುಂದುವರಿಯಲು ಮನಸ್ಸು ಮಾಡುತ್ತದೆ.

ಚಂದಾದಾರರ ಬಳಗ ಬೆಳೆದರೆ ಜಯಂತಿಯ ಬದುಕಿನ ಚಿಂತೆ ಎಷ್ಟೋ ಕಡಿಮೆ-ಯಾದೀತು. ಈಗ ಚಂದಾದಾರರಾಗಿ ಇರುವವರು ಅಲ್ಪಸಂಖ್ಯಾತರಾಗಿದ್ದರೂ ಗಟ್ಟಿಗಾಳು-ಗಳಾಗಿದ್ದಾರೆ. ಅವರೆಲ್ಲ ಜಯಂತಿಯನ್ನು ಮನವಾರೆ ಪ್ರೀತಿಸುವರು; ಜಯಂತಿಯ ಕೈಯನು ಅವರು ಎಂದೂ ಬಿಡಲಾರರು. ಆದರೆ ಅಷ್ಟೇ ಜನರ ಕೈಮುತ್ತಿನಿಂದ ಜಯಂತಿ ಪುಷ್ಟವಾಗಿ ವರ್ಧಿ-ಸುವುದಕ್ಕೆ ಸಾಧ್ಯವಿಲ್ಲ ಹದಿನೇಳು ವರ್ಷದ ಹೊಸ ಹರಯದ ತರುಣಿಯೂ ಹಸುಮಗುವಾಗಿಯೇ ಉಳಿಯಬೇಕಾದರೆ, ಅವಳಿಗೆ ತಕ್ಕ ಪೋಷಣೆ ದೊರೆತಿಲ್ಲವೆಂದೇ ತಿಳಿದುಕೊಳ್ಳಬೇಕಲ್ಲವೇ? ಹದಿ-ನೇಳು ವರ್ಷಗಳಾದರೂ ಜಯಂತಿಯ ಬಡಕಲು ದೇಹ ತುಂಬಿಕೊಳ್ಳಲು ಸಾಧ್ಯವಾಗಿಲ್ಲ. ಆವಶ್ಯಕವಾದ ಬೆಡಗಿನ ಉಡಿಗೆ-ತೊಡಿಗೆ, ಅಲಂಕಾರಾದಿಗಳನ್ನು ದೊರಕಿಸಿಕೊಳ್ಳಲಿಕ್ಕೆ ಅನುಕೂಲವಾಗಿಲ್ಲ: ಜಯಂತಿಯಿಂದ ಸರ್ವತೋಮುಖವಾದ ಕಾರ್ಯವನ್ನು ಅಪೇಕ್ಷಿಸುವವರು, ಬರೀ ಅನುಕ್ಷೆಯ ಮಾತುಗಳನ್ನಾಡಿ ಸುಮ್ಮಗಿರದೆ, ಚಂದಾದಾರರಾಗಿ ಅದಕ್ಕೆ ಪೋಷಕಸಲಕರಣೆಗಳನ್ನು ಹೆಚ್ಚಿಸಿ-ಕೊಡಬೇಕು.

ಜಯಂತಿ ಬೇಕೆಂದು ಬಯಸುವ ಕೆಲವು ಜನರು ಇರುವನಿಂತಲೇ ಅದು ತನ್ನ ಕಷ್ಟ-ನಷ್ಟಗಳ ಮೊಟ್ಟೆಯನ್ನು ಹೊತ್ತುಕೊಂಡೇ ಮತ್ತೆ ಮುಂದೆ ಹೆಜ್ಜೆಯಿಡಲು ಸಿದ್ಧವಾಗುತ್ತಿದೆ. ಅದರ ಕಷ್ಟ-ನಷ್ಟದ ಭಾರವನ್ನು ಕಡಿಮೆಮಾಡುವುದು ಕನ್ನಡಿಗರೆಲ್ಲರ ಕರ್ತವ್ಯವಾಗಿದೆ ಆದುದರಿಂದಲೇ ಈ ವರ್ಷ ಜಯಂತಿಯ ಸಂಪಾದಕರು, ಕನ್ನಡನಾಡಿನ ದೊಡ್ಡ ದೊಡ್ಡ

ಊರುಗಳಲ್ಲಿ ತಿರುಗಾಡಿ ಬರಬೇಕೆಂದಿದ್ದಾರೆ. ಅನೇಕ ಜನರು ಜಯಂತಿಯನ್ನು ಅಪೇಕ್ಷಿಸುವರಾದರೂ ಅದನ್ನು ಬರಮಾಡಿಕೊಳ್ಳುವುದರಲ್ಲಿ ಉಪೇಕ್ಷೆಯನ್ನು ತೋರಿಸುತ್ತಿದ್ದಾರೆಂಬುದರ ಅನುಭವ ಸಂಪಾದಕರಿಗೆ ಸಾಕಷ್ಟು ಬಂದಿದೆ. ಆದುದರಿಂದ ಕನ್ನಡಜನರನ್ನು ಪ್ರತ್ಯಕ್ಷವಾಗಿ ಕಂಡು, ಅವರಿಂದ ಪ್ರತ್ಯಕ್ಷವಾಗಿಯೇ ಔದಾರ್ಯವನ್ನು ಪಡೆದು, ಜಯಂತಿಯನ್ನು ಪರಿಪುಷ್ಟಗೊಳಿಸಬೇಕೆಂದು ಜಯಂತಿಯ ಸಂಪಾದಕರು ಸಂಕಲ್ಪಿಸಿದ್ದಾರೆ. ಅಲ್ಲಲ್ಲಿ ವಾಸಿಸುತ್ತಿರುವ ಜಯಂತಿಯ ಅಭಿಮಾನಿಗಳು, ಸಂಪಾದಕರಿಗೆ ಅವಶ್ಯಕವಾದ ಸಹಾಯ-ಸಹಕಾರಗಳನ್ನು ಸಲ್ಲಿಸಬೇಕೆಂದು ನಮ್ಮ ಹಾರಯಿಕೆ.

ಈ ವರುಷದ ಕೊನೆಯ ೩-೪ ತಿಂಗಳುಗಳಲ್ಲಿ ಜಯಂತಿ ತನ್ನ ಸಮಯನಿಷ್ಠೆಯನ್ನು ತಪ್ಪಿ ನಡೆದುಕೊಳ್ಳಬೇಕಾಯಿತು. ಇದಕ್ಕೆ ಕಾರಣವೆಂದರೆ, ಜಯಂತಿಯ ಸಂಪಾದಕರಿಗೆ ಒದಗಿದ ಹಲವಾರು ವೈಯಕ್ತಿಕ ಆಪತ್ತಿಗಳು. ಒಂದೆರಡು ತಿಂಗಳಲ್ಲಂತೂ ಆ ತಿಂಗಳ ಸಂಚಿಕೆಯನ್ನು ಹೊರಡಿಸಲಿಕ್ಕಾಗುವುದೊ, ಇಲ್ಲವೊ— ಎನ್ನುವಂತಹ ಸಂದಿಗ್ಧಪರಿಸ್ಥಿತಿಯು ಒದಗಿತ್ತು. ಇಷ್ಟಾದರೂ ಅದೇ ಅದೇ ತಿಂಗಳುಗಳಲ್ಲಿ ಸಂಚಿಕೆಗಳನ್ನು ಹೊರಡಿಸಿ, ವಾಚಕರ ಸೇವೆಗೆ ಕಳುಹಲಾಯಿತು. ಇದಕ್ಕಾಗಿ ಕೆಲವರು ರೇಗಿಕೊಂಡು ಕಾಗದ ಬರೆದರು; ಅನೇಕರು ಕರುಣೆಯಿಂದ ಕಾಗದ ಬರೆದು ವಿಲಂಬದ ಕಾರಣವನ್ನು ಕೇಳಿದರು. ರೇಗಿ ಬರೆದವರೂ ಜಯಂತಿಯನ್ನು ಪ್ರೀತಿಸುವವರೇ; ಕರುಣೆಯನ್ನು ತೋರಿ ಬರೆದವರೂ ಜಯಂತಿಯನ್ನು ಪ್ರೀತಿಸುವವರೇ! ಅಂತೂ ಜಯಂತಿಯ ಅನಿಯಮಿತತನವು ವಾಚಕವರ್ಗಕ್ಕೆ ತೊಂದರೆಯನ್ನುಂಟುಮಾಡಿದುದೇನೂ ಸುಳ್ಳಲ್ಲ. ಅದಕ್ಕಾಗಿ ಕ್ಷಮಾಯಾಚನೆಯೊಂದಲ್ಲದೆ ಇನ್ನೇನನೂ ಮಾಡುವಂತಿಲ್ಲ. ಇನ್ನು ಮುಂದೆ ಈ ಬಗೆಯ ಅನಿಯಮಿತತನವು ನಡೆಯದಂತೆ ಸಾಕಷ್ಟು ಜಾಗೃತಿಯನ್ನು ವಹಿಸಲಾಗುವುದು.

ಅನುಕೂಲ ಪರಿಸ್ಥಿತಿಯು ಒದವಿದರೆ, ೧೮ನೆಯ ವರ್ಷದಲ್ಲಿ ವಾಚಕರು ಜಯಂತಿಯ ಅನೇಕ ಹೊಸ ಹೊಸ ಕಾರ್ಯಕಲಾಪಗಳನ್ನು ನೋಡಬಹುದು. ಸಂಚಿಕೆಗಳಲ್ಲಿಯ ಬೇರೆ ಬೇರೆ ವಿಭಾಗಗಳನ್ನೂ ಕಾಣಬಹುದು. ಅಂತಹ ಅನುಕೂಲಪರಿಸ್ಥಿತಿಯನ್ನು ಒದಗಿಸುವುದು ಕನ್ನಡಿಗರ ಕೈಯೊಳಗಿನ ಮಾತಾಗಿದೆ.

೧೭ನೆಯ ವರ್ಷದಲ್ಲಿ ಜಯಂತಿ ತನ್ನ ವಾಚಕವರ್ಗಕ್ಕೆ ಡೆಮಿ ⅛ ದ ೫೩೦ ಪುಟಗಳಷ್ಟು ವಿವಿಧ ವಿಷಯಗಳನ್ನು ಒದಗಿಸಿಕೊಟ್ಟಿದೆ. ಪ್ರತಿ ಸಂಚಿಕೆಯಲ್ಲಿಯ ಸಂಪಾದಕೀಯ ವಿಚಾರಗಳು ಹಲವು ಜನರಿಂದ ಹೊಗಳಿ ಹಾಡಿಸಿಕೊಳ್ಳುತ್ತಲಿವೆ. 'ಕಾಲಭೈರವ'ರ ನಾಡನುಡಿಗಳು, ನಮ್ಮ ವಾಚಕರಿಗೆಲ್ಲ ಮೆಚ್ಚಿಕೆಯವಾಗಿವೆ. ಅದಕ್ಕಾಗಿ ಇನ್ನಿಷ್ಟು ಎಡೆಯನ್ನು ಹೆಚ್ಚಿಸಬೇಕೆಂದು ಅನೇಕ ಜನರಿಂದ ಸೂಚನೆಗಳು ಬಂದಿವೆ. ಕಥೆಗಳನ್ನಾಯ್ದು ಪ್ರಕಟಿಸುವುದರಲ್ಲಿಯಂತೂ ಜಯಂತಿ ತನ್ನ ಎಂದಿನ ವೈಶಿಷ್ಟ್ಯವನ್ನೇ ಈ ವರ್ಷದಲ್ಲಿಯೂ ಕಾಯ್ದುಕೊಂಡಿದೆ. ಜಯಂತಿಯಲ್ಲಿ ಬೆಳಕಿಗೆ ಬಂದ ಏಕಾಂಕನಾಟಕಗಳು ರಸಿಕರ ಹೃದಯವನ್ನು ಆಕರ್ಷಿಸಿಬಿಟ್ಟಿವೆ. ಎಂತಲೇ ಅವುಗಳನ್ನು ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳು ಅನೇಕ ಕಡೆಗೆ ರಂಗದ ಮೇಲೆ ತಂದು ತಂದು ತೋರಿಸಿರುವರು. ಈ ವರ್ಷ ಪ್ರಕಟವಾದ ಕವನ-ನವ್ಯಕವನಗಳು, ಜಯಂತಿಯ ಪುಟಗಳ ಬೆಲೆಯನ್ನು ಹೆಚ್ಚಿಸುವಂತಿವೆ. ಹರಟೆ, ಪ್ರಬಂಧ, ವ್ಯಕ್ತಿಪರಿಚಯ, ಜೀವನ ಪರಿಚಯಗಳು ಜನತೆಯಲ್ಲಿ ಬಹುಶ್ರುತತೆಯನ್ನು ಬೆಳೆಸುವಂತಿವೆ. ಹನ್ನೆರಡೂ ತಿಂಗಳ ಜಯಂತಿಯ ಸಂಚಿಕೆಗಳನ್ನು ಒಟ್ಟುಗೂಡಿಸಿ ಕಟ್ಟಿಸಿ, ನಿಮ್ಮ ಮನೆಯ ವಾಙ್ಮಯಭಾಂಡಾರದಲ್ಲಿ ಇರಿಸಿ ನೋಡಿದಾಗ, ಈ ವರ್ಷದ ಸಂಪುಟವು ಜ್ಞಾನಕೋಶದ ಒಂದು ವಿಭಾಗವೆಂಬ ಅನುಭವ ನಿಮಗೆ ಬಾರದೆ ಹೋಗದು.

ಇದೆಲ್ಲ ಆತ್ಮಪ್ರೌಢುಮೆಯ ಮಾತೆಂದು ದಯೆಯಿಟ್ಟು ಯಾರೂ ಭಾವಿಸಬಾರದು. ಜಯಂತಿಯಲ್ಲಿ ಇರುವ ಕುಂದು-ಕೊರತೆಗಳ ಕಲ್ಪನೆಯೂ ನಮಗೆ ಇಲ್ಲದೆ ಇಲ್ಲ. ಸಂಚಿಕೆಗಳಲ್ಲಿ ಪುಟಗಳು ಇನ್ನೂ ಹೆಚ್ಚಾಗಬೇಕು. ವಿಷಯಗಳಲ್ಲಿ ಸಂದರ್ಭಚಿತ್ರಗಳು ಬೇಕು. ಹೊದಿಕೆಯ ಪುಟ ಆಕರ್ಷಕವಾಗಿ ಕಾಣಬೇಕು. ಸಂಪಾದಕೀಯ ವಿಭಾಗಗಳು ಇನ್ನೂ ಹೆಚ್ಚಾಗಬೇಕು. ಪುಸ್ತಕವಿಮರ್ಶೆಗಳು ಬರಬೇಕು. ಈಗ ಕನ್ನಡ ಭಾಷೆಯ ಚಲಚ್ಚಿತ್ರಗಳು ಸಾಕಷ್ಟು ಹುಟ್ಟತೊಡಗಿದುದರಿಂದ, ಅವುಗಳ ಸಚಿತ್ರಪರಿಚಯ-ವಿಮರ್ಶೆಗಳು ಜಯಂತಿಯಲ್ಲಿ ಪ್ರಕಟವಾಗುತ್ತಿರಬೇಕು. ಒಳ್ಳೊಳ್ಳೆಯ ಲೇಖಕರಿಗೆ ಪ್ರತಿಫಲವನ್ನು ಕೊಟ್ಟು ಲೇಖನಗಳನ್ನು ಬರೆಯಿಸಬೇಕು. ಇನ್ನೂ ಎಷ್ಟೆಷ್ಟೋ ಬೇಕುಗಳಿವೆ. ಆದರೆ ಆ ಬೇಕುಗಳನ್ನು ಪೂರಯಿಸಿಕೊಳ್ಳುವುದಕ್ಕೆ ಅನುಕೂಲಪರಿಸ್ಥಿತಿಯೇ ನಮ್ಮ ನಾಡಿನಲ್ಲಿ ಇಲ್ಲವಾಗಿದೆ. ಅಂತಹ ಪರಿಸ್ಥಿತಿಯು ಉಂಟಾಗುವುದಕ್ಕೆ, ಮೊದಲು ಕನ್ನಡನಾಡು ಒಂದು ಪ್ರತ್ಯೇಕ ರಾಜ್ಯವಾಗಬೇಕಾಗಿದೆ. ಎಲ್ಲ ಕನ್ನಡಿಗರ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಹಿತಸಂಬಂಧಗಳು ಒಂದೆ ಬಗೆಯವು ಆಗಬೇಕಾಗಿದೆ. ಕನ್ನಡಿಗರಲ್ಲಿರುವ ಪ್ರಾದೇಶಿಕ ಪ್ರತ್ಯೇಕತಾಭಾವನೆಯು ಪತ್ರಿಕೆಗಳ ಅಭಿವೃದ್ಧಿ-ಅಭ್ಯುದಯಗಳಿಗೆ ಉಪಕಾರಿಯಾಗಿಲ್ಲವಿಷ್ಟೇ ಅಲ್ಲ; ಅಪಕಾರಿಯಾಗಿ ನಿಂತಿದೆ. ಎಲ್ಲ ಕನ್ನಡಿಗರು ಒಂದೇ ಆಡಳಿತದ ಛತ್ರದಲ್ಲಿ ಬಂದಾಗ, ಅವರೆಲ್ಲರಿಗೆ ಜಯಂತಿಯ ಆವಶ್ಯಕತೆಯು ಖಂಡಿತವಾಗಿ ಕಾಣುವುದು; ಆಗ ಜಯಂತಿ ನಿಸ್ಸಂದೇಹವಾಗಿ ಬೆಳೆದು ಬಾಳುವುದು. ನಮ್ಮ ಭಾಗ್ಯವಿಧಾತನು ಅಂತಹ ಅನುಕೂಲಕಾಲವನ್ನು ಬೇಗನೆ ತರಲಿ!

— ಸಂಪಾದಕರು

ನಾಡ ನಡೆ

●

ಬಾಂಡುಂಗ್ ಪರಿಷತ್ತಿನ ಬಲಾಬಲ

ಕಳೆದ ತಿಂಗಳಲ್ಲಿ ಬಾಂಡುಂಗಿನಲ್ಲಿ ಸೇರಿದ ಏಸಿಯಾ-ಆಫ್ರಿಕನ್ ಪರಿಷತ್ತು ತುಂಬ ಯಶಸ್ವಿಯಾಗಿ ನೆರವೇರಿತೆಂದು ಕೆಲವರು ಅದನ್ನು ಕೊಂಡಾಡಿ ಕೊನೆಯುತ್ತಾರೆ ಬೇರೆ; ಕೆಲವರು ಅದೂ ಒಂದು ನಿರರ್ಥಕ ನಾಟಕವೆಂದು ನಿರಾಶೆಯಿಂದ ಬೀಳುಗಳೆಯುತ್ತಾರೆ. ಏನೇ ಆಗಲಿ, ಏಸಿಯಾ-ಆಫ್ರಿಕಾ ಖಂಡಗಳಲ್ಲಿಯ ೨೯ ರಾಷ್ಟ್ರಗಳ ಪ್ರತಿನಿಧಿಗಳು ಒಟ್ಟುಗೂಡಿ, ಅಲ್ಲಿ ಸಹಜೀವನವಿಚಾರವನ್ನು ಚರ್ಚಿಸಿ, ಒಂದು ನಿರ್ಣಯಕ್ಕೆ ಬಂದುದು ಸಣ್ಣ ಮಾತೇನೂ ಅಲ್ಲ. ಪಶ್ಚಿಮಖಂಡಗಳಲ್ಲಿಯ ಕೆಲವು ಪ್ರಬಲ ರಾಷ್ಟ್ರಗಳಿಗೆ ಈ ಪರಿಷತ್ತನ್ನು ಕೂಡಿಸುವುದೇ ಒಪ್ಪಿಗೆಯಿರಲಿಲ್ಲ. ಆದುದರಿಂದ ಅದು ಕೂಡದಂತೆ ಮಾಡಬೇಕೆಂದು ಅನೇಕ ವಿಘ್ನಪರಂಪರೆಗಳನ್ನು ತಂದೊಡ್ಡುವ ಕುಟಿಲರಾಜಕಾರಣವನ್ನವರು ನಡೆಸಿದರೆಂಬ ಸುದ್ದಿಗಳು ಹಬ್ಬಿದುವು. ಚೀನದ ಪ್ರತಿನಿಧಿಗಳನ್ನು ಬಾಂಡುಂಗಿಗೆ ಕರೆದೊಯ್ಯುತ್ತಿದ್ದ ಭಾರತೀಯ ವಿಮಾನವು ಅಪಘಾತಕ್ಕೊಳಗಾದುದು ಆಕಸ್ಮಿಕವಲ್ಲವೆಂದೂ, ಯಾವುದೋ ಕೃತ್ರಿಮತೆಯಿಂದಲೇ ಅದಾಗಿದೆಯೆಂದೂ ಖಂಡಿತವಾದ ಆಪಾದನೆಗಳು ಪ್ರಕಟವಾಗಿವೆ ಬಾಂಡುಂಗ್ ಬಳಿಯ ಪುಂಡರ ತಂಡವನ್ನು ಹುರಿಗೊಳಿಸಿ, ಅವರಿಂದ ಪರಿಷತ್ತು ನಡೆಯದಂತೆ ಬಂಡುಹೂಡಿಸಬೇಕೆಂಬ ನಿಷ್ಫಲ-ಪ್ರಯತ್ನಗಳು ನಡೆದುವಂತೆ. ಇದೆಲ್ಲ ವಸ್ತುಸ್ಥಿತಿಯೇ ಆದರೆ, ಪಶ್ಚಿಮದ ಪ್ರಬಲರಾಷ್ಟ್ರಗಳು ತಮ್ಮ ಪ್ರಭಾವವನ್ನು ಕಾಯ್ದುಕೊಳ್ಳಬೇಕೆನ್ನುವ ದುರಾಶೆಯಿಂದ ಎಂತೆಂತಹ ಕುಟಿಲ ರಾಜಕಾರ್ಯವನ್ನು ನಡೆಸಿರುವುವೆಂಬುದು ವ್ಯಕ್ತವಾಗುತ್ತದೆ.

ಜಾಗತಿಕ ಶಾಂತಿಯನ್ನು ಅಪೇಕ್ಷಿಸುವ ೨೯ ರಾಷ್ಟ್ರಗಳು, ಪರಿಷತ್ತಿನಲ್ಲಿ ಸ್ನೇಹ-ಸೌಹಾರ್ದಗಳಿಂದಲೆ ಚರ್ಚೆ-ವಾದಗಳನ್ನು ನಡೆಯಿಸಿ, ಒಂದುಬಗೆಯಲ್ಲಿ ಭಾರತದ ಮುಖ್ಯಮಂತ್ರಿಗಳಾದ ಮಾನ್ಯ ಜವಾಹರಲಾಲರ ಶಾಂತಿಧೋರಣೆಯನ್ನು ಒಪ್ಪಿಕೊಂಡುವು. ಪರಿಷತ್ತಿನಲ್ಲಿ ಭಾಗವಹಿಸಿದ ರಾಷ್ಟ್ರಗಳ ಹಿರಿಯರೆಲ್ಲ—ಪಾಕಿಸ್ತಾನದ ಮುಖ್ಯಮಂತ್ರಿಗಳು ಕೂಡ—ಪರಿಷತ್ತಿನ ಯಶಸ್ಸನ್ನೂ ಗೊತ್ತುಮಾಡಿದ ನಿರ್ಣಯಗಳ ಮೇಲ್ಮೆಯನ್ನೂ ಎಲ್ಲೆಲ್ಲಿಯೂ ಸಾರುತ್ತ ಬಂದರು. ಚೀನದ ಪ್ರತಿನಿಧಿಯಾದ ಮಾನ್ಯ ಚೌ-ಎನ್ ಲಾಯರು ಜವಾಹರಲಾಲರ ಶಾಂತಿಧೋರಣೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡರಷ್ಟೇ ಅಲ್ಲ; ಅಮೇರಿಕೆಯೊಂದಿಗೆ ಸಂಧಾನದ ಮಾತುಗಳನ್ನಾಡಲೂ ಚೀನ ಸರಕಾರವು ಸಿದ್ಧವಿದೆಯೆಂದು ಸಾರಿ, ಲೋಕವನ್ನೆಲ್ಲ ಬೆರಗುಗೊಳಿಸಿದರು. ಅಮೇರಿಕೆಯ ರಾಜಕಾರಣಿಗಳೆದುರು ಒಂದು ಘನವಾದ ಸಮಸ್ಯೆಯನ್ನೊಡ್ಡಿದರು. ಭಾರತದ ರಾಜಕಾರಣಿಗಳಂತೂ ಬಾಂಡುಂಗ್ ಪರಿಷತ್ತಿನ ಯಶಸ್ಸೆಂದರೆ ಜವಾಹರಲಾಲರ ಸರಲ ರಾಜಕಾರಣದ ಯಶಸ್ಸು—ಎಂದು ಕೊಂಡಾಡಿ ಕುಣಿದಾಡಿದರು. ಆದರೆ ಏನಾಗಿಯೂ ಏನು? ಜಗತ್ತಿನ ರಾಜಕೀಯಪರಿಸ್ಥಿತಿಯು ದಿನ-ದಿನಕ್ಕೂ ಹೆಚ್ಚು ಹೆಚ್ಚು ತೊಡಕಿನದಾಗುತ್ತಲೇ ಹೊರಟಿದೆ.

ಪಶ್ಚಿಮದ ರಾಜಕಾರಣಿಗಳ ದುರಹಂಕಾರ

ಪಶ್ಚಿಮರಾಷ್ಟ್ರಗಳ ರಾಜಕೀಯ ಧುರೀಣರು, ಜಾಗತಿಕ ಶಾಂತಿಯ ಬುರುಡೆಗಳ ಹಗಲಿರುಳೂ ಉರುಳಿಸುತ್ತಾರೆ; ಆದರೆ ಅವರಿಗೆ ಬೇಕಾದುದು ಜಾಗತಿಕ ಶಾಂತಿಯಲ್ಲ. ಜಾಗತಿಕ ಹಿರಿಯತನ! ಜಗತ್ತಿನಲ್ಲಿಯ ಪ್ರತಿಯೊಂದು ರಾಷ್ಟ್ರದ ಅಂತರಿಕವ್ಯವಹಾರಗಳೂ ತಮ್ಮ ಅಭಿಪ್ರಾಯದಂತೆಯೆ ನಡೆಯಬೇಕೆಂದು ಅವರ ಮಹದಾಕಾಂಕ್ಷೆ. ಹಳೆಯ ಕಾಲದ ಚಾಳಿಯನ್ನು ಅವರು ತಮ್ಮ ಮನಸ್ಸಿನಿಂದ ಹೊರಗೆ ಹಾಕಲಿಕ್ಕೆ ಸಿದ್ಧರಿಲ್ಲ. ಎಂತಲೇ ನಿಜವಾದ ಶಾಂತಿಯ ಮಾರ್ಗವನ್ನು ತೋರಿಸಬಲ್ಲ ರಾಜಕಾರ್ಯ ಧುರಂಧರರನ್ನೂ ಅವರು ಒಪ್ಪಿಕೊಳ್ಳಲಿಕ್ಕೆ ಸಿದ್ಧರಿಲ್ಲ. ಹಾಗೆ ಒಪ್ಪಿಕೊಂಡುಬಿಟ್ಟರೆ ತಮ್ಮ ಹಿರಿಯತನವು ಉಳಿದಂತಾಗುವುದೆಲ್ಲಿ? ಭಾರತವನ್ನೂ ಭಾರತದ ಮುಖ್ಯಮಂತ್ರಿ ಪಂ. ಜವಾಹರಲಾಲರನ್ನೂ ಅವರು ಒಂದುಬಗೆಯ ಈರ್ಷೆ-ಮತ್ಸರಗಳಿಂದಲೇ ನೋಡುತ್ತಲಿದ್ದಾರೆ. ಸಾವಿರಾರು ವರ್ಷಗಳಿಂದಲೂ ಜಗತ್ತಿಗೆಲ್ಲ ಶಾಂತಿಯ ದಾರಿಯನ್ನು ತೋರಿಸುತ್ತ ಬಂದಿದ್ದ ಭಾರತವು, ಪರಾಧೀನತೆಗೊಳಗಾಗಿ ನಿಷ್ಕ್ರಿಯವಾಗಿ ಕುಳಿತಿದ್ದಿತು; ಆಗ ಕುಟಿಲವೃತ್ತಿಯ ಆಸುರೀ ರಾಜಕಾರಣದ ಮೇಲುಗೈ ಆಗಿದ್ದಿತು. ಈಗ ಗ್ರಹಣಮುಕ್ತ ಭಾರತವು ಮತ್ತೆ ಜಗತ್ತಿನಲ್ಲಿ ತನ್ನ ದೈವೀ-ತೇಜಸ್ಸನ್ನು ಹರಡತೊಡಗಿದುದು, ಕೌರವವೃತ್ತಿಯ ಪಾಶ್ಚಿಮಾತ್ಯ ರಾಜಕಾರಣಿಗಳಿಗೆ ಅಪಥ್ಯವಾಗಿ ಕುಳಿತಿದೆ. ಎಂತಲೆ ಅವರು ಪ್ರತ್ಯಕ್ಷವಾಗಿಯಲ್ಲದಿದ್ದರೂ ಪರ್ಯಾಯವಾಗಿ, ಭಾರತದ ರಾಜಕಾರಣವನ್ನು ಬೈಯತೊಡಗಿದ್ದಾರೆ. ಜಗತ್ತಿನ ಜನರಿಗೆಲ್ಲ, ಅದು ಆಭಾಸ-ಅಸಂಗತವೆಂದು ತೋರುವಂತೆ ಪ್ರಚಾರವನ್ನು ನಡೆಸಿದ್ದಾರೆ. ಶಸ್ತ್ರದ ಏಟುಗಳಿಗಿಂತ ಸತ್ಯದ ಏಟುಗಳು ನಿಷ್ಠುರವಾದುವುಗಳು. ಅಣುಶಕ್ತಿ-ಜಲಜನಕ ಶಕ್ತಿಗಳಿಗಿಂತ ಸತ್ಯದ ಶಕ್ತಿ ದೊಡ್ಡದಾಗಿರುವುದು. ಭಾರತದ ರಾಜಕೀಯ ಧೋರಣವನ್ನು ಜಗತ್ತಿನ ರಾಷ್ಟ್ರಗಳೆಲ್ಲ ಪುರಸ್ಕರಿಸುತ್ತ ಹೊರಟರೆ, ಅಮೇರಿಕೆಯ ಅಣುಬಾಂಬುಗಳೂ, ರಶಿಯನರ ಜಲಜನಕ ಬಾಂಬುಗಳೂ ಇದ್ದಲ್ಲಿಯೆ ಮಣ್ಣು ತಿನ್ನುತ್ತ ಬೀಳಬೇಕಾಗುತ್ತದೆ; ಇಲ್ಲವೆ ಭಸ್ಮಾಸುರನಂತೆ ತನ್ನ ನಿರ್ಮಾತೃಗಳನ್ನೇ ಸುಟ್ಟು ಶಾಂತವಾಗಬೇಕಾಗುತ್ತದೆ. ಇದೆಲ್ಲ ವಿಷಯ ಗೊತ್ತಿದ್ದರೂ, ಪಶ್ಚಿಮರಾಷ್ಟ್ರಗಳ ರಾಜಕಾರಣಿಗಳ ಮಹತ್ವಾಕಾಂಕ್ಷೆ-ದುರಹಂಕಾರಗಳು, ಅದನ್ನು ಸಹಜವಾಗಿ ಒಪ್ಪಗೊಡಲೊಲ್ಲುವು. ಮಿತ್ರರ ಸರಳ ಮಾತುಗಳನ್ನೂ ಅವರು ಸಂದೇಹದಿಂದ ನೋಡುತ್ತಲಿದ್ದಾರೆ. ನಿಜವಾದ ರಾಜಕಾರಣವನ್ನೂ ತಪ್ಪೆಂದು ಸಾಧಿಸುತ್ತಲಿದ್ದಾರೆ. ರಾಜಕಾರಣವು ತಮಗಷ್ಟೇ ಗುತ್ತಿಗೆಯಾಗಿದೆಯೆಂಬುದು ಅವರ ಹಟವಾಗಿದೆ. ಅವರ ದುರಹಂಕಾರ-ಹಟಗಳೇ ಈಗ ಜಗತ್ತಿನ ಶಾಂತಿಯನ್ನು ಕದಡುತ್ತಿವೆ; ಕೆಣಕುತ್ತಿವೆ.

ಪರಿಷತ್ತಿನ ಯಶಸ್ಸಿಗೆ ಆಹ್ವಾನಗಳು

ಇದಕ್ಕೆ ದೂರದ ಉದಾಹರಣೆಯೇನೂ ಬೇಕಿಲ್ಲ. ನಮ್ಮ ಪೂರ್ವಖಂಡದಲ್ಲಿರುವ ಫೊರ್ಮೋಸಾದಲ್ಲಿ ನಡೆಸಿರುವ ಅಮೇರಿಕನರ ಕೈವಾಡವು ಪ್ರತ್ಯಕ್ಷಪ್ರಮಾಣವಾಗಿದೆ. ದಕ್ಷಿಣ ವಿಯೆಟ್‌ನಾಮದಲ್ಲಿ ನಡೆಯುವ ಯಾದವೀಕಲಹವೂ ರಾಜ್ಯಕ್ರಾಂತಿಯೂ ಪಶ್ಚಿಮದ ರಾಜಕಾರಣಿಗಳ ಕೈಚಳಕದ ಪರಿಣಾಮಗಳೇ ಆಗಿವೆ. ಪಾಕಿಸ್ತಾನ್–ಅಫಘಾನಿಸ್ತಾನಗಳಲ್ಲಿ ನಡೆದಿರುವ ಸದ್ಯದ ಘರ್ಷಣೆಯಲ್ಲಿ, ಪಾಶ್ಚಿಮಾತ್ಯರ ಅಂಗವು ಇಲ್ಲದೆ ಇಲ್ಲ. ಮೊನ್ನೆ-ಮೊನ್ನೆಯ ಕಾಶ್ಮೀರದ ಸೀಮಾಪ್ರದೇಶದಲ್ಲಿ ಪಾಕಿಸ್ತಾನದ ಪೋಲೀಸರು ಭಾರತೀಯ ಸೈನಿಕ-ನಾಗರಿಕರ ಮೇಲೆ ಮಾಡಿದ ಸಶಸ್ತ್ರದಾಳಿಯು ಪಾಶ್ಚಿಮಾತ್ಯರ ಪ್ರಚೋದನೆಯಿಲ್ಲದೆ ಆಗಿಲ್ಲ. ಬಾಂಡುಂಗ್ ಪರಿಷತ್ತಿನಲ್ಲಿ ಸೇರಿದ ರಾಷ್ಟ್ರಗಳಲ್ಲಿಯೇ ಕೆಲವು ರಾಜಕೀಯ ಧುರೀಣರು ಪಶ್ಚಿಮದ ಪ್ರಬಲ-ರಾಷ್ಟ್ರಗಳ ಕೈಗೊಂಬೆಗಳಾಗಿ ಇದ್ದಾರೆ. ಅವರು ಪರಿಸ್ಥಿತಿಯ ಪ್ರಭಾವಕ್ಕೊಳಗಾಗಿ ಬಾಂಡುಂಗ್ ಪರಿಷತ್ತಿನಲ್ಲಿ ಶಾಂತಿ–ಸಹಜೀವನಗಳ ಗೊತ್ತುವಳಿಗಳಿಗೆ ಕೈಯೆತ್ತಿ ಬಂದಿರುವರಾದರೂ, ತಮ್ಮ ಸ್ವಾರ್ಥಸಾಧನೆಯ ಮಾರ್ಗದಲ್ಲಿ ಅದು ಅಡ್ಡ ಬರುತ್ತಿದ್ದರೆ, ಆ ವೇಳೆಯಲ್ಲಿ ಅದನ್ನು ಮೀರಿ ನಡೆಯಲಿಕ್ಕೂ ಸಿದ್ಧರಾಗುವರು. ಈಗ ಪಾಕಿಸ್ತಾನದ ರಾಜಕಾರಣವನ್ನೇ ನೋಡೋಣ. ಅಲ್ಲಿಯ ಧುರೀಣರು ಬಾಂಡುಂಗ್ ಪರಿಷತ್ತಿನಲ್ಲಿ, ಅಲ್ಲಿ ನಡೆದುದೆಲ್ಲವನ್ನೂ ಒಪ್ಪಿಕೊಂಡು ಬಂದರು; ಮರಳಿಬಂದೊಡನೆಯೇ ಅಫಗಾಣಿಸ್ತಾನದೊಡನೆ ಯುದ್ಧಕ್ಕೆ ಕಾಲು ಕೆದರುತ್ತಲಿದ್ದಾರೆ. ನಿಜವಾಗಿ ಯುದ್ಧಪರಿಸ್ಥಿತಿಯು ಒದಗಿದರೆ, ಯಾರ ಹಣೆಯಬರೆಹ ಏನಾದೀತೆಂಬುದರ ನಿಯಮವನ್ನು ಯಾರಿಗೂ ಹೇಳಲಿಕ್ಕೆ ಬರುವಂತಿಲ್ಲ. ಪಾಕಿಸ್ತಾನಕ್ಕೆ ಒಂದು ಪ್ರಬಲರಾಷ್ಟ್ರ ಬೆಂಬಲ ಕೊಡಲು ಸಿದ್ಧವಾದರೆ, ಅಫಗಾಣಿಸ್ತಾನಕ್ಕೂ ಇನ್ನೊಂದು ಪ್ರಬಲ-ರಾಷ್ಟ್ರ ಬೆಂಬಲ–ಮುಂಬಲಗಳೆರಡನ್ನೂ ಕೊಡಲು ಸಿದ್ಧವಾಗಬಹುದು. ಇದರಿಂದ ನಷ್ಟವಾದರೆ ಪಾಕಿಸ್ತಾನ್, ಅಫಘಾನಿಸ್ತಾನ್ ಎರಡಕ್ಕೇ ಆಗುವುದು. ಬೆಂಬಲವನ್ನು ಕೊಟ್ಟ ರಾಷ್ಟ್ರಗಳು ಸುಖ-ಲಾಭಗಳಲ್ಲಿಯೆ ಇದ್ದು, ಯಾವುದೇ ರಾಷ್ಟ್ರವು ಗೆದ್ದರೂ ಸೋತರೂ ಅದರ ಮೇಲೆ ತಮ್ಮ ಹಿರಿಯತನದ ಬಲೆಯನ್ನು ಬೀಸಿ ಕುಳಿತುಕೊಳ್ಳುವುವು. ಕೋರಿಯಾ ಯುದ್ಧದ ಗತಿಯು ಏನಾಯಿತು?

ಈಗ ಅಫಘಾನಿಸ್ತಾನ್–ಪಾಕಿಸ್ತಾನಗಳೆರಡೂ ತೂಕಹಿಡಿದು-ಕೊಂಡು ನಡೆಯಬೇಕು. ನ್ಯಾಯವಾದ ದಾರಿಯಿಂದ ನಡೆಯಲು ಸಿದ್ಧವಾಗಬೇಕು. ಸೇಡಿನ ಬುದ್ಧಿಯನ್ನು ಬಿಟ್ಟು ವಿಶಾಲಹೃದಯವನ್ನು ಹೊಂದಿ, ಶಾಂತಿಯ ಆದರ್ಶವನ್ನಿರಿಸಿ ನಡೆಯಬೇಕು. ಇನ್ನೊಬ್ಬರನ್ನು ಹುರಿದುಂಬಿಸಿ ಉರಿಯಲ್ಲಿ ನೂಕಿ ತಮ್ಮ ಬೇಳೆ ಬೇಯಿಸಿಕೊಳ್ಳಬೇಕೆ-ನ್ನುವವರ ಮಾತುಗಳನ್ನು ಇಬ್ಬರೂ ಕೇಳದಿರಬೇಕು. ಹೀಗೆ ನಡೆದು-ಕೊಂಡರೆಯೆ ಬಾಂಡುಂಗ್ ಪರಿಷತ್ತಿನ ಯಶಸ್ಸಿಗೆ ಸಾರ್ಥಕತೆ ದೊರೆತಂತೆ.

ಪಾಕಿಸ್ತಾನವು ಪೂರ್ಣವಾಗಿ ವಿಚಾರಮಾಡಬೇಕು!

ಇಂದಿನ ಪ್ರಜಾಪ್ರಭುತ್ವದಲ್ಲಿ ಕೃತ್ರಿಮರೀತಿಯಿಂದ ಯಾವುದೇ ಪ್ರದೇಶವನ್ನು ಸ್ವಾಧೀನಪಡಿಸಿಕೊಂಡು, ಅದರ ಮೇಲೆ ಅಧಿಕಾರ ನಡೆ-ಸುವೆನೆಂದರೆ, ಅದು ಯಾರಿಗೂ ಸಾಧ್ಯವಿಲ್ಲ. ಎಂತಲೇ ಪಖ್ತೂನಿ-ಸ್ತಾನವು ಪಾಕಿಸ್ತಾನಿಗಳಿಗೆ ಇದುವರೆಗೂ ಪಚನವಾಗದೆ ಉಳಿದಿದೆ. ಅಲ್ಲಿಯ ಜನತೆಗೆ ಪಾಕಿಸ್ತಾನದಲ್ಲಿ ಸೇರಿಕೊಳ್ಳಲು ಸಮ್ಮತಿಯಿಲ್ಲ. ಹೇಗೋ ಅಧಿಕಾರಕಕ್ಷೆಯಲ್ಲಿ ಬಂದಿರುವ ಪಖ್ತೂನಿಸ್ತಾನವನ್ನು ಬಿಡುವುದಕ್ಕೆ ಇಂದಿನ ಪಾಕಿಸ್ತಾನದ ರಾಜಕಾರಣಿಗಳಿಗೆ ಮನಸ್ಸಿಲ್ಲ. ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಪಾಕಿಸ್ತಾನಿಗಳು ಅನೇಕ ರಾಜ-ಕೀಯ ತಂತ್ರ-ಕುತಂತ್ರಗಳನ್ನು ನಡೆಸಿದ್ದಾರೆ. ಪಶ್ಚಿಮಪಾಕಿಸ್ತಾನ-ದಲ್ಲಿಯ ಪ್ರಾಂತಗಳನ್ನೆಲ್ಲ ಮುರಿದು ಅದನ್ನು ಅಖಂಡವನ್ನಾಗಿಸುವು-ದಕ್ಕೆ ಮುಖ್ಯಕಾರಣವೆಂದರೆ ಪಖ್ತೂನಿಸ್ತಾನವೆ! ಅದನ್ನು ತಮ್ಮ ಸ್ವಾಧೀನದಲ್ಲಿಯೇ ಇರಿಸಿಕೊಳ್ಳಬೇಕೆಂದು. ಪಖ್ತೂನಿಗಳನ್ನು ದಬ್ಬಾಳಿ-ಕೆಯ ಧೋರಣದಿಂದಲೆ ಆಳಲಾಗುತ್ತಿದೆ. ಪಾಕಿಸ್ತಾನಿಗಳ ದಬ್ಬಾಳಿಕೆ ಹೆಚ್ಚಿದಂತೆಲ್ಲ ಪಖ್ತೂನಿಗಳ ಸಿಡುಕುತನ ಹೆಚ್ಚಾಗುತ್ತಲಿದೆ. ಪ್ರಜಾ-ಪ್ರಭುತ್ವದ ಮೂಲತತ್ತ್ವವೆಂದರೆ ಪ್ರೀತಿ–ಸಹಾನುಭೂತಿಗಳಿಂದ ಜನ-ರನ್ನು ಸಂಘಟಿಸುವುದು. ಪಖ್ತೂನಿಸ್ತಾನದಲ್ಲಿ ಪಾಕಿಸ್ತಾನಿಗಳದು ಪ್ರಜಾಪ್ರಭುತ್ವದ ಧೋರಣೆಯಿಲ್ಲ; ಸರ್ವಾಧಿಕಾರಿತ್ವದ ಧೋರಣೆ-ಯಿದೆ. ಸಹಜಸ್ವಾತಂತ್ರ್ಯಪ್ರಿಯರಾದ ಪಖ್ತೂನಿಗಳಿಗೆ ಇದು ಸಹನೆಯಾದೀತೆ? ಒತ್ತಾಯದ ಅಧಿಕಾರಕ್ಕೆ ಜನರು ವಿರೋಧಿಗಳಾಗಿ ನಿಲ್ಲುವುದು ಅಸಹಜವೇನೂ ಅಲ್ಲ. ಪಖ್ತೂನಿಗಳ ಪಕ್ಷಪಾತಿಗಳಾದ ಜನರು ಅಫಘಾನಿಸ್ತಾನದಲ್ಲಿ ತುಂಬ ಇರುವರು. ಒಬ್ಬರೊಬ್ಬರಲ್ಲಿ ಕೊಡುಕೊಳ್ಳು—ನಂಟುತನ ಇವುಗಳ ಸಂಬಂಧಗಳೂ ಇರುವುವು. ಅಂತಹ ಜನರು ರೇಗಿ, ಅಫಘಾನಿಸ್ತಾನದಲ್ಲಿಯ ಪಾಕಿಸ್ತಾನದ ರಾಯ-ಭಾರಿಯ ಕಚೇರಿಯ ಮೇಲೆ ದಾಳಿಮಾಡಿರಬಹುದು; ಆದರೆ ಅದರ ಸಂಪೂರ್ಣ ಹೊಣೆಯನ್ನು ಅಫಘಾನ್ ಸರಕಾರದ ಮೇಲೆ ಹಾಕಿ, ಅಪಮಾನಕರವೆನಿಸುವಂತೆ ಪರಿಹಾರಗಳನ್ನು ಕೇಳುತ್ತಿರುವುದೆಂದರೆ ಪಾಕಿಸ್ತಾನದ ದಾರಿಯು ಸರಿಯೆನಿಸಬಹುದೇ ಸರಳವೃತ್ತಿಯ ಸಾಮಾನ್ಯ ಜನರಿಗೆ? ಪಚನವಾಗದಂತಹ ತುತ್ತನ್ನು ನುಂಗಿ ಪಚನಮಾಡಿ-ಕೊಂಡೇ ತೀರಬೇಕೆಂದು ಹಟಕ್ಕೆ ಬಿದ್ದವರಿಗೆ, ನುಂಗಿದ ತುತ್ತು ಹೊಟ್ಟೆಯಲ್ಲಿ ಚುಚ್ಚಿ ಬಾಧೆಗೊಳಿಸದೆ ಬಿಡದು!

ವೈರಾಗ್ಯನಿಧಿ

(ತರಂಗರೂಪಕ)

ಪ್ರೊ. ಕೆ. ಎಸ್. ಶರ್ಮಾ, ವಾಣೀಮಂದಿರ, ಕಾಸರಗೋಡು

ಪಾತ್ರಪರಿಚಯ

ಬುದ್ಧ :— ಸಂಸಾರದಲ್ಲಿ ವಿರಕ್ತಿಯನ್ನು ತಾಳಿ, ಸತ್ಯಪೂರ್ಣವಾದ ಶಾಶ್ವತ ಶಾಂತಿಪದವನ್ನರಸಲು ಹೊರಟ ಮಹಾಮಹಿಮ.

ಆನಂದ:— ಬುದ್ಧನ ಪ್ರೀತಿಯ ಅಂತೇವಾಸಿ.

ಸಿದ್ಧಾರ್ಥ :— ಶುದ್ಧೋಧನ ಮಹಾರಾಜನ ಏಕಮಾತ್ರ ಪುತ್ರ.

ಚೆನ್ನ :— ರಾಜಕುಮಾರ ಸಿದ್ಧಾರ್ಥನ ಪ್ರೀತಿಯ ರಥಿಕ. ಸ್ವಾಮಿ-ಭಕ್ತಿಯಲ್ಲಿ ಅಪ್ರತಿಮ.

ಸಂಸಾರ–ವಿರಕ್ತಿ :— ಅದೃಶ್ಯ ಪಾತ್ರಗಳು.

ಉಳಿದವರು :— ಶಿಷ್ಯರು, ಪೌರರು,— ಇತ್ಯಾದಿ.

ದೃಶ್ಯ ೧

ನಾಂದಿ

ಬುದ್ಧಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ
ಧರ್ಮಂ ಶರಣಂ ಗಚ್ಛಾಮಿ!

(ನಾಂದಿಯ ಕೊನೆಯಲ್ಲಿ, ದೂರದಿಂದಲೆ ತೇಲಿಬರುತ್ತಲಿದ್ದ ಅವ್ಯಕ್ತ-ನಾದವೊಂದು ಕೇಳಿಸುತ್ತ ಹಾಗೆಯೆ ಮೌನದಲ್ಲಿ ಸೇರಿಗೊಳ್ಳುವುದು.)

ನಿರೂಪಕ :— ಸುಮಾರು ಎರಡುವರೆ ಸಾವಿರ ವರ್ಷಗಳ ಹಿಂದಿನ ಪುಣ್ಯದಿನ. ಅಂದು ಕುಶಿನಾರದ ಶಾಲ್ಯವನದಲ್ಲಿ ನಿರ್ಯಾಣ-ನಿಮೇಷವನ್ನು ಸ್ವಾಗತಿಸಿದ್ದ ಮಹಾತ್ಮಾ ಬುದ್ಧನು, ಲೋಕೋತ್ತರ ಸಂದೇಶಕ್ಕಾಗಿ ಮನ ನೀಡಿದ್ದ–ಅದೇ ವೇಳೆ........

ಬುದ್ಧ :— ಆನಂದ! ಆನಂದ!! ಆನಂದಾ........

ಆನಂದ :— ಗುರುದೇವ, ಗುರುದೇವ, ಆಜ್ಞೆಯೇನು?

ಬುದ್ಧ :— ಆನಂದ, ಬಳಿಯೆ ಬಾ! ನನ್ನ ಹೃದಯಮರ್ಮಗೆ ಕೈಲವ್ಯೂಡುವಂತೆ ಸಮೀಪಕ್ಕೆ ಬಾ! ಇಂದಿನ ದಿನ ನಿನಗಾಗಿ ಮೀಸಲಿದೆ. ನನ್ನ ರಕ್ತದ ಕಣಕಣವೂ ನಿನಗಾಗಿ ಹಾರಯಿಸುತ್ತಿದೆ! 'ಲೋಕಶಾಂತಿ'ಯ ಮಹಾಮಂತ್ರವು ನನ್ನೆದೆಯಿಂದ ಚಿಮ್ಮಿ, ನಿನ್ನೆದೆಯೊಲವನ್ನು ಬಯಸುತ್ತಿದೆ. ಈ ಪಿಪಾಸೆಗೆ ನೀನೇ ಆಸರೆ!

ಆನಂದ :— ಗುರುದೇವ, ನನಗೆ ಅರ್ಥವಾಗಲಾರದು. ಕಳ-ಕಳಿಯು ಹೃದಯವನ್ನು ಹಿಸುಕುತ್ತಿದೆ! ತಮ್ಮ ಇಂದಿನ ಆಯಾಸ, ಶಾಂತಿಪೂರ್ಣನಯನಗಳ ನಿಶ್ಚಳ ವಿಲೋಕನ, ಹೃದಯದಿಂದ ಹೊಮ್ಮುತ್ತಿರುವ ಅಮೃತವಾಣಿಯ ಮುಂಬೆಳಗು! ಇನ್ನೂ ತುಂಬದ, ತುಂಬಲಾಸೆಯುಳ್ಳ, ಈ ಹೃದಯವು ಪ್ರಕ್ಷುಬ್ಧ ಜಲಧಿಯಂತೆ ಮೊರೆ-ದಾಡುತ್ತಿದೆ ನನ್ನೊಡೆಯಾ! ನನ್ನ ಜೀವನಾದದ,–ಶಕ್ತಿಸ್ವರೂಪ ಗುರುದೇವ, ಮಣಿದಿರುವೆ–ನನಗಾಗಿ ಅಪ್ಪಣೆಯಿತ್ತಿರಿ!

ಬುದ್ಧ :— ಕಂದಾ! ನಿನ್ನೆಯ ದಿನವನ್ನು ಜ್ಞಾಪಿಸುವೆಯಾ? ಭಕ್ತವರ–ಚಂದನಿತ್ತ ಭಿಕ್ಷೆಯ ಅಮೃತಾನ್ನವನ್ನು ನೆನಪಿರಿಸು! ನನ್ನ ಅಸ್ವಾಸ್ಥ್ಯದ ಮುಂದೆ ನೀನು ತಡೆದರೂ, ಭಕ್ತಹೃದಯದ ತೃಪ್ತಿಗಾಗಿ ನನ್ನ ಕೊನೆಯೂಟವನ್ನುಂಡೆನು. ಈ ಕೊನೆಯೂಟದಲ್ಲೇ ನನಗೆ ತೃಪ್ತಿಯಿದೆ! ಆ ತೃಪ್ತಿಯಲ್ಲೇ ಮುಕ್ತಿಯ ಪೂರ್ಣತೆಯಿದೆ! ಕಂದಾ, ಇನ್ನಷ್ಟು ಬಳಿಸಾರು!

ಆನಂದ :— ಗುರುದೇವ, ನನ್ನ ಹೃದಯವು ನಡುಗುತ್ತಿದೆ. ನಾಲಗೆ ತಡವರಿಸುತ್ತಿದೆ! ತಾವು 'ಕೊನೆಯೂಟ'ವೆಂದು ನನ್ನನ್ನು ಎದೆಗುಂದಿಸಬೇಡಿರಿ! ನನ್ನ ದೇವರೇ, ನನಗಾಗಿ ತಾವು ಹಾಗೆನ್ನಬಾರದು!

ಬುದ್ಧ :— ಕುವರ, ಈ ವಿಮೋಚನೆಯಲ್ಲಿ ನೀನೇಕೆ ಕುದಿಯುತ್ತಿರುವೆ? ಇದು ಚಿರಂತನ ವಸ್ತುವಲ್ಲ! "ಇಂದು ಕೆಲವು ನಾಳೆಗಳೊಡನೆ" ಮುಳುಗುವುದು ಸ್ವಾಭಾವಿಕವಿದೆ. ನಾಳೆಯ ದಿನಕ್ಕಾಗಿ ಹಂಬಲವೇಕೆ? ಇಂದನ್ನು ಶುಭ್ರತೆಯಲ್ಲಿ ಬೆಳಗಬೇಕು! ಇವನ್ನು ಮರೆತು ಈ ದೇಹಕ್ಕಾಗಿ ಮರುಕವೆ?

ಆನಂದ :— ಗುರುದೇವ, ಬರಿಯ ದೇಹದ ಮಮಕಾರವಲ್ಲ-ವಿದು! ಸಾಧನಾಪೂರ್ಣ, ಅಹಿಂಸಾ-ಸತ್ಯ-ತತ್ತ್ವಪೂರ್ಣವಾದ ತಮ್ಮ ದಿವ್ಯದರ್ಶನದ ಭಾಗ್ಯದಲ್ಲಿ ಶಾಂತಿಯುಂಡ ಈ ಬಡಮನದ ಹಾರೈಕೆಯಿದು. ಸರ್ವಭೂತ ಹಿತಾತ್ಮಕವಾಗಿ ಬಯಸುತ್ತಿರುವ ಸ್ವಾರ್ಥವಿದು! ಬರಿಯ ದೇಹಕ್ಕಾಗಿ ಕೊರಗುವುದಿಲ್ಲ. ಈ ದುಃಖವನ್ನು ತಡೆಯಲಾರೆ! ನಾನೇನು ಮಾಡಲಿ?

ಬುದ್ಧ :— (ನಗುವಿನಲ್ಲಿ) ನನ್ನ ಮುದ್ದು ಕುವರ, (ನೈದಡ-ಡಪ್ರತ್ತ) "ಮೋಡಬಿಟ್ಟ ಚಂದ್ರನಂತೆ-ಮೊದಲು ಮೈಮರೆತಿದ್ದು ಆಮೇಲೆ ಎಚ್ಚೆತ್ತ ಮನುಷ್ಯ ಲೋಕವನ್ನೆಲ್ಲ ಬೆಳಗುವನು"— ಈ ಮಾತನ್ನು ನೆನೆಯು; ತಾತ್ಕಾಲಿಕವಾಗಿ ನೆಲೆಗೊಂಡ ಈ ಮಾಯೆ-ಯನ್ನು ದೂರ ಸರಿಸು! ಹೃದಯದಲ್ಲಿ ಸತ್ಯವನ್ನು ನೆಲೆಗೊಳಿಸು! ಬರಿಯ ಈ ದೇಹದ ಅಗಲಿಕೆಗಾಗಿ ಮರುಕವೇರ ಬೇಡ!

ಆನಂದ:— ಗುರುವರಾ, ಅಗಲಿಕೆ ಅಗಲಿಕೆ ......

(ದುಃಖಸೂಚಕನಾದ)

ಬುದ್ಧ:— ನೋಯುತ್ತಿರುವೆಯಾ? ಅಯ್ಯೋ, ಅದೇಕೆ ಕಣ್ಣೀರು! ಯಾತಕಾಗಿ ಕಣ್ಣೀರು? ಯಾರಿಗಾಗಿ ಕಣ್ಣೀರು? ನಶ್ವರ-ವಾದೀ ದೇಹದ ಮುಂದೆ ನನ್ನ ಶಿಷ್ಯನಾದ ಆನಂದ ಕಣ್ಣೀರು ಮಿಡಿಯ ಬಾರದು! ಕಣ್ಣೀರಿಂದೇನು ವಿನಂಕ್ತವಾಗದು. ನಾನು ಬಲ್ಲೆ! ಈ ವಿಮೋಚನೆಯಲ್ಲಿ ನನ್ನ ಧರ್ಮಪ್ರವಾಹ ನಿನ್ನೆಡೆಗೆ ಓಡುತ್ತಿದೆ! ಆನಂದದಿಂದ—ಪೂರ್ಣಸತ್ಯದಿಂದ ತುಂಬಿಕೊ! ಇದರ ಮುಂದೆ ಈ ಅಗಲಿಕೆ ಅಲ್ಪ-ಬಹು ಸ್ವಲ್ಪ!

ಆನಂದ:— ಆದರೂ ಈ ಘೋರವಾದ - ನನ್ನೆದೆಯನ್ನು ಸೀಳುವಂತಾಗಿಸುವ— ಅಗಲಿಕೆಯನ್ನು ಹೇಗೆ ಸಹಿಸಬಲ್ಲೆ!

ಬುದ್ಧ:— ಸತ್ಯವನ್ನೇ ಅರಿವೆ! ಆನಂದ, ಐದು-ಆರುವತ್ತು ವರುಷಗಳ ಗತಕಾಲದ-ಇಂದಿನ ಭಾಗ್ಯನಿಧಿಯನ್ನು ಸಮರ್ಪಿಸಿದ-ಅಗಲಿಕೆಯನ್ನು ಸಂಭಾವಿಸು! ನನ್ನ ಮುಂದೆ ಕವಿವಿಷ್ಟ ಘೋರ ಸನ್ನಿವೇಶಗಳ ತಾಕಲಾಟದಿಂದ ಘಾಸಿಗೊಂಡು-ಕಾಡಿ ಒಡೆದು ಚೂರಾಗಿ ಹೋದ ಅಗಲಿಕೆಯನ್ನು ನೆನೆಸಿಕೊ ಕಂದ! ನಿನ್ನ ದುಃಖವನ್ನು-ವಿಕ್ಷಿಪ್ತಮನೋಭಾವವನ್ನು ಕೆರಳಿಸದೆ—ಕದಡಿಸದೆ ಮೌನವಾಗಿ ಯೋಚಿಸು! ಅನೃತಮಂಡುಗಳ ಅನಸ್ಯಾಕ ಧಾರೆಯು ನಿನ್ನ ಹೃದಯಪಾತ್ರೆಯಲ್ಲಿ ಅಡಿಯಿಡಲು ಕಾಯುತ್ತಿದೆ. ಭೂತಕಾಲದಲ್ಲಿ ಅಡಿಯಿರಿಸಿ ನೋಡು. ಹೃದಯಕ್ಕೊಂದು ದೃಢತೆಯನ್ನು ಬಲಿಯು!

ಆನಂದ:— ಗುರುದೇವ-ಆ ಮಹಾರಾತ್ರಿ! ವಿಶ್ವವೇ ಬೆಳಗಿದ ಮಹಾರಾತ್ರಿ! ಅಲ್ಲಿ ನೆಲೆಗೊಂಡು ನಿಂತ ಆ ಅಗಲಿಕೆ! ಅಸಹ್ಯ-ದುರ್ಭೇದ್ಯವಿರಕ್ತಿ.......

ನಿರೂಪಕ: — "ಹೌದು, ಆ ಮಹಾರಾತ್ರಿಯಲ್ಲಿ ಕಪಿಲ-ವಸ್ತುವಿನಲ್ಲಿ ಬೆಳಗುತ್ತಿದ್ದ ಶಾಂತಿಯ ಹೊಂಬೆಳಕಿಗೆ ನಿದಾನವಾದ ಆ ಅಗಲಿಕೆಯು-ಪೂರ್ವಭಾವಿಯಾಗಿ ನೆಲೆಗೊಂಡ ಸೌಭಾಗ್ಯದ ಪೂರ್ಣ ಶೃಂಗಾರ! ಆ ಸೊಗಸು! ಆ ಮಹೋತ್ಸವದಲ್ಲಿ

(ಉತ್ಸಾಹ ಸೂಚಕ ವಾದ್ಯರವ)

ಸಿದ್ಧಾರ್ಥ:—

ರಾಗ-ತಿಲಂಗ್ ಬಹಾರ್, ತಾಳ-ದಾದರಾ.

ಮೋದ ಪುರಕೇಗಯಾನ ॥ ಮೋದ ॥
ಲಾಲಿಸುವಂತು, ನೋಡಲು ಚೆನ್ನ ॥
ತೆಂಕ್ಕೆ ಮುದದಿಂದ ॥
ನೋಡನವೇ ಕಾಲ ಸುಖಾಂತಾ ॥ ನೋದ ॥

ನೋದ-ನೋದ ಓ ದಿನವೂ
ನಲಿದು ಕುಣಿದು ತಣಿದು ನಾನು
ಆಡಿಜನದೀ ಮುದವೀ ತೆರಳಿ
ಸುಖವನೇರಿ ಮನದಿ ಹಾಡಿ ॥ ನೋದ ॥

ಸಿದ್ಧಾರ್ಥ:— ಚೆನ್ನ, ಅದೆಷ್ಟು ಮನೋಹರವಾದ ಪ್ರದೇಶಕ್ಕೆ ನನ್ನನ್ನೊಯ್ಯುತ್ತಿರುವೆ! ಅಮರಲೋಕದ ವೈಭವವನ್ನು ಓದಿದ ಮನವು, ಇಂದೀ ಸೊಗಸಿನ ನೋಟದಿಂದ ಕೆವರಿ ಮಿರುಗೇರುತ್ತಿದೆ! ಇನ್ನೀರಥವು ಯಾವೆಡೆಗೆ ತೆರಳುತ್ತದೆ?

["ರಾಜಕುಮಾರನಿಗೆ ಜಯವಾಗಲಿ" ಎಂಬ ಹರ್ಷೋದ್ಗಾರವು ತುಂಬುವುದು.]

ಚೆನ್ನ : — ಒಡೆಯಾ, ಈ ಜಮುನಾನದಿಯ ಮಂಜುಳ ತರಂಗಿಣಿಯಲ್ಲೇ ತೇಲಾಡುತ್ತಿರುವ ನಾವು, ಇದೀಗ ಪುರೋದ್ಯಾನವನ್ನು ದಾಟಿ ನಗರದ ಮಧ್ಯಕ್ಕೆ ಬಂದಿರುವೆವು. ಭವ್ಯವಾದೀ ನೋಟವನ್ನು ಸವಿದು, ಇದೇ ಕಾಣುವ ಉತ್ತರಪಾರ್ಶ್ವದಿಂದ ಅರಮನೆಯನ್ನು ಸೇರುವೆವು.

ಸಿದ್ಧಾರ್ಥ:— ಚೆನ್ನ, ಕಂಥಕನಿಗೆ ಆಯಾಸವಾಗುವುದಾದರೆ, ಇಲ್ಲಿಂದಲೇ ಹಿಂತಿರುಗೋಣ! ಕಂಥಕ, ಕಂಥಕ—ಬಳಲಿದೆಯಾ?

ಚೆನ್ನ:— ಕಂಥಕನಿಗೆ ಬಳಲಿಕೆಯ ಗೊತ್ತವೆಯೇ ಇಲ್ಲ ಚೆಲುವಿನ, ಬೆಡಗಿನ ನಗರದ ಮಧ್ಯದಲ್ಲಿ ಒಡೆಯನನ್ನು-ಒಡೆಯನ ಹೃದಯವನ್ನು—ಆನಂದದಲ್ಲಿ ತುಂಬಿ ನೋಡಿಸಾಡುವ ಬಯಕೆಯಲ್ಲೇ ಮುಂದಡಿಯಿಟ್ಟು ನೆಗೆಯುತ್ತಿರುವನು.

ಸಿದ್ಧಾರ್ಥ:— ಆಹಾ! ನನ್ನ ನೇಹಕೊಪ್ಪಿದ ಚೆನ್ನ! ಚೆನ್ನನ ಇಂಗಿತವನ್ನರಿತು ನೆಗೆದಾಡಿ ಸ್ವಾಮಿಸೇವೆಯನ್ನು ಸಲ್ಲಿಸುವ ನನ್ನ ಅಶ್ವರಾಜ ಕಂಥಕ! ಇವರ ಪ್ರೀತಿಗಾಸರೆ ಈ ನನ್ನ ಬಾಳು! ಆಹಾ, ಏನು ಸುಖಮಯವೀ ಜೀವನ! ಇದಕ್ಕಿಂತ ಮಿಗಿಲಾದ ಭಾಗ್ಯ ಇನ್ನೊಂದಿಲ್ಲ! ಅದಿದ್ದರೆ.... ...

ಒಂದು ತಳಮಳ ಸೂಚಕ ಶಬ್ದ. ಅದರೊಡನೆಯೇ "ಧರ್ಮದಾತ" ಎಂಬ ಕೂಗು. "ಅನ್ನ ಕೊಡಿಸು ಸ್ವಾಮಿಗೂಳಿ" ಎಂಬ ತಡೆಮಾತು.)

ಸಿದ್ಧಾರ್ಥ:— ಚೆನ್ನ! ಚೆನ್ನ! ಅದೇನು ಕಾಣಬರುತ್ತಿರುವುದು? ಮನುಷ್ಯಾಕೃತಿಯೆ? ಎಲುಬಿನ ಹಂದರವೊಂದು ಜನಸಂದಣಿಯಿಂದ ನುಸುಳಿ ಏನನ್ನೋ ಕೈಯೆತ್ತಿ ಯಾಚಿಸುತ್ತಿದೆಯಲ್ಲಾ? ನಾನೇನು ಮಾಡಲಿ! ಚೆನ್ನ-ಹೇಳು, ಹೇಳು, ಅದೇನೆಂದು ಹೇಳು....

ಭಿಕ್ಷುಕ:— ಧರ್ಮ ದೇವರೆ, ದಯೆ ತೋರಿ! ಸಾಯುವುದರಲ್ಲಿರುವೆ! ಉಳಿಸಿರಿ! ಅಯ್ಯೋ, ಧರ್ಮ!

ಸಿದ್ಧಾರ್ಥ:— ಚೆನ್ನ, ಬೇಗ ಹೇಳು. ಹೃದಯವೇಕೋ ಅತ್ತ ಕಡೆಗೆ ತೇಲಿ ಸಾಗುತ್ತಿದೆ!

ಚೆನ್ನ:— ಒಡೆಯಾ, ಇದು "ಇಂದಿನೊಡನೆ ಹೊಂದಿಕೆಯಾಗಿ ನಿಂತ ಹಲವಾರು ನಿನ್ನೆಗಳ ಕಂತೆ!" ಕೆಲವು ವರ್ಷಗಳ ಹಿಂದೆ ಸುಂದರವಾದ ವ್ಯಕ್ತಿತ್ವದಿಂದ ಶೋಭಿಸುತ್ತಿದ್ದ ದೇಹ. ಇಂದು ಗೂನುಬೆನ್ನಿ-ನೊಡನೆ ಕಣ್ಣಿನ ಹೊಳಪನ್ನು ಕಳೆದುಕೊಂಡಿದೆ. ಇವನ ಜೀವನ-ದೀಪದ ಎಣ್ಣೆ ತೀರಿದೆ, ಬತ್ತಿ ಉರಿದು ಮುಗಿದಿದೆ; ಕೊನೆಯ ಕಿಡಿ

ಮಾತ್ರ ನಿಮಿಷವನ್ನು ಕಾಯುತ್ತಿದೆ — ವಂಚನೆಯಿಲ್ಲದೆ ಹೇಳಿದೆ ನನ್ನೊಡೆಯಾ! ಇದೇ ಈ ಸುಖರಾಶಿಯಲ್ಲಿ ಅಡಕವಾಗಿದ್ದ ದುಃಖ-ಬಿಂದುಗಳ ಧಾರೆ!

ಸಿದ್ಧಾರ್ಥ :— ಚೆನ್ನಾ, ಏನೆಂದೆ? ಈ ಮುಪ್ಪು ಸರ್ವರಿಗೂ ಅನ್ವಯಿಸುವುದೇ?–ಅಲ್ಲ........

ಚೆನ್ನ :—ದಿನಗಳನ್ನು ವರ್ಷಗಳ ಕೂಡಿಕೆಯಲ್ಲಿ ಸವೆಯಿಸುತ್ತಿರುವ ಯಾರನ್ನೂ ಈ ಅವಸ್ಥೆ ಬಿಡಲಾರದು! ಮುಪ್ಪಿಗೆ ಸರ್ವರೂ ಮೀಸಲು.

ಸಿದ್ಧಾರ್ಥ :—ಚೆನ್ನ, ಹಾಗಾದರೆ ನಾನಷ್ಟು ವರ್ಷ ಬದುಕಿದರೆ, ನನ್ನ ಪ್ರಿಯತಮೆಗೆ ಅಷ್ಟು ವಯಸ್ಸಾದರೆ....ಹೀಗಾಗುವೆವೆ?

ಚೆನ್ನ :— ಒಡೆಯಾ, ಇಷ್ಟು ವರ್ಷಗಳ ದೀರ್ಘಾವಧಿಯಲ್ಲಿ ಬಾಳುವವನು ಈ ಮುಪ್ಪಿನಿಂದ ಬಿಡುಗಡೆಯನ್ನೈದಲು ಸಾಧ್ಯವೇ ಇಲ್ಲ.

ಸಿದ್ಧಾರ್ಥ :— ಅಯ್ಯೋ, ಎಂತಹ ವಿಚಿತ್ರವಿದು? ಏನು ಘೋರಾವಸ್ಥೆಯಿದು! ಇದರ ಮುಂದೆ ಮಾನವನು.... ...ಚೆನ್ನ– ಮುಂದುವರಿ! ತಡೆಯಲಾರೆ!

("ಅಯ್ಯೋ!" ಎಂಬ ಆರ್ತನಾದ ಕೇಳಿಸುವುದು.)

(ಹಿನ್ನೆಲೆಯ ವಾದ್ಯಸಂಗೀತ ಬಿರುಸಾಗುವುದು.)

ಸಿದ್ಧಾರ್ಥ :— ಚೆನ್ನ, ಚೆನ್ನ–ಅದೇನು ನೋಡು! ಅದೋ, ಆ ಮಾರ್ಗದ ಬದಿಯಿಂದ ಉರುಳಿ ನರಳುತ್ತಿರುವುದೇನು? ಅಯ್ಯೋ ವೇದನೆಯೇನು ಚೆನ್ನ, ತಡೆಯಲಾರೆ—

ಚೆನ್ನ :— ಒಡೆಯ. ಅತ್ತ ಕಡೆಯ ನೋಟವನ್ನು ಹಿಂತಿರುಗಿಸಿರಿ ಇದೋ. ರಥವನ್ನೀಗಲೆ ಬಲಬದಿಗೆ ತಿರುಗಿಸುವೆನು. ಮನೋಜ್ಞವಾದ ರಾಜವೃಂದಾವನದೆಡೆ ಸಾಗುವಾ!

ಸಿದ್ಧಾರ್ಥ : — ಬೇಡ, ಬೇಡ! ನನ್ನ ಹೃದಯವನ್ನಾವುದೋ ಒಂದು ವೇದನೆಯು–ಎಂದೂ ಕಂಡರಿಯದ ವಿಷಾದವು, ಮೀಟುತ್ತಿದೆ. ನನ್ನರಿವಿಗಿದನು ನಿಲುಕಿಸು ಚೆನ್ನಾ! ನನಗಾಗಿ ನೀನಿರುವವನು. ನನ್ನ ಹೃದಯವನ್ನು ತಳಿ ಮುಂದುವರಿಯುದಿರು.

ಚೆನ್ನ :—ನನ್ನೊಡೆಯಾ ನಾನೇನುತ್ತರಿಸಲಿ! ನನ್ನ ನಾಲಗೆಯೆ ತಡವರಿಸುತ್ತಿದೆ

ಸಿದ್ಧಾರ್ಥ :— ಆದರೂ–ನನಗಾಗಿ, ನನ್ನ ಹೃದಯತೃಪ್ತಿಗಾಗಿ ಉಸುರಿಬಿಡು.

ಚೆನ್ನ :— ಒಡೆಯಾ. ಕಣ್ಣೀರ ಕೋಡಿಯಲ್ಲಿ ರಕ್ತದ ಧಾರೆಯನ್ನು ಚೆಲ್ಲುತ್ತಿರುವ ಈ ಮನುಷ್ಯ. ಕುಷ್ಠರೋಗವೆಂಬ ಭೀಕರ ಆಪತ್ತಿನಲ್ಲಿ ದೇಹವನ್ನು ಮಣ್ಣಿನೆಡೆಗೆ ಸಾಗಿಸುತ್ತಿದ್ದಾನೆ! ಈ ರೋಗ ಸಿಡಿಲಿನಂತೆ ಯಾರ ಮೇಲೂ ಎರಗಬಲ್ಲುದು–ಗಾಳಿಯಂತೆ ಯಾರ ಮೇಲೂ ಬೀಸಬಲ್ಲುದು! ಸಹಿಸಲಾರದ ಭೀಕರರೋಗವಿದು! ನೆನೆದರೆ ಮೈ ನಡುಗುವ ರುದ್ರದೃಶ್ಯವಿದು....ರಥವನ್ನು ಹಿಂತಿರುಗಿಸಲೇ....? (ನೋಡಿ) ಅಯ್ಯೊ ನನ್ನೊಡೆಯಾ? ಇದೇನು? ಇದೇಕೆ ತಲೆತಗ್ಗಿಸಿ ಮೌನದಿಂದಿರುವಿರಿ? ಅಕಟ, ಕಣ್ಣಂಚಿನಲ್ಲಿ ಹನಿಗೂಡುವ ಈ ನನ್ನ ಒಡೆಯನನ್ನು–ನನ್ನ ದೇವರನ್ನು–ನಾನೆಂತು ಕಾಣಲಿ? ನನ್ನೊಡೆಯಾ, ನನ್ನ ದೇವರೆ–ದುಃಖಕ್ಕೀಡಾಗದಿರಿ. ಕಣ್ಣೀರ ಧಾರೆಗೆ ಕಪೋಲವನ್ನು ಗುರಿಯಾಗಿಸದಿರಿ! ಈ ಪಾಪಿಯನ್ನು–ಒಡೆಯನ ಕಣ್ಣೀರನ್ನು ಹನಿಸಿದ ಪಾಪಿಯನ್ನು — ಮನ್ನಿಸಿರಿ!

ಸಿದ್ಧಾರ್ಥ :— (ತಲೆಯೆತ್ತಿ) ಚೆನ್ನಾ, ನೀನು ಪಾಪಿಯಲ್ಲ! ನಾನು ತಿಳಿಯಬೇಕಾದುದನ್ನು ಬೋಧಿಸಿದೆ. ಈ ಘೋರಸಂಸಾರದ ಬಯಲಾಟವನ್ನು ನೆಚ್ಚಿದ ಮಾನವರೆಲ್ಲರೂ ಪಾಪಿಗಳೆಂಬರಿವಾದಾಗ–ನೀನೊಬ್ಬನೇ ಪಾಪಿಯಾಗಲಾರೆ ಗೆಳೆಯಾ! ಇನ್ನಿಲ್ಲಿ ತಡೆಯಬೇಡ ಚೆನ್ನಾ! ನನ್ನ ಕಂಥಕನೂ ಈ ನೋವಿನಿಂದ ಬಳಲಿರಬಹುದು! ನೀನೂ ಬಹಳ ಬಳಲಿರುವೆ! ತಿರುಗಿಸು ರಥವನ್ನು........

ಚೆನ್ನ : ಆಗಲಿ ಮಹಾಪ್ರಭೋ! ಕಂಥಕ, ಒಡೆಯನ ಹಿತದಂತೆ ವರ್ತಿಸು; ಇದೇ ಪುರೋದ್ಯಾನದ ಉತ್ತರಪಾರ್ಶ್ವದಿಂದ ತೆರಳೋಣ.

ನಿರೂಪಕ :— ರಾಜಕುಮಾರನ ಮನೋವೇದನೆ–ಚೆನ್ನನ ಹೃದಯಭಾರ. ಕಣ್ಣೀರನ್ನು ಹನಿಸುವ ಒಡೆಯನ ದುಃಖವನ್ನರಿತ ಕಂಥಕ! ಇವುಗಳೊಂದಿಗೆ ಪುರೋದ್ಯಾನದ ಸಿರಿಯೂ ಕುಂದಿ ರಥವು ಉತ್ತರಪಾರ್ಶ್ವದ ಬೀದಿಯನ್ನೇರಿದೆ.

(ಮೌನವಾದ ರಥಗಮನದಲ್ಲಿ – ದೂರದಿಂದೊಂದು ಆರ್ತಧ್ವನಿಯು–ಹೆಂಗುಸು–ಮಕ್ಕಳ ಕೂಗು–ಕೇಳಿಸುವುದು.)

ಸಿದ್ಧಾರ್ಥ :— (ತಟಕ್ಕನೆ ಎಚ್ಚರ ಹೊಂದಿದಂತೆ) ಹಾಯ್, ಅದೇನಾ ನೂತನವಾದೊಂದು ಶಬ್ದ! ನಾನು ಇಂದಿನ ವರೆಗೂ ಕೇಳಿರದ–ನನ್ನರಿವಿಗೆ ನಿಲುಕಿರದ—ಧ್ವನಿ ಯಾವುದೋ ಕೇಳಿಸುತ್ತಿದೆಯಲ್ಲ! ಚೆನ್ನ, ಚೆನ್ನ, ಕೇಳಿದೆಯಾ ಅದನ್ನು! ಅದೋ ನೋಡಲ್ಲಿ–ಅದೇನಾ ಜನಸಂದಣಿ! ಅದೇನವರ ಹೆಗಲಲ್ಲಿ! ಹೊರೆಯ ಹಿಂದಿನಿಂದಲೇ ಬಿಕ್ಕಿದ್ದು ಕಣ್ಣೀರಿಳಿಸಿ–ಹೃದಯವನ್ನು ಮೀಟುವ ಶಬ್ದಗಳನ್ನುಚ್ಚರಿಸುತ್ತಿರುವರಲ್ಲ! ಏನದು?

ಚೆನ್ನ :—ಒಡೆಯಾ — ನಾನೇನು ಹೇಳಲಿ? ಹೇಳುವುದೇನನು? ಪ್ರಭೋ, ಅತ್ತ ಕಡೆಗೆ ಕಣ್ಣು ಹೊರಳಿಸದಿರಿ. ಪ್ರಭುಗಳದನ್ನು ನೋಡಬಾರದು. ನೋಡುವ ನೋಟವಲ್ಲವದು!

ಸಿದ್ಧಾರ್ಥ :— ಚೆನ್ನಾ–ಚೆನ್ನಾ........ಕಣ್ಣೀರಿಳಿಸಿ–ಅದೇಕೆ ತಲೆತಗ್ಗಿಸಿದೆ? ನೋಡು, ನನ್ನೆಡೆಗೆ ನೋಡು........

ನಿರೂಪಕ : – ನಿರುತ್ತರನಾದ ಚೆನ್ನ ದುಃಖಭಾರದಲ್ಲಿ ಕುಸಿದಿರಲು ತಲೆಯೆತ್ತುವುದೆಂತು? ಉತ್ತರವನ್ನೇನೆಂದೀಯಬೇಕು? ಅದರೆ–ಪ್ರಪಂಚದ ರುದ್ರದೃಶ್ಯಕ್ಕೆ, ಮೊದಲಿಗನಾದ ಸಿದ್ಧಾರ್ಥನಿಗೆ ಸ್ಮರಣೆಯೆಲ್ಲಿದೆ? ಅದೋ, ರಥದಿಂದಲೇ ನೆಗೆದೋಡಿದ ರಾಜಕುಮಾರ–ಭವ್ಯ ಭಾವಿಯ ನೆಲೆಗಾಗಿ ತಪಿಸಿದ ಮಹಾನುಭಾವ. ತಡೆದು ನಿಲ್ಲಿಸಿದುದಾರನ್ನು?....ಯಾರನ್ನು....?

ಸಿದ್ಧಾರ್ಥ :— ಗೆಳೆಯರೇ, ಇದೇನೀ ಯಾತ್ರೆ? ಇದೇಕೀ ಬೆಂಕಿ?–ಅಯ್ಯೊ ಮಡಕೆ? ಇದೇನೀ ಹೊರೆ? ಬಳಿವಿಡಿದು ಬರುವ ಇದಾರುವುದೇನನ್ನು? ನನಗೊಂದೂ ತಿಳಿಯದ ಈ ವಿಚಾರವನ್ನು ತಿಳಿಸಿರಿ.

ಜನವೃಂದ :— (ಬೆರಗು-ಭಯಗಳಿಂದ) ಅಯ್ಯೋ,-ರಾಜಕುಮಾರರೆ? ತಾವಿಲ್ಲಿ ಬರಲಾಗದು. ತಮ್ಮ ಪವಿತ್ರದೇಹವು ಅಶುದ್ಧವಾಗಬಾರದು. ನಮ್ಮನ್ನು ಮನ್ನಿಸಿರಿ.

ಸಿದ್ಧಾರ್ಥ :— ಏನು ? " ಪವಿತ್ರದೇಹವು....ಅಶುದ್ಧ ? " ಅಂದರೆ—ಅಂದರೆ....

(ಪುನಃ ರೋದನ.)

ಸಿದ್ಧಾರ್ಥ :— ಚೆನ್ನಾ-ಚೆನ್ನಾ........

ಚೆನ್ನ :— (ರಥದಿಂದ ನೆಗೆದು-ಓಡಿಬಂದು) ಪ್ರಭುವರಾ, ಇದೇನೀ ವಿಚಾರ? ತಾವೇನನ್ನು ಮಾಡಿದಿರಿ? ನನಗರಿಯದೇನೇ ಬಂದುಬಿಟ್ಟಿರಲ್ಲಾ....? ಬನ್ನಿ-ಅರಮನೆಯ ಬಳಿ ಸೇರೋಣ. ಇನ್ನಿಲ್ಲಿ ತಡೆಯಬಾರದು.

ಸಿದ್ಧಾರ್ಥ :— ತಡೆಯುವುದಿಲ್ಲ ಚೆನ್ನ ! ನನ್ನರಿವಿಗೆ ನಿಲುಕದ ಈ ವಿಚಾರವನ್ನು ತಿಳಿಸದೆ-ನನ್ನ ಮೇಲೆ ಕವಿದಿರುವ ಈ ಸಮಸ್ಯೆಯನ್ನು ಬಿಡಿಸದೆ-ನನ್ನನ್ನು ಮುಂದೂಡುವೆಯಾ? ಬೇಡ-ಬೇಡ. ಅಗತ್ಯವಾಗಿ ತಿಳಿಸು. ಒಡೆಯನಾಣತಿಯನ್ನು ಮೀರುವೆಯಾ? ನಿನ್ನ ಸಹಭಾಗಿ-ಈ ದೀನನ ಯಾಚನೆಗೆ ಮನನೀಡೆಯಾ ?

ಚೆನ್ನ :— (ಕಣ್ಣೀರಿಳಿಸಿ.) ಯುವರಾಜ, ಅದು ಕಾವು ಆರಿದ ದೇಹ. ಉಸಿರಾಟವು ತಡೆದು ನಿಂತ ದೇಹ. ಅದರಲ್ಲಿ ಕಳೆಯಿಲ್ಲ; ಚಲನವಿಲ್ಲ; ದೃಷ್ಟಿಯಿಲ್ಲ. ಸಂಸಾರದಿಂದ ದೂರಹೋಗುವ ದೇಹವದು. ಅದು . ಅದು ನಿಷ್ಪ್ರಯೋಜಕವಾಗಿ ಸಾಗಿದರೂ-ಮಾಯಾಪಾಶದಿಂದ ಬಿಗಿದ ಅವರ ಸಂಸಾರವು ಕೂಗಿಸುತ್ತಿದೆ. ಆದರೂ ಮರಳಿ ಬಾರದ ಆ ದೇಹ, ಆತೇಜವ್ವಳಿದ ಶರೀರ, ಶ್ಮಶಾನದ ಮೆಟ್ಟಿಲನ್ನೇರುತ್ತಿದೆ. ಇಷ್ಟೆ ಒಡೆಯ ಇನ್ನು ಸಾಕು. ರಥವನ್ನೇರಿರಿ, ಕಣ್ಣೀರಿಳಿಸಬೇಡಿರಿ. ತಮ್ಮ ಮೃದುಹೃದಯವು ಹೀಗೆ ಕರಗಬಾರದು. ಬಡ ಚೆನ್ನನಿಂದದು ನೋಡಲಾಗದು. ಮನ್ನಿಸಿರಿ. ಈ ದುರ್ದಿನದ ಪಾಲಿಗೆ ನಾನು ಕಾರಣನಾಗಬೇಕಾಯಿತೇ ? ಅಯ್ಯೊ !

ಸಿದ್ಧಾರ್ಥ :— ಚೆನ್ನ, ಶರೀರವಿಡೀ ಬಿಸಿಯೇರುತ್ತಿದೆಯಲ್ಲಾ ! ಈ ಅವಸ್ಥೆಯಿಂದ ಯಾರಿಗೂ ಬಿಡುಗಡೆಯಿಲ್ಲವೆ? ನನಗೂ—ಯಶೋಧರೆಗೂ-ರಾಜವಂಶಕ್ಕೂ ಬಿಡುವಿಲ್ಲವೇ ?

ಚೆನ್ನ :— ಇಲ್ಲ ಪ್ರಭು, ಸಾವಿನಿಂದ ಯಾರೂ ತಪ್ಪಿಸಿಕೊಳ್ಳರು ಜನನದಂತೆ ಮರಣವೆಂಬುದೂ ಮನುಷ್ಯನ-ಸಕಲಜೀವರಾಶಿಗಳ ಬಳವಿಡಿದು ಸಾಗುತ್ತಿದೆ.

ಸಿದ್ಧಾರ್ಥ :— ಚೆನ್ನ, ಇದೋ ನನಗೆ ನಡುಕವಾಗುತ್ತಿದೆ. ನನ್ನನ್ನಾಧರಿಸಿಕೊ. ಇನ್ನೀ ದೃಶ್ಯವನ್ನು ನೋಡಲಾರೆ-ತಡೆಯಲಾರೆ-ಅರಮನೆಯನ್ನು ಕುರಿತು ಸಾಗು ಚೆನ್ನ.

ಚೆನ್ನ :— ಬನ್ನಿರಿ ನನ್ನೊಡೆಯ, ಕಣ್ಣೀರಿಡದಿರೆಂದು ಬೇಡುವೆನು. ಇದೋ, ಈ ದೀನನನ್ನು ಮನ್ನಿಸಿರಿ. ಈ ಬಡ ಚೆನ್ನನನ್ನಾಧರಿಸಿ ರಥವನ್ನೇರಿರಿ.

× × ×

ಕೂದಲನ್ನು
ಸೊಂಪಾಗಿ ಮೃದುವಾಗಿ
ಗುಂಗುರು ಗುಂಗುರಾಗಿ
ನೀಳವಾಗಿ
ಬೆಳೆಸುತ್ತದೆ
ನೀರ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು

ದೃಶ್ಯ ೨

ನಿರೂಪಕ :— ಪುರಪ್ರಯಾಣವು ಕೊನೆಗೊಂಡ ಅದೇ ರಾತ್ರಿ! ಅರಮನೆಯ ವಾತಾವರಣವೆ ವಿಕ್ಷಿಪ್ತ ಕೋಲಾಹಲದಲ್ಲಿ ನೆಲೆನಿಂತಿದೆ. ಸಮಸ್ಯೆಗಳ ತಾಕಲಾಟದಲ್ಲಿ ತೊಳಲಾಡಿ, ಬೆಂದು ಬೇಗುದಿಗೊಂಡ ಸಿದ್ಧಾರ್ಥ. ಅಂತಃಪುರದ ಶಯ್ಯಾಗಾರದಲ್ಲಿ ಪವಡಿಸಿದ್ದಾನೆ. ಬಳಿಯಲ್ಲಿ ನಿಶ್ಚಿಂತೆಯಿಂದ ಒರಗಿದ ಯಶೋಧರೆ. ಆದರೂ ಅದೇನಾಛಾಯೆಗಳು?

ಸಂಸಾರ :— ಎಲವೋ ನೀನಾರು ? ನಿನ್ನೀವೇಷವೇನು ? ಕಾವಿಯುಡುಗೆಯ ನಿನ್ನೀ ಹೇಯರೂಪವೇನು ? ನನ್ನೀ ಗೃಹಾಂಗಣವನು-ನನ್ನೀವಾಸಗೃಹವನ್ನು ಯಾರ ಅಜ್ಞೆಯಿಂದ ಪ್ರವೇಶಿಸಿರುವೆ ? ನಡೆ ದೂರ ಸರಿ !

ವಿರಕ್ತಿ :— ತನ್ನರಿವನ್ನು ತಿಳಿಯದೆ, ಮೂಢನಂತೆ ವರ್ತಿಸುತ್ತಿರುವೆಯಲ್ಲಾ ? ಪರಿಸ್ಥಿತಿಯನ್ನರಿಯದೆ ಇನ್ನೂ ನಿನ್ನೀ ಆಟೋಪವನ್ನು ಎತ್ತಿಹಿಡಿಯುತ್ತಿರುವೆಯಾ ? ಈ ನಿನ್ನ ಶೃಂಗಾರ, ಈ ನಿನ್ನೀ ವಿಲಾಸ, ಇಂದೀ ಭವನದಿಂದ ಮಾಯಲು ಯತ್ನಿಸುತ್ತಿದೆ. ಕ್ಷಣಿಕವಾದ ನಿನ್ನೀ ವಿಭ್ರಮ-ವಿಲಾಸಗಳು ಈ ವಾಸಗೃಹವನ್ನು ಮುತ್ತಿಟ್ಟುಕೊಳ್ಳುವುವೆಂದೆಣಿಸುವೆಯಾ ? ಬರಿಯ ಭ್ರಮೆಯಿದು.

ಸಂಸಾರ: ಸುಖವಾಗಿ ಪವಡಿಸಿರುವ ನನ್ನೊಡೆಯನ ಶಾಂತಿಗೆ ಭಂಗವನ್ನು ನೀತಬೇಡ ದಾರಿತಪ್ಪಿ ಬಂದ ನೀನು, ನಿನ್ನ ನಿಜವಾದ ದಾರಿಯನ್ನು ಹಿಡಿ. ಇನ್ನೊಮ್ಮೆ ಈ ಮನೆಗೆ-ಈ ರಾಜ್ಯಗೃಹಕ್ಕೆ ಅಡಿಯಿರಿಸದಿರು. ಇಲ್ಲಿಯ ವೈಭವ-ಸುಖಸಂತತಿಗಳ ಮುಂದೆ ನಿನ್ನೀ ವೇಷವು ನನ್ನ ನೋಟವನ್ನೇ ನಾಚಿಸುತ್ತಿದೆ ಅದೇ ಮಹಾದ್ವಾರದ ಬಳಿಯಿಂದಲೇ ಸಾಗು ! ನಿನ್ನಂತಹವರಿಗೆ ಆ ದ್ವಾರವು ಸದಾ ತೆರವಾಗಿದೆ. ಶೀಘ್ರವಾಗಲಿ ಪ್ರಯಾಣ ! ತಡೆಯದಿರು. ಅದೋ, ಮುಂದಡಿಯಿಡುವೆಯಾ ?

ವಿರಕ್ತಿ :— ಗೆಳೆಯಾ, ನನಗಾಗಿ ಈ ಉಪದೇಶ ನೀಡುವೆಯಾ ? ಇಂದಿನಿಂದ ನನ್ನ ಪಾಲಿಗೊದಗುವ ಈ ಅನಂತ ಸುಖಪ್ರಾಪ್ತಿಯಲ್ಲಿ ನೊಂದುಕೊಳ್ಳುವೆಯಾ ? ಮತ್ಸರಿಸುವೆಯಾ ? ಬೇಡ-ಬೇಡ......

ಸಂಸಾರ :— (ಗಹಗಹಿಸಿ ನಕ್ಕು) ನಿನ್ನ ಪಾಲಿಗೊದಗುವ ಅನಂತ ಸುಖ! ಅದಾವ ಆಶೆಯನ್ನಿರಿಸಿ ಬಂದಿರುವಿ ? ಈ ವೈಭವದ

ಮುಂದೆ ಬರಲು ನಿನ್ನೀ ಬೋಳುತಲೆಗೆ ನಾಚಿಕೆಯೆನಿಸದೆ? ನಿನ್ನೀ ವಿಕೃತವೇಷಕ್ಕೆ ಈ ಗೃಹವೇ ನಗುವುದೆಂಬುದನ್ನು ನೆನೆಸಿ ಇನ್ನಾದರೂ ಸಾಗು.... ಹಿಂದಿರುಗು!

ವಿರಕ್ತಿ:— ಅಂದುಕೊ ಗೆಳೆಯಾ! ಏನೇನನ್ನು ಹೇಳಬೇಕೆಂದಿರುವೆಯೋ ಅದೆಲ್ಲವನ್ನೂ ಇಂದೇ ಹೇಳಿ ಮುಗಿಸಿ ಬಿಡು. ನಾಳೆಗೆಂದು ಉಳಿಸಬೇಡ. ನಾಳೆಯು ನಿನ್ನದಾಗದು.

ಸಂಸಾರ: — ತಡೆ, ಮನಬಂದಂತೆ ಗಳುಹಬೇಡ. ಕಾವೇರಿಂದ ಮೆದುಳನ್ನು ಹೀಗೆ ಚೆಲ್ಲಾಡಬೇಡ.

ವಿರಕ್ತಿ:— ಕಾವು! ನೀನೆಸ್ಸುವ ಕಾವು ನನ್ನ ಬಳಿಗಸು ಬಾರದು. ಅವಿವೇಕದಿಂದ ಇಂದಿನ ವರೆಗೆ ನೀನು ಮುಚ್ಚಿಟ್ಟ ವಿಲಾಸ-ವೈಭವಗಳು ಇಂದು ಯಾಥಾರ್ಥ್ಯವನ್ನು ಹೊರಗೆಡಹಿ, ಇದೇ ಗೃಹದಲ್ಲಿ ತಾಂಡವವಾಡುತ್ತಿವೆ. ಈ ರುದ್ರತಾಂಡವದ ಕೊನೆಯು—ನಿನ್ನನ್ನು ಪುಡಿಗುಟ್ಟುವುದರಲ್ಲಿ ಪರಿಣಮಿಸಬಹುದೆಂಬುದನ್ನು ಇನ್ನೂ ನೀನರಿಯೆ! ಆಡಿಕೋ! ಮನಬಂದಂತೆ ನಲಿದಾಡಿಕೋ! ನಿನ್ನ ಅಜ್ಞಾನದ ಮುಂದೆ ನನಗೆ ನಾಚಿಕೆಯಾಗುವುದಿದ್ದರೂ—ಅದನ್ನು ತೋರಗೊಡದೆ—ನಿನ್ನನ್ನು—ಇಂದಿನ ವರೆಗೆ ಅನಂತ ಸುಖಗಳ ಸುಪ್ಪತ್ತಿಗೆಯಲ್ಲಿ ನೆಲೆನಿಂತ ನಿನ್ನನ್ನು—ಒಲುಮೆಯಿಂದ ಆರಾಧಿಸಿ, ನಿನ್ನ ಅಗಲಿಕೆಗಾಗಿ ನೋಯುತ್ತೇನೆ. ಉದ್ವೇಗಭರಿತನಾಗಿ ನೀನು ಆಡಿದ ಮಾತೆಲ್ಲವನ್ನೂ ಸಹಿಸಿಕೊಳ್ಳುವೆ.

ಸಂಸಾರ:— ಇದೋ, ಈ ಸುಖರಾತ್ರಿಯಲ್ಲಿ ಸುಖನಿದ್ರೆಯಲ್ಲಿ ಪವಡಿಸಿರುವ ನನ್ನ ಒಡೆಯನನ್ನು ಎಚ್ಚರಗೊಳಿಸಬೇಡ! ಇರಲಿ! ಇನ್ನು ನನ್ನ ವಿಚಾರ ಬೇಕೆಂದಾದರೆ—ಹಾಗೆಂದು ನಾನೆಣಿಸಿದರೆ— ಇದೋ, ಈ ನಿಂತ ನಿಲುವಿನಲ್ಲೇ ನಿನ್ನನ್ನೂ—ನಿನ್ನ ಸಮಸ್ತ ಪರಿವಾರವನ್ನೂ ಈ ವಿಲಾಸಪಾಶದಿಂದ ಬಿಗಿದು ಸೆರೆಹಿಡಿದು ಕೆಡಹಬಲ್ಲೆ! ಆದರೆ ಅದು ನನಗಿಂದು ಅವಶ್ಯವಿಲ್ಲ. ಅದರಿಂದ ಲಾಭವಿಲ್ಲ. ನಿಮ್ಮಂತಹ ವಿರಕ್ತರನ್ನು—ಈ ಸೋಗನ್ನು—ನಾನು ಸೆರೆಹಿಡಿದರೂ ನನಗದರಿಂದ ತೃಪ್ತಿಬಾರದು. ವ್ಯರ್ಥವಾಗಿ, ಸುಖಕ್ಕೆರವಾಗದ ಮಾತುಗಳನ್ನಾಡಿ ದಣಿಯಬೇಡ ನನ್ನನ್ನೂ ದಣಿಸಬೇಡ.

ವಿರಕ್ತಿ:— ದಣಿವೇಕೆ? ನಾಳೆನಿಂದಲೆ ದೀರ್ಘವಿಶ್ರಾಂತಿಯನ್ನು ಕೈಗೊಳ್ಳಬೇಕಾದ ನಿನಗೆ ದಣಿವೆಂತು ಬರಬಲ್ಲುದು? ಉದ್ರಿಕ್ತನಾಗದಿರು. ನಾಳೆಯ ಮಹಾರಾತ್ರಿಯನ್ನು ಕಂಡು ನೀನೂ ಮುಂದಾಗಬೇಕು. ಅದನ್ನುಳಿದು—ಹೀಗಾಡಬೇಡ.

ಸಂಸಾರ:— ವಿರಕ್ತಿ! ಮುಚ್ಚು ಬಾಯಿ. ಅಭದ್ರಗಳನ್ನಾಡಬೇಡ. ಆಡಿಯ ಮುಂದಿರಿಸಿದರೆ.... ...

ವಿರಕ್ತಿ:— ಏನು ಮಾತುವೆ ನಿರ್ಬಲ ಸಂಸಾರವೆ! ನನಗಾಗಿ, ಇದೋ ಇಲ್ಲಿ ಪವಡಿಸಿರುವ ಆ ಆತ್ಮ ಸ್ವಾಗತವನ್ನು ಬಯಸುವಾಗ, ನಿನ್ನ ಅನುಮತಿಯ ಅಪೇಕ್ಷೆ ನನಗೇಕೆ? ಮುಂದಡಿಯಿಡುವ ನನಗೆ ತಡೆಯಾದರೂ ಹೇಗೆ—ಯಾರಿಂದ ಬರಬೇಕು? ಎಲ್ಲವೂ ನಿನ್ನ ಭ್ರಮೆ! ಭ್ರಮೆ!! ಭ್ರಮೆ!!!

ಸಂಸಾರ:— ಅಭದ್ರವನ್ನಾಡಬೇಡ. ನಿನ್ನೊಡನೆ ಮಾತನಾಡುವುದೂ ಅಭದ್ರವೇ ಸರಿ!

ವಿರಕ್ತಿ:— ಸರಿ. ನನ್ನೊಂದಿಗೆ ನಿನ್ನ ಸರಸ ನಡೆಯದು! ನಡೆದರೂ ಅದು ಅಭದ್ರ!

ಸಂಸಾರ:—ತಡೆ, ತಡೆ. ನಿಲ್ಲಲ್ಲಿ! ಅಭದ್ರವೇದಿಕೆಯನ್ನೇರುತ್ತಿರುವೆಯಾ? ಇನ್ನಿದೋ, ನಿನ್ನೀ ಆಟೋಪ ನನ್ನ ಪೂರ್ಣಶಕ್ತಿಯಲ್ಲಿ ಭಸ್ಮವಾಗದುಳಿಯದು.

ವಿರಕ್ತಿ:— ಸಹಿಸುವೆನು! ನಿನ್ನ ಶಕ್ತಿಯ ಅರಿವು ನನಗಿದೆ. ಆದರೆ ಕಾವು ನನ್ನರಿವಿನಿಂದ ದೂರದಲ್ಲಿಲ್ಲ. ನಿನ್ನ ಹಿಂಸೆಗೆ ನನ್ನೀ ಹೃದಯ ವಿಶಾಲವಾಗಿದೆ!

ಸಂಸಾರ:— ವಿರಕ್ತಿ, ವಿರಕ್ತಿ, ಸಾಗದಿರು. (ಉಚ್ಚಧ್ವನಿ.)

ವಿರಕ್ತಿ:— ಮುಕ್ತಿ, ಮುಕ್ತಿ, ಮುಕ್ತಿಗಾಗಿ ಸಾಗುವೆ! ದೂರಸರಿ!

(ಒಂದು ಉದ್ಘೋಷಪೂರ್ಣ ವಾದ್ಯಧ್ವನಿ.)

ಸಿದ್ಧಾರ್ಥ:— (ತಟ್ಟನೆ ಎದ್ದು) ಮುಕ್ತಿ, ಮುಕ್ತಿ, ಮುಕ್ತಿ!!! ಅದುವೆ ಬೇಕು. ಅದುವೆ ಲೋಕಕಲ್ಯಾಣವನ್ನು ಒದಗಿಸುವ ಅಕ್ಷಯ ಪಾತ್ರೆ! ಇದೋ ಬರುವೆ.... ಬಂದೆ........ಹಾಂ—ಇದೇನು? ಯಾರೂ ಕಾಣಿಸರಲ್ಲ! ಏನೀ ಚಿತ್ರಭ್ರಮೆ! ಆದರೂ—ಪ್ರಪಂಚದ ಕಷ್ಟಗಳಿಂದ ಸಂಸಾರವನ್ನು ಪಾರುಮಾಡಲು ಆ 'ಮುಕ್ತಿ' ಧ್ವನಿಯು ಎಷ್ಟು ಶಕ್ತಿಪೂರ್ಣವಾಗಿದೆ! ಅದರಲ್ಲೆಷ್ಟು ಒಲವಿದೆ........

ಯಶೋಧರೆ:— (ಎಚ್ಚತ್ತು) ಪ್ರಿಯತಮ, ಎಲ್ಲಿರುವಿರಿ? ಅದೇನನ್ನು ಆಡುತ್ತಿರುವಿರಿ! ಪುರಪ್ರಯಾಣದ ಬಳಿಕಲೇ ಸ್ವಚ್ಛವಾಗಿರದ ತಾವು, ಅದೇನನ್ನು ಗುಪ್ತವಾಗಿ ನೆನೆ-ನೆನೆದು ನೊಂದುಕೊಳ್ಳುವಿರಿ? ನನ್ನಲ್ಲಿ ಹೇಳಲಾಗದೆ? ಸಹಭಾಗಿನಿಯಾದ ನಾನೂ ತಮ್ಮೊಡನೆ ಬಾರದಿರುವ ನೋವಾದರೆ, ಇದೋ ಈ ನಿರ್ಭಾಗ್ಯಳನ್ನು ಕ್ಷಮಿಸಿರಿ.... ಅಯ್ಯೋ, ಅದೇಕೆ ಮಾತಾಡಲೊಲ್ಲಿರಿ? ಶೂನ್ಯವಾಗಿ ಅದೇನನ್ನು ನಿಟ್ಟಿಸುತ್ತಿರುವಿರಿ? ಮನ್ನಿಸಿರಿ. ನನಗಾಗಿ—ನಿಮ್ಮ ನಲ್ಲೆಗಾಗಿ—ಒಂದು ಉಸಿರನ್ನಾದರೂ ಕರುಣಿಸಿರಿ. ನನಗದು ಆಶ್ವಾಸನೆಯ ಪರಮಾವಧಿ! ದಯವಿರಿಸಿ ಹೇಳಿರಿ. ಯಾರನ್ನು ಹುಡುಕುತ್ತಲಿರುವಿರಿ?

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಸಿದ್ಧಾರ್ಥ:— ನೊಂದುಕೊಳ್ಳಬೇಡ ಯಶೋಧರಾ; ಸುಶೀಲೆಯಾದ ನಿನ್ನಲ್ಲಿ ಬೇಸರಗೊಳ್ಳಲು ಅದೇನವಕಾಶವಿದೆ? ಸದ್ಗುಣಸಂಪನ್ನೆಯಾದ ನೀನು ನನ್ನನ್ನು ನೆರಳಿನಂತೆ ಅನುಸರಿಸುತ್ತಿರಲು — ಒಂದಿನಿತಾದರೂ ಬೇಸರಕ್ಕೆ ಎಡೆಯಲ್ಲಿದೆ ಪ್ರಿಯೆ? ತಳಮಳಗೊಳ್ಳಬೇಡ. ಸುಖವಾಗಿ ಪವಡಿಸು. ತುಂಬುಗರ್ಭಿಣಿಯಾದ ನೀನು ನೊಂದುಕೊಳ್ಳಬಾರದು .. ....ನೋಡು, ಅದೇಕೆ ನಿಟ್ಟುಸಿರು ಬಿಡುತ್ತಿರುವೆ? ನನ್ನ ಮಾತಿನಲ್ಲಿ ವಿಶ್ವಾಸವಿರಿಸು. ನಿನ್ನಲ್ಲಿ ಈ ನಿಮಿಷದೊಡನೆ ಅನಸ್ಯೂತವಾಗಿ ಹರಿದುಬಂದ ನೂರಾರು ನಿಮಿಷಗಳಲ್ಲೂ ಒಂದು ಹನಿಯಷ್ಟಾದರೂ ಬೇಸರಗೊಂಡಿಲ್ಲವೆಂದೆನ್ನುವ ಈ ಮಾತನ್ನು ನಿನ್ನೆದೆಯಲ್ಲಿ ಅಚ್ಚೊತ್ತಿಕೊ!

ಯಶೋಧರೆ:— ಪ್ರಾಣನಾಥ— ಹಾಗಾದರೆ ಈ ಎಡೆಗುದಿಗೆ ಕಾರಣವೇನು? ನನ್ನಲ್ಲುಸುರಲಾಗದ ಬೇನೆ–ಬೇಸರಿಕೆಗಳಿವೆಯೆ?

ಸಿದ್ಧಾರ್ಥ :— ಇಲ್ಲ ಪ್ರಿಯೆ, ಗಹನವಾದೊಂದು ಯೋಚನೆಯಲ್ಲಿ ಮಗ್ನವಾಗಿದ್ದ ನನ್ನ ಮನಸ್ಸು, ಬಿಡುವಿರದ ವಿಮರ್ಶೆಯಿಂದ ಬಳಲಿ ಅವುದೋ ಒಂದು ದುಃಸ್ವಪ್ನದಲ್ಲಿ ತೊಳಲಾಡಿತು. ಅಲ್ಲಿಯೇ ಎಚ್ಚರಗೊಂಡಿದ ನಾನು, ವಾಸ್ತವ ಸನ್ನಿವೇಶದ ಘಟನೆಯಲ್ಲಿ ಹುಡುಕಾಡಿದೆನು. ಇಂತಹ ಸನ್ನಿವೇಶಕ್ಕೆ ಈ ದಿನವು ನೂತನವಾದುದರಿಂದಲೇ ವಿಕ್ಷಿಪ್ತನಾದೆನಲ್ಲದೆ—ಇದಾವ ಬಗೆಯ ನಿನ್ನ ಅಧೈರ್ಯಕ್ಕೆ ದುಃಖೋದ್ವೇಗಕ್ಕೆ ಎರವಾಗದು. ಸ್ವಸ್ಥಚಿತ್ತಳಾಗಿರು. ಕಲ್ಯಾಣಗುಣಸಂಪನ್ನ ಪುತ್ರಜನನದ–ಅಮಂಗಲ ನಿವೇದನವನ್ನು ಆನಂದದಿಂದ ಕಾಯು! ನೆಮ್ಮದಿಯನ್ನೈದುವೆ.

ಯಶೋಧರೆ:— ನೀವೂ ಮಲಗಿಕೊಳ್ಳಿರಿ! ಗಾಯಕಿಯರನ್ನು ಬರಹೇಳಲೆ? ಉದ್ವೇಗವು ಕಡಿಮೆಯಾಗುವುದು. ನೆಮ್ಮದಿಯನ್ನೈದಿ ಸುಖನಿದ್ರೆ ಬರುವುದು. ಕರೆಯಲೇ?

ಸಿದ್ಧಾರ್ಥ :— ಪ್ರಿಯೆ, ಬೇಡ. ಈ ಪರಿಸ್ಥಿತಿಯಲ್ಲಾವುದೂ ಬೇಡ. ನನ್ನ ಸುಖಕ್ಕೆ ಯಾವ ತೆರನಾದ ಧಕ್ಕೆಯೂ ಬಂದಿಲ್ಲ. ನೀನೇನೂ ಚಿಂತಿಸಬೇಡ. ಇದೋ, ಮಲಗಿಕೊಳ್ಳುವೆ!

ಯಶೋಧರೆ:— ಧನ್ಯಳಾದೆ, ತಮ್ಮ ಪಾದಸೇವೆಯ ಭಾಗ್ಯವು ಸದಾ ನನಗಿರುವಂತೆ ದೇವರನುಗ್ರಹಿಸಲಿ! ಆ ಭಾಗ್ಯವೇ ನನಗೊದಗಿದರೆ ಸಾಕು. ಮಲಗಿಕೊಳ್ಳಿರಿ!

(ಉದ್ವೇಗಭರಿತವಾದ ವಾದ್ಯರವವೊಂದು ಮೆಲುವಾಗಿ ಕೇಳಿಸಿ, ಮೌನವಾಗುವುದು.)

ದೃಶ್ಯ ೩

ನಿರೂಪಕ:— ಯಶೋಧರಾಮಾತೆ ಸುಪುತ್ರನಿಗೆ ಜನನವಿತ್ತ ದಿನ. ರಾಜಗೃಹವಿಡೀ ಆನಂದಕೋಲಾಹಲದಲ್ಲಿ ತೇಲಾಡುತ್ತಿದ್ದ ದಿನ. ಆರಾತ್ರಿ ಚೆನ್ನ ದಿನದ ಸಂಭ್ರಮದಿಂದ ದಣಿದು ಒರಗಿದ್ದಾನೆ. ಆದರೆ ಆ ನಿಶೀಥದಲ್ಲಿ ರಾಜಗೃಹವಿಡೀ ಸುಖನಿದ್ರೆಯಲ್ಲಿರುವ ಕಾಲದಲ್ಲಿ ಅದಾರು ಚೆನ್ನನನ್ನು ಮೆಲುದನಿಯಿಂದ ಕೂಗಿಡುವರು? ...

ಸಿದ್ಧಾರ್ಥ:— ಚೆನ್ನಾ —ಚೆನ್ನಾ—

ಚೆನ್ನ :— ಯಾರದು? (ಬಾಗಿಲು ತೆರೆವ ಸದ್ದು) ಮಹಾಪ್ರಭೋ ತಾವಿಲ್ಲಿ? ಯಾಕಾಗಿ ಬಂದಿರಿ ನನ್ನ ದೊರೆ? ಈ ಬಡವನಿಂದ ಏನು ಸೇವೆಯಾಗಬೇಕು?

ಸಿದ್ಧಾರ್ಥ :— ಚೆನ್ನಾ, ನಿನ್ನಿಂದಾಗತಕ್ಕ ಸೇವೆಯೊಂದಿದೆ. ಈ ಸೇವೆಯಿಂದ ನೀನು ಪ್ರಪಂಚದ ಮಹಾಸೇವೆಯೊಂದನ್ನು ಮಾಡಿದನ್ತು ಕೃತಕೃತ್ಯನಾಗುವೆ!

ಚೆನ್ನ:— ಅದಾವುದು ಪ್ರಭೊ! ಇಂದಿನ ಈ ಸಂತೋಷದಲ್ಲಿ ತಮ್ಮ ಸೇವೆಯನ್ನುಳಿದು ಬೇರೊಂದು ಭಾಗ್ಯವೇನಿದೆ ನನ್ನೊಡೆಯಾ? ಆಜ್ಞಾಪಿಸಿರಿ!

ಸಿದ್ಧಾರ್ಥ :— ಚೆನ್ನ, ನನ್ನ ಮಾತುಗಳಿಂದ ಉದ್ವೇಗಪಡಬೇಡ. ನೊಂದುಕೊಳ್ಳಬೇಡ.

ಚೆನ್ನ :— ಎಂತಹ ಪರಿಸ್ಥಿತಿಯು ಬಂದರೂ ತಡೆದುಕೊಳ್ಳಬಲ್ಲೆ. ಆದರೆ ನನ್ನೊಡೆಯನಿಗೆ ಯಾವ ಬಗೆಯ ಕೇಡೂ ಉಂಟಾಗದಿದ್ದರೆ ಸಾಕು.

ಸಿದ್ಧಾರ್ಥ :—ಚೆನ್ನ, ನಿನ್ನ ಹೃದಯವು ಎಷ್ಟು ಸರಲವಾಗಿದೆ! ನಿಷ್ಕಾಮವೃತ್ತಿಯ ನನ್ನ ಗೆಳೆಯಾ, ನನಗಾಗಿ ಒಂದು ಉಪಕಾರವನ್ನು ಮಾಡು. ಚೆನ್ನಾ—

ಚೆನ್ನ :— ಏನು ನನ್ನೊಡೆಯಾ?

ಸಿದ್ಧಾರ್ಥ :— ಚೆನ್ನ, ಇಂದು ಚೈತ್ರಮಾಸದ ಪೂರ್ಣಿಮಾ ರಾತ್ರಿ! ಇದೊಂದು ಮಹಾರಾತ್ರಿ! ವಿಶ್ವವಿಡೀ ಈ ಬೆಳ್ದಿಂಗಳ ಛಾಯೆಯಲ್ಲಿ ಎಲ್ಲವನ್ನೂ ಮರೆತು ಸುಖವಾಗಿ ಒರಗಿದೆ. ಈ ಸುಖವನ್ನು ಅಮಾವಾಸ್ಯೆಯ ಕಗ್ಗತ್ತಲೆಯಲ್ಲಿ ಬೀಳಾಗಿಸದಂತೆ ಮಾಡುವ ಯತ್ನಕ್ಕಾಗಿ ನಾನಿಂದು ತೆರಳಲಿರುವೆ!

ಚೆನ್ನ :—ಅಯ್ಯೋ, ಅದೇನು ನನ್ನೊಡೆಯ ಹಾಗೆಂದರೆ— ? ದೇವರೇ ಎಲ್ಲಿಗೆ ತೆರಳಲಿರುವಿರಿ? ಬೇಡ ಪ್ರಭೊ! ಈ ದೀನನ ಜೀವಿತಕ್ಕೆ ಆಧಾರವಾದ ಭಾವೀರಾಜ್ಯದ ಚಕ್ರವರ್ತಿಯಾದ ತಾವು.... ಅಯ್ಯೊ ಬೇಡ ಬೇಡ!

ಸಿದ್ಧಾರ್ಥ :— ಚೆನ್ನ, ನೀನು ದೀನನಾಗಲಾರೆ! ವಿಶ್ವೋಪಕಾರಿಯಾಗುವೆ. ಮರುಗಬೇಡ. ಈ ಅಪಾರವಾದ ದುಃಖರಾಶಿಯಲ್ಲಿ ಬೇಯುತ್ತಿರುವ ಜನರ ದುಃಖನಿವಾರಣೆಗಾಗಿ ಹೊರಟಿರುವ ನನ್ನನ್ನು—ನೀನು....ನನ್ನ ಚೆನ್ನ ಆನಂದೋದ್ರೇಕದಿಂದ ಅಗಲ ಬೇಕಾದಾಗ— ಅದನ್ನರಿಯದೆ ಮರುಗುವೆಯಾ? ಪ್ರಪಂಚದ ದುಃಖರಾಶಿಗಳ ಮೊತ್ತವನ್ನು ತೋರಿದ ಉಪದೇಶಿಸಿದ ನೀನು ನನ್ನ ಬಂಧುವು!

ಚೆನ್ನ :—ಆದರ ಪರಿಣಾಮವು ಹೀಗಾಗಬಹುದೆಂದರಿತಿದ್ದರೆ– ಈ ಬಡವನಿಂದ ಆ ಮಹಾಪರಾಧವಾಗುತ್ತಿರಲಿಲ್ಲ. ತಮ್ಮ ಕಣ್ಣೀರನ್ನು ಕಂಡ ಮಹಾಪಾಪಿ ನಾನು!

ಸಿದ್ಧಾರ್ಥ :— ಹಾಗೆನ್ನದಿರು ಚೆನ್ನ! ನೀನು ಪಾಪಿಯಲ್ಲ. ಪ್ರಪಂಚದ ಸೇವೆಯನ್ನು ನನ್ನಿಂದ ಮಾಡಿಸಲು ಅದಕ್ಕಾಗಿ ಹೆಬ್ಬಾಗಿಲನ್ನು ತೆರೆದು ತೋರಿದ ನನ್ನ ಗುರು ನೀನು!

ಚೆನ್ನ :— ಅಯ್ಯೊ, ಈ ನಿರ್ಭಾಗ್ಯನು ಏನನ್ನು ಮಾಡಿದನು? ನನ್ನೊಡೆಯಾ, ಓಗಾವರಿ ರಾಣಿಯವರು, ತಮ್ಮ ಭಾಗ್ಯಪುತ್ರನು.... ಪ್ರಭೋ ಇವರ ಗತಿಯೇನು?

ಸಿದ್ಧಾರ್ಥ :— ಚೆನ್ನ–ಯಾರಿಗಾಗಿ ಯಾರಿರುವರು? ನೀನೇ ಯೋಚಿಸು! ನಾವು ಕಂಡ ಸತ್ಯವೇನು? ಆ ಸತ್ಯದರಿವಿನಲ್ಲೂ ನೀನಾಡುವ ಈ ಮಾತೇನು?

ಚೆನ್ನ :— ಪ್ರಭೋ, ಈ ಬಡವನಿಗೆ ಏನೂ ತೋರದು! ತಾವು ಯಾರನ್ನೂ ಏನನ್ನೂ ಬಿಟ್ಟು ಅಗಲಬಾರದು. ಅಷ್ಟಾದರೆ ಸಾಕು. ಇದೋ.........ಇದೋ.... ..

ಸಿದ್ಧಾರ್ಥ :— ಚೆನ್ನಾ–ಅದೇಕೆ ಕಣ್ಣೀರಿಳಿಸುವೆ? ಎದ್ದೇಳು! ನನ್ನ ಪಾದಗಳನ್ನು ಅದೇಕೆ ಕಣ್ಣೀರಿನಿಂದ ತೋಯಿಸುತ್ತಿರುವೆ? ಹಾಗಾಗಬಾರದು! ನೋಡು. ನನ್ನನ್ನು ನೋಡು. ನನಗಾಗಿ–ಲೋಕಕ್ಕಾಗಿ—ಒಂದು ಉಪಕಾರವನ್ನು ಮಾಡು.

ಚೆನ್ನ :— ಏನಾಗಬೇಕು ನನ್ನೊಡೆಯಾ? ನನ್ನ ನಾಲಗೆಯೇ ತಡವರಿಸುತ್ತಿದೆ!

ಸಿದ್ಧಾರ್ಥ :—ಚೆನ್ನಾ, ಇದೋ ವಿಶಾಲಜಗತ್ತನ್ನು ನೋಡು. ಹುಟ್ಟು-ಸಾವುಗಳ ಆರ್ತಧ್ವನಿಯ, ಚೀರಾಟದ, ಕಣ್ಣೀರ ಕೋಡಿಯ ದುರಂತಗಳನ್ನು ನೋಡು. ಇದೆಲ್ಲವನ್ನು ಕಂಡೂ–ಇನ್ನೂ ಇದರಲ್ಲಿ ತೊಳಲಾಡಿ ಉರುಳಾಡಿ ನವೆಯಬೇಕೇ? ಈ ಕಷ್ಟದಿಂದ ಜನರು ಪಾರಾಗಲು ಸಾಧ್ಯವಿಲ್ಲವೇಕೆ ಚೆನ್ನಾ! ಹೇಳು, ಹೇಳು.

ಚೆನ್ನ : ಒಡೆಯಾ, ನನಗೇನೂ ತೋಚದು. ಅಷ್ಟು ಪ್ರಬುದ್ಧವಾಗಿಂದ ಹೃದಯವಿದು. ಮನ್ನಿಸಿ.

ಸಿದ್ಧಾರ್ಥ :— ಚೆನ್ನ, ಸಾಧ್ಯವಿದೆ. ನಿನ್ನೊಲವಿದ್ದರೆ ಸಾಧ್ಯವಿದೆ. ಈ ಬೆಳುದಿಂಗಳು ಶಾಶ್ವತವಾಗಿರಲು ಸಾಧ್ಯವಿದೆ.

ಚೆನ್ನ :— ಹೇಗೆ, ನನ್ನೊಡೆಯಾ?

ಸಿದ್ಧಾರ್ಥ :— ಅದಕ್ಕಾಗಿಯೆ ಮುಂದಡಿಯಿಡುವೆ. ಇನ್ನು ಕೊರಗಬೇಡ; ನೋಯಬೇಡ. ಇಂದಿನ ದಿನಕ್ಕಿಂತ ಹಿರಿದು ನಾಳೆಯಲ್ಲ. ನಾಳೆಗೆಂದರೆ ಅದು ಹಲವಾರು ಬಯಕೆಗಳಲ್ಲಿ ಸಿಲುಕಿ ನೂರಾರು ನಾಳೆಗಳ ಕಂತೆಯಾಗಿ ಕಡಿದಿಕ್ಕಲು ಕಷ್ಟವಾಗುವುದು. ಚೆನ್ನ!

ಚೆನ್ನ :— ನನ್ನೊಡೆಯಾ.......

ಸಿದ್ಧಾರ್ಥ :— ಶಾಂತಿಯಿಂದಿರು. ಯಾರಲ್ಲಿಯೂ ಏನನ್ನೂ ಉಸುರಬೇಡ. ಈ ರಾತ್ರಿಯ ಮೂರನೆಯ ಯಾಮದ ಕಾಲದಲ್ಲಿ ನನಗಾಗಿ ನೀನೂ ಕಂಥಕನೂ ಅರಮನೆಯ ಹೆಬ್ಬಾಗಿಲಲ್ಲಿ ಕಾದಿರ್ರಿ; ವಿಶ್ವದ ಸೇವಾಭಾಗ್ಯವನ್ನು ಪಡೆಯಲು ಹೊರಟ ನನಗಾಗಿ–ಕಾದಿರಿ! ನಾನು ಅದೇ ವೇಳೆಯಲ್ಲಿ ಬರುವೆನು. ವಿಶ್ವದ ದುಃಖಸಂತತಿಯನ್ನು ನಿರ್ಮೂಲಗೊಳಿಸಲು ಹೊರಟುಬರುವೆನು....ಚೆನ್ನಾ, ಅದೇನು ಮೌನನಾಗಿರುವೆ?

ಚೆನ್ನ :— ಇನ್ನೇನು ಮಾಡಬೇಕು ನನ್ನೊಡೆಯಾ? ಈ ನಿರ್ಭಾಗ್ಯನು ಇನ್ನೇನನ್ನು ಕೇಳಬೇಕು ನನ್ನೊಡೆಯಾ? "ಅಗಲುವೆನು" ಎಂಬ ದುಃಖಭರಿತ ವಚನವನ್ನೂ ಕೇಳಬೇಕೇ?

ಡೋಂಗರೆ ಬಾಲಾಮೃತ
ಮಕ್ಕಳಿಗೆ
ಆರೋಗ್ಯವನ್ನೂ ಬಲವನ್ನೂ
ಕೊಡುತ್ತದೆ.

ಸಿದ್ಧಾರ್ಥ :— ಚೆನ್ನ–ಈ ಅಗಲಿಕೆಯ ಬೇನೆಯನ್ನು ತಡೆಹಿಡಿ! ನಾನೂ ಕಠೋರಹೃದಯನಲ್ಲ! ಪ್ರೇಮವನ್ನರಿಯದವನಲ್ಲ. ಅಮರಪ್ರೇಮಕ್ಕಾಗಿ–ಅದರ ಸಾಧನೆಗಾಗಿ ಹೊರಟಿರುವ ಒಬ್ಬ ಯಾತ್ರಿಕ. ಇದನ್ನು ನೆನೆಯು! ನಿನ್ನ ಸೇವೆಯನ್ನು ಮಾಡು....ಶುಭದ ಹಾರೈಕೆಯಲ್ಲಿರು!

ಚೆನ್ನ :— ಅಪ್ಪಣೆ ಪ್ರಭೊ!

ಸಿದ್ಧಾರ್ಥ :— ಚೆನ್ನ, ನಾನಿನ್ನು ಬರಲೇ? ತುಸುಹೊತ್ತು ಸುಖವಾಗಿ ಪವಡಿಸು! ನಾನು ಹೇಳಿದ ವೇಳೆಯಲ್ಲಿ ಕಾದಿರಲು ಮಾತ್ರ ಮರೆಯಬೇಡ. ನೀವಿಬ್ಬರೂ ನನ್ನ ಆತ್ಮೀಯರು! ನಿಮಗರಿಯದೆ–ನನ್ನ ಅಗಲಿಕೆಗೆ ಪೂರ್ಣತೆಯಿಲ್ಲ. ಚೆನ್ನ–ಸುಖವಾಗಿ ಪವಡಿಸು!

ನಿರೂಪಕ :— ಚೆನ್ನನಿಗೆಲ್ಲಿದೆ ಸುಖನಿದ್ರೆ! ಜೀವನಾಧಾರ-ಸ್ವಾಮಿಯ ಅಗಲಿಕೆಯನ್ನು ಆ ಬಡ–ಜೀವವೆಂತು ಸೈರಿಸಬಲ್ಲುದು? ಆದರೂ ಒಡೆಯನಿಗಾಗಿ ಅಲ್ಲೇ ಕುಸಿದೊರಗಿದ್ದಾನೆ.

× × × ×

ದೃಶ್ಯ ೪

(ಮೆಲುವಾದ ಗೀತಧ್ವನಿ. ರಾತ್ರಿಯು ಭೀಕರತೆಗೆರವಾಗುವಂತಿರಬೇಕು)

ನಿರೂಪಕ :— ಆ ರಾತ್ರಿಯು ಮೂರನೆಯ ಯಾಮದ ಪೂರ್ವ-ಭಾವಿಯಾದ ಒಂದು ಕ್ಷಣ. ರಾಜಕುಮಾರ ಸಿದ್ಧಾರ್ಥ ಅಂತಃಪುರದ ಬಾಗಿಲೆಡೆಗೆ ಬಂದಿದ್ದಾನೆ.

ಸಿದ್ಧಾರ್ಥ :— ಆಹಾ ! ಎಲ್ಲರೂ ಸುಖನಿದ್ರೆಯಲ್ಲಿರುವರು. ಸುಖಸ್ವಪ್ನದಲ್ಲಿ ಮೈಮರೆತು ನಿದ್ರೆಯಲ್ಲಿದ್ದಾಳೆ ಯಶೋಧರೆ. ದಣಿದು ಒರಗಿರುವರು ದಾಸಿಯರು. ಈ ಪರಿಸ್ಥಿತಿಯಲ್ಲೂ ಆ ಎಳಮಗು ನಗುತ್ತಿದೆಯಲ್ಲಾ ! ಯಾವ ಭಾಗ್ಯವನ್ನು ಕಂಡು ? ನಿಷ್ಕಲ್ಮಷವಾದ ಆ ಎಳಗೂಸಿನ ಹೃದಯದಲ್ಲಿ ಭಾವಿಯ ಕಲ್ಯಾಣವು ಭಾಸವಾಗುತ್ತಿರ-ಬಹುದು ! ಮೆಲುವಾಗಿ ಯಶೋಧರೆಯನ್ನು ದನಿಗೂಡಿ ಎಚ್ಚರಿಸಿ ಬಿಡುವನ್ನು ತಿಳುಹಲೇ ? ಮಗುವಿಗೊಂದು ಮುತ್ತಿಟ್ಟು ನನ್ನ ಕೊನೆಯ ಸಂದೇಶವನ್ನು ಕಿವಿಯಲ್ಲೂದಲೆ ?

(ದೂರದಿಂದ ಒಂದು ಕರೆ ಕೇಳಿಸುವುದು.)

ಕರೆ :— ಸಿದ್ಧಾರ್ಥ, ಸಿದ್ಧಾರ್ಥ........

ಸಿದ್ಧಾರ್ಥ :— ಯಾರದು ? ಯಾರದು ?

ವಿರಕ್ತಿ :— ನಾನು, ಯಾರೆಂಬುದನ್ನು ಇನ್ನೂ ನೀನರಿಯೆಯಾ? ನಿನ್ನನ್ನು ಎಂದೆಂದೂ ಬಿಟ್ಟಗಲಲಾರದ ವಿರಕ್ತಿ ! ಸಿದ್ಧಾರ್ಥ........

ಸಿದ್ಧಾರ್ಥ :— ಏನಾಗಬೇಕು ? ಆಜ್ಞಾಧೀನನಿರುವೆ !

ವಿರಕ್ತಿ :— ಸಿದ್ಧಾರ್ಥ, ಎಚ್ಚರಿಕೆಯಿಂದಿರು. ಈ ಪರಿಸ್ಥಿತಿಯಲ್ಲಿ ನೀನವರನ್ನು ಎಚ್ಚರಿಸಿದರೆ, ಭವದ ಬಂಧನದಲ್ಲಿ ತೊಡಕಿ ಕಷ್ಟಕ್ಕೀಡಾ-ಗುವೆ. ಇಲ್ಲಿಂದಲೆ-ಮೌನಸಂದೇಶವನ್ನಿತ್ತು ನಿವೃತ್ತನಾಗು. ಅದು ಸಾಕು. ತಡೆಯಬೇಡ.

ಸಿದ್ಧಾರ್ಥ :— ಸರಿ, ಸರಿ ! ಇನ್ನು ತಡಮಾಡಬಾರದು. ಬರುವೆನು; ಬರುವೆನು. ನನಗಾಗಿ ಯಾರೂ ಕೊರಗಬೇಡಿರಿ. ನಿಮಗೆಲ್ಲ ಮಂಗಳವಾಗಲಿ.

× × × ×

ದೃಶ್ಯ ೫

ನಿರೂಪಕ :— ಅನುಮಾನದಿಯ ದಡ. ಕಂಥಕನನ್ನು ಆನಂದದಿಂದ ಚಪ್ಪರಿಸಿ—ಚೆನ್ನನ ಹೆಗಲಿಗೆ ಹೆಗಲನ್ನೊಡ್ಡಿ ಸಿದ್ಧಾರ್ಥ ನಿಶ್ಚಳವಾಗಿ ಹರಿವ ನದಿಯೆಡೆಗೆ-ನದಿಯಾಚೆಯ ವನದೆಡೆಗೆ— ನಿಟ್ಟಿಸುತ್ತಿದ್ದಾನೆ.

ಸಿದ್ಧಾರ್ಥ :— ಚೆನ್ನ, ನಿನ್ನ ಸಹಾಯದಿಂದ ಲೋಕಕ್ಕೆ ಒಳ್ಳೆಯದಾಗಲಿ ! ನಿನ್ನ ಪ್ರೀತಿಗಾಗಿ ಸದಾ ನಿನ್ನನ್ನು ನಾನು ಪ್ರೀತಿಸು ತ್ತೇನೆ. ಕಂಥಕನನ್ನು ಕರೆದುಕೊಂಡು ಹೋಗು, ಇದೋ ! ಈ ಆಭರಣಗಳನ್ನು-ಅಲಂಕರಿಸಲು ಬಾರದ ಇವುಗಳನ್ನು ಪಿತೃಪಾದರ ಚರಣದಲ್ಲಿ ಅರ್ಪಿಸು........ಕಂಥಕಾ, ಜನತೆಯ ಹಿತಕ್ಕಾಗಿ ನನ್ನನ್ನು ಹೊತ್ತು ತಂದ ನಿನಗೆ ಅನಂತ ಧನ್ಯವಾದಗಳು. ಚೆನ್ನ, ಈ ಮುದ್ದು-ಕಂಥಕನನ್ನು ನೋಯಿಸದೆ-ಬಳಲಿಸದೆ— ಸಾಕು.

ಚೆನ್ನ :— ಆಗಲಿ ನನ್ನೊಡೆಯ ! ಅಯ್ಯೊ, ನಿಮ್ಮನ್ನಗಲಿದ ತಂದೆ ಮತ್ತು ಪ್ರಜೆಗಳ ಕಷ್ಟವನ್ನೆಂತು ಕಾಣಲಿ ! ಅಯ್ಯೊ, ಕೈಹಿಡಿದ ಮಡದಿ-ಆ ಮಗು-ಒಡೆಯಾ........

ಸಿದ್ಧಾರ್ಥ :— ಚೆನ್ನ-ನಶ್ವರವಾದೀ ಬಂಧುಪ್ರೀತಿಯನ್ನು ನೆನೆಯಬೇಡ. ಸಿಂಹಾಸನಕ್ಕಾಗಿ ನಾನು ಹುಟ್ಟಿಲ್ಲ. ಈ ಅಮರ-ವಾದ ರಾಜ್ಯಪ್ರಾಪ್ತಿಗಾಗಿ ಮುಂದಡಿಯಿಟ್ಟಿರುವೆ. ನೀನಿನ್ನು ಹೊರಡು. ಅದೋ ಬೆಳ್ಳಿ ಮೂಡಿತು. ಹೊರಡು !

ಚೆನ್ನ :— ಪ್ರಭೋ, ಒಂದು ಅರಿಕೆ. ತಮ್ಮ ಸೇವಾಭಾಗ್ಯ-ದಲ್ಲಿ ಈ ಬಡವನಿಗೂ ಒಂದು ಎಡೆಯನ್ನೀಯುವಿರಾ ?

ಸಿದ್ಧಾರ್ಥ :— ಈಯಬಹುದಿತ್ತು; ಆದರೆ ನೀನೀವಾರ್ತೆ-ಯನ್ನು ಅರಮನೆಯಲ್ಲಿ ತಿಳಿಸದಿದ್ದರೆ ಅವರೇನೆಂದೆನ್ನುವರು ? ಏನು ಮಾಡುವರು ? ಯೋಚಿಸು. ಹುಡುಕಿ ಹುಡುಕಿ ವ್ಯಥೆಪಡುವರು. ಅದಾಗದು. ನೀನು ಹಿಂತಿರುಗು....ಕಂಥಕ, ಅದೇಕೆ ಜೋಲುಮೋರೆ ಮಾಡಿ ನನ್ನನ್ನು ನಿಟ್ಟಿಸುತ್ತಿರುವೆ ? ಚೆನ್ನನೊಡನೆ ಸಾಗು. ನಿಮಗೆಲ್ಲ ರಿಗೂ ಮಂಗಳವಾಗಲಿ ! ಇದೋ, ನಾನು ಬರುವೆ. ಚೆನ್ನ ಸಾಗು ಗೆಳೆಯಾ ! ಕಂಥಕ, ಚೆನ್ನನೊಡನಾಡಿಯಾಗಿ ಅಡಿಯಿಡು. ಓಂ— ಓಂ – ಓಂ............

ಚೆನ್ನ :— ಪ್ರಭೋ, ಹೋಗಿಯೇ ಬಿಟ್ಟಿರಾ ?

ರಾಗ—ಬೃಂದಾವನೀ ಸಾರಂಗ-ತಾಳ-ಕಹರವಾ.

ಪ್ರಭುವರಾ—ಕಾಣೇ—ಅನಾಥನಾನಾದೇ
ಪೋದೆನೀನು—ದೇವಾ !
ಕೃಪಾದೃಷ್ಟಿ ನೀಡೋ |
ಸತ್ಯ ಶಾಂತಿ ತೇಜ—ಮೋದವೈ ಸಹಜ
ದಯಾಮಯ—ನೀನೆ—ಗತಿಯುಂಟೇನಿನ್ನು || ಪ್ರಭುವರಾ ||

ಪ್ರಭುವರಾ, ಇನ್ನು ಕಾಣಿಸಲಾರಿರಾ ? ನನ್ನನ್ನಗಲಿ ತೆರಳಿಯೇ ಬಿಟ್ಟಿರಾ ? ಪ್ರಭೊ ! ಬಟ್ಟಬಯಲಲ್ಲಿ ದಾರಿಗಾಗಿ ಮಿಡುಕಾಡುವ ಹಕ್ಕಿಯಂತೆ ನನ್ನನ್ನೀ ದುರ್ಗಮಸನ್ನಿವೇಶದಲ್ಲಿ ಸಿಲುಕಿಸಿ ತಾವು ಪಾರಾದಿರಾ ?....ಅಹೊ ! ಕಂಥಕಾ, ನೀನೆಲ್ಲಿರುವೆ ?........

........ಅಯ್ಯೊ ! ಅದೇಕೆ ಅಲ್ಲಿ ಕುಸಿದಿರುವೆ ? ಮಾತಾಡಲೋ ಯೇಕೆ ? ವಿಧಿಯೆ ? ಕಂಥಕನನ್ನೇನು ಮಾಡಿದೆ ? ಗೆಳೆಯಾ, ನೀನು ಹೊರಟುಹೋದೆಯಾ ?....ಇನ್ನೇನು ? ದುರ್ವಿಧಿ ನನ್ನೊಬ್ಬನನ್ನು ಮಾತ್ರ ಉಳಿಸಿದೆ. ಆಗಲಿ ! ಒಡೆಯನ ಆಜ್ಞೆಯ ಪಾಲನೆಗಾಗಿ ದೇಹವನ್ನು ಹೊರಬೇಕು !........ಪ್ರಭೊ ! ನಿನಗಿದೋ ವಂದನೆ ನನ್ನನ್ನನುಗ್ರಹಿಸು ಒಡೆಯಾ !!

× × × ×

ಜಯ

ದೃಶ್ಯ ೬

ನಿರೂಪಕ :— ಸಿದ್ಧಾರ್ಥ ಸಂನ್ಯಾಸಿಯಾಗಿ ಗೌತಮನೆಂಬಭಿಧಾನದಿಂದ ಆರುವರ್ಷಗಳ ಕಠಿಣ ತಪಸ್ಯೆಯಲ್ಲಿ ತೊಳಲಾಡಿ-ಪ್ರಾಪಂಚಿಕ ಬಂಧನಗಳನ್ನು ಕಳೆದು-ದುರಂತವಾದ ಅಗಲಿಕೆಯನ್ನು ಮರೆತು-ಮಾರನ ದುರ್ಭೇದ್ಯ ಪೀಡೆಗಳಿಂದ ವಿಮುಕ್ತಿ ಹೊಂದಿ-ಕೃಶನಾಗಿ, ಅದೊ! ಸುಜಾತೆಯಿತ್ತ ಅಮೃತಾನ್ನದಿಂದ ಚೇತನೋನ್ಮುಖನಾಗಿ ಜ್ಞಾನದೀಪದ ಪ್ರಕಾಶವನ್ನು ಬೋಧಿವೃಕ್ಷದಡಿಯಲ್ಲಿ ಕಂಡು ಆನಂದಿತನಾದನು. ಅದೊ-ಅದಾರು ?

ಬುದ್ಧ :— ಆಹಾ! ಏನೀ ಬೆಳಕು. ಎಂತಹ ಸುಪ್ರಭಾತವಿದು! ಏನು ಮಂಜುಲವಾದೀ ಪಕ್ಷಿಗಳ ಕಲರವ!

ರಾಗ—ಲಲಿತ. ತಾಳ—ಝಂಪ್.

ಶಾಂತಿಸುಧೆ ಸುರಿಯಿತೇ-ತಮವು ತುಂಬಿದ ಜಗದಿ ||
ಕಣ್ಣು ಮನ ತೆರೆಯಿತೇ- ಜೀವ ತೇಜಂ ಮಿನುಗಿ!
ಓ, ಬೆಳಕು! ಎಂ ಮಿನುಗು! ಸುಂದರದ ನವಜನುಮ!
ಭಾವಬೋಧಕ ಕಳೆಯು ಜಿಲ್ಮ ಮನಕಾಯಿತೇ!
ಆವ ಮನದೇ ನಾನು ತೇಜ ಝರಿಯನು ನೋಡಿ
ಓಂ; ತತ್ತ್ವ ಎಂ ಸತ್ಯ ಪಸರಿಸಿಹುದೈ ಜ್ಯೋತಿ ||

ಬುದ್ಧ :— (ಅವ್ಯಕ್ತ ಧ್ವನಿ)........ಓಂ. ಶಾಂತಿ! ಶಾಂತಿ! ಶಾಂತಿ.........ಆನಂದಾ.... ..ಆನಂದಾ........

ನಿರೂಪಕ :— ಆ ಕೂಗು ಆನಂದನನ್ನು ಅರುವತ್ತು ವರ್ಷಗಳ ಹಿಂದಿನ ಅಗಲಿಕೆಯ ಗಂಭೀರದೃಶ್ಯದಿಂದ ಸೆಳೆದೊಯ್ದಿತು. ಆನಂದ- ವಿವಶನಾದ-ಅದೊ.... !!

ಆನಂದ :— ಗುರುದೇವ, ನನ್ನ ಅಜ್ಞಾನಕ್ಕಾಗಿ ಕ್ಷಮಿಸಿರಿ. ತಮ್ಮ ಅಗಲಿಕೆ-ಸಾಧನೆ-ತಪಸ್ಯೆಗಳ ಮುಂದೆ ನಾನು ಅಲ್ಪ! ನನ್ನನ್ನು ಅನುಗ್ರಹಿಸಿರಿ!

ಬುದ್ಧ :— ಮರುಗಬೇಡ-ಕಂದಾ! ಇತ್ತ ನೋಡು ಈ ದಿನ ವೈಶಾಖಪೂರ್ಣಿಮಿ. ಕುಜವಾರ. ಅದೇ ನಿಶೀಥದ ಅಂತಿಮ ಯಾಮ! ನಿಶ್ಶಬ್ದ-ನಿಶ್ಚೇಷ್ಟವಾದೀ ಪ್ರಕೃತಿ ನನ್ನೊಲವನ್ನು ಬಯಸುತ್ತಿದೆ. ಪೂರ್ಣಶಾಂತಿಗಾಗಿ ಈ ನಶ್ವರ ಕಳೇವರವನ್ನು ಬಿಡಬೇಕಾಗಿದೆ.

ಆನಂದ ಮತ್ತು ಸಾರಿಪುತ್ರ, ಮೌದ್ಗಲ್ಯಾಯನರು :— ಗುರುದೇವ, ಇದೋ ಚರಣಗಳಲ್ಲಿ ಮಣಿದಿರುವೆವು. ನಮ್ಮನ್ನು ಪೂರ್ಣರನ್ನಾಗಿ ಮಾಡಿರಿ.

ಬುದ್ಧ :— ಎದ್ದೇಳಿ-ಸುತ್ತಲಿರುವ ಈ ಸುಂದರಯಾಮದಲ್ಲಿ ನೆಲೆಗೊಂಡ ಪ್ರಕೃತಿಯನ್ನು ನೋಡಿರಿ! ನಿಮ್ಮೆದೆಯನ್ನು ಈ ನಿಷ್ಕಲ್ಮಷ ಶಾಂತಿಯಿಂದ ತುಂಬಿಕೊಳ್ಳಿರಿ! ಈ ಯಾಮದಲ್ಲೇ ನಾನು ಜೀವನದ ಬಂಧವನ್ನು ಹರಿದೊಗೆದು ಶಾಂತಿಯನ್ನು ಕಂಡಿದ್ದೇನೆ. ವಿಶಾಲ ವಿಶ್ವವೇ-ಬೆಳುದಿಂಗಳಂತಿರುವ ಸುಂದರಶಾಂತಿಯಲ್ಲಿ ನೆಲೆಗೊಂಡುದನ್ನು ಕಂಡಿದ್ದೇನೆ.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) — ಶ್ರೀ. ಭುಜೇಂದ್ರ ಮಹಿಷವಾಡಿ	೧- ೮-೦
ಬಾಳ-ಬಂಡಿ (ಕವನ ಸಂಗ್ರಹ) — ಶ್ರೀ. ಬಾಳ ಬಿ. ಉಪಾಧ್ಯೆ	೦- ೮-೦
ಮೂಲ ಶಿಕ್ಷಣದ ಮೌಲ್ಯಮಾಪಣ — ಶ್ರೀ. ಮಿರ್ಜಿ ಅಣ್ಣಾರಾಯರು	೦-೧೨-೦
ಭರತೇಶನ ನಾಲ್ಕು ಚಿತ್ರಗಳು — ಶ್ರೀ. ಮಿರ್ಜಿ ಅಣ್ಣಾರಾಯರು	೧- ೪-೦
ಶ್ರೀ ಶಾಂತಿಸಾಗರ	೦- ೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. **ಉಗಾರ ಬದ್ರುಕ್** (ಜಿಲ್ಲಾ ಬೆಳಗಾಂವಿ)

ಆನಂದ :— ಅನುಗ್ರಹಿಸಿರಿ ಗುರುದೇವ—

ಬುದ್ಧ :— ಯಾವುದಕ್ಕೆ ಹುಟ್ಟು, ಇರವು ಬೆಳವಿಯಿದೆಯೋ ಅದು ನಾಶಧರ್ಮಾತೀತವಲ್ಲ! ಈ ಸಂಸ್ಕಾರವೇ ವ್ಯಯಧರ್ಮ, ಆದುದರಿಂದ ಅದಕ್ಕಾಗಿ ಕೊರಗಬೇಡಿರಿ. ಅಹಿಂಸೆ-ಸತ್ಯಗಳೆಂಬ ಶ್ವಾಸಕೋಶಗಳಿಂದ ಉಸಿರಾಡಿಸಿರಿ. ಸತ್ಯವು ಜೀವನವನ್ನು ಬೆಳಗುವ-ದಾರಿ- ಅಹಿಂಸೆ ಪರಿವರ್ತನಗೊಳಿಸುವ ಮಾರ್ಗ. ನನ್ನ ಒಲವಿನ ಆನಂದ! ಅನಂತದಲ್ಲಿ ಲೀನವಾಗುವ ಈ ಆತ್ಮದರ್ಶನದ ಮಾರ್ಗವನ್ನೇರಿದಾಗ, ಭವಯಾತನೆಯಿಂದ ಉದ್ಧಾರ ಮಾಡಬಲ್ಲ ಮೃತ್ಯುವಿನ ಮುಂದೆ ನಿರಾಶನಾಗಿ-ಕಳಕಳಿಸಬೇಡ! ಆನಂದಾ-ನನ್ನೀ ನುಡಿಯನ್ನು ಕೇಳದೆಯಾ? ಬಳಿಯೆ ಬಾ! ಅತ್ತ ನೋಡು. ಅದೋ ಪಶ್ಚಿಮ ನಿರಭ್ರಾಕಾಶದಲ್ಲಿ ದಿಗಂತಕ್ಕೆ ಕಾಲಿರಿಸುವ ಅಮೃತಕಿರಣನು ನಿನ್ನ ಹೃದಯಕ್ಕೆ ಶಾಂತಿಯೀಯಲಿ!

ಓಂ

ಶಾಂತಿಃ ಶಾಂತಿಃ ಶಾಂತಿಃ

(ಅದೇ ಪಡಿನುಡಿಯ ಶಾಂತಿವಚನದೊಂದಿಗೆ
ನಿರ್ಯಾಣವು ನೆರವೇರುವುದು ")

ಮನೆಗೆಲಸದ ಹಾಡುಗಳು

(ಬಾನುಲಿ ಭಾಷಣ)

ಡಾ. ಬಿ. ಎಸ್. ಗದ್ದಿಗಿಮಠ, M. A; Ph. D. ಬೆಳಗಾಂವಿ

卐

ಈ ಬಾನುಲಿಭಾಷಣವನ್ನು ಮಾಡಿದವರು ಶ್ರೀಮಾನ್ ಬಿ. ಎಸ್. ಗದ್ದಗಿಮಠ ಅವರು. ಇವರು ವಿಜಾಪುರ ಜಿಲ್ಲೆಯ ಕೆರೂರ ಎಂಬ ಗ್ರಾಮದವರು. ಮುಂಬಯಿ ವಿಶ್ವವಿದ್ಯಾನಿಲಯದ ಎಂ. ಎ. ಪದವೀಧರರಲ್ಲದೆ, ಜಾನಪದಸಾಹಿತ್ಯದ ಹಲವಾರು ಮುಖಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಂಡವರು. ಕರ್ನಾಟಕದ ಜಾನಪದಸಾಹಿತ್ಯದ ವಿಷಯದಲ್ಲಿಯೆ ಪ್ರಬಂಧವನ್ನು ಬರೆದು ಒಪ್ಪಿಸಿ, ಕರ್ನಾಟಕ ವಿಶ್ವವಿದ್ಯಾನಿಲಯದಿಂದ ಪಿ.ಎಚ್. ಡಿ. ಪ್ರಶಸ್ತಿಯನ್ನು ಪಡೆದಿರುವರು. ಜಾನಪದಸಾಹಿತ್ಯವನ್ನು ಸಂಗ್ರಹಿಸಿ ಗ್ರಂಥರೂಪದಲ್ಲಿ ಪ್ರಕಟಿಸುವ ಕಾರ್ಯವನ್ನೂ ಇವರು ನಡೆಸಿದ್ದಾರೆ.

卐

ಇರುಳಿನ ಕೊನೆಯ ಜಾವದಲ್ಲಿ ಬೆಳಗಿನ ಕೋಳಿಯು ಕೂಗುವ ಮುನ್ನ, ಹಳ್ಳಿಯ ಹೆಣ್ಣಿನ ಮನೆಗೆಲಸಗಳು ಆರಂಭವಾಗುತ್ತವೆ. ನಿತ್ಯ-ಪ್ರಪಂಚದ ಜಂಜಾಟದ ಭಾರವನ್ನು ಇಳಿಸಲು ಹಳ್ಳಿಯ ಹೆಣ್ಣು ಬೆಳಗಿನ ಆ ಪ್ರಶಾಂತಸಮಯದಲ್ಲಿ, ತನ್ನ ಕುಲದೇವತೆಯನ್ನಾಗಲಿ ಮನೆದೇವತೆಯನ್ನಾಗಲಿ ನೆನೆದು, ಮೈಮುರಿದು ಎದ್ದು ಮುಖತೊಳೆದುಕೊಂಡು ತನ್ನ ಕೆಲಸಕ್ಕೆ ಕೈ ಹಾಕುವಳು. ಬೀಸುವುದೇ ಅವಳ ಮನೆಗೆಲಸಕ್ಕೆ ಮೊದಲಾಗುವುದು.

ಗಂಡನ ಮನೆಯಲ್ಲಿದ್ದ ಹೆಣ್ಣಿಗೆ ತವರುಮನೆ, ಗೆಳತಿಯರು, ಮನೆಗೆಲಸ, ಸತಿಪತಿಯರಾಟ ಮೊದಲಾದ ಜೀವನಸನ್ನಿವೇಶಗಳೂ ನಾಡಮೇಲಿನ ವೀರಗಲಿಗಳ ಹಾಗೂ ಶಿವಶರಣರ ಚರಿತ್ರೆಗಳೂ ಆಗಾಗ ಒಂದರ ಮೇಲೊಂದು ನೆನಪಾಗುವುದು ಸಹಜ. ಇವೆಲ್ಲವುಗಳನ್ನು ಮರೆಯಲಸಾಧ್ಯವಾಗಲು, ಆವೇಶ ತುಂಬಿದಾಗ ಹಾಡಿ ತನಗಾದ ಬೇಸರವನ್ನು ನೀಗಿಸಿಕೊಳ್ಳುವಳು. ಅವಳು ಹಾಡುವ ಸಮಯವೆಂದರೆ ನಿತ್ಯ ಬೀಸುವಾಗ, ಕುಟ್ಟುವಾಗ. ಹಳ್ಳಿಯ ಹೆಣ್ಣು, ಬೀಸುವ ಕಲ್ಲ ಸಪ್ಪಳ–ಕೈಬಳೆಗಳ ಝಣತ್ಕಾರ ಕೂಡಿಸಿ, ನಾದ ಕಿವಿ ತುಂಬಲು. ತಲೆ ಹಾಕಿ ಹಾಕಿ, ಗತ್ತಿನೊಡನೆ ರಾಗನೆತ್ತಿ ಹಾಡಹತ್ತಿದಳೆಂದರೆ, ಬೀಸುವ ಕಾಳು ಮುಗಿಯುವ ವರೆಗೆ ಅವಳಿಗೆ ಬೇರೊಂದು ಪರವೆಯೇ ಇರುವುದಿಲ್ಲ. ಅದರಲ್ಲಿ ಲೀನಳಾಗಿ ತನ್ನನ್ನು ತಾನೇ ಮರೆಯುವಳು. ಮನ ತುಂಬಲು ಆವೇಶವುಕ್ಕಿ ಕಾವ್ಯವು ಒಂದೇಸವನೆ ಹರಿಯ ಹತ್ತುವುದು. ಅವಳಿಗೆ ಒಂದರ ಮೇಲೊಂದು ಬಾಳಿನ ಚಿತ್ರಗಳು ಹೊಳೆದು ಕಾವ್ಯ-ಸಾಗರದಲ್ಲಿಯೇ ತೇಲಹತ್ತುವಳು. ಪ್ರಪಂಚದಲ್ಲಿ ಗಂಡ-ಹೆಂಡಿರ ಸಿಡಿಮಿಡಿ ಸನ್ನಿವೇಶಗಳನ್ನು ನೆನೆದು—

> ಗಂಡ-ಹೆಂಡರ ಜಗಳಾ, ಗಂಧತೀಡಿದ್ಹಾಂಗ
> ನಿಂಗಕ್ಕ ನೀರು ಎರೆದ್ಹಾಂಗ | ಹಿರಿಹೊಳೆಯ
> ಗಂಗವ್ವ ಸಾಗಿ ಹರಿದ್ಹಾಂಗ ||

ಎಂದು ಸದಾ ಹೊಸದಾದ ಕಾವ್ಯಝರಿಯನ್ನೇ ಹರಿಸುವಳು. ಜಗಳವಿಲ್ಲದ ಪ್ರಪಂಚ ಹಳಸುವುದೆಂದು ಅವಳ ಭಾವನೆ. ಅದು ಮುಂದೆ ಸಾಗಬೇಕಾದರೆ ಆಗಾಗ ಕಿಡಿಗಳು ಕಾಣಲೇ ಬೇಕು. ಕಿಡಿಕಂಡರೂ ಅವಳಿಗೆ ಗಂಡನ ಮನೆಯೇ ಲೇಸು. ಒಡೆತನ, ಬಡತನವೆಂಬ ಚಿಂತೆ ಇಲ್ಲ. ಮುತ್ತೈದೆತನವೊಂದೇ ಅವಳಿಗೆ ಸಕಲಸೌಭಾಗ್ಯ. ಮಕ್ಕಳೇ ಸರ್ವಸಂಪತ್ತು :

> ಮಕ್ಕಳ ಕೊಡುಶಿವನೆ, ಮತ್ತೊಂದು ನಾ ಒಲ್ಲೆ
> ಹೆತ್ತು ಮಂದ್ಯಾಗ ಹರುನೀರ | ತರುವಂಥ
> ಮುತ್ತೈದೆತನವ ಕೊಡು ಶಿವನೆ ||

ಹೀಗೆಂದು ಶಿವನನ್ನು ಪ್ರಾರ್ಥಿಸಿದ್ದಾಳೆ.

> ಗಂಜೀಯ ಕುಡಿದರು, ಗಂಡನ ಮನಿ ಲೇಸು
> ಅಂದಣದ ಮ್ಯಾಲೆ ಚವುರವ | ಹಾರಿದರ
> ಹಂಗೀನ ತವರಮನಿ ಸಾಕು ||

ಎಂದು ಬಡವಗಂಡನೇ ಲೇಸೆಂದೂ ಚೌರಿಯ ಬೀಸುವ ತವರು ಹಂಗಿನದೆಂದೂ ನಿರಾಕರಿಸಿದ್ದಾಳೆ. ಆದರೂ ಅವಳು ತವರಿಗೆ ಕೇಡು ಬಯಸುವುದಿಲ್ಲ.

> ಹಾಲುಂಡ ತವರೀಗೆ, ಏನೆಂದು ಹಾಡಲೆ
> ಹೊಳೆ ದಂಡಿಲಿರುವ ಕರಿಕೀಯ | ಕುಡಿಯಂಗ
> ಹಬ್ಬಲಿ ಅವರ ರಸಬಳ್ಳಿ ||

ಎಂದು ಹಾಡಿ ಹರಸಿದ್ದಾಳೆ; ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಮರ್ಪಿಸಿದ್ದಾಳೆ.

ಅಕ್ಕನ ಕಕ್ಕುಲತೆಯು ತಮ್ಮ–ತಂಗಿಯರ ಮೇಲೆ ಬಹಳ. ಬೀಸುವಾಗಾಗಲಿ, ಕುಟ್ಟುವಾಗಾಗಲಿ ಅವರನ್ನು ಕುರಿತು ಹಾಡದೆ ಬೀಸುವ ಕಡೆಯ ಮುಕ್ಕೊ ಕುಟ್ಟುವ ಕೊನೆಯೊಬ್ಬೆಯೂ ಕೊನೆಗೊಳ್ಳುವಂತಿಲ್ಲ. ಅಕ್ಕನು ಗಂಡನ ಮನೆಯಲ್ಲಿದ್ದರೆ, ತಮ್ಮ–ತಂಗಿಯರೊಡನೆ ಆಡಿ ಬೆಳೆದ ಅವಳ ಜೀವನವು ಅವರನ್ನು ಮೇಲಿಂದ ಮೇಲೆ

ನೆನೆಸುವುದು. ಆವಳಿಗೆ ಸಮಯ ಸಿಕ್ಕರೆ ಆನಂದತುಂಬಿ ತಮ್ಮನ ಗುಣಗಾನ ಮಾಡಿ ಹಾಡುತ್ತಾಳೆ; ತಂಗಿಯ ರೂಪ-ಲಾವಣ್ಯಗಳನ್ನು ಬಣ್ಣಿಸುತ್ತಾಳೆ. ಈ ಹಾಡುಗಳು ಬಾಂಧವ್ಯದ ಒಲವನ್ನು ತೋರುವುವಲ್ಲದೆ ಕೌಟುಂಬಿಕ ಜೀವನದ ಒಕ್ಕಟ್ಟನ್ನೂ ಸೂಚಿಸುವುವು:

ಅಕ್ಕತಂಗೆರು ಮೇಲ, ಮುತ್ತು ಮಾಣಿಕ ಮೇಲ
ಉತ್ತುರಿ-ಸ್ವಾತಿ ಮಳಿ ಮೇಲ | ನನ ತಮ್ಮ
ನೀ ಮೇಲ ನನ್ನ ಬಳಗಾಕ ||

ಎಂದು ಚಿಕ್ಕ ತಮ್ಮನು, ಒಕ್ಕಲಿಗನಿಗೆ ಉತ್ತರಾ-ಸ್ವಾತೀ ಮಳೆಯಂತೆ ಬಳಗಕ್ಕೆ ಆಗಿದ್ದಾನೆ. ಚಿಕ್ಕವನೆಂಬ ಪ್ರೇಮವೂ, ಕಡೆಯವನೆಂಬ ಲಾಲನೆಯೂ ಎಲ್ಲರಲ್ಲೂ ಹುಟ್ಟುವಂತೆ ಅಕ್ಕನಲ್ಲಿಯೂ ಹುಟ್ಟಿ, ಆಕೆಗೆ ಹೆಚ್ಚಿನ ಆಶೆ-ಆಕಾಂಕ್ಷೆಗಳು ಒಂದರಮೇಲೊಂದು ತಮ್ಮನ ಸಂಬಂಧ ಹುಟ್ಟತೊಡಗುವುವು.

ಸರದಾರ ಬರುವಾಗ, ಸುರಿದಾವ ಮಲ್ಲೀಗಿ
ಧೊರಿ ನನ್ನ ತಮ್ಮ ಬರುವಾಗ | ಯಾಲಕ್ಕಿ
ಗೊನೆ ಬಾಗಿ ಹಾಲ ಸುರಿದಾವ ||

ಎಂದು ತಮ್ಮನ ಬರುವಿಕೆಯನ್ನು ಹಾಡಿದ್ದಾಳೆ. ಆತನು ದಿನದಿನಕ್ಕೆ ಬೆಳೆದು ಪ್ರಾಯತುಂಬಲು ಅಕ್ಕನ ಹಿರಿಯಾಶೆಯು ಹಿಗ್ಗಹತ್ತುವುದು. ತಮ್ಮನು ಬಲು ಚೆಲುವ. ಹೆತ್ತು ಮಗಳನ್ನು ಕೊಡಬೇಕೆಂದಿದ್ದ ಆವಳಿಗೆ ಪ್ರತಿಫಲಿಸಿದಂತಾಗಿ:

ಮುನವಳ್ಳಿ ಮುಂದೀನ, ವನವ ಕಂಡೀರಕ್ಕ
ತನಿವೀಗಿ ಅಳ್ಯಾವ ಹೂ ಮಗ್ಗಿ | ನನ ಚೆಲುವ
ತಮ್ಮಗೊಡೆದಾವ ಮೊಕವೀಸಿ ||
ಬಾವೂಲಿ ಇಟುಗೊಂಡು, ಕಾವೂಲಿತಿದ್ದುವ
ಗಾಳಿ ಬಂದತ್ತ ಬಳಕೂವ | ನನ ತಮ್ಮ
ಬಾಳಿಯೆಲಿಗಿಂತ ಬಲು ಚೆಲುವ ||

ಹೀಗೆ ಅವನಿಗೆ ಬರುವ ಯೌವನವನ್ನೂ ತುಂಬುವ ಚೆಲುವಿಕೆಯನ್ನೂ ನೋಡಿ ಬಾಯಿಬಿಟ್ಟ ಆಡದೆ, ತಮ್ಮನು ಪ್ರಸಂಗಕ್ಕೆ ತನ್ನ ಮನೆಗೆ ಬಂದಾಗ:

ಆಡಿಕೊಂಬವನಲ್ಲ, ಅಲಿಸಿ ಕೇಳವನಲ್ಲ
ಗಾಡೀಗನಲ್ಲ ನನ ತಮ್ಮ | ನಿನ್ನಂತ
ಬೀಗನು ಬೇಕೊ ನನ ಮನಿಗೆ ||

ಎಂದು ಹುದುಗಿದ ತನ್ನ ಮನಸ್ಸಿನ ಒಲವನ್ನೂ ಹೆವ್ಯಾಸವನ್ನೂ ಹಾಡಿ ಸೂಚಿಸುವಳು. 'ನನ ತಮ್ಮ ಎಲೆಗೊಂದು ಮಾತು ಒಗೆದಾನ!' ಮೊದಲಾದ ಅವನ ಮಾತಿನ ಚಾಣಾಕ್ಷತೆಯನ್ನು ಕೇಳಿ ಬೆರಗಾಗುವಳು.

ಬಸರಾದರ ತೊಡಬೇಕ, ಹಸುರ ತಾಬುತಿ ಕುಬಸ
ಹಸರೇಲಿ ಒಳಗ ಉಣಬೇಕ | ನನ ತಮ್ಮ
ಹೊಸಬೀಗನಾಗಿ ಬರಬೇಕ ||

ಎಂದು ತಾನು ಬಸಿರುಬಯಕೆ ಹೊರಬೇಕು; ತಮ್ಮನು ಹೊಸ ಬೀಗನಾಗಿ ತನ್ನ ಮನೆಗೆ ಬರಬೇಕು—ಎಂಬ ಹಂಬಲವನ್ನು ತೋಡುವಳು.

ಕುಂತಾಡು ಮಗಳೀಗೆ, ಕೊದಲ ಬಿಟ್ಟೇನ
ನಗರದ ಚೌರಿ ತರಸೇನ | ಮನಿಯಾಗ
ತಮ್ಮಗ ಧಾರಿ ಎರೆದೇನ ||

ಹೀಗೆ ಅಕ್ಕನು ತನ್ನ ಚಿಕ್ಕ ಮಗಳನ್ನು ಸಿಂಗಾರ ಮಾಡಿ ತಮ್ಮನಿಗೆ ಮದುವೆಯನ್ನು ಮಾಡಲು ಬಯಸುತ್ತಾಳೆ

ತಮ್ಮನಂತೆ ತಂಗಿಯೂ ಅಕ್ಕನ ಪ್ರೇಮಕ್ಕೆ ಪಾತ್ರಳಾಗುತ್ತಾಳೆ

ಆಡೀನ ಮಲಿ ಹಂಗ, ಜೋಡು ನಾವಿಬ್ಬರು
ಅಡಬ್ಯಾಡ ತಂಗಿ ಕದನವ | ಜಗಳಕ
ಜೋಡೀನ ಹಕ್ಕಿ ಅಗಲ್ಯಾವ ||

ಹೀಗೆ ಅಕ್ಕನು ಅಗಲದವರಂತೆ ಬೆಳೆದ ಅಕ್ಕ-ತಂಗಿಯರ ಇರವನ್ನು ಹಾಡಿದ್ದಾಳೆ. ಚಿಕ್ಕ ತಂಗಿಯು ತಿಳಿಯದೆ ಕದನ ಹೂಡಿದರೆ, ಹಾಗೆ ಮಾಡಬಾರದೆಂದು ತಿಳಿಹೇಳಿ ಸಮಾಧಾನ ಮಾಡುತ್ತಾಳೆ. ತಂಗಿಗೆ ಮಂಗಲವಾಗಿ ಸುಖವಾಗಲೆಂದು ಬಯಸುವ ಕಾಲದಲ್ಲಿ

ಹನ್ನೆರಡು ವರುಷಕ್ಕ, ಕನ್ನೆ ಮೈನೆರೆದಾಳ
ನಾನೇನ ಒಯ್ಲಿ ಕೊಡವೀಗೆ | ತಂಗೀಗೆ
ಕನಡಿಯ ಕುಬುಸ ನನೆದಂಡಿ ||

ಎಂದು ಆಶೀರ್ವದಿಸಲು ಒಯ್ಯುತ್ತಾಳೆ. ಋತುಮತಿದಿನವು ಹೆಣ್ಣಿನ ಆಯುಷ್ಯದಲ್ಲಿ ಅತಿ ಮಹತ್ತ್ವದ್ದು. ಅವಳು ಅಂದೇ ನಿಜವಾಗಿ ಹೆಣ್ಣೆನಿಸುವಳು ಈ ಮೈನೆರೆಯುವುದು, ಹೆಣ್ಣಿನ ಪ್ರಪಂಚದಲ್ಲಿ ಹೆಣ್ಣಾಗಿ ಬಾಳಲು ನಿಸರ್ಗದ ಸನದು ಸಿಕ್ಕಂತೆ. ಅವಳು ಮದುವೆಯಾಗಿ ಫಲವತಿಯಾಗುವಳೆಂದು ಅದು ಆಶೆ-ಭರವಸೆಗಳನ್ನು ಸೂಚಿಸುತ್ತದೆ. ಆಗ ಆಕೆಗೆ ಹಸುರುಬಳೆ, ನನೆದಂಡೆ, ಮೊದಲಾದ ಮಾಂಗಲ್ಯಗಳೇ ಮುಂಬರುವ ಶುಭಚಿಹ್ನಗಳನ್ನು ನೋಡುವವರಿಗೆ ತೋರದಿರವು. ತಂಗಿಯ ಚೆಲುವು ಅವಳ ಕಣ್ಣಿನ್ನೇ ಕುಕ್ಕುವುದು.

ಹಂಪೀಯ ತೇರೀಗೆ, ಹೊಂದಿನಿಂತವಳ್ಯಾರ
ಚೆಂದಾಳದ ಗೊಂಬಿ ನನತಂಗಿ | ಸಿಂತಾರ
ಚೆಂದಪ್ಪಗ ಛಾಯೆ ಹಿಡಿದ್ಹಾಂಗ ||

ಅವಳ ಚೆಲುವಿಕೆಯು ಚಂದ್ರನ ಚೆಲುವಿಕೆಯನ್ನು ಹೀಯಾಳಿಸುವುದೆಂದು ಹಾಡಿದ್ದಾಳೆ. 'ತಂಗಿ ತಂಗೀ ಬಾರ, ತಂಬೂಲ ತುಟಿ ಬಾರ' 'ನನತಂಗಿ ನಡೆದರ, ರುದ್ರರನ ತೇರು ಎಳೆದ್ಹಾಂಗ' ಎಂಬ ಇವೇ ಮಾತುಗಳು, ಅಕ್ಕನು ತಂಗಿಯ ಚೆಲುವಿಕೆಯನ್ನುಂಡು ಆಡಿದ ಸವಿನುಡಿಗಳಾಗಿವೆ.

ಸಂತೋಷದ ಸುದ್ದಿ, ಸಂತ್ಯಾಗ ಕೇಳೀನಿ
ಕೆಂಚಿ ನನತಂಗಿ ಬಸರಂತ | ಹೇಳ್ಯಾನ
ಹಂಪಸಾಗರದ ಬಣಜೀಗ ||

ತಂಗಿ ಬಸಿರಿರುವ ಸಂತೋಷದ ಸುದ್ದಿಯನ್ನು ಕೇಳಿ ಅಕ್ಕನ ಪ್ರೀತಿಯು ಅವಳಿಗೆ ಬಸಿರೂಟವನ್ನು ಒಯ್ಯಲಿಚ್ಛಿಸುವುದು.

ಸೆಜ್ಜೀಯ ರುಚಿರೊಟ್ಟಿ, ಸಜ್ಜಕದ ಹೋಳೀಗಿ
ಗಜ್ಜುರಿಚಿಟ್ಟು ಎಳ್ಳೆಣ್ಣಿ | ತಂಗೆವ್ವ
ಗುಜ್ಜ ನಿನಬಯಕಿ ತಿಳಿಯಾವ! ||

ಹೀಗೆ ಒಡ್ಡು ಬಯಕೆಯೂಟವು ತಂಗಿಯ ಹೊಟ್ಟೆಯಲ್ಲಿ ಬೆಳೆಯುವ ಎಂಥ ಕೂಸಿಗೆ ?

ಬಂಗಾರ ಬಳಿಯೊತ್ತಿ, ದುಂಡಕಂಕಣವೊತ್ತಿ
ಗೊಂಡೇವ ಒತ್ತಿ ಮಲಗ್ಯಾಳ । ನನತಂಗಿ
ದಂಡನಾಳವನ ಬಯಕೇಲಿ ॥

ಎಂದು, ತಂಗಿಯು ಬಸಿರು ವೀರನಾಗಿ ಹುಟ್ಟಲೆಂದು ಆಶಿಸುತ್ತಾಳೆ. ತಂಗಿಯು ಶಿಲವಂತ ಶಿವಶರಣೆ. ಅವಳ ಭಾವಕ್ಕೆ ಶಿವನೂ ಸದರಿಳಿ. ಯುವನು.

ಸೀತಾಳ ಕೊಡಪಾನ, ಶಿವಮೊಗ್ಗಿ ಪಾವೂಡ
ಶೀಲವಂತೆವ್ವ ನನ ತಂಗಿ । ಬರುವಾಗ
ಶಿವ ತನ್ನ ಸದರ ಇಳಿದಾನ ॥

ಎಂದು ಹಾಡಿ ಹೊಗಳಿದ್ದಾಳೆ. ಅವಳ ಭಕ್ತಿಗೆ ಶಿವನು ಒಲಿದು ಅವಳಿಗೆ ಸಕಲ ಸಂಪತ್ತು ಕೊಟ್ಟಿರುವನೆಂದು

ವರನುಳ್ಳ ಒಗತನ, ಒಳಗ ಸೇದೂಭಾವಿ
ಹಲಗಿ ತೊಟ್ಟೀಲ ಹಸಗೂಸು । ನನ ತಂಗಿ
ಪಡೆದು ಬಂದೀದಿ ಶಿವನಲ್ಲಿ ॥

ಎಂದು ಹಾಡಿ ಆನಂದಬಟ್ಟಿದ್ದಾಳೆ.

ಸರಸ-ವಿರಸಗಳ ಸಮ್ಮಿಲನವಾದ ಈ ಬಾಳಿನಲ್ಲಿ ಹಳ್ಳಿಯ ಹೆಣ್ಣಿಗೆ ತನ್ನ ಬಾಲ್ಯದ ಜೀವನವು ನೆನಪಾಗಿ ತವರೂರ ಗೆಳತಿಯನ್ನು ನೆನೆಸುವಳು.

ಮನಿಯ ಮುಂದಿನ ಗೆಳತಿ, ದನಿಯ ಕೂಡಿಸಬಾರ
ದನಿಸುದ್ದ ನಿನ ಗುಣಸುದ್ದ । ಗೆಳತೆವ್ವ
ಗುಣಕ ಕಟ್ಟೇನಿ ಗೆಳೆತನ ॥

ಚೆಲುವಿಕೆಗೆ ಗೆಳೆತನ ಕಟ್ಟಿಲ್ಲ; ನಿನ್ನ ಗುಣಕ್ಕೆ ನಾನು ಗೆಳತಿಯಾಗಿರುವೆ. ಎಂದು ಹಾಡುತ್ತಾಳೆ. ಗೆಳತಿಯ ಸೌಭಾಗ್ಯದಲ್ಲಿ ತಾನೂ ಭಾಗವಹಿಸುವಳು. ಅವಳಿಗೆ ತನ್ನ ಗೆಳತಿಯು ಮಗನ ತಾಯಿಯೆಂದು ಬಲು ಹೌಸು; ಒಂದು ಆನಂದ. ಕಂಕುಳಲ್ಲಿ ಮಗುವನ್ನೆತ್ತಿಕೊಂಡು ರಾತ್ರಿಯ ವಸ್ತಿಗೆ ತನ್ನ ಮನೆಗೆ ಬಂದ ಗೆಳತಿಯನ್ನು ಕಂಡು ಹಿಗ್ಗಿ,

ಎಳ್ಳ ಹೂವಿನ ಸೀರಿ, ಕೊಳ್ಳಾಗ ಚಂತಾಕು
ಇರುಳುಬಂದೆತ್ತ ಇಳದಾಳ । ನನಗೆಳತಿ
ಅರಳೇಲಿ ಮಗನ ಹೆಸರೇನ ? ॥

ಎಂದು ಪ್ರೇಮಾದರಗಳಿಂದ ಕೇಳುತ್ತಾಳೆ. ಗೆಳತಿಯ ಮಗನ ಹೆಸರನ್ನು ಕೇಳಿ ಮುದ್ದಾಡಬೇಕೆಂಬ ಹಿರಿಯಾಶೆ.

ಗಂಡನ ಮನೆಗೆಲಸವೆಂದರೆ ಅರಿಕೆಯಿಲ್ಲದ ದುಡಿಮೆ. ಎಷ್ಟು ದುಡಿದರೂ ಆ ಮನೆಗೆ ಕಣ್ಣೇ ಇಲ್ಲ,

ಮಾತೀಗೆ ಮಲಕಿಲ್ಲ, ರೀತಿಗೆ ತೊಡಕಿಲ್ಲ
ಸಾಸೀವಿ ಕಾಳ ಹುಳುಕಿಲ್ಲ । ಅತ್ತೀಗೆ
ಸೋಸಿ ನಡೆದರೂ ಅರಿಕಿಲ್ಲ ॥

ಎಂದು ತನ್ನ ದಿನದ ದುಡಿಮೆಯನ್ನು ಸ್ಮರಿಸಿ ಹಾಡಿ, ಸೋತು ಉದ್ಗಾರ ತೆಗೆದಿದ್ದಾಳೆ. ಪ್ರಸಂಚದಲ್ಲಿ ಅವಳಿಗೆ ಮನಸ್ತಾಪವಾಗುವುದೂ ಉಂಟು. ಪ್ರೇಮಪುತ್ಥಳಿ ಮನೆಯಲ್ಲಿದ್ದರೆ ಸಾಕು; ಅವಳು ಏನೂ ಲೆಕ್ಕಕ್ಕೆ ತಾರಳು.

ಕೂಲಿ ಮಾಡಿದರೇನ, ಕೋರಿ ಹೊತ್ತರೇನ
ನಮಗ ನಮರಾಯ ಬಡವೇನ । ಬಂಗಾರ
ಮಾಲ ಇದ್ದಾಂಗ ಮನಿಯಾಗ ॥

ಅಂತೆಯೇ ಹೆಣ್ಣು ಗಂಡಿನ ಕೈಹಿಡಿದು ತಾಯಿಯ ಬಿಟ್ಟು ಗಂಡನ ಬೆನ್ನುಹತ್ತಿ ಬೇರೆ ಮನೆಯನ್ನೇ ಸಂಪಾದಿಸುವಳು. ಇರುತಿರುತ ಅವಳಿಗೆ ಮಕ್ಕಳ ಚಿಂತೆಯಾಗಿ 'ಬಂಜೆಂಬ ಶಬುದ' ಈ ಜನುಮದಲಿ ಬೇಡವೆಂದು ದೇವರಿಗೆ ಬೇಡಿಕೊಳ್ಳುವಳು.

ಕಂದನ ಕುಡುಶಿವನೆ, ಬಂಧನ ಸಹಲಾರೆ
ಹಂಗೀನ ಬಾನ ಉಣಲಾರೆ । ಮರ್ತ್ಯದಾಗ
ಬಂಜೆಂಬ ಶಬುದ ಹೊರಲಾರೆ ॥

ಕೊಟ್ಟ ಮನೆ ಬೆಳಗಿಸುವುದು, ಕುಡಿದೀಪ ಅಮರಜ್ಯೋತಿಯಾಗಿ ಕುಲವೇ ಉದ್ಧಾರವಾಗುವುದು ಹೆಣ್ಣಿನಿಂದಲ್ಲವೇ? ಮಕ್ಕಳಿಲ್ಲದ ಜೀವ ವ್ಯರ್ಥವೆಂದು ಬೇಸತ್ತು, ಹೆಣ್ಣಿನ ಜೀವವು ಮನಸ್ಸಿನಲ್ಲಿ ಏನೇನೋ ಬಯಸುವುದು :

ಆಡುಮಕ್ಕಳ ಕಂಡು, ಬೇಡಿತ್ತ ನನ ಜೀವ
ಕೇಳಿದ್ದನೇನ ಶಿವರಾಯ । ಹೊಟ್ಟ್ಯಾಗ
ಮಾಡಿದ್ದನೇನ ಮಗರಾಯ ॥

ಎಂದು ಬಸಿರುಬಯಕೆಯ ಹಂಬಲವು ಮನದಲ್ಲಿ ಸುಳಿದಾಡಿ ಹೆಣ್ಣು ಗೊನೆಹೊತ್ತು ತೃಪ್ತಿಯಾಗುವುದು

ಪ್ರಪಂಚದ ಎಲ್ಲ ಸನ್ನಿವೇಶಗಳನ್ನು ತೋಡಿ ತೋಡಿ ಹಾಡುವ ಹೆಣ್ಣು, ನಾಡಗಲಿಗಳ ಹಾಗೂ ಶಿವಶರಣರ ಚರಿತ್ರೆಗಳನ್ನು ಮರೆಯಬಹುದೇ ? ಕಿತ್ತೂರ ದುರಂತವನ್ನೂ, ನರಗುಂದದ ಕನಿಕರದ ಸ್ಥಿತಿಯನ್ನೂ ಹಾಡಿ ಕಣ್ಣೀರು ಸುರಿಸುವಳು. ಬೆಳುವಲ ಒಕ್ಕಲಿಗನು ಕುಮಾರರಾಮನಿಗೆ 'ಕೊಮರಾಮ' ಎಂದು ಕರೆದು ಹಂತಿಯ ಹೊಡೆದಿದ್ದರೆ ಹೆಣ್ಣು 'ಕರ್ನಾಟಕ ಕಂದ' ಎಂದು ಕರೆದು, ಅವನಿಗೆ ಬಂದ ಹರಲಿಯನ್ನು ಹಾಡಿ ದುಃಖಿಸಿದ್ದಾಳೆ. ಈ ಬೀಸುವ ಹಾಡು ಎಲ್ಲರೂ ಕನಿಕರಪಡುವಂತಹದಾಗಿದೆ ಈ ಹಾಡನ್ನು ಕೇಳಿದ ಹಂಗ. ರುಳು ಮಮ್ಮಲ ಮರುಗಿ, ಕಂಬನಿ ಸುರಿಸಿ ಅತ್ತೇಬಿಡುವುದು. ಹಾಡಿನಲ್ಲಿ ಬಂದ ಕಥೆ ಅರಮನೆಯಲ್ಲಿ ಕುಮಾರರಾಮನ ಮೇಲೆ ಬಂದ ಹರಲಿ. ಹಾಡು ಕೇಳುವುದಕ್ಕೆ ಬಲು ಇಂಪಾಗಿದೆ. ಬೆಳುವಲದ ಹೆಣ್ಣು ಬೀಸುವಾಗ ಈ ಹಾಡನ್ನು ಬಲು ರಂಜಕವಾಗಿ ಹಾಡುವಳು:

ಹರಲೀಯ ಕೊಡಲಾರೆ ।
ಕರನಾಟ ಕಂದಗ ॥ ಪ ॥
ಕಥೆಯ ಕೇಳರಿ ಜನರೆ, ಮತಿಯಿಟ್ಟು ತೂಗುತಲಿ
ಸುತಗ ಮನಸಿಟ್ಟು ಕಲಿಯುಗದ । ಮಲತಾಯಿ
ಬತವ ಹಾಡೇನ ನಿಜಗಥೆಯ ॥
ಅರಸ ಕಂಪಿಲರಾಯ, ಸರಸ ಬ್ಯಾಟಿಗೆ ಹೋದ
ಅರಸಿ ರತ್ನಾಲಿ ಮನಿಯಾಗ । ಮೋಹಿಸಿದ
ಎರಕ ಕೊಮರಾಮ ಎದಿಯಾಗ ॥

ಇಂಥ ಅನೇಕ ಪದ್ಯಗಳುಳ್ಳ ಐತಿಹಾಸಿಕ ವೀರಗಲಿಗಳ ಹಾಡುಗಳಲ್ಲದೆ ಶಿವಭಕ್ತಿಸಂಪನ್ನೆಯಾದ ಈ ಹೆಣ್ಣು ಅನೇಕ ಶಿವಶರಣರ ಹಾಡುಗಳನ್ನು ಹಾಡಿ ಬೀಸುವಳು. ಅವಳು ಹಾಡುವ ಅನೇಕ ಹಾಡುಗಳಲ್ಲಿ 'ಕಲ್ಯಾಣ' ಹಾಡು ಎಲ್ಲರ ಮನವನ್ನು ಸೆಳೆಯುದಿರದು:

ಸಾಗಿಸದ್ಗುರು ಯೋಗಿ ಬಂದರ ಹೋಗಿ ನೋಡುಣ ।
ಗುರುಮೋಕ್ಷವ ಬೇಡೂಣ ‖ ಪ ‖
ಕಲ್ಯಾಣ ಮನಿಯಾಗ, ಎಲ್ಲ ಶರಣರ ಕಂಡೆ
ಬಲ್ಲಿದನ ಕಂಡೆ ಬಸವಣ್ಣನ ‖ ಗು ‖ ಪಾದಕ
ಚೆಲ್ವ್ಯಾಡಿ ಬಂದೆ ನನ ಮನವ ‖ ಗು ‖ ಸಾಗಿ ‖ ೧ ‖
ಶರಣರ ನೆನೆದರೆ, ಸರಗೀಯ ಇಟ್ಟಂಗ
ಅರಳ ಮಲ್ಲೀಗಿ ಮುಡಿದ್ಹಂಗ ‖ ಗು ‖ ಕಲ್ಯಾಣ
ಶರಣರನ ನೆನೆಯೊ ಎಲೆ ಮನವ ‖ ಗು ‖ ಸಾ ‖ ೨ ‖
ಹೂವಾಗಿ ಅರಳ್ಯಾರ, ಅವಾಗಿ ಕರೆದಾರ
ದೇವರಿಗೆ ಮಿಗಿಲ ಕಲ್ಯಾಣ ‖ ಗು ‖ ಶರಣರಿಗೆ
ಯಾವ ಬಗೆಯಿಂದ ನೆನೆಬೇಕ ‖ ಗು ‖ ಸಾ ‖ ೩ ‖
ಅಂಗಳದ ಮಂಟಪಕ, ಲಿಂಗ ಬೆಳದಿಂಗಳವ
ಜಂಗ ನುಡಿಸಿದರ ಕಲ್ಯಾಣ ‖ ಗು ‖ ಜಂಗಮರ
ಸಂಗ ಶಿವಬೆಳಕು ನಿಜಪದಕ ‖ ಗು ‖ ಸಾ ‖ ೪ ‖
ಓಂ ಶಿವನೆ ಬಸವಣ್ಣ, ಓಂ ಶಿವನೆ ಪ್ರಭುದೇವ
ಓಂ ಶಿವನ ಶಕ್ತಿ ಚೆನಬಸವ ‖ ಗು ‖ ಕಲ್ಯಾಣ
ಓಂ ಶಿವನೆ ಶರಣು ಶರಣರಿಗೆ ‖ ಗು ‖ ಸಾ ‖ ೫ ‖

ಹೀಗೆ ಕಲ್ಯಾಣಶರಣರನ್ನು ಹಾಡಿ ಕೊಂಡಾಡಿದ್ದಾಳೆ. ಈ ಪ್ರಕಾರ ಅವಳ ಮನವು ಪರಿಪಕ್ವವಾಗಿ ಇಡಿ ಪ್ರಪಂಚವನ್ನು ಪರಮಾತ್ಮನೊಡನೆ ಬೆರಸಿ ಹಾಡುವುದು. ಬೀಸುವ ಕಡೆಯು ಮುಕ್ಕನ್ನರಿತು ನೋಡಲು ಬೆಳಗಿನ ಬೆಳ್ಳಿಯು ಮೂಡಿ ಮೇಲೆ ಬಂದದ್ದನ್ನು ಕಂಡು:

ಬೆಳ್ಳಗ ಬೆಳಗಾಗಿ, ಬೆಳ್ಳಿ ಮೂಡಲವಾಗಿ
ಒಳ್ಳೊಳ್ಳೆ ಮೀನ ಗರಿತಗೆದು । ಅಡ್ಯಾಪ
ಗರತಿ ಗಂಗಮನ ಉಡಿಯಾಗ ‖

ಎಂದು ಅವಳಿಗೆ ಅರಿವಾಗಿ, ನಿಸರ್ಗದ ಒಂದು ಎಂದೂ ಮಾಸದ ಬೆಳಗಿನ ಸುಂದರವಾದ ಚಿತ್ರವನ್ನೇ ಅವಳು ಚಿತ್ರಿಸುವಳು. ಬೆಳಗಾಯಿತು; ಮತ್ತೆ ಪ್ರಪಂಚಪರ್ಯಟನಕ್ಕೆ ಅನುವಾಯಿತು. ತಾನು ಮೈಮರೆತು ಹಾಡುವ ರಸಾವೇಶಗಳು ಇನ್ನೂ ಉಳಿದುವೆಂದು ಅರಿತು:

ಆದಾವ ನಮ ಜೋಳ, ತೀರ್‍ಯಾವ ನಮ ಹಾಡ
ಸಾಕ ಗೌರವ್ವ ಕೈ ಬೀಡ । ನನ ಮನಿಯ
ಗ್ಯಾನದತ್ತೆವ್ವ ಬೈದಾಳ ‖
ಆಗೂವ ಮುಕ್ಕೀಗೆ, ನಾಯಾರ ನೆನೆಯಾಲೆ
ರಾಜೀವ ಸಲುವ ಬಸವಣನ । ಹೇಣೂತಿ
ನೀಲವನ ಹಾಡಿ ನಿಲಸೇವ ‖

ಎಂದು ಮುಕ್ತಾಯಮಾಡಿ, ಕಡೆಮುಕ್ಕು ಜಾಡಿಸಿ ಕಲ್ಲು ನಿಲ್ಲಿಸುವಳು.

ಗರ್ಭಾಶಯದ ದೋಷಗಳನ್ನು ನಿವಾರಿಸಲು
ಅಪ್ರತ್ಯಕ್ಷಪ್ರಮಾಣ ಸಿದ್ಧೌಷಧ
ಜೀವನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು–ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಹಗಲಿನಲ್ಲಿ ತನಗಾದ ಪ್ರಪಂಚದ ಭಾರವನ್ನು ಬೀಸುತ್ತ ಹಾಡಿ, ಕಷ್ಟನಷ್ಟಗಳನ್ನು ಮರೆತು ಬೆಳಗು ಹರಿಯಲು ಹೊಸಬಳಾಗಿ ಹಸನು ಮನಸಿನಿಂದ ಮತ್ತೆ ಪ್ರಪಂಚಕ್ಕೆ ಹೆಣ್ಣು ಧುಮುಕುವುದು.

ಹೆಣ್ಣಿನ ಪಾಲಿಗೆ ಮಕ್ಕಳ ಲಾಲನೆ-ಪಾಲನೆಯು ಅತಿ ಮಹತ್ತ್ವದ್ದಾದ ಮನೆಗೆಲಸ. ಗೊನೆಹೊತ್ತ ಹೆಣ್ಣು ಫಲವತಿಯಾದ ಮೇಲೆ, ಮಗುವೆತ್ತಿ ಲಾಲನೆ-ಪಾಲನೆ ಮಾಡುವುದು ಅವಳ ಪಾಲಿಗೆ ಒಂದು ಹಿಗ್ಗು, ಆನಂದ.

ತೊಟ್ಟಿಲದಾಗೊಂದು, ತೊಳೆದ ಮುತ್ತನ ಕಂಡೆ
ಹೊಟ್ಟೆ ಮ್ಯಾಲಾಗಿ ಮಲಗ್ಯಾನ । ಕಂದೈಗ
ಮುತ್ತಿನ ದೃಷ್ಟಿ ತೆಗೆದೇನ ‖

ಅವಳಿಗೆ ಮಗನ ಲಾಲನೆ-ಪಾಲನೆಯು ಸೊಗಸೇ ಸೊಗಸು.

ಕಂದನ ಕಿರಿಕಿರಿ, ಇಂದೇನು ಹೇಳಲಿ
ಬಿಂದೀಗಿ ಹಾಲ ಸುರುವಂದ । ಸಂಜೀಯ
ಚಂದ್ರಮನ ತಂದು ನಿಲಿಸೆಂದ ‖
ಹಾಲ ಬೇಡ್ಯತ್ತಾನ, ಕೋಲು ಬೇಡಿ ಕುಣದಾನ
ಮಸರ ಬೇಡಿ ಕೆಸರು ತುಳಿದಾನ । ಕಂದಯ್ಯನ
ಕುಸಲದ ಗೆಜ್ಜಿ ಕೆಸರಾಯ್ತು ‖

ಎಂದು ಬೆಳೆಯುವ ಕಂದನ ಹಟಮಾರಿತನವನ್ನು ಹಾಡಿ ತಾಯಿಯು ಆನಂದಪಟ್ಟಿದ್ದಾಳೆ. ಆದಾವ ಕಾರಣವೋ ಮಗು ಮಲಗದೆ ಅಳ ಹತ್ತಲು ಹಡೆದ ಹೊಟ್ಟೆ ತಳಮಳಿಸಿ ದೇವರಿಗೆ ಹರಕೆ ಹೊರುವುದು; ಮುಡುಪು ಕಟ್ಟುವುದು.

ಅಳು ಬಂದು ಅತ್ತರಿಯು, ಹಸ್ತುಬಂದು ಉಂಡರಿಯ
ಎತ್ತಿಕೊಳ್ಳೆಂಬ ಹಟವರಿಯ । ನನಕಂದ
ಅಳದಾತ ಅತ್ತ ಬಗೆಯೇನು ? ‖

ಆದರೆ ಇಂದು ಅವಳಿಗೆ ಎಲ್ಲವೂ ಸೋಜಿಗವು. ಮಗು ಕಾರಣವಿಲ್ಲದೆ ವಿಪರೀತ ಕಾಡಹತ್ತಿದೆ; ಅಳಹತ್ತಿದೆ.

ಜೋಗೂಳ ಹಾಡಿದರ, ಆಗಳೇ ಕೇಳ್ಯಾನ
ಹಾಲಹಂಬಲ ಮರತಾನ । ಕಂದೈಗ
ಜೋಗೂಳದಾಗ ಅತಿ ಮುದ್ದ ‖

ಎಂದು ತೊಟ್ಟಿಲಲ್ಲಿ ಹಾಕಿ ಗಲ್ಲಿಸಿ ಜೋಗುಳವಾಡುವಳು.

ಜೋಜೋ | ಜೋಯೆನ್ನ ಚಿನ್ನಮಾಯಿ ಜೋಜೊ ||ಪ||
ಭೂಮಿ ಹೊತ್ತಾಳ್ಯಾನ ಭೂಮಿ ಹೊತ್ತಿಳಿವ್ಯಾನ ಜೋಜೋ
ಕಲ್ಯಾಣ ಚೆನಬಸವೆಂದು ಹೆಸರಿಡರೆವ್ವ ಜೋಜೋ ||
ಬೊಟ್ಟು ಕುಂಕುಮದವರು ಉಡಿಯಕ್ಕಿ ತುಂಬಿರಿ ಜೋಜೋ|
ರನ್ನ ಮುತ್ತೈದೇರು ಗಲ್ಲೀಸಿ ಜೋಗುಳ ಜೋಜೋ ||
ಗಾಳಿ ಹಗ್ಗಮಾಡಿ. ಭೂಮಿ ತೊಟ್ಟಿಲಮಾಡಿ-ಜೋಜೋ |
ಆಕಾಶದೊಂಕೀಗೆ ಕಟ್ಟಿದರವ್ವ ಜೋಜೋ ||
ಮಡದಿ ನೀಲಮ್ಮ ಬಸವಯ್ಯ ತಾ ಬಂದು ಜೋಜೋ |
ಅಳಿಯ ಚೆನಬಸವೆಂದು ಹೆಸರಿಟ್ಟು ತೂಗ್ಯಾರ ಜೋಜೋ ||

ಎಂದು ಚೆನ್ನಬಸವನ ಜೋಗುಳವನ್ನು ಹಾಡಿ ಗಲ್ಲಿಸುವಳು. ಮಗು ಶಾಂತವಾಗದೆ ಕಿರಿಕಿರಿಮಾಡಹತ್ತಲು ಮತ್ತೆ.

ನಾಗಗನ್ನೇರೆಲ್ಲ ಬಂದೀರಿ ಕೂಡಿ-
ದೇವಗನ್ನೇರೆಲ್ಲ ಇಂದ ನಲಿದಾಡಿ-
ನಾಗ ಮುಕ್ಕುಂದನ ನಾಮ ಕೊಂಡಾಡಿ | ಹಿಂಗ
ಜೈಯೆಂದು ಪಾಡಿರಿ ಶ್ರೀಕೃಷ್ಣನೆಂದು || ಜೋಜೋ ||
ಮಲಗ್ಯಾನೊ ಕಂದ ಮಾತಿನ ಗಿಣಿಯೆ
ಹತ್ತು ದಿಕ್ಕಿಗೊಪ್ಪು ಮುತ್ತಿನ ತೆನಿಯೆ
ಮತ್ತ ಪೇಳಿದರ ರತ್ನದ ಕಣಿಯೆ | ಹರೀ
ಇಂದ್ರಂಬ್ರದೊಳೊಪ್ಪು ಅಮೃತದ ಧನಿಯೆ || ಜೋಜೋ ||

ಎಂದು ಜೋ ಹಾಡಿ ಮಗುವನ್ನು ಮಲಗಿಸಲು ಯತ್ನಿಸುವಳು. ಆದರೆ ಆವಳ ಯತ್ನವು ಸಫಲವಾಗದೆ ಮಗುವು ತನ್ನ ರಂಬಾಟವೆಬ್ಬಿಸಲು, ಹಡೆದ ತಾಯಿ ಗಾಬರಿಯಾಗಿ ತೊಟ್ಟಿಲದ ಕೂಸನ್ನೆತ್ತಿಕೊಂಡು ತೊಡೆಯಮೇಲೆ ಹಾಕಿ ಚಪ್ಪರಿಸಿ ಹಾಡಹತ್ತುವಳು:

ಚ್ಚೈ ಚ್ಚೈ ಚ್ಚೈ ಚಿರಗುಬ್ಬಿ |
ಚಿಕನವು ಕಂದನ ಕಂಡೀರಿ |
ಕಂಡವರ್ಯಾತಕ ಬಿಟ ಬಂದಿರಿ || ಪ ||
ಬಣ್ಣ ಬಣ್ಣದಾ ಚೋರಂಗಿ
ಬನಕೆ ಹಾರುತ ಹೋಗುತಲಿ
ಹಿಡಿಯಲು ಕಾಡನು ಸೇರಿದನ
ಕಾಡಿಗೆ ಮೆಚ್ಚಿದನ ||
ಆನೆಯ ಕೊಡುವೆನು ಬಾಯೆಂದೆ
ಒಂಟೆಯ ಕೊಡುವೆನು ಬಾಯೆಂದೆ
ಮುತ್ತಿನಂತ ಹೆಣ್ಣ ಕೊಡುವೆನು
ಬಾಯೆಂದು ಕೂಗಿದೆ ||

ಎಂದು ಹಾಡಿ ಚಪ್ಪರಿಸಲು, ತಾಯಿಯ ಅಂಗಸಂಪರ್ಕದಿಂದ ಮಗು ನಿರ್ಭಯವಾಗಿ ನಿದ್ದೆಹೋಗುವುದನ್ನು ಜೀವನದಲ್ಲಿ ಕಣ್ಣಾರೆ ಕಾಣಬಹುದು. ಇಂತಹ ಸಂಗೀತಸಂಯೋಗದಲ್ಲಿ ಆರು ಮೈ ಮರೆಯಲಿಕ್ಕಿಲ್ಲ?

ಪ್ರಪಂಚನೌಕೆಗೆ ಈ ಸಂಸಾರಸಾಗರದಲ್ಲಿ ಹೆಣ್ಣೇ ಚುಕ್ಕಾಣಿ. ಅವಳನ್ನುಳಿದು ಗಂಡಿಗೆ ಗತಿಯಿಲ್ಲ. ಅನೇಕ ಎಡರು-ತೊಡರು ಬಂದರೂ ಪ್ರಪಂಚದ ಭಾರವನ್ನು ಹೊರಲು ಗಂಡು-ಹೆಣ್ಣಿನ ಮನವು ಅವುಗಳನ್ನು ಎದುರಿಸಿ ಮಸೆದು ಮತ್ತಿಷ್ಟು ಹದನಾಗುವುದು. ಪ್ರಪಂಚವು ಸುಲಲಿತವಾಗಿ ಸಾಗಲೇಬೇಕು; ಅದದ್ದನ್ನು ಮರೆತು ಬರುವುದನ್ನು ಸ್ವಾಗತಿಸಲೇಬೇಕು. ಒಬ್ಬರು ಎತವಿದರೆ ಮತ್ತೊಬ್ಬರು ಎತ್ತಿ ನಿಲ್ಲಿಸಲೇಬೇಕು. ಹುಟ್ಟಿದ ಮನೆಬಿಟ್ಟು ಕೊಟ್ಟ ಮನೆಯನ್ನು ಸೇರುವ ಹೆಣ್ಣು, ಆ ಮನೆಯ ವಾತಾವರಣಕ್ಕೆ ಹೊಂದಿಕೊಂಡು ಹೋಗಲೇಬೇಕು. ಗಂಡು ಬಿರುಸಾದರೂ ಹೆಣ್ಣು ಕೋಮಲ ಹೃದಯವವಳಾಗಿ ಗಂಡಿನೊಡನೆ ನಕ್ಕು ಪ್ರಪಂಚ ಸಾಗಿಸಲೇಬೇಕು. ಅಂತೆಯೇ ನಮ್ಮ ಬಾಳು ನಗೆ-ಹೂಗೆಗಳ ಸುಳುವುಳ್ಳ ಮನೋಹರ ರಂಗಶಾಲೆ.

ಹೆಣ್ಣಿನ ಈ ರಸಾವೇಶಗಳು ಅವಳು ಉಂಡು ಅರಗಿಸಿದ ಬಾಳಿನ, ಎಂದೂ ಮಾಸದ ಚಿತ್ರಗಳು. ಬಾಳಿದು ಅವಳಿಗೆ ಕೇವಲ ಕನಸಲ್ಲ. ಪ್ರೇಮಿಗಳು ತುಂಬಿ ಹರಿಸುವ ರಸನಿಮಿಷಗಳ ಸಂಗಮ. ಕೆಲಕಾಲ ಸುಕ್ಕುವುದೂ ಉಂಟು; ಕೆಲಕಾಲ ಉಕ್ಕುವುದೂ ಉಂಟು. ಹೇಗಿದ್ದರೂ ಬಾಳು ಬದುಕಬೇಕಲ್ಲವೇ? ಅಂತೆಯೇ ಜಗತ್ತಿನಲ್ಲಿ ನಾವು ಕೈಕೊಳ್ಳುವುದು ಸಂಸಾರಯಾತ್ರೆ! ಈ ರಸಾವೇಶದ ಹಾಡುಗಳನ್ನು ಹಾಡುವ ನಮ್ಮ ಹಳ್ಳಿಯ ಹೆಣ್ಣುಮಕ್ಕಳು ರಸಿಕರಲ್ಲವೇ? 'ಕಾವ್ಯಕ್ಕೆ ರಸವೇ ಕಣ್ಣು!' ಎಂಬಂತೆ ಈ ಹೆಣ್ಣುಮಕ್ಕಳ ಬೀಸುವ ಹಾಡುಗಳು ಬಿಡಿ-ಪದ್ಯಗಳಿದ್ದರೂ ರಸಾತ್ಮಕವಾದ ಕಾವ್ಯದ ಬಿಡಿಮುತ್ತುಗಳಲ್ಲವೇ? ಈ ಎಲ್ಲ ಹಾಡುಗಳನ್ನು ಕೇಳುವ ನಮಗೆ ಜಾನಪದ ಕಾವ್ಯವು ವಸಂತಮಾಸದಲ್ಲಿ ಹಾರಾಡಿ ಹಾಡುವ ಕೋಗಿಲೆ ಏನೋ ಎಂಬಂತೆ ಭಾಸವಾಗದಿರದು.

ಹೆಣ್ಣಿನ ಜೀವನದ ಸುಂದರ ಚಿತ್ರಣದ
ಎರಡು ಕಾದಂಬರಿಗಳು
(೧) ವಿಧಿತಂದ ವಧು .... ೧—೮—೦
(೨) ಕುಲವಿಲ್ಲದ ಹೆಣ್ಣು .... ೧—೮—೦
ಹೆಣ್ಣಿನ ಬಾಳನ್ನು ಚಿತ್ರಿಸುವ ಸುಂದರ ಕತೆಗಳು
ಶ್ರೀಮತಿ ಶಾಂತಾದೇವಿ ಮಾಳವಾಡ
(೩) ಕುಂಕುಮಪಟಲ .... ೧—೦—೦
(ಪ್ರ. ವಿ. ಕೃ. ಗೋಕಾಕರ ಮುನ್ನುಡಿ ಸಹಿತ)
ಪ್ರಸಿದ್ಧ ಲಾವಣಿಕಾರರಾದ ಕವಿ
ಶ್ರೀಧರ ಖಾನೋಳಕರ
(೪) ಹೂಗಂಪು (ಲಾವಣಿಗಳು) .... ೦—೧೨—೦
ಈ ಮೇಲಿನ ನಾಲ್ಕು ಪುಸ್ತಕಗಳು ತರಿಸಿದವರಿಗೆ
ಅಂಚೆ ವೆಚ್ಚ ಉಚಿತ
ಗವಳೀಗಲ್ಲಿ ವ್ಯವಸ್ಥಾಪಕರು
ಹುಬ್ಬಳ್ಳಿ ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಚೈತ್ರಾಗಮನ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ

೧

ತುಂಬುಚೈತನ್ಯವನು ಪ್ರವಹಿಸುವ ಚೈತ್ರವದು
ವಸುಧೆಯಲಿ ಅದೊ ಹೆಜ್ಜೆ ಹಾಕಿ ಬಹುದು;
ಪಕ್ಷಿಸಂಕುಲವೆಲ್ಲ ಕಿಂಕಿಣಿಯ ರವದಂತೆ
ಕಿಲಕಿಲನೆ ನಗೆನಕ್ಕು ಹಾರುತಿಹುದು.

೨

ಮುತ್ತುಗಳ ಕೋದಂತೆ ನಭಕೆ ತೋರಣದಂತೆ
ಶೋಭಿಸವು ಹಕ್ಕಿಗಳು ನಭದಿ ಹಾರಿ,
ಅನುನಯದ ಬೆಸುಗೆಯಲಿ ಸಾಗಿರಲು, ವಸುಧೆಯಲಿ
ಮೇಲು-ಕೀಳಿಲ್ಲದೊಲು ಸಮತೆ ತೋರಿ.

೩

ವಿಸ್ತೀರ್ಣವ್ಯೋಮದಲಿ ವಿಹರಿಸುವ ಮೋಡಗಳು
ಮದವೇರಿ ಸಾಗುವುವು ಜೋಲಿಹೊಡೆದು—
ಗಳಿಗೆ-ಗಳಿಗೆಗೆ ವಿವಿಧ ವಿವಿಧ ರೂಪವ ತಳೆದು
ಜಗದಿ ರಂಜಿಸುತಿಹವು ಮನವ ಮಿಡಿದು.

೪

ಚಿತ್ರವನು ಸೆರೆಹಿಡಿವ ಚಿತ್ರಾರ ಬರೆದಿಡುವ
ಚೈತ್ರಚಿತ್ರಕನಿವನ ಬೆಡಗನೋಡು—
ಚಿತ್ತವಿಭ್ರಮಗೊಳಿಸಿ ಚೈತ್ರಯಾತ್ರೆಗೆ ಎಳಸಿ
ನಿಂದ ಚಿತ್ರಜಗವನು ಜಗದಿ ಜೋಡು.

೫

ಪಟಪಟನೆ ಕಣ್ತೆರೆದು ಅರಳಿ ಮುಗಮುಗಿಸುತಿಹ
ಹೂಗೊಂಚಲಲಿ ಎಸೆಯೆ ಇಂಚರವದು—,
ತಕಪಕನೆ ಕುಣಿಯುವುದು ಜನಮನವು ಆ ಚಣದಿ
ಮೆರೆಯೆ ನುಣ್ದನಿಯಲೆಯ ಮಂಜರಿಯದು.

೬

ಒಲವು ಹೃದಯದಿ ತುಂಬಿ ಹೂವು ಹೂವಿಗೆ ದುಂಬಿ
ಚುಂಬಿಸಲು ಸಂಗೀತ ಸುಧೆಯ ಹರಸಿ—,
ರಾಗರಾಗದಿ ಬೆರೆತು ಮನಸೋತು ಮೈಮರೆತು
ಮನುಜಕುಲ ತಣಿದಿತೋ ಮುದವ ಸುರಿಸಿ.

೭

ಗಿಡಬಳ್ಳಿ ತಲೆದೂಗಿ ಆನಂದದಲಿ ತೇಗಿ
ತಮ್ಮ ಸಂಪದದಿಂದೆ ಸ್ವಾಗತಿಸವು—;
ಮಧುಮಾಸ ಬಂದಿರಲು ಮಧುಹಾಸದಿಂದಿರಲು
ಋತುರಾಜನನು ಬಿಡದೆ ಆದರಿಸವು.

೮

ಸೌಂದರ್ಯ ಸಾಕಾರವಾಗಿ ನಿಂದಿರುವಂತೆ
ಲಾವಣ್ಯದಲಿ ಪ್ರಕೃತಿ ರಂಜಿಸುವುದು;
ಪಚ್ಚವರ್ಣದ ರತ್ನಗಂಬಳಿಯ ಹಾಸಿ ತಿರೆ
ಋತುರಾಜನನು ತಾನು ಪೂಜಿಸುವುದು.

೯

ಸ್ವರ್ಣವರ್ಣದ ಕಿರಣ ಹರಡಿ ಶೋಭಿಪ ಸೂರ್ಯ
ಉತ್ಸಾಹ ಮೈದುಂಬಿ ಮೂಡುತಿಹನು;
ಸ್ವರ್ಣಕಿರಣಪ್ರಕೀರ್ಣ ಚೀನಾಂಬರವ ನೆಯ್ದು
ಪ್ರಕೃತಿವನಿತೆಗೆ ರವಿಯು ಉಡಿಸುತಿಹನು.

ಬೋರಿವಿಲಿ ಲೋಕಲ್

(ಸಣ್ಣ ಕತೆ)

ಶ್ರೀ. ಹೇಮಂತರಾಜ ಮಿತ್ರಮಂಡಲ— ಮಲಾಡ (ಮುಂಬಯಿ)

卐

ಮಾನವನ ಲೈಂಗಿಕವಿಕೃತಿಗಳು ಅನಿವಾರ್ಯವಾದುವು. ವಾತಾವರಣದ ನೆರವು ದೊರೆತರಂತೂ ಅವು ಮೇರೆ ಮೀರಿಯೇ ವರ್ತಿಸತೊಡಗುವುವು. ಎಂತಲೇ ಸಂಯಮಜೀವಿಗಳಾಗಬೇಕೆನ್ನುವವರು, ಪವಿತ್ರ ವಾತಾವರಣದ ಕೋಟೆಯನ್ನು ಕಟ್ಟಿಕೊಳ್ಳಬೇಕಾಗುವುದು !

卐

ಚರ್ನಿರೋಡ್ ಸ್ಟೇಶನಿಗೆ ರಾಧಾಬಾಯರು ಬಂದಾಗ, ವೇಳೆ ಆಗಲೇ ಆರು ಹೊಡೆದು ಹತ್ತು ನಿಮಿಷ ಆಗಿತ್ತು. ಎಂದರೆ 'ಸಿಂಗಲ್ ಫಾಸ್ಟ್' ಬೋರಿವಿಲಿ ಲೋಕಲ್ ಬರಲು ಕೇವಲ ಎರಡು ಮಿನಿಟುಗಳ ಅವಕಾಶ ಮಾತ್ರವಿತ್ತು. ಜೂನ್ ಕೊನೆಯವಾರವಾದುದರಿಂದ, ಮುಂಬಯಿಯಲ್ಲಿ ಮಳೆಗಾಲ ವಾಡಿಕೆಯ ರೂಪದಲ್ಲಿ ಪ್ರಾರಂಭವಾಗಿತ್ತು. ಆಕಾಶ ಕಪ್ಪು ಆಗಿದ್ದರೂ ಅದರ ಅಂಜಿಕೆ ಯಾರಿಗೂ ಇದಂತಿರಲಿಲ್ಲ. ನಿಲ್ದಾಣದಲ್ಲಿಯ ಜನದ ಮೋರೆಯ ಮೇಲೆ ಉತ್ಕಂಠತೆಯೇನೋ ಕ್ಷಣಕ್ಷಣಕ್ಕೂ ಹೆಚ್ಚಿ ಜನರ ಉದ್ವಿಗ್ನತೆಯನ್ನು ಜಾಗೃತಗೊಳಿಸುತ್ತಿತ್ತು.

ಇದರ ವಾಸ್ತವಚಿತ್ರ ಮುಂಬಯಿಯಲ್ಲಿಯ ಎಲ್ಲ ಜನಕೂ ಗೊತ್ತಿರಲು ಸಾಕು. ನಿತ್ಯದ ಯಾಂತ್ರಿಕವಾದ ವೇಳಾಪತ್ರಿಕೆಯಲ್ಲಿ ಎಂಟರಲ್ಲೊಂದರಷ್ಟು ಪಾಲು ಈ ಗಾಡಿಯ ಪ್ರವಾಸಕ್ಕೆ ಮೀಸಲು. ಆದರೆ ಮೊದಲು ಹೊಸ ಉಬ್ಬು ಎನ್ನುವುದರಲ್ಲಿ, ಅನಂತರ ಮೈಗೂಡಿದ ರೂಢಿ ಎನ್ನುವಂತೆ, ಮುಂಬೈ ಜನ ಇದೆಲ್ಲಕ್ಕೂ ಒಗ್ಗಿ, ಅದರಲ್ಲಿಯೇ ಏಕರೂಪವಾಗುತ್ತಿದ್ದಾರೆ. ಕೊನೆ-ಕೊನೆಗೆ ಇದು ಅವರ ನಿತ್ಯದ ಅವಶ್ಯಕ ಕಾರ್ಯಕ್ರಮಗಳಾದ ಮೋರೆ ತೊಳೆಯುವುದು, ಹಲ್ಲುಜ್ಜುವುದು ಇವುಗಳಷ್ಟೇ ಸಹಜವಾಗಿ ಹೋಗುವುದು. 'ಚರ್ಚ್‌ಗೇಟ್' ಸ್ಟೇಶನಿನಲ್ಲಿಯೇ ಹತ್ತಿದವರಿಗೆ ಕುಳಿತುಕೊಳ್ಳಲು, 'ಮರೀನ್ ಲಾಯಿನ್ಸ್' ನಲ್ಲಿ ಏರುವವರಿಗೆ ಹಾಯಾಗಿ ನಿಲ್ಲಲು—ಇನ್ನು 'ಚರ್ನಿರೋಡ್' ನವರಿಗೆ ಹೇಗೋ ಕಾಲಿಡಲು ಅವಕಾಶ! ಮುಂದಿನ ಸ್ಟೇಶನಿನವರಿಗೆ ದೇವರೇ ಗತಿ! ಆದರೆ ನಿತ್ಯದ ಅಭ್ಯಾಸಬಲದಿಂದ, ಜನರು ಗಾಡಿಯನು ಏರಬೇಕಾಗಿರದಿದ್ದರೂ ಏರುವರು. ಹೇಗೋ ಮನೆಯನ್ನು— ಜನಸಮುದಾಯದ ಹುಚ್ಚು ಆವೇಶದ ಭರದಲ್ಲಿ— ಸೇರಿಕೊಳ್ಳುವರು.

ರಾಧಾಬಾಯರು ಸ್ಟೇಶನಿಗೆ ಬಂದಾಗ ಎರಡೇ ನಿಮಿಷಗಳು ಉಳಿದಿದ್ದುವು. ಮಳೆ ತನ್ನ ಪಾಡಿಗೆ ಯಾರ ಉತ್ಕಂಠತೆಯನ್ನೂ ಮನ್ನಿಸದೆ ಬರುತ್ತಿತ್ತಾದುದರಿಂದ, ನಿಲ್ದಾಣಕ್ಕಿದ್ದ ಅರೆಮರೆಯಾಗುವ ತುಂಡುಚಪ್ಪರವನ್ನು ಬಿಟ್ಟು ಮುಂದೆ ಸರಿಯಲು ಯಾರೂ ಮನಸ್ಸು ಮಾಡಿರಲಿಲ್ಲ. ಹೀಗಾಗಿ ನಿತ್ಯದ ಇಮ್ಮಡಿ ಗದ್ದಲು ಒಂದೇ ಕಡೆಗೆ ಸೇರಿತ್ತು. ಎಲ್ಲರಂತೆಯೇ ಅನಿವಾರ್ಯವಾಗಿ, ಮಳೆಯಲ್ಲಿ ಗದ್ದಲ ದಾಟಿಕೊಂಡು. ಹೆಣ್ಣುಮಕ್ಕಳ ಡಬ್ಬಿಯನ್ನು ಸೇರುವುದು ರಾಧಾಬಾಯಿಯವರಿಗೂ ಸರಿದೋರಲಿಲ್ಲ. ಅಷ್ಟಲ್ಲದೆ, ಅವರ ಈ ಕಷ್ಟವು ಫಲಕೊಡುವಷ್ಟು ವೇಳೆಯೂ ಇರಲಿಲ್ಲ. ಒಂದೇ ಕ್ಷಣ! ಗಾಡಿಯ ದೀಪ ಕಾಣುವಷ್ಟರಲ್ಲಿ ಒಂದೊಂದಾಗಿ ಡಬ್ಬಿಗಳು "ಧಡ್ ಧಡ್ ಧಡಲ್" ಎಂದುಕೊಳ್ಳುತ್ತ ಜನರ ಮುಂದಿನಿಂದ ಓಡಿದುವು. ಗಾಡಿ ಬಂದದ್ದೂ ಆಯಿತು; ನಿಂತಂತೆ ಮಾಡಿ ಹೊರಟೂ ಹೋಯಿತು. ಅಂತೂ ಪ್ಲ್ಯಾಟ್‌ಫಾರ್ಮನಲ್ಲಿ ಒಂದು ಕ್ಷಣ, ಮೂರು ನಾಲ್ಕಾಂಶದಷ್ಟು ಗದ್ದಲ ಕಡಿಮೆಯಾಯಿತು ಮರುಕ್ಷಣ ಮತ್ತೆ ಸಮುದ್ರದ ತೆರೆಗೂ ಮೀರಿ ಜನ ಮುಂದಿನ ಗಾಡಿಗಾಗಿ ಹಾಗೆಯೇ ಅಸಮಾಧಾನದಿಂದ ಕಾಯುತ್ತಿದ್ದರು

ಗಾಡಿ ನಿಲ್ದಾಣ ಬಿಟ್ಟು ಮುಂದೆ ಸಾಗಿತು. ಇನ್ನು ಗ್ರ್ಯಾಂಟ್-ರೋಡ್ ಒಂದನ್ನು ಬಿಟ್ಟರೆ ದಾದರ ವರೆಗೆ ಗಾಡಿ ನಿಲ್ಲುವಂತಿರಲಿಲ್ಲ. ಆ ವರೆಗೆ ಎಲ್ಲೂ ಗಾಡಿಯ ಚಲನೆಯ ಗತಿಯನ್ನು ಬಿಟ್ಟರೆ, ಆ ಕಡೆ ಈ ಕಡೆ ಮಿಸುಕುವಂತಿರಲಿಲ್ಲ. ಪ್ರತಿಯೊಬ್ಬನೂ ಮನದಲ್ಲಿ ಉಳಿದವರನ್ನು ಕುರಿತು: 'ಇವರು ಮುಂದಿನ ಗಾಡಿಗೇಕೆ ಬರಕೂಡದು?' ಎನ್ನುತ್ತಿದ್ದರು. ಆದರೆ ಮನೆಮುಟ್ಟಲು ಈ ಮಳೆಗಾಲದಲ್ಲಿ ಎಲ್ಲರಿಗೂ ಅಷ್ಟೇ ಆತುರ; ಎಂದಿನಿಂದಲೂ ಈ ಆತುರ ಇದ್ದರೂ, ಅನಿಶ್ಚಿತ ಹಾಗೂ ಅನಿಯಮಿತವಾದ ಮುಂಬೈಮಳೆಗಾಲದಲ್ಲಿ, ಅದು ಸ್ವಲ್ಪ ಹೆಚ್ಚು. ರಾಧಾಬಾಯರು 'ಅಚೆ ಈಚೆ ಎಲ್ಲಾದರೂ ಏನಾದರೂ ಮಿಸುಕಲು ಸಾಧ್ಯವೇ?' ಎಂದು ವಿಚಾರಿಸಿದರು. ಆದರೆ "ಉಂ, ಹೂಂ" ವಿಚಾರಿಸಲೂ ಜಾಗೆ ಇರಲಿಲ್ಲ.

ಡಬ್ಬಿಯಲ್ಲಿ ಗುಂಪು-ಗುಂಪಾಗಿ, ನಿಂತಿರಲಿ, ಕೂತಿರಲಿ—ಬೋರಿವಿಲಿ ಕಾಂದೀವಲಿಯ ಗುಜರಾಥೀ ವ್ಯಾಪಾರಿಗಳು "ಬ್ರಿಜ್"ನ್ನೋ, "ರೆಮಿ" ಯನ್ನೋ ಪ್ರಾರಂಭಿಸಿದ್ದರು. ಈ ಗದ್ದಲದಲ್ಲಿಯೇ

ಯಾವುದೋ ತುದಿಯಲ್ಲಿ "ಪಾರ್ಲೇವಾಲಾ" ಪೇಪರುಮೆಂಟುಗಳ ಮಾರಾಟಕ್ಕಾಗಿ ಕೂಗುತ್ತಿದ್ದ. ಯಾವುದರಲ್ಲೂ ನಾವೀನ್ಯವಿಲ್ಲ, ಅಚ್ಚರಿಯಿಲ್ಲ.

ರಾಧಾಬಾಯಿಯರ ವಿಚಾರ ಆ ಮಾತನ್ನೇ ಮೆಲುಕುಹಾಕುತ್ತಿತ್ತು. ಕ್ಲಾಸಿನಲ್ಲಿ ಸಂಸ್ಕೃತದ ಪಾಠ ಹೇಳುತ್ತಿದ್ದಾಗ ವ್ಯಾಸಮಹರ್ಷಿಯು:

" ಊರ್ಧ್ವ ಬಾಹುವಿರಾಮ್ಯೇಷ ನ ಚ ಕಶ್ಚಿಚ್ಛೃಣೋತಿ ಮಾಮ್
ಧರ್ಮಾದರ್ಥಶ್ಚ ಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ ‖ "

ಶ್ಲೋಕವನ್ನು ವಿವರಿಸುತ್ತಿದ್ದಾಗ ಅವರ ಮನಸ್ಸಿನಲ್ಲಿ—ಒಂದು ಅಸಮಾಧಾನದ ತೆರೆ ಬಂದು ಹೋಯಿತು. ಮನುಷ್ಯ ಸುಖದ ಬೆನ್ನು ಹತ್ತಿರುವನು ಆ ಸುಖ ದೊರಕಿಸುವುದಕ್ಕಾಗಿ ಅವನು ಹಣಕ್ಕಾಗಿ ಅಲೆಯುವನು. 'ಎಲ್ಲ ಸುಖವೂ ಹಣದಲ್ಲಿಯೇ ಅಡಗಿದೆ' ಎಂಬ ಭಾವನೆ ಸಹಜವಾಗಿ ಅವನಲ್ಲಿ ಬೆಳೆದು ಬಂದಿದೆ. ಅಂತೆಯೇ ಅವನು ಹಣಕ್ಕಾಗಿ ಹಾಗು ವಿಷಯೇಚ್ಛೆಯ ತೃಪ್ತಿಗಾಗಿ ಅನೇಕಬಾರಿ ಅಧರ್ಮಾಚರಣೆಗೈಯುವನು. ಆದರೆ ನಿಜವಾಗಿ ವಿಚಾರಿಸಿದಾಗ, ಸುಖಪ್ರಾಪ್ತಿಗಾಗಿ ಅಧರ್ಮಾಚರಣೆ ಅವಶ್ಯವಿಲ್ಲ ಹೀಗಿದ್ದರೂ ಅಧರ್ಮಾಚರಣೆಯ ಅಭಿರುಚಿ ಪರಂಪರಾಗತವಾಗಿದೆ. ಅನಾದಿಯೂ ಆಗಿದೆ. ಇದನ್ನು ಕಂಡು ತಳಮಳಗೊಂಡು ವ್ಯಾಸಮಹರ್ಷಿಯು ಹೇಳುತ್ತಾನೆ:

"ಧರ್ಮದಿಂದ ನಡೆದಾಗ ಮನುಷ್ಯನಿಗೆ ಅರ್ಥ ಹಾಗು ಕಾಮನೆ ಪೂರ್ತಿಯಾಗುತ್ತಿರುವಾಗ, ಎಲ್ಲ ಜನ ಧರ್ಮದಿಂದಲೇ ಏಕೆ ನಡೆಯರು ? ಹೀಗೆ ನಾನು ಕೈಯೆತ್ತಿ ಕೇಳುತ್ತಿರುವೆ. ಆದರೆ ನನಗೆ ಯಾರೂ ಉತ್ತರ ಕೊಡರು ! "

ಆದರೆ ಕ್ಲಾಸಿನಲ್ಲಿ ಯಾರಿಗೂ ಈ ಮಾತು ಒಪ್ಪಿದಂತೆ ತೋರಲಿಲ್ಲ. ಅವರಿಗೂ ಒಪ್ಪಿರಲಿಲ್ಲ. ಅವರ ಮನಸ್ಸು ಅನೇಕಬಾರಿ ಬಂಡೆದ್ದು ಕೇಳುತ್ತಿತ್ತು :

" ಧರ್ಮದಿಂದ ನಡೆದಾಗ ಸುಖ ಸಿಗುತ್ತಿದ್ದರೆ ನಿನ್ನ ಧರ್ಮ ನಿನ್ನ ಅಶಾಂತಿಯನ್ನು ಏಕೆ ಹೋಗಿಸುತ್ತಿಲ್ಲ ? " ಎಂದು. ಆಗ ಅವರ ಮನಸ್ಸು ಅವರ ಅಂಕೆಯನ್ನು ಮೀರಿ ಕೂಗುತ್ತಿತ್ತು. " ವ್ಯಾಸನಿಗೆ ತಿಳಿಯದು. ಧರ್ಮದಿಂದ ನಡೆದಾಗ ಅವರ ಧರ್ಮ ಇದ್ದ ಸುಖವನ್ನೂ ಕೊಚ್ಚಿಕೊಂಡು ಹೋಗುವುದು " ಎಂದು. ಇಲ್ಲವಾದರೆ—

ಅಷ್ಟರಲ್ಲಿ "ಏ ಬಾಯಿ", ಎಂದು ಅವರನ್ನು ಉದ್ದೇಶಿಸಿ ಒಳಕ್ಕೆ ಹೋಗಲು ಎಂದರೆ ಸೀಟಿನ ನಡುವೆ ಇರುವ ದಾರಿಯಲ್ಲಿ ಸರಿಯಲು ಸೂಚಿಸಿದರು. ತತ್‌ಕ್ಷಣ ನೂಕು—ನುಗ್ಗಾಟಗಳ ನಡುವೆ ಅವರಿವರನ್ನು ತಾಕುತ್ತ ಒಳಕ್ಕೆ ಸೇರಿದರು. ಆ ಜಾಗೆ ಎಷ್ಟೋ ಚೆನ್ನಾಗಿತ್ತು. ನಾಲ್ಕು ಜನಗಳ ಗದ್ದಲದಲ್ಲೂ ಹಾಯಾಗಿ ನಿಲ್ಲುವಷ್ಟಾದರೂ ಜಾಗೆ ಆಯಿತು. ಆಗಲೇ " ಬಾಂಬೆ ಸೆಂಟ್ರಲ್ " ದಾಟಿಯಾಯಿತು. ಇನ್ನೂ ವಿಲೆ ಪಾರ್ಲೆ ದೂರದ ದಾರಿ. ಅವರ ತಲೆಯಲ್ಲಿಯ ವಿಚಾರ ನಿಂತಿರಲೇ ಇಲ್ಲ. 'ಏನನ್ನು, ಏಕೆ ? ' ಒಂದೂ ಗೊತ್ತು ಗುರಿಯಿರಲಿಲ್ಲ.

ನಡುವೆ ಗಾಡಿಯ ಕುಣಿತಕ್ಕೆ ತಾಳ ಹಾಕುತ್ತಿರುವಾಗ, ಯಾರಾದರೂ ಮೈತಾಗಿದಾಗ, ಅಭ್ಯಾಸಬಲದಿಂದ ಮೈ ಮುದುಡುತ್ತಿತ್ತು. ಧ್ಯಾನಭಂಗವಾದಂತೆ ಆಚೀಚೆ ಕಣ್ಣುಗಳು ಹೊರಳಿ ನೋಡುತ್ತಿದ್ದುವು. ಮೂಲೆಯಲ್ಲಿ ಇಬ್ಬರು ಮಹಾರಾಷ್ಟ್ರದ ಗಂಡ-ಹೆಂಡತಿ ಕುಳಿತಿದ್ದರು. ಆ ಕಡೆ ಕೊಸನ್ನೆತ್ತಿಕೊಂಡ ತರುಣ ಗುಜರಾಥೀ, ಗದ್ದಲವನ್ನು ಲೆಕ್ಕಿಸದೆ ನಗೆಮಾತುಗಳಿಂದ ಹೆಂಡತಿಯನ್ನು ನಗಿಸಲು ಯತ್ನಿಸುತ್ತಿದ್ದ. ಮತ್ತೆ ಆ ಮರಾಠೀ ದಂಪತಿಗಳು ಲಲ್ಲೆಯಿಂದಲೇ ಇದ್ದರು. ಇದನ್ನೆಲ್ಲ ಒಂದು ಕ್ಷಣ ತುಂಬುಗಣ್ಣಿನಿಂದ ನೋಡಿದರು. ಅವರಿಗೆ ಅರಿವಾಗದಂತೆಯೇ ಅವರ ಗಲ್ಲ ಕೆಂಪಾದುವು. ಅವ್ಯಕ್ತಭಾವನೆಯಿಂದ ಮುಖಕ್ಕೆ ಕಳೆಯೇರಿತು. ಮೂವತ್ತೈದರ ಇಳಿವಯಸ್ಸಿನಲ್ಲಿಯೂ ವಿಶಿಷ್ಟವಾದ ಸೌಂದರ್ಯ ಅವರ ನೋರೆಯನ್ನು ಬಿಟ್ಟು ತೊಲಗಿರಲಿಲ್ಲ. ಒಂದೊಂದು ಅವಯವವೂ ಪೈಪೋಟಿ ಮಾಡುತ್ತಿದ್ದುವು ಹಿಡಿತ ತಪ್ಪಿದ ಮನಸ್ಸು ಖೋಡಿ ಹುಡುಗನಂತೆ ಅಂಕೆಗೆ ಸಿಕ್ಕದೆ ಓಡುತ್ತಿತ್ತು.

" ಭಾಸ್ಕರನನ್ನು ಮೊದಲ ಬಾರಿಗೆ ಕಂಡುದು ಅವರಕ್ಕನ ಮದುವೆಯಲ್ಲಿ. ಅಂದೂ ಹಾಗೆಯೆ ಮನಸ್ಸು ಏನೋ ಹುಚ್ಚು ಕಲ್ಪನೆಗಳಿಂದ ಪುಲಕಿತವಾಗುತ್ತಿತ್ತು. ಅಕ್ಕ ಕೇಳಿದಾಗ, 'ಅದೆಲ್ಲ ನಿನಗವ್ವಾ' ಎಂದು ರಾಗವಾಗಿ ತೇಲಿಸಿದರು. ಅಕ್ಕ ಗುಟ್ಟನ್ನು ತಿಳಿಯದೆ ಹೋಗಲಿಲ್ಲ. ಭಾಸ್ಕರನೂ ದೂರದವನಾಗಿರಲಿಲ್ಲ. ಅವರಾಶೆ ಕೈಗೂಡಲು ತಡವಾಗಲಿಲ್ಲ. ಭಾಸ್ಕರ ಅವರವನಾದ ....ಕೇವಲ ಅವರವನಾದ. ಹುಚ್ಚು ಹುಚ್ಚು ಆಶೆಗಳು, ಕಲ್ಪನೆಯ ಕಾವ್ಯಗಳು ಮೂರ್ತಿಮತ್ತಾಗಿ ನನಸಾಗಿ ದೊರೆತುವು ಅಂದು—" ಮತ್ತೆ ರಾಧಾಬಾಯಿಯರು ತಮ್ಮಷ್ಟಕ್ಕೇ ನಾಚಿದರು. ಅದರ ಜೊತೆಗೆ ಸವಿಗನಸಿನ ತೃಪ್ತಿಯ ಮುಗುಳುನಗೆ ಮೆಲ್ಲನೆ ಮೂಡಿತು.

ಎದುರು—ಬದುರಾಗಿ ನಿಂತ ಗೃಹಸ್ಥ ಒಮ್ಮೆಲೇ ಆಧಾರ ತಪ್ಪಿದವನಂತೆ ಅವರ ಮೇಲೆ ನೂಕಲ್ಪಟ್ಟ. ಅವನ ಬಿಸಿಯುಸಿರು ಹಣೆಗೆ ತಾಗಿದಾಗ, ಮತ್ತೆ ವಿಚಾರಶಕಟ ವಾಸ್ತವಪ್ರಪಂಚಕ್ಕೆ ಬಂದಿತು. ಹೊರಗಿನ ಬೆಳಕು ಕಂಡಾಗ ದಾದರ ಬಂತೆಂದು ತಿಳಿಯಿತು. ಅವರ ದುರ್ದೈವಕ್ಕೆ ಅಲ್ಲಿಯೂ ಕುಳಿತುಕೊಳ್ಳಲು ಜಾಗೆ ದೊರೆಯಲಿಲ್ಲ "Modern G-llent y" ತೋರುವ ಪ್ರವೃತ್ತಿ ಅಲ್ಲಿರುವ ಯಾರಿಗೂ ಇದ್ದಂತಿರಲಿಲ್ಲ ಮೋರೆಯನ್ನು ಮೇಲೆತ್ತಿದಾಗ, ಎದುರು ನಿಂತ ಗೃಹಸ್ಥ ಕ್ಷಮಾಯಾಚನೆಯ ದೀನದೃಷ್ಟಿಯಲ್ಲಿ ಅವರನ್ನು ನೋಡಿದ. ಅವನ ಕಣ್ಣುಗಳು ಕೇಳುತ್ತಿದ್ದವು:

" ನಿರುಪಾಯ, ನನ್ನನ್ನು ಕ್ಷಮಿಸಿ " ಎಂದು. ಅದರ ಪರಿವೆ ಅವರಿಗಿರಲಿಲ್ಲ. ಇದ್ದುದರಲ್ಲಿ ಮೈ ಮುದುಡಿಕೊಂಡರೂ ಫಲ ದೊರೆಯಲಿಲ್ಲ. ಅವರ ಕಾಲು ಗದ್ದಲದಲ್ಲಿ ಸಿಕ್ಕಿಕೊಂಡಿತ್ತು. ಮತ್ತೊಮ್ಮೆ 'ಥೀ, ಥೀ, ಥಿಕ್' ಮಾಡಿಸಿ ಗಾಡಿ ಓಡಿತು. ಮುರಿದು ಬಿದ್ದ ವಿಚಾರಚಕ್ರ ಮತ್ತೆ ಓಡಿತು:

ಅಂದು ಮೊದಲಬಾರಿ ಭಾಸ್ಕರ ಗಂಡನೆಂದು ಆದ ದಿನ, ಅವರನ್ನು ಮಾತಾಡಿಸಿದ. ಮದುವೆಯ ಮೊದಲು ಅಷ್ಟಿಷ್ಟನ್ನು ಮಾತ-

ನಾಡುತ್ತಿದ್ದ ಅವರಿಗೆ, ಅಂದು ಗಂಟಲಲ್ಲಿಯೇ ಸಿಕ್ಕಿಕೊಂಡಿದ್ದುವು. ಅದರ ಚಿಂತೆ ಅವನಿಗಿಲ್ಲಿಲ್ಲ. ಅಂದು ಎಲ್ಲ ಮಾತೂ ಅವನದೇ! ಎಲ್ಲದರಲ್ಲೂ ಮುಂದುವರಿವ ಅವನು. "ಛೂ, ಸುಡುಗಾಡು ನಾಚಿಕೆ ಹೆಂಗುಸರನ್ನು ಹಾಳು ಮಾಡುತ್ತಿದೆ" ಎಂದುಕೊಳ್ಳಹತ್ತಿತು ಅವರ ಮನ. ಅವರು ಅಂದು ಎಷ್ಟೆಷ್ಟೋ ಮಾತನಾಡಬೇಕೆಂದಿದ್ದರು. ತಮ್ಮ ಭವಿಷ್ಯವನ್ನು ರೂಪಿಸಬೇಕು, ಹಾಗೆ, ಹೀಗೆ. ಇನ್ನೂ ಏನೇನೋ। ಆದರೆ— ಆ ಹಾಳುನಾಚಿಕೆ ಅವರನ್ನೂ ಅವರ ಗುಲಾಬಿಯ ಗಲ್ಲಗಳನ್ನೂ ಇನ್ನೂ ಕಳೆಗೂಡಿಸುವುದರ ಹೊರತು ಬೇರೆ ಏನನ್ನೂ ಮಾಡಲಿಲ್ಲ. ಮುಚ್ಚಿದ ಬಾಯಿಗೆ ಬಿಚ್ಚುಗೆಯಾಗಲಿಲ್ಲ ಭಾಸ್ಕರ ಹೇಳಹತ್ತಿದ್ದ; ಹೇಳುತ್ತಲೇ ಇದ್ದ. ಇವರೂ ಕೇಳುತ್ತಿದ್ದರು; ಕೇಳುತ್ತಲೇ ಇದ್ದರು. ಅನಿರೀಕ್ಷಿತವಾಗಿದ್ದರೂ ಅಪೇಕ್ಷಿತವೇ ಆಗಿದ್ದ ಅದನ್ನು ಒಂದೇ ಕ್ಷಣದಲ್ಲಿ ಮುಗಿಸಿದ್ದ. ಮತ್ತೊಮ್ಮೆ ಅವರ ಮೋರೆ ಕೆಂಪಾಯಿತು. ಅನಿರೀಕ್ಷಿತವಾಗಿ ಭಾಸ್ಕರ ಅವರನ್ನು ತಬ್ಬಿಕೊಂಡು, ಮುಚ್ಚಿಕೊಂಡಿದ್ದ ಬಾಯಿಗೆ ಬೀಗಮುದ್ರೆಯನ್ನೂ ಒತ್ತಿದ್ದ. ಅವನ ಬಿಸಿಯುಸಿರು, ಅವರ ಧಡಧಡಿಸುತ್ತಿದ್ದ ಎದೆಬಡಿತ, ಬಿಗಿಯಾಗಿದ್ದರೂ ಹಿತವಾಗಿದ್ದ ಅವನ ಬಾಹುಬಂಧನ ಎಲ್ಲವೂ ಹೊಸಲೋಕಕ್ಕೆ ಒಯ್ದಿದ್ದುವು ಸ್ವರ್ಗಸುಖ ಅದೇ ಇರಬಹುದು ಎಂದುಕೊಂಡಿದರು. ಆ ವಿಚಾರವೇ ಅವರ ಮೋರೆಯ ಮೇಲೆ ನಗೆಯ ರೇಷೆಯೊಂದನ್ನು ಮೂಡಿಸಿತು.

"ನನ್ನ ದೊರೆ—" ಇದಕ್ಕೂ ಹೆಚ್ಚಿನ ಮಾತು ಅವರ ನಡುಗುವ ತುಟಿಯನ್ನು ದಾಟಿ ಬರಲಿಲ್ಲ.

ಆದರೆ ಆ ಕ್ಷಣ— ಸುಖ— ಎಲ್ಲವನ್ನೂ ಭಾಸ್ಕರ ತನ್ನೊಟ್ಟಿಗೆ ಸೂರೆಗೊಂಡು ಒಯ್ದನು. ಮೊನ್ನೆಮೊನ್ನೆಯಂತೆ ಇದ್ದ ಆ ಸವಿಸುಖ ಎಲ್ಲವೂ ಹೋದುವು. ಭಾಸ್ಕರ ತಿರುಗಿ ದೀಪಾವಳಿಯಲ್ಲಿ ಬಂದು ಕರೆದೊಯ್ಯುವೆನೆಂದು ಹೇಳಿದವ ಬರಲಿಲ್ಲ. ಆತನಿಗೆ ಬರಲಾಗಲಿಲ್ಲ. ಆದುದರಿಂದ ತಾನೇ ಹೋಗಬೇಕಾಯಿತು. ಭಾಸ್ಕರ ಹೇಳಿದ—

"ನಾನು ದೈವಹೀನ ರಾಧಾ! ನಿನ್ನ ಸಂಗಡ ಸಂಸಾರಸುಖ ಸವಿಯುವ ಭಾಗ್ಯ ನನಗಿಲ್ಲ. ನಾನು ಬಹುತರ—"

"ನನ್ನಾಣೆ ದಯೆಯಿಟ್ಟು ಸುಮ್ಮನಿರುವಿರಾ? ಎಲ್ಲವೂ ಸರಿಹೋಗುವುದು. ಮುಖ್ಯ ನನ್ನ ಕಾಲಗುಣ. ನಿಮ್ಮ ಮನೆಯಲ್ಲಿ ಯಾವ ಘಳಿಗೆಯಲ್ಲಿ ಕಾಲಿಟ್ಟೆನೋ! ನಿಮಗೆ ಅಸ್ವಸ್ಥತೆ—"

"ರಾಧಾ, ನೀನು ನಮ್ಮ ಗೃಹಲಕ್ಷ್ಮಿ, ನನ್ನ ದೇವತೆ! ಅಷ್ಟಾಗಿ, ನಿನ್ನ ಕಾಲ್ಗುಣ, ನನ್ನ ಹಣೆಯ ಬರಹ ಯಾವುದೋ ನಾನರಿಯೆ. ಸುಖವಾಗಿರುವುದನ್ನು ಕಾಣಲಿಲ್ಲ. ರಾಧಾ, ನಾನು ಅರ್ಧಕ್ಕೆ ನನ್ನ ಕರ್ತವ್ಯತೊರೆದು ಹೊರಟುನಿಂತಿರುವೆ—"

"ಸ್ವಾಮಿ, ನನಗಾಗಿ ಅಲ್ಲದಿದ್ದರೂ ನಿಮ್ಮ ಹುಟ್ಟಲಿರುವ ಕಂದನಿಗಾಗಿ ಅದರ ತಂದೆಯಾಗಿರಲು "

ಒಂದು ಕ್ಷೀಣನಗೆ ನಕ್ಕು ಹೇಳಿದ; "ಆಗಲಿ, ದೇವರಿಚ್ಛೆ!"

ಆದರೆ ದೇವರಿಚ್ಛೆ ಇರಲಿಲ್ಲ. ಬಂದ ಜ್ವರ ತನ್ನೊಟ್ಟಿಗೆ ಅವನನ್ನೂ ಕಟ್ಟಿಕೊಂಡೇ ಹೋದುವು. ರಾಧಾಬಾಯಿ ಬಿಳಿಯುಹಣೆಯಿಂದ

ಪ್ರಕಟವಾಗುವವು! ತೀವ್ರ ಪ್ರಕಟವಾಗುವವು!!

ಅಭಿನವ ಗಣಿತ

ಲೇ. : ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ "ಅಭಿನವ ಗಣಿತ" ಗಳನ್ನು ಹೊರಡಿಸಲಾಗಿದೆ ಮಕ್ಕಳ ಪರಿಚಯದ ವಾತಾವರಣವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹಲವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆಯಾಗಿದೆ. ಮುಖ್ಯವಾಗಿ ೧೯೫೫ರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ, ಬರೆದಿರುವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗಬಲ್ಲವು ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿದೆಯೆಂಬುದನ್ನು ಅಭಿನವ ಗಣಿತಗಳ ಅನುಸರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನಿರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ತಿರುಗಿ ತಂದೆಯ ಆಶ್ರಯಕ್ಕೆ ಬಂದಳು. ಮುಂಬಯಿಯ ಯಾಂತ್ರಿಕ ಜೀವನ ಎಂದಿನಂತೆ ಸುರುವಾಯಿತು. ದುಃಖದ ಒಂದು ಆವೇಗ ಇಳಿಯಿತು. ಆದರೆ ಅಶಾಂತಿ, ಒಂದು ತರದ ಏಕಾಕಿತನ, ಭಣಭಣ, ಹುರುಹುರು ಹೋಗಲಿಲ್ಲ. ಲಲಿತೆ ಅವರ ಮಗಳು. ಅವಳಿಗಾಗಿ ಮತ್ತೆ ನಗೆ ಮೂಡಿತು. ವೇಳೆ ಹೋಗಲು ಎಂದು ಚರ್ನಿರೋಡ್ ಗರ್ಲ್ಸ್‌ಸ್ಕೂಲಿನಲ್ಲಿ ಅಧ್ಯಾಪಿಕೆಯಾದರು ಹತ್ತು ವರುಷಗಳಿಂದಲೂ ಆ ಗಾಡಿ, ನೂಕು-ನುಗ್ಗುಗಳು, ಜನ, ಎಲ್ಲವೂ ಮೈಗೆ ಒಗ್ಗಿದುವು. ಈಗ ಲಲಿತೆ... ಮದುವೆ—"

ಆ ಗೃಹಸ್ಥ ಮತ್ತೆ ಅವರ ಮೇಲೆ ಬಿದ್ದ. ಅದರ ಜೊತೆಗೆ ಈ ಬಾರಿ ಅವನಿಗೆ ಹಿಂದೆ ಸರಿಯುವುದೂ ಕಠಿಣವಾಗಿತ್ತು. ಆದರೂ ಪ್ರಯತ್ನಿಸಹತ್ತಿದ್ದ. ಅದು ಬಾಂದ್ರಾ ಸ್ಟೇಶನು. ಇನ್ನೂ ಮೂರು—ಸ್ಟೇಶನ್ನು! ಒತ್ತಿ ಬರುತ್ತಿದ್ದ ಜನಜಂಗುಳಿಯನ್ನು ಮೀರಿ ಹೇಗೋ ಅವರನ್ನು ಮುಟ್ಟದಂತೆ ನಿಲ್ಲಬೇಕು —ಎಂಬ ಸಾಹಸ ವಿಫಲವಾಗುತ್ತಿತ್ತು.

ಅವನನ್ನು ನೋಡಿದರು. ಇಪ್ಪತ್ತೆರಡು ವರುಷದ ಗೌರಾಂಗ ಗುಜರಾಥಿಯಾಗಿರಬೇಕು! ಕೆಂಪಗಾಗಿ ಲಕ್ಷಣವಾಗಿದ್ದ. ಬಲವಾದ ಮೈಕಟ್ಟು, ಆತನ ಅರಿವೆಗಳ ಆವರಣವನ್ನು ಮೀರಿ ಹೊರಕ್ಕೆ ಹಣಿಕಿಕ್ಕಿತ್ತು. ಗಾಡಿ ಬಿಟ್ಟಂತಾಯಿತು.

ಲಲಿತೆಯ ಮದುವೆಯೊಂದಾದರೆ ಅವರ ಭಾರ ಇಳಿದಂತಾಗುತ್ತಿತ್ತು. ಅಶಾಂತಿ ಬಹುತರ ತೊಲಗಬಹುದಿತ್ತು. ಆದರೆ ಆ ಅಶಾಂತಿ ಅವಳಿಗಾಗಿಯೇ? ಇಲ್ಲ. ಹಾಗಾದರೆ ಏಕೆ? ಹೇಳು—ಹೇಳು ಎಂದು ಅವರ ಮನ ಬಂಡೆದ್ದು ಕೇಳುತ್ತಿತ್ತು. "ಏಕೆ ಆ ಅಶಾಂತಿ ಎಂದು ಕೇಳುತ್ತೀಯಾ?" ಎಂದು ವಿಕಾರವಾಗಿ ಯಾರೋ ಕೇಳಿದಂತಾಯಿತು "ಹೌದು. ಏಕೆ? ಏಕೇ?."

"ನಿನಗಾಗಿ. ಕೇವಲ ನಿನಗಾಗಿ! ಕೇವಲ ನಿನ್ನ ಬೇಸತ್ತ ಜೀವನಕ್ಕಾಗಿ ಕುಡಿಯುವ ಮೊದಲೇ ಚೆಲ್ಲಿಹೋದ ಗಂಡುಸಿನ ಒಡನಾಟಕ್ಕಾಗಿ ಹ., ಹ್ಹ"

"ಅಲ್ಲ, ಅಲ್ಲ, ಹಾಗಲ್ಲ!"

"ಹಾಗಾದರೆ— ?"

"ಹುಂ. ಏಕೆ? ಏಕೆ ಸುಮ್ಮನಾದೆ? ಹೇಳು. ಹೌದೇನು? ಒಪ್ಪು! ಹೆದರುವೆಯಾ"

ಮತ್ತೆ 'ಖಾರ್' ಬಂದಾಗ, ಆ ತರುಣ ಮತ್ತೊಮ್ಮೆ ಬೀಳುವುದರಲ್ಲಿದ್ದ. ಸಾವರಿಸಿಕೊಂಡ. ಆದರೆ ಈ ಬಾರಿ ರಾಧಾಬಾಯರು ಅವನಿಗೆ ಹತ್ತಿರವಾದರು. ತರುಣ ಚಕಿತಕಣ್ಣಿನಿಂದ ನೋಡಿದ. ನೊಮ್ಮೆ. ಈ ಬಾರಿ ಅವನ ಎದೆ ಅವರ ಎದೆಗೆ ತಾಗಿತು. ಗಾಡಿ ಬಿಟ್ಟಾಗ ಕಾಲು ಕಾಲನ್ನು ಹೊಂದಿಕೊಂಡು ನಿಂತಿತು. ಜನಕ್ಕೇನೂ ಲಕ್ಷ್ಯವಿರಲಿಲ್ಲ. ಆ ತರುಣ ಅಸ್ವಸ್ಥತೆಯಿಂದ ಚುಳುಬುಳು ಮಾಡಹತ್ತಿದ್ದ.

"ವ್ಯಭಿಚಾರವಲ್ಲವೇ ಇದು?" ಅವರ ಮನ ಕೆಣಕಿತು.

"ಆ ಅಸ್ವಸ್ಥತೆ, ಅಶಾಂತಿಗಿಂತ ಇದು ಮೇಲು!" ಎಂದು ಮತ್ತೆ ನಕ್ಕಿತು ದೂರದ ದನಿ.

"ಇಲ್ಲ ಇದು ಸರಿಯಲ್ಲ. ನೀನು ಮಾಡುತ್ತಿರುವುದು ತಪ್ಪು!"

"ಏಕೆ?"

"ಲೋಕರೂಢಿ ಬಿಟ್ಟು—ಆತ ನಿನ್ನ ಮಗನ ಸಮಾನ!"

"ಹಾಗಾದರೆ ಆತ ದೊಡ್ಡವನಿದ್ದರೆ—"

"ಹೂಂ. ಹೂಂ. ಆಗಲೂ ಸಾಧ್ಯವಿಲ್ಲ. ಅದು ಅನ್ಯಾಯ ... ಪಾಪ."

"ಏಕೊ—?" ಅದಕ್ಕೆ ಉತ್ತರವಿರಲಿಲ್ಲ.

ರಾಧಾಬಾಯರ ಕಾಲು ಅವರಿಗೆ ತಿಳಿಯದಂತೆ ಹಿಂದೆ ಸರಿದುವು. ಅವನೂ ದೂರ ಸಿಡಿದ.

"ಹೇಡಿ!"

"ಇರಲಿ. ಅದಕ್ಕೂ ಇದು ಚೆನ್ನಾದುದು. ಹೇಡಿತನವಿರಲಿ ಅಶಾಂತಿ ಇರಲಿ. ದುಃಖ ಇರಲಿ. ಆ ನರಕದ ಸುಖ–ಸಮಾಧಾನ ಬೇಡ!" ಆ ದಂಪತಿಗಳು ಲಲ್ಲೆಯಿಂದಲೇ ಇದ್ದರು. ಆ ತರುಣ ಗುಜರಾಥಿ ಮಾತು ಮುಗಿಸಿರಲೇ ಇಲ್ಲ. ವಿಲಾಪಾರ್ಲಾ ಬಂದಿತು. ಅಭ್ಯಾಸಬಲದಿಂದ ರಾಧಾಬಾಯರ ಕಾಲು ಮನೆಗೆ ನಡೆದುವು.

ಎದುರು ಭಾಸ್ಕರನ ಫೋಟೊ ನಗುತ್ತಿತ್ತು.

"ನನ್ನನ್ನು ಕ್ಷಮಿಸಿ—" ಎಂದು ಕಣ್ಣು ಎರಡು ಹನಿ ನೀರನ್ನು ಸುರಿಸಿದುವು. ಆದರೂ ಫೋಟೋ ನಗುತ್ತಲೇ ಇತ್ತು.

೧೦೦೦ ರೂಪಾಯಿ ಬಹುಮಾನ

೪೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾತಿಶ, ಉಷ್ಣ, ಸೊಂಟನೋವು, ಉಪದಂಶ ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮೪ ತೊಲೆಯ ಒಂದು ಡಬ್ಬಿಗೆ ೫–೮–೦; ಅಂಚೆಯ ವೆಚ್ಚ ೧–೧೫–೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦–೮–೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧–೧೫–೦. ೩ ಡಬ್ಬಿಗೆ ೧೫–೦–೦; ಅಂಚೆಯ ವೆಚ್ಚ ೪–೭ ೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦–೩–೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರಪೇಟೆ

ಮು. ಪೋ. ಮಿರಜ

ಅಸ್ಪೃಶ್ಯತಾನಿವಾರಣೆಯ ಮಹಾಪುರುಷ ಬುದ್ಧ!

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ. ಧಾರವಾಡ

卐

ಅಸ್ಪೃಶ್ಯತೆಯೆಂಬುದು ಭಾರತದಲ್ಲಿ ತೀರ ಪ್ರಾಚೀನಕಾಲದಿಂದಲೂ ನಡೆದುಕೊಂಡು ಬಂದಿದೆ. ಅದಕ್ಕೆಲ್ಲ ಅಂದಿನ ಸಮಾಜರಚನೆಯೇ ಮುಖ್ಯ ಕಾರಣವಾಗಿದೆ. ಉದ್ಯಮಗಳಲ್ಲಿಯ ಮೇಲು-ಕೀಳು ಭಾವನೆಗಳು ಸಾಮಾಜಿಕ ಮನದಲ್ಲಿ ಮೂಡಲು ತೊಡಗಿದಾಗ ಈ ಅಸ್ಪೃಶ್ಯತೆ ಅವತರಿಸಿದೆ. ರಾಷ್ಟ್ರವಿಘಾತವಾದ ಈ ಭಾವನೆಯನ್ನು ಹೊಡೆದುಹಾಕುವ ಕ್ರಮವು ಭಗವಾನ್ ಬುದ್ಧನಿಂದಲೇ ಪ್ರಾರಂಭವಾಗಿದೆ!

卐

"ಸತ್ಯದಿಂದ ದೂರ ಉಳಿದವನೇ ಅಸ್ಪೃಶ್ಯ" ಎಂಬ ಮಾತನ್ನು ಬೌದ್ಧರ ಪವಿತ್ರಗ್ರಂಥವಾದ 'ಧಮ್ಮಪದ'ವು ಸ್ವಾರಸ್ಯವಾಗಿ ಹೇಳಿದೆ. "ಲೋಭ-ಮೋಹಗಳಿಂದ ತುಂಬಿದ ಅವನ ಮನಸ್ಸಿಗೆ ತಥಾಗತ ಬುದ್ಧನ ಯಾವ ಮಾತೂ ಹೊಳೆಯುವುದಿಲ್ಲ." ಕಾಲಕಾಲಕ್ಕೆ ಈ ಮಾತನ್ನು ಧರ್ಮದ ತಿರುಳನ್ನರಿತ ಮಹನೀಯರು ಹೇಳುತ್ತಲೇ ಬಂದಿದ್ದಾರೆ. ಆದರೆ ಅಸ್ಪೃಶ್ಯತೆ ಅಂದಿನಿಂದ ಇಂದಿನವರೆಗೂ ಜನತೆಯ ಮನಸ್ಸನ್ನು ಆವರಿಸಿದೆ. ಪೈಗಂಬರರು, ಮಹಾವೀರ, ಬುದ್ಧ, ಬಸವಣ್ಣ, ಹರಿದಾಸರುಗಳು, ಇಂದಿನ ಯುಗದಲ್ಲಿ ಗಾಂಧೀಜಿ ತಮ್ಮ ಜೀವಮಾನದುದ್ದಕ್ಕೂ ಸಮಾಜಕ್ಕೆ ಹತ್ತಿದ ಅಸ್ಪೃಶ್ಯತೆಯ ಕಲಂಕವನ್ನು ಕಿತ್ತೊಗೆಯಲು ಪ್ರಯತ್ನಪಟ್ಟರು. ಆ ಪ್ರಯತ್ನಗಳ ತರುವಾಯವೂ ಇಂದಿನ ಪರಿಸ್ಥಿತಿ ಆಶ್ಚರ್ಯವನ್ನುಂಟುಮಾಡುತ್ತದೆ. ಸಹಾನುಭೂತಿಪರ ಮನಸ್ಸಿಗೆ ಆಘಾತವನ್ನೂ ಉಂಟುಮಾಡುತ್ತದೆ.

ಬುದ್ಧನ ಕಾಲಕ್ಕೇ ಸಾಕಷ್ಟು ಪ್ರಚಾರವನ್ನು ಪಡೆದಿತ್ತೆಂದ ಮೇಲೆ, 'ಅಸ್ಪೃಶ್ಯತೆ ಪ್ರಾರಂಭವಾದುದೆಲ್ಲಿ?' ಎಂದು ಹೇಳುವುದು ಬಹಳ ಕಷ್ಟ! ಜಗತ್ತಿನ ಇನ್ನಾವ ಭಾಗಗಳಲ್ಲಿಯೂ ಇದು ಕಂಡು ಬಾರದೆ, ಒಂದು ಸ್ಥಾನದಲ್ಲಿ ಮಾತ್ರ ಕಂಡುಬರಲು ಕಾರಣಗಳೇನು? ಅದರಲ್ಲಿಯೂ ಉತ್ತರಕ್ಕಿಂತ ದಕ್ಷಿಣದಲ್ಲಿ ಅದು ಯಾಕೆ ಹೆಚ್ಚಾಗಿದೆ? ಚಾತುರ್ವರ್ಣ್ಯದ ಚೌಕಟ್ಟಿನಲ್ಲಿಯೂ ಬರಲಾರದೆ ಅಸ್ಪೃಶ್ಯರೆಂದು ಹೇಳಿಸಿಕೊಂಡವರು "ಪಂಚಮ"ರಾದರೆ?—ಎಂಬ ಪ್ರಶ್ನೆಗಳು ತುಂಬ ಜಟಿಲವಾಗಿವೆ. ವೇದಗಳಲ್ಲಾಗಲಿ, ಉಪನಿಷತ್ತುಗಳಲ್ಲಾಗಲಿ ಅಸ್ಪೃಶ್ಯತೆಯ ವಿಚಾರ ಬಂದಿಲ್ಲ. ಛಾಂದೋಗ್ಯದಲ್ಲಿ ಬರುವ ರೈಕ್ವನು ಜನಕಮಹಾರಾಜನಿಗೂ ತತ್ತ್ವೋಪದೇಶವನ್ನು ಮಾಡಿದ್ದಾನೆಂದ ಬಳಿಕ, ಅಸ್ಪೃಶ್ಯತೆಯ ಮೂಲ ದಕ್ಷಿಣದಿಂದಲೇ ಇದ್ದು, ಅದು ವ್ಯಾಪಿಸಿರಬಹುದೇನೋ—ಎಂಬ ವಿಚಾರಕ್ಕೂ ಆಸ್ಪದ ದೊರೆಯುತ್ತದೆ.

ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಬಹಳವಾಗಿ ಪರಿಶ್ರಮಿಸಿದ ಡಾ. ಅಂಬೇಡಕರರು 'ಯುದ್ಧದಲ್ಲಿ ಸೋತವರೇ ಅಸ್ಪೃಶ್ಯರಾದರು' ಎಂಬುದನ್ನು ವಿವರಿಸಿದ್ದಾರೆ. ಗೆದ್ದವರು ಸೋತವರನ್ನೂ ಕೈದಿಗಳನ್ನೂ ಊರ ಹೊರಗಡೆಗೆ ಇಟ್ಟು, ಅವರಿಂದ ಬೇಕಾದ ಕೀಳು ಕೆಲಸಗಳನ್ನೂ ಮಾಡಿಸಿಕೊಳ್ಳುತ್ತಿದ್ದರು ಮುಂದೆ ಅದೇ ಪರಂಪರೆ ಬೆಳೆಯುಬಂತು. ಅಸ್ಪೃಶ್ಯರಾಗಿಯೇ ಹುಟ್ಟಿ ಅಸ್ಪೃಶ್ಯರಾಗಿಯೇ ಬೆಳೆದು, ಸಂಸ್ಕಾರಗಳನ್ನು ಪಡೆದೂ ಅಸ್ಪೃಶ್ಯರಾಗಿ, ಅಸ್ಪೃಶ್ಯರಾಗಿಯೇ ಮರಣಹೊಂದುವುದು ಮಾನವತೆಯ ಕಲ್ಪನೆಗೆ ನಿಲುಕಲಾರದ ವಿಷಯ! ಬಹಳ ಬಲವಾದ ಹಿಡಿತವುಳ್ಳ ಧರ್ಮದ ಬೆಂಬಲವೂ ಮುಂದೆ ಇದಕ್ಕೆ ದೊರೆತು, ಸ್ಮೃತಿಕಾರರ ವೇಳೆಗೆ ಕಾಯಿದೆಯ ಸ್ವರೂಪವನ್ನೂ ಇದು ಪಡೆದು ಬಲಗೊಂಡಿತು. ಇಷ್ಟೊಂದು ಬಲಗೊಳ್ಳದೆ ಬೌದ್ಧಧರ್ಮದ ಹೆಚ್ಚಳದಲ್ಲಿ ಅಸ್ಪೃಶ್ಯತೆಯ ಕಲ್ಪನೆ ಮಾಯವಾಗಿದ್ದರೆ, ಪಾಶ್ಚಾತ್ಯ ರಾಷ್ಟ್ರಗಳ ಪ್ರಗತಿಯನ್ನು ಭಾರತವೂ ಪಡೆಯಬಹುದಿತ್ತು—ಎಂದು ಅನೇಕ ಪಾಶ್ಚಾತ್ಯ ವಿದ್ವಾಂಸರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸಾಮಾಜಿಕ ಮನ್ನಣೆಯಿಲ್ಲದ ಜನರು ಅಸಂತುಷ್ಟರಾಗಿ, ಪರಕೀಯರನ್ನು ಯುದ್ಧದಲ್ಲಿ ತಮ್ಮ ಬೆಂಬಲಕ್ಕೆ ಆಮಂತ್ರಿಸಿದರು. ಈ ರೀತಿ ಅಸ್ಪೃಶ್ಯತೆಯಿಂದುಂಟಾದ ಸಾಮಾಜಿಕ ವಿಷಮತೆ, ರಾಷ್ಟ್ರವನ್ನು ಪರಕೀಯರ ದಬ್ಬಾಳಿಕೆಗೂ ಈಡುಮಾಡಿವೆ. ಮನುಷ್ಯನಿರ್ಮಿತವಾದ ಅಸ್ಪೃಶ್ಯತೆ ಅವನ ವಿಚಾರದಿಂದಲೇ ಹೋಗಬೇಕು.

ಇಪ್ಪತ್ತನೆಯ ಶತಮಾನದ ಸಂಸ್ಕೃತಿ-ಶಿಕ್ಷಣಗಳ ಯುಗದಲ್ಲಿಯೂ, ಗಾಂಧೀಜಿ ಅಸ್ಪೃಶ್ಯತೆಯ ನಿವಾರಣೆಗೆ ಶಕ್ತಿಮೀರಿ ಹೋರಾಡಬೇಕಾಯಿತು. ತಿಳಿದವರೂ, ತಿಳಿಯದವರೂ ಒಟ್ಟಿಗೇ ವಿರುದ್ಧವಾಗಿ ಕೂಗಿದರು. "ಕಲಿಮಹಿಮೆ" ಎಂದು ಕೆಲವರೆಂದರೆ, "ವಿನಾಶಕಾಲದಲ್ಲಿ ಬುದ್ಧಿಕೆಡುವುದುಂಟು; ಇದೂ ಹಾಗೆ ಆಗಿರಬೇಕು. ವರ್ಣಸಂಕರದ ಕಾಲ ಬಂದಿತೇ?" ಎಂದು ಅನೇಕರು ದೇವರಲ್ಲಿ ಮೊರೆಯಿಟ್ಟರು. ಆದರೆ ಎಂತಹ ಪ್ರಸಂಗದಲ್ಲಿಯೂ ಗಾಂಧೀಜಿ ತಮ್ಮ ಉದ್ದೇಶವನ್ನು ಬಿಡಲಿಲ್ಲ. ಅವರಷ್ಟೇ ಅವರ ಬೆಂಬಲಿಗರೂ ಸಾಮಾಜಿಕ ಅವಹೇಲನವನ್ನು ಅನುಭವಿಸಿದ್ದಾರೆ.

ವಿಚಾರಶಕ್ತಿಯಿದ್ದವರು ಅಸ್ಪೃಶ್ಯತೆಯ ವಿಚಾರದಲ್ಲಿ ಹುರುಳಿಲ್ಲವೆಂಬುದನು ಒಪ್ಪಿದರೂ, ಅದನ್ನು ಆಚರಣೆಯಲ್ಲಿ ತರುವುದು ಕಷ್ಟವಾಗುತ್ತದೆ. ಪರಂಪರಾಗತ ಪದ್ಧತಿಯನ್ನು ನಡೆಸಿಕೊಂಡು ಬರುವುದೆಂದರೆ, ನಾವೇ ಅದಷ್ಟು ಜನರನ್ನು ದೂರದಲ್ಲಿಟ್ಟಿರುವೆವೆಂದರೆ

ಅದೊಂದು ಗೌರವದ ವಿಷಯ! ಶಿಕ್ಷಣಕ್ಕಾಗಲಿ, ವಿಚಾರವಿಕಾಸ-ಕ್ಕಾಗಲಿ ಅವಕಾಶವಿಲ್ಲದ ಜನಾಂಗದಲ್ಲಿ ಈ ಭಾವನೆ ಬೆಳೆದು ಬರುವುದು ಸ್ವಾಭಾವಿಕವೇ! ಅಸ್ಪೃಶ್ಯತೆಗೆ ಇನ್ನಾವ ಆಧಾರವೂ ದೊರಕದೆ, ಅಳಿಯಲಾರದ ಪಾಪ ಪುಣ್ಯಗಳ ಆಧಾರವೊಂದು ದೊರಕಿದೆ! ಕೆಲವರನ್ನು ಮುಟ್ಟುವುದು ಪಾಪವಾದರೆ, ಇನ್ನು ಕೆಲವರ ಧ್ವನಿಯನ್ನು ಕೇಳುವುದೂ ಪಾಪವಾಗಿದೆ; ಮತ್ತೆ ಕೆಲವರನ್ನು ನೋಡುವುದೂ ಪಾಪ-ವಾಗಿದೆ :

ಧರ್ಮದ ತಿರುಳನ್ನರಿತಿದ್ದರೆ ಆ ಮಾತೇ ಬೇರೆ! ಹಾಗಿಲ್ಲವೆಂದ ಬಳಿಕ, ಕಾಯಿದೆಯ ಸಹಾಯದಿಂದಲಾದರೂ ಸರಿ, ನಿರರ್ಥಕವಾಗಿ ನಡೆದ ಶಕ್ತಿಯ ವ್ಯಯವನ್ನು ತಡೆಗಟ್ಟಲೋಸುಗ, ಜನತೆಯಲ್ಲಿ ಭೇದ-ಭಾವದಿಂದ ಉಂಟಾಗುತ್ತಿರುವ ತೀವ್ರ ಅಸಂತೋಷವನ್ನು ತಡೆಗಟ್ಟಲೋಸುಗ, ಮನುಷ್ಯರೆಲ್ಲರೂ ಒಂದೇ—ಎಂಬ ಪವಿತ್ರ ಭಾವನೆ ಬೆಳೆಯಲೋಸುಗ—ಸ್ವತಂತ್ರ ಭಾರತದ ಹೊಸ ಸಂವಿಧಾನದ ೧೭ನೆಯ ಕಲಮು, "ಅಸ್ಪೃಶ್ಯತೆಗೆ ಪ್ರತಿಬಂಧವಿದೆ," ಎಂಬುದನ್ನು ಹೇಳು-ವುದರ ಜೊತೆಗೆ "ಯಾವುದೇ ರೂಪದಲ್ಲಿ ಅದರ ಆಚರಣೆ ಪ್ರತಿಬಂಧಿಸಲ್ಪಟ್ಟಿದೆ" ಎಂಬುದಾಗಿಯೂ ಹೇಳುತ್ತದೆ. ಆದರೂ ಜನತೆಯ ಮನಸ್ಸಿನಲ್ಲಿ, ಧಾರ್ಮಿಕದೃಷ್ಟಿಯಲ್ಲಿ ಬೇರೂರಿದ ಅಸ್ಪೃಶ್ಯತೆಯ ಭಾವನೆಯನ್ನು, ಒಂದೇ ತಲೆಮಾರಿನಲ್ಲಿ ಕಾಯಿದೆಯಿಂದ ಕಿತ್ತೊಗೆಯುವುದು ಸಾಧ್ಯವಿಲ್ಲ.

ಮಾನವರ ಸರಿಸಮಾನತೆ, ಬಂಧುಭಾವ ಇವುಗಳ ಪವಿತ್ರವಾದ ವಿಶ್ವಾಸ, ಯಾವ ಜನಾಂಗವನ್ನಾದರೂ ಉತ್ಕರ್ಷದೆಡೆಗೆ ಒಯ್ಯುವಲ್ಲಿ ಸಂಶಯವಿಲ್ಲ; ಆದರೆ ಜನಾಂಗದ ಇತಿಹಾಸವನ್ನು ತೆರೆದು ನೋಡಿದರೆ, ಇಂತಹ ಅವಧಿ ಬಹಳ ಕಾಲ ಬದುಕಲಾರದೆಂಬುದೂ ಕಂಡುಬರು-ತ್ತದೆ. ಹಲವಾರು ದುಷ್ಟಶಕ್ತಿಗಳ ಪ್ರಭಾವಕ್ಕೆ ಅವಕಾಶವನ್ನು ಕಾಲಕ್ರಮೇಣ ಸಮಾಜವು ತನಗರಿವಾಗದಂತೆಯೇ ಕೊಟ್ಟುಬಿಡು-ತ್ತದೆ. ಅವುಗಳ ವಿಚಾರಣೆಗೆ ಮತ್ತೆ ಬುದ್ಧನೋ ಬಸವೇಶ್ವರನೋ ಬರಬೇಕಾಗುತ್ತದೆ. ತಮ್ಮ ಜೀವನವನ್ನೂ ತಮ್ಮ ಬೆಂಬಲಿಗರ ಜೀವನ-ವನ್ನೂ ನಾಡಿನ ಉದ್ಧಾರಕ್ಕಾಗಿ ಮೀಸಲಾಗಿರಿಸಬೇಕಾಗುತ್ತದೆ.

ರಾಜ್ಯಸಿಂಹಾಸನವನ್ನು ಹಟದಿಂದ ಪಡೆದ ಮಹನೀಯರು ರಾಜ್ಯವಾಳಿ ಹೋಗಿರಬಹುದು; ಆದರೆ ಜನತೆಯೊಡನೆ ಒಂದಾಗಿ ಅವರ ಪ್ರೀತಿಗೆ ಪಾತ್ರರಾಗಿ ಅದರ ಹೃದಯದಲ್ಲಿ ಸ್ಥಾನಪಡೆದ ಮಹನೀಯರು ಕಾಲ ಉರುಳಿದರೂ ಅಬಾಧಿತರಾಗಿದ್ದಾರೆ. ಕ್ರಿ ಶ ಪೂ ಆರನೆಯ ಶತಮಾನದಲ್ಲಿ ರಾಜಕುಮಾರನಾಗಿ ಹುಟ್ಟಿದ ಸಿದ್ಧಾರ್ಥನು ತನ್ನ ಮಟ್ಟಿಗೆ ಮರ್ಯಾದಿತವಾದ ಸಂಸಾರವನ್ನು ತ್ಯಜಿಸಿ, ವಿಶಾಲ-ವಾದ ಸಂಸಾರಕ್ಕೆ ತಪಸ್ಸಿನ ಕಾಣ್ಕೆಯನ್ನು ನೀಡಲು ಹೊರಹೊರಟನು: ಎಲ್ಲೆಡೆಗೂ ಹಬ್ಬಿದ ದುಃಖವನ್ನೂ ದುಃಖಿತರನ್ನೂ ಕಂಡು ಅವನ ಹೃದಯದಲ್ಲಿ ಕರುಣೆ ಉಕ್ಕಿತು; ಜಗತ್ತಿನಲ್ಲಿ ದುಃಖವನ್ನು ಇಲ್ಲದಂತೆ ಮಾಡಬೇಕಾದರೆ, ಅದರ ಕಾರಣವನ್ನೇ ನಷ್ಟಗೊಳಿಸಬೇಕು. ಮಹಾ-ಜ್ಞಾನವೇ ಆ ಕಾರ್ಯವನ್ನು ಮಾಡಬಲ್ಲದು. ಆ ಜ್ಞಾನಕ್ಕೆ ಸಾಧನೆ ಅಷ್ಟವಿಧಮಾರ್ಗ. ಸಮ್ಯಗ್‌ವಾಣಿ, ಸಮ್ಯಗ್‌ದೃಷ್ಟಿ, ಸಮ್ಯಗಾಚರಣೆ ಮೊದಲಾಗಿ. ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಬಿಂಬಿಸಾರ, ಅಶೋಕ ಮೊದಲಾದ ರಾಜರೂ ಜಗತ್ತಿನ ವಿವಿಧಭಾಗಗಳಿಂದ ಬಂದ ಶಿಷ್ಯರೂ ಒಟ್ಟಿಗೇ ಸಹಕರಿಸಿದ್ದಾರೆ :

ಜ್ಞಾನದ ಪ್ರಸಾರವು ಸರಿಯಾಗಿ ಆಗಬೇಕಿದ್ದರೆ, ಸಾಮಾಜಿಕ ವಿಷಮತೆ ದೊಡ್ಡ ವಿಘ್ನವನ್ನು ತಂದೊಡ್ಡಬಹುದು. ಬುದ್ಧನ ಕಾಲದಲ್ಲಿ ಜಾತೀಯತೆಯ ಪ್ರಶ್ನೆ, ಅಸ್ಪೃಶ್ಯತೆಯ ವಿಚಾರ ಪ್ರಖರವಾಗಿಯೇ ಇದ್ದುವು ಎನ್ನುವುದಕ್ಕೆ, ಸಮಕಾಲೀನ ಸಾಹಿತ್ಯದಲ್ಲಿ ದೊರೆಯುವ ಆಧಾರಗಳು, ಮಜ್ಝಿಮ-ನಿಕಾಯ, ದೀಘನಿಕಾಯಗಳಲ್ಲಿ ಬುದ್ಧನೇ ಹೇಳಿದ ಮಾತುಗಳು ಉಪಯುಕ್ತವಾಗಿವೆ. ಜಾತೀಯತೆಯನ್ನು ಒಪ್ಪಿಕೊಂಡವರಲ್ಲಿಯೂ ಭಿನ್ನಾಭಿಪ್ರಾಯವಿತ್ತು ಎಂಬುದನ್ನು ವಸಿಷ್ಠ-ಸೂತ್ರದಲ್ಲಿ ಬರುವ ವಸಿಷ್ಠ-ಭಾರದ್ವಾಜರ ಸಂಭಾಷಣೆ ಹೇಳುತ್ತದೆ. ಅವರಿಬ್ಬರೂ ಬುದ್ಧದೇವನೆಡೆಗೆ ಬಂದು ವಿವರಣೆಯನ್ನು ಕೇಳಿದಾಗ, 'ಮನುಷ್ಯನು ಸದಾಚಾರದಿಂದ ದೊಡ್ಡವನಾಗುತ್ತಾನೆಯೇ ಹೊರತು ಅವನ ಜನ್ಮದಿಂದಲ್ಲ,' ಎಂಬ ಮಾತೂ ಕಂಡುಬರುತ್ತದೆ. ಜ್ಞಾನದ ಅಪೂರ್ಣಸಾಧನೆಯ ರೂಪ ಒಂದು ಭಾಗವಾಗಿದ್ದರೆ, ಸಾಮಾಜಿಕ ವಿಷಮತೆಯನ್ನು ದೂರಮಾಡುವುದು ಬುದ್ಧನ ಇನ್ನೊಂದು ಭಾಗ! ಜಾತೀಯತೆಗೆ ಧರ್ಮದ ಹೆಸರಿನಲ್ಲಿ ಬೆಂಬಲವನ್ನು ಕೊಡಲಾಗುತ್ತಿದ್ದರೂ, ಯಾವ ಧರ್ಮವೂ ಮನುಷ್ಯರನ್ನು ಉಚ್ಚ-ನೀಚರೆಂದು ಹೇಳಲಾರದು! ಮನುಷ್ಯನು ಉಚ್ಚ-ನೀಚನಾಗುವುದು ಅವನ ಕರ್ಮ—ಆಚರಣೆಯನ್ನು ಅವಲಂಬಿಸಿರುತ್ತದೆ.

ಚಾತುರ್ವರ್ಣ್ಯದವರು ಪರಮಾತ್ಮನ ದೇಹದ ವಿವಿಧ ಭಾಗ-ಗಳಿಂದ ಹುಟ್ಟಿದರೆಂಬ ಹೇಳಿಕೆ 'ಪುರುಷಸೂಕ್ತ'ದಲ್ಲಿ ಕಂಡುಬರು-ತ್ತದೆ. ಆದರೆ ಭೇದಭಾವವಿಲ್ಲದೆ ಎಲ್ಲ ವರ್ಣದವರೂ ಒಂದೇ ರೀತಿಯಾಗಿ, ತಾಯಿಯ ಗರ್ಭದಲ್ಲಿ ಬೆಳೆಯುವುದನ್ನು ನಾವು ಕಾಣು-ತ್ತೇವೆ. ನಿಸರ್ಗವನ್ನನುಸರಿಸಿ ನಡೆಯುವ ಕೀಟ, ಹುಳು-ಹುಪ್ಪಡಿ, ಪಶು-ಪಕ್ಷಿಗಳಲ್ಲಿ ಯಾವುದೇ ಉಚ್ಚ-ನೀಚ ಭಾವವಿಲ್ಲ; ಬಳಿಕ ಮನುಷ್ಯರಲ್ಲಿಯೇ ಇದು ಇರುವುದು ಹೇಗೆ? ಕೇವಲ ವ್ಯಾವಹಾರಿಕವಾಗಿ ಇದು ಬಂದುದೆಂಬುದು ತಾನೇ ಸಿದ್ಧವಾಗುತ್ತದೆ. ಮನುಷ್ಯ-ರಲ್ಲಿಯೇ ಭೇದಭಾವ ವಸ್ತುತಃ ಇದ್ದರೆ, ಒಂದೊಂದು ಕಾನೂನು ಇರಬೇಕಿತ್ತು; ಆದರೆ ಹಾಗಿಲ್ಲ. ಎಲ್ಲ ವರ್ಣದವರೂ ದುಷ್ಕೃತ್ಯ-ಗಳನ್ನು ಮಾಡಿ ಅದೇ ದಂಡನೆಗೊಳಗಾಗುತ್ತಾರೆ.

ನದಿಯಲ್ಲಿ ಯಾವ ವರ್ಣದವರು ಸ್ನಾನ ಮಾಡಿದರೂ ನದಿಯ ನೀರು ಹಾಗೇ ಇರುತ್ತದೆ; ಬೆಂಕಿಯನ್ನು ಯಾರು ಹೊತ್ತಿಸಿದರೂ ಅದು ಪ್ರಜ್ವಲಿಸುತ್ತದೆ. ಆರ್ಥಿಕ ವಿಷಮತೆಯೂ ಜಾತೀಯತೆಯನ್ನಾಗಲಿ, ಅಸ್ಪೃಶ್ಯತೆಯನ್ನಾಗಲಿ ಒಪ್ಪುವುದಿಲ್ಲ ವೃತ್ತಿಯನ್ನು ಗಳಿಸಲು ಯಾರು ಯಾರಿಗೆ ಬೇಕಾದರೂ ದಾಸರಾಗಬಹುದಿತ್ತು! ಯೋನ-ಕಾಂಭೋಜ ದೇಶಗಳಲ್ಲಿ ಎರಡೇ ವರ್ಣಗಳು ಆ ಕಾಲದಲ್ಲಿ–ಆರ್ಯರು ಹಾಗೂ ದಾಸರು! ಆರ್ಯರು ದಾಸರೂ ಆಗಬಹುದಿತ್ತು, ದಾಸರು ಆರ್ಯರೂ ಆಗಬಹುದಿತ್ತು "ಶ್ರುತಂತೇ ಯೋನ-ಕಾಂಭೋಜೇಷು ಅನ್ಯೇಷುಚ

ಜನಪದೇಸು ದ್ವೇ ಏವ ವರ್ಣೇ: ಅಯ್ಯಶ್ಚ, ದಾಸಶ್ಚ! ಅಯ್ಯೋ ಭೂತ್ವಾ ದಾಸೋ ಭವತಿ, ದಾಸೋ ಭೂತ್ವಾ ಅಯ್ಯೋ ಭವತಿ." ದೀಘನಿಕಾಯವು ಇದಕ್ಕೆ ಆಧಾರವಾಗಿದೆ. ವಸಿಷ್ಠ ಸೂತ್ರದಲ್ಲಿ ಬುದ್ಧನ ವಚನವನ್ನೇ ಕಾಣಬಹುದು: "ಮನುಷ್ಯರಲ್ಲಿ ಭೇದಭಾವ ಕಂಡುಬರುತ್ತಿದ್ದರೆ, ಅದು ಅವರವರ ಉದ್ಯೋಗದಲ್ಲಿದ್ದ ಭೇದ; ಕ್ಷತ್ರಿಯನು ತನ್ನ ವೃತ್ತಿಯನ್ನು ಬಿಟ್ಟು ಒಕ್ಕಲಿಗನಾಗಬಹುದು, ಒಕ್ಕಲಿಗನು ಕ್ಷತ್ರಿಯನಾಗಬಹುದು; ಆದರೆ ಹುಟ್ಟಿನೊಡನೆ ಅಂಟಿಕೊಂಡು ಬಂದ ಜಾತೀಯತೆಗೆ, ಮೇಲು-ಕೀಳು ಭಾವನೆಗೆ ಎಲ್ಲಿಯೂ ಅವಕಾಶವಿಲ್ಲ "ಕಮ್ಮಣಾ ವೃಸಲೋ ಭವತಿ, ಕಮ್ಮಣಾ ಭವತಿ ಬ್ರಾಹ್ಮಣಃ" ಎಂದು ಆ ಸೂತ್ರದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಬುದ್ಧನು 'ವೃಸಲ, ಬ್ರಾಹ್ಮಣ,' ಶಬ್ದಗಳನ್ನು ಜಾತೀಯತೆಯನ್ನು ಸೂಚಿಸುವ ಶಬ್ದಗಳೆಂದು ಕಾಣಲಿಲ್ಲ. 'ಥೇರಾಗಾಥಾ'ದಲ್ಲಿ ಬುದ್ಧನು ಚಾಂಡಾಲನೆಂದು ಕರೆಯಿಸಿಕೊಂಡ ಸುನೀತನನ್ನು, ಬ್ರಾಹ್ಮಣನೆಂದು ಕರೆದಿದ್ದಾನೆ; ಅದು ಸುನೀತನು ಪಡೆದ ಜ್ಞಾನದ ಮೂಲಕ! ಬ್ರಾಹ್ಮಣನೆಂದು ಕರೆಯಿಸಿಕೊಂಡ ಅರ್ನಿಕ ಭಾರದ್ವಾಜನನ್ನು ವೃಸಲನೆಂದು ಕರೆದಿದ್ದಾನೆ; ಅದು ಭಾರದ್ವಾಜನ ಅಜ್ಞಾನ ಸಂಕುಚಿತ ವೃತ್ತಿಗಳ ಮೂಲಕ! ವೇದಾಧ್ಯಯನ ಮಾಡಬಲ್ಲ ಅಧಿಕಾರವು ವಿಶಿಷ್ಟವಾದ ವರ್ಗಕ್ಕೇ ಇದೆಯೆಂಬ ಮಾತಾಗಲಿ ಅಥವಾ ಯಜ್ಞ-ಯಾಗಾದಿಗಳನ್ನು ಮಾಡಿದವರು ಮಾತ್ರ ಪುಣ್ಯಶಾಲಿಗಳಾಗಿ ಮುಕ್ತಿಯನ್ನು ಪಡೆಯುವರೆಂಬ ಕಲ್ಪನೆಯಾಗಲಿ, ಬೌದ್ಧಧರ್ಮದ ಉದಯದಿಂದ ಅಳಿಸಿಹೋದುವು. ಪ್ರಾಣಿಹಿಂಸೆಯನ್ನು ಅಹಿಂಸಾ ಪ್ರತಿಪಾದನೆಯು ಕಿತ್ತಿಹಾಕಿತು. ಅಹಿಂಸೆಯಲ್ಲಿ ಮಾನಸಿಕ ಅಹಿಂಸೆಯೂ ಬಂತು, ದೈಹಿಕ ಅಹಿಂಸೆಯೂ ಬಂತು. ಮುಕ್ತಿಯ ಅಧಿಕಾರವಿಲ್ಲವೆಂಬ ಕೃತಕಹಿಂಸೆಗೆ ಗುರಿಯಾದ ಜನತೆಗೆ ಈ ತತ್ತ್ವವು ತುಂಬ ಮೆಚ್ಚಿಕೆಯಾಯಿತು. 'ಸಂಘ'ವು ಬೌದ್ಧತತ್ತ್ವ ಪ್ರಸಾರದ ದೊಡ್ಡ ಮಠ! ಅದರ ನಿಯಮಗಳನ್ನೊಪ್ಪಿಕೊಂಡು ಯಾರು ಬೇಕಾದರೂ ಅಲ್ಲಿ ಸೇವೆ ಸಲ್ಲಿಸಬಹುದು. "ಬುದ್ಧಂ ಶರಣಂ ಗಚ್ಛಾಮಿ, ಧಮ್ಮಂ ಶರಣಂ ಗಚ್ಛಾಮಿ, ಸಂಘಂ ಶರಣಂ ಗಚ್ಛಾಮಿ" ಎಂಬುದೇ ಮುಖ್ಯ ನಿಯಮ ಅಲ್ಲಿ! ಉಪಾಲಿ, ಕ್ಷೌರಿಕ; ಸುನೀತ, ಕಸ ತೆಗೆಯುವವ; ಸುಪಾಕ, ಚಾಂಡಾಲ; ಸ್ವಾತೀ, ವಿಮಾನುಗಾರ; ನಂದ. ದನ ಕಾಯುವವ; ವಿಮಲಾ, ಅಂಬುಪಾಲೀ ಇವರೆಲ್ಲ ಭಿಕ್ಷು. ಭಿಕ್ಷುಣಿಯರು ಸಂಘದಲ್ಲಿ ಆಶ್ರಯ ಪಡೆದವರು! ಗಂಗಾ, ಯಮುನಾ, ಸರಯೂ ಮಹೀನದಿಗಳೆಲ್ಲ ಬೇರೆ ಬೇರೆ ದಿಕ್ಕಿನಿಂದ ಹರಿದು ಬಂದು ಮಹಾಸಾಗರದಲ್ಲಿ ಕೂಡಿ ಒಂದೇ ಆಗಿ ಮಹಾಸಾಗರವೆಂದೇ ಹೇಳಿಸಿಕೊಂಡು ಬಿಡುವಂತೆ, ಬೌದ್ಧಮತೀಯರೂ ಚಾತುರ್ವರ್ಣ್ಯದಿಂದ ದೂರವಾಗಿ, 'ಧರ್ಮವಿನಯ'ದಲ್ಲಿ ಲೀನರಾಗಿ 'ಶಾಕ್ಯಪುತ್ರೀಯ ಶ್ರಮಣ'ರೆಂದೇ ಒಟ್ಟಿಗೆ ಕರೆಯಲ್ಪಡುತ್ತಾರೆ.

ನಿಜವಾದ 'ಅರ್ಹತ್ತ'ನೇ ಬ್ರಹ್ಮವೇತ್ತನೆಂದು 'ಧಮ್ಮಪದ'ವು ಹೇಳುತ್ತದೆ. ಶುಕ್ಲವರ್ಣ-ಕೃಷ್ಣವರ್ಣ,—ಇವು ಕೇವಲ ಕೃತಕಭೇದಗಳು. ನಾಲ್ಕು ವರ್ಣಗಳಲ್ಲಿ ಯಾರು ಬಾಹುಬಲದಿಂದ ಸಮ್ರಾಟರಾದವರೂ ಜನತೆ ಅವರಿಗೆ ಅಷ್ಟೇ ಮರ್ಯಾದೆಯನ್ನು ಕೊಡುವುದಿಲ್ಲವೇ? ಬಳಿಕ ಕೆಳಗಿನ ವರ್ಣದವರು ಮೇಲಿನ ವರ್ಣದವರ ಸೇವೆಯನ್ನು ಮಾಡಬೇಕೆನ್ನುವಲ್ಲಿ ಯಾವ ಅರ್ಥವಿದೆ? ಅದಕ್ಕಿಂತ ತಮ್ಮ ವರ್ಣದವರ ಸೇವೆಯನ್ನೇ ಮಾಡಿದರೆ ಒಳ್ಳೆಯದಲ್ಲವೇ?

ಅಸ್ಪೃಶ್ಯತೆ ಕೃತ್ರಿಮಭೇದವೆನ್ನುವುದಕ್ಕೆ 'ದಿವ್ಯಾವಧಾನ'ದಲ್ಲಿ 'ಶಾರ್ದೂಲಕರ್ಣಾವಧಾನ'ವೆಂಬ ವೃತ್ತಾಂತವೊಂದು ಬರುತ್ತದೆ. ಅದರಲ್ಲಿ ಪ್ರಕೃತಿಯೆಂಬ ಚಾಂಡಾಲಕನ್ಯೆ ಬುದ್ಧನ ಪ್ರಿಯ ಆನಂದನನ್ನು ಮೋಹಿಸುತ್ತಾಳೆ. ಅವಳ ತಾಯಿ ಮಂತ್ರದಿಂದ ಆನಂದನನ್ನು ಅವಳೆಡೆಗೆ ಎಳೆಯುತ್ತಾಳೆ! ಆನಂದನು ಬುದ್ಧನಿಗೆ ಶರಣು ಬರಲಾಗಿ, ಬುದ್ಧನೂ ಮಂತ್ರದಿಂದ ಪ್ರಕೃತಿಯನ್ನು ಆನಂದನೆಡೆಗೆ ಎಳೆಯುತ್ತಾನೆ: ಹೀಗೇ ವರ್ಣಭೇದದ ವಿಚಾರ ಬಂದು ಕಥೆ ದೂರ ಸಾಗಿ, ಜನ್ಮಾಂತರದಲ್ಲಿ ಹರಿದು ಬಂದು, ಕೊನೆಗೆ ವರ್ಣ-ಜಾತಿ-ಅಸ್ಪೃಶ್ಯತೆ ಎಲ್ಲವೂ ಕೃತ್ರಿಮವಿಚಾರವೆಂಬುದಾಗಿ ವಿವರಣೆಯು ಭಗವಾನ ಬುದ್ಧನಿಂದ ಬರುತ್ತದೆ.

ಸದ್ಧರ್ಮದ ಬಾಹ್ಯ ಆಚರಣೆಯಲ್ಲಿ ಟಿಬೇಟ, ಜಪಾನ, ಬ್ರಹ್ಮದೇಶ, ಸಿಲೋನ ಎಲ್ಲೆಡೆಗಳಲ್ಲಿಯೂ ವಿಶಿಷ್ಟಪದ್ಧತಿಗಳು, ಭಿಕ್ಷುಗಳಲ್ಲಿ ತರ-ತಮ ಭಾವಗಳು ಬೆಳೆದುಬಂದಿವೆಯೆಂಬುದನ್ನು ಕಾಣಬಹುದು. ಕಾಲ ಸರಿದಂತೆ ತತ್ತ್ವವು ಸಂಸ್ಥಾಪಕರ ಕಾಲಕ್ಕಿದ್ದ ಶುದ್ಧ ಸ್ವರೂಪದಲ್ಲಿಯೇ ಉಳಿಯಲಾರದು. ಜಾತೀಯತೆಯ ಕಲ್ಪನೆ ಬುದ್ಧನ ಆಚರಣೆಯಲ್ಲಿ ಬರಲೇಯಿಲ್ಲ ಎನ್ನುವುದಕ್ಕೆ, ಅವನ ಕೊನೆಯ ಗಳಿಗೆಯೂ ಸಾಕ್ಷಿಯಾಗಿದೆ! ಪ್ರಯಾಣದಿಂದ, ಧರ್ಮೋಪದೇಶದಿಂದ ತುಂಬ ದಣಿದ ಬುದ್ಧನು ವೈಶಾಲೀ ನಗರದ ಬಳಿ, "ಪಾವ" ಎಂಬ ಹಳ್ಳಿಗೆ ಬಂದನು. ಆಗ ಅಲ್ಲಿ ಚುಂದನೆಂಬ ಶ್ರಮಜೀವಿ ಕಮ್ಮಾರನು ಒಳ್ಳೇ ಭಕ್ತಿಯಿಂದ ಅವನನ್ನು ಊಟಕ್ಕೆ ಕರೆದನು. ಆಹಾರದಲ್ಲಿ ಅಂದು ಕುದಿಸಿದ ಮಾಂಸವನ್ನು ಸೇರಿಸಲಾಗಿತ್ತು. ಅದನ್ನು ಸ್ವೀಕರಿಸುವುದು ಬುದ್ಧನ ಆರೋಗ್ಯಕ್ಕೂ ಸರಿಯಾಗಿರಲಿಲ್ಲ; ಅಹಿಂಸಾ ತತ್ತ್ವಕ್ಕೂ ಸಮ್ಮತವಾಗಿರಲಿಲ್ಲ. ಆದರೂ ಅವನು ಅತ್ಯಂತ ಪ್ರೀತಿಯಿಂದ

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೊನ್
ಮಾರಾಟಮಾಡುವವರು, ರಿಪೇರಿ ಮಾಡುವವರು.

ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ!
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.

ಮಾಲಕರು: **ಬಿ. ಜೆ. ಮುತ್ತಗಿ**

ಕೊಟ್ಟುದಕ್ಕಾಗಿ ತಾನು ಸ್ವೀಕರಿಸಿದೆನೆಂದು ಬುದ್ಧನು ಆನಂದನೆದುರು ಹೇಳಿದನು. ಜೊತೆಗೆ ಈ ವಿಚಾರದ ಅರ್ಥವನ್ನು ಮಾಡಿಕೊಳ್ಳಲಾರದ ಲೋಕದ ಎದುರು ಈ ಮಾತನ್ನು ಹೇಳಬೇಡವೆಂದೂ ಹೇಳಿದ್ದಾನೆ.

ಪಂಡಿತವರ್ಗದ ಸಂಸ್ಕೃತಭಾಷೆಯನ್ನು ಬಿಟ್ಟು, ಜನ-ಸಾಮಾನ್ಯರ ಪ್ರಾಕೃತಭಾಷೆಯನ್ನು ತತ್ತ್ವೋಪದೇಶಕ್ಕಾಗಿ ಆಯ್ದು-ಕೊಂಡದ್ದೂ ಜನತೆಯ ಮೇಲೆ ತುಂಬ ಪ್ರಭಾವಕಾರಿಯಾಯಿತು.

ಮಹಾಮೈತ್ರಿ ಮತ್ತು ಸರ್ವಜೀವಿಗಳಲ್ಲಿಯೂ ಕರುಣೆ ಬೌದ್ಧ ಧರ್ಮದ ಮುಖ್ಯತತ್ತ್ವಗಳು, ಬ್ರಹ್ಮವಿಹಾರದ ಮೊದಲ ಮೆಟ್ಟಲು-ಗಳು! "ತಾಯಿ ತನ್ನ ಜೀವವನ್ನು ತೆತ್ತಾದರೂ ಮಗನನ್ನು ಪ್ರೀತಿಸು-ವಂತೆ, ಸಕಲ ಜೀವಿಗಳನ್ನು ಪ್ರೀತಿಯಿಂದ ಕಾಣು! ಭಯ-ದುಃಖಗಳು ನಿನಗೆ ಬೇಡ; ಹಾಗೆ ಅನ್ಯರಿಗೂ ಬೇಡ! ಬಳಿಕ ನೀನು ಅವರಿಂದ ಹೇಗೆ ತಾನೇ ಭಿನ್ನನು?" ಎಂಬ ವಿಶಾಲವಾದ ತತ್ತ್ವ ಸರ್ವ ಪ್ರಾಣಿಗಳ ಸಮಾನತೆಯನ್ನೇ ಎತ್ತಿ ತೋರಿಸುತ್ತದೆ.

ಬೌದ್ಧಧರ್ಮದ ಹೆಚ್ಚಳದ ಕಾಲದಲ್ಲಿ, ಮಸುಕಾಗಿದ್ದ ಜಾತೀ-ಯತೆಯ ವಿಷಮತೆ ಅಳಿದುಹೋಗಿದ್ದರೆ, ನಾಡಿನಲ್ಲಿ ಐಕ್ಯವುಂಟಾಗಿ, ರಾಷ್ಟ್ರೀಯಭಾವನೆಗೆ ಅವಕಾಶ ದೊರೆಯಬಹುದಾಗಿತ್ತು. ಆದರೆ ಆ ಧರ್ಮದ ಪ್ರಭಾವ ಸ್ವಲ್ಪ ಕುಗ್ಗಿದಾಗ, ಮತ್ತೆ ಜಾತೀಯತೆ, ಅಸ್ಪೃಶ್ಯತೆ ತಲೆಯೆತ್ತಿತು. ರೂಢಿಯಾಗಿ ಬಂದುದು ಪವಿತ್ರವೆಂದೂ ಭಾವನೆ ಬೆಳೆಯಿತು ಧರ್ಮದ ಬೆಂಬಲವೂ ಅದಕ್ಕೆ ದೊರೆಯಿತು. ಬುದ್ಧನು ಮತ್ತು ತರುವಾಯ ಬಂದ ಅನೇಕ ಮಹನೀಯರು ಇದನ್ನು ಬೇರು ಸಹಿತ ಕಿತ್ತಿ ಚೆಲ್ಲುವ ಪ್ರಯತ್ನ ಮಾಡಿದರೂ, ಅದು ಸಾಧ್ಯ-ವಾಗಲಿಲ್ಲ. ಜನತೆಯ ಮನೋನೀತಿಯಲ್ಲಿಯೇ ಮಾರ್ಪಾಡಾದರೆ, ಯಾವ ಕಾಯಿದೆಯಾದರೂ ಅಸ್ಪೃಶ್ಯತೆಯನ್ನು ನಿವಾರಿಸಲು ಸಹಾಯಕಾರಿಯಾದೀತು! ಅಸ್ಪೃಶ್ಯತೆಯು ಯಾವುದೊಂದು ಪೀಳಿಗೆ-ಯಲ್ಲಿ ವಿಶಿಷ್ಟ ವರ್ಗದವರಿಂದ ನಿರ್ಮಾಣವಾದದ್ದಲ್ಲ. ಎಲ್ಲ ವರ್ಗ-ಗಳ ಮುಖಂಡರು ಅದರ ವಿರುದ್ಧ ಹೋರಾಡಿದ್ದರೂ, ಅದಿನ್ನೂ ಜೀವಂತ ವಿದೆ. ವಿಚಾರಶಕ್ತಿ, ಮತ್ತೆ ಅದನ್ನು ಕೃತಿಯಲ್ಲಿ ತರುವ ಇಚ್ಛೆಯುಳ್ಳ ಮಹನೀಯರು, ಅಸ್ಪೃಶ್ಯತೆಯನ್ನು ನಿವಾರಿಸಲು ಯತ್ನಿಸಿದರೆ, ಬುದ್ಧನ ತತ್ತ್ವಗಳು ಆ ಕಾರ್ಯದಲ್ಲಿ ತುಂಬ ಸಹಾಯಕಾರಿಯಾಗಬಲ್ಲ ವೆಂಬಲ್ಲಿ ಸಂಶಯವಿಲ್ಲ!

ಕವಿ ಕಾಳಿದಾಸ

ಶ್ರೀ. ಎನ್. ಎಸ್. ಗದಗಕರ ಬಿ ಎ. ಧಾರವಾಡ

'ಭಾರತದ ಕಾವ್ಯನಭದಲಿ ಹೊಳೆವ ಧ್ರುವತಾರೆ'
ನೀನೆಂದು ಪಂಡಿತರ ಉಕ್ತಿಯಿಹುದು;
ನಿನ್ನಿಂದ ಸಂಸ್ಕೃತಕೆ ಉಜ್ವಲತೆ ಬಂತೆಂಬ
ನುಡಿಯು ಅತ್ಯುಕ್ತಿಯೆ? ದಿಟವೆ ಅಹುದು! ೧

ನಿನ್ನ ಶಾಕುಂತಲಾ ನಾಟಕದೊಳೆಲ್ಲಿಯೂ
ರಸದ ಝರಿ ಹರಿಯುವುದು ಸ್ವಚ್ಛಂದವು;
ಕಲ್ಪನೆಯ ಕುಸುರು ಭಾವಗಳು ದಾತ್ತತೆ, ಮತ್ತೆ
ಜೀವಂತಪಾತ್ರಗಳ ಹೊಂಗಳಸವು. ೨

ಹಿಮಶೈಲ ಶಿಖರಗಳು, ಅಲ್ಲಿ ಹರಡಿದ ಕಾಂತಿ,
ತಂಗಾಳಿಯಲಿ ಬೆರೆತ ಸೌಗಂಧವು,
ವನ-ಮೃಗಗಳಲ್ಲದೆ ನದೀ—ಸರೋವರ ಕೂಡಿ
ನಿನ್ನ ಕೃತಿಗೌರವವ ಹೆಚ್ಚಿಸಿಹವು. ೩

ಓ ಕವಿಯೆ! ನಿನ್ನ ಚಿತ್ರಕಶಕ್ತಿ ಕಾರಲಿಕೆ
ರಘುವಂಶ-ಮೇಘದೂತಗಳೆರಡೆ ಸಾಕು;
'ಧ್ವನಿಕಾವ್ಯ' ನಿರ್ಮಿತಿಗೆ ನಿನಗಾರು ಸರಿಯಹರು?
ಸತ್ಯ—ಸೌಂದರ್ಯಗಳೆ ನಿನ್ನ ವಾಕು! ೪

ಕರುಣೆಯ ಪ್ರಪಂಚದಲಿ ಭವಭೂತಿ ಸಮ್ರಾಟ
ಶೃಂಗಾರ ರಾಜ್ಯದಲಿ ನೀನೆ ಮೇಲಾಳು.
ದಾಂಪತ್ಯ ಪ್ರಣಯ, ಆಶ್ರಮದ ಪಾವಿತ್ರ್ಯಗಳ
ನಿನ್ನಂತೆ ರೂಪಿಸುವರಾರು ಹೇಳು? ೫

'ಸೃಷ್ಟಿದೇವಿಯ ಅಡಿಯ ಬಳಿಯಲ್ಲಿ ಆಡುವವ'
ಎಂದೆನುವ ಖ್ಯಾತಿ ಪಡೆ ಸಾರ್ಥಗಂತೆ!
ಜಿಂಕೆ ತರು ಕುಸುಮಲತೆ ನವಿಲು ಕೋಗಿಲೆಗಳು
ನಿನ್ನೇಕರೂಪತೆಯು ಸೋಜಿಗವದಲ್ತೆ? ೬

ನವಜೀವನ

‘ ಆನಂದಕಂದ ’

೧

ನವಜೀವನವೆಂಬುದೊಂದು ಸ್ವಪ್ನದ ಸುರನಂದನ....
ಸವಿಜೇನಿನ ಲೇಪನದಲ್ಲಿ ಅವಿತ ಮುಳ್ಳ ಮೆಳೆಬನ ...
ಕವಡುಮನದ ಕಲ್ಪನಾ !
ಹಿಂದಾದರು ಇಂದಾದರು ಮುಂದಾದರು ಎಂದಾದರು
ಜೀವನವದು ಜೀವನ !
ಅದಕೇತಕೆ ಳವಡುವುದು ‘ಹೊಸ’ ‘ ಹಳತು ’ ಈ ವಿಶೇಷಣ?
ಭ್ರಾಂತಿಯುದಿದು ಭಾಷಣ !

೨

ನಿನ್ನೆಯು ಜೀವನ ಪುರಾಣ, ಇಂದಿನದಿದೊ ನವ–ನವೀನ,
ಇಂದಿನದೀ ನವಜೀವನ ನಾಳೆಗಹುದು ಹಳೆಯ ಕಥನ !
ಹರಿವ ನೀರಿನಲ್ಲಿ ಹೊಸತು-ಹಳತೆಂಬುದು ಇಹುದೆ ?
ತಿಳಿಯಿದ್ದರೆ ಹೊನಲೆಲ್ಲವು ಎಲ್ಲೆಲ್ಲಿಯು ಹೊಸದೇ....
ಯಾವಾಗಲು ಹೊಸದೇ !
ಕೊಳೆಗೂಡಿರೆ ಆ ಹೊನಲೇ ಎಲ್ಲ ಕಡೆಗು ಹಳತೇ....
ಯಾವಾಗಲು ಹಳತೇ !

೩

ನಿನ್ನೆಗಳನು ತಂದ ರವಿಯೆ ಇಂದು ಕೂಡ ತೋಳಗುತಿರುವ,
ಇಂದಿನ ಈ ಹಗಲಾಣ್ಮನೆ ನಾಳೆಗಳನು ಎಳೆದು ತರುವ,
ನಿನ್ನೆಯು ಬಾಳ್ಗೇತಕೆನ್ನಬೇಕು ಹಳೆಯ ಜೀವನ ?
ಅಂದು ನಾವು ಅನುಭವಿಸಿದುದೆಲ್ಲ ನಿಜ—ನವೀನ !
ಅಂದು ನಾವು ಕಂಡುದೆಲ್ಲ ನಿಜವು—ನವನವೀನ....
ಹಲವು ವಿಧದ ಜ್ಞಾನ
ಒದವಿಸಿತಾ ಶುಭದಿನ !

೪

ಕಣ್ಣು ತೆರೆಯದಿರುವ ಕೂಸು ನಿನ್ನೆಗಳನು ನೋಡಿರದು,
ನಿನ್ನೆಯು ಬೆಳೆಕೊದವಿಸಿರ್ದ ಸನ್ನಿಯನ್ನ ಊಡಿರದು !
ಇಂದು ಕಣ್ಣುತೆರೆದು ರವಿಯ ಕಂಡು ವ್ಯೆಯ ಮರೆದು
ಇಂದಿನದೇ ನವಜೀವನವೆಂದು ಕೂಗುತಿಹುದು !
ಹಿಂದಿನದನ್ನರಿಯದು....
ಮುಂದಿನ ದಿನ ಬಗೆಯದು !

೫

ನಿನ್ನೆಗಳನು ಕಂಡ ಜೀವ ಇಂದನು ನಿರುಕಿಸುತಲಿಹುದು,
‘ ನವಜೀವನ ’ ಎಂದರಚುವ ಎಳೆಯರ ಸೊಲ್ ಕೇಳುತಿರುವುದು,
ಇಂದಿನ ಜೀವನದಿ ‘ ನವವು ’ ಯಾವುದೆನುತ ನೋಡುತಿಹುದು,
ಎಲ್ಲಿಯು ನವವಿಲ್ಲ....ಎಲ್ಲೆಲ್ಲಿಯು ನವವಿಲ್ಲ !
ನಿನ್ನೆಯುದೇ ಎಲ್ಲವಿಹುದು
ನಿನ್ನೆಯುದೇ ಎಲ್ಲ !

೬

ಅದೇ ಧರಣಿ, ಅದೇ ತರಣಿ ! ಅದೇ ಜನನ, ಅದೇ ಮರಣ !
ಅದೇ ಅನ್ನ, ಅದೇ ಚಿನ್ನ ! ಅದೇ ಕ್ಷುಧಾ, ಅದೇ ಕಾಮ !
ಅದೇ ದ್ವೇಷ, ಅದೇ ರೋಷ ! ಅದೇ ಆಟ, ಹೋರಾಟ !
ಅದೇ ಕೆಳೆ, ಅದೇ ಹಗೆ, ಅದೇ ದುಃಖ–ಸುಖದ ಕೂಟ !
ನಿನ್ನೆಯಂತೆ ಎಲ್ಲವೂ
ನಿನ್ನೆಯುದೇ ಎಲ್ಲವೂ !
ಹೊಸದೇನೂ ಇಲ್ಲವೋ ..
ಹೊಸದೇನೂ ಇಲ್ಲವು !

೭

ನವಜೀವನವೆಂಬ ಕೂಗು ಕಿವಿದೆರೆಯನು ಕಚ್ಚುತಿಹುದು,
ನಾಳೆಗಳನು ಲೆಕ್ಕಿಸದಲೆ ಇಂದನೆ ಜನ ನಂಬಿ ಇಹುದು,
ಓಡುವಂತೆ ಭಾಸವಹುದು....ನಿಂದಲ್ಲಿಯೆ ನಿಂದಿರುವುದು,
ಮುನ್ನಡೆಯೇ ಕಾಣದಿರುವ ನವಜೀವನವೆಂತಹದಿದು ?
ಜೀವನಕಿದು ಲಕ್ಷಣ....
ಪ್ರಗತಿ ಕರ್ಮ ಜ್ಞಾನ !

× × × ×

ನವಜೀವನವೆಂಬ ಕರ್ಮರಹಿತ ಕೂಗು ಒಣಪ್ರಾಣ !
ಸವಿಮಾತಿನ ಹುಸಿಯ ಹಿಂದೆ ಹುದುಗಿದ ಅಜ್ಞಾನ !
ಅಜ್ಞಾನವು ಅಲ್ಲವಲೇ ಕವಡುಮನದ ಕಲ್ಪನಾ....
ಕಸುಕುಮನದ ಭಾವನಾ !

ಬರೆಹಗಾರನ ಭ್ರಮಣ

(ಒಂದು ಅಣಕ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ

●

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಬರೆಹಗಾರರು ತಮ್ಮ ಹೊಸಗ್ರಂಥ ಬರೆಯಲು ಮನೆಯಲ್ಲಿ ಕುಳಿತಿದ್ದಾರೆ. ಬರೆಹಗಾರರು ಅದಾಗಲೇ ನೂರಾರು ಗ್ರಂಥಗಳನ್ನು ಬರೆದು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಲಲಿತಸಾಹಿತ್ಯದ ಅಭಿವೃದ್ಧಿಯಿಂದ ಜನರ ಮೇಲೆ ಕೆಟ್ಟ ಪರಿಣಾಮ ಆಗುವುದೆಂಬ ವಿಚಾರದಿಂದ, ಅದನ್ನು ವಿಚಾರಿಸಲು ಸರಕಾರವು ಒಬ್ಬ ಅಧಿಕಾರಿಯನ್ನು ನಿಯಮಿಸಿ ಅವನನ್ನು ಈ ಬರೆಹಗಾರನ ಬಳಿ ಕಳಿಸುತ್ತದೆ. ಸರಕಾರಕ್ಕೆ ಹೆಚ್ಚಾಗಿ ಕಾದಂಬರಿಗಳನ್ನು ನಿಯಂತ್ರಣಗೊಳಿಸಬೇಕೆಂಬ [illegible]ತ್ತದೆ. ಆ ರೀತಿ ನಿಯಂತ್ರಿಸಲು ಅದಾಗಲೇ ಕೆಲವು ಕಾನೂನುಗಳನ್ನೇ ಪಾಸುಮಾಡಿಕೊಂಡು ಬಿಟ್ಟಿದೆ. ಅಧಿಕಾರಿ [illegible] ನಂತರಾಗ ತೆರೆ ಮೇಲಕ್ಕೇರುತ್ತದೆ. ರಂಗಭೂಮಿಯಲ್ಲಿ ಬರೆಹಗಾರ ಹಾಗು ಅವನ ಹೆಂಡತಿ ಇ[illegible]

●

ಪಾತ್ರವಿವರ :

೧. ಬರೆಹಗಾರ ೨. ಹೆಂಡತಿ ೩. ಅಧಿಕಾರಿ.

ಬರೆಹಗಾರ:— ಏ, ಏನs, ಹೊರಗ ಯಾರೋ ಬಂದ್ಹಂಗ, ಕಾಣಸ್ತsದ ನೋಡು. ಆ ಅಡಿಗೀ ಕಾರಖಾನೀ ಒಳಗಿಂದ ಒಂದು ಮಿನಿಟು ಹೊರಗ ಬಂದು ನೋಡೂ ಅಂದೆ!

ಹೆಂಡತಿ:— ಮಂದಿ ನಮ್ಮ ಮನಿಗೆ ಯಾಕ ಬರತಾರs ಅಂತೀನಿ! ನಮ್ಮಿಬ್ಬರದೂ ಲಗ್ನ ಏಕಾದಶೀ ದಿವಸ ಆಗೇದ ಅಂಬೋದು, ಅವರಿಗೆ ಗೊತ್ತಿದ್ಹಂಗ ಕಾಣಿಸೂದಿಲ್ಲ. ಇದು ಬರೆಹಗಾರರ ಮನಿ ಇಲ್ಲದಿದ್ದರೆ ಅಂತ ಹೇಳ್ರಿ. ಬಂದವರು ಹಾಳೀ ತಿಂದು ಮಸೀ ಕುಡದು ಹೋಗ ಬೇಕು. ಬ್ಯಾರೆಯವರ ಮನಿಗೆ ಹೋಗೋವರು ನಮ್ಮ ಮನಿಗೆ [illegible], ಬಂದಿರಬೇಕು. ನಮ್ಮ ಮನಿಯೊಳಗ ತಗಣಿ ಕೂಡಾ ಅನ್ನಸತ್ಯಾಗ್ರಹ ಮಾಡಿ, ಬೇಸತ್ತು ತಾವs ಹೊರಗ ಹೋಗ್ಯಾವ. ಇನ್ನು ಇವರ್‍ಯಾಕ ಬಂದು ತ್ರಾಸಕೊಡತಾರ?

ಬರೆಹಗಾರ:— ಒಲೀ ಮುಂದ ಕೂತು ಕೀರ್ತನಾ ಮಾಡಿಕೀ ಅಲ್ಲ! ನನ್ನ ಕೈಯಾಗ ಲೆಕ್ಕಣಿಕಿ ಅದ ಅಂಬೋದು ಗೊತ್ತು ಅದ ಇಲ್ಲೋ? ಸುಳ್ಳs ಯಾಕ ಸಿಟ್ಟುತರಿಸ್ತಿ?

ಹೆಂಡತಿ: – ನಿಮ್ಮ ಪೆನ್ನು ಅಂದರ ಯಾಟಂ ಬಾಂಬ್ ಇದ್ಹಾಂಗ ಏನು? ಅದಕ್ಕ ಮಂದಿ ಯಾಕ ಹೆದರಬೇಕು? ನನ್ನ ಕೈಯಾಗೂ ಸವಟು—ಸವಟು ಅದ ಅಂದೆ! ಮನೀ ಒಳಗ ಗಂಡಸರು ಇರೋ ವ್ಯಾಳ್ಯಾದಾಗ ನಮ್ಮದ್ಯಾಕ ಕಾರಭಾರ? ನೀವs ಎದ್ದು, ಬಂದವರನ್ನ ಕೇಳರೀ—ಅಂದೆ.

ಬರೆಹಗಾರ — "ಪತ್ನೀ ದೇವೋಭವ" ಅಂಬೋಕಾಲ! ಕಾಲೇಜಿನೊಳಗ ನೋಡೀಯೋ ಇಲ್ಲೋ? ಮುಖ್ಯ ಅತಿಥಿಗಳಿಗೆ ಕಾಲೇಜಿನ ಹುಡಿಗಿಯರೇ ಮಾಲೆ ಹಾಕಬೇಕು. ಯಾವುದಾದರೂ ಫಂಡು ಎತ್ತತಿದ್ದರ, ಅವರೇ ಮುಂದ ಹೋಗಬೇಕು. ಸ್ತ್ರೀಯರು ಬಂದ ಅತಿಥಿಗಳನ್ನ ಸೌಜನ್ಯದಿಂದ ಸ್ವಾಗತಿಸೋದು ಅಂದರ, ಇಪ್ಪತ್ತನೆಯ ಶತಮಾನದ ನಾಗರಿಕತೆ. "ಗಂಡಸರಷ್ಟು ನಮಗೂ ಹಕ್ಕುಬೇಕು" ಅಂತ, ಮೊನ್ನೆ ಸಮಾಜದಾಗ ಟೇಬಲ್ ಗುದ್ದಿ ಗುದ್ದಿ ಮಾತಾಡಿದಿ ಎತ ಸುದ್ದಿ ಅದ ಅಲ್ಲಾ! ಈಗ ಕೈಯಾಗ ಹಿಡಿದ ಕಾದಂಬರೀ ತಸಗೆಳಗ, ಅದನ್ನs ಬರೀಲಿಕ್ಕೆ ಹತ್ತೀನಿ. ಗಂಡ ಅನ್ನೋ ಪ್ರಾಣಿ ಹೆಂಡತೀ ಮಾತು ಕೇಳಿಕೊಂಡು, ಮನಿಯೊಳಗ ಇರತಾನ. ಮುಸುರೀ ತಿಕ್ಕಿ, ಕಸಾಹೊಡದು ಎಲ್ಲಾ ಮಾತು ಕೇಳತಾನ. ಆದರ ಹೆಂಡತೀ ಬಾಣಂತೀತನಾ ಮಾಡೋದು ಅಂದರ ಅಂವಗ ಬ್ಯಾಸರಿಕಿ ಬಂದsದ. ಅದಕ್ಕ ಈ ಹಡಿಯೋ ಕೆಲಸಾ ಅಷ್ಟು ಹೆಂಡತೀ ಕಡಿಂದ ತನಗs ವರ್ಗ ಮಾಡಿಸಿಬಿಡು ಅಂತ ದೇವರನ್ನ ಬೇಡಿಕೊಳ್ಳಲಿಕ್ಕೆ ಹತ್ತ್ಯಾನ. ಅಂದರ, ಮೂರು ತಿಂಗಳು ರಾಜಾನ್ಹಂಗ ಮಂಚಾ ಏರಿ, ಸಕ್ಕರಿ-ತುಪ್ಪಾ ತಿಂದು, ಮಜಾಹೊಡೀಲಿಕ್ಕೆ ಬರತsದ ಅಂತ ವಿಚಾರಮಾಡ್ಯಾನ. ಅದನ್ನ ಮುಂದ ಬೆಳಸಲಿಕ್ಕೆ ಹತ್ತೀನಿ.

ಹೆಂಡತಿ:— ನನಗ ಕೀರ್ತನಾ ಅಂಬೋವರು, ನೀವು ಪುರಾಣಾನs ನಡಿಸೀರಲ್ಲ. ಆ ಗುಂಡಕ್ಕನ ಹನುಮಂತ ದೇವರ ಗುಡಿಯೊಳಗ, ಪುರಾಣದಾಚಾರ ನೌಕರೀ ಖಾಲೀ ಅದ ಅಂತ ನೋಡ್ರಿ. ಅದಕ್ಕ ಅರ್ಜಿ ಹಾಕರಿ. ಬೇಕಾದರ ಗುಂಡಕ್ಕನ ಮನಿಯ ಅಡಿಗೀ ಅಂಬವ್ವಗ ವಸೀಲೀ ಹಚ್ಚೋಣಂತ. ನೀವು ನಿಮ್ಮ ಅಸ್ಖಲಿತವಾಣಿಯ ಉಪ-

ನವಜೀವನ

'ಆನಂದಕಂದ'

೧

ನವಜೀವನವೆಂಬುದೊಂದು ಸ್ವಪ್ನದ ಸುರನಂದನ....
ಸವಿಜೇನಿನ ಲೇಪನಲ್ಲಿ ಅವಿತ ಮುಳ್ಳ ಮೆಳೆಬನ ...
ಕವಡುಮನದ ಕಲ್ಪನಾ !
ಹಿಂದಾದರು ಇಂದಾದರು ಮುಂದಾದರು ಎಂದಾದರು
ಜೀವನವದು ಜೀವನ !
ಅದಕೇಂತಳವಡುವುದು 'ಹೊಸ' 'ಹಳತು' ಈ ವಿಶೇಷಣ?
ಭ್ರಾಂತಿಯುದಿದು ಭಾಷಣ !

೨

ನಿನ್ನೆಯು ಜೀವನ ಪುರಾಣ, ಇಂದಿನದಿದೊ ನವ–ನವೀನ,
ಇಂದಿನದೀ ನವಜೀವನ ನಾಳೆಗಹುದು ಹಳೆಯ ಕಥನ !
ಹರಿವ ನೀರಿನಲ್ಲಿ ಹೊಸತು-ಹಳತೆಂಬುದು ಇಹುದೆ ?
ತಿಳಿಯಿದ್ದರೆ ಹೊನಲೆಲ್ಲವು ಎಲ್ಲೆಲ್ಲಿಯು ಹೊಸದೇ....
ಯಾವಾಗಲು ಹೊಸದೇ !
ಕೊಳೆಗೂಡಿರೆ ಆ ಹೊನಲೇ ಎಲ್ಲ ಕಡೆಗು ಹಳತೇ....
ಯಾವಾಗಲು ಹಳತೇ !

೩

ನಿನ್ನೆಗಳನು ತಂದ ರವಿಯೆ ಇಂದು ಕೂಡ ತೊಳಗುತಿರುವ,
ಇಂದಿನ ಈ ಹಗಲಾಣ್ಮನೆ ನಾಳೆಗಳನು ಎಳೆದು ತರುವ,
ನಿನ್ನೆಯ ಬಾಳ್ಗೇತಕೆನ್ನಬೇಕು ಹಳೆಯ ಜೀವನ ?
ಅಂದು ನಾವು ಅನುಭವಿಸಿದುದೆಲ್ಲ ನಿಜ—ನವೀನ !
ಅಂದು ನಾವು ಕಂಡುದೆಲ್ಲ ನಿಜವು—ನವನವೀನ....
ಹಲವು ವಿಧದ ಜ್ಞಾನ
ಒದವಿಸಿತಾ ಶುಭದಿನ !

೪

ಕಣ್ಣು ತೆರೆಯದಿರುವ ಕೂಸು ನಿನ್ನೆಗಳನು ನೋಡಿರದು,
ನಿನ್ನೆಯ ಬೆಳಕೊದವಿಸಿರ್ದ ನನ್ನಿಯನ್ನ ಊಡಿರದು !
ಇಂದು ಕಣ್ಣುತೆರೆದು ರವಿಯ ಕಂಡು ನೈಯ ಮರೆದು
ಇಂದಿನದೇ ನವಜೀವನವೆಂದು ಕೂಗುತಿಹುದು !
ಹಿಂದಿನದನ್ನರಿಯದು....
ಮುಂದಿನ ದಿನ ಬಗೆಯದು !

೫

ನಿನ್ನೆಗಳನು ಕಂಡ ಜೀವ ಇಂದನು ನಿರುಕಿಸುತಲಿಹುದು,
'ನವಜೀವನ' ಎಂದರಚುವ ಎಳೆಯರ ಸೊಲ್ ಕೇಳುತಿಹುದು,
ಇಂದಿನ ಜೀವನದಿ 'ನವವು' ಯಾವುದೆನುತ ನೋಡುತಿಹುದು,
ಎಲ್ಲಿಯು ನವವಿಲ್ಲ....ಎಲ್ಲೆಲ್ಲಿಯು ನವವಿಲ್ಲ !
ನಿನ್ನೆಯದೇ ಎಲ್ಲವಿಹುದು
ನಿನ್ನೆಯದೇ ಎಲ್ಲ !

೬

ಅದೇ ಧರಣಿ, ಅದೇ ತರಣಿ ! ಅದೇ ಜನನ, ಅದೇ ಮರಣ !
ಅದೇ ಅನ್ನ, ಅದೇ ಚಿನ್ನ ! ಅದೇ ಕ್ಷುಧಾ, ಅದೇ ಕಾಮ !
ಅದೇ ದ್ವೇಷ, ಅದೇ ರೋಷ ! ಅದೇ ಆಟ, ಹೋರಾಟ !
ಅದೇ ಕಳೆ, ಅದೇ ಹಗೆ, ಅದೇ ದುಃಖ–ಸುಖದ ಕೂಟ !
ನಿನ್ನೆಯಂತೆ ಎಲ್ಲವೂ
ನಿನ್ನೆಯದೇ ಎಲ್ಲವೂ !
ಹೊಸದೇನೂ ಇಲ್ಲವೋ ..
ಹೊಸದೇನೂ ಇಲ್ಲವು !

೭

ನವಜೀವನವೆಂಬ ಕೂಗು ಕಿವಿದೆರೆಯನು ಕಚ್ಚುತಿಹುದು,
ನಾಳೆಗಳನು ಲೆಕ್ಕಿಸದಲೆ ಇಂದನೆ ಜನ ನಂಬಿ ಇಹುದು,
ಓಡುವಂತೆ ಭಾಸವಹುದು....ನಿಂದಲ್ಲಿಯೆ ನಿಂದಿರುವುದು,
ಮುನ್ನಡೆಯೇ ಕಾಣದಿರುವ ನವಜೀವನವೆಂತಹದಿದು ?
ಜೀವನಕಿದು ಲಕ್ಷಣ....
ಪ್ರಗತಿ ಕರ್ಮ ಜ್ಞಾನ !

× × × ×

ನವಜೀವನವೆಂಬ ಕರ್ಮರಹಿತ ಕೂಗು ಒಣವ್ರಣ !
ಸವಿಮಾತಿನ ಹುಸಿಯ ಹಿಂದೆ ಹುದುಗಿದ ಅಜ್ಞಾನ !
ಅಜ್ಞಾನವು ಅಲ್ಲವಲೇ ಕವಡುಮನದ ಕಲ್ಪನಾ....
ಕಸುಕುಮನದ ಭಾವನಾ |

ಬರೆಹಗಾರನ ಭ್ರಮಣ

(ಒಂದು ಅಣಕ)

ಶ್ರೀ. ಗೋವಿಂದಮೂರ್ತಿ ದೇಸಾಯಿ, ಧಾರವಾಡ

●

ಇಪ್ಪತ್ತನೆಯ ಶತಮಾನದ ಕೊನೆಯಲ್ಲಿ ಬರೆಹಗಾರರು ತಮ್ಮ ಹೊಸಗ್ರಂಥ ಬರೆಯಲು ಮನೆಯಲ್ಲಿ ಕುಳಿತಿದ್ದಾರೆ. ಬರೆಹಗಾರರು ಅದಾಗಲೇ ನೂರಾರು ಗ್ರಂಥಗಳನ್ನು ಬರೆದು ಪ್ರಸಿದ್ಧಿಯನ್ನು ಪಡೆದಿದ್ದಾರೆ. ಲಲಿತಸಾಹಿತ್ಯದ ಅಭಿವೃದ್ಧಿಯಿಂದ ಜನರ ಮೇಲೆ ಕೆಟ್ಟ ಪರಿಣಾಮ ಆಗುವುದೆಂಬ ವಿಚಾರದಿಂದ, ಅದನ್ನು ವಿಚಾರಿಸಲು ಸರಕಾರವು ಒಬ್ಬ ಅಧಿಕಾರಿಯನ್ನು ನಿಯಮಿಸಿ ಅವನನ್ನು ಈ ಬರೆಹಗಾರನ ಬಳಿ ಕಳಿಸುತ್ತದೆ. ಸರಕಾರಕ್ಕೆ ಹೆಚ್ಚಾಗಿ ಕಾದಂಬರಿಗಳನ್ನು ನಿಯಂತ್ರಣಗೊಳಿಸಬೇಕೆಂಬ [illegible]ರುತ್ತದೆ. ಆ ರೀತಿ ನಿಯಂತ್ರಿಸಲು ಅದಾಗಲೇ ಕೆಲವು ಕಾನೂನುಗಳನ್ನೇ ಪಾಸುಮಾಡಿಕೊಂಡು ಬಿಟ್ಟಿವೆ. ಅಧಿಕಾರಿ ಹ[illegible] ನಿಂತಾಗ ತೆರೆ ಮೇಲಕ್ಕೇರುತ್ತದೆ. ರಂಗಭೂಮಿಯಲ್ಲಿ ಬರೆಹಗಾರ ಹಾಗು ಅವನ ಹೆಂಡತಿ ಇ[illegible]

●

ಪಾತ್ರವಿವರ :

೧. ಬರೆಹಗಾರ ೨. ಹೆಂಡತಿ ೩. ಅಧಿಕಾರಿ.

ಬರೆಹಗಾರ:— ಏ, ಏನss, ಹೊರಗ ಯಾರೋ ಬಂದ್ಹಂಗ, ಕಾಣಸ್ತದ ನೋಡು. ಆ ಅಡಿಗೀ ಕಾರಖಾನೀ ಒಳಗಿಂದ ಒಂದು ಮಿನಿಟು ಹೊರಗ ಬಂದು ನೋಡೂ ಅಂದೆ!

ಹೆಂಡತಿ:— ಮಂದಿ ನಮ್ಮ ಮನಿಗೆ ಯಾಕ ಬರತಾರss ಅಂತೀನಿ! ನಮ್ಮಿಬ್ಬರದೂ ಲಗ್ನ ಏಕಾದಶೀ ದಿವಸ ಆಗೇದ ಅಂಬೋದು ಅವರಿಗೆ ಗೊತ್ತಿದ್ಹಂಗ ಕಾಣಿಸೂದಿಲ್ಲ. ಇದು ಬರೆಹಗಾರರ ಸಂಸಾರ ಇಲ್ಲದಿದ್ದರೆ ಅಂತ ಹೇಳ್ರಿ. ಬಂದವರು ಹಾಳೀ ತಿಂದು ಮಸೀ ಕುಡದು ಹೋಗ[illegible] ಬೇಕು. ಬ್ಯಾರೆಯವರ ಮನಿಗೆ ಹೋಗೋವರು ನಮ್ಮ ಮನಿಗೆ [illegible], ತಪ್ಪಿ ಬಂದಿರಬೇಕು. ನಮ್ಮ ಮನಿಯೊಳಗ ತಗಣಿ ಕೂಡಾ ಅನ್ನಸತ್ಯಾಗ್ರಹ ಮಾಡಿ, ಬೇಸತ್ತು ತಾವs ಹೊರಗ ಹೋಗ್ಯಾವ. ಇನ್ನು ಇವರ್‍ಯಾಕ ಬಂದು ತ್ರಾಸಕೊಡತಾರ?

ಬರೆಹಗಾರ:— ಒಲೀ ಮುಂದ ಕೂತು ಕೀರ್ತನಾ ಮಾಡತೀ ಅಲ್ಲ! ನನ್ನ ಕೈಯಾಗ ಲೆಕ್ಕಣಿಕೆ ಅದ ಅಂಬೋದು ಗೊತ್ತು ಅದ ಇಲ್ಲೋ? ಸುಳ್ಳs ಯಾಕ ಸಿಟ್ಟು ತರಿಸ್ತಿ?

ಹೆಂಡತಿ: – ನಿಮ್ಮ ಪೆನ್ನು ಅಂದರ ಯಾಟಂ ಬಾಂಬ್ ಇದ್ದ್ಹಾಂಗ ಏನು? ಅದಕ್ಕ ಮಂದಿ ಯಾಕ ಹೆದರಬೇಕು? ನನ್ನ ಕೈಯಾಗೂ ಸವಟು—ಸವಟು ಅದ ಅಂದೆ! ಮನೀ ಒಳಗ ಗಂಡಸರು ಇರೋ ವ್ಯಾಳ್ಯಾದಾಗ ನಮ್ಮದ್ಯಾಕ ಕಾರಭಾರ? ನೀವs ಎದ್ದು, ಬಂದವರನ್ನ ಕೇಳರೀ—ಅಂದೆ.

ಬರೆಹಗಾರ— "ಪತ್ನೀ ದೇವೋಭವ" ಅಂಬೋಕಾಲ! ಕಾಲೇಜಿನೊಳಗ ನೋಡೀಯೋ ಇಲ್ಲೊ? ಮುಖ್ಯ ಅತಿಥಿಗಳಿಗೆ ಕಾಲೇಜಿನ ಹುಡಿಗಿಯರೇ ಮಾಲೆ ಹಾಕಬೇಕು. ಯಾವುದಾದರೂ ಫಂಡು ಎತ್ತತಿದ್ದರ, ಅವರೇ ಮುಂದ ಹೋಗಬೇಕು. ಸ್ತ್ರೀಯರು ಬಂದ ಅತಿಥಿಗಳನ್ನ ಸೌಜನ್ಯದಿಂದ ಸ್ವಾಗತಿಸೋದು ಅಂದರ, ಇಪ್ಪತ್ತನೆಯ ಶತಮಾನದ ನಾಗರಿಕತೆ. "ಗಂಡಸರಷ್ಟು ನಮಗೂ ಹಕ್ಕುಬೇಕು" ಅಂತ, ಮೊನ್ನೆ ಸಮಾಜದಾಗ ಟೇಬಲ್ ಗುದ್ದಿ ಗುದ್ದಿ ಮಾತಾಡಿದಿ ಎಂತ ಸುದ್ದಿ ಅದ ತಿಳ್ಳಾ! ಈಗ ಕೈಯಾಗ ಹಿಡಿದ ಕಾದಂಬರೀ ತಪ್ಪಿಗೆ, ಅದನ್ನs ಬರೀಲಿಕ್ಕೆ ಹತ್ತೀನಿ. ಗಂಡ ಅನ್ನೋ ಪ್ರಾಣಿ ಹೆಂಡತೀ ಮಾತು ಕೇಳಿಕೊಂಡು, ಮನಿಯೊಳಗ ಇರತಾನ. ಮುಸುರೀ ತಿಕ್ತಿ, ಕಸಾಹೊಡದು ಎಲ್ಲಾ ಸೂತು ಕೇಳತಾನ. ಆದರ ಹೆಂಡತೀ ಬಾಣಂತೀತನಾ ಮಾಡೋದು ಅಂದರ ಅಂವಗ ಬ್ಯಾಸರಿಕೆ ಬಂದsದ. ಅದಕ್ಕ ಈ ಹಡಿಯೋ ಕೆಲಸಾ ಅಷ್ಟು ಹೆಂಡತೀ ಕಡಿಂದ ತನಗ್ತ ವರ್ಗ ಮಾಡಿಸಿಬಿಡು ಅಂತ ದೇವರನ್ನ ಬೇಡಿಕೊಳ್ಳಲಿಕ್ಕೆ ಹತ್ತ್ಯಾನ. ಅಂದರ, ಮೂರು ತಿಂಗಳು ರಾಜಾನ್ಹಂಗ ಮಂಚಾ ಏರಿ, ಸಕ್ಕರಿ-ತುಪ್ಪಾ ತಿಂದು, ಮಜಾಹೊಡೀಲಿಕ್ಕೆ ಬರತsದ ಅಂತ ವಿಚಾರಮಾಡ್ಯಾನ. ಅದನ್ನ ಮುಂದ ಬೆಳಸಲಿಕ್ಕೆ ಹತ್ತೀನಿ.

ಹೆಂಡತಿ:— ನನಗ ಕೀರ್ತನಾ ಅಂಬೋವರು, ನೀವು ಪುರಾಣಾನs ನಡಿಸೀರಲ್ಲ. ಆ ಗುಂಡಕ್ಕನ ಹನುಮಂತ ದೇವರ ಗುಡಿಯೊಳಗ, ಪುರಾಣದಾಚಾರ ನೌಕರೀ ಖಾಲೀ ಅದ ಅಂತ ನೋಡ್ರಿ. ಅದಕ್ಕ ಅರ್ಜಿ ಹಾಕರಿ. ಬೇಕಾದರ ಗುಂಡಕ್ಕನ ಮನಿಯು ಅಡಿಗೀ ಅಂಬವ್ವಗ ವಸೀಲೀ ಹಚ್ಚೋಣಂತ. ನೀವು ನಿಮ್ಮ ಅಸ್ಖಲಿತವಾಣಿಯು ಉಪ-

ನ್ಯಾಸವನ್ನು ಮುಗಿಸೋದರೊಳಗ, ಬಂದವರು ಎಲ್ಲಿ ಹೊರಗ ಹೋದ-ರೇನೋ!

ಬರೆಹಗಾರ:— ನಿನಗ ಜಯಪತ್ರಾನs ಬರಕೊಟ್ಟೆ ಅಂದೆ. ನೀಯಾಕ ಬಂದು ಅವರನ್ನ ಕರೀತಿ! ನಾನs ಕರೀತೀನಿ.

ಅಧಿಕಾರಿ: — ಬರಹಗಾರ ಮಹಾಶಯರಿಗೆ ನಮಸ್ಕಾರಗಳು!

ಬರೆಹಗಾರ:— ಎಲೇ....ಇವನ.......? ನಾನು ಬರೀತೀನಿ ಅಂಬೋದು ನಿಮಗ ಹ್ಯಾಂಗ ಗೊತ್ತು ಆತು? ಮುಖಪುಟ ಮುದ್ರಿಕಾ ಬರತದ ಏನು? ನಿಮ್ಮ ಮಾರೀನs ಇವತ್ತಿನ ತನಕಾ ನೋಡಿಲ್ಲ. ಮತ್ತ ಯಾವುದಾರೇ ಪತ್ರಿಕಾ ಸಂಪಾದಕರೊ? ಹೌದು, ಹೌದ. ನಿಮ್ಮ ಮಾರೀನs ಹೇಳತದ; ನೀವು ಶುದ್ಧ ಹದಿನಾರಾಣೆ ಸಂಪಾ-ದಕರು ಅಂತ! ಏನ್ರಿ ಸ್ತುತಿಪ್ರವೃದು ಕಥೀ ಧಾರಣೀ ಏನು ಮಾಡೀರಿ? ಕಾದಂಬರೀ ಬರೆದರ ಭ್ರಾಂತಿಯು ರೊಕ್ಕಾ ಕೊಡತೀರೋ, ಅಥವಾ ಆ ರೊಕ್ಕಕ್ಕ ಪ್ರಾಮಿಸ ಕೊಡತೀರೋ? ಕವಿತಾ ಏನು— ರೂಪಾಯಿಗೊಂದೊ, ಅಷ್ಟನ ಪುರಾ ಎರಡು ರೂಪಾಯಿಗೆ ಮೂರೋ? ನನ್ನ ಹತ್ತರ ವಾಲ್ಮೀಕಿ ರಾಮ ಜೀವನ ಐದಷ್ಟು ಅಪ್ರಕಟಿತ ಸಂಗ್ರಹ ಅದ! ನೀವೇನು ಈ ಉದ್ಯೋಗಕ್ಕ ಹೊಸಬರೇನು? ಮಾತs ನಿಮ್ಮ ಬಾಯಿಂದ ಬರವೊಲ್ದು?

ಹೆಂಡತಿ:— ಬಂದವರು ಸ್ವಲ್ಪ ಆರಾಮ ತಕ್ಕೊಳ್ಳಿ. ದೇಶಾ-ವರೀ ಬ್ರಾಹ್ಮಣರ್ಹಂಗ ನೀವ, ಎಲ್ಲಾ ಮಾತಾಡತೀರಲ್ಲ. ಅವರು ಸಂಪಾದಕರಿದ್ದಾರಂತ ನಮ್ಮ ಮನೀಗೆ ಬಂದಾರ. ಅವರಿಗೆ ಕಥೀ, ಕವನ, ಹರಟಿ, ಪ್ರಬಂಧ ಬೇಕಾಗಿರಬೇಕು ಅವರ ಧಾರಣಿ ತುಟ್ಟಿ ಅನಿಸ್ತಿದ್ದರ ಹೇಳರಿ; ನಾನು ಸೋವೀಮಾಡಿ ಕೊಡತೀನಿ.

ಅಧಿಕಾರಿ:— ನೀವು ನನ್ನ ವಿಷಯಕ್ಕೆ ತಪ್ಪು ತಿಳಕೊಂಡೀರಿ ನಾನು ಅಂತರರಾಷ್ಟ್ರೀಯ ಬರೆಹಗಾರರ ನಿಯಂತ್ರಣಮಂಡ ಭಾರತಶಾಖೆಯ ಅಧಿಕಾರಿ. ಇತ್ತೀಚಿಗೆ ಬರಿಯೋ ಜನರ ಸ ಹೆಚ್ಚಾಗಲಿಕ್ಕೆ ಹತ್ತೇದ. ಇದರಿಂದ ಸಮಾಜದ ಮೇಲೆ ಪರಿ ಆಗಿ, ವಿಶೇಷವಾಗಿ ವಿಘಾತಕ ಚಟುವಟಿಕಿ ಪ್ರಾರಂಭ ಆಗ್ಯಾವ. ಓದೋವರಿಗಿಂತ ಬರೆಯೋ ಜನರು ಹೆಚ್ಚಾದರ, ಈ Balance of power ಅಂತಾರಲ್ಲಾ—ಅದು ತಪ್ಪಿಹೋಗೋ ಸಂದಿಗ್ಧಕಾಲ ಬಂದ್ವದ ಅಂತ ಸರಕಾರದ ವಿಚಾರ ಅದ. ಅದಕ್ಕ ಅದನ್ನ ಕಾಯ್ದುಕೊಳ್ಳಲಿಕ್ಕೆ ನಮ್ಮನ್ನ ನೇಮಸ್ಯಾರ. ನಾವು ಸಮಗ್ರ ಬರೆಹಗಾರರ ಮಂಡಳ-ಗಳನ್ನ ಹಾಗೂ ವೈಯಕ್ತಿಕ ಬರೆಹಗಾರರನ್ನ ಭೆಟ್ಟಿಯಾಗಿ, ಅವರ ವಿಷಯಕ್ಕೆ ಸರಕಾರಕ್ಕ ವರದಿ ಒಪ್ಪಿಸಬೇಕಾಗೇದ. ಆ ಪ್ರಕಾರ ನಿಮ್ಮ ಮನೀಗೆ ಬಂದೀನಿ. ನೀವು ಬರೆದ ಖಂಡಕಾವ್ಯ ಎಷ್ಟು? ನವ್ಯತಮ ಕಾವ್ಯವೆಷ್ಟು? ಆರ್ಥಿಕ, ಮಾನಸಿಕ, ನೈತಿಕ, ಐತಿಹಾಸಿಕ ಕಾದಂಬರಿ ಗಳೆಷ್ಟು? ಅವುಗಳ ಪೂರ್ಣವಿವರ ಬೇಕು.

ಬರೆಹಗಾರ:— ಇದು ಯಾವ ಶತಮಾನದ ಕೊನೆ ಅದ ಅಂಬೋದು ಗೊತ್ತು ಅದ ಇಲ್ಲೋ? ಖಂಡಕಾವ್ಯ ಬರದರ ಓದೋ ಅಷ್ಟು ತಾಳ್ಮೆ ಜನರಲ್ಲಿ ಇಲ್ಲ ಅಂತ, ತುಂಡುಕಾವ್ಯಗಳನ್ನೇ ರಚಿಸಲಿಕ್ಕ ಹತ್ತೀನಿ. ನೀತಿ, ಸತ್ಯ ಹಾಗು ಶೀಲಕ್ಕ ಯಾವ ಕಿಮ್ಮತ್ತೂ ಇಲ್ಲ ಅಂತ, ಅನೀತಿಪರ ಹಾಗು ಅಸತ್ಯಪರ ಕಾದಂಬರಿಗಳನ್ನೇ ಬರಿಯುವ ಅಭ್ಯಾಸ ಮಾಡಿಕೊಂಡಿದ್ದೇನೆ. ಸಾಮಾಜಿಕ ಕಾದಂಬರೀ ಒಳಗ ಏನೂ ಹುರುಳು ಇಲ್ಲಂತ ತಿಳಿದು, ಲೈಂಗಿಕ ಕಾದಂಬರೀ ಬರೀಲಿಕ್ಕೆ ಹತ್ತೀನಿ. ಕಾಮಪ್ರಚೋದನೆಯೇ ಸಾಹಿತ್ಯದೇವಿಯ ಅಲಂಕಾರವೆಂದು ಭಾವಿಸಿ, ಇತ್ತೀಚಿಗಂತೂ ಹತ್ತೆಂಟು ಕಾದಂಬರಿಗಳಲ್ಲಿ ಹೆಣ್ಣು-ಗಂಡಿನ ಸಮಸ್ಯೆ-ಯನ್ನೇ ಕುರಿತು ನನ್ನ ವಿಚಾರವನ್ನು ವಿವೇಚಿಸಿದ್ದೇನೆ. ಜನರ ಮನ-ಸ್ಸಿನ ಪ್ರವೃತ್ತಿ ಹಾಗು ಅವರು ನನ್ನ ಕಾದಂಬರಿ ಮೆಚ್ಚುವರೋ ಇಲ್ಲವೋ—ಎಂಬುದನ್ನು ವಿಚಾರಿಸದಲೇ, ಬರಿಯುವುದನ್ನೇ ಒಂದು ಉದ್ಯೋಗಮಾಡಿಕೊಂಡಿದ್ದೇನೆ. ಬರೆಯುವುದಕ್ಕೆ ನನಗೆ ಅಭ್ಯಾಸ ಬೇಡ, ಸ್ಫೂರ್ತಿ ಬೇಡ, ಸಿದ್ಧಿಬೇಡ! ನೂರು ರೂಪಾಯಿಯ ಒಂದು ಚೆಕ್ ಬಂದರೆ ಸಾಕು; ನಾಳೆಗೇನೇ ಕಾದಂಬರಿಯನ್ನು ಸಿದ್ಧಮಾಡಿ ಕೊಡುತ್ತೇನೆ. ನಾನು ಬರೆದ ಕಾದಂಬರಿಗಳು ಹಾಗು ಬಿಡಿಗ್ರಂಥಗಳು ಎಷ್ಟೆಂದು ನನಗೇನೇ ಗೊತ್ತಿಲ್ಲ ನಾನು ಅದು ಹೇಗೆ ವಿವರಗಳನ್ನು ಕೊಡಲಿ?

ಅಧಿಕಾರಿ:— ನೀವು ಬರೆದ ಗ್ರಂಥಗಳೆಷ್ಟು ಅಂಬೋದು ನಿಮಗ ಗೊತ್ತು ಇರದಿದ್ರ, ಬರೀತೀರಿ ಯಾಕ? ಮೊನ್ನೆ ನೀವು ನಿಮ್ಮ ಕಾದಂಬರಿಯ ಶತಮಾನೋತ್ಸವವನ್ನ ಜರುಗಿಸಿಕೊಂಡಿರಂತಲ್ಲ! ನಾಲ್ನೂರು ವರ್ಷದಾಗ ಇಷ್ಟು ಬರೆದವರಂದ್ರ ನಮ್ಮ ನಾಡಿನೊಳಗ ನೀವೊಬ್ಬರೇ! ಕೈಲೇ ಬರೀತೀರೋ—ಅಥವಾ ಕಾದಂಬರೀ ಉತ್ಪಾ-ದನಾ ಮಾಡೋ ಯಂತ್ರಾ ತಂದಿದ್ದೀರೊ? ನೀವು ಹ್ಯಾಂಗ ಬರೀತೀರಿ ಅಂಬೋದನ್ನ ಹುಡುಕಲಿಕ್ಕೆ ನಮ್ಮ ಸಂಘ, ನಾನು ಇದರಲ್ಲಿ ವಿಶೇಷ ಪರಿಣತನಿದ್ದದರಿಂದ ನನ್ನ ಕಳಿಸೇದ. ನಮ್ಮ ಸಂಘದ ಕಾನೂನಿನ ಪ್ರಕಾರ, ನೀವು ನೂರಕ್ಕೆ ಮಿಕ್ಕಿ ಗ್ರಂಥ ಬರೆಯೋದು ಅಂದರ ಅಪರಾಧ ದ್ಹಾಂಗ. ಹೋಗಲಿ, ನಿಮ್ಮ ಹತ್ತಿರ ಇದ್ದ ಪುಸ್ತಕದ ಪ್ರತಿ ಹೊರಕ್ಕೆ ...ರಿ.

ಬರೆಹಗಾರ:— ನಿಮ್ಮ ಕಾಯ್ದೆ ಕಾನೂನು ಒಂದೂ ನನಗ ಗೊತ್ತಿರಲಿಲ್ಲ! ಮತ್ತ ನನ್ನ ಹತ್ತರ, ನಾನು ಬರೆದ ಎಲ್ಲಾ ಗ್ರಂಥಗಳ ಪ್ರತೀನೂ ಇಟ್ಟುಕೊಂಡಿಲ್ಲ.

ಅಧಿಕಾರಿ:— Ignorance of law is no excuse! ಪ್ರತಿ ಯಾಕ ಇಟ್ಟಿಲ್ಲ? ಅಂಗಡಿಗೆ ಏನರೇ ಹಾಕೀರೇನು?

ಬರೆಹಗಾರ:— ಅಂಗಡಿಗೆ ಒಂದು ವ್ಯಾಳ್ಯಾ ಯಾರಾದರೂ ತಪ್ಪಿ ಒಯ್ದರ, ಅದರ ಕಾಗದ ಸಣ್ಣವು ಅವ ಅಂತ ತಿರಿಗಿ ಕಳಿಸ್ತಾರ. ನೋಡ್ರಿ, ಪ್ರಕಾಶಕರು ಬರೆಹಗಾರನಿಗೆ ಕೊಡೋದು ನಾಲ್ಕಾರು ಪ್ರತಿ; ನನಗ ಅನೇಕ ಮಂದಿ ಗೆಳೆಯಂದಿರು, ಹಿತಚಿಂತಕರು ಇದ್ದಾರ. ಅವರು ಓದಲಿಕ್ಕೆ ಅಂತ ಅವುಗಳನ್ನ ತಗೊಂಡು ಹೋಗತಾರ. ಅವರಿಗೆ ಅವರವರ ಗೆಳೆಯಂದಿರು ಇರತಾರ. ಹೀಂಗಾಗಿ "ಪುಸ್ತಕಂ ಪರ-ಹಸ್ತಗತಂ ಗತಂ" ಆಗತದ. ಅದಕ್ಕs, ನಾನು ಬರೆದ ನನ್ನ ಎಲ್ಲಾ ಪುಸ್ತಕಗಳ ಪ್ರತಿ ಉಳಿಸಿಕೊಂಬೋದು ಸಾಧ್ಯ ಆಗಲಿಲ್ಲ!

ಅಧಿಕಾರಿ :— ನೀವು ನಿಮ್ಮ ಪುಸ್ತಕಗಳನ್ನ ಸಂಗ್ರಹ ಮಾಡಿಟ್ಟುಕೊಳ್ಳದಿದ್ದರ ಮತ್ತ್ಯಾರು ಅವನ್ನ ಇಟಗೋಬೇಕು? ಈ ವಿಷಯು ಅಂದ್ರ ನಮ್ಮ ಸಂಘದ ಕಾನೂನಿನ ದೃಷ್ಟ್ಯಾ ಗುನ್ನೆ ಆದ್ಹಾಂಗ ಆಗತ್ವದ.

ಹೆಂಡತಿ — (ನಡುವೆ ಬಾಯಿಹಾಕಿ). ಅಲ್ರಿ, ಒಬ್ಬರು ಒಂದು ಕಾದಂಬರಿ ಓದಬೇಕು—ಅಂತ ನೀವ್ಯಾಕ ಕಾಯ್ದೆ ಮಾಡ-ಬಾರದು? 'ಒಂದು ಪ್ರತಿ ಹತ್ತೆಂಟು ಮಂದಿ ಓದೋದು ಅಪರಾಧ ಅದ' ಅಂತ ಹೇಳಿರಿ ಅಂದೆ. ಈ ಹೋಟಲು ಅಂದ್ರ ಈಗಿನ ಕಾಲದ ವಾಚನಾಲಯು ಆಗ್ಯಾವ! ಒಂದು ಆಣೆ ಕೊಟ್ರ, ಸಮಗ್ರ ಸಾಹಿತ್ಯಾನ ದೊರಿಯೋ ಕಾಲ ಬಂದದ. ಅಲ್ಲಿ ಪೇಪರ ಇಡೋದನ್ನ ಪ್ರತಿಬಂಧ ಮಾಡಿರಿ. ಅಂದರ, ಬರಿಯೋ ಜನಕ್ಕ ನೀವು ಹೊಟ್ಟಿತುಂಬಾ ಅನ್ನಾ ಹಾಕಿದ್ಹಾಂಗ ಆಗತದ.

ಅಧಿಕಾರಿ:— ಈ ಸಂಘ ಹುಟ್ಟಿದ್ದು ಬರಿಯೋವರಿಗೆ ಸಹಾಯ ಮಾಡಬೇಕು ಅಂತ ಅಲ್ಲ; ಅದಕ್ಕ ಸರಕಾರ ಬೇರೆ ರೀತಿ ಸಹಾಯ ಮಾಡತದ! ಬರಿಯೋ ಜನರಿಂದ ಜನರಲ್ಲಿ ದುಷ್ಪರಿಣಾಮ ಆಗಲಿಕ್ಕೆ ಹತ್ತ್ಯಾವ. ಅವನ್ನ ತಡೀಲಿಕ್ಕೆ ನಾವಿಲ್ಲಿ ಬಂದೀವಿ.

ಹೆಂಡತಿ :— ಬರಿಯೋ ಜನರನ್ನ... ಅಂದ್ರ ಮನಸೇರ ಒಳಗರೆ ಗಣನಾ ಮಾಡತೀರೋ ಇಲ್ಲೋ?

ಅಧಿಕಾರಿ :— ಅದು ಸರಕಾರ ವಿಚಾರ ಮಾಡೋಯು ತ್ತಾನೆ. ಪ್ರಶ್ನಿ ಅದ. ಓದೋವರ ಒಳಗ ಹಾಗು ಬರಿಯೋವರೊಳಗಿನ ಎಲ್ಲ ಸಮಾನತೆ ಬಂದು. ಕಮ್ಯುನಿಝಂ ಹರಡಿ, ವರ್ಗರಹಿತ —ನಿಲ್ಲುತ್ತದೆ ಉತ್ಪನ್ನ ಆಗಬೇಕು – ಅಂತ ಸರಕಾರದ ವಿಚಾರ ಅದ. ಯವಾಗುತ್ತದೆ. ವೃತ್ತಿಯ ಮ್ಯಾಲೆ, ಯಾರದೂ ಹಾಗು ಯಾವ ಜಾತಿಯದೂ ತಿಪ್ಪಗಾಗುತ್ತಾ ಇರೋಹಂಗಿಲ್ಲ!

ಹೆಂಡತಿ :—ಕಮ್ಯುನಿಝಂ ಅಂದ್ರ? ಝುಮ್‌ಓ ಝುಂಪಣಿಲ್ಲದಿದ್ದರೆ ಬಾ!

ಬರೆಹಗಾರ :— ಕಮ್ಯುನಿಝಂ ಅಂದ್ರ ಗೊತ್ತು ಇಲ್ಲವ ಮಗ ಎಷ್ಟು! ಯಾರು ಸರಕಾರದ ಮಾತು ಕೇಳುವುದಿಲ್ಲ ನೋಡು; ಅವರಾ, ತನಗೆ ಇನುಷ್ಟ... ಹಿಡಿದು ಗುಂಡುಹಾಕೋದು!

ಅಧಿಕಾರಿ :— ಛೇ ಛೇ ನಿಮ್ಮ ಕಲ್ಪನಾ ತಪ್ಪು ಅದ. ಇಂದಿನ ಪ್ರಜಾರಾಜ್ಯದೊಳಗ, ಎಲ್ಲಾರಿಗೂ ಸರಿಸಮಾನ ಹಕ್ಕು ಇರಬೇಕು ಅಂತ ನಮ್ಮ ಘಟನಾ ಸಾರಿ ಹೇಳಲಿಕ್ಕೆ ಹತ್ತೇದ. ಬರಿಯೋ ಜನರು, ಬರಿಯೋದನ್ನ ತಮಗ ಗುತ್ತಿಗೀ ಕೊಟ್ಟಾರಂತ ತಿಳಿದು ಬರಕೋತ, ಹೋದರ, ಜಗತ್ತಿನಾಗಿನ ಹಾಳಿ ಸಾಲಲಿಕ್ಕಿಲ್ಲ. ಮತ್ತು ಕೆಲವೇ ಜನರು ಬರಿಯೋದು ಅಂದ್ರ, ಬ್ಯಾರೇ ಅವರ Right ಕಸುಗೊಂಡ ಹಾಂಗ ಆಗತದ. ಅದಕ್ಕ, ಸರ್ವರಿಗೂ ಸ್ವಯಂ ಪ್ರಕಟನೆಗೆ ಅವಕಾಶ ಸಿಗಬೇಕು—ಅಂತ ಸರಕಾರದ ವಿಚಾರ ಅದ. ಅದಕ್ಕ ಪ್ರತಿ ನಾಗರಿಕ ನಿಗೂ ನಾವು ಸಮಾನತೆ ತಂದು, ಬರಿಯೊ ಅವಕಾಶ ಕಲ್ಪಿಸಿ ಕೊಡತೀವಿ

ಹೆಂಡತಿ :— ಎಲ್ಲರಿಗೂ ಸಮಾನ ಹಕ್ಕು ಅಂದ್ರ ಏನು? ...ಸವಟಗೇನರು ಮೋಕ್ಷಾ ಕೊಡತೀರೇನು? ನಮ-ಗೆಲ್ಲಾ ಅಡಿಗೀಮನಿಯಿಂದ ಆಫೀಸಿಗೆ ಟ್ರಾನ್ಸ್‌ಫರ್ ಕೊಟ್ಟರ, ನಿಮ್ಮನ್ನ ಸಾಯೋತನಕಾ ನೆನಸ್ತೀವಿ ನೋಡ್ರಿ.

ಬರೆಹಗಾರ:— ನಮ್ಮಂಥವರಿಗೆ ಅನುಕೂಲ ಆಗತದ. ನನಗನಕಾ ಒಂದು ಬಿಲ್ಲಿ ಪ್ರಾಪ್ತಿಯಿಲ್ಲ; ನಿಮ್ಮ ಕಮ್ಯುನಿಝಂದಾಗ ಈಕಿಗೊಂದು ನೌಕರಿ ಕೊಡಸರೀ ಸಾಹೇಬರ! ಅಲ್ರಿ, ನಿಮ್ಮ ಕಾಯ್ದೆ ಎಲ್ಲಿ ಎಲ್ಲಿ ಅವ ಅಂಬೋದು ನನಗ ಗೊತ್ತೇಯಿಲ್ಲ.

ಅಧಿಕಾರಿ :— ಅವು ಸರಕಾರೀ ಗ್ಯಾಜೆಟ್‌ನಾಗ ಪ್ರಕಟ ಆಗ್ಯಾವ. ಗೊತ್ತು ಇರದಿದ್ದರ ಓದಿ ತಿಳಕೋಬೇಕು!

ಬರೆಹಗಾರ :—ನಾನು ಬರೆದದ್ದನ್ನ, ಪ್ರೆಸ್ಸಿಗೆ ಕೊಡೋಮುಂದ, ಎರಡನೇ ಸಲ ಓದಲಿಕ್ಕೇ ನನಗ ಬ್ಯಾ... ಹತ್ತೇದ. ಇನ್ನ ಮತ್ತ ಈ ಯೂಸಾ ವಿಷಯಾ ...ಕೊಂಡು ತ್ರಾಸ ತಗೋಳಲಿ ಅಂದೆ.

ಅಧಿಕಾರಿ :— ಜಗತ್ತಿನ... ...ಯಿಲ್ಲದವನ, ನೀವು ಹ್ಯಾಂಗ ಬರಿತೀರಿ? ಏನೂ ತ್ರಾ... ...ಕ್ಕನ ನೂರಾರು ಗ್ರಂಥ ಬರೆದೀರಿ. ಇವತ್ತಿನ ದಿವಸದ ಸ... ನೋಡಿದರ, ಕಾಳಿದಾಸನ್ನ ಬಿಟ್ಟು ಬ್ಯಾರೇ ಯಾರೂ ಸ್ವತಂತ್ರ ... ಬರದ್ಹಂಗ ನನಗ ಕಾಣಸ-ಪ್ಪೊಲ್ಲು. ಮಂದೀ ಕೃತಿ, ಬ್ಯಾರೇ ಭಾಷಾದಾಗಿನ ವಿಚಾರ ತಗೋಂಡು ಬರೆದು, ಹೆಸರಾದ ಮಂದೇ ಭಾಳ ಕಾಣಸ್ತದ.

ಹೆಂಡತಿ :—ಇನ್ನಮ್ಯಾಲೆ, ಒಬ್ಬರು ಇಷ್ಟನ ಬರೀಬೇಕೂ ಅಂತ ...ಗ್ರಂಥ ಏನರೇ ಹಾಕೋ ಅವರು ಇದ್ದೀರೇನು?

ಅಧಿಕಾರಿ :— ಅಹುದಹುದು. ನಿಮ್ಮ ಯಜಮಾನರಿಗಿಂತ ಹೆಚ್ಚು ಜ್ಞಾನ ಅದ ನೋಡ್ರಿ! ಒಬ್ಬರು ಒಂದು ಬಂಗಾಲೀ ...ತಾ ಹೆಚ್ಚಿನ ಹಾಳೀ ಒಳಗ ಬರಿಯೋಹಂಗಿಲ್ಲ. ಮತ್ತ ಆಸುರೀಪ್ರಕೃತಿ ಒಂದು ನೂರಕ್ಕೂ ಹೆಚ್ಚು ಆಗೋಹಂಗಿಲ್ಲ. ಅಂಥವರಿಗೆ ಕಾರಾಗ್ರಹವಾಸ ಅದ. ಅದಕ್ಕೇ ಸದ್ಯಕ್ಕೆ ನಿಮ್ಮ ಹತ್ತರ ನೀವು ಬರೆದ ಪುಸ್ತಕಗಳ ಒಂದೊಂದು ಪ್ರತಿ ಇಡರಿ. ಅದರ ಮ್ಯಾಲೆ ಇನುಷ್ಟ ಆಗತದ ನೋಡೋಣ. ನಾನು ಅವುಗಳನ್ನೆಲ್ಲಾ ...ಬೇಕಾಗತದ.

ಬರೆಹಗಾರ:— ಅಯ್ಯೋ, ನನ್ನವು ನೂರು ಅನಕಾ ಎಂದೋ ಆಗಬಿಟ್ಟಾವ. ತೂಕ, ಹತ್ತಿಪ್ಪತ್ತು ಬಂಗಾಲೀ ಮಣಕ್ಕಿಂತಾ ಹೆಚ್ಚು ಆಗತಾವ. ಅಂದರ ನಾನು ಹತ್ತೆಂಟು ಜನ್ಮದಾಗೂ ಶಿಕ್ಷಾ ಅನು-ಭೋಗಿಸಬೇಕಾಗತದ. ಜೇಲಿಗೆ ಹಾಕಿದರ ಒಳ್ಳೇದು ಆತು. ಇಂದಿನ ಜೇಲು ಅಂದರ, ಹಿಂದಿನ ಮಹರಾಜರ ಅರಮನೀ ಇದ್ದಂಗ ಅವ. ಅಲ್ಲಿ ಕೂತು ಕೂತು ಬೇಸರಿಕೆ ಬಂದರ, ಯಾರನ್ನಾದರೂ ಕೂಡಿಸಿ ಹೊರಗ ಬರಲಿಕ್ಕೆ ಬರತದ. ಮೊನ್ನೆ ಒಬ್ಬರು ಭವಿಷ್ಯ ಹೇಳಿದರು : "ರಾಯರ, ಇನ್ನಮ್ಯಾಲೆ ನಿಮಗ ಭಾಗ್ಯೋದಯದ ಕಾಲ ಬಂತು. ಹೊಟ್ಟಿಗೆ; ಬಟ್ಟಿಗೆ ಏನೂ ತಾಪತ್ರಯ ಇಲ್ಲ" ಅಂತ ಅದು ಖರೇ ಬಂತು ನೋಡ್ರಿ. ದುಡೀದನ ಹೊಟ್ಟಿಗೆ ಯಾರು ಹಾಕತಾರ್ರೀ? ರಾಮ ವನವಾಸಕ್ಕ ಸೀತಾನ್ನ ಕರಕೊಂಡು ಹೋದ್ಹಾಂಗ, ನನ್ನಾಕಿನ್ನ ಅಷ್ಟು ನನ್ನ ಸಂಗಡೀಲೆ ಕಳಿಸಿಬಿಡ್ರಿ. ನಮ್ಮ ಭಾಗ್ಯವ

ದೇವರು ಬಂದ್ಹಾಂಗ ಬಂದ್ರಿ. ಇದರಿಂದ ನನ್ನ ಹೆಂಡತಿಗೆ ಅಡಿಗಿ ತಪ್ಪಿ, ಅವಳೂ ಸೊಶಾಲಿಸ್ಟ್ ಆಗತಾಳ.

ಅಧಿಕಾರಿ:— ಈ ಕಾನೂನು ಜಾರಿಯೊಳಗ ಬಂದ ಮ್ಯಾಲೆ ಯಾರು ಬರೀತಾರ ಅವರನ್ನ ಜೇಲಿಗೆ ಕಳಿಸತೇವಿ ನಿಮಗ ಬ್ಯಾರೆರೀತಿ ಶಿಕ್ಷಾ ಕೊಡತೇವಿ. ಇನ್ನಮ್ಯಾಲೆ ನೀವು ಲೆಕ್ಕಣಿಕೆ ಹಿಡಿಯೋಹಂಗಿಲ್ಲ. ನೀವು ನಿಮ್ಮ ಕಾಗದದ ಸೀದಾ ಎಂದೋ ಮುಗಿಸಿಬಿಟ್ಟೀರಿ! ನಿಮ್ಮ ಎಲ್ಲಾ ಮುಂದಿನ್ನ ಜೇಲಿಗೆ ಹಾಕಿದರ, ಅಲ್ಲೀ ನೀವು ನ್ಯಾಯಾ ಆಡಿ ಜೇಲಿನ ಇತರ ಕೈದಿಗೆ ತ್ರಾಸ ಕೊಡೋವರು. ಆದರೊಳಗ ನಿಮ್ಮ ವಿಷಯಕ್ಕ ಜನರಿಗೆ ಬಹಾಳ ತಪ್ಪು ತಿಳುವಳಿಕಿ ಆಗೇದ. ಮುಂದಿನ್ನ ಬೈದ್ರು ಬೈನ್ನ ತೇಗೋದು ನಿಮ್ಮ ಸ್ವಭಾವ ಕಾಣತ್ತದ. ...ಯೀಳತ್ತದ; ನಿಮಗ ಅ... ಶಸ್ತ್ರ ಹಿಡಿದು, ಅವರನ್ನ ಹಿಯಾಳಿಸೋದು ಅ... ವನ್ನ ಪ್ರ... ಸುವುದು... ಸಂತೋಷ ಕಾಣಸ್ತದ!

...ರೆದರ

ಬರೆಹ... ಭ್ರಾಂತಿಯ... ಆಡೋದು, ಮುಂದೀ ಮ್ಯಾಲೆ ಹಾಗು ಸರಕಾರದ ಮ್ಯಾಲ... ಮಾಡೋದು ಅಂದರ ಪ್ರಜಾರಾಜ್ಯದೊಳಗಿನ ಒಂದು ಸು... ವನ ಪುರ... ಹಾಗು ಮೂಲಭೂತ ಹಕ್ಕು ಇದ್ಹಾಂಗ.

ಅಧಿಕಾರಿ:— ಜೀವ... ಅಂದರ ಜನ್ಮಸಿದ್ಧ ಹಕ್ಕು! ಒಂದು ರೇಲ್ವೆ ಗಾಡಿಗೆ ಟಿಕೀಟು ಸಿಗದಿದ್ದರ, ಮುಖ್ಯಮಂತ್ರಿಗೆ ಅರ್ಜಿ ಮಾಡೋದು! ಮಗಳಿಗೆ ವರಾ ಸಿಗಲಿಲ್ಲಾ ಅಂತ ಕಾರ್ಯ್ಯಮಂತ್ರಿ... ಮನೀ ಎದುರಿಗೆ ಅನ್ನ ಸತ್ಯಾಗ್ರಹ ಮಾಡೋದು! ನೌಕ...ಶಾ-ಲೊಲ್ಲದು ಅಂತ ಕೂಲಿಕಾರ ಮಂತ್ರೀ ಮನೀಮ್ಯಾಲಿಂದ ಬಿದ್ದ...ವರು ಹತ್ಯಾ ಮಾಡಿಕೊಳ್ಳಲಿಕ್ಕ ಪ್ರಯತ್ನಮಾಡೋದು! ಇಷ್ಟೆಲ್ಲಾ ...ಕಥೀ, ರಾಜ್ಯದ ಮೂಲಭೂತ ಹಕ್ಕುಗಳು! ಮೊನ್ನೆ ಒಂದು ಸ್ತ್ರೀ...ತುಟ್ಟ "ಸರಕಾರದ ಖಜಾನಿ ಒಳಗಿನ ರೊಕ್ಕಾ ಎಲ್ಲಾ ಹಂಚಿಕೊ... ಕಾರ ಅಂದರ ಪ್ರಜರದ್ದ ಅಂತ ತೋರಿಸಿಕೊಡಬೇಕು!" ಅಂಡೀರಿ ಪಾಸ್‌ಮಾಡಿ ಅಧ್ಯಕ್ಷರಿಗೆ ಕಳಿಸ್ಯಾರಂತ. ನಿಮ್ಮ ಒಣಗುಂಗ ಮಣದ ಮ್ಯಾಲಿನ ಕೃತಿಗಳನ್ನೆಲ್ಲಾ ನಾಶಮಾಡತೇವಿ. ...

ಹೆಂಡತಿ:— ನೀವು ಒಂದು ಬಂಗಾಲೀ ಮಣಕರಿ... ಎಲ್ಲಾ ಪುಸ್ತಕಗಳನ್ನ ನಾಶಮಾಡಿದರ, ನಮಗ ಏನೂ... ಧನಾ ಕೊಡೂದಿಲ್ಲ ಏನು?

ಅಧಿಕಾರಿ:— ಎಲ್ಲೀ ಪರಿಹಾರ? ನಿಮ್ಮ ಪಾಪದ ಪರಿಹಾರ ಆಗು ಅಂತ ನೀವ ಸರಕಾರಕ್ಕ ದಕ್ಷಿಣೀ ಕೊಡಬೇಕು. ಬರಿಯೋ ಜನರು ಹೆಚ್ಚಾಗಿ, ಗ್ರಂಥಗಳ ಉತ್ಪಾದನಾ ಹೆಚ್ಚು ಆಗೇದ. ಇದರಿಂದ ಆ ವ್ಯವಸಾಯದೊಳಗ ಮುಗ್ಗಟ್ಟು ತಲೀ ಎತ್ತಲಿಕ್ಕೆ ಹತ್ತೇದ. ಸಾಹಿತ್ಯ ಪರಿಷತ್ತು ಸರಕಾರಕ್ಕ, ತಮ್ಮ ಬರಿಯೋ ಧಂದೇಕ್ಕ ಸಹಾಯಮಾಡಿರಿ ಅಂತ ಪ್ರಾರ್ಥಿಸಿಕೊಂಡಿತ್ತು. ಆದಕ್ಕ ಸರಕಾರದ ಆರ್ಥಿಕ ಸಲಹೆಗಾರರು ಹಾಗು ಅಂಕಿಸಂಖ್ಯಾ ಶಾಸ್ತ್ರಜ್ಞರು ಸೇರಿ "ಇನ್ನಮ್ಯಾಲೆ ಈ ಬರಿಯೋ ವೃತ್ತಿ ಕೆಲದಿವಸ ತಡೀಹಿಡಿರಿ. ಇದ್ದ ಅಧಿಕ ಉತ್ಪಾದನಾ ಎಲ್ಲಾ ಖರ್ಚುಮಾಡಲಿಕ್ಕ ಪ್ರಯತ್ನಾ ಮಾಡಿರಿ. ಇದರಿಂದ ಬರೆಹಗಾರರಲ್ಲಿ ನಿರುದ್ಯೋಗ ತಲೀ ಎತ್ತಬಹುದು; ಅದಕ್ಕ ಅವರು Employmeut Exchange ನ್ಯಾಗ ತಮ್ಮ ಹೆಸರು ನೊಂದಾಯಿಸಲಿ! ಅವರವರ ಯೋಗ್ಯತಾನುಸಾರ ನೌಕರೀ ಕೊಡತೇವಿ. ಆದಕ್ಕ ಇದು ಮೊದಲನೇ ಹೆಜ್ಜೆ ಅಂತ ಕಾಗದ, ಮಸೀ, ಪೆನ್ನು ಹಾಗು ಇತರ ಬರಿಯೋ ಸಾಧನಗಳನ್ನೆಲ್ಲಾ ಸರಕಾರವು ನಿಯಂತ್ರಿಸಿದೆ. ಡಾಕಾದೊಳಗಿನ ಮಲಮಲ್ಲು ಮಾಡೋ ಮನಿತನಾ ಹಾಳುಮಾಡಿದ್ಹಾಂಗ, ಈ ಬರಿಯೋ ಮನಿತನಾ ಸರಕಾರವು ಹಾಳುಮಾಡಬೇಕು—ಅಂತ ಬಯಸೇದ. ಈ ನಿಯಂತ್ರಣದಿಂದ ಪ್ರತಿ ವ್ಯಕ್ತಿಗೂ ಸ್ವಯಂಪ್ರಕಟನೆಗೆ ಹಕ್ಕು ಸಿಗತ್ತದ. ಅವರಿಗೆ, ಸರಕಾರ ಕೊಟ್ಟ ಕಾಗದದ ಒಳಗ ಬರೀಲಿಕ್ಕೆ ಬರದಿದ್ದರ, ಬ್ಯಾರೆ ಅವರ ಕಡಿಂದ ಬರಿಸಿಕೊಳ್ಳಲಿಕ್ಕೆ ಅನುಮತಿ ಕೊಡತ್ತದ ಅಂತ. ಕಾಗದದ ನಿಯಂತ್ರಣ ಹಾಗು ಗ್ರಂಥಗಳ ಸಂಖ್ಯೆಯ ಪರಮಾವಧಿ ನಾವು ನಿರ್ಣಯಿಸೇವಿ" ಎಂದು ತಿಳಿಸ್ಯಾರ. ನಮ್ಮ ಪರಿಷತ್ತು ತನ್ನ ಅವಸರದ ಸಭೆ ಕರೆದು, ಅದರಲ್ಲಿಟ್ಟು ಚರ್ಚೆ ಮಾಡೋವರು ಇದ್ಹಾಂಗ ಕಾಣಿಸತ್ತದ.

ಬರೆಹಗಾರ:— ನೀವು ಇಂಥಾ Radical cha ge ಮಾಡಿದರ, ಬರಹಗಾರರ ಗತಿ ಏನು? ನಾನು, ಬರಿಯೋದು ಅಂದರ ಒಂದು ವೃತ್ತೀ ಮಾಡಿಕೊಂಡು ಬಿಟ್ಟೇನಿ. ಬರೀದಿದ್ರ, ಮಂದಿಗೆ ಬೈಯದಿದ್ರ, ಕಾದಂಬರೀ ಒಳಗ ನನಗಾಗದವರನ್ನ ಟೀಕಿಸದೆ ಹೋದರ, ನನಗ ನಿದ್ದೀ ಬರೂದಿಲ್ಲ. ನೀವು ಹೀಂಗ ಮಾಡಿದರ ನನಗ ಹುಚ್ಚು ಹಿಡೀತ್ತದ. ತಿಂಗಳಿಗೆ ಒಂದರೇ ಕಾದಂಬರೀ ಬರೆದರ, ನನಗ ಕಾದ್ದಂ... ರುಚಿ ಹತ್ತತದ!

ನಾಲ್ಕಾ...

ಅಧಿಕಾರಿ:— ಅಂತಹ ತಲಬಿನ ಜನಕ್ಕ ಅದರೊಳಗ ಅವಕಾಶ ನೀವೊ... ಸಿಕೊಟ್ಟದ. ನಿಮ್ಮಂಥವರು ಬರಿಯೋ ವೃತ್ತೀ ಅತಿರೇಕಕ್ಕ ದನಾ ... ಹೋದ್ದಕ್ಕನ ಬ್ಯಾರೇ ಅವರಿಗೆ ತೊಂದರಿ ಆಗೇದ. ನಿಮ್ಮಂಥವರಿಗೆ ಅಂಬೋ... ರ ಹೊರಗ ಒಂದು ಕ್ವಾರಂಟಾಯಿನ್ ಮಾಡತೇವಿ. ಅಲ್ಲಿ ಪರಿಣ... ನಿಮ್ಮನ್ನು ಬಿಟ್ಟು, ಆ ಪ್ರವೃತ್ತಿ ಹೋಗೋಹಾಂಗ ವೈದ್ಯಕೀಯ ಪ್ರಯತ್ನ ... ಮಾಡತೇವಿ. ಇಷ್ಟು ಮಾಡಿದ ಮ್ಯಾಲೆ, ನಿಮ್ಮ ಒಳಗ ಆ ವೃತ್ತಿ ಉಳಿದಿದ್ದರ, ಸಿವ್ಹಿಲ್ ಸರ್ಜನ್ನನ್ನ ಕೇಳಿ ಪರವಾನಿಗಿ ಕೊಡಸತೇವಿ. ನೀವು ಬರೆದದ್ದನ್ನ ಸರಕಾರಕ್ಕ ಮೊದಲು ಒಪ್ಪಿಸಬೇಕು; ಅವರಿಗೆ ಸರಿಕಂಡರ ಅವರು ಪ್ರಕಟಿಸ್ತಾರ! ಹೋಗಲಿ, ನಿಮ್ಮ ವಿಷಯಕ್ಕ ನನಗ ಇನ್ನೂ ಮಾಹಿತಿ ಬೇಕಾಗೇದ ನೀವು ಬರಿಯೋ ವೃತ್ತಿನ್ನ ಹ್ಯಾಂಗ ಕೈಕೊಂಡಿರಿ? ಇದೇನು ವಂಶಪರಂಪರಾ ಬಂದದ್ದೇನು?

ಬರೆಹಗಾರ:— ಇಲ್ಲ. ನಮ್ಮಜ್ಜ ಮಾಸ್ತರಿದ್ದ. ನಮ್ಮಪ್ಪ ಮಾಸ್ತರಿಕೀ ಮಾಡ್ತಿದ್ರು.

ಅಧಿಕಾರಿ:— ವಂಶಪರಂಪರೆಯಿಂದ ಬಂದ ವೃತ್ತಿಯನ್ನ ತ್ಯಜಿಸಿ, ನೀವೇಕೆ ಈ ಹೊಸಾ ಉದ್ಯೋಗ ಕೈಕೊಂಡಿರಿ? ನೀವು ಪ್ರಯತ್ನಮಾಡಿ ಮಾಸ್ತರಿಕೀನ ದೊರಕಿಸಿಕೊಳ್ಳಬೇಕಾಗಿತ್ತು?

ಬರೆಹಗಾರ:— ಮಾಸ್ತರಿಕೀ ನೌಕರಿಗೆ ಪ್ರಯತ್ನ ಮಾಡೋ ಕಾರಣ ಇಲ್ಲ. ನಾನು ಕೆಲವು ದಿವಸ ಮಾಸ್ತರಂತ ಇದ್ದೆ. ಕ್ಲಾಸಿನಾಗ ವಿದ್ಯಾರ್ಥಿಗಳು, ನಾನು ಹೋದಕೂಡಲೇ ಕಿಲಿಕಿಲಿ ನಕ್ಕು, ಟೇಬಲ್ ಗುದ್ದಿ ನನ್ನ ಘಾಬರಿಮಾಡಿಬಿಡತಿದ್ದರು ...ನನ್ನ ಕಡಿಂದ ಕ್ಲಾಸು ಸುಮ್ಮಗಿರ ಕೂಡಿಸೋದು ಸಾಧ್ಯ ಆಗ್ತಿದ್ದಿಲ್ಲ! ...ಮಾಸ್ತರು

ನನ್ನ ಅಸಹಾಯತನ ನೋಡಿ " ಈ ನೌಕರೀ ನಿಮುಗ ಒಗ್ಗೂದಿಲ್ಲ. ಯಾರದೂ ತ್ರಾಸಯಿರದಂಥಾ ನೌಕರಿ ಮಾಡಿರಿ ನೀವು! ಬರಿಯೋ ಕೆಲಸ ಹಗುರ ಇರತ್ತದ ನೋಡ್ರಿ. ಕಾಗದದಾಗ ಅತ್ಲಾಗ ನಾಲ್ಕು ಬೆರಳು. ಇತ್ಲಾಗ ನಾಲ್ಕು ಬೆರಳು ಬಿಟ್ಟು—ನಡುವ ಬರದರ ಕವಿತಾ ಅನಿಸಿಗೋತ್ತದ. ಅವರದಷ್ಟು, ಇವರದಷ್ಟು ತಗೊಂಡು ಪ್ರೇಮ, ಪ್ರೀತಿ, ಪ್ರಿಯತಮೆ ಅಂಬೋ ನಾಲ್ಕು ಶಬ್ದಾ ಹಾಕಿದರ, ಒಂದು ಕಥೀ ಆಗತ್ತದ. ಇದ್ದ ವಸ್ತುಸ್ಥಿತೀನ ತಗೊಂಡು ಬ್ಯಾರೇ ಪಾತ್ರಗಳ ಮುಖಾಂತರ ಬ್ಯಾರೇ ರೀತಿ ಒಳಗ ಮಾತನಾಡಿಸಿದರ, ನಾಟಕೋ ಕಾದಂಬರಿನೋ ಆಗತ್ತದ. ಅದಕ್ಕ ನೀವು, ಅದನ್ನ ಪ್ರಯಾಸಬಟ್ಟು ಕಲೀರಿ " ಅಂತ ಹೇಳಿದರು. ಅದಕ್ಕ ನಾನು ಈ ವೃತ್ತಿಗೆ ಅಂಟ-ಕೊಂಡೀನಿ.

ಅಧಿಕಾರಿ:— ನಿಮ್ಮದು ಇದರ ಒಳಗ ಬಹಳ ತಪ್ಪು ಅದ! ಇಂಗ್ಲಿಷ್ ಸಾಲೀ ಒಳಗಿಂದ ಹೊರಗ ಹಾಕಿದ್ದರ, ಕನ್ನಡ ಸಾಲೀ ಒಳಗ ಪ್ರಯತ್ನ ಮಾಡಬೇಕಾಗಿತ್ತು? ಆ ತಪ್ಪನ್ನು ನಾನು ಆಗಲೇ ನಮೂದ ಮಾಡಿಕೋಡೀನಿ. ನನ್ನ ಮುಂದಿನ ಪ್ರಶ್ನೆಗಳಿಗೆ ಉತ್ತರಾ ಹೇಳಿರಿ. " ನಿಮ್ಮ ಒಂದು ಕಾದಂಬರಿಯೊಳಗ, ಹುಡುಗಾ ಒಂದು ಹುಡುಗಿಗೆ ಪ್ರೀತಿ ಮಾಡತಾನ. ಆಕಿ ಅಪ್ಪ ಅವ್ವ ಅವರು ಇವನ ಸ್ವಜನರು ಗಾಬರಿ ... ಮದಿವೀ ಮಾಡಿಕೊಡಲಿಕ್ಕೆ ಒಪ್ಪೂದಿಲ್ಲ. ಅದಕ್ಕ ಈ ಹುಡುಗ್ಲು ಯಾರಿಗೂ ... ದಿವಸ ಆಕಿನ್ನ ನದೀದಂಡೆಗೆ ಕರೆದುಕೊಂಡು ಹೋಗಿ, ಆಕಿ ...ದುಹೋಗುತ್ತಿದ್ದರು ... ಬಿಟ್ಟು ಹೋಗಿಬಿಡತಾನ! " ಆದರ ಮುಂದ ಆಕೀ ಗತಿ ಏನೆಯ ತ್ತಾನೆ. ಅದಕ್ಕಾ ... ಆಕಿ ಏನು ನದೀ ಹಾರಿಕೊಂಡು ಸತ್ತಳೋ ಹ್ಯಾಗೆ? ಓದೂರಿನ ಎಲ್ಲ ಮನೆಗಳ್ಳ ... ಆವಳ ಮುಂದಿನ ಭವಿತವ್ಯದ ಬಗ್ಗೆ ಒಳ್ಳೇ ಕುತೂಹಲ ಅನ್ನಿ—ನಿಲ್ಲುತ್ತದೆ ದೆವ್ವ ... ಈ ರೀತಿ ವಿಲಕ್ಷಣ ಹಾಗು ಕುತೂಹಲಜನಕ ಕಾದಂಬರೀ ವಾಗುತ್ತದೆ. ವ್ಯಯ ... ಪಾತ್ರಗಳ ಬಗ್ಗೆ ಓದೋವರಿಗೆ ವಿವಂಚನೆ ಆಗತ್ತದ. ಇದರಿಂದಣ ತೆಪ್ಪಗಾಗುತ್ತಾನೆ ಸಾರ್ವಜನಿಕರನ್ನ ಗೊಂದಲದಾಗ ಕೆಡವಿದ್ಹಾಂಗ ಆಗತ್ತದ. (ಆಸುರೀಪ್ರಕೃತಿಶಿ ... ರೀತಿ ನೀವು ಅವರಿಗೆ ಮೋಸ ಮಾಡಿದ್ಹಾಂಗ ಆಗತ್ತದ. ಇ ಇಲ್ಲದಿದ್ದರೆ ಬಾಗಿಲ ... ನೀವು ಸಾರ್ವಜನಿಕರಿಗೆ ಮೋಸಮಾಡಿದ ಅಪರಾಧ ಮಾಡಿದ ಮಗ ಎಷ್ಟು ... ಸಿದ್ಧ ಆಗತ್ತದ. ಇದಕ್ಕ ನಿಮ್ಮ ಅಭಿಪ್ರಾಯ ಏನು? ...ೂ, ತನಗೆ ಇನ್ನೂ ...

ಬರೆಹಗಾರ:—ಆಗಿನ ಕಾಲದ ಭಾವನಾ, ವಿಚಾರ, ಸನ್ನಿವೇಶ ವಾಗಿದ್ದರೂ, ... ಹಾಗು ಪಾತ್ರಗಳ ಸ್ವಭಾವಕ್ಕನುಸರಿಸಿ, ಪಾತ್ರಗಳ ಪರಿಪೋಷಣೆ ... ಆಗತ್ತದ. ನಾವು ನೀವು ಹೇಳಿದ್ಹಾಂಗ ಆಗಲಿಕ್ಕೆ, ಅವು ನಮ್ಮ ಕ್ಲಪ್ತ ... ಯಾಗಿನ ಸೂತ್ರದ ಗೊಂಬಿ ಏನು?

ಅಧಿಕಾರಿ: – ನಮ್ಮ ಕಾನೂನಿನ ಮೇರೆಗೆ ನಿಮ್ಮ ಅಪರಾಧ-ಗಳು ಹೆಚ್ಚಾಗಲಿಕ್ಕೆ ಹತ್ಯಾವ. ಸಂರಕ್ಷಣ ಕಾಯಿದೇ ಮೇರೆಗೆ, ಇನ್ನು ಅನುಸರಿಸುತ್ತದೆ ... ಮ್ಯಾಲೆ ಮುಂಜಾಗ್ರತೀ ತಗೋಳಲಿಕ್ಕೆ ನಾವು ನಿರ್ಣಯಿಸಿದ್ದೇವೆ. ಇನ್ನು ಮ್ಯಾಲೆ ಬರಿಯೋ ಜನರು ತಾವು ಬರಿಯೋ ಕಾದಂಬರೀ ಹೆಸರು, ಉದ್ದೇಶ, ಪಾತ್ರಗಳ ನಿರ್ದಿಷ್ಟ ಸಂಖ್ಯೆ ಹಾಗು ವಿವರ. ಅಲ್ಲದೆ ಕಾದಂ-ಬರಿಯ ಕೊನೆ ಮುಂತಾದವುಗಳ ಬಗ್ಗೆ ಪೂರ್ಣ ವಿವರ ಕೊಡಬೇಕು. ಆ ರೀತಿ ಕೊಟ್ಟ ಮೇಲೆ, ಅದನ್ನು ನಾವು ವಿಚಾರಿಸಿ, ಅದರಿಂದ ಜನರ ಮೇ...ಗ್ಯಾನ ರೀತಿಯ ಕೆಟ್ಟ ಪರಿಣಾಮ ಆಗುವದಿಲ್ಲ—ಅಂತ ಕಂಡು ... ಅದಕ್ಕೆ ಅಪ್ಪಣೆ ಕೊಡತೀವಿ. ಅದಕ್ಕ ಈ ಫಾರ್ಮಿನ್ಯಾಗಿನ ಕಾಲಂ ನೋಡಿ ತುಂಬಿರಿ. (ಒಂದು ಫಾರ್ಮು ಬರೆಹಗಾರನಿಗೆ ಕೊಡುವನು.)

ಬರೆಹಗಾರ:— ಇದೆಂಥಾ ಪ್ರತಿಬಂಧ ನಿಮ್ಮದು ಅಂದೆ? ನಮಗೂ ಸುಮ್ಮನಿ ಸರಕಾರೀ ನೌಕರಿ ಕೊಟ್ಟುಬಿಡಿರಿ "ಪಶ್ಚಿಮಾ-ದ್ರಿಯಲಿ ರವಿಜನಿಸಿ ಹಗಲಿರಲಿ ಚಾದಿರನೊಡನೆ ಸೆಣಸಿದನು " ಅಂತ ಬರೀ ಅಂದ್ರ; ಬರೆದು ಪ್ರಕಟ ಮಾಡತೀವಿ. ಸಾಹಿತ್ಯ ಅಂದರ, ಜನ-ಜೀವನದ ಪ್ರತಿಬಿಂಬ ಅಲ್ಲ; ನೀವು ಹೇಳಿದ್ಹಾಂಗ ಕೇಳೋ ಸೂತ್ರದ ಗೊಂಬೆ! ಕಾಲಾಯ ತಸ್ಮೈನಮಃ! ನಮ್ಮನ್ನ ಬೇಕಾದ್ದು ಮಾಡಿರಿ; ಆದರೆ ಹೊಟ್ಟೆಗಷ್ಟು ಅನ್ನ ಹಾಕಿ ಬೆನ್ನ ಮ್ಯಾಲೆ ಹೊಡೀರಿ ಅತು!

ಅಧಿಕಾರಿ:—ಅದು ನನ್ನ ಅಧಿ... ...ಕ್ಷೇತ್ರದೊಳಗ ಬರೋದಿಲ್ಲ. ನಾನು ಬರೀ ವಿವರಗಳನ್ನು ಕಲೆಹಾ... ...ಡೋ ವ್ಯಕ್ತಿ. ಇನ್ನು ಮ್ಯಾಲೆ ಈ ಬರಿಯೋ ಜನರಿಗೆ ... ...ಧ ಹೇರಬೇಕು ಅಂತ ಮಾಡೀವಿ ತ:ದೀ ಕಡಿಂದ ... ಇಳೀಬಾರದು ...ತ ನಮ್ಮ ಇಚ್ಛಾ ಅದ. ಈ ಬ... ...ಟ್ಟ ಒಂದು ತಲೀಗೇ ...ಡುತ್ತ ಹೋಗಬೇಕು.

ಹೆಂಡತಿ:— ಈಗ ಆಗಲೇ ... ...ಗಿ ಹೋಗಿದ್ದರ, ಅವರಿಗೆ ಸ್ಟಿಫಿಕೇಟ್ ಕೊಡಸ್ತೀರೇನು ಮತ್ತ?

ಅಧಿಕಾರಿ: ಅದರ ವಿಷಯಕ್ಕ ಬ್ಯಾರೇ ಕಮೀಟಿ ನಿಯಮಿಸ-ಅವರು ಅದನ್ನು ವಿಚಾರ ಮಾಡಿ ಸರಕಾರಕ್ಕ ಪ್ರತ್ಯೇಕ ವರದಿ ...ರಿ. ಬರಹಗಾರರೇ, ಒಂದು .. ಎರಡು.... ಹತ್ತು.... ಇಪ್ಪತ್ತು ...ದು! ನಿಮ್ಮ ಅಪಾದನೆಗಳು ಏರತಾ ಹೋದವು. ನಿಮ್ಮ ...ಟು ತಯಾರು ಮಾಡೀನಿ ನಿಮಗ ಮರಣ ದಂಡನಾ ...ಹೋದರೂ, ಆಜನ್ಮ ಕಾರಾಗ್ರಹವಾಸ ಮಾತ್ರ ಆಗತ್ತದ.

...ಹಗಾರ:— ಇದು ಇಪ್ಪತ್ತನೆಯ ಶತಮಾನದ ಕೊನೆ. ...ಗೆ ಯಾಕ—ನಿಮಗ ಬೇಕಾದಂಥಾ ಜನರನ್ನ ಹುಟ್ಟಿಸ-ಅಂತ ಅಪೀಲ್ ಮಾಡಿಕೊಳ್ಳಬಾರದು? ನೀವು ಹೇಳಿದ್ಹಾಂಗ ಸಾಹಿತ್ಯ ಏನು ನಿಮ್ಮ ಕೈಯಾಗಿಂದು ಏನು? ಪ್ರತಿ " ಇದು ನಮ್ಮ ಅಧಿಕಾರಕ್ಷೇತ್ರದಲ್ಲಿಲ್ಲ, ಇದಕ್ಕ ಬ್ಯಾರೇ ...ನೇಮಸೋವರಿದ್ದೇವಿ, ಇದರ ವರದಿ ಈಗಾಗಲೇ ಸಿದ್ಧ ...ರದವರ ಪರೀಕ್ಷಾಕ್ಕ ಇಟ್ಟೇವಿ. ಇವರ ಬಗ್ಗೆ ಜನರ ಅಭಿ-ಪ್ರಾಯ ತಗೊಳ್ಳಲಿಕ್ಕೆ ಯೋಗ್ಯ ಅಧಿಕಾರಿಗಳಿಗೆ ತಿಳಿಸಲಾಗಿದೆ, ಇದರ ಬಗ್ಗೆ ಮುಂದಿನ ಅಧಿವೇಶನದಲ್ಲಿ ನಿಲುವಳಿ ಸೂಚನಾ ತರೋ ಎತ್ತು ಗಡೆ ...ತವಾದ " ಅಂತ ಅದ, ಆಗತದ, ವಿಚಾರ ನಡದದ—ಅಂತ, ಬರೀ ...ಸನದ ಆಶನಾ ಕೊಟ್ಟು ಕೊಟ್ಟು ನೀವು ಬ್ಯಾಸತ್ತೀರಿ. ಅದನ್ನ ...ಕೊಂಡು ನಾವು ಸೊರಗಲಿಕ್ಕ ಹತ್ತೀವಿ. ನೀವು ನನಗ ಆಜನ್ಮ ಕಾರಾಗ್ರಹವಾಸ ಕೊಡಬ್ಯಾಡ್ರಿ; ಕೊಟ್ಟರ ನನಗ ಮರಣದಂಡನಾ ವಿಧಿಸಿರಿ ಅಪರಾಧ ಕಡಿಮಿ ಆಗಿದ್ದರ, ಹೆಚ್ಚ ಮಾಡಿಕೊಳ್ಳಿರಿ ಇದೋ: ಇದು ಇಪ್ಪತ್ತಾರನೆಯ ಮ ... ಹಾ.... ಪ.... ರಾ.... ಧ. (ಎಂದವನೇ ಗ್ರಂಥವನ್ನು ಅಧಿಕಾರಿಯ ತಲೆಗೆ ಜಜ್ಜುವನು)

ಹೆಂಡತಿ: – ಇದು ಇಪ್ಪತ್ತನೆಯ ಶತಮಾನದ ಕೊನೆಯ ಸರಕಾರ!

(ತೆರೆ ಬೀಳುವುದು)

ನೀರೋ
ಮತ್ತು
ಮೂರು ಭಾವಗಳು

●

ಶ್ರೀ. ಹಾ. ನೆಂ. ನಾಗೇಶ 'ಆತ್ಮಾರಾಮ' ಕಲಬುರ್ಗಿ

●

ತಿರುಗಿ ನನ್ನ [illegible] ಭ್ರಾಂತಿಯಲ್ಲಿ ನೆನಪಾಯಿತು ನಿನ್ನನ್ನು ನೆನೆದಾಗ. ನಿರಂಕುಶ [illegible] ಮಗ್ನನಂತೆ [illegible]! "ಪ್ರಭೋ ರಾಜ್ಯ-ರೋಮ ಸುಡಹತ್ತಿದೆ" ಎನ ಪುರಜನ ಕೂಗಿಕೊಂಡ [illegible] ದ್ದಾಂಗ. ಆಗ ಆ ರೋಮನ್ ದೊರೆ 'ಜೀವಸಭಾಸ್ [illegible] ಶಹಭಾಸ! [illegible] ಒಂದು ಹುಚ್ಚರೆಲ್ಲಾ ಬಿದ್ದು ಸಾಯುತ್ತಿದ್ದಾರೆ. ಸಾಯಲಿ... ಸಾಯಲಿ [illegible] ಏನು ಸಂಗೀತ!" ಎಂದು ತಾನು ಬಾರಿಸುತ್ತಿದ್ದ ವೀಣೆ[illegible]ಯನ್ನು ಮತ್ತಿಷ್ಟು ಜೋರಾಗಿ ಮಿಾಟಿದನಂತೆ! ಆ ನೀರೋ[illegible] ವೀಣೆ ಬಾರಿಸುವ ಹುಚ್ಚಂತೆ. ಆತ ಬಾರಿಸುತ್ತಲೇ ಇದ್ದ. ಬಿದ್ದವರು ಎಷ್ಟೋ ಮಂದಿ ಕೂಗಿಕೊಂಡರಂತೆ: "ದೊರೆಗಳೇ, [illegible] ಕಥೀ, ರೋಮೇ ಉರಿಯುತ್ತದೆ ರೋಮನರೆಲ್ಲಾ ಜ್ವಾಲೆಗೆ ಆಹುತಿ[illegible] ತುತ್ತಾಗುತ್ತಿದ್ದಾರೆ. ಪ್ರಭೋ, ಉಳಿಸಿರಿ...."

ನೀರೋ ತನ್ನ ವೀಣೆಯಲ್ಲೇ ಮಗ್ನನಾಗಿ ಬಿಟ್ಟಿದ್ದನಂತೆ: "ವ್ವಾವ್ವಾ. ಟೇಂ... ಟೇಂ.... ಟೇಂ.... ಶಹಭಾಸ, ಶಹ[illegible] ಏನ? ಆ ಹುಚ್ಚರು ಸಾಯುತ್ತಿದ್ದಾರೆ ಎಂದು ಕೂಗಿಕೊಂಡ[illegible] ಟೇಂ.. ಇನ್ನಿಷ್ಟು ಉರಿಯಲಿ ರೋಮು.... ಎಲ್ಲಿ ನೋಡುತ್ತೇನೆ ಸ್ವಲ್ಪ!" ಎಂದು ಕಿಟಕಿಯಿಂದ ಹೊರಗೆ ಇಣಿಕಿ, ರೋಮು [illegible] ವುದನ್ನು ಕಣ್ಣಾರೆ ಕಾಣುತ್ತ, ತನ್ನ ವೀಣೆಯನ್ನು ಇನ್ನೂ [illegible] ಜೋರಾಗಿ ಮಿಾಟುತ್ತ 'ಶಹಭಾಸ... ಶಹಭಾಸ.... ಈತನಕ ಇಂತಹ ಅ[illegible] ದೃಶ್ಯ ಕಂಡಿಲ್ಲ ನಾನು! ಬೆಂಕಿ ರೋಮಿಗೆ ಒಳ್ಳೆಯ ಕಳೆ ತಂದಿದೆ, [illegible] ನೋಡಿರಿ! ಎಲ್ಲ ಕಡೆಗೂ ಏನು ಸುವರ್ಣರಾಗವೇ ರಾಗ! ನೋಡಿರಿ.. ಹೌದು, ಇಲ್ಲಿ ಬಂದು ನೋಡಿರಿ.... ನನ್ನ ವೀಣಾಗಾನಕ್ಕೆ [illegible] ಹೊಂಬಣ್ಣಕ್ಕೂ ಏನು ಜೋಡಿ ಒದಗಿ ಬಂತು ಇಂದು!" ಎಂದು[illegible] ಹುಚ್ಚೆದ್ದು ಕುಣಿದನಂತೆ.

........ಪ್ರಾಯಶಃ ನೀನೇ ಆ ನೀರೋ. 'ಕರುಣಾಳೆ, ಲೋಕ ಹಾಳಾಗುತ್ತಿದೆ' ಎಂದು ಈ ಹಿಂದೆ ಅದೆಷ್ಟೋ ಬಾರಿ ನಿನ್ನಲ್ಲಿಗೆ ಬಂದು ನಿವೇದಿಸಿಕೊಂಡಿದ್ದೆವಲ್ಲ ನಾವು! ನೀನದಕ್ಕೆ ನಗಬೇಕಿತ್ತೆ? ನಕ್ಕೂ ಕಿವಿಗೊಡದೆ ತೆಪ್ಪಗೆ ಕುಳಿತಿರಬೇಕಿತ್ತೆ? 'ಹಾಳಾಗಲಿ, ಹಾಳಾಗಲಿ' ಎಂದಿರಬೇಕು ನೀನು! 'ಏ ದೇವ, ಲೋಕದ ತಂದೆ, ಜಗತ್ತನ್ನು ಆಸನ್ನಸಂಕ್ರಾಂತಿಕಾಲದಿಂದ ಪಾರುಮಾಡಿ ಉದ್ಧರಿಸೆಂದು ನಾವೆಷ್ಟು ಅಂಗಲಾಚಿದೆವು! ನೀನು ಸ್ವಲ್ಪವಾದರೂ ಈ ಜಗತ್ತಿನ ಕರುಣಾಕ್ರಂದನಕ್ಕೆ ಕಿವಿಗೊಟ್ಟಿದ್ದುಂಟೆ? ನಿನ್ನದೇನೋ ಏಕತಾನ ನಡೆಸಿಯೇ ಇರುವಿಯಲ್ಲ!.... ಆ ರೋಮ್ ಉರಿಯುವಾಗ, ಆ ನೀರೋ ಕೇಕೆಯನ್ನು ಹಾಕುತ್ತ ವೀಣೆ ಬಾರಿಸುತ್ತಿದ್ದನಂತೆ. ಈ ಜಗತ್ತಿನ ಅವನತಿಯನ್ನು, ಈ ರೋಮ್ ಸುಡುವುದನ್ನು, ನೋಡುತ್ತ, 'ವ್ವಾವ್ವಾ....ಶಹಭಾಸ್' ಎಂದು ನೀನು ವಿಕಟಾಟ್ಟಹಾಸಗೈಯುತ್ತ ಎಂದಿನಂತೆ ನಿನ್ನ ಏಕತಾನವನ್ನು ಕರ್ಕಶವಾಗಿ ನುಡಿಸುತ್ತಿರುವಿ.... ನೀನೇ ಅಲ್ಲವೇ ಆ ನೀರೋ!

....ನಿಜ, ನೀನೇ ಆ ನೀರೋ!

× × × ×

ಕದ ತೆರೆಯಿತು

'ಆಹಹ! ಸೌಧಗಳ ಸಾಲು! ಭಾಗ್ಯದ ತವರು! ವೈಭವದ [illegible] ಇಲ್ಲಾದರೂ ಬಿಕ್ಷೆ ದೊರಕೀತು' ಎಂದು ಭಿಕ್ಷಾಪಾತ್ರ[illegible]ನ್ನೀಡಿ "ಭವತಿ ಭಿಕ್ಷಾಂ ದೇಹಿ.... ಭವತಿ ಭಿಕ್ಷಾಂ ದೇಹಿ" [illegible]ದೆ.

"[illegible]......" —ಅಲ್ಲಿಂದ ಸದ್ದಿಲ್ಲ.

[illegible]ಗೇ ಒಂದು ಸದ್ದು ಕೇಳಿತು. ಬಾಗಿಲಿನತ್ತ ನೋಡಿದೆ.... ಬೇರೆಯೇನಲ್ಲ; ಕದ ಧಡಾರನೆ ಮುಚ್ಚಿದುದು.

× × × ×

[illegible]ಅಮಮ! ಸೌಂದರ್ಯದ ಗೂಡಿದು; ಥಳುಕಿನ ರಾಶಿಯಿದು! [illegible]ಕೈಲಾಸವ ಕುಸುರಿದು!' ಎಂದು ಸಾಲಂಕೃತ ಅರಮನೆಯೊಂದ[illegible], ಅಲ್ಲಾದರೂ ಬಿಕ್ಷೆ ದೊರಕೀತೆಂಬ ಭರವಸೆಯಿಂದ, ಭಿಕ್ಷಾ[illegible]ವನ್ನು ಮುನ್ನೀಡಿ ಪ್ರಾರ್ಥಿಸಿದೆನು: "ಭವತಿ ಭಿಕ್ಷಾಂ [illegible]....ಭವತಿ ಭಿಕ್ಷಾಂ ದೇಹಿ...."

"............"— ಅಲ್ಲಿಂದ ಸದ್ದೇ ಬರಲಿಲ್ಲ ಬಹಳ ಹೊತ್ತು.

—ಅಲ್ಲೇ ಎಲ್ಲೋ ಸದ್ದೊಂದು ಕೇಳಿಸಿತು;...ಏನೆಂದು [illegible]ನೋಡಿದೆ. ಅದು ಬೇರೇನೂ ಆಗಿರಲಿಲ್ಲ; ಕದವನ್ನಾರೋ ಧಡಾರನೆ ಮುಚ್ಚಿಕೊಳ್ಳುತ್ತಿದ್ದರು.

× × × ×

[illegible]ಎಷ್ಟೆಷ್ಟೋ ಸೌಧಗಳ ಬಾಗಿಲನ್ನು ಕಾದೆ. ಭಿಕ್ಷಾಪಾತ್ರೆಯನ್ನು ಚಾಚುತ್ತ "ಭವತಿ ಭಿಕ್ಷಾಂದೇಹಿ...ಭವತಿ ಭಿಕ್ಷಾಂದೇಹಿ" ಎಂದು ಪ್ರಾರ್ಥಿಸಿಕೊಂಡೆ. ಯಾರೂ ಉತ್ತರ ಕೊಡುತ್ತಿರಲಿಲ್ಲ; ಯಾರೂ ಕದ ತೆರೆಯುತ್ತಿರಲಿಲ್ಲ....ಎಲ್ಲಾ ಕಡೆಗೂ ಒಂದೇ ಒಂದು ಸದ್ದು ಕೇಳುತ್ತಿತ್ತು—ಅದು ಕದ ಧಡಾರನೆ ಮುಚ್ಚಿದ ಸದ್ದು.

× × ×

ಅಲೆದಲೆದು ನಿರುಪಾಯಿಯಾಗಿ, ಯಾವುದೋ ಒಂದು ಮನೆಯನ್ನು ಮುಟ್ಟಿದೆ. 'ಹಿಂದಿನ ಕುರುರು...ವಿಭವಗಳೆಲ್ಲ ಮಾಯೆಯವು; ಥಳುಕು-ಥಳುಕುಗಳೆಲ್ಲ ಸಂತೆಯ ಸರಕುಗಳು....ಇಲ್ಲಿ ಹಾಗಿಲ್ಲ. ಎಷ್ಕೆದರೆ ಸಿಕ್ಕೀತು ಇಲ್ಲಿ ಭಿಕ್ಷೆ' ಎಂದು ಅಂದುಕೊಂಡೆ. ಆದರೆ 'ಹೇಗೋ ಏನೋ' ಎಂಬ ಸಂಶಯವೊಂದು ಇನ್ನೂ ಇತ್ತು; ಆದರೂ ಪ್ರಾರ್ಥಿಸಿಕೊಂಡೆ:

"ಕರುಣಾಳೆ ಕದವ ತೆರೆ! ಅರಿವು ಮೂಡಿತಿಗೊ—ನಿನ್ನೆಡೆಗೆ ಬಂದಿಹೆನು....ಕದವಿಕ್ಕಿ ಕಾಡಬೇಡ—ಕೈನೀಡಿ ಕಾಯೊ!....ಕರುಣಾಳೆ ಕದವ ತೆರೆ!"

—ಎಂದಿನಂತೆ ಸದ್ದೊಂದು ಕೇಳಿಸಿತು. ಕುತೂಹಲಿಯಾಗಿ ಸದ್ದು ಬಂದತ್ತ ನೋಡಿದೆ. ಹಿಂದಿನಂತೆ ಕದ ಧಡಾರನೆ ಮುಚ್ಚಿಕೊಳ್ಳಲಿಲ್ಲ! ಕದ ಮೆಲ್ಲನೆ ತೆರೆಯಿತು.

× × × ×

ಕವಿತಾವಿಮಾನ

ಅಜೇಯವಾದ ಗಿರಿಶಿಖರಗಳನ್ನೆಲ್ಲ ಏರಿ, … ಮಂಡಲಗಳ ಮೇರೆ ಮೀರಿ, ಅಜ್ಞಾತವಾದ ಮೇಲ್ಲಿ… ಮೆರೆಯಬೇಕೆಂದು ನನ್ನದೆಷ್ಟು ಹಂಬಲ!

....ಆದರೆ ನಾನು ನಿರ್ಬಲ. ಹಕ್ಕಿ… ತ್ತಿದ್ದೆ. ರೆಕ್ಕೆಗಳಿದ್ದರೆ ಸ್ವಲ್ಪ ಏರುತ್ತಿದ್ದೆ…

ಕುಳಿತು ಏರುವೆನೆಂದರೆ ಒಂದು ವಿಮಾನ ಹೇಳಿದಾಗ, ತಾರಣ ತಪ್ಪಾಗುತ್ತಾನೆ … ಡನೆಯೋ ಅಂಗಲಾಚಿ ಬೇಡಿಕೊಂಡೆ; ಯಾರ್‍ನಿನಲ್ಲಿ … ಹಾಂಲೆಂದಿದ್ದೆ....

ಅಮ್ಮ! ಏನು ಭಾರ ಅದರದು!– ಹಾರಲಾರದು… ಬೇರೆ ಇಲ್ಲ. ಶತಪ್ರಯತ್ನಮಾಡಿದರೂ ಅದು ಭೂಮಂಡ… ಮೀರಿ ಮೇಲೆ ಹಾರಲೊಲ್ಲದು. ನನ್ನ ಆಶೆ ಬ… ಟ್ಟುಕೊಂಡೆ. ಯಾವನೋ ಒಬ್ಬ ಕರುಣಾಳು ಒಂದು ವ… ವನ್ನು ಕೊಟ್ಟು 'ಮಗೂ, ಇದರಲ್ಲಿ ಕುಳಿತು ಹಾರು…' ಎಂದು ಹೇಳಿ, ಎಲ್ಲೋ ಮಾಯವಾದ.

ಏರಿದೆ....ಏರಿದುದೇ ತಡ; ನನ್ನ ಈ 'ಕ…' ಹಾರಿತು. ಮಂಡಲ-ಮಂಡಲಗಳ ಗಡಿಗಳನ್ನು ದಾ… ಬಯಲಿಗೆ ಅಭಿಮುಖವಾಗಿ ಮೇಲಕ್ಕೆ ಮೇಲಕ್ಕೆ ಹಾರಿತು…

'ಭಪ್ಪರೇ' ಎಂದು ಸಂತುಷ್ಟನಾದೆ!

× × ×

ಮುಂಜಾವದ ಕೋಳಿ

ಮುಂಜಾವದ ಕೋಳಿ ಕೂಗಿತು: ಕೊಕ್ಕೊಕ್ಕೊ.......

ಮುಸುಕಿನ ಮರೆಯಲ್ಲಿ, ನಿದ್ರೆಯ ಅಮಲಿನಲ್ಲಿ ಒರಗಿ ನಿದ್ರಾವಶನಾದ ಸಂಸಾರಿಯಾದ ನಾನು, ಕೋಳಿ ಕೂಗಿದ್ದನ್ನು ಕೇಳುತ್ತ ಎಚ್ಚರಾದೆ 'ಇನ್ನೇನು ಬೆಳಗಾಯಿತು! ಸುಖದ ಸಾಮ್ರಾಜ್ಯವೇ ನನಗಾಗಿ ಕಾದಿದೆ!' ಎಂದು ಸಾನಂದನಿದ್ದೆ.

ಕೋಳಿ ಕೂಗಹತ್ತಿತು: "ಕೊಕ್ಕೊಕ್ಕೋ.... ಎದ್ದೇಳು, ಎಚ್ಚರಾಗು....ನಿನ್ನ ಸುಖಸಾಮ್ರಾಜ್ಯದ ಕನ…ಯುವುದು!" ಏಳು …ಎದ್ದೇಳು ...ಕೊಕ್ಕೊಕ್ಕೋ...."

…ನು ಕೋಳಿಯ ಕೂಗಿಗೆ … ನಿನ್ನ … ರುಳುತ್ತಿರುತ್ತಲೇ ಇದೆ. ನನ್ನ … ನ್ನ ಸುಂದರ … ಕಲ್ಪನೆಯಾದರೂ … ! ... ಇನ್ನೂ ನಿನ್ನ … ಬಹಳೇ ಹೊತ್ತು

… ಯ ಬಾರಿ ಕೂಗಿತು. "ಕೊಕ್ಕೊಕ್ಕೋ.... … ಜೀವನಸಂಗ್ರಾಮಕ್ಕೆ ಬನ್ನಿ....ಕ್ಕೊಕ್ಕೋ...."

…ಸ ಬೆರಗಾದೆ: 'ಇದೇನು! ಕೋಳಿ ಹೀಗೇಕೆ … ಜೀವನಸಂಗ್ರಾಮವಂತೆ! ಜೀವನದ ಮಾಧುರ್ಯ … ಲ್ಲಿ ತಿಳಿಯಬೇಕು? ... ಆದರೂ ವಿಚಿತ್ರ!.... ಧಾಟಿಯೋ ಬೇರೆ!'

…ಲಗಿಯೇ ಇರುವವರು ಯಾರಾದರೂ ಇದ್ದರೆ …ನೆಯದಾಗಿ ಕೂಗಿತು ಕೋಳಿ:

… ಜೀವನಸಂಗ್ರಾಮಕ್ಕೆ ಬನ್ನಿ....ಕಾಳೆಗದ … ನಿದ್ರಿಸುವುದಂತೂ ಸಲ್ಲದ ಗುಣ. ಅದಕ್ಕಾಗಿ … ಎಚ್ಚರಾಗಲೇ ಬೇಕು— ಅನ್ಯಮಾರ್ಗ … ಕವಿಗನಸು ಒಡೆಯುವುದೆಂದು ಹೆದರಿಕೆಯೆ? … ಡೆಯುವುದು—ಅದರ ಗುಣವೇ ಹಾಗೆ!.......

ವಿಸ್ಮಯದಿಂದ ಕೂಗಿಕೊಂಡೆ 'ಅಮಮ!.... …ತಿವಾರಥಿಃ" ಎಂದು ನಂಬಿ ಕುಳಿತಿದ್ದೆ....ಮಾಧು… …ಜೀವನದ ಗುಟ್ಟೆಂದು ನೆಚ್ಚಿ ಕುಳಿತಿದ್ದೆ... ಈ ಕೋಳಿಯ ಕೂಗಿನ ಸತ್ಯಾಸತ್ಯತೆಯನ್ನೆಂತು ಅಳೆಯಬೇಕು?.... ಈ ಭಿನ್ನ ಮುಖದ್ವಯಗಳಲ್ಲಿ ಎಲ್ಲಿ ಸಾಮ್ಯ? ಯಾವುದನ್ನು ನಂಬಿ ನೆಚ್ಚಲಿ? ....ಸಮಸ್ಯೆ....ಸಮಸ್ಯೆ....'

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಲ್ಪಟ್ಟಂತೆ 'ಆಶೆಯ ಶಿಶು' ಎಂಬ ಕಥೆಯನ್ನು ವಿಮರ್ಶಿಸಿ ಹದಿನೇಳು ಜನರು ಲೇಖನಗಳನ್ನು ಕಳುಹಿದುದು ತುಂಬ ಸಂತೋಷದ ಸಂಗತಿಯಾಗಿದೆ. ಯಾವುದೇ ಒಳ್ಳೆಯ ಕಾರ್ಯವನ್ನು ಪ್ರಾರಂಭಿಸಿದಾಗ—ಜನತೆಯಿಂದ ಹೆಚ್ಚು ಹೆಚ್ಚು ಮನ್ನಣೆ ಸಲ್ಲುತ್ತದೆಂದು ಎನಿಸಿದರೆ, ಕಾರ್ಯಕರ್ತರಿಗೆ ಒಂದು ಬಗೆಯ ತೃಪ್ತಿ-ವುಂಟಾಗ ವುಹ... ಈ ಸ್ಪಲ್ಪದ ನೋಲಾಟದಲ್ಲಿ ಇಷ್ಟೊಂದು ಜನರು ಭಾಗವಹಿಸಿದುದು ಒಂದು ಶುಭಲಕ್ಷಣವೇ ಎಂದು ನಮಗೆ ... ತೋರುತ್ತದೆ; ...
ವಿಮ...
ಎನ್ನಿಸುತ್ತವುದು. ... ವಿರೂಪಾಕ್ಷಭಟ್ಟ ... ಹೊಸಪೇ
ಠೆದರ ... ಭ್ರಾಂತಿಯ ... —ಸುರತಕ್ ... ನ್ನು
ಎನ್. ... ಪಂಚಾಕ್ಷರಿ ... ಡಗಿನಹಾ... ತ್ರ! ... ರಾಜ್ಯ-
೭. ಶ್ರೀ. ಶಾವ...ನ ಪುರಂದ ಕುಲ... ದ್ವಾಂಗ.
೯. ಶ್ರೀ. ಲಕ್ಷ್ಮೀ... ಜೀವನ 'ಕೃಷ್ಣ ... ಒಂದು
೧೧. ಶ್ರೀ. ಉ. ಮೋಹನರಾವ್, ... ಅರ್ಜ-
ಕೆರೆ ಭಾಸ್ಕರರಾಯ, ಬಾಳಗ್ರಾಮ (ದ... ತಿ ...
೧೫. ಶ್ರೀ ಶ್ರೀನಿವಾಸ ಕೃಷ್ಣಾಜಿ ಕುಲಕರ್ಣಿ ... ನಾಕ್ಷ ಶಾ.
ಬಿ. ಎ. ಧಾರವಾಡ. ೧೭ ಕುಮಾರಿ ಚಿತ್ರ... ದ್ವ ... ಬಿದ್ದವರು

ಎಲ್ಲ ವಿಮರ್ಶೆಗಳನ್ನೂ ಸಂಪಾ... ಕಥೀ,
ಶ್ರೀಮಾನ್ ಎಚ್. ಆರ್. ಶಾಸ್ತ್ರಿ, ಸ... ತುಟ್ಟ
ಅತ್ಯುತ್ತಮವಾಗಿವೆ. ಶ್ರೀ. ಎಂ. ಎಸ್. ...
ಅವರ ವಿಮರ್ಶೆಗಳು ಉತ್ತಮವಾಗಿದೆ. ... ಆಂಡೀರಿ-
ಭಾಸ್ಕರರಾಯರು, ಶ್ರೀ. ಗುರುನಾಥ... ಶಹ... ಸಂಗ
ಮಿಕ್ಕವರೆಲ್ಲರ ವಿಮರ್ಶೆಗಳು ಸಾಮಾನ್ಯಗಿಕೊಂಡ... ರ ...

ಮುಂದಿನ ಸಂಚಿಕೆಗಾಗಿ ... ತ್ತು ... ವಿಷಯದಲ್ಲಿಯಾಗಲಿ, 'ನವಜೀವನ ... ಇರಿಸಬೇಕೆಂದು ಅನೇಕರಿಂದ ಸೂಚನೆಗಳು ... ಯನ್ನೂ ಅಪೇಕ್ಷಿಸಲಾಗಿದೆ.

... ಶ್ರೀ. ಜೆ. ಮಲ್ಲಾರಿಭಟ್ಟ ಹೊಸಪೇಟೆ. ೩. ಶ್ರೀ ಎಂ.
... ನಿರ್ವಾಣಿ, ನಾಗನೂರ, (ಗೋಕಾಕ) ೫. ಶ್ರೀ.
... ಶರ್ಮಾ, 'ವಾಣೀಮಂದಿರಂ' ಕಾಸರಗೋಡು.
'ಆಕ... ಶ್ರೀ. ಎಂ. ಎಸ್. ಜೋಶಿ, ಧಾರವಾಡ.
ಬ್ರೈಂ ... ಇಲ್ಲ ... ಶಾಸ್ತ್ರಿ, ಸುರಪುರ (ಹೈದರಾಬಾದ್).
ಹೋ... ನ್ನಿ ... ಣಿ—ಕುಮಟಾ. ೧೩. ಶ್ರೀ. ಬಾಳಕುಂಬಳ
ಕೆ... ದೆ. ... ಎಲ್. ಇನಾಮದಾರ, ಧಾರವಾಡ.
ಸುಚ್ಚು ...
ಕಾದ್ದ... "......" —ವಿಟ್ಠಲರಾವ ಕುಲಕರ್ಣಿ, ಸೀನಿಯರ್
ನಾಲ್ಕ... ಗೇ ಒಂದು
ನೀವೊ... ಬೇರೆಯೇನಲ್ಲ; ಕರ್ಣಯವನ್ನು ಹೀಗೆ ಕೊಟ್ಟಿದೆ:
ದನಾ ... ಶರ್ಮಾ ಅವರ ವಿಮರ್ಶೆಗಳು
ಅಂಬೆ ... ಮ ಗೋವಿಂದ ಕುಲಕರ್ಣಿ, ಕೇಸ್ತಿ
ಪರಿ... ಅಮಮ! ಸೌಂದ... ಹನರಾವ, ಶ್ರೀ ಬಾಳಕುಂಬಳಕೆರೆ
ಪ್ರಕ್ಷಿಶಿವ ಕುಸುರಿದು! ... ಇವರ ವಿಮರ್ಶೆಗಳು ಚೆನ್ನಾಗಿವೆ.
ನ... ದ್ಯ, ಅಲ್ಲಾದರೂರಿಗೆಲ್ಲ ಅಭಿನಂದನೆಗಳು.
... ವನ್ನು ವಿಷಾರಿವಿಲಿ ಲೋಕಲ್' ಎಂಬ ಸಣ್ಣ ಕತೆಯ
...ಭವತಿ ಲಿ ಬರೆಯಬೇಕು. ಕವನಗಳನ್ನೂ ವಿಮರ್ಶೆಗೆ
"......ನ ಮೊದಲನೆಯ ಸಂಚಿಕೆಗಾಗಿ ಕವನದ ವಿಮರ್ಶೆ
...ನಕ ಇಂತಹ ಆ... —ಅಲ್ಲೇ

ಮುಂದಿನ ಸಂಚಿಕೆಯಿಂದ ಜಯ... ಕಿ ಕಂದಿದೆ. ... ಡಿದೆ. ಅದು ... ಗುವುದು. ... ಈ ವರ್ಷದ ವಿಮರ್ಶೆಯ ಶಿಕ್ಷಣರಂಗವನ್ನು ಯಶಸ್ವಿಯಾಗಿಸುವುದರ ನೋ... ಕೊಳ್ಳುತ್ತಿದ್ದೆಲ್ಲ ನಮ್ಮ ಕೃತಜ್ಞತೆಯ ವಂದನೆಗಳನ್ನು ಅರ್ಪಿಸುತ್ತೇವೆ

—ಸಂಪಾದಕರು

ಆಶೆಯ ಶಿಶು

(ರೂಪಕ ಕತೆಯ ವಿಮರ್ಶೆ)

ಶ್ರೀ. ಹೆಚ್. ಆರ್. ಶಾಸ್ತ್ರಿ ಸುರಪುರ

"ಆಶಾಶಾಃ ಪರಮಂ ದುಃಖಂ | ನಿರಾಶಾಃ ಪರಮಂ ಸುಖಂ" ಎಂಬ ಹಿನ್ನೆಲೆಯಲ್ಲಿ ರಚಿತವಾಗಿದೆ 'ಆಶೆಯ ಶಿಶು' ಎಂಬ ಕತೆ.

... ಮುಕ್ತವಾಗಿದ್ದ ಜೀವ ಅಸ್ಥಿಪಂಜರವನ್ನು ಹೊಕ್ಕೊಡ-
... "ಭವತಿ ... ಗಳು ಅದನ್ನು ಮುತ್ತುತ್ತವೆ. ಜೀವ, ರಂಗದ
ಮೇಲೆ ... ಕೊಂಡೆ. ಯಾ... 'ನನಗೆ ಗೆಜ್ಜೆಯಿಲ್ಲ, ಪಕ್ಕವಾದ್ಯವಿಲ್ಲ, ಅದು
... ರಲಿಲ್ಲ...ಎಲ್ಲಾ
ಬೇಕು ಇದು ... ಎಂದು ಹಂಬಲಿಸುತ್ತದೆ. ಇಲ್ಲದ ವಸ್ತುಗಳಿ-
ಗಾಗಿ ಅಶಿಸುತ್ತದೆ. ಈ ಆಶೆ ಇನ್ನೂ ಆಳವಾಗಿ ಜೀ... ನ್ನು ಹುಚ್ಚ-
ನನ್ನಾಗಿ ಮಾಡಿಬಿಡುತ್ತದೆ. ಈ ಹುಚ್ಚನಿಗೆ... ಲ್ಲ!

ಎಲ್ಲವೂ ಕ್ಷಣಿಕವೆಂದರಿಯುವೆ, ಇತರರು ಪಡೆದ ತನಗಿಲ್ಲದ ವಸ್ತುವನ್ನು ಯಾವ ರೀತಿಯಿಂದಲಾದರೂ ಸಂಪಾದಿಸಿಕೊಳ್ಳಲು ವ್ಯಕ್ತಿ ಹವಣಿಸುತ್ತದೆ. ಅದಕ್ಕೆ ರೀತಿ ಯಾವುದಾದರೇನು? ಸಂಪಾದನೆ ಮುಖ್ಯ. ಅಭೀಷ್ಟ ವಸ್ತುವನ್ನು ಸಂಪಾದಿಸುವ ವರೆಗೂ ಜೀವಿಗೆ ಅಸಮಾಧಾನ. ಈ ತೆರನಾದ ಅಸಮಾಧಾನ, ಅದನ್ನು ಹೋಗಲಾಡಿಸಿಕೊಳ್ಳಲು ಕೈ-ಕೊಂಡ ವಿಧಾನ, ತದ್ವಿಧಾನದಿಂದ ಆದ ಹಾಸಿಯೆ 'ಆಶೆಯ[illegible]ಶು' ವಿನ ಅಂತರಾಳ. "ಆಶೆಯನುಳಿಯೆ ಲೇಸಕ್ಕುಂ" ಎಂಬುದು ಕತೆಯ ಧ್ವನಿ.

ಕತೆಯ ವಸ್ತುವಿಷ್ಟು: ತಾರಣ-ಪಾರ್ಥಿವೆಯರು ಆ[illegible]
ಸೌಂದರ್ಯ ಎಲ್ಲವೂ ಉಳ್ಳ ಗಂಡ-ಹೆಂಡಿರು; ಆದರೆ ಮಕ್ಕಳ[illegible]
ಎಲ್ಲ ದೇವತೆಗಳಿಗೂ ಕೈಮುಗಿದು ಹರಕೆ ಹೊರುತ್ತಾರೆ; [illegible]
ಮಗುವಿನ ಮುಖವನ್ನು ಕಾಣರು ಕೊನೆಗೆ ಭೂತಕ್ಕೆ ಹ[illegible]
ಸುತ್ತಾರೆ. ಭೂತವೇ ಜನಿಸಿಬಂದು ಸರ್ವನಾಶವನ್ನ[illegible]

ಕತೆ, ಸಂಪಾದಕರು ಹೇಳಿದ ಹಾಗೆ [illegible]
ಯಿಂದೊಡಗೂಡಿ ಅದ್ಭುತವಾಗಿದೆ " ಓದುತ್ತ[illegible]
ರವ್ಯ " ದ ಮುದ್ರೆ ನಮ್ಮ ಮನೋಭಿತ್ತಿ[illegible]
ಮೂಡುತ್ತದೆ. ಕತೆಯನ್ನು ಪ್ರಾರಂಭಿಸುವ[illegible]
" ಹೆಸರು ತಾರಣ: ದೃಢ ದೇಹ.... [illegible]
ತ್ತಟಾಕವನ್ನು ಬಿಟ್ಟು ಕೊಂಚ ದೂರ ಹ[illegible]
ಕತೆಯ ಶೀರ್ಷಿಕೆಯನ್ನಭಿಲಕ್ಷಿಸಿದ[illegible]
ದಲ್ಲಿ ಸುಳಿಯುತ್ತದೆ: ಮುಂದೆ ಬಿ[illegible]
ಯಾರಿಗೆ? ಓದು[illegible]ಗಲ್ಲ; ಕತೆಯ[illegible]
ಮಾನ " ಮ[illegible] [illegible]ಸುಕಿನಲ್ಲಿ [illegible]
ಕ್ರಂದನ ಕರೆ[illegible] ' ಎಂ[illegible]
" ಮೂರು ವ[illegible] [illegible]ಂಬ[illegible]
ಆಶ್ಚರ್ಯವ[illegible] "
ಮುಂದೆ ಕ್ಷಾಮ [illegible]
ಸಂಪೂರ್ಣ ನಂಬಿಕ[illegible]

ಪಾರ್ಥಿವೆಗೆ [illegible]
ಮೊದಲೇ ಭೂತಕ[illegible]
ಆದಾವ ಮೇಲೆಯೆ [illegible]
ಯಾರೋ ಹೆರವರು [illegible]
ಆ ' ಯಾರೋ ' ದೆವ್ವವ[illegible] [illegible]ಮಗು
ಅವಳು. ಮಗುವಿಗೆ ಎದೆಯ[illegible] [illegible]ಗ ಅನು-
ತನ್ನದೆಂದೇ ಡಂಗುರ ಸಾರು[illegible] [illegible]ಸ್ಕರದೇ ಏಕೆ?
ಗ್ರಹಿಸಿದ ಪ್ರಸಾದವೆಂದೇನ[illegible] [illegible]ಕೊಂಚ ಅನುಮಾನ.
[illegible]ಗಂಡನಮೂ ಆಕೃತಿಯೂ ಅವನ ಮನೆಯಂತೆಯೇ
ಇರಬಹುದು[illegible] ಮಾತಿನ ಮರ್ಮ ಹೊಳೆದೀತು.

ಮನೆ ದೆವ್ವದ ಸಂತಾನದಿಂದ ತುಂಬಿದೆ. ಅವನ ಹೃದಯವೂ—ದೆವ್ವದ ಸಂತಾನದಿಂದ ತುಂಬಿಲ್ಲದಿದ್ದರೂ—ಅದರ ಕೊಂಚ ಅನುಮಾನದಿಂದ-ಲಾದರೂ ಮುಕ್ತವಾಗಿಲ್ಲ; ಆದರೆ ಅದು ಅವನಿಗೇ ತಿಳಿಯದು. ಮುಂದಿನ "ಅವನು ಮೂಕನಂತಾಗಿಬಿಟ್ಟಿದ್ದ" ಎಂಬ ಮಾತನ್ನು, ಅವನು ಸಂತೋಷಾತಿಶಯದಿಂದ ಮೂಕನಾಗಿದ್ದನೆಂದು ನಿರೂಪಿಸಬಹುದಾ-ದರೂ. ಆ ಮಾತಿನ ಗಾಂಭೀರ್ಯ ಮೇಲಿನ ವಿಷಯವನ್ನು ಕೊಂಚ-ವಾದರೂ ಸಮರ್ಥಿಸದಿರಲಾರದು. ಬಹುದಿನದಿಂದ ಕೊರೆಯುತ್ತಿದ್ದ
ಮೂಕ ಆಸೆ ಈಡೇ[illegible] ಪಾರ್ಥಿವೆಯ ಸಂತೋಷದಲ್ಲಿ
ಅವನ[illegible]ಗಿಯೂ[illegible]
[illegible]ನೆನ್ನದಂತೆ! ಆದರ
[illegible]ಹಸಿವೆಗೆ ತಾಯಿಯ
[illegible]ರುಳುತ್ತವೆ. ಮೂರು
[illegible]ಸದವರಿಗಿಂತ ಹೆಚ್ಚಾದುದು
ಆಶ್ಚ[illegible]ಂಟುಮಾಡುತ್ತದೆ. ಆದರೂ
[illegible]ಗುತ್ತಾನ[illegible]ಮಾಧಾನ.

[illegible]ಳವಣಿಗೆಗೆ ಊರ ಜನರು ಗಾಬರಿಯಾಗುತ್ತಾರೆ.
[illegible]ಶಕ್ತಿಯೆದುರು ನಿಲ್ಲಲು ಯಾರಿಗೂ ಧೈರ್ಯವಿಲ್ಲ.
[illegible]ೕ ಜನ ಅರ್ಧ ಇಳಿದುಹೋಗುತ್ತಿದ್ದರು. ಕೊನೆಗೆ
[illegible]ದಾಗುವಷ್ಟು ಬೆಳೆಯುತ್ತಾನೆ. ಅದಕ್ಕಾಗಿ ಬೇರೆ
[illegible]ವಾಗುತ್ತದೆ. ಊರಿನ ಎಲ್ಲ ಮನೆಗಳಿಗಿಂತಲೂ
ದೊಡ್ಡ ಕೋಟೆಯಾಗಿ—ನಿಲ್ಲುತ್ತದೆ ದೆವ್ವದ ಮನೆ.
[illegible]ೕ ಪಾರ್ಥಿವೆಗೆ ಭಯವಾಗುತ್ತದೆ. ವ್ಯಯ ಮನೆಗೆ
[illegible]ಂದು ಹೇಳಿದಾಗ, ತಾರಣ ತೆಪ್ಪಗಾಗುತ್ತಾನೆ ಈಗಾ-
[illegible]ನಸ್ಸಿನಲ್ಲಿ ತನ್ನ [illegible]ಗ ಆಸುರೀಪ್ರಕೃತಿತ್ರಿತನೋ
[illegible]ವನೆ ಬಂದಿರಬೇಕು. ಇಲ್ಲದಿದ್ದರೆ ಬಾಗಿಲೇ ಬೇಡ.
[illegible]ನ್ನು ಬೆದರಿಸಲಿಲ್ಲನೇಕೆ? ಮಗ ಎಷ್ಟು ಬಲಶಾಲಿ-
[illegible]ಗ ಎಷ್ಟು ಭೀಕರನಾಗಿದ್ದರೂ, ತನಗೆ ಇನ್ನೂ ಮಗ.
ಅವನ ದೃಷ್ಟಿ ಪರರಿಗೆ ಎಷ್ಟೇ ತೀಕ್ಷ್ಣವಾಗಿದ್ದರೂ, ಅದನ್ನೆ-
[illegible]ಶಕ್ತಿ ತನ್ನಲ್ಲಿರಲಿಲ್ಲವೇ? "ಬಾಗಿಲಿಲ್ಲದೆ ಮನೆಯುಂಟೆ?"
[illegible]ರಣ ಹೇಳಿದಾಗ "ನಮಗೆ ಬೇಕಿಲ್ಲಪ್ಪ" ಎಂಬ ಗಡುಸಾದ
ಅವನಿಗೆ ಮುಂದೆ ಮಾತೇ ಎತ್ತದಂತೆ ಮಾಡುತ್ತದೆ. ಅಷ್ಟು
[illegible]ನೆ ತಾರಣ ಮಗನಿಗೆ. ವ್ಯಯನ ತೀಕ್ಷ್ಣದೃಷ್ಟಿ ಎರಡನೆ-
ಯವನನ್ನು ಅದುಮಿಬಿಟ್ಟಂತೆ, ಅವನನ್ನೂ ಹೆದರಿಸುತ್ತದೆ.

ತಾರಣನ ಸ್ಥಿತಿ ಹೀಗಿದ್ದರೆ, ಪಾರ್ಥಿವೆ, ದಾಸಿ "ಅಯ್ಯೋ ದೆವ್ವದ ಮನೆಯಾಯ್ತೇ?" ಎಂದು ಹೇಳಿದಾಗ ಹೆದರಿದರೂ, ಅವ-ಳಿನ್ನೂ ಮಗನ ಪಕ್ಷಪಾತಿಯೇ! ಮಗನ ಊಟವನ್ನು ನೋಡಿ ಅವಳಿಗೇ ಆಶ್ಚರ್ಯ. ಅವಳಿಗೂ ಈಗೀಗ ಮಗನ ಮೇಲೆ ಸಂಶಯ ಮತ್ತು ಭಯ! ಇಲ್ಲದಿದ್ದರೆ, ಒಂದು ದಿನಕ್ಕೆ ಮಗನೊಬ್ಬನೆ ಎಷ್ಟು ಮುದ್ದೆ-ಗಳನ್ನು ಮುಗಿಸುವನೆಂದು ಮನಸ್ಸಿನಲ್ಲಿಯೇ ಎಣಿಸಲು ಹೆದರಲಿಕ್ಕೆ

ಕಾರಣ? ಅವಳ ಮನಸ್ಸು ಭಯ–ಸಂತೋಷಗಳೆರಡರಿಂದಲೂ ಸಂಮಿ-ಶ್ರಿತವಾಗಿದೆ. ತಂದೆ ಮಗನ ವಿಷಯವಾಗಿ ಹೆಂಡತಿಯು ಮುಂದೆ ಹೇಳಿ-ಕೊಂಡರೂ, ಅವಳು ಕೇಳಿಯೂ ಕೇಳದಂತಿರುತ್ತಾಳೆ. ಅವಳ ಹೃದಯವು ಹೇಳುತ್ತಲಿರುತ್ತದೆ: ಮಗ ಮಗನಲ್ಲವೆಂದು. ಅದನ್ನು ಮುಚ್ಚಿ ಸಮಾಧಾನದಿಂದ ಮರೆಮಾಚಲು ಯತ್ನಿಸುತ್ತಾಳೆ.

ಮುಂದೆ ಮಳೆ, ಬೆಳೆ ಎಲ್ಲವೂ ಹೋಗಿ ಊರಲ್ಲಿ ಕ್ಷಾಮ ತಲೆ-ದೋರುತ್ತದೆ. ಜನ ಗಾಬರಿಯಾಗುತ್ತಾರೆ. ವ್ಯಯ ಮನುಷ್ಯಸಾಧ್ಯ-ವಾದ ಆಳವಾದ ಬಾವಿಯೊಂದನ್ನು ... ದೇವಕ್ಕ... ಅಷ್ಟು ಕೆಲಸ ... ಈ ಸಲದ ... ರಿಗೆ, ತನ್ನಲ್ಲಿಯ ... ಬೇಕಾಗಿದ್ದ ... ಹೇಳುತ್ತದೆ; ... ಕ್ಷಾಮ ಎಷ್ಟು ದಿನ ... ವುದು? ... ಹೊಸವೇ... ಯನ್ನಗಿಯಲು ... ರಿಗೂ ಉಪವಾಸ; ಆದರೆ ... ಕಾರ್ಯದಲ್ಲಿ ತೊಡಗುತ್ತಾನೆ ... ಪುತ್ರ ... ದ್ದಾಂಗ-ವಳು ದಾಸಿ. ಅವಳ ಮೇಲೆಯೇ ಇವನ ... ಒಂದು ... ವೆಂದು ಕರೆದಳಲ್ಲವೇ ಆ ತೊತ್ತಿನ ಮಗಳು ... ದನ-ಕರುಗಳು ಬಲಿಯಾಗುತ್ತವೆ ಅನಂತರ ಒಂದು ... ಹುಡುಕಿ, ತಳಸೋಸಿ ಬರಿದುಮಾಡುತ್ತಾನೆ. ... ಸ್ಮಶಾನವನ್ನಾಗಿ ಮಾಡಿದ್ದಾಯಿತು ಇನ್ನು ... ಯೊಂದೇ. ಅದನ್ನು ಮುಗಿಸಲು ಮೊದಲು ಎತ್ತು ... ಮಾಡುತ್ತಾನೆ ಇನ್ನು ತಾಯಿ-ತಂದೆಯರ ಪಾಳಿ ... ಬಿಡುತ್ತಾನೆಯೇ ? ಬಹುದಿನಗಳಿಂದಲೂ ... ಎಲುಬುಗಳ ಹಂದರವಾಗಿದ್ದ ಪಾರ್ಥಿವೆಯು — ತಾ... ಕೊಂಡೊಯ್ಯುತ್ತಾನೆ ಬೊಂಬೆಯೊಂದನ್ನೊಯ್ಯು... ಬೆಂಬತ್ತಿ ಹೋದ ತಾರಣನಿಗೆ ಆಗ ತಿಳಿಯುತ್ತದೆ-ರಾಶಿಯೆತ್ತರ ಮೂಳೆಗಳ ಮುಂದೆ ಮಗ ಕು... ದೇಹವನ್ನು ಹರಿದು ತಿನ್ನುತ್ತಿರುವ ದೃಶ್ಯ ಅ... ಕೊಳ್ಳುತ್ತದೆ. ಮಗ ನರಭಕ್ಷನಾದನೇ–ಎಂಬುದು ಅವನನ್ನು ... ಕೈಳಿಸಿ ಬಿಡುತ್ತದೆ. ಆ ಸ್ಮಶಾನದಲ್ಲಿ ಉಳಿದಾಗ— ತಾರಣನಿಗೆ ತಿಳಿದಿದ್ದರೆ, ಕತೆ ಓಡುವ ದಿಕ್ಕೇ ಬೇರೆಯಾ...

ಇನ್ನು ವ್ಯಯ. ಲೇಖಕರು ಈ ಪಾತ್ರವನ್ನು ಚಿತ್ರಿಸಿ... ತಮ್ಮ ಕೌಶಲ್ಯವನ್ನು ಮೆರೆಸಿದ್ದಾರೆ. ಹೆಸರನ್ನೇ ನೋಡಿ... "ವ್ಯಯ" ಅವನು ಮಾಡಿದ ಪಾಪಕ್ಕೆ, ಊರಿನ ಎಲ್ಲ ಜೀವಗಳನ್ನೂ ತಾಯಿ-ತಂದೆಗಳನ್ನೂ ಬಿಡದೆ ತಿಂದ ಹೇಯಕೃತ್ಯಕ್ಕೆ ಅನುಗುಣ-ವಾಗಿಯೇ ಇದೆ. ಲೇಖಕರು ಅವನ ಬೆಳವಣಿಗೆಯನ್ನು ವರ್ಣಿಸು-ವಾಗ, ರಾಕ್ಷಸನಂತಿರುವ ಅವನ ಮೂರ್ತಿ ನಮ್ಮ ಕಣ್ಣೆದುರು ನಿಲ್ಲು-ತ್ತದೆ. ಅವನ ದೃಷ್ಟಿಯೂ ಅಷ್ಟೇ ತೀಕ್ಷ್ಣವಾದದ್ದು. ಬಾಗಿಲಿಲ್ಲದ ದೊಡ್ಡ ಮನೆಯನ್ನು ನೋಡಿ ದಾಸಿ "ಅಯ್ಯೋ ದೆವ್ವದ ಮನೆ-ಯಾಯ್ತೇ" ಎಂದಾಗ, ವ್ಯಯ ಅವಳನ್ನು ದಿಟ್ಟಿಸಿ ನೋಡುತ್ತಾನೆ

ಮಕ್ಕಳ ಸದೃಢತೆಗಾಗಿ

ಬಗನ ಬಾಲಾಮೃತ

"ಬಗನ ಬಾಲಾಮೃತ"

ಗ್ರಾಯಿಪ್ ಹೀಲರ

ಮಕ್ಕಳಿಗಾಗಿ

"ಎಸ್ಬನ್ ಗ್ರಾಇಪ್ ಹೀಲರ್"

TRADE MARK

"ನವರ್ ಆಯಿಲ್"

ಇವು ಪ್ರತಿಯೊಬ್ಬ ಕುಟುಂಬಸ್ಥರಿಗೆ ... ಔಷಧಗಳು

... Pharmacies & ... Ltd. Dharwar

... ಸಾಲ್ಲ ... ಗೇ ಒಂದು ... ನೀವೋ ಬೇರೆಯೇನಲ್ಲ; ... ದನಾ ... ಅಂಬೆ ...

×

ಪರಿಣಾಮ! ಸೌಂದರ್ಯ ... ಪ್ರಕಾಶಿವ ಕುಸುರಿದು! ... ಇವರ ...ಗಳು ... ದ್ದು, ಅಲ್ಲಾದರ್ಯರಿಗಲ್ಲ ಅಭಿನಂದನೆ ... ವಳನ್ನು ಅದುಮಿ ... ವನ್ನು ಮಾರಿವಿಲಿ ಲೋಕಲ್ ... ಸಣಾಗ, ಅವನ ... ಭವತಿ ... ಬರೆಯುಬೇಕು. ...ನಗಳ...

"......ನ ಮೊದಲನೆಯ ಸಂಚಿಕೆಗಾಗಿ ... ಕಡಿಮೆಯಾದುದಲ್ಲ ... ಬೇಡವೆಂದು ವ್ಯಯ ... —ಅಲ್ಲೇ ... ಡಿದೆ. ಅದು ... ಗುವುದು. ... ಈ ವರ್ಷ ... .!" ... ಕೊಳ್ಳುತ್ತಿದ್ದಲ್ಲ ನಮ್ಮ ಕೃತಜ್ಞತೆಯು

×

... ಮುಕ್ತವಾಗಿದ್ದ ... ಯಲ್ಲಿ! ತಂದೆಯನ್ನೇ ಮೂಕ ನನ್ನಾ ... ಭವತಿ ... ಗಳು ಅದನ್ನು ಕಂಡು ರಣಹದ್ದುಗಳೂ ಬೀರಿ ಕೊಂಡು ದಾ... ಯಾ... ನನಗೆ ... ತ್ತಿದ್ದುವು; ಎಂದರೆ ಎಷ್ಟು ವಿಷಪೂರಿತವಾಗಿರ... ಕತೆಯ ಉದ್ದದ ವಸ್ತುವಿಳಿ... ಪಾತ್ರವೇ ಪಾತ್ರ. ... ಮುಚ್ಚ-

(ಅಳಲನ ... ನೋಡಿ ... ಗಲ್ಲ! -

ಜಯಂತಿ

ಸಾಹಿತ್ಯ ವಿಹಾರ

ಸಂಪಾದಕೀಂ ...ಾರದ ಕುರಿತು :

ಶ್ರೀ. ಕೆ. ಎಸ್. ... ಕಾಸರಗೋಡು

ಆಚಾರ–ವಿಚಾರಗಳ ಸಮನ್ವಯದ ಸಮರಸವನ್ನೇರಿದ ಜ.
ವಿಕಾಸವು ಸರ್ವತೋಮುಖವಾದ ಶಾಂತಿಯನ್ನು ನೆಲೆಗೊ
ಸಮರ್ಥವಾಗಬಹುದೆಂಬುದು, ದಿನದಿಂದ ದಿನಕ್ಕೆ ಪ್ರಗತಿ
ಆಶಿಸುತ್ತ ಮುಂದುವರಿಯುವ ಸಮಾಜದ ಹೃದಯದಲ್ಲಿ ಶಾ
ವಾಗಿ ನೆರವೇರಿಸಬೇಕಾದ ಸತ್ಯವಚನವಾಗಿದೆ. ಪರಸ್ಪರಾಶ್ರಿ
ಎಂದೆಂದೂ ಕಳೆಯಬೇಕಾದ 'ಆಚಾರ.ವಿಚಾರ'ಗಳಲ್ಲಿ
ಭಿನ್ನತೆಯು ತಲೆದೋರುವುದೋ, ಅರ್ಥಾತ್ ಬದನೇಕಾ
ಪ್ರಸಂಗವೇ ಸಾಗುವುದೋ ಆಗ ಮಾತ್ರ ಖಂಡಿತ
ರಚನಾ ಕಾರ್ಯಗಳು ತಳಹದಿಯಿಲ್ಲದ ಭವನ
ವುದರಲ್ಲಿ ಸಂಶಯವಿಲ್ಲ! ತಳಹದಿಯ ಭದ್ರತೆ
ಯೊಡಮೂಡಿದಂತೆ ವಿಚಾರದ ನಿರ್ಮಲಪ್ರವಾ
ಸುಶಾಂತವಾಗಿ ಸಾಗಿ, ಇಕ್ಕೆಲದ ನೆಲವನ್ನೂ
ಜೀವನದಲ್ಲಿ ವಸಂತ ಕಾಲ ಮೂಡಬೇಕು. ವ
ಸಮತೆ, ತಲೆದೋರಬೇಕು ಎ...
ಸಾಹಿತ್ಯಿಕರೂ ಸಮಾ... ...
ಸಮತಾವಾದಿಗಳು ... ಗಮನವ
ಆದರ್ಶವನ್ನೊಳಗ... ಸಂಪಾದ
ಬೇಕು, ಮನಗೊ... ..., ...
ಸಾಧಿಸಬೇಕು!

"ಕಲ... ...
ತ್ತಾನೆ ತನ್ನ ... ...
ಚಿತ್ರವನ್ನು ಕಾಣುತ
ಮುಂದೆ ಬಂದು ನಿಂತು
ಅವನ ದೃಷ್ಟಿಯನ್ನು ...
ವಾಗಿ ಬಿಂಬಿಸಿ...
ತಾನಾಗಿಯೆ ...
ಕನಿಕರಿಸುತ್ತಾ...
ಯುತ್ತಿಸುತ್ತಾನೆ
ಆತನ ಲೊ...
ಜೀವಿಗಳ ಮ...
ವಿಚಾರ...

ಕಾರಣ? ಅವಳ ಮನಸ್ಸು ಭಯ[illegible], ತಾನು ನಡೆಯುತ್ತಿರುವುದು ತನ್ನಿಸ-
ಶ್ರಿತವಾಗಿದೆ. ತಂದೆ ಮಗನ ವಿ[illegible] ಇದಕ್ಕಾಗಿ ನಾವು ನಾ[illegible]ಬೇಕಾಗುವುದು!
ಕೊಂಡರೂ, ಅವಳು ಕೇಳಿಯೂ [illegible]ರುಗಳ ಬಂಧು[illegible]ನೆ ನಿಶ್ಚಯ-
ಯವು ಹೇಳುತ್ತಲಿರುತ್ತದೆ: ಮನ್ನಕ್ಕಿ 'ಮಾನವ[illegible] ವಿಚಾರ
ಸಮಾಧಾನದಿಂದ ಮರೆಮಾಚಲು [illegible] ನಡೆ[illegible]

ಮುಂದೆ ಮಳೆ, ಬೆಳೆ ಎಲ್ಲವೂ [illegible] ಊರಲ್ಲಿ ಕ್ಷಾಮ [illegible]
ಬೋರುತ್ತದೆ. ಜನ ಗಾಬರಿಯಾಗುತ್ತಾ[illegible] ವ್ಯಯ ಮನುಷ್ಯಾ[illegible]
ವಾದ ಆಳವಾದ ಬಾವಿಯ[illegible] ಈ ಸ್ಥಳದ [illegible] ದೇವ[illegible]
ಇಷ್ಟು ಕೆಲಸ [illegible]
ರಿಗೆ, ತನ್ನಲ್ಲಿಯು [illegible] ಹೇಳುತ್ತದೆ; [illegible]
ಬೇಕಾಗಿದ್ದ ಜನ[illegible]
ಕ್ಷಾಮ ಎಷ್ಟು ದಿನ[illegible] ನಿರಾ[illegible]
ಯನ್ನಗಿಯಲು [illegible] — [illegible]
ರಿಗೂ ಉಪವಾಸ; ಆದರೆ [illegible] ರಾಜ್ಯ-
ಕಾರ್ಯದಲ್ಲಿ ತೊಡಗುತ್ತಾ[illegible] ಯೂ[illegible]ದ್ವಾಂಗ.
ವಳು ದಾಸಿ. ಅವಳ [illegible] ಇವನ[illegible] ಒಂದು
ವೆಂದು ಕರೆದಳಲ್ಲವೇ ಆ ತೊತ್ತಿನ ಮಗಳು [illegible] ಅರ್ಜ-
ದನ-ಕರುಗಳು ಬಲಿಯಾಗುತ್ತವೆ ಅನಂತರ [illegible]
ಹುಡುಕಿ, ತಳಸೋಸಿ ಬರಿದುಮಾಡುತ್ತಾನೆ. [illegible]ಶಾ-
ಸ್ಮಶಾನವನ್ನಾಗಿ ಮಾಡಿದ್ದಾಯಿತು ಇನ್ನು [illegible] ಬಿಡ್ಡವರು
ಯೊಂದೇ. ಅವನ್ನು ಮುಗಿಸಲು ಮೊದಲು ಎತ್ತ[illegible] ಕಥೀ,
ಮಾಡುತ್ತಾನೆ ಇನ್ನು ತಾಯಿ-ತಂದೆಯರ ಪಾಳಿ[illegible] ತುಟ್ಟ
ಬಿಡುತ್ತಾನೆಯೇ? ಬಹುದಿನಗಳಿಂದಲೂ [illegible]
ಎಲುಬುಗಳ ಹಂದರವಾಗಿದ್ದ ಪಾರ್ಥಿವೆಯ — ತಾ[illegible]
ಕೊಂಡೊಯ್ಯುತ್ತಾನೆ ಬೋಬೆಯೊಂದನ್ನೊಯ್ಯು[illegible]
ಬೆಂಬತ್ತಿ ಹೋದ ತಾರಣನಿಗೆ ಆಗ ತಿಳಿಯುತ್ತದೆ-[illegible]
ರಾಶಿಯೆತ್ತರ ಮೂಳೆಗಳ ಮುಂದೆ ಮಗ [illegible]
ದೇಹವನ್ನು ಹರಿದು ತಿನ್ನುತ್ತಿರುವ ದೃಶ್ಯ [illegible]
ಕೊಲ್ಲುತ್ತದೆ. ಮಗ ನರಭಕ್ಷನಾದನೇ—ಎಂಬುದು ಅವನನ್ನು
ಕ್ಕಳಿಸಿ ಬಿಡುತ್ತದೆ. ಆ ಸ್ಮಶಾನದಲ್ಲಿ ಉಳಿದಾಗ—ಂತಹ ಆಸು
ತಾರಣನಿಗೆ ತಿಳಿದಿದ್ದರೆ, ಕತೆ ಓಡುವ ದಿಕ್ಕೇ ಬೇರೆಯಾಗ[illegible]ದೆ.

ಇನ್ನು ವ್ಯಯ. ಲೇಖಕರು ಈ ಪಾತ್ರವನ್ನು ಚಿತ್ರಿ[illegible]
ತಮ್ಮ ಕೌಶಲ್ಯವನ್ನು ಮೆರೆಸಿದ್ದಾರೆ. ಹೆಸರನ್ನೇ ನೋಡಿ[illegible]
"ವ್ಯಯ" ಅವನು ಮಾಡಿದ ಪಾಪಕ್ಕೆ, ಊರಿನ ಎಲ್ಲ ಜೀವಗಳನ್ನೂ
ತಾಯಿ-ತಂದೆಗಳನ್ನೂ ಬಿಡದೆ ತಿಂದ ಹೇಯಕೃತ್ಯಕ್ಕೆ ಅನುಗುಣ-
ವಾಗಿಯೇ ಇದೆ. ಲೇಖಕರು ಅವನ ಬೆಳೆವಣಿಗೆಯನ್ನು ವರ್ಣಿಸು-
ವಾಗ, ರಾಕ್ಷಸನಂತಿರುವ ಅವನ ಮೂರ್ತಿ ನಮ್ಮ ಕಣ್ಣೆದುರು ನಿಲ್ಲು-
ತ್ತದೆ. ಅವನ ದೃಷ್ಟಿಯೂ ಅಷ್ಟೇ ತೀಕ್ಷ್ಣವಾದದ್ದು. ಬಾಗಿಲಿಲ್ಲದ
ದೊಡ್ಡ ಮನೆಯನ್ನು ನೋಡಿ ದಾಸಿ "ಅಯ್ಯೋ ದೆವ್ವದ ಮನೆ-
ಯಾಯ್ತೇ" ಎಂದಾಗ, ವ್ಯಯ ಅವಳನ್ನು ದಿಟ್ಟಿಸಿ ನೋಡುತ್ತಾನೆ

ಈ ಭಾವನೆಯಿಂದ ಯಾವ ದುಷ್ಪರಿಣಾಮವೂ ಇಲ್ಲದಿರುವಾಗ,
ಬದಲಾಗಿ ಮಾನವತೆಯ ವಿಕಾಸವೇ ತಲೆದೋರುವಾಗ, ಯಾವ
ಪ್ರತಿಗಾಮಿ ಶಕ್ತಿಯನ್ನೂ ಕೆರಳಿಸ[illegible] ಇದರ ಮುಂದೆ ತತ್ತ್ವ ಪ್ರವಚ-
ನವು ಬೇಕೇ? ಇಂದಿನ [illegible]ಮತ-ಸಂಘಗಳಲ್ಲಿ, ಸಮಾಜ
ಸುಧಾರಕರ, ಸಾಹಿತ[illegible]-ಸಂಘಗಳಲ್ಲಿ ಅಭಿಪ್ರಾಯೈಕ್ಯ-
ತೆಯು ಕಾಣಿಸದ ಈ ಗು[illegible]ಲ್ಲಿ ವೃಥಾ ಈ ಗದಾಪ್ರಹಾರವೇಕೆ?
[illegible]ಗದಾಪ್ರಹಾರವು ಯಾವ ಪರಿಣಾಮವನ್ನೂ ಮಾಡದು. ಇದರ
ಬದಲು, ಸಮಾಜದಲ್ಲಿ ನೆಲಸಿದ ಅಜ್ಞಾನವನ್ನು ಹರಿದೋಡಿಸುವ
ಕಾರ್ಯವನ್ನೆಸಗಬೇಕು. ಸ್ವಾಭಾವಿಕವಾಗಿ ನೆಲೆನಿಲ್ಲಬಹುದಾದ
ಮಾನವ ಸಂಪರ್ಕವನ್ನು ಒಡೆದು ಚೂರಾಗಿಸಿ, ಅನೈಕ್ಯತೆಯನ್ನು
[illegible]ಯತ್ನವನ್ನು ಮಾಡಬಾರದು. ಸಮತೆ-ಏಕವಾಕ್ಯತೆ
[illegible]ಡನೆ ಮಾನವಹೃದಯವಿಕಾಸವನ್ನು ಸಾಧಿಸಲು ಪಣತೊಟ್ಟ
[illegible]-ಸುಧಾರಕರು, ವೈಯಕ್ತಿಕ ಜೀವನದಲ್ಲಿ ಮೊದಲು ನೀತಿ-
[illegible] ಸೇರೂರಿಸಿ, ನುಡಿಯಂತೆ ನಡೆಯನ್ನು-ವಿಚಾರ[illegible]
'ಅಹ[illegible] ಯತ್ನಿಸಬೇಕು—ಆಗ ಮಾತ್ರ ಮಾನವ
ಬೈಂ ಇಲ್ಲಾ[illegible]ಯಿಲ್ಲದೆ ಸಾಗಿ, ಅಲ್ಲಲ್ಲಿ ಸ್ತ್ರೋಪಕಗಳಾದ
ಹೋ[illegible]ನ್ನಿಡಿ [illegible] ವಿಶಾಲವಾಗಿ [illegible]ಗಂಭೀರವಾಗಿ-ಶಾಂತ-
ಸುಚು[illegible]ದೆ. [illegible]ವಾಹಿನಿಯಾಗ[illegible] ಇದುವೆ ಜನಮನದ
ಕಾದ[illegible]......" [illegible] ಇಲ್ಲವಾದರೆ"
ನಾಲ್ಕಾ[illegible]ಗೇ ಒಂದು[illegible] ಹುಟ್ಟಿಲ್ಲ. ತಳಮಳಕೆ
ನೀಪೋ[illegible] ಬೇರೆಯೇನಲ್ಲ; [illegible] ಪ್ರೇತವಲೆಯಂತೆ
ದನಾ[illegible] ನುಡಿಯನ್ನು
ಅಂಬೆ[illegible] ×
ಪರಿಣಾಮವು! ಸೌಂದರ್ಯ[illegible]
ಪ್ರಕಾಶಿವ ಕುಸುರಿದು! [illegible] ಆದರೆ ಇಷ್ಟವಸ್ತು
[illegible], ಅಲ್ಲಾದರ[illegible]ಅಭಿನಂದನ[illegible] [illegible]ಗವಾಗಿರಬೇಕೆಂಬ
[illegible]ವನ್ನು ವರ್ಚಿರಿವಿಲಿ ಲೋಕಲ್' [illegible] ಎಂಬ ಸಣ್ಣ[illegible] [illegible]ದಲಾದವರಿಗೂ
....ಭವತಿ ಲಿ ಬರೆಯಬೇಕು. [illegible]ನಗಳ[illegible] [illegible]ಲಾಭಂ ಸತಿ-
[illegible] ಧರ್ಮ
"......ನ ಮೊದಲನೆಯ ಸಂಚಿಕೆಗಾಗಿ' [illegible]ರ್ಗಗಾಮಿಗಳಾಗಿದ್ದುದ
—ಅಲ್ಲೇ [illegible] ಸ್ಪಷ್ಟವಾಗಿ, ಅವರು ಶುಭ
[illegible]ಡಿದೆ. ಅದು [illegible]ಗುವುದು. ಈ ವರ್ಷ[illegible] [illegible]ವರಿಗೆ ಮಕ್ಕಳಾಗ
[illegible]ಕೊಳ್ಳುತ್ತಿದ್ದೆಲ್ಲ ನಮ್ಮ ಕೃತಜ್ಞತೆಯ [illegible]ರಿಯದೆ, ಭೂತ-
× [illegible]ರ್ಯ ನೆರವೇ-
[illegible]—ಭೂತಕಾದಿ
ಸ್ಟೋ[illegible] ಮುಕ್ತವಾಗಿದ್ದ [illegible]ಯಲ್ಲಿ! ತಂದೆ[illegible] ಹೇಳುವುದಿಲ್ಲ.
ನನ್ನಾಗನತಿ [illegible]ಗಳು ಅದನ್ನು ಕಂಡು ರಣಹದ[illegible] ಹೇಳಬಹುದು.
ಕೊಂಡು ದುಯೂ[illegible], ನನಗೆ [illegible] ಎಂ[illegible] ಜೀವಿತವನ್ನು
ವಿಷಪೂರಿತವಾಗಿರಬಾ[illegible] [illegible]ತೆಯ ಉದ್ಭವ ವಸ್ತು[illegible]
ಪಾತ್ರವೇ ಪಾತ್ರ. [illegible] ಸುಚ್ಚ-

(ಆಟ ಪುಟ ನೋಡಿ) [illegible]ಗಲ್ಲ!





ಜೂನ್
೧೯೫೬

ಬೆಳಕಿಗೆ ಸ್ವಾಗತ

ಬಾ, ತರಣಿಯ ತುಂಬಿದ ಹೊಂಬೆಳಕೇ !
ಈ ತಮವನು ಕೊಡೆಯಲು ನೀ ಬೆಳಕೇ !

೧

'ಕಾರಿರುಳನು ಬಿಡಿ, ಬೆಳಕಿಗೆ ಕಾಲಿಡಿ' [illegible]
ಸಾರುತಿದೆಯಿಂತು ದೈವದ [illegible]ಗಳಲ್ಲಿ ಸಾಂಪ್ರದಾಯಿಕ [illegible]
ಆರೆಯ್ಯುವುದಿಳೆ ನಿನ್ನ ಸುಧಾರಕರೆನಿಸಿಕೊಳ್ಳ [illegible]
ತೋರುತ [illegible]ಚಾರ-ವಿಚಾರಗಳಲ್ಲಿರುವ [illegible]
[illegible]ಕಾದಂಬರಿ-ನಾಟಕಗಳಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. [illegible]
[illegible]ಬೇಕಾದ ಸಾಮಾಜಿಕ-ವೈಯಕ್ತಿಕ ಜೀವನ [illegible]
[illegible]ದ್ದಾರೆ. ಅವರ ವೈಯಕ್ತಿಕ ಆಚಾರ-ವಿಚಾರಗಳು [illegible]
[illegible]ಹಿತ್ಯದಲ್ಲಿ ಚಿತ್ರಿಸಿರುವ ಮಾನವಜೀವನದ ವಿವಿಧಮುಖಗಳು [illegible]
[illegible]ಟ್ಟರನ್ನೂ ವಿಚಾರಮಾಡಲು ಹಚ್ಚುವಂತಿವೆ.

ಕಾರಂತರ ನಿಸರ್ಗೋಪಾಸನೆಯ ಮೇಲ್ಮೆ ಅವರ 'ಬೆಟ್ಟದ ಜೀವ' [illegible] 'ಮರಳಿ ಮಣ್ಣಿಗೆ' ಮೊದಲಾದ ಅವರ ಸುಂದರ ಕೃತಿಗಳಲ್ಲಿ ತುಂಬ [illegible] ತೊಡಕಿನ ಚಿತ್ರಣ, ಮಾನವೀಯ ಸ್ವಭಾವವೈವಿಧ್ಯ ದರ್ಶನ- [illegible]ಗಳಾಗಿವೆ. ಅವರು ಭಾರತವನ್ನೆಲ್ಲ ಸೂಕ್ಷ್ಮದೃಷ್ಟಿಯಿಂದ ನೋಡುತ್ತ [illegible]ಗಳ ಜಾನಪದಕಲೆಗಳನ್ನು ಕಣ್ಣಾರೆ ಕಾಣಬೇಕೆಂಬ ಉದ್ದೇಶವನ್ನಿರಿಸಿಕೊಂಡು [illegible]ಗಳಲ್ಲಿಯೂ ತಿರುಗಾಡಿ ಬಂದಿದ್ದಾರೆ. ಸ್ವತಃ ಚಿತ್ರಕಾರರು- [illegible] ಪ್ರಯೋಗದಿಂದ ಅರಿತವರಾಗಿದ್ದಾರೆ. ರಂಗಭೂಮಿಯ [illegible] ಮಾಡಿ, ಪ್ರತ್ಯಕ್ಷ ರಂಗಭೂಮಿಯ ಮೇಲೆ ವಿವಿಧ ಪ್ರಯೋಗಗಳನ್ನು ಮಾಡಿ [illegible] ಇದ್ದಾರೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ, ನಮ್ಮ ಸಾಹಿತ್ಯಸಮ್ಮೇಳನಕ್ಕೆ [illegible]

ಈ ಸಂಚಿಕೆಯ...

卐

ಸಮ್ಮೇಳನಾಧ್ಯಕ್ಷ ಶಿವರಾಮ ಕಾರಂತರು (ಸಂಪಾದಕರು)

ಸಂಪಾದಕರು ೧

ನಾದನಡೆ (ಸಾಂದರ್ಭಿಕ ಟಿಪ್ಪಣಿಗಳು)

'ಕಾಲಭೈರವ' ೩

ಪತಿವ್ರತೆ (ಅನುವಾದಿತ ಸಣ್ಣಕತೆ)

ಶ್ರೀಮತಿ ಸರೋಜಿನಿ ಮಳೇಬೆನ್ನೂರ ಬಿ. ಎ. ಧಾರವಾಡ ೫

ಚಂದ್ರರೋದನ (ನವ್ಯಕವನ)

ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬಯಿ ೧೦

ಶ್ರೀವಾದಿರಾಜರ ರುಕ್ಮಿಣೀಶವಿಜಯ (ಸಂಸ್ಕೃತ ಕಾವ್ಯಪರಿಚಯ)

ಡಾ. ಎಚ್. ಬಿ. ಕೊಣ್ಣೂರ ಎಲ್. ಸಿ. ಪಿ. ಎಸ್. ಗದಗ ೧೨

ದೇವರಿಗಾಗಿ (ಸ್ವತಂತ್ರ ಸಣ್ಣಕಥೆ

ಶ್ರೀ. ಬಳ್ಕೂರು ಸುಬ್ಬರಾಯ ಅಡಿಗ, ಗಂಗೊಳ್ಳಿ (ದ. ಕ) ೩...

ಕೊನೆಯ ಕೆಲವು ದಿನಗಳು (ಶ್ರೀ ರವೀಂದ್ರರ ನೆನಹು)

ಶ್ರೀ. ವೆಂಕಟರಾಯ ಪ್ರಭು ಜ್ಯೂ. ಎಂ.ಎ. ರುಯ್ಯಾ ಕಾಲೇಜು ಮುಂಬಯಿ...

ಯಾರಿವಳು ? (ಕವನ)

ಶ್ರೀ. ಶ್ರೀನಿವಾಸ ಗಲಗಲಿ, ಧಾರವಾಡ ....

ಪ್ರೇಮದೀಪವನುರಿಸಿ (ಕವನ)

ಶ್ರೀ. ಎಸ್. ವಿ. ಎಲ್. ಎನ್. ಶರ್ಮಾ, ಪೆರಡಾಲ (ದ. ಕ.)

ಮಾಡಿ ನೋಡು (ನಗೆಯಾಟ)

... ಪದ್ಮಾವತಿ ಅಣ್ಣಿಗೇರಿ, ಬಿ. ಎ. ಧಾರವಾಡ

... (ವಿವೇಚನಾತ್ಮಕ ಲೇಖ)

... 'ಸಾಹಿತ್ಯಶಿರೋಮಣಿ' ... ಕನ್ಯಾನ, (ದ. ಕ.)

...ಚಯ ಲೇಖ)

...)

... ೩೦

... ೩೩

... ವಿಮರ್ಶೆ)

... ಸುರತ ... ೩೭

...ಕೆಯ ಐ...

ಜಯಂತಿ

ಸಂಪುಟ ೧೮ ಸಂಚಿಕೆ ೧

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣ ಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್ ಕುಮಾರ

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

ವಾರ್ಷಿಕ ವರ್ಗಣಿ ೩ ರೂ.
ಬಿಡಿ ಸಂಚಿಕೆ ೮ ಆಣೆ

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

ಸಮ್ಮೇಳನಾಧ್ಯಕ್ಷ — ಶಿವರಾಮ ಕಾರಂತರು

ಈ ಸಲದ ಕನ್ನಡ ಸಾಹಿತ್ಯಸಮ್ಮೇಳನವು ಕರ್ನಾಟಕದ ಸಾಂಸ್ಕೃತಿಕ ಕೇಂದ್ರವಾದ ಮೈಸೂರು ನಗರದಲ್ಲಿ ಸೇರಲಿದೆ. ಮುಖ್ಯ ಸಮ್ಮೇಳನದೊಂದಿಗೆ ಬೇರೆ ಬೇರೆ ಉಪಸಮ್ಮೇಳನ ಅರ್ಥಾತ್ ಗೋಷ್ಠಿಗಳೂ ಜರುಗಲಿವೆ. ಮುಖ್ಯ ಸಮ್ಮೇಳನದ ಅಧ್ಯಕ್ಷರು ಸುಪ್ರಸಿದ್ಧ ಸಾಹಿತ್ಯಿಕರಾದ ಶಿವರಾಮ ಕಾರಂತರು. ಗೋಷ್ಠಿಗಳ ಅಧ್ಯಕ್ಷರಾಗಿರುವವರೂ ತಮ್ಮ ತಮ್ಮ ಕಾರ್ಯ, ನಿರ್ಮಿತಿ ಇವುಗಳ ಮೂಲಕ, ನಾಡಿನಲ್ಲಿ ಸಾಕಷ್ಟು ಹೆಸರುವಾಸಿಯನ್ನು ಪಡೆದವರೇ ಇರುವರು.

ಶ್ರೀಮಾನ್ ಕಾರಂತರು ಈ ಸಲದ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಆಯ್ಕೆ ಹೊಂದಿದುದು ಒಂದು ಸಮಾಧಾನಪಡಬೇಕಾದ ಸಂಗತಿಯೇ ಸರಿ. ಏಕೆಂದರೆ, ಅವರು ಕಾರ್ಯಮೂರ್ತಿಗಳು ಅಲ್ಲದೆ ಸಾಹಿತ್ಯದ ಹಳೆಯ ಹೊಸ ಮಾರ್ಗಗಳ ಸಮನ್ವಯಸ್ವರೂಪರು. ಅವರು ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಹೊಸತಾಗಿ ಕಾಲಿಟ್ಟಾಗ, ಹಳೆಯ ದಾರಿಯಿಂದಲೇ ಹೊರಟವರೆಂದು ಕಂಡರೂ, ಸ್ವಲ್ಪದಿನಗಳಲ್ಲಿಯೆ ಹೊಸ ಹೊಸ ದಾರಿಗಳನ್ನು ಕಂಡುಹಿಡಿದು, ಆ ಮಾರ್ಗದಿಂದ ತಮ್ಮ ಸಾಹಿತ್ಯನಿರ್ಮಿತಿಯನ್ನು ಮುಂದುವರಿಸಹತ್ತಿದರು. ಅವರು ಆದರ್ಶದ ರಸಸೃಷ್ಟಿಯನು ಮಾಡಬಲ್ಲ ಭಾವುಕರೂ ಅಹುದು. ವಾಸ್ತವವನ್ನು ಪರಿಚಯ ಮಾಡಿಕೊಡಬಲ್ಲ ವಿಜ್ಞಾನಿಗಳೂ ಅಹುದು. ಎಂತಲೆ ಅವರ ಸಾಹಿತ್ಯ ಬಹುಮುಖವಾಗಿ ಹೊರಟಿದೆ; ಬಹುಲತೆಯಲ್ಲಿಯೂ ಮೇಲಿನ ಸ್ಥಾನವನ್ನು ಹಿಡಿದು ನಿಲ್ಲುವಂತಿದೆ.

ವೈಚಾರಿಕ ದೃಷ್ಟಿಯಿಂದ ಶ್ರೀ. ಕಾರಂತರನ್ನು ಸಂಪ್ರದಾಯವಾದಿಗಳಲ್ಲಿ ಸೇರಿಸಬೇಕೋ ಪುರೋಗಾಮಿಗಳಲ್ಲಿ ಗಣಿಸಬೇಕೋ ಎಂಬುದು ಅನೇಕರಿಗೆ ತಿಳಿಯದ ತೊಡಕಾಗಿರಬಹುದು. 'ಗರ್ಭಗುಡಿ' 'ದೇವದೂತರು' ಮೊದಲಾದ ಕೃತಿಗಳಲ್ಲಿ ಸಾಂಪ್ರದಾಯಿಕ ಅವಿವೇಕಗಳ ವಿಡಂಬನೆಯಿದ್ದಂತೆಯೆ, ಬೇರೆ ಕೆಲವು ಕೃತಿಗಳಲ್ಲಿ ಸುಧಾರಕರೆನಿಸಿಕೊಳ್ಳುವವರ ಡಂಭಾಚಾರ-ಜೊಳ್ಳುತನಗಳ ವಿಡಂಬನೆಯಿದೆ. ಹಳೆಯ ಆಚಾರ-ವಿಚಾರಗಳಲ್ಲಿರುವ ಮಾನವವಿಕಸನದ ಭಾಗವನು ಅವರು ತಮ್ಮ ಅನೇಕ ಕಥೆ-ಕಾದಂಬರಿ-ನಾಟಕಗಳಲ್ಲಿ ಸುಂದರವಾಗಿ ಚಿತ್ರಿಸಿದ್ದಾರೆ. ಅದರಂತೆಯೆ, ಕಾಲೋಚಿತವಾಗಿ ಆಗಬೇಕಾದ ಸಾಮಾಜಿಕ-ವೈಯಕ್ತಿಕ ಜೀವನಗಳ ಬದಲಾವಣೆಗಳ ಬಣ್ಣಿಸಿ ತೋರಿಸಿದ್ದಾರೆ. ಅವರ ವೈಯಕ್ತಿಕ ಆಚಾರ-ವಿಚಾರಗಳು ಹೇಗೆಯೆ ಇರಲಿ; ತಮ್ಮ ಸಾಹಿತ್ಯದಲ್ಲಿ ಚಿತ್ರಿಸಿರುವ ಮಾನವಜೀವನದ ವಿವಿಧಮುಖಗಳು, ಹಳಬರು-ಹೊಸಬರು— ಇಬ್ಬರನ್ನೂ ವಿಚಾರಮಾಡಲು ಹಚ್ಚುವಂತಿವೆ.

ಕಾರಂತರ ನಿಸರ್ಗೋಪಾಸನೆಯು ಮೇಲ್ಮೆ ಅವರ 'ಬೆಟ್ಟದ ಜೀವ' 'ಕುಡಿಯರ ಕೂಸು' 'ಮರಳಿ ಮಣ್ಣಿಗೆ' ಮೊದಲಾದ ಅವರ ಸುಂದರ ಕೃತಿಗಳಲ್ಲಿ ತುಂಬ ಅರಳಿನಿಂತಿದೆ. ಮನಸ್ಸಿನ ತೊಡಕಿನ ಚಿತ್ರಣ, ಮಾನವೀಯ ಸ್ವಭಾವವೈವಿಧ್ಯ ದರ್ಶನ— ಇವಂತೂ ಕಾರಂತರ ವೈಶಿಷ್ಟ್ಯಗಳಾಗಿವೆ. ಅವರು ಭಾರತವನ್ನೆಲ್ಲ ಸೂಕ್ಷ್ಮದೃಷ್ಟಿಯಿಂದ ನೋಡುತ್ತ, ಸುತ್ತಿಬಂದಿದ್ದಾರೆ; ವಿದೇಶಗಳ ಜಾನಪದಕಲೆಗಳನ್ನು ಕಣ್ಣಾರೆ ಕಾಣಬೇಕೆಂಬ ಉದ್ದೇಶವನ್ನಿರಿಸಿಕೊಂಡು, ಪಶ್ಚಿಮ ರಾಷ್ಟ್ರಗಳಲ್ಲಿಯೂ ತಿರುಗಾಡಿ ಬಂದಿದ್ದಾರೆ. ಸ್ವತಃ ಚಿತ್ರಕಾರರು. ಚಲಚ್ಚಿತ್ರ ಕಲೆಯನ್ನು ಪ್ರತ್ಯಕ್ಷ ಪ್ರಯೋಗದಿಂದ ಅರಿತವರಾಗಿದ್ದಾರೆ. ರಂಗಭೂಮಿಯ ಅಭ್ಯಾಸವನ್ನೂ ತುಲನಾತ್ಮಕವಾಗಿ ಮಾಡಿ, ಪ್ರತ್ಯಕ್ಷ ರಂಗಭೂಮಿಯ ಮೇಲೆ ವಿವಿಧ ಪ್ರಯೋಗಗಳನ್ನು ಮಾಡಿ ಅನುಭವಪಡೆದವರೂ ಇದ್ದಾರೆ. ಒಂದೆ ಮಾತಿನಲ್ಲಿ ಹೇಳಬೇಕೆಂದರೆ, ನಮ್ಮ ಸಾಹಿತ್ಯಸಮ್ಮೇಳನಕ್ಕೆ ಎಂತಹ ಅಧ್ಯಕ್ಷರು

ಬೇಕಾಗಿರುವರೋ, ಅಂತಹ ಅಧ್ಯಕ್ಷೀಯ ಗುಣಗಳು ಕಾರಂತರಲ್ಲಿ ಬಹ್ವಂಶದಿಂದ ಇವೆಯೆಂದು ಹೇಳಬಹುದು.

ಹಿಂದಿನ ಕಾಲದಲ್ಲಿ ನಮ್ಮ ನಾಡಿನ ಪರಿಸ್ಥಿತಿವೈಶಿಷ್ಟ್ಯದ ಮೂಲಕ, ಕೇವಲ ರಾಜಕಾರಣ ದೃಷ್ಟಿಯಿಂದ ಸಾಹಿತ್ಯಸಮ್ಮೇಳನದ ಅಧ್ಯಕ್ಷರ ಆಯ್ಕೆ ನಡೆಯುತ್ತಿತ್ತು. ಆಗ ಅಧ್ಯಕ್ಷರಿಗೆ ಸಾಹಿತ್ಯಿಕ ಅಧಿಕಾರ ಇದ್ದೇ ತೀರಬೇಕೆಂಬ ನಿಯಮವೇನೂ ಇರಲಿಲ್ಲ. ಸಾಮಾಜಿಕ ಧುರೀಣತ್ವ, ಸರಕಾರದ ಉಚ್ಚಾಧಿಕಾರ— ಈ ದೃಷ್ಟಿಯನ್ನಿರಿಸಿಕೊಂಡು, ಅಧ್ಯಕ್ಷರ ಆಯ್ಕೆಯನ್ನು ನಡೆಸಬೇಕಾಗುತ್ತಿತ್ತು. ಆಗ ಕನ್ನಡ ಭಾಷೆಗೆ ಸರಿಯಾದ ಸ್ಥಾನವನ್ನು ದೊರಕಿಸಿಕೊಡಬೇಕಾಗಿದ್ದಿತಾದುದರಿಂದ, ಅಂತಹ ಅಧ್ಯಕ್ಷರಿಂದಲೇ ಪ್ರಯೋಜನ ದೊರೆಯುತ್ತಿದ್ದಿತು. ಇಂದು ಕಾಲವು ಪೂರ್ಣ ಬದಲಾಗಿದೆ. ಕರ್ನಾಟಕದಲ್ಲಿ—ಕನ್ನಡಿಗರ ಹೃದಯದಲ್ಲಿ—ಕನ್ನಡನುಡಿಗೆ ಭದ್ರವಾದ ಸ್ಥಾನವು ದೊರೆತುಬಿಟ್ಟಿದೆ. ಈಗ ಕನ್ನಡನುಡಿ ಕನ್ನಡಿಗರನ್ನು ಬೆಳಕಿನ ದಾರಿಯಿಂದ ಕರೆದೊಯ್ಯಬೇಕಾದರೆ, ಅದು ಎಂತಹ ಬಲವನ್ನು ಬೆಳೆಸಿಕೊಳ್ಳಬೇಕು—ಎಂತಹ ಕಾರ್ಯಗಳನ್ನು ಮಾಡುತ್ತ ಮುಂದುವರೆಯಬೇಕು—ಎಂಬ ಆಂತರಂಗಿಕ ವಿಚಾರವನ್ನು ನಾವು ಮಾಡಬೇಕಾಗಿದೆ. ಅದಕ್ಕೆ ನಿಜವಾದ ಸಾಹಿತ್ಯಿಕರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕಲ್ಲದೆ, ರಾಜಕೀಯ-ಸಾಮಾಜಿಕ ಧುರೀಣರನ್ನಲ್ಲ; ಸರಕಾರದ ಉಚ್ಚಾಧಿಕಾರಿಗಳನ್ನಲ್ಲ! ಹಿಂದಿನ ದೃಷ್ಟಿಯಿಂದ ವಿಚಾರ ಮಾಡಿದಾಗಲೂ ಈ ಸಲದ ಅಧ್ಯಕ್ಷೀಯ ಆಯ್ಕೆ ತುಂಬಾ ಉಚಿತವಾದುದಾಗಿದೆಯೆಂದು ಹೇಳಬಹುದು. ಶ್ರೀ. ಕಾರಂತರು ಏಕಾಂತಾಪೇಕ್ಷಿಗಳಾದ ಸಾಹಿತ್ಯಿಕರು ಮಾತ್ರವೇ ಅಲ್ಲ; ಲೌಕಿಕವನ್ನೂ ರಾಜಕಾರಣವನ್ನೂ ಚೆನ್ನಾಗಿ ಅರಿತವರು. ಅನೇಕಜನ ರಾಜಕಾರಣಿಗಳಂತೆ ಕರ್ನಾಟಕದ ವಿಚಾರದಲ್ಲಿ ಅವರು ಭಾವನಾರಹಿತರಲ್ಲ; ಕನ್ನಡನಾಡು ರಾಜಕೀಯ-ಸಾಂಸ್ಕೃತಿಕಗಳೆರಡೂ ರೀತಿಯಲ್ಲಿಯೂ ಒಂದಾಗಿ ಬಾಳಬೇಕೆಂಬ ಸದ್ಭಾವವನ್ನು ಇರಿಸಿಕೊಂಡವರು. ಅದಕ್ಕಾಗಿ ತನು-ಮನ-ಧನಗಳಿಂದ ದುಡಿಯುತ್ತಿರುವವರು. ನಾಡಿಗರು ಯೋಗ್ಯ ಸಹಕಾರ-ಸಹಾನುಭೂತಿಗಳನ್ನು ಒದಗಿಸಿದರೆ, ಅವರ ಅಧ್ಯಕ್ಷೀಯ ಅವಧಿಯ ಚಟುವಟಿಕೆಗಳು, ಕನ್ನಡ ಸಾಹಿತ್ಯ-ಸಂಸ್ಕೃತಿಗಳ ಅಭಿವೃದ್ಧಿಗೆ ಪೋಷಕವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಸಮ್ಮೇಳನದ ಕಾರ್ಯಕಲಾಪ

ನಮ್ಮ ಸಾಹಿತ್ಯಸಮ್ಮೇಳನದ ಕಾರ್ಯಕಲಾಪಗಳಿಗೆ ಇನ್ನು ಮೇಲೆ ಒಂದು ಹದಗಾರಿಕೆ ಬರಬೇಕಾಗಿದೆ. ಇಂದಿನ ಸ್ವತಂತ್ರಭಾರತದಲ್ಲಿ ಕನ್ನಡಿಗರ ಜೀವನವು ವಿವಿಧಮುಖವಾಗಿ ಬೆಳೆಯುತ್ತಲಿದೆ. ಜೀವನವು ವಿಶಾಲವಾದಂತೆಲ್ಲ ನಮ್ಮ ಸಾಹಿತ್ಯಪ್ರಪಂಚವೂ ವಿಶಾಲವಾಗುತ್ತಲಿದೆ. ನಾವೀಗ ಈಗ ಹೊಸಹೊಸ ದಾರಿಯಲ್ಲಿ ನಡೆಯಬೇಕಾಗಿದೆ. ಹೊಸಹೊಸ ಸಾಮಾಜಿಕ ರಾಜಕೀಯ ಕಟ್ಟುಗಳಿಗೆ ಒಳಗಾಗಬೇಕಾಗಿದೆ. ನಾವು ನಡೆಯುವ ದಾರಿಯೂ ಒಳಗಾಗಬೇಕಾದ ಕಟ್ಟು-ಕಟ್ಟಳೆಗಳೂ ಇನ್ನೂ ಪ್ರಯೋಗಾವಸ್ಥೆಯಲ್ಲಿ ಇರುವುದರಿಂದ, ಒಂದು ಬಗೆಯ ಸಂಕ್ರಮಣಾವಸ್ಥೆಯಲ್ಲಿ ನಾವು ಇದ್ದಂತೆ ಇದ್ದೇವೆ. ಹಳೆಯುದರ ಮೋಹ ಇನ್ನೂ ಅಳಿದಿಲ್ಲ; ಹೊಸದನ್ನು ಇನ್ನೂ ಮೈಗೂಡಿಸಿಗೊಂಡಿಲ್ಲ. ಸಂಪೂರ್ಣ ತಿಳಿವಳಿಕೆಯನ್ನು ಮಾಡಿಕೊಳ್ಳದೆ ಹಳಬರು ಹೊಸದನ್ನು ಬೈಯುತ್ತಲಿದ್ದಾರೆ; ಹೊಸಬರು ಹಳೆಯುದನ್ನು ಬೈಯುತ್ತಲಿದ್ದಾರೆ. ಆಧುನಿಕ ಲಲಿತಸಾಹಿತ್ಯದಲ್ಲಿ ಈ ಬೈದಾಟವು ಸಾಕಷ್ಟು ಉಗ್ರರೂಪವನ್ನು ತಾಳಿದುದು ಕಣ್ಣಿಗೆ ಬೀಳುತ್ತಲಿದೆ. ಆದುದರಿಂದ ಸಾಹಿತ್ಯಸಮ್ಮೇಳನದಂತಹ ಗಂಭೀರವಿಚಾರದ ಕಾರ್ಯನಿಷ್ಠ ಸಂಸ್ಥೆಗಳು, ಈ ಬೈದಾಟದಿಂದ ದೂರವೇ ಉಳಿಯಬೇಕು. ಕನ್ನಡ ಸಾಹಿತ್ಯದ ಸಮೃದ್ಧಿ-ಅಭಿವೃದ್ಧಿಗಳಿಗಾಗಿ ಮಾಡಬೇಕಾದ ವಾದ-ವಿವಾದರಹಿತವಾದ ಬೇರೆ ಮಹತ್ತ್ವದ ಕಾರ್ಯಗಳು ಸಾಕಷ್ಟು ಇವೆ. ಮೈಸೂರು ಸಮ್ಮೇಳನದಲ್ಲಿ ಸೇರಿದ ಸಾಹಿತ್ಯಿಕರು, ಆ ಮೂಲಭೂತ ಶಾಶ್ವತ-ಸರ್ವಜನಾವಶ್ಯಕ ಸಾಹಿತ್ಯಿಕ ಕಾರ್ಯಗಳನ್ನು ಕುರಿತು ಚರ್ಚಿಸಿ, ಅವು ಸುಗಮವಾಗಿ ಸಾಗುವ ಬಗೆಗಳನ್ನು ವಿಚಾರಮಾಡಬೇಕು. ನಮ್ಮ ನೆರೆಯ ಭಾಷೆಗಳ ಪ್ರಗತಿಯನ್ನು ನೋಡಿದರೆ, ಕನ್ನಡಭಾಷೆಯಲ್ಲಿ ವಿಧಾಯಕ ಕಾರ್ಯಗಳು ಎಷ್ಟೆಷ್ಟೋ ಆಗಬೇಕಾಗಿವೆಯೆಂಬುದು ಒಡನೆ ಕಾಣದೆ ಇರದು. ನಮ್ಮ ಜನತೆಯಿಂದಲೂ ಸರಕಾರದಿಂದಲೂ ಅವಶ್ಯಕ ನೆರವನ್ನು ಪಡೆದು ಕೋಶ, ಜ್ಞಾನಕೋಶ, ಇತಿಹಾಸ, ಸಾಹಿತ್ಯಸಂಶೋಧನ, ಸಾಹಿತ್ಯಪ್ರಕಾಶನ ಇವುಗಳನ್ನು ಕೈಕೊಂಡು ಯೋಗ್ಯರೀತಿಯಿಂದ ಕಾರ್ಯವನ್ನು ನಿರ್ವಹಿಸುವುದು ಇಂದು ಅತ್ಯಗತ್ಯ ಮಾತಾಗಿದೆ. ಮೈಸೂರುರಾಜಧಾನಿಯಲ್ಲಿ ಸೇರುವ ಸಮ್ಮೇಳನ ಕಾರ್ಯಕಲಾಪಗಳು ಈ ದಾರಿಯಿಂದ ನಡೆಯಬೇಕೆಂದು ನಮ್ಮ ಹಾರಿಕೆ.

ಸುದೈವದಿಂದ ಈ ಸಲ ವಿಧಾಯಕ ಕಾರ್ಯಪ್ರಿಯರಾದ ಅಧ್ಯಕ್ಷರು ದೊರೆತಿದ್ದಾರೆ. ಆದರಿಂದ ಸಮ್ಮೇಳನವೂ ಗೋಷ್ಠಿಗಳೂ ಬರಿ ಒಣಮಾತಿನ ಸಂತೆಗಳಾಗದೆ, ಭವಿಷ್ಯದ ಪ್ರಗತಿಯ ಬಗೆಗೆ ವಿಚಾರಮಾಡಿ, ಯೋಜನೆಗಳನ್ನು ಗೊತ್ತುಪಡಿಸಿ, ಅವು ಕಾರ್ಯಕಾರಿಯಾಗುವಂತಹ ಕಾರ್ಯಕ್ರಮಗಳನ್ನು ಸಿದ್ಧಪಡಿಸಬೇಕು.

ನಾಡ ನುಡಿ

卐

ಗೋವೆಯ ಸ್ವಾತಂತ್ರ್ಯಸಮರ

ಪ್ರಸವಾ ಪಕ್ಷದವರು ಗೋವೆಯ ಸ್ವಾತಂತ್ರ್ಯ ಚಳವಳಿಯ ಕಡೆಗೆ ಲಕ್ಷ್ಯಕೊಡಲು ನಿರ್ಧರಿಸಿದಂದಿನಿಂ ಅಲ್ಲಿಯ ಪರಿಸ್ಥಿತಿಯು ದಿನದಿನಕ್ಕೆ ಉಗ್ರವಾಗುತ್ತ ಹೊರಟಿದೆ. ಮಧು ಗೋರೆ-ಬಾಪಟ-ರವರ ನೇತೃತ್ವದಲ್ಲಿ ಒಂದು ಸತ್ಯಾಗ್ರಹಿಗಳ ತಂಡ ಹೊರಟು ಗೋವೆಯಲ್ಲಿ ನುಗ್ಗಿ ಅಲ್ಲಿಯ ಸ್ವಾತಂತ್ರ್ಯಸಮರಕ್ಕೊಂದು ವಿಶಿಷ್ಟ ಬಲವನ್ನು ತಂದುಕೊಟ್ಟಿತು. ಆಮೇಲೆ ಶ್ರೀ ಲಿಮಯೆಯವರ ಧುರೀಣತ್ವದಲ್ಲಿ ಇನ್ನೊಂದು ಸತ್ಯಾಗ್ರಹಿಗಳ ಪಂಗಡ ಗೋವೆಯ ಗಡಿಯನ್ನು ದಾಟಿ ಒಳಸೇರಿ, ಅದರ ಬಲವನ್ನು ಇಮ್ಮಡಿ ಬೆಳೆಸಿತು. ಈಗ ಭಾರತದಲ್ಲಿಯ ಅನೇಕ ಸತ್ಯಾಗ್ರಹಿಗಳ ತಂಪುಗಳು ಗೋವೆಯ ಪ್ರದೇಶವನ್ನು ಪ್ರವೇಶಿಸಲು ಸಿದ್ಧತೆಯನ್ನ ನಡೆಸಿವೆ. ಬರಲಿರುವ ಆಗಸ್ಟ್ ೧೫ರಂದು ಗೋವಾ ಪ್ರದೇಶದಲ್ಲಿ ತೀಕ್ಷ್ಣವಾದ—ವ್ಯಾಪಕವಾದ— ಸತ್ಯಾಗ್ರಹಸಮರವನ್ನು ಹೂಡಬೇಕೆಂದು ಗೋವಾ ರಾಷ್ಟ್ರೀಯ ಕಾಂಗ್ರೆಸ್ಸಿನವರು ನಿರ್ಣಯಿಸಿದ್ದಾರೆ.

ಗೋವೆಯ ಜನತೆಯ ಮತ್ತು ಅವರಿಗೆ ಸಹಕಾರ ಕೊಡಲು ಹೊರಟ ಭಾರತೀಯರ ಚಟುವಟಿಕೆಗಳು ನ್ಯಾಯಮಾರ್ಗದುವಾಗಿವೆ; ಮಾನವಸಹಜದಾದುವಾಗಿವೆ. ಆದರೆ ಅವನ್ನು ಹತ್ತಿಕ್ಕಲು ಹವಣಿಸುವ ಗೋವೆಯ ಸರಕಾರದ ಪ್ರಯತ್ನಗಳು ಅನ್ಯಾಯದುವಾಗಿವೆ; ಅಮಾನುಷವೆನಿಸುವಂತಹವಾಗಿವೆ. ನಿಸರ್ಗ ಸಿದ್ಧವಾದ ಹಕ್ಕು-ಬಾಧ್ಯತೆಗಳಿಗಾಗಿ ನಿಃಶಸ್ತ್ರರಾಗಿ ಸತ್ಯದ ದಾರಿಯಿಂದ ಚಳವಳಿಯನ್ನು ನಡೆಯಿಸಿರುವ ಸತ್ಯಾಗ್ರಹಿಗಳನ್ನು, ಪೋರ್ತುಗೀಜ್ ಪೋಲೀಸರು ಪೈಶಾಚ್ಯವೃತ್ತಿಯಿಂದ ವಧಿಸುತ್ತಾರೆ. ಎಚ್ಚರ ತಪ್ಪುವಂತೆ—ಕೈಕಾಲುಗಳು ಮುರಿದು ಊನಾಗುವಂತೆ—ಹೊಡೆಯುತ್ತಿದ್ದರೂ, ಅದಕ್ಕೆ ಬೆದರದೆ ಸತ್ಯಾಗ್ರಹಕೆ ಸನ್ನದ್ಧರಾಗಿ ಮುಂದುವರಿಯುತ್ತಲಿರುವ ಭಾರತೀಯರ ದೇಶಭಕ್ತಿಯನ್ನೂ ಸ್ವಾತಂತ್ರ್ಯ ಪ್ರೀತಿಯನ್ನೂ ಪ್ರಪಂಚವು ಇಂದು ಕುತೂಹಲಿಯಾಗಿ ನೋಡುತ್ತಿರುವುದು. ಇಂತಹ ನಿಃಶಸ್ತ್ರ ಪ್ರತೀಕಾರದಿಂದಲೇ ಭಾರತೀಯರು ತಮ್ಮ ಮಹಾರಾಷ್ಟ್ರವನ್ನು ಸ್ವತಂತ್ರಗೊಳಿಸಿದುದು ಅದಕ್ಕೆ ಗೊತ್ತಿಲ್ಲವೆಂದಲ್ಲ. ಆದರೆ, ಪೋರ್ತುಗೀಜರಂತಹ ಅಸಂಸ್ಕೃತ-ಹುಂಬರೊಂದಿಗಿನ ಹೋರಾಟದಲ್ಲಿ, ಈ ನಿಃಶಸ್ತ್ರ ಪ್ರತೀಕಾರವು ಯಾವ ಪರಿಣಾಮವನ್ನು ಪಡೆಯುವುದೋ— ಎಂದು ಪ್ರಪಂಚದ ಜನರಿಗೆಲ್ಲ ಆತುರ! ಅಶ್ವತ್ಥದ ಬೀಜ ಹದಗೊಳಿಸಿದ ಭೂಮಿಯಲ್ಲಿ ಬಿದ್ದರೇನು, ಹದಗೊಳಿಸದಿದ್ದ ಭೂಮಿಯಲ್ಲಿ ಬಿದ್ದರೇನು—ಅದು ಮೊಳೆತು ಮಹಾವೃಕ್ಷವಾಗಲೇಬೇಕು. ಗೋಮಾಂತಕೀಯರ ಸ್ವಾತಂತ್ರ್ಯದ ಆಕಾಂಕ್ಷೆ, ಪವಿತ್ರವಾದುದು; ನ್ಯಾಯವಾದುದು - ಅವರು ಈ ಸ್ವಾತಂತ್ರ್ಯ-ಸಮರದಲ್ಲಿ ವಿಜಯಿಗಳಾಗುವುದು ಖಂಡಿತವಾದ ಮಾತು.

ಕಾಶ್ಮೀರ ಪ್ರಕರಣದ ಒಡೆಯದ ಒಗಟು.

ಪಾಕಿಸ್ತಾನ್-ಭಾರತಗಳಲ್ಲಿ ಸದ್ಭಾವ ಬೆಳೆದು ಸ್ನೇಹಫಲಿಸುವುದೆಂಬ ನಿರೀಕ್ಷೆಯಲ್ಲಿರುವಾಗಲೇ ಭಾರತದ ಜನತೆಯನ್ನು, ಪಾಕಿಸ್ತಾನದ ಮುಖ್ಯಮಂತ್ರಿಗಳು ಅಲ್ಲಲ್ಲಿ ಆಡಿದ ಮಾತುಗಳೂ, ಪಾಕಿಸ್ತಾನದಲ್ಲಿಯ ವ್ಯಕ್ತಿ-ಸಂಸ್ಥೆಗಳು ನಡೆಸಿರುವ ಚಟುವಟಿಕೆಗಳೂ ನಿರಾಶರನ್ನಾಗಿ ಮಾಡಿವೆ. ಕಾಶ್ಮೀರದ ಸುರಕ್ಷಿತತೆಗಾಗಿ ಭಾರತರಾಷ್ಟ್ರವು ಎಂತಹ ಮಹಾತ್ಯಾಗವನ್ನು ಮಾಡಿದೆಯೆಂಬುದನ್ನು ಜಗತ್ತಿನ ಜನತೆಯೂ ಅರಿತಿದೆ; ಕಾಶ್ಮೀರದಲ್ಲಿಯ ಪ್ರಜಾವರ್ಗವೂ ಮನವರಿಕೆ ಮಾಡಿಕೊಂಡಿದೆ ಇಂದು ಕಾಶ್ಮೀರದ ಆವಶ್ಯಕತೆಯು, ಪಾಕಿಸ್ತಾನಕ್ಕಿಂತ—ಅದರ ಹಿಂದೆ ನಿಂತು ಅದರ ಕೈಕಾಲುಗಳನ್ನು ಕುಣಿಸಹಚ್ಚಿರುವ—ಅಮೇರಿಕೆಗೆ ಹೆಚ್ಚಾಗಿ ಇದೆ. ಆದುದರಿಂದಲೇ ಭಾರತ-ಪಾಕಿಸ್ತಾನ ಮುಖ್ಯಮಂತ್ರಿಗಳಿಬ್ಬರಲ್ಲಿ ನಡೆದ ಮಾತುಗಳು, ಭಾರತ-ಪಾಕಿಸ್ತಾನಗಳಲ್ಲಿಯ ಜನರಿಗೆ ಅಜ್ಞಾತವಾಗಿ ಉಳಿದಿದ್ದರೂ, ಅಮೇರಿಕೆಯಲ್ಲಿ ಅವು ಜ್ಞಾತವಾದಂತೆ ಪ್ರಚಾರವು ನಡೆದಿದೆ. ಆ ಪ್ರಚಾರದಲ್ಲಿ ಪಾಕಿಸ್ತಾನದ ಜನತೆಯನ್ನು ಕೆಣಕಿ-ಕೆರಳಿಸುವಂತಹ ಮಾತುಗಳೂ ಇರುವುವು ಅಮೇರಿಕೆಯ ಈ ಕುಟಿಲ ರಾಜಕಾರಣದ ಪರಿಣಾಮದಿಂದಲೇ ಇರಬಹುದು:- ಪಾಕಿಸ್ತಾನದಲ್ಲಿ ರೂಪುಗೊಂಡಿದ್ದ 'ಭಾರತ-ಪಾಕಿಸ್ತಾನ ಸದ್ಭಾವಸಮಿತಿ' ಎಂಬ ಸಂಸ್ಥೆಯು 'ಕಾಶ್ಮೀರ ತನಗೆ ಸಿಕ್ಕದೆ ಹೋದರೆ ಭಾರತ-ಪಾಕಿಸ್ತಾನಗಳಲ್ಲಿ ಸದ್ಭಾವ ಬೆಳೆಯುವುದೆಂತು?' ಎಂಬರ್ಥದ ನಿರ್ಣಯಾತ್ಮಕ ನುಡಿಗಳನ್ನಾಡಿ, ತನ್ನ ಅವತಾರಕಾರ್ಯವನ್ನು ನಿಲ್ಲಿಸಿಬಿಟ್ಟಿದೆ. ಅಂತೂ ಪಾಕಿಸ್ತಾನಿಗಳ ದೃಷ್ಟಿಯಲ್ಲಿ ಕಾಶ್ಮೀರ ತಮ್ಮದಾಗದೆ ಹೋದರೆ, ಭಾರತದೊಂದಿಗೆ ಸ್ನೇಹ-ಸಹಾನುಭೂತಿಗಳು ಬೆಳೆಯುವಂತಿಲ್ಲ. ಈ ಸ್ನೇಹ-ಸಹಾನುಭೂತಿಗಳ ಲಾಲಸೆಯಿಂದ ಭಾರತವು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಕಾಣಿಕೆಯೆಂದು ಒಪ್ಪಿಸುವುದೆ? ಭಾರತದ ಮುಖ್ಯಮಂತ್ರಿಗಳ ಗಂಭೀರಮೌನ, ಪಾಕಿಸ್ತಾನ್ ಮುಖ್ಯಮಂತ್ರಿಗಳ ಡುಡುಕಿನ ಮಾತುಗಳು, ಅಮೇರಿಕೆಯ ಪತ್ರಿಕೆಗಳು ನಡೆಸಿದ ವಿಚಿತ್ರಪ್ರಚಾರ—ಇವೆಲ್ಲ ಸೇರಿ, ಕಾಶ್ಮೀರದ ಪ್ರಕರಣವನ್ನು ಒಂದು ಒಡೆಯಲಾರದ ಒಗಟವನ್ನಾಗಿ ಮಾಡಿಬಿಟ್ಟಿವೆ. ಈ ಒಗಟು ಒಡೆಯದೆ, ಕಾಶ್ಮೀರಿಗಳ ರಾಜಕೀಯ ಜೀವನದಲ್ಲಿ ನಿಸ್ಸಂದಿಗ್ಧತೆಯು ಉಳಿಯುವುದಿಲ್ಲ; ಭಾರತೀಯರಲ್ಲಿ ತಲೆದೋರಿದ ಅಸಮಾಧಾನ—ಕುತೂಹಲಗಳು ಮಾಯವಾಗುವಂತಿಲ್ಲ.

ಮುಖ್ಯಪ್ರಧಾನರ ರಸಿಯಾ ಪ್ರಯಾಣ

ನಮ್ಮ ರಾಷ್ಟ್ರದ ಮುಖ್ಯಮಂತ್ರಿಗಳು ಇಂದು ರಸಿಯಾ ರಾಜ್ಯಕ್ಕೆ ಆಮಂತ್ರಿತ ಅತಿಥಿಗಳಾಗಿ ಹೊರಟಿದ್ದಾರೆ. ಮುಖ್ಯಮಂತ್ರಿಗಳ ವ್ಯಕ್ತಿತ್ವವು ಇಂದು ಜಗತ್ತನ್ನೆಲ್ಲ ಬೆರಗುಗೊಳಿಸಿದೆಯೇನೋ ಸರಿಯೇ ಸರಿ ರಸಿಯದ ಜನತೆಯೆಲ್ಲ ಅವರ ದರ್ಶನಕ್ಕಾಗಿ ಕುತೂಹಲಿಗಳಾಗಿ-

ಬಹುದು. ಅಲ್ಲಿಯ ಸರಕಾರದಿಂದ ಭಾರತದ ಮುಖ್ಯಮಂತ್ರಿಗಳಾದ ಜವಾಹರಲಾಲರು ರಶಿಯಾದಲ್ಲಿ ಯಾವ ಮಾತನ್ನು ಸಾಧಿಸುವರೋ—ಎಂಬುದನ್ನು ನಾವೆಲ್ಲ ನಿರೀಕ್ಷಿಸಬೇಕಾಗಿದೆ. ಹಿಂದೊಮ್ಮೆ ಅಮೇರಿಕೆಯೂ ಇವರನ್ನು ಕರೆಯಿಸಿ ನಭೂತೋ ನಭವಿಷ್ಯತಿ—ಎಂಬಂತೆ ಸ್ವಾಗತಿಸಿತು ಸ್ವಾಗತದ ಮೋಹಜಾಲವನ್ನೊಡ್ಡಿ ಇವರನ್ನು ತನ್ನ ಜೇಬಿನಲ್ಲಿ ಹಾಕಿಕೊಳ್ಳಬೇಕೆಂದು ಹೊಂಚುಹಾಕಿತು. ಆದರೆ ಮಹಾತ್ಮರ ಪರಳರಾಜಕಾರಣರಂಗದಲ್ಲಿ ಪಳಗಿದ ಜವಾಹರರು, ಅಮೇರಿಕೆಯ ಧುರೀಣರನ್ನು ನಿರಾಶೆಗೊಳಿಸಿದರು. ಅವರ ರಾಜಕೀಯ ಸ್ವಾರ್ಥದ ಬಲೆಯಲ್ಲಿ ಸಿಕ್ಕಿಕೊಳ್ಳದೆ ಪಾರಾಗಿ ಬಂದರು. ಅಮೇರಿಕೆಯಂತೆಯೆ ರಶಿಯ ಸರಕಾರಕ್ಕೂ ರಾಜಕೀಯ ಸ್ವಾರ್ಥವಿದ್ದು, ಅದನ್ನು ಸಾಧಿಸಿಕೊಳ್ಳಲು ಜವಾಹರಲಾಲರನ್ನು ಉಪಯೋಗಮಾಡಿಕೊಳ್ಳಬೇಕೆಂಬ ಮನಸ್ಸುಳ್ಳದಾಗಿದ್ದರೆ, ಅದೂ ಅಮೇರಿಕೆಯಂತೆ ನಿರಾಶೆಗೊಳಗಾಗಬೇಕಾದುದು ಖಚಿತವಾದ ಮಾತು. ಇನ್ನು ಜಾಗತಿಕ ಶಾಂತಿಯ ಸದುದ್ದೇಶವೇ ರಶಿಯ ಸರಕಾರಕ್ಕಿದ್ದರೆ, ಜವಾಹರಲಾಲರ ರಶಿಯಾ ಸಂದರ್ಶನವು ಜೇನು-ಸಕ್ಕರೆ ಕೂಡಿದಂತಹ ಮಧುರ ಫಲವನ್ನು ಲೋಕಕ್ಕೆ ಕೊಡಬಹುದು. ಹಾಗಾಗಬಹುದೆಂಬ ಶ್ರದ್ಧೆ-ವಿಶ್ವಾಸಗಳು ಜವಾಹರಲಾಲರಲ್ಲಿ ಇದ್ದಂತಿವೆ. ರಶಿಯಾವು ಜವಾಹರಲಾಲರ ಸರಳ ರಾಜಕೀಯ ಮಾರ್ಗವನ್ನು ಒಪ್ಪಿಕೊಳ್ಳಲು ಸಿದ್ಧವಾದರೆ, ಪ್ರಪಂಚದ ಹಲವಾರು ರಾಜಕೀಯ ಸಮಸ್ಯೆಗಳು ಬಿಡಬಹುದು. ಅದರೊಂದಿಗೆ ಭಾರತದ ತಲೆಯನ್ನು ತಿನ್ನುತ್ತಲಿರುವ ಕಾಶ್ಮೀರ್-ಪೋರ್ತುಗೀಜ್ ಭಾರತಗಳ ಸಮಸ್ಯೆಯ ಪರಿಹಾರವೂ ಆಗಬಹುದು. ಅಂತೊಂದು ಮಹತ್ತ್ವದ ಉದ್ದೇಶವನ್ನು ಸಾಧಿಸಲು ನಮ್ಮ ಮಹಾಮಂತ್ರಿಗಳು ಹೊರಟಿದ್ದಾರೆ. ಅವರಿಗೆ ಎಲ್ಲ ಬಗೆಯ ಮಂಗಲವೂ ಗೆಲವೂ ಉಂಟಾಗುವಂತೆ ನಾವು ಭಾಗ್ಯವಿಧಾತನಲ್ಲಿ ಹಾರಯಿಸೋಣ!

ಕಾ. ಭೈ.

(೪೦ನೆಯ ಪುಟದಿಂದ ಮುಂದುವರಿದುದು)

ಸಂವಾದವು ವಿಚಾರಪೂರಿತವಾಗಿವೆ. ಅವಳ ಮನಸ್ಸಿನ ಕ್ಷೋಭೆಗೆ ನೆಲೆವಡೆದ ವಿಷಯವನ್ನು ಸಕಾರಣವಾಗಿ ಓದುಗನ ಮನಸ್ಸಿನಲ್ಲಿ ಸ್ಪಷ್ಟವಾಗಿ ಚಿತ್ರಿತವಾಗುವಂತೆ ಚಿತ್ರಿಸಿದ್ದಾರೆ.

ರಾಧಾಬಾಯಿಯ ವಿಷಯದೊಂದಿಗೆ ಹೆಣೆದುಕೊಂಡ ಸ್ಟೇಷನ್ನಿನ ಗದ್ದಲವೂ, ರೈಲಿನಲ್ಲಿರುವ ಗದ್ದಲವೂ ನಿತ್ಯಜೀವನದ ಪ್ರತೀಕ. ಧರ್ಮ, ಅರ್ಥ, ಕಾಮದ ವಿಷಯವಾಗಿ ವ್ಯಾಸಮಹರ್ಷಿಯ ಶ್ಲೋಕದ ಆಧಾರದಿಂದ, ಧರ್ಮಮಾರ್ಗದಲ್ಲಿ ಎಲ್ಲರೂ ಯಾಕೆ ನಡೆಯುವುದಿಲ್ಲವೆಂಬುದನ್ನು ಸ್ಪಷ್ಟಪಡಿಸಲು ಯತ್ನಿಸುತ್ತಾರೆ. 'ಸುಖತೃಪ್ತಿಗಾಗಿ ಅಧರ್ಮಾಚರಣೆ ಅವಶ್ಯವಿಲ್ಲ. ಹೀಗಿದ್ದರೂ ಅಧರ್ಮಾಚರಣೆಯ ಅಭಿರುಚಿ ಪರಂಪರಾಗತವಾಗಿದೆ' ಎನ್ನುವುದರಿಂದ ರಾಧಾಬಾಯಿಯು ಅದಕ್ಕೆ ಹೊರತಲ್ಲವೆಂಬುದು ಕತೆಯನ್ನು ಓದಿದ ಮೇಲೆ ಸ್ಪಷ್ಟವಾಗುವುದಿಷ್ಟೆ!

ಇದರೊಂದಿಗೆ ಸಮಾಜದಲ್ಲಿ ವಿಧವೆಯ ಬವಣೆಯೂ ಸೇರಿಕೊಂಡಿದೆ. ಆದರೆ ರಾಧಾಬಾಯಿಯವರಿಗೆ ಆರ್ಥಿಕಅಡಚಣೆಗಳಿಲ್ಲವೆಂಬುದು, ಅವರು ನೌಕರಿಹೋಗಲು ಅಧ್ಯಾಪಿಕೆಯರಾದುದು ಎಂಬ ವಾಕ್ಯಾಧಾರದಿಂದ ತಿಳಿಯುತ್ತದೆ. ಆದರೆ ಅವರಿಗೆ ಎಲ್ಲ ಸುಖಗಳೂ ಇದ್ದು, ನಿಜವಾದ ಸುಖವೆಂಬುದೇ ಇಲ್ಲವಾದಂತೆ ತೋರುತ್ತದೆ. ಮಾನವನು ಹಾತೊರೆಯುವುದು ಎಲ್ಲದಕ್ಕಿಂತಲೂ ಹೆಚ್ಚಾಗಿ ಲೈಂಗಿಕಸುಖಕ್ಕೆ. ಆ ಸುಖವು ಅವನ ಪಾಲಿಗೆ ಇಲ್ಲವಾದರೆ ಅವನ ಜೀವನ ಕಹಿಯೇ ಸರಿ! ರಾಧಾಬಾಯಿಯವರಿಗೆ ಯಾವ ಚಿಂತೆಯೂ ಇಲ್ಲ; ಅವರ ಮಗಳ ಮದುವೆಯಾಗದಿದ್ದುದರಿಂದಾಗಿ ಅವರ ಮನಸ್ಸು ಅಶಾಂತಿಯನ್ನಡೆದುದಲ್ಲ. ಆದರೆ "ಆ ಅಶಾಂತಿ ಅವಳಿಗಾಗಿಯೆ?" ಎಂಬುದರಿಂದ; ಅವಳು ಲೈಂಗಿಕಸುಖಕ್ಕಾಗಿ ಹಾತೊರೆಯುತ್ತಿದ್ದಳೆಂಬುದು ಸ್ಪಷ್ಟ. "ಹಾಗಾದರೆ—"

"ಹುಂ. ಏಕೆ? ಏಕೆ ಸುಮ್ಮನಾದೆ? ಹೇಳು. ಹೌದೇನು? ಒಪ್ಪು! ಹೆದರುವೆಯಾ" ಎಂದು ಅವರ ಮನ ಬಡಿದದ್ದು ಕೇಳುತ್ತಿದ್ದ ಆ ಧ್ವನಿಗೆ ಉತ್ತರವಾಗಿ ಲೇಖಕರು ಕಥೆಯಲ್ಲೇ ಇತ್ತಿದ್ದಾರೆ. ಅವಳ ಮನೋಭಾವನೆಯು ಮುಂದೆ ಸ್ಪಷ್ಟವಾಗುವುದು.

ಲೇಖಕರು ಟ್ರೇನ ಸನ್ನಿವೇಶವೊಂದರಲ್ಲಲ್ಲದೆ ಬೇರೆಲ್ಲಿಯೂ ಎಡಹಿಬೀಳಲಿಲ್ಲ. ಕಥೆಯ ಸನ್ನಿವೇಶಗಳನ್ನು ನಿರೂಪಿಸುವುದರಲ್ಲಿಯೂ ಲೇಖಕರು ಕೃತಾರ್ಥರಾದ್ದಾರೆ. ಓದುಗನಿಗೆ ಕುತೂಹಲವುಂಟಾಗುವಂತೆ ಕತೆಯ ಓಟಸಾಗಿದೆ. 'ಮುಂದೇನು?' ಎಂಬ ಪ್ರಶ್ನೆ ಅಲ್ಲಲ್ಲಿ ಬರುತ್ತದೆ. ಮನೋವಿಶ್ಲೇಷಣಾತ್ಮಕವೂ ಆಗಿದೆ. ಸಂಪಾದಕರೆಂದಂತೆ "ಲೈಂಗಿಕವಿಕೃತಿಗಳು ವಾತಾವರಣದ ನೆರವು ದೊರೆತರಂತೂ ಮೇರೆ ಮೀರಿ ವರ್ತಿಸುವವು." ಎಂಬುದು ನಮಗೆ ಕತೆಯೋದಿದ ಮೇಲೆ ಹೊಳೆಯುವುದು. ರಾಧಾಬಾಯಿಯವರಂತಹ ಅಧ್ಯಾಪಿಕೆಯರ ಪಾಡೇ ಹೀಗಾದ ಮೇಲೆ, ಉಳಿದ ಮಹಿಳೆಯರ ಪಾಡಾದರೋ ಹೇಗಿರಬೇಡ ಈ ಲೈಂಗಿಕಪ್ರವೃತ್ತಿಯಲ್ಲಿ?

ಕತೆಯು ರಸಪೂರ್ಣವಾಗಿದೆ. ಲೇಖಕರ ಸರಳ ಸುಂದರ ಶೈಲಿಯೂ, ಶೈಲಿಯ ಬಿಗುವೂ, ವಿಷಯನಿರೂಪಣೆಯ ಔಚಿತ್ಯವೂ, ಕಥನಕಲಾಕೌಶಲವೂ ಕತೆಯ ಮೆರುಗನ್ನು ಹೆಚ್ಚಿಸಿದೆ.

ಲೋಕದಲ್ಲಿ ಅಧರ್ಮವೆಂಬುದು ನಡೆಯದಿರಲು ಸಾಧ್ಯವೆ? ಅದೂ ಅಸಾಧ್ಯ. ದ್ರೌಪದಿಯಂಥ ಮಹಾಪತಿವ್ರತೆಯೂ ಕಣ್ವಾಶ್ರಮದಲ್ಲಿ ಫಲ ಮೇಲೇರಲು ನುಡಿದ ಮಾತನ್ನವಗಾಹಿಸಿದರೆ, ಸ್ತ್ರೀಗೆ ಚಂಚಲತೆಯು ಸಹಜ. ಅದು ಅವರಲ್ಲಿ ಪರಂಪರಾಗತವಾಗಿ ಬಂದದ್ದು. ಅದಕ್ಕೆ ಆತ್ಮಸಂಯಮಿಗಳಾಗುವಂತೆ, ಅವರು ಪವಿತ್ರ ವಾತಾವರಣದ ಕೋಟೆಯನ್ನು ಕಟ್ಟಿಕೊಳ್ಳಬೇಕಾಗುವುದು ಅವಶ್ಯವೆಂದು, ಈ ಕತೆಯು ಬೋಧಿಸುತ್ತಿದೆ.

ಪತಿವ್ರತೆ

(ಸಣ್ಣ ಕತೆ)

ಶ್ರೀ. ಪಾಂಡೇಯ ಬೇಚನ ಶರ್ಮಾ (ಉಗ್ರ), ಹೊಸದಿಲ್ಲಿ*

卐

ಯಾವುದೇ ದೇಶದಲ್ಲಿಯೂ ಯಾವುದೇ ಕಾಲದಲ್ಲಿಯೂ ಹೆಣ್ಣು-ಗಂಡುಗಳ ಹೃದಯಸಂಬಂಧವು ಸರ್ವತೋಮುಖ ಸುಮಧುರವಾಗಿರುವುದು ಅಪೂರ್ವ! ಹೀಗಿರುವಾಗ, ಹೃದಯದ್ರವವೇ ಇಲ್ಲದ ಸುಶಿಕ್ಷಿತೆ—ಸುಶೀಲೆಯಾದ ಅಕ್ಕ, ಏಳುಮಕ್ಕಳ ತಾಯಿಯಾಗಬೇಕಾದರೆ ಎಷ್ಟು ನೊಂದಿರಬೇಕು? ಎಷ್ಟು ಕಂಬನಿಯನ್ನು ಹರಿಸಿರಬೇಕು?

卐

ನನ್ನ ಆದರಕ್ಕೆ ಪಾತ್ರಳಾದ ಪ್ರಿಯ ಅಕ್ಕನ ಆತ್ಮವು, ಮರಣದ ನಂತರ ಸ್ವರ್ಗದಲ್ಲಿಯೆ ಇರಲಿ, ಮರ್ತ್ಯದಲ್ಲಿಯೆ ಇರಲಿ, ನರಕದಲ್ಲಿಯೇ ಇರಲಿ—ಅವಳಿಗೆ ಶಾಂತಿ ದೊರೆಯಲೆಂದು ಪರಮಪಿತೃವಾದ ಪರಮೇಶ್ವರನಲ್ಲಿ ನನ್ನ ಪ್ರಾರ್ಥನೆ. "ಮರಣದನಂತರ" ಎಂಬ ಮೇಲಿನ ಪ್ರಯೋಗವು ದುರ್ಬಲವಾಗಿದೆ. ನನ್ನ ತಿಳಿವಳಿಕೆಯ ಮಟ್ಟಿಗೆ, ನನ್ನ ಆದರಣೀಯ ಅಕ್ಕನನ್ನು ಕೊಂದಿದ್ದರು, ಅವಳ ಹತ್ಯೆಯನ್ನು ಮಾಡಿದ್ದರು. ಕೊಲೆಯನ್ನು ಬಹಳ ಜಾಣಾಕ್ಷತನದಿಂದ ಮಾಡಲಾಗಿತ್ತು. ಕೊಲೆಗಡಕನಾಗಲಿ, ಕೊಲೆಗಡಕರಾಗಲಿ, ಯಾರೂ ಕಾಯಿದೆಯ ಬಂಧನದಲ್ಲಿ ಎಂದೂ ಬರುವಂತಿರಲಿಲ್ಲ!

ತೀಕ್ಷ್ಣವಾದ ಚೂರಿಯ ಒಂದೇ ಹೊಡೆತದಿಂದ ಅವಳ ಕುತ್ತಿಗೆಯನ್ನು ಕೊಯ್ದು ಕೊಂದಿರಲಿಲ್ಲ; ವಿಷಕೊಟ್ಟು ಕೊಲ್ಲಲಿಲ್ಲ; ಆದರೆ ಜೀವನದ ಅಂತ್ಯದವರೆಗೂ ದಹಿಸಿ-ದಹಿಸಿ, ಅಳಿಸಿ-ಅಳಿಸಿ, ಪೀಡಿಸಿ-ಪೀಡಿಸಿ ಕೊಂದರು. ಉತ್ತರಪ್ರದೇಶದಲ್ಲಿಯ ಕೆಲವು ಬ್ರಾಹ್ಮಣರ ಕಥೆಗಳು ಕುಖ್ಯಾತವಾಗಿವೆ: ಮೇಲಿಂದ ಮೇಲೆ ಮದುವೆಯಾಗುವುದರಿಂದ ಪುನಃ ಪುನಃ ವರದಕ್ಷಿಣೆ ದೊರೆಯುವುದೆಂದು, ಮೇಲಿಂದ ಮೇಲೆ ತಮ್ಮ ಪತ್ನಿಯರನ್ನು ಒಂದಿಲ್ಲೊಂದು ರೀತಿಯಿಂದ ಕೊಂದುಹಾಕುತ್ತಾರೆ; ಆದರೆ ನನ್ನ ಪ್ರಿಯ ಅಕ್ಕನ ಕೊಲೆಯನ್ನು ಮೇಲಿನ ಕಾರಣಕ್ಕಾಗಿಯೂ ಮಾಡಿರಲಿಲ್ಲ. ಚಿಕ್ಕಂದಿನಿಂದ ತಂದೆಯ ಪ್ರೀತಿಯ ಮಗಳಾದುದರಿಂದ, ಒಳ್ಳೆಯ ಸ್ವಾತಂತ್ರ್ಯದಿಂದ ಆಟವಾಡುವ ಹುಡುಗಿಯಾಗಿದ್ದುದೇ ಅವಳ ಮರಣಕ್ಕೆ ಕಾರಣವಾಯಿತು.

---

* ಮೂಲಲೇಖಕರ ಹಿಂದೀಕತೆಯನ್ನು ಶ್ರೀಮತಿ ಸರೋಜಿನಿ ಮಳೇಬೆನ್ನೂರ ಬಿ. ಎ. ಅವರು ಕನ್ನಡಿಸಿದ್ದಾರೆ. ಸಂ. ಜ.

ಅವಳು, ಕೇವಲ ನಮ್ಮ ಓಣಿಯಲ್ಲಲ್ಲ; ಇಡೀ ಊರಿಗೇ ಕಲಿತವರಲ್ಲಿ, ವಿದುಷಿಗಳಲ್ಲಿ, ಬಿ. ಎ. ಪಾಸಾದವರಲ್ಲಿ ಮೊದಲಿಗಳಾಗಿದ್ದಳು. ಪ್ರಿಯ ಅಕ್ಕನ ತಂದೆಯು, ಒಬ್ಬ ಶ್ರೀಮಂತ ವಿಧವೆಯಿಂದ ಸಾಲತೆಗೆದುಕೊಂಡು, ಅವಳನ್ನು ಬಿ. ಎ. ವರೆಗೆ ಕಲಿಸಿದರು. ಆಗ, ಹುಡುಗಿಯರಿಗೆ ಕಲಿಸುವ ಬಗೆಗೆ ಮಾತನ್ನು ತೆಗೆಯುವುದೂ ಪಾಪವಾಗಿದ್ದಿತು. ಇವಳ ಶಿಕ್ಷಣಕ್ಕಾಗಿ ಆ ವಿಧವೆಯು ಎರಡುಸಾವಿರ ರೂ. ಗಳನ್ನು ಸಾಲವಾಗಿ ಕೊಟ್ಟಿದ್ದಳು. ಇದರ ಮೇಲಿಂದ ಅವಳು ಉದಾರಳಿದ್ದಳೆಂದಲ್ಲ, ಅಥವಾ ಸ್ತ್ರೀಸ್ವಾತಂತ್ರ್ಯ ಹಾಗೂ ಸ್ತ್ರೀ ಶಿಕ್ಷಣ ಸಮರ್ಥಕಳೆಂದೂ ಅಲ್ಲ. ಊರಿನವರಿಗೆಲ್ಲ ಮುಕ್ತಹಸ್ತದಿಂದ ಸಾಲ ಕೊಡುತ್ತಿದ್ದಳು—ಅಧಿಕವಾದ ಬಡ್ಡಿಯಿಂದ ಹಾಗೂ ಬೆಳ್ಳಿ-ಬಂಗಾರದ ಒಡವೆಗಳನ್ನು ಅಡವು ಇಟ್ಟುಕೊಂಡು! ಆದರೆ, ಅಕ್ಕನ ತಂದೆಗೆ ಅಲ್ಪ ಬಡ್ಡಿಯಿಂದ ಮತ್ತು ಯಾವ ಒಡವೆಗಳನ್ನೂ ಪ್ರತಿಯಾಗಿ ಇಟ್ಟುಕೊಳ್ಳದೆ ಸಾಲಕೊಟ್ಟಿದ್ದಳು. ಒಂದು ಸಲ, ಒಂದು ಮಾತಿಗಾಗಿ ಆ ಶ್ರೀಮಂತಳು, ಅಕ್ಕನ ಮೇಲೆ ಸಿಟ್ಟಿಗೆದ್ದಿದ್ದಳು. ಅದಕ್ಕಾಗಿ; ಅಕ್ಕನು ಆಯುಷ್ಯದ ಕೊನೆಯ ವರೆಗೆ ತನಗೆ ಆಭಾರಿಯಾಗಿರಬೇಕು; ಅವಳ ಪರಿವಾರ—ಅವಳ ಮರ್ಯಾದೆ—ಎಲ್ಲವೂ ತನ್ನ ಮುಷ್ಟಿಯಲ್ಲಿರಬೇಕು ಎಂಬ ಉದ್ದೇಶದಿಂದ ರೂ. ಗಳನ್ನು ಕೊಡುತ್ತಿದ್ದಳು. ಈ ಹಟಕ್ಕೆ ಕಾರಣವಿಷ್ಟೆ: ಪ್ರಿಯ ಅಕ್ಕನು ಬಾಲ್ಯದ ಚಂಚಲತೆಯಿಂದ ಒಂದು ದಿನ ಅವಳ ಮಗನೊಡನೆ ಮದುವೆಯಾಗಲು, ಅಪಮಾನಕರವಾದ ರೀತಿಯಿಂದ ಅಲ್ಲಗಳೆದಿದ್ದಳು.

ಹದಿನೈದು-ಹದಿನಾರು ವರುಷಗಳ ಹಿಂದಿನ ಮಾತು: ಅಂದು ನಮ್ಮ ಮ್ಯಾಟ್ರಿಕ್ ಪರೀಕ್ಷೆಯ ಪರಿಣಾಮ ತಿಳಿಯುವುದಿತ್ತು. ಪ್ರಿಯ ಅಕ್ಕ, ನಾನು ಮತ್ತು ಆ ವಿಧವೆಯ ಏಕಮಾತ್ರ ಪುತ್ರ ಚಂದ್ರವದನ—

ನೂರವರೂ ಪರೀಕ್ಷೆಗೆ ಕುಳಿತಿದ್ದೆವು. ಕಾಶಿಯಿಂದ ಬರುವ "ಲೀಡರ್" ಪತ್ರಿಕೆಯನ್ನು ತರಲು ಒಬ್ಬ ಮನುಷ್ಯನನ್ನು ಕಳಿಸಿಕೊಟ್ಟದ್ದು ನಮಗೆ ಗೊತ್ತಿತ್ತು. ಆದ್ದರಿಂದ ಅಕ್ಕ, ಅವಳ ತಂದೆ ಹಾಗೂ ನಾನು, ಮೂವರೂ ಪರಿಣಾಮವನ್ನು ನೋಡಲು ಅವರ ಮನೆಗೆ ಹೋದೆವು. ಪರಿಣಾಮವು ಮೂರುಗಂಟೆಗೆ ಬರುವುದಿತ್ತು. ಆದರೆ ಉತ್ಸುಕತೆಯ ಮೂಲಕ ಒಂದು ಗಂಟೆಗೇ ಅವರ ಮನೆಯಲ್ಲಿ ಹಾಜರಿದ್ದೆವು! ಅಲ್ಲಿ ಚಂದ್ರವದನ ಹಾಗೂ ಅಕ್ಕ ಇವರಿಬ್ಬರಲ್ಲಿ ಒಂದು ಚಿಕ್ಕ ಜಗಳವೇ ಆಯಿತು. ಚಂದ್ರವದನನು ಎಲ್ಲರೆದುರು ಅಕ್ಕನ ತಂದೆಯನ್ನು ಕೇಳಿದ: "ಕಾಕಾ, ಮುದ್ದುಮಗಳ ಕಣ್ಣುಗಳು ನೀಲಿ ಏಕೆ ಇವೆ?" "ಕಾಕಾ," ಅಕ್ಕನೂ ಕೂಡ ತಂದೆಗೆ "ಕಾಕಾ" ಎಂದೇ ಕರೆಯುತ್ತಿದ್ದಳು. "ಚಂದ್ರವದನನ ಹಲ್ಲುಗಳು ಹಳದೀ ಏಕಿವೆ?" "ಕಾಕಾ ಈಕೆ ನನ್ನನ್ನು ಸಿಟ್ಟಿಗೆಬ್ಬಿಸುತ್ತಾಳೆ. ಇವಳ ಮಾತಿನ ಉದ್ದೇಶ, ನಾನು ಹಲ್ಲುತಿಕ್ಕುವುದಿಲ್ಲವೆಂದಾಯಿತು." "ನೋಡು, ಇವನ ಕೂಡ ನಾನು ಮಾತು ಸಹ ಆಡಿದ್ದಿಲ್ಲ, ಆದರೂ ನನ್ನ ಕಣ್ಣು ನೀಲಿ ಇವೆ ಎಂತ ಯಾಕೆ ಅಂದ? ಈಗ ನಾನು, ಹೆಸರು ಚಂದ್ರವದನ ಅಂತ ಇದ್ದರೂ ಇವನ ಬಣ್ಣ ಇಷ್ಟು ಯಾಕ ಕಪ್ಪು ಅದ ಅಂತ ಕೇಳಿದರ?" "ಹುಡುಗಿ ಭಾಳ ಮಾತಾಡ್ತಾಳ!" ಶ್ರೀಮಂತಳು ಸಿಟ್ಟಿನಿಂದಲೇ ನುಡಿದಳು. "ಹಾಂಗಾದರ ಇಕಿನ್ನ ನಿಮ್ಮ ಸೊಸಿನ್ನ ಮಾಡಿಕೊಳ್ಳಿರಿ" ಅಕ್ಕನ ತಂದೆ ಹೇಳಿದರು. "ಇವರಿಬ್ಬರ ಜೋಡಿ ಛಲೋ ಅಗ್ತದ" "ಛೀ!" ಎಂದು ಮಾತು ಬಂದುಮಾಡಿ, "ನಾನು ಈ ಕರಪನ ಸಂಗಡ ಮದುವೆ ಆಗೂದಿಲ್ಲ!" ಎಂದು ಅಕ್ಕನು ಅಂದದ್ದು ನನಗೆ ನೆನಪಿದೆ. "ಹಿಂಗೇನು? ನಿನ್ನ ಸಲುವಾಗಿ ವಿಲಾಯತಿಯಿಂದ ಬಿಳೇ ಮನುಷ್ಯನ ಕರಿಸತೀನಿ! ನನ್ನ ಹುಡುಗನ ಹೆಸರು ತಗೀಬ್ಯಾಡ; ಇಲ್ಲಾ ಅಂದರ...." "ಒಬ್ಬಳೇ ಹುಡುಗಿ, ಪ್ರೀತಿಯಿಂದ ಬೆಳೆಸಿ ವಾಚಾಳಿನ್ನ ಮಾಡೀನಿ. ಇವಳ ಮನಸ್ಸು ಗಂಗಾಜಲದ್ಹಾಂಗ ನಿರ್ಮಲ ಅದ. ಇಕಿನ್ನ ನಿಮ್ಮ ಸೊಸೆಯನ್ನಾಗಿ ಮಾಡಿಕೊಂಡು, ಇದೇ ಮನೆಯಲ್ಲಿ ಇಟ್ಟುಕೊಳ್ಳಿರಿ. ಇಂದೇ ಮತ್ತು ಈಗಲೇ ನಿಶ್ಚಯದ ಕೆಲಸವನ್ನು ಮುಗಿಸುತ್ತೀರೆಂದು ಆಶಿಸುತ್ತೇನೆ!" ಎಂದು ಅಕ್ಕನ ತಂದೆಯವರು ಬಿನ್ನವಿಸಿಕೊಂಡರು. "ಮ್ಯಾಟ್ರಿಕ್ ಪರೀಕ್ಷೆಯಾದನಂತರವೇ ಮದುವೆಮಾಡಬೇಕೆಂದು ನಿರ್ಧಾರಮಾಡಿದ್ದೇನೆ" ಎಂದಳು ವಿಧವೆ. "ಮ್ಯಾಟ್ರಿಕ್ ಪರೀಕ್ಷೆ ಈಗಲೇ ಆಗುತ್ತದೆ. ಪರಿಣಾಮವು ಬಂದೇಬರುತ್ತದೆ. ಆಗಲಾದರೂ ನಿಶ್ಚಯದ ಕೆಲಸವನ್ನು ಮುಗಿಸುವಿರಲ್ಲವೇ?" "ಆಗಬಹುದು!" ಸ್ವೀಕರಿಸುತ್ತ ಸಾಹುಕಾರಿತಿಯು ಕೇಳಿದಳು: "ಹಣ ತೆಗೆದುಕೊಂಡು ಬಂದಂತೆ ತೋರುತ್ತದೆ?" "ಆದರೆ ಕಾಕಾ! "— ಮಧ್ಯದಲ್ಲಿಯೇ ಅಕ್ಕನು ನುಡಿದಳು. ನಾನು ಬಿ. ಎ. ದ ವರೆಗೆ ಕಲಿಯುತ್ತೇನೆ. ಈಗಲೆ ಮದುವೆಯಾಗುವುದಿಲ್ಲ" "ಸುಮ್ಮನಿರುವುದಾಗುವುದಿಲ್ಲವೇ? ಯಾವಾಗಲೂ ಪಿಟಿಪಿಟಿ ಮಾತನಾಡುತ್ತಲೇ ಇರುವಿ ಒಂದು ದಿನ ನೀನು ಪೆಟ್ಟು ತಿನ್ನುವಿ!" ಎಂದು ಅಕ್ಕನಿಗ ಸಿಟ್ಟು ಮಾಡಿದನು ತಂದೆ.

ಅಷ್ಟರಲ್ಲಿಯೇ 'ಲೀಡರ್' ಪತ್ರಿಕೆಯನ್ನು ತರಲು ಸ್ಟೇಶನಿಗೆ ಹೋದ ಮನುಷ್ಯ ಬಂದನು ಕೂಡಲೆ, ನಾವು ಮೂವರೂ ಅದನ್ನು ನೋಡುವುದರಲ್ಲಿ ಮಗ್ನರಾದೆವು. ನಾನು ಪಾಸಾಗಿದ್ದೆ ಮೂರನೆಯ ವರ್ಗದಲ್ಲಿ. ಅಕ್ಕನು ಸ್ತ್ರೀಯರ ವಿಭಾಗದಲ್ಲಿ ಪಾಸಾಗಿದ್ದಳು—ಪ್ರಥಮ ಶ್ರೇಣಿಯಲ್ಲಿ; ಆದರೆ ಚಂದ್ರವದನನ ನಂಬರಾಗಲೀ ಹೆಸರಾಗಲೀ ಎಲ್ಲಿಯೂ ಇರಲಿಲ್ಲ. "ಏನಾಯಿತು??" ಮಗನ ಪರಿಣಾಮವನ್ನು ಕೇಳಿದಳು. "ಏನಾಯಿತು?" ಮಗಳನ್ನು ಕೇಳಿದರು ತಂದೆಯವರು. ಏಕೆಂದರೆ ಪತ್ರಿಕೆಯು ಅವಳ ಕೈಯಲ್ಲಿಯೇ ಇತ್ತು. "ಹಾ ಹಾ ಹಾಹಾ! ಕಾಕಾ!" ಅಕ್ಕನು ಏನನ್ನೋ ಹೇಳಬಯಸಿದಳು; ಆದರೆ ಹೇಳಲು ಆಗಲಿಲ್ಲ "ಹಾಹಾಹಾಹಾ!" "ಏನಾತು? ನಿನ್ನ ಆನಂದಕ್ಕೆ ಮಿತಿಯೇ ಇಲ್ಲವಲ್ಲ?" "ನಾಪಾಸಾಗಿದ್ದಾನೆ, ಕಾಕಾ, ನಿಮ್ಮ ಹಣ ಉಳಿಯಿತು. ನನ್ನ ಜೀವ ಉಳಿಯಿತು! ಹಾಹಾಹಾಹಾ-ಕರಿಯ ನಾಪಾಸಾದ!" "ಗಲ್ಲ ಕೆಂಪು ಆಗೂಹಾಂಗ ಈ ಹುಡುಗಿನ್ನ ಹೊಡೀಬೇಕು!" ಎಂದು ಸಿಟ್ಟಿನಿಂದ ಒದರಿದಳು ಸಾಹುಕಾರತಿ. "ನನ್ನ ಮುಂದ ನಿಲ್ಲಬೇಡ, ಹೋಗು!" ಎಂದು ಅಕ್ಕನನ್ನು ತಂದೆ ಬೆದರಿಸಿದರು.

ಮೇಲಿನ ಸಂಗತಿ ನಡೆಯುತ್ತಿದ್ದಾಗ, ನಾನು ಖಿನ್ನವದನನಾದ ಚಂದ್ರವದನನನ್ನು ಸಮಾಧಾನಪಡಿಸುತ್ತಿದ್ದೆ. ತನ್ನ ತಂದೆಯನ್ನು ಬಿಟ್ಟು ಅಕ್ಕನು ನನ್ನ ಬಳಿಗೆ ಓಡಿಬಂದು, "ನಡೆ ಸಹೋದರ, ನಾವು ಹೋಗೋಣ! ಮನಸ್ಸುಕೊಟ್ಟು ಓದದವರು ಉತ್ತೀರ್ಣ-ರಾಗುವುದೇ ಇಲ್ಲ. ನಾನು ಎಂದೂ ನಾಪಾಸಾಗಿಯೇ ಇಲ್ಲ. ನಾಪಾಸಾ-ದವರನ್ನು ನೋಡಿ ಪಾಸಾದವರು ನಕ್ಕರೆ ಅಳುವುದೇಕೆ?" "ಏ ಉದ್ಧಟೇ" ಸಾಹುಕಾರಿತಿಗೆ ಸಹಿಸುವುದಾಗಲಿಲ್ಲ— "ಇಂದಿಲ್ಲ ನಾಳೆಯಾದರೂ ಅವನು ನಿನ್ನ ಯಜಮಾನನಾಗುವವನಿದ್ದಾನೆ, ಮರೆಯಬೇಡ!" "ಯಜಮಾನ?" ತೀಕ್ಷ್ಣವಾದ ಸ್ವರದಲ್ಲಿ ಅಕ್ಕ ಕೇಳಿದಳು. "ಹೊಂ, ಹೂ!" ಎರಡುದುಡ್ಡಿನ ಆಕಾಶಬುಟ್ಟಿಯ ಹಾಗೆ ಮುಖ ಉಬ್ಬಿಸಿ ಹೇಳಿದಳು ಶ್ರೀಮಂತ "ಹಾಹಾಹಾಹಾ!" ಅಕ್ಕ ನಗತೊಡಗಿದಳು.

ಅಕ್ಕನ ತಂದೆಯವರು ಅವಳನ್ನು ಹಿಡಿದು ಹೊಡೆಯಬೇಕೆಂದು ಪ್ರಯತ್ನ ಮಾಡುವಷ್ಟರಲ್ಲಿ, ನಾನು ಅವಳ ಕೈಯನ್ನು ಹಿಡಿದು ಎಳೆದು-ಕೊಂಡು ಹೋದೆ! ಅಕ್ಕನ ತಂದೆಯವರು ಶ್ರೀಮಂತಳ ಕಡೆಯಿಂದ ಸಾಲ ತೆಗೆದುಕೊಂಡು, ಬಿ. ಎ. ವರೆಗೆ ಕಲಿಸಿದರೆ, ಅಕ್ಕನನ್ನು ತನ್ನ ಮಗ ಚಂದ್ರವದನ ಉರ್ಫ ಕರಿಯನಿಗೆ ಕೊಡಲು ಒಪ್ಪಿಸಿದಳು! ಸಾಲದ ಬದಲಾಗಿ ಮಗಳನ್ನೇ ಮಾರಿದರೆಂದು ಇಡಿ ಊರಿನ ಜನ ಮಾತಾಡಿದರು. ಆದರೆ "ಮೊದಲಿನಿಂದಲೇ ಅವಳನ್ನು ಅವನಿಗೆ ಕೊಡಬೇಕೆಂದು ಗೊತ್ತುಮಾಡಿತ್ತು!" ಎಂದವರು ಹೇಳಿದರು.

ಅಕ್ಕನ ಮೈಕಟ್ಟು, ಬಿದಿಗೆಯ ಚಂದ್ರಮನಂತೆ ತೆಳುವಾಗಿತ್ತು, ತೇಜಸ್ವಿಯಾಗಿತ್ತು ದರ್ಶನೀಯವಾಗಿತ್ತು. ಚಂದ್ರವದನನ ದೇಹ ದಪ್ಪವಾಗಿತ್ತು. ಕಪ್ಪುಬಣ್ಣ, ಕುರೂಪಿ, ದಪ್ಪ ತುಟಿಗಳು! ಕೆಳಗಿನ ತುಟಿ ಮುಂದೆ ಬಂದಿತ್ತು. ಮುಂದೆ ಹಾಯ್ದ ಎರಡು ಹಂದಿಯ

ಹಲ್ಲುಗಳು! ಮದುವೆಯ ಕಾಲಕ್ಕೆ ಎತ್ತರದಲ್ಲಿ ಅವನು ಅಕ್ಕನಿಗಿಂತಲೂ ಅರ್ಧ ಫೂಟು ಕಡಿಮೆ; ಆದರೆ ಅಗಲದಲ್ಲಿ ಮುಕ್ಕಾಲು ಫೂಟು ಹೆಚ್ಚು ಇದ್ದ. ಅಕ್ಕನು ದೂರದಿಂದಲೇ ಕರುಣಾದೇವಿಯಾಗಿ ತೋರುತ್ತಿದ್ದಳು; ಅವನು ಕ್ರೂರದೇವನಾಗಿದ್ದ! ಅಕ್ಕನು ಬಿ. ಎ. ಪಾಸಾಗಿದ್ದಳು, ಅವನು ಅದೇ ವರ್ಷ ಸಂಸ್ಕೃತದ ದ್ವಿತೀಯ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದ! ಮ್ಯಾಟ್ರಿಕಿನಲ್ಲಿ ಅನುತ್ತೀರ್ಣನಾದ ನಂತರ ಶ್ರೀಮಂತಳು, ಮಗನಿಗೆ ಸಂಸ್ಕೃತ ಕಲಿಸಲು ಪ್ರಾರಂಭಿಸಿದ್ದಳು.

ಅಕ್ಕನ ತಂದೆಯವರು "ವಿಷತಿನ್ನುವ" ಹೆದರಿಕೆ ಹಾಕಿದರು. ಕುಲ, ಶೀಲ, ಒಳ್ಳೆಯ ಹೆಸರು, ಕೆಟ್ಟ ಹೆಸರು ಇವುಗಳ ಭಯ ತೋರಿಸಿದರು. ಮಗಳ ಮೇಲಿನ ತಂದೆಯ "ಶಾಸ್ತ್ರೋಕ್ತ ಅಧಿಕಾರ"ವನ್ನು ಪ್ರಸ್ತಾಪಿಸಿದರು. ತಮ್ಮ ಬುದ್ಧಿಯೇ ಪರಿಪಕ್ವವಾದುದು, ಅಕ್ಕನ ತಿಳಿವಳಿಕೆ ಅಪಕ್ವವಾದುದು—ಎಂದು ಹೇಳಿದರು. "ನೀನು ನನ್ನ ಮಾತಿಗೆ ಒಪ್ಪದಿದ್ದರೆ, ನಾನು ಬದುಕಿ ನಿನಗೆ ಮುಖ ತೋರಿಸುವುದಿಲ್ಲ, ಗಂಗಾನದಿಯಲ್ಲಿ ಮುಳುಗುವೆ" ಎಂದು ಅತ್ತರು. ಆಗ ಅಕ್ಕನು, ಸೌಭಾಗ್ಯದ ಹೆಸರಿನ ಮೇಲೆ ಅಯೋಗ್ಯನೊಂದಿಗೆ ಮದುವೆಯಾಗುವ ದೌರ್ಭಾಗ್ಯವನ್ನು ಒಪ್ಪಿದಳು. ಮದುವೆಗಿಂತ ಎರಡು ದಿನ ಮೊದಲು, ಅಕ್ಕನು ಕರುಣಾಪೂರಿತವಾಗಿ ನನ್ನನ್ನು ಕೇಳಿದ್ದಳು: "ಸಹೋದರ, ನನ್ನನ್ನು ಕರೆದುಕೊಂಡು ಓಡಿ ಹೋಗಲಾರೆಯಾ ಈ ಮನೆಯಿಂದ? ಈ ಊರಿನಿಂದ?"

ಅಕ್ಕನನ್ನು ಅಂದು, ನಿಶ್ಚಿತವಾದ ಮೃತ್ಯುವಿನಿಂದ ಏಕೆ ಉಳಿಸಲಿಲ್ಲವೆಂದು ಇಂದು ಖೇದವೆನಿಸುತ್ತದೆ. ಆಗ ನನ್ನಲ್ಲಿ ಅಷ್ಟು ಶಕ್ತಿ ಇರಲಿಲ್ಲ. ಸಮಾಜಕ್ಕೆ, ಪರಿಣಾಮಕ್ಕೆ, ಬೇರೆಯವರ ಹುಡುಗಿಯನ್ನು ಓಡಿಸಿಕೊಂಡು ಹೋಗುವ ಕೆಟ್ಟ ಹೆಸರಿಗೆ ಹೆದರಿದೆ. ಪರಿಣಾಮವಾಗಿ ಅಕ್ಕನು, ತನ್ನ ಕುತ್ತಿಗೆಗೆ ಕಟುಕರ ಕತ್ತಿಯನ್ನು ಕಟ್ಟಿಸಿಕೊಳ್ಳಬೇಕಾಯಿತು.

"ಪ್ರೀತಿಸುವುದು" ಎಂಬುದು ಸಹಜವೂ ನಿಷ್ಪಾಪವೂ ಆಗಿದುವುದು ಸಾಧ್ಯವಿದ್ದರೆ, ಪ್ರಿಯ ಅಕ್ಕನು ನನ್ನನ್ನು ಪ್ರೀತಿಸುತ್ತಿದ್ದಳೆಂದು ಹೇಳುತ್ತೇನೆ. ಚಿಕ್ಕಂದಿನಿಂದ ಮರಣದವರೆಗೆ, ನನ್ನನು ಬೆಟ್ಟಿಯಾದಾಗಲೆಲ್ಲ ತನ್ನ ಮುಕ್ತಹೃದಯವನ್ನು ನನ್ನ ಹೃದಯದೊಡನೆ ಸಮರಸಮಾಡಲು ವ್ಯಾಕುಲಳಾಗಿರುತ್ತಿದ್ದಳು. ಪುಣ್ಯಶ್ಲೋಕಗಳನ್ನು ಓದುವ ಪವಿತ್ರತೆಯಿಂದ, ತನ್ನ ವೈಯಕ್ತಿಕಜೀವನದ ಅತಿ ಗುಪ್ತವಾದ ಮಾತುಗಳನ್ನೂ ನನ್ನೆದುರಿಗೆ ಹೇಳುತ್ತಿದ್ದಳು. ಚಂದ್ರವದನನೊಡನೆಯ ಜೀವನದ ಮೊದಲ ರಾತ್ರಿಯ ರೋಮಾಂಚಕವಾದ, ಖೇದಜನಕವಾದ ವರ್ಣನೆಯನ್ನೂ ನನ್ನೆದುರಿಗೆ ಹೇಳಿದ್ದಳು.

ಅವಳು ಹೇಳಿದ್ದಳು:—"ಸಾವಿರ ಮಾತುಗಳನ್ನು ಅಪೇಕ್ಷಿಸದಿದ್ದರೂ, ತಂದೆಯವರ ಸಲುವಾಗಿ, ಅವನನ್ನು ನನ್ನ ಪತಿಯೆಂದು ಸ್ವೀಕಾರಮಾಡಲೇಬೇಕಾಯಿತು. ಅವನ ಬಗೆಗೆ ತಿರಸ್ಕಾರದ ಹೊರತು ಬೇರಾವ ಭಾವನೆಯೂ ಇರಲಿಲ್ಲ. ಮನಸ್ಸಿನಲ್ಲಿಯೇ ನನ್ನ ಸ್ವಭಾವವನ್ನು ಒತ್ತಿಟ್ಟು ಪರಿಸ್ಥಿತಿಯನ್ನು ಸ್ವಾಗತಿಸುವುದಾಗಿ ನಿಶ್ಚಯಿಸಿದೆ.

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ

"ಸಮಾಜದ ಆದರ್ಶ ಹುಡುಗಿಯರಿಗೆ. ಅವರಿಗೆ ಯೋಗ್ಯರಾದ ವರಗಳು ದೊರೆಯುತ್ತಾರೆ?" ಎಂದು ವಿಚಾರಮಾಡಿದೆ. ತಮ್ಮ ಮನಸ್ಸು ಹಾಗೂ ಭಾವನೆಗಳನ್ನು ಹಿಂದಕ್ಕೆ ತಳ್ಳಿ, ಸಮಾಜದಿಂದ ನಿಯುಕ್ತನಾದ ಪುರುಷನನ್ನು ತಮ್ಮ ಜೀವನದ ಸಂಗಡಿಗನನ್ನಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ಉಳಿದೆಲ್ಲ ಹುಡುಗಿಯರಂತೆ ನಾನೂ ನಡೆಯಬೇಕಲ್ಲವೇ? ಸ್ತ್ರೀ ಜನ್ಮವೇ ಬಂಧನಮಯವಾಗಿದೆ, ದುಃಖಮಯವಾಗಿದೆ; ಶ್ರಮ ಹಾಗೂ ಸೇವೆಯಿಂದ ತುಂಬಿರುತ್ತದೆ. ನಮ್ಮ ಸಮಾಜದ ಸ್ತ್ರೀಯರ ಜೀವವು ಮೇಲಿನಿಂದ ಭವ್ಯವಾದ ಇಂದ್ರಧನುಸ್ಸಿನಂತೆ ತೋರಿದರೂ, ಅದು ರಂಗರಹಿತ, ರಸರಹಿತ ಹಾಗೂಸ್ವಾದರಹಿತವಾಗಿರುತ್ತದೆ. ಸ್ತ್ರೀಯರಿಗೆ ಒಂದುವೇಳೆ ತಪಸ್ವಿನಿ ಎಂದು ಕರೆಯದಿದ್ದರೆ, ಸಂಪತ್ತಿನಿಂದ ಕೊಂಡುಕೊಳ್ಳಲ್ಪಟ್ಟ ದಾಸಿಯೆಂದೇ ಹೇಳಬಹುದು. ಕಲಿಯುವುದರಿಂದ ಬೇರಾವ ಲಾಭವಾಗದಿದ್ದರೂ, ಓದುವ-ವಿಚಾರಮಾಡುವ ಸುಖವಾದರೂ ಸಿಗುವುದು.

ಆದರೆ ಅತ್ತೆಯ ಮನೆಯಲ್ಲಿ ಕಾಲಿಟ್ಟು ಅತ್ತೆಗೆ ನಮಸ್ಕಾರ ಮಾಡಿದೊಡನೆ, ಅವಳು ಆಶೀರ್ವಾದವನ್ನೀಯಲಿಲ್ಲ, ಒಂದು ಚಿಕ್ಕ ಭಾಷಣವನ್ನೇ ಮಾಡಿದಳು:—"ಪ್ರಿಯ ರಾಣೀ! ಕರಿಯನ ಹೆಂಡತಿಯ ರೂಪದಲ್ಲಿ ನಿನ್ನನ್ನು ನೋಡಿ. ನನ್ನ ಇಚ್ಛೆ ಪೂರ್ಣವಾಯಿತು. ನೆನಪಿದೆಯೇ? 'ಕರಿಯ ನಾಪಾಸಾದ' ಎಂದು ಗಹಗಹಿಸಿ ನಕ್ಕಿದ್ದೆ! ನೋಡು! ಇಂದು ಅದೇ ಕರಿಯ ನಿನ್ನ ಮಾಲಕನಾಗಿದ್ದಾನೆ, ರಾಜನಾಗಿದ್ದಾನೆ! ರಾಣೀ, ಒಂದು ಅಕ್ಷರವನ್ನಾದರೂ ಕಲಿತಿರುವುದನ್ನಾಗಲಿ ಓದಿರುವುದನ್ನಾಗಲಿ ಮರೆತುಬಿಡು. ಇದು ಗೃಹಸ್ಥರ ಮನೆ. ಅಲ್ಲಾಬಾದಿನ ಹುಡುಗಿಯರ ಕಾಲೇಜಲ್ಲವೆಂಬುದನ್ನು ನೆನಪಿನಲ್ಲಿಡು. ನೀನು ಮನೆಯನ್ನೆಲ್ಲ ಸಂಭಾಳಿಸಬೇಕು. ಅಡಿಗೆ, ಕೆಲಸ ಹಾಗೂ ನನ್ನ ಮತ್ತು ನಿನ್ನೆಯವರೆಗೆ "ಕರಿಯ"—ಎಂದು ನೀನು ಅನ್ನುತ್ತಿದ್ದೆಯಲ್ಲಾ—'ಅವನ' ಸೇವೆಯನ್ನು ಮಾಡಬೇಕು. ಇದರಲ್ಲಿ ಸ್ವಲ್ಪವಾದರೂ ತಪ್ಪಿದರೆ, ಅಜಾಗೃತಿಯಾದರೆ, ನಿಷ್ಕಾಳಜಿ ಮಾಡಿದರೆ ನೋಡು; ನನ್ನ ಅತ್ತೆ ನನ್ನನ್ನು ಬಡಿಗೆಯಿಂದ ಹೊಡೆಯುತ್ತಿದ್ದಳು, ಆದರೆ ನಾನು ಅಷ್ಟು ಕ್ರೂರಳಲ್ಲ; ತೆಂಗಿನಗರಿಯ ಕಸಬರಿಗೆಯನ್ನು ಮಾತ್ರ ಉಪಯೋಗಿಸುತ್ತೇನೆ."

ಅತ್ತೆಯ ಭಾಷಣವನ್ನು ಕುಡಿದೆ; ಆ ಮನೆಯಲ್ಲಿ ಕಾಲಿಟ್ಟ ದಿನದಿಂದಲೇ ನನ್ನ ಶಕ್ತ್ಯನುಸಾರ ಅವರೆಲ್ಲರ ಸೇವೆ ಮಾಡಿದೆ. ಆದರೂ, ಅತ್ತೆಯವರು ಹೆಜ್ಜೆ ಹೆಜ್ಜೆಗೆ ಸಿಟ್ಟಿಗೇಳುತ್ತಿದ್ದರು. ಓದು-ಬರೆಹ ಕಲಿತ ಹುಡುಗಿಯರ ಮೇಲೆ ತೀಕ್ಷ್ಣವಾದ ಚುಚ್ಚುಮಾತನ್ನು ಆಡುತ್ತಿದ್ದರು. ಈ ರೀತಿಯಾಗಿ, ಮಧುರಾತ್ರಿಯ ಮೊದಲೇ ನನ್ನ ಜೀವನವು ವಿಷಮಯವಾಯಿತು ಮಧುರಾತ್ರಿಯು ಕೊನೆಯವರೆಗೂ ವಿಷರಾತ್ರಿಯಾಗಿಯೇ ಉಳಿಯುವುದೆಂದು ಆಗಲೇ ನನಗೆ ಎನಿಸಿತು. ಮಧುರಾತ್ರಿಯಲ್ಲಿ ಮಧುವಿಟ್ಟಿರುತ್ತದೆ, ವಿಷವಿಟ್ಟಿರುತ್ತದೆ—ಎಂಬುದನ್ನು ಕೇಳಿದ್ದೆ. ಆದರೆ ಆ ಪುರುಷನ ಸಂಗಡ ಕೂಡುವ ಇಚ್ಛೆಯು ನನ್ನಲ್ಲಿ ಸ್ವಲ್ಪವೂ ಇರಲಿಲ್ಲ. ನಾನು ಅವನನ್ನು ತಿರಸ್ಕೃತನನ್ನಾಗಿಯೂ, ಅಯೋಗ್ಯನನ್ನಾಗಿಯೂ ತಿಳಿದಿದ್ದೆ. ಆದರೆ, ನನ್ನ ದೈವವೇ! ನನ್ನ ಸರ್ವಸ್ವಕ್ಕೆ ಅವನೇ ಅಧಿಕಾರಿಯಾಗಿದ್ದ! ಯಾವನನ್ನು ನಾನು, ನನ್ನ ಇಚ್ಛೆಯಿಂದ ನೌಕರನನ್ನಾಗಿಯೂ ಇಟ್ಟುಕೊಳ್ಳುತ್ತಿರಲಿಲ್ಲವೋ, ಅವನೇ ನನ್ನ ಮಾಲಕ! ಅತ್ತೆಯ ವ್ಯಂಗ್ಯನುಡಿಗಳನ್ನು ಸಹಜವಾಗಿ, ಬೈಗಳುಗಳನ್ನು ಕೋಮಲವಾಗಿ ಸಹನಮಾಡುತ್ತಿದ್ದೆ. ಆದರೆ ಆ ಪುರುಷನ ಸಾಮೀಪ್ಯದ ಕಲ್ಪನೆಯಿಂದಲೇ—ಹೇಸಿಕೆಯಿಂದ, ವಿಷಾದದಿಂದ—ನನ್ನ ಜೀವ ಅಳುಕುತ್ತಿತ್ತು.

ಇಲ್ಲಿಯವರೆಗೆ ಕೋಣೆಯಲ್ಲಿ, ನನ್ನ ಹಾಗೂ ಅತ್ತೆಯ ಹಾಸಿಗೆಯನ್ನು ಹಾಸುತ್ತಿದ್ದೆ. ಅತ್ತೆಯವರು ತಿಂದು-ಉಂಡು ಮಲಗುತ್ತಿದ್ದರು. ಕೆಲಸದಿಂದ ಮುಕ್ತಳಾದೊಡನೆ ನಾನು ಹೋಗಿ ಸುಮ್ಮನೆ ಬಿದ್ದುಕೊಳ್ಳುತ್ತಿದ್ದೆ. ಅದೇ ಕೋಣೆಯಲ್ಲಿ ಅಂದು ಅತ್ತೆಯ ಸ್ಥಳದಲ್ಲಿ ಅವನು ಮಲಗಿದ್ದುದು ಕಂಡುಬಂದಿತು. ಅವನನ್ನು ನೋಡುತ್ತಲೆ ಹೇಸಿಕೆಯಿಂದ ನಡುಗಿದೆ. ಹಿಂದೆ ಸರಿಯಲು ಪ್ರಯತ್ನಿಸಿದೆ. ಆದರೆ ಒಮ್ಮೆಲೆ ಎದ್ದು ಅವನು ಕೋಣೆಯ ಬಾಗಿಲನ್ನು ಒಳಗಿನಿಂದ ಬಂದುಮಾಡಿದ "ಇಂದು ನಿನಗೆ ನನ್ನ ಹತ್ತಿರ ಮಲಗಬೇಕಾಗುವುದು!" ಎಂದ. "ನಾನು ಅತ್ತೆಯ ಹತ್ತಿರವೇ ಮಲಗುವೆ. ನೀವು ಹೊರಟು ಹೋಗಿರಿ, ನನ್ನನ್ನು ಬಿಟ್ಟುಬಿಡಿರಿ." ಎಂದು ನನ್ನ ಎರಡೂ ಭುಜಗಳನ್ನು ಗಟ್ಟಿಯಾದ ತನ್ನ ಮುಷ್ಟಿಗಳಿಂದ ಹಿಡಿದು ನುಡಿದ: "ಗದ್ದಲವನ್ನೇಕೆ ಮಾಡುವೆ?" ಅವನು ಬೈದ. ಆಗ ನಾನು ಸಹನಮಾಡುವುದಾಗಿ ವ್ರತ ತಾಳಿದುದನ್ನೂ ಮರೆತೆ. ಎಲ್ಲ ರೀತಿಯಿಂದ ನಾನು ಅವನ ವಶದಲ್ಲಿದ್ದೆನೆಂಬುದನ್ನೂ ಮರೆತೆ, ಅವನ ಮದುವೆಯಾದ ಹೆಂಡತಿಯೆಂಬುದನ್ನೂ ಮರೆತೆ. ಅಹಾ ಅನಿಚ್ಛೆಯೇ! ನಾನೆಂದೆ: "ಬಿಡಿರಿ, ನನ್ನನ್ನು ಬೈಯುತ್ತೀರೇಕೆ?" "ಜಾರಪುತ್ರೀ!" ಅವನೆಂದ. "ಜಾರಪುತ್ರಾ!" ನಾನೂ ಎಂದುಬಿಟ್ಟೆ. ಅವನು ಜೋರಾಗಿ ನನ್ನ ಮೋರೆಗೆ ಹೊಡೆದ. ನನ್ನನ್ನು ತನ್ನ ಬಾಹುಗಳಲ್ಲಿ ಕಟ್ಟಿ ಹಿಡಿಯಲು ಇಚ್ಛಿಸಿದ. ನಾನು ಉಗುರಿನಿಂದ ಅವನನ್ನು ಚಿವುಟಿದೆ, ಚಿವುರಿಕೊಂಡೆ. ನೋವಿನಿಂದ ಚೀರಿ ಒಮ್ಮೆ ನನ್ನನ್ನು ಬಿಟ್ಟುಬಿಟ್ಟ. ಕೋಣೆಯ ಬೇರೆ ಮೂಲೆಗೆ ಓಡಿದೆ, ಅವನೂ ನನ್ನ ಹಿಂದೆಯೇ ಬಂದ. ಸಿಟ್ಟಿನಿಂದ ನಡುಗುತ್ತಿದ್ದ, ತೇಕುತ್ತಿದ್ದ; ನಾನೂ ಭಯದಿಂದ ನಡುಗುತ್ತಿದ್ದೆ, ತೇಕುತ್ತಿದ್ದೆ. ಅವನು ನನ್ನ ತೀರ ಸಮೀಪಕ್ಕೆ ಬಂದೊಡನೆ, ಪಲಂಗಿನ ಬುಡದಲ್ಲಿ ಹೋಗಿ ಅಡಗಿಕೊಂಡು ಕುಳಿತೆ. ಆಗ ನನ್ನನ್ನು ಸುಲಭವಾಗಿ ಹಿಡಿಯಲು ಅವನಿಗೆ ತೊಂದರೆಯಾಗಲಿಲ್ಲ. ಮೊದಲು ನೆಲದಮೇಲೆಯೆ ಗುದ್ದಾಡಿದೆ. ಸಂಪೂರ್ಣವಾಗಿ ನಾನು ಅವನ ವಶದಲ್ಲಿರುವೆನೆಂಬ ಅನುಭವವಾದೊಡನೆಯೆ ಮೂರ್ಛಿತಳಾದೆ. ಅದೇ ರಾತ್ರಿ ಆ ತಿರಸ್ಕೃತ ಮನುಷ್ಯನು, ತಾಯಿಯಾಗುವ ಬೀಜವನ್ನು ಬಿತ್ತಿದನು. ಅದರ ಫಲವೇ ಈ ಹುಡುಗ. ಹಾಲುಕುಡಿಸಿದರೂ ನಾನು ಇದನ್ನು ಪ್ರೀತಿಸುವುದಿಲ್ಲ. ಸಹೋದರ, ನೀನು ಈ ಕೂಸನ್ನು ತೆಗೆದುಕೊಂಡು ಬಿಡು! ಅವನ ಈ ಕೂಸನ್ನು ಕಂಡರೆ ನನಗೆ ಆಗುವುದಿಲ್ಲ!"

ಅಕ್ಕನ ಈ ಮಾತುಗಳನ್ನು ಕೇಳಿ ಸಂಕಟವಾಯಿತು. ಹಾಲು ಕುಡಿಸಿದ ಮಗನಿಗಾಗಿಯೂ ತಾಯಿಯ ಹೃದಯದಲ್ಲಿ ಮಮತೆ

೧೦೦೦ ರೂಪಾಯಿ ಬಹುಮಾನ

೩೦ ವರ್ಷಗಳಿಂದ ಅನುಭವಸಿದ್ಧವಾದ—ಮಿರಜಿಯ ವೈದ್ಯ

ವಿ. ಎಸ್. ಕಾಪಸೇಯವರ

ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ

ವಜ್ರಾಂಗ ಸುಂದರ ಪಾಕ

[ರಜಿಸ್ಟರ್ಡ್]

ಮೂತ್ರದಲ್ಲಿ ಸ್ವಪ್ನದಲ್ಲಿ ವೀರ್ಯಸ್ಖಲನ, ಸ್ವರತಿಯಿಂದುಂಟಾದ ಅಶಕ್ತತೆ, ವೀರ್ಯದ ಬೇರೆ ಬೇರೆ ದೋಷಗಳು, ಪಿತ್ತಾಶ, ಉಷ್ಣ, ಸೊಂಟನೋವು, ಉಪದಂಶ ಮೇಹರೋಗಗಳಿಂದುಂಟಾಗುವ ಕ್ಷೀಣತೆ—ಇವೆಲ್ಲ ನಷ್ಟವಾಗಿ, ಚೆನ್ನಾಗಿ ಮಲಶುದ್ಧಿಯಾಗುವುದು. ಹಸಿವೆ, ಸ್ಮರಣಶಕ್ತಿ, ದೇಹದ ತೂಕ ಹೆಚ್ಚುವುದು. ಹೊಸ ತಾರುಣ್ಯ ಬಂದಂತಾಗಿ ವೀರ್ಯದಲ್ಲಿ ಗರ್ಭಧಾರಕಶಕ್ತಿ ಬಲಗೊಳ್ಳುವುದು. ಈ ಔಷಧಿಯು ೫೩ ವನಸ್ಪತಿಗಳ ಯೋಗದಿಂದ ಸಿದ್ಧವಾಗಿದೆ. ಸಾಲಾಮಿಶ್ರಿ, ಸಫೇದಮಿಶ್ರಿ, ಪಂಜಾಬಮಿಶ್ರಿ, ವಚಕಂದ ಮೊದಲಾದ ಪದಾರ್ಥಗಳಲ್ಲಿ ವೀರ್ಯವರ್ಧಕ ಗುಣವಿಲ್ಲವೆಂದು ಸಿದ್ಧಮಾಡುವವರಿಗೆ ೧೦೦೦ ರೂಪಾಯಿ ಬಹುಮಾನ.

೨೧ ದಿನಗಳಿಗೆ ಸಾಲಬಹುದಾದ ೮ಳ ತೊಲೆಯ ಒಂದು ಡಬ್ಬಿಗೆ ೫-೮-೦; ಅಂಚೆಯ ವೆಚ್ಚ ೧-೧೫-೦. ಶೀಘ್ರಗುಣಕಾರಿಯಾದ ಸ್ಪೇಶಲ್ ಡಬ್ಬಿಗೆ ೧೦-೮-೦. (ಇದರಿಂದ ೭ ದಿನಗಳಲ್ಲಿಯೇ ಗುಣವು.) ಅಂಚೆಯ ವೆಚ್ಚ ೧-೧೫-೦. ೩ ಡಬ್ಬಿಗೆ ೧೫-೦-೦; ಅಂಚೆಯ ವೆಚ್ಚ ೪-೭ ೦. ೧ ಡಬ್ಬಿಗೆ ಪ್ಯಾಕಿಂಗ್ ಖರ್ಚು ೦-೩-೦. ಒಮ್ಮೆಲೇ; ೩ ಡಬ್ಬಿಗಳನ್ನು ಬೇಡುವವರು ೫ ರೂ. ಮುಂಗಡ ಕಳಿಸಬೇಕು.

ಮಾಲಕ: ವ್ಹಿ. ಎಸ್. ಕಾಪಸೇ, ಶನಿವಾರಪೇಟೆ

ಮು. ಪೋ. ಮಿರಜ

ಉಳಿಯುದಷ್ಟು, ಒಬ್ಬ ಸ್ತ್ರೀಯನ್ನು ಸಮಾಜವು ಪೀಡಿಸಿತು! ವಾತ್ಸಲ್ಯವನ್ನು ಹರಣಮಾಡಿತ್ತು! ಮಮತೆ-ವಾತ್ಸಲ್ಯಗಳ ಪ್ರತಿಯಾಗಿ ದ್ವೇಷ! ಬೇರೆ ಸ್ತ್ರೀಯರ ವಿಷಯವಾಗಿದ್ದರೆ, ಅವಳಿಗೆ ಕೆಟ್ಟವಳೆನ್ನಬಹುದಾಗಿತ್ತು. ಆದರೆ ಅಕ್ಕನನ್ನು ನನ್ನ ಹೃದಯದಷ್ಟೇ ಬಲ್ಲೆ. ಅವಳು ಉದಾರಳಾಗಿದ್ದಳು, ದಯಾಳುವಾಗಿದ್ದಳು. ಎಲ್ಲರ ಕಲ್ಯಾಣವನ್ನು ಬಯಸುವ ಅಂತಹ ಸ್ತ್ರೀಯು, ಬೇರೆಯೆಲ್ಲಿಯೂ ನನ್ನ ಕಣ್ಣಿಗೆ ಬೀಳಲಿಲ್ಲ. ಅವಕಾಶ ದೊರೆತಿದ್ದರೆ, ಅವಳು ಅವಶ್ಯವಾಗಿ ಭಾರತ-ವಿಖ್ಯಾತ ವಿದುಷಿಯಾಗುತ್ತಿದ್ದಳು. ಆದರೆ ಅಶಿಕ್ಷಿತಸ್ತ್ರೀಯರು ದ್ವೇಷದಿಂದ ಶಿಕ್ಷಿತಯುವತಿಯರ ಜೀವನವನ್ನೂ ನಾಶಮಾಡುತ್ತಾರೆ. ಸಮಾಜದಲ್ಲಿ, ಅಶಿಕ್ಷಿತರ ಸಂಖ್ಯೆಯೇ ಹೆಚ್ಚಾಗಿದೆ. ಆದುದರಿಂದಲೇ, ಮಕ್ಕಳನ್ನು ಹುಟ್ಟಿಸುವ ಕೆಲಸದ ಹೊರತು ಬೇರಾವ ರೀತಿಯಿಂದಲೂ ಉಪಯೋಗವಾಗದ ಸುಶಿಕ್ಷಿತ ಸ್ತ್ರೀಯರೇ ಹೆಚ್ಚಾಗಿದ್ದಾರೆ. ಸುಶಿಕ್ಷಿತ ಪತಿಯೂ ಸಹ, ಪತ್ನಿಯ ಶಿಕ್ಷಣದ ಉಪಯೋಗವನ್ನು ತೆಗೆದುಕೊಳ್ಳಲು ಹೆದರುತ್ತಾನೆ. ನವಯುವತಿಯರು ವೈದ್ಯಕಿಯನ್ನು ಪಾಸಾಗಿದ್ದರೆ, ವಿಜ್ಞಾನ ಅಥವಾ ಕಲೆಯಲ್ಲಿ ಮುಂದುವರೆದಿದ್ದರೂ, ಅವಳ ಪತಿಯು, ಮನೆ-ಹೊಸ್ತಿಲು-ಅಂಗಳ ಇಷ್ಟರವರೆಗೆ ಮಾತ್ರ ಅವಳ ಕ್ಷೇತ್ರವನ್ನಾಗಿ ಮಾಡಲಪೇಕ್ಷಿಸುತ್ತಾನೆ.

ಆರನೆಯ ಮಗುವಾದೊಡನೆ ಅಕ್ಕನ ಜೀವನಪುಷ್ಪದ ಪ್ರಸನ್ನತೆಯ ಎಲ್ಲ ಪಕಳೆಗಳೂ ಉದುರಿದುವು! ಬಾಲ್ಯದಿಂದಲೇ ಅವಳ ದೇಹ ಬಡಕಲಾಗಿತ್ತು. ಈಗ ದೇಹದಲ್ಲಿ ಉಳಿದ ಆತ್ಮಶಕ್ತಿಯೂ ಹೋಗಿಬಿಟ್ಟಿತು. "ಇನ್ನು ನಾನು ಹೆಚ್ಚು ದಿನ ಬದುಕುವವಳಲ್ಲ" ಒಂದು ದಿನ ಅಕ್ಕ ನನ್ನೆದುರಿಗೆ ನುಡಿದಳು. "ಹೀಗೆ ನುಡಿಯಬೇಡ ಅಕ್ಕ, ಈಗ ಅದೆಷ್ಟು ವಯಸ್ಸಾಗಿದೆ ನಿನಗೆ?" "ಒಂದೊಂದು ಸಂತಾನೋತ್ಪತ್ತಿಯಿಂದ—" ಅಕ್ಕ ನುಡಿದಳು: "ಸ್ತ್ರೀಯಳ ಆಯುಷ್ಯದ ಹತ್ತು ವರುಷಗಳು ಕಳೆದುಹೋಗುತ್ತವೆ. ನೂರು ವರುಷದ ಆಯುಷ್ಯದವಳು ಐವತ್ತು ವರುಷಗಳಲ್ಲಿಯೇ ಈ ಜಗತ್ತನ್ನು ಬಿಟ್ಟು ಹೊರಟುಹೋಗುತ್ತಾಳೆ. ನಾನು ಬ್ರಹ್ಮನಿಂದ ನೂರುವರುಷ ಆಯುಷ್ಯವನ್ನು ತೆಗೆದುಕೊಂಡೂ ಬರಲಿಲ್ಲ. ಇಷ್ಟರಲ್ಲಿಯೇ ಜೀವನದಲ್ಲಿ ನುಚ್ಚುನೂರಾದೆ. ಅವನಿಗೆ ಇನ್ನೂ ನಾಲ್ಕು ಮಕ್ಕಳು ಬೇಕಂತೆ!" "ಬಹಳ ಕ್ರೂರ ಜನ!" ಚಿಕ್ಕವಳಿದ್ದಾಗ ಅವನಿಗೆ ಕರಿಯನೆಂದಿದ್ದೆನಲ್ಲವೇ? ಅದಕ್ಕಾಗಿ ತಾಯಿ-ಮಕ್ಕಳಿಬ್ಬರೂ ಸೇಡುತೀರಿಸಿಕೊಳ್ಳುತ್ತಿದ್ದಾರೆ—ಅದೂ ಕೂಡ ಸನಾತನಧರ್ಮದ ಸೋಗಿನಲ್ಲಿ! ನನ್ನ ಅತ್ತೆಗೆ ಹನ್ನೊಂದು ಜನ ಮೊಮ್ಮಕ್ಕಳು ಬೇಕಂತೆ! ಯಾಕೆಂದರೆ ವೈದಿಕಕಾಲದಲ್ಲಿ ಆರ್ಯನು ತನ್ನ ಪತ್ನಿಯಿಂದ ಹನ್ನೊಂದು ಮಕ್ಕಳನ್ನು ಪಡೆಯುತ್ತಿದ್ದನಂತೆ!" "ಈ ರೀತಿ ಸಾಯುವುದಕ್ಕಿಂತ ಅವರನ್ನು ತ್ಯಜಿಸಿ ಬರುವುದೇ ಯೋಗ್ಯ!" ಆಗ್ರಹದಿಂದ ಎಂದೆ "ಹೋಗಬೇಕಾದರೂ ಎಲ್ಲಿಗೆ? ಇದ್ದೊಬ್ಬ ತಂದೆಯೂ ಹೋಗಿಬಿಟ್ಟ!" ಹತಾಶಳಾಗಿ ನುಡಿದಳು. ಆದರಪೂರ್ವಕವಾಗಿ, ಆಗ್ರಹಪೂರ್ವಕವಾಗಿ ಅಕ್ಕನಿಗೆ ಹೇಳಿದೆ: "ನಾನಿಲ್ಲವೇ? ನನ್ನ ಮನೆ ನಿನ್ನದೇ ಅಲ್ಲವೇ?" "ಧನ್ಯವಾದ



ಆದರೆ ಸಹೋದರ, ಸತ್ಯಸಂಗತಿ ಹೀಗಾಗಿದೆ— ಮೃತ್ಯುವನ್ನು ಕಣ್ಣೆದುರಿಗೆ ನೋಡಿದರೂ ಅದನ್ನು ತಪ್ಪಿಸಿಕೊಂಡು ಹೋಗುವಷ್ಟು ಧೈರ್ಯವಾಗಲಿ ಶಕ್ತಿಯಾಗಲಿ ಉಳಿದಿಲ್ಲ. ಈಶ್ವರನ ಶಾಪದಿಂದಲೋ, ವರಪ್ರಸಾದದಿಂದಲೋ—ಜೀವಂತವಿದ್ದು ಸಹ ಹುಚ್ಚಿಯಾಗಿಲ್ಲ! ಇದು ನಿಜವಾಗಿಯೂ ಆಶ್ಚರ್ಯದ ಸಂಗತಿ. ಸಮಾಜದ ಹಾಗೂ ಒಳಗಿನ ಭಯದಿಂದ, ಈಗ ಅವರನ್ನು ವಿರೋಧಿಸುವುದೂ ಆಗುವುದಿಲ್ಲ. ಎಲ್ಲ ಮಕ್ಕಳೂ ಅವನ ಬಲಾತ್ಕಾರದಿಂದಲೇ ಹುಟ್ಟಿವೆ— ನನ್ನ ಇಚ್ಛೆಯಿಂದಲ್ಲ. ಪುರುಷನು ತನ್ನ ಇಚ್ಛೆಯ ಮುಂದೆ ಸ್ತ್ರೀಯಳ ಇಚ್ಛೆ–ಅನಿಚ್ಛೆಯನ್ನಾಗಲಿ, ಮನಸ್ಸನ್ನಾಗಲಿ ಎಂದು ವಿಚಾರಮಾಡುತ್ತಾನೆ? ಮೊದಲು ನನ್ನ ಭಾವನೆಗಳನ್ನು ನಿರ್ಭಯವಾಗಿ ಅವನ ಮುಂದೆ ಪ್ರಕಟಿಸಲು ಸಮರ್ಥಳಿದ್ದೆ; ಆದರೆ ಈಗ ನನ್ನ ಸ್ತ್ರೀತ್ವವೇ ನಾಶವಾಗಿ ಹೋಗಿದೆ. ಹರಕು ಚಿಂದಿಯ ಗಂಟುಮಾತ್ರ ಆಗಿದ್ದೇನೆ. ಏನೂ ವಿಚಾರ ಮಾಡದೆ ಅವನೆಂದುದಕ್ಕೆಲ್ಲ 'ಹೂಂ' ಎನ್ನುತ್ತ ಬಂದಿದ್ದೇನೆ. ಒಂದು ದಿನ ಉಪದೇಶದ ಧ್ವನಿಯಲ್ಲಿ ಅವನೆಂದ:— "ಪತಿವ್ರತೆಯಾದ ಹೆಣ್ಣುಮಗಳೇ ಧನ್ಯಳು!" "ಅಹುದು!" "ಯಾರಿಗೆ ಪತಿವ್ರತೆ ಎನ್ನುತ್ತಾರೆಂಬುದು ಗೊತ್ತಿದೆಯೆ?" "ಇಲ್ಲ" "ಯಾವಳು ತನ್ನ ಪತಿಯಾಜ್ಞೆಯನ್ನು ವೇದವಾಕ್ಯವೆಂದು ತಿಳಿಯುವಳೋ ಅವಳೇ ಪತಿವ್ರತೆಯು ಒಪ್ಪಿಗೆಯೆ?" "ಹೂಂ" "ನನಗೆ ಹನ್ನೊಂದು ಮಕ್ಕಳು ಬೇಕು. ಈಗ ಆರು ಆಗಿವೆ. ಇನ್ನೂ ಐದು ಮಕ್ಕಳನ್ನು ಕೊಡುವೆಯಾ?" "ಹೂಂ" "ಹಾಗಾದರೆ ನೀನು ಪತಿವ್ರತೆ!" ಎಂದು, ಅಂದು ತನ್ನ ಬಾಹುಗಳಿಂದ ನನ್ನನ್ನು ಬಿಗಿದಪ್ಪಿ, ಏಳನೆಯ ಸಲ ತಾಯಿಯಾಗುವ ಬೀಜವನ್ನು ಬಿತ್ತಿದನು."

ಇದೇ ಏಳನೆಯ ಮಗುವಿನ ಪ್ರಸವ ವೇದನೆಯಿಂದ ಅಕ್ಕನ ಪ್ರಾಣಪಕ್ಷಿಯು ಅವಳ ದೇಹವನ್ನು ಬಿಟ್ಟು ಹಾರಿಹೋಯಿತು

ಬಹಳ ವರುಷಗಳ ಕಥೆ! ಈ ರೀತಿಯಾಗಿ, ನಮ್ಮ ಊರಿನ ಮೊಟ್ಟಮೊದಲಿನ ವಿದುಷಿಯಾದ, ಉದಾರಳಾದ ಮತ್ತು ವಿಚಾರಪೂರಿತಳಾದ ಸ್ತ್ರೀಯಳನ್ನು, ಪತಿವ್ರತೆಯಾಗಿ ಮಾಡಿಯೇ, ಸಮಾಜವು ಅವಳಿಗೆ ವಿಶ್ರಾಂತಿಯನ್ನು ನೀಡಿತು!!!

ಚಂದ್ರರೋದನ

(ನವ್ಯಕವನ)

ಪ್ರೊ. ಅರವಿಂದ ನಾಡಕರ್ಣಿ, ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬೈ

卐

ಇಗೋ ನೋಡು ಗೆಳೆಯ,
ಮೂರು ಮಜಲುಗಳ ಮಹಲು!
ತೊಟ್ಟಿಲಲಿ ತೂಗುತಿದೆ ತಳಹದಿ
ಜೋಗುಳ ಮಧ್ಯದಮಲಿನಲ್ಲಿ.
ಮೇಲಿನ ಮಾಡು ನರಳುತಿದೆ ಶರಮಂಚಕದ ಮೇಲೆ.
ಇದೇ ಇಮಾರತಿನಲಿ ಹೂಡುವನು ಮಾನವನು ಗಾಡಿ
ಆಶೆಯ ಎಂಜಿನ್ನು ಹಚ್ಚಿ.
ಮುಕ್ತಕಂಠದಿ ಕಲಿಪಿಲಿ ಉಲಿಯುತ ಹಾರಾಡುವ
ಅರಗಿಣಿಯ ಹಿಡಿಯಬೇಕೆಂಬುದೇ ಮಹದಾಶೆ.
ಅದರದೊಂದು ಜಾದು ಉಂಟು ಮಹಾರಾಯಾ,

ಅವನು ಡೇರೆ ಹೊಡೆದ ಮಜಲಿನಲಿ
ಸರ್ವಥಾ ಬರುವುದಿಲ್ಲ ಆ ಪಕ್ಕಿ,
ಅವನಾದರೋ? ಮೂರು ಮಜಲುಗಳಿಗೂ
ಒಯ್ಯುತ್ತಾನೆ ಬಿಡಾರ! ಆದರೇನು?
ಪ್ರತಿ ಮಜಲಿನಲಿ ಕೂತು ರೋದಿಸುವುದೇ ಗತಿ!
" ಅಯ್ಯೋ ಅರಗಿಣಿಯೇ,
ನಿನಗಾಗಿ ಎಷ್ಟು ಹಾತೊರೆವೆ ನಾನು!
ನಿನ್ನ ಮಧು-ಮಧುರ ನುಡಿಗಾಗಿ!
ನಿನ್ನ ಬಳಿಯಲ್ಲಿದ್ದ ಆಯ್ಸ್‌ಕ್ರೀಮು ಚಪ್ಪರಿಸ
ಬೇಕೆಂದು
ಫೇಡೆ–ಮಿಠಾಯಿಗಳ ಹೊಡೆಯಬೇಕೆಂದು
ಹಂಬಲಿಸಿ ಬಂದರೆ,
ನಾನಿರುವೆಡೆ ನೀ ಹಾಯುವುದೇ ಇಲ್ಲವಲ್ಲ!
ನನ್ನ ಪಾಲಿಗೆ ಕುಂಬಳಕಾಯೇ ಬರೆದಿದೆಯೇನು?
ಕಾದು ಕಾದು ಸೋತೆ ನಾನೀಗ,
ಇನ್ನು ಮುಂದೆಯಾದರೂ ಬರುವೆಯಾ? ...."

ಎಂಜಿನ್ನಿಗೆ ಹೊಸ ಪೆಟ್ರೋಲ್ ಕುಡಿಸಿ
ಮತ್ತೆ ಹೊಡೆಯುವನು ಗಾಡಿ,
ಎಷ್ಟಾದರೂ ಅಷ್ಟೇ ಪಾಪ!
ತಾಯ ಬಾಹುಬಲ್ಗಣ್ಣೆಯಲಿ ಅಳುವನು ರಾಮ
ಚಂದ್ರನ ಕೊಡು—ಎಂದು.

ಬಾ ಗೆಳೆಯ ಕೆಳಮಜಲಿನಲಿ
ಧೂಳಿಧೂಸದ ಸಂಭ್ರಮದಿ ಗರ್ಜಿಸುತಿದೆ
ಅಂಗಣದ ಮರಿಯಾನೆ!
" ನಿಲಿಸು ನಿಲಿಸೋ ರಿಂಗಣಗುಣಿತ
ಮಳಲಕೊತ್ತಳ ಕೆಡಹು
ನವಿಲಮರಿಯ ಗರಿಕಿತ್ತು ಕೇಕೆಮೊಗಕೆ ಜಡಿ ಬೇಗ.
ಅಗೋ ಬಂದ ಮಾವುತ ಅಂಕುಶಮಸೆದು.... "
ಸೂರ್ಯ-ಚಂದ್ರರನು ತೋಳತಕ್ಕೆಯಲಿ ದಕ್ಕಿಸಿದರು
ರಾಹುಕೇತು.
ಸಪ್ತರೇಖೆಗಳ ದಾಟದರೆ
ಸೊಂಟಕ್ಕೆ ಬೀಳುವುದು ಛಾಟೀ ಒದೆತ.

ಕೋಣೆಯ ಗೋಡೆಗಳಿಗೆಲ್ಲಾ ಕಣ್ಣು
ಸದಾ ಕಾವಲಿಟ್ಟು ನೋಡುತಿವೆ ದುರದುರನೆ.
ಎಂಥ ದುರ್ದೆಸೆಯಿದು!
ಅರಗಿಣಿಯನರಸಲು ಹಾತೊರೆದಿದೆ ಮರಿಯಾನೆ.
ಆದರೇನು ಪಾಪ!
ತಾಯಬಾಹುಬಲ್ಗಣ್ಣೆಯಲಿ ಅಳುವನು ರಾಮ
ಚಂದ್ರನ ಕೊಡು— ಎಂದು.
ಸಂತವಿಸುವ ಮುನಿವರ್ಯ ಹಿಡಿದ ಭವಿಷ್ಯದ ಕನ್ನಡಿ,
ಅವನ ಮನದಲಿ ಪ್ರಕಟವಾಗಿ
ಅದರಲಿ ಕಂಡಿತು ಮಸುಕು ಮಸುಕು ಬಿಂಬ

ಬರೀ ಬಿಂಬವಷ್ಟೇ!
ಇನ್ನು ಬಾ ನೋಡೋಣ ಮಧ್ಯಮಜಲಿನಲಿ,
ಇಗೋ ಬಿದ್ದಿದೆ ಪ್ರಾಣಿ ಹೋಟೆ ಬುರುಡೆ ಕೈಯಲಿ ಹೊತ್ತು
ಸೊಳ್ಳೆಯ ಜಾಲದ ಒಳಗೆ.
ಜಾಲ ಚಿರಿಚಿರಿ ಹರಿದು ಒಳಹೊಕ್ಕು ಚುಚ್ಚುತಿವೆ ಸೂಜಿ.
ರಕ್ತ ಹೀರುತಿವೆ ಗುಂಗಾಡುಪಡೆ–ಪಡೆ,
ಲೋಕಸಂತೆಯ ವಿಪಕಾರಿ.
ಓಹೋ ಸಂತೆಯನು ಹೊಕ್ಕಿದ್ದಾನೆ ಆವನೀಗ!
ಒಡೆದ ತಿಜೋರಿಯು ಹೇರುವ ನಾಯಿಪಾಡಿನ ಭಯ
ಮನ ಕುಟುಕುತಿದೆ ಗೃಧ್ರಕೊಕ್ಕಿನಿಂದ.

ಆದ ನೀಗಲು ಹೂಡುವನು ಹೋರಾಟ ರುಧಿರಧಾರೆಯಿರಿದು
ಹುರಿಹಾಕಿದ ಕರಿಮೀಸೆಯನು ಕಿತ್ತೆಸೆಯುತಿವೆ
ಒಂದೊಂದು ಸಹ್ಯಾದ್ರಿ ಸಮಸ್ಯೆ ನಾಗಪಾಶ ಹಾಕಿ.
ಆ ಬಿಗಿತದಲಿ ಕಿರಲುವನು—
"ನಿಲಿಸು ನಿಲಿಸೀ ಚಕ್ರವ್ಯೂಹ ಬಾಳು,
ಇಗೋ ನುಗ್ಗಾಯಿತು ಅಭಿಮನ್ಯುಶರೀರ ಸಾಕಿನ್ನು.
ಮೀಸೆಗಡ್ಡ ಬೋಳಿಸು. ಮೋರೆ ಥಳಥಳಿಸಲಿ
ಕೈಯಲಿ ಹಿಡಿ ಪಾಟಿ-ಪುಸ್ತಕ ಚೀಲ.
ನಡೆ ಮೈದಾನಕೆ ಚೆಂಡಾಡಲು, ಹಣ್ಣುಕಾಯಿಗೆ
ಗುಂಡೆಸೆ ಬಾ!
ಅದೋ ಕೆಳಮಜಲಿನಲಿ ಗುಬ್ಬಿ-ನವಿಲು-ಕೋಗಿಲೆಗಳ
ಹೆಮ್ಮೇಳ.

'ಬನ್ನಿ ಬನ್ನಿ ಕನಸುಗಳೇ ಮರಳಿ ಮನೆಗೆ ಬನ್ನಿ'
ಇನ್ನು ಬಾರವು, ಇನ್ನು ಬಾರವು. ಆ ಕಾಲ ಕಳೆಯಿತಿನ್ನು!
ನಮಗಿನ್ನಿದೇ ಸರಿ ಬಂಧನವಾಸ.
ಮೈಬಿಗಿದ ನಾಗಪಾಶ ಕಡಿಯುಬಾರೋ ಗರುಡ
ಮಹಾಶಯ........'
ತಾಯ ಬಾಹುಬಲ್ಗಣ್ಣಿಯಲಿ ಅಳುವನು ರಾಮು—
ಚಂದ್ರನ ಕೊಡು ಎಂದು.
ಸಂತವಿಸುವ ಮುನಿವರ್ಯ ಹಿಡಿದ ಭೂತದ ಕನ್ನಡಿ
ಅವನ ಮನದಲಿ ಪ್ರಕಟನಾಗಿ.
ಅದರಲಿ ಕಂಡಿತು ಮಸುಕು ಮಸುಕು ಬಿಂಬ.
ಬರೀ ಬಿಂಬವಷ್ಟೇ

ನೋಡಿದೆಯಾ? ಈಗ ಇತ್ತ ಬಾ ತುದಿಮಜಲಿನಲಿ
ಆನುಗೋಲಿಗೆ ತೂಗುತಿದೆ ಥಳಥಳಿಸುವ ತಲೆಯೋಡು.
ಒಳಹೊಕ್ಕ ಕಣ್ಣು ತೊವಲಜಾಳಿಗೆಯಿಂದ ಇಣಿಕಿ
ನೋಡುತಿವೆ ಕೆಳಮಜಲುಗಳ, ಅವನೂ ಕಿರಲುವನು—
"ಅಯ್ಯೋ ಅಲ್ಲೇ ಹಾರಾಡುತಿದೆ ಅರಗಿಣಿ,
ನೆತ್ತರ ಬುಗ್ಗೆಬುಗ್ಗೆಯಲಿ ರೆಕ್ಕೆ ಬಡಿಯುತಿದೆ ಸರಾಗವಾಗಿ.
ಇದೇನು ನಮ್ಮ ಬಡಕಲು ಮೂಳೆ ಶರಶಯ್ಯೆಯ ಮೇಲೆ,
ಗುಟ್ಟಿಕೆ ತೂಗುವ ಹರಕು ಧೋತರ. ಥೂ ಒಗೆಯದನು!
ದುಂಬಿ ಚಿಟ್ಟೆಗಳ ನಡುವೆ ಕಣ್ಣುಕಪ್ಪಡಿ ಗೂಬೆ.
ಹೆಪ್ಪುಗಟ್ಟಿದ ರಕ್ತದಲ್ಲೇನಿದೆ ಜೀವನ?

ಒಗೆ ಹಾಸಿಗೆ ಸುರುಳಿಸುರುಳಿ ಮಾಡಿ, ಸುಡು ಸುಡು
ಮಂಚ!
ನೆಗೆ ಜಿಗಿ ಓಡಲ್ಲಿ ಹಾದಿಯ ಕಲ್ಲೊಂದು ತುಳಿತುಳಿದು,
ಸುಟ್ಟುರಿಯಾನೇಶದಲಿ ಸೂರೆಯಿಡು ದಿಕ್ತಟ.
ಸಾಕು ಸಾಕೀ ಸೆರೆಮನೆಯ ಕೂಳು......."
ಅವನೂ ಹಂಬಲಿಸುವನು ಅರಗಿಣಿಯ ದರ್ಶನಕ್ಕೆ.
ತಾಯ ಬಾಹುಬಲ್ಗಣಿಯಲಿ ಅಳುವನು ರಾಮು
ಚಂದ್ರನ ಕೊಡು ಎಂದು.
ಸಂತವಿಸುವ ಮುನಿವರ್ಯ ಹಿಡಿದ ಭೂತದ ಕನ್ನಡಿ,
ಅವನ ಮನದಲಿ ಪ್ರಕಟನಾಗಿ.
ಅದರಲಿ ಕಂಡಿತು ಮಸುಕು ಮಸುಕು ಬಿಂಬ
ಬರೀ ಬಿಂಬವಷ್ಟೇ.
ಇದೊಂದು ನಿರಂತರ ಚಂದ್ರೋದನ ಗೆಳೆಯಾ!

———

ಶ್ರೀವಾದಿರಾಜರ ರುಕ್ಮಿಣೀಶ ವಿಜಯ

(ಸಂಸ್ಕೃತ ಕಾವ್ಯಪರಿಚಯ)

ಡಾ. ಎಚ್. ಬಿ. ಕೊಣ್ಣೂರ ಎಲ್. ಸಿ. ಪಿ ಎಸ್. ಗದಗ

卐

ಶ್ರೀವಾದಿರಾಜರು ಮಹಾಯತಿಗಳೂ ಅಹುದು; ಮಹಾಕವಿಗಳೂ ಅಹುದು. ಅವರು ಬರೆದ ರುಕ್ಮಿಣೀಶ ವಿಜಯವೆಂಬ ಮಹಾಕಾವ್ಯವೇ ಅವರ ಕಾವ್ಯಮಹತಿಗೆ ಸಾಕ್ಷಿ. ಯಾರ ಮನಸ್ಸನ್ನಾದರೂ ಸೆಳೆಯುವ ಆ ಕಾವ್ಯದಲ್ಲಿಯ ಹಲಕೆಲವು ಸುಭಾಷಿತಗಳನ್ನು (General Truths) ಇಲ್ಲಿ ಉದಾಹರಿಸಿದ್ದೇನೆ. ಕಾವ್ಯವಿಸ್ತಾರ ಪಂಡಿತರದು.

೧ ತಮ್ಮ ಕಾವ್ಯದಲ್ಲಿ ಎಲ್ಲಿಯಾದರೂ ಸ್ವಲ್ಪ ದೋಷ ಕಂಡು ಬಂದಲ್ಲಿ, ಇಡೀ ಕಾವ್ಯವೇ ತ್ಯಾಜ್ಯವಲ್ಲ....ಎಂದು ಹೇಳುತ್ತಾರೆ–

ಬುಧಾಃ ವಿಧಸ್ತೈಃ ಕಿಮುಪೇಕ್ಷಣೀಯಾ ಪಯೋಬ್ಧಿಜಾ
ಚಂಚಲತಾಖ್ಯದೋಷಾತ್ ||

ಚಂಚಲತೆ ಎಂಬ ದೋಷವಿದೆ ಎಂದಮಾತ್ರಕ್ಕೆ, ವಿದ್ವಾಂಸರು ಲಕ್ಷ್ಮಿಯನ್ನು ಉಪೇಕ್ಷಿಸುತ್ತಾರೆಯೆ?

೨ ವಿಷ್ಣುವಿನ ದ್ವೇಷಿಗಳಾದ ರಾಕ್ಷಸರ ಭಾರದಿಂದ ಪೃಥ್ವೀದೇವಿಯು (ವಿಷ್ಣುಪತ್ನಿ) ಅತಿ ಖಿನ್ನಳಾದಳು. ಇದು ಸಹಜವೇ ಯಾಕೆಂದರೆ—

ತಥಾ ಹಿ ಲೋಕೇ ಪತಿನಿಂದಕೇಭ್ಯಃ ಪತಿವ್ರತಾನಾಂ
ಅಪರಃಕ್ವಭಾರಃ ||

ಪತಿವ್ರತೆಯರಾದ ಸ್ತ್ರೀಯರಿಗೆ ತಮ್ಮ ಪತಿನಿಂದಕರಿಗಿಂತ ಭಾರತರ ವಸ್ತುವಾವುದು?

೩ ವಿಷ್ಣುವು ಮೊದಲು ಶೇಷನಿಗೆ ರೋಹಿಣೀ ಉದರದಲ್ಲಿ ಹುಟ್ಟಲು ಅಪ್ಪಣೆಕೊಟ್ಟನು. ಆಗಸರು ಮುಂದಿನ ಊರಿಗೆ ಹೋಗು. ವಾಗ ತಮ್ಮ ಹಾಸಿಗೆಯನ್ನು ಕಳಿಸುವಂತೆ—

ಸಂಪ್ರೇಷಯಂತಿಸ್ಮ ನರೈಃ ನರೇಂದ್ರಾಃ ಶಯ್ಯಾಂಸ್ವಕೀಯಾಂ
(ಶೇಷನು ವಿಷ್ಣುವಿನ ಹಾಸಿಗೆ) ಪುರತಃ ಪ್ರಯಾಣೇ ||

೪ ಪರಮಾತ್ಮನಾದ ಶ್ರೀಕೃಷ್ಣನಿಗೆ ಜನನವೆಂಬುದಿದೆಯೇ? ಆದರೂ ಅವನು ಹುಟ್ಟಿದ್ದನ್ನು ನೋಡಿ ಸಕಲ ಚರಾಚರವೂ ಸಂತಸಪಟ್ಟಿತಂತೆ!

ತಥಾಹಿ ತುಷ್ಟಿಃ ಭುವಿ ಕಸ್ಯನಸ್ಯಾತ್ ಅದೃಷ್ಟಪೂರ್ವಸ್ಯ
ನಿರೀಕ್ಷಣೇನ ||

ಹಿಂದೆ ಎಂದೂ ನೋಡದ ವಸ್ತುವನ್ನು ಕಂಡಾಗ ಯಾರಿಗೆ ಸಂತೋಷವಾಗುವುದಿಲ್ಲ?

೫ ಬಾಲಕೃಷ್ಣನನ್ನು ವಸುದೇವನು ಕೈಯಲ್ಲಿ ತೆಗೆದುಕೊಂಡು ಗೋಕುಲಕ್ಕೆ ಹೊರಟಾಗ, ಯಮುನೆ ಹಾದಿಯನ್ನು ಕೊಟ್ಟಳು. ಯಾವ ವಿಘ್ನಗಳೂ ಇಲ್ಲದೇ ಅವನು ಗೋಕುಲತಲ್ಪಿದನು — ಯಾಕೆಂದರೆ – ಕರಸ್ಥ ದೇವಸ್ಯ ಕುತೋಂತರಾಯಃ || ದೇವನೇ ಕೈಯಲ್ಲಿರುವವನಿಗೆ ಎಲ್ಲಿಯ ವಿಘ್ನ?

೬ ಕ್ರೂರ ಮನುಷ್ಯನು ಕೂಡ ತನ್ನ ಹೆಂಡತಿಯ ಸಂಬಂಧಿಕರ ವಿಷಯದಲ್ಲಿ ತ್ರಾಸಕೊಡುವುದಿಲ್ಲ.

ಕ್ರೂರೋಪಿ ಮರ್ತ್ಯಃ ಸ್ವಕಲತ್ರಸಾಂದ್ರ ಸಂಬಂಧಭಾಜಾಂನಹಿ
ತಾಪದಾಯಿ ||

೭ ಪೂತನಾ ಬಾಲಕೃಷ್ಣನಿಗೆ ವಿಷಪಾನ ಮಾಡಿಸಿದಾಗ —

ತಥಾ ಹಿ ಕೃತ್ಯಾ ಮಹತಿಪ್ರಯುಕ್ತಾ ಸ್ವಕೀಯ ಮೃತ್ಯುತ್ವ-
ಮುಪೈತಿ ಪೃಥ್ವ್ಯಾಂ ||

ಮಹಾತ್ಮರಲ್ಲಿ ಎಸಗಿದ ಪಾಪವು ಸ್ವನಾಶವನ್ನೇ ತಂದೊಡ್ಡುವುದು.

೮ ನಾಮಸ್ಮರಣೆಯು ಜ್ಞಾನಭಕ್ತಿಪೂರ್ವಕವೇ ಇರಬೇಕು. ದ್ವೇಷಮೂಲಕ ದೇವರ ಹೆಸರು ತೆಗೆದುಕೊಂಡರೆ ಫಲವಿಲ್ಲ.

ಹಿಂಸಾರ್ಥಮಾಲಿಂಗಯತುಸ್ತ್ವಕ್ಷ್ಣೋಃ ಕಿಂ ಚೇಷ್ಟಯಾ ತುಷ್ಯತಿ
ಕಾಮಧೇನುಃ ||

ಹುಲಿಯು ಹಿಂಸೆಮಾಡಲೆಂದೇ ಆಕಳನ್ನು ಅಪ್ಪಿಕೊಳ್ಳುತ್ತದೆ. ಆ ಹುಲಿಯು ಆಲಿಂಗನದಿಂದ ಆಕಳಿಗೇನಾದರೂ ತೃಪ್ತಿಯೆ?

೯ ರಾಕ್ಷಸನು ಕೃಷ್ಣನನ್ನು ಹೊತ್ತುಕೊಂಡು ವಿಷ್ಣುಪದ (ಆಕಾಶ) ವನ್ನು ಹೊಂದಲೆಂದು ಹೊರಟನು; ಆದರೆ ತಾನೇ ಬಿದ್ದನು.

ಅಯೋಗ್ಯ ಕಾಮಸ್ಯ ಕಥಂ ನ ಪಾತಃ ||

ಯೋಗ್ಯತೆ ಇಲ್ಲದೇ ಇಚ್ಛೆ ಮಾಡುವವನು, ಪತನಹೊಂದುವುದು ಸಹಜವೇ!

೧೦ ಯಶೋದಾತನಯನಾದ ಕೃಷ್ಣನ ಚೋರತನವು ಕೂಡ ನಿಂದ್ಯವಾಗಲಿಲ್ಲ. ಯಾಕೆಂದರೆ—

ತಥಾ ಹಿ ಲಕ್ಷ್ಮೀರ್ನಯನಾಂತ ಭಾಜಾಂ ಅಸಹ್ಯ ದೋಷೋಪಿ
ಭವೇದ್ಗುಣಾಯ ||

ಲಕ್ಷ್ಮೀ ಕಟಾಕ್ಷಕ್ಕೆ ಒಳಗಾದವರ ಅಸಹ್ಯದೋಷಗಳು ಕೂಡ ಸದ್ಗುಣಗಳೆಂದು ಎಣಿಸಲ್ಪಡುತ್ತವೆ.

ದೇವರಿಗಾಗಿ….!

(ಒಂದು ಸ್ವತಂತ್ರಕಥೆ)

ಶ್ರೀ. ಬಳ್ಳೂರು ಸುಬ್ರಾಯ ಅಡಿಗ,
ಗಂಗೊಳ್ಳಿ

ಮನುಷ್ಯನ ದುರಭಿಮಾನದ ಮುಳಿಸಿಗೆ ಒಮ್ಮೊಮ್ಮೆ ದೇವರೂ ಗುರಿಯಾಗಬೇಕಾಗುತ್ತದೆ. ಅದರಂತೆಯೇ ಆತ್ಮೀಯರ ವಿಯೋಗಭೀತಿ, ಎಂತಹ ದುರಭಿಮಾನಿಯಾದ ಬುದ್ಧಿಜೀವಿಯ ಮನಸ್ಸನ್ನೂ ಹಣ್ಣುಗೊಳಿಸುತ್ತದೆ!

卐

ವಿಷಮತೆಯು ಉರಿಹಚ್ಚಿ ಪುರೋಹಿತರು ಇದೀಗ ತೆರಳಿದ್ದರು. ರಾಮರಾಯರ ಒಡಲಲ್ಲಿ ಅದು ಧಗಧಗನೆ ಹೊತ್ತಿಕೊಂಡಿತು. ಆ ತಾಪವನ್ನು ತಾಳಲಾರದೆ….'ಒಕ್ಕಲುಗಳನ್ನೆಲ್ಲ ಮನೆಗೊಬ್ಬೊಬ್ಬರಂತೆ ಬರಮಾಡು' ಎಂದು ಆಳಿಗೆ ಅಪ್ಪಣೆಯಿತ್ತರು. 'ಈಗಲೆ?' 'ಹೌದು; ಇನ್ನರ್ಧಗಂಟೆಯೊಳಗೆ. ಯಾವ ಮನೆಯೂ ತಪ್ಪಬಾರದು; ಹೂಂ; ಓಡು—' ಅಬ್ಬರಿಸಿದರವರು.

ಒಕ್ಕಲುಗಳೆಲ್ಲ ಅಂಗಳದಲ್ಲಿ ಒಟ್ಟುಗೂಡಿದರು. ಜಮೀನ್‌ದಾರರ ಮುಖ ನೋಡುತ್ತಲೇ, ಇಂದೇನೋ ಅನಿಷ್ಟ ಸಂಭವಿಸಲಿದೆಯೆಂದು ಅವರಿಗೆ ಭಾಸವಾಯಿತು.

'ಶಿವರಾಯ ನಮ್ಮನ್ನವಮಾನಿಸಿದ್ದಾನೆ ಅದೂ ದೇವಾಲಯ-ದಲ್ಲಿ! ನೀವಾರೂ ಇನ್ನು ಮುಂದೆ ದೇವಾಲಯಕ್ಕೆ ಕಾಲಿಡಬಾರದು.! 'ಎಂದಿನ ವರೆಗೆ?—' ಯಾರೋ ಒಬ್ಬರು ಸಾಹಸದಿಂದ ಕೇಳಿದರು. 'ಅದರ ಇತ್ಯರ್ಥವಾಗಬೇಕು. ದೇವರೆದುರು ಆದ ಅಪಮಾನಕ್ಕೆ ತಕ್ಕ ಪ್ರಾಯಶ್ಚಿತ್ತ ನಡೆಯಬೇಕು, ನನ್ನ ಅಪ್ಪಣೆ ತಿಳಿಯಿತಷ್ಟೆ! ಇನ್ನು ನೀವು ಹೋಗಬಹುದು!'

ಒಕ್ಕಲುಗಳೆಲ್ಲ ಭಾರವಾದ ಮನಸ್ಸಿನಿಂದ ಹೊರನಡೆದರು.

× × × ×

ಸುಮಾರು ೫೦–೬೦ ಮನೆಗಳುಳ್ಳ ಆ ಕಿರುಹಳ್ಳಿಯ ಒಡೆತನ ಇಬ್ಬರು ಜಮೀನ್‌ದಾರರಿಗೆ ಸೇರಿದುದು. ವಂಶಪಾರಂಪರ್ಯವಾಗಿ ಆ ಎರಡೇ ಮನೆತನಗಳು ನಡೆಯುತ್ತಿದ್ದುವು. ಒಂದು ಶಿವರಾಯರದು; ಮತ್ತೊಂದು ರಾಮರಾಯರದು. ವಿದ್ಯೆ, ಯೋಗ್ಯತೆ, ಸಂಪತ್ತಿ— ಎಲ್ಲದರಲ್ಲೂ ಅವರಿಬ್ಬರು ಸಮಾನರೇ; ಆದರೆ ರಾಮರಾಯರು ತುಂಬಾ ಮುಂಗೋಪಿಗಳು; ಶಿವರಾಯರು ಸಮಾಧಾನಿಗಳು. ಈ ಒಂದು ಅಂಶವನ್ನು ಬಿಟ್ಟರೆ ಅವರಿಬ್ಬರಲ್ಲಿ ಹೆಚ್ಚೇನೂ ವ್ಯತ್ಯಾಸವಿದ್ದಿಲ್ಲ.

ಹಳ್ಳಿಯ ಏಕಮಾತ್ರವಾದ ನರಸಿಂಹದೇವಾಲಯವನ್ನು ಶಿವ-ರಾಯರೇ ಕಟ್ಟಿಸಿದುದಾದರೂ, ಹಳ್ಳಿಗರೆಲ್ಲ ಒಮ್ಮನಸ್ಸಿನಿಂದ ಅದಕ್ಕೆ ಸಹಕಾರ ನೀಡಿದ್ದರು. ತಮ್ಮೂರಿಗೆ ಒಂದಾದರೂ ದೇವಾಲಯ ಬೇಕೆಂಬ ಅವರ ಬಯಕೆ, ೧೨–೧೫ ವರ್ಷಗಳ ಹಿಂದೆ ಈಡೇರಿತ್ತು. ರಾಮರಾಯರೂ, ಆ ಸತ್ಕಾರ್ಯದಲ್ಲಿ ಭಾಗವಹಿಸಿದ್ದರು. ಸ್ವಭಾವತಃ ಅವರು ಆಸ್ತಿಕರಲ್ಲದಿದ್ದರೂ, ತಮ್ಮ ಒಕ್ಕಲುಗಳ ಹಿತದೃಷ್ಟಿ ಅವರಿಗೂ ಇತ್ತು.

ಅಂದಿನಿಂದ ಇಂದಿನವರೆಗೆ ಯಾವೊಂದು ವಿಘ್ನವೂ ಇಲ್ಲದೆ ಭಗವಾನ್ ನರಸಿಂಹ, ಊರಿನವರ ಹರಕೆಯನ್ನು ವಸೂಲು ಮಾಡು-ತ್ತಿದ್ದ. ನರಸಿಂಹನೆಂದರೆ ಘಟಾಘಟಿಯೆಂದು ಮೊದಲೇ ಪ್ರತೀತಿ-ಯಿದೆ ಆ ನಂಬುಗೆಯನ್ನು ಉಳಿಸಿಕೊಂಡು ಅವನು ಆ ದೇಗುಲದಲ್ಲಿ ಬಾಳಿದ್ದ. ಊರವರಷ್ಟೇ ಅಲ್ಲ—ಪರವೂರವರೂ ಅಲ್ಲಿ ಬಂದು, ತಮ್ಮ ಇಷ್ಟಾರ್ಥಸಿದ್ಧಿಯಾದರೆ ಇಂತಹ ಹರಕೆ ಒಪ್ಪಿಸುತ್ತೇವೆಂದು ಹೇಳಿ-ಹೋಗುತ್ತಿದ್ದರು. ಧಾರಾಳವಾಗಿ ಹರಿಯುತ್ತಿದ್ದ ಹರಕೆಗಳ ಪ್ರವಾಹ ನರಸಿಂಹನ ಕಾರಣಿಕತೆಯನ್ನು ಎಲ್ಲೆಡೆಯಲ್ಲೂ ಪಸರಿಸಿತ್ತು.

ರಾಮರಾಯರಿಗೆ ದೇವರ ಕಾರಣಿಕತೆಯಲ್ಲಿ ವಿಶ್ವಾಸವಿಲ್ಲ-ದಿದ್ದರೂ, ಅವರ ಹೆಂಡತಿ ಮಾತ್ರ ಅತೀವಶ್ರದ್ಧೆಯುಳ್ಳವಳು ಪ್ರತಿ-ದಿನವೂ ಅವಳು ದೇವಸ್ಥಾನಕ್ಕೆ ಹೋಗಿಬರುತ್ತಿದ್ದಳು. ಅವಳ ಭಕ್ತಿ-ಶ್ರದ್ಧೆ ಯಾರನ್ನೂ ಬೆರಗುಮಾಡುವಂತಿತ್ತು. ಎಷ್ಟೋ ವರ್ಷಗಳಿಂದ ಮಕ್ಕಳಿಲ್ಲವೆ ಕೊರಗುತ್ತಿದ್ದ ಅವಳು ದೇವರಿಗೆ ಹರಕೆ ಹೊತ್ತು-ಕೊಂಡಳು. ಅವಳ ಶ್ರದ್ಧೆಗೆ ಸರಿಯಾಗಿ ಒಂದು ರಾತ್ರಿ ದೇವರು ಸ್ವಪ್ನದಲ್ಲಿ ಕಾಣಿಸಿಕೊಂಡು, ಮಗುವನ್ನು ಕೈನೀಡಿಟ್ಟಂತೆ ಭಾಸ-ವಾಯಿತಂತೆ. ಮುಂದೆ ಒಂದು ವರ್ಷದಲ್ಲೇ ಅವಳು ಒಂದು ಮಗುವಿನ ತಾಯಿಯಾದಳು. ಹುಟ್ಟಿದ ಮಗುವಿಗೆ ನರಸಿಂಹನೆಂದೇ ನಾಮಕರಣ-ವಾಯಿತು. ಅವನು ದಿನಾಲೂ ತಾಯಿಯೊಡನೆ ದೇವಾಲಯಕ್ಕೆ ತಪ್ಪದೆ ಹೋಗುತ್ತಿದ್ದ; ಅಲ್ಲದೆ, ಸಂಜೆ ಮನೆಯಲ್ಲೂ ಭಜನೆಮಾಡಿ, ತಾನು ದೇವರ ಅನುಗ್ರಹದಿಂದಲೇ ಹುಟ್ಟಿದ ಹುಡುಗನೆಂದು ಖಚಿತ-ಪಡಿಸುತ್ತಿದ್ದ.

ತಂದೆಯ ಆಜ್ಞೆಯಿಂದ ನರಸಿಂಹ ಅಂದು ದೇವಸ್ಥಾನಕ್ಕೆ ಹೋಗದಾದ; ಅವನ ಮನಸ್ಸಿನ ಕಳವಳವನ್ನು ಗುರುತಿಸುವುದು ರಾಮರಾಯರಿಗೆ ಕಷ್ಟವಾಗಲಿಲ್ಲ. ಅವರೇನು? ಒಮ್ಮೆ ಮಾಡಿದ ನಿರ್ಧಾರವನ್ನು ಅವರಂತಹ ಮಾನಧನರು ಮುರಿಯುವರೆ? 'ಮಗೂ;

ದೇವಸ್ಥಾನವೇನು, ಮನೆಯೇನು? ದೇವರು ಸರ್ವವ್ಯಾಪಿಯಲ್ಲವೆ? ಅವನನ್ನು ಅನನ್ಯಭಕ್ತಿಯಿಂದ ಭಜಿಸಿದರೆ ಸರಿ! ನೀನು ಮನೆಯಲ್ಲೇ ದೇವರಕೋಣೆಯಲ್ಲಿ ಕುಳಿತು ಭಜನೆಮಾಡು' ಎಂದು ಮಗನಿಗೆ ತಿಳಿಯಹೇಳುವರು. 'ಆದರೆ ಅಪ್ಪಾ, ದೇವರಮೇಲೆ ಕೋಪಮಾಡಿ ನಾವು ಬಾಳುವುದುಂಟೆ! ಅದು ನ್ಯಾಯವೆ?' ಎಂದು ಮಗನೆನ್ನುವನು.

ಮುಗ್ಧ ಬಾಲಕನ ಪ್ರಶ್ನೆಗೆ ನಾಸ್ತಿಕ ತಂದೆಯು ಏನಾದರೊಂದು ಉತ್ತರಕೊಡಬಹುದಿತ್ತು; ಆದರೆ ಮಗನ ಆಸ್ತಿಕಮನಸ್ಸಿಗೆ ಆಘಾತವನ್ನುಂಟುಮಾಡುವುದು ಅವರಿಗೆ ಬೇಕಿರಲಿಲ್ಲ. 'ಮಗೂ, ದೇವರ ಮೇಲೆ ನಮಗೇನೂ ಕೋಪವಿಲ್ಲ; ಆದರೆ ನಮಗಾದ ಅವ-ಮಾನವನ್ನು ಕಣ್ಣುಮುಚ್ಚಿ ಸಹಿಸುವುದು ನಿನಗಾದರೂ ಇಷ್ಟವೆ? ದೇವರು ಅದಕ್ಕೆ ತಕ್ಕ ಶಿಕ್ಷೆ ವಿಧಿಸಿದೊಡನೆಯೇ, ನಾನು ದೇವಾಲಯಕ್ಕೆ ಎಂದಿನಂತೆ ಕಾಲಿಡುತ್ತೇನೆ' ಎಂದರು.

ಆ ಸುಯೋಗ ಬೇಗನೆ ಬರಲೆಂದು ನರಸಿಂಹ ಹಾರೈಸುತ್ತಿದ್ದ.

ಇಷ್ಟೆಲ್ಲ ಅನರ್ಥಗಳಿಗೆ ಕಾರಣವಾದ ಘಟನೆಯೇನೂ ದೊಡ್ಡ-ದಿದ್ದಿಲ್ಲ. ಶಿವರಾಯರ ಪುರೋಹಿತ ನಾರಾಯಣಭಟ್ಟರಿಗೂ ರಾಮ-ರಾಯರ ಪುರೋಹಿತ ಗೋವಿಂದ ಉಪಾಧ್ಯರಿಗೂ ಮನಸ್ತಾಪವಿತ್ತು. ಒಂದೇ ಕಸುಬಿನ ಇವರಿಬ್ಬರು, ಮತ್ತೊಬ್ಬರನ್ನು ಅಪಮಾನಿಸಲು ಸಂದರ್ಭವನ್ನು ಕಾಯುತ್ತಿದ್ದರು. ಆ ಹಳ್ಳಿಯ ಪೌರೋಹಿತ್ಯವೆಲ್ಲ ಅವರಿಬ್ಬರಿಗೇ ಸೇರಿದುದು. ಸಾಕಷ್ಟು ಸಂಪಾದನೆಯಾಗುತ್ತಿದ್ದುದ-ರಿಂದಲೇ ಆ ದ್ವೇಷಾಗ್ನಿಯನ್ನು ಪ್ರಜ್ವಲಿಸಲು ಯಾವಾಗಲೂ ಬಿಡುವು ಸಿಗುತ್ತಿತ್ತು.

ಅಂದು ರಾಮರಾಯರು, ತಮ್ಮ ಪುರೋಹಿತರೊಡನೆ ಹಣ್ಣು-ಕಾಯಿ ಕೊಟ್ಟು ನರಸಿಂಹದೇವಾಲಯದ ಹರಕೆಯೊಂದನ್ನು ತೀರಿಸಿ ಬರಲು ಹೇಳಿದರು. ಉಪಾಧ್ಯರು ದೇವಾಲಯಕ್ಕೆ ಹೋದರು. ಅರ್ಚಕರು ಬರುವ ವರೆಗೆ ಕಾದು ಅವರಿಂದಲೇ ಸೇವೆ ಸಲ್ಲಿಸಿಕೊಂಡು ಬರುವುದು ಅಲ್ಲಿಯ ನಿಯಮವಾಗಿತ್ತಾದರೂ, ಉಪಾಧ್ಯರು ಹಾಗೆ ಮಾಡಲಿಲ್ಲ ಸ್ವಲ್ಪ ಸಮಯದ ವರೆಗೆ ಕಾದರೂ ಭಟ್ಟರು ಬರಲಿಲ್ಲ. 'ನಾನೇನು ಬ್ರಾಹ್ಮಣನಲ್ಲವೇ? ನಾನೇ ಮುಗಿಸಿಬಿಡುತ್ತೇನೆ ಪೂಜೆ! ಇವನದೇನು ಮಹಾ!' ಎಂದು ಉಪಾಧ್ಯರು ಘಂಟಾವಾದನಕ್ಕಾ-ರಂಭಿಸಿದರು.

ಅರ್ಧಪೂಜೆಯಾಗುವಷ್ಟರಲ್ಲೇ ಭಟ್ಟರು ರುದ್ರಾವತಾರ ತಾಳಿ ಅಲ್ಲಿಗೆ ಬಂದರು. ಯಾವಯಾವ ಪೂಜೆ ಯಾರುಯಾರಿಗೆಂದು ಮೊದಲೇ ನಿಶ್ಚಯವಾಗಿತ್ತು. ಈ ಅಕ್ರಮಪ್ರವೇಶದ ನೆಪವೊಂದು ಹಿಂದಿನ ಸೇಡು ತೀರಿಸಿಕೊಳ್ಳಲು ಅನುವು ಮಾಡಿಕೊಟ್ಟಿತು. ನೇರವಾಗಿ ಗರ್ಭ-ಗುಡಿಯೊಳಹೊಕ್ಕು ಉಪಾಧ್ಯರ ಜುಟ್ಟುಹಿಡಿದು ಹೊರದಬ್ಬಿ, ತಾವೇ ಪೂಜೆಗಾರಂಭಿಸಿದರು. ಉಪಾಧ್ಯರು ಕನಲಿ ಕೆಂಡವಾಗಿ ಹಾಗೆಯೇ ಹಿಂದೆರಳಿದರು.

ಇಷ್ಟೊಂದು ಸಣ್ಣಘಟನೆಗೆ ಉಪ್ಪು-ಖಾರ ಹಚ್ಚಿ ಜಮೀನ್‌ದಾ-ರರ ಮನಸ್ಸು ತಿರುಗಿಸಿದವರೇ ಉಪಾಧ್ಯರು. 'ನಾನು ಕಾದು ಕಾದು ಸಾಕಾಗಿ ಪೂಜೆಮಾಡತೊಡಗಿದೆ. ಭಟ್ಟರು ಶಿವರಾಯರನ್ನು ಅಲ್ಲಿಗೆ ಕರೆತಂದರು—'ಈ ಬ್ರಾಹ್ಮಣನಿಗೆ ಅದೇನು ಸೊಕ್ಕು! ರಾಮರಾಯರ ಬಲದ ಮೇಲೆ ಹಾರಾಡುತ್ತಿದ್ದಾನೆ' ಎಂದು ಹೇಳಿದರು. ಭಟ್ಟರು ನನ್ನನ್ನು ಎಳೆದು ಹೊರಹಾಕಿದಾಗ ಶಿವರಾಯರು ತುಟಿ ಪಿಟ್ಟೆನ್ನ-ಲಿಲ್ಲ!' ಎಂದು ಕಲ್ಲು ಕರಗುವಂತೆ ಉಪಾಧ್ಯರು ಅತ್ತರು.

ರಾಯರ ಕೋಪ ಎಲ್ಲೆಮೀರಿತು. ಇಷ್ಟು ಸಣ್ಣ ವಿಚಾರಕ್ಕೆ ಇಂತಹ ಶಿಕ್ಷೆಯೆ?

'ಉಪಾಧ್ಯರೆ; ಇದು ನಿಮ್ಮ ಅಪಮಾನವಲ್ಲ; ನನ್ನ ಅಪಮಾನ. ಆ ಶಿವರಾಯ ಹಾಗೆಂದನೆ? ನೋಡಿಕೊಳ್ಳುತ್ತೇನೆ ...ಆ ಭಟ್ಟನ ಸೊಕ್ಕು, ಶಿವರಾಯನ ಹೆಮ್ಮೆ—ಎಲ್ಲ ಮಣ್ಣುಗೂಡಿಸದಿದ್ದರೆ, ನಾನು ರಾಮರಾಯನೆ?' ಎಂದು ಹೂಂಕರಿಸಿದರು.

ಶಿವರಾಯರಿಗೆ ಇದರ ಸುದ್ದಿ ತಲುಪಿದಾಗ, ಅವರು ಭಟ್ಟರನ್ನು ಕರೆಯಿಸಿ—'ಇದೇನು ಗೈದಿರಿ ಭಟ್ಟರೆ! ಪೂಜೆ ಮಾಡುತ್ತಿದ್ದವನನ್ನು ಹೊರದೂಡಿದುದು ಸರಿಯಾಗಲಿಲ್ಲ. ಆಮೇಲೆ ತೀರ್ಮಾನಿಸಬಹುದಿ-ತ್ತಲ್ಲ?' ಎಂದರು.

'ಹೌದು. ಆದರೆ ಆಗ ನನ್ನ ಮನಸ್ಸು ವಶದಲ್ಲಿರಲಿಲ್ಲ. ಹೀಗೆಯೆ ಅನಧಿಕೃತಪ್ರವೇಶಕ್ಕೆ ಎಡೆಗೊಟ್ಟರೆ, ನನ್ನ ಸಂಪಾದನೆಗೆ ಕಲ್ಲು-ಬೀಳದೆ? ಮುಂಜಾಗ್ರತೆ ಲೇಸಲ್ಲವೆ?'—ಭಟ್ಟರೆಂದರು.

ಅದೊಂದು ದಿನ, ರಾಮರಾಯರ ಸುಗ್ರೀವಾಜ್ಞೆಯನ್ನು ಮೀರಿ ರಾತ್ರಿಯವೇಳೆ ಗುಟ್ಟಾಗಿ ಒಬ್ಬ ಒಕ್ಕಲು, ತನ್ನ ಬಹುದಿನದ ಹರಕೆ-ಯನ್ನು ಸಲ್ಲಿಸಬಂದ. ಹರಕೆ ಸಲ್ಲಿಸದೆ ಉಪದ್ರವಗಳು ತಲೆದೋರಿ-ದುದಕ್ಕಾಗಿ ಅವನು ಈ ಸಾಹಸ ಕೈಕೊಂಡ. ಆದರೆ, ಚಾಡಿಖೋರ-ರಿಂದ ಆ ಸುದ್ದಿ ಅದೆಂತೋ ರಾಯರ ಕಿವಿಗೆ ಮುಟ್ಟಿತು. ತಡವೇನು? ರಾಯರು ಕಿಡಿಕಿಡಿಯಾದರು. ಆ ರಾತ್ರಿಯೇ ಅವನನ್ನು........ 'ಕೃತಘ್ನ, ನನ್ನ ಮಾತು ಗಾಳಿಗೆ ತೂರಾಡುವಷ್ಟು ಎದೆಗಾರಿಕೆಯೆ?' ಎಂದರು.

ಒಕ್ಕಲು ಥರಥರ ನಡುಗಿ ಕಾಲಿಗೆ ಬಿದ್ದ. 'ತಪ್ಪಾಯಿತು, ಒಡೆಯ! ದೇವರ ಉಪದ್ರವ ತಡೆಯುವ ಶಕ್ತಿ ನನ್ನಲ್ಲಿಲ್ಲ. ಕೊಟ್ಟಿಗೆಯ ದನ-ಕರುಗಳಿಗೆಲ್ಲ ಕೆಡುಗಾಲ ಬಂದಿದೆ ಹಿಂದೆ ಅವುಗಳ ಬಗ್ಗೆ ಹೇಳಿಕೊಂಡ ಹರಕೆಯನ್ನು ಪೂರ್ಣಮಾಡಬೇಡವೆ?'

'ಹೋಗುವ ಮೊದಲು ನನ್ನೊಡನೆ ಒಂದು ಮಾತು ಕೇಳ-ಬಹುದಿತ್ತಲ್ಲ! ನನ್ನಪ್ಪಣೆ ಎಂದರೆ ಕಾಲಕಸಕ್ಕೆ ಸಮನಾಯಿತೆ? ಇದ-ರಿಂದ ನೀನು ನನ್ನನ್ನು ಅವಮಾನಿಸಿದಂತಾಗಲಿಲ್ಲವೆ? ನಿನ್ನಂತಹನು ನನ್ನ ಜಾಗದಲ್ಲಿರುವುದು ಅಗತ್ಯವಿಲ್ಲ. ನಾಳೆ ಬೆಳಗ್ಗೆಯೇ ಮನೆಬಿಟ್ಟು ಹೊರಡಬೇಕು!'

ಒಕ್ಕಲು ಎಷ್ಟೇ ವಿನಂತಿಸಿಕೊಂಡರೂ ರಾಯರ ನಿರ್ಧಾರ ಬದಲಾಗಲಿಲ್ಲ. ಅವನು ನಿರುಪಾಯನಾಗಿ ಮರುದಿನವೇ ಮನೆಬಿಟ್ಟು ಹೊರಟ. ಶಿವರಾಯರಲ್ಲಿ ಅವನಿಗೆ ಸುಲಭವಾಗಿ ಆಶ್ರಯ ಸಿಕ್ಕಿತು.

ಹಳ್ಳಿಯ ವಾತಾವರಣವೀಗ ವಿಷಮವಾಯಿತು. ಹಳ್ಳಿಗರೆಲ್ಲ ಇತ್ತಂಡವಾಗಿ ಹಂಚಿಹೋದರು. ತಮ್ಮ ಹಳೆಯ ವೈರವನ್ನೆಲ್ಲ ಹೊಸ ನೆವನದಿಂದ ತೀರಿಸಿಕೊಂಡರು. ತಮ್ಮವರು ದೇವಾಲಯಕ್ಕೆ ಹೋಗದಂತೆ ನೋಡಿಕೊಳ್ಳಲು, ರಾಮರಾಯರು ಒಬ್ಬ ಆಳನ್ನು ನೇಮಿಸಿದರು. ತಾವು ಓಡಿಸಿದ ಒಕ್ಕಲಿಗೆ ಶಿವರಾಯರಲ್ಲಿ ಆಶ್ರಯ ದೊರೆತುದರಿಂದ, ಅವರ ಕ್ರೋಧಾಗ್ನಿಗೆ ಮತ್ತೊಂದು ಆಹುತಿ ಬಿದ್ದಂತಾಯಿತು.

ದಿನಗಳುರುಳುತ್ತಾ ಇದ್ದುವು. ರಾಮರಾಯರ ಆಸ್ತಿಕ ಒಕ್ಕಲುಗಳಿಗೆ ದೇವದರ್ಶನವಿಲ್ಲದೆ ಕಳೆಯುವ ಈ ದಿನಗಳು ತುಂಬಾ ಭಾರವಾಗಿದ್ದುವು. 'ನರಸಿಂಹ! ತಪ್ಪೆಲ್ಲ ಒಡೆಯರದು. ನಾವೇನು ಮಾಡೇವು? ನೀನೇ ಅವರಿಗೆ ಸದ್ಬುದ್ಧಿ ಕೊಡು'— ಎಂದು ಅವರೆಲ್ಲ ಒಮ್ಮನಸ್ಸಿನಿಂದ ಪ್ರಾರ್ಥಿಸುತ್ತಿದ್ದರು. ಆದರೇನು? ನರಸಿಂಹ ಉಪೇಕ್ಷೆಯಿಂದಲೇ ಇದ್ದ.

ವರ್ಷಕ್ಕೊಮ್ಮೆ ಬರುವ ಹಬ್ಬವೂ ಬಂದು ಬಿಟ್ಟಿತು. ಹಿಂದೆ ಜನರಲ್ಲಿ ಅದೆಷ್ಟು ಹುಮ್ಮಸ್ಸು ಇರುತ್ತಿತ್ತು! ಆದರೆ ಇಂದು ಅವರೆಲ್ಲ ನಿರಾಶರಾಗಿದ್ದರು. ಮನಸ್ಸಿನಲ್ಲೇ ದೇವರಿಗೆ ವಂದನೆ ಸಲ್ಲಿಸಿ ತಮ್ಮ ಬಯಕೆಯನ್ನು ಈಡೇರಿಸಿಕೊಂಡರು.

ಅಂದು ಎಲ್ಲಕ್ಕಿಂತ ಹೆಚ್ಚು ನಿರಾಶೆಯಾದುದು ರಾಮರಾಯರ ಮಗ ನರಸಿಂಹನಿಗೆ. ಉತ್ಸವದ ದಿನ ಅದೆಷ್ಟು ಉತ್ಸಾಹ ಅವನಿಗೆ! ಇಡೀ ದಿನವೇ ಕಳೆಯುತ್ತಿದ್ದ. ಆದರೆ ತಂದೆಯ ಕಟ್ಟಪ್ಪಣೆಯಿಂದಾಗಿ ಅವನು ಅಂದು ಹೊರಡದಾದ.

ಅಂದೇ ಸಂಜೆ ರಾಮರಾಯರ ಒಕ್ಕಲುಗಳೆಲ್ಲ ಪುನಃ ಒಡೆಯರ ಅಂಗಳದಲ್ಲಿ ಹಾಜರಾದರು. ರಾಯರು ಅಚ್ಚರಿಯಿಂದ —'ಇಂದೇನು? ಎಲ್ಲರೂ ಒಟ್ಟಾಗಿ ಬಂದಿರುವಿರಿ?' ಎಂದರು.

'ನೀವೇ ನಮ್ಮ ತಾಯಿ-ತಂದೆಗಳು. ನೀವೇ ನಮ್ಮ ರಕ್ಷಕರು; ಇದು ನಮ್ಮ ವಂಶಪಾರಂಪರ್ಯವಾಗಿ ನಡೆದುಬಂದಿದೆ. ನಮ್ಮ ಸುಖ-ದುಃಖಗಳನ್ನು ನಿಮ್ಮೊಡನಲ್ಲದೆ ಮತ್ತಾರಲ್ಲಿ ತೋಡಿಕೊಳ್ಳಬೇಕು?— ಸಾಹಸಗೊಂಡು ಒಬ್ಬನೆಂದ. 'ನಿಮಗೇನಾಗಬೇಕು?'

'ಇಷ್ಟು ದಿನಗಳನ್ನು ನಾವು ಅದೆಷ್ಟು ಕಷ್ಟದಿಂದ ಕಳೆದಿದ್ದೇವೆಂದು ನಿಮಗೂ ಗೊತ್ತಿದೆ. ಊರಿನ ದೇವಾಲಯವನ್ನು ಪ್ರವೇಶಿಸುವ ಸೌಭಾಗ್ಯ ನಮಗಿಲ್ಲ. ಉತ್ಸವದಲ್ಲೂ ನಾವು ಭಾಗಿಯಾಗಲಾರೆವು. ಹೀಗೆಯೇ ನಾವು ದೇವರಿಲ್ಲದೆಯೇ ನಮ್ಮ ಜೀವನವನ್ನು ಕಳೆಯಬೇಕೇ ಒಡೆಯ?'— ಕಣ್ಣೀರು ಸುರಿಸುತ್ತ ಅವನು ಹೇಳಿದ.

ಜಮೀನ್‌ದಾರರ ಹೃದಯ ಅವನ ಕಣ್ಣೀರಿಂದ ಕಲಕಿಹೋಯಿತು. ಒಕ್ಕಲಿಗರ ಸುಖ ದುಃಖ ಅವರಿಗೇ ಸೇರಿದ್ದಲ್ಲವೆ? ತಮ್ಮ ಪಾಲಿನ ಕರ್ತವ್ಯವನ್ನು ಅವರು ಮರೆಯುವಂತಿರಲಿಲ್ಲ. ತಮ್ಮ ಒಕ್ಕಲುಗಳಿಗೊಂದು ದೇವಾಲಯದ ಅಗತ್ಯವಿದೆಯೆಂದು ಅವರಿಗೂ ಎನಿಸಿತ್ತು. ಅಲ್ಲದೆ ಮಗ ನರಸಿಂಹನೂ ಇತ್ತೀಚೆಗೆ ತುಂಬ ಸೊರಗಿದ್ದ. ಅವನ ಎಳೆಯ ಮನಸ್ಸಿಗೆ ಈ ಪೆಟ್ಟು ಬಲವಾಗಿ ತಗಲಿದೆಯೆಂದೂ, ಅವನ ಕೊರಗು ಮಾಯವಾಗಬೇಕಾದರೆ ಮತ್ತೊಂದು ದೇವಾಲಯವನ್ನು ಕಟ್ಟಿಸುವುದು ಅತ್ಯವಶ್ಯವೆಂದೂ ಅವರಿಗೆ ಖಚಿತವಾಯಿತು.

'ನಿಮ್ಮ ಹಂಬಲ ನನಗೂ ಅರ್ಥವಾಯಿತು. ನಾಳೆಯಿಂದಲೇ ಹೊಸ ದೇವಾಲಯದ ಸಿದ್ಧತೆ ಆರಂಭವಾಗುವುದು. ಈ ಅಭಾವದ ಪೂರ್ತಿಯಾದಾಗಲೇ ಮೊದಲಿನಂತೆ ಶಾಂತಿ ನೆಲಸಬಹುದೆಂದು ತೋರುತ್ತದೆ.'

ಆದೊಂದು ಶುಭಮುಹೂರ್ತದಲ್ಲಿ, ನವ್ಯದೇವಾಲಯದಲ್ಲಿ ಶ್ರೀರಾಮಮೂರ್ತಿಯ ಸ್ಥಾಪನೆಯು ವಿಜೃಂಭಣೆಯಿಂದ ಜರುಗಿತು. ಊರಿನ ಹಾಗೂ ಪರವೂರಿನ ಜನರು ವಿಶೇಷ ಆಸ್ಥೆಯಿಂದ ಈ ಕಾರ್ಯದಲ್ಲಿ ಸಹಕರಿಸಿದ್ದರು. ಶಿವರಾಯರು ಸ್ವತಃ ಬಾರದಿದ್ದರೂ, ಒಕ್ಕಲುಗಳ ಮೇಲೆ ಯಾವ ತರದ ನಿರ್ಬಂಧವನ್ನೂ ಹೇರಿರಲಿಲ್ಲ. ಆದರೆ, ತಮಗೆಲ್ಲಾದರೂ ಅವಮಾನವಾಗಬಹುದೋ— ಎಂಬ ಸಂಶಯದಿಂದಲೇ ಅವರ ಒಕ್ಕಲುಗಳಾರೂ ಉತ್ಸವದಲ್ಲಿ ಭಾಗವಹಿಸಲಿಲ್ಲ.

ಒಂದು ದೇವಾಲಯಕ್ಕೆ ಪ್ರತಿಯಾಗಿ ಮತ್ತೊಂದು ದೇವಾಲಯವೇನೋ ಸ್ಥಾಪನೆಯಾಯಿತು. ಒಕ್ಕಲಿಗರೂ ನಿಷ್ಕಪಟ ಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಸೇವೆಗಳೂ ಯಥಾಪ್ರಕಾರ ನಡೆಯುತ್ತಿದ್ದುವು.

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) — ಶ್ರೀ. ಭುಜೇಂದ್ರ ಮಹಿಷವಾಡಿ	೧-೮-೦
ಬಾಳ-ಬಂಡಿ (ಕವನ ಸಂಗ್ರಹ) — ಶ್ರೀ. ಬಾಳ ಬಿ. ಉಪಾಧ್ಯೆ	೦-೮-೦
ಮೂಲ ಶಿಕ್ಷಣದ ಮೌಲ್ಯಮಾಪಣ — ಶ್ರೀ. ಮಿರ್ಜಿ ಅಣ್ಣಾರಾಯರು	೦-೧೨-೦
ಭರತೇಶನ ನಾಲ್ಕು ಚಿತ್ರಗಳು — ಶ್ರೀ. ಮಿರ್ಜಿ ಅಣ್ಣಾರಾಯರು	೧-೪-೦
ಶ್ರೀ ಶಾಂತಿಸಾಗರ	೦-೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು

ಪ್ರತಿಗಳಿಗಾಗಿ ಬರೆಯಿರಿ:

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. **ಉಗಾರ ಬದ್ರುಕ್** (ಜಿಲ್ಲಾ ಬೆಳಗಾಂವಿ)

ಆದರೆ ಉಗ್ರನರಸಿಂಹನ ಕೋಪದೆದುರಿಗೆ ಶಾಂತಮೂರ್ತಿ ಶ್ರೀರಾಮನ ಅನುಗ್ರಹ ನಿಲ್ಲದಾಯಿತು. ಒಕ್ಕಲಿಗರಿಗೂ ತಾವೇನೋ ತಪ್ಪುಮಾಡಿದ್ದೇವೆಂಬ ಭಾವನೆ ಬಂದಾಯಿತು. ಶ್ರೀರಾಮನ ಪೂಜೆ ಅಪರಾಧವಲ್ಲದಿದ್ದರೂ, ನರಸಿಂಹನ ಅನಾದರ ಮಹಾಪಾಪವೆಂದೂ ಅದಕ್ಕೆ ತಕ್ಕ ಶಿಕ್ಷೆ ಸಿಕ್ಕದಿರದೆಂದೂ ಕೆಲವರು ಯೋಚಿಸತೊಡಗಿದರು.

ಮಗನ ಕೊರಗು ಅಳಿಯಬಹುದೆಂಬ ಕನಸು ಕಾಣುತ್ತಿದ್ದ ರಾಯರು ಹತಾಶರಾದರು. ದೇವಸ್ಥಾನಕ್ಕೆ ನರಸಿಂಹ ಬಂದಿದ್ದರೂ ಅವನ ಮನಸ್ಸಿಗೆ ನೆಮ್ಮದಿ ದೊರೆತಿರಲಿಲ್ಲ. ನರಸಿಂಹದೇವರ ನೆನಪು ಅಚ್ಚಳಿಯದೆ ನಿಂತಿತು. ಶ್ರೀರಾಮನಲ್ಲಿ ಅದೇಕೋ ಅವನ ಭಕ್ತಿ ನಿಲ್ಲದಾಯಿತು. ಆ ಮುಗ್ಧ ಬಾಲಕನು ಯಾವಾಗಲೂ ನರಸಿಂಹನನ್ನೇ ಸ್ಮರಿಸುತ್ತಾ ಇರುತ್ತಿದ್ದ. ಈ ಅಭ್ಯಾಸ ದಿನದಿನಕ್ಕೆ ಬಲವಾಗುತ್ತಿತ್ತು.

ಈ ಮನೋರೋಗವನ್ನು ಪರಿಹರಿಸಲು ರಾಯರು ತುಂಬಾ ಪ್ರಯತ್ನಪಟ್ಟರು. ನಾಸ್ತಿಕರಾದರೂ ಆಸ್ತಿಕರಂತೆ ಮುಖ್ಯ ಮುಖ್ಯ ದೇವತೆಗಳಿಗೆಲ್ಲ ಹರಕೆ ಹೇಳಿಕೊಂಡರು. ಡಾಕ್ಟರರನ್ನು ಕರೆಯಿಸಿದರು; ಜೋಯಿಸರನ್ನು ಕಂಡರು. ಆದರೆ ಯಾರಿಂದಲೂ ಹುಡುಗನ ಮನೋವ್ಯಾಧಿ ನೀಗಲಿಲ್ಲ.

'ಇದೇನು ರೋಗವೇ ಅಲ್ಲ! ಹುಡುಗ ಸ್ವಸ್ಥನಾಗಿದ್ದಾನೆ! ದೇವರ ಚಿಂತೆ ಪೀಡಿಸುತ್ತಿದೆ. ಅವನನ್ನೊಂದು ಊರಿಗೆ ಕಳುಹಿಸಿಕೊಡಿ!'— ಡಾಕ್ಟರರೆಂದರು.

'ಕುಲದೇವರ ಚಿತ್ತ ಕೆಟ್ಟಿದೆ. ನರಸಿಂಹನಿಗೆ ಅಪಚಾರವೆಸಗಿದ್ದೀರಿ. ಅದರ ಪರಿಣಾಮವಿದು. ಅವನನ್ನೇ ಮರೆಹೊಗದೆ ಗತ್ಯಂತರವಿಲ್ಲ'— ಜೋಯಿಸರೆಂದರು.

'ನರಸಿಂಹನ ಅನುಗ್ರಹದಿಂದ ಹುಟ್ಟಿದ ಹುಡುಗ. ಅವನನ್ನೇ ಸ್ಮರಿಸುವುದು ಅವನ ಹುಟ್ಟುಗುಣ. ಅದಕ್ಕೆ ಅಡ್ಡಿ ಬಂದರೆ ಉಳಿಗಾಲವುಂಟೇ?'— ಪತ್ನಿ ಅಳುತ್ತಾ ಹೇಳುವಳು.

ಇವರೆಲ್ಲರ ಅಭಿಪ್ರಾಯ ಕೇಳಿ ಕೇಳಿ ರಾಯರ ತಲೆ ಸಿಡಿಯುತ್ತಿತ್ತು. ತಮ್ಮ ಏಕಮಾತ್ರ ಪುತ್ರನ ದುರವಸ್ಥೆಯನ್ನು ಕಂಡು, ಕಲ್ಲೆದೆಯೂ ಕರಗಲಾರದೆ? ದಯಾಳುವಾದ ರಾಯರು ಕಣ್ಣೀರು ಮಿಡಿದುದರಲ್ಲಿ ಅಚ್ಚರಿಯೇನು? ಮನುಷ್ಯರಿಗೆ ಮಾತೇ ಮುಖ್ಯ. ಅದನ್ನೊಂದು ಉಳಿಸಲೆಂದು ಇಷ್ಟೆಲ್ಲ ಕಷ್ಟನಷ್ಟಗಳನ್ನು ಅನುಭವಿಸಿದರು. ಆದರೆ ಎಷ್ಟರ ವರೆಗೆ ತಾಳಿಯಾರು? ತಮ್ಮ ಕಣ್ಣೆದುರಿಗೇ ಮಗನ ದುರಂತವನ್ನೂ ಕಾಣಬಲ್ಲರೆ? ಬಹುಶಃ ಇದರಲ್ಲಿ ತಮ್ಮದೇನೋ ತಪ್ಪಿರಬೇಕೆಂದು ಅವರಿಗೆನಿಸಿತು. ಇಲ್ಲದಿದ್ದರೆ ಈ ರೀತಿಯ ಉತ್ಪಾತ ಸಂಭವಿಸಿದುದರಲ್ಲಿ ಅರ್ಥವೇನು? ಶಿವರಾಯರ ಪರಿವಾರಕ್ಕೆ ಯಾವ ಹಾನಿಯೂ ಆಗಿಲ್ಲವಲ್ಲ!

ರಾಯರ ಕಾವೇರಿದ ಮೆದುಳಿಗೆ ಇರುಳೆಲ್ಲೂ ನೆಮ್ಮದಿ ಸಿಗಲಿಲ್ಲ. ಕಣ್ಣು ಮುಚ್ಚುತ್ತಲೇ ಕನಸು ಕಟ್ಟುತ್ತಿತ್ತು. ಮುಂಜಾನೆಯಂತೂ ನರಸಿಂಹದೇವರು ಕಾಣಿಸಿಕೊಂಡು– 'ನನ್ನನ್ನು ಕಡೆಗಣಿಸಿ ಮತ್ತೊಂದು ದೇವಾಲಯವನ್ನು ಸ್ಥಾಪಿಸಿ ಉಳಿದುಕೊಂಡೆಯೆಂದು ಬಗೆದೆಯಾ?

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ

ಜೀವನಿ

ದಿ ಸದ್ವೈದ್ಯಶಾಲಾ, ನಂಜನಗೂಡು

ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ

ಯಾವಾಗಲೂ ನಂಜನಗೂಡು ಟೂತ ಪೌಡರ ಉಪಯೋಗಿಸಿ

ಹಾಗೆಂದೂ ಭ್ರಮಿಸಬೇಡ; ಇನ್ನು ಕೆಲವೇ ದಿನಗಳಲ್ಲಿ ನಿನ್ನ ಮಗನನ್ನೇ ಬಲಿತೆಗೆದುಕೊಳ್ಳುವೆ! ನಿನಗೆ ಮಗ ಬೇಕಿದ್ದರೆ ನನ್ನಲ್ಲಿಗೆ ಬಾ. ಈಗಲೇ ಎಚ್ಚರಿಕೆ ಕೊಟ್ಟಿರುವೆ'.... ...ಎಂದು ಹೇಳಿದಂತಾಯಿತು.

ರಾಯರ ಪೌರುಷ ಅಭಿಮಾನ, ದಂಭ— ಎಲ್ಲಾ ಈ ಎಚ್ಚರಿಕೆಗೆ ಚೂರುಚೂರಾಯಿತು ಇದೆಲ್ಲ ಪಿತ್ತೋದ್ರೇಕದ ಪರಿಣಾಮವೆಂದು ಸಮಾಧಾನ ತಾಳಬಹುದಾಗಿದ್ದರೂ, ಅನಿಷ್ಟಕ್ಕೆ ಆಹ್ವಾನಕೊಡುವ ಕೆಚ್ಚು ಉಡುಗಿಹೋಗಿತ್ತು. ಮರುದಿನ ಹಗಲಿಡೀ ಅವರು ತಮ್ಮ ಮುಂದಿನ ಕರ್ತವ್ಯದ ಕುರಿತು ಯೋಚಿಸುತ್ತಾ ಕುಳಿತರು. ಕೊನೆಗೆ ಪುತ್ರಪ್ರೇಮಕ್ಕೇ ಜಯಸಿಕ್ಕಿತು.

'ಮಗು; ದೇವಸ್ಥಾನಕ್ಕೆ ಬರುವೆಯಾ?'— ಅವರು ಮಗನ ಹಾಸಿಗೆಯ ಬಳಿಗೆ ಬಂದು ಕೇಳಿದರು. 'ಎಲ್ಲಿಗಪ್ಪಾ? ನರಸಿಂಹನ ಗುಡಿಗೆ?' 'ಹೌದು.' 'ಇಗೋ ಹೊರಟೆ'—ಎಂದು ಸಂತೋಷದಿಂದ ಹುಡುಗ ಒಂದೇ ಉಸಿರಿಗೆ ಎದ್ದು ಕುಳಿತ. ಅವನ ಸಂತೋಷ ಕಂಗಳಲ್ಲಿ ಉಕ್ಕಿ ಬರುತ್ತಿತ್ತು. ಎಷ್ಟು ದಿನಗಳಿಂದ ಅವನು ಅದಕ್ಕಾಗಿ ಹಂಬಲಿಸುತ್ತಿದ್ದ!

ಮುಚ್ಚಂಜೆಯ ನಸುಬೆಳಕಿನಲ್ಲಿ ಮಗನ ಕೈಹಿಡಿದು ರಾಮರಾಯರು ದೇವಾಲಯವನ್ನು ಪ್ರವೇಶಿಸಿದರು. ನಾರಾಯಣಭಟ್ಟರು ಅಕಸ್ಮಾತ್ ಅವರನ್ನು ಕಂಡು ದಿಗ್ಭ್ರಮೆಗೊಂಡವರಂತೆ ನಿಂತುಬಿಟ್ಟರು. ನರಸಿಂಹ ಎವೆಯಿಕ್ಕದೆ ದೇವರನ್ನು ನೋಡುತ್ತಿದ್ದ. ತಾಯನ್ನಗಲಿದ ಕಂದ ಮರಳಿ ತಾಯನ್ನು ಪಡೆದಂತಾಗಿತ್ತು.

'ಭಟ್ಟರೆ, ಹಣ್ಣುಕಾಯಿ ಮಾಡಿಕೊಡುತ್ತೀರಾ?'— ರಾಮರಾಯರೆಂದರು.

ಭಟ್ಟರು ಹಣ್ಣು-ಕಾಯಿ ತೆಗೆದುಕೊಂಡು ಒಳಹೋದರು. ಅವರಿಗೆ ಅತೀವ ಆಶ್ಚರ್ಯವಾಗಿತ್ತು.

'ರಾಯರೆ, ಅಂದು ಭಟ್ಟರಿಂದ ನಡೆದ ಅಚಾತುರ್ಯಕ್ಕಾಗಿ ನಾನು ನಿಮ್ಮೊಡನೆ ಕ್ಷಮೆ ಬೇಡುತ್ತೇನೆ. ಆ ಸಂಗತಿ ಮತ್ತೆ ತಿಳಿಯಿತು.'— ಆಗಲೇ ಅಲ್ಲಿಗೆ ಬಂದ ಶಿವರಾಯರು ಹೇಳಿದರು.

'ಆಂ? ಮತ್ತೆ ತಿಳಿಯಿತೆ? ನೀವೇ ಮಾಡಿಸಲಿಲ್ಲವೆ?'— ಕಕ್ಕಾಬಿಕ್ಕಿಯಾಗಿ ರಾಮರಾಯರು ಪ್ರಶ್ನಿಸಿದರು.

ಕೊನೆಯ ಕೆಲವು ದಿನಗಳು

(ಶ್ರೀರವೀಂದ್ರ ಗುರುದೇವನ ನೆನಹು) *

ಲೇ. ವೆಂಕಟರಾಯ ಪ್ರಭು, ಜ್ಯೂ ಎಂ. ಎ. ರುಯ್ಯಾಕಾಲೇಜು, ಮುಂಬಯಿ

●

ಕವೀಂದ್ರ ರವೀಂದ್ರರ ಆಯುಷ್ಯದ ಕೊನೆಯದಿನಗಳ ಸತ್ಯಕಥೆಯಿದು. ಶಾಂತನಿಕೇತನದಲ್ಲಿದ್ದ ಅವರ ಶಿಷ್ಯಕೋಟಿಯೊಳಗಿನವರೊಬ್ಬರು, ತಾವು ಕಣ್ಣಾರೆಕಂಡ ಸಂಗತಿಯನ್ನೇ ಕರುಳುಕರಗುವಂತಹ ಮಾತಿನಲ್ಲಿ ಬರೆದಿದ್ದಾರೆ. ಅಯ್ಯೋ, ಗುರುದೇವನಂತಹ ಅರುಹಿನ ಮೂರ್ತಿಗೂ ಮರಣವು ತೊಂದರೆಯನ್ನು ಕೊಟ್ಟಿತಲ್ಲವೆ?

●

ಕೊನೆಗೊಮ್ಮೆ ಗುರುದೇವನನ್ನು ಶಸ್ತ್ರಚಿಕಿತ್ಸೆಗಾಗಿ ಕಲ್ಕತ್ತಾಕ್ಕೆ ಕೊಂಡೊಯ್ಯಬೇಕೆಂದು ನಿಶ್ಚಯವಾಯಿತು. ಅದಲ್ಲದೆ ಗುರುದೇವನನ್ನುಳಿಸುವ ಬೇರೆ ಉಪಾಯಗಳು ಇರಲಿಲ್ಲ. ಜುಲೈ ತಿಂಗಳು ಅಡಿಯಿಟ್ಟಂದಿನಿಂದ ಆತನ ಸ್ಥಿತಿಯು ಚಿಂತಾಜನಕವಾಗುತ್ತ ಬಂದಿತ್ತು. ದಿನದಿನವೂ ದೇಹದೌರ್ಬಲ್ಯತೆಯು ಏರುತ್ತಿದ್ದಿತು; ಆಹಾರಸೇವನೆಯೂ ಬಹಳ ಕಡಿಮೆಯಾಗುತ್ತ ಬಂದಿತ್ತು. ಮೇಲಾಗಿ ಆತನ ಮುಖದ ಮೇಲಿನ ಜೀವಕಳೆಯು ಕುಂದುತ್ತಾ ಬರುತ್ತಿದ್ದಿತು.

ಈ ಸ್ಥಿತಿಯಲ್ಲಿ ಆತನನ್ನು ಕಲ್ಕತ್ತಾಕ್ಕೆ ಕೊಂಡೊಯ್ಯುವ ಮಾತು ಸುಲಭವಾಗಿರಲಿಲ್ಲ. ಬರಿ ೧೦೦ ಮೈಲಿಗಳ ಪ್ರಯಾಣವು ದೊಡ್ಡದೆನಿಸಿರಲಿಲ್ಲ. ಇಡಿಯ ದಿನದಲ್ಲಿ ಅನುಕೂಲವಾಗಿ ದೊರೆಯುವ ರೈಲುಬಂಡಿಯು ಒಂದೇ ಆಗಿದ್ದಿತು. ಅದು ಕೂಡ ಅಲ್ಪವೇಗವುಳ್ಳದ್ದಾಗಿದ್ದು, ಕಲ್ಕತ್ತಾದಂತಹ ಸಣ್ಣ ಪ್ರಯಾಣಕ್ಕೆ ಆರುತಾಸಿನ ಪೂರ್ಣ ಸಮಯವನ್ನು ತೆಗೆಯುತ್ತಿದ್ದಿತು. ರೈಲಿನ ಸೌಕರ್ಯಗಳಲ್ಲಿ ಏನಾದರೂ ಹೊಸ ಬದಲಾವಣೆ ಮಾಡುವುದು ಸಂಭವವಾಗಿರಲಿಲ್ಲ. ಏಕೆಂದರೆ, ಆತನು ಹೊರಡುವ ದಿವಸವೂ, ಬಂಡಿಯೂ ಮೊದಲೇ ತಿಳಿದಿರುತ್ತಿದ್ದರೆ, ದಾರಿಯುದ್ದಕ್ಕೂ ಮತ್ತೂ ಹೌರಾ ಸ್ಟೇಶನಿನಲ್ಲಿಯೂ ಜನರು ಗುಂಪುಗೂಡಿ ಶಾಂತಿಸಮಾಧಾನಕರವಾದ ಪ್ರಯಾಣವು ಅಸಾಧ್ಯವಾಗುತ್ತಿದ್ದಿತು. ಜನರ ಆತುರತೆಗೂ, ಸಂಭ್ರಮಕ್ಕೂ ಕೊನೆ–ಮಿತಿಯಿರುತ್ತಿರಲಿಲ್ಲ.

ರಥೀಂದ್ರನಾಥ ಬಾಬುವೂ ಅನಿಲಬಾಬುವೂ, ಕಲ್ಕತ್ತೆಯಲ್ಲಿಯ ಸಿದ್ಧತೆಗಾಗಿ ಹಿಂದಿನದಿನವೇ ಅಲ್ಲಿಗೆ ತೆರಳಿದ್ದರು. ಸುರೇನ್ ಬಾಬುವು ಮಾತ್ರ ಪ್ರಯಾಣದ ಜವಾಬ್ದಾರಿಯನ್ನು ಹೊರಲು ಶಾಂತಿನಿಕೇತನದಲ್ಲಿ ಉಳಿದಿದ್ದರು. ಆಶ್ರಮದಿಂದ ಬೀಳ್ಕೊಡುವ ಸಂದರ್ಭವು, ಎಂದೆಂದಿಗೂ ಬೀಳ್ಕೊಡುವಂತಹುದಾಗಿತ್ತೆಂದು ಯಾರೂ ಭಾವಿಸಿರಲಿಲ್ಲ. ಬೆಳಗಿನಿಂದ ಆಶ್ರಮದ ಎಲ್ಲಾ ಜನರೂ- ಗಂಡಸರು, ಹೆಂಗಸರು ಮಕ್ಕಳು ಎಲ್ಲರೂ— ಗುರುದೇವನ ನಿವಾಸವಾದ ' ಉತ್ತರಾಯಣ 'ದ ಹೊರ ಆವರಣದಲ್ಲಿ ಗುಂಪುಗೂಡಿ ನಿಂತಿದ್ದರು. ಸಾಧಾರಣ ೭-೩೦ಕ್ಕೆ, ಉದ್ದೇಶಪೂರ್ವಕವಾಗಿ ರಚಿಸಿದ ಒಂದು ಆರಾಮಾಸನದ ಮೇಲೆ ಕೂರಿಸಿ ಗುರುದೇವನನ್ನು ಕೆಳಕ್ಕೆ ತಂದರು. ಅವರೆ ಅಯ್ಯೋ! ನಿಮುತೋಲಾದಲ್ಲಿ, ಆವನ ಜೀವನಪಕ್ಷಿಯು ಮೃಣ್ಮಯಶರೀರದಿಂದ ಹಾರಿಹೋದ ಕೂಡಲೆ, ಆತನನ್ನು ಸಮಾಧಿಗೆ ಕೊಂಡೊಯ್ಯುವ ಅಂತಿಮ ಯಾತ್ರೆಯೂ ಅದೇ ಆರಾಮಾಸನದಲ್ಲೇ ಆಗಬೇಕಾಯಿತು! ಕೂಡಿದ ಗುಂಪಿನಲ್ಲಿ ಎಲ್ಲತರದ ಜನರೂ ಇದ್ದರು. ಹುಟ್ಟಿನಿಂದಲೂ ಆವನನ್ನು ಬಲ್ಲ— ಶಾಂತಿನಿಕೇತನದಲ್ಲಿ ಇಡಿಯ ಜಗತ್ತಿನ ಭೇದಭಾವಗಳನ್ನು ತೊರೆದುಬಿಟ್ಟು ಆತನ ಸೇವೆಗಾಗಿ ಬಂದ— ದೇಶದ ನಾಲ್ಕು ಮೂಲೆಗಳಿಂದಲೂ ಆತನ ಆಶೀರ್ವಾದವನ್ನು ಪಡೆಯಲು ಬಂದ— ಬಾಲಕ-ಬಾಲಿಕೆಯರೂ ಇದ್ದರು. ಅವರೆಲ್ಲರ ಎದೆಗಳೂ ದುಃಖದಿಂದ ಭಾರವಾಗಿದ್ದುವು. ಕಣ್ಣೆವೆಗಳಲ್ಲಿ ಅಶ್ರುಗಳು ತುಂಬಿಬಂದಿದ್ದುವು ಆಳವಾದ ನೀರವತೆಯಲ್ಲಿ ಮೌನವಾದ ಭಕ್ತಿಯಿಂದ, ಗುರುದೇವನು ಹೊರಬಂದುದನ್ನು ಕಂಡರು. ಗುರುದೇವನು ನಿರ್ಮಿಸಿದ್ದ ಬಸ್ಸು, ಆಶ್ರಮದ ಬಾಗಿಲಿನಿಂದ ಮೆಲ್ಲನೇ ಹೊರಡಲು, ಕೂಡಿದ ಸಹಸ್ರಕಂಠಗಳಿಂದಲೂ ಆಶ್ರಮದ ಗೀತೆಯು ದುಃಖಪೂರ್ಣವಾಗಿ ಹೊರಹರಿಯಿತು "ಎಮ್ಮ ಶಾಂತಿನಿಕೇತನ, ಹೃದಯದೊಲವಿನ ಕೇತನ" ಗುರುದೇವನು ಒಂದು ಸೂಕ್ಷ್ಮಗಳಿಗೆಯ ಪರಿಯಂತ ಮರಳಿ ನೋಡಿದನು. ಆತನ ಕಂಗಳೂ ಅಶ್ರುಭರಿತವಾಗಿದ್ದುವು.

× × × ×

ರೈಲುಗಾಡಿಯು ಜುಲೈ ೨೫ ರಂದು ನಿಶ್ಚಿತಸಮಯಕ್ಕೆ ಕೆಲವು ಮಿನಿಟುಗಳ ಮುಂಚಿತವಾಗಿ ಹೌರಾಸ್ಟೇಶನನ್ನು ತಲುಪಿತು ಆ ಗಾಡಿಯಲ್ಲಿ ಗುರುದೇವನು ಬರುವನೆಂಬುದು ಪತ್ರಿಕೆಗಳಿಗೂ ತಿಳಿದಿರಲಿಲ್ಲ. ಅಲ್ಲದೆ ಪ್ಲೇಟಫೋರ್ಮ್ ಇನ್ನೊಂದು ಸೂಚಿಸಿದ್ದರಿಂದ ಗುರುದೇವನಿಳಿಯುವ ಪ್ಲೇಟಫೋರ್ಮಿನಲ್ಲಿ ಆತನ ಪರಿಚಿತರು ಕೆಲವರಲ್ಲದೆ ಇನ್ನಾರೂ ಇರಲಿಲ್ಲ. ನಿಲ್ದಾಣದಿಂದ ಗುರುದೇವನನ್ನು ಅವನ

* ಇಂಗ್ಲಿಷ್ ಲೇಖನವೊಂದರ ಆಧಾರದಿಂದ. ಲೇ.

ಹಿರಿಯರ ಮನೆಯಿರುವ ಜರಸಂಕೋವಿಗೆ ತಲುಪಿಸಲಾಯಿತು. ಒಂದನೆಯ ಮಾಳಿಗೆಯಲ್ಲಿನ ಪೈಠಕ ಕೋಣೆಯೊಂದನ್ನು ಗುರುದೇವನಿಗಾಗಿ ಸಿದ್ಧಪಡಿಸಿ ಇಟ್ಟಿದ್ದರು.

ಅಂದಿನ ದಿನವು ಕೂಡ ತಾಪದಾಯಕವಾಗಿದ್ದಿತು; ಅಲ್ಲದೆ ಪ್ರಯಾಣವೂ ಆಯಾಸಕರವಾಗಿದ್ದಿತು. ಇದರಿಂದಾಗಿ ಗುರುದೇವನಲ್ಲಿ ಬಹಳ ದಣಿವು ಉಂಟಾಗಿದ್ದಿತು. ಆರಾಮಾಸನದಿಂದ ಹಾಸಿಗೆಗೆ ಹೋಗುವ ಶಕ್ತಿಯೂ ಆತನಲ್ಲುಳಿದಿರಲಿಲ್ಲ. ಸಂಜೆಯ ಹೊತ್ತಿಗೆ ಆತನ ಸ್ಥಿತಿಯು ಸಮಾಧಾನಕರವಾಗಿ ಸುಧಾರಿಸಿದ್ದಿತು. ದಾದಿಯರೊಂದಿಗೆ ಮಾತನಾಡುವ ಶಕ್ತಿಯು ಆತನಲ್ಲಿ ಮೂಡಿದ್ದಿತು. ಅಂದಿನ ರಾತ್ರಿಯು ಸುಖವಾಗಿ ನಿದ್ರೆಯಲ್ಲಿ ಕಳೆದುದರಿಂದ, ಮರುದಿನ (ಜುಲೈ ೨೬) ಮುಂಜಾನೆ ಆತನು ಉಲ್ಲಸಿತನಾಗಿದ್ದನು. ಬೆಳಗಿನ ಕಾಫಿಯನ್ನು ಕುಡಿದನಂತರ, ಕುರ್ಚಿಯಲ್ಲಿ ಆತನಿಗೆ ಒರಗೆಯಲ್ಲಿ ಕೂರಿಸಿದ್ದರು. ಅಂದು ಆತನು ಸಂಭ್ರಮಿಸುವ ಅಭಿಲಾಷೆಯುಳ್ಳಿದ್ದಂತೆ ತೋರುತ್ತಿದ್ದನು. ಆತನ ಪರಿಸ್ಥಿತಿಯನ್ನು ಕುರಿತು ತಿಳಿಯಲು ಬಂದ ಅಬೀಂದ್ರನಾಥ ಠಾಕೂರ ಮತ್ತು ಇನ್ನಿತರರನ್ನು ಆತನ ಕೋಣೆಗೆ ಬಿಡಲಾಯಿತು. ಸುಮತೀಂದ್ರನಾಥ ಠಾಕೂರ, ಪ್ರೊ. ಚಾರುಚಂದ್ರ ಭಟ್ಟಾಚಾರ್ಯ, ಡಾ. ಅಮಿಯ ಚಕ್ರವರ್ತಿಯವರೂ ಅವರೊಂದಿಗಿದ್ದರು. ಗುರುದೇವ ಸಮಾಧಾನದ ಮುದ್ರೆಯಲ್ಲಿದ್ದನು. ತನ್ನ ಬಾಲ್ಯದ ಕುರಿತು, ಅದರಲ್ಲಿಯೂ ಮುಖ್ಯವಾಗಿ ಸ್ವದೇಶೀಪ್ರಚಾರದ ಕುರಿತು ನೆನಪುತೆಗೆದು ಮಾತನಾಡಿದನು. ಆತನು ಅಂದು ಮಾತನಾಡಿದ ವಿಧಾನದಿಂದ ಆತನ ಆಯುಷ್ಯದಲ್ಲಿ ಇನ್ನುಳಿದುದು ಬರೀ ಹತ್ತು ದಿನಗಳೆಂದು ಊಹಿಸಲು ಅಸಾಧ್ಯವಾಗಿದ್ದಿತು.

ಶಸ್ತ್ರಚಿಕಿತ್ಸೆಯನ್ನು ಜುಲೈ ೩೦ನೆಯ ಬುಧವಾರಕ್ಕೆಂದು ನಿರ್ಣಯಿಸಿದ್ದಿತು. ಬೇಕಾದ ಎಲ್ಲಾ ಸಿದ್ಧತೆ-ಸಲಕರಣೆಗಳನ್ನು ಅಣಿಗೊಳಿಸಲಾಯಿತು. ಆದರೆ ಗುರುದೇವನಿಗೆ ಮಾತ್ರ ನಿಶ್ಚಿತದಿನದ ಬಗ್ಗೆ ತಿಳಿಸಗೊಡಲಿಲ್ಲ. ಆಪರೇಶನಿನ ಪೂರ್ವಸಿದ್ಧತೆಗಾಗಿ ಪ್ರತಿದಿನವೂ ಗುರುದೇವನು ಗ್ಲೂಕೋಸಿನ ಇಂಜೆಕ್ಷನನ್ನು ತೆಗೆದುಕೊಳ್ಳಬೇಕಾಗಿದ್ದಿತು. ಈ ಸಣ್ಣ ಪುಟ್ಟ ತೊಂದರೆಗಳು ಆತನಿಗೆ ತುಂಬ ತ್ರಾಸಪಡಿಸುತ್ತಿದ್ದುವು. ಜುಲೈ ೨೬ ರಂದು ಇಂಜೆಕ್ಷನ್ ತೆಗೆದುಕೊಂಡ ಕೆಲವು ಕ್ಷಣದಲ್ಲೇ ಗುರುದೇವನಲ್ಲಿ, ಬಲವಾದ ಅಸಮರ್ಥತೆಯುಂಟಾಗಿ ಸುತ್ತಲಿನವರೆಲ್ಲರನ್ನೂ ತುಂಬ ಭೀತಿಗೊಳಿಸಿತು. ಅವರಿಗೆ ಆ ವರೆಗೆ ಅಂತಹದರ ಪರಿಚಯವಿರಲಿಲ್ಲ. ಆದರೆ ಪುಣ್ಯವಶಾತ್ ಆ ವೊದಲೇ ಡಾಕ್ಟರರು ಹಿಂತಿರುಗಿರಲಿಲ್ಲ. ಅಲ್ಲಿಯೆ ಇದ್ದುದರಿಂದ ಪರಿಸ್ಥಿತಿಯು ಪ್ರಕೋಪಕ್ಕೆ ಹೋಗುವ ಮೊದಲೇ ಅದನ್ನು ನಿಯಂತ್ರಣಕ್ಕೆ ತರಲಾಯಿತು.

ಆಪರೇಶನ್ ನಿಶ್ಚಿತವಾದ ಮುನ್ನಾದಿನ ಗುರುದೇವನು ಜ್ಯೋತಿಬಾಬು (ಜ್ಯೋತಿಪ್ರಕಾಶ ಸರ್ಕಾರ)ವನ್ನು ಕರೆಯಿಸಿ, ಆಪರೇಶನ್ ಎಷ್ಟು ನೋವನ್ನುಂಟುಮಾಡಬಹುದೆಂದು ತಿಳಿಯಲಿಚ್ಛಿಸಿದನು. ಮೊದಲೇ ಅದನ್ನು ತಿಳಿದಿದ್ದರೆ, ಅದಕ್ಕೆ ಸರಿಯಾಗಿ ತಾನು ಸಿದ್ಧನಾಗುವೆನೆಂದು ಹೇಳಿದ್ದನು. ಗುರುದೇವನು ಜ್ಯೋತಿಬಾಬುವನ್ನು

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ
ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಕರು— ಬಿ. ಜೆ. ಮುತ್ತಗಿ

ಬಹಳವಾಗಿ ಮೆಚ್ಚುತ್ತಿದ್ದುದರಿಂದ ಜ್ಯೋತಿಬಾಬುವು ಕೂಡ ಅಷ್ಟೇ ನಿಸ್ಸಂಕೋಚತೆಯಿಂದ ವರ್ತಿಸುತ್ತಿದ್ದರು. ಗುರುದೇವನ ಕೇಳಿಕೆಗೆ ಉತ್ತರಹೇಳುತ್ತಾ ಜ್ಯೋತಿಬಾಬುವು ಹೇಳಿದರು: "ಒಂದಿಷ್ಟೂ ಇಲ್ಲ! ನೀವು ಪೂರ್ಣ ಜ್ಞಾನದಲ್ಲಿದ್ದರು ಕೂಡ, ನಿಮ್ಮ ನೋವನ್ನು ಕತ್ತರಿಸುತ್ತಿದ್ದಾರೆಂದು ನಿಮಗೇ ತಿಳಿಯಲಾರದು. ನಾವು ನಿಮ್ಮ ಮತ್ತು ಕ್ರೂರವೈದ್ಯರ ನಡುವೆ ಬೇಕಾದರೆ ಪರದೆಯೊಂದನ್ನು ನಿಲ್ಲಿಸಿ, ನಿಮ್ಮ ದೃಷ್ಟಿಗೆ ಬೀಳದಂತೆ ಏರ್ಪಡಿಸುತ್ತೇನೆ. ನಿಜವಾಗಿಯೂ ಶಸ್ತ್ರಚಿಕಿತ್ಸೆಯಾಗುವಾಗಲೇ ನೀವೊಂದು ಕವನವನ್ನು ಬರೆದರೆ ನಾವು ಆಶ್ಚರ್ಯಪಡಲಾರೆವು" ಗುರುದೇವ ಮನಸ್ವಿಯಾಗಿ ನಕ್ಕು ಹೇಳಿದನು: "ಒಳ್ಳೆಯದು, ಅದು ಕವಿತೆಯನ್ನು ಹೊಮ್ಮಿಸುವಷ್ಟು ನೋವನ್ನುಂಟುಮಾಡುವಂತಿದ್ದರೆ ನಾನು ಸಿದ್ಧನಿದ್ದೇನೆ. ನಿಮ್ಮ ಶಸ್ತ್ರಚಿಕಿತ್ಸಕರನ್ನು ಬೇಕಾದರೆ ಇನ್ನು ಒಳಕ್ಕೆ ಕರೆಯಬಹುದು." ಜ್ಯೋತಿಬಾಬುವು ಉತ್ತರಕೊಡುತ್ತ, ನಾವು ಎಂತಹ ಪುಟ್ಟ ಅಪಾಯಗಳನ್ನಾದರೂ ತೆಗೆದುಕೊಳ್ಳಲು ಸಿದ್ಧರಿಲ್ಲ. ಅಲ್ಲದೆ, ಮುಂಜಾಗ್ರತೆಯನ್ನು ಬಿಡುವುದೂ ಇಲ್ಲ. ಶಸ್ತ್ರಜ್ಞರಾದ ನಾವು ಮುಂಜಾಗ್ರತೆಗಳಿಗೆ ಮಿತಿಗಾರಿಕೆಯಿಲ್ಲವೆಂಬುದನ್ನು ಮರೆಯಲಾರೆವು." ಗುರುದೇವ "ನಾವಿನ್ನೆದುರಿಗೆ ಯಾವ ಮುಂಜಾಗ್ರತೆಗಳೂ ಇಲ್ಲವೆಂಬುದನ್ನು ಮರೆಯಬೇಡಿರಿ" ಎಂದು ವಾದಕೂಡಿದರು.

ಆಪರೇಶನ್ ನಾಳೆಗೆ ಇಟ್ಟಿದೆ—ಎಂದು ಜ್ಯೋತಿಬಾಬುವು ಹೇಳುವಂತಿರಲಿಲ್ಲ. ಆದರೆ ಗುರುದೇವ, ಕೆಲವು ಸೂಕ್ಷ್ಮಸೂಚನೆಗಳಿಂದ ಮತ್ತು ಪಥ್ಯದ ಬದಲಾವಣೆಗಳಿಂದ, ಅದು ಸಮೀಪದಲ್ಲೇ ಇಟ್ಟಿದೆಯೆಂದು ಊಹಿಸದಿರಲಿಲ್ಲ. ಮುಚ್ಚಂಜೆಯ ಸಮಯ ಶ್ರೀಮತಿ ರಾಣೀಚಂದರಿಗೆ ಕರೆಯಿತ್ತು ಕಳಿಸಿದನು. ಅವರು ಕೆಲವು ತಿಂಗಳುಗಳಿಂದೀಚೆಗೆ, ಗುರುದೇವನ ವಚನಗಳನ್ನು ಬರೆದಿಡುವ ಕೆಲಸವನ್ನು ಹಚ್ಚಿಕೊಂಡಿದ್ದರು. "ದುಃಖದ ಕಾರಿರುಳು ಮಗುಳೊಮ್ಮೆ, ಮಗುಳೊಮ್ಮೆ ಎನ್ನ ಬಾಗಿಲಿಗೈದಿಹುದು..." ಎಂದು ಆರಂಭಿಸಿದನು ಇದೇ ಪದ್ಯವನ್ನು ಗುರುದೇವನ ಮರಣಾನಂತರ 'ಮೃತ್ಯು (Death)' ಎಂಬ ಶಿರೋನಾಮೆಯಿಂದ ಪ್ರಕಟಿಸಿದ್ದರು. ಅಲ್ಲದೆ ಕೆಲವು ಪತ್ರಿಕೆಗಳಲ್ಲಿ ತನ್ನಾಗಿ

ಅದನ್ನು ಕೊನೆಯ ಹಾಡೆಂದು ಪ್ರಕಟಿಸಿದ್ದರು. ಆದರೆ ಅನಂತರವೂ ಅವರು ಇನ್ನೊಂದು ಗೀತೆಯನ್ನು ಹಾಡಿರುವರು. ಅದಕ್ಕೆ ಹೆಸರು ಮಾತ್ರ ಕೊಟ್ಟಿರಲಿಲ್ಲ.

ಭವಿಷ್ಯದ ಜುಲೈ ೩೦ ಯಥಾವತ್ತಾಗಿ ಬಂದಿತು. ಅಂದಿನ ಬೆಳಗಿನಿಂದ ಮನೆಯು ಒಂದು ಆಸ್ಪತ್ರೆಯಂತೆ ತೋರಲಾರಂಭಿಸಿತು. ಡಾಕ್ಟರರು ಬರುತ್ತಾ ಹೋಗುತ್ತಾ, ಮೂಡಣ ವರಾಂಡದಲ್ಲಿ ಚಿಕಿತ್ಸೆಗೆ ಬೇಕಾದ ವ್ಯವಸ್ಥೆಗಳನ್ನು ಅಳವಡಿಸುತ್ತಿದ್ದರು. ಗುರುದೇವನು ಇನ್ನೂ ಸುಖದಾಯಕವಾದ ಅಜ್ಞಾನದಲ್ಲಿ ಇದ್ದನು. ಅವನು ಈಗ ತನ್ನ ಕೊನೆಯ ಪದ್ಯವನ್ನು ರಚಿಸಿದನು : " ನೀ ನಿನ್ನ ಸೃಷ್ಟಿಯ ದಾರಿಗಳನ್ನು ವಿಧವಿಧದ ಚಮತ್ಕೃತಿಗಳ ತತಿಯಿಂದ ಮುಚ್ಚಿರುವೆ, ಎಲೆ ಮಾಟಗಾರ! " ಎಂದಿನಂತೆ ಸಾಲುಸಾಲುಗಳೆಲ್ಲಾ ಬರೆದು ತುಂಬಿದಾಗ, ಅದನ್ನೊಮ್ಮೆ ಅವರಿಗೆ ಓದಿಹೇಳಿದರು. ಪ್ರಾಸದಲ್ಲಿಯ ಕೆಲವು ದೋಷಗಳಿಂದ ಅಸಂತುಷ್ಟಿಗೊಂಡಿದ್ದರೂ, ಅದಾಗಲೇ ಅವರು ತುಂಬ ದಣಿದುದರಿಂದ, ಅದನ್ನು ಪೂರ್ಣಗೊಳಿಸಲಾಗಲಿಲ್ಲ. " ಇತ್ತೀಚೆಗೆ ನಾನದೆಷ್ಟು ಬೇಗ ಆಯಾಸಗೊಳ್ಳುತ್ತೇನೆ. ಶಸ್ತ್ರಚಿಕಿತ್ಸೆಯ ನಂತರ ಎಲ್ಲವೂ ಸರಿಹೋಗುತ್ತದೆಂದು ಡಾಕ್ಟರರು ನನಗೆ ಭರವಸೆಯಿತ್ತಿರುವರು. ಆದುದರಿಂದ ಪದ್ಯವು ಹಾಗೆಯೆ ಉಳಿದಿರಲಿ! " ಪದ್ಯವು ಕೊನೆಯವರೆಗೂ ಅದೇ ರೂಪದಲ್ಲುಳಿಯಿತು, ಅದೇ ರೂಪದಲ್ಲಿ ಕೊನೆಗೆ ಮುದ್ರಣಾಲಯದಿಂದ ಹೊರಬಂದಿತು.

ಗುರುದೇವನ ಸೊಸೆ ಪ್ರತಿಮಾದೇವಿಯವರು ಕೂಡ ಶಾಂತಿನಿಕೇತನದಲ್ಲಿ ಬಹಳ ದಿನಗಳಿಂದ ಅಪಾಯಸ್ಥಿತಿಯ ಅನಾರೋಗ್ಯದಲ್ಲಿದ್ದರು. ಅವರು ಗುರುದೇವನ ಚಿಕಿತ್ಸೆಯ ಮುಂಚಿತವಾಗಿಯೇ ತಲುಪುವಂತೆ ಪತ್ರವನ್ನು ಕಳುಹಿಸಿದ್ದರು. ಗುರುದೇವ ಸ್ವಲ್ಪ ಹೊತ್ತು ಸುಮ್ಮನಿದ್ದು ಅವರಿಗೊಂದು ಪತ್ರವನ್ನು ಬರೆಯಿಸಿದ್ದನು. ಮತ್ತು ನಡುಗುವ ಕೈಗಳಿಂದ ' ಬಾಬಾ ಮಶಾಯ್ ' ಎಂದು ಸಹಿಯಿತ್ತರು. ಅದೇ ಇಡೀ ವಿಶ್ವವನ್ನೂ, ಮೃತ್ಯುವನ್ನೂ ಗೆದ್ದಿರುವ ಲೇಖನಿಯನ್ನು ಕೊನೆಯ ಸಾರಿ ಕೈಯಲ್ಲಿ ತೆಗೆದುಕೊಂಡುದಾಯಿತು. ಅವರ ಕೊನೆಯ ಸಂದೇಶವು ಕೂಡ, ಇನ್ನಾವ ಆಶೆ — ಅಭಿಲಾಷೆಗಳಿಲ್ಲದೆ, ಮೂವತ್ತು ವರ್ಷಗಳಿಂದ ತನ್ನ ಜೀವನವನ್ನು ಸುಖ - ಸಂತೋಷದಿಂದ ಬೆಳಗಿಸಲು ಪ್ರಯತ್ನಪಟ್ಟ ಸೊಸೆಗೆ ಕಳುಹಿಸಿದುದಾಗಿ, ಎಲ್ಲವೂ ಸಮರ್ಪಕಗೊಂಡಿತ್ತು.

ಪೂರ್ವಾಹ್ನ ೧೦-೩೦ ರ ಸುಮಾರಿಗೆ. ಮುಖ್ಯ ಸರ್ಜನ್ ಎಲ್. ಎಮ್. ಬೆನರ್ಜಿಯವರು ಗುರುದೇವನ ಕೋಣೆಯನ್ನು ಪ್ರವೇಶಿಸಿದರು ಸೂಕ್ಷ್ಮಪರೀಕ್ಷೆಯ ನಂತರ ಸಮಾಧಾನದ ಧ್ವನಿಯಲ್ಲಿ ಶಸ್ತ್ರಚಿಕಿತ್ಸೆಗೆ ಗುರುದೇವನ ಸಮ್ಮತಿ ಕೇಳಿದರು: ' ಎಲ್ಲವೂ ಸರಿಗೊಂಡಂತೆ ಕಾಣುತ್ತದೆ ಆದುದರಿಂದ ಇಂದೇಕೆ ಚಿಕಿತ್ಸೆಯನ್ನು ನಡೆಯಿಸಬಾರದು? " " ಈಗ ? " ಎಂದು ಗುರುದೇವ ದಿಙ್ಮೂಢರಾಗಿ ಕೆಲವು ಹೊತ್ತು ಸುಮ್ಮನಿದ್ದನು. ಕೊನೆಗೆ ನುಡಿದನು : " ಬಹುಶಃ ಅದೇ ಒಳ್ಳೆಯದೆಂದು ತೋರುತ್ತದೆ. ನಾನು ಸಿದ್ಧನಿರುವೆನು ! "

ಸ್ವಲ್ಪ ಸಮಯದ ನಂತರ ಅವನನ್ನು ಒಂದು ವಿರಾಮಾಸನದಲ್ಲಿ, ವರಾಂಡದಲ್ಲಿನ ಆಪರೇಶನ್ ಟೇಬಲ್ಲಿನ ಬಳಿಗೆ ತಂದರು. ವೈದ್ಯರು ಎಲ್ಲ ಭಾರವನ್ನು ಹೊತ್ತು, ಬಳಿಯಲ್ಲಿದ್ದ ಎಲ್ಲರನ್ನೂ ಕಳುಹಿಸಿಕೊಟ್ಟರು

ತುಂಬಿದ ತಿಳಿವಿರದ ಭೀತಿಯಿಂದ ಮತ್ತು ಕಂಪಿಸುತ್ತಿರುವ ಆಶೋದಯಗಳಿಂದ, ಅವರ ಬಳಿಯಲ್ಲಿಯ ಹನ್ನೆರಡು ಮಂದಿ ಪಕ್ಕದ ಕೋಣೆಯಲ್ಲಿ ಕಾದು ಕುಳಿತರು. ಸಮಯವು ಅವರಿಗೆ ನಿಂತಂತೇ ತೋರುತ್ತಿದ್ದಿತು. ಬರೇ ಒಂದು ಗಂಟೆ ಕಳೆಯುವುದರೊಳಗೆ ಒಂದು ಯುಗ ಕಳೆದಂತೆ ಎನಿಸಿರಬೇಕು ಅವರಿಗೆ! ೧೧-೪೫ ರ ಸುಮಾರಿಗೆ ಡಾಕ್ಟರರೆಲ್ಲ ಹೊರಬಂದು ಆಪರೇಶನ್ ಯಶಸ್ವಿಯಾಗಿ ಪೂರ್ಣಗೊಂಡಿತೆಂದು ತಿಳಿಸಿದರು. ರೋಗಿಯ ಸ್ಥಿತಿಯು ಅವರೆಣಿಕೆಯಂತೆ ಇದ್ದಿತು. ಅದೇ ವರ್ತಮಾನವನ್ನು ಪತ್ರಿಕೆಗಳಿಗೂ ಕೊಡಲಾಯಿತು. ಮಹಾತ್ಮಾ ಗಾಂಧಿಯವರಿಗೆ ಆಪರೇಶನ್ನಿನ ಕುರಿತು ತಿಳಿಸಲಾಯಿತು.

ಸಂಜೆ, ವೈದ್ಯರು ಪರೀಕ್ಷೆಮಾಡಲು ಇನ್ನೊಮ್ಮೆ ಬಂದರು. ರೋಗಿಯ ಸ್ಥಿತಿಸುಧಾರಣೆಯಿಂದ ಸಮಾಧಾನದಿಂದ ಹಿಂತೆರಳಿದರು. ಗುರುದೇವನು ಕೂಡ ಉಲ್ಲಾಸದಿಂದ ಇದ್ದಂತೆ ತೋರುತ್ತಿದ್ದಿತು. ಡಾಕ್ಟರ್ ಬೆನರ್ಜಿಯವರು ' ಆಪರೇಶನ್ ತುಂಬಾ ನೋವನ್ನುಂಟುಮಾಡಿದ್ದಿತೇ? ' ಎಂದು ವಿಚಾರಿಸಿದಾಗ, ಬಳಲಿದ ಮುಗುಳ್ನಗೆಯನ್ನು ಮುಖದ ಮೇಲೆ ತಂದು ನುಡಿದನು. ' ನನ್ನನ್ನು ಅಸತ್ಯ ಹೇಳುವಂತೆ : ಬಲಾತ್ಕರಿಸುವಿರೇಕೆ? ' ಇದರಿಂದ ಶಸ್ತ್ರಚಿಕಿತ್ಸೆಯು ಸಂಪೂರ್ಣ ಸುಖಪ್ರದವಾಗಿರಲಿಲ್ಲವೆಂದು ಎಲ್ಲರೂ ತಿಳಿಯುವಂತಾಯಿತು.

ವಸ್ತುಸ್ಥಿತಿಯನ್ನು ಕಂಡು ಎಲ್ಲರೂ, ಎಲ್ಲವೂ ವ್ಯವಸ್ಥಿತವಾಗಿ ನಡೆದಿದೆಯೆಂದು ಭಾವಿಸುವಂತಾಯಿತು. ಯಾವ ವಿಧದ ಭೀತಿಗೂ ಎಡೆಯುಳಿದಿರಲಿಲ್ಲ. ಆದರೆ ಅಂದಿನ ಇರುಳು ಸುಖಸ್ವಪ್ನವಾಗಿ ಕಳೆಯಲಿಲ್ಲ. ಬ್ರೋಮೈಡನ್ನು ಎರಡು ಸಲ ಪ್ರಯೋಗಿಸಿದರೂ ಅವನಿಗೆ ನಿದ್ದೆಯ ಲವಲೇಶವೂ ಬರುವಂತಿರಲಿಲ್ಲ ಅಲ್ಲದೆ ತುಂಬಾ ದಣಿದಿದ್ದನು ಬಾರ್ಲಿ ನೀರು ಮತ್ತು ಗ್ಲೂಕೋಸ್ ನೀರನ್ನು ಅವರಿಗೆ ಸ್ವಲ್ಪ ಕೊಡಲಾಯಿತು.

ಆಪರೇಶನ್ನಿನ ಮರುದಿನ ಅವನ ಸ್ಥಿತಿಯು, ಹಿಂದಿನ ರಾತ್ರಿಯ ನಿದ್ದೆಗೆಟ್ಟ ಸ್ಥಿತಿಯಿಂದ ಬಹಳ ನಿರ್ವಿಣ್ಣವಾಗಿದ್ದಿತು. ದೇಹವು ಕಾಯುತ್ತಿದ್ದಿತು. ನಾಡಿಯೂ ವೇಗವಾಗಿ ಬಡಿಯುತ್ತಿದ್ದಿತು. ಗಾಯವು ನೋಯುತ್ತದೆಂದೂ—ಒಂದು ವಿಧದ ಅತ್ಯಂತ ನೋವಿನಿಂದ ನುಡಿದಿದ್ದನು. ವೈದ್ಯರು ಆಗಾಗ ಪರೀಕ್ಷಿಸಲಾರಂಭಿಸಿದರು; ಮತ್ತು ತಮ್ಮತಮ್ಮೊಳಗೆ ಗುಣುಗುಣಿಸಲಾರಂಭಿಸಿದರು. ಅವರ ಮುಖಮುದ್ರೆಗಳೂ ಸುಖಕರವಾಗಿರಲಿಲ್ಲ ಆದರೆ ಆಪರೇಶನ್ನಿನ ನಂತರ ಇಂತಹ ವಿಮುಖವು ಸ್ವಾಭಾವಿಕವಾದುದೆಂದು ಎಲ್ಲರಿಗೂ ಖಾತ್ರಿಯಿದ್ದಿತು. ಅಂದಿನ ರಾತ್ರಿ ನಿದ್ದೆಯಲ್ಲಿ ಕಳೆದುದರಿಂದ, ಮೂರನೇ ದಿನ (ಮೊದಲನೆ ಆಗಸ್ಟ್) ಸರ್ವಮುಖದಿಂದ ಸುಧಾರಣೆ ಕಂಡುಬಂದಿತು. ವ್ಯೈಚಿಸಿಯೂ ಕ್ರಮೇಣ ಇಳಿಯಲಾರಂಭಿಸಿತು. ನಾಡಿಯೂ ಎಂದಿನಂತೆ

ಬಡಿಯಲಾರಂಭಿಸಿತು. ಅವನು ಕೂಡ ಪಾನೀಯ ತಕ್ಕಮಟ್ಟಿಗಿನ ಉಪಾಹಾರಗಳನ್ನು ತೆಗೆದುಕೊಂಡನು. ರಾತ್ರಿಯೂ ಅದೇ ಸ್ಥಿತಿಯಲ್ಲಿ ಕಳೆಯಿತು. ಶನಿವಾರ ಮುಂಜಾನೆಯ ಪರಿಸ್ಥಿತಿಯನ್ನು ಕಂಡು ಭೀತಿಯು ದೂರವಾಯಿತೆಂದು ಎಲ್ಲರೂ ಯೋಚಿಸಲಾರಂಭಿಸಿದರು. ಮತ್ತು ಅಂದಿನ ಸಂಜೆಯ ಗಾಡಿಯಲ್ಲಿ ರವೀಂದ್ರಬಾಬುವು ಪ್ರತಿಮಾದೇವಿಯ ದೀರ್ಘ ಅನಾರೋಗ್ಯದ ನಿಮಿತ್ತ ಶಾಂತಿನಿಕೇತನಕ್ಕೆ ಹೊರಡುವುದೂ ನಿಶ್ಚಯವಾಗಿದ್ದಿತು. ಆದರೆ ಪುನಃ ತೊಂದರೆಗಿಟ್ಟುಕೊಂಡಿತು. ಗುರುದೇವನು ಬಳಲಿಕೆಯಿಂದ ಮತ್ತು ನೋವಿನಿಂದ ನರಳಲಾರಂಭಿಸಿದನು. ದೇಹದ ಉಷ್ಣವು ಏರಿತು. ನಾಡಿಗಳೂ ಕಡಿದಾದ ಮಿತಿಯನ್ನು ತೋರಿಸಲಾರಂಭಿಸಿದುವು. ಸಂಜೆಯ ಸುಮಾರಿಗೆ ಹೊಸದೊಂದು ಸಂಕಟವು ತೋರಲಾರಂಭಿಸಿತು. ಆ ಸಮಯದಲ್ಲಿ ಅನುಚಿತವಾದ ಬವಳಿಕೆ ಬರಲಾರಂಭಿಸಿತು. ಮೊದಮೊದಲು ಅದು ಅಷ್ಟೊಂದು ಬಾಧಕವಾಗಿ ಕಂಡುಬಾರದಿದ್ದರೂ, ಕೊನೆಗದು ವಿಪರೀತ ಕಲ್ಪನೆಗಳಿಗೆ ಎಡೆಕೊಟ್ಟಿತು. ರಾತ್ರಿಯೂ ಯಾವ ಉತ್ತಮ ಪರಿಣಾಮ ತೋರದೆ ಕಳೆಯಿತು. ಅದರ ಬದಲು ಬಿಕ್ಕಳಿಕೆಯಿಂದ ನಿದ್ದೆ ಬಾರದಾಯಿತು. ರವಿವಾರ (ಆಗಸ್ಟ್ ಮೂರು) ಮುಂಜಾನೆಯಿಂದ ಎಲ್ಲರೂ ತುಂಬ ಭೀತಿಗೊಳಗಾದರು. ಅಲ್ಲದೆ, ಸಾಧ್ಯವಿದ್ದರೆ ಕಲ್ಕತ್ತೆಗೆ ಬರಲು ಪ್ರತಿಮಾದೇವಿಯವರಿಗೆ ಹೇಳಿಕಳುಹುವುದು ಉತ್ತಮವೆಂದು ಯೋಚಿಸತೊಡಗಿದರು. ಆದರೆ ಅಂದಿನ ಮಧ್ಯಾಹ್ನ ಪುನಃ ಸ್ವಲ್ಪ ಸುಧಾರಿಸಹತ್ತಿದಂತೆ ತೋರತೊಡಗಿತು. ರಾತ್ರಿಯೂ ತೀರಾ ಅಸಮಾಧಾನಕರವಾಗಿರಲಿಲ್ಲ; ಆದರೆ ಸೋಮವಾರದಿಂದ ಪರಿಸ್ಥಿತಿಯು ನಿಜಕ್ಕೂ ಕೆಡಲಾರಂಭಿಸಿತು. ಅಂದು ಮುಂಜಾನೆ ಪ್ರತಿಮಾದೇವಿ ಕಾಣಲು ಬಂದಾಗ, ಅವರಿಗೆ ಮಾತನಾಡುವುದೂ ಅಸಾಧ್ಯವಾಗಿದ್ದಿತು. ಪ್ರಜ್ಞೆಯು ಕೂಡ ತಪ್ಪುತ್ತಿದ್ದಿತು. ಪ್ರತಿಯೊಂದು ಹೊಸ ತಾಸಿನಲ್ಲಿಯೂ ಕೆಟ್ಟ ಶಕುನಗಳು ತೋರಲಾರಂಭಿಸಿದುವು. ಅದೇ ಮಂಗಳವಾರ ದಿನ ಪರಿಸ್ಥಿತಿಯು ಸಂದಿಗ್ಧವಾಗಿದ್ದಿತು. ಜೊತೆಗೆ ಕೆಮ್ಮೂ ಬಿಕ್ಕಳಿಕೆಯೂ ಕೂಡಿದ್ದುವು. ಬಿಕ್ಕಳಿಕೆಯನ್ನು ತಡೆಗಟ್ಟಲು ಹಲವು ವಿಫಲಪ್ರಯತ್ನಗಳನ್ನು ಮಾಡಲಾಯಿತು. ಸಂಜೆ ಗುರುದೇವನ ಹಳೆಯ ಗೆಳೆಯ ಮತ್ತು ವೈದ್ಯರಾದ ಸರ್ ನೀಲರತ್ನರು ಕಾಣಲು ಬಂದರು. ಪ್ರಾಯದ ಕಾರಣದಿಂದ ಅವರು ತುಂಬ ಕಂಗಾಲಾಗಿದ್ದರೂ, ಗುರುದೇವನ ಸ್ಥಿತಿಯನ್ನು ಕೇಳಿ ಅವನ ಹಾಸಿಗೆಯ ಬಳಿಗೆ ಓಡಿಬಾರದೆ ಅವರಿಗೆ ಸಾಧ್ಯವಾಗಲಿಲ್ಲ. ಆದರೆ ಗುರುದೇವನ ಸ್ಥಿತಿಯು ವಿದೀರ್ಣವಾಗಿದ್ದಿತು. ಯಾರ ಪರಿಚಯವೂ ಅವನಿಗೆ ಹತ್ತಿದಂತೆ ಕಂಡುಬರಲಿಲ್ಲ. ಅವನ ದೃಷ್ಟಿಗಳು ಶೂನ್ಯವನ್ನು ದೃಷ್ಟಿಸುವಂತಿದ್ದುವು. ಎಲ್ಲರಲ್ಲುಳಿದ ಆಶೆಯ ಕ್ಷೀಣರೇಖೆಯೂ, ಸರ್ ನೀಲರತ್ನರು ಕೋಣೆಯಿಂದ ಮರಳಿದಾಗ—ಫಕ್ಕನೇ ತಿರುಗಿ ದೀರ್ಘವಾಗಿ ನಿಟ್ಟುಸುತ್ತ ನಡೆದುದನ್ನು ಕಂಡು—ಮಾಯವಾಯಿತು. ಆ ದೃಷ್ಟಿಯು ಗೆಳೆಯನನ್ನು ಕೊನೆಯ ಪರಿಯಂತ ಬೀಳ್ಕೊಳ್ಳುವದಂತಹದಾಗಿತ್ತು.

ರಾತ್ರಿ ಪರಿಸ್ಥಿತಿಯು ತೀರ ಗಂಭೀರವಾಗಿದ್ದಿತು. ಡಾಕ್ಟರರು ತಮ್ಮ ಕೊನೆಯ ಯತ್ನವನ್ನು ನಡೆಸಲಾರಂಭಿಸಿದರು. ಇವುಗಳಿಂದ ಅಲ್ಪ ಪ್ರಯೋಜನವು ಕಂಡುಬಂದಿತು. ಅಂತೂ ಅಂದಿನ ರಾತ್ರಿ ಹೇಗೋ ಕಳೆಯಿತು. ಮರುದಿನದ ಮುಂಜಾವಿನ ಸೂರ್ಯಕಿರಣಗಳೊಂದಿಗೆ ಆಶಾಕಿರಣಗಳೂ ಬೀಳಲಾರಂಭಿಸಿದುವು. ಹದಗೆಟ್ಟಿದ ಸ್ಥಿತಿಯು ಇನ್ನು ಕಳೆಯಿತು—ಎಂದು ಭಾವಿಸುವಂತಾಯಿತು. ಪ್ರವಾಹವು ಜಗತ್ತಿನೆಡೆಗೆ ಎಲ್ಲರಿಗನುಕೂಲವಾಗಿ ಹರಿಯುವಂತೆ ತೋರಿತು. ಆದರೆ ಎಲ್ಲಾ ಆಶೆಗಳೂ ಮಂಜಿನ ಮುತ್ತುಗಳಾದುವು. ಈಗ ಪುನಃ ವಿಮುಖವಾಗಲಾರಂಭಿಸಿತು. ಪ್ರತಿಕ್ಷಣಕ್ಕೂ ಕೆಟ್ಟದೆನಿಸುವಂತೆ, ಹೊಸ ಸಂಕಟಗಳು ಸಂಗಮಗೊಂಡಂತೆ ತೋರುತ್ತಿದ್ದಿತು. ನೀರಿನ ಒಂದೇ ಒಂದು ಗುಟುಕೂ ಇಳಿಯುವುದು ಕಷ್ಟವೆನಿಸತೊಡಗಿತು. ಕಣ್ಣುಗಳು ಒದ್ದೆಯಾಗಿದ್ದು ಗುಳಿಬಿದ್ದಿದ್ದುವು. ಮಧ್ಯಾಹ್ನದ ನಂತರ ಕೊನೆಯನ್ನು ಕಾಣಲು ಸದಾಸಿದ್ಧರಾಗಿ ಕುಳಿತಿರಬೇಕಾಯಿತು. ಮೆಲ್ಲನೇ—ಬಹಳ ದಣಿವುಗೊಂಡು—ಉಸುರುರುಳಿದಂತೇ ಎನಿಸತೊಡಗಿತು. ಬಳಿಯಲ್ಲಿದ್ದವರೆಲ್ಲರ ಮುಖದ ಮೇಲೂ ಮೃತ್ಯುವಿನ ನೆರಳುಬಿದ್ದಂತೆ ಕಾಣಲಾರಂಭಿಸಿತು. ಮಧ್ಯರಾತ್ರಿಯಿಂದ ಮುಂಜಾನೆ ಮೂರರ ತನಕ ಪೇಚಾಟಕ್ಕೊಳಗಾಗಿದ್ದರು. ಅಸಹಾಯಕವಾದುದರ ನಿರೀಕ್ಷಣೆಯಲ್ಲೇ ಸಮಯ ಕಳೆಯಬೇಕಾಯಿತು. ತಾ. ೭ರ ಮುಂಜಾವಿನ ನೇಸರು ಹಣಿಕಿಕ್ಕುವಾಗ, ಗುರುದೇವನಲ್ಲಿ ಜೀವಿತದ ಲಕ್ಷಣಗಳೇನೂ ಉಳಿದಿರಲಿಲ್ಲ. ಬರೇ ಶ್ವಾಸವು ಮಾತ್ರ ಸ್ಥಾಯಿಯಾಗಿದ್ದಿತು. ಬೆಳಗ್ಗೆ ೯ರ ಸಮಯ ಡಾಕ್ಟರರು ಬಂದು, ಆಮ್ಲಜನಕ ಸೇವನೆಗೆ ಏರ್ಪಾಡು ಮಾಡಿದರೂ, ಪರಿಸ್ಥಿತಿಯಲ್ಲಿ ಬದಲಾವಣೆ ಕಂಡುಬರಲಿಲ್ಲ. ಶ್ವಾಸೋಚ್ಛ್ವಾಸದ ಶಬ್ದವು ತೆಳ್ಳಗಾಗುತ್ತಾ ಬಂದು, ೧೨ ಬಡಿದ ಕೆಲವು ಸಮಯದಲ್ಲೇ ಕೊನೆಯದಾಗಿ ಕಳೆಯಿತು.

ಮೃತ್ಯುವಿನೊಂದಿಗೆ ನಡೆಸಿದ ಹೋರಾಟದಲ್ಲಿ, ಕೊನೆಗೂ ಪರಾಜಯ ಹೊಂದಬೇಕಾಯಿತು. ಮೃತ್ಯುವು ನಮ್ಮೆಲ್ಲರಿಂದ ಗುರುದೇವನನ್ನು ಸೆಳೆದುಕೊಂಡು ನಡೆಯಿತು.

ಕನ್ನಡ ನಾಡಿನ ಎಲ್ಲ ದೊಡ್ಡ ಊರುಗಳಲ್ಲಿ ಜಯಂತಿಯ ಮಾರಾಟಗಾರರು ಬೇಕಾಗಿದ್ದಾರೆ. ಅಪೇಕ್ಷೆಯಿದ್ದವರು ಪತ್ರಬರೆದು ಏಜನ್ಸಿ ನಿಯಮಗಳನ್ನು ತಿಳಿದುಕೊಳ್ಳಿರಿ. ಕನ್ನಡಿಗರ ಮನೆ-ಮನೆಗೂ ಜಯಂತಿಯನ್ನು ಮುಟ್ಟಿಸಿರಿ !

ಯಾರಿವಳು ?

ಶ್ರೀ. ಶ್ರೀನಿವಾಸ ಗಲಗಲಿ, ಧಾರವಾಡ

卐

ಬಿಚ್ಚಿದ ಮುಡಿಯನು ಬೆನ್ನಲಿ ಬಿಟ್ಟು,
ನೀಲಾಂಬರವುಟ್ಟು,
ಸಾಗಿಹಳೆಲ್ಲಿಗೊ ಮೈಕಳೆಹೊಳೆಯನು
ಜಗದಲಿ ಹರಿಬಿಟ್ಟು ! ೧

ಮೃದುಪದಗತಿಯಲಿ ಬೆಡಗನು ಬೀರುತ
ಪಡುವಲ ಪಥಹಿಡಿದು,
ಯಾರಿವಳೊರ್ವಳೆ ನಡೆದಿಹಳೆಲ್ಲಿಗೊ
ಮೌನದ ವ್ರತ ಹಿಡಿದು. ೨

ದಿನದಿನ ನೋಡುವೆ, ದಿನವೂ ಬರುವಳು
ಮುಚ್ಚಂಜೆಯ ಮೊದಲು;
ಹೋಗುವಳೆಲ್ಲಿಗೊ ಆ ಬನದಾಚೆಗೆ !
ಕಣ್ಮರೆಯಾಗುವಳು. ೩

ಬಣ್ಣಬಣ್ಣಗಳ ಬದಲಿಸುತಿರುವಳು
ನೋಟದ ಹೊಳಹಿನೊಳು;
ಅಡಿಗಡಿಗೂ ಹೊಸ ಜಗವನೆ ನಿರ್ಮಿಸಿ
ಹೊಸತನ ಸೂಸುವಳು. ೪

ಮಲ್ಲಿಗೆ ಅರಳಿತು ! ಅರಳು ಸಂಪಿಗೆ !
ಸೂಸಿತು ಮಕರಂದ !
ಹೊಬಿಸಿಲಾಯಿತು ಜೀವನ ಝರಿಯಲಿ
ನಸುನಗೆಯಾನಂದ ! ೫

ಏನಿದು ಸೋಜಿಗ- ಪಡುವಣಮುಗಿಲಲಿ
ಮೂಡಲ ಕೆಂಪಿಹುದು !
ಪಡುವಣಕತ್ತಲೆ ಮೂಡಣ ಮುಗಿಲಲಿ
ಮೊಗವೆತ್ತುತಲಿಹುದು. ೬

ಮುಗಿಲೋವರಿಯೊಳು ಬಗೆಮೊರೆ ಬಂದಿರೆ
ಹೊತ್ತಾಯಿತೊ ಏನೊ ?
ಎನುತಲಿ ಆ ಕಡೆ ಹರುಷದಿ ನಡೆದಿಹ
ಸಂಧ್ಯಾಂಗನೆಯೇನೊ ! ೭

ಪ್ರೇಮದೀಪವನುರಿಸಿ....

ಶ್ರೀ. ಎಸ್. ವಿ. ಎಲ್. ಎನ್. ಶರ್ಮಾ, ಪೆರಡಾಲ

卐

ಎಳದಳಿರ ಮರೆಯಿಂದ ಮೂಡಿಬಹ ಮೊಗ್ಗಿನೊಲ್
ಮುಗುಳು ನಗುತಲಿ ಬರುವ ಮೋಹನಾಂಗಿ !
ನಿನ್ನ ನೋಡಿದ ಬಳಿಕ ಇನ್ನೇನ ನೋಡುವೆನು ?
ನನ್ನೆದೆಯ ಸೌಭಾಗ್ಯಲಕ್ಷ್ಮಿ ನೀನು ! ೧

ಎಲ್ಲ ಹೂ ಹೂವಲ್ಲ ನನ್ನ ಹೂ ಬೇರಿಲ್ಲ
ನೀನು ನೀನೇ ನನ್ನ ಜೀವಕುಸುಮ,
ನಿನ್ನ ನನ್ನಯ ನೋಟ ದೇವನೊಲುಮೆಯ ಬೇಟ
ಆಂತೆಯೇ ಕೂಟವಿದು ಪ್ರೇಮದಾಟ— ೨

ಸುಳಿಗುರುಳ ಜಡೆಯೆರಡನಿಳಿಬಿಟ್ಟು ನೀನಂದು
ನಗುನಗುತ ನಿಂತಿದ್ದೆ ದೂರದಲ್ಲಿ,
ನಿಮಿಷದಲಿ ಒಳಗೋಡಿ ನೀರಬಿಂದಿಗೆ ತಂದು
ಕಾಲ ತೊಳೆಯಲಿಕೆನುತ ಕೊಟ್ಟೆ ಕೈಲಿ. ೩

ರಮಣಿ, ಆಗಲೆ ನಿನ್ನ ಕೈಯ ಕಂಕಣವೇಕೊ
ಕಿಂಕಿಣಿಯ ನಾದವಂ ಬೀರುತಿತ್ತು,
ನಸುಗೆಂಪು ಬಣ್ಣದಾ ನಿನ್ನ ಗುಳಿಕೆನ್ನೆಗಳು
ಪಳಪಳನೆ ಹೊಳೆವಂತೆ ತೋರುತಿತ್ತು. ೪

ಚೆಂಗುಲಾಬಿಯ ಚೆಲುವ ಚೆಂದುಟಿಯ ದಳಗಳಲಿ
ನಗೆಯ ಮಕರಂದವದು ಸೂಸುತಿತ್ತು;
ಉಕ್ಕಿ ಬಹ ಮಧುವಿಂಗೆ ಸೊಕ್ಕಿ ಬಹ ತುಂಬಿಯೊಲ್
ನನ್ನ ಮನ ನಿನ್ನನೇ ನೋಡುತಿತ್ತು. ೫

ನನ್ನ ಪ್ರೇಮದ ಬೀಜ ನಿನ್ನೆದೆಯ ಹೊಲದಲ್ಲಿ
ಮೊಳೆತಿರುವುದೆಂಬುದನ್ನರಿತಿರುವೆನು;
ನನ್ನೆದೆಯ ನೆಲವನ್ನು ಕೆದಕಿ ಒಲವಿನ ಗಿಡವ
ಬೆಳೆಸುತಿಹೆ ನೀನೆಂದು ಬಲ್ಲೆ ನಾನು ! ೬

ಒಲುಮೆಯೇ ನಮಗಿರುವ ಬಲುಮೆಯೆಂಬುದನರಿತು
ಬಾಳ ಬೃಂದಾವನದಿ ನಲಿದಾಡುವ;
ನಾನು ನೀನೂ ಕೂಡಿ ಹೃದಯಮಂದಿರದಲ್ಲಿ
ಪ್ರೇಮದೀಪವನುರಿಸಿ ಕೈ ಮುಗಿಯುವ ! ೭

ಮನೆಮಾಡಿ-ನೋಡು

(ಒಂದು ನಗೆಯಾಟ)

ಬರೆದವರು :
ಶ್ರೀಮತಿ ಪದ್ಮಾವತಿ ಅಣ್ಣಿಗೇರಿ ಬಿ. ಎ. ಧಾರವಾಡ

[ಮನೆಯಲ್ಲಿ ರಾಯರು ಕುಳಿತಿದ್ದಾರೆ ಮೇಲಿಂದ ಮೇಲೆ, ಸಿಟ್ಟು ಸಿಸು ಆತನಿಗೆ ತಿಳಿಯದಂತೆ ತಾನಾಗಿಯೇ ತೋರಬೀಳುತ್ತಲಿದೆ. ಚಿಂತೆಯು ಸಂತೆಯು ಅವರ ಮುಖದ ಮೇಲೆ ನೆರೆದಂತಿದೆ.]

ಗಂಡ:— ಬೇಕಾದಾಗ ಬರವೊಲ್ಲಳ್ಯಾಕ. ಮನಸಿಗೆ ಬಂದರ ಬರಲಿ....ಇಲ್ಲದಿದ್ದರ ತೌರಮನ್ಯಾಗ. ಕಡಿತನಕಾ ಉಳೀಲಿ! ಅಂ.... ಅಂ....ಯಾರೋ ಬಂದ್ಹಾಂಗಾಯ್ತು. ಬಹುತೇಕ ಬಗಲಾಗ ಟ್ರಂಕ್ ಅದ; ಅಂದ ಮ್ಯಾಲೆ, ಅದ; ಆ ಹಳ್ಳಿಯ ಹುಡುಗೀ ಇರಬೇಕು ಅಂತೂ ಅರ್ಧಾಂಗಿ ಪ್ರಸನ್ನ ಆದಳು. ಬಾ! ಬಾ! ಅಂತೂ ಬಂದಿ ಅನ್ನು.

ಹೆಂಡತಿ:— ಬರದೇ ಹಾಂಗ್ತ ಎಷ್ಟು ದಿನ ಅಲ್ಲಿ ಇರೋದು? ಎಂದಿಲ್ಲಾ ಒಂದಿನಾ ನನ್ನ ಮನಿಗೆ ನಾ ಬರಲಿಕ್ಕೇ ಬೇಕು.

ಗಂಡ:— ಹೌದು ಅದು ನಿಜ.... ಆದರ ನಾ, ಮನಿ ಹಿಡಿದು ಎಷ್ಟು ದಿನಾ ಆಗಿ ಹೋದವು; ಆದರೂ ನೀನು ಬರಬಾರದಂದರ! ಮನಿ ಸಿಕ್ಕಕೂಡಲೆ ಪತ್ರಾ ನಾ ಬರಿದಿದ್ದಿಲ್ಲೇನು?

ಹೆಂಡತಿ:— ನಿಮ್ಮ ಮೊದಲನೇ ಪತ್ರ ಬಂದಾಗ ಅಪ್ಪನ ಕಾಲು ಹಿಡಿದಿದ್ದ್ವ. ಎರಡನೇ ಪತ್ರ ಬಂದಾಗ, ಅವ್ವಗ ವಾಂತಿ ಸುರುವಾಗಿ ಹಾಸಿಗೆಯಿಂದಾ ಎದ್ದಿದ್ದಿಲ್ಲ ....

ಗಂಡ:— ಮೂರನೆಯ ಪತ್ರ ಬಂದಾಗ ನಿನಗ ಜಡ್ಡು ಆಗಿತ್ತು ಹೌದಲ್ಲೋ? ಅಂತೂ ಸದ್ಯ ನಾ ಮನೀಮಾಡೋದು ಬ್ಯಾಡಂತ ಚಾಲಪ್ರೊರಮ ಹೇಳಿದ್ದೆ. ತವರ, ತಾ ದೊತ್ತ ಬರವರ್‍ಹಾಂಗ. ಇವತ್ತ್ಯ ಮನೀ ನೋಡ್ರಿ—ಅಂತ ಪತ್ರಾ ಬರಿದಿ. ನಾನೂ ಸೊ ತಾ ಹುರುಪಿನಿಂದ ಕೇರಿ ಕೇರಿಗಳನ್ನು ಶೋಧಿಸಿ, ಅನುಕೂಲ ಇದ್ದಂಥಾ ಮನಿ ನೋಡ್ದೆ. ಆದರೂ ಬರಬಾರದಂದ್ರ! ಇರಲಿ ......ಟ್ರಂಕು ಕೆಳಗೆ ಇಳಿಸು!

ಹೆಂಡತಿ:—ಟ್ರಂಕು ಇಳಿಸೋದು ಆಯ್ತು. ನೀರಡಿಕೆ ಆಗೇದ— ಬಿಸಿಲಾಗಿನಿಂದ ಬಂದೀನಿ.... ...ನೀನು ಕುಡೀಲಿಕ್ಕೆ ......ಏನಾದರೂ ಜೋಡು ಅದನೋ ಇಲ್ಲೊ?

ಗಂಡ:— ಓಹೋ! ಅದ— ತಂಬಿಗಿ-ಥಾಲಿ ಜೋಡು!— ಗಂಡಸು....ನಾ ಮಾಡಿಕೊಂಬಾವಾ ರಾಣೀಸಾಹೇಬರು ಬರತಾರಂತ ಏನು ತಯಾರು ಮಾಡಿ ಇಡಬೇಕಾಗಿತ್ತು? ತೌರಮನಿಯಿಂದ ಬಂದೀದಿ—ಖಾಲೀ ಕೈಲೆ! ಬರೋಮುಂದ ಕರಚೀಕಾಯಿ, ಉಂಡಿ, ಅನಾರಸ ಏನಾದ್ರೂ ಮಾಡಿಸಿಕೊಂಡು ತಗೊಂಡು ಬರಬೇಕಾಗಿತ್ತು?

ಹೆಂಡತಿ:— ಮಾತವರ್‍ಯಾರು? ಪ್ಯಾಟಿಯಿಂದ ಸಾಮಾನು ತರವರ್‍ಯಾರು?—ಎಲ್ಲಾರೂ ಹಾಸಿಗೀ ಹಿಡಿದು ಮಲಗಿಕೊಂಡಾಗ!

ಗಂಡ:— ಅಂದರ.... .. ಇಲ್ಲಿ ಯಾರನ್ನಾದರೂ ' ತಯಾರು ಮಾಡಿ ' ಇಡಲಿಕ್ಕೆ ನೇಮಿಸಿ ಹೋಗಿದ್ದೀನು?

ಹೆಂಡತಿ:— ನಾ ಯಾಕ ನೇಮಿಸಲಿಕ್ಕೇ ಬೇಕು? ಮನೀನ್ತ ಮಾಡೀರಿ ಅಂದಮ್ಯಾಲ, ಏನಾದರೂ ಮಾಡಿರಬಹುದೂ ಅಂತ ತಿಳಿದಿದ್ದೆ.

ಗಂಡ:— ಹುಂ. ಅದ್ಕ ಮನಿ ಮಾಡಿದ ವೃತ್ತಾಂತನ್ತ ಹೇಳತೀನಿ ಕೇಳು! ನೀನಂತೂ History repeats it self ಅನ್ನೋಹಾಂಗ, ತೌರಮನೀ ಸ್ಥಿತಿಗತಿ ಹೇಳಿದಿ. ನಾನೂ ನಂದಷ್ಟು ಹೇಳತೀನಿ ಕೇಳು.

ಹೆಂಡತಿ:— ಹೇಳ್ರಿ. ಬೇಕಾದಷ್ಟು ಹೇಳ್ರಿ. ಕೇಳಲಿಕ್ಕಂತ್ತ ಬಂದೀನಿ!

ಗಂಡ:-ಮನೀ ಸಿಕ್ಕ ಮ್ಯಾಲೆ ಸಾಮಾನು— ಅಡಿಗೀ ಸಾಮಾನು ಕಟ್ಟಿಗೊಂಡು, ಗಾಡಿಯಿಂದ ಮಧ್ಯರಾತ್ರಿಗೆ ಇಳಿದೆ. ಆದರ....ಸ್ಟೇಶನಿನೊಳಗ ಹಮಾಲರೇ ಇರಲಿಲ್ಲ. ಅದರಾಗ ಮ್ಯಾಲ ಜಿಟ ಜಿಟ ಮಳೆ! ಹಾಂಗ್ತ ನಿಂತೆ. ಹ್ಯಾಂಗ ನಿಂತರೂ ಮಲ್ಲಾಡದ ಮಳೀ ಬಿಡೂ. ದಿಲ್ಲಂತ ನಿರ್ಧಾರ ಮಾಡಿಕೊಂಡು, ಭಾಂಡೀ ಚೀಲಾ ಹೆಗಲಿಗೆ ಏರಿಸಿದೆ.

ಹೆಂಡತಿ:— ಅಷ್ಟೆಲ್ಲಾ ಸಾಮಾನು ನೀವು ತಗೊಂಡು ಬಂದಿರಾ?

ಗಂಡ:— ನಾ ತರದಿದ್ರ ಯಾರು ತರತಾರ? ನಮ್ಮಪ್ಪನ ಮಗ, ಝುಕ್ಕಸತ್ತ ಹೊತ್ತುಗೊಂಡು ಬರಬೇಕಾತು! ಅಂಥಾ ಮಳಿಯೊಳಗ ಮನಿಗೆ ಬರೋವರಾಗ, ನ್ಯ ಬೆವತು ಹೋತು. ಮನಿಗೆ ಬಂದನಂತರ ನೋಡತೀನಿ.... ನನ್ನ ಧೋತರೆಲ್ಲಾ, ನಿನ್ನ ಚಿಕ್ಕಿ ಚಿಕ್ಕೀ ಚಾಕಲೇಟ್ ಪತ್ತಲದ್ಹಾಂಗ ಆಗಿಹೋಗಿತ್ತು. ಭೃಂಗ ಕುಸುಮದ ಗಂಧಾ ಮೈಗೆ ಸವರಿಕೊಂಡ್ಹಾಂಗ, ಟಾರ್ ಬೀದಿಯ ಕೆಸರು ಮೊಣಕಾಲಿನಿಂದ ಭುಜದ ವರೆಗೆ ಏರಿಕೂತಿತ್ತು.

ಹೆಂಡತಿ:— ಅರಿವೀ ಬದಲಾಯಿಸಿದಿರೋ ಇಲ್ಲೊ?

ಗಂಡ:— ಹೇಳ್ತೀನಿ ಅಷ್ಟು, ಸಮಾಧಾನದಿಂದ ಕೇಳು. ನಾ ಭಾಂಡಿಯ ಚೀಲಾ ತರುವಾಗ, ಮತ್ತೊಬ್ಬ ವ್ಯಕ್ತಿಗೂ ಹಮಾಲ ಬೇಕಾಗಿದ್ದ. ನಾನೂ ಹಮಾಲ ಇರಬಹುದಂತ, 'ಬರತೀಯೇನೋ?' ಅಂತ ಕೇಳಿಬಿಟ್ಟ.

ಹೆಂಡತಿ:— ನೀವೂ ನೆಟ್ಟಗ್ತ ಉತ್ತರಾ ಹೇಳಬೇಕಿತ್ತು?

ಗಂಡ:— ಉತ್ತರಾ ಏನು ಹೇಳೋದು ಮಾಹಾರಾಯಳ!

ಭಾಂಡೀ ಸಾಮಾನು ತಂದಮ್ಯಾಲೆ, ಖಾನಾವಳಿಗರೇ ಹ್ಯಾಂಗ ಹೋಗೋದು ?

ಹೆಂಡತಿ:— ಅದಂತೂ ಸೈ ಬಿಡ್ರಿ! ಮನಿಯೊಳಗsa ಮಾಡಿ-ಕೊಳ್ಳಿಕ್ಕೆ ಆಗ್ತsದ.

ಗಂಡ:— ಅಗ್ದ ಏನು ಮಾಡ್ತsದ! ಇಪ್ಪತ್ತು ರೂಪಾಯಿ ಕೊಟ್ಟು ಮನೀನsa ಹಿಡಿದಿದ್ದೆನಲ್ಲ! ಮುಂದ....ಕೊರವಂಜೀ ಹಾಂಗ ಬುಟ್ಟೀ ತಲಿಮ್ಯಾಲೆ ಇಟುಗೊಂಡು, ಅಕ್ಕಿ-ಬ್ಯಾಳಿ, ಕಾಳುಕಡಿ ಖರೀದಿ ಆಯ್ತು.

ಹೆಂಡತಿ— ಹೊಸಾಮನಿ ಅಂದ ಮ್ಯಾಲ, ಎಲ್ಲಾ ಖರೀದಿ ಮಾಡೋದs ಅಲ್ಲಾ! ಖರೀದಿ ಮಾಡದಿದ್ದರ ಮನ್ಯಾಗ ಎಲ್ಲಿಂದ ಬರತsದ ?

ಗಂಡ: ಮುಂದ—ಕೃಷ್ಣ....ಸುದರ್ಶನ ಚಕ್ರದ ಕೃಷ್ಣನಾಗಿ ಬೀಸೋದೂ ಆಯ್ತು, ಕುಟ್ಟೋದೂ ಆಯ್ತು.

ಹೆಂಡತಿ:— ಯಾರನ್ನರೇ ಕರೆದು ಕುಟ್ಟೋದು, ಬೀಸೋದು ಮಾಡಿಸಿದ್ದರ ಆಗತಿತ್ತು

ಗಂಡ:— ಯಾರನ್ನ ಯಾರು ಕರಿಯೋದು ? ಮಾಡಿಕೊಂ-ಡಾಕೀ ಮನಿಯೊಳಗ ಇಲ್ಲಾ ಅಂದಮ್ಯಾಲೆ, ಮುಂದಿ ಯಾರು ಬಂದು ಮಾಡತಾರ? ಅಂತೂ ಎಲ್ಲಾ ಸಾಮಾನು 'ರೆಡಿ' ಆದಮ್ಯಾಲೆ, ಒಂದು ಖಂಡೀ ಕಟಿಗೀ ಖರೀದಿ ಮಾಡ್ದೆ.

ಹೆಂಡತಿ:— ಖಂಡಿ! ...ಅಷ್ಟು ಯಾಕ ಖರೀದಿ ಮಾಡಲಿಕ್ಕೆ ಹೋಗಿದ್ರಿ-ಏನು ಸಿಗದ ಬದಕs ?

ಗಂಡ:— ಸಿಗದ ಬದುಕಲ್ಲ; ಆದರ ಮಳಿಗಾಲ ಮುಗಿಯೋ-ತನಕಾ ಬೇಕಲ್ಲ! ಹಸೀ ಕಟಿಗೀ ತಂದು ಹಾಕಿದರ, ಹನ್ನೊಂದು ಘಂಟೆಗೆ ಅಡಿಗೀ ಹ್ಯಾಂಗ ಮಾಡಿಹಾಕ್ಯಾಳಂತ, ಗಾಡೀನs ಖರೀದಿ ಮಾಡ್ದೆ; ಆದರೆ ಒಲಿಗೆ ಒಂದೂ ಉಪಯೋಗ ಆಗಲಿಲ್ಲ.

ಹೆಂಡತಿ: ರೊಕ್ಕಾ ಕೊಟ್ಟರೂ ಶನೀ ಕಾಟ ಏನೂ ತಪ್ಪಲಿಲ್ಲ ....ಅನ್ರಿ!

ಗಂಡ — ಕೇಳತೀಯೇನು ? ......ಆ ಮ್ಯಾಲೆ ನಾನೂ ಎದು-ಗಚ್ಚಿ ಹಾಕಿ, ಪರಶುರಾಮನ ಅವತಾರಾ ತಾಳಿ, ಆತ ಕ್ಷತ್ರಿಯರನ್ನು ನುಚ್ಚುನೂರು ಮಾಡಿದ್ಹಾಂಗ, ನಾನು ಕಟಿಗೀ ನುಚ್ಚುನೂರು ಮಾಡಿ, ಕೊನೆಗೆ ಪಾಕಶಾಲೆಗೆ ಪ್ರವೇಶಿಸಿದೆ ಆದರ, ಅಡಿಗೀ ಮಾಡಿಕೊಂ-ಬೋವ್ರಾಗ ಸಾಕುಬೇಕಾಗಿ ಹೋಗತಿತ್ತು. ಹೊಗಿಯಿಂದ ಕಣ್ಣಾಗ ನೀರು ಹರೀತಿದ್ವು. ಆವಾಗ ಹೆಂಗಸರು ಗಟ್ಟೀ—ಅಂತ ಅನಿಸಿತು.

ಹೆಂಡತಿ :– ಗಟ್ಟಿ ಇರದಿದ್ದರ ಹ್ಯಾಂಗ ಆದೀತು ? ಒಂದೊಂದು ದಿನ ಆಪ್ಪಿ ತಪ್ಪಿ ಅಡಿಗಿ ಆಗದಿದ್ದರ ಹಾರಿಬೀಳತಿದ್ದರ ಅಡಿಗೀ ಅನುಭವ ಚೆಲೋ ಆಯ್ತೋ ಇಲ್ಲೋ ?

ಗಂಡ :— ಕೇಳ್ಯಾರು ಕೇಳು ನನ್ನ ಅನುಭವ ..ಹೊಸದಾಗಿ ಮನೀಮಾಡಿದವನ ಅನುಭವ ಹೇಳತೀನಿ ಕೇಳು. ನಾ ಹೆಚ್ಚಿಗೇನೂ ಮಾಡತಿದ್ದಿಲ್ಲ. ಬರೇ ಅನ್ನಾ—ದೇಶೀಗೋಡಂಬಿ ಅಂದರ....ಶೇಂಗಾ ಹಾಕಿ ಒಂದು ಕೊಳಗ ಹುಳಿ! .. ಹೀಂಗs ಸಾಗಿದ ಮ್ಯಾಲೆ ಅದೂ ಬ್ಯಾಸರ ಬಂತು.

ಹೆಂಡತಿ :— ಭಾಂಡೀ ಯಾರು ತೊಳಿತಿದ್ರು ?

ಗಂಡ :— ಮತ್ಯಾರು ತೊಳಿತಾರ.......ಮನಿ ಮಾಡಿದವ ನಾನೇ; ಭಾಂಡೀ ತೊಳಿಯೋದು-ಕಸಾ ಉಡುಗೊದು—ಎಲ್ಲಾ ಮಾಡ-ತಿದ್ದೆ! ಒಟ್ಟಿನ ಮ್ಯಾಲೆ ಕಾಂಟ್ರ್ಯಾಕ್ಟ್ ಹಿಡಿದಿದ್ದೆ ಅನ್ನು: ಆಫೀಸಿನಲ್ಲಿ ಆಫೀಸಿನ ಕೆಲಸ, ಮನೆಯಲ್ಲಿ ಮನೆಗೆಲಸಾ ಹಿಂಗ In addition to my own duties I was busy engaged at my oftice and as well at home.

ಹೆಂಡತಿ:— ಜವಾಬ್ದಾರಿ ಭಾಳ ಬಿದ್ದಿತ್ತು, ಅನಬಾರ್ದರಿ ?

ಗಂಡ : — ಕೇಳತೀಯೇನು ? ಮಗ್ಗಲು ಮಡಚಿಹೋಗೇವ. ಭಾಂಡೀ ಬೆಳಗೋವ್ರಾಗ, ನನ್ನ ಕೈಯಾಗಿನ ಗೆರೀನs ಸವದು ಹೋಗ್ಯಾವ. ನಾನು ಒಬ್ಬ ಭವಿಷ್ಯಕಾರನ ಹತ್ತರ ಹೋಗಿದ್ದೆ.

ಹೆಂಡತಿ :— ಏನು ಹೇಳಿದರು ? ಚೆಲೊ ಅದನೋ - ಕೆಟ್ಟ ಅದನೊ ?

ಗಂಡ :— ರಾಯರ, ಗುರು ಪ್ರಬಲಿದ್ದಾನ ...ಶುಕ್ರ ಉಚ್ಚ-ಸ್ಥಾನದಲ್ಲಿದ್ದಾನ. ಶುಕ್ರ ಮಹರ್ದಶಾ ತಿರಿಗೇದ—ಅಂತ ಹೇಳಿದರು. ನಾನು ಹೀಂಗ ವಿಚಾರ ಮಾಡ್ದೆ: 'ಶುಕ್ರ ಮಹಾರ್ದಶಾ ಅಂದರ ಪಾಕಪ್ರವೀಣ ಆಗೊದೇನೊ' ಅಂತ ಅವಕ್ಕ್ಯಾ ನಾವೂ ಅಡಿಗೀಮನೀ ಕಡೆ ತಿರುಗಿದ್ದು. ಅಲ್ಲಿ ನಮ್ಮ ಕೈಯಾಗಿನ ಗೂರೂನೂ ಹೋದ; ಶುಕ್ರನೂ ಹೋದ....

ಹೆಂಡತಿ:— ಎಲ್ಲರೂ ಹೋಗವ್ರೊಲ್ಲರ್ಯಾಕ. ಅವರೆಷ್ಟು ದಿನ-ದವರು ? ಇವತ್ತಿಲ್ಲಾ ನಾಳೆ ಬವಲು ಆಗವರು! ಆದರ ನಾ ಬಂದೆನಲ್ಲಾ.

ಗಂಡ:— ಹೊ! ಹೊ!! ಏನು ನಿನ್ನ wonderful brainಉ ಅಂತೀನಿ. ನೀನು ನನ್ನ permanent ಗ್ರಹ. . ಅಲ್ಲ ಗೃಹಲಕ್ಷ್ಮಿ! ಅಂತೂ ಮತ್ತೆ 'ಸ್ಟಾರ್ಸ್' ತಿರುಗಿದರೂ ತಿರುಗ-ಬಹುದು. ಯಾಕಂದರ 'ಗೃಹಿಣೀ ಗೃಹಮುಚ್ಯತೇ'

ಹೆಂಡತಿ:— ಆಗೇ ಆಗ್ತsದ ಎಲ್ಲಾ........ ಮನಿಯಲ್ಲಿ ಆಗೇ ಆಗ್ತsದ.... ನನ್ನ ಕಾಲಗುಣಾನs ಅಷ್ಟು ಚೆಲೊ ಅದ!

ಗಂಡ:— ರತ್ನಾಕರ ರಸಿಕಕುಲಸಾರ್ವಭೌಮನ್ಹಾಂಗ ಕಾಲ ಕಳೆಯಬಹುದೇನೋ ಅಂತ ಮಾಡಿದ್ದೆ; ಆದರ ಮನಿ ಹಿಡದು ಮೂರು ತಿಂಗಳಾದರೂ ಮಡದಿಯು ಆಗಮನವಿಲ್ಲ ಪತ್ರ ಇಲ್ಲಾ .... ಉತ್ತರ ಇಲ್ಲಾ! ಬರಬೇಕಂದರ ನನಗ ರಜಾ ಕೂಡಾ ಇಲ್ಲ.

ಹೆಂಡತಿ: - ಎರಡು ದಿವಸ ರಜಾ ಸಿಗತಿದ್ದಿಲ್ಲೇನು ?

ಗಂಡ:— ಎರಡು ದಿವಸ ಯಾಕ.......ಎರಡು ತಾಸೂ ಇಲ್ಲ! Sunday ಸುದ್ಧಾ attend ಆಗಿರತೀನಿ. ಪತ್ರ ಬರವಾಗ ಉತ್ತರ ಬಂದೀತೇನೊ ಅಂತ ಪ್ರತಿದಿನಾ ಪೋಸ್ಟಮನ್ನನ್ನ ಕೇಕೇ ಕೇಳತಿದ್ದೆ!

ಹೆಂಡತಿ:.... ಅಂವ ಏನು ಹೇಳತಿದ್ದಾ ?

ಗಂಡ:— ಅಂವ ಏನು ಹೇಳೋದು?.... ಪತ್ರ ಬಂದರ ಕೊಟ್ಟಾನನ್ನ! 'ಯಾಕ್ರೀ ರಾಯರ್ರ ಇಷ್ಟೊಂದು ಉತ್ಸುಕತಾ? ಮನಿಯಿಂದಾ ಪತ್ರ ಬರಬೇಕಾಗಿತ್ತೇನ್ರಿ?' ಅಂತ ನನ್ನ ಹೃದಯದ ಇಂಗಿತಾ ತಿಳಕೊಂಡು ಕೇಳ್ತಿದ್ದ. ಅದರಂತೇ ಸ್ಟೇಶನಿಗೆ ಮನಿಗೆ.... ಎಲ್ಲಾ ಗಾಡಿಗೂ ಸಾರಿಗೀನ್ನ ಇಟ್ಟಿದ್ದೆ.

ಹೆಂಡತಿ:— ಪಾಪ! ಹಗಲೂ ರಾತ್ರಿ ಒಂದs ಸವನ ಅಡ್ಡಾಡಿ ಕಾಲು ಹೋಗಿರಬೇಕಲ್ರಿ? ಬಂದರ ನಾ ಮನಿಗೆ ಬಂದೇ ಬರತಿದ್ದೆ. ಪತ್ರೇ....ಬರದಿದ್ರೆಲ್ಲಾ!

ಗಂಡ:— ಪತ್ರೆ ಬರೆದಿದ್ದೆ. ಆದರೂ ಬೇಗರು ಬಂದಾಗ ಎದುರುಗೊಂಬೂದಿಲ್ಲs?....ಹಾಂಗ ಎದುರುಗೊಂಡು ಹೋಗೋಣಂತ ಬರತಿದ್ದೆ. ಅದೂ first time ಉ! ದಿನಾ ಗಾಡಿಗೆ ಬರೋದು ಕಂಡು ಒಂದು ದಿನ Ticket Collector ನೂ ಗದರಿಸಿಬಿಟ್ಟ. ಅವನ ರುಬಾಬರೇ ಏನಂತ ಹೇಳಲಿ? ಅಪ್-ಟು-ಡೇಟ್ ಡ್ರೆಸ್ಸೇನು! ಫ್ರೆಂಚ್ ಕಟ್ಟೇನು! ಫೆಲ್ಟ್ ಹ್ಯಾಟೇನು! ಬಾಯಾಗ ಚುರೂಟೇನು! ಟ್ರ್ಯಾಯ್ ಕಲರದ ಟಾಯೇನು! ಎಷ್ಟು ಸೊಕ್ಕಿನವ ಇದ್ದಾನಂತ ತಿಳಿದೀದಿ?

ಹೆಂಡತಿ:—ನಿಮಗೇನಾದ್ರೂ ಅಂದನೇನ್ರಿ? ಬಡಿದಾಡಿದಿರೇನು ಮತ್ತ!

ಗಂಡ:— ನಾಯಾಕ ಬಡಿದಾಡಲಿಕ್ಕೆ ಹೋಗ್ಲಿ! ಒಂದಿನಾ ಅವಸರದಿಂದ ಹೋದೆ. ಗಾಡಿಯು ಜನಾ ಎದುರಿಗೆ ಬಂದ್ಹಾಂಗ ಆಯ್ತು. ಹೋಗಿ 'Mail ಬಂತೇನು' ಅಂತ ಕೇಳಿದರ, ಅಂವ ಏನು ಹೇಳಬೇಕು?

ಹೆಂಡತಿ:— ಬಂದಿದ್ದರ ಬಂದದ ಅಂತ ಹೇಳಬೇಕು. ಇಲ್ಲ-ದಿದ್ದರ ಇಲ್ಲಂತ ಹೇಳಬೇಕು....ಅದರಾಗೇನದ!

ಗಂಡ:— ಅಷ್ಟು ಸರಳ ಹ್ಯಾಂಗ ಹೇಳತಾನ. "Mail ಭೀ ಆಯಾನಹಿ Female ಭೀ ಆಯಾನಹಿ ....ಚಲ್ ಜಾವ ಯಹಾಂಸೆ" ಅಂತ ಗುಡುಗುಹಾಕಿ ಬಿಟ್ಟ. 'ಎಂಥಾ ಸೊಕ್ಕು' ಅಂತ ಮನದಾಗs ಅಂವಗ ಬೈಕೊಂಡು, ಮನೀಕಡೆ ತಿರುಗಿದೆ.

ಹೆಂಡತಿ:— ಅಂತೂ ಬಹಳ ತ್ರಾಸ ತಗೊಂಡಿರೆಲ್ಲಾ.

ಗಂಡ: — ನಾಯಾಕ ತಗೊಳ್ಳಿಕ್ಕೆ ಹೋಗ್ಲಿ; ಆದರ ಮೊದಲ್ನೇ ಸಾರಿ ಮಸೀ ಮಾಡಿದಾಗ, ಪ್ರತಿಯೊಬ್ಬನಿಗೂ ಆಗೋದು ಅನ್ನು. ಏನಾರೇ ಇರವೊಲ್ಲದ್ಯಾಕ. ಇಷ್ಟೆಲ್ಲಾ ಸಹನ ಮಾಡಿಕೊಂಡು ನಮ್ಮ ಮನ್ಯಾಗ ನಾವು ಇದ್ದೇವಂದ್ರ, ಮುಂದೀದೂ ಒಂದು ಕಾಟ ಇರಬೇಕs?

ಹೆಂಡತಿ:— ಮುಂದೀದೇನು ಮತ್ತ? ನೀವು ಮ್ಯಾಲೇ ಮ್ಯಾಲೆ ಬಕ್ಕರೀ ಮಾಡಲಿಕ್ಕೆ ಹಿಟ್ಟು ಕೊಡತಿದ್ರೇನು?

ಗಂಡ:— ನಾ ಯಾಕ ಕೊಡ್ಲಿ? ನನಗ ಅಡಿಗಿ ಬರತಿದ್ದಿ-

ಪ್ರಕಟವಾಗುವವು! ಶೀಘ್ರ ಪ್ರಕಟವಾಗುವವು!!

ಅಭಿನವ ಗಣಿತ

ಲೇ. : ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ "ಅಭಿನವ ಗಣಿತ" ಗಳನ್ನು ಹೊರಡಿಸಲಾಗಿದೆ ಮಕ್ಕಳ ಪರಿಚಯದ ವಾತಾವರಣ ವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹಲವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆ ಯಾಗಿದೆ. ಮುಖ್ಯವಾಗಿ ೧೯೫೮ರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದಿರು ವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗ ಬಲ್ಲವು. ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿದೆಯೆಂಬುದನ್ನು ಅಭಿನವ ಗಣಿತಗಳ ಅನುಸ-ರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನಿರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ಲ್ಲೇನು? ಆದರೂ ನಾ ಹಾಯ್ದು ಹೋದ್ರ, ಅಕ್ಕ-ಪಕ್ಕದ ಜನ ಹುಳು-ಹುಳು........ಕಣ್ಣು ಪಿಳಕಿಸದೆ........ಹರಿದು ತಿನ್ನವರ್ಹಾಂಗ ನೋಡತಿದ್ದರು!

ಹೆಂಡತಿ:— ಸಾಕು ಏನಕೇನರೇ ಹೇಳೋದು! ನಿಮ್ಮನ್ನ ಯಾಕ ನೋಡ್ತಾರ ಮಣ್ಣುಹಕ್ಕೊಳ್ಳಿಕ್ಕೆ! ನೀವೇನು ಚೆಲುವ ಚಂದ್ರಾಮಂತ ತಿಳಕೊಂಡೀರೇನು?

ಗಂಡ:— ಯಾಕ? ನಾ ಛಂದ ಇಲ್ಲೇನು? ಏನು ಕಡಿಮಿ ಆಗೇದ ನನಗ?

ಹೆಂಡತಿ: ಸಾಕು ಬಿಡ್ರಿ ನಾ ಕೇಳಲಾರೆ! ನಿಮ್ಮ ಬಣ್ಣೇನು ಕಣ್ಣೇನು; ಅಗಲು ಬಾಯೇನು! ಮಾಡಿಕೊಂಡ ತಪ್ಪಿಗೆ ನಾನು, ನಿಮ್ಮ ರೂಪಕ್ಕ ಚೆಲೋ ಅನ್ನಬೇಕೇನು?

ಗಂಡ:— ನಾ ಹ್ಯಾಂಗಾರೆ ಇರವೊಲ್ಲೆನ್ಯಾಕ; ಈ ಮ್ಯಾಲಿನ ಮನೀ 'ಮಂದಿ' ನೋಡಿ, ನಗೋದೇನು ಆಜು-ಬಾಜು ಜನರಿಗೆ ಬಟ್ಟುಮಾಡಿ ತೋರಿಸೋದೇನು........ಇಷ್ಟ ಅಲ್ಲ! 'ಗಂಡ-ಹೆಂಡಿರು ನೆಟ್ಟಗಿಲ್ಲ. ಎತ್ತು ಎರಿಗೆ ಎಳಿದರ ಕೋಣ ಕೆರೀಗೆ ಎಳೀತು ಅನ್ನೋ-ಹಂಗ ಅದು' ಅಂತ 'ಪ್ರಪಗೆಂಡಾ' ಮಾಡಿ ಬಿಡಬೇಕs? ಹೀಂಗಾಗಿ ನನಗ ಮಾರೀ ಮ್ಯಾಲಕ್ಕ ಎತ್ತಿ ತಿರುಗಾಡಲಿಕ್ಕೆ ಆಗತಿದ್ದಿಲ್ಲ!

ಹೆಂಡತಿ:— ಹೋಗ್ಲಿ ಬಿಡ್ರಿ. ಮಂದೀದು ತಗೊಂಡು ಮಾಡೋ-ದೇನು? ಅಂಗಡಿಗೆ ಹೋಗಿ ಚಹಾನರೇ ತಗೊಂಡು ಬರ್ರಿ. ತಿನ್ನಲಿಕ್ಕೆ ಏನಾರೇ ತರೂದಕ್ಕ ಮರೀಬ್ಯಾಡ್ರಿ.

ಗಂಡ:— ವಾ! ವಾ!! ಅಂದೇನು ನೋಡು ಇದು ಪ್ರಗತಿ ಅಂತ! ಅಲ್ಲಽ, ನಿಮ್ಮ ಮನ್ಯಾಗ ನೋಡಿದರ ಮಡಿ-ಹುಡಿ ಜನ! ಪ್ಯಾಟ್ಯಾಗಿಂದ ಪಲ್ಲೆ-ಕಾಯಿ ತಂದರ, ನೀರು ಹಾಕಿ ತಗೊಂಡದ್ದು ಹತ್ತು ಸಲ....ಇದೇ ಕಣ್ಣಿಂದ ನೋಡೀನಿ. ಅಂದಮ್ಯಾಲೆ, ಅಂಗಡ್ಯಾಗ ತಿನ್ನೋದಽ... ಅದೂ ದೊಡ್ಡ ದೀಕ್ಷಿತರ ಮಗಳಾಗಿ?

ಹೆಂಡತಿ:— ಇರವೊಲ್ಲದ್ಯಾಕ ಹೋಗ್ರಿ: ನೀರಡಿಕೆ ಸಾವು ಆಗೇದ!

ಗಂಡ:— ಆಗ್ಲೀ-ಆಗ್ಲಿ. ಛೆ! ಛೆ!! ಎಂಥಾ ಬದಲಾವಣಿ ಅಂತೀನಿ! ಅಬ್ಬಾ ಎಷ್ಟು alteration marvellous changes! ಅಲ್ಲಾ ನಿಮ್ಮೂರಾಗ ಇದ್ದಾಗ ಹಣಿತುಂಬಾ ಕುಂಕುಮಾ ಹಚ್ಚತಿದ್ದಿ. ಆದರ ಈಗೇನು, ಚೆಂದದ ಸಾದಿನ ಟಿಕಳಿ....ಕೈಯಾಗ ಕರ್ಪೂರ ಬಳಿ! ಅಂತೂ ಶಹರಕ್ಕ ಬರೊಮುಂದ sufficient ಟ್ರೇನಿಂಗ್ ತಗೊಂಡ್ಡ ಬಂದೀದಿ ಅಂದ್ಹಾಂಗ ಆಯ್ತು.

ಹೆಂಡತಿ:— ಇರವೊಲ್ಲದ್ಯಾಕ! ನಾಯೇನು ಈಗಿನ ಜನರ್ಹಾಂಗ ಬಣ್ಣಾ-ಸುಣ್ಣಾ ಬಡಕೊಂಡಿಲ್ಲ. ಕರ್ಪೂರ ಬಳಿ ಹಕ್ಕೊಂಡರ, ಬದಲು ಆದ್ಹಾಂಗ ಆತೇನು?

ಗಂಡ:— ನಿನ್ನ ಈ 'ಫ್ಯಾಶನ್' ಇರವೊಲ್ಲದ್ಯಾಕ! ಲಗೂನ ಬಂದಿದರ ನಾಲ್ಕು ದಿನಾ ಆದ್ರೂ 'ರಾಜಾ-ರಾಣಿ' ಇಬ್ಬರೇ ಇರಲಿಕ್ಕೆ ಆಗತಿತ್ತು.

ಹೆಂಡತಿ:— ಈಗೇನು ಆಗೇದ?

ಗಂಡ:— ಆಗುವದೇನು? ಹಿಂದ ಬಾಲಾಗಸಿ ಬೆನ್ನಿಗೆ ಹಚಿ-ಗೊಂಡಽ ಬಂದಿದಿಯಲಾ— ಈ ನಿಮ್ಮ ತಂಗಿನ್ನ.

ಹೆಂಡತಿ:— ಜೋಡಿಲೇ ಅಂತ ವಿಜಯಾಕುಮಾರಿನ್ನ ಕರ-ಕೊಂಡು ಬಂದೀನಿ. ಅದೇನು ಮಾಡತದ?

ಗಂಡ:— ಹಾ! ಹಾ!! ಏನು ದಿವ್ಯ ಹೆಸರು. ವಿಜಯಾ-ಕುಮಾರಿ! ಏನಾದ್ರೂ ಅಪ್ಪಿ ತಪ್ಪಿ 'ಪಿಕ್ಚರಿ' ಬರತಿದ್ದರ, ಹೆಗ್ಗಣ-ದಂಥಾ ಮುಖಾ ನೋಡಿ 'ಕ್ವಿಟ್' ಆಗಿಬಿಡ್ತಽದ

ಹೆಂಡತಿ:— ಇಲ್ಲದ್ದ ನೆನಪು ಮಾಡಿಕೊಂಡು ನಮ್ಮ ತಂಗಿಗೆ-ವಿಜಯಾಕುಮಾರಿಗೆ— ಏನಾದನೂ ಅನಬ್ಯಾಡ್ರಿ....

ಗಂಡ:— ಏನಾದ್ರೂ ಏನು ಅಂದೀನಿ, ಇದ್ದದ್ದು ಇದ್ಹಾಂಗ ಹೇಳ್ದೆ ಆಯ್ತು. ನಡಿ ಒಳಗ ಸಾಮಾನ ಕಟ್ಟಿ 'ಫೌಮ್ ಜಾವ್' ಅನ್ನೋಣ ಊರಕಡೆ.

ಹೆಂಡತಿ:— ಇನ್ನೂ ಇದೇ ಈಗ ಬಂದೀನಿ. ಮತ್ತ ಊರಿಗೆ ಹೋಗೋದಂತ! ನಾ ಅಂತೂ ಬರೂದಿಲ್ಲ. ಸುಗ್ಗಿಗೆ ನೀವೊಬ್ಬರಽ ಬೇಕಾದರ....

ಗಂಡ:— ಸುಗ್ಗಿ ಎಲ್ಲೀದು? ಬರಗಾಲ ಬಂದಽದ! ಸಾಮಾನು ಪ್ಯಾಕು ಮಾಡೋಣ ನಡಿ ಒಳಗ!

ಹೆಂಡತಿ:— ಆಗೇದಾದ್ರೂ ಏನು ಹೇಳ್ರಿಲ್ಲಾ.

ಗಂಡ:— ಹೇಳತೀನಿ ನಡಿ, ಊರಿಗೆ ಹೋದ ಮ್ಯಾಲ! ಮನಿ ಮಾಡಿದ್ಹಾಯಿತು....ನೋಡಿದ್ಹಾಯಿತು.

ಹೆಂಡತಿ:— ಈ ಮನಿ ಯಾಕ ಬಿಡತೀರಿ? ಎಲ್ಲಾದಕ್ಕೂ ಅನುಕೂಲ ಅದಽ ಅಂತ ಬಾಯಿತೆ ಅಂತೀರಿ! ಶುಭಮುಹೂರ್ತ ನೋಡಿ ನಾನೂ ಹೊಂಟುಬಂದೀನಿ....ಕಾಲಗುಣಾ....ಮನಿ ಬೆಳದ್ರೂ ಬೆಳದೀತು. ಹೆಚ್ಚಿನ ಬಡತೀ ಸಿಕ್ಕರೂ ಸಿಕ್ಕೀತು.

ಗಂಡ:— ಅದಽ ಕಾಲಗುಣಾನಽ....promotion ಇಲ್ಲಾ reveration ಇಲ್ಲಾ. ಬಿರುಗಾಳಿಗೆ ಸಿಕ್ಕು ಎಲ್ಲಾ ಆಶಾ ನಿರಾಶಾ ಆದ್ವು. ಎಷ್ಟಾದರೂ ನಮ್ಮೂರೇ ನಮಗ ಛೊಲೊ!

ಹೆಂಡತಿ:— ನಾ ಅಂತೂ ನಿಮ್ಮೂರಿಗೆ ಮರ್ರ್ಯೇ ಬರೂದಿಲ್ಲ. ಅಲ್ಲಿ ಮತ್ತ್ಯಾಕ ಬರಲಿ...ಅತ್ತೀ ಮಾವನ ಕಟಕಟಿಗೆ? ಅತ್ತೀ ಕೈಯಾಗ ಸಿಕ್ಕು ನಾ ಯಾಕ ಬಳಲಿ? ಸ್ವತಂತ್ರ ಮನೀ ಮಾಡೀರಿ; ಇದ್ದು ಬಿಡೋಣ!

ಗಂಡ:—ಸ್ವತಂತ್ರ! ಇನ್ನೆಲ್ಲೀ ಸ್ವತಂತ್ರ ಹುಚ್ಚಿ! ಹೋಯಿತು. ಎಲ್ಲಾ ನನ್ನ ಆಶಾ! ಮನಸ್ಸಿನಾಗಽ ಮಂಡಿಗಿ ಮಾಡಿದ್ಹಾಂಗ ಆಯ್ತು. ಭಾಂಡೀ ಚೀಲಾ ಹುಡುಕು. ಕಟ್ಟೋಣ ನಡಿ!

ಹೆಂಡತಿ:— ಭಾಂಡೀ ಚೀಲಾ ಹುಡುಕೂದಿಲ್ಲಾ....ನಾ ಊರ ಕಡೆ ಬರೊದಿಲ್ಲ! ರಜಾ ತಗೊಂಡಿದ್ದರ, ನಾಲ್ಕು ದಿನಾ ಹೋಗಿ ಬರ್ರಿ. ತಂಗಿನ್ನ ಜೋಡಿಗೆಂತ ಕರಕೊಂಡು ಬಂದೀನಿ; ನಾ ಒಬ್ಬಾಕೀ ಇರತೀನಿ! ಮ್ಯಾಲೀ ಮ್ಯಾಲೆ ಪತ್ರಾ ಬರೀತಿರ್ರಿ.......

ಗಂಡ— ಪತ್ರಾ ಬರಿಯೊದೂ ಇಲ್ಲಾ, ಉತ್ತರದ ಹಾದೀ ಕಾಯೊದೂ ಇಲ್ಲಾ! ನನಗ ಕಾಯಂ ರಜಾ ಸಿಕ್ಕಽದ. ನಿನ್ನ ಕಾಲ-ಗುಣದಿಂದನಽ 'ರಿಟ್ರೆಂಚ್‌ಮೆಂಟಿ'ನ ಪಿಡುಗು ಬಡಕೊಂಡಽದ. ಅಂದ ಮ್ಯಾಲೆ ಇಲ್ಲಿ ಕೂತು ಮಾಡೋದೇನು? ಮೂವರೂ ಕೂಡಿ ಊರಿಗೇ ಹೋಗೋಣ!

ಹೆಂಡತಿ:— ರಜಾ ಯಾಕ ತಗೊಂಡ್ರಿಽ ಈಗ? ಕಾಯಂ ರಜಾ ಯಾಕ ತಗೊಂಡ್ರಿ?

ಗಂಡ: ನಾ ಯಾಕ ತಗೊಳ್ಳೀ. ತಾವಾಗೇ ಕೊಟ್ಟಾರ. ಮನೀ ಹಾದೀ ತೋರಿಸ್ಯಾರ. 'ನೌಕರಿಯಿಂದಾ ಕಡ್ಮಿ ಮಾಡೀವಿ ... Due to inadequate Budget' ಅಂತ ತಿಳಿಸ್ಯಾರ. ನೌಕರಿನಽ ಹೋತು....ಅಂದಮ್ಯಾಲೆ, ಮನಿ ತೊಗೊಂಡು ಮಾಡೊದೇನು? ಮನಿ ಮಾಡಿ ನೋಡಿದ್ಹಾಯಿತು. ಕಿತ್ತುಗೊಂಡು ಹೋಗೂದು ಒಂದು ಅದಽ ಅಲ್ಲ. ನಡಿ ನಾಡಿ, ಸಾಮಾನು ಪ್ಯಾಕು ಮಾಡು. ಎಕ್ಕಾಗಾಡಿ ಹೇಳಿ ಬರತೀನಿ. (ಗಂಡ ಹೊರಡುವನು)

(ತೆರೆಬೀಳುವುದು)

ಸಾಹಿತ್ಯದಲ್ಲಿ ಔಚಿತ್ಯ

(ವಿವೇಚನಾತ್ಮಕ ಲೇಖನ)

ಶ್ರೀ. ಎನ್. ಭೀಮಭಟ್ಟ ಸಾಹಿತ್ಯ ಶಿರೋಮಣಿ,
ಕಾನ್ಯಾನ (ದ. ಕ.)

●

ಔಚಿತ್ಯವೆಂಬುದು ಸಾಹಿತ್ಯದ ಜೀವಾಳವಾಗಿದೆ. ವಸ್ತು, ಹಿನ್ನೆಲೆ, ಪಾತ್ರಸೃಷ್ಟಿ, ಪಾತ್ರಪರಿಪುಷ್ಟಿ, ಭಾಷೆ, ಬಂಧ, ಅಲಂಕಾರ ಎಲ್ಲವುಗಳಲ್ಲಿಯೂ ಔಚಿತ್ಯ ಬೇಕು. ಔಚಿತ್ಯದ ಕಡೆಗೆ ಉಪೇಕ್ಷೆ ಮಾಡಿದವನ ಸಾಹಿತ್ಯ-ನಿರ್ಮಿತಿಯು ಸಹೃದಯರಿಂದ ಉಪೇಕ್ಷಿತವಾಗುವುದು ಖಂಡಿತ !

●

ಸಾಹಿತ್ಯದಲ್ಲಿ ಔಚಿತ್ಯದ ಮಾತು ಇಂದು-ನಿನ್ನೆಯದಲ್ಲ. ಔಚಿತ್ಯ-ಯೋಗ್ಯತೆಗಳೆರಡೂ ಸಮಾನಾರ್ಥಕಗಳಾದರೂ ಔಚಿತ್ಯವೆಂಬ ಶಬ್ದಕ್ಕೆ ಹೆಚ್ಚಿನ ಮಹತ್ತ್ವವಿದೆ. ಉಚಿತವಾಗಿರುವಿಕೆ ಎಲ್ಲೆಲ್ಲೂ ಶ್ರೇಯಸ್ಕರ. ಸಾಹಿತ್ಯವೇಕೆ? ನಮ್ಮ ದೈನಂದಿನ ವ್ಯವಹಾರಗಳಲ್ಲಿ, ಪ್ರತಿ ನಡೆವಳಿಕೆ, ಮಾತು-ಕತೆಗಳಲ್ಲಿಯೂ ಔಚಿತ್ಯವೆಂಬುದು ಬೇಕೇಬೇಕು. ಎಲ್ಲಿ ಹೇಗೆ ಮಾತನಾಡಬೇಕು ? ಯಾರಲ್ಲಿ ಹೇಗೆ ವರ್ತಿಸಬೇಕು ? ಮಗನನ್ನು ಹೇಗೆ ನಡೆಸಬೇಕು ? ಹೆಂಡತಿಯೊಂದಿಗೆ ಹೇಗಿರಬೇಕು ? ತಾಯಿ-ತಂದೆಯರನ್ನು ಹೇಗೆ ಗೌರವಿಸಬೇಕು ? ಮಿತ್ರನನ್ನು ಹೇಗೆ ಕಾಣಬೇಕು ? ಮನೆಯಲ್ಲಿ ಹೇಗಿರಬೇಕು ? ಸಭೆಯಲ್ಲಿ ಹೇಗೆ ಸಭ್ಯನಾಗಿರಬೇಕು ? ಎಂಬೆಲ್ಲಾ ಪ್ರಶ್ನಜಾಲಗಳಿಗೆ ಸಮುಚಿತರೀತಿಯಲ್ಲಿ ಉತ್ತರಿಸಿ ವ್ಯವಹರಿಸುವವನೇ ಔಚಿತ್ಯವಿವೇಕವುಳ್ಳವನು ಎನ್ನಬಹುದು. ನಾವು ನಮ್ಮ ಮಾತುಕತೆ-ನಡೆವಳಿಕೆಗಳಂತೆ ವೇಷ-ಭೂಷಣದಲ್ಲಿಯೂ ಔಚಿತ್ಯವನ್ನು ಕಾಣಲು ಯತ್ನಿಸುತ್ತೇವಲ್ಲವೆ? ನಮ್ಮ ಶರೀರಕ್ಕೆ ಬೇಕಾಗುವ ವಸ್ತ್ರ-ಭೂಷಣಾದಿಗಳನ್ನು ಆಯಾಯ ಸ್ಥಾನಕ್ಕನುಕೂಲವಾಗಿ ಧರಿಸಿದರೇನೇ ಔಚಿತ್ಯ ತಪ್ಪಿದರೆ, ಅಸ್ಥಾನದಲ್ಲಿ ಧರಿಸಿಕೊಂಡರೆ, 'ಹುಚ್ಚಪ್ಪ'ನೆಂದು ಜನ ಬೊಟ್ಟು ಮಾಡಲಾರರೆ ? ಹೀಗೆಯೇ ಸಾಹಿತ್ಯದಲ್ಲಿಯೂ ಔಚಿತ್ಯದ ದೃಷ್ಟಿ ಅತ್ಯವಶ್ಯವಾಗಿರುತ್ತದೆ.

ಔಚಿತ್ಯವೆಂದರೆ ಸಾಹಿತ್ಯದಲ್ಲಿ ಯಾವ ರೂಪದಲ್ಲಿರುತ್ತದೆ? ಅದಕ್ಕೇನಷ್ಟು ಮಹತ್ತ್ವ ?—ಎಂಬ ಪ್ರಶ್ನೆ ಬರಬಹುದು. ಔಚಿತ್ಯವು ಕಾವ್ಯದಲ್ಲಿ ರಸಪರಿಪೋಷಕವಾಗಿರುತ್ತದೆ ಎಂಬುದರಿಂದಲೇ ಅದಕ್ಕೆ ಮಹತ್ತ್ವವಿದೆ. ಪ್ರಾಚೀನಕಾವ್ಯಗಳಿಂದ ತೊಡಗಿ ಇಂದಿನ ಕಥೆ-ಕಾದಂಬರಿಗಳ ತನಕವೂ ಔಚಿತ್ಯವು ತನ್ನ ಮಹತ್ತ್ವವನ್ನು ಕಳೆದುಕೊಂಡಿಲ್ಲ. ಕಾವ್ಯದ ಜೀವಾತುವಾದ ರಸವು ಪರಿಪೋಷಹೊಂದಬೇಕಾದರೆ, ರಸಭಂಗವಾಗದಿರಬೇಕಿದ್ದರೆ ಔಚಿತ್ಯ ಬೇಕೇಬೇಕು. ' ಅನೌಚಿತ್ಯಾದೃತೇ ನಾನ್ಯದ್ರಸಭಂಗಸ್ಯಕಾರಣಂ ' ಎಂದು ಧ್ವನ್ಯಾಚಾರ್ಯರು ಹೇಳಿದ್ದಾರೆ. ಅನೌಚಿತ್ಯದ ಹೊರತು ರಸಭಂಗಕ್ಕೆ ಬೇರೆ ಕಾರಣವಿಲ್ಲವಂತೆ. ಅನೌಚಿತ್ಯವೆಂದರೇನು ? ಔಚಿತ್ಯವಿಪರೀತವೇ ಅನೌಚಿತ್ಯ ! ಯಾವುದು ಬೇಕೋ ಅದಿಲ್ಲ. ಯಾವುದು ಬೇಡವಾಗಿದೆಯೊ ಅದನ್ನೇ ಪುರಸ್ಕರಿಸಿದರೆ—ಅನೌಚಿತ್ಯವಲ್ಲದೆ ಮತ್ತೇನು ?

ಕವಿಯು ರಾಮಾಯಣಕಾವ್ಯವನ್ನು ಬರೆಯುತ್ತಾನೆನ್ನಿ. ರಾಮಾಯಣದ ಕಥೆಯಲ್ಲಿ ಆತ ಬದಲಾವಣೆಯನ್ನು ತರುವಂತಿಲ್ಲ. ಬದಲಾಗಿ ತನ್ನ ತಂತ್ರನೈಪುಣ್ಯವನ್ನು ಯಥಾಶಕ್ತಿ ತೋರಿಸಬಹುದು. ಪಾತ್ರಚಿತ್ರಣದಲ್ಲಿ ಪ್ರಾವೀಣ್ಯ, ಕಥಾಘಟನೆಗಳ ವರ್ಣನೆಯಲ್ಲಿ ನಾವಿನ್ಯ ತೋರಿಸಿ, ತನ್ನ ಸಾಮರ್ಥ್ಯ-ಅನುಭವಗಳನ್ನೆಲ್ಲಾ ತೋರಿಸಬಹುದು. ಇದನ್ನೆಲ್ಲ ಬಿಟ್ಟು ರಾಮನನ್ನು 'ಲಫಂಗ'ನಂತೆಯೂ, ರಾವಣನನ್ನು ಧೀರೋದಾತ್ತನಂತೆಯೂ ಚಿತ್ರಿಸಿದರೆ, ಅದು ವಿಸಂಗತವಲ್ಲವೆ ? ಅಥವಾ ರಾಮಾಯಣವನ್ನು ಬರೆಯತೊಡಗಿ ರಸಪರಿಪೋಷದ ಕಡೆಗೆ ಗಮನಕೊಡದೆ, ನದಿಗಳನ್ನು—ಬಂಡೆಗಳನ್ನೆಲ್ಲಾ ಉದ್ದುದ್ದ ಬಣ್ಣಿಸುವುದೂ, ಚಿತ್ರಕೂಟ-ದಂಡಕಾರಣ್ಯಗಳ ಬಣ್ಣನೆಗೇ ಗ್ರಂಥವನ್ನಿಡೀ ಮೀಸಲಾಗಿರಿಸಿ ಬಾಕಿ ಕಥೆಗಳನ್ನೇ ಮರೆಸುವುದೂ ಅನೌಚಿತ್ಯವೇ ಅಹುದು. ಕಾವ್ಯದಲ್ಲಿ ಅಷ್ಟಾದಶ ಮಹಾವರ್ಣನೆಗಳಿರಬೇಕೆಂದು, ಅಸ್ಥಾನದಲ್ಲಿ ಬೇಡವಾದುದನ್ನು ಪುಟಕಟ್ಟಲೆಯಾಗಿ ವರ್ಣಿಸುವುದು ಅನುಚಿತ. ಲಕ್ಷಣಗ್ರಂಥಗಳನ್ನು ಅಕ್ಷರಶಃ ಪಾಲಿಸುತ್ತೇನೆಂದು, ಲಕ್ಷ್ಯವಾದ ರಸವನ್ನು ಮರೆಯುವುದು ತಪ್ಪು. ಭರತಮುನಿಯು ಹೃದಯವನ್ನರಿಯದೆ ಮೆಚ್ಚಿಸಹೊರಟು ವೇಣೀಸಂಹಾರದಲ್ಲಿ ಕವಿಯು ವೀರರಸದ ಮಧ್ಯದಲ್ಲಿ ದುರ್ಯೋಧನ-ಭಾನುಮತಿಯರ ಸರಸವನ್ನು ತಂದುಹಾಕಿ ವಿರಸಗೊಳಿಸಿದ ಪ್ರಕರಣ ಸಹೃದಯರ ನಿಂದೆಗೆ ಗುರಿಯಾಗಿದೆ. ಗ್ರಂಥಗೌರವ, ವಸ್ತುಮಹತ್ತ್ವ, ರಸಾದಿಗಳನ್ನು ಮರೆತು ಶಬ್ದರಾಶಿಯನ್ನೊಟ್ಟೈಸುವುದು ಉತ್ತಮಕವಿತ್ವದ ಕ್ರಮವಲ್ಲ. ಅಲಂಕಾರಗಳು ಸಮರ್ಥನಾದ ಕವಿಯ ಪ್ರತಿಮಾತಿನಲ್ಲಿಯೂ ಬರಬಹುದು; ಆದರೆ ಅಪ್ರಕೃತದ ಜೋಡಣೆಗಾಗಿ ಪ್ರಕೃತವನ್ನು ಮರೆಯುವುದು ತಪ್ಪು. ಪಾಕನಿರ್ಮಾಪಕನು ಸಾಮಾನುಗಳನ್ನು ತೂಕವಿಕ್ಕಿ ಹಾಕಿದರೆ, ಪಾಕದ ರುಚಿಕೆಡುವಂತೆ, ಕಾವ್ಯರಸವು ಹಾಳಾಗುತ್ತದೆ. ನುರಿತ ಕೈಯಿಂದ ಸಿದ್ಧವಾದ ಪಾಕದಲ್ಲಿ ಸಾಮರಸ್ಯ ಬರುತ್ತದೆ. ಅನವಧಾನದಿಂದ ಅಲ್ಪಸ್ವಲ್ಪ ವ್ಯತಿಕ್ರಮವಾದಲ್ಲಿ—ಉಪ್ಪು-ಹುಳಿ ಹೆಚ್ಚು ಕಡಿಮೆಯಾದಲ್ಲಿ—ಪಾಕ ಹಾಳಾಗುತ್ತದೆ.

ಹೀಗೆಯೇ ದೇಶ-ಕಾಲಗಳನ್ನರಿತು ವ್ಯವಹರಿಸುವ ಚಾಕಚಕ್ಯವೂ ಕವಿಗೆ ಅವಶ್ಯ ಬೇಕು. ಶ್ರೀರಾಮನು ಕಾಡಿಗೆ ಹೊರಡುವಾಗ, ಕಾಫಿ ಕುಡಿದು ಸಿಗರೇಟನ್ನು ತರಿಸಿ ಸೇದುತ್ತಾ ಹೊರಟನೆಂದು ಬರೆಯುವಂತೆ, ಯಕ್ಷಗಾನದಲ್ಲಿ ಅರ್ಥವಿವರಿಸುವವರು, ಶ್ರೀರಾಮನ ಪಾತ್ರವಹಿಸಿ ಗೀತೆಯ ಶ್ಲೋಕ, ಗಾಂಧಿಯವರ ಅಹಿಂಸೆಯ ಪ್ರಭಾವವನ್ನೆಲ್ಲಾ ಉದಾಹರಿಸುವುದು ಉಚಿತವಾಗಲಾರದು. ಶ್ರೀರಾಮನು ಭವಿಷ್ಯಜ್ಞನಿರಬಹುದು. ಹೀಗಾಗಿ ಗೀತೆಯಲ್ಲಿ ಹೇಳಿದುದನ್ನು ದಾಹರಿಸಬಹುದೆಂದೂ, ಗಾಂಧೀಯವರ ವಿಚಾರ ಹೇಳಬಹುದೆಂದೂ ಕೆಲವರು ' ಚಂಡಿ ' ಹಿಡಿಯಬಹುದು. ಆದರೆ ಇದೆಲ್ಲಾ ಕುತರ್ಕವಷ್ಟೆ! ಇದಕ್ಕೆ

ಔಚಿತ್ಯವೆಳ್ಳಷ್ಟೂ ಇಲ್ಲ. ದೇಶ-ಕಾಲಗಳಿಗನುಕೂಲವಾದ ವಿಷಯಗಳನ್ನು ಆದಷ್ಟು ಚಮತ್ಕಾರವಾಗಿ ಹೇಳುವುದನ್ನು ಬಿಟ್ಟು, ಹೀಗೆಲ್ಲಾ ಕುತರ್ಕಕ್ಕೆ ನಿಂತರೆ, ಶ್ರೀಶಂಕರಾಚಾರ್ಯರು ಹೇಳಿದಂತೆ 'ನಹಿ ಕುತರ್ಕಸ್ಯ ಕ್ವಚಿತ್ಪರಾಕಾಷ್ಠಾ ವಿದ್ಯತೇ (ಕುತರ್ಕಕ್ಕೆ ನೆಲೆಯಿಲ್ಲ)' ಎನ್ನಬೇಕಷ್ಟೆ. ಕವಿಯು ತಾನು ಹೇಳಬೇಕಾದ ವಿಷಯವನ್ನು ಹೇಳುವುದಕ್ಕೆ ಯಾರ ಹಂಗು-ದಾಕ್ಷಿಣ್ಯಗಳನ್ನೂ ಅಪ್ಪಣೆಯನ್ನೂ ಗಮನಿಸಬೇಕಾಗಿಲ್ಲ. ಸ್ವಹೃದಯಪ್ರಮಾಣಸಿದ್ಧ ವಿಚಾರಗಳನ್ನು ಯಾವದರ್ಘ ಪರಿಮಿತಶಬ್ದಗಳಿಂದಲೇ ಹೇಳಿ ಮುಗಿಸಬೇಕು. ಬೇಡದ ಶಬ್ದಾಡಂಬರ, ಅನುಚಿತ ಕಥನಗಳನ್ನೆಲ್ಲಾ ದೂರೀಕರಿಸಬೇಕು. ತಾನು ಹೇಳುವ ಮಾತು ಸತ್ಯವೂ ಸ್ವಾನುಭವಪೂರ್ಣವೂ ಸುಂದರವೂ ನವೀನವೂ ಆಗಿರಬೇಕೆಂಬುದೇ ಕವಿಯ ಹೃದ್ಗತವಾಗಿಬಿಟ್ಟರೆ ಸರಿ; ಆತನು ಯಾವ ಅಧಿಕಪ್ರಸಂಗಕ್ಕೂ ಕೈಹಾಕದೆ, ತನ್ನಿಂದ ಸಾಧ್ಯವಾದ ಚಮತ್ಕಾರಗಳನ್ನೆಲ್ಲಾ ಉಚಿತರೀತಿಯಲ್ಲಿ ಪ್ರಯೋಗಿಸಿ ಯಶಸ್ವಿಯಾಗುತ್ತಾನೆ.

'ಪ್ರಸಿದ್ಧೌಚಿತ್ಯ ಬಂಧಸ್ತು ರಸಸ್ಯೋಪನಿಷತ್ಪರಾ' ಎಂದಿದ್ದಾರೆ. ಉಚಿತವಾದ ವಿಚಾರಗಳನ್ನು ಸಾಕಷ್ಟು ತುಂಬಿಸುವುದು ಬಹು ಚೆನ್ನಾಗುತ್ತದೆ. ಅದು ರಸಪರಿಪುಷ್ಟಿಗೆ ಕಾರಣವಾಗುತ್ತದೆ. ಕೆಲವೆಡೆಗಳಲ್ಲಿ ಪ್ರಧಾನರಸವನ್ನು ಪರಿಪೋಷಿಸಲು ಇತರ ರಸಗಳು ಬೇಕಾಗುತ್ತವೆ. ಅವುಗಳು ಅಂಗಭಾವದಿಂದ ಬರುತ್ತವೆ. ಆಗ ಪ್ರಕೃತರಸದ ಪೋಷಣೆ ನಡೆಯುತ್ತದೆ. ಪ್ರಧಾನರಸವನ್ನು ಮರೆತು ಅಂಗರಸವನ್ನೇ ಕವಿ ಪೋಷಿಸುತ್ತಾ ನಡೆದರೆ, ರಾಜನನ್ನು ಕಡೆಗಣಿಸಿ ಸೇವಕನನ್ನು ಗೌರವಿಸಿದಂತೆ—ಅದು 'ಅನೌಚಿತ್ಯ'ವಾಗಿ ಸಹೃದಯರಿಗೆ ಬೇಸರವನ್ನು ಉಂಟುಮಾಡುತ್ತದೆ. ವಿರುದ್ಧರಸಗಳನ್ನು ಸಮುಚಿತವಾಗಿ ವರ್ಣಿಸುವುದು ಕಠಿನ. ಶೃಂಗಾರರಸಸಾಗರದಲ್ಲಿ ನಾಯಿಕೆಯೊಂದಿಗೆ ಓಲಾಡುತ್ತಿದ್ದ ನಾಯಕ, ಏಕಾಏಕಿಯಾಗಿ ವೇದಾಂತಕ್ಕೆ ಹಾರಿ ಹೋಗಿ 'ಸಂಸಾರ ನಿಸ್ಸಾರ'ವೆಂದು ಮುಂತಾಗಿ ಹೇಳಹೊರಡುವುದು ಅನೌಚಿತ್ಯ ಮಾತ್ರವಲ್ಲ; ಕಾವ್ಯದ 'ಖೂನಿ ಮೊಕದ್ದಮೆ'ಯಲ್ಲಿ ಕವಿಯನ್ನು ಪ್ರಥಮ ಆಪಾದಿತನನ್ನಾಗಿ ಮಾಡುತ್ತದೆ. ಶೃಂಗಾರಕ್ಕನುಗುಣವಾಗಿ ವಿಪ್ರಲಂಭಗಳೆಲ್ಲಾ ಬರುವುದು ಸೊಗಸಾಗುತ್ತದೆ. ಹೀಗೆ ಔಚಿತ್ಯವನ್ನು ತುಂಬಿಸಲು ಯತ್ನಿಸುವಷ್ಟೇ ಕವಿಯು, ಅನೌಚಿತ್ಯ-ನಿವಾರಣೆಗೆ ಅರ್ಥಾತ್ ಅನೌಚಿತ್ಯ ಬಾರದಂತೆ ಯತ್ನಿಸಬೇಕು.

ಕಾವ್ಯಾನಂದದಲ್ಲಿ ಮಗ್ನರಾದ ಸಹೃದಯರಿಗೆ ಒಂದಿಷ್ಟು ಅನೌಚಿತ್ಯದೊರೆತರೆ ಸಾಕು; ಅದು ಸಂಪೂರ್ಣ ರಸಭಂಗಕ್ಕೆ ಕಾರಣವಾಗುತ್ತದೆ. ರುಚಿರವಾದ ಶರಬತ್ತನ್ನು ಕುಡಿಯುವಾಗ, ಮರಳು ದೊರೆತಂತೆ, ಬೆಣ್ಣೆಯಲ್ಲಿ ಬೆಳ್ಗಲ್ಲು ಸಿಕ್ಕಿದಂತೆ, ಪರಮಾನ್ನಕ್ಕೆ ಹುಳಿ ಮಿಶ್ರವಾದಂತೆ, ತಂಗಾಳಿಯಲ್ಲಿ ವಿಷಾಣು ಬೆರೆತಂತೆ, ಸಂಭೋಗಕಾಲದಲ್ಲಿ 'ಹಾರ್ಟ್‌ಫೈಲ್' ಆಗಿಬಿಟ್ಟಂತೆ, ಸಂಗೀತಕಾಲದಲ್ಲಿ ವೀಣೆಯ ತಂತಿ ಕಡಿದಂತೆ, ರಸಾಸ್ವಾದನಾವಸರದಲ್ಲಿ 'ಅನೌಚಿತ್ಯ'ದಿಂದ ರಸಭಂಗವಾಗಿ ಸಂಪೂರ್ಣ ಕೆಟ್ಟುಹೋಗುತ್ತದೆ. ಆಗ ನಮಗೆ ಅದಕ್ಕೆ ಕಾರಣವಾದ ಕವಿಯ ಮೇಲೆ ಸಿಟ್ಟು ಬರುತ್ತದೆ. ಅನೌಚಿತ್ಯದಿಂದಾಗುವ ಕೆಟ್ಟ ಪರಿಣಾಮವಿದು.

ಮಕ್ಕಳ ಸದ್ವೃದ್ಧಿಗಾಗಿ
“ಬಗನ ಬಾಲಾಮೃತ”

ಹಲ್ಲು ಬರುವಾಗ
ಅಸ್ಟೋನ್ಸ್ ಗ್ರಾಯಿಪ್ ಹೀಲರ
ಮಕ್ಕಳಿಗಾಗಿ
“ಎಸ್ಟನ್ ಗ್ರಾಇಪ್” ಹೀಲರ್

ಜಂತು ಅನರೆ
TRADE MARK
ವರ್ಮ್ ಆಯಿಲ
“ವರ್ಮ್ ಆಯಿಲ್”

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿ
ಉಪಯೋಗಬೇಕುವ ಔಷಧಗಳು

The National Pharmacies &
Pharmaceuticals Ltd., Dharwar

ಹೀಗಿರುವುದರಿಂದ ಔಚಿತ್ಯವನ್ನು ಕಾಪಾಡುವುದೆಂದರೆ ಕವಿಯ ನೈಪುಣ್ಯದ ಪರಮಾವಧಿಯಾಗಿರುತ್ತದೆ. ಯಾರಿಂದ ಯಾವ ಕಾಲದಲ್ಲಿ ಏನು ಹೇಳಿಸಬೇಕು? ಹೇಗೆ ನಡೆಸಬೇಕು?—ಎಂಬ ಪರಿಜ್ಞಾನ ಚೆನ್ನಾಗಿದ್ದು, ವ್ಯವಹಾರಕುಶಲನಾದ ಕವಿಯು ಉಚಿತರೀತಿಯಿಂದ ಅವರನ್ನೆಲ್ಲಾ ನಡೆಸಿದರೇನೇ ಕಾವ್ಯಕ್ಕೆ ಅಂದಬರುತ್ತದೆ. ರಸವು ಪರಿಪುಷ್ಟವಾಗುತ್ತದೆ. ಕಾವ್ಯಾನಂದವು ಸುಂದರವಾಗಿ ಸಿಗುತ್ತದೆ.

ಇಂದಿನ ಕಥೆ-ಕಾದಂಬರಿಗಳ ಮಟ್ಟಿಗಂತೂ ಔಚಿತ್ಯದ ವಿಚಾರ ಅತ್ಯವಶ್ಯ. 'ನಿರಂಕುಶಾಃ ಕವಯಃ' ಎಂಬ ಮಾತನ್ನು ಪ್ರಾಚೀನರಿಗಿಂತ ಹೆಚ್ಚು ಅನ್ವಯಿಸಿಕೊಳ್ಳುವವರು ಆಧುನಿಕರು. ಅವರಿಗೆ ಲಂಗುಲಗಾಮು ಯಾವುದೂ ಬೇಡ. ಉತ್ತಮ ಕವಿಗಳಿಗೆ ಯಾರೂ ಹಾಕುವುದಿಲ್ಲವೆನ್ನಿ. ಆದರೆ ತಾವೇ ಸರ್ವೋತ್ತಮರೆಂದು ಭಾವಿಸುವವರಿಗೆ ನಿರಂಕುಶತ್ವ ಬೇಕಾಗಿದೆ. ಹೀಗಾಗಿ ಔಚಿತ್ಯಾನೌಚಿತ್ಯಗಳ ಪ್ರಶ್ನೆಯನ್ನು ಅವರು ಲೆಕ್ಕಿಸದೆ ಹೋಗುವುದಿದೆ.

(೪೧ನೆಯ ಪುಟ ನೋಡಿರಿ)

ಋತುಗಾನ

(ಹರಟೆ)

ಶ್ರೀ. ಅನಂತರಾವ ಕೆ. ಭೋಸಗೆ, ಸೇಡಬಾಳ

卐

ವಸಂತಮಾಸದ ಸೊಬಗನ್ನು ನಮ್ಮ ಪ್ರಾಚೀನ ಕವಿಗಳು ಎಷ್ಟೆಷ್ಟೋ ವಿಧದಿಂದ ಹಾಡಿದ್ದಾರೆ. ಅದೊಂದು ಕವಿ-ಸಮಯವೇ ಇರಬಹುದೋ, ಅಥವಾ ಹಿಂದಿನಕಾಲದ ವಸಂತಋತುವೇ ಹಾಗಿದ್ದಿತೊ? ಇಂದಿನ ವಸಂತಕಾಲ ಬಿರುಬಿಸಿಲಿನ ಬೀಡಾರ; ಸೆಕೆ-ಗಮ್ಮಗಳ ಸದನ! ಅಯ್ಯೊ ಋತುರಾಜಾ!

卐

ಬಂತು ಫಾಲ್ಗುಣ ಮಾಸ. ಚಳಿಯ ಚಂಡಿತನವನ್ನು ತಡೆಯಲಾರದೆ ಸಾಕಷ್ಟು ಬೊಬ್ಬೆಹಾಕಿ, ಬೆಂಕಿ ಒಟ್ಟಿ, ಅದರ ಬೀಳ್ಕೊಡುವ ಸಮಾರಂಭವನ್ನು ಕೂಡ ಜರುಗಿಸಿ ಆಯಿತು. ಅನಂತರ ಕಾಲಿಟ್ಟಿತು ಯುಗಾದಿ. ಹೊಸ ಸಂವತ್ಸರದ ಹೊಸ ದಿನ. ಮಾನವನ—ಅಷ್ಟೇ ಏಕೆ!—ಸಕಲ ಪಶು-ಪಕ್ಷಿಗಳ ಬಾಳುವೆಗೇ ಕಳೆ ತರುವ ಕಾಲ ಆಗ ಆರಂಭ! ಇರಲಿ ಪಶು-ಪಕ್ಷಿಗಳ ವಿಚಾರ ನಮಗೇತಕ್ಕೆ? ನಮ್ಮ ಜೀವನವನ್ನು ಕುರಿತು ನಾವು ವಿಚಾರಿಸೋಣ.

ಹಾಗೂ-ಹೀಗೂ ಆ ಚಳಿಯ ಕಾಟವನ್ನು ಕಡಿಮೆಮಾಡಿಕೊಳ್ಳುವಷ್ಟರಲ್ಲಿ, ಬೇಸಗೆಯ ಬೇಗೆಗೆ ಆರಂಭ. ಅದರಲ್ಲಿಯೂ ವೈಶಾಖಮಾಸದ ದಿವಸಗಳೆಂದರೆ ಸೂರ್ಯನು ಅಗ್ನ್ಯಸ್ತ್ರಗಳನ್ನು ಭೂಮಿಯ ಮೇಲೆ ಸುರಿಯುವ ದಿವಸಗಳವು. ಜನ ಹಗಲು ಹನ್ನೆರಡು ತಾಸೂ ಉರಿಬಿಸಿಲಿಗೆ ಬೆಂದು, ನೆರಳನ್ನು ಎಂದರೆ ತಮ್ಮ ಗವಿಗಳನ್ನು ಸೇರುವುದೊಂದೇ ತಡ; ಇರುಳಾಗುತ್ತಲೇ. ಗಾಳಿಗಾಗಿ ಮೈಯೊಡ್ಡಿ, ಮಕ-ಮಕ ಮುಗಿಲನ್ನು ನೋಡುತ್ತ ಹೊರಗೆ ಬರುವರು. ಅಂತೂ ಹಗಲೊಂದು ವಿಧವೆಂದರೆ, ರಾತ್ರಿಯೊಂದು ವಿಧ! ಹೀಗಿದ್ದರೂ ವಸಂತಾಗಮನದ ವರ್ಣನೆಯನ್ನು ಕೇಳಬೇಕು ಕಾವ್ಯಗಳಲ್ಲಿ! ವಸಂತ ಋತುರಾಜನಂತೆ ಎಲ್ಲ ಋತುಗಳಲ್ಲಿ! ಹೀಗೆ ಕವಿಗಳೇನೋ ಹಾಡಿದರು. ಏನು! ಮೆಚ್ಚಿ ಹಾಡಿದರೋ! ಹುಚ್ಚಿದ್ದು ಹಾಡಿದರೋ ತಿಳಿಯುವಂತಿಲ್ಲ.

ವಸಂತಋತು, ಭವಿತವ್ಯವನ್ನು ರೂಪಿಸಿ–ನಿರೂಪಿಸುವ ಕಾಲ. ಮಾನವಪ್ರಾಣಿ (ಯಾವ ವರ್ಗದ್ದೇ ಇರಲಿ) ತನ್ನ ಜೀವನವನ್ನು ಬುದ್ಧಿಯಿಂದ ತಿದ್ದಿಕೊಳ್ಳುವ ದಿವಸಗಳವು. ಎಂತಲೇ ಯಾವ ಕಾರ್ಯಕ್ಕೂ 'ಬರುವ ಬೇಸಗೆಯಲ್ಲಿ ನೋಡೋಣವಲ್ಲ! ಮಾಡೋಣಲ್ಲ!' ಎಂದು ಭವಿಷ್ಯವನ್ನು ಕುರಿತು ಮಾತನಾಡದ ಮಾನವರಾರು?

ಈಗ ಬೇಸಗೆಯಲ್ಲಿ ಬೀಡುಬಿಡಲು ಹಳ್ಳಿಗೆ ಹಿಂದಿರುಗಿದ ವಿದ್ಯಾರ್ಥಿಗಳನ್ನೇ ತೆಗೆದುಕೊಳ್ಳೋಣ!—ಅವರು ವಾಯುಸೇವನೆಗಾಗಿ ವಿಹರಿಸುವಾಗ, ತಂಡಕಟ್ಟಿ ತಿರುಗಾಡುವಾಗ, ಅವರಾಡುವ ಮಾತುಗಳನ್ನು ಕೇಳಬೇಕು: 'ನಮ್ಮೂರಲ್ಲೊಂದು ಕಲಾಕೂಟವನ್ನು ರಚಿಸಿಯೇ ಬಿಡೋಣ! ವಾಚನಾಲಯದ ಜೀರ್ಣೋದ್ಧಾರವಾಗದಿದ್ದರೆ ಹೇಗೆ?' ಎಂದು ಗಾಳಿಯಲ್ಲಿ ತೂರಿಬಿಡುವ ಅವರ ರಭಸದ ಮಾತುಗಳಿಗೆ ತುದಿ–ಮೊದಲೇ ಇರುವುದಿಲ್ಲ. ಅದರಂತೆ ನಮ್ಮ ರೈತರಾಜರ ಉತ್ಸಾಹವಂತೂ ಮೇರೆಮೀರಿದ್ದು. 'ಹಳ್ಳದ ಹೊಲದಲ್ಲಿ ಹೊಸ ಬಾವಿ; ನಡುವಿನ ಪಟ್ಟಿಯಲ್ಲಿ ಎಂಟೆತ್ತಿನ ಗಳೆ, ಹತ್ತು ದಿನ ಕುರಿ, ಇಪ್ಪತ್ತು ಗಾಡಿ ಗೊಬ್ಬರ!' ಹೀಗೆ ಬೇಸಗೆಯ ಯೋಜನೆಗಳನ್ನು ಮಂಡಿಸುತ್ತ, ಬಿಸಿಯಾದ ತಂಬಾಕಿನ ಹೊಗೆಯೊಡನೆ ತೇಲುಬಿಟ್ಟು ಮನೆಗೆ ಮರಳುವರು. ಇನ್ನೇನು, ವ್ಯಾಪಾರಿ ಮಹಾಶಯರನ್ನು ಕೇಳುವಿರಾ? ಅವರದು ಮಹಾಯೋಜನೆ:—

ಮರಿವ್ಯಾಪಾರಿಗಳು ಹಿರಿಯ ವ್ಯಾಪಾರಿಗಳಾಗಲಿಕ್ಕೆ ಹೋಗಿ, ಬೆಲ್ಲದ ಪೆಂಟಿಗಳನ್ನೋ ಹತ್ತಿಯ ಗಂಟುಗಳನ್ನೋ ಮೈಮೇಲೆ ಹಾಕಿಕೊಂಡು, ಪಕಪಕ ಬಾಯಿ ಬಿಟ್ಟರೂ, 'ಈ ವ್ಯಾಪಾರ ಲಾಭದ್ದಲ್ಲ! ಅದನ್ನೇಕೆ ಮಾಡಬಾರದು?' ಎಂದು ಧೈರ್ಯತಂದುಕೊಂಡು ತಿರುಗುವ ಅವರ ಕೋಟಿನ ಜೇಬನ್ನು ಆಗ ನೋಡಬೇಕು ನಾವು.

ಇನ್ನುಳಿದುದು ನೌಕರವರ್ಗವಲ್ಲವೇ? ದಿಗ್ವಿಜಯ ಸಂಪಾದಿಸಿಕೊಂಡು ಬಂದಂತೆ, ಮೇ ತಿಂಗಳ ಬಿಡುವಿಗಾಗಿ ಬಂದು ಬೀಡುಬಿಟ್ಟ ನೌಕರವೀರರ ಮಾತು-ಕತೆಗಳಲ್ಲಿ ಧರ್ಮ, ರಾಜಕಾರಣ,

ಕರ್ನಾಟಕ ಟೇಲರಿಂಗ್ ಕಾಲೇಜು
ಧಾರವಾಡ

(ಮುಂಬೈ ಸರಕಾರದಿಂದ ಮನ್ನಣೆ ಪಡೆದಿದೆ)

ಹೊಸ ವರ್ಗಗಳು ಜೂನ್ ೬ರಿಂದ ಪ್ರಾರಂಭವಾಗುತ್ತವೆ. ಹೊಸ ಅಭ್ಯಾಸಪತ್ರಿಕೆಯಂತೆ ಒಂದೇ ವರುಷದಲ್ಲಿ ಸರಕಾರೀ ಸರ್ಟಿಫಿಕಿಟ್ ಪರೀಕ್ಷೆಗೆ ಕೂಡಲುಬರುತ್ತವೆ. ಹೊಲಿಗೆಯ ಮೂರು ಬಗೆಯ ಕೋರ್ಸುಗಳಲ್ಲದೆ ಕಸೂತಿ (ಎಂಬ್ರಾಯಡರಿ)ಯ ಕೋರ್ಸನ್ನೂ ಕಲಿಸಲು ನುರಿತ ಶಿಕ್ಷಕ–ಶಿಕ್ಷಕಿಯರಿದ್ದಾರೆ. ಅತ್ಯಾಧುನಿಕ ಸಲಕರಣೆಗಳಿವೆ.

ಸೂಚಿಶಿಲ್ಪದ ಎಲ್ಲ ಕೋರ್ಸುಗಳಿಗೂ ಮನ್ನಣೆಪಡೆದ ಒಂದೇ ಒಂದಾದ ಈ ಶಿಕ್ಷಣಸಂಸ್ಥೆಯಲ್ಲಿ ಸೇರಬಯಸುವವರು, ಉತ್ತರಕ್ಕಾಗಿ ೨ ಆಣೆಯ ಟಿಕೀಟು ಇಟ್ಟು ಇಂದೇ ಬರೆಯಿರಿ.

ಸುಶೀಲಾದೇವಿ ಹಳಸೇಟೆ
ಪ್ರಿನ್ಸಿಪಾಲ್

ಸಾಹಿತ್ಯ, ಸಂಗೀತ—ಸಕಲವೂ ಸೇರಿಬಿಡುವುವು. ಈಗವರು ಬಲೆಯಿಂದ ಹೊರದೆಗೆದ ಹಕ್ಕಿಯಂತೆ ಹಾರಾಡುವರು. ಈ ಸ್ವಾತಂತ್ರ್ಯ ಮೂವತ್ತು ದಿನಗಳದಲ್ಲವೇ? ಈ ಅವಧಿಯಲ್ಲಿ ಬಾಯಿ ಬಂಡಾಯದ ಹೊರತು ಮತ್ತೇನನೂ ಕೇಳಬೇಡಿರಿ 'ಸುಶಿಕ್ಷಿತರಾಗಿ, ಹಳ್ಳಿಯಲ್ಲಿ ಬಂದು ಯಾವುದೊಂದು ಸಾಮಾಜಿಕಕಾರ್ಯ ಮಾಡದಿದ್ದರೆ ಹೇಗೆ? ಕೇವಲ ಗಾಣದ ಎತ್ತಿನಂತೆ ಸುತ್ತುತಿರುಗುವ ನಮ್ಮ ಜೀವನಕ್ಕೇನು ಬೆಲೆಯಿದೆ? ಸಾಮಾಜಿಕ ಕಾರ್ಯವಾಗದಿದ್ದರೂ ಸ್ವಂತದ ಉನ್ನತಿಯನ್ನಾದರೂ ಮಾಡಿಕೊಳ್ಳಬಾರದೇ? ಕೇವಲ ಮಾತಿನ ಬುಡುಬುಡುಕೆಗಳಿಂದ ಏನು ಸಾಧಿಸೀತು?' ಎಂದು ಮನದಲ್ಲಿ ಮಂಡಿಗೆ ತಿಂದರೂ, ಪ್ರತ್ಯಕ್ಷ ಕಾರ್ಯಕ್ಕೆ ಮಾತ್ರ ಸೊನ್ನೆ.

ಇನ್ನು ಪರರ ಮಾತೇಕೆ? ನಾನೂ ಒಬ್ಬ ಈ ವರ್ಗದ, ಎಂದರೆ ಸರಕಾರೀ ಕಾರ್ಖಾನೆಯಲ್ಲಿ ಕೆಲಸಕ್ಕಿದ್ದ ಒಬ್ಬ ಕೂಲಿಯೆ! ಉದ್ಯೋಗ ಶಿಕ್ಷಣಪ್ರಸಾರ. ಜೊತೆಗೆ ಸಾಹಿತ್ಯಪ್ರಚಾರವನ್ನು ಕೂಡ ಮಾಡಬೇಕೆಂಬ ಹಂಬಲ. ನಾಲ್ಕಾರು ಮಾಸಿಕಗಳಲ್ಲಿ ಅಚ್ಚಾದ ನನ್ನ ಚಿಕ್ಕ ಕತೆಗಳಿಗೆ ಮೆಚ್ಚಿದ ಪ್ರಕಾಶಕಮಹಾಶಯರು 'ಈ ಬಿಡುವಿನಲ್ಲಿ ನೀವೊಂದು ಒಳ್ಳೆಯ ಕಾದಂಬರಿಯನ್ನೇಕೆ ಬರೆಯಬಾರದು? ಕೂಡಲೇ ಬರೆದು ಕಳುಪಿರಿ. [illegible] ರೆಯುವ ಕಾಗದಗಳನ್ನು ಕಂಡು, 'ಅಗ್ಗ ಬರದ' ಪ್ರಕಾಶನದ ಹಾವಳಿಯಲ್ಲಿ ಎಂಥ ಮುಗ್ಗು ಸಾಹಿತ್ಯಕ್ಕೂ ಬೆಲೆ ಬರುತ್ತಿರುವ ಈ ದಿವಸಗಳಲ್ಲಿ, ನನ್ನಂಥ ಪ್ರತಿಭಾವಂತ ಪುರುಷ ಹೀಗೇ ಕೂಡಬೇಕೇ?'

"ಕೂಡಲೇ ಆರಂಭಿಸುತ್ತೇನೆ. ಕಾದಂಬರಿಯ ವಸ್ತುಚಿತ್ರವೇನೋ ಮನದಲ್ಲಿ ಮೂಡಿನಿಂತಿದೆ ಆರಂಭಿಸುವುದೊಂದೇ ತಡ, ಒಂದು ವಾರದಲ್ಲಿ ನಾಲ್ಕಾರು ನೂರು ಪುಟದ ಸರಸಸಾಹಿತ್ಯ ಸಿದ್ಧ!"

ಹೀಗೆ ಉತ್ತರ ಬರೆದು ಒಂದೆರಡು ವಾರ ಉರುಳಿ ಹೋದರೂ, ಆ ನನ್ನ ಸಾಹಿತ್ಯಸೃಷ್ಟಿಗೆ ಸುಮುಹೂರ್ತ ಮಾತ್ರ ಕೂಡಿಬರಲೊಲ್ಲದು. ಪ್ರಕಾಶಕರೇ ತಗಾದೆ ಹೆಚ್ಚಾಗಿ 'ಯಾಕೆ, ಏನು ಮಾಡುವಿರಿ?' ಎಂದು ಕೇಳಿಯೇಬಿಟ್ಟರು. ಅವರ ಪ್ರಶ್ನೆಗೆ ಉತ್ತರವಾಗಿ ನನ್ನ ದಿನಚರಿಯನ್ನೇ ಒಪ್ಪಿಸಿದೆ!

ಬೆಳಗಿನ ಏಳು ಗಂಟೆಗೆ ಏಳುವುದು. ಆಮೇಲೆ ನಡೆಯುವುದು ಪ್ರಾತರ್ವಿಧಿ- ಹಲ್ಲುಜ್ಜಿಕೊಳ್ಳುವುದು. ಸ್ನಾನ-ಪಾನಾದಿಗಳಾಗುವುದರೊಳಗಾಗಿ ಒಂಬತ್ತು ಗಂಟೆ ಮಿಕ್ಕಿಯೇ ಹೋಗುತ್ತದೆ. ಆಗಲೇ ಒಂದೆರಡು ತಾಸು ಬರೆಯಬೇಕೆಂದು ಲೆಕ್ಕಣಿಕೆ-ಕಾಗದಗಳನ್ನು ಅಣಿಗೊಳಿಸುತ್ತಿರುವಾಗಲೇ "ಇಲ್ಲಿ ಬರ್ರೀ ಇಲ್ಲೇ,— ಕಿಟ್ಕ್ಯಾಗ ಸೊಕ್ಕು ಬಂದಿದೆ; ಚೇಪಿನ್ನ ಹೊಡೀತಾನ ನೋಡ್ರಿ! ನೀವು ಈ ಹುಡುಗರನ್ನ ನೋಡಿಕೊಳ್ಳದಿದ್ರ, ಅಡಿಗಿ ಹ್ಯಾಂಗ ಆಗಬೇಕು? ಈಗ ಬಿಸಿಲು ಆಯ್ತು....ಅಂತ ಕೂಗಾಡ್ತೀರಿ ಮತ್ತ!" ಹೀಗೆನ್ನುವ ಗೃಹಮಂತ್ರಿಗಳ ಹುಕುಂ ಕೇಳುತ್ತಲೇ, ಕಾಗದ-ಲೆಕ್ಕಣಿಕೆಗಳನ್ನು ಅಲ್ಲೆ ಒಗೆದು, 'ಜೀಯಾ' ಎಂದು ಹೋಗಿ ನಿಂತವರಂತೆ ನಿಂತು, ಆಜ್ಞೆಯನ್ನು ಶಿರಸಾವಹಿಸಿ, ಮಕ್ಕಳಿಗೆ ಪೆಪ್ಪರಮಿಂಟೋ, ಚಾಕೊಲೆಟೋ ತಂದುಕೊಟ್ಟು, ಅವರನ್ನಾಡಿಸುವ ಕೆಲಸ ಮಧ್ಯಾಹ್ನದ ವರೆಗೂ ಮುಂದುವರೆಯುತ್ತದೆ 'ಇನ್ನೇನು, ಊಟವಾದ ಮೇಲೆ ಬರೆಯಲು ಆರಂಭಿಸಬಹುದು. ಆಗಂತೂ ಯಾವ ತೊಂದರೆಗಳೂ ಇರುವುದಿಲ್ಲ. ಸಾಕಷ್ಟ ವೇಳೆ ಸಿಗುತ್ತದೆ'—ಎಂದು ಊಟದ ಶಾಸ್ತ್ರ ಮುಗಿಸುವ ಕೊನೆಗೆ ಎರಡು ಗ್ಲಾಸ್ ಅಂಬಲಿ, ಒಂದು ಗ್ಲಾಸ್ ಮಜ್ಜಿಗೆ—ಇವುಗಳ ಮಿಶ್ರಣ ಮಾಡಿ ಕುಡಿಯುವುದೊಂದೇ ತಡ; ಆರಂಭವಾಯಿತು....ಸುರಾಪಾನದ ಸೌಮ್ಯಅನುಭವ ಬರಲಿಕ್ಕೆ! ಹೀಗೆ ಹೇಳಿದಾಕ್ಷಣ ನಾನು ಸೆರೆಗುಡುಕನೆಂದು ತಿಳಿದುಕೊಂಡೀರಿ ಮತ್ತೆ. ಆದರೆ ಕುಡಿದವರು ಹೇಳುವ ಮಾತು:— 'ಮೈ ಭಾರವಾಗಿ ತೂಕಡಿಕೆ ಬರುತ್ತದೆ' ಅಂತ ಇದೇ ರೀತಿ ನನಗೆ ಆ ಮಿಶ್ರಣದ ಅಮಲೇರಿ, ಉಸ್ಸೆಂದು ಒರಗಿಕೊಂಡೆನು. ಹೊರಗೆ ಧಗಧಗವೆನ್ನುವ ಬಿಸಿಲಿನ ತಾಪ, ಒಳಗೆ ಮೈಮೇಲಿಂದ ಸರಸರ ಇಳಿಯುವ ಬೆವರಿನ ಅಭಿಷೇಕ! ಆದರೂ ಗುರುಗುಟ್ಟುದ ನಿದ್ರೆಯಲ್ಲಿಂದ ಏಳಬೇಕಾದರೆ ಸಂಜೆಯ ನಾಲ್ಕಾಗುತ್ತದೆ ದಂಗು ಹಿಡಿದ ದೇಹ ದಾರಿಗೆ ಬರಬೇಕಾದರೆ, ಚಹಾ-ಕಾಫಿಗಳಿಗೇ ಶರಣು ಹೋಗಬೇಕು. ಷರಬತ್ ಸಿಕ್ಕರಂತೂ ಸ್ವರ್ಗಸುಖ.

ಆಯಿತು. ಊಟ, ನಿದ್ರೆ, ಸಾಯಂಪಾನವೂ ಮುಗಿಯಿತು. 'ಬರೆಯುವ ವೇಳೆ ಇದೇ' ಎಂದು ಮನೆಯ ರಾಜಕಾರಣಕ್ಕೆ ಸಲಹೆ ಹೇಳಿ ಆಟ್ಟವನ್ನು ಹತ್ತುವುದೊಂದೇ ತಡ; 'ಏನೋ! ಸಕ್ತಮುಜೂರೀ ಶಿಕ್ಷೆಯಾದಂತೆ ಮುಂಜಾವಿನಿಂದ ಸಂಜೆಯ ತನಕಾ ಒಳಗೇ ಇರಲೀ ಅಲ್ಲೋ? .... ಸ್ವಲ್ಪ ಗಾಳಿಗೆ ಬಾ!' ಎಂದು ಗೆಳೆಯ ಮಾಧವಿನ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಹೆಣ್ಣಿನ ಜೀವನದ ಸುಂದರ ಚಿತ್ರಣದ
ಎರಡು ಕಾದಂಬರಿಗಳು

(೧) ವಿಧಿತಂದ ವಧು .... ೧—೮—೦

(೨) ಕುಲವಿಲ್ಲದ ಹೆಣ್ಣು .... ೧—೮—೦

ಹೆಣ್ಣಿನ ಬಾಳನ್ನು ಚಿತ್ರಿಸುವ ಸುಂದರ ಕತೆಗಳು
ಶ್ರೀಮತಿ ಶಾಂತಾದೇವಿ ಮಾಳವಾಡ

(೩) ಕುಂಕುಮಬಲ .... ೧—೦—೦

(ಪ್ರಿ. ವಿ. ಕೃ. ಗೋಕಾಕರ ಮುನ್ನುಡಿ ಸಹಿತ)

ಪ್ರಸಿದ್ಧ ಲಾವಣಿಕಾರರಾದ ಕವಿ
ಶ್ರೀಧರ ಖಾನೋಳಕರ

(೪) ಹೂಗಂಪು (ಲಾವಣಿಗಳು) .... ೦—೧೨—೦

ಈ ಮೇಲಿನ ನಾಲ್ಕು ಪುಸ್ತಕಗಳು ತರಿಸಿದವರಿಗೆ
ಅಂಚೆ ವೆಚ್ಚ ಉಚಿತ

ಗವಳೀಗಲ್ಲಿ — ವ್ಯವಸ್ಥಾಪಕರು
ಹುಬ್ಬಳ್ಳಿ — ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಗಲಾಟೆಯನ್ನು ಕೇಳಿ 'ಬಂತಪ್ಪಾ ಪೀಡ್ರಾಃ' ಎಂದು ಮನದಲ್ಲಿ ಶಪಿಸಿ ಮುಂಗಾಣದೆ ಗಾಳಿಸಂಚಾರಕ್ಕೆ ಹೋಗಲಾಯಿತು. ನಡೆದುವು ಮಾತು-ಕತೆ ತೆಳಬುಡವಿಲ್ಲದೆ. ಪಡುವಣ ದಿಗಂತದಲ್ಲಿ, ತಪ್ತಲೋಹದ ಗುಂಡಿನಂತೆ ಉಂಡಿಯೊಂದು ಭೂಮಿಯಲ್ಲಿ ಸೇರುವುರದಲ್ಲಿತ್ತು. ಆಗ ನನ್ನ ಕವಿಹೃದಯ ಜಾಗೃತವಾಗದೆ ಇರಲಿಲ್ಲ. ಬಳಿಯಲ್ಲಿದ್ದ ಗೆಳೆಯನ ಮಾತಿನ ವೈಖರಿ, ಆಗಿನ ಪಕ್ಷಿಮುದ ಬಾನಂಚಿನಷ್ಟೇ ರಂಜಕವೆನಿಸಿ. ತೆನಗೆ. ಮನಸ್ಸಿಲ್ಲದ ಮನಸ್ಸಿನಿಂದ 'ಹೊ'ಗುಡುತ್ತಲಿದ್ದೆ. ಸೂರ್ಯ ಮರೆಯಾಗಿ ಕತ್ತಲೆ ಆವರಿಸುತ್ತ ಬಂದಂತೆ ಚರ್ಚೆ ಜೋರಾಯಿತು. ಕಡೆಗೆ ನಾನೇ ಸೋತು 'ಸಾಕು, ನಡೆ ಮಹಾರಾಯಾ ಇನ್ನು!' ಎಂದು ಎಚ್ಚರಿಸಿ, ಬಂದು ಮನೆ ಸೇರುವಾಗ ಎಂಟುಗಂಟೆಗೆ ಕಡಿಮೆ ಆಗಿರಲಿಲ್ಲ.

'ಊಟದ ಶಾಸ್ತ್ರ ಮುಗಿಸಿದ ಕೂಡಲೇ ಲೆಕ್ಕಣಿಕೆ ಹಿಡಿಯುವುದೇ! ಬ್ರಹ್ಮ ಬಂದರೂ ತಡೆಯಲಾರ!' ಎಂದು ಭೀಷ್ಮಪ್ರತಿಜ್ಞೆ ಮಾಡಿ ಊಟಕ್ಕೆ ಕುಳಿತರೆ, ಮೈ ಕತಕತ ಕುದಿಯಹತ್ತಿತು. 'ಹಾಳು! ಈ ಗಾಳಿಗೇನು ಧಾಡಿಯಾಗಿದೆ?' ಎಂದು ಬೆವರುಜ್ಜಿಕೊಳ್ಳುತ್ತ ಬೀದಿಗೆ ಬಂದು: 'ವಾಯುದೇವರ ಸ್ವಾರಿ ಎಲ್ಲಿ ಫರಾರಿಯಾಗಿದೆ?' ಎಂದು ಗೊಣಗುಟ್ಟುತ್ತ ನಿಂತೆ. ನನ್ನಂತೆಯೆ ಹಲವು ಅರ್ಧ-ಮರ್ಧ ದಿಗಂಬರ ಪ್ರಾಣಿಗಳು ಕೂಡ ಕೆಲಸವಿಲ್ಲದೆ ಅಲೆಯುತ್ತಿದ್ದುವು. ಆದರೆ ನನ್ನ ಕರ್ತವ್ಯ, ಆ ನನ್ನ ಪ್ರತಿಜ್ಞೆ, ಕೂಡಲೇ ನನ್ನನ್ನು ಜಾಗೃತಗೊಳಿಸಿದುವು. 'ಯಾಕೆ ಈ ದೇಹದ ಮೇಲೆ ಮೋಹ! ಎಂತಹ ಮೈಗಳ್ಳತನ!' ಎಂದು ಮನವನ್ನು ಎಚ್ಚರಿಸಿ, ಅಟ್ಟದ ಮೆಟ್ಟಲುಗಳನ್ನೇರಿ ಹೋಗಿ ಕುಳಿತೆ. ಬರೆಹದ ಸಕಲಸಾಮಗ್ರಿಗಳನ್ನು ಅಳವಡಿಸಿಕೊಂಡದ್ದೂ ಆಯಿತು. 'ವಾಲ್ಮೀಕಿ ರಾಮಾಯಣ' ಬರೆಯುವಂತೆ— ಅಲ್ಲ ಪುರಾಣ ಕಾಲದ ಮಾತೇಕೆ?—ಹೊಸಕಾಲದ ಕವಿ 'ರಾಮಾಯಣ ದರ್ಶನ' ಬರೆಯುವಂತೆ, ನನ್ನನ್ನು ನಾನೇ ಮರೆತು ಸ್ಥಿತಪ್ರಜ್ಞನಾಗಿ ಕುಳಿತುಬಿಟ್ಟೆ. ಕಲಾಕಾರನಾದ ನನ್ನ ಕುಂಚ ಇನ್ನೂ ಕಾಗದವನ್ನು ಕಂಡಿಲ್ಲ; ಅಷ್ಟರಲ್ಲಿ 'ಪೀಃ ಪೀತ ಪೀತ್ಃ......ಟರ್ ರ್ರ್ .... .. ಢಂತ ಢಂಃ ಢಂ........' ಎಂದು ಹಲವು ವಾದ್ಯಗಳ ನಿನಾದ; ಕ್ರಮಕ್ರಮವಾಗಿ ಹೆಚ್ಚಾಗುತ್ತ ಕಿವಿಯಲ್ಲಿ ಕುಂಬಿತು. ಬಂತು, ಮೆರವಣಿಗೆ ಬಂತು; ಮನೆಯ ಬೀದಿಯ ಮೇಲೆಯೇ ಬಂದು ನಿಂತಿತು. 'ಅಯ್ಯೋಃ........!' ಎಂದು ತಲೆ ಜಜ್ಜಿಕೊಂಡು, ಹಲ್ಲು ಕಡಿಯುತ್ತ ಕ್ರೋಧಾವೇಶದಿಂದ ಹೋಗಿ 'ಧಡಾತ್ತರನೆ....' ಬಾಗಿಲನ್ನು ತೆರೆದು ನೋಡಿದೆ....ತಡೆಯುವುದಾಗಲಿಲ್ಲ.

"ಎಲಾಃ ಈ ಮಕ್ಕಳಿಗೇನು ಬೇನೆ....ಬಾಸಿಂಗ ಕಟ್ಟಿಕೊಂಡು ಬೀದಿ ಬೀದಿ ಅಲೆದಾಡಲಿಕ್ಕೆ? ವೇಳೆ ಹೊತ್ತು ಯಾವುದೂ ತಿಳಿಯುವುದಿಲ್ಲ ಹುಂಬರಿಗೆ! ತಮ್ಮ ಮದುವೆಯನ್ನು ತಮ್ಮ ಮನೆಯಲ್ಲಿ ಮಾಡಿಕೊಳ್ಳಬೇಕು! ಅನ್ಯರಿಗೇಕೆ ಈ ಉಪದ್ರವ!" ಎಂದು ಗೊಣಗಿದೆ; ರೇಗಾಡಿದೆ. ಆದರೆ ನನ್ನನ್ನು ಯಾರೂ ಲಕ್ಷ್ಯಿಸಲಿಲ್ಲ. ವಾದ್ಯಗಳು ಸ್ವರಮೇಳದೊಡನೆ ಏಕಕಂಠವಾಗಿ ಕಿರುಚುತ್ತಿದ್ದುವು. ನನಗೆ ಸಿಟ್ಟು ತಡೆಯುವುದಾಗಲಿಲ್ಲ. 'ಹೋಗಲಿ, ಮಕ್ಕಳು!' ಎಂದು ಸಿಟ್ಟಿನಿಂದ ಬಂದು ಹಾಸಿದ ಹಾಸಿಗೆಯ ಮೇಲೆ ಮೈ ಊರಿದೆ. ವಿವಿಧವಾದ್ಯಗಳ ನಾದಮಾಧುರ್ಯದಿಂದ ಕಣ್ಣು ಮುಚ್ಚಿದುವು.

ಶ್ರೇಷ್ಠ ಸಾಹಿತಿಯಾಗಬೇಕಾದರೆ— ದೇವಿ ಶಾರದೆ ಒಲಿದು ಬರಬೇಕು—ವರವ ನೀಡಬೇಕು—ಎಂಬುದನ್ನು ಮನಗಂಡು, ಹಲವು ವಿಧದ ಜಪ-ತಪಗಳನ್ನಾಚರಿಸಲು ಪ್ರಾರಂಭಿಸಿದೆ. ದೇವಿ ಪರಿ-ಪರಿಯಾಗಿ ಭಕ್ತನನ್ನು ಎಂದರೆ ನನ್ನನ್ನು ಪರೀಕ್ಷಿಸತೊಡಗಿದಳು. ಕೊನೆಗೆ ಭಕ್ತನ ಭಕ್ತಿಗೆ ಮೆಚ್ಚಿ ಪ್ರಸನ್ನಳಾದಳು; ಪ್ರತ್ಯಕ್ಷಳಾದಳು.

ನಾನು:— ಅಹಾಃ (ಕಿವಿಗೊಟ್ಟು ಆಲಿಸಿ) ಅದೇನು? ಈ ಮಂಜುಳರವವೆಲ್ಲಿಯದು? ಅದೋ! ಗಗನಾಂಗಣದಿಂದ ತೂರಿ ಬರುತ್ತಿದೆ! ಈ ಇಂಪಾದ ಸ್ವರಕ್ಕೆ ಸೃಷ್ಟಿಯೇ ಬೆರಗಾಗಿ ನಿಂತಿತಲ್ಲ! ಯಾರು! ಗಂಧರ್ವರಿರಬಹುದೇ! ಅಥವಾ ಸುರಲೋಕದ ಕಿನ್ನರರೇ! ಛೇ! ಗಾನದ ಜೊತೆಗೆ ವೀಣಾನಾದವೂ ಇದೆ. ಎಂದ ಮೇಲೆ ಕಿನ್ನರರಲ್ಲ! ನಾರಾಯಣನ ಭಕ್ತ ನಾರದನೇ? ತ್ರಿಲೋಕಸಂಚಾರಿ ಅವನು! (ಬರು-ಬರುತ್ತ ಸ್ವರ ಸಮೀಪವಾಗಿ ಕೇಳಿಸುವುದು) ಇದೇನು! ನನ್ನ ಹುಚ್ಚು? ನಾರದನಿದ್ದರೆ ಮಯೂರವೇಕೆ? ಅಲ್ಲ-ಅಲ್ಲ. ವೀಣಾಪಾಣಿನಿ, ಮಯೂರವಾಹನಳಾದ ವಾಗ್ದೇವಿಯೇ ಅವಳು! ಅವಳ ಗಾನವನ್ನಾದರೂ ಕಿವಿಗೊಟ್ಟು ಕೇಳಬೇಕು. (ಶಾಂತಚಿತ್ತದಿಂದಿರಲು)

> " ಬರಡು ಜೀವಿಗಳಿಗಿದು ಕಾಲವಲ್ಲಾ |
> ರಸಿಕರಿಗಿದು ಒಳ್ಳೆಯ ಕಾಲ ||
> ಅಂಬಲಿ-ಮಜ್ಜಿಗಿ ಹೊಡೆಯುವ ಕಾಲ |
> ಸೋಡಾ-ಲಿಮನ್ ಕುಡಿಯುವ ಕಾಲ |
> ಗಾಳಿಗೆ ಮೈಯೊಡ್ಡಿ ಮಲಗುವ ಕಾಲ |
> ನಲ್ಲ-ನಲ್ಲೆಯರು ಸುಖ ಸವಿಯುವ ಕಾಲ |
> ಬರಡು ಜೀವಿಗಳಿಗಿದು ಕಾಲವಲ್ಲ |
> ರಸಿಕರಿಗಿದು ಒಳ್ಳೆಯ ಕಾಲ ||

ಗಾನಮಾಧುರ್ಯ ಗಗನ ಮಂಡಲ ಭೇದಿಸಿ ಬರುತ್ತಿತ್ತು. ಮಯೂರವನ್ನೇರಿ ಬರುತಿದ್ದ ವಿದ್ಯಾದಾಯಿನಿ ಸರಸತಿ, ಅಂತರಿಕ್ಷದಲ್ಲಿಂದ ಬರುತ್ತಿದ್ದಳು. ಸನಿಯಕ್ಕೆ ಬಂದಳು. ನಾನು ಭಕ್ತಿಭಾವದಿಂದ ಪರವಶನಾಗಿ ಕೈಜೋಡಿಸಿಕೊಂಡು ನಿಂತೆ. ಬಂದಳು ವಾಣಿ; ವರದಾಯಿನಿ!

ಶಾರದೆ:— ಏಳು! ವತ್ಸಾ, ಪ್ರಸನ್ನಳಾಗಿರುವೆ.

ನಾನು:— ಧನ್ಯ ಧನ್ಯ! ತಾಯೇ ಧನ್ಯ! ನಿನ್ನ ದರ್ಶನದಿಂದ ನನ್ನ ಜನ್ಮ ಸಫಲವಾಯಿತು.

ಶಾರದೆ:— ಭಕ್ತಾ, ನಿನ್ನ ಘೋರವಾದ್ದ ಈ ತಪಕ್ಕೆ ಕಾರಣವೇನು?

ನಾನು: — ಸುರ-ನರವಂದಿತೇ, ತ್ರಿಲೋಕ ಜನ ಪೂಜಿತೇ! ಜ್ಞಾನದಾತೇ!....

ಶಾರದೆ:— ಹೇಳು ಭಕ್ತಾ, ನಿನ್ನ ಮನದ ಕೋರಿಕೆಯನ್ನು ಪೂರಯಿಸುವೆ!

ನಾನು:— ಅಲ್ಪ ಹಾಗು ಅಜ್ಞಾನಿಯಾದ ನಿನ್ನ ಭಕ್ತನನ್ನು ರಕ್ಷಿಸು ತಾಯಿ! ಹಲವು ವಿಘ್ನಗಳಿಂದ ನನ್ನ ಲೇಖನ ಕಾರ್ಯ ನಡೆಯಲೊಲ್ಲದು. ಇಂತಹ ವಿರಾಮಕಾಲದಲ್ಲಿ ನನ್ನ ಸಾಹಿತ್ಯಸೇವೆ ಲೋಕಕ್ಕೆ ಸಲ್ಲದಿದ್ದರೆ, ಬೇರೆ ಯಾವ ಕಾಲವಿದೆ? ಅದಕ್ಕಾಗಿ ಈ ಕಾಲದಲ್ಲಿ ನನ್ನ ಮನದಾಶೆಯು ಈಡೇರುವಂತೆ ಕರುಣಿಸು ವರದಾಯಿನೀ!

ಶಾರದೆ:— (ನಸುನಕ್ಕು) ಮರುಳು ಭಕ್ತಾ, ವಸಂತ ಋತುವಿನ ಜೀವನಸೂತ್ರವನ್ನು ಕೇಳಿದೆಯಾ! (ಎಂದು ಮೊದಲಿನ ಪದವನ್ನು ಸಂಗೀತಸುಧೆಯೊಡನೆ ಬೆರಸಿ ಅನ್ನುವಳು.)

ನಾನು:— (ಭಾವಪರವಶನಾಗಿ ತಲೆದೂಗುತ್ತ) ತಾಯೇ, ನನ್ನಿಂದ ಈ ಕಾಲದಲ್ಲಿ ಕಲೋಪಾಸನೆ ನಡೆಯುವಂತೆ ಅನುಗ್ರಹಿಸು!

ಶಾರದೆ:— ಭಕ್ತಾ, ಕನ್ನಡನಾಡು ಕೋಗಿಲೆಯ ಗಾನದ ಬೀಡು; ಕಿನ್ನರರು ಹಾಡುವ ನಾಡು! ಕನ್ನಡದ ಕಂದನಾದ ನೀನು ವಸಂತರಾಜನ ಸಂದೇಶವನ್ನು ನಾಡಿಗೆ ತಿಳಿಸು; ಅದೇ ನಿನ್ನ ಇಂದಿನ ಸೇವೆ. ಉಪಾಸನೆ!

ನಾನು :—ಆಗಲಿ. ಆದರೆ ಜಗನ್ಮಾತೇ!.... ನನ್ನ ಲೇಖನಕಾರ್ಯವನ್ನು ಯಾವಾಗ ಆರಂಭಿಸಲಿ?....

ಶಾರದೆ:—(ನಸುನಗುತ್ತ ಅದೇ ಗಾನವನ್ನು ನುಡಿಸುತ್ತ ಶಾರದೆ ಅದೃಶ್ಯಳಾದಳು) 'ಹಾಃ ಹಾಃ! ದೇವೀಃ ದೇವೀಃ.......' ಎನ್ನುತ್ತ ಒಮ್ಮೆಲೇ ಕೂಗಿಕೊಳ್ಳುತ್ತ ಎದ್ದೆ. 'ಹಾಗೇನು ಕೂಗಾಡತೀರಿ! ಕೆಳಗೆ ಬರ್ರಿಲ್ಲಿ! ಹುಡುಗರನ್ನ ನೋಡಿಕೊಳ್ಳದಿದ್ರೆ ನಾನಾದರೂ ಏನು ಮಾಡಲಿ?' ಎಂದು ಅಡುಗೆಮನೆಯಿಂದ ಗುಡುಗಿದಳು ಅನ್ನಪೂರ್ಣಾದೇವಿ! ಮಕ್ಕಳು ಮನೆಯಲ್ಲಿ ಭಾರತಯುದ್ಧವನ್ನೇ ಹೂಡಿದ್ದರು.

(೨೭ನೆಯ ಪುಟದಿಂದ ಬಂದುದು)

ಕಾದಂಬರಿಗಳಲ್ಲಿ ಇಂದು ಕೆಲ ಲೇಖಕರು ಚಿತ್ರಿಸುವ ಪ್ರಕರಣಗಳು ಅನುಚಿತವಾಗಿರುತ್ತವೆ. ಶೃಂಗಾರಚಿತ್ರಣ ಸಾಹಿತ್ಯದಲ್ಲಿ ಇರಲೇ ಬಾರದೆಂಬ ಮಡಿವಂತಿಕೆ ಸರಿಯಲ್ಲ. ಕಾವ್ಯ-ಕಾದಂಬರಿಗಳಲ್ಲಿ ಅದು ಉಚಿತವೇ; ಆದರೆ ಅವುಗಳಲ್ಲಿ ಅಶ್ಲೀಲವನ್ನೆ ತುಂಬಿಸುವುದು ಸೊಗಸುವುದಿಲ್ಲ. ಶೃಂಗಾರವಿರಲೇಬಾರದೆಂದು ಹೇಳುವ ಕಾದಂಬರಿಕಾರರೂ ಒಬ್ಬಿಬ್ಬರಿರಬಹುದು. ಅವರು ತಮ್ಮ ಕಾದಂಬರಿಗಳಲ್ಲಿ ಶೃಂಗಾರದ ಹಿಂದೆ ಮುಂದೆ ಹೋಗಿ, ಸಮಯಕ್ಕಾಗುವಾಗ ಮೂಗನ್ನು ಮೊಟಕು ಮಾಡಿಕೊಳ್ಳುತ್ತಾರೆ. ಇದರಿಂದ ಅವರು ಜಾಣರಾಗುವುದಿಲ್ಲ, ಹೆಡ್ಡತನವನ್ನೇ ತೋರಿಸುವುದು ಮಾತ್ರವಲ್ಲದೆ, ಕೃತಿಯನ್ನು ಕೃತ್ರಿಮಗೊಳಿಸುತ್ತಾರೆ. ಅಪ್ರಕೃತ ಸಂಭಾಷಣೆಗಳು, ಒಣಚರ್ಚೆಗಳು, ಅಸಂಗತವರ್ಣನೆ, ಅಪ್ರಯೋಜಕ ಪಾತ್ರಪ್ರವೇಶಗಳೆಲ್ಲಾ ಅನುಚಿತವಾಗುತ್ತವೆ. ತಮ್ಮ ಅನುಭವಕ್ಕೆ ನಿಲುಕದ ವಸ್ತುವನ್ನು ಬಣ್ಣಿಸಹೋಗಿ ಸೋತುಹೋಗುವವರೂ ಇದ್ದಾರೆ. ಪೇಟೆಯಲ್ಲೇ ಕುಳಿತು ಹಳ್ಳಿಯ ಚಿತ್ರಣಕ್ಕೆ ತೊಡಗುವವರು ಮತ್ತು ದೇಶಾಂತರಗಳ ಜನರ ನಡೆನುಡಿಗಳನ್ನು ಊಹೆಯಿಂದ ಚಿತ್ರಿಸುವವರು—ಪರಾಜಯ ಹೊಂದುತ್ತಾರೆ.

'ತಾನು ವಿದೇಶಸಂಚಾರ ಮಾಡಿದ್ದೇನೆ; ಇಂಗ್ಲಂಡ್ ಅಮೇರಿಕಾ ನೋಡಿದ್ದೇನೆ' ಎಂದು ಅಲ್ಲಿಯ ವಿಚಾರವಾಗಿ ಪುಟಕಟ್ಟಳೆ ಉಪನ್ಯಾಸ ಮಾಡಿದರೆ, ಪ್ರಕೃತದ ಪರಿಪೋಷಣೀಯ ಕಥೆಗೇನೂ ಪ್ರಯೋಜನವಿಲ್ಲ. ಅದಕ್ಕೆ ಪ್ರವಾಸಪ್ರಬಂಧವೇ ಯೋಗ್ಯವಾದುದು. ತಾನು ಅರಿಸಿದ ಯಾವುದೋ ಕಥಾವಸ್ತುವಿಗೆ ಬಲಾತ್ಕಾರದಿಂದ ಅವನ್ನು ತುರುಕುವುದು ಗಂಟಲಲ್ಲಿ ಇಳಿಯದ ತುತ್ತಾದೀತು.

ಜನರ ನಡೆ–ನುಡಿಗಳಲ್ಲಿ ತಾರತಮ್ಯವಿದ್ದಂತೆಯೇ, ವೇಷ–ಭೂಷಣಗಳಲ್ಲೂ ವ್ಯತ್ಯಾಸವಿರಬಹುದು. ಮಂಗಳೂರಿನ ಚೆಲುವೆಯನ್ನು ಪಂಜಾಬೀ ಡ್ರೆಸ್ಸಿನಲ್ಲಿ ಚಿತ್ರಿಸುವುದಾಗಲಿ, ಸಾಮಾನ್ಯ ವ್ಯಕ್ತಿಗಳನ್ನು ಅಲೌಕಿಕರಾದ ದಿವ್ಯಪುರುಷರಂತೆ, ವಸಿಷ್ಠ–ವಾಮದೇವಾದ್ಯರಂತೆ ವರ್ಣಿಸುವುದಾಗಲಿ ಸಲ್ಲದು. ಹೀಗೆ ಮನುಷ್ಯರ ಸ್ವಭಾವವನ್ನು ಗುರುತಿಸಿ ಬರೆಯುವುದಕ್ಕೂ ವಿಶೇಷ ಜಾಣ್ಮೆ ಬೇಕು. ದೇಶಕಾಲ, ನಡೆ ನುಡಿ, ಜೀವನನಿರೀಕ್ಷಣೆಗಳು ಕಥೆ-ಕಾದಂಬರಿಗಳಲ್ಲೆಲ್ಲಾ ಅತ್ಯವಶ್ಯ. ಅವುಗಳಲ್ಲಿ ವ್ಯತಿಕ್ರಮಬಂದಾಗ ಅನೌಚಿತ್ಯವಾಗುತ್ತದೆ. 'ನಾಟಕಮಧ್ಯೇ ಭಲ್ಲೂಕಪ್ರವೇಶಃ' 'ಶಿವಪೂಜೆಗೆ ಕರಡಿ ಹೊಕ್ಕಂತೆ' ಅದು ಕೃತಿಯ ಭವ್ಯತೆಯನ್ನು ಹಾಳುಮಾಡಿಬಿಡುತ್ತದೆ. ಲೇಖಕರು ಅಧಿಕಪ್ರಸಂಗಕ್ಕೆ ಕೈಹಾಕದೆ, ಸ್ವಾನುಭವವನ್ನು ಪ್ರಾಮಾಣಿಕವಾಗಿ ಬರೆಯುತ್ತ ಹೋದರೆ, ಕೃತಿಯು ಸರಸವಾಗುತ್ತದೆ. ಅನೌಚಿತ್ಯ ತಲೆಹಾಕುವುದಿಲ್ಲ. ಅನೌಚಿತ್ಯ ಬಂದಲ್ಲೆಲ್ಲಾ ಕವಿಯ ಯಶಸ್ಸು ಹಾಳಾಗುತ್ತದೆ; ಮಟ್ಟ ಕೆಳಗಿಳಿಯುತ್ತದೆ. ಆತ ನಿಂದ್ಯನಾಗುತ್ತಾನೆ. ಔಚಿತ್ಯ ಹೆಚ್ಚಿದಷ್ಟು ನಿರ್ಮಾತೃಗಳು ಯಶಸ್ವಿಯಾಗುತ್ತಾರೆ. ಅವರ ಜಾಣ್ಮೆ, ಪಾಂಡಿತ್ಯ, ಪ್ರತಿಭೆ, ಚಮತ್ಕೃತಿಗಳು ವಿಕಸಿತವಾಗುತ್ತವೆ. ಹೀಗಾಗಿ ಸಾಹಿತ್ಯದಲ್ಲಿ ಔಚಿತ್ಯವನ್ನು ಕಡೆಗಣಿಸಲು ಸರ್ವಥಾ ಸಾಧ್ಯವಿಲ್ಲ.

ಉತ್ತರ ಪ್ರದೇಶದ ಗವರ್ನರ್ (ಜನರಲ್)

ಶ್ರೀ ಕನ್ಹಯ್ಯಲಾಲ್ ಮುನ್ಷಿಯವರು

(ಪರಿಚಯಲೇಖನ)*

ಶ್ರೀ. ಎನ್. ನಾರಾಯಣ ಬಲ್ಲಾಳ, ಉಡಿಪಿ

●

ಶ್ರೀಮಾನ್ ಕನ್ಹಯ್ಯಲಾಲ್ ಮುನ್ಷಿಯವರು ಮೊದಲು ಸುಪ್ರಸಿದ್ಧ ಸಾಹಿತ್ಯಕರು; ಆಮೇಲೆ ರಾಜಕಾರಣಿಗಳೆಂದು ಸುಪ್ರಸಿದ್ಧರಾಗಿ ಭಾರತೀಯರಿಗೆಲ್ಲ ಪರಿಚಿತರಾದವರು. ಆಧುನಿಕ ಗುಜರಾತೀ ಸಾಹಿತ್ಯದಲ್ಲಿ ಶ್ರೀ. ಮುನ್ಷಿಯವರಿಗಿರುವ ಸ್ಥಾನ-ಮಾನಗಳು ಅದ್ವಿತೀಯವೆನಿಸುವಂತಹವು!

●

ಕಾನೂನನ್ನು ತಿಳಿದ ಸಮರ್ಥ ರಾಜಕಾರಣಿ, ಅನೇಕ ಸಂಸ್ಥೆಗಳ ಸೂತ್ರಧಾರಿ ಹಾಗೂ ಗುಜರಾಥೀ ಸಾಹಿತ್ಯಾಕಾಶದಲ್ಲಿ ಹೊಳೆಯುತ್ತಿರುವ ನಕ್ಷತ್ರ—ಕೆ. ಎಂ. ಮುನ್ಷಿಯವರನ್ನು ತಿಳಿಯದ ಶಿಕ್ಷಿತ ಭಾರತೀಯನೇ ಇಲ್ಲ. ಇವರು ಗುಜರಾಥಿನ ಬಡೋದಾ ನಗರದಲ್ಲಿ ೧೮೮೭ನೆಯ ವರ್ಷದ ಪುಷ್ಯ ಮಾಸದ ಹುಣ್ಣಿಮೆಯ ದಿನ ಹುಟ್ಟಿದರು. ಇವರ ತಂದೆಯವರು ಐಶ್ವರ್ಯವಂತರಲ್ಲದಿದ್ದರೂ. ಅವರಿಗೆ ತಮ್ಮ ಮಗನಿಗೆ ಉತ್ತಮವಾಗಿ ಕಲಿಸಬೇಕೆಂಬ ಆಶೆಯಿತ್ತು. ಇವರು ಒರ್ವ ಪ್ರತಿಭಾಶಾಲಿ ಹಾಗೂ ಅಧ್ಯಯನಶಾಲಿ ವಿದ್ಯಾರ್ಥಿಯಂತೆ ಕ್ರಮಶಃ ಮುಂದುವರಿದರು. ಇವರಿಗೆ ಬಾಲ್ಯದಿಂದಲೂ ಕಲೆ ಮತ್ತು ಪತ್ರಿಕಾವ್ಯವಸಾಯದಲ್ಲಿ ಆಸಕ್ತಿಯಿತ್ತು.

ಇವರು ತಮ್ಮ ೧೦ನೆಯ ವರ್ಷದ ವಯಸ್ಸಿನಲ್ಲಿ ಒಂದು ಸಮಾಚಾರಪತ್ರಿಕೆಯನ್ನು ಹೊರಡಿಸಿದರು. ಅದರ ಸಂಪಾದಕ ಲೇಖಕ ಹಾಗೂ ಪ್ರಕಾಶಕರು—ಎಲ್ಲಾ ತಾವು ಒಬ್ಬರೇ ಆಗಿದ್ದರು.

ಇವರ ಶಿಕ್ಷಣವು ಬಡೋದಾ ಹಾಗೂ ಬೊಂಬಾಯಿಯಲ್ಲಿ ನಡೆಯಿತು. ಇವರು ಬೊಂಬಾಯಿ ವಿಶ್ವವಿದ್ಯಾಲಯದಿಂದ ಬಿ ಎ , ಎಲ್ ಎಲ್. ಬಿ., ಡಿಗ್ರಿಯನ್ನು ಪಡೆದರು. ವಿದ್ಯಾರ್ಥಿಜೀವನದಿಂದಲೇ ಇವರಿಗೆ ಬರೆಯುವ ಚಟ ಅಭ್ಯಾಸವಾಗಿತ್ತು. ಇವರು ಲಾ ಕಲಿಯಲು ಬೊಂಬಾಯಿಯ ಕಾಲೇಜಿಗೆ ಸೇರಿದರು. ಅದೇ ಸಮಯದಿಂದ ಇವರು, ನಿಯಮಿತ ರೂಪದಿಂದ ಕಾಲೇಜಿನ ಪತ್ರಿಕೆಯಲ್ಲಿ ಅಗ್ರಲೇಖವನ್ನು ಬರೆಯತೊಡಗಿದರು. ಅಲ್ಲದೆ ಇವರು, ಬೇರೆ-ಬೇರೆ ಪತ್ರಿಕೆಗಳಲ್ಲಿ ಕೂಡ ಬರೆಯುತ್ತಿದ್ದರು. ಕೆಲವು ಸಲ ಬರೆದುದಕ್ಕೆ ಪ್ರತಿಫಲ ದೊರಕುತ್ತಿತ್ತು; ಮತ್ತೆ ಕೆಲವು ಸಲ ಇಲ್ಲ. ಇವರು ತಮ್ಮ ವಿವಾಹದ ಮೊದಲು ಲೀಲಾವತಿಯವರ ಟ್ಯೂಟರ್ ಆಗಿ ಕೆಲಸ ಮಾಡಿದ್ದರು ಇವರು ಪ್ರಥಮಬಾರಿ ಬೇರೆ ದೇಶಕ್ಕೆ ಹೋದುದು ಲೀಲಾವತಿಯವರೊಡನೆಯೇ. ಲೀಲಾವತಿಯವರು ತಮ್ಮ ಮದುವೆಯಾಗುವ ಮೊದಲು, ಕೆ. ಎಂ. ಮುನ್ಷಿಯವರ ಕುರಿತು ಬರೆದ ಒಂದು ಲೇಖನದಲ್ಲಿ ಈ ರೀತಿ ಬರೆದಿದ್ದಾರೆ: "ಇವರು ನೋಡುವುದಕ್ಕೆ ಬಹಳ ನಾಜೂಕು ಮತ್ತು ಸಣ್ಣವರಾಗಿದ್ದಾರೆ. ಅನ್ನದೇವತೆಯೊಡನೆ ಇವರ ಪ್ರೀತಿ ಕಡಮೆ. ಆದರೆ ಹಣ ಸಂಪಾದನೆಗಾಗಿ ಇವರು ಬೆಳಗಿನಿಂದ ಸಂಜೆಯ ತನಕ ಕಠಿಣಪರಿಶ್ರಮದಿಂದ ದುಡಿಯುತ್ತಾರೆ. ಇವರ ಲೇಖನಿಯಲ್ಲಿ ಉದಾರತೆಯಿದೆ. ಮನುಷ್ಯನನ್ನು ನೋಡಿ ಪರೀಕ್ಷಿಸುವುದರಲ್ಲಿ ಇವರಿಗೊಂದು ವಿಲಕ್ಷಣ ಶಕ್ತಿಯಿದೆ. ವಿಜ್ಞಾನಪಂಡಿತರಂತೆ ಇವರು ಸಮಾಜದ ವರ್ಗೀಕರಣ ತಿಳಿದಿದ್ದಾರೆ. ಇವರ ಚಾಣಾಕ್ಷಬುದ್ಧಿಗೆ ಎಲ್ಲರೂ ತಲೆ ತಗ್ಗಿಸುತ್ತಾರೆ. ಆದರೆ ಇವರನ್ನು ಯಾರೂ ಪ್ರೀತಿಸುವುದಿಲ್ಲ. ಇವರಲ್ಲಿ ಆತ್ಮಗೌರವ ಬಹಳವಿದೆ. ಆಚಾರ-ವಿಚಾರದಲ್ಲಿ ಬಹಳ ಸಭ್ಯರು. ಇವರಿಗೆ ಸಹಾನುಭೂತಿ ಬೇಡ. ಕಾರಣ—ಅವರಲ್ಲಿ ಇವರು ಆತ್ಮಗೌರವದ ಕ್ಷತಿಯನ್ನೇ ಕಾಣುತ್ತಾರೆ. ಇವರ ಸ್ವಭಾವ ಇವರನ್ನು ಕಠೋರರನ್ನಾಗಿ ಮಾಡಿದೆ. ಆದರೆ ಒಳಗೆ ಹೃದಯದಲ್ಲಿ ಒಂದು ಮಧುರಸ್ರೋತ ಯಾವಾಗಲೂ ಪ್ರವಾಹಿತವಾಗುತ್ತಾ ಇರುತ್ತದೆ. ಇದು ಜಗತ್ತಿನ ದೃಷ್ಟಿಯಿಂದ ಅವಾಸ್ತವಿಕವಾದುದು. ಜಗತ್ತಿನೊಡನೆ ಇವರೊಂದು ವಸ್ತುವನ್ನು ಬೇಡಿದ್ದಾರೆ. ಆದರೆ ಅದು ಇವರಿಗೆ ದೊರೆತಿಲ್ಲ. ಆ ವಸ್ತುವೇ ಇವರನ್ನು ಉದಾಸೀನರನ್ನಾಗಿ ಮಾಡಿದೆ ಎಂದು ನಮಗೆ ಕಾಣುತ್ತದೆ!"

ಇವರ ಪ್ರಕೃತಿಯು ಪ್ರವೃತ್ತಿಪ್ರಧಾನವಾಗಿದೆ ಯಾವುದಾದರೊಂದು ಕೆಲಸವನ್ನು ಮಾಡದೆ ಇವರಿಗೆ ನೆಮ್ಮದಿಯೇ ಇಲ್ಲ. ವಕೀಲ ಮುನ್ಷಿಯವರು ಇದೇ ಯೋಚನೆಯ ಕಾರಣದಿಂದ ಕೆಲವೇ

---

* ೧೯೫೫ರ ಮೇ ತಿಂಗಳ ಮೊದಲನೆಯ ತಾರೀಖಿನ ಹಿಂದೀ "ನವಭಾರತ ಟೈಮ್ಸ್" ಪತ್ರಿಕೆಯಲ್ಲಿ ಪ್ರಕಟವಾದ 'ಭಾರತದ ನಾಲ್ಕು ಶ್ರೇಷ್ಠ ಕತೆಗಾರರು' ಎಂಬ ಲೇಖನವೊಂದರ ಅನುವಾದ.

ದಿನಗಳಲ್ಲಿ ಬ್ಯಾರಿಸ್ಟರ್ ಮುನ್ಶಿಯ ರೂಪ ಧಾರಣ ಮಾಡಿದುದಲ್ಲದೆ, ತನ್ನ ಕಷ್ಟದ ಫಲದಿಂದಲೇ ಮುಂಬಾಯಿಯ ಹೈಕೋರ್ಟಿನ ಪ್ರಸಿದ್ಧ ಬ್ಯಾರಿಸ್ಟರರಲ್ಲಿ ಇವರೊಬ್ಬರೆಂದು ಗಣಿಸಲ್ಪಟ್ಟರು. ಜನರು ಇವರಿಗೆ ತಾವು ಇಂತಿಷ್ಟೇ ಹಣವನ್ನು ಕೊಡುತ್ತೇವೆಂದು ನಿಶ್ಚಯ ಮಾಡಿ, ದೊಡ್ಡ-ದೊಡ್ಡ ಮೊಕದ್ದಮೆಗಳಿಗೆ ದಿಲ್ಲಿ ಹಾಗೂ ಅನ್ಯಪ್ರಾಂತಗಳಿಗೆ ಕರೆದುಕೊಂಡು ಹೋಗುತ್ತಿದ್ದರು. ಅಲ್ಲಿ ಹೋಗಿ ಇವರು ತಮ್ಮ ಪ್ರತಿಭೆಯ ಚಮತ್ಕಾರವನ್ನು ತೋರಿಸುತ್ತಿದ್ದರು.

ಇವರಿಗೆ ರಾಷ್ಟ್ರಭಾಷೆಯಾದ ಹಿಂದಿಯ ಮೇಲೆ ಬಹಳ ಪ್ರೇಮ; ಅಲ್ಲದೆ ಇವರು ಜಯಪುರದಲ್ಲಿ ನಡೆದ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಕೂಡ ಆಗಿದ್ದರು.

ಇವರ ಜೀವನದಲ್ಲಿ ಸಾಹಿತ್ಯ ಮತ್ತು ರಾಜಕೀಯ ಒಟ್ಟೊಟ್ಟಿಗೆ ನಡೆಯುತ್ತವೆ. ಇವರು ಕಾಂಗ್ರೆಸಿನಲ್ಲೂ ಭಾಗವಹಿಸುತ್ತಿದ್ದರು; ಆದರೆ ಎಷ್ಟೊಂದು ಉಗ್ರವಾದಿಯಾಗಿರಲಿಲ್ಲ. ಇವರ ಯೋಗ್ಯತೆಗೆ ಪ್ರತಿಯೊಬ್ಬರೂ ತಲೆಬಾಗುತ್ತಿದ್ದರು. ೧೯೩೭ರಲ್ಲಿ ಪ್ರಥಮ ಬಾರಿ ಕಾಂಗ್ರೆಸ್ ಮಂತ್ರಿಮಂಡಳದ ರಚನೆಯಾದಾಗ, ಇವರು ಬೊಂಬಾಯಿ ಪ್ರಾಂತದಲ್ಲಿ, ಖೇರರ ಮಂತ್ರಿಮಂಡಳದಲ್ಲಿ ಗೃಹಮಂತ್ರಿಯಾಗಿ ನೇಮಿಸಲ್ಪಟ್ಟರು. ಇವರು ಸ್ವತಂತ್ರಭಾರತದ ಪ್ರಥಮ ರಾಜಕೀಯ ಏಜಂಟರಾಗಿ ಹೈದ್ರಾಬಾದ್ ಪ್ರಾಂತಕ್ಕೆ ಹೋದರು. ಅಲ್ಲಿ ಇವರು ಕೆಲವು ದಿನ ಬಂಧಿತರಾಗಿಯೂ ಇದ್ದರು. ಮುಕ್ತಿಯನಂತರ ಭಾರತದ ಸಂವಿಧಾನಸಭೆಯಲ್ಲಿ ಇವರು, ಒರ್ವ ಕಾನೂನು ಬಲ್ಲ ಪಂಡಿತರಾಗಿ ಸೇರಿದರು. ಭಾರತ ಸರ್ಕಾರದ ಮುಖ್ಯಮಂತ್ರಿಪದವಿಯಲ್ಲಿ ಕೂಡ ಹೆಚ್ಚು-ಕಡಿಮೆ ೩ ವರ್ಷಗಳ ತನಕ ಇವರು ಕೆಲಸ ಮಾಡಿದರು. ಇಂದು ಇವರು ಉತ್ತರಪ್ರದೇಶದ ಗವರ್ನರ್ ಜನರಲ್ಲರಾಗಿದ್ದಾರೆ.

ಬೊಂಬಾಯಿಯ "ಭಾರತೀಯ ವಿದ್ಯಾರ್ಥಿಭವನ"ದಲ್ಲಿ ಪ್ರಾಚ್ಯ ಹಾಗೂ ಪಾಶ್ಚಾತ್ಯ ವಿದ್ಯಾರ್ಥಿಗಳಿಗೆ ಓದುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದರ ಕೀರ್ತಿ ಕಲಾಪ್ರೇಮಿ ಮತ್ತು ಶಿಕ್ಷಾನುರಾಗಿ ಮುನ್ಶಿಯವರಿಗೆ ಮೀಸಲು. ಈ ವಿದ್ಯಾರ್ಥಿಭವನವನ್ನು ಸಂಪೂರ್ಣ ವಿಶ್ವವಿದ್ಯಾಲಯದ ರೂಪದಲ್ಲಿ ನೋಡಲು ಮುನ್ಶಿಯವರು ಇಚ್ಛಿಸುತ್ತಾರೆ.

ಇವರು ಗುಜರಾಥೀ ಸಾಹಿತ್ಯಕ್ಕೆ ಸಲ್ಲಿಸಿದ ಸೇವೆಯು, ಗುಜರಾಥೀ ಸಾಹಿತ್ಯದಲ್ಲಿ ಇವರಿಗೆ ಸನ್ಮಾನನೀಯ ಸ್ಥಾನವನ್ನು ದೊರಕಿಸಿಕೊಟ್ಟಿದೆ. ರಾಜನೀತಿಜ್ಞ ಮುನ್ಶಿ ಮತ್ತು ಬಾರಿಸ್ಟರ್ ಮುನ್ಶಿಯವರ ಹೆಸರನ್ನು ಒಂದು ಪಕ್ಷಕ್ಕೆ ಲೋಕ ಮರೆತರೂ, ಕತೆಗಾರ ಮುನ್ಶಿಯವರನ್ನು ಗುಜರಾಥ ಎಂದಿಗೂ ಮರೆಯಲಾರದು.

"ಶಾರದೆಯ ಅಪರಾವತಾರ"

(ಲಲಿತ ಪ್ರಬಂಧಸಂಕಲನ)

●

ಬರೆದವರು:

ಶ್ರೀ. ಎನ್. ಎಸ್. ಗದಗಕರ, ಬಿ. ಎ.

ಇದರಲ್ಲಿ ಚಿತ್ತಾಕರ್ಷಕವಾದ ಹನ್ನೊಂದು ಲಲಿತ-ಪ್ರಬಂಧಗಳಿದ್ದು ವಾಚಕರಿಗೆ ವಿಚಾರಪ್ರಚೋದನೆ ಮನೋರಂಜನೆ—ಎರಡನ್ನೂ ಒದಗಿಸುವಂತಿವೆ:

ಬೆಲೆ: ಹನ್ನೆರಡಾಣೆ

ಮುಖ್ಯ ಮಾರಾಟಗಾರರು :—

ಮನೋಹರ ಗ್ರಂಥ ಭಾಂಡಾರ,
ಧಾರವಾಡ

ಇವರ ಕೃತಿಗಳನ್ನು ಉಪನ್ಯಾಸ, ನಾಟಕ ಮತ್ತು ಇತರ— ಎಂದು ಮೂರು ವಿಧವಾಗಿ ವಿಂಗಡಿಸಬಹುದು:

ಉಪನ್ಯಾಸಗಳು:— ವೇರನೀ ವಸುಲಾತ್, ಪಾಟಣಾನೀ ಪ್ರಭುತಾ, ಗುಜರಾತ್ ನೋ ನಾಥ, ಪೃಥ್ವಿವಲ್ಲಭ, ರಾಜಾಧಿರಾಜ ಕೋನೋವಾಂಕ, ಸ್ವಪ್ನದೃಷ್ಟಾ, ಭಗವಾನ್ ಕೌಟಿಲ್ಯ, ಲೋಪಾಮುದ್ರಾ ಮತ್ತು ಮರೀ ಕಮಲಾ.

ನಾಟಕಗಳು:— ಬ್ರಹ್ಮಚರ್ಯಾಶ್ರಮ, ಕಾಕಾನಿ ಶಶಿ ಮತ್ತು ಧ್ರುವಸ್ವಾಮಿನೀದೇವಿ—ಇತ್ಯಾದಿ.

ಇತರ ಕೃತಿಗಳು:— ನವಲಿಕಾವೋ, ಬೀಜೂ ಬಾತೋ, ಗುಜರಾತ್ ಮತ್ತು ಅದರ ಸಾಹಿತ್ಯ (ಇಂಗ್ಲಿಷ್) ಮತ್ತು ಲಗ್ನ ಅನೇ ಪಜೀಸ್ ಇತ್ಯಾದಿ.

ಕೊನೆಯದಾಗಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಇವರಿಂದ ಗುಜರಾಥಿ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲುವುದರಲ್ಲಿ ಸಂದೇಹವಿಲ್ಲ.

ಪುಸ್ತಕ ವಿಮರ್ಶೆ

'ಹೇಮಂತಗಾನ'

ಶ್ರೀ. ಸಿ. ಆರ್. ರಾವ್, ಮುಂಬಯಿ

●

'ಹೇಮಂತಗಾನ' ಒಂದು ದುರಂತ ಕಾದಂಬರಿ. ಇದನ್ನು ಬರೆದವರು ಶ್ರೀಮಾನ್ ನಿ. ವ್ಯಾಸರಾವ್ ಬಲ್ಲಾಳ ಅವರು.

ಆದರ್ಶವಾದಿ ಯುವಕನಾದ ಅನಂತ ತನ್ನ ಆದರ್ಶಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿಲ್ಲದ ಹುಡುಗಿಯನ್ನು ವರಿಸಿದುದು; ಅದರ ಪರಿಣಾಮವಾಗಿ ಅವರಿಬ್ಬರ ಜೀವನಗಳು ಮುದುಡಿ ಮೂರಾಬಟ್ಟೆಯಾದುದು—ಈ ಕಾದಂಬರಿಯ ಮುಖ್ಯ ಕಥಾವಸ್ತುವೆಂದು ಹೇಳಬಹುದು. ಆದರೆ ಈ ಮೂಲಕಥೆಗೆ ಹೊಂದಿ ಉಪಕಥೆಗಳು (ಇವುಗಳನ್ನು ಪ್ರಸಂಗಗಳೆಂದರೂ ಸರಿಯಾದೀತು), ಅವುಗಳಲ್ಲಿರುವ ವ್ಯಕ್ತಿಗಳು ಕೂಡ ನೊಂದ ಹೃದಯದ ಬೆಂದ ಜೀವಿಗಳೇ! ಆದುದರಿಂದಲೇ ಈ ಕಾದಂಬರಿಯನ್ನು ದುರಂತಕಾದಂಬರಿಯೆಂದು ಹೇಳಬೇಕಾಗುವುದು.

ಜೀವನದಲ್ಲಿ—ಎಂದಮೇಲೆ ಸಾಹಿತ್ಯದಲ್ಲಿ ಕೂಡ—ದುರಂತವು ಬಹುಮುಖವಾಗಿರುತ್ತದೆ. ಆಶಾಭಂಗವು ಆ ಮುಖಗಳಲ್ಲೊಂದು. ಈ ಕಾದಂಬರಿಯಲ್ಲಿ ಚಿತ್ರಿತವಾಗಿರುವುದು ಆಶಾಭಂಗ. ತನ್ನ ಜೀವನವನ್ನು ತನ್ನ ಉದಾತ್ತಧ್ಯೇಯಸಾಧನೆಗೆ ಮೀಸಲಿಡಬೇಕೆಂದಿದ್ದ ಅನಂತನಿಗೆ ಭಾರತಿಯಂತಹ—ಅವಳ ತಂದೆಯ ಮಾತಿನಲ್ಲಿ ಹೇಳಬೇಕೆಂದರೆ "ವಿರಕ್ತಜಗತ್ತಿನಲ್ಲಿ ಅರಳುವ ಹೂವಲ್ಲದ" ಭಾರತಿಯಂತಹ—ಹೆಂಡತಿ ಸಿಕ್ಕಿದುದು ಅವನ ಆಶಾಭಂಗ. ತನ್ನ ಜೀವನವನ್ನು, ತನ್ನ ವಯಸ್ಸಿನ ಇತರ ಅನುಕೂಲರಾದ ಮನೆತನಸ್ಥ ಹೆಣ್ಣುಮಕ್ಕಳ ಜೀವನದಂತೆಯೆ ಸುಖಮಯವಾಗಿಟ್ಟುಕೊಳ್ಳಬೇಕು; ತನ್ನ ಗಂಡ-ಮಕ್ಕಳೊಂದಿಗೆ ಮುಂಬಯಿಯ ಮಹಾನಗರದಲ್ಲಿ ಚೊಕ್ಕತನದ ಚಿಕ್ಕ ಸಂಸಾರವನ್ನು ಹೂಡಬೇಕು; ತಾನು, ತನ್ನ ಪತಿ ಒಂದು ನಾಣ್ಯದ ಎರಡು ಮುಖಗಳಂತೆ ಒಬ್ಬರನ್ನೊಬ್ಬರು ಅಗಲಿರದೆ ಇರಬೇಕು—ಎಂದು ಹಂಬಲಿಸುತ್ತಿದ್ದ ಭಾರತಿಗೆ, ಬೆಳಗಿನಿಂದ ಮಧ್ಯರಾತ್ರಿಯ ತನಕ ಹೊರಗೆ ದುಡಿದು, ಮನೆಯಲ್ಲಿದ್ದ ಕೊಂಚಹೊತ್ತು ಕೂಡ ಸಿಡಿಮಿಡಿಗೊಂಡು, ಸಂಸಾರಸುಖವೆಂಬುದೆ ನನಸಾಗಲಾರದ ಕನಸೆನ್ನುವಂತೆ ವರ್ತಿಸುತ್ತಿದ್ದ ಅನಂತನಂತಹ ಗಂಡ ಸಿಕ್ಕಿದುದು ಅವಳ ಆಶಾಭಂಗ. ಇವರಿಬ್ಬರ ಮದುವೆಗೆ ಕಾರಣರಾದ ಶ್ರೀಪತಿರಾಯರದೊ? ಪಾಪ! "ತನ್ನಲ್ಲಿದ್ದ ಆದರ್ಶದೊಡನೆ ತನ್ನಲ್ಲಿಲ್ಲದ ಕೆಚ್ಚ"ನ್ನು ಬೆರಸಿ ಪ್ರತಿಭಾವಂತನಾದ ಅನಂತನನ್ನು ತಮ್ಮ ಅಳಿಯನನ್ನಾಗಿ ಮಾಡಿಕೊಂಡ ಶ್ರೀಪತಿರಾಯರಿಗೆ, ತಮ್ಮ ಪ್ರೀತಿಯ ಮಗಳ ವಿವಾಹಜೀವನ ಸುಗಮವಾಗದಿದ್ದ ಆಶಾಭಂಗ.

ಆದರೆ ಈ ರೀತಿ ಯಾರ ಜೀವನದಲ್ಲಿಯೂ ಸುಖದ ನೆರಳು ಸಹ ಬೀಳದಂತೆ ಆಗಲು ಕಾರಣವೇನು? ಅವರ ವ್ಯಕ್ತಿತ್ವವೆ? ಸುತ್ತಣ ಪರಿಸ್ಥಿತಿಯೆ? ಎರಡೂ ಎನ್ನಬಹುದು. ಅನಂತನಿಗೆ ಪ್ರಪಂಚವೇ ತನ್ನ ಸಂಸಾರವಾದರೆ, ಭಾರತಿಗೆ ತನ್ನ ಸಂಸಾರವೇ ಪ್ರಪಂಚ. ಅನಂತನಿಗೆ ಬಡತನದ ಬೆಂಬದಿಗೆ ಸಿಕ್ಕಿ ಬಸವಳಿದಿದ್ದ ಸಹಸ್ರಾರು ಜೀವಿಗಳ ಬಗ್ಗೆ ಅನುಕಂಪವಾದರೆ, ಭಾರತಿಗೆ ಅಂತಹರ ಬಗ್ಗೆ ಅಸಡ್ಡೆ, ಅಸಹನೆ. ಈ ವಿಮುಖತೆಯನ್ನು ಬಲ್ಲಾಳರು ಬಹು ಚೆನ್ನಾಗಿ ಪುಸ್ತಕದ ಮೊದಲಲ್ಲೇ— ಎಂದರೆ ಉಡುಪರ ಮನೆಯಲ್ಲಿ ಭಾರತಿಯ ನಡೆನುಡಿಯಲ್ಲೇ ಚಿತ್ರಿಸಿದ್ದಾರೆ. ಅನಂತನ ಕಾಗದದಲ್ಲಿ ಕೂಡ ರಾಜಕೀಯ ಅಥವಾ ಕಾರ್ಮಿಕರ ಪ್ರಶ್ನೆಗಳ ಬಗ್ಗೆ ಬರೆದಿದ್ದ ಪಂಕ್ತಿಗಳನ್ನು ಕೂಡ ಭಾರತಿ ಓದುತ್ತಲೇ ಇರಲಿಲ್ಲ! ಅವಳಿಗೆ ಬೇಕಾದುದು ಆದರ್ಶವಾದಿಗಳ ಮುಗಿಲ ಮಲ್ಲಿಗೆಯಲ್ಲ! ಇಂತಹವಳ ಮುಂದೆ ತನ್ನ ಹೃದಯವನ್ನು ತೋಡಿಕೊಂಡು ಅನಂತನು ಬದುಕಿರಬೇಕಾದರೂ ಹೇಗೆ? ಇಂತಹ ಇಜ್ಜೋಡಿಯಾದ ಸಂಸಾರರಥವನ್ನು ನಡೆಸುವ ಸಾರಥಿಯಾಗಲು ಶ್ರೀಪತಿರಾಯರು ಅಸಮರ್ಥರಾದರು.

ನಾಲ್ವತ್ತೆರಡರಲ್ಲಿ ವ್ಯಾಸಂಗಕ್ಕೆ ಶರಣುಹೊಡೆದು, ತನ್ನ ಧ್ಯೇಯಸಾಧನೆಗೆ ಮುಂಬಯಿಯನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು, ಅಲ್ಲಿ ಅನೇಕ ವಿಧದ ಚಟುವಟಿಕೆಗಳಲ್ಲಿ ಭಾಗವಹಿಸಿದ ಅನಂತನ ದುರಂತಜೀವನವನ್ನು ಚಿತ್ರಿಸಿರುವುದರಲ್ಲಿ ಬಲ್ಲಾಳರು ಪೂರ್ಣ ಯಶಸ್ವಿಯಾಗಿದ್ದಾರೆ. ದೇಶದ ಸ್ವಾತಂತ್ರ್ಯಸಂಗ್ರಾಮದಲ್ಲಿ ಯೋಧನಾಗಿ, ಸ್ವಾತಂತ್ರ್ಯ ಬಂದನಂತರ—ತನ್ನ ಮನಸ್ಸಿಗೆ ಪೂರ್ಣ ಒಪ್ಪಿಗೆಯಾಗದ ರೀತಿಯಲ್ಲಿ ಬಂದನಂತರ—ಕಾರ್ಮಿಕರ ಸಮಸ್ಯೆಗಳನ್ನು ಕುರಿತು ಯೋಚಿಸಿ, ಅವರ ಸಂಘಗಳಲ್ಲಿ ಸಂಚಾಲಕನಾಗಿ, ಮುಂಬಯಿ ಕನ್ನಡಿಗರ ಕನ್ನಡತನಕ್ಕೆ ಕನ್ನಡಿಯಂತಿದ್ದ ಒಂದು ಪತ್ರಿಕೆಯ ಸಂಪಾದಕನಾಗಿ, ಹೃದ್ಗತನಾದ ಸಂಸಾರಿಯಾಗಿ, ನಿರುದ್ಯೋಗಿಯಾಗಿ, ಕೊನೆಗೆ ಕಾಪುನೊಡನೆ ಕಣ್ಣುಮುಚ್ಚಾಲೆಯಾಡಿ, ತಪಸ್ವಿನಿಯನ್ನು ವಿಲಾಸಿನಿಯೆಂದು ತಿಳಿಯುವಷ್ಟು ಮತಿಭ್ರಾಂತನಾಗಿ, ತನ್ನ ತಪ್ಪಿಗೆ ಕ್ಷಮಾಯಾಚನೆಯನ್ನು ಮಾಡುವ ಪ್ರಯಾಣವನ್ನೇ ಅಂತಿಮಯಾತ್ರೆಯನ್ನಾಗಿಸಿಕೊಂಡ ದುರಂತತೆಯಲ್ಲೇ ಅನಂತನ (ವ್ಯಕ್ತಿತ್ವದ) ಅನಂತತೆಯಿದೆ— ಎಂದರೆ ತಪ್ಪಾಗಲಾರದು.

ಅಂತಹ ಅನಂತನನ್ನು ಮತಿಭ್ರಾಂತನನ್ನಾ ಮಾಡಿದ ವ್ಯಕ್ತಿಯೇ ಈ ಕಾದಂಬರಿಯ ಉಪನಾಯಕಿ (ಈ ಶಬ್ದವನ್ನು ಉಪಯೋಗಿಸಬಹುದಾದರೆ) ಇಂದಿರಾ! ಇಂದಿರೆಯೂ ಭಗ್ನಹೃದಯಿನಿಯೇ! ಒಂದು ದೃಷ್ಟಿಯಿಂದ ಭಾರತಿಯಂತೆಯೇ ಇವಳ ಸಂಸಾರದ ಕನಸೂ ಮಣ್ಣುಪಾಲಾಗಿತ್ತು. ಆದರೆ ಅವಳ ಪತಿಯು ಇದ್ದಷ್ಟು ದಿವಸಗಳಾದರೂ ಅನುರೂಪನಾಗಿದ್ದ. ಇಬ್ಬರೂ ಆದರ್ಶವಾದಿಗಳು. ಕೇಶವನು ಬದುಕಿದ್ದಿದ್ದರೆ ಬಹುಶಃ ಇಂದಿರೆ-ಕೇಶವರ ಸಂಸಾರ ಮಾದರಿಯ ಸಂಸಾರವಾಗುತ್ತಿದ್ದಿತೊ ಏನೊ! ಆದರೆ, ವಿಧಿವಿಲಾಸ! ಕೇಶವ ಹುತಾತ್ಮನಾಗಿ, ಇಂದಿರೆಯ ಜೀವನ ಬರಡಾಯಿತು. ಆದರೆ ಧೀರೆ-ಗಂಭೀರೆ-ಇಂದಿರೆ ಸಾಮಾನ್ಯ ಹೆಂಗುಸಲ್ಲ. ಗಂಡನ ಮರಣದ ನಂತರ ಕೂಡ ಅವನ ಸ್ಮರಣೆಯಲ್ಲಿ ಅವನ ಆದರ್ಶಗಳನ್ನು ಮಂಡಿಸುತ್ತಿದ್ದ 'ಕಹಳೆ'ಯಲ್ಲಿ ಸಮಾಧಾನ ತೃಪ್ತಿಗಳನ್ನು ಪಡೆಯುತ್ತಿದ್ದಳು. ಅವಳು ಅನಂತನ ಬಗ್ಗೆ ತಾಳಿದ್ದ ಆತ್ಮೀಯತೆಗೆ ಕಾರಣ ಅವನ ಮತ್ತು ಕೇಶವನ ಧೋರಣೆಗಳ ಸಾಮ್ಯತೆಯೇ. ಇಂತಹ ಹೆಣ್ಣುವ್ಯಕ್ತಿ. ಬಹುಶಃ ಬೇರೆ ಯಾವ ಕನ್ನಡ ಕಾದಂಬರಿಯಲ್ಲಿಯೂ ಚಿತ್ರಿತವಾಗಿಯೇ ಇಲ್ಲ. ಅವಳು, ಭಾರತಿಯ ಬಗ್ಗೆ ತೋರುವ ಕಳಕಳಿ—ಅನಂತನ ಚಿತೆಯ ಇದಿರಿಗೂ ಭಾರತಿಯ ಚಿಂತೆಯನ್ನು ಮಾಡುತ್ತಿದ್ದ ಇಂದಿರೆ 'ಹೊಸಲು ದಾಟಿದ ಹೆಣ್ಣು ಕೂಡ ಮಂಗಳಸೂತ್ರಕ್ಕೆ ಬೆಲೆ ಕೊಡುತ್ತಾಳೆ' ಎಂಬುದನ್ನು ತೋರಿಸುತ್ತಾಳೆ. ಇದು ನಮ್ಮ ಅನೇಕ 'ಪ್ರಗತಿಶೀಲ'ರ ಕಣ್ಣು ತೆರೆಯಿಸಬೇಕಲ್ಲವೆ?

ಅನಂತನ ಮುಂಬಯಿಯ ಚಟುವಟಿಕೆಗಳಲ್ಲಿ ಅವನಿಗೆ ಉತ್ಸಾಹ ತುಂಬಿ ಅವನ ಆದರ್ಶವಾದಕ್ಕೆ ವಾಸ್ತವತೆಯ ರೂಪುಕೊಟ್ಟು ಅವನಲ್ಲಿದ್ದ ಪ್ರತಿಭೆಯನ್ನು ಬೆಳಕಿಗೆ ತರಲು ನೆರವಾದ ಎರಡು ವ್ಯಕ್ತಿಗಳು ರಾಜೀವ ಮತ್ತು ಸೋಮಯಾಜಿಗಳು.

ರಾಜೀವನು ಏನು? ನಿರಶಾವಾದಿಯೇ, ಕಮ್ಯುನಿಷ್ಟೆ! ಅವನ ನಿಲುವು ಏನು, ಒಲವು ಮತ್ತು ಒಲುಮೆ ಎಂತಹದು? ಇದೊಂದು ಗೂಢ ಪ್ರಶ್ನಾವಳಿ! ಆದರೆ ಒಂದು ಮಾತ್ರ ನಿಜ— ಅವನು ಕರ್ಮಯೋಗಿ. ಸುಮ್ಮನೆ ಒಣ ಚರ್ಚೆಗೂ ಅವನಿಗೂ ಗಾವುದ ದೂರ. ತನ್ನ ಸುತ್ತಲಿನ ವಾತಾವರಣದಿಂದ ಅವನ ಮನಸ್ಸು ಕಹಿಯಾಗಿದೆ, ನಿಜ. ಸಮಾಜದಲ್ಲಿಯ ಅನ್ಯಾಯವನ್ನು ನೋಡಿ ಅವನಿಗೆ ರಕ್ತ ಕುದಿಯುತ್ತಿದೆ. ಆದುದರಿಂದಲೇ ಒಮ್ಮೊಮ್ಮೆ ಒಗಟಿಯಾಗುತ್ತಾನೆ. ಆದರೆ ಆ ಕಹಿಮಾತಿನಲ್ಲಿರುವ ಹೃದಯದ ಅನುಕಂಪ, ಹೊರಗಿನ ನೈಷ್ಠುರ್ಯದಲ್ಲಿ ಅಡಗಿರುವ ಮಾನವತೆ ನಮ್ಮನ್ನು ಮಣಿಸುತ್ತದೆ. "ನನ್ನನ್ನು ದಯವಿಟ್ಟು ದೇವರಿಗೆ ಹೋಲಿಸಬೇಡಿ" ಎಂದು ಹೇಳಿದ ರಾಜೀವನ ಮಾನವತೆ ದೇವಭಕ್ತರಿಗಿದ್ದಿದ್ದರೆ! ಇದ್ದಿದ್ದರೆ— ರೆ! ನೊಂದುಂಡೂ ನಗುವ ಧೀರತೆಯಿದ್ದ ರಾಜೀವ, ನಿರುತ್ಸಾಹಿಗಳಿಗೆಲ್ಲಾ ಉತ್ಸಾಹದ ಅಕ್ಷಯಪಾತ್ರೆಯಾಗಿದ್ದ ರಾಜೀವ, ಸಾಹಿತ್ಯದಿಗಂತದಲ್ಲಿ ಯಾವಾಗಲೂ ರಾರಾಜಿಸುವ ಧ್ರುವನಕ್ಷತ್ರ.

ರಾಜೀವನ ಉತ್ಸಾಹದ ಕುದುರೆಗೆ ವಿವೇಕದ ಕಡಿವಾಣವನ್ನು ಹಾಕಿದ್ದವರು ಶ್ರೀನಿವಾಸ ಸೋಮಯಾಜಿಗಳು. ಅವರ ಸಂಸಾರವೇ ವಿಚಿತ್ರ. ಬೇಗನೆ ತೀರಿಕೊಂಡಿದ್ದ ಹೆಂಡತಿಯನಂತರ, ಇದ್ದ ಇಬ್ಬರ ಹುಡುಗರನ್ನು ಕಳೆದುಕೊಂಡ—ಕೇಶವ ಮತ್ತು ರಾಜೀವ—ಅಡ್ಡದಾರಿಗೆ ಬಿದ್ದಿದ್ದ ಮೂರನೆಯವನಾದ ಅನಂತನನ್ನು ಮಾರ್ಗದರ್ಶಿಸುವಾಗಲೇ ಅವನ ವಿಯೋಗವನ್ನು ಸಹಿಸಬೇಕಾಗಿ ಬಂದದ್ದು ಅವರ ದುರದೃಷ್ಟ. ಮುಂಬಯಿಗೆ ಬಂದ ಅನೇಕ ಆದರ್ಶವಾದಿ ಕನ್ನಡಿಗರಲ್ಲಿ ಒಬ್ಬರಾದವರು ಸೋಮಯಾಜಿಗಳು. ಅಂತಹವರ ಜೀವನದ ಕಹಳೆಯ ಉಸಿರೇ ಉಡುಗಿಹೋದದ್ದು ಎಂತಹ ಶೋಚನೀಯ ದುರಂತ!

ಇವರೆಲ್ಲರ ಆಶಾಭಂಗಕ್ಕೆ ಕಾರಣ ಯಾವುದೋ ಒಂದು ಆದರ್ಶವಾದರೆ, ಅಂತಹ ಆದರ್ಶದ ಗೊಡವೆಗೆ ಹೋಗದೆಯೂ ನಿರಾಶೆಯಿಂದ ದುರಂತಚಿತ್ರವನ್ನು ನಾವು ಕಾಣುವ ಸಂಸಾರ ಉಡುಪರದು. ಅವರ ಮುಖ್ಯ ಶತ್ರು ಬಡತನ. ಆದರಿಂದ ಅವರ ಮನೆಯೆಂದರೆ ಮಸಣದ ಸಮಾನ—ಭಾರತಿಯ ಹುಟ್ಟೂರಾದರೂ ಅವರ ಸಂಸಾರಚಿತ್ರಣದಲ್ಲಿ ಬಲ್ಲಾಳರ ಕೌಶಲ್ಯ ಮೆಚ್ಚುವಂತಹದು. ನೇರವಾಗಿ ಅವರ ಮೇಲೆ ಅಭಿಪ್ರಾಯ ಚೆಲ್ಲದೆ, ಅವರ ದೌರ್ಜನ್ಯಕ್ಕೆಲ್ಲಾ ಬಡತನವೇ ಕಾರಣವೆಂಬ ಪ್ರಚಾರಮಾಡದೆ, ಸೂಚ್ಯವಾಗಿ, ಆದರೂ ಪರಿಣಾಮಕಾರಿಯಾಗಿ—ಉಡುಪರ ಮನಸಿನ ಮುಂದಿಗೆ ಬೇಯುವಂತಿದ್ದರೆ ಅವರಲ್ಲಿಯೂ ಹೆಚ್ಚು ಮಾನವತೆಯನ್ನು ಕಾಣಬಹುದಾಗಿತ್ತು—ಎಂದು ನಮಗೆ ಮನದಟ್ಟು ಮಾಡಿಕೊಟ್ಟಿದ್ದಾರೆ (ಉದಾ: ಭಾರತಿಯ ಬಳೆಯ ಪ್ರಸಂಗ) ಆದರೆ ಮನಸ್ಸಿನ ಮುಂದಿಗೆ ಬೇಯಬೇಕಾದರೆ ಕಿಸೆಯ ಕಾಖ ಅಗತ್ಯವಲ್ಲದೆ?

ಹೀಗೆ ಸುತ್ತುಮುತ್ತು ಇರುವ ದುಃಖದ ಮುಗಿಲ ಮಧ್ಯೆ ಒಂದೆರಡು ಸುಖದ ನಕ್ಷತ್ರಗಳು ಮಿನುಗುಟ್ಟುತ್ತವೆ. ಅವು ಸುಶೀಲೆಯ ಮತ್ತು ಸುನಂದೆಯ ಸಂಸಾರಗಳು; ಆದರೆ ಸುನಂದೆಯ ಗಂಡ ರಾಧಾಕೃಷ್ಣನನ್ನು, ಅನಂತನ ಹಿರಿಮೆಯನ್ನು ಎತ್ತಿ ತೋರಿಸುವುದಕ್ಕೆ ಮಾಡಿದಂತಿದೆ. ಅವನು ಅನಂತನನ್ನು ಕಮ್ಯುನಿಸ್ಟ್ ಎಂಬುದನ್ನು ಕೇಳಿದಾಗ, ನಮಗೆ ವಿಷಾದವೂ ವಿನೋದವೂ ಒಟ್ಟಿಗೇ ಉಂಟಾಗುತ್ತವೆ. ಅವನು ಗ್ರ್ಯಾಜುಯೇಟ್ ಎಂಬುದನ್ನು ನೆನೆದಾಗಲಂತೂ, 'ಈಗಿನ ವಿದ್ಯಾಭ್ಯಾಸದಲ್ಲಿ ಹುರುಳಿಲ್ಲ' ಎಂಬುವ ಅನಂತನ ಮತವನ್ನೇ ಸಮರ್ಥಿಸಬೇಕೆನ್ನಿಸುತ್ತದೆ.

ಬಲ್ಲಾಳರು ತಮ್ಮ ಕಾದಂಬರಿಯ ಮುಖ್ಯಕ್ಷೇತ್ರವಾಗಿ ಮುಂಬಯಿಯನ್ನು ಆರಿಸಿರುವುದು ಉಚಿತವೇ. 'ನಿನ್ನ ದರ್ಪಣದಲ್ಲಿ ಜಗದ ಬಿಂಬವ ಕಂಡೆ' ಎಂದು ಮುಂಬಯಿಯನ್ನು ಕುರಿತು ಮುಗಳಿಯವರು ಹೇಳುವಂತೆ, ಇದು ಜಗತ್ತಿನ ಎಲ್ಲ ರೀತಿಯ ವೈಶಿಷ್ಟ್ಯಗಳನ್ನೊಳಗೊಂಡ ಮಹಾನಗರ. ಮುಂಬಯಿಯ ಚಿತ್ರಣವೇ ಕನ್ನಡ ಕಾದಂಬರಿಕಾರರಿಗೆ ಒಂದು ಫ್ಯಾಷನ್ ಆಗಿರುವ ಕಾಲದಲ್ಲಿ ಫ್ಯಾಷನ್ನಿಗ ಅಲ್ಲದೆ ಉಪಯುಕ್ತತೆಗೆ ಅದನ್ನು ಉಪಯೋಗಿಸಿಕೊಂಡಿರುವುದು ಸ್ತುತ್ಯವಾಗಿದೆ. ~~—~~ ಮಜಗಾಂವದಲ್ಲಿ ಮಲಬಾರ ಹಿಲ್ಲನ್ನು ತೋರಿಸುವ ಕಾದಂಬರಿಕಾರರು, ಬಲ್ಲಾಳರ ಕಾದಂಬರಿಯನ್ನು ಓದಿದರೆ ಉತ್ತಮ.

ಇದರಲ್ಲಿ ಕಾರ್ಮಿಕ ಸಂಘಗಳ ಬಗ್ಗೆ ಬಲ್ಲಾಳರು ಬಹಳ ಶ್ಲಾಘ್ಯ-ವಾಗಿ ಚಿತ್ರನಿರೂಪಣೆ ಮಾಡಿದ್ದಾರೆ. ಅದರಲ್ಲಿಯೂ ಕೆಲಸ ಕಳೆದು ಕೊಂಡು ಸಂಘಗಳ ಸಹಾಯದಿಂದಲೇ ಜೀವನ ನಡೆಸುತ್ತಿರುವ ವ್ಯಕ್ತಿ ಸುಂದರಂ ನಮ್ಮ ಕಣ್ಣ ಮುಂದೆ ಸುಳಿಯುತ್ತಾನೆ. ಆದರೆ ಬಲ್ಲಾಳರು Caltex ನಲ್ಲಿದ್ದಾರೆಂದ ಮೇಲೆ ಆಶ್ಚರ್ಯವಲ್ಲ. ಮುಷ್ಕರದ ವಿಷಯ ಕೂಡ ಬಲ್ಲಾಳರು ಬರೆದಿರುವುದು ಸಮಂಜಸವಾಗಿದೆ. ಮುಖಂಡರಿಗೆ ಮಾತ್ರ ಮುಖಪ್ರಕ್ಷಾಳನವಾಗಿ ಬಾಕಿಯವರಿಗೆ ತಕ್ಕಮಟ್ಟಿಗೆ ಅನುಕೂಲವಾಗುವುದು ಸಹಜವೇ ಆಗಿದೆ. ಆದರೆ ಇಲ್ಲಿ ಒಂದು ಸಂಶಯಬಂದಿದೆ. ಅನಂತ ರಜೆ ಯಾವಾಗಲೂ ತೆಗೆದುಕೊಂಡಂತೆ ಕಾಣುವುದಿಲ್ಲ; ಅಂತಹುದರಲ್ಲಿ ನಾಲ್ಕೈದು ವರ್ಷ ಸರ್ವೀಸಾದವನಿಗೆ ಕೇವಲ ಹತ್ತು ದಿನ ಮಾತ್ರ ಮೆಡಿಕಲ್ ಲೀವೆನ್ನುವಾಗ ನಂಬುವುದು ಕಷ್ಟ.

ಒಟ್ಟಿನಲ್ಲಿ 'ಹೇಮಂತಗಾನ' ಉತ್ತಮ ಕಾದಂಬರಿ. ಜೀವನವನ್ನು ಬಲ್ಲಾಳರು ಆಳವಾಗಿ ಬಲ್ಲರು. ಸೂಕ್ಷ್ಮನಿರೀಕ್ಷಣೆಯ ಜೊತೆಯಲ್ಲಿಯೇ ನಿರೂಪಣೆಯ ಶಕ್ತಿಯು ಇರುವುದರಿಂದ, ಹೃದಯಂಗಮ-ವಾದ ರೀತಿಯಲ್ಲಿ ಬರೆಯಬಲ್ಲರು. ಎಂತಲೇ, ಸಂತೃಪ್ತಿ-ಸಂತಸಗಳ ಬೀಡಾದ ಶ್ರೀಪತಿರಾಯರ ಸಂಸಾರವಾಗಲಿ, ಕಾರ್ಪಣ್ಯದ ತವರಾದ ಉಡುಪರ ಮನೆಯಾಗಲಿ, ಆದರ್ಶವಾದಿಗಳಾದ ಅನಂತ, ರಾಜೀವ, ಇಂದಿರೆಯರಾಗಲಿ, ವ್ಯವಹಾರಚತುರರಾದ ನಾಗೇಶರಾಯ- ರಾಧಾ-ಕೃಷ್ಣರಾಗಲಿ—ಎಲ್ಲರನ್ನೂ ಇವರು ಸ್ಪಷ್ಟವಾಗಿ ಚಿತ್ರಿಸಬಲ್ಲರು.

ಕನ್ನಡ ಕಾದಂಬರಿಗಳು ಹೇರಳವಾಗಿ ಬರುತ್ತಿವೆ. ಆದರೆ ಅನೇಕವುಗಳಲ್ಲಿ ಭವ್ಯತೆಯಿಲ್ಲ ದಿವ್ಯತೆ ಇಲ್ಲ ಕಾದಂಬರಿಯ ಮಟ್ಟ ಇಳಿಮುಖವಾಗುತ್ತಿದೆ—ಎಂಬ ನಿರಾಶಾವಾದಕ್ಕೆ ಇದು ಒಳ್ಳೇ ಉತ್ತರ. ಕಾದಂಬರಿ ಇಳಿಮುಖವಾಗುತ್ತಿರಬಹುದು. ಆದರೆ ಒಳ್ಳೆಯವು ಬರುತ್ತಿವೆ. "If winter comes, can spring be far behind!" ಎಂದು ಹೇಮಂತಗಾನವೇ ಸಾರುತ್ತದೆ.

ಕಾಡು-ಮಲ್ಲಿಗೆ

"ನಾರಂಗಿ" ಭಟ್ಟ, ಮುಂಬಯಿ

೧

ದಿವ್ಯತೆಯನರಸಿತ್ತು ಕಾಡು, ಮಲ್ಲಿಗೆಯಾಗಿ—
ಹಸಿರುಹಾಸಿನ ಮೇಲೆ ಬಿಳಿಯ ದೇಹವನಿಟ್ಟು
ಮೇಲೆ ಅತ್ತರ ಕಂಪು— ಮೈಯೆಲ್ಲ ಇಡಿಗಿತ್ತು
ದಿವ್ಯತೆಯ ಬಯಸಿತ್ತು ಕಾಡು, ಮಲ್ಲಿಗೆಯಾಗಿ.
ಬಯಸಿತ್ತು ದಿವ್ಯತೆಯ ಕಾಡು ಇದಕೂ ಹಿಂದೆ
ಮಲ್ಲಿಗೆಯ ಮೈರೂಹು ಪಡೆವುದಕು ಮುಂಚೆ—
ಸಪ್ತವಿಧವರ್ಣಗಳ ಹೂವ ಮೈಯನು ಹೊತ್ತು
ಕಾಡವಧು ಕಾದಿತ್ತು, ದಿವ್ಯತೆಯ ಬಯಸಿತ್ತು—
   ಚಾತಕವು ಬೇಡಿತ್ತು ಮಳೆನೀರನಂದು
   ಚಕೋರ ಕನಲಿತ್ತು ಚಂದ್ರಮನಿಗೆಂದು—
ಕಾಡು ಕಾಣದೆ ಇತ್ತು ದಿವ್ಯತೆಯನಂದು....
ಬಂದಿರಲು ಗುಂಗಿಹುಳ- ಜೇನ್ನೊಣದ ಹಿಂಡು.

೨

ಇಂದು ರೂಪವೆ ಬೇರೆ, ಬಿಳಬಿಳಿದು ಬಣ್ಣ
ದಿವ್ಯತೆಯನರಸಿತ್ತು ಕಾಡು ಮಲ್ಲಿಗೆಯಾಗಿ—
ಹೋದನೇ ಹರಿಕಾರ ಒಸಗೆಯನು ಹೊತ್ತು
ಬಾರನೇ ವರಮಾರ ದಿವ್ಯತೆಯನುಟ್ಟು!
ಕಾದೆ ಕಾದಿತು ಕಾಡು, ಹಾಡ ಹೇಳಿತು ಹರೆಯ
ಯೌವನದ ಮದಗಂಪ ಹೂವು ಹರಡಿತ್ತು
ದಿವ್ಯತೆಯನರಸಿತ್ತು ಕಾಡು, ಮಲ್ಲಿಗೆಯಾಗಿ.

೩

ಕೊನೆಗೂ ಬಂದನೆ ಇನಿಯ
ಮತ್ತದಾರದು ಸನಿಯ
ರೆಕ್ಕೆಗಳ ಬಡಿದಾಟ ಪಿಸುಪಿಸನೆ ಮಿತಮಾತು.
ಕಾಣದೆಯೆ ಕಂಡಿತ್ತು ಮನವಾರೆ ನಂಬಿತ್ತು
ಮಲ್ಲಿಗೆಯು ಮಲಗಿತ್ತು ದಿವ್ಯತೆಯನೋತು.

೪

ಸನಿಯ ಮರದಲಿ ಕುಳಿತ ಕಾಮುಕತೆ ಬಂದಿತ್ತು
ಜೇನಿನಂತಹ ಮಾತು—ಗುಂಗಿಹುಳದಾ ರೂಪು
ದಿವ್ಯತೆಯನರಸಿದ್ದ ಕಾಡು ಕಂಡಿತ್ತಾಗ
ತನ್ನ ಮೈ ಬಳಸಿದ್ದ ಕಾಮುಕರುಡು.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಬಿನ್ನವಿಸಿಕೊಂಡಂತೆ 'ನವಜೀವನ' ಕವಿತೆಯನ್ನು ಕುರಿತು ೮ ಜನರಿಂದಲೂ 'ಬೋರಿವಿಲಿ-ಲೋಕಲ್' ಎಂಬ ಸಣ್ಣಕತೆಯನ್ನು ಕುರಿತು ೧೧ ಜನರಿಂದಲೂ ವಿಮರ್ಶೆಗಳು ಬಂದಿವೆ. ಹೆಚ್ಚು ಹೆಚ್ಚು ಜನ ವಿಮರ್ಶಕರು ಈ ವಿಭಾಗದ ಪ್ರಯೋಜನವನ್ನು ಹೆಚ್ಚಿಸಲು ಮುಂದೆ ಬರುತ್ತಿರುವುದು ಸಂತೋಷದ ಸಂಗತಿಯಾಗಿದೆ.

'ನವಜೀವನ' ಕವಿತೆಯನ್ನು ವಿಮರ್ಶಿಸಿದವರು:

೧ ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಹಳ್ಳೂರು, ಜಿ. ವಿಜಾಪುರ. ೨ ಶ್ರೀ. ಎನ್. ನಾರಾಯಣ ಬಲ್ಲಾಳ, ಪತ್ರಿಕಾವ್ಯವಸಾಯಿ, ತೆಂಕಪೇಟೆ—ಉಡುಪಿ. ೩ ಶ್ರೀ. ಶ್ಯಾಮ ಗೋವಿಂದ ಕುಲಕರ್ಣಿ ಕೇಸ್ತಿ, ಜಿ. ಬೆಳಗಾಂವಿ. ೪ ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೫ ಶ್ರೀ. ಜೆ. ಮಲ್ಲಾರಿಭಟ್ಟರು, ಹೊಸಪೇಟೆ. ೬ ಗುರುನಾಥ ವಿ. ಕುಲಕರ್ಣಿ, ಸೀನಿಯರ್ ಬಿ. ಎ. ಜನತಾ ಕಾಲೇಜ್, ಧಾರವಾಡ. ೭ ಶ್ರೀ. ಎನ್. ಭೀಮಭಟ್ಟ 'ಸಾಹಿತ್ಯಶಿರೋಮಣಿ' ಕನ್ಯಾನ (ದ. ಕ. ಜಿಲ್ಲಾ). ೮ ಶ್ರೀ. ಎಂ. ಆರ್. ಭಟ್ಟ, ಮದ್ಗುಣಿ—ಕುಮಟಾ.

'ಬೋರಿವಿಲಿಲೋಕಲ್' ಸಣ್ಣಕತೆಯನ್ನು ವಿಮರ್ಶಿಸಿದವರು:

೧ ಶ್ರೀ. ಹೆಚ್. ಆರ್. ಶಾಸ್ತ್ರಿ, ಸುರಪುರ, ನಿಜಾಮಕಾಲೇಜ್, ಹೈದರಾಬಾದ್. ೨ ಶ್ರೀ. ಶ್ಯಾಮ ಗೋವಿಂದ ಕುಲಕರ್ಣಿ, ಕೇಸ್ತಿ, ಜಿ. ಬೆಳಗಾಂವಿ. ೩ ಶ್ರೀ. ಕುಂಬ್ಳೆಕೆರೆ ಭಾಸ್ಕರರಾಯ, ವಿದ್ಯಾದಾಯಿನೀ ಹೈಸ್ಕೂಲ್, ಸುರತಕಲ್ಲು ೪ 'ಮನ್ಮಥಸಖ' ಧಾರವಾಡ. ೫ ಶ್ರೀ. ಬಿ. ವಿರೂಪಾಕ್ಷಭಟ್ಟ, ಹೊಸಪೇಟೆ. ೬ ಶ್ರೀ. ಕೆ. ಎಸ್. ಶರ್ಮಾ ಕಾಸರಗೋಡು. ೭ ಶ್ರೀ. ಲಕ್ಷ್ಮೀಕಾಂತ, ಹುಬ್ಬಳ್ಳಿ. ೮ ಶ್ರೀ. ಎಂ. ಎಸ್. ಜೋಶಿ, ಧಾರವಾಡ. ೯ ಶ್ರೀ. ಹೆಚ್ ನಾಗರಾಜರಾವ್, ಕೂಡ್ಲಿಗಿ. ೧೦ ಶ್ರೀ. ಪಂಚಾಕ್ಷರಿ ಶಿ. ಹೊಸಮಠ, ಹಡಗಿನಹಾಳ. ೧೧ ಶ್ರೀ. ಗುರುನಾಥ ವಿ ಕುಲಕರ್ಣಿ, ಸೀನಿಯರ್ ಬಿ. ಎ., ಜನತಾ ಕಾಲೇಜು, ಧಾರವಾಡ

ಎಲ್ಲ ವಿಮರ್ಶೆಗಳನ್ನೂ ನಮ್ಮ ಸಂಪಾದಕಸಮಿತಿಯವರೇ ನೋಡಿ, ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ:

'**ನವಜೀವನ**' ಕವಿತೆಯ ವಿಮರ್ಶೆಗಳಲ್ಲಿ ಶ್ರೀ. ಎನ್. ಭೀಮಭಟ್ಟ, ಕನ್ಯಾನ ಮತ್ತು ಶ್ರೀ. ಕೆ. ಎಸ್ ಶರ್ಮಾ ಇವರವು ಅತ್ಯುತ್ತಮವಾಗಿರುವುವು. ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ)ಯವರ ವಿಮರ್ಶೆ ಉತ್ತಮವಾಗಿದೆ. ಶ್ರೀ. ಶ್ಯಾಮ ಗೋವಿಂದ ಕುಲಕರ್ಣಿ, ಶ್ರೀ. ನಾರಾಯಣ ಬಲ್ಲಾಳ ಮತ್ತು ಶ್ರೀ. ಗುರುನಾಥ ಕುಲಕರ್ಣಿಯವರ ವಿಮರ್ಶೆಗಳು ಚೆನ್ನಾಗಿವೆ.

'**ಬೋರಿವಿಲಿ ಲೋಕಲ್**' ಕತೆಯನ್ನು ವಿಮರ್ಶಿಸಿದವರಲ್ಲಿ ಶ್ರೀ. ಕುಂಬ್ಳೆಕೆರೆ ಭಾಸ್ಕರರಾಯ, ಶ್ರೀ. ಕೆ. ಎಸ್. ಶರ್ಮಾ, ಶ್ರೀ. ಎಂ. ಎಸ್. ಜೋಶಿಯವರ ವಿಮರ್ಶೆಗಳು ಅತ್ಯುತ್ತಮವಾಗಿವೆ ಶ್ರೀ. ಹೆಚ್. ಆರ್. ಶಾಸ್ತ್ರಿ, ಶ್ರೀ. ಗುರುನಾಥ ಕುಲಕರ್ಣಿ, ಶ್ರೀ. ಪಂಚಾಕ್ಷರಿ ಹೊಸಮಠ ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ತೀರ ಸಾಮಾನ್ಯ. ಇಬ್ಬರು ಮೂವರು ವಿಮರ್ಶಕರು ಕತೆಯಲ್ಲಿಯ ಘಟನೆಗಳ ಅರ್ಥವನ್ನು ಸರಿಯಾಗಿ ಮಾಡಿಕೊಂಡಂತಿಲ್ಲ.

ಮುಂದಿನ ಸಂಚಿಕೆಯ ಮೇಲಾಟಕ್ಕಾಗಿ 'ಚಂದ್ರೋದನ ಎಂಬ ನವ್ಯಕವನವನ್ನೂ 'ಪತಿವ್ರತೆ' ಎಂಬ ಅನುವಾದಿತ ಸಣ್ಣಕತೆಯನ್ನೂ ವಿಮರ್ಶಿಸಿ ಕಳುಹಬೇಕು.

—ಸಂಪಾದಕರು

ನವಜೀವನ

(ಕವನ ಮೀಮಾಂಸೆ)

ಶ್ರೀ. ಎನ್. ಭೀಮಭಟ್ಟ ಸಾಹಿತ್ಯಶಿರೋಮಣಿ ಕನ್ಯಾನ ದ. ಕ.

ಹೊಸತು ಹೊಸತು ಹೊಚ್ಚಹೊಸತೆಂದು ಹುಯ್ಲಿಡುತ್ತಾ 'ಬೆಳಕಿನತ್ತ ನಮ್ಮ ನಡೆ' ಎಂದು ಅಂಧಂತಮಸ್ಸಿನಲ್ಲಿ ತೊಳಲಾಡುವ ಜನರಿಗೆ ಕನ್ನಡದ ಪ್ರಮುಖ ಕವಿಗಳೊಬ್ಬರು ಬರೆದ ಈ 'ನವಜೀವನ' ಎಂಬ ಕವಿತೆ ಚಿತ್ರಭಿಯಂತೆ ಬೆಳಕನ್ನೀಯುವುದೆಂದರೆ ಅತ್ಯುಕ್ತಿಯಾಗದು. ಇದೊಂದು ಸಂಪ್ರದಾಯವಾದಿಯ ಕೂಪಮಂಡೂಕಾವಸ್ಥೆಯ ನೀರಸ ಒಣ ಆಕ್ರೋಶವಲ್ಲ ನವ್ಯವಾದಿಗಳ ವೈಯಕ್ತಿಕ ಟೀಕೆ-ಟಿಪ್ಪಣಿಯಲ್ಲ. ನಿಜವಾದ ನವ್ಯತೆಯ ಕುರಿತೊಂದು ಬೀರಿದ ಬೆಳಕೆಂದರೆ ಸತ್ಯಕಥನವೇ ಸರಿ. 'ನವಜೀವನವೆಂಬುದೊಂದು ಸ್ವಪ್ನದ ಸುರನಂದನ' ಎಂದೇ ಕವಿ ಪ್ರಾರಂಭಿಸಿರುವುದು ಬಹಳ ಚೆನ್ನಾಗಿದೆ. ಆರಂಭದ ಮನೋಹರತೆ, ಮಧ್ಯದ ತಾತ್ವಿಕತೆ, ಮುಕ್ತಾಯದ ಆಕರ್ಷಕತ್ವಗಳೆಲ್ಲಾ ಸೊಗಸಾಗಿವೆ.

ಹಾಗಿದ್ದರೆ ಹೊಸತು-ಹಳತು, ಪ್ರಾಚೀನ-ನವೀನಗಳೆಂಬ ಶಬ್ದಗಳೇ ಅವಶ್ಯವಿಲ್ಲದಾಗಬಹುದಲ್ಲವೇ?—ಎಂಬ ಶಂಕೆ ಕೆಲವರಿಗಾಗಬಹುದು. ತಾರ್ಕಿಕರು ಹೇಳುವ ದೃಷ್ಟಿಯಲ್ಲಿ ಒಂದು ವಸ್ತುವು ಕ್ಷಣಕ್ಷಣಕ್ಕೂ ಸ್ಥಿತಿಯಲ್ಲಿ ಬದಲಾಗುತ್ತದೆ. ಪ್ರತಿಯೊಂದೂ ಕ್ಷಣಿಕ ಜ್ಞಾನಾದಿಗಳೆಲ್ಲಾ ಕ್ಷಣದ್ವಯಾವಸ್ಥಾಯಿಗಳು. ಹೀಗಿರುವಾಗ ನಿರ್ಮಿತವಾದ ಘಟವು ತರ್ಕದೃಷ್ಟ್ಯಾ ಚಿರಸ್ಥಾಯಿಯಲ್ಲ. ಜಗತ್ತೂ ಹಾಗೆಯೇ; ಮಾನವನೂ ಅಷ್ಟೇ! ಎಂದಾಗ—ಮಾನವನು ಕ್ಷಣಕ್ಷಣಕ್ಕೆ ಬೇರೆಯವನಾಗುತ್ತಾನೆಂಬ ತರ್ಕವೂ ಇದೆ. ಹೀಗಿರುವಾಗ ಹೊಸತು ಇಲ್ಲವೇ ಇಲ್ಲ, 'ಭ್ರಾಂತಿಯಿದಿದು ಭಾಷಣ' ಎಂಬುದು ಸಮಂಜಸವೆನಿಸುವುದೆ?—ಎಂದರೆ, ಮುಖ್ಯವಾಗಿ ಈ ಮಾತನ್ನು ಹಳತು-ಹೊಸತುಗಳನ್ನು ತಪ್ಪು ತಿಳಿದುಕೊಳ್ಳುವವರ ಸಲುವಾಗಿ ಉಪಯೋಗಿಸಿರುವುದನ್ನು ಗಮನಿಸಬೇಕು. ಆಗ ಜೀವನವೆಂಬುವು ಹರಿಯುವ ಹೊನಲೆಂದು ಮನದಟ್ಟಾದರೆ. ಅದರಲ್ಲಿ ಹಳತನ-ಹೊಸತನಗಳಿರಬಹುದೆ?—ಎಂಬ ಪ್ರಶ್ನೆಗೆ ಉತ್ತರ ತಾನಾಗಿ ಹುಟ್ಟುತ್ತದೆ. Change in life ಎಂದವನ ಅಭಿಪ್ರಾಯ, ಹರಿಯುವ ಹೊನಲಿನ ಹೋಲಿಕೆಯದೇ ಆಗಿದೆ. ಹಳತೇ ಒಳಿತೆನುವ ವಾದಕ್ಕೆ ಮಾನ್ಯತೆ ಕೆಲವೆಡೆ ಸಿಗಬಹುದು; ಆದರೆ ಜೀವನದ ಮಟ್ಟಿಗೆ ಮಾತ್ರ ಹಳತು-ಹೊಸತೆನ್ನುವ ವಿಶೇಷಣ ಸರಿಯಲ್ಲವೆಂಬುದನ್ನು ಈನೆಯ ಪದ್ಯದಲ್ಲಿ ಸಮರ್ಥಿಸಿರುವುದು ಚೆನ್ನಾಗಿದೆ. ಈ ಕವಿತೆಯ ಸಂಪೂರ್ಣ ಜೀವನಾಡಿ ಈ ಪದ್ಯದಲ್ಲಿ ಮಿಡಿಯುತ್ತಿದ್ದು, ಅಂಧವಿಚಾರಗಳಿಗೆ ಸಾಕಷ್ಟು ತಿಳಿವಿನ ಬೆಳಕನ್ನಿತ್ತಿದೆ.

ನಿನ್ನೆಗಳನು ಬೆಳಗಿದ ರವಿಯೇ ಇಂದೂ ನಾಳೆಯೂ ತೊಳಗುವನೆಂದಮೇಲೆ, ಇಂದು-ನಿನ್ನೆ, ಹಳತು-ಹೊಸತುಗಳಲ್ಲೇನಿದೆ ವೈಶಿಷ್ಟ್ಯ? ಇಂದಿನದು ನಾಳೆ ಹಳತು. ಹೀಗೆಯೇ ಸಾಗುತ್ತದೆ ಹಳತು ಹೊಸತುಗಳ ದ್ವಂದ್ವ. ಹೊಸತು ಸದಾ ಹಳತಿನಲ್ಲೇ ಪರ್ಯವಸಾನ ಹೊಂದುತ್ತದೆ. ಆದರೆ ಈ ತತ್ತ್ವವನ್ನೆಲ್ಲಾ ಗಮನಿಸದ, ನಿನ್ನೆಯ ಬೆಳಕನ್ನು ಹಾಗೂ ಅದು ಒದವಿಸಿದ ನನ್ನಿಯನ್ನರಿಯದ ಕೂಸು, ಇಂದು ಕಣ್ತೆರೆದು ರವಿಯನ್ನು ಕಂಡು ಮೈಮರೆದು, ಇಂದಿನದೇ ನವಜೀವನವೆಂದು ಕೂಗುತಿಹುದು. ಹಿಂದಿನ ತಿಳಿವಳಿಕೆಯಿಲ್ಲದೆ, ಮುಂದಿನ ಬಗೆಯರಿಯದೆ ಕೂಗುವ ಕೂಸಿನ ಮಾತಿದು.

ಇಲ್ಲಿ ಕವಿಯ ಭಾವನೆಯ ಉಚ್ಚಮಟ್ಟ ಮತ್ತು ಅಜ್ಞಾನಿಗಳನ್ನು ಕುರಿತು ಕವಿ ವ್ಯಕ್ತಪಡಿಸಿದ ಕನಿಕರವನ್ನು ಕಂಡಾಗ, ಹೃದಯ ಆವರ್ಜಿತವಾಗುತ್ತದೆ. ಶಿರ ಮಣಿಯುತ್ತದೆ. ಕವಿಗಳು 'ಕೂಸು' ಎಂಬ ಶಬ್ದವನ್ನು ಬಳಸಿ, ಅಬೋಧಶಿಶುಗಳೆಂದು ಅಂಥವರನ್ನು ಕರೆದಿರುವುದು ಮಾರ್ಮಿಕವಾಗಿದೆ. 'ಕೂಸು' ಎಂಬ ಪದವನ್ನಿಲ್ಲಿ ಬಳಸಿರುವುದು ಬಹಳ ಚಮತ್ಕಾರ, ವ್ಯಂಗ್ಯಗಳಿಗೆ ಕಾರಣವಾಗಿದೆ. ನಿನ್ನೆಯ ಪ್ರಪಂಚವನ್ನು ಕಾಣದೆ, ನಾಳೆಯನ್ನರಿಯದೆ, ಇಂದು ತಾನೇ ಕಣ್ಣು ಬಿಟ್ಟು ಮೈಮುರಿವ ಕುನ್ನಿಯೊಂದು, ಅಪ್ರಸ್ತುತ ಪ್ರಶಂಸಾರೂಪವಾಗಿ ಇಲ್ಲಿ ವ್ಯಕ್ತವಾಗುತ್ತದೆ.

'ಎಲ್ಲಿಯೂ ನವವಿಲ್ಲ, ಎಲ್ಲೆಲ್ಲಿಯೂ ನವವಿಲ್ಲ, ನಿನ್ನೆಯದೇ ಎಲ್ಲಾ'—ಎಂಬುದಾಗಿ ಇಂದು-ನಿನ್ನೆಗಳನ್ನು ನಿರುಕಿಸಿದ ಜೀವ, ಎಳೆಯರ ಅಬೋಧರ ಕೂಗನ್ನು ಕೇಳಿ ವಿಚಾರಿಸುತ್ತಿರುವುದು ಸಹಜವೇ.

ಅದೇ ಧರಣಿ, ಅದೇ ತರಣಿ, ಅದೇ ಜೀವನ, ಅದೇ ಮರಣ ಎಲ್ಲವೂ ನಿನ್ನೆಯದೇ; ಹೊಸತನವೇನೂ ಇಲ್ಲವೇ ಇಲ್ಲವೆಂದು ಕವಿ ಘಂಟಾಘೋಷವಾಗಿ ಸಾರಿದ್ದಾನೆ. ಆದರೆ ಇಲ್ಲಿ ಚಾಕ್ಷುಷವಾಗಿ ಹೊಸತನವೇನೂ ಇಲ್ಲ, ನಿಜ. ತರ್ಕಪಟುಗಳು ಕವಿಗಳೊಂದಿಗೆ ವಾದಕ್ಕೆ ನಿಲ್ಲಬಹುದು; ಆದರೆ ತಾರ್ಕಿಕವಾಗಿ ಪ್ರತ್ಯಕ್ಷಸಿದ್ಧವಾಗಿ ಕವಿಗೇ ವಿಜಯ ಕಟ್ಟಿಟ್ಟ ಗಂಟು. ನಾನೂ ಅವರ ಪಕ್ಷವನ್ನೇ ಸಮರ್ಥಿಸುತ್ತೇನೆ

ಆದರೊಂದು ಮಾತು: 'ಆದರೂನು ಹೊಸತನ' ಎಂಬ ಕವಿತೆಯೊಂದನ್ನೋದಿದ ನೆನಪು ನನಗಿದೆ. 'ಅದೇ ಧರಣಿ ಅದೇ ತರಣಿ' ಎಂಬ ಪದ್ಯದಲ್ಲಿ ಕವಿ ಹೊಸತನವೇನೂ ಇಲ್ಲವೇ ಇಲ್ಲವೆಂದು ಖಡಾಖಂಡಿತವಾಗಿ ಘೋಷಿಸಿದ್ದರೆ. ಆ ಕವಿ ಕಾವ್ಯಾತ್ಮಕವಾಗಿ ಹೊಸತನವನ್ನೇ ವಿಡಂಬಿಸಿದ್ದಾರೆ. ಆದರೆ ಪ್ರಕೃತದ ಕವಿಗಳು ಜೀವನದ ವಿಶ್ವರೂಪವನ್ನಿಡೀ ಅಳೆದು ನೋಡಿ ಆ ನಿರ್ಣಯವನ್ನು ಸಾರಿದಾಗ, ವೈಶಿಷ್ಟ್ಯ ಪ್ರತ್ಯೇಕ ಎದ್ದು ಕಾಣುತ್ತದೆ. ಓದುಗನ ಮನಸ್ಸು ದೃಢನಿರ್ಧಾರಕ್ಕೆ ಬರುವುದಲ್ಲದೆ, ಅಭಯದ ಕರೆಯೊಂದನ್ನೀಯುತ್ತದೆ.

ಇಷ್ಟಾದರೂ ಜನ ನವಜೀವನವೆಂದು ಕೂಗುತ್ತಾ ಇರುವಾಗ, ಇದರ ಕಾರಣವನ್ನರಿಯುವ ಬಯಕೆ ನಿಜವಾದ ಸಹೃದಯರಿಗೆ ಮೂಡಿಯೇ ತೀರುತ್ತದೆ. ಅಂಥವರ ಹೃದಯಕ್ಕೆ ಸಮಾಧಾನ, ವಿವರಣೆ ಕವಿ ಇತ್ತಿರುವುದು ಚೆನ್ನಾಗಿದೆ. 'ನಾಳೆಯನ್ನರಿಯದುದೇ ಇಂದನ್ನು ನಂಬಿರಲು ಕಾರಣ!' ನಿನ್ನೆಗಿಂತ ಇಂದು ಹೊಸತಿದ್ದರೆ

ಇಂದಿಗಿಂತ ನಾಳೆ ಹೊಸತಾಗುವುದು ನಿಶ್ಚಿತ. ಆಗ 'ಇಂದು' ಹಳೆತಾಗುವುದೂ ಅನಿವಾರ್ಯ. ಹೀಗೆ ನಾಳೆಯನ್ನರಿತರೆ, ಇಂದಿನ ಅರಿವು ಉಂಟಾಗಿ ನವಜೀವನದ ಭ್ರಾಂತಿ ತೊಲಗಬಹುದು.

ಒಟ್ಟಿನಲ್ಲಿ 'ನವಜೀವನವೆಂಬ ಕರ್ಮರಹಿತ ಕೂಗು ಒಣಪ್ರಾಣ' ಸರ್ವಥಾಪಿ ಅಜ್ಞಾನ ಹಾಗು ಕಸುಕುಮನದ ಭಾವನೆಯೇ. ನವಜೀವನ ಭ್ರಾಂತಿಯ ಮೂಲವೆಂದು ಕವಿ ಸಿದ್ಧಾಂತಿಸಿದ್ದಾರೆ. ಈ ಕವಿತೆಯಲ್ಲಿ ಕವಿ ಸಾರ್ವತ್ರಿಕವಾಗಿ ತಮ್ಮ ದೃಷ್ಟಿ ಹರಡಿಸಿದ್ದರೂ ಅನುಕರಣೆಯಲ್ಲೂ ನವಜೀವನದ ಮೋಹವಿದೆಯೆಂಬುದನ್ನು ಆನುಷಂಗಿಕವಾಗಿ ತಂದಿದ್ದರೆ ಇನ್ನಷ್ಟು ಸೊಗಸಾಗುತ್ತಿತ್ತು.

ಇಷ್ಟೆಲ್ಲಾ ವಿಚಾರಪ್ರಚೋದನೆಯನ್ನು ಮಾಡಿಸುವ ಕವಿ, ಜೀವನದ ಲಕ್ಷಣವನ್ನು ಮಂಡಿಸದಿದ್ದರೆ ನ್ಯೂನತೆ ಬರಬಹುದು; ಅದಕ್ಕಾಗಿಯೇ 'ಜೀವನಕಿದು ಲಕ್ಷಣ, ಪ್ರಗತಿ ಕರ್ಮ ಜ್ಞಾನ' ಎಂದು ಅಬಾಧಿತ-ಅನ್ಯಾನಾತಿರಿಕ್ತ ಸಿದ್ಧಾಂತವನ್ನು ಮುಂದೊತ್ತಿದ್ದಾರೆ.

ಕವಿತೆಯಲ್ಲಿ ಕ್ಲಿಷ್ಟತೆಯಿಲ್ಲ. ಪ್ರಸಾದರಮ್ಯತೆಗಳಿವೆ. ನವ್ಯನಾಮವನ್ನಿಟ್ಟು ಆಶ್ಚರ್ಯಚಿಹ್ನ, ಇಂಗ್ಲಿಷ್ ಶಬ್ದಗಳಿಂದ ಪದ ತುಂಬಿಸಿಲ್ಲ. ತಮಗೆ ಹೇಳಬೇಕೆಂದಿರುವುದನ್ನು ಹಾರ್ದಿಕವಾಗಿ ಪ್ರಾಮಾಣಿಕವಾಗಿ ಸಮಯೋಚಿತವಾಗಿ ಸುಂದರವಾಗಿ ಹೇಳಿದ್ದಾರೆ. ಭಾವ ಉಚ್ಚತಮವಾದುದು. ಹಾಗೆಂದು ಸಾಮಾನ್ಯರಿಗೆ ನಿಲುಕದ್ದಲ್ಲ. ಅಷ್ಟು ಕಠಿಣ ಕಗ್ಗಂಟನ್ನೂ ಇಷ್ಟು ಸುಲಭವಾಗಿ, ಚುಟುಕಾಗಿದ್ದರೂ ಸ್ಪಷ್ಟವಾಗಿ ಎಂದರೆ ಧ್ವನ್ಯಾತ್ಮಕವಾಗಿ ಹೇಳಿದ್ದಾರೆ ಅಪ್ರಯೋಜಕ ಶಬ್ದಾಡಂಬರ, ಅಲಂಕಾರಮೋಹ, ಯಾವ ಅನೌಚಿತ್ಯವೂ ತಲೆ ಹಾಕಿಲ್ಲ. ಯಾವುದೆಷ್ಟು ಬೇಕೋ ಅಷ್ಟನ್ನು ತೂಕಪ್ರಕಾರ ಹೇಳಿದ್ದಾರೆ. ಈ ಹಾಡು ಇಂದಿನ ಯುಗದಲ್ಲಿ ಒಂದು ವಿಶೇಷ ಕಾಣಿಕೆ. ನವ್ಯತೆಯ ಕುರಿತು ಇದೊಂದು ಸಂದರ್ಭೋಚಿತ ಪ್ರಯೋಗ. ಕ್ರಾಂತಿಕಾರಿಯಾದ ಗೀತ. ಕುತೂಹಲ ಕೆರಳಿಸುವ, ತಿಳಿವರಳಿಸುವ ಕೃತಿ. ಹೊಸತಿನ ಮಬ್ಬಿನಲ್ಲಿ ಇಹವನ್ನು ಮರೆತ ಮೂರ್ಖರಿಗೊಂದು ತಿಳಿಬೆಳಕು. ತಪ್ಪುದಾರಿಯಲ್ಲಿ ಘೋರಾರಣ್ಯದಲ್ಲಿ ಹೆಜ್ಜೆಯಿಡುವ ಮಾನವ ಪ್ರಾಣಿಗೆ ಜೀವನದ ರಾಜಮಾರ್ಗವನ್ನು ಗುರುತಿಸುವ ಒಂದು ಕೈಗಂಬ ಈ ಕೃತಿ ಸಹೃದಯರ ಹೃದಯದಲ್ಲಿ ಅಚ್ಚಳಿಯದೆ ಉಳಿಯಬಲ್ಲುದೆಂದು ನನ್ನ ಅಭಿಪ್ರಾಯ

ಬೋರಿವಿಲಿ ಲೋಕಲ್

(ಸಣ್ಣ ಕತೆ)

ವಿಮರ್ಶಕ :— ಶ್ರೀ. ಕುಂಬ್ಳೆಕರೆ ಭಾಸ್ಕರರಾಯ

(ವಿದ್ಯಾರ್ಥಿ ವಿದ್ಯಾಮಂದಿರ ಹೈಸ್ಕೂಲ್)

ಧರ್ಮ-ಅರ್ಥ-ಕಾಮಗಳು ಮಾನವನನ್ನು ಮೋಕ್ಷದೆಡೆಗೆ ಒಯ್ಯುತ್ತವೆ; ಅರ್ಥ-ಕಾಮಗಳು ಮಾನವನನ್ನು ಅಸುಖಿಯನ್ನಾಗಿ ಮಾಡುವುದರ ಜೊತೆಗೆ ಜೀವನದಲ್ಲಿ ಅಶಾಂತಿಯನ್ನೂ ತಂದೊಡ್ಡುತ್ತವೆ; ಅರ್ಥ-ಕಾಮಗಳು ಧರ್ಮದ ಹಿಡಿತವನ್ನು ಮೀರಿ ಮುಂದುವರಿಯದಿದ್ದರೆ, ಲೌಕಿಕಜೀವನದಲ್ಲಿ ಅಲಭ್ಯವಾದ ಸುಖ-ಶಾಂತಿಗಳನ್ನು ಪಡೆಯಲೂ, ಅಲೌಕಿಕ ಮೋಕ್ಷವನ್ನು ಪಡೆಯಲೂ ಸಾಧ್ಯವೆಂದು ನಮ್ಮ ಪೂರ್ವಿಕರ ಅಭಿಪ್ರಾಯ.

ಕಾಮವು ಮಾನವನಲ್ಲಿ ತಲೆದೋರುವುದು ಆತನ ಸಹಜಪ್ರವೃತ್ತಿ. ತನಗೆ ಬೇಕೆಂದು ಆಶಿಸುವುದು ಕಾಮನೆಯೆನಿಸುವುದು. ಲೈಂಗಿಕ ಸುಖದ ಆಸೆಗೂ, ಕಾಮವೆನ್ನುವರು. ಈ ಕಾಮವು ಜಗತ್ತಿನ ಪ್ರಾಣಿಗಳನ್ನಾವುವನ್ನೂ ಬಿಟ್ಟಿಲ್ಲ; ಮಾತ್ರವಲ್ಲದೆ ಮನುಷ್ಯನ್ನು ದುರ್ಮಾರ್ಗ ಪ್ರವರ್ತಕನಾಗುವುದು ಕಾಮದಿಂದಲೆ. ಈ ಕಾಮವನ್ನು ತಡೆದು ಇಂದ್ರಿಯನಿಗ್ರಹಿಗಳಾಗಿ ಬಾಳಿದರೇನೆ ಜೀವನವು ಸುಗಮವಾದೀತು. ಐಹಿಕಸುಖಕ್ಕಾಗಿ, ಈ ಇಂದ್ರಿಯಸುಖವನ್ನು ನಂಬಿ ಅನ್ಯಾಯ-ಅಕೃತ್ಯಗಳನ್ನೆಸಗುವುದು, ಅಧರ್ಮಪಥದಲ್ಲಿ ಮುನ್ನಡೆಯುವುದು ನ್ಯಾಯವಾದೀತೆ ? ಇಂದ್ರಿಯನಿಗ್ರಹವೇ ಮಾನವನ ಜೀವನದ ಮುಖ್ಯಧ್ಯೇಯವಾಗಿರಬೇಕೆಂಬ ಮಾತನ್ನೇ ಗೀತಾಚಾರ್ಯನು:

" ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ |
ಪಾಪ್ಮಾನಂ ಪ್ರಜಹಿ ಹ್ಯೇನಂ ಜ್ಞಾನವಿಜ್ಞಾನ ನಾಶನಂ ||

ಎಂದಿದ್ದಾನೆ. ಹೀಗೆ ಇಂದ್ರಿಯನಿಗ್ರಹಿಯಾಗಿ, ಆತ್ಮಸಂಯಮಿಯಾಗಿ ಜೀವನಕ್ಕೆ ಕಾಲಿಟ್ಟರೇನೇ ಮಾನವನು ಅಧರ್ಮವನ್ನೆಸಗಲಾರ ಜೀವನದ ಭವ್ಯತೆಯ ಸುಖವನ್ನು ಆತನಿಗೆ ಅನುಭವಿಸಲು ಸಾಧ್ಯ. ಈ ಮಾತಿನ ಹಿನ್ನೆಲೆಯಲ್ಲೇ, ಮಾನವನು ಇಂದ್ರಿಯನಿಗ್ರಹಿಯಾಗಿ ಸಮಾಜದಲ್ಲಿ ಬಾಳಬೇಕೆಂಬ ಮಾತನ್ನು, ಈ ಕತೆಯಲ್ಲಿ ಲೇಖಕರು ಪ್ರತಿಧ್ವನಿಸಿದ್ದಾರೆ. ಹಾಗೆ ಇಂದ್ರಿಯನಿಗ್ರಹಿಯಾಗದಿದ್ದರೇನಾಗಬಹುದೆಂಬುದನ್ನು ವಿಮರ್ಶಕರು ಇಲ್ಲಿ ವಿಚಾರಿಸಬಹುದು.

ರಾಧಾಬಾಯಿಯು ಭಾಸ್ಕರನ ಹೆಂಡತಿ. ಭಾಸ್ಕರನು ತೀರಿಹೋದನಂತರ, ಆಕೆ ಬೊಂಬಾಯಿಗೆ ಬಂದು, ಅಲ್ಲಿ ತವರುಮನೆಯಲ್ಲಿ ತಂಗಿದಳು. ರಾಧಾಬಾಯಿಗೆ ಒರ್ವಳೆ ಮಗಳು ಲಲಿತೆ. ತನ್ನ ಜೀವನದ ದುಃಖವನ್ನು ಹಗುರಾಗಿಸಿಕೊಳ್ಳಲು, ರಾಧಾಬಾಯಿಯು ಚರ್ನಿರೋಡ್ ಗರ್ಲ್ಸ್ ಸ್ಕೂಲಿನಲ್ಲಿ ಅಧ್ಯಾಪಿಕೆಯಾಗಿದ್ದಳು. ಅವಳು ಶಾಲೆಯಿಂದ ಮನೆಗೆ ಬರುವಾಗ, ಅವಳ ಮನಸ್ಸಿನಲ್ಲೆದ್ದ ವಿಚಾರದ ಕೋಲಾಹಲವೇ ಇಲ್ಲಿಯ ಕಥಾವಸ್ತು. ಅವಳ ಮನಸ್ಸಿನಲ್ಲಿ ನಡೆದ ತುಮುಲ ಯುದ್ಧವೇ ಈ ಕತೆಯ ಪರಿಣಾಮ.

ರಾಧಾಬಾಯಿಯು ದಿನಾಲೂ ವಿಲೆಪಾರ್ಲೆಯಿಂದ ಚರ್ನಿರೋಡ್ ವರೆಗೆ ಟ್ರೈನಿನಲ್ಲಿ ಹೋಗುತ್ತಿದ್ದಳು. ಅಂದೂ ಅದೇ ರೀತಿ ಶಾಲೆಯಿಂದ ಹಿಂದಿರುಗಿದ್ದಳು. ಸ್ಟೇಷನಿನಲ್ಲಿ ಜನರು ಕಿಕ್ಕಿರಿದಿದ್ದರು ಮಳೆಗಾಲವಾದುದರಿಂದ ಅಲ್ಲಿಯ ಸನ್ನಿವೇಶವು ಮತ್ತೂ ವಿಷಮತೆಗೇರಿತ್ತು. ಪೀಠಿಕೆಯಲ್ಲೆ 'ಆಕಾಶವು ಕಪ್ಪಾಗಿದ್ದರೂ, ಅದರ ಅಂಜಿಕೆ ಯಾರಿಗೂ ಇದ್ದಿಲ್ಲ' ಎಂಬುದರಿಂದ, ನಮಗೆ ಕತೆಯಲ್ಲಿ ಏನೋ ವಿಷಮತೆ,- ಅಸತ್ಯ ತೋರಿದರೂ ಅದು, ಆ ಕತೆಯ ಸುತ್ತಲ ವಾತಾವರಣವನ್ನು ಹದಗೆಡಿಸುವುದಿಲ್ಲವೆಂಬಭಾವನೆ ಪ್ರಚೋದನಗೊಳ್ಳದಿರಲಾರದು.

ರಾಧಾಬಾಯಿಯು ಸ್ಟೇಶನನ್ನು ತಲುಪಿ ಅಭ್ಯಾಸಬಲದಿಂದ ಟ್ರೈನನ್ನು ಸೇರಿದಕೂಡಲೆ ಅವರು ವಿಚಾರರಂಗಕ್ಕೆ ಧುಮುಕುತ್ತಾರೆ. ಧರ್ಮದ ವಿಷಯವಾಗಿದ್ದ ವ್ಯಾಸರ ಶ್ಲೋಕವು ಜ್ಞಾಪಕಕ್ಕೆ ಬರುತ್ತದೆ. ಅದರ ದೀಪ್ತಿಯಿಂದ ತನ್ನ ಹೃದಯ ಬೆಳಗದೆಂದು ಅವರ ಮನಸ್ಸು ನಿರ್ಧರಿಸುತ್ತದೆ.

ಆಗ ಅವರ ದೃಷ್ಟಿ ಸುತ್ತಲೂ ಹರಿಯುತ್ತದೆ. ಮರಾಠೀ ಸಂಪತಿಗಳು ಅಲ್ಲಿಯಿಂದಿರುವುದನ್ನು ಕಂಡು, ತನ್ನ ಜೀವನದಲ್ಲಿ ಎಂದೋ ಅಳಿದು ಹೋದ ದಾಂಪತ್ಯದ ನೆನಪು ಮರುಕೊಳಿಸುತ್ತದೆ. ತಮ್ಮ ಜೀವನವನ್ನೆ ಕುರಿತು ಅವರು ಸಿಂಹಾವಲೋಕನಕ್ಕೆ ತೊಡಗುತ್ತಾರೆ. ಇಲ್ಲಿ ಸಹಜವಾದ ಮಾನಸಿಕ ಹೋರಾಟ. ಯಾರಾದರೂ ಸೌಖ್ಯದಿಂದ, ಅಥವಾ ಪ್ರೇಮದಿಂದ ಇರುವುದನ್ನು ಕಂಡರೆ, ತನ್ನ ಸುಖದ ಅಥವಾ ಪ್ರೇಮದ ಸವಿದಿನಗಳ ನೆನೆವು ಮರುಕೊಳಿಸುವುದು ಸ್ವಾಭಾವಿಕ.

ಅವರ ವಿಚಾರವು ಅವರ ಮದುವೆಯ ಕಡೆಗೆ ಸರಿಯಿತು; ಅವರು ಭಾಸ್ಕರನನ್ನು ಕಂಡುದು, ಅವನನ್ನು ಒಲಿದು ಅವನನ್ನೇ ಮದುವೆಯಾದುದು—ಇಲ್ಲಿ ನಿಂತಿತು. ಅಷ್ಟರಲ್ಲಿ ಅವರಿಗೆ ಎದುರು-ಬದುರಾಗಿ ನಿಂತ ಗೃಹಸ್ಥ ಆಧಾರ ತಪ್ಪಿ ಅವರ ಮೇಲೆ ನೂಕಲ್ಪಟ್ಟುದರಿಂದ, ಆತನ ಬಿಸಿಯುಸಿರು ಅವರ ಕೆನ್ನೆಗೆ ತಾಗಿದ ಕೂಡಲೆ, ಅವರ ದಾಂಪತ್ಯದ ಸುಖದ ದಿನಗಳು ಅವರ ವಿಚಾರಪಟಲದಲ್ಲಿ ಹೊಳೆಯುವುವು. ಅವರ ಮತ್ತು ಅವರ ಪತಿಯ ಮನೋಭಾವನೆಗಳು, ಅವರ ಸರಸಜೀವನದ ಸವಿಯ ನೆನಪುಗಳೆಲ್ಲವೂ ಅವರ ಮನಸ್ಸಿಗೆ ಬರುವುವು. ಅವರ ಪತಿಯ ಮರಣದವರೆಗೂ ಮುಂದುವರಿಯುವುದು.

ಅಷ್ಟರಲ್ಲಿ ಆ ಗೃಹಸ್ಥತರುಣನು ಮತ್ತೊಮ್ಮೆ ಮೇಲೆ ಬಿದ್ದ. ರಾಧಾಬಾಯಿಯು ಯಾರೂ ತನ್ನನ್ನು ಸೋಂಕಬಾರದೆಂಬುದಾಗಿ ಎಷ್ಟು ಯತ್ನಿಸಿದರೂ ವಿಫಲರಾಗುತ್ತಾರೆ. ತರುಣನು ಮೇಲೆ ಬಿದ್ದ ಕೂಡಲೆ, ಅವರ ವಿಚಾರಧಾರೆಯು ಕಡಿದು ಅವರು ಭಾವನಾಲೋಕದಿಂದ ವಾಸ್ತವಪ್ರಪಂಚಕ್ಕೆ ಇಳಿಯುತ್ತಾರೆ ಅವರ ಮೇಲೆ ಬಿದ್ದ ಗುಜರಾಥಿಯ ಅಂಗಾಂಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸುತ್ತಾರೆ. ಆತನು ಲಕ್ಷಣವಂತನಾಗಿದ್ದ. ಅನಂತರ ಅವರ ವಿಚಾರವು ತನ್ನ ಪ್ರಕೃತಜೀವನದ ಸಮಸ್ಯೆಯೆಡೆಗೆ ಹರಿಯುತ್ತದೆ. ವಿಚಾರವು ಲಲಿತೆಯ ಮದುವೆಯೆಡೆಗೆ ಸಾಗುತ್ತದೆ. ಲಲಿತೆಯ ಮದುವೆಯಾದರೆ ತಾನು ನಿಶ್ಚಿಂತೆಯಿಂದಿರಬಹುದೆಂದು ತೋರುತ್ತದೆ ಆದರೆ ಇಲ್ಲಿ ವಿಚಾರದ ದ್ವಂದ್ವಹೋರಾಟವು ನಡೆಯುವುದು. ಮತ್ತೊಂದು ಧ್ವನಿಯು ಅಶಾಂತಿಯ ಕಾರಣವನ್ನು ಸ್ಫುಟಗೊಳಿಸುವುದು. ಅಷ್ಟರಲ್ಲಿ ಆ ತರುಣನು ಮತ್ತೊಮ್ಮೆ ಇವರ ಮೇಲೆ ಬೀಳುವುದರಲ್ಲಿದ್ದ.

ಇವರ ಅಶಾಂತಿಯು ಯಾಕೆ ?—ಎಂಬುದಕ್ಕೆ ಮತ್ತೊಂದು ಧ್ವನಿಯು ಕೊಡುವ ವಿಚಾರವೇ ಇಲ್ಲಿಯ ಕಥೆಯ ಜೀವಾಳವೆಂಬುದು ಓದುಗರಿಗೆ ಖಚಿತವಾಗುವುದು. ಧ್ವನಿಯು 'ನಿನಗಾಗಿ, ಕೇವಲ ನಿನಗಾಗಿ! ಕೇವಲ ನಿನ್ನ ಬೇಸತ್ತ ಜೀವನಕ್ಕಾಗಿ—ಕುಡಿಯುವ ಮೊದಲೆ ಚೆಲ್ಲಿಹೋದ ಗಂಡಸಿನ ಒಡನಾಟಕ್ಕಾಗಿ....' ಎನ್ನುವ ಮಾತು ನಮಗೂ ಸರಿಯೆಂದು ತೋರುವುದಿಲ್ಲವೇ ?

ಅವರು ತಮ್ಮಲ್ಲೆ ಒಂದು ನಿರ್ಧಾರಕ್ಕೆ ಬಂದರು. ಆ ಯುವಕನ ಹತ್ತಿರ ಸರಿದರು. ಅವರ ಎದೆ ಅವನ ಎದೆಗೆ ತಾಗಿತು. ಕಾಲುಗಳು ಒಂದಾದುವು. ಇಷ್ಟಾದರೂ ಜನಕ್ಕೇನೂ ಲಕ್ಷ್ಯವಿರಲಿಲ್ಲ. ಇದು ವಿಚಿತ್ರವೇ ಸರಿ! ಆ ಟ್ರೈನಿನಲ್ಲಿ ಎಷ್ಟು ಗಲಾಟೆ ಇದ್ದರೂ, ಇಂತಹ ಒಂದು ವಿಚಿತ್ರ ಸನ್ನಿವೇಶವೊದಗುವಾಗ, ಜನರಾರೂ ಲಕ್ಷ್ಯಿಸಲಿಲ್ಲವೆಂಬುದು ಸಂದರ್ಭಕ್ಕೆ ವಿರೋಧವಾದೀತಷ್ಟೆ! ಇದನ್ನು ಒಪ್ಪಬಹುದೆ? ತರುಣನು ಅಸ್ವಸ್ಥತೆಯಿಂದ ಚಳುಬುಳು ಮಾಡಹತ್ತುವಾಗಲೂ, ಸುತ್ತಲಿದ್ದವರಿಗೆ ತಿಳಿಯದಿದ್ದೀತೆ ?

ಅವರ ಮನಸ್ಸು ತನ್ನ ವರ್ತನೆಯ ಕಡೆಗೆ ಕೆರಳಿತು. ಕೆಣಕಿ 'ವ್ಯಭಿಚಾರವಲ್ಲವೇ ಇದು ?' ಎಂದು ಕೇಳಿತು. 'ನೀನು ಮಾಡುವುದು ತಪ್ಪೆಂದು', 'ಅದು ಅನ್ಯಾಯವೆಂದೂ' ದೋಷಾರೋಪಣೆ ಮಾಡಿತು. ಆಗ ಅವರ ಮನಸ್ಸು ನರಕದ ಸುಖ-ಸಮರ್ಥನೆಬೇಡವೆಂದು ಹಿಂಜರಿಯಿತು, ದೇಹವೂ ಹಿಂದೆ ಸರಿಯಿತು. ತರುಣ ಗುಜರಾತಿಯು ಮಾತನ್ನು ಮುಗಿಸಿರಲೇ ಇಲ್ಲ; ಆ ದಂಪತಿಗಳು ಅಲ್ಲಿಯಿಂದಲೇ ಇದ್ದರು. ಇವರು ಮಾತ್ರ ಅಭ್ಯಾಸಬಲದಿಂದ ಮನೆಗೆ ನಡೆದರು. ಮನೆಗೆ ಬಂದು ಭಾಸ್ಕರನ ಚಿತ್ರದ ಮುಂದೆ ನಿಂತು ಕ್ಷಮಾಪಣೆ ಬೇಡಿದರು. ಅದು ಅವಕ್ಕೆ ಅರಿವಾಗಲಿಲ್ಲ. ಅದು ನಗುತ್ತಲೆ ಇತ್ತು ಇದಿಷ್ಟು ಕಥಾನಿರೂಪಣೆ.

ಲೇಖಕರು ರಾಧಾಬಾಯಿಯ ಪೂರ್ವಚರಿತ್ರೆಯನ್ನು ಸಿಂಹಾವಲೋಕನಕ್ರಮದಲ್ಲಿ ನಮ್ಮ ಮುಂದೆ ಚಿತ್ರಿಸಿ, ಯಶಸ್ವಿಯಾಗಿದ್ದಾರೆ. ಇದರೆಡೆಯಲ್ಲಿ ಕತೆಗೆ ಬೇಕಾದಂತೆ, ಸನ್ನಿವೇಶವನ್ನಳವಡಿಸಿಕೊಂಡು ತಮ್ಮ ಕಥನಕೌಶಲ್ಯವನ್ನು ಮೆರೆಸಿದ್ದಾರೆ. ರಾಧಾಬಾಯಿಯ ವಿಚಾರ ಪ್ರವಾಹಕ್ಕನುಕೂಲವಾಗುವಂತೆ, ಅಲ್ಲಲ್ಲಿ ಬರುವ ಕೆಲವು ಸಂಘಟನೆಗಳಲ್ಲಿ ಒಂದೆರಡನ್ನು ಉದಾಹರಿಸಬೇಕು: ಆ ಅಲ್ಲಿಯಾಡುವ ದಂಪತಿಗಳನ್ನು ಕಂಡಕೂಡಲೆ, ತನ್ನ ದಾಂಪತ್ಯದ ನೆನಹು ರಾಧಾಬಾಯಿಯ ಮುಂದೆ ಸುಳಿಯುವುದು. ರಾಧಾಬಾಯಿಯ ಕಥೆಗೆ ಇದೊಂದು ಅಡಿಗಟ್ಟಾಗುವಂತೆ, ಈ ಸನ್ನಿವೇಶವನ್ನು ಲೇಖಕರು ಅಳವಡಿಸಿಕೊಂಡುದು ಉತ್ತಮವಾಗಿದೆ. ತರುಣಗೃಹಸ್ಥನ ಬಿಸಿಯುಸಿರು ಹಣೆಗೆ ಸೋಂಕಿದ ಕೂಡಲೆ, ಅವಳು ಭಾಸ್ಕರನೊಂದಿಗೆ ಕಳೆದ ಸುಖದ ದಿನಗಳ ನೆನಹು ಬರುವುದು. ರಾಧಾಬಾಯಿಯುವರ ಸ್ತ್ರೀಸಹಜಪ್ರವೃತ್ತಿ, ಭಾಸ್ಕರನೊಡನೆ ಮಾತಾಡುವಾಗ, ಸ್ತ್ರೀಸಹಜವಾದ ಲಜ್ಜಾಪ್ರವೃತ್ತಿಯೆಂದು ಲೇಖಕರು ಸ್ಪಷ್ಟಪಡಿಸಿದ್ದಾರೆ. ರಾಧಾಬಾಯಿಯವರಿಗೆ ಭಾಸ್ಕರನ ಮೇಲೆ ಅಪಾರಪ್ರೀತಿಯಿತ್ತೆಂಬ ವಿಚಾರವು, ಅವರು ಮನೆಗೆ ಬಂದು 'ನನ್ನನ್ನು ಕ್ಷಮಿಸಿ' ಎಂದು ಕ್ಷಮಾಯಾಚನೆ ಮಾಡುವುದರಿಂದ ತಿಳಿಯಬಹುದು.

ಲೇಖಕರ ವಿಚಾರಧಾರೆಯೂ ಸಂದರ್ಭಕ್ಕನುಗುಣವಾಗಿ, ಓದುಗನ ಮನಸ್ಸಿನಲ್ಲಿ ವಿಚಾರವಾಹಿನಿಯೋಡುವಂತೆ ಮಾಡುವ ತೆರದಲ್ಲಿ ಹರಿದಿದೆ. "ವ್ಯಭಿಚಾರವಲ್ಲವೆ ಇದು ?''........ "ಹೂಂ, ಹೂಂ ಆಗಲೂ ಸಾಧ್ಯವಿಲ್ಲ, ಅದು ಅನ್ಯಾಯ!'' ಎಂಬಲ್ಲಿಯ ವರೆಗಿನ

(೪ನೆಯ ಪುಟ ನೋಡಿರಿ).

ಸಾದರಸ್ವೀಕಾರ

೧. **ಭಕ್ತಗು**[redacted]ಕ ಗ್ರಂಥ). ಬರೆದವರು ಶ್ರೀಮಾನ್ ಪ್ರಕಾಶಕರು ಶ್ರೀ. ಎಸ್. ಸಿ. ಪಿಟ್ಟನಗೌಡರ, ಸರಪಂಚ, ವಿ. ಪ. ಸಿ. ನಿಡಗುಂದಿ. ಕ್ರೌ. ಅ. ೮೬ ಪುಟಗಳು. ಬೆಲೆ ೧-೦-೦

೨. A Guide to India-China Friendship Association (ಪರಿಚಯಾತ್ಮಕ ಕಿರುಹೊತ್ತಿಗೆ). ಬರೆದವರು ಶ್ರೀಮಾನ್ ಭಜನದಾಸಗುಪ್ತ ಅವರು; ಮು. ಖಲಿಶ್‌ಕೋಟ, ಪೋಸ್ಟ್ ಸುಲ್ತಾನಪುರ, ಡಿಸ್ಟ್ರಿಕ್ಟ್ ೨೪ ಪರಗಣಾ. ಡೆ. ಅ. ೧೬ ಪುಟಗಳು. ಬೆಲೆ ೦-೧-೦.

೩. **ಕಾಶ್ಮೀರ ಸಂಧಾನ ಸಮುದ್ಯಮಃ** (ಸಂಸ್ಕೃತ ರೂಪಕಮ್) ಲೇಖಕರು ಶ್ರೀಮಾನ್ ಸೀಪಾರ್ಜೆ ಭೀಮಭಟ್ಟರು ಸಾಹಿತ್ಯ ಶಿರೋಮಣಿ' ಕನ್ಯಾನ (ದ. ಕ ಜಿಲ್ಲಾ) ಡೆ. ಅ. ೩೨ ಪುಟಗಳು. ಬೆಲೆ ೧-೦-೦

೪. **ಬೆಳಕು** (ಮಾಧ್ಯಮಿಕ ವಿದ್ಯಾಶಾಲೆಯ ವರ್ಷಸಂಪುಟ) ಪ್ರಧಾನ ಸಂಪಾದಕರು ಶ್ರೀಮಾನ್ ವಿ ಎನ್. ಕಡಿವಾಲ ಬಿ ಎ., ಬಿ. ಟಿ. ಅವರು. ಬಾಗಿಲುಕೋಟೆಯ ವಿದ್ಯಾಪ್ರಸಾರಕ ಮಂಡಲದ ಶಂಕರಪ್ಪ ಸಕ್ರಿ ಹೈಸ್ಕೂಲಿನ ಪ್ರಕಟಣೆಯಿದು. ಕ್ರೌ. ೧/೮ ದ ೮೪ ಪುಟಗಳು.

ಪ್ರಧಾನ ಸಂಪಾದಕರಲ್ಲದೆ ಸಂಪಾದಕಮಂಡಲಿಯಲ್ಲಿ ಬೇರೆ ಶಿಕ್ಷಕರೂ ವಿದ್ಯಾರ್ಥಿಗಳೂ ಇದ್ದಾರೆ. ಬಹುಭಾಗ ಕನ್ನಡ ಲೇಖನಗಳಿಗೇ ಮೀಸಲಾಗಿದ್ದುದು ಸಂತೋಷದ ಸಂಗತಿ. ಇಂಗ್ಲಿಷ್, ಹಿಂದಿ, ಮರಾಠಿ, ಸಂಸ್ಕೃತ ಭಾಷೆಯ ಲೇಖನಗಳಿಗೂ ಔಚಿತ್ಯವನ್ನರಿತು, ಸ್ಥಾನವನ್ನು ಕೊಡಲಾಗಿದೆ. ವಿದ್ಯಾರ್ಥಿಗಳ ಈ ಸಾಹಿತ್ಯ ರಂಗಭೂಮಿಯು ಕನ್ನಡಸಾಹಿತ್ಯದ ದಿವ್ಯಭವಿಷ್ಯಕ್ಕೆ ಒಳ್ಳೊಳ್ಳೆಯ ಸಾಹಿತ್ಯಿಕರನ್ನು ಒದವಿಸಲಿ

೫. His Holiness Jagadguru Shankaracharya of Dwaraka (ಜೀವನಪರಿಚಯ) ಬರೆದವರು ಶ್ರೀ. ಜೆ. ಬಿ. ಡುಕರ್ಾಲ್ ಎಂ. ಎ., ಡಿ. ಒ. ಸಿ. ಅವರು. ಪ್ರಕಾಶಕರು, ಶ್ರೀ. ಡಿ. ಬಿ. ಮಾಹುಲೀಕರ, ಗಾಂಧೀರೋಡು, ಅಹಮ್ಮದಾಬಾದ್. ಕ್ರೌ. ಅ. ೮ ಪುಟಗಳು.

೬. **ಧರ್ಮವಿಜ್ಞಾನ** (ಧರ್ಮವಿವೇಚನಾತ್ಮಕ ಗ್ರಂಥ) ಲೇಖಕರು ಶ್ರೀಮಾನ್ ಲಕ್ಷ್ಮೀನಾರಾಯಣ ಶಾಸ್ತ್ರಿಗಳು, ಕಂಚಾರ್ತಿ, ಕುಂದಾಪುರ ತಾಲೂಕು. ಪ್ರಕಾಶಕರು: ಶ್ರೀ ದ್ವಾರಕಾ ಜಗದ್ಗುರು ಸಂಸ್ಥಾನ, ಮುಳಬಾಗಿಲು ಶ್ರೀಕೃಷ್ಣಾನಂದಮಠ, ಪೋಸ್ಟ್ ದೂರ್ವಾಸಪುರಮ್. ಕ್ರೌ. ಅ. ೧೧೨ ಪುಟಗಳು. ಬೆಲೆ ೧-೧೨-೦.

೭. **ನಗೆನಾಣ್ಯ** (ಹಾಸ್ಯದ ತುಣುಕುಗಳ ಸಂಕಲನ)—ಸಂಕಲನಕಾರರು ಶ್ರೀ. ಎಚ್. ಆರ್. ನಾಗೇಶರಾವ್, ಬೆಂಗಳೂರು ಪ್ರಕಾಶಕರು ಚಾತಕ ಪ್ರಕಾಶನ, ಜರ್ನಲಿಸ್ಟ್ ಕಾಲನಿ, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು ೨. ಡೆ ೧/೧೬ ದ ೯೬ ಪುಟಗಳು. ಬೆಲೆ ೦-೬-೦.

೮. **ಮಲಯಮಾಣಿ** (ಸಾಹಿತ್ಯ ಸಂಪುಟ) ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರದ ಕರ್ನಾಟಕಸಂಘದ ವಿಶೇಷ ಪ್ರಕಟನೆ. ಸಂಪಾದಕರು ಶ್ರೀಯುತರುಗಳಾದ ಗಜಾನನಶರ್ಮಾ ಕಿಲ್ಲಾಳ, ಎಂ. ಎ, 'ಸಾಹಿತ್ಯರತ್ನ'; ಮಹಾಬಲೇಶ್ವರಶಾಸ್ತ್ರಿ ಹೊಸಮನೆ; ರಾಮಕೃಷ್ಣ ಹೆಗಡೆ ದೊಡ್ಮನೆ ಎಂ. ಎ., ಎಲ್ ಎಲ್. ಬಿ. ಅವರು. ಕ್ರೌ. ೧/೮ ದ ೧೦೮ ಪುಟಗಳು. ಬೆಲೆ ೧-೦-೦.

ಇದರಲ್ಲಿಯ ಹಲವಾರು ಲೇಖಕರು ಕನ್ನಡ ವಾಚಕವರ್ಗಕ್ಕೆ ಸಾಕಷ್ಟು ಪರಿಚಿತರಾಗಿರುವರು. ಉತ್ತರ ಕನ್ನಡ ಜಿಲ್ಲೆಯ ಕೆಲವು ಜನ ಹೊಸ ಲೇಖಕರ ಹೆಸರುಗಳೂ ಇದರಲ್ಲಿ ಅಲ್ಲಲ್ಲಿ ಕಾಣುತ್ತಿರುವುದು ಸಂತೋಷದ ಸಂಗತಿಯಾಗಿದೆ. ಕವನ, ಕಥೆ, ವೈಜ್ಞಾನಿಕ ಪ್ರಬಂಧ, ತತ್ತ್ವವಿವೇಚನೆ, ನಗೆಬರೆಹ ಮೊದಲಾದ ಸಾಹಿತ್ಯದ ವಿವಿಧ ರೂಪಗಳ ಇದರಲ್ಲಿ ಅಡಗಿಕೊಂಡಿವೆ ಕರ್ನಾಟಕ ಸಂಘಗಳು ಮಾಡುವ ಸಾಹಿತ್ಯ ಪ್ರಚಾರದ ಕಾರ್ಯದಲ್ಲಿ ಇದೂ ಒಂದು ರೀತಿ. ಇದನ್ನು ಯಶಸ್ವಿಯಾಗಿ ನೆರವೇರಿಸಿದ ಸಂಪಾದಕರಿಗೂ ಕ. ಸಂಘದ ಸಂಚಾಲಕರಿಗೂ ನಮ್ಮ ಹೃತ್ಪೂರ್ವಕ ಅಭಿನಂದನೆ.

೯. **ಹೈದರಾಬಾದು ಪ್ರದೇಶ-ಕನ್ನಡ ಸಾಹಿತ್ಯಪರಿಷತ್ತು** (೧೯೫೩-೫೪ರ ವಾರ್ಷಿಕವರದಿ) ಕಾರ್ಯದರ್ಶಿಗಳು ವಿದ್ವಾನ್ ವೀರೇಶ್ವರ ಶಾಸ್ತ್ರಿಗಳು. ಕ್ರೌ. ಅ. ೩೬ ಪುಟಗಳು.

ಈ ವರದಿಯನ್ನು ಓದಿನೋಡಿದರೆ, ಹೈದರಾಬಾದ್ ಕನ್ನಡ ಪ್ರದೇಶದ ಕನ್ನಡಿಗರ ಸ್ವಭಾಷಾಭಿಮಾನಜಾಗೃತಿಯ ಕಾರ್ಯಗಳ ನಾನಾ ಮುಖಗಳ ಪರಿಚಯವಾಗಿ, ಕರ್ನಾಟಕ ಅಭಿಮಾನಿಗಳ ಹೃದಯವು ಹಿಗ್ಗಿ ನಲಿಯುತ್ತಿವೆ. ಪರಿಷತ್ತಿನಿಂದ ಕನ್ನಡಭಾಷೆಯ ಸಂರಕ್ಷಣೆ-ಸಂವರ್ಧನೆಗಳಿತರ ಚಟುವಟಿಕೆಗಳೂ ನಡೆದಿವೆ ಸಂಸ್ಕೃತಿ ಜಾಗೃತಿಯೇ ಕನ್ನಡಿಗರ ಹೃದಯಗಳನ್ನು ಒಂದಾಗಿ ಬೆಸೆಯುವುದೆಂಬ ವಿಚಾರ, ಪರಿಷತ್ತಿನ ಸಂಚಾಲಕರಲ್ಲಿ ಸಂಪೂರ್ಣವಾಗಿ ಇದೆ.

ಶರತ್ ಪ್ರಕಾಶನ ಮಂದಿರ, ಧಾರವಾಡ.

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ವಾಚನಾಲಯಗಳಿಗೆ ಬೇಕಾಗುವ ಯಾವ [illegible] ನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರೈಯಿಸಲಾಗುವುದು.

ನಮ್ಮ ಮಂದಿರ ಪ್ರಕಟಿಸಿದ ಶ್ರೀ ಆನಂದಕಂದರ ಕೃತಿಗಳು

೧ ಮಗಳ ಮದುವೆ

ಸಾಮಾಜಿಕ ಕಾದಂಬರಿ, ಕ್ರಾ. ಅ. ೩೫೦ ಪುಟಗಳು ಬೆಲೆ ಸಾದಾ ಪ್ರತಿ ೪ ರೂ.

೨ ಬೆಳವಡಿ ಮಲ್ಲಮ್ಮ
(ತರಂಗ ನಾಟಕ)
ಪುಟ ೧೧೬ ಬೆಲೆ ೧-೮-೦

೩ ಕಾರಹುಣ್ಣಿವೆ
(ಕವನ ಸಂಕಲನ)
ಪುಟ ೧೩೮ ಬೆಲೆ ೨-೦-೦

೪ ಬೆಂದಹೃದಯ
ರೂಪಕ ಸಂಕಲನ
ಪುಟ ೧೧೨ ಬೆಲೆ ೧-೪-೦

ಈ ನಾಲ್ಕೂ ಪುಸ್ತಕ ಒಮ್ಮೆಲೆ ತರಿಸಿಕೊಂಡರೆ ಏಳು ರೂ. ಮಾತ್ರ. ಅಂಚೆವೆಚ್ಚ ಬೇರೆ.

ನಮ್ಮಲ್ಲಿ ದೊರೆಯುವ 'ಆನಂದಕಂದ' ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಒಡನಾಡಿ	ಬಡತನದ ಬಾಳು	ಕರ್ನಾಟಕ ಜನಜೀವನದ
ಸುದರ್ಶನ		ನಮ್ಮ ಬದುಕು	ಶ್ರೀ. ಬಸವಣ್ಣನ
ಅಶಾಂತಿಪರ್ವ		ಸಂಸಾರ ಚಿತ್ರ	
		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ 'ಚಿತ್ರಕಲಾಪ್ರವೇಶ'ವೂ ಚಾಡಿಯ ಚಾಣಕ್ಯನ 'ಜಾತೀಯ ಸಮಸ್ಯೆ' 'ಕರ್ನಾಟಕ ಏಕೀಕರಣ' ಈ ಕಿರುಹೊತ್ತಿಗೆಗಳೂ ದೊರೆಯುವವು.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ ಕೊಡಲಾಗುವದು.

ಸಂಚಾಲಕ :

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by N. A. Hoskeri at the Vijaya Press, Dharwar and published for the Jayanti publications, by S. D. Dharmatti at the Jayanti Office, Dhar[illegible]

ಜಯಂತಿ

ಜುಲೈ

…೯೫೫

ಬೆಲೆ:

… ಆಣೆಗಳು

ಅನುಭವ

ಕಿವಿಯು ಕೇಳಬೇಕು ಶುಭವ
ಕಣ್ಣು ನೋಡಬೇಕು ನಿಜವ
ನಾಲಗೆ ನುಡಿಹಾಡಬೇಕು
ಕಳೆ ತುಂಬಿದ ದಿಟವ !

ಕೈ ಒಳಿತಿಗೆ ಗೈಯಬೇಕು,
ಕಾಲು ಮುಂದುವರೆಯಬೇಕು—
ಅಮೃತದತ್ತ ತೆರಳಬೇಕು
ಎಂಬನುಭವವ....

ಕಳೆದ ನಿನ್ನೆ ಕಲಿವ ಇಂದು ಕೊಟ್ಟವೆ ತಿಳಿವ....
ನೀಡಿವೆ ವಿಭವ !

…ಪುಟ …

JAYANTI

ಸಂಚಿಕೆ ೨

ಈ ಸಂಚಿಕೆಯಲ್ಲಿ

●

ಶ್ರೀಮಾನ್ ಬುರ್ಲಿ ಬಿಂದುಮಾಧವರಿಗೆ ಸನ್ಮಾನ (ಸಂಪಾದಕೀಯ)
ಸಂಪಾದಕರು ೪೧

ಭಾವರೂಪಕಗಳು (ಕಿರುಗತೆ)
ಶ್ರೀ. ಹಾ. ವೆಂ. ನಾಗೇಶ, ಉಸ್ಮಾನಿಯಾ ಕಾಲೇಜ್, ಗುಲ್ಬರ್ಗಾ ೪೩

ಜಯಂತಿಗೆ ಸಹಾಯಧನ
ಸಂಪಾದಕರು ೪೩

ಗೌರಿಯ ಕಣ್ಣೀರು (ಸಣ್ಣ ಕತೆ)
'ಎನ್‌ಸೀಶಂ' ಮದರಾಸು ೪೫

ಅಸಗನ ವರ್ಧಮಾನಪುರಾಣದ ಕನ್ನಡ ವ್ಯಾಖ್ಯಾನ (ಸಂಶೋಧನಾತ್ಮಕ)
ಶ್ರೀ. ವೆಂ. ಬಿ. ಲೋಕಾಪುರ ಬಿ. ಎ., ಬಿ. ಟಿ., ಡಿ. ಬಿ. ಇ. ಹುಬ್ಬಳ್ಳಿ ೪೮

ಕ್ರಾಂತಿಗೆ ಆಹ್ವಾನ (ಕವನ)
ಶ್ರೀ. ಎಚ್. ಜೆ. ಉಪಾಧ್ಯಾಯ ಎಂ. ಎ. ಹೈದರಾಬಾದ್ ೪೯

ವಿವಾಹೇಚ್ಛು ತರುಣ-ತರುಣಿಯರ ಸಮ್ಮೇಲನ (ನಗೆಬರೆಹ)
ಶ್ರೀ. ಸಂಜೀವ ಲಕ್ಷ್ಮೇಶ್ವರ, ಬಿ. ಎ. ಮುಂಬಯಿ ೫೦

ಜೋಸೆಫ್ ಹೇನ್ರಿ (ವಿಜ್ಞಾನಿಯ ಪರಿಚಯ)
ಶ್ರೀ. ಟಿ. ಆರ್. ನಾಡಗೀರ ಬಿ. ಎಸ್ಸಿ (ಆನರ್ಸ್),
ಬಿ. ಎಸ್ಸಿ (ಟೆಕ್) ಮುಂಬಯಿ ೫೩

ಶಹಪುರದ ತಾವರೆಕೆರೆ (ಕವನ)
ಶ್ರೀ. ಜ. ಶ್ರೀ. ದೇಸಾಯಿ (ಜರಕುಂಟಿ) ಬಿ. ಎ., ಬಿ. ಟಿ. ಶಹಪೂರ ೫೮

ವರಾನ್ವೇಷಣ (ಒಂದು ಬಾಳಿನ ಅಣಕ)
ಶ್ರೀ. ವಾಸುದೇವ ಸಿಗ್ಗಾಂವಿ, ನೀರಸಾಗರ ೬೧

ಸಾಹಿತ್ಯಿಕರು ಮತ್ತು ಸಾಹಿತ್ಯ (ಅಧ್ಯಕ್ಷೀಯ ಭಾಷಣದಿಂದ)
ಶ್ರೀ. ಕೋಟ ಶಿವರಾಮ ಕಾರಂತರು, ಪುತ್ತೂರು ೬೫

ಮುಕ್ತಿ (ಸಣ್ಣ ಕಥೆ)
ಶ್ರೀ. ಎಚ್. ಎನ್. ದೇಶಪಾಂಡೆ, ಬಿ. ಎ., ಎಲ್ಎಲ್. ಬಿ. ಮುಂಬಯಿ ೬೯

ಪುಸ್ತಕವಿಮರ್ಶೆ (ಶ್ರೀರಂಗರ 'ಪ್ರಕೃತಿ')
ಶ್ರೀ. ಪಡಾರು ಮಹಾಬಲೇಶ್ವರಭಟ್ಟ, ಕೊಳನಾಡು (ದ. ಕ.) ೭೩

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ (ನವ್ಯಕವನ—ಸಣ್ಣ ಕತೆ)
ಶ್ರೀ. ಆರ್. ಜಿ. ಕುಲಕರ್ಣಿ ಮತ್ತು ಶ್ರೀ. ಕೆ. ಎಸ್. ಶರ್ಮಾ ೭೬

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟ

ಜಯಂತಿ

ಸಂಪುಟ ೧೮ ಸಂಚಿಕೆ ೨

ಕುಟುಂಬದಲ್ಲಿಯು
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ವ್ಯವಸ್ಥಾಪಕರು:
ಮತ್ತು
ಪ್ರಕಾಶಕರು:
ಶ್ರೀ. ಡಿ. ಶರತ್‌ಕುಮಾರ

**

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ ೫ ರೂ.
ಬಿಡಿ ಸಂಚಿಕೆ ೮ ಆಣೆ

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಶ್ರೀಮಾನ್ ಬುರ್ಲಿ ಬಿಂದುಮಾಧವರಿಗೆ ಸನ್ಮಾನ

ಸಾಮಾನ್ಯವಾಗಿ ಬುರ್ಲಿ ಬಿಂದುಮಾಧವರ ಹೆಸರನ್ನು ಕೇಳದವರು ಕನ್ನಡಿಗರಲ್ಲಿ ಅಪೂರ್ವರೆಂದೇ ಹೇಳಬಹುದು. ರಾಜಕೀಯ ಚಳವಳಿ, ಸಾಹಿತ್ಯಪ್ರಚಾರ—ಹೀಗೆ ಇಬ್ಬಗೆಯ ಕಾರ್ಯಗಳನ್ನೂ ಹಲವು ಕಾಲದಿಂದ ನಡೆಸಿಕೊಂಡು ಬಂದುದರಿಂದ, ಶ್ರೀಮಾನ್ ಬುರ್ಲಿಯವರನ್ನು ನಾಡಿನ ಪಂಡಿತರು - ಪಾಮರರು—ಎಲ್ಲರೂ ಚೆನ್ನಾಗಿ ಅರಿತಿರುವರು. ೧೯೨೦ನೆಯ ಇಸ್ವಿಯಿಂದ ಇದುವರೆಗಿನ ೩೫ ವರುಷಗಳ ಅವರ ಅವಿಚ್ಛಿನ್ನವಾದ ಕಾರ್ಯ, ಕನ್ನಡನಾಡಿನ ರಾಜಕೀಯ–ಸಾಂಸ್ಕೃತಿಕ ಅಭ್ಯುದಯಗಳೆರಡಕ್ಕೂ ಸಹಕಾರಿಯಾಗಿದೆಯೆಂಬುದನ್ನು ಒಪ್ಪದಿರುವುದೆಂದರೆ ಅದು ಕೃತಘ್ನತೆಯೇ ಸರಿ.

ಶ್ರೀಮಾನ್ ಬುರ್ಲಿಯವರು ತಮ್ಮ ಕಾರ್ಯದಿಂದಲೇ ತಮ್ಮ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದಾರೆ. ವಿಶ್ವವಿದ್ಯಾಲಯದ ಪದವಿ-ಬಿರುದುಗಳ ಪೇಟೆಯ ಬೆಲೆಯು ಬುರ್ಲಿಯವರಿಗಿಲ್ಲವೇನೋ ನಿಜ; ಆದರೆ ಯಾವ ಪದವೀಧರನೂ ಬೆರಗಾಗುವಷ್ಟು ಸಂಸ್ಕಾರವನ್ನು ಅವರು ಗಳಿಸಿಕೊಂಡಿದ್ದಾರೆ. ಯಾವ ಪದವೀಧರರಿಂದಲೂ ನೀಗದಂತಹ ರಾಜಕೀಯ ಸಾಹಸಗಳನ್ನು ಮಾಡಿದ್ದಾರೆ; ಸಾಂಸ್ಕೃತಿಕ ಚಟುವಟಿಕೆಗಳನ್ನು ಕೈಕೊಂಡು ನಡೆಯಿಸುತ್ತಿದ್ದಾರೆ.

ಬಾಗಿಲುಕೋಟೆಯ ಒಂದು ಸನಾತನ ಸಾಂಪ್ರದಾಯಿಕ ವೈದಿಕರ ಮನೆತನದಲ್ಲಿ ಹುಟ್ಟಿದ ಇವರು, ವಿದ್ಯಾರ್ಥಿದಶೆಯಿಂದಲೂ ಕನ್ನಡ ನಾಡು-ನುಡಿಗಳ ವಿಷಯದಲ್ಲಿ ಶ್ರದ್ಧೆ-ಪ್ರೀತಿಗಳನ್ನು ಬೆಳೆಸಿಕೊಂಡು ಬಂದವರು. ಮನೆತನದ ಪರಿಸ್ಥಿತಿಯ ಮೂಲಕ ಇವರು ಇಂಗ್ಲಿಷ ಕಲಿಯುವ ಹಂಬಲವನ್ನು ಹತ್ತಿಕ್ಕಿ, ಕನ್ನಡದ ಬೆನ್ನನ್ನೇ ಹಿಡಿದು, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ್ ಕಾಲೇಜಿನ ೩ನೆಯ ವರ್ಷದ ಸರ್ಟಿಫಿಕೇಟನ್ನು ಪಡೆದರು. ಇವರ ನೌಕರಿಯು ಪ್ರಾರಂಭವಾಗುವುದರಲ್ಲಿಯೇ ಮಹಾತ್ಮಾಗಾಂಧಿಯವರ ಅಸಹಕಾರ ಚಳವಳಿಯು ಪ್ರಾರಂಭವಾಯಿತು. ಕೂಡಲೆ ನೌಕರಿಯನ್ನು ಬಿಟ್ಟು, ಧಾರವಾಡದ ರಾಷ್ಟ್ರೀಯ ಮಹಾವಿದ್ಯಾಲಯದಲ್ಲಿ ಶಿಕ್ಷಕರಾಗಿ ಕೆಲಸ ಮಾಡತೊಡಗಿದರು. ಅದರೊಂದಿಗೆ ಧಾರವಾಡದಲ್ಲಿ ತಲೆಯೆತ್ತಿದ ಗೆಳೆಯರ ಗುಂಪಿನಲ್ಲಿ ಸೇರಿಕೊಂಡು, ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸತೊಡಗಿದರು. ರಾಷ್ಟ್ರೀಯ ಶಾಲೆಯಲ್ಲಿರುವ ವರೆಗೆ ಶ್ರೀಮಾನ್ ಬುರ್ಲಿಯವರ ಕ್ಷಾತ್ರ ಸಾಹಸ ಅಷ್ಟೊಂದು ಪ್ರಕಟವಾಗಿರಲಿಲ್ಲ; ಆದರೆ ಅವರು ಶಿಕ್ಷಕವೃತ್ತಿಯಿಂದ ನಿವೃತ್ತರಾಗಿ ಹಿಂದುಸ್ತಾನ್ ಸೇವಾದಲದ ಕಾರ್ಯಕರ್ತರಾಗಿ ಹೋದ ಮೇಲೆ ಶ್ರೀ. ಬುರ್ಲಿಯವರ ಛಲಗಾರಿಗೆ, ಕಠೋರ ರಾಷ್ಟ್ರಪ್ರೀತಿ, ಕರ್ತೃತ್ವಶಾಲಿತ್ವ, ಆಪತ್ತಿಗಳಿಗೆ ಎದೆಯೊಡ್ಡಿ ನಿಲ್ಲಬಲ್ಲ ಗಂಡೆದೆ—ಇವೆಲ್ಲ ಒಂದೊಂದಾಗಿ ಪ್ರಕಟವಾಗತೊಡಗಿದುವು.

ಕರ್ನಾಟಕದಲ್ಲಿ ನಡೆದ ಕರನಿರಾಕರಣ ಚಳವಳಿಯಲ್ಲಿ, ಉಪ್ಪಿನ ಸತ್ಯಾಗ್ರಹಸಮರದಲ್ಲಿ, ಶ್ರೀಮಾನ್ ಬುರ್ಲಿಯವರು ಮುಂದಾಳಾಗಿ ನಿಂತು ಕೆಲಸಮಾಡಿ, ಬ್ರಿಟಿಶ್ ಸರಕಾರದ ಸೆರೆಮನೆಯ ಸಂಕಷ್ಟಗಳನ್ನು ಬೇಕಾದಷ್ಟು ಸಲ ಸಹಿಸಿದರು. ರಾಷ್ಟ್ರೀಯ ಮಹಾಸಭೆಯ ವ್ಯಕ್ತ-ಕಾರ್ಯಕ್ರಮವೇ ಇರಲಿ, ಗುಪ್ತಕಾರ್ಯಕ್ರಮವೇ ಇರಲಿ, ಅದರಲ್ಲಿ ಶ್ರೀ. ಬುರ್ಲಿಯವರು ಇದ್ದೇ ಇರುತ್ತಿದ್ದರು. ಅದರೊಂದಿಗೆ ಕರ್ನಾಟಕ ಏಕೀಕರಣದ ಕಾರ್ಯಕಲಾಪಗಳಲ್ಲಿಯೂ ತುಂಬ ನಿಷ್ಠೆಯಿಂದ ಭಾಗವಹಿಸುತ್ತಿದ್ದರು.

ಕನ್ನಡ ನಾಡಿನ ಮಿಕ್ಕ ಕಾಂಗ್ರೆಸ್ ಧುರೀಣರು ಕರ್ನಾಟಕ ಏಕೀಕರಣದ ಚಳವಳಿಯ ಕಡೆಗೆ ಕೀಳ್ಗಣ್ಣುಗಳಿಂದ ನೋಡುತ್ತಿದ್ದಾಗಲೂ ಶ್ರೀ. ಬುರ್ಲಿಯವರು ಆತ್ಮೀಯಭಾವದಿಂದ

ಅದರಲ್ಲಿ ಭಾಗವಹಿಸುತ್ತಿದ್ದರು. ಇದಕ್ಕಾಗಿಯೆ ಅವರು ಕಾಂಗ್ರೆಸ್ಸಿಗರ ಲೋಕದಲ್ಲಿ ತೊಂದರೆಯನ್ನು ಅನುಭವಿಸಿದುದೂ ಉಂಟು. ಆದರೆ ಯಾರೂ ಮಾಡದಷ್ಟು ಕಾಂಗ್ರೆಸ್ಸಿನ ಕಾರ್ಯವನ್ನು ಶ್ರೀ. ಬುರ್ಲಿಯವರು ಒಬ್ಬರೇ ನಿರ್ವಹಿಸುತ್ತಿದ್ದುದರಿಂದ, ವಿರೋಧಿಗಳಿಗೆ ಇವರೆದುರು ಬಾಯಿಮುಚ್ಚಿಕೊಂಡು ಇರಬೇಕಾಗುತ್ತಿತ್ತು.

೧೯೪೦ರ ವೈಯಕ್ತಿಕ ಸತ್ಯಾಗ್ರಹ ಚಳವಳಿಯ ಕಾಲದಲ್ಲಂತೂ ಶ್ರೀ. ಬುರ್ಲಿಯವರು ಮಾಡಿದ ಕಾರ್ಯ ಅಭೂತಪೂರ್ವವಾದುದು. ಮರೆಯಲ್ಲಿದ್ದುಕೊಂಡೇ ನಾಡಿನಲ್ಲೆಲ್ಲ ತಿರುಗಿ ಚಳವಳಿಯನ್ನು ಸಂಘಟಿಸಬೇಕಾಗುತ್ತಿದ್ದುದರಿಂದ, ಅನೇಕ ಬಗೆಯ ಕಷ್ಟನಷ್ಟಗಳನ್ನು ಇವರು ಅನುಭವಿಸಬೇಕಾಯಿತು. ಯಾವಾಗಲೂ ಕಣ್ಣಿಟ್ಟು ಬೆನ್ನುಹತ್ತಿ ಹುಡುಕುತ್ತಿದ್ದ ಪೋಲೀಸರ ಹಿಂಡ. ಊಟ ಸಿಕ್ಕರೆ ಸಿಕ್ಕಿತು, ಇಲ್ಲದಿದ್ದರೆ ಉಪವಾಸ. ಬರವಣಿಗೆಯ ವೃತಿಗಳು ಬೇರೆ. ಹಗಲು ಯಾರ ಕಣ್ಣಿಗೂ ಬೀಳುವಂತಿಲ್ಲ; ರಾತ್ರಿಯಲ್ಲಿಯೇ ರಹಸ್ಯವಾಗಿ ತಮ್ಮ ಚಟುವಟಿಕೆಗಳನ್ನು ನಡೆಸಬೇಕು. ಇಂತಹ ಸಂಕಟಗಳಲ್ಲಿಯೆ ಇವರು ಕರ್ನಾಟಕದ ಉತ್ತರತುದಿಯಿಂದ ದಕ್ಷಿಣತುದಿಯ ವರೆಗೆ, ಹಳ್ಳಿಯೆಂದರೆ ಹಳ್ಳಿ— ಪಟ್ಟಣವೆಂದರೆ ಪಟ್ಟಣ— ತಿರುಗಾಡಿ, ಜನರಲ್ಲಿ ಸ್ವಾತಂತ್ರ್ಯಜಾಗೃತಿಯನ್ನು ಹುಟ್ಟಿಸುತ್ತಿದ್ದರು. ಕೊನೆಗೆ ಕೊಲ್ಹಾಪೂರದಲ್ಲಿ ಪೋಲೀಸರು ಇವರ ಸುಳುವನ್ನು ಕಂಡುಹಿಡಿದಾಗ, ಜೊತೆಯಲ್ಲಿದ್ದವರನ್ನೆಲ್ಲ ಧೈರ್ಯದಿಂದ ದಾಟಿಸಿ, ತಾವೊಬ್ಬರೇ ಪೋಲೀಸರ ಕೈಗೆ ಸಿಕ್ಕರು. ಈ ಚಳವಳಿಯ ಕಾಲದಲ್ಲಿ ಶ್ರೀ. ಬುರ್ಲಿಯವರೊಬ್ಬರೇ ಅಲ್ಲ; ಅವರ ಕುಟುಂಬದವರೆಲ್ಲ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆಯ ಸುಖವನ್ನು ಅನುಭವಿಸುತ್ತಿದ್ದರು.

ಭಾರತದ ಸ್ವಾತಂತ್ರ್ಯಕ್ಕಾಗಿ ಶ್ರೀ. ಬುರ್ಲಿಯವರು ದುಡಿದ ದುಡಿಮೆಯನ್ನು ಲಕ್ಷ್ಯದಲ್ಲಿ ತಂದರೆ, ನಮ್ಮ ಜನತೆ ಅವರನ್ನು ರಾಜ್ಯದ ಇಲ್ಲವೆ ಕೇಂದ್ರದ ಮಂತ್ರಿಪದವನ್ನು ಕೊಟ್ಟು ಗೌರವಿಸಬೇಕು; ಆದರೆ ಸ್ವಾತಂತ್ರ್ಯಪ್ರಾಪ್ತಿಯ ತರುವಾಯದ ಕಾಂಗ್ರೆಸಿನ ರೀತಿ-ನೀತಿಗಳೇ ತಲೆಕೆಳಗಾಗಿವೆ. ಸ್ವಾತಂತ್ರ್ಯಕ್ಕಾಗಿ ತಮ್ಮ ಜೀವನವನ್ನೆ ಪಣವನ್ನಾಗಿ ಒಡ್ಡಿ ಕಾರ್ಯಮಾಡಿದ ದೇಶಭಕ್ತರು ಯಾವ ಮೂಲೆಯಲ್ಲಿ ಕುಳಿತರೋ; ಆಯತ್ತ ಸಮಯದಲ್ಲಿ ಟೋಪಿಯನ್ನು ಬದಲಾಯಿಸಿಕೊಂಡು ಬಂದ 'ನಕಲೀ ದೇಶಭಕ್ತರೇ' ರಾಜ್ಯದ - ರಾಷ್ಟ್ರದ ಅಧಿಕಾರಗಳನ್ನು ಆಕ್ರಮಿಸಿಕೊಂಡು ಕುಳಿತರು. ಇಷ್ಟಾದರೂ ಶ್ರೀ. ಬುರ್ಲಿಯವರು ಪಶ್ಚಾತ್ತಾಪಪಡುತ್ತಿಲ್ಲ; ಅಸಂತುಷ್ಟಿ-ಅತೃಪ್ತಿಗಳನ್ನು ಪ್ರಕಟಿಸುತ್ತಿಲ್ಲ. ಕಾಂಗ್ರೆಸಿನ ಕಾರ್ಯಗಳನ್ನು ನಿಷ್ಕಾಮಕರ್ಮಬುದ್ಧಿಯಿಂದ ಮಾಡಿಯೆ ಮಾಡುತ್ತಾರೆ. ತತ್ತ್ವನಿಷ್ಠ ಗಾಂಧೀಭಕ್ತರಾದುದರಿಂದ, ಕೈಬೆಚ್ಚಗೆ ಮಾಡಿಕೊಳ್ಳುವ ಈ ಅನುಕೂಲ ಕಾಲದಲ್ಲಿಯೂ ಇವರು ಮಾಡಿಕೊಳುವುದಿಲ್ಲ. ಆದುದರಿಂದಲೇ, ಅನೇಕ ಕಾಂಗ್ರೆಸ್ ಕಾರ್ಯಕರ್ತರು ಇಂದು ಮಹಡಿಯ ಮನೆ ಕಟ್ಟಿಸಿಕೊಂಡು ಮೋಟಾರಿನಲ್ಲಿ ಮೆರೆದಾಡುತ್ತಿದ್ದರೂ, ಶ್ರೀ. ಬುರ್ಲಿಯವರು ತಮ್ಮ ಸುದಾಮಾವಸ್ಥೆಯಲ್ಲಿಯೇ ಆಯುಷ್ಯವನ್ನು ನೂಕುತ್ತಿದ್ದಾರೆ.

ಶ್ರೀ. ಬುರ್ಲಿಯವರು ಕಾಯಕವೆಂದು ತಮ್ಮ ಮಿಂಚಿನಬಳ್ಳಿ ಗ್ರಂಥಮಾಲೆಯನ್ನು ಪ್ರಾರಂಭಿಸಿದರು. ಅದರಲ್ಲಿಯೂ ಜೀವನದ ಗಂಭೀರವಿಚಾರಗಳನ್ನು ತಿಳುಹುವ ಜ್ಞಾನದಾಯಕ ಗ್ರಂಥಗಳನ್ನೇ ಪ್ರಕಟಿಸುವುದಾಗಿ ಪ್ರತಿಜ್ಞೆಮಾಡಿ ಹೊರಟರು. ಆದರೆ ಸಾಹಿತ್ಯಕಾರ್ಯದಿಂದ ಉಪಜೀವನ ನಡೆಯಿಸುವಂತಹ ಪರಿಸ್ಥಿತಿ ನಮ್ಮ ನಾಡಿನಲ್ಲಿ ಎಲ್ಲಿದೆ? ಮಿಂಚಿನಬಳ್ಳಿಯು ಶ್ರೀ. ಬುರ್ಲಿಯವರಿಗೆ ಆರ್ಥಿಕರೀತಿಯಿಂದ ಸಿಡಿಲಿನಬಳ್ಳಿಯೆ ಆಯಿತು. ತಮ್ಮ ಹೊಟ್ಟೆಗೆ ಹಿಟ್ಟು ದೊರಕಿಸಬೇಕೆಂದು ಹೊರಡಿಸಿದ ಮಿಂಚಿನಬಳ್ಳಿಯ ಹೊಟ್ಟೆಯನ್ನೇ ಶ್ರೀ. ಬುರ್ಲಿಯವರು ಸಾಲಮಾಡಿ ತುಂಬಬೇಕಾಯಿತು.

ಮಿಂಚಿನಬಳ್ಳಿ ಬಡವರಾದ ಶ್ರೀ. ಬುರ್ಲಿಯವರ ಸಂತಾನವಾದರೂ, ನಾಡಿಗೆ ಅದು ಸಲ್ಲಿಸಿದ ಸೇವೆ ಅಲ್ಪಸ್ವಲ್ಪವಲ್ಲ. ಯಾವ ಸಿರಿವಂತನೂ ಬುರ್ಲಿಯವರಷ್ಟು ಜ್ಞಾನಪ್ರಸಾರದ ಕಾರ್ಯವನ್ನು ಮಾಡಿರಲಾರನು. ಮಿಂಚಿನಬಳ್ಳಿಯ ಮುಖಾಂತರ ಅವರು ಈಗಾಗಲೆ ೬೦ಕ್ಕಿಂತ ಹೆಚ್ಚಿಗೆ ವಿವಿಧವಿಷಯಕ ಗ್ರಂಥಗಳನ್ನು ಕನ್ನಡಿಗರಿಗೆ ಸಲ್ಲಿಸಿದ್ದಾರೆ; ಅದರೊಂದಿಗೆ ಸಾಲದ ಹೊರೆಯಲ್ಲಿ ಸಿಕ್ಕಿಕೊಂಡು ನರಳುತ್ತಲೂ ಇದ್ದಾರೆ.

ಈಗ ಕೆಲವು ಜನರಿಗಾದರೂ ಶ್ರೀ. ಬುರ್ಲಿಯವರ ಕಾರ್ಯದ ಬೆಲೆಯ ಅರಿವಾಯಿತು. ಇದೊಂದು ನಮ್ಮ ನಾಡಿಗೆ ಶುಭಲಕ್ಷಣವೆಂದೇ ಹೇಳಬೇಕು. ಬುರ್ಲಿಯವರ ಆಪ್ತಸ್ನೇಹಿತರು ಕೆಲವರು ಸೇರಿ, ಅವರಿಗೆ ಶಕ್ಯವಿದ್ದಷ್ಟು ನಿಧಿಯನ್ನು ಸಮರ್ಪಿಸಬೇಕೆಂದಿರುವರಲ್ಲದೆ, ಸಾರ್ವಜನಿಕವಾಗಿ ಅವರನ್ನು ಸತ್ಕರಿಸಬೇಕೆಂದಿದ್ದಾರೆ. ಕಾರ್ಯನಿಷ್ಠರಾದ ಬುರ್ಲಿಯವರಿಗೆ ಇದೊಂದು ಮಹತ್ತ್ವದ ಸಂಗತಿಯಾಗಿ ಕಾಣದೆ ಹೋದರೂ, ಕನ್ನಡಿಗರಲ್ಲಿ ಕೃತಜ್ಞತಾಬುದ್ಧಿ ಜಾಗೃತವಾಗಿದೆ ಎಂಬ ಶುಭಸೂಚನೆಯು ಈ ಸತ್ಕಾರಸಮಾರಂಭದಿಂದ ಸಿದ್ಧವಾದಂತಾಯಿತು.

ಶ್ರೀಮಾನ್ ಬುರ್ಲಿಯವರ ಕಾರ್ಯದ ಲಾಭವು ಕನ್ನಡ ನಾಡಿಗೆ ಬಹುಕಾಲದೊರಕುವಂತಾಗಲಿ!

—ಸಂಪಾದಕರು

ಅರಸಿಕರು ಮತ್ತು ಮೂರು ಭಾವರೂಪಕಗಳು

ಶ್ರೀ. ಹಾ. ಮಾ. ನಾಗೇಶ, ಉಸ್ಮಾನಿಯಾ ಕಾಲೇಜು, ಕಲಬುರ್ಗಿ

ಜಯಂತಿಗೆ ಸಹಾಯಧನ

ಜಯಂತಿಯ ಆರ್ಥಿಕಸಂಕಟವು ನಮ್ಮ ನಾಡಿಗರಿಗೆ ಅರಿಯದ ವಿಷಯವೇನೂ ಅಲ್ಲ. ಜಯಂತಿಯ ಜೀವನವನ್ನು ಸುಭದ್ರಗೊಳಿಸಬೇಕಾದರೆ, ಸಿರಿವಂತರ ಔದಾರ್ಯದ ನೆರವು ಇಲ್ಲದೆ ಬೇರೆಗತಿಯಿಲ್ಲ. ಅದಕ್ಕಾಗಿಯೆ ನಾನು ಬಿನ್ನವಿಸಿ, ಕೊಂಡುದಕ್ಕೆ ಮನ್ನಣೆಯಿತ್ತು, ಕೆಳಗೆ ಕಾಣಿಸಿದ ಮಹನೀಯರು ಜಯಂತಿಗೆ ಸಹಾಯಧನವನ್ನು ಕಳುಹಿದಾರೆ:

ಶ್ರೀ ಶ್ರೀ ಪೇಜಾವರ ಮಠದ ಶ್ರೀವಿಶ್ವೇಶತೀರ್ಥ ಸ್ವಾಮಿಗಳವರು (ಪ್ರಥಮಪ್ರಸಾದವಾಗಿ)

೨೫ ರೂಪಾಯಿಗಳು.

ಶ್ರೀಮಾನ್ ದೊಡ್ಡಮೇಟಿ ಅಂದಾನಪ್ಪನವರು, ಜಕ್ಕಲಿ
(ಜಯಂತಿಯ ವಿಷಯಕವಾದ ಮೆಚ್ಚಿಕೆಯೊಂದಿಗೆ)

೧೦೦ ರೂಪಾಯಿಗಳು.

ಶ್ರೀಮತಿ ಗಂಗೂಬಾಯಿ ಹಾನಗಲ್ಲ, ಸಂಗೀತವಿದುಷಿ, ಹುಬ್ಬಳ್ಳಿ (ಮಮತೆಯ ಹಾರಯಿಕೆಯೊಂದಿಗೆ)

೨೫ ರೂಪಾಯಿಗಳು.

ಸಹಾಯಧನವನ್ನು ಸಲ್ಲಿಸಿದ ಉದಾರಮಹನಿಯರಿಗೆ ಕೃತಜ್ಞತೆಯ ವಂದನೆಗಳು. ಕನ್ನಡನಾಡಿನ ಬೇರೆ ಸಿರಿವಂತರ ಔದಾರ್ಯದ ಲಾಭವೂ ಜಯಂತಿಗೆ ದೊರೆಯುವುದೆಂದು ಹಾರಯಿಸಿಕೊಂಡಿದ್ದೇನೆ.

ಬೆಟಗೇರಿ ಕೃಷ್ಣಶರ್ಮ

ಅರಸಿಕರು

卐

ಅದೇ ಮಾಗುವುದರಲ್ಲಿದ್ದ ಫಲವೃಕ್ಷದ ಸುಮಧುರ ಫಲಗಳ ಮೇಲುಹೊದಿಕೆಯನ್ನು ಕೆಲವು ಅಳಿಲುಗಳು ಬಂದು ಕಚ್ಚಿ ನೋಡಿದುವು. 'ಇದರಲ್ಲೇನೂ ಸವಿಯಿಲ್ಲ' ಎಂದು ಕೆಲವು ಹಿಂದಿರುಗಿದುವು. 'ಒರಟುಹಣ್ಣು; ರಸವೇನಿದೆ ಇದರಲ್ಲಿ!' ಎಂದು ಕಿರುಚುತ್ತಾ ಕೆಲವು ಓಡಿಹೋದುವು. 'ತೀರ ನಿಸ್ಸಾರ ಫಲಗಳು' ಎಂದು ಚಿಲಿಮಿಲಿಗುಟ್ಟುತ್ತಾ ತಾವು ಬಂದಲ್ಲಿಗೆ ಕೆಲವು ಹಾದಿ ಹಿಡಿದುವು....

ಒಂದೇ ಒಂದಾದರೂ ಒಳದಿರುಳನ್ನು ತಿನ್ನಲಿಲ್ಲ. ಆ ಅಮೃತೋಪಮ ರಸವನ್ನು ಆಸ್ವಾದಿಸಲಿಲ್ಲ. ಒರಟುಹಣ್ಣೆಂದು ಪಾಪಿ ನಾಲಗೆಯಿಂದ ಆ ರಸಭರಿತ ಸುಮಧುರ ಫಲಗಳನ್ನೇ ದೂರಿಕೊಂಡುವು!

ಬಾಳಿನ ಮೇಲುಮೇಲಿನಷ್ಟನ್ನೇ ಕೆಲವು ಮನುಷ್ಯರು ನೋಡಿದರು. ಬಾಳಿನ ನಿಸ್ಸಾರಸಿಪ್ಪೆಯ ರುಚಿ ನೋಡಿದರು. 'ಥೂ! ತೀರ ನಿಸ್ಸಾರ!' ಎಂದು ಕೆಲವರು ಛೀಮಾರಿ ಹಾಕಿದರು. 'ಸೊಗಸೇನೂ ಇಲ್ಲ' ಎಂದು ಹಲವರು ಕುರುಡುಗಣ್ಣುಗಳಿಂದ ವಿಮರ್ಶಿಸಿ ಹೊರಟುಹೋದರು. 'ಹಾಳುಬಾಳು; ರಸವೇನಿದೆ ಇದರಲ್ಲಿ?' ಎಂದು ಗೊಣಗುಟ್ಟುತ್ತ ಮತ್ತೆ ಹಲವರು ಹಾದಿ ಹಿಡಿದರು........

ಒಬ್ಬರೇ ಒಬ್ಬರಾದರೂ ಬಾಳಿನ ಒಳದಿರುಳಿನ ರುಚಿ ನೋಡಲಿಲ್ಲ. ಜೀವನವೃಕ್ಷದ ಸುಂದರ ಸುಮಧುರ ಫಲದ ಸವಿ ನೋಡಲಿಲ್ಲ. ಪಾಪಿ ನಾಲಗೆಯಿಂದ ಜೀವವೃಕ್ಷದ ಫಲವನ್ನೇ ದೂರಿಕೊಂಡರು; ಬಾಳನ್ನೇ ಹಳಿದುಕೊಂಡರು.

ಲಾಲಿ

卐

ಅಳುವ ಮಗುವನ್ನು ಸಂತಯಿಸುವವರು ಬೇಕು. ಅದರ ಸಾಂತ್ವನಕ್ಕೆ ಲಾಲಿ ಹೇಳುವವರು ಬೇಕು. ಆದರೆ ಅಳುವ ಮಗುವನ್ನು ಯಾರೂ ಪ್ರೀತಿಸುವುದಿಲ್ಲ. ಎಲ್ಲರೂ ಅಸಡ್ಡೆಯಿಂದ ನೋಡುತ್ತಾರೆ. ಪಾಪ!—ಅದು ಅಳುತ್ತಲೇ ಇರಬೇಕು.

ನಗುವ ಮಗುವಿಗೆ ಯಾರ ಲಾಲಿಯೂ ಬೇಕಾಗಿಲ್ಲ. ಅದನ್ನು ಮೆಚ್ಚಿಸಲು ಯಾರ ಅಚ್ಚಿಯೂ ಬೇಕಾಗಿಲ್ಲ. ಆದರೆ ಎಲ್ಲರೂ ಅದನ್ನು ಪ್ರೀತಿಸುತ್ತಾರೆ; ಗೌರವಿಸುತ್ತಾರೆ. ಅದು ನಗುತ್ತಲೇ ಇರುತ್ತದೆ!

ಪತಿತರನ್ನು ಉದ್ಧಾರಮಾಡುವವರು ಬೇಕು. ಅಸಹಾಯಕರಿಗೆ ಸಾಂತ್ವನವೀಯುವವರು ಬೇಕು. ಆದರೆ ಯಾರೂ ಅವರತ್ತ ಕಣ್ಣೆತ್ತಿ ಕೂಡ ನೋಡುವುದಿಲ್ಲ. ಅವರನ್ನು ತಿರಸ್ಕಾರದಿಂದ ನೋಡುತ್ತಾರೆ; ಛೀತ್ಕಾರ ಹಾಕುತ್ತಾರೆ. ಪತಿತರು ಯಾವಾಗಲೂ ತಮ್ಮ ನಿಸ್ಸಹಾಯಕತೆಯಲ್ಲೇ ಮುಳುಗೇಳುತ್ತಿರಬೇಕಾಗುತ್ತದೆ.

ಬಲವಂತನಿಗೆ ಯಾರ ಸಹಾಯವೂ ಬೇಕಾಗಿಲ್ಲ. ಯಾರ ನೆರವೂ ಅಗತ್ಯವಿಲ್ಲ. ಆದರೆ ಎಲ್ಲರೂ ಅವನ ಸಹಾಯಕ್ಕೆ ಧಾವಿಸುತ್ತಾರೆ; ಅವನನ್ನು ಗೌರವಿಸುತ್ತಾರೆ. ಆತನು ತನ್ನ ಬಲದ, ಸಿರಿಸಂಪತ್ತಿನ ರಾಶಿಯಲ್ಲಿ ಲೋಲಾಡುತ್ತಿರುತ್ತಾನೆ!

ಪಂಚಭೂತವಿಲಯನ

卐

ಆ ಮಹಾಮಾಯಿ ದೇವನು ಮನುಷ್ಯನನ್ನು ಪಂಚಭೂತಗಳಿಂದ ಸೃಷ್ಟಿಸಿ ಇಲ್ಲಿಗೆ ಕಳುಹಿಸಿದ. ನೆಲ, ಜಲ, ಅನಿಲ, ಅನಲ ಖಗೋಲಗಳೇ ಆ ಪಂಚಭೂತಗಳು. ಹೇಗೆ ಸೃಷ್ಟಿಯು ಅವನ ಕೈವಾಡವಾಗಿತ್ತೋ ಲಯವೂ ಅವನ ಕೈವಾಡವಾಗಿತ್ತು. ತಾನು ಯಾವ ಪಂಚಭೂತಗಳಿಂದ ಒಂದು ಸೃಷ್ಟಿಯನ್ನು ವಿರಚಿಸಿದನೋ, ಆ ಪಂಚಭೂತಗಳನ್ನು ತಿರುಗಿ ತನ್ನಲ್ಲಿ ವಿಲಯಿಸಿಕೊಳ್ಳುವ ಹಂಬಲ ನಿತ್ತು ಆತನಿಗೆ. ಕ್ಷಿಪ್ರ ಅವುಗಳನ್ನು ಆತ ತನ್ನಲ್ಲಿಗೆ ಬರಸೆಳೆದ.

ಬೆಂಕಿಯಿಂದ ಹೃದಯ ಹೊತ್ತಿಸಿದ. ಅದು ಕೆಲಕಾಲ ಉರಿದು ತನ್ನ ಪೂರ್ವಸಾನ್ನಿಧ್ಯಕ್ಕೆ ಮರಳಿತು. ಕಂಬನಿಯಾಗಿ ಹರಿದು ನೀರು ಆ ಪೂರ್ವಪುರುಷನಲ್ಲಿ ಲೀನವಾಯಿತು. ಬಾಳೆಲ್ಲ ಗಾಳಿಯಾಗಿ ಅವನ ಉಸಿರಿನಲ್ಲಿ ಸೇರಿಕೊಂಡಿತು. ಮನುಷ್ಯನ ಬಾಳೇ ಮಣ್ಣಾಯಿತು. ಅದು ಅತಿ ಶೂನ್ಯಾಕಾಶದಲ್ಲಿ ಲೀನವಾಯಿತು.

...... ಇದೇ ಆ ಪಂಚಭೂತವಿಲಯನ!

ಅಹಂ ಸರ್ವಾಸ್ಮಿ

卐

'ಅಹಂ ಸರ್ವಾಸ್ಮಿ' – ಅದು ನನ್ನ ಹುಟ್ಟುಗುಣ. ಕಂಡಕಂಡದ್ದಕ್ಕೆಲ್ಲ 'ನಾನೇ ದೊರೆ' ಎಂದು ಹೇಳಿಕೊಳ್ಳುವವನು ನಾನು.

ಈ ಲೋಕ ನನಗೆ ಎಡೆಕೊಡುವುದಿಲ್ಲ. 'ನಾನೇ ಎಲ್ಲ–ಎಲ್ಲಕ್ಕೂ ನಾನೇ' ಎಂದಂತೆಲ್ಲ ಈ ಲೋಕ ನಗುವುದು; ಪರಿಹಾಸ ಮಾಡುವುದು; ಸ್ಪರ್ಧಿಸಿಯೂ ಸ್ಪರ್ಧಿಸುವುದು. ಈ ಹಾಳುಲೋಕದ ಸಹವಾಸವೇ ಸಾಕೆನ್ನಿಸುತ್ತಿದೆ.

ನಾನೇ ಸರ್ವಶ್ರೇಷ್ಠನೆಂದು ಹಾಡಿದೆ; ನನಗೂ ಮಿಗಿಲಾಗಿ ಹಾಡುವವರನ್ನು ತೋರಿಸಿತು ಈ ಲೋಕ. ನಾನೇ ಸರ್ವೋತ್ತಮನೆಂದು ಬರೆಯಹೋದೆ; ನನಗೂ ಸರಿ ಮಿಗಿಲಾಗಿ ಬರೆಯುವವರನ್ನು ಎತ್ತಿ ತೋರಿಸಿತು ಈ ಲೋಕ. ನನಗೆ ಸರಿದೊರೆಯಾರೆಂದು ನೆಲವನ್ನು ಗೆದೆಯಹೊರಟೆ. ಆದರೆ ನನಗಿಂತಲೂ ಶೂರರೂ ವೀರರೂ ಆದವರನ್ನು ಇದಿರು ಹಿಡಿಯಿತು ಈ ಜನ. ಸರ್ವಮಾನ್ಯನೆಂದು ನಾನು ಉಪದೇಶಿಸಹತ್ತಿದೆ. ನನ್ನನ್ನು ಮೀರುವ ಉಪದೇಶಕರನ್ನು ಕೊಟ್ಟಿತು ಈ ಲೋಕ.

ಈ ನಿರಂತರಸ್ಪರ್ಧೆಯಿಂದ ಬೇಸತ್ತು ಗುಡ್ಡವೊಂದರ ಮೇಲೆ ಕುಳಿತು, ಏಕಾಂಗಿಯಾಗಿ ಪ್ರಕೃತಿಯ ಉಪಾಸನೆಯಲ್ಲಿ ತೊಡಗಿದೆ. ಅನತಿದೂರದಲ್ಲಿ ಒಂದು ಚಿಕ್ಕ ಪಕ್ಕಿ ನನ್ನನ್ನು ಸಗರ್ವ ನೋಡುತ್ತ 'ನಾನೇ ದೊರೆ' ಎಂಬ ರೀತಿಯಲ್ಲಿ ತಾನೂ ನಿರುಕಿಸುತ್ತ ನಿಸರ್ಗೋಪಾಸನೆಯಲ್ಲಿ ತಲ್ಲೀನವಾಯಿತು. ನಾನು ನನ್ನ 'ಸರ್ವಾಸ್ಮಿತ್ವ'ಕ್ಕೆ ಇಲ್ಲೂ ಎದುರಾದ ಸ್ಪರ್ಧೆಯನ್ನು ಕಂಡು ಹತಾಶನಾದೆ.

---

೧. ಜೀವನದ ಬಾಂದಳ

(ವಿಚಾರತರಂಗ)

ಶ್ರೀ. ವಸಂತ ಕುಷ್ಟಿಗಿ ಬಿ. ಎ. ಹೈದರಾಬಾದ್

卐

ಜೀವನದ ಬಾಂದಳದಲ್ಲಿ ಎಷ್ಟೋ ಆಶೆಗಳು ದೈವಸೃಷ್ಟಿಯ ಬಾಂದಳದಲ್ಲಿಯ ಮೋಡಗಳಂತಿರುತ್ತವೆ. ಕೆಲವು ಸಲ ಆ ಮೋಡಗಳು ಒಂದಕ್ಕೊಂದು ಸಂಧಿಸಿದಾಗ ಸವಿಮಾತಿನಿಂದ ಗುಡುಗಿನ ಮಿದುನಡುಗನ್ನು ಹುಟ್ಟಿಸಿ ಭೂಲೋಕಕ್ಕೆ ಮಳೆಯನ್ನು ತಂದು ಸುಖದ ಸುಧಾಪಾನವನ್ನು ಮಾಡಿಸುತ್ತದೆ. ಅದರ ಹಾಗೆಯೇ ಜೀವನದ ಆಶೆಗಳು ಕೆಲವು ಸಲ ಫಲಿಸಿ ಫಲ ಕೊಡುತ್ತವೆ; ಇಲ್ಲವಾದರೆ ಕಗ್ಗಾದ ಕಾಯಾಗಿ ಎಲ್ಲರಿಗೂ ಬೇಡವಾಗಿ ಒಣಗಿ ಬೆಂಡಾಗಿ ಹೋಗುತ್ತದೆ.

ನಿರಾಶೆಗಳು ಉದಯಿಸಿದಾಗಲೂ ಮನುಷ್ಯನು, ಬಾಂದಳದ ಹಿಂದಿರುವ ಸೂರ್ಯನನ್ನು ನೆನೆದು ಸವಿಗನಸನ್ನು ಕಾಣಬೇಕು. ಬರುವ ಕಷ್ಟಗಳನ್ನು ನಷ್ಟ ಎಂದೂ, ಪರಿಹರಿಸಲು ಕ್ಲಿಷ್ಟವೆಂದೂ ತಿಳಿಯಬಾರದು. ಜೀವನದಲ್ಲಿ ಸುಖ ದುಃಖಗಳಿವೆ ಎಂಬುದನ್ನು ಅರಿತು ಭವಿಷ್ಯಕ್ಕಾಗಿ ಹಾತೊರೆಯಬಾರದು. ಅದುವೇ ಜೀವನ. ಅದುವೆ ಹುಟ್ಟಿ ಬಂದ ಮೇಲೆ ಮನುಜನಿಗೆ ಭೂಷಣ.

ಬಾಂದಳವು ವಿಶಾಲವಾಗಿದೆ. ಇದಕ್ಕೆ ಮೊದಲಿಲ್ಲ ಕೊನೆ ಇಲ್ಲ. ಕೊನೆ ಮೊದಲನ್ನು ಹುಡುಕಲು ಹೋದರೆ ಅವನೊಬ್ಬ ಹುಚ್ಚ. ಅವನ ಬಾಳು ಬಾಳ್". ಜೀವನದ ಬಾಂದಳವು—ಆಶೆಗಳು, ಆಶೆಗಳಿಗೆ ಕೊನೆ-ಮೂಲಗಳಿಲ್ಲ. ಅಷ್ಟು, ಇಷ್ಟು, ಎಂಬ ಪರಿಮಿತಿ ಇಲ್ಲ. ಪರಿಮಿತಿ ಏನೋ ಉಂಟು. ಆದರೆ ಅದನ್ನು ಯಾರೂ ಅರಿಯರು. ಫಲ ಕಾಣಿಸುವುದು, ಅಥವಾ ಆಶೆಯ ಹೂ ಅರಳುವ ನೋಟ ಭೂ-ವ್ಯೋಮಗಳು ಕೂಡಿದ ನೋಟವು ಎಷ್ಟು ಸತ್ಯವೋ ಅಷ್ಟೇ ಸತ್ಯ. ಅರ್ಥಾತ ಜಗತ್ತಿನ (ಜೀವನ) ಬಾಂದಳವೂ ಮಿಥ್ಯ. ಶೂನ್ಯ ಪ್ರದೇಶನೇ ಸೈ.

ಅಯ್ಯೋ ಜೀವನಬಾಂದಳವೇ ನಿನ್ನಲ್ಲಿ ಸತ್ತ್ವವಿಲ್ಲವೆ, ನೀನು ಮಿಥ್ಯನೇನು? ನಂಬಿ ಕಟ್ಟೆನಲ್ಲಪ್ಪ!

ಗೌರಿಯ ಕಣ್ಣೀರು

(ಸಣ್ಣಕತೆ)

' ಎನ್ಕೇಶಂ ' ಮದರಾಸು

ದೇವರಿಗೆ ಪೂಜೆ-ನೈವೇದ್ಯಗಳನ್ನು ಸಲ್ಲಿಸುವುದು ಏತಕ್ಕೆ? ದೇವರಿಂದ ತನಗೆ ಹೆಚ್ಚಿನ ಭೋಗಸಾಮಗ್ರಿಗಳು ದೊರೆಯಬೇಕೆಂಬುದೇ ಬಹುಜನ ದೇವಪೂಜಕರ ಆಶೆ! ರಂಗಮ್ಮನವರು ಗೌರಿಹಸುವನ್ನು ಪೂಜಿಸುವುದೂ ಈ ಸಾಮಾನ್ಯ ಭಾವನೆಯಿಂದಲೆ!

ರಂಗಮ್ಮನವರ ಮನೆಯ ಹಸು ಗೌರಿ ಎಂದರೆ, ಸಾಕ್ಷಾತ್ ಕಾಮಧೇನುವಿನ ಅವತಾರ. ಮೈಯೆಲ್ಲಾ ರೇಷ್ಮೆಯಂತಹ ಬಿಳುಪು-ಚರ್ಮ. ಬಿಳಿಯ ಬಾಲದ ಕೊನೆಯಲ್ಲಿ ಕಪ್ಪಾದ ಒಂದು ಕುಚ್ಚು ಕೂದಲು. ಕುಳ್ಳಾಗಿ ತುಂಬಿಕೊಂಡಿರುವ ದೇಹ. ತಲೆಯ ಮೇಲೆ ಅರ್ಧಚಂದ್ರಾಕೃತಿಯಂತೆ ಕೊಂಬುಗಳು.

ವರ್ಷ-ವರ್ಷವೂ ಒಂದೊಂದು ಹೋರಿಗರು ಹಾಕುತ್ತಿತ್ತು ಗೌರಿ. ಪ್ರತಿವರ್ಷ ಗಬ್ಬವಾಗುತ್ತಿದ್ದರೂ ಅದು ಹಾಲು ಬಿಡಿಸಿಕೊಂಡದ್ದೇ ಇಲ್ಲ. ರಂಗಮ್ಮನವರ ಮನೆಗೆ ಗೌರಿ ತನ್ನ ಮೊದಲ ಕರುವಿನೊಡನೆ ಬಂದು ನಾಲ್ಕು ವರ್ಷಗಳಾದುವು.

ಅಂದಿನಿಂದ ಅವರ ಮನೆಗೆ ಲಕ್ಷ್ಮಿಯೇ ಕಾಲಿಟ್ಟಂತಾಗಿತ್ತು. ಅದು ಇವರ ಮನೆ ಸೇರಿದ್ದೇ ಒಂದು ವಿಚಿತ್ರ.

ಲಾಯರ್ ನಾರಾಯಣರಾಯರು—ರಂಗಮ್ಮನವರ ಪತಿ—ತಮ್ಮ ವೃತ್ತಿಯನ್ನಾರಂಭಿಸಿ ಹತ್ತು ಹದಿನೈದು ವರ್ಷಗಳಾಗಿದ್ದರೂ, ಅವರು ಅಷ್ಟಾಗಿ ಅದರಲ್ಲಿ ಹಣವನ್ನಾಗಲಿ, ಕೀರ್ತಿಯನ್ನಾಗಲಿ ಗಳಿಸಿರಲಿಲ್ಲ. ನಾಲ್ಕು ವರ್ಷದ ಕೆಳಗೆ ಒಂದು ಚಿಕ್ಕ ಕೇಸು ಗೆದ್ದದ್ದು ಅವರಿಗೆ ಗೌರಿಯನ್ನೂ ಅದರೊಡನೆ ಭಾಗ್ಯಲಕ್ಷ್ಮಿ, ಕೀರ್ತಿಲಕ್ಷ್ಮಿಯರನ್ನೂ ತಂದಿತ್ತು. ಅಣ್ಣ-ತಮ್ಮಂದಿರ ವ್ಯಾಜ್ಯದಲ್ಲಿ ಇವರ ಕಕ್ಷಿಗಾರನಿಗೆ ಜಯವಾಯಿತು. ಅದೂ ಒಂದೂವರೆ ಎಕರೆ ಜಮೀನಿನ ವಿಷಯ ಮಾತ್ರ. ಅದರಿಂದ ತೃಪ್ತನಾದ ನಂಜೇಗೌಡ ಹಣ ಕೊಡಲು ಬಂದಾಗ, ಹಾಲು-ಮೊಸರಿನ ಬಗ್ಗೆ ಮಾತುಬಂತು.

ನಂಜೇಗೌಡ ಹೇಳಿದ. " ಮನೆಯಾಗೆ ಕರಾವಿಲ್ಲದೇ ಮಕ್ಕಳಿಗೆ ಹಾಲು-ಮೊಸರು ಹೆಂಗೆ ತಾನೇ ಒದಗ್ಸೋಕಾಯ್ತದೆ ಬುದ್ಧೀ. ಮನೆ ಹಿತ್ಲಾಗೆ ಗೋಮಾತೆ ಇರಬೇಕು.... ಮಕ್ಳು ಬೆಳೀತಾವೇ. "

ರಾಯರು ಹೇಳಿದರು : "ಅದು ಸರಿ ಗೌಡರೇ. ಆದರೆ ಹಸು ಕಟ್ಕೊಂಡು ಪಾಡು ಪಡೋರು ಯಾರು ಹೇಳಿ ! "

ತಮ್ಮ ಇಲಾಖೆಯ ಯಾವುದೋ ಕೆಲಸಕ್ಕೆ ಹೋಗುತ್ತಿದ್ದ ರಂಗಮ್ಮನವರ ಕಿವಿಗೆ ಈ ಮಾತು ಬಿತ್ತು. ಅವರು ಹೇಳಿದರು : ' ಯಾಕೆ ನಾವಿಲ್ಲವೇ ? ಹಸು ತರೋದೊಂದು ಆದ್ರೆ, ನೋಡ್ಕೊಳ್ಳೋದು ಹ್ಯಾಗೋ ಆಗುತ್ತೆ !'

ನಂಜೇಗೌಡ ತಾನು ಕೊಡಬೇಕು ಎಂದಿದ್ದ ಹಣಕ್ಕೆ ಬದಲು ಗೌರಿಯನ್ನೂ, ಅದರ ಕರುವನ್ನೂ ನಾರಾಯಣರಾಯರ ಮನೆಗೆ ಕಳಿಸಿದ. ಅಲ್ಲಿಯವರೆಗೆ ತಿಂಗಳಿಗೆ ನೂರು ನೂರೈವತ್ತು ರೂಪಾಯಿಗಳ ದುಡಿಮೆಗೆ ಸಹ ತೊಂದರೆಪಡುತ್ತಿದ್ದ ರಾಯರ ಸಂಪಾದನೆ ಇಮ್ಮಡಿಯಾಗಿತ್ತು. ಪ್ರತಿವರ್ಷವೂ ಗುತ್ತಿಗೆಯ ಬತ್ತ ಕೊಡಲು ನೂರು ತಕರಾರು ಮಾಡುತ್ತಿದ್ದ ರೈತ, ಈಗ ಒಂದೂ ಮಾತಿಲ್ಲದೇ ಬತ್ತ ಅಳೆದು ಹೋಗುತ್ತಿದ್ದ.

ಆದ್ದರಿಂದಲೇ ಗೌರಿ ಎಂದರೆ ರಂಗಮ್ಮನವರ ಮನೆಯಲ್ಲಿ ಎಲ್ಲರಿಗೂ ಬಹಳ ಭಕ್ತಿ, ಅಭಿಮಾನ. ಬೆಳಗಾಗೆದ್ದು ರಂಗಮ್ಮನವರು, ರಾಯರು, ಮಕ್ಕಳು—ಎಲ್ಲರಿಗೂ ಮೊದಲ ಕೆಲಸ ಎಂದರೆ ಗೌರಿಯ ದರ್ಶನ. ಹಾಲು-ಮೊಸರಿಗೆ ಕಷ್ಟವಾದ ಈ ಕಾಲದಲ್ಲಿ ಲಕ್ಷಣವಾಗಿ ಹಾಲು ಕುಡಿದು ಕಳೆಯಾಗಿದ್ದರು, ರಂಗಮ್ಮನವರ ಮಕ್ಕಳು. ಆ ಇಪ್ಪತ್ತು ಇಪ್ಪತ್ತೈದು ಸಹಸ್ರ ಜನಸಂಖ್ಯೆ ಇರುವ ಊರಲ್ಲಿ, "ಆರೋಗ್ಯವಾಗಿರುವ ಮಕ್ಕಳ ಸ್ಪರ್ಧೆ ಒಂದನ್ನು ನಡಿಸಿದ್ದರೆ, ರಾಯರ ಮಕ್ಕಳಿಗೇ ಪ್ರಥಮ ಬಹುಮಾನ ಸಿಕ್ಕುತ್ತಿತ್ತು. ಗೌರಿಯ ಅಮೃತದಂತಹ ಹಾಲಿನ ಮಹಿಮೆ ಅಷ್ಟು.

ಗೌರಿಯ ಸೇವೆ ರಂಗಮ್ಮನವರ ಬಲು ಮುಖ್ಯವಾದ ಕಾರ್ಯಭಾರಗಳಲ್ಲಿ ಒಂದು. ಬೆಳಗ್ಗೆ ಎದ್ದು, ಕೆಲಸದವಳು ಸಗಣಿಗಂಜಲ ಬಳಿದಿದ್ದಾಳೆಯೇ ನೋಡಿ, ಕರುಬಿಟ್ಟು, ಹಾಲು ಕರೆದು, ಅನಂತರ ಗೌರಿಗೆ ಅರಿಸಿಣ ಕುಂಕುಮ ಹಚ್ಚಿ, ಪೂಜೆ ಮಾಡಿದ ಮೇಲೇ ಅವರ ಇತರ ಕೆಲಸಗಳು ಆರಂಭವಾಗುವುವು. ಅಪ್ಪಿತಪ್ಪಿ ಸಹ ಅವರು ಇಷ್ಟು ಮುಗಿಸದೆ ಬಾಯಿಗೆ ನೀರು ಹಾಕಿದ್ದಿಲ್ಲ. ಆದರೂ ಹೆಣ್ಣಾಗಿದ್ದಕ್ಕೆ ಕಾಯಿಲೆ, ಕಸಾಲೆ, ಬಾಣಂತನ ಎಂದರೆ—ಈ ದಿನಚರಿ ತಪ್ಪುತ್ತಿತ್ತು. ಆಗ ಅವರು ಚಡಪಡಿಸುತ್ತಿದ್ದದ್ದು ಅಷ್ಟಿಷ್ಟಲ್ಲ. ಆಗ ಅವರ ಹಿರಿಯಮಗಳು ಶಾಂತಾ ಹಾಲು ಕರೆಯುತ್ತಿದ್ದಳು. ಆದರೆ ಅವಳ ಕೈಗುಣ ಅಷ್ಟಕ್ಕಷ್ಟೆ. ರಂಗಮ್ಮನವರು ಸೇರು ಹಾಲು ಕರೆದರೆ ಶಾಂತಾ ಅಚ್ಚೇರು.

ಈಗ ಮೂರು ನಾಲ್ಕು ದಿನದಿಂದ ಹಾಸಿಗೆ ಹಿಡಿದಿದ್ದರು ರಂಗಮ್ಮನವರು. ಹತ್ತಿದ ಜ್ವರ ಇಳಿದಿರಲಿಲ್ಲ. ಒಂದು ಮೂಲೆಯಲ್ಲಿ ಮಲಗಿಕೊಂಡೇ ಮನೆಗೆಲಸವನ್ನೆಲ್ಲಾ ಶಾಂತನ ಕೈಯಿಂದ ಮಾಡಿಸಿ ಮಾಡಿಸಿ ಬಹಳ ಬೇಜಾರಾಗಿತ್ತು. ಮನೆಯಲ್ಲಿ ಹಾಲಿನ ಪರಿಸ್ಥಿತಿಯಂತೂ ಬಹಳ ಕೆಟ್ಟಿತ್ತು. ಗೌರಿಯ ಹಾಲು ಸಾಲದೆ, ಮೇಲೆ ಹಾಲಿನ ಹುಚ್ಚಯ್ಯನಿಂದ ಒಂದು ಸೇರು ಕರೆಸಿಕೊಂಡರೂ, ರಾತ್ರಿ ಮಲಗುವಾಗ ಮಕ್ಕಳ ಗಂಟಲು ಒದ್ದೆಯಾಗುವಷ್ಟು ಹಾಲು ಸಹ ಮಿಗುತ್ತಿರಲಿಲ್ಲ.

ಈ ದಿನ ಬೆಳಗ್ಗೆ ಐದು-ಐದೂವರೆಗೆ ಎಚ್ಚರಾದ ಕೂಡಲೆ, ರಂಗಮ್ಮನವರ ಮನಸ್ಸಿಗೆ ಬಂದದ್ದು ಗೌರಿಯ ವಿಚಾರವೇ. ಮೈ ಉತ್ಸಾಹವಾದಂತೆ ಇತ್ತು. ಹೊದ್ದಿಕೆಯನ್ನು ಸರಿಸಿ ಎದ್ದವರೇ ದನದ ಕೊಟ್ಟಿಗೆಗೆ ಹೋಗಿ ಬಂದರು. ಕೆಲಸದವಳು ಇನ್ನೂ ಬಂದಿರಲಿಲ್ಲ. ಹಾಗೇ ಬಂದವರು ಹಾಸಿಗೆ ಸುತ್ತುತ್ತಾ, ಇವತ್ತಿನಿಂದ ತಮ್ಮ ದಿನ ಚರಿಯನ್ನೇ ಅನುಸರಿಸಬೇಕೆಂದು ನಿಶ್ಚಯಿಸಿಕೊಂಡರು. ಹಾಸಿಗೆ ಸುತ್ತಿ ಇವರು ಮುಖ ತೊಳೆದುಕೊಂಡು ಹೊರಬಂದಾಗ, ಕೆಲಸದವಳು ನಿಂಗಮ್ಮ ನಿಧಾನವಾಗಿ ಬರುತ್ತಿದ್ದಳು. ಇವತ್ತೂ ಸಹ ಶಾಂತನೇ ಹಾಲು ಕರೆಯುತ್ತಾಳೆ ಎಂದೆಣಿಸಿದ್ದ ನಿಂಗಮ್ಮನಿಗೆ, ಅಮ್ಮನವರೇ ಎದ್ದಿರುವುದನ್ನು ನೋಡಿ ಹೆದರಿಕೆಯಾಯಿತು. ಅವರ ಕಣ್ಣಿಗೆ ಬೀಳದೆ ಕೊಟ್ಟಿಗೆಗೆ ನುಸುಳಿಕೊಳ್ಳಲು ಅವಳು ಯೋಚಿಸುತ್ತಾ ಇದ್ದ ಹಾಗೇ ರಂಗಮ್ಮನವರು: 'ಲೇ, ನಿಂಗಿ, ಎಷ್ಟು ಹೊತ್ತೇ ಬರೋದು? ನಾನು ಸ್ವಲ್ಪ ದಿನ ಹಾಸಿಗೆ ಹಿಡಿದೆ ಅಂದರೆ, ಸರಿ ನಿಮ್ಮ ಮೈಗಳ್ಳತನ ಶುರು. ಹೂಂ. ಹೋಗು ಬೇಗ ಸಗಣಿ ಎತ್ತು. ನಾನೂ ಶಾಂತನ್ನ ಎಬ್ಬಿಸಿಕೊಂಡು ಬರ್ತೀನಿ' ಎಂದರು.

'ಸದ್ಯ ಇಷ್ಟಕ್ಕೇ ಕೊನೆಯಾಯಿತಲ್ಲಾ' ಎಂದು ಹರ್ಷಿತಳಾದ ನಿಂಗಿ, ದನದ ಕೊಟ್ಟಿಗೆಯನ್ನು ಹೊಕ್ಕು ಸಗಣಿ ಬಳಿಯಲಾರಂಭಿಸಿದಳು. ಸಗಣಿ ಬಳಿದು, ಗೌರಿಯ ಮುಂದೆ ಹುಲ್ಲು ಹಾಕಿದಳು. ಅಷ್ಟು ಹೊತ್ತಿಗೆ ರಂಗಮ್ಮನವರು ಶಾಂತನೊಡನೆ ಬಂದರು.

"ಹೂಂ ಶಾಂತಾ, ಬೇಗ ಮುಖ ತೊಳ್ಕೊಂಡು ಬಾ! ನನ್ನ ಕೈಲಿ ಆದಷ್ಟು ಕರೀತೀನಿ. ಸುಸ್ತಾದರೆ ನೀನೇ ಕರೆಯೋವಂತೆ' ಎಂದರು ರಂಗಮ್ಮನವರು.

ಸೂರ್ಯ ಇನ್ನೂ ಮೂಡಿರಲಿಲ್ಲ. ಆಕಾಶವೆಲ್ಲಾ ಕೆಂಪು ಕೆಂಪಾಗಿತ್ತು. ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದುವು. ಗೌರಿ ಬಾಯಿಬಿಟ್ಟು ತುಂಬುಮನಸ್ಸಿನಿಂದ 'ಅಂಬಾ' ಎಂದು ಕೂಗಿತು. ಅದರ ಕರು, ನಾಲ್ಕು ತಿಂಗಳ ಬಸವನೂ ತಾಯಿಯ ಕರೆಗೆ 'ಓ' ಕೊಟ್ಟ.

ಇವಿಷ್ಟೂ ರಂಗಮ್ಮನವರ ಉತ್ಸಾಹವನ್ನು ನೂರ್ಮಡಿ ಮಾಡಿದುವು. ಶಾಂತನಿಗಾಗಿ ಕಾಯದೆ, ಅಡಿಗೆಮನೆಗೆ ಹೋಗಿ ಚೊಂಬು ತಂದರು. ಕೊಟ್ಟಿಗೆಗೆ ಹೊಕ್ಕು ಬಾಗಿಲ ನಾಗವಾಸದ ಮೇಲೆ ಇಟ್ಟಿದ್ದ ಎಣ್ಣೆಯ ಕರಟ ಕೈಗೆ ತೆಗೆದುಕೊಂಡರು. ಅದು ಖಾಲಿ. ಛೇ! ಮಕ್ಕಳ ಕೆಲಸವೇ ಹೀಗೇ! ತಿರುಗಿ ಅಡಿಗೆಮನೆಗೆ ಹೋಗಿ ಕರಟಕ್ಕೆ ಹರಳೆಣ್ಣೆ ಹಾಕಿಕೊಂಡು ತಂದರು.

ಹಸುವಿನ ಮೊಲೆಗಳಿಗೆ ಎಣ್ಣೆ ನೀವುತ್ತಾ ಇದ್ದಂತೆ ಅವರ ಬಾಯಿ, ಅಭ್ಯಾಸಬಲದಿಂದ ಉದಯರಾಗವನ್ನು ನುಡಿಯಿತು:

"ಭಾಗ್ಯವನೆಂದಿಗೆ ಕೊಡುವೇ, ಯೋಗ್ಯನನೆಂದಿಗೆ ಗೈವೇ
ಭಾಗ್ಯಗಳೊಳ್ ಮೇಲಹ, ವೈರಾಗ್ಯ–ಭಕ್ತಿಗಳೆಂಬ!"

ಹರಳೆಣ್ಣೆ ನೀವಿ ಕರುವನ್ನು ಬಿಚ್ಚಿದರು. ಕರುಬಸವ ಓಡಿ ಬಂದು, ತಾಯಿಯ ಕೆಚ್ಚಲಿಗೆ ಬಾಯಿಹಾಕಿ ಹಾಲು ಹೀರತೊಡಗಿದ. ಒಂದು ನಿಮಿಷ ಹಾಗೇ ಬಿಟ್ಟು, ಬಸವನನ್ನು ಹಿಂದಕ್ಕೆ ಎಳೆದು ಗೌರಿಯ ಮುಖದ ಬಳಿ ಕಟ್ಟಿದರು.

ಗೌರಿ ಬಸವನನ್ನು ನೆಕ್ಕಹತ್ತಿತು ರಂಗಮ್ಮನವರ ಚೊಂಬೂ ತುಂಬಹತ್ತಿತು.

ಶಾಂತನೂ ಬಂದು ನಿಂತಿದ್ದಳು. ಈ ದಿನ ಚೊಂಬುಭರ್ತಿ ಹಾಲಾಯಿತು. ಶಾಂತನ ಕೈಗೆ ಚೊಂಬನ್ನು ಕೊಡುತ್ತಾ ರಂಗಮ್ಮನವರು ಹೇಳಿದರು:—' ಹಾಲು ಕರೆಯೋದಕ್ಕೂ ಕೈಗುಣ ಬೇಕು ಶಾಂತಾ! ಸುಮ್ಮನೇ ಬಂದು ಕೆಚ್ಚಲಿಗೆ ಕೈಹಾಕಿದೋರಿಗೆಲ್ಲಾ ಹಾಲು ಕೊಡೊಲ್ಲ ಗೋಮಾತೆ. ಭಕ್ತಿಯಿಂದ, ಪ್ರೀತಿಯಿಂದ ಕರೆದರೆ ಸರಿನೋಡು. ಚೊಂಬಿನ ತಳದಲ್ಲಿ ಎರಡು ಒಳಲೆ ಹಾಲು ಕರೆಯೋ ಹೊತ್ತಿಗೆ ಸುಸ್ತಾಗ್ತೀಯಲ್ಲಾ....ಇವತ್ತು ನೋಡು. ಹೋಗು. ಒಳಗೆ ಹಾಲಿಟ್ಟು ಬಿಟ್ಟು, ಮನೆಯ ಬಾಗಿಲಿಗೆ ರಂಗೋಲಿ ಇಟ್ಟು, ಮೊರದಲ್ಲಿ ಅಕ್ಕಿ. ಬೆಲ್ಲ ಇಟ್ಟುಕೊಂಡು ಪಂಚಪಾಳಾ ತೊಗೊಂಡು ಬಾ! ನಾನೂ ಬಚ್ಚಲುಮನೆಯ ಒಲೆ ಹೊತ್ತಿಸಿ ಬರ್ತೀನಿ!'

ಬೆಳಗಾಗೆದ್ದು ತಾಯಿಯ ಜೊತೆ ಚರ್ಚೆಮಾಡುವ ಮನಸ್ಸಿರಲಿಲ್ಲ ಶಾಂತನಿಗೆ. ಇಲ್ಲದಿದ್ದರೆ ಯಾವ ಮಾತಿಗೂ ಸುಮ್ಮನಿರೋ ಜಾತಿಯೋ ಅಲ್ಲ ಅವಳು.

ಪ್ರಕಟವಾಗುವವು! ಶೀಘ್ರ ಪ್ರಕಟವಾಗುವವು!!

ಅಭಿನವ ಗಣಿತ

ಲೇ.: ಹರಿಹರ

ಪ್ರಾಥಮಿಕ ಶಾಲೆಗಳ ೧, ೨, ೩ ನೆಯ ವರ್ಗಗಳ ಬಗ್ಗೆ ಶಾಸ್ತ್ರೀಯದೃಷ್ಟಿಯಿಂದ ಬರೆದ ಗಣಿತಗಳ ಕೊರತೆಯಿದ್ದು, ಇದನ್ನು ನಿವಾರಿಸಲೆಂದೇ ಹೊಸದಾಗಿ "ಅಭಿನವ ಗಣಿತ" ಗಳನ್ನು ಹೊರಡಿಸಲಾಗಿದೆ. ಮಕ್ಕಳ ಪರಿಚಯದ ವಾತಾವರಣವನ್ನೇ ಆಧರಿಸಿ ಲೆಕ್ಕಗಳನ್ನು ಕೊಡಲಾಗಿದೆ. ಹಲವಾರು ಬಾಯಿಲೆಕ್ಕಗಳಿವೆ. ಪುಟಪುಟಕ್ಕೂ ಚಿತ್ರ, ಆಕೃತಿಗಳ ಸೂರೆಯಾಗಿದೆ. ಮುಖ್ಯವಾಗಿ ೧೯೫೫ರ ಜೂನದಿಂದ ಬಳಕೆಯಲ್ಲಿ ಬರುವ ಹೊಸ ಅಭ್ಯಾಸಪತ್ರಿಕೆಯನ್ನು ಅನುಸರಿಸಿ ಬರೆದಿರುವುದರಿಂದ ಮಕ್ಕಳಿಗೂ, ಶಿಕ್ಷಕರಿಗೂ ತುಂಬಾ ಸಹಾಯಕವಾಗಬಲ್ಲವು ಗಣಿತ ವಿಷಯವು ನೀರಸ ವಿಷಯವಾಗಿರದೆ, ಸರಸ ವಿಷಯವೇ ಆಗಿದೆಯೆಂಬುದನ್ನು ಅಭಿನವ ಗಣಿತಗಳ ಅನುಸರಣೆಯಿಂದ ನೀವೇ ಹೇಳುತ್ತೀರಿ. ಅಂತೇ ಈ ಹೊಸ ಗಣಿತಗಳ ಪ್ರಕಟನೆಯನ್ನು ನಿರೀಕ್ಷಿಸಿರಿ. ವಿವರಗಳಿಗಾಗಿ:—

ಶ್ರೀ ಸಾಯಿಬಾಬಾ ಪಬ್ಲಿಕೇಶನ್ಸ್,
ಧಾರವಾಡ

ಶಾಂತಾ ತಾಯಿಯ ಅಜ್ಞೆಗಳ ಪಾಲನೆಗಾಗಿ ಅಡಿಗೆಮನೆಯ ಕಡೆ ಹೋದಳು. ರಂಗಮ್ಮನವರು ಬಸವನನ್ನು ಗೂಟದಿಂದ ಬಿಚ್ಚಿ, ಒಲೆ ಹೊತ್ತಿಸಲು ಬಚ್ಚಲುಮನೆ ಹೊಕ್ಕರು.

ಬಸವ ಓಡಿ ಬಂದ. ಹಸಿದಿದ್ದ ಅವನ ಎಳೆಯ ಹೊಟ್ಟೆಗೆ ಮೊದಲಲ್ಲಿ ಬಿದ್ದ ನಾಲ್ಕು ಗುಟುಕು ಹಾಲು ಬೆಂಕಿಹಚ್ಚಿದಂತೆ ಮಾಡಿತ್ತು. ಎಂದಿಗೆ ತಾಯಿಯ ಕೆಚ್ಚಲಿಗೆ ಬಾಯಿ ಹಾಕೇನು—ಎನ್ನಿಸಿತ್ತು ಅವನಿಗೆ. ಹಾತೊರೆದುಕೊಂಡು, ನಾಲ್ಕು ಹೆಜ್ಜೆ ಇಡುವುದರಲ್ಲಿ ಹತ್ತು ಬಾರಿ 'ಅಂಬಾ' ಎಂದು ಅರಚುತ್ತಾ ಓಡಿಬಂದ.

ಬಾಯಿ ಹಾಕಿದ ಒಂದು ಮೊಲೆಗೆ. ಚೀಪಿದ. ಉಹುಂ, ಒಂದು ಹನಿ ಸಹ ಬರಲಿಲ್ಲ ಅವನ ಬಾಯಿಗೆ. ಕೆಚ್ಚಲೆಲ್ಲಾ ನೆರಿಗಟ್ಟಿ ನೆರಿಗಟ್ಟಿ ಹೋಗಿತ್ತು. ಅದನ್ನು ಬಿಟ್ಟು ಇನ್ನೊಂದು ಮೊಲೆಗೆ ಬಾಯಿಟ್ಟ. ಅಲ್ಲಿಯೂ ಅದೇ ಗತಿ. ಗುದ್ದಿದ, ಚೀಪಿದ, ಎಳೆದ. ಏನು ಮಾಡಿದರೂ ಇಲ್ಲ. ನಿತ್ಯವೂ, ಅದರಲ್ಲೂ ಈಚೀಚೆಗೆ, ಬಾಯಿ ಹಾಕುವ ಮುಂಚೆ ಹಾಲು ಹರಿಯುತ್ತಿತ್ತು. ಈ ದಿನ ಹೀಗೇಕೆ?—ಎನ್ನಿಸಿತು ಅವನಿಗೆ.

ಓಡಿದ ಹಿಂದಕ್ಕೆ. ತಾಯಿಯ ಹಿಂಗಾಲುಗಳ ನಡುವೆ ಮೂತಿ ಇಟ್ಟ. ಅಲ್ಲಿಯೂ ಅದೇಗತಿ. ಇನ್ನೊಂದು ಪಕ್ಕಕ್ಕೆ ಬಂದ. ಎಲ್ಲಿ ಹೋದರೂ ಅಷ್ಟೇ!

ಬಸವನಿಗೂ ಬಹಳ ಬೇಜಾರಾಯಿತು. ಹೊಟ್ಟೆ, ಹಾಲಿಗಾಗಿ ಹಾಹಾಕಾರಿಸುತ್ತಿತ್ತು. ಮತ್ತೊಮ್ಮೆ ಒಂದು ಮೊಲೆಗೆ ಬಾಯಿಹಾಕಿ ತನ್ನ ಚೋಳು ಪಸಡುಗಳಿಂದ ಕಚ್ಚಿದ. ಬಾಯಿ ಉಪ್ಪು ಉಪ್ಪಾಯಿತೇ ಹೊರತು ಹಾಲು ಬರಲಿಲ್ಲ. ಬಸವನಿಗೆ ರೇಗಿತು. ತನ್ನ ಎಳೆಯ ದೇಹದ ಶಕ್ತಿಯನ್ನೆಲ್ಲಾ ಕೂಡಿಸಿ ಗೌರಿಯ ಕೆಚ್ಚಲನ್ನು ಗುದ್ದಿದ. ಗೌರಿಗೂ ನೋವಿನಿಂದ ರೇಗಿತು. ಎತ್ತಿ ಬಸವನನ್ನು ಒದೆಯಿತು.

ಹೊಡೆದರೂ ತಾಯಿ, ಬಡಿದರೂ ತಾಯಿ, ತಳ್ಳಿದರೂ ತಾಯಿ, ಒದ್ದರೂ ತಾಯಿ. 'ಅಂಬಾ' 'ಅಂಬಾ' ಎಂದು ಅಳುತ್ತಾ, ಅರಚುತ್ತಾ ತಾಯಿ ಮುಖದ ಬಳಿ ಬಂದ ಬಸವ. ಅವನ ಮೋರೆ ಪೆಚ್ಚಾಗಿತ್ತು.

ಅವನ ಆ ಹಸಿದ ಪೆಚ್ಚುಮುಖ ನೋಡಿ ಗೌರಿಗೆ ಬಹಳ ದುಃಖವಾಯಿತು. ಹತ್ತು ಮಕ್ಕಳ ಹೊಟ್ಟೆತುಂಬಾ ಹಾಲುಕೊಡುವ ತನಗೆ ತನ್ನ ಕಂದನ ಗಂಟಲು ಒದ್ದೆಮಾಡುವ ಯೋಗ್ಯತೆ ಇಲ್ಲವಲ್ಲಾ ಎಂದೆನ್ನಿಸಿತು ಗೌರಿಗೆ. ಅವಳ ಕರುಳಿಗೆ ಚುರ್ ಎನ್ನಿಸಿತು. ಕಣ್ಣಲ್ಲಿ ನೀರು ತುಂಬಿತು. ಬಸವನ ಬಳಿಸಾರಿ, ಪ್ರೇಮದಿಂದ ಅವನ ಕತ್ತನ್ನು ನೆಕ್ಕ ಹತ್ತಿತು. ಬಸವನೂ ತಾಯಿಯ ದುಃಖಿತ ಮುಖವನ್ನು ನೋಡುತ್ತಾ ಹಾಗೆಯೇ ನಿಂತ.

ಅಷ್ಟರಲ್ಲಿ ಶಾಂತಾ ಅಕ್ಕಿ, ಬೆಲ್ಲ ತಂದಳು. 'ಬಾಮ್ಮಾ' ಎಂದು ರಂಗಮ್ಮನವರನ್ನು, ಕರೆದಳು.

ಮಕ್ಕಳ ಸದೃಢತೆಗಾಗಿ

“ಜಗನ ಬಾಲಾಮೃತ”

ಹಲ್ಲು ಬರುವಾಗ

“ಎಸ್ಟನ್ ಗ್ರಾಇಪ್” ಹೀಲರ್

ಜಂತು ಆದರೆ

“ವರ್ಮ್ ಆಯಿಲ್”

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿ ಉಪಯೋಗಬೇಕುವ ಔಷಧಗಳು

The National Pharmacies & Pharmaceuticals Ltd., Dharwar

ಬಚ್ಚಲುಮನೆಯಿಂದ ಬಂದರು ರಂಗಮ್ಮನವರು. ಗೌರಿಯ ಹಣೆಗೆ ಅರಿಸಿನ, ಕುಂಕುಮ ಹಚ್ಚುತ್ತಾ ಹೇಳಿದರು:—'ನಾಲ್ಕು ದಿನದಿಂದ ನಿನ್ನ ಹಣೆಗೆ ಕುಂಕುಮ ಇಡದೆ, ನಿನ್ನ ಬಾಯಿಗೆ ಅಕ್ಕಿ ಬೆಲ್ಲ ಇಕ್ಕದೆ, ಮೈಯಿ, ಮನಸ್ಸು ಎಲ್ಲಾ ಬೇಸರಿಸಿ ಹೋಗಿದೆ. ಸದ್ಯ ಇವತ್ತಾದರೂ ಮೈ ಸರಿಯಾಯ್ತಲ್ಲಾ. ಗೌರೀ, ಗೌರೀ, ಇನ್ನುಮೇಲೆ ನನಗೆ ಕಾಯಿಲೆ ಕೊಡಬೇಡ ಅಂತ ದೇವರಲ್ಲಿ ಕೇಳಿಕೊ! ನಿತ್ಯ ನಿನಗೆ ಅಕ್ಕಿ ಬೆಲ್ಲ ಸಿಕ್ಕುತ್ತೆ!'

ಆ ಕತ್ತಲ ಕೊಟ್ಟಿಗೆಯಲ್ಲಿ ಗೌರಿ ಮೊರದಲ್ಲಿ ಇಟ್ಟಿದ್ದ ಬೆಲ್ಲ-ಅಕ್ಕಿಗೆ ಬಾಯಿ ಹಾಕದೇ ಇದ್ದದ್ದೂ, ಅವಳ ಕಣ್ಣಲ್ಲಿ ಉಕ್ಕಿ ಬರುತ್ತಿದ್ದ ಅಶ್ರುಧಾರೆಯೂ ರಂಗಮ್ಮನವರ ಕಣ್ಣಿಗೆ ಬೀಳಲಿಲ್ಲ.

ಅಸಗನ ವರ್ಧಮಾನಪುರಾಣದ

ಕನ್ನಡ ವ್ಯಾಖ್ಯಾನ

(ಸಾಹಿತ್ಯ ಸಂಶೋಧನ)

ಶ್ರೀ. ನೇಂ. ಬಿ. ಲೋಕಾಪೂರ, ಬಿ. ಎ, ಬಿ. ಟಿ. ಡಿ. ಬಿ. ಇ. ಹುಬ್ಬಳ್ಳಿ

ನಮ್ಮ ಕನ್ನಡ ಸಾಹಿತ್ಯಪ್ರಪಂಚದಲ್ಲಿ ನೃಪತುಂಗನ ಪೂರ್ವದ ಕೆಲವು ಗದ್ಯ-ಪದ್ಯ ಕವಿಗಳ ಹೆಸರುಗಳು ಮಾತ್ರ ದೊರೆಯುತ್ತವೆ. ಅವರ ಕೃತಿಗಳಾವುವೂ ಸಿಕ್ಕುವುದಿಲ್ಲ. ಅಂತಹರಲ್ಲಿ ಅಸಗನೂ ಒಬ್ಬ. ಅಸಗ ಸಾಮಾನ್ಯ ಕವಿಯಲ್ಲ; ಅವನೊಬ್ಬ ಸೀಮಾಪುರುಷ!

ಅಸಗ ಕವಿಯ 'ವರ್ಧಮಾನಪುರಾಣ'ವು ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ. ಆ ಕಾವ್ಯದ ಕೊನೆಗೆ ಅಸಗನು ತಾನು ಆ ಗ್ರಂಥವನ್ನು ವಿಕ್ರಮಸಂವತ್ ೯೧೦ ಎಂದರೆ ಕ್ರಿ. ಶ. ೮೫೩ರಲ್ಲಿ ಬರೆದಿರುತ್ತೇನೆಂದು ಹೇಳಿಕೊಂಡಿದ್ದಾನೆ. ಅದೇ ಗ್ರಂಥದಲ್ಲಿ ಆತನು ಚೋಡ(ಳ) ದೇಶದಲ್ಲಿ ಶ್ರೀನಾಥನೆಂಬ ಅರಸನು ರಾಜ್ಯವಾಳುತ್ತಿರುವಾಗ, ತಾನು ವಿರಲಾ ಎಂಬ ಪಟ್ಟಣದಲ್ಲಿದ್ದುಕೊಂಡು ಜೈನ ಧರ್ಮೋಪದಿಷ್ಟವಾದ ಎಂಟು ಗ್ರಂಥಗಳನ್ನು ಬರೆದಿರುವೆನೆಂದು ಉಲ್ಲೇಖಿಸಿದ್ದಾನೆ. ಆದರೆ ಈ ಎಂಟು ಗ್ರಂಥಗಳ ಬಗೆಗೆ ನಮಗೆ ಯಾವ ಸಂಗತಿಯೂ ಇದುವರೆಗೆ ಗೊತ್ತಾಗಿಲ್ಲವೆಂಬುದನ್ನು ಹಿಂದೆ ಹೇಳಿದ್ದೇನೆ. (ಅಸಗ ಕವಿಯ ಪರಿಚಯ—ಜಯಕರ್ನಾಟಕ ಸಂ. ೨೫, ಸಂ. ೮) ಈ ವರ್ಧಮಾನಪುರಾಣವು ಜನತೆಯಲ್ಲಿ ಸಾಕಷ್ಟು ಪ್ರಖ್ಯಾತಿಯನ್ನು ಹೊಂದಿದಂತೆ ಕಾಣುತ್ತದೆ. ಯಾಕೆಂದರೆ ಧವಲನೆಂಬ ಪ್ರಾಕೃತ-ಕವಿಯು ತನ್ನ ಹರಿವಂಶಪುರಾಣದಲ್ಲಿ 'ವೀರಜಿನೇಂದ ಚರಿವು ಕಿವು ಸುಂದರು' ಎಂದು ಮನವಾರೆ ಹೊಗಳುತ್ತಾನೆ. ಕನ್ನಡಕವಿಗಳಾದ ೨ನೆಯ ನಾಗವರ್ಮ, ಆಚಣ್ಣ ಮೊದಲಾದವರು ತಮ್ಮ ತಮ್ಮ ವರ್ಧಮಾನ ಪುರಾಣವನ್ನು ಬರೆಯುವಂದು ಅಸಗನ ವರ್ಧಮಾನಪುರಾಣವನ್ನು ಓದಿರಬಹುದೆಂದು ತೋರುತ್ತದೆ. ಮೇಲಾಗಿ ಇತ್ತೀಚೆಗೆ ಇದೇ ಪುರಾಣಕ್ಕೆ ಕನ್ನಡದಲ್ಲಿ ಬರೆದ ವ್ಯಾಖ್ಯಾನ ಒಂದು ದೊರೆತಿದೆ. ಅದು ತಾಳೆಯೋಲೆಯ ಗ್ರಂಥವಾಗಿದ್ದು ಅದರಲ್ಲಿಯ ಸಂಗತಿಯು ಸರಿಯಾಗಿ ತಿಳಿಯದ್ದರಿಂದ, ವ್ಯಾಖ್ಯಾನಕಾರನ ಹೆಸರಾಗಲಿ ಕಾಲವಾಗಲಿ ನಿಶ್ಚಿತ-ವಾಗಿ ಹೇಳದೆ ಕೇವಲ ಅಕ್ಷರಗಳ ಮೇಲಿಂದ ಈ ಗ್ರಂಥವು ೧೭ನೆಯ ಶತಮಾನದ್ದಿರಬಹುದೆಂದು ಬೇರೆಡೆಗೆ ಊಹಿಸಿದ್ದೇನೆ. (ಅಸಗ ಕವಿಯ ಖ್ಯಾತಿ—ಪ್ರಬುದ್ಧಕರ್ನಾಟಕ ಸಂ. ೩೭, ಸಂ. ೧) ಆದರೆ ಅದರ ಹೆಚ್ಚಿನ ವ್ಯಾಸಂಗದಿಂದ ಅದರಲ್ಲಿ ಕೆಲವು ಸಂಗತಿಗಳನ್ನು ಕೆಳಗೆ ಕಾಣಿಸಿದ್ದೇನೆ.

ಅಸಗನ ವರ್ಧಮಾನಪುರಾಣದ ಕನ್ನಡ ವ್ಯಾಖ್ಯಾನವು ಒಂದು ತಾಳೆಯೋಲೆಯ ಗ್ರಂಥವೆಂದು ಮೇಲೆ ಹೇಳಿದ್ದೇನೆ. ಈ ಗ್ರಂಥದಲ್ಲಿ ೨೫೭ ತಾಳೆಗರಿಗಳು ಇವೆ. ಪ್ರತಿಯೊಂದು ಗರಿಯೂ ೧೫ ಇಂಚು ಉದ್ದ ಹಾಗೂ ೪ ಇಂಚು ಅಗಲು ಇದೆ. ಮೊದಲನೆಯ ಪುಟದ ಪ್ರಾರಂಭದಲ್ಲಿ ಅದರ ವ್ಯಾಖ್ಯಾನಕಾರನು :

ವರ್ಧಮಾನಮಾನಮ್ಯ ಸರ್ವ್ವ ತತ್ವಾವ ಭೂಧನಂ |
ಕರ್ನಾಟಭಾಷಯಾ ತಸ್ಯೇ ವ್ಯಾಖ್ಯಾನಂ ಲಿಖ್ಯತೇ ಮಯಾ ||

ಎಂದರೆ ವರ್ಧಮಾನನಿಗೆ ನಮಸ್ಕರಿಸಿ ಅವನ ಪವಿತ್ರವಾದ ಸಂಪತ್ತನ್ನೆಲ್ಲ (ಭೂಧನಂ) ಕರ್ನಾಟಭಾಷೆಯಿಂದ ವ್ಯಾಖ್ಯಾನ ಮಾಡಿದ್ದೇನೆಂದು ಹೇಳಿದ್ದಾನೆ. ಅದೇ ಗ್ರಂಥದ ಕೊನೆಯ ಪುಟದಲ್ಲಿ 'ಶ್ರೀಮದ್ಬೆಳಗುಳ ವಾಸಿನಾ ವಶಿಷ್ಟಗೋತ್ರಜೇನ ವಿಜೇರಾಜಾಹ್ವಯೇನ ಲಿಖಿತಮಿದಂ ವರ್ಧಮಾನಸ್ವಾಮಿ ಕಾವ್ಯವ್ಯಾಖ್ಯಾನಂ' ಎಂದು ಹೇಳಿದ್ದರಿಂದ, ಈ ವ್ಯಾಖ್ಯಾನವನ್ನು ಬರೆದವನು (ಶ್ರವಣ)ಬೆಳ್ಗೊಳದಲ್ಲಿ ಇರುವವನೂ ವಶಿಷ್ಠಗೋತ್ರದಲ್ಲಿ ಹುಟ್ಟಿದವನೂ ಆದ ವಿಜೇ (ವಿಜಯ) ರಾಜನೆಂದು ಗೊತ್ತಾಗುವುದು. ಈ ಗ್ರಂಥದ ತೀರ ಕೊನೆಗೆ 'ಶಾಲಿವಾಹನ ಶಕೆ ೧೪೦೨ ಈಶ್ವರನಾಮ ಸಂವತ್ಸರ ಭಾದ್ರಪದ ವದ್ಯ ಪಂಚಮಿ ಬುಧವಾರ ಮಂಗಳಂ' ಎಂದಿರುವುದರಿಂದ, ಈ ಗ್ರಂಥವು ಶಕೆ ೧೪೦೨ ಎಂದರೆ ಕ್ರಿ. ಶ. ೧೪೮೦ರಲ್ಲಿ ಪೂರ್ತಿಯಾಗಿ ಬರೆಯಲ್ಪಟ್ಟಿತೆಂದು ಹೇಳಬಹುದು.

ಈ ಗ್ರಂಥದಲ್ಲಿ ಅಸಗನ ವರ್ಧಮಾನಪುರಾಣದ ಶ್ಲೋಕಗಳ ಅನ್ವಯ ಹಾಗೂ ಅವಕ್ಕೆ ಕನ್ನಡ ಅರ್ಥವಿದೆ. ಈ ಅನ್ವಯವಾದರೂ ಸಂಕ್ಷಿಪ್ತವಿದೆ. ಆದ್ದರಿಂದ ವರ್ಧಮಾನಪುರಾಣವನ್ನು ಮುಂದಿಟ್ಟು ಕೊಂಡು ಓದಿದರೆ ಮಾತ್ರ ವ್ಯಾಖ್ಯಾನ ಸರಿಯಾಗಿ ತಿಳಿಯುವುದು. ಕೇವಲ ಈ ತಾಳೆಯೋಲೆಯ ಗ್ರಂಥವೊಂದನ್ನೇ ಇಟ್ಟುಕೊಂಡು ಓದಿದರೆ ಅರ್ಥ ಸರಿಯಾಗಿ ತಿಳಿಯುವುದಿಲ್ಲ.

ಒಟ್ಟಿನಲ್ಲಿ ಹೇಳಬೇಕಾದರೆ ಈ ಗ್ರಂಥದಿಂದ ಅಸಗನ "ವರ್ಧಮಾನಕ್ಕೆ ಕನ್ನಡದಲ್ಲಿ ವ್ಯಾಖ್ಯಾನವನ್ನು ಬರೆದವನು ವಶಿಷ್ಟಗೋತ್ರದ ವಿಜೇ (ವಿಜಯ) ರಾಜನೆಂದೂ, ಆತನು (ಶ್ರವಣ) ಬೆಳ್ಗೊಳದ ನಿವಾಸಿ ಎಂದೂ, ಆತನು ಈ ಗ್ರಂಥವನ್ನು ಶಾಲಿವಾಹನ ಶಕೆ ೧೪೦೨ ಎಂದರೆ ಕ್ರಿ. ಶ. ೧೪೮೦ ರಲ್ಲಿ ಬರೆದನೆಂದೂ ಗೊತ್ತಾಗುವುದು. ಆದರೆ ಅಸಗ ಕವಿಯ ವಿಷಯವಾಗಿ ಮಾತ್ರ ಯಾವ ಹೆಚ್ಚಿನ ಸಂಗತಿಯೂ ತಿಳಿದು ಬರುವುದಿಲ್ಲ.

ಕ್ರಾಂತಿಗೆ ಆಹ್ವಾನ

ಶ್ರೀ. ಎಚ್. ಜಿ. ಉಪಾಧ್ಯಾಯ ಎಂ. ಎ. ಹೈದರಾಬಾದ್

೧

ಮನುಜನುದ್ಧಾರಕ್ಕೆ ಹರಣವನೆ ಪಣಕಿಟ್ಟ
ಆ ಹುತಾತ್ಮರ ನೆನಹು ನಿಲಿಸಿ ಫಲವೇನು ?
ಬಡತನದ ಬೇಗುದಿಗೆ ಬಾಳನ್ನೆ ಬಲಿಗೊಟ್ಟ
ಮೃತರ ಆತ್ಮಕೆ ಶಾಂತಿ ಕೋರಿ ಫಲವೇನು ?

೨

ಸಾಸಿರದ ಜನುಮಗಳು ಶ್ರೀಯುತರ ಸೇವೆಯಲಿ
ಸವೆದರೂ ಬಡತನವು ಸವೆದುದಿಲ್ಲ—
ಜೀತಕ್ಕೆ ಆಳಾಗಿ ಬಾಳೆಲ್ಲ ದುಡಿದರೂ
ಮಧ್ಯಮರ ಬಾಳ್ಬವಣೆ ಮುಗಿದುದಿಲ್ಲ.

೩

ಉಣಲನ್ನ, ಮೈಗೆ ಹೊದೆ, ಮಳೆಗಾಳಿ ಚಳಿ-ಬಿಸಿಲ
ಬಾಧೆಯಿಂದುಳಿದು ಬರಿಮನೆಯ ನೆರಳು—
ಇಷ್ಟೆ ಮನುಜನ ಬಾಳು, ಇದಕು ಗತಿಯಿಲ್ಲದೊಡೆ
ಅದು ನರನ ಬಾಳಲ್ಲ, ನಾಯ ಬಾಳು !

೪

ಆಯಾಸವಿಲ್ಲದಲೆ ಆಗರ್ಭಶ್ರೀಯುತರ
ಮಹಲಿಗೇರುವುವು ಉಪ್ಪರಿಗೆ ಏಳು—
ಕಲ್ಲುಗಳ ಕಟೆಕಟೆದು ಗಚ್ಚು-ಗಾರೆಯ ಹೊತ್ತ
ಬಳಲಿದರ ತಲೆಗಿರದು ಮನೆಯ ನೆರಳು !

೫

ದುಡಿವವರು ಕೋಟಿ ಜನ, ಒಡೆಯರೋ ನಾಲ್ಕು ಜನ
ಇವರೆ ಇಂದಿನ ಜಗದ ಸಮ್ರಾಟರು,
ಉಳಿದವರು ಊಳಿಗದಿ ಜನುಮವನು ಸವೆಸುತ್ತ
ಉಳ್ಳವರ ಕಣಜಕ್ಕೆ ಕಾವಲಿಹ ಭಟರು.

೬

ಮರೆಯಾದ ಮಾತುಮರ ದಿವ್ಯಬೋಧನೆ ಮರೆತು
ಉದರಸೇವೆಯ ಅವರ ಹೊಗಳಿಕೆಯು ಸಾಕು—
ಬಡವ-ಬಲ್ಲಿದರೆಂಬ ಭೇದವಿರದಿಹ ನಾಕ
ಈ ಜಗದಿ ನಿರ್ಮಿಸಲು ನವಕ್ರಾಂತಿ ಬೇಕು !

೭

ಕ್ರಾಂತಿ ಜೀವನ ಧರ್ಮ, ಕ್ರಾಂತಿ ಪ್ರಕೃತಿಯ ನಿಯಮ
ಕ್ರಾಂತಿ ಜಡದಲಿ ಹರಿವ ಚೈತನ್ಯ ಸರಿತೆ—
ಕಸದ ಕೊಳೆ ಅಳಿಸುತಲಿ, ರಸದ ಫಲ ಬೆಳೆಸುತಲಿ
ಹೊಸ ಆಶೆ ಹೊಸಹುರುಪುಗಳ ಸುಗ್ಗಿ ತರದೆ ?

೮

ಋತುಚಕ್ರಗತಿಯಿಂದೆ ಜಡಪ್ರಕೃತಿಯಲಿ ಕ್ರಾಂತಿ
ಅದರಿಂದೆ ತಳೆಯುವುದು ಸೃಷ್ಟಿ ನವಕಾಂತಿ—
ನಿಸ್ಸತ್ವ-ನಿಸ್ಸಾರವಾದುದೆಲ್ಲವನಳಿದು
ನವಸೃಷ್ಟಿ ಬೆಳಗುವುದು ತಳೆದರುಣಕಾಂತಿ.

೯

ರಚನೆಗೊಳ್ಳಲಿ ನಾಡು ಅರ್ಥಸಮತೆಯ ಹದಕೆ
ಹಸನುಗೊಳ್ಳಲಿ ನಾಡ ಬಡಜನರ ಬದುಕು
ಅಶನ-ವಸನದ ಚಿಂತೆ ಹರಿದೊಮ್ಮೆ ನಾಡಿನಲಿ
ಸಂತೃಪ್ತಿ-ಸಂವೃದ್ಧಿಗಳು ನೆಲಸಬೇಕು.

೧೦

ದುಡಿಮೆಯಿಂದಲೆ ಜಗದಿ ಸಕಲ ಸಿರಿ-ಸಂಪತ್ತು
ದುಡಿಮೆಯಿಂದಲೆ ಜಗದಿ ಹಕ್ಕು ಜೀವಿಸಲು—
ದುಡಿಮೆಯುತ್ಪಾದನೆಯು ದುಡಿವರೆಲ್ಲರ ಸೊತ್ತು
ದುಡಿವವರೆ ಧಣಿಗಳೈ ತಿಳಿದು ಭಾವಿಸಲು.

೧೧

ಏಳು ನಾಡಿನ ತರುಣ, ಕರೆಯುತಿದೆ ಶ್ರಮಿಕಜನ
ನೀನೆ ಸಮತೆಯ ಯುಗದ ಕ್ರಾಂತಿಕಾರ—
ಅನ್ಯಾಯಗಳ ಮೆಟ್ಟು, ವಿಷಮತೆಯ ತಲೆಕುಟ್ಟು
ನೀನೆ ನಾಳಿನ ಜಗದ ಬಲುಹುಗಾರ !

ವಿವಾಹೇಚ್ಛು ತರುಣ-ತರುಣಿಯರ ಸಮ್ಮೇಲನ

(ಒಂದು ನಗೆಬರೆಹ) *

ಶ್ರೀ. ಸಂಜೀವ ಲಕ್ಷ್ಮೇಶ್ವರ ಬಿ ಎ. ಮುಂಬಯಿ

●

ನಮ್ಮ ನಾಡಿನಲ್ಲಿ ತರುಣ-ತರುಣಿಯರ ವಿವಾಹವನ್ನು ಸಂಘಟಿಸುವ ಕಾರ್ಯವು ದಿನ-ದಿನಕ್ಕೆ ಕಠಿಣವಾಗತೊಡಗಿದೆ. ಪ್ರೋಳಗಾಂವದಲ್ಲಿ ನಡೆಸಿದಂತೆ ತರುಣ-ತರುಣಿಯರ ಸಮ್ಮೇಳನಗಳು ಊರೂರಿನಲ್ಲಿಯೂ ನಡೆಯತೊಡಗಿದರೆ, ಪಾಲಕರ ಅನೇಕ ಅಪತ್ತಿಗಳು ಬಯಲಾದಾವು !

●

ಪ್ರೋಳಗಾಂವ ಊರು ದೊಡ್ಡದಿದ್ದರೂ ಅದರ ಸಂಬಂಧದಲ್ಲಿ ಯಾವ ಪತ್ರಿಕೆಯಲ್ಲಿಯೂ ಸುದ್ದಿಗಳೂ ಬರುತ್ತಿರಲಿಲ್ಲ. ಹೀಗೆಂದ ಮಾತ್ರಕ್ಕೆ ಅಲ್ಲಿ ಯಾವ ವಿಶೇಷಘಟನೆಗಳು ಸಂಭವಿಸುತ್ತಿರಲಿಲ್ಲ. ವೆಂದಲ್ಲ ಅಲ್ಲಿಯ ಜನರು ಸಭ್ಯಗೃಹಸ್ಥರಿದ್ದ ಮೂಲಕ, ತಮ್ಮ ಊರಿನ ಬಗ್ಗೆ ಯಾವ ಸುದ್ದಿಯೂ ಪ್ರಕಟಿಸಲ್ಪಡಬಾರದೆಂದು ಅವರ ಅಪೇಕ್ಷೆ.

ಪ್ರೋಳಗಾಂವದ ಜನರು ಅತ್ಯಂತ ಚಾಣಾಕ್ಷರು. ತಮಗೆ ಎದು-ರಾದ ಎಲ್ಲ ಪ್ರಶ್ನೆಗಳನ್ನು ತಮ್ಮಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು. ಎರಡನೆಯ ಮಹಾಯುದ್ಧದಿಂದ ಉದ್ಭೂತವಾದ ಅನ್ನ, ವಸ್ತ್ರ, ಮನೆ, ಶಿಕ್ಷಣ ಮುಂತಾದ ಎಲ್ಲ ಸಮಸ್ಯೆಗಳನ್ನೂ ಅವರು ಧೈರ್ಯದಿಂದ ಎದುರಿಸಿದರು. ಇಷ್ಟೆಲ್ಲ ಮಾಡಿದ ಆ ವಿದ್ವಾಂಸಮಂಡಲಿಗೆ ಒಂದು ಪ್ರಶ್ನೆಯನ್ನು ಮಾತ್ರ ಬಿಡಿಸಲು ಆಗದಾಯಿತು; ಅದಾವುದೆಂದರೆ ಮದುವೆಯ ಪ್ರಶ್ನೆ.

ಆ ಊರಲ್ಲಿ ಬೆಳೆದುನಿಂತ ಕನ್ಯೆಯರ ಸಂಖ್ಯೆ ದಿನದಿನಕ್ಕೆ ಹೆಚ್ಚು-ತ್ತಿದ್ದಿತು. ಅವರೆಲ್ಲರ ಮದುವೆಯ ಪ್ರಶ್ನೆ ಪೆಡಂಭೂತವಾಗಿ ನಿಂತಿದ್ದಿತು. ಪ್ರತಿ ಮನೆಯಲ್ಲಿಯೂ ಹುಡುಗಿಯರ ಮದುವೆಯ ಚಿಂತೆ-ಚರ್ಚೆಗಳೇ ನಡೆದಿದ್ದುವು. ತಮ್ಮ ಕನ್ಯಾಮಣಿಗಳಿಗೆ ಯೋಗ್ಯ ಮನೆ ಹುಡುಕು-ವುದೇ ಆ ಊರ ಪಾಲಕರ ಕೆಲಸವಾಗಿದ್ದಿತು. ಅದರಂತೆಯೆ ಅಲ್ಲಿ ಮದುವೆಯಾಗತಕ್ಕ ವರಗಳ ಸಂಖ್ಯೆಯೂ ಅದೇ ರೀತಿ ಬೆಳೆದಿತ್ತು.

ತರುಣರಿಗೆಲ್ಲ ಲಗ್ನವಾಗುವ ಇಚ್ಛೆ ಇದ್ದಿತು; ಆದರೆ ಅವರಿಗೆ ಸಂಸಾರ ಹೂಡುವಷ್ಟು ಆತ್ಮವಿಶ್ವಾಸವಿರಲಿಲ್ಲ. ಹೆಂಡತಿ ಬೇಕಾಗಿ-ದ್ದರೂ ಕನ್ಯಾಪಿತೃಗಳನ್ನು ಕಂಡಕೂಡಲೆ ಅವರ ಧೈರ್ಯವೇ ಉಡುಗಿ ಹೋಗುತ್ತಿದ್ದಿತು. ಕನ್ಯಾಪಿತೃಗಳ ಬಳಿ ಹೋಗಿ ಕೇಳುವ ಧೈರ್ಯ-ವಿರಲಿಲ್ಲ. ಮದುವೆಯೆಂದರೆ ಅವರಿಗೆ ಒಂದು ಬೆದರಿಕೆಯೇ ಆಗಿ-ಬಿಟ್ಟಿದ್ದಿತು. ಈ ರೀತಿಯಿಂದಾಗಿ, ಮದುವೆ ಮಾಡಿಕೊಳ್ಳಬೇಕೋ ಬೇಡವೋ ಎಂಬ ವಿಚಾರದಲ್ಲಿ ಎಷ್ಟೋ ತರುಣರ ಆಯುಷ್ಯವೇ ಸವೆಯುತ್ತ ನಡೆದಿತ್ತು.

ಮದುವೆ ಮಾಡಿಕೊಳ್ಳಬೇಕೆಂದು ಮನಸ್ಸಿದ್ದ ಕೆಲವು ತರುಣರಿಗೆ ತಮ್ಮ ಮನಸ್ಸಿಗೆ ತಕ್ಕಂತಹ ಕನ್ಯೆಯರೇ ದೊರೆತಿರಲಿಲ್ಲ ಕೆಲವರಿಗೆ ಸಿನೇಮಾ ತಾರೆಯರಂತಹ ಕನ್ಯೆಯರು ಬೇಕಾದರೆ, ಕೆಲವರಿಗೆ ಲೇಖಿ-ಕೆಯೂ, ಕವಯಿತ್ರಿಯೂ ಆದವಳು ಬೇಕಾಗಿತ್ತು. ಕೆಲ ನಿರುದ್ಯೋಗಿ ತರುಣರಿಗೆ ನೌಕರಿ ಮಾಡುತ್ತಿರುವ ಹುಡುಗಿಯರು ಬೇಕಾಗಿದ್ದರು. ಬೇರೆ ಕೆಲವರಿಗಂತೂ, ತಮಗೆಂತಹ ಪತ್ನಿ ಬೇಕೆಂಬುದನ್ನು ಹೇಳುವುದು ಕೂಡ ಅಸಾಧ್ಯವಾಗಿದ್ದಿತು. ಈ ಕಾರಣಕ್ಕಾಗಿ ಪ್ರೋಳಗಾಂವದಲ್ಲಿ ಮದುವೆಯ ಪ್ರಶ್ನೆಯು ತೀರ ತೊಡಕಿನದಾಗಿತ್ತು.

ಈ ಪ್ರಶ್ನೆಯನ್ನು ಹೇಗೆ ಬಿಡಿಸಬೇಕೆಂದು ಊರಲ್ಲಿಯ ಬುದ್ಧಿ-ವಂತರು ವಿಚಾರಿಸತೊಡಗಿದರು; ಕೊನೆಗೆ ಇದನ್ನು ಬಿಡಿಸಲು ಒಂದು ಶ್ರೇಷ್ಠ ಉಪಾಯವನ್ನು ಶೋಧಿಸಿದರು.

ಪ್ರೋಳಗಾಂವದ ಒಬ್ಬ ಪ್ರತಿಷ್ಠಿತರೂ, ಏಳು ಜನ ಕನ್ಯೆಯರ ತಂದೆಯುವರೂ ಆದ ರಾವಸಾಹೇಬ್ ಫಲಾಣೆಯವರು ಹೀಗೆಂದರು : " ಈ ಪ್ರಶ್ನೆಯ ಬಗ್ಗೆ ನನಗೊಂದು ಉಪಾಯ ಹೊಳೆದಿದೆ. ಅದೆಂದರೆ, ಈ ಊರಲ್ಲಿಯ ವಿವಾಹೇಚ್ಛು ತರುಣ-ತರುಣಿಯರ ಸಮ್ಮೇಲನವನ್ನು ಜರುಗಿಸಬೇಕು. ಅದರಿಂದ ಹುಡುಗ-ಹುಡುಗಿಯರು ಒಂದೆಡೆಗೆ ಬರಲು ಅನುಕೂಲವಾಗುವುದು. ಅವರವರ ಪರಿಚಯ ಬೆಳೆಯು-ವುದು. ತಮ್ಮ ತಮ್ಮ ಜೊತೆಗಾರರನ್ನು ಸ್ವತಃ ಆರಿಸಿಕೊಳ್ಳಲು ಸಾಧ್ಯ ವಾಗುವುದು. ಇದರಿಂದ ಇಲ್ಲಿಯ ಮದುವೆಯ ಪ್ರಶ್ನೆ ಕೊನೆಗೊಳ್ಳ-ಬಹುದೆಂದು ನನಗೆ ವಿಶ್ವಾಸವಿದೆ. ನಾವು ಪಾಲಕರಂತೂ ಈಗ ತೀರ ಸೋತು ಕೈಯೂರಿದ್ದೇವೆ. ಈಗ ನಮ್ಮ ಮಕ್ಕಳಾದರೂ ತಮ್ಮ ತಮ್ಮ ಮದುವೆಯನ್ನು ಗೊತ್ತುಮಾಡಿಕೊಳ್ಳಲಿ ! ನಿಮ್ಮ ಅಭಿಪ್ರಾಯ-ವೇನು ? " ಎಂದು ಅಲ್ಲಿಯ ಅಳುಮೋರೀ ಮಾಸ್ತರರನ್ನು ಕೇಳಿದರು.

ಅದಕ್ಕೆ ಮಾಸ್ತರರು " ಇದರಲ್ಲಿ ನಾನೇನು ಹೇಳಬಲ್ಲೆ ? ನೀವು ಏಳು ಜನ ಹೆಣ್ಣುಮಕ್ಕಳ ತಂದೆ; ನಿಮ್ಮ ಸಂಕಟ ನಿಮಗೆ ಗೊತ್ತು. ನಿಮ್ಮ ವಿಚಾರವು ಯೋಗ್ಯವೂ ಸ್ವಲ್ಪ ಕೆಚ್ಚೆದೆಯದೂ ಇದೆ. ಆದರೆ

---

* ಮೂಲ ಮರಾಠಿ ಲೇಖನವೊಂದರ ಅನುವಾದವಿದು. ಸಂ. ಜ.

ಈ ತೆರದ ಯಾವುದಾದರೂ ಉಪಾಯವಿಲ್ಲದೆ ಹೋದರೆ, ಈ ಪ್ರಶ್ನೆಗೆ ಕೊನೆಯೇ ಇಲ್ಲ" ಎಂದು ತಮ್ಮ ಬೆಂಬಲಕೊಟ್ಟರು. ಪ್ರೋಳ-ಗಾಂವದ ಒಬ್ಬ ಸಮಾಜಸೇವಕರೆಂದು ಹೆಸರಾದ ದೇ. ಭ. ಕಾರಭಾರಿ-ಕಾಕಾ ಅವರು, ವಿವಾಹೇಚ್ಛು ತರುಣ-ತರುಣಿಯರ ಸಮ್ಮೇಲನಕ್ಕೆ ತಮ್ಮ ಹಾರ್ದಿಕ ಬೆಂಬಲ ಕೊಟ್ಟರು. "ನಾನು ಹೆಣ್ಣುಮಕ್ಕಳ ತಂದೆಯಾಗಿರದಿದ್ದರೂ, ಗಂಡುಮಕ್ಕಳ ತಂದೆಯಾಗಿದ್ದೇನೆ. ಇಂದು ನನ್ನ ಇಬ್ಬರು ಮಕ್ಕಳು ೪೦ ವರ್ಷದವರಾಗಿದ್ದರೂ ಅವರ ಮದುವೆ-ಯಾಗಿಲ್ಲ. ಹೀಗಾಗಿ ನಮ್ಮ ವಂಶವು ನಿರ್ವಂಶವಾಗುವ ಪ್ರಸಂಗ ಬಂದಿದೆ. ಆದುದರಿಂದ ಹೇಗಾದರೂ ಮಾಡಿ ಈ ಪ್ರಶ್ನೆಯನ್ನು ಬಿಡಿಸಲೇ ಬೇಕಾಗಿದೆ."

ವಿವಾಹೇಚ್ಛುಗಳ ಸಮ್ಮೇಲನದ ವಿಚಾರವು ಎಲ್ಲರಿಗೂ ಮಾನ್ಯವಾಯಿತು. ಈ ಯೋಜನೆಯ ಪುರಸ್ಕರ್ತರಾದ ರಾವಸಾಹೇಬ್ ಫಲಾಣೆಯವರ ಜಾಣತನವನ್ನು ಎಲ್ಲರೂ ಹೊಗಳತೊಡಗಿದರು. ಸಮ್ಮೇಲನದ ಪೂರ್ವಸಿದ್ಧತೆ ಪ್ರಾರಂಭವಾಯಿತು. ಹಸ್ತಪತ್ರಿಕೆ, ಪತ್ರಿಕೆಗಳಲ್ಲಿ ಜಾಹೀರಾತು ಕೊಡುವುದು ಮುಂತಾದ ಪ್ರಚಾರಗಳು ನಡೆದುವು. ಒಂದು ವಾರದಲ್ಲಿ ಪ್ರೋಳಗಾಂವ ನಗರದಲ್ಲಿ ಸಮ್ಮೇಲನದ ಬಗೆಗೆ ಜನರಲ್ಲಿ ತುಂಬ ಜಾಗೃತಿಯಾಯಿತು. ಇದೆಲ್ಲವನ್ನು ನೋಡಿ ವಿವಾಹೇಚ್ಛು ತರುಣ-ತರುಣಿಯರು ನಾಚಿಕೊಂಡು ಹಿಂದೆಗೆಯ-ತೊಡಗಿದರು; ಆದರೆ ಪಾಲಕರ ಒತ್ತಾಯದ ಮೂಲಕ ಅವರೂ ಕಾರ್ಯಪ್ರವೃತ್ತರಾದರು.

ಮೊದಲೇ ಗೊತ್ತುಪಡಿಸಿದಂತೆ ಸಮ್ಮೇಲನದ ಆ ಮಂಗಲದಿವಸ ಬಂದಿತು. ಊರೆಲ್ಲವೂ ಉತ್ಸಾಹಭರಿತವಾಗಿತ್ತು. ತರುಣ-ತರುಣಿ-ಯರಂತೂ ಅದು ತಮ್ಮ ಭಾಗ್ಯದ ದಿವಸನೆಂದು ತಿಳಿದರು. ಪಾಲಕರು ವಿಜಯೋತ್ಸಾಹದಲ್ಲಿ ಓಡಾಡುತ್ತಿದ್ದರು. ಊರಿನ ಮುದುಕ-ಮುದುಕರು ಕೂಡ, ಯುವಕರ ಈ ಹೊಸ ಸಮ್ಮೇಲನವನ್ನು ನೋಡಲು ಕೋಲೂರುತ್ತ ಬಂದಿದ್ದರು. ತರುಣಿಯರಂತೂ ಲಗ್ನ ಮಂಟಪಕ್ಕೇ ಹೊರಟಿರುವರೇನೋ ಎಂಬಂತೆ— ಸೌಂದರ್ಯ ಸ್ಪರ್ಧೆಗೆ ಹೋಗು-ವಂತೆ— ಶೃಂಗಾರ ಮಾಡಿಕೊಂಡಿದ್ದರು.

ಊರ ಧರ್ಮಶಾಲೆಯ ಎದುರಿನ ಅಂಗಳದಲ್ಲಿ ದೊಡ್ಡ ಹಂದರ ಹಾಕಿ ತೋರಣ ಕಟ್ಟಿ ಅದನ್ನು ಶೃಂಗರಿಸಲಾಗಿದ್ದಿತ್ತು. ಪ್ರವೇಶದ್ವಾರ ದಲ್ಲಿ ಮಂಗಳವಾದ್ಯಗಳ ವ್ಯವಸ್ಥೆ ಮಾಡಲಾಗಿದ್ದಿತು. ಅಲ್ಲಿಯೇ ಜಾತ್ರೆಗೆ ಸೇರುವಂತೆ ಮಿಠಾಯಿ, ಹೂವಮಾಲೆ, ಅತ್ತರು ಮುಂತಾದುವು-ಗಳ ಅಂಗಡಿಗಳು ನೆರೆದಿದ್ದುವು. ಪ್ರೋಳಗಾಂವದ ಹತ್ತೆಂಟು ಜನ ಭಟ್ಟರು, ಪಂಚಾಂಗ ತೆಗೆದುಕೊಂಡು ಮುಹೂರ್ತ ತೆಗೆದುಕೊಡಲು ಸಿಧ್ಧರಾಗಿ ಬಂದಿದ್ದರು.

ಬೆಳಗಿನಿಂದಲೂ ಸಾವಕಾಶವಾಗಿ ಜನರು ಕಲೆಯತೊಡಗಿದರು. ರಾವಸಾಹೇಬ್ ಫಲಾಣೆಯವರು, ತಮ್ಮ ಏಳೂ ಜನ ಕನ್ನೆಯರೊಂದಿಗೆ ಬಂದಿದ್ದರು. ಶ್ರೀ ಕಾರಭಾರಿಕಾಕಾ, ತಮ್ಮ ೪೦ ವರ್ಷದ ಇಬ್ಬರು ಬ್ರಹ್ಮಚಾರಿ ಮಕ್ಕಳನ್ನು ಕರೆದುಕೊಂಡು ಬಂದಿದ್ದರು. ಕಿರಾಣಿ



ಅಂಗಡಿಯ ಮಾಲಕನಾದ ಅಂತೂಸೇಟನು ಸ್ವತಃ ವಿವಾಹೇಚ್ಛು; ಆದುದರಿಂದ ಅಂಗಡಿಯನ್ನು ಬಂದುಮಾಡಿ ಬಂದಿದನು. ಪ್ರೋಳ-ಗಾಂವದ ಧರ್ಮಪರಾಯಣ ಗೃಹಸ್ಥರಾದ ರೇವಡೇ ಶಾಸ್ತ್ರಿಗಳ ಹೆಂಡತಿಯು ೧೫ ದಿವಸಗಳ ಹಿಂದೆ ತೀರಿಕೊಂಡಿದ್ದರಿಂದ, ಅವರೂ ವಿವಾಹೇಚ್ಛು ಆಗಿದ್ದರು; ಆದುದರಿಂದ ಅವರೂ ಬಂದಿದ್ದರು.

ಅನುಭವಿಕರೂ ಊರಿನ ಗಣ್ಯ ನಾಗರಿಕರೂ ಎಂದು ರೇವಡೇ ಶಾಸ್ತ್ರಿಗಳನ್ನು ಸಮ್ಮೇಲನದ ಅಧ್ಯಕ್ಷರನ್ನಾಗಿ ಆರಿಸಲಾಯಿತು. ಕರತಾಡನದ ಮಧ್ಯದಲ್ಲಿ ರೇವಡೇ ಶಾಸ್ತ್ರಿಯವರು ಅಧ್ಯಕ್ಷ ಪದವನ್ನು ಸ್ವೀಕರಿಸಿದರು. ಕಾರ್ಯದರ್ಶಿಯಾದ ಬಬನ್ ಎಂಬುವವನು ಸಂದೇಶ ಗಳನ್ನು ಓದಿದನು. ಪುಣೆಯ ಪ್ರಸಿದ್ಧ ಪುಸ್ತಕಪ್ರಕಾಶನನೊಬ್ಬನು ವಧೂ-ವರರಿಗೆ ಕಾಣಿಕೆ ಕೊಡಲು ಯೋಗ್ಯವಾದ ಪುಸ್ತಕಗಳ ಯಾದಿ ಯೊಂದಿಗೆ ಶುಭಸಂದೇಶ ಕಳಿಸಿದ್ದನು.

ಬಳಿಕ ಕಾರ್ಯಕ್ರಮ ಪ್ರಾರಂಭವಾದುವು. ಅಧ್ಯಕ್ಷ ರೇವಡೆ ಶಾಸ್ತ್ರಿಗಳು ಭಾಷಣಮಾಡಲು ಎದ್ದರು: "ವಿವಾಹೇಚ್ಛು ಕುಮಾರ-ಕುಮಾರಿಯರೇ, ಮತ್ತು ಅವರ ಪಾಲಕರೇ! ನನಗೆ ಈ ಸಮ್ಮೇಲನದ ಅಧ್ಯಕ್ಷಪದ ವಹಿಸಲು ಬಹಳೇ ಸಂತೋಷವೆನಿಸುತ್ತಿದೆ. ಎರಡು ವಾರಗಳ ಹಿಂದೆಯೆ ನನ್ನ ಶೀಲ ಪ್ರಿಯಪತ್ನಿಯು ನಿಧನ ಹೊಂದಿದಳು. ಇಷ್ಟು ಬೇಗನೆ ಈ ಶುಭಯೋಗ ಬರುವುದೆಂದು ನಾನು ತಿಳಿದಿರಲಿಲ್ಲ. ಈ ಸಮ್ಮೇಲನದ ಮೂಲಕ ನನ್ನ ಕೌಟುಂಬಿಕ ತಾಪ-ತ್ರಯಗಳೂ ದೂರ ಆಗುವುವೆಂದು ನನಗೆ ವಿಶ್ವಾಸ ಹುಟ್ಟಿದೆ. ಮಿತ್ರರೆ, ನಾನು ವಿಧುರನಿದ್ದುದರಿಂದ, ನಾನೂ ಒಬ್ಬ ವಿವಾಹೇಚ್ಛು ಎಂದು ಬೇರೆಯಾಗಿ ಹೇಳುವ ಕಾರಣವಿಲ್ಲ. ನಾನು ವಿವಾಹೇಚ್ಛು ಎಂದು ಈ ಸಮ್ಮೇಲನದಲ್ಲಿ ಜಾಹೀರ್ ಮಾಡಲು ನನಗೆ ಬಹಳೇ ಸಂತೋಷ ವಾಗುವುದು!" ಎಂದು ಮುಂತಾಗಿ ಭಾಷಣಮಾಡಿ ಕುಳಿತರು.

ಅಧ್ಯಕ್ಷರ ಈ ಭಾಷಣ ಕೇಳಿದ ಕೂಡಲೆ ಸುಮಾರು ೧೫-೨೦ ಜನ ಕನ್ಯಾಪಿತೃಗಳು ವೇದಿಕೆಯ ಹತ್ತಿರ ಧಾವಿಸಿಬಂದರಲ್ಲದೆ, ಅಲ್ಲಿಯೇ ರೇವಡೇ ಶಾಸ್ತ್ರಿಗೆ ತಮ್ಮ ತಮ್ಮ ಕನ್ನೆಯರನ್ನು ಮದುವೆ ಮಾಡಿ-ಕೊಳ್ಳಲು ಬಿನ್ನವಿಸತೊಡಗಿದರು. ಅವರ ಈ ತೆರದ ರೀತಿಯಿಂದ ಸಭೆಯ ಕಾರ್ಯಕಲಾಪಕ್ಕೆ ಅಡೆತಡೆಯುಂಟಾಗಿ, ಸಭಾಕಾರ್ಯವು

ನಿಂತಿತು. ಅದನ್ನು ಕಂಡು, ಅಲ್ಲಿ ನೆರೆದ ತರುಣ-ತರುಣಿಯರು ಕೋಪಗೊಂಡರು. ಕುಮಾರ ಕಲ್ಲಿನಾಥ ಎಂಬ ಒಬ್ಬ ಉತ್ಸಾಹೀ ತರುಣನು ವೇದಿಕೆಯ ಮೇಲೆ ಬಂದವನೇ "ಅಧ್ಯಕ್ಷರನ್ನು ತಳ್ಳಿರಿ" "ಈ ಸಮ್ಮೇಲನದಲ್ಲಿ ಕಳ್ಳಪೇಟಿ ನಡೆಯುತ್ತಿದೆ, ಅದಕ್ಕೆ ಇಲ್ಲಿ ಸ್ಥಾನವಿಲ್ಲ'' ಎಂದು ಮುಂತಾಗಿ ಭಾಷಣ ಮಾಡತೊಡಗಿದನು. ಎಲ್ಲ ಕಡೆಯಿಂದಲೂ ಚೀರಾಟ-ಒದರಾಟಗಳು ಕೇಳಬರಹತ್ತಿದುವು. ಸಮ್ಮೇಲನದ ವಾತಾವರಣವು ಗಂಭೀರವಾಯಿತು. ಕುಮಾರ ಕಲ್ಲಿನಾಥ "ಈ ಸಮ್ಮೇಲನವು ಕೇವಲ ವಿವಾಹೇಚ್ಛು ತರುಣ-ತರುಣಿಯರಿಗಾಗಿ ಇದೆ. ಇಲ್ಲಿ ವಿಧುರರಿಗೆ, ಪಾಲಕರಿಗೆ ಸ್ಥಾನವಿಲ್ಲ. ಆದ್ದರಿಂದ ಈ ಅನಾವಶ್ಯಕ ಜನರು ಸಭೆಯಿಂದ ಹೊರಗೆ ಹೋಗಬೇಕೆಂದು ನನ್ನ ಒತ್ತಾಯದ ಸೂಚನೆ ಇದೆ.'' ಎಂದು ಭಾಷಣ ಮಾಡಿದನು. ಈ ಸೂಚನೆಗೆ ಎಲ್ಲ ತರುಣ ಮಂಡಳಿಯು ಸಮ್ಮತಿಕೊಟ್ಟಿತು. "ಮುದುಕ-ತದಕರೇ ಎದ್ದು ಹೋಗಿರಿ!'' ಎಂಬ ಘೋಷಣೆಗಳು ಪ್ರಾರಂಭವಾದುವು. ಈ ಗೊಂದಲವನ್ನು ನೋಡಿ ಪೋಲೀಸರು ಕೂಡ ಬಂದರು. ತರುಣರ ಆಗ್ರಹನೋಡಿ ಪಾಲಕರು ಸಭೆಯಿಂದ ಹೊರಗೆ ಹೋಗಬೇಕಾಯಿತು. ಅಧ್ಯಕ್ಷ ರೇವಡಿ ಶಾಸ್ತ್ರಿಯನ್ನು, ನಾಲ್ಕು ಜನ ತರುಣರು ಕುತ್ತಿಗೆ ಹಿಡಿದು ದಬ್ಬಿದರು.

ಹಿರಿಯರೆಲ್ಲ ಹೊರಗೆ ಹೋದಬಳಿಕ ವಾತಾವರಣವು ಶಾಂತವಾಯಿತು. ಆಮೇಲೆ ಸಮ್ಮೇಲನವು ಮತ್ತೆ ಪ್ರಾರಂಭವಾಯಿತು. ಈಗ ಉಳಿದ ಜನರೆಂದರೆ ಕೇವಲ ವಿವಾಹೇಚ್ಛು ತರುಣ-ತರುಣಿಯರು. ಹೊಸ ಅಧ್ಯಕ್ಷನೆಂದು ಕುಮಾರ ಕಲ್ಲಿನಾಥ ಆರಿಸಲ್ಪಟ್ಟನು. ಅವನು ತನ್ನ ಭಾಷಣದಲ್ಲಿ ಹೀಗೆ ಹೇಳಿದನು: "ತರುಣ-ತರುಣಿಯರೇ, ಎಲ್ಲ ಹಿರಿಯರು ಹೋದದ್ದರಿಂದ ಸ್ವತಂತ್ರವಾದ ವಾತಾವರಣದಲ್ಲಿ ಈ ಸಮ್ಮೇಲನವನ್ನು ನಡೆಸುವ ಸಂದರ್ಭ ಒದಗಿಬಂದಿದೆ; ಆದ್ದರಿಂದ ನಿರ್ಭಯವಾಗಿ ಇದನ್ನು ಯಶಸ್ವಿಗೊಳಿಸೋಣ!''

ಅನಂತರ ಕಾವ್ಯಗಾಯನದ ಕಾರ್ಯಕ್ರಮ ಪ್ರಾರಂಭವಾಯಿತು. ರಾವಸಾಹೇಬ್ ಫಲಾಣೆ ಅವರ ಜ್ಯೇಷ್ಠ ಪುತ್ರಿ ಕುಮಾರಿ ಚಂಚಲಾ (ವಯ ೨೮) "ಎಂದೋ, ಎಂದೋ ನನ್ನ ಮದುವೆ?" ಎಂಬ ಕವನವನ್ನು ಅತ್ಯಂತ ಭಾವಪೂರ್ಣವಾಗಿ ಹಾಡಿದಳು. ಅವಳ ಹಾಡುಗಾರಿಕೆಯನ್ನು ಕೇಳಿ ಮೂವರು ತರುಣರು ಅವಳನ್ನು ಸ್ವೀಕರಿಸಲು ಮುಂದೆಬಂದರು. ಕುಮಾರ ಬಬನ್ ಎಂಬವನು "ಬಂದನಾ ಪ್ರೇಮಭಿಕ್ಷುಕಾ!'' ಎಂಬ ಸಿನೇಮಾ ಗೀತೆಯನ್ನು ಹೇಳಿದನು. ಅದನ್ನು ಕೇಳಿ ಒಬ್ಬ ಹುಡುಗಿಗೆ ಹೃದಯ ತುಂಬಿಬಂದಿತು. ಬಬನ್ ಅವಳನ್ನು ಸ್ವೀಕರಿಸಲು ಒಪ್ಪಿದ. ಅಳುಮಾರೀ ಮಾಸ್ತರರ ಅಣ್ಣನ ಮಗಳಾದ ಕುಮಾರೀ ಚೆಂಗಾ "ಕಂಡು ಕಂಡು ನೀ ಕೈಬಿಡುವಿಯಾ ನಾಥಾ" ಎಂಬ ಕವನವನ್ನು ಹಾವಭಾವ ಸಹಿತವಾಗಿ ಹಾಡಿದಳು. ಅದನ್ನು ಕೇಳಿ ಕಾರಭಾರೀಕಾಕಾ ಅವರ ೪೦ ವರ್ಷದ ಬ್ರಹ್ಮಚಾರಿ ಮಗನಿಗೆ ಅವಳನ್ನು ಮದುವೆಯಾಗುವ ಇಚ್ಛೆ ಉಂಟಾಯಿತು.

"ಶಾರದೆಯ ಅಪರಾವತಾರ"

(ಲಲಿತ ಪ್ರಬಂಧಸಂಕಲನ)

●

ಬರೆದವರು:

ಶ್ರೀ. ಎನ್. ಎಸ್. ಗದಗಕರ, ಬಿ. ಎ.

ಇದರಲ್ಲಿ ಚಿತ್ತಾಕರ್ಷಕವಾದ ಹನ್ನೊಂದು ಲಲಿತ-ಪ್ರಬಂಧಗಳಿದ್ದು ವಾಚಕರಿಗೆ ವಿಚಾರಪ್ರಚೋದನೆ ಮನೋರಂಜನೆ—ಎರಡನ್ನೂ ಒದಗಿಸುವಂತಿವೆ:

ಬೆಲೆ: ಹನ್ನೆರಡಾಣೆ

ಮುಖ್ಯ ಮಾರಾಟಗಾರರು:—

ಮನೋಹರ ಗ್ರಂಥ ಭಾಂಡಾರ,

ಧಾರವಾಡ

ಹೀಗೆಯೇ ಅಂದು ಸುಮಾರು ಐವತ್ತು ಮದುವೆಗಳು ಗೊತ್ತುಮಾಡಲ್ಪಟ್ಟುವು.

ಕಾವ್ಯಗಾಯನದನಂತರ ಚರ್ಚೆ, ಬಹಿರಂಗ ಅಧಿವೇಶನ ಮುಂತಾದುವುಗಳು ನಡೆದುವು. "ಹೋಳಗಾಂವದ ವಿವಾಹ ಸಮಸ್ಯೆ" "ವಿವಾಹಪೂರ್ವದ ಸಹಜೀವನ", "ವಿವಾಹ ಹಾಗೂ ಘಟಸ್ಫೋಟ" ಮೊದಲಾದ ಗಂಭೀರ ವಿಷಯಗಳ ಮೇಲೆ ಚರ್ಚೆನಡೆದುವು.

ಸಮ್ಮೇಲನದಲ್ಲಿ ಕೆಲವು ಮಹತ್ತ್ವದ ಗೊತ್ತುವಳಿಗಳೂ ಪಾಸಾದುವು ೧) ಸರಕಾರವು ನಾಟಕಗೃಹಗಳನ್ನು ಕಟ್ಟಿಸುವ ಬದಲು ಲಗ್ನಕಾರ್ಯಗಳ ಸಲುವಾಗಿ ದೊಡ್ಡ ದೊಡ್ಡ ಕಟ್ಟಡ ಕಟ್ಟಿಸಬೇಕು. ೨) ಬ್ಯಾಂಡ್, ಬಜಂತ್ರಿಯವರು ಮದುವೆಯ ಕಾರ್ಯಗಳಿಗಾಗಿ ದರ ಇಳಿಸಬೇಕು. ೩) ನವದಂಪತಿಗಳು "ಮಧುಚಂದ್ರಕ್ಕಾಗಿ'' (Honeymoon) ಹೋಗಲು ಕಡಿಮೆದರದ ರೈಲ್ವೇ ಟಿಕೆಟಿನ ವ್ಯವಸ್ಥೆ ಆಗಬೇಕು. ೪) ಮದುವೆಯ ನೋಂದಣಿ ಫೀ ತೆಗೆಯಬೇಕು. ೫) ಮಾಥೇರಾನ, ಮಹಾಬಳೇಶ್ವರಗಳಲ್ಲಿ "ಹನಿಮೂನ್ ಕೇಂದ್ರ''ಗಳನ್ನು ಸ್ಥಾಪಿಸಬೇಕು. ೬) ಮಾವನ ಆಸ್ತಿ ಅಳಿಯನಿಗೆ ದೊರೆಯಬೇಕು. ೭) ವಿವಾಹಿತರ ಮೇಲೆ ಪ್ರಾಪ್ತಿಕರ ಇರಕೂಡದು. ೮) ಪ್ರತಿವರುಷ ಇಂತಹ ಸಮ್ಮೇಲನ ಎಲ್ಲೆಡೆಗೂ ಜರುಗಿಸಬೇಕು—ಎಂಬ ಆಶಯದ ಅನೇಕ ಗೊತ್ತುವಳಿಗಳು ಪಾಸಾದುವು. ಅನಂತರ "ಪ್ರೇಮಭೋಜನ" ದೊಂದಿಗೆ ಸಮ್ಮೇಲನ ಮುಕ್ತಾಯಹೊಂದಿತು.

ಜೋಸೆಫ್ ಹೇನ್ರಿ

(ವಿಜ್ಞಾನಿಯ ಪರಿಚಯ)

ಶ್ರೀ. ಟಿ. ಆರ್. ನಾಡಗೀರ B. sc (Hons) B. Sc (Tech)

卐

ಪುರುಷನ ಭಾಗ್ಯ ಹೇಗೆ ತೆರೆಯುವುದೆಂಬುದು ಅಗಮ್ಯವಾದ ವಿಷಯ. ಬಡಕೂಲಿಕಾರನ ಮಗನಾದ ಹೇನ್ರಿಗೆ ನಾಟಕ ಕಂಪನಿಯನ್ನು ನಡೆಯಿಸಿ ಹೊಟ್ಟೆ ಹೊರೆದುಕೊಳ್ಳುತ್ತಿದ್ದ ಒಂದು ಸಾಮಾನ್ಯವ್ಯಕ್ತಿಗೆ—ಲೋಕವಿಖ್ಯಾತನಾದ ವಿಜ್ಞಾನಿಯಾಗುವ ಭಾಗ್ಯಯೋಗ ಕೂಡಬಂತು!

卐

ಜೋಸೆಫ್ ಹೇನ್ರಿಯ ಪೂರ್ವಜರು ಮೂಲತಃ ಸ್ಕಾಟ್ಲಂಡಿನವರು. ಸ್ಕಾಟ್ಲಂಡಿನಲ್ಲಿ ಚರಿತಾರ್ಥ ಸಾಗುವುದು ಕಷ್ಟಸಾಧ್ಯವೆನಿಸಿದ್ದರಿಂದ, ಹೇನ್ರಿಯ ಅಜ್ಜನು ೧೭೭೫ನೆಯ ಇಸ್ವಿಯ ಜೂನ್ ೧೬ರಂದು ನ್ಯೂಯಾರ್ಕ ನಗರಕ್ಕೆ ಬಂದು ತಲ್ಪಿದನು. ಈತನ ಅಜ್ಜನ ನಿಜವಾದ ಹೆಸರು ಹೆಂಡ್ರಿ (Hendrie) ಎಂದಿತ್ತು; ಆದರೆ ಈ ಹೆಸರು ನ್ಯೂಯಾರ್ಕಿನವರಿಗೆ ಉಚ್ಚರಿಸಲು ಬಾರದೆ ಹೋಯಿತು. ಅವರು 'ಡ' ಕಾರವನ್ನು ತೆಗೆದು 'ಹೇನ್ರಿ' ಎಂದೇ ಕರೆಯಲಾರಂಭಿಸಿದರು; ಆದರೆ ಜೋಸೆಫ್‌ನಿಗೆ ತಮ್ಮ ಹೆಸರಲ್ಲಾದ ಈ ಬಗೆಯ ಮಾರ್ಪಾಡು ಸರಿದೋರಲಿಲ್ಲ. 'ಉಚ್ಚರಿಸಲು ಗಡುಚೆನಿಸಿದರೂ, ಆ ಹೆಸರಿನಲ್ಲಿ ಒಂದು ವೈಶಿಷ್ಟ್ಯವಿದೆ. ಅದೆಂದರೆ ಆ ಹೆಸರು ದೇಶಸೂಚಕವಿದೆ' ಎಂದೇ ಹೇನ್ರಿಯ ವಾದ. ಈ ವಾದದಲ್ಲಿ ತಥ್ಯವಿದೆ.

ಜೋಸೆಫ್‌ನು ಹುಟ್ಟುವ ಕಾಲದಲ್ಲಿ ಈತನ ತಂದೆ-ತಾಯಿ ಅಲ್ಬನಿಯಲ್ಲಿ ಇರಲಾರಂಭಿಸಿದ್ದರು. ಅಂದು ಅಲ್ಬನಿಯಲ್ಲಿ ಆಡಳಿತಯಂತ್ರವಿದ್ದುದರಿಂದ, ಉಪಜೀವನ ದೊರೆಕಿಸುವುದು ಸುಲಭಸಾಧ್ಯವಿದ್ದುದರಿಂದ ಅವರು ಅಲ್ಲಿಗೆ ಬಂದಿದ್ದರು. ಜೋಸೆಫ್ ಹುಟ್ಟಿದ್ದು ೧೭೯೭ನೆಯ ಇಸ್ವಿಯಲ್ಲಿ ಒಂದು ದಿನ. ಈತನ ತಂದೆ ತೀರ ಬಡವ. ತಂದೆ-ತಾಯಿ ಇಬ್ಬರೂ ದುಡಿದರೆ ಮಾತ್ರ ಸಿಗುತ್ತಿತ್ತು ಹೊಟ್ಟೆಗಿಷ್ಟು ಹಿಟ್ಟು. ಅವರಲ್ಲೊಬ್ಬರು ಯಾವುದಾದರೊಂದು ದಿನ ಅನಾನುಕೂಲತೆಯೊದಗಿ ದುಡಿಯದಿದ್ದರೆ, ಪರಿವಾರವಲ್ಲೊಬ್ಬ 'ಏಕಾದಶಿ'ಯನ್ನು ಕೈಕೊಳ್ಳಬೇಕಾಗುತ್ತಿತ್ತು. ಇಂತಹ ಬಡ ಕುಟುಂಬದಲ್ಲಿ ಜನಿಸಿದ ಮಕ್ಕಳ ಶಿಕ್ಷಣದ ಪಾಡೇನು? ಶಿಕ್ಷಣದ ಮಾತು ಒತ್ತೊಟ್ಟಿಗಿರಲಿ: ಲಾಲನೆ-ಪಾಲನೆ ಸಾಗುವುದೆಂತು? ಆದರೂ ದೇವರು ದೊಡ್ಡವನು! ಜೋಸೆಫ್‌ನಿಗೆ ೭ ವರ್ಷಗಳಾದಾಗ, ಒಂದು ದಿನ ಆತನ ಸೋದರಮಾವ ತಂಗಿಯನ್ನು ಕಾಣಬಂದ. ಆತನ ಪರಿಸ್ಥಿತಿ ಇವರಿಗಿಂತ ಕೆಲಮಟ್ಟಿಗೆ ಚೆನ್ನಾಗಿತ್ತು. ಇಲ್ಲಿಯ ದಟ್ಟ ದಾರಿದ್ರ್ಯವನ್ನು ಕಣ್ಣಾರೆ ಕಂಡ ಆತ, ಪುಟ್ಟ ಜೋಸೆಫ್‌ನನ್ನು ತನ್ನೊಂದಿಗೆ ಕರೆದುಕೊಂಡು ಬಂದನು. ಸೋದರಮಾವನೊಂದಿಗೆ ಜೋಸೆಫ್ ಇರಹತ್ತಿ ಎರಡು ವರುಷಗಳೂ ಕಳೆದಿರಲಿಲ್ಲ; ಆತನಿಗೆ ಪಿತೃವಿಯೋಗವಾಯಿತು. ನಿರಾಧಾರಿಯಾದ ಆ ಅಬಲೆ—ಜೋಸೆಫ್‌ನ ತಾಯಿ—ಅಣ್ಣನ ಮನೆಗೆ ಬರುವುದು ಅನಿವಾರ್ಯವಾಯಿತು. ಜೋಸೆಫ್‌ನ ಶಿಕ್ಷಣದ ಹೊಣೆಯನ್ನು ಈಕೆಯೇ ಹೊರುವುದು ಅಪರಿಹಾರ್ಯವಾಯಿತು. ಈಕೆಯೋ, ಒಳ್ಳೆಯ ಹೆಂಗುಸು. ಮಾಟಾಗಿ ಮುದ್ದಾಗಿ ಇದ್ದಳು. ಸ್ವಭಾವ ತುಂಬ ಕೋಮಲವಾದುದು. ಪ್ರೆಸ್ಬಿಟೇರಿಯನ್ ಚರ್ಚಿನ ಅನುಯಾಯಿ. ಇಂತಹ ತಾಯಿಯ ಸಾನ್ನಿಧ್ಯದಲ್ಲಿ ಬೆಳೆದ ಜೋಸೆಫ್‌ನಲ್ಲೂ ತಾಯಿಯ ಒಳ್ಳೆಯ ಗುಣಗಳು ಇರಬೇಕಾದುದು ಸಹಜವೆ. 'ಮಕ್ಕಳ ಸ್ಕೂಲು ಮನೇಲೆ' ಎಂಬುದನ್ನು ಜೋಸೆಫ್‌ನು ವೃದ್ಧಾಪ್ಯದಲ್ಲಿ ಬೋಧಿಸಿದನು. ಬಾಲ್ಯದಲ್ಲಿ ಮೇಣದಂತಿರುವ ಮಕ್ಕಳ ಮನಸ್ಸಿನ ಮೇಲೆ ಬೀರಿದ ಪ್ರಭಾವಗಳು ಚಿರಕಾಲವಿರುವುವೆಂಬುದು ಆತನು ಕಂಡುಕೊಂಡ ಸಂಗತಿ. ತಾಯಿಯು ಪ್ರೆಸ್ಬಿಟೇರಿಯನ್ ಚರ್ಚಿನ ಅನುಯಾಯಿಯಾಗಿದ್ದುದರಿಂದ, ಈತನಿಗೂ ಆ ಧರ್ಮದಲ್ಲಿ ಶ್ರದ್ಧೆ ಇರುವುದು ತೀರ ಸಹಜ. ಈ ಧರ್ಮವನ್ನನುಸರಿಸಿಯೇ ನಡೆದ ಜೋಸೆಫ್, ತನ್ನ ಬಾಳಿಗೊಂದು ದಿವ್ಯತೆಯನ್ನು ತಂದುಕೊಂಡನೆನ್ನಬಹುದು.

ಜೋಸೆಫ್‌ನನ್ನು ನೋಡಲು ಎರಡು ಕಣ್ಣುಗಳು ಸಾಲುತ್ತಿರಲಿಲ್ಲ. ನೋಡಿದಂತೆ ನೋಡುತ್ತಲೆ ನಿಲ್ಲಬೇಕೆಂಬ ಭಾವ ನೆಲೆಗೊಳ್ಳುತ್ತಿತ್ತು. ಸುಂದರನಿದ್ದಂತೆ ಸದೃಢನೂ ಇದ್ದನು. ಶಾಲೆಗೆ ಸೇರಿದ ಹೊಸದರಲ್ಲಿ ಈತನ ಪ್ರಗತಿ ಅತೃಪ್ತಿಕರವಿತ್ತು. ಶಾಲೆಯೆಂದರೆ ಈತನಿಗೆ ತಲೆಬೇಸರು; ಓದು ಎಂದರೆ ಓಕರಿಕೆ! ಇಂಥವನಲ್ಲೂ ಒಂದು ದಿನ ಆಕಸ್ಮಿಕವಾಗಿ ವಾಚನಾಭಿರುಚಿ ಹುಟ್ಟಿತು. ಅದೊಂದು ದಿನ, ಈತ ಸಾಕಿದ ಮೊಲವು ಈತನ ಕೈಯಿಂದ ತಪ್ಪಿಸಿಕೊಂಡು 'ಪಂಚಾಯತ' ಮನೆಗೆ ಓಡಿತು. ಈತ ಆ ಪುಟ್ಟ ಪ್ರಾಣಿಯನ್ನು ಬೆನ್ನಟ್ಟಿದ. ಮೊಲವು ಮೊದಲೇ ಅಂಜುಬುರುಕ ಪ್ರಾಣಿ. ಅಂಥದರಲ್ಲಿ ಈತ ಬೇರೆ ಬೆನ್ನು ಬಿಟ್ಟಿರಲಿಲ್ಲ. ಗಾಬರಿಯಿಂದ ಅತ್ತಿತ್ತ ಓಡುತ್ತಿದ್ದಂತೆ, ಬಳಿಯಲ್ಲಿಯೇ ಬಿಲವೊಂದು ಕಾಣಬಂದಿತು ಆ ಪುಟ್ಟ ಪ್ರಾಣಿಗೆ. ಸರಿ, ಸರಕ್ಕನೆ ನುಸುಳಿಕೊಂಡಿತು ಆ ಮೊಲ. ಈತನಿಗೆ ಕೈ ಹಿಚುಕಿಕೊಳ್ಳುವಂತಾಯಿತು. ನಿರುಪಾಯನಾದ ಹೇನ್ರಿ ಆ ಬಿಲದಲ್ಲಿ ಹಣಿಕಿಕ್ಕಿದ. ಅಲ್ಲಿ ಅಸ್ಪಷ್ಟ ಪ್ರಕಾಶ ಬರುತ್ತಿತ್ತು. ಆ ಅಸ್ಪಷ್ಟ ಪ್ರಕಾಶದ ಉಗಮ ಕಾಣಬಯಸಿದ ಹೇನ್ರಿ. ಅನಂತರ ಬಂದು ಸೇರಿದ್ದು ಆ ಹಳ್ಳಿಯ ವಾಚನಾಲಯದಲ್ಲಿ. ಅಲ್ಲಿಯ ಎತ್ತರದ ಕಪಾಟಿನ ಹಿಂದೆಯೇ ಈತನ ಸಾಕುಪ್ರಾಣಿ ಅವಿತುಕೊಂಡಿತ್ತು. ಆ ಕಪಾಟಿನಲ್ಲಿ ಪುಸ್ತಕಗಳ ರಾಶಿಯೇ ಇತ್ತು. ಅದರಲ್ಲೊಂದು ಪುಸ್ತಕವನ್ನು ಎತ್ತಿಕೊಂಡು ಓದಬಯಸಿದ ಹೇನ್ರಿ– ಅದೂ ನಿರಾಸಕ್ತಿಯಿಂದ; ಆದರೆ ಕೆಲ ಕ್ಷಣಗಳಲ್ಲಿಯೇ ಮುನ್ನಿನ ನಿರಾಸಕ್ತಿ ಮಾಯವಾಗಿ;

ಕುತೂಹಲ ಕೆರಳಿ ನಿಂತಿತ್ತು. ಪುಟ-ಪುಟಕ್ಕೂ ಆಸಕ್ತಿ ಹೆಚ್ಚುತ್ತ ನಡೆದಿತ್ತು. ಅಲ್ಲಿಯೇ ಆ ಪುಸ್ತಕವನ್ನು ಓದಿ ಮುಗಿಸಿದ ಹೇನ್ರಿ. ಹೇನ್ರಿಯಿಂದ ಓದಿಸಿಕೊಂಡ ಸೌಭಾಗ್ಯ, ಹೇನ್ರಿ-ಬ್ರೂಕ್ ಬರೆದ 'The Fool of Quality' ಎಂಬ ಗ್ರಂಥಕ್ಕಿತ್ತು. ಈ ಪುಸ್ತಕ ಓದಿದಾಗ ಆತನಿಗೆ ಸುಮಾರು ೮-೯ ವರುಷವಿದ್ದಿರಬಹುದು. ಹೇನ್ರಿ ಕುಟುಂಬದಲ್ಲಿ ಶಾಲಾಭ್ಯಾಸಕ್ಕೆ ಗೌಣಸ್ಥಾನವಿತ್ತು. ಹೊಟ್ಟೆಯ ಹೋರಾಟವೇ ಪ್ರಥಮಪ್ರಾಶಸ್ತ್ಯವನ್ನು ಪಡೆದುಕೊಂಡಿತ್ತು; ಜೋಸೆಫ್‌ನಿಗೆ ೧೦ ವರುಷಗಳಾದಾಗ, ಹೊಟ್ಟೆಗಾಗಿ ಬ್ರೊಡೆರಿಕ್ಕನ ಅಂಗಡಿಯಲ್ಲಿ ಪೇದೆಯ ಕೆಲಸ ಮಾಡಬೇಕಾಯಿತು. ಬ್ರೊಡೆರಿಕ್ಕನೊ ಸಭ್ಯಗೃಹಸ್ಥ, ಜೋಸೆಫ್‌ನಿಗೆ ಮಧ್ಯಾಹ್ನದಲ್ಲಿ ಶಾಲೆಗೆ ಹೋಗಲು ಬಿಡುವು ಕಲ್ಪಿಸಿಕೊಟ್ಟಿದ್ದ. ಆತನ ಅಂಗಡಿ ನಮ್ಮಲ್ಲಿಯ ಚಾಪಡಿಕಟ್ಟೆ ಇದ್ದಂತಿತ್ತು. ಅಲ್ಲಿ ಬಾರದ ವಿಷಯಗಳಿರಲಿಲ್ಲ. ಆ ಹಾಳುಹರಟೆಗಳಲ್ಲಿ ಪಾಲುಗೊಳ್ಳದ ಪಾಮರರು ಇರಲಿಲ್ಲ. ಜೋಸೆಫ್ ಈ ಕಟ್ಟೆಯ ಪುರಾಣಗಳಿಗಿಷ್ಟು ಒಗ್ಗರಣೆಹಾಕಿ ತನ್ನ ಮಿತ್ರಮಂಡಳಿಗೆ ಹೇಳುತ್ತಿದ್ದ. ಈ ಪುರಾಣ ಹೇಳಲು ಈತನಿಗೆ ಅಮಿತೋತ್ಸಾಹ—ಕೇಳುವವರಿಗೆ ಅಮಿತಾನಂದ. ಬ್ರೊಡೆರಿಕ್ಕನಲ್ಲೂ ಬಹಳ ದಿನವಿರಲಿಲ್ಲ ಜೋಸೆಫ್. ಅಲ್ಪನಿಯಲ್ಲಿ ಅಕ್ಕಸಾಲಿಗ ಮತ್ತು ವಾಚ್‌ರಿಪೇರರಲ್ಲಿ ಆ ಆ ಕೆಲಸ ಕಲಿತುಕೊಳ್ಳಲು ತಾಯಿ ಸಲಹೆ ಇತ್ತಳು. ತಾಯಿಯ ಸಲಹೆ ಈತನಿಗೆ ಅಪಥ್ಯವೆನಿಸಿದರೂ, ಆಕೆಯನ್ನು ಅಸಮಾಧಾನಪಡಿಸಲಿಲ್ಲ. ಸೇರಿದ ೨ ವರುಷಗಳಲ್ಲಿಯೇ ಈ ಕೆಲಸಗಳು ಇವನಿಗೆ ಬೇಸರ ತಂದುವು. ಇಷ್ಟು ಅಲ್ಪಾವಧಿಯಲ್ಲಿಯೇ ಆತ ಚಿಕ್ಕ ಚಿಕ್ಕ ಸಾಧನೆ (Tool)ಗಳನ್ನು ನಿರ್ಮಿಸುವ ಕ್ರಮವನ್ನು ಕಲಿತುಕೊಂಡಿದ್ದನು. ಈ ಶಿಕ್ಷಣದ ಪ್ರಯೋಜಕತೆ ಆತ ವಿಜ್ಞಾನಿಯಾದಾಗ ಕಂಡುಬಂದಿತು. ಅಲ್ಪನಿಯಲ್ಲಿದ್ದಾಗಲೆ ನಾಟಕಗಳನ್ನು ನೋಡುವ ಚಟ ಅಂಟಿಕೊಂಡಿತು. ಈ ಚಟದಿಂದಾಗಿ ಪ್ರಭಾವೀ ನಾಟಕಗಳನ್ನು ನಿರ್ಮಿಸುವ ತಂತ್ರವನ್ನು ಕೆಲಮಟ್ಟಿಗೆ ಕಲಿತುಕೊಂಡನು. ಕೆಲವು ದಿನಗಳಲ್ಲಿಯೆ, ತನ್ನದೇ ಆದ ಒಂದು ಕಂಪನಿಯನ್ನು ಸ್ಥಾಪಿಸಿದನು. ತನ್ನ ಎಲ್ಲ ವೇಳೆಯನ್ನು ಕತೆಗಳನ್ನು ನಾಟಕಗಳನ್ನಾಗಿ ಮಾರ್ಪಡಿಸುವುದರಲ್ಲಾಗಲಿ, ಹಾಸ್ಯಲೇಖನಗಳನ್ನು ಬರೆಯುವುದರಲ್ಲಾಗಲಿ ಅಥವಾ ಪ್ರಸಿದ್ಧಿಪಡೆದ ಫ್ರೆಂಚ್ ನಾಟಕಗಳ ಅನುವಾದ ಮಾಡುವುದರಲ್ಲಾಗಲಿ ವಿನಿಯೋಗಿಸುತ್ತಿದ್ದ. ನಾಟಕದಿಗ್ದರ್ಶನದಲ್ಲಿ ಪರಿಶ್ರಮವನ್ನು ವಹಿಸುತ್ತಿದ್ದುದರಿಂದ, ಅವು ಯಶಸ್ವಿಯಾದುವಲ್ಲದೆ, ಈತನ ಕಲಾಪರಿಣತಿಯನ್ನು ಕಂಡವರು 'ಉಜ್ವಲ ಭವಿಷ್ಯ'ತ್ತು ಈತನಿಗೆ ಕಾದಿದೆ, ಎಂದೂ ಭಾವಿಸಿದರು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬಂತೆ, ಒಂದು ದಿನ ನಾಟಕಪ್ರದರ್ಶನದ ಕಾಲಕ್ಕೇನೆ ಆವನಿಗೆ ಚಿಕ್ಕ ಗಾಯವಾಗಿ, ಆತ ಕೆಲದಿನ ಹಾಸಿಗೆ ಹಿಡಿಯುವಂತಾಯಿತು. ಶುಶ್ರೂಷಾಕಾಲವೇ ಆತನ ಜೀವನದಲ್ಲಿ ಹೊಸಘಟ್ಟದ ನಾಂದಿಯಾಯಿತು. ಇದುವೆ ಮಹಾ ಸುದಿನ! ಹಾಸಿಗೆಯಲ್ಲಿ ಹೊರಳಾಡಿ ಬೇಸತ್ತ ದೇಹಕ್ಕೆ ತಲೆಬೇಸರು ಬಂದಿತ್ತು. ಬಳಿಯಲ್ಲಿಯ ಟೇಬಲ್ಲಿನ ಮೇಲೊಂದು ಪುಟ್ಟ ಪುಸ್ತಕ ಬಿದ್ದುದು ಆತನ ಕಣ್ಣಿಗೆ ಬಿತ್ತು. ಕುತೂಹಲದಿಂದ ಆ ಪುಸ್ತಕವನ್ನೆತ್ತಿಕೊಂಡ. ಆ ಪುಸ್ತಕದ ಹೆಸರು Lectures on Experimental Philosophy Astronomy & Chemistry. ಪುಟಪುಟಗಳನ್ನು ಸರಿಸುತ್ತ ಹೋದಂತೆ ಕುತೂಹಲ ಇನ್ನೂ ಹೆಚ್ಚುತ್ತ ನಡೆದಿತ್ತು. ಫಲಾಹಾರದ ವೇಳೆಯಾಯಿತು. ತಾಯಿ ಹಣ್ಣು-ಹಾಲು, ಬ್ರೆಡ್ಡುಗಳುಳ್ಳ ಟ್ರೇಯನ್ನು ತಂದಿಟ್ಟು ಕಾಯ್ದಳು. ಗಂಟೆ ಸರಿಯಿತಾದರೂ ಟ್ರೇ (Tray)ನಲ್ಲಿಯ ತಿನಿಸುಗಳು ಇದ್ದಂತಿದ್ದುವು. ಮಗನ ಕುತೂಹಲವನ್ನು ನೋಡಿದ ತಾಯಿ ಬೆಕ್ಕಸಬೆರಗಾದಳು. ಆ ಪುಸ್ತಕದ ಬಗ್ಗೆ ಮಗನಿಗಿದ್ದ ಆಸಕ್ತಿಯನ್ನು ಬಾಯ್ಲ (Boyle)ನಿಗೆ ಹೇಳಿದಳು. ಬಾಯ್ಲ ಹೇನ್ರಿ ಕುಟುಂಬದ ಪರಮಮಿತ್ರ. ಈತನೇ ಮುಂದೆ ಸುಪ್ರಸಿದ್ಧ ವಿಜ್ಞಾನಿಯಾದುದು. ಜೋಸೆಫ್‌ನಿಗೆ ಆ ಪುಸ್ತಕವನ್ನು ಕಾಣಿಕೆಯಾಗಿಕೊಟ್ಟನು. ಆ ಪುಸ್ತಕದ ಕರ್ತೃವಾದ ಗ್ರೆಗರಿ. ನಿಸರ್ಗದಲ್ಲಿ ಕಾಣಬರುವ ಘಟನೆಗಳನ್ನು ಲಲಿತಭಾಷೆಯಲ್ಲಿ ಬರೆದಿದ್ದ. ಆ ಪುಸ್ತಕವನ್ನು ಪುನಃ ಪುನಃ ಪಠಿಸಿದಂತೆ ನಿಸರ್ಗದ ಮನೋಧರ್ಮವನ್ನು ಅರಿತುಕೊಳ್ಳಬೇಕೆಂಬ ಹೇನ್ರಿಯ ಬಯಕೆ ಹೆಡೆಯೆತ್ತಿ. ಈ ಮೊದಲು ನಾಟಕಗಳಲ್ಲಿದ್ದ ಆತನ ಆಸ್ಥೆಗೆ ಏಟು ಹಾಕಿತು. ಈ ಪುಸ್ತಕ ಓದಿಯಾದ ಮೇಲೆ ಜೋಸೆಫ್, ಅದರ ಕೊನೆಯ ಪುಟದ ಮೇಲೆ ಹೀಗೆ ಬರೆದಿದ್ದಾನೆ:—

" ಈ ಹೊತ್ತಗೆಯು ಅಪೂರ್ವವಾದುದು ಇರದಿದ್ದರೂ, ನನ್ನ ಚಿತ್ತಭಿತ್ತಿಯ ಮೇಲೆ ಅಳಿಸಲಾರದ ಚಿತ್ರವನ್ನು ಬರೆದಿದೆ. ಈ ಹೊತ್ತಗೆ ನನ್ನ ಕೈಸೇರಿದುದು ಆಕಸ್ಮಿಕವಾಗಿ; ಆಗ ನನಗೆ ಕೇವಲ ೧೬ ವರುಷ. ಅಷ್ಟು ದೊಡ್ಡವನಾಗಿದ್ದರೂ, ಲಕ್ಷ್ಯಪೂರ್ವಕವಾಗಿ ಓದಿದ ಪುಸ್ತಕವೆಂದರೆ ಇದೇ—ಎಂದರೆ, ನೀವು ನಗಬಹುದು. ಈ ಪುಸ್ತಕ ನನಗೆ ವಿಶ್ವದರ್ಶನದ ಲಾಭವೊದಗಿಸಿತೆಂದು ನಾನು ಭಾವಿಸುತ್ತೇನೆ. ಇದನ್ನು ಓದುತ್ತಿದ್ದಂತೆಯೇ ನಿಸರ್ಗದ ಚಮತ್ಕಾರಗಳನ್ನು ನ್ನೆಲ್ಲಾ ಕಣ್ಣಾರೆ ನೋಡಬೇಕೆಂಬ ಇಚ್ಛೆಯಾಯಿತು."

ಈ ಹೊತ್ತಗೆ ಮನಸ್ಸಿನ ಮೇಲೆ ಮಾಡಿದ ಪರಿಣಾಮದಿಂದಾಗಿಯೇ ಜೋಸೆಫ್ ರಾತ್ರಿಶಾಲೆಗೆ ಹೋಗಲು ನಿರ್ಧರಿಸಿದ. ಭೂಮಿತಿ

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ
ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಆ್ಯಂಡ್ ಪೇಂಟಿಂಗ್ ವರ್ಕ್ಸ್
ಗಾಂಧಿಚೌಕ, ಧಾರವಾಡ

ಮತ್ತು Mechanics ಗಳನ್ನು ಹೆಚ್ಚಾಗಿ ಅಭ್ಯಾಸ ಮಾಡಿದ. ವಯಸ್ಸು ಹದಿನಾರಾಗಿತ್ತು, ತಾರುಣ್ಯದ ಆಗಮನವಾಗಿತ್ತು; ಹಾಗೆಯೇ ಕೆಚ್ಚೂ ಇತ್ತು. ಆತ ಆಗ ದುಡಿಯುತ್ತಿದ್ದುದು ದಿನಕ್ಕೆ ೧೬ ಗಂಟೆ. ಇಷ್ಟು ಕಾಲದ ಪರಿಶ್ರಮ ದೇಹವನ್ನು ದಣಿಸಲಿಲ್ಲ. ಬದಲಾಗಿ ದಿನದಿನಕ್ಕೆ ಆತ ನವೋತ್ಸಾಹದಿಂದ ನಲಿಯುತ್ತಿದ್ದ. ಮನೋನಿರ್ಧಾರವನ್ನು ಯಾವುದು ತಾನೆ ಎದುರಿಸಬಲ್ಲುದು? ಇಂತು ಮಾಧ್ಯಮಿಕ ಶಿಕ್ಷಣವನ್ನು ಯಶಸ್ವಿಯಾಗಿ ಪೂರಯಿಸಿ, ಅಲ್ಬನಿಯಲ್ಲಿಯ ಶಾಲೆಯೊಂದರಲ್ಲಿ ಅಧ್ಯಾಪಕನಾಗಿ ತನ್ನ ಶಿಕ್ಷಣವನ್ನು ಮುಂದುವರಿಸಿದ. ಉಚ್ಚ ಶಿಕ್ಷಣಕ್ಕೆ ವಿಶೇಷವಾಗಿ ವಿಜ್ಞಾನಾಭ್ಯಾಸಕ್ಕೆ ಗಣಿತ ಅತ್ಯಗತ್ಯದ ವಿಷಯವೆಂಬುದನ್ನೂ ಅರಿತುಕೊಂಡ. ಉಚ್ಚ ಶಿಕ್ಷಣಕ್ಕೆ ತಗಲುತ್ತಿದ್ದ ವೆಚ್ಚದ ಕೆಲವಂಶ ' ಅಲ್ಬನಿ ಅಕಾಡಮಿ 'ಯ ಅಧ್ಯಕ್ಷರಿಂದ ದೊರೆಯುತ್ತಿತ್ತು. ಈತ ಅವರ ಮಕ್ಕಳಿಗೆ ದಿನಕ್ಕೆ ೩ ತಾಸು ಪಾಠ ಹೇಳುವುದಿತ್ತು; ಇನ್ನುಳಿದ ವೇಳೆಯಲ್ಲಿ ಅಕಾಡಮಿಯ ಪ್ರಿನ್ಸಿಪಾಲರಿಗೆ ರಾಸಾಯನಿಕ ಪ್ರಯೋಗಗಳನ್ನು ಮಾಡುವುದರಲ್ಲಿ ಸಹಕರಿಸುವುದಿತ್ತು. ಅಕಾಡಮಿಯಲ್ಲಿಯ ಶರೀರಶಾಸ್ತ್ರ ಮತ್ತು ಆರೋಗ್ಯಶಾಸ್ತ್ರಗಳ ಅಭ್ಯಾಸವನ್ನು ಮಾಡಿದ. ಈ ಅಭ್ಯಾಸದ ಮೂಲೋದ್ದೇಶ ಡಾಕ್ಟರನಾಗುವುದಿತ್ತು. ಅಂತೂ ಅಕಾಡಮಿಯಲ್ಲಿ ಅಭ್ಯಾಸ ಮುಗಿಸಿದ. ಈ ಅಭ್ಯಾಸ ಪೂರಯಿಸುವುದರಲ್ಲಿ ದೇಹಕ್ಕೆ ತುಂಬ ಆಯಾಸವಾಗಿತ್ತು. ಹೆಚ್ಚಿನ ಪರಿಶ್ರಮ ತಾಳಲು ಅದು ನಿರಾಕರಿಸಿತು. ಡಾಕ್ಟರರು ವಿರಾಮವನ್ನು ತೆಗೆದುಕೊಳ್ಳಬೇಕೆಂದು ಬೋಧಿಸಿದರು. ಸಾಕಷ್ಟು ವಿರಾಮ ಪಡೆದು, ಮರಳಿ ಅಲ್ಬನಿಗೆ ಬಂದಾಗ, ಅಕಾಡಮಿಯಲ್ಲಿಯೇ ೧೮೨೬ರಲ್ಲಿ ಗಣಿತ ಪ್ರಾಧ್ಯಾಪಕನಾದನು ಆಗ ಇವನಿಗೆ ಕೇವಲ ೨೯ ವರ್ಷ. ದಿನಕ್ಕೆ ೭ ಗಂಟೆಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವುದರಲ್ಲಿ ಕಳೆಯಬೇಕಾಗುತ್ತಿತ್ತು. ಇನ್ನುಳಿದ ವೇಳೆಯಲ್ಲಿ ತನಗೆ ಪ್ರಿಯವಾದ ವಿದ್ಯುತ್ತಿನ ಸುಪ್ತಶಕ್ತಿಯನ್ನು ಚೇತರಿಸಿ ಮಾನವಕುಟುಂಬಕ್ಕೆ ಅದರಿಂದಾಗುವ ಪ್ರಯೋಜನಗಳ ವಿಚಾರವೇ ಆತನ ಮನಸ್ಸಿನಲ್ಲಿ ನೆಲಸಿತ್ತು.

ಜೋಸೆಫ್ ಪ್ರಕಟಿಸಿದ ಮೊದಲನೆಯ ಪ್ರಬಂಧ ' ಉಗಿಯನ್ನು ತಂಪಾಗಿಸುವ ಬಗೆ'—ಎರಡನೆಯದು 'ಹವೆಯ ಪ್ರಸರಣದಿಂದ ತಂಪು ಹುಟ್ಟುತ್ತದೆ' ಎಂಬುದು. ಈ ಎರಡೂ ಪ್ರಯೋಗಗಳ ಫಲಿತಾಂಶ ೧೮೨೫ರ ಮೊದಲು ಪ್ರಕಟವಾಗಿದ್ದುವು. ೧೮೨೫ರ ಸುಮಾರಿಗೆ ಸರಕಾರದವರು 'ವನಸ್ಪತಿಗಳ ಮೇಲೆ ಆಗುವ ಹವಾಮಾನದ ಪರಿಣಾಮ'ದ ಕುರಿತು ವರದಿ ಒಪ್ಪಿಸಲು ಅಲ್ಬನಿ ಅಕಾಡಮಿಗೆ ಕೇಳಿಕೊಂಡರು. ಅಕಾಡಮಿಯವರು ಈ ಕಾರ್ಯವನ್ನು ಜೋಸೆಫ್‌ನಿಗೆ ಒಪ್ಪಿಸಿದರು. ಆತ ಈ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಿದ. ಅಕ್ಟೋಬರ್ ೧೦, ೧೮೨೭ರಂದು 'ವಿದ್ಯುಲ್ಲೋಹಚುಂಬಕತ್ವ' (Electromagnetism)ದ ಕುರಿತು ತಾನು ಮಾಡಿದ ಪ್ರಯೋಗ ಮತ್ತು ಫಲಿತಾಂಶಗಳನ್ನು ಪ್ರಸಿದ್ಧಿಸಿದ. ಈ ಪ್ರಕಟನೆಯಿಂದಾಗಿ ಜೋಸೆಫ್ ಬಹುಬೇಗ ಬೆಳಕಿಗೆ ಬರುವಂತಾಯಿತು. ವಿದ್ಯುತ್ಸಂಶೋಧನೆ ಮಾಡಿದ ೨ನೆಯ ಅಮೇರಿಕನ್ನನೆಂದರೆ ಈತನೇ! ಸ್ಟರ್ಜನ್ನನ (Sturgeon)

ಗರ್ಭಾಶಯದ ದೋಷಗಳನ್ನು ನಿವಾರಿಸಲು ಅತ್ಯುತ್ತಮವಾದ ಸಿದ್ಧೌಷಧ
ಶಿವಾನಿ
ದಿ ಸದ್ವೈದ್ಯಶಾಲಾ ಲಿ., ನಂಜನಗೂಡು
ಬ್ರಾಂಚುಗಳು: ಬೆಂಗಳೂರು, ಮೈಸೂರು, ಮಂಗಳೂರು, ಹುಬ್ಬಳ್ಳಿ
ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿರಿ

ಗ್ಯಾಲ್ವಾನೋ ಮೀಟರಿನಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದ. ೧೮೨೯ರಲ್ಲಿ ಈತ ರಚಿಸಿದ ವಿದ್ಯುಚ್ಚುಂಬಕ, ೪೦೦ ಸುತ್ತು ತಂತಿಯನ್ನು ಸುತ್ತಿಕೊಂಡಿತ್ತು; ಅದಕ್ಕೆ ರೇಶಿಮೆಯ ಆವರಣವಿತ್ತು. ಆದೇ ವರುಷವೇ ಹೇನ್ರಿ ಅರ್ಧ ಇಂಚಿನ ಕಬ್ಬಿಣದ ತುಂಡನ್ನು ಕುದುರೆಯ ಲಾಳದಂತೆ ಮಣಿಸಿ, ಅದಕ್ಕೆ ೩೦ ಫೂಟು ಉದ್ದದ ತೆಳ್ಳನೆಯ ತಾಮ್ರದ ತಂತಿಯನ್ನು ಸುತ್ತಿದನು. ಈತನ ಪ್ರಯೋಗಗಳೇ ತಾರಾಯಂತ್ರಕ್ಕೆ ಪೀಠಿಕೆ ಹಾಕಿದುವು. ೧೮೩೧ರಲ್ಲಿ ಡಾಯನಾಮೋ ತಯಾರಿಸಿದನು. ಹೇನ್ರಿ ವಿದ್ಯುಚ್ಚುಂಬಕಗಳ ಗುಣ-ಧರ್ಮಗಳನ್ನು ಮೊದಲೇ ಕಂಡು ಹಿಡಿದಿದ್ದನಾದರೂ, ಪ್ರಕಟಿಸಿರಲಿಲ್ಲ. ಫ್ಯಾರಡೇ ಈತನಿಗಿಂತ ಮೊದಲೇ ಪ್ರಸಿದ್ಧಿಸಿದುದರಿಂದ, ಅಮೇರಿಕೆಗೆ ತುಂಬಬಾರದ ಹಾನಿಯಾಯಿತೆಂದು ಕೆಲವರು ತಿಳಿದರು. ಹೇನ್ರಿಯ ಈ ಒಂದು ಪ್ರಕಟಣೆ, ಮುಂದಿನ ಆತನ ಪ್ರಯೋಗಗಳಿಗೂ ಸಾಟಿಯಾಗದೆಂದು ಇನ್ನೂ ಕೆಲವರ ಅಭಿಪ್ರಾಯ. ವೈಜ್ಞಾನಿಕ ಬುದ್ಧಿಮತ್ತೆ ಅಥವಾ ವೈಜ್ಞಾನಿಕ ಪ್ರಗತಿಯಲ್ಲಿ ವ್ಯಕ್ತಿಯ ಸ್ಥಾನ-ಮಾನಗಳ ಕುರಿತು ಮೇಲಾಟದಲ್ಲಿ ಭಾಗವಹಿಸುವುದು ಹೇನ್ರಿಗೆ ಸರಿಬರಲಿಲ್ಲ ಧರ್ಮಭೀರುವಿಗೆ ವ್ಯಾವಹಾರಿಕ ರೀತಿ-ನೀತಿಗಳು ಸರಿಬರುವುವೇ?

ಹೇನ್ರಿಯ ಸಂಶೋಧನೆಗಳಿಂದ ಸಂಪ್ರೀತರಾದ ನ್ಯೂಜರ್ಸಿ (New Jersey) ಕಾಲೇಜಿನವರು, ತಮ್ಮ ಸಂಸ್ಥೆಗೆ ಸೇರಲು ಹೇನ್ರಿಯನ್ನು ವಿನಂತಿಸಿದರು. ಅವರ ವಿಜ್ಞಾಪನೆಗೆ ಮನ್ನಣೆಯಿತ್ತು, ೧೮೩೨ರಲ್ಲಿ ಪ್ರಿನ್ಸ್‌ಟನ್ನಿನಲ್ಲಿರುವ ನ್ಯೂಜರ್ಸಿ ಕಾಲೇಜಿಗೆ ಪ್ರಾಧ್ಯಾಪಕನಾಗಿ ಬಂದು, ಆ ಸಂಸ್ಥೆಗೆ ಶೋಭೆ ತಂದನು. ಪ್ರಿನ್ಸಟನ್ನಿಗೆ ಬರುವ ಮೊದಲೇ ಆತನ ವಿವಾಹ ಅಲೆಕ್ಸಾಂಡರಳೊಂದಿಗಾಗಿತ್ತು. ಆಕೆಯಿಂದ ಹುಟ್ಟಿದ ಮಕ್ಕಳು ೬. ಎಲ್ಲವೂ ಹೆಣ್ಣು. ಅವುಗಳಲ್ಲಿ ಮೂವರು ಹೇನ್ರಿಗಿಂತ ಮೊದಲು ಮೃತಪಟ್ಟರು. ಅಲೆಕ್ಸಾಂಡರಳು ೧೮೮೨ರಲ್ಲಿ ಮರಣ ಹೊಂದಿದಳು.

ಪ್ರಿನ್ಸ್‌ಟನ್ನಿಗೆ ಬಂದ ಹೊಸದರಲ್ಲಿ ಸಂಶೋಧನೆಗಳನ್ನು ಮಾಡಲು ಸಾಕಷ್ಟು ಅವಕಾಶ ಹೇನ್ರಿಗೆ ಸಿಗುತ್ತಿರಲಿಲ್ಲ. ರಸಾಯನಶಾಸ್ತ್ರದ ವಿಭಾಗವನ್ನು ಸುಸಜ್ಜಿತ ಮತ್ತು ಸುವ್ಯವಸ್ಥಿತಗೊಳಿಸುವ ಹೊಣೆ ಈತನ ಮೇಲಿತ್ತು. ಪ್ರಿನ್ಸ್‌ಟನ್ನಿನಲ್ಲಿ ಹೇನ್ರಿಗೆ ದೊರೆತ

ಇನ್ನೊಂದು ವಿಶೇಷ ಅನುಭವವೆಂದರೆ, ಖನಿಜಶಾಸ್ತ್ರ, ಭೂಗರ್ಭಶಾಸ್ತ್ರಗಳನು ಈತನೇ ಕಲಿಸಬೇಕಾಯಿತು. ಏಕೆಂದರೆ ಈ ವಿಭಾಗಗಳ ಅಧ್ಯಾಪಕರು ಆಗ ೧ ವರುಷದ ರಜೆಯ ಮೇಲಿದ್ದರು. ಖಗೋಲಶಾಸ್ತ್ರ ಮತ್ತು ಶಿಲ್ಪಶಾಸ್ತ್ರಗಳ ಕುರಿತೂ ಆತ ಭಾಷಣ ಮಾಡಬೇಕಾಯಿತು. ೧೮೩೭ರಲ್ಲಿ ಹೇನ್ರಿಗೆ ಯುರೋಪವ ಪ್ರವಾಸಕೈಕೊಳ್ಳಲೆಂದು ೧ ವರುಷದ ರಜೆ ದೊರೆಯಿತು. ಇದೇ ಕಾಲದಲ್ಲಿಯೆ ಆತ ಫ್ಯಾರಡೇ, ವ್ಹೀಟ್‌ಸ್ಟೋನ್, ಅರ್‍ಯಾಗೋ, ಡಿಲಾರಾಯವ್ ಮುಂತಾದ ಖ್ಯಾತನಾಮ ವಿಜ್ಞಾನಿಗಳನ್ನು ಕಂಡುದು. ಲಂಡನ್ನಿನಲ್ಲಿದ್ದಾಗ ಫ್ಯಾರಡೇ ಮೊದಲಾದ ಪ್ರಸಿದ್ಧ ವಿಜ್ಞಾನಿಗಳೆದುರು, ತಾನಿದುವರೆಗೆ ಮಾಡಿದ ಪ್ರಯೋಗಗಳನ್ನ ಮಾಡಿ ತೋರಿಸಿ, ಘರ್ಷಣಜನ್ಯ ವಿದ್ಯುತ್ತಿನ ಉಪಯುಕ್ತತೆಯನ್ನು ವಿವರಿಸಿ, ಅವರೆಲ್ಲರ ಪ್ರಶಂಸೆಗೆ ಪಾತ್ರನಾದನು

ವಿದೇಶಯಾತ್ರೆಯನ್ನು ಪೂರಯಿಸಿಕೊಂಡು ಸ್ವದೇಶಕ್ಕೆ ಬಂದ ಹೇನ್ರಿಗೆ ಅನೇಕ ಸದವಕಾಶಗಳು ಕಾದುಕೊಂಡಿದ್ದುವು. ಉತ್ತಮ ವೇತನ, ಕಡಿಮೆ ಕೆಲಸ ಹಾಗೂ ಸಂಶೋಧನೆಗೆ ಸಾಕಷ್ಟು ಅನುಕೂಲತೆ ಇವನ್ನು ಒದಗಿಸಿಕೊಡುವ ಆಶ್ವಾಸನಗಳನ್ನು ಅನೇಕ ವಿಖ್ಯಾತ ವಿದ್ಯಾಲಯಗಳು ಮುಂದೆಮಾಡಿದುವು. ಹೇನ್ರಿ ಇವನ್ನೆಲ್ಲ ನಿರಾಕರಿಸಿ, ಬೇಚ(Bache)ನ ವಿಜ್ಞಾಪನೆಗೆ ಮಾನ್ಯತೆಯಿತ್ತು, ಆದೇ ತಾನೆ ಸ್ಥಾಪಿತವಾಗಲಿರುವ ಸ್ಮಿಥ್ಸನ್ ಸಂಸ್ಥೆಗೆ (Smithsonian Institution) ಡಿರೆಕ್ಟರನಾಗಿ ಸೇರಿಕೊಂಡನು. ಪ್ರಾರಂಭದಲ್ಲಿ ಗೊತ್ತುಮಾಡಲಾದ ವಾರ್ಷಿಕ ವರಮಾನ ಕೇವಲ ೩೫೦೦ ಡಾಲರುಗಳ ಮಾತ್ರ.

ಸ್ಮಿಥ್ಸನ್ ಸಂಸ್ಥೆ ಸ್ಥಾಪಿತವಾದುದು ಸ್ಮಿಥ್ಸನ್ ಎಂಬ ಆಂಗ್ಲ ಶ್ರೀಮಂತನ ಕೊಡುಗೆಯಿಂದ. ಆತ ತನ್ನ ಕೊಡುಗೆಯಲ್ಲಿ ಆ ಸಂಸ್ಥೆಯ ಉದ್ದೇಶಗಳೇನಿರಬೇಕೆಂಬುದನ್ನೂ ಹಾಗೂ ಸಂಸ್ಥೆ ಎಲ್ಲಿ ಸ್ಥಾಪಿತವಾಗಬೇಕೆಂಬುದನ್ನೂ ನಮೂದಿಸಿದ್ದ. ಆತನ ಕೋರಿಕೆಯಂತೆ ಈ ಸಂಸ್ಥೆಯನ್ನು ವಾಶಿಂಗ್ಟನ್ನಿನಲ್ಲಿ ಸ್ಥಾಪಿಸಲಾಯಿತು ವಿಶ್ವದಾದ್ಯಂತ ಜ್ಞಾನದ ಪ್ರಸಾರವಾಗಬೇಕೆಂಬುದೇ ಸ್ಮಿಥ್ಸನ್‌ನ ಹೆಬ್ಬಯಕೆ. ಸ್ಮಿಥ್ಸನ್‌ನಿಗೆ ಸಂಕುಚಿತ ಮನೋವೃತ್ತಿ ಇರಲಿಲ್ಲನೆಂಬುದನ್ನು ಆತನು ಬರೆದಿಟ್ಟ ಮೃತ್ಯುಪತ್ರದಿಂದ ತಿಳಿಯಬಹುದು: "........The man of science has no country, the world is his country—all men his country men.–ಎಂದರೆ ವಿಜ್ಞಾನಿಗೆ ರಾಷ್ಟ್ರಭೇದವಿಲ್ಲ. ಇಡೀ ವಿಶ್ವವೇ ಆತನ ರಾಷ್ಟ್ರ; ಎಲ್ಲರೂ ಆತನ ರಾಷ್ಟ್ರದವರು. " ಎಂದು ಬರೆದಿದ್ದ. ಎಂತಹ ಅಮೋಘ ವಿಚಾರ ಎಂತಹ ಘನೋದ್ದೇಶ ಆ ಸಂಸ್ಥೆಯದು! ಇಂತಹ ಘನೋದ್ದೇಶಕೆ. ಅಂಟಿಕೊಂಡು ಹೋಗುವುದು ಅಷ್ಟೇ ವಿಶಾಲಹೃದಯದವರಿಗೆ ಮಾತ್ರ ಸಾಧ್ಯ. ಈ ಮಹಾ ಹೊಣೆ ಹೊರುವ ಯೋಗ್ಯತೆ ಹೇನ್ರಿಯಲ್ಲಿತ್ತೆಂದೇ ಬೇಚ್ ಆತನನ್ನು ಒತ್ತಾಯಪಡಿಸಿದುದು. ಸ್ಮಿಥ್ಸನ್ ಮತ್ತು ಹೇನ್ರಿಯಂತಹ ಮಹಾನುಭಾವರಿಂದ ತಾನೇ ವಿಶ್ವಶಾಂತಿಯ ಕನಸು ನನಸಾಗಬಹುದು !

ಸ್ಮಿಥ್ಸನ್ ಸಂಸ್ಥೆಯ ಸಂಚಾಲಕರು ಸಂಸ್ಥೆಯ ಕಾರ್ಯಪದ್ಧತಿಯ ರೂಪು-ರೇಷೆಗಳ ಕರಡು ತಯಾರಿಸಲು ಕೇಳಿಕೊಳ್ಳಲಾಗಿ, ಹೇನ್ರಿ ಸಂತೋಷದಿಂದ ತನ್ನ ಯೋಜನೆಯನ್ನು ೧೮೪೭ರಲ್ಲಿ ಒಪ್ಪಿಸಿದನು. ಹೇನ್ರಿ ಈ ಸಂಸ್ಥೆಗೆ ಡಿರೆಕ್ಟರನೆಂದು ನಿಯಾಮಕನಾದಾಗ ೪೯ ವಯಸ್ಸು. ಪ್ರಾರಂಭಿಕ ವಾರ್ಷಿಕ ವರಮಾನ ೩೫೦೦ ಡಾಲರು ಮಾತ್ರ. ಈ ಸಂಸ್ಥೆ ಹೇನ್ರಿಯ ಆದೇಶದಂತೆ ಜ್ಞಾನಾರ್ಜನೆಯನ್ನು ಹೆಚ್ಚಿಸಲೆಂದೂ, ವಿಶ್ವದಲ್ಲಿಯ ವಿದ್ವಾಂಸರನೇಕರಿಗೆ ಸಂಶೋಧನೆಗಳನ್ನು ಕೈಕೊಳ್ಳಲೆಂದೂ ಶಿಷ್ಯವೃತ್ತಿಗಳನ್ನು ಕೊಡಲಾಯಿತು. ಜ್ಞಾನಾರ್ಜನೆಯ ಸಹಜ—ಸುಲಭ ಪ್ರಸಾರಸಾಧನವಾದ ಪತ್ರಿಕಾ ಪ್ರಕಟನೆಯನ್ನು ಈ ಸಂಸ್ಥೆ ಕೈಕೊಂಡಿತು. ಈ ಸಂಸ್ಥೆಯಲ್ಲಿಯೇ ವೈಜ್ಞಾನಿಕ ಸಂಶೋಧನೆಗಳಿಗೆ ಅಗತ್ಯವಿದ್ದ ಯಂತ್ರೋಪಕರಣಗಳನ್ನು ಒದಗಿಸಲಾಯಿತು. ಈ ಸಂಸ್ಥೆ ಪ್ರಕಟಿಸಿದ ಪತ್ರಿಕೆಗಳನ್ನು ವಾಚನಾಲಯಗಳಿಗೆ ಪುಕ್ಕಟೆಯಾಗಿ ಹಂಚಲಾಗುತ್ತಿತ್ತು. ಈ ಪತ್ರಿಕೆಗಳನ್ನು ರಿಯಾಯತಿಯಲ್ಲಿ ತಲ್ಪಿಸುವುದಾಗಿ ಹಡಗುಗಳ ಮಾಲಿಕರು ಸ್ವಸಂತೋಷದಿಂದ ಮುಂದೆ ಬಂದರು. ಹಾಗೆಯೆ, ಆಯಾಯ ಸರಕಾರದರು ಈ ಪತ್ರಿಕೆಗಳನ್ನು ಆಯಾತಕರದಿಂದ ಮುಕ್ತಮಾಡಿದರು. ಈ ಎಲ್ಲ ದೃಷ್ಟಾಂತಗಳು ಸಂಸ್ಥೆಯ ಹಿರಿಮೆಯ ದ್ಯೋತಕವಲ್ಲವೇ ? ಹೇನ್ರಿ ಸಂಸ್ಥೆಯ ಕಾರ್ಯಭಾರವನ್ನು ಚಾಕಚಕ್ಯತೆಯಿಂದ ನಿರ್ವಹಿಸಿ, ಸಂಸ್ಥೆಯ ಕೀರ್ತಿಯನ್ನು ಹೆಚ್ಚಿಸಿದನು. ಅತಿಪ್ರಸರಣ ಕಾಲದಲ್ಲಿ ಹೇನ್ರಿ, ಪ್ರಾರಂಭಿಕ ವೇತನಕ್ಕಿಂತ ಹೆಚ್ಚಿನ ವೇತನವನ್ನು – ಸಂಸ್ಥೆಯ ಸಂಚಾಲಕರು ಸ್ವೀಕರಿಸಲು ಪ್ರಾರ್ಥಿಸಿದರೂ — ನಿರಾಕರಿಸಿದ. ಇದೊಂದೇ ದೃಷ್ಟಾಂತ ಆತನ ನಿಸ್ವಾರ್ಥ ಸೇವಾಭಾವಕ್ಕೆ ಸಾಕ್ಷಿ ೩೨ ವರುಷಗಳ ಕಾಲ ನಿಷ್ಠೆಯಿಂದ ಸಂಸ್ಥೆಗೆ ಸೇವೆ ಸಲ್ಲಿಸಿ, ಸಂಸ್ಥೆಯ ಆದಾಯವನ್ನು ಹೆಚ್ಚಿಸಿದನು. ಸಂಸ್ಥೆಗೆ ಆಗಾಗ ಸಂದರ್ಶನಕ್ಕೆಂದು ಬಂದ ವಿದ್ವಜ್ಜನರ ಸರಬರಾಯಿ ಹೇನ್ರಿಯ ವೇತನದ ಹಣದಲ್ಲಿಯೇ ಆಗುತ್ತಿತ್ತು ಇಂತಹ ವೆಚ್ಚವನ್ನು ನಿರ್ವಹಿಸುವುದು ಸಾಮಾನ್ಯ ಸಂಗತಿಯಲ್ಲ. ಆದುದರಿಂದಲೇ ಅವನು ದಿನನಿತ್ಯದ ಜೀವನವನ್ನು ಅತಿ ಮಿತವ್ಯಯದಿಂದ ನಡೆಸಬೇಕಾಗುತ್ತಿತ್ತು. ಸಂಸ್ಥೆಯ ಪರವಾಗಿ ಕೊಡಮಾಡಿದ ಪೂರಕ ಹಣವನ್ನು ನಿರಾಕರಿಸಿದ. ಇಂತಹ ಮಹಾನುಭಾವನನ್ನು ನಾವಿಂದು ಕಾಣಬಹುದೆ ?

ಸ್ಮಿಥ್ಸನ್ ಸಂಸ್ಥೆಯನ್ನು ಸೇರಿದಂದಿನಿಂದ, ವೈಯಕ್ತಿಕ ಸಂಶೋಧನೆಗಳತ್ತ ಲಕ್ಷ್ಯಪೂರಯಿಸುವುದು ಅಸಾಧ್ಯವಾಯಿತು. ಸರಕಾರದ ಪರವಾಗಿ ಕೈಕೊಂಡ ಶೋಧನೆಗಳಲ್ಲಿ ಹೆಚ್ಚು ಆಸಕ್ತಿ ವಹಿಸಿದ. ಈತನ ಎಲ್ಲ ಸಂಶೋಧನೆಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕ ಮಹತ್ತ್ವಗಳಿವೆ. ಅಮೇರಿಕೆಯ ಉದ್ದಿಮೆ ಮತ್ತು ಒಕ್ಕಲತನದ ಉತ್ಕರ್ಷಕ್ಕಾಗಿ ಆತ ಪ್ರಯಾಸಪಟ್ಟನೇ ವಿನಾ, ಸ್ವಂತಕ್ಕಾಗಿ– ಅದೂ ಹಣದಾಸೆಯಿಂದ— ಪರಿಶ್ರಮಪಟ್ಟವನಲ್ಲ. ಆಳುವ ಸರಕಾರದ ಧ್ಯೇಯ ಧೋರಣೆಗೆ ಆತನ ವೈಯಕ್ತಿಕ ವಿರೋಧವಿದ್ದರೂ, ಅದನ್ನು ಮೂಲೆಗೊತ್ತಿ ರಾಷ್ಟ್ರಹಿತವನ್ನು ಗಮನಿಸಿ, ಆ ಸರಕಾರದೊಂದಿಗೆ ಎಲ್ಲ ವೈಜ್ಞಾನಿಕ ವಿಷಯಗಳಲ್ಲಿ ಸಹಕರಿಸಿದನು. ವೈಜ್ಞಾನಿಕ ಶೋಧ-

ಗಳಿಂದ ಹಣ ಸಂಚಯಿಸುವ ಬಯಕೆ— ಕಲ್ಪನೆ ಕೂಡ— ಆತನಿಗೆ ಇರಲಿಲ್ಲ. ಹಣಕ್ಕಾಗಿ ಸಂಶೋಧನೆಗಳನ್ನು ಮಾಡಬಾರದೆಂದೇ ಆತನ ಅಭಿಮತ.

೧೮೭೮ರಲ್ಲಿ ವಾಶಿಂಗ್ಟನ್ನಿನಲ್ಲಿ ಈತನನ್ನು ಸಾರ್ವಜನಿಕವಾಗಿ ಸತ್ಕರಿಸಲಾಯಿತು. ಆ ಕಾಲಕ್ಕೆ ಹೇನ್ರಿ ಇತ್ತ ಭಾಷಣ ಮನನೀಯ. ವಾಗಿದೆ :

"My life has been principally devoted to science and my investigations in different branches of physics have given me some reputation in the bout of original discovery. I have sought however no patent for invention and solicited no remuneration for my labours but have freely given their results to the world, expecting in return to enjoy the consciousness of having added by my investigations to the sum of human knowledge. The only reward I ever expected was the consciousness of advancing science, the pleasure of discovering new truths and the scientific reputation to which these labours would entitle me."

ವಿಜ್ಞಾನಕ್ಕಾಗಿ ನನ್ನ ಜೀವನವನ್ನು ಮುಡಿಪಾಗಿಟ್ಟಿದ್ದೇನೆ ನನ್ನ ಯಾವುದೆ ಸಂಶೋಧನೆಗೂ ಪೇಟೆಂಟ್ ಪಡೆದುಕೊಂಡಿಲ್ಲ; ಹಾಗೂ ನನ್ನ ಸಂಶೋಧನೆಗಳ ಬಗ್ಗೆ ಯಾವುದೇ ಸಂಭಾವನೆಯನ್ನೂ ಕೇಳ. ಲಾರೆ. ನನ್ನೀ ಸಂಶೋಧನೆಗಳು ವಿಶ್ವದ ಹಿತಕ್ಕಾಗಿ ಜ್ಞಾನವರ್ಧನೆ. ಗಾಗಿ ಇವೆ.—ಎಂತಹ ಅಮೋಘ ವಿಚಾರಗಳು! ಎಂತಹ ಅಪೂರ್ವ ತ್ಯಾಗ!! ಧನ್ಯ ಹೇನ್ರಿ, ನಿನಗೆ ಅನಂತ ವಂದನೆಗಳು!

೧೮೬೫ನೆಯ ಇಸ್ವಿಯಲ್ಲಿಯೇ ಒಂದು ದುರ್ಘಟನೆ ಜರುಗಿತು. ಆಗ ಸ್ಮಿಥ್ಸನ್ ಸಂಸ್ಥೆಯ ಕಾರ್ಯಾಲಯಕ್ಕೆ ಬೆಂಕಿ ತಗುಲಿತು. ಆ ಜ್ವಾಲೆಗೆ, ಹೇನ್ರಿ, ಕಾದಿಟ್ಟ, ವಿಶ್ವದ ಅಸಂಖ್ಯ ಜನರೊಂದಿಗೆ ಮಾಡಿದ್ದ ಪತ್ರವ್ಯವಹಾರದ ರಾಶಿ, ಅದುವರೆಗೆ ಅಪ್ರಕಟಿತವಿದ್ದ ಪ್ರಯೋಗಗಳ ವಿವರ, ಆಗಾಮೀ ವಾರ್ಷಿಕವರದಿಯ ಹಸ್ತಪ್ರತಿ ಆಹುತಿಯಾದುವು. ಎಷ್ಟೋಂದು ಪರಿಶ್ರಮದಿಂದ, ತಾಳ್ಮೆಯಿಂದ ಸಂಗ್ರಹಿಸಿದ ಈ ಮಹಾ-ಸಾಹಿತ್ಯ ಕೆಲ ಗಂಟೆಗಳಲ್ಲಿಯೇ ನಾಮಶೇಷವಾಯಿತು ಹೇನ್ರಿಗಾದ ದುಃಖ ಅವರ್ಣನೀಯವಾದುದು. ಆತನೇ ಬರೆದು ತೆಗೆದ ಪತ್ರಗಳ ಪುಟಸಂಖ್ಯೆ ೩೦,೦೦೦ ಮಿಕ್ಕು; ಹೇಳಿದರೆ ನಂಬಲಸಾಧ್ಯ. ಹೇನ್ರಿಯ ತಾಳ್ಮೆ ಅದ್ಭುತವಾದುದು. ಇಂತಹ ಘನವಾದ ಸಾಹಿತ್ಯ ೧೮೬೫ರಲ್ಲಿ ಅಗ್ನಿಗಾಹುತಿಯಾಗಿದ್ದರೂ, ೧೮೬೬ರಲ್ಲಿ ಆತ ತಯಾರಿಸಿದ ವರದಿ ೨೦,೦೦೦ ಪುಟಗಳೆಂದರೆ ನೀವು ನಂಬಬಹುದೆ? ಆ ವರದಿಯಲ್ಲಿ ಆದುವರೆಗಿನ ವೈಜ್ಞಾನಿಕಪ್ರಗತಿಯನ್ನು ವಿವರವಾಗಿ ಬರೆಯಲಾಗಿತ್ತು.

ಹೇನ್ರಿಯದು ಕೋಮಲ ಸ್ವಭಾವ. ವಿದ್ವಾಂಸರಿಗೆ ಶೋಭಿಸುವ ಬುದ್ಧಿವಂತಿಕೆ ಆತನಲ್ಲಿತ್ತು. ಆದರೆ ಅಹಂಕಾರವಿರಲಿಲ್ಲ ಗುಣವಿತ್ತು, ಹಣವಿರಲಿಲ್ಲ. ಆದರೂ ಹಣಕ್ಕಾಗಿ ಗುಣ ವಿಕ್ರಯವಾಗಲಿಲ್ಲ.

ಈತ ಮಾನವಪ್ರೇಮಿ, ವಿಶ್ವಕುಟುಂಬಿ; ದೈವಭಕ್ತ. ದೇವರು ಸರ್ವಾಂತರ್ಯಾಮಿ ಎಂಬುವನ್ನು ಮನೋಜ್ಞವಾಗಿ ಹೇಳಿದ್ದಾನೆ. 'ನನ್ನಲ್ಲೂ ನಿಮ್ಮಲ್ಲೂ ವಿಚಾರಶಕ್ತಿ ಎಂಬ ಅದ್ಭುತಶಕ್ತಿಯನ್ನು ದೇವರು ಕರುಣಿಸಿದ್ದಾನೆ. ನಾನೇನಾದರೂ ಒಂದು ಪ್ರಶ್ನೆಯನ್ನು ವಿಚಾರಿಸಿದರೆ, ನೀವು ಉತ್ತರವನ್ನು ಕೊಡುವಿರಿ!' ಕಹಿ ನೆನಹುಗಳನ್ನು ಹತ್ತಿಕ್ಕುವುದರಲ್ಲಿ ಮತ್ತು ರಸನಿಮಿಷಗಳ ಆಸ್ವಾದನೆಯಲ್ಲಿ ಅಸದೃಶ ಸಾಮರ್ಥ್ಯ ಪಡೆದಿದ್ದನೇನೊ! ಆತ್ಮನಿಗ್ರಹ ಆತನಿಗೆ ಅಭ್ಯಾಸಬಲ. ದಿಂದ ಬಂದುದು. ವಯಸ್ಸು ಹೆಚ್ಚುತ್ತ ನಡೆದಂತೆ ವಿಶ್ರಾಂತಿಯ ವಿಚಾರ ಆತನ ಮನಸ್ಸಿನಲ್ಲಿ ಬರಲಿಲ್ಲ ಸದಾ ಅಂತರ್ಮುಖಿಯಾಗಿ ಇರುತ್ತಿದ್ದ.

'ಶಿಕ್ಷಣ'ದ ಬಗ್ಗೆ ಆತನ ವಿಚಾರಗಳು ತುಂಬಾ ಮನನೀಯ. ವಾಗಿವೆ: The child, if left to itself, would receive no proper development and the savage never educates himself mentally. ಕಾಡುಮನುಷ್ಯ ತಂತಾನೆ ಬೌದ್ಧಿಕವಾಗಿ ಪ್ರಗತಿ ಹೊಂದುವಷ್ಟೇ ಮಗುವಿನ ಮನೋವಿಕಾಸ ಅಸಂಭವವಿದೆ. ಬಾಲ್ಯದಲ್ಲಿ ಬೇರೂರಿದ ಗುಣಗಳೇ ಮುಂದೆ ಬೆಳಕಿಗೆ ಬರುವವು. ಆದ್ದ. ರಿಂದ ಮಕ್ಕಳಿಗೆ ಎಂತಹ ಸಂಸ್ಕಾರ ಕೊಡಬೇಕೆಂಬುದನ್ನು ಪಾಲಕರು ಮತ್ತು ಸರಕಾರದವರು ಗಂಭೀರವಾಗಿ ಆಲೋಚಿಸುವುದಗತ್ಯವಿದೆ. ಸ್ಮರಣಶಕ್ತಿ, ಅನುಕರಣೆ, ತರ್ಕಶಕ್ತಿ ಮೊದಲಾದುವುಗಳು ಬಾಲ್ಯದಲ್ಲಿ ರೂಢಿಗೊಳ್ಳುವವು. ಇವುಗಳಿಗೆ ಸುಯೋಗ್ಯ ಚಾಲನೆ ಕೊಡುವ ಹೊಣೆ ಶಿಕ್ಷಕರ ಮತ್ತು ತಂದೆ-ತಾಯಿಗಳ ಮೇಲೆ ಇರುತ್ತದೆ. ಇದ-ರಿಂದ ಮಕ್ಕಳಿಗಾಗಿ ಪಠ್ಯಪುಸ್ತಕ ತಯಾರಿಸುವವರು ತಮ್ಮ ಮೇಲಿನ ಹೊಣೆಗಾರಿಕೆಯನರಿತಷ್ಟು ವಿಹಿತ. ಕೇವಲ ವಿದೇಶದಲ್ಲಿಯ ಶಿಕ್ಷಣದ ಅಂಧಾನುಕರಣ ಅಪಾಯಕಾರಕವೆಂಬುದನ್ನು ಗಮನದಲ್ಲಿಡಬೇಕೆಂದು ಪಠ್ಯಪುಸ್ತಕ ಕರ್ತೃಗಳನ್ನು ಎಚ್ಚರಿಸಿದನು.

ಸಂಸ್ಕೃತಿಯ ಕುರಿತಾಡಿದ ಆತನ ಅಭಿಪ್ರಾಯ ಗಮನಾರ್ಹ. ವಾಗಿದೆ. "Civilisation is a state of unstable equilibrium which, if not supported by the exertions of indidvials, resembles an edifice with a circumscribed base which becomes the more tottering as we expand its lateral dimensions & increase its height.

ಒಂದು ಉಪಯುಕ್ತ ಸಂಸ್ಥೆಯೊಂದನ್ನು ಸ್ಥಾಪಿಸಿದ್ದಕ್ಕೆ ಸ್ಮಿಥ್ಸನ್-ನಿಗೆ ಅನಂತ ವಂದನೆಗಳು ಸಲ್ಲಿದರೆ, ಆ ಸಂಸ್ಥೆಗೆ ಒಂದು ರೂಪುಕೊಟ್ಟು ವಿಶ್ವಸಂಸ್ಥೆಯನ್ನಾಗಿಸಿದ ಶ್ರೇಯಸ್ಸು ಹೇನ್ರಿಗೆ ಸಲ್ಲುವುದು ೩೨ ವರುಷಗಳ ದೀರ್ಘಾವಧಿಯನ್ನು ಸಂಸ್ಥೆಯ ಸೇವೆಗಾಗಿ ವಿನಿಯೋಗಿಸಿದ ಹೇನ್ರಿ. ೧೮೭೮ರಲ್ಲಿ ಮೃತ್ಯುದೇವತೆ ಹೇನ್ರಿಯ ಮೇಲೆ ಮುಸುಕೆಳೆ. ಯಿತು. ಜಗತ್ತಿಗೆ ತುಂಬಿಬಾರದ ಹಾನಿಯಾಯಿತು ಹೇನ್ರಿ ಇಂದು ಇಲ್ಲದಿದ್ದರೂ, ಆತನ ಮತ್ತು ಸ್ಮಿಥ್ಸನ್‌ನ ದಿವ್ಯಸ್ಮರಣೆಯನ್ನುಂಟು ಮಾಡುವ 'ಸ್ಮಿಥ್ಸನ್‌ಸಂಸ್ಥೆ' ಇಂದು ಹೆಮ್ಮೆಯಿಂದ ಮೆರೆಯುತ್ತದೆ.

ಶಹಪುರದ ತಾವರೆಕೆರೆ

ಶ್ರೀ. ಜ. ಶ್ರೀ. ದೇಸಾಯಿ, ಜರಕುಂಟಿ ಬಿ. ಎ., ಬಿ. ಟಿ. ಶಹಾಪುರ

卐

೧

ಹೊರಗಣ್ಣು ಒಳಗಣ್ಣು-
ಗಳನೆರಡನೂ ತಣಿಪ
ಆ ಸೊಬಗಿನೋಳಿಯನು
ಹೇಗೆಂತು ಹೊಗಳಲೈ !
ಅಲ್ಲಿ ಕಂಡುದು ಬರಿಯೆ
ನೋಟವಲ್ಲವು ಸಖನೆ
ಅದುವೆ ದಿವ್ಯಾನುಭವ,
ದೈವ—ಸಾಕ್ಷಾತ್ಕಾರವೈ !

೨

ಭಾವಪೂರವ ತಂದ
ಆ ಬೆಳಗೆ ಬಲು ಚೆಂದ
ಬೆಟ್ಟವನು ಹತ್ತಿದೆವು
ಮನಕುಣಿಯೆ ಥಕಥೈ !
ಅಳಿದುಳಿದ ಕೋಟೆಗಳ
ಹೆಗ್ಗಲ್ಲು ಹೆಬ್ಬಾಗಿ-
ಲಂಗಳವು ಪೂರ್ವಜರ
ಶಿಲ್ಪಸಿದ್ಧಿಯು ಸೈ !

× × × ×

೩

* ಮಂದಾಕಿನಿಯಾ ತೀರ್ಥದ ಆಚೆಗೆ
ಪಶ್ಚಿಮ ದ್ವಾರದಿ ನುಗ್ಗಿದೆವು.
ತಂಗಾಳಿಯು ತುಂಬಲು, ಮೇಲ್ಮುಗ್ಗಲು
ಮೆಯ್ಯೊಡ್ಡುತೆ ಸುಖ ಸವಿದಿಹೆವು

× × × ×

೪

ಬಿತ್ತರದಿ ಹರಡಿರುವ ಸುರಸರಸಿ. ಸರಸಿಯಲಿ
ಕ್ಷೀರಾಂಬು, ಅಂಬುಜದ ಬಂಬಲಗಳಲ್ಲಲ್ಲಿ;
ನೋಡಲ್ಲಿ ! ಜಲರಾಶಿಯಿಂದೊಗೆದು ಮೆರೆದಿಹುವು
ಬಿಳಿ, ಹಳದಿ, ಕೆಂಪು ಬಣ್ಣಗಳ ತಳೆದಿಹುವು !

೫

ಇದರ ಹಿನ್ನೆಲೆಯಲ್ಲಿ, ದಿವ್ಯ-ಭವ್ಯಾಕೃತಿಯ
ಗಗನದುದ್ದಕೆ ಎದ್ದ, ಮಾಲೆ-ಮಾಲೆಯು ಆದ
ಪರ್ವತಾವಳಿ ಇರಲು, ಅದನು ಮುತ್ತಿಡುವಂತೆ
ಮೇಘಮಾಲೆಯು ಬರಲು ಮೇಲ್ವಾಯ್ದು, ಮತ್ತದರ
ಚಿತ್ರಚಿತ್ರಾಕೃತಿಯ ಚಿತ್ರಪಟ ಚಿತ್ತಚಾ-
ತಕದ ಚಿನ್ನಾಟಕೆಡೆಯಾಗಿರಲು, ಹಸಿರು ಮೇ-
ಲುದ ಹೊತ್ತು ವನಲಕ್ಷ್ಮಿ ಕುಳಿತಂತೆ, ಹುಲ್ಲುಗಾ-
ವಲ ಚೆಲುವು ಚೆಲ್ಲವರಿದಿತ್ತು—ಮನಕೆ ಮುದವಿತ್ತು.

೬

ಚೆಲುವರ ಚೆಲುವನು ಮನ್ಮಥನು
ಮನ್ಮಥನಯ್ಯನು ಶ್ರೀಹರಿಯು
ಶ್ರೀಹರಿ ಪ್ರೀತಿಯು ಕಮಲದಲಿ
ಕಮಲದ ಇರುಹದು ಸರದಲ್ಲಿ-
ಸರವೇ ಸೊಬಗಿಗೆ ಆಧಾರ
ಸರಿಯದಕಾವುದು ನೀ ತೋರಾ !

ಅಲ್ಲಿದೆ ಮೀನಾಕ್ಷಿಯ ಚೆಲ್ವು-
ಶೇಷನ ಶಯ್ಯೆಯು ಇಹುದಲ್ಲಿ;
ಗರುಡನು ಗರಿಗೆದರುವ ನೋಡು
ತುಂಬಿಯ ಹಾಡೇ ತುಂಬುರ ಗಾನ ಽ
ಗಾನವು ಗಾನಕೆ ಕಿವಿಗಮೃತ ಪಾನ ಽ !

* ಇಲ್ಲಿ ಪರ್ವತದ ಮೇಲಿರುವ ಒಂದು ತೀರ್ಥವನ್ನು ಜನರು ಮಂದಾಕಿನೀ ತೀರ್ಥವೆಂದು ಕರೆಯುತ್ತಾರೆ.

ಇಂತಿದುವೇ ವೈಕುಂಠದ ನೋಟ॥
ನೋಟಕೆ ನೋಟ॥ ಏನೀ ಮಾಟ॥
ಮಾಟವ ಬಣ್ಣಿಸೆ ಶಬ್ದವೆ ಇಲ್ಲ॥
ಮೌನದಿ ಕೈಮುಗಿವುದೆ ಸಾಕಲ್ಲ!

× × × ×

೭

ಕುರುಬನ ಕೊಳಲುಲಿ
ಕರ್ಣರಸಾಯನವಾಗಿಹುದು,
ಸ್ವಚ್ಛಂದದ ಕೇಕೆಯು
ಭಾವನೆಯಾಳವ ತಟ್ಟುವುದು.

೮

ತುಂಟರ ಜಲಕೇಳಿಯು
ನೀರಿಗೆ ಧುಮುಕಲು ಕರೆಯುವುದು,
ಅಗಸಿತಿಯರ ಹಾಡದು
ಜೀವದ ತಂತಿಯ ಮಿಡಿಯುವುದು.

೯

ಚಿಗುರಿಯ ತಂಡದ ಮಂ-
ಗದ ಹಿಂಡಿನ ಪಾಟವವು
ಪಟ್ಟಣವಾಸಿಯನಾ-
ಪಥಿಜೀವಿಯನೇಡಿಸುತಿಹುವು.

೧೦

ಧನ್ಯ-ಧನ್ಯರೀ ಶ್ರಮಿಕರೀ ಪಥಿಕರೀ ತರಳರು
ಸರದಿ ವಸ್ತ್ರಗಳ ಶುಚಿಗೈವ ಭಾಗ್ಯದ ಅಗಸರು!
ಪಟ್ಟಣದ ಕೊಳೆ, ದೂಳಿ ದೂಸರಕೆ ಇವರತಿ ದೂರರು
ಮುಣಿದು ಮುಳುಗು ಪ್ರಕೃತಿ ಮಡಿಲಲಿ ಕಳಿವರೀ ನೋಂತರು
ನಾಗರಿಕತೆಯ ಪಾಳ್ಗತೆಯು, ಸಾಕು ಸಾಕೆಲೆ ಮಾನವಾ,
ಯಂತ್ರವಶರಾಗದೊಲು ಸ್ವಾತಂತ್ರ್ಯದೆಡೆ ತಿರಳುವಾ!
ಗಿರಿಯ ಗಂಹರಗಳಿಗೆ ನದಿಯ ಸಂಗಮಗಳಿಗೆ ಮರುಳುವ-
ಹಿರಿಯ ಋಷಿಗಳ ತೆರದಿ ದೇವವಾಣಿಯ ಕೇಳುವಾ!

೧೧

ಸತ್ಯವೆ ಸೌಂದರ್ಯವು
ಸೌಂದರ್ಯವೆ ಸತ್ಯ!
ಅದುವೆ ಪರಬ್ರಹ್ಮವು ನಿತ್ಯ
ಅದ ಕಂಡುಂಡವ ಕೃತಕೃತ್ಯ!
ಸೌಂದರ್ಯೋದಧಿ ಕ್ಷೀರೋದಧಿ
ಕ್ಷೀರೋದಧಿ ಸೌಂದರ್ಯೋದಧಿಯು-
ಏನಳಿದರು ಉಳಿವುದು ಶೇಷ॥
ಆ ಶೇಷವೆ ಬಹು ವಿಶೇಷ॥
ಓಂ ಸೌಂದರ್ಯಾಯ ನಮಃ
ಓಂ ಸೌಂದರ್ಯಾಯ ನಮಃ
ದುರ್ಭಾವನೆಯಳಿಯಲಿ
ಸದ್ಭಾವನೆ ಬೆಳೆಯಲಿ!
ಓಂ ಸೌಂದರ್ಯಾಯ ನಮಃ
ಓಂ ಸೌಂದರ್ಯಾಯ ನಮಃ!

ವರಾನ್ವೇಷಣ

(ಒಂದು ಬಾಳಿನ ಅಣಕ)

ಶ್ರೀ. ವಾಸುದೇವ ಶಿಗ್ಗಾಂವ, ನೀರಸಾಗರ

卐

[ರಾಯರು—ರಾಯರೆಂದರೆ ಬರೆಹಗಾರರು. ಭಾವಜೀವಿ. ಹೊಸತನಕ್ಕೆ ತಕ್ಕಂತೆ ತಮ್ಮ ಕೋಣೆಯನ್ನು ಸಿಂಗರಿಸಿಕೊಂಡಿದ್ದಾರೆ. ಓರಣವಾಗಿ ತಲೆಯನ್ನು ಬಾಚಿದ್ದಾರೆ. ಉಡುಪು: ಅಂಗಿ ಮತ್ತು ಧೋತರ. ಟೇಬಲ್ ಮೇಲೆ ವ್ಯವಸ್ಥಿತ ರೀತಿಯಲ್ಲಿ ಇಟ್ಟ ಕೆಲ ಪುಸ್ತಕಗಳು. ಅದಾವುದೋ ಗಹನ ವಿಚಾರವೊಂದಿಗೆ ಬರೆಯುತ್ತ ಕುಳಿತಿದ್ದಾರೆ. ಅವರ ಬಲಭಾಗಕ್ಕೆ ಅವರ ಅರ್ಧಾಂಗಿ ಅರ್ಧ ಮುಗಿದ ಹೆಣಿಕೆಯನ್ನು ಮುಂದುವರಿಸಿದ್ದಾರೆ. ರಾಯರಿಗೆ ಹೇಳಬೇಕು ಎಂಬ ಆತುರತೆಯು ಮುಖಮುದ್ರೆಯೊಂದಿಗೆ ಆಗಾಗ ಅವರನ್ನು ನೋಡುವುದು ನಡೆದಿದೆ. ಆತುರತೆ ಅತಿಯಾಗಿ ಅವರ ಹೆಂಡತಿ ಮಾತಿಗೆ ಮೊದಲು ಮಾಡುತ್ತಾರೆ]

ಹೆಂಡತಿ :— ದೇಶಪಾಂಡೆ ದಮಯಂತಿನ್ನ ತೋರಿಸಲಿಕ್ಕೆ ಕರಕೊಂಡು ಹೋಗ್ಯಾರಂತ; ಕಟ್ಟೀಮನಿ ಕಮ್ಲಿನ್ನ ಕುಲಕರ್ಣಿ ಕೃಷ್ಣಗ ಕೊಡಬೇಕೂ ಅಂತ ಮಾತು–ಕಥಿ ನಡದಾವಂತ; ನೀಲಕಂಠರಾಯರ ನಲಿನೀದು ನಿರ್ಣಯಕ್ಕ ಬಂದು ನಿಂತsದಂತ; ಪುರೋಹಿತರ ಪದ್ದಿನ್ನ—ಆ ಹದ್ದಿನ ಮುಸುಡೀ ಪದ್ದಿನ್ನ—ನೋಡಲಿಕ್ಕೆ ಬರೋವರು ಇದ್ದಾರಂತ; ತುಂಗಕ್ಕ ತಮ್ಮ ತುಳಸಿನ್ನ ತಮ್ಮಗs ತಗೋ ಅಂತ ಕೇಳ್ಳಿಕ್ಕೆ ಹೋಗ್ಯಾರಂತ; ಸೊರಟೂರವರ ಸುಮ್ಮಿನ್ನ—ಅಂದರ ಆ ಸೋಗಲಾಡಿ ಸುಮ್ಮಿನ್ನ—ತೋರಿಸಲಿಕ್ಕೆ ಹೋಗಿದ್ದರಂತ; ಹುಡುಗ ನಕ್ಕೋತs ಇದ್ದಸಂತ. ಅಂದಮ್ಯಾಲೆ, ರಿಜಲ್ಟು ಪಾಸ್ ಆಗಬಹುದು ಅಂತ ಅಂದರು. ನೀವೇನು ನಮ್ಮ ಸುಧಾನ ಬಗ್ಗೆ..........

ರಾಯರು :— ಛೆ, ಛೆ, ಛೆ! ಏನು ಹಂಗ, ಒಂದs ಸವನ ಹಚ್ಚಿಬಿಟ್ಟೀಯಲ್ಲ ಕೊರ್ ಕೊರ್ ಅಂತ ...ಇಲೆಕ್ಟ್ರನ್ ಕಾರಿನ್ಹಾಂಗ!

ಹೆಂ :— ಹಾಂಗ್ಯಾಕ ಸರಕ್ಕನ ಸಿಟ್ಟಿಗೇಳತೀರಿ ರೇಶನ್ ಅಂಗಡೀ ಕಾರಕೂನನ್ಹಾಂಗ ?

ರಾ :—ಮತ್ತೇನು, ಆ ರೇಶನ್ ಅಂಗಡೀ ಕಾರಕೂನ....ಈ ಸಂಸಾರದ ಸೆಕ್ರೆಟರಿ....ಎರಡೂ ಒಂದs!

ಹೆಂ :— ಅಂಥಾದೇನು ಮೈಮ್ಯಾಲ ಕಡಕೊಂಡು ಬಿದ್ದsದ ಅಂತೇನಿ.

ರಾ :—ಮ್ಯಾಲ ಕಡಕೊಂಡ ಬೀಳೋದಲ್ಲ; ಮುಂದ ಮುಕ್ಕರಿಸಿ ಬೀಳೊದೊಂದs ಉಳಿದsದ. ಆ ಕಾರಕೂನ ಆ ಕೊರಿ, ಈ ಕೊರಿ ಎಲ್ಲಾ ಕೊರಿ ಕೂಡಿಸಿ, ತೆರಿತೆರಿ ಮಾಡಿ ಲೆಕ್ಕಾ ಹ್ಯಾಂಗ ಬಾಯಿಗೂಡಿಸತಿದ್ದಾ....ಹಾಂಗ ತಿಂಗಳ ಕಡೀ ವಾರಾ ಬಾಯಗೂಡಿಸೋದು ಅಂದರ, ಚೂರೀಬಾಯಿಂದ ಪಾರ ಆದ್ಹಾಂಗ.

ಹೆಂ : - ಓಹೊ! ಈ ಸಾರೆ ಪಗಾರಕ್ಕ ಪ್ರಿಂಟಿನ ಪತ್ರಲಾ ತಗೊಳ್ರಿ ಅಂದದ್ದಕ್ಕ ಹೌದಲ್ಲೋ ಇಷ್ಟೆಲ್ಲಾ ರಗಳೀ ರಾಮಾಯಣ ?

ರಾ :—ಹೌದು! ಅದಕ್ಕs ಅಂಬೋದು ಹೆಂಗಸರಿಗೆ ಬುದ್ಧಿ ಕಡಿಮಿ ಅಂತ!

ಹೆಂ : - ನಾ. ಅಂತೇನಿ ಮೇಲ್ಬುದ್ಧಿ ಅತಿಯಾದರೂ ಹೀಂಗs, ಆಗತsದೊ ಏನೋ ಅಂತ.

ರಾ : - ಏನು ? ಆದದ್ದರೆ ಏನು ಈಗ ?

ಹೆಂ :— ಏನು ಆಗೋದೇನು! ಹುಡಿಗಿನ್ನ ಕಂಡರ ಕಟ್ಟಿ ಕಸಿವಿಸಿ ಆಗತsದ! ಸರಿಕದವರ ಸುದ್ದಿ ಕೇಳಿದರ, ಸಣ್ಣ ಮಾರೀ ಮಾಡತsದ ಬತ್ತಿದ ಬದನೀ ಕಾಯಿಹಾಂಗ.

ರಾ : ಹಾಂಗಾದರ ನನಗೂ ಸಣ್ಣ ಮಾರೀ ಮಾಡಿಕೊಂಡು ಕೂಡು ಅಂದೇನು ?

ಹೆಂ :— ದೊಡ್ಡ ಮಾರೀ ಮಾಡಿಕೊಂಡು, ನಮ್ಮ ಅಂಬೋಣ ಒಂದು ಸ್ವಲ್ಪ ಕೇಳ್ರಿ—ಅಂದೆ.

ರಾ :— ಅಂದರ ನೀ ಅಂಬೋದರೆ ಏನು ? ಒಮ್ಮೆ ಅಂದು ಬಿಡು!

ಹೆಂ :— ಇಷ್ಟೊತ್ತನಕಾ ಗಂಟಲಾ ಹರಕೊಂಡೆ; ಕೇಳಿಸಲಿಲ್ಲೇನು ?

ರಾ :— ಅನ್ನೋದು ಕೇಳಿಸತಿತ್ತು ಖರೆ; ಆದರ ಏನು ಅಂತೀದಿ ಅಂಬೋದು ತಿಳೀತಿದ್ದಿಲ್ಲಾ.

ಹೆಂ :— ಹೌದು ಹೌದು. ವಿಶ್ವಾಮಿತ್ರ ತಪಸ್ಸಿಗೆ ಕೂತ್ಹಾಂಗ ಪುಸ್ತಕಾ–ಪೆನ್ನು ಹಿಡಿದು ಕೂತರ, ಹ್ಯಾಂಗ ತಿಳಿದೀತು ?

ರಾ :— ಕೈ ಹಿಡಿದ ಮೇನಕಾ ಮಾತಿನ ನರ್ತನಕ್ಕೆ ಸುರು ಮಾಡಿದರ, ನಮ್ಮಂಥಾ ವಿಚಾರವಿಶ್ವಾಮಿತ್ರರ ತಪಸ್ಸಿಗೆ ಭಂಗ ಬರದೇ ಬಿಟ್ಟೀತs ?

ಹೆಂ :— ಆ ವಿಶ್ವಾಮಿತ್ರ ಬ್ರಹ್ಮನ ಪ್ರತಿಸ್ಪರ್ಧಿಯಾಗಿ ನಿಂತಿದ್ದರ, ಈ ವಿಶ್ವಾಮಿತ್ರರು ಸಾಹಿತ್ಯ ಸರಸ್ವತಿಯ ಕೂಡ ಸೆಣಸಾಟಕ್ಕ ನಿಂತ್ಹಾಂಗ ಕಾಣತsದ!

ರಾ :— ಮಹಾರಾಯಳ, ಇದೊಂದಿಷ್ಟು ಬರೆದು ಮುಗಿಸಬೇಕೂ ಅಂತ ಮಾಡೇನಿ. ಬರೀ ಅಂತಿಯೊ, ಏನು ಬ್ಯಾಡ ಅಂತಿಯೊ ?

ಹೆಂ :— ಬರೀರೆಲಾ. ಬರೀಲಿಕ್ಕೆ ಯಾರು ಬ್ಯಾಡಾ ಅಂದರು ? ಆದರ ಬರಿದs ತೀರಬೇಕು ಅಂತ ಯಾಕಿಷ್ಟು ತಲಿಗೇರೇದ....ಮುಪ್ಪಿನ ಕಾಲಕ್ಕ ಮದಿವಿ ಆದ ಮೂರನೇ ಹೇಣ್ತೀ ಹಾಂಗ ?

ರಾ :— ಛೆ, ಛೆ! ನಿನ್ನ ಹತಿಲೆ ಕೂಡೋದು....ಮೋಟರಿನ್ಯಾಗ ಖಿಡಿಕೀ ಹತ್ತಿಲೆ ಕೂಡೋದು ಎರಡೂ ಒಂದs ನೋಡು!

ಹೆಂ : - ಅಂದರs. ನಾ ಅಂದರ ಕರಕರಮಂಡೇರಾಕಿ—ಬಿಕ್ಷಾದಾಕಿ—ಅಂತ ನಿಮ್ಮ ಅಂಬೋಣ ಹೌದಲ್ಲೊ ? ನೀವಿಷ್ಟು ಅಂತೀರಿ ಅಂತ ಗೊತ್ತಿತ್ತು. ಸಿಗಬಾರದಿತ್ತು ಸಿಕ್ಕೇನಿ.... ಈ ಜನ್ಮಕ್ಕ ನಿಮಗ! ಥು, ಈ ಜನ್ಮಕ್ಕ ಬೆಂಕೀಹಚ್ಚಲಿ! ಕಿಮ್ಮತ್ತಿಲ್ಲದ ಜನ್ಮ!

ರಾ :— ಕಿಮ್ಮತ್ತಿಲ್ಲ? ಏನು ಅಂತೀದಿ ಅಂತೇನಿ. ನಾಯಾಕರ ಮನೀ ಹುಡಿಗಿಗೆ ಕಿಮ್ಮತ್ತಿಲ್ಲs? ಇಲ್ನೋಡು ವಿಮಲಾ! ಕೊಂಡು ತರೋ ಕಿಮ್ಮತ್ತು ಆಗಿದ್ದರ, ಕಿಮ್ಮತ್ತಿನ ಕಿಸಾನ ಇಡತಿದ್ದೆ ನೋಡು ನಿನಗ!

ಹೆಂ :— ಸಾಕುಸಾಕು. ಮುಂಜಾನೆದ್ದು ಯಾರ ಮಾರೀ ನೋಡಿದ್ದಿನೋ ಏನೋ!

ರಾ :— ಮತ್ತ್ಯಾರದು? ನನ್ನ ಮಾರೀನs ನೋಡಿರಬೇಕು. ಅಂತ ಹೇಳೇ ಇವತ್ತ ನಿಮ್ಮಪ್ಪನ ಪತ್ರ ಬಂತು ನಿನಗ.

ಹೆಂ :— ಹೌದು ಅಂದ್ಹಾಂಗ.. ವರಾ ನೋಡಲಿಕ್ಕೆ ನೆನಪು ಕೊಡು ಅಂತ ಬರದಾನ ಅಪ್ಪ!

ರಾ — ಯಾರಿಗೆ? ನಿನಗ?

ಹೆಂ :— ಸಾಕುಬಿಡ್ರಿ. ಏನಾರೇ ಮಾತಾಡಿದರ ಏನಾರೇ ಮಾತಾಡೋದು! ಯಾವಾಗಲೂ ಇಂಥಾ ಹುಚ್ಚುಚ್ಯಾರದ ಮಾತs! ಸುಧಾನ ಸಲುವಾಗಿ—ಅಂದೆ.

ರಾ :— ಸುಧಾನ ಸಲುವಾಗೆ? ಅಪ್ಪ ಇದ್ದಾನಲ್ಲ!

ಹೆಂ :— ಯಾವಾಗಲೂ ನಿಮ್ಮದs ವಿಚಾರ. ಎರಡನೆ ಯವರದೂ ಒಂದು ಸ್ವಲ್ಪ ವಿಚಾರ ಮಾಡ್ರಿಲಾ!

ರಾ : — ಹುಂ! ನಂದು ನನಗs ನೆಲಿ ಇಲ್ಲಾ ...ಎರಡನೆಯ ವರದಂತ! ಆ ಎರಡನೆಯವರಿಗಾಗಿ ಬೇರೆ ಎರಡನೆಯವರು ವಿಚಾರ ಮಾಡತಾರ!

ಹೆಂ :— ಅದೇ; ಆ ಬ್ಯಾರೆ ಎರಡನೆಯವರು ನೀವs ಆಗರಿ— ಅಂತ.

ಹೆಂ :— ದೇವರಗುಡ್ಡದ ಕಾರಣಿಕದ ಮಾತಿನ ಮರ್ಮ ಏನೂ ಅಂತ್ರೇನಿ.

ಹೆಂ : — ಪೂರ್ಣಾಕಾರದ ಮಾತು ಅಂದರ, ನಮ್ಮ ತಂಗಿ ಸುಧಾನ ಸಲುವಾಗಿ ಒಂದು ವರಾ ನೋಡ್ರಿ—ಅಂತ.

ರಾ :— ನಿಮ್ಮ ತಂದೆಯವರು ಇದ್ದಾರಲ್ಲಾ, ನಾಯಾಕ ಮಹಾರಾಯರು!

ಹೆಂ :—ಅವರು ನೋಡಿದರ ಹಳ್ಳಿಯೊಳಗ ಕೂತುಬಿಡೋರು; ನಿಮ್ಮ ಆಫೀಸಿನ್ಯಾಗ....ಇಲ್ಲಾದರ ಮತ್ತ ಬ್ಯಾರೆ ಆಫೀಸಿನ್ಯಾಗ.... ನಿಮಗ ಗೊತ್ತು ಇರತ್ತದ ಅದಕ್ಕ ನೋಡ್ರೀ ಅಂಬೋದು!

ರಾ :— ಇಲ್ನೋಡು ವಿಮಲಾ! ಹತ್ತುಸಾವಿರ ರೂಪಾಯಿಗೆ ಜಾಮೀನ್ ಆಗು ಅಂದರ ಆಗಬಹುದು; ಆದರ ಈ ಗಂಡು-ಹೆಣ್ಣಿನ ಕೆಲಸಕ್ಕ ನಡುವ ಆಗೋದು ಅಂದರ ...ನನಗಂತೂ ಹೆದರಿಕೀನs ಬರತದ ನೋಡು!

ಹೆಂ :— ಏನು ಅಂಥಾ ಅಪವಾದಾ ಹೊತ್ತೀರಿ ಅಂತೇನಿ ಈಗ.

ರಾ — ಎಷ್ಟೋ ಮಂದಿ ಅನ್ನೋ ಮಾತು ಕೇಳಲ್ಲೇನು? 'ಅಯ್ಯs ಛೆಲೊ ಛೆಲೊ ಅಂತ ಕೊಟ್ಟೆವಿ; ಆದರ ...ಏನ ಆದs ರೇ.... ನಮ್ಮ ಹುಡಿಗಿ ಬಿಲ್ವಾರಾ ಕಾಣ್ಲಿಲ್ಲಾ, ಗೋಟು ಪಾಟ್ಲೀ ಕಾಣಲಿಲ್ಲಾ. ಒಂದು ಬನಾರಸಿ ಪತ್ತಲಾ ಕಾಣಲಿಲ್ಲಾ.......'

ಹೆಂ : — ಹುಂ. ನಮ್ಮ ಅವ್ವ ಅಂದದ್ದನ್ನ ನನಗ ಟೀಕಿಸಿ ಮಾತು ಆಡತೀರಲ್ಲs? ಏನೋ ಹಳೇ ಕಾಲದಾಕಿ, ಭೋಳೇ ಸ್ವಭಾವ-ದಾಕಿ ... ಅಂದರೂ ಅಂದಿದ್ದಾಳು! ಅದನ್ನ ಘಟ್ಟಿ ಹಿಡೀಬೇಕೇನು ಮನಸಿನ್ಯಾಗ?

ರಾ : - ತವರಮನೀ ಅಭಿಮಾನ ಇನ್ನೂ ತುಂಬಿ ತುಳುಕತದ-ದಲ್ಲs?

ಹೆಂ :— ಅದು ಹ್ಯಾಂಗ ಬಿಡತದ? ರಕ್ತದ ಸಂಬಂಧ ಇಂತಾದ!

ರಾ :— ಎಲ್ಲೀ ತನಕಾ....ಲಗ್ನ ಆಗೋ ತನಕಾ! ಲಗ್ನ ಆತು ತೀರಿತು! ಆ ಮ್ಯಾಲ ಗಂಡನ ಮನೆತನದ ಬಗ್ಗೆ ಸಂಪೂರ್ಣ ಅಭಿಮಾನ ಹಿಡೀಬೇಕು!

ಹೆಂ :— ಹೆಂಡತಿಯು ಬಗ್ಗೆ ಅಭಿಮಾನ ಹಿಡೀಬೇಕೂ ಅಂಬೋ ಮಾತು ನಿಮಗೂ ಅನ್ವಯಿಸತ್ತದ.

ರಾ :— ಇಲ್ಲಾ ಅಂತ ಯಾರ ಅಂದರು? ಇಲ್ಲೀ ತನಕಾ ನಿನ್ನ ಒಂದು ಮಾತರೇ ತಗದು ಹಾಕೇನೆ?

ಹೆಂ :— ಆಹಾ! ಇದರ ಮ್ಯಾಲs ತಿಳೀತತದಲ್ಲಾ....ತಂಗಿ ಸುಧಾಗ ಒಂದು ವರಾ ನೋಡ್ರಿ ಅಂದರ....

ರಾ : — ಕತ್ತಿ ತಪ್ಪಿದರ ಹಾಳುಗೋಡಿಯೊಳಗs ಅಂತ! ಮತ್ತ ಅದs ಮಾತಿಗೆ ಬಂದೆಲ್ಲಾ!

ಹೆಂ :— ಆ ಮಾತಿನಿಂದಾ ನಿಮಗ ಬೇಜಾರ ಆಗತಿದ್ದರ, ನಾನಾರೆ ಯಾಕಿಲ್ಲೆ ನಿಂತಿರಬೇಕು.

ರಾ : — ನಿಂದರು ಅಂತ ಯಾರು ಅಂದರು? ಕೂತುಕೊ. ನಿನ್ನ ಸಲುವಾಗೇ ಈ ಕುರ್ಚೀ ಮಾಡಿಸಿದ್ದು.

ಹೆಂ :— ಹೌದು ಹೌದು. ಇದೆಲ್ಲಾ ನನ್ನ ಸಲುವಾಗಿನ!

ರಾ :— ಹಾಂಗ ಮಾತು-ಮಾತಿಗೆ ಮನಸ್ಸಿಗೆ ಹಚ್ಚಿಕೋ ಬಾರದು ವಿಮಲಾ!

ಹೆಂ :— ಮೊದಲಿಗೆ ಅಂಥಾ ಮಾತು ಆಡೋದು; ಮತ್ತ ಮ್ಯಾಲ ರಮಿಸೋದು!

ರಾ :— ಏನೋ ಚಾಷ್ಟೀ ಸ್ವಭಾವ; ಅಷ್ಟಿ ತಪ್ಪಿ ಒಂದೆರಡು ಮಾತು ಬಂದರೂ ಬಂದಿದ್ದಾವು. ಅದನ್ನs ಘಟ್ಟಿ ಹಿಡೀಬೇಕೇನು? ಇವತ್ತ ಅಥವಾ ನಾಳೆ ಇಷ್ಟರಾಗs ಗುಂಡೂರಾಯ ಬರೋವ ಇದ್ದಾನ. ಮತ್ತು ನಾಲ್ಕಾರು ಕಡೆಗೂ ಪ್ರಯತ್ನ ನಡೆಸೇವಿ. ಏನs ಆಗಲಿ, ಈ ಸಾರೆ ಹೋಳ್ಗೀ ಹೊಡೆದs ಬಿಡೋಣ!

ಹೆಂ :— ಹೋಳಿಗ್ಯೋ ಏನು ಕೈಕಾಲು ಜೋಳಿಗ್ಯೋ! (ಸರಕ್ಕನೆ ಹೊರಡುವಳು)

ರಾ :—ಅರೆ ಅರೆ! ಏನಿದು, ಬಿಮ್ಮನs ಬಿಕ್ಕೊಂಡು ಹೊರಟೇ ಬಿಟ್ಟೆಲ್ಲ? ಹುಂ. ಹೋಗ್ಲಿ ಹೋಗ್ಲಿ. ಈ ಹೆಂಗಸರ ಸಿಟ್ಟು ಅಂದರ ಏನಂದ್ರಿ?.... ಹೊಟ್ಟೆಗೆ ಕೊಡೋತನಕಾ ಹುಡುಗರು ಅತ್ತ್ಹಾಂಗ!

[ಮತ್ತೆ ಮೊದಲಿನಂತೆ ಬರೆಯುತ್ತ ಕೂಡುವರು.]

೨

(ಗುಂಡಣ್ಣನ ಪ್ರವೇಶ)

ಗುಂಡಣ್ಣ :— ಇದ್ದಾರೇನು ರಾಯರು ?

ರಾಯರು:— ಯಾರವರು ?

ಗುಂ :— ನಾನು ಗುಂಡೂರಾಯ.

ರಾ :— ಓಹೊ! ನಮಸ್ಕಾರ ಬರಬೇಕು ಬರಬೇಕು.

ಗುಂ :— ನಮಸ್ಕಾರ. ಮನ್ಯಾಗ ಇದ್ದೀಯೋ ಇಲ್ಲೋ ಅಂತ ಮಾಡಿದ್ದೆ.

ರಾ :— ಎಲ್ಲಿಗೆ ಹೋಗೋದು ಮಹಾರಾಯಾ!

ಗುಂ :— ಯಾಕ? ಆಫೀಸರ ಪರವಾನಿಗಿ ಬೇಕೇನು? (ಅತ್ತಿತ್ತ ನೋಡಿ) ಊರಾಗಿಲ್ಲೇನೊ?

ರಾ: – ಊರಾಗೂ ಇದ್ದಾರ, ಓಣ್ಯಾಗೂ ಇದ್ದಾರ, ಮನ್ಯಾಗೂ ಇದ್ದಾರ, ಒಳಗೂ ಇದ್ದಾರ; ಆದರ ಬಹಳ ಸಿಟ್ಟಿನ್ಯಾಗ ಇದ್ದಾರ!

ಗುಂ :— ಹೋಳಿಗೀ ಸುದ್ದೀ ಹೇಳಿದರ, ಸಿಟ್ಟು ಸರಕ್ಕನೇ ಸರಿದರೂ ಸರೀಬಹುದು!

ರಾ :— ಯಾಕ? ಮೊನ್ನೆ ಮಾತಾಡಿದ್ದೆವಲ್ಲಾ ಆ ವರದ ಸಂಬಂಧೀ ವಿಚಾರಿಸಿಕೊಂಡು ಬಂದೇನು? ಈಕೀ ಬಾಯಿ ಅಂದರ ಪಂಚಾಂಗದ ಪ್ರತಿ ಇದ್ದಾಂಗ ನೋಡು.

ಗುಂ :— ಬರೇ ವಿಚಾರಿಸೋದೇನು? ಗೋತ್ರ ಬಿಡತದ; ಇಪ್ಪತ್ತೆಂಟು ಗುಣಾ ಕೂಡಿ ಬರತಾವ ನೋಡಲಿಕ್ಕೇ ಬರತಾರಂತ.

ರಾ :— ಅವರ ಮನೆತನದ ಸಂಬಂಧೀ.... ಹ್ಯಾಂಗಸಾ?

ಗುಂ :— ಅದಕ್ಕೇನೋ, ಒಳ್ಳೇ ಸಂಭಾವಿತ ಮನೆತನ! ಜನರು ಬಹಳ ಒಳ್ಳೆಯವರು. ಮೂವರು ಅಣ್ಣ-ತಮ್ಮಂದಿರು! ಇಬ್ಬರ ಲಗ್ನ ಆಗೇದ, ಇವನ್ನ ಕಡಿಯವ.

ರಾ :— ಹುಡುಗ ಹ್ಯಾಂಗ ಇದ್ದಾನ ನೀ ನೋಡೀಯೇನು?

ಗುಂ :— ಬಹಳ ದಿವಸ ಆತು ನೋಡಿ ಅಣ್ಣಂದಿರನ್ನ ನೋಡ ತಿರಲಿಕ್ಕೆ ಛಲೋ ಇರಲಿಕ್ಕ ಬೇಕೂ—ಅಂತ ಅನಿಸತದ.

ರಾ :— ಈಗೇನು ಮಾಡತಾನ ಅಂದಿ?

ಗುಂ :— ಏನು ಮಾಡತಾನ ಅಂದರ ಏನೋ! ಇನ್ನ ಸ್ವಲ್ಪ ದಿವಸದಾಗ, ಡಾಕ್ಟರ್ ಆಗತಾನ ಡಾಕ್ಟರು! ಇಲ್ಲೇ ದವಾಖಾನೀ ಸುರೂ ಮಾಡಿದರೂ ಮಾಡಿದನ್ನ!

ರಾ : – ಛಲೋ ಆತು ಬಿಡು ಮಹಾರಾಯಾ! ಈಕೀ ಸಲುವಾಗಿ ಡಾಕ್ಟರಿಗೆ ರೊಕ್ಕಾ ಕೊಟ್ಟು ಸಾಕಾಗಿ ಹೋಗೇದ!

ಗುಂ :— ಬೀಗತನದ ಬಾಣಾ ಬಿಗಿದು ಬಿಟ್ಟೆಲ್ಲಾ! ಹೀಂಗಂತಿ. ಯಲ್ಲಾ; ಫುಕಟ ಔಷಧ ಅಂದಕೂಡಲೆ, ಬ್ಯಾನೀನೂ ಬರೂದಿಲ್ಲ ನೋಡು!

ರಾ :— ಹೌದು, ಅದೂ ಖರೇನs! ಮನ್ಯಾಗಿನ ಹೆಂಗಸರ ಕಿಟಕಿಟಿಗೆ ಗಂಡಸರ ಬುದ್ಧಿ ಟರಡು ಆದ್ಹಾಂಗ, ಔಷಧದ ವಾಸನೀ ಕುಡಿಕುಡಿದು ಅವರ ರೋಗಜಂತುಗಳು ನಾಶ ಆಗಿ ಹೋಗಿರತಾವ. ನಾನು ಮುಂಬಯಿಯೊಳಗಿದ್ದಾಗ ....

ಗುಂ :— ಹಾಂ! ಮುಂಬಯಿ ಅಂದ ಕೂಡಲೆ ನೆನಪಾತು. ಹುಡುಗ ಮುಂಬಯಿಯಿಂದ ಬರೋವ ಇದ್ದಾನಂತ! ಬಂದಕೂಡಲೆ ಪತ್ರಾ ಬರೀತಾರಂತ. ಅವರ ಪತ್ರ ಬಂದಕೂಡಲೆ ನಿನಗೂ ತಿಳಿಸತೇನಿ.

ರಾ :— ತಿಳಿಸೋದೇನು. ನೀನು ಬಂದುಬಿಡ!

ಗುಂ :— ನೋಡತೇನಿ, ನನಗೂ ಕೆಲಸ ಬಹಳ ಅವನೋ! ಇತ್ತಲಾಗ ದತ್ತಕದಾವೆ....ಮತ್ತ ಒಂದೆರಡು ಮದತೀದಾವೆ ಮುದ್ದತ ಅವ.

ರಾ :— ಅಲಾಲಾ! ಮುಖ್ಯ ಮಂತ್ರಿಗಾದರೂ ಒಂದಿಷ್ಟು ಬಿಡುವು ಇದ್ದೀತು; ನಿನಗ ಇಲ್ಲ ನೋಡು!

ಗುಂ :— ಬರತೇನಿ ಮಹಾರಾಯಾ! ಒಳಗ ವಿಮಲಾಬಾಯಿ. ರಿಗೂ ತಿಳಿಸಿಬಿಡು ಮತ್ತ. ತಕ್ಕ ತಯಾರೀ ಇರಬೇಕು. ನೋಡಿದ ಹುಡಿಗೇಕಿಂತಾ ಮಾಡಿದ ತಯಾರೀ ಕಂಡು ಹುಡುಗ 'ಹುಂ' ಅಂದಿರಬೇಕು!

ರಾ :— ನೋಡು ಹಾದಿ! ಫರಾಳದ ಪ್ಲೇಟು ಬಂದುಬಿಟ್ಟಿತು. ನೀನಷ ಕಳೆ ಕಟ್ಟು, ನಾಳೆ ನೋಡಲಿಕ್ಕೆ ಬಂದಾಗ ಯಾವ ತಯಾರೀ

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಹಾಲು-ಹಣ್ಣು (ಕವನ ಸಂಗ್ರಹ) ೧- ೮-೦
ಶ್ರೀ. ಭುಜೇಂದ್ರ ಮಹಿಷವಾಡಿ

ಬಾಳ-ಬಂಡಿ (ಕವನ ಸಂಗ್ರಹ) ೦- ೮-೦
ಶ್ರೀ. ಬಾಳ ಬಿ. ಉಪಾಧ್ಯೆ

ಮೂಲ ಶಿಕ್ಷಣದ ಸೌಲ್ಯಮಾಪಣ ೦-೧೨-೦
ಶ್ರೀ. ಮಿರ್ಜಿ ಅಣ್ಣಾರಾಯರು

ಭರತೇಶನ ನಾಲ್ಕು ಚಿತ್ರಗಳು ೧- ೪-೦
ಶ್ರೀ. ಮಿರ್ಜಿ ಅಣ್ಣಾರಾಯರು

ಶ್ರೀ ಶಾಂತಿಸಾಗರ ೦- ೪-೦

ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್ನು

ಪ್ರತಿಗಳಿಗಾಗಿ ಬರೆಯಿರಿ :

ಶ್ರೀ. ಮಿರ್ಜಿ ಅಣ್ಣಾರಾಯರು

ಪೋ. ಉಗಾರ ಬದ್ರುಕ್ (ಜಿಲ್ಹಾ ಬೆಳಗಾಂವಿ)

ಇರತ್ತದ ಅಂತ! ಏನಾ ಅನ್ನು, ಹೆಂಗಸರ ಸ್ವಭಾವದ ಮುಂದ ಯಾರ ಸ್ವಭಾವನೂ ಅಲ್ಲಾ!

ಗುಂ :— ಹ್ಯಾಂಗಾರ ಮದಿವೀ ಮೋಜು ಅದs ಅನಬಾರದ?

ರಾ :- ಮದಿವಿಯೊಳಗ ಮೋಜು ಇರತsದ ಹೆಂಗಸರದು! ತಾಸಿಗೊಂದು ಸೀರೀ ಬದಲು ಮಾಡೋದು, ಮಿನಿಟಗೊಮ್ಮೆ ಮೂಗು ಮುರಿಯೋದು, ಸುಳ್ಳುಸುಳ್ಳs ಅಲ್ಲಿಂದಿಲ್ಲೆ ಇಲ್ಲಿಂದಲ್ಲೆ ಅಡ್ಡಾಡೋದು! ನಮ್ಮದೇನೊ, ಹಂದರದಾಗ ಹಾಸಿದ ಗುಡಾರದ ಮ್ಯಾಲೆ ಮಕ್ಕಳನ್ನ ಸಂಬಾಳಿಸಿಕೋತ ಕೂಡೋದು!

ಗುಂ :— ಏನಂತಾರ ನೋಡ್ರೀ ನಿಮ್ಮ ರಾಯರು!

ರಾ :— ಅಡಿಗೀ ತಯಾರಿಯೊಳಗ ಕಿವಿ ಕೇಳಿಸಿರಲಿಕ್ಕಿಲ್ಲ. ನಡಿ ನಡಿ ಸ್ನಾನಕ್ಕ.

೩

[ರಾಯರು ಪತ್ರ ಬರೆಯುವುದರಲ್ಲಿ ತಲ್ಲೀನರಾಗಿದ್ದಾರೆ. ಕುರ್ಚಿಯು ಹಿಂಬದಿಗೆ ಕೋಟು. ಅವರ ಹೆಂಡತಿ ಎಲೆಯಡಿಕೆಯ ತಟ್ಟೆಯೊಂದಿಗೆ ಬರುವರು.]

ಹೆಂ :— ಹುಂ, ಪಾನಪಟ್ಟೀ ಹಿಡೀರಿ ಅಂದೆ

ರಾ :— ಅಲ್ಲ, ಈಗ ಸ್ವಲ್ಪ ಹೊತ್ತಿನ ಹಿಂದ ನಿನ್ನ ಮುಖಾ ಅಂದರ ಹುರಿಯೋ ಹಂಚಿನ ತಳಾ ಆಗಿತ್ತು. ಈಗಾಗಲೆ ಸ್ಟೇನ್‌ಲೆಸ್ ಸ್ಟೀಲಿನ ಡಬರಿ ಆಗೇದಲ್ಲಾ ಅಂತೇನಿ.

ಹೆಂ :— ಸಾಕುಬಿಡ್ರಿ. ಮದಿವಿ ಆಗಿ ಮೂರು ವರುಷ ಅದ್ರೂ ಹುಡುಗಾಟಿಕಿ ತಪ್ಪಲಿಲ್ಲ.

ರಾ :— ಅಂದರ? ಮದಿವಿ ಆಗಿ ಇಂತಿಷ್ಟು ವರುಷನs ಹುಡುಗಾಟಿಕೀ ಮಾಡಬೇಕು — ಅಂತ ಅದ ಏನು ನಿಮ್ಮ ಮದಿವೀ ಶಾಸ್ತ್ರದಾಗ?

ಹೆಂ :— ಸಾಕು ಸಾಕು. ಶಾಸ್ತ್ರ ಶುರುವಾತಲ್ಲ. ಇಲ್ಲ, ಇವತ್ತಿನ ಅಡಿಗಿ ಹ್ಯಾಂಗ ಆಗಿತ್ತು?

ರಾ : ನಾನೂ ಅದನ್ನs ಹೇಳಬೇಕು ಅಂತ ಮಾಡಿದ್ದೆ. ನಿನ್ನ ಅಡಿಗೀ ರುಚಿಗೆ ನಾಲಿಗೀ ಮ್ಯಾಲಿನ ಹನ್ನೆರಡು ವರುಷದ ಹೊಲಸು ಕಿತ್ತಿ ಹೋತು ನೋಡು. ಇಂದ ಇಷ್ಟ್ಯಾಕ ಮನಸಿನ ಮ್ಯಾಲ ತಗೊಂಡಿದ್ದಿ ಅಂತೀನಿ.

ಹೆಂ :— ಪಾಪ! ಅಂಥಾ ಸಂತೋಷದ ಸುದ್ದೀ ತಂದಾರ.... ಇಷ್ಟು ಮಾಡೋದು ಭಾಳs?

ರಾ :— ನಿನಗ ಹ್ಯಾಂಗ ಗೊತ್ತಾತೂ ಅಂತೀನಿ

ಹೆಂ :— ನೀವೂ— ಗುಂಡೂರಾಯರು— ಮಾತಾಡಿದ್ದೇನು ನಾ ಕೇಳ್ಲಿಲ್ಲಾ ಅಂತ ಮಾಡೀರೇನು?

ರಾ :— ವಾಹವ್ವಾ! ಒಂದು ಕೇಳಿಕೆಯ ಬಲದ ಮ್ಯಾಲ ಅದಕ್ಕೆ ತಕ್ಕಂತೆ ಅತಿಥಿಸತ್ಕಾರ ಮಾಡತಕ್ಕ ಆದರ್ಶ ಗೃಹಿಣಿಯ ಗುಣವನ್ನು ಕಾಣಬೇಕು ಅಂತ ಇದ್ದರ, ನಿನ್ನಲ್ಲೇ ನೋಡು! ಮತ್ತ ...

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಹೆಣ್ಣಿನ ಜೀವನದ ಸುಂದರ ಚಿತ್ರಣದ
ಎರಡು ಕಾದಂಬರಿಗಳು

(೧) ವಿಧಿತಂದ ವಧು .... ೧—೮—೦
(೨) ಕುಲವಿಲ್ಲದ ಹೆಣ್ಣು .... ೧—೮—೦

ಹೆಣ್ಣಿನ ಬಾಳನ್ನು ಚಿತ್ರಿಸುವ ಸುಂದರ ಕತೆಗಳು
ಶ್ರೀಮತಿ ಶಾಂತಾದೇವಿ ಮಾಳವಾಡ

(೩) ಕುಂಕುಮಬಲ .... ೧—೦—೦
(ಪ್ರಿ. ವಿ. ಕೃ. ಗೋಕಾಕರ ಮುನ್ನುಡಿ ಸಹಿತ)

ಪ್ರಸಿದ್ಧ ಲಾವಣಿಕಾರರಾದ ಕವಿ
ಶ್ರೀಧರ ಖಾನೋಳಕರ

(೪) ಹೂಗಂಪು (ಲಾವಣಿಗಳು) .... ೦—೧೨—೦

ಈ ಮೇಲಿನ ನಾಲ್ಕು ಪುಸ್ತಕಗಳು ತರಿಸಿದವರಿಗೆ
ಅಂಚೆ ವೆಚ್ಚ ಉಚಿತ

ಗವಳೀಗಲ್ಲಿ ವ್ಯವಸ್ಥಾಪಕರು
ಹುಬ್ಬಳ್ಳಿ **ಆನಂದ ಗ್ರಂಥಮಾಲಾ, ಹುಬ್ಬಳ್ಳಿ**

ಮನ್ಯಾಗ ಏನೇನೂ ಇಲ್ಲ ಅಂತ ಅಂತಿದ್ದಿ. ಆದರ ಮಾಯಾಬಾಜಾರ ಮಾಡಿಬಿಟ್ಟಿದ್ದೆಲ್ಲ?

ಹೆಂ :— ಮೊನ್ನೆ ಅಪ್ಪ ಬಂದಾಗ ಹತ್ತು ರೂಪಾಯಿ ಕೊಟ್ಟು ಹೋಗಿದ್ರು; ಅದನ್ನs ಖರ್ಚುಮಾಡಿದೆ. ಇಷ್ಟು ಮಾಡೋದು ಭಾಳ?

ರಾ :— ಎಂಥಾ ಸಮುದ್ರದಂಥಾ ಸ್ವಭಾವ ನಿಂದು - ಅಂತೀನಿ. ಇದಕ್ಕ ಅಂತಾರ, ಪತಿಗೆ ತಕ್ಕ ಸತಿ ಅಂತ! ಅಂತೂ ವರದ ಕಾಲ್ಗುಣ ಛಲೋ ಅದ ಅನಬಾರದs?

ಹೆಂ :— ಇಲ್ಲಿ ವರಾ ಯಾವಾಗ ಬರತಾರಂತ. ಎಂ. ಬಿ. ಬಿ. ಎಸ್. ಆಗ್ಯಾರೋ, ಏನು ಇನ್ನೂ ಕಲೀತಾರೊ?

ರಾ :— ಇದು ಕಡೀ ವರ್ಷ ಅಂತ. ಗುಂಡೂರಾಯರ ಪತ್ರ ಬಂದ ತಕ್ಷಣ, ತಂದಿಯವರಿಗೆ ಪತ್ರಾ ಬರೀತೇನಿ.

ಹೆಂ :— ಏನಂತ ಬರಿತೀರಿ?

ರಾ :— ಈ ಪತ್ರಾ ಕಂಡಕೂಡಲೆ ಸುಧಾನ್ನ ಕರಕೊಂಡು ಎಲ್ಲರೂ ಬಂದುಬಿಡ್ರಿ - ಅಂತ.

ಹೆಂ :— ಎಲ್ಲರೂ ಬರ್ಲಿಕ್ಕೆ ಈಗೇನು ಮದಿವೀ ಮುಹೂರ್ತಾನೂ ಗೊತ್ತು ಮಾಡೀರೋ, ಏನು?

ರಾ :— ಅನಾ ಯಾಸಎಲ್ಲಾರೂ ಹುಡುಗನ್ನ ನೋಡಿದ್ಹಾಂಗ ಆಗತ್ತದ.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೋಫೋನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಂಗಳನ್ನು ಗಳಿಸಿದೆ.
ಮಾಲಕರು: **ಬಿ. ಜಿ. ಮುತ್ತಗಿ**

ಹೆಂ :— ಕಣ್ಣು-ಮೂಗಿಲೆ ಛೆಲೊ ಇದ್ದು, ಸ್ವಲ್ಪ ಘಟ್ಟಿ-ಮುಟ್ಟ ಇದ್ದರ ಸಾಕು.

ರಾ :— ಇರೋ ಕಣ್ಣು-ಮೂಗು ಇರೋ ಜಾಗಾಕ್ಕ ಅವನೋ ಇಲ್ಲೊ ನೋಡಲಿಕ್ಕೆ, ಒಂದಲ್ಲ ನಾಲ್ಕು ಜನಾ ಇದ್ದರ ಛೆಲೊ ಅಲ್ಲ ? ಯಾಕ? ಸ್ವಲ್ಪ ಘಟ್ಟಿಮುಟ್ಟ ಇದ್ದರ ಸಾಕು ಅಂತೀದಿ? ಪೂರಾ ಘಟ್ಟಿಮುಟ್ಟ ಇದ್ದರ, ಹೆಂಡತಿಗೆ ಹೆದರೂದಿಲ್ಲಾ ಅಂತ ನಿನ್ನ ಪ್ರಾಂಜಲವಾದ ಅಭಿಪ್ರಾಯ ಏನು ?

ಹೆಂ :— ಇಲ್ಲದ್ದಕ ಕವಡಗಂಟಿಕ ಮಾತಾಡಬ್ಯಾಡ್ರಿ. ನಮ್ಮಲ್ಲೆ ಅಷ್ಟು ಯಾರೂ ಚಿಕಿತ್ಸಾ ಮಾಡೋರು ಇಲ್ಲ. ಅಪ್ಪಾ ಮಗಳು ಇಬ್ಬರಕ ಬರಲಿಕ್ಕೆ ಬರೀರಿ. ಮತ್ತ ಅವ್ವ ಯಾಕ ?

ರಾ :— ನೀನು ಚಹಾದ ತಯಾರಿಗೆ ತೊಡಗಿದಿ ಅಂದರ, ಬಂದ ಹೆಂಗಸರ ಕೂಡ ಮಾತಾಡಿಕೋತ ಕೂಡ್ಲಿಕ್ಕೆ ಬ್ಯಾಡ್ವ? ಏನಂತ ಅನ್ನು, ಗೃಹಸ್ಥಾಣಿಕೀ ಲಕ್ಷಣಾ ಅಂತ, ಒಬ್ಬ ಹಿರೇ ಹೆಂಗಸರು ಬೇಕು.

ಹೆಂ :— ತಂಗಿ ಚಹಾ ಮಾಡತಾಳ. ಯಾಕ ನಾ ಇಲ್ಲೇನು ಮಾತಾಡಿಕೋತ ಕೂಡಲಿಕ್ಕೆ ?

ರಾ :— ಇಲ್ಲಾ ಅಂತ ಯಾರು ಅಂದರು ? ನಾ ನಿನ್ನ ಜಮಾದಾಗ ಹಿಡಿದು ಮಾತಾಡಲಿಕ್ಕೆ ಹತ್ತೇನಿ. ಇತ್ತಲಾಗ ಆದರ, ಅತ್ತಲಾಗ ಉಪಚಾರ ಅಂದರ, ರಾಣೀಸಾಹೇಬರಿಗೆ ತೊಂದರಿ ಆಗತ್ತದ ಅಂತ !

ಹೆಂ :— ಅಂದರ ನಾ ಇನ್ನೂ ಸಣ್ಣ ಹುಡಿಗೀ ಅಂತ ತಿಳಕೊಂಡೀರೇನು ?

ರಾ : ಎಷ್ಟು ಲಗೂ ಹಿರೇತನ ಘಳಿಸಿಕೊಂಡು ಬಿಟ್ಟಿ...... ಅಂತೇನಿ. ಏನಂತ ಅನ್ನು, ಹೆಂಗಸರಿಗೆ ಹಿರೇತನ ಲಗೂ ಬರತದ ನೋಡು !

ಹೆಂ :— ನಮ್ಮದು ನಮಗ ಬೆನ್ನುಹತ್ತಿತೂ ಅಂದರ, ಎಲ್ಲಾ ಬರತದ !

ರಾ :— ಅಂತೂ ಅವ್ವನ ಆಗಮನದ ಠರಾವು ಬಿದ್ದುಹೋತು ಅನಬಾರದ ?

ಹೆಂ :— ನೀವು ಘಟ್ಟಿ ಇದ್ದರ, ನಾಯಾಕ ಬ್ಯಾಡಾ ಅನ್ನಲಿ ? ಒಂದು ಸ್ಪೆಶಲ್ ಮೋಟರ್ ಮಾಡಿಕೊಂಡು ಬಾ ಅನ್ನಿರಿ.

ರಾ :— ಹುಂ, ಈಗಿನ ಸೊಸೆಂದಿರಿಗೆ ಅತ್ತಿ ಅಂದರ ' ಆಟಂ ' ಬಾಂಬು ಇದ್ದಾಂಗ. ಅತ್ತಿಯು ' ಅರೈವಲ್ ' ಅಂದ ತಕ್ಷಣಾ, ಅಕ್ಕಸ ಶುರುವಾತು ಸೊಸಿಮುದ್ದಿಂದು.

ಹೆಂ :— ಅತ್ತೆವರು ಬರತಾರ! ಅಂದರ ನೀವು ಯಾರ ತಂದಿಯವರಿಗೆ ಪತ್ರಾ ಬರೀತೇನಿ ಅಂದಿರಿ ?

ರಾ :— ಯಾಕ ? ಪಾತಾಳಕ್ಕ ಇಳದೆಲ್ಲಾ ?

ಹೆಂ :— ಯಾವ ಸುಧಾನ ಬಗ್ಗೆ ಇಷ್ಟೆಲ್ಲಾ ಮಾತು ?

ರಾ :— ತಮಗ ಯಾವ ಸುಧಾ ಬೇಕಾಗಿತ್ತು ?

ಹೆಂ :— ನಿಮ್ಮ ತಂಗಿ ಸುಧಾನ ಸಲುವಾಗಿ ಏನು ಇಷ್ಟೆಲ್ಲಾ?

ರಾ :— ಅಂದರ, ನಿನ್ನ ತಂಗಿ ಸುಧಾನ್ನ ಸಲುವಾಗಿ ನಿನ್ನ ತಂದಿಗೆ ಪತ್ರಾ— ಅಂತ ತಿಳದಿದ್ದೇನು ?

ಹೆಂ :— ಹಾಂಗದರ ನಾ ಯಾಕ ಕೈಯೊಳಗಿನ ರೊಕ್ಕಾ ಕಳಕೊಂಡು ಕುಣಿಕುಣಿದು ಮಾಡತಿದ್ದೆ ?

ರಾ — ಅಂದರ !.... ಗಂಡನ ತಂಗಿ ಅಂದರ ಕಿಮ್ಮತ್ತು ಇಲ್ಲೇನು ?

ಹೆಂ :— ಕೇಳಿಕೀ ಮಾತಿನ ಮ್ಯಾಲ ಕುಣೀಬಾರದೂ ಅಂತಾರ ಸುಳ್ಳಲ್ಲ. ಗಂಡಸರ ಜಾತೀನ ಹಿಂಗ ! ಆತು, ಈ ಪಗಾರಕ್ಕ ನನ್ನ ಬಾಕೀ ಚುಕ್ತಾ ಮಾಡಿಬಿಡ್ರಿ !

(ಹೊರಗೆ ಸಾಯಕಲ್ ಗಂಟೆಯು ಸಪ್ಪಳ ಕೇಳಿ, ಕೋಟು ಹಾಕಿಕೊಳ್ಳುತ್ತ)

ರಾ :— ಅಸಲು ಕೊಡೋದು ಆಗದಿದ್ದರೂ ಬಡ್ಡೀ ಆದರೂ ಕೊಡತೇನಿ ಮಹಾರಾಯಳಕ ! ಲಗೂ ಬಾ ತಯಾರಾಗಿ ! ಸಭಾಕ್ಕ ಹೊತ್ತಾತು. ಆಕಿ ಹೊತ್ತು ಆದರ, ಟಾಂಗಾ ಮಾಡಿಕೊಂಡು ಬಾ ಎಲ್ಲಾ ಕೂಡಿಸೇ ಕೊಡತೇನಿ. (ಹೋಗುವನು.)

— ತೆರೆ —

ಸಾಹಿತ್ತಿಕರು ಮತ್ತು ಸಾಹಿತ್ಯ

(ಸಮ್ಮೇಳನದ ಅಧ್ಯಕ್ಷೀಯ ಭಾಷಣದಿಂದ)

ಶ್ರೀಮಾನ್ ಕೋಟ ಶಿವರಾಮ ಕಾರಂತರು, ಪುತ್ತೂರು

●

ಸಾಹಿತ್ಯಸೃಷ್ಟಿಯೆಂಬುದು ಕಾರ್ಖಾನೆಗಳಲ್ಲಿ ಉತ್ಪನ್ನಮಾಡುವಂತಹ ಸರಕು—ಸರಂಜಾಮು ಅಲ್ಲ. 'ಆರ್ಡರಿ'ಗೆ ತಕ್ಕಂತೆ, ಗಿರಾಕಿಗಳಿಗೆ ತಕ್ಕಂತೆ, ಗಿರಾಕಿಯ ಅಭಿರುಚಿಗೆ ಸಲುವಂತೆ, ಕಿಸೆಯ ಕಾಸಿಗೆ ಒಪ್ಪುವಂತೆ ಮಾರ್ಕೆಟ್ ಪರಿಸ್ಥಿತಿಯನ್ನು ಗಮನಿಸಿ ಮಾಡುವ ಉತ್ಪನ್ನವಲ್ಲ.

●

ಕನ್ನಡ ಭಾಷೆಯ ವಿವಿಧಕ್ಷೇತ್ರದಲ್ಲಿ ದುಡಿಯುತ್ತಿರುವ, ಸಾಹಿತಿಗಳಾದ ನಮ್ಮ ಹೊಣೆ, ಸಾಮಾನ್ಯಜನತೆಯ ಹೊಣೆಗಿಂತಲೂ ಹೆಚ್ಚಿನದೆಂದು ನಾನು ತಿಳಿಯುತ್ತೇನೆ. ನಾಡಿನ ಬರೆಹಗಾರ, ತಾನಾಗಿ ಬರೆಯುತ್ತಿರುವ ವ್ಯಕ್ತಿಯಾಗಿದ್ದರೂ, ತನ್ನ ಜನಗಳ ಸಲುವಾಗಿ ಆತ ಶ್ರಮಿಸಬೇಕು. ಅವರ ಬದುಕಿನ ಮೂಕಜೀವನಕ್ಕೆ ಅವನು ನಾಲಗೆಯಾಗಬೇಕು. ಅವರ ತಿಳಿವಿನ ಅಂಧಕಾರಕ್ಕೆ ಆತ ಬೆಳಕಾಗಬೇಕು. ಇವನ ಸಾಹಿತ್ಯ ಅವರ ಜೀವನದ ಚಿತ್ರಭಿತ್ತಿಯಾಗಬೇಕು. ಇವನ ಸೂಕ್ಷ್ಮ ಪ್ರೇರಣೆ, ಅವರ ಬದುಕಿಗೊಂದು ಧೈರ್ಯ, ಅರ್ಥ, ಸಮಾಧಾನ ಕೊಡಬಲ್ಲ ಅಮೃತವಾಗಬೇಕು. ಸಾಹಿತಿಯ ಹೊಣೆ ಸ್ವಲ್ಪವಲ್ಲ 'ನಾನೂ ಒಬ್ಬ ಸಾಹಿತಿ' ಎಂದು ನ್ಯೆಮರೆಯುವಷ್ಟು—ನ್ಯೆಮರೆತು ಸಮಾಜದಲ್ಲಿ ನವಿಲಿನಂತೆ ಕುಣಿದಾಡಿ ಆತ್ಮತೃಪ್ತಿ ತಂದುಕೊಳ್ಳುವಷ್ಟು— ಸುಲಭದ್ದಲ್ಲ.

ನಮ್ಮ ದೇಶಕ್ಕೆ ಪ್ರಜಾಪ್ರಭುತ್ವ ಬಂದಿರುವುದೇನೋ ನಿಜ. ಅದು ಬರುವ ಮುಂಚೆಯೂ ನಾವು ಬರೆಯುತ್ತಿದ್ದೆವು; ಇಂದೂ ಬರೆಯುತ್ತಿದ್ದೇವೆ; ನಾಳೆಯೂ ಬರೆಯುವವರೇ. ಯಾರಿಗೆ ಯಾರೂ 'ಬರೆಯಬೇಡಿ' ಎನ್ನುವ ಅಧಿಕಾರವೂ ಇಲ್ಲ. ಬರೆಯುವುದು ನಮ್ಮ ಸ್ವಾತಂತ್ರ್ಯ; ಜನ್ಮಸಿದ್ಧ ಹಕ್ಕು. ನಿಜ, ನಾವು ನಿರಂಕುಶ ಮತಿಗಳು; ನಿರಂಕುಶಪಾಣಿಗಳು. ಆದರೆ ನಾವು ಬರೆದುದೆಲ್ಲ ಸಾಹಿತ್ಯವಾಗುತ್ತದೆ, ಆಗಬೇಕು, ಅದನ್ನು ಜನ ಓದಬೇಕು, ಓದಿ ಮೆಚ್ಚಲೇಬೇಕು— ಎಂಬ ಚಪಲಮಾತ್ರ ಬೇಡ. ಆ ಬಯಕೆ ನಮ್ಮಲ್ಲಿದ್ದರೆ, ಆಗ ನಾವು ಓದುಗರನ್ನು ಆಶ್ರಯಿಸಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ. ನಮ್ಮ ಸ್ವಾತಂತ್ರ್ಯಕ್ಕೊಂದು ಮಿತಿ ಬಂತೇ ಬಂತು. ಆ ಜನರಿಗೆ ಓದದಿರುವ ಸ್ವಾತಂತ್ರ್ಯವಿದೆ! ಓದಿ ರೇಗುವ ಸ್ವಾತಂತ್ರ್ಯವಿದೆ! ಓದಿ ರೇಗಿ, ಉಗುಳುವ ಸ್ವಾತಂತ್ರ್ಯವೂ— ಇದೆ. ಓದಿ, ಓದಿದುದು ತಿಳಿಯದೆ ತೆಪ್ಪಗಿರುವ ಸ್ವಾತಂತ್ರ್ಯವೂ ಅವರಿಗಿದೆ. 'ಓದುಗ ಓದಲೇಬೇಕೆಂ'ಬ ಕಡ್ಡಾಯವಿಲ್ಲ. ಅದು ಹೇಗೆ ಬರಬೇಕು? ನಮ್ಮ ಇಂದಿನ ಹಲವು ಬದಲಾವಣೆಗಳೂ ಈ ತತ್ತ್ವವನ್ನು ಸಿದ್ಧಮಾಡಿ ತೋರಿಸುತ್ತವೆ ಹೊರಗಿನ ಅಂಕುಶ ನಮಗಿಲ್ಲದೆ ಹೋದರೂ, ಸದಸದ್ವಿವೇಕದೃಷ್ಟಿಯನ್ನು ನಾವಾಗಿ ಬೆಳಸಿಕೊಳ್ಳದೆ, ಅದರ ಅಂಕುಶಕ್ಕೆ ಒಳಗಾಗಿ ಸಾಹಿತ್ಯ ನಿರ್ಮಾಣ ಮಾಡದೆ ಹೋದಲ್ಲಿ, ಅದರಿಂದ ಕಸದ ಬುಟ್ಟಿಗಳು ತುಂಬಬಹುದೇ ಹೊರತು ಸಾಹಿತ್ಯವೂ ತುಂಬುವುದಿಲ್ಲ, ಬದುಕೂ ತುಂಬುವುದಿಲ್ಲ. ಅಂತಹ ಬರೆವಣಿಗೆಗಳಿಂದ ಬಚ್ಚಲು ಬೆಳಗಬಹುದೇ ಹೊರತು, ಬದುಕು ಬೆಳಗಲಾರದು.

ಸಾಹಿತ್ಯ ಮತ್ತು ಬದುಕು ಹತ್ತಿರ ಹತ್ತಿರ; ಅವು ಅವಳಿ ಜವಳಿ; ಒಂದರ ಉಸಿರು ಇನ್ನೊಂದರ ಉಸಿರು; ಒಂದರ ಜೀವ ಇನ್ನೊಂದರ ಜೀವ. ಬದುಕು ಪ್ರೇರಿಸದ ಸಾಹಿತ್ಯ ಬೊಬ್ಬಾಟ. ಬದುಕಿನಿಂದ, ಬದುಕಿನ ಅನುಭವದಿಂದ ಸ್ಫೂರ್ತಿ, ಸೊಗಸು ಶಕ್ತಿಗಳನ್ನು ಗಳಿಸದೆಯೇ ಸುರಿಸುವ ಮಾತಿನ ಮಳೆ, ಜನತೆಯ ಕಿವಿ–ಕಣ್ಣುಗಳಿಗೆ ಕೊಡುವ ಕರಕರೆ. ಸಾಹಿತ್ಯಸೃಷ್ಟಿಯೆಂಬುದು ಕಾರ್ಖಾನೆಗಳಲ್ಲಿ ಉತ್ಪನ್ನ ಮಾಡುವಂತಹ ಸರಕು, ಸರಂಜಾಮು ಅಲ್ಲ. 'ಆರ್ಡರಿ'ಗೆ ತಕ್ಕಂತೆ. ಗಿರಾಕಿಗಳಿಗೆ ತಕ್ಕಂತೆ, ಗಿರಾಕಿಯ ಅಭಿರುಚಿಗೆ ಸಲುವಂತೆ, ಕಿಸೆಯ ಕಾಸಿಗೆ ಒಪ್ಪುವಂತೆ— ಮಾರ್ಕೆಟ್ ಪರಿಸ್ಥಿತಿಯನ್ನು ಗಮನಿಸಿ ಮಾಡುವ ಉತ್ಪನ್ನವಲ್ಲ. ಸಾಹಿತ್ಯಸೃಷ್ಟಿ ಒಳ್ಳೆಯ ಬದುಕಿನ ಪ್ರತಿಫಲವಾಗಿ ಹುಟ್ಟಬಹುದಾದ ಸವಿಗೆನೆ. ಎಲ್ಲರಂತೆ ಸಾಹಿತಿಯಾದವನೂ ಜೀವನ ಮಾಡುತ್ತಾನೆ. ಕೆಲವರಂತೆ ಆತ ಈ ಜೀವನವನ್ನು ಆದಷ್ಟು ವಿಶಾಲವಾಗಿ, ಸೂಕ್ಷ್ಮವಾಗಿ ನೋಡಲು ಕಲಿಯುತ್ತಾನೆ. ಅದರಲ್ಲಿ ಅವನ ಪಾಲಿಗೆ ತಿಳಿಯುವುದೆಷ್ಟೋ, ತಿಳಿಯಲಾರದುದೆಷ್ಟೋ! ಜೀವನ ಎಂಬುದೇನು? ತನ್ನ ಅದರ ಸಂಬಂಧವೇನು–ಎಂದು ತಿಳಿಯಲು ಪ್ರಯತ್ನಿಸಿ, ಬಾಳಲು ಪ್ರಯತ್ನಿಸುವ ಜೀವನಸಂಗ್ರಾಮವು, ಅವನಿಗೆ ತಂದೊಡ್ಡುವ ವಿವಿಧ ಅನುಭವ, ಭಾವ, ಆವೇಶಗಳ ಫಲವಾಗಿ, ಸಾಹಿತ್ಯ–ಕಲೆಗಳು ಹುಟ್ಟುತ್ತವೆ. ತನ್ನ ಬದುಕಿನಲ್ಲೆಷ್ಟು ಅವನು ಪಾಲುಗಾರನೋ, ಇತರರ ಬದುಕಿನಲ್ಲೂ ಅಷ್ಟೇ ಪಾಲುಗಾರನಾಗುವಂತೆ ಸಾಹಿತಿಯೂ ಕಲಾವಿದನೂ ತನ್ನ ದೃಷ್ಟಿಯನ್ನು ವಿಶಾಲಿಸಬೇಕು ತನ್ನ ಅನುಕಂಪವನ್ನು ವಿಸ್ತಾರ-

ವಾಗಿ ಹರಡಬೇಕು 'ತನ್ನತನ'ವನ್ನು ಮರೆಯುತ್ತ ಬಂದು ಅನ್ಯರ ಕಣ್ಣನಗಳಿಂದಲೂ ನೋಡಲು, ತಿಳಿಯಲು ಪ್ರಯತ್ನಿಸಬೇಕು. ಈ ಪ್ರಯತ್ನ ದೊಡ್ಡ ಬದುಕಿನಿಂದ ಮಾತ್ರ ಸಾಧ್ಯವಾದುದು. ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗಲಾರದು ನಮ್ಮ ಅನುಕಂಪ ದೊಡ್ಡದಾಗದೆ, ಬದುಕಿನಲ್ಲಿ ಗೋಚರಿಸುವ— ಸರಸ ವಿರಸಗಳ, ಸುಖ–ದುಃಖಗಳ ಅರ್ಥ, ಬೆಲೆ ನಮಗೆ ಸಮನಾಗಿ ತಿಳಿಯಲಾರದು. ಅವನ್ನು ಸಮನಾಗಿ ತಿಳಿಯುವ ತನಕ ನಾವೂ ಚೆನ್ನಾಗಿ ಬೆಳೆಯಲಾರೆವು. ಬರಿಗಿಸೆಯ ಭಿಕಾರಿಯೊಬ್ಬ, ಇನ್ನೊಬ್ಬ ಭಿಕ್ಷುಕನಿಗೆ ಏನು ಕೊಡಬಲ್ಲ? ತನ್ನ ದೃಷ್ಟಿಯನ್ನು ಬೆಳೆಯಿಸಿಕೊಳ್ಳದ ಕುರುಡ, ಜಗತ್ತಿಗೆ ಹೇಗೆ ದಾರಿ ತೋರಿಸಬಲ್ಲ? ತಾನು ಕಲಿಯಬೇಕಾದುದನ್ನು ಕಲಿಯಲಾರದ ಶುಂಠ, ಪರರಿಗೆ ಏನು ಬೋಧನೆ ಕೊಡಬಲ್ಲ?— ಅಲ್ಲಿಯ ತನಕ ಅವನು ಕೊಡುವುದು ಶಬ್ದ, ವಾಕ್ಯ, ಪುಟಗಳೇ ಹೊರತು—ಸಾಹಿತ್ಯವನ್ನಲ್ಲ.

ನಮ್ಮಲ್ಲನೇಕರಿಗೆ ಆತ್ಮವಿಶ್ವಾಸ ಅತ್ಯಧಿಕ, ನಿಜ. ಈ ವಿಶ್ವಾಸವಿಲ್ಲದವನು ಬಾಳಲಾರ. ಪ್ರಪಂಚದ ಹೋರಾಟದಲ್ಲಿ ಅಂಜಿ, ಅಳುಕಿ ಕುಳಿತವನು ಹಿಂದೆಯೇ ಉಳಿಯುತ್ತಾನೆ. ಆದರೆ—ಮುಂದೆ ಓಡುವವನಿಗೆ, ತಾನು ಯಾಕೆ ಮುಂದೆ ಹೋಗುತ್ತೇನೆ, ಎಲ್ಲಿ ಹೋಗುತ್ತಿದ್ದೇನೆ—ಎಂಬುದರ ಅರಿವಿಲ್ಲದಿದ್ದರೆ, ಆತನ ನೂಕು–ನುಗ್ಗಲಿನ ಪ್ರಯೋಜನವಾದರೂ ಏನು? ನಿಜ, ಜೀವನದ ಸ್ಪರ್ಧೆಯಲ್ಲಿ ಆತ್ಮವಿಶ್ವಾಸ ಬೇಕೇ ಬೇಕು. ಸಾಹಿತಿಗೂ ಅದು ಬೇಕು. ಅದಿಲ್ಲದಿದ್ದರೆ ಅವನ ನಾಲಗೆ ನುಡಿಯಲಾರದು; ಲೇಖನಿ ಓಡಲಾರದು. ಅದು ಅವನಲ್ಲಿ ಇರಬೇಕಾದ ಒಂದು ಗುಣ. ಆದರೆ ಅದೇ ಸಾಹಿತ್ಯದ ಸರ್ವಾಧಾರವಲ್ಲ ಧೈರ್ಯದಿಂದ ಬರೆದುದೆಲ್ಲವೂ ಸಾಹಿತ್ಯವಾಗಲಾರದು

ನಮ್ಮ ಕಲ್ಪನೆ, ನಮ್ಮ ಅನುರಕ್ತಿ, ನಮ್ಮ ರಾಗ-ದ್ವೇಷ, ನಮ್ಮ ಮಾತುಗಾರಿಕೆ ಅಥವಾ ಬರೆಹಗಾರಿಕೆ— ಇವು ನಮ್ಮ ಸಾಹಿತ್ಯಜೀವನಕ್ಕೆ ನೆರವು ಕೊಡುತ್ತವೆ; ಪುಟ ಕೊಡುತ್ತವೆ. ಕಲ್ಪನಾಶಕ್ತಿಯಿಲ್ಲದವನು ಇತರರ ಮನಸ್ಸನ್ನು ಅಷ್ಟೊಂದು ಸಮರ್ಥವಾಗಿ ಕೆರಳಿಸಲಾರ; ಅರಳಿಸಲಾರ. ಆದರೆ ತನ್ನ ಕೊಠಡಿಯ, ತನ್ನ ಕುರ್ಚಿಯ ತನ್ನ ಊರಿನ, ತನ್ನ ಅಭಿನಂದಕರ ಗುಂಪಿನ ಮೇರೆಯಲ್ಲಿ ಅವ್ಯಾಹತವಾಗಿ ಹಾರಾಡುವ ಕಲ್ಪನಾವಿಲಾಸಕ್ಕೆ, ವೈಖರಿಗೆ ಅಷ್ಟೇ ಮಿತಿಯುಂಟು. ಅದು ಪ್ರೇರಿಸಬಲ್ಲ ಶಕ್ತಿ-ಉತ್ಸಾಹಗಳಿಗೂ ಆ ಮಿತಿಯುಂಟು. ಎಳೆಯರಿದ್ದಾಗ ನಾವೆಲ್ಲರೂ ಇಂತಹ ಅನೇಕ ಕಲ್ಪನಾವಿಲಾಸಗಳಲ್ಲಿ ಮೈಮರೆತು ಘಂಟೆ, ದಿನಗಳನ್ನು ಕಳೆದಿದ್ದೆವು. ನಮ್ಮ ಜೀವನ ಬೆಳೆದುಬಂದಂತೆ ಏನಾಯಿತು? ನಮ್ಮಷ್ಟೇ ಸ್ವಾರ್ಥಪರವಾದ ಅನೇಕ ಜೀವನಗಳು— ನಮಗೆದುರಾದುವು. ಬದುಕಿನ ಪ್ರಶ್ನೆಗಳು ಎದುರು ಬಂದುವು; ಕಷ್ಟ–ಕಾರ್ಪಣ್ಯಗಳಿಗೆ ಗುರಿಯಾದೆವು. ಒಂದು ಕಾಲದ ಕಲ್ಪನೆಯ ಹೂವಿನ ಹಾಸಿಗೆಯು ಕಲ್ಲು ಮುಳ್ಳುಗಳಿಂದ ತುಂಬಿದ ಕಠಿಣ ಮಾರ್ಗವಾಗಿ ಕಾಣಿಸತೊಡಗಲಿಲ್ಲವೆ? ದಾರಿಯ ಕಲ್ಲು ಮುಳ್ಳುಗಳನ್ನು 'ಪುಷ್ಪಸದೃಶ'ವಾಗಿ ಮನಸ್ಸಿನಲ್ಲಿ ತಿಳಿದುಕೊಂಡುದರಿಂದಲೇ ದಿನ ಸಾಗಲಾರದು, ಬದುಕು ನಡೆಯಲಾರದು. ಕಲ್ಪನಾಲೋಕಕ್ಕೂ ವಾಸ್ತವಬದುಕಿಗೂ ಇರುವ ಅಂತರ ಕಡಿಮೆಯಾಗದೆ ಹೋದರೆ, ನಾವು ಸುಖಸ್ವಪ್ನ ಕಥಾನಕಗಳನ್ನು ಹೇಳಬಲ್ಲೆವೇ ಹೊರತು ಬದುಕಿನ ಅರ್ಥವನ್ನು ತಿಳಿಯಲಾರೆವು; ಹೇಳಲಾರೆವು.

ನಾವು ದುಡಿಯುತ್ತಿರುವ ಕ್ಷೇತ್ರ ಗದ್ಯವಿರಲಿ, ಪದ್ಯವಿರಲಿ— ಅದು ಸಾಕಷ್ಟು ಆಳವಾದ ಬದುಕಿನ ಅನುಭವಗಳಿಂದ ಪ್ರೇರಣೆಗೊಳ್ಳದೆ ಹೊರಡುವ ಕಲ್ಪನಾವಿಲಾಸವಾದರೆ ಅದಕ್ಕೆಷ್ಟು ಬೆಲೆ? ಇಂದು ಕಾದಂಬರಿಗಳ ಮಹಾಪೂರವೇ ಕಾಣಿಸುತ್ತಿರುವ ಈ ಕಾಲದಲ್ಲಿ ನಾನು ಈ ಸಂಗತಿಯನ್ನು ಇನ್ನಷ್ಟು ಒತ್ತಿ ಹೇಳಿದರೂ ತಪ್ಪಿಲ್ಲ. ಕನ್ನಡದ ಮುನ್ನಡೆ ನಮ್ಮ ಜನಸಂಖ್ಯೆಯ ಮಾನದಿಂದ ಹೇಗೆ ಸಿದ್ಧವಾಗುವುದಿಲ್ಲವೋ ಪುಟ. ಪುಸ್ತಕಗಳ ಸಂಖ್ಯೆ, ಬೆಡಗಿನ ಶಿರೋನಾಮೆ, ರಕ್ಷಾಪತ್ರಗಳಿಂದಲೂ ಅದು ಸಿದ್ಧವಾಗುವುದಿಲ್ಲ. ತನ್ನ ಸತ್ತ್ವದಿಂದ, ಸತ್ಯದಿಂದ, ಸೌಂದರ್ಯದಿಂದ ಅದರ ಯೋಗ್ಯತೆ ನಿರ್ಮಾಣವಾಗಬೇಕು. ಆತ್ಮಪ್ರಶಂಸೆಯಿಂದಲ್ಲ; 'ಉಭಯಕುಶಲೋಪರಿ ಸಾಂಪ್ರತ'ದಿಂದಲ್ಲ.

ಮುಂಬಯಿಯಂತಹ ನಗರದಲ್ಲಿ ತಿರುಗಾಡಿದವನಿಗೆ, ಫ್ಲೋರಾಸ್ ರೋಡಿನಂತಹ ಕೆಲವೊಂದು ಬೀದಿಗಳು ನಮ್ಮ ಜನಜೀವನದ ನೀಚ ಮಟ್ಟವನ್ನು ಹೇಗೆ ತೋರಿಸುತ್ತವೆಯೋ, ಹಾಗೆಯೇ ಇಂದು ಪುಸ್ತಕದ ಅಂಗಡಿಗಳಲ್ಲಿ ಪ್ರದರ್ಶಿಸಲ್ಪಡುವ ಕಾದಂಬರಿ-ಕತೆಗಳೂ, ರಕ್ಷಾಪತ್ರಗಳೂ, ಬಣ್ಣದ ಚಿತ್ರಗಳೂ ಅದನ್ನೇ ಹೇಳುತ್ತಿವೆ ಇದನ್ನು ಕಂಡು, ಹೆಮ್ಮೆಪಡುವವರೂ ಇದ್ದಾರೆ. ಪಾಶ್ಚಾತ್ಯ ಮಹಾನುಭಾವರ 'ಶ್ಲೋಕ'ಗಳನ್ನು ಉದ್ಧರಿಸುವವರೂ ಇದ್ದಾರೆ. ಶ್ಲೀಲ–ಅಶ್ಲೀಲಗಳ ಮಹಾವ್ಯಾಖ್ಯೆಯನ್ನೇ ಬರೆಯುವವರಿದ್ದಾರೆ. ವ್ಯಭಿಚಾರದಿಂದಲೇ ಜೀವನಸಾಗಿಸುತ್ತಿರುವ ಒಬ್ಬಳಿಗೆ ನೀತಿಯ ಉಪದೇಶ ಹೇಗೆ ಅಪಥ್ಯವೋ, ಅಥವಾ ಹೇಗೆ ವ್ಯರ್ಥವೋ, ಹಾಗೆಯೇ ಇಂತಹ ಸ್ವಸಮರ್ಥನೆಗಳು.

ಬದುಕಿನಲ್ಲಿ ಗಂಡು–ಹೆಣ್ಣುಗಳ ಸಮಸ್ಯೆ ಅನಾದಿಯಿಂದಲೂ ಬಂದದ್ದು; ಬಹುಮುಖ್ಯವಾಗಿ ಬಂದದ್ದು. ಜೀವನದ ಬಹು ದೊಡ್ಡ ಭಾಗ ಅದರಲ್ಲಿಯೇ ಮುಳುಗಿ ತೇಲುತ್ತದೆ, ಸುಖ ದುಃಖಗಳಿಗೊಳಗಾಗುತ್ತದೆ ಎಂಬುದರಿಂದ—ಅಂತಹ ಬೃಹತ್ಪ್ರಶ್ನೆ ಎಲ್ಲಾ ದೇಶಗಳ ಎಲ್ಲಾ ಜನಗಳ ಸಾಹಿತ್ಯದಲ್ಲಿ ಪ್ರಧಾನವಸ್ತುವಾಗಿಯೇ ಕಾಣಿಸಿಕೊಂಡಿದೆ. ಬದುಕನ್ನು ಕೆಣಕುವ ಈ ಪ್ರಶ್ನೆಯು ಸಾಹಿತ್ಯಕ್ಕೆ ವಸ್ತುವಾಗದಿದ್ದರೆ ಇನ್ನಾವುದಕ್ಕಾಗಬೇಕು? ಈ ಲೈಂಗಿಕ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ನೀತಿಯ ಪ್ರಶ್ನೆಯೊಂದಿದೆ. ಇದು ಕಾಲಕಾಲಕ್ಕೆ, ಜನಜನಕ್ಕೆ ಮಾರ್ಪಟ್ಟಿದೆ. ಬೇರೆ ಬೇರೆ ಅರ್ಥಕೊಟ್ಟಿದೆ. ಸಾಹಿತಿಯಾದವನು 'ನೀತಿ, ಅನೀತಿ'ಗಳಿಗೆ ಅತೀತನಾಗಿ ನಿಂತು ನಿರೀಕ್ಷಿಸಿ ನೋಡಬೇಕಾದ ಪ್ರಶ್ನೆಯಿದು. ಕಲೆ ಮತ್ತು ಸಾಹಿತ್ಯಗಳ ನೋಟವೆಲ್ಲವೂ ಲೈಂಗಿಕ ಪ್ರಶ್ನೆಗಳಲ್ಲಿ ಮಾತ್ರವಲ್ಲ, ಪ್ರಪಂಚದ ಮನವನ್ನು

ಜಯಂ

ಕಣಕುವ ಎಲ್ಲ ಪ್ರಶ್ನೆಗಳಲ್ಲೂ ಈ ಬಗೆಯಿಂದಲೇ ನೋಡಬೇಕು. ಅತ ಪಕ್ಷಾನುವರ್ತಿಯಾಗಕೂಡದು. ಅದರಲ್ಲಿಯೂ ಲೈಂಗಿಕ ಪ್ರಶ್ನೆಗಳ ವಿಚಾರದಲ್ಲಿ. ಶೃಂಗಾರ, ಒಲುಮೆ, ಸ್ನೇಹಗಳ ವಿಚಾರದಲ್ಲಿ ಜನತೆ, ಹೇಳುತ್ತಿರುವ ಆದರ್ಶ ಒಂದು, ಸಾರುವ ನೀತಿಯೊಂದು, ನಡಸುತ್ತಿರುವ ಜೀವನ ಮತ್ತೊಂದು. ಈ ವಿಷಯದಲ್ಲಿ ಜನಗಳದು ಇಬ್ಬಗೆಯ ಬಾಳು. ಬಹುಕಾಲದಿಂದಲೂ ನಡೆದುಬಂದ ವಿಷಯವಿದು. ಅದನ್ನು ಕತ್ತರಿಸಿ. ಚುಚ್ಚಿ, ಎತ್ತಿತೋರಿಸಿ — ಸತ್ಯಕ
ಯುತ್ತೇವೆಂದು ನಮ್ಮ ಸಾಹಿತಿಗಳು ಹೇಳುತ್ತಾರೆ. ಸೋಜಿಗವೇನಿಲ್ಲ. ಆದರೆ ಈ ಸತ್ಯ ಎಷ್ಟು ವಿಸ್ತಾರಕ್ಕೆ ಹರಡಿ ಚೆಲ್ಲಿಬಿದ್ದಿದೆ; ಎಷ್ಟು ಮನೋಧರ್ಮಗಳ ಪರಿಪಾಕದಿಂದ ರೂಪಿತವಾಗಿದೆ; ಎಷ್ಟು ಕಟ್ಟಳೆಗಳ ಸೆರಗಿನಲ್ಲಿ ಸಿಕ್ಕಿಕೊಂಡಿದೆ—ಎಂಬುದನ್ನು ತಿಳಿಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ? ಅದರ ಒಂದೊಂದು ಸೆರಗೂ ಹಲವಾರು ಕನಸು, ಯಾತನೆ, ಸುಖ ದುಃಖಗಳನ್ನು ಕೆರಳಿಸಬಲ್ಲುದು. ನಮ್ಮ ಬರೆವಣಿಗೆಗಳಿಗೆ ಮನಃಶಾಸ್ತ್ರದ ಆಧಾರ ಹೇಳಿ—ಎಡ್ಲರ್, ಯುಂಗ್ ಫ್ರೋಯಿಡ್ ಇವರುಗಳು ತೋರಿಸುವ ಬೇತಾಳರೂಪವನ್ನು ಜನಕ್ಕೆ ತೋರಿಸಿ, ಜನಗಳನ್ನು ಬೆದರಿಸಬೇಕಾದರೂ ಏಕೆ? ಮನಃಶಾಸ್ತ್ರವೆಂಬುದು ಲೈಂಗಿಕವಿಚಾರದಲ್ಲಿ ಅಷ್ಟು ಸರಳವಾದ, ಸುಲಭವಾದ—ಶಾಸ್ತ್ರವೆಂದು ನಾನಂತೂ ತಿಳಿದಿಲ್ಲ. ಸ್ವತಃ ಗಂಡ-ಹೆಂಡಿರೇ ತಮ್ಮೊಂದು ಜೀವನದಲ್ಲಿ ದಾಂಪತ್ಯ ಕಾಮ, ಪ್ರೇಮಗಳ ಪ್ರಶ್ನೆಯನ್ನು ಸಹಜವಾಗಿ ಸರಳವಾಗಿ, ಸಂಕೋಚವಿಲ್ಲದೆ ಚರ್ಚಿಸಲು ಅಳುಕುತ್ತಿರುವಾಗ, ಅದರ ಸತ್ಯದ ಹಿನ್ನೆಲೆಯನ್ನು ತಿಳಿಯುವುದು ಕಷ್ಟವಾಗಿರುವಾಗ—ಒಬ್ಬ ಸೂಳೆಯ, ವ್ಯಯಾರಿಯ, ಬೀದಿಯ ಹುಡುಗಿಯ, ಪ್ರಮದೆಯ, ತಾಯಿಯ, ಮಗಳ ಅಥವಾ ಇಂತಹ ನೂರಾರು ವಿಭಿನ್ನ ಶೀಲಗಳುಳ್ಳ ಜೀವರುಗಳ ಮನಸ್ಸಿನ ತೆರೆಯಲ್ಲಿ ಮೂಡಿ ಮಾಯವಾಗುವ, ಬಹಿರಂಗದಲ್ಲಿ ಅವರವರಿಗೇ ಅದರ ನೆಲೆಯು ಗೊತ್ತು ಸಿಗದಂತೆ ನಲಿಯುತ್ತಿರುವ, ಅಷ್ಟು ಸುಲಭದಲ್ಲಿ ಪ್ರಕಟವಾಗದ, 'ಮನೋಧರ್ಮ'ವನ್ನು ತಿಳಿದು ಬರೆಯುತ್ತಿದ್ದೇನೆ ಎನ್ನುವುದು ಧಾರ್ಷ್ಟ್ಯದ ಮಾತು. ಈ ಮಾತು ಸಾಕಾಗದೆಂದೊ ಏನೊ, ನಮ್ಮಲ್ಲಿ ಕೆಲವರು ಈ ದಾರುಣ ಚಿತ್ರವೇನೆಂದು ತಿಳಿಯುವುದಕ್ಕಾಗಿಯೇ, ದುಡ್ಡು ತೆತ್ತು ಗಲ್ಲಿಯ ಗುಡಿಸಲುಗಳಿಗೆ ಹೋದವರುಂಟಂತೆ. ಅಂಥವರ ಅನ್ವೇಷಣೆಯ ಕಾರ್ಯ ಮುಗಿಯದ್ದರಿಂದ, ನಿತ್ಯವೂ ಹೋಗುತ್ತಲೇ ಇದ್ದಾರೆ—ಎಂದೂ ಕೇಳಿದ್ದೇನೆ. ಅಂಥವರಾದರೂ ಸರಿಯೇ—ತಮ್ಮ ಮಡದಿಯರೊಡನಾಗಲಿ, ಬೆಲೆಗೆ ಕೊಂಡ ಪ್ರೇಯಸಿಯರೊಡನಾಗಲಿ, ಈ ಲೈಂಗಿಕ ಮನಃಶಾಸ್ತ್ರವನ್ನು ಕುರಿತು ನೇರವಾಗಿ ಎಷ್ಟು ಚರ್ಚಿಸಿದ್ದಾರಂತ? ಮನಃಶಾಸ್ತ್ರದ ಏನೇನು ದಾಖಲೆಗಳನ್ನು ಸಂಗ್ರಹಿಸಿದ್ದಾರಂತೆ? ಜನಯಾರನ್ನು ಬೆದರಿಸುವುದಕ್ಕಾಗಿ ಮನಃಶಾಸ್ತ್ರದ ಬೆದರಿಕೆ ಹಾಕುತ್ತಾರೋ ನಾನು ಬೇರೆ ಕಾಣೆ.

ಸಾಹಿತ್ಯದಲ್ಲಿ ರುಚಿ ಹೇಗೆ ಬೇಕೋ, ಹಾಗೆ ಶುಚಿಯೂ ಬೇಕು. ಕಪ್ಪು, ಮರೆಯಲ್ಲಿ, ತಮ್ಮವರಿಂದ ಅಡಗಿ ಕುಳಿತು ಓದುವ ಸಾಹಿತ್ಯ, ರುಚಿಯಾದ ಸಾಹಿತ್ಯವಾಗಿರಬಹುದು. ಅದಂತೂ ಶುಚಿಯಾದ ಸಾಹಿತ್ಯದ ಲಕ್ಷಣವಲ್ಲ.

ಸಾಹಿತಿಯಾದವನು 'ನೀತಿ-ಅನೀತಿ'ಗಳನ್ನು ಮೀರಿದ ದೃಷ್ಟಿಯುಳ್ಳವನಾಗಬೇಕು ಎಂದೆ. ಈ ಅತೀತವರ್ತನೆ ಅಷ್ಟು ಸುಲಭವಲ್ಲ. ಬೇರಿಬ್ಬರ ಜಗಳದಲ್ಲಿ ನಾವು ಪಕ್ಷಾತೀತರಾಗಬಹುದು; ಆದರೆ ನಮ್ಮ ಬದುಕಿನಲ್ಲೇ ಲೈಂಗಿಕ ಅನುರಾಗಗಳಿವೆ. ಇತರ ಅನುರಾಗಗಳಿವೆ; ಸೆಳೆವುಗಳಿವೆ; ಭಯಗಳಿವೆ; ಆಸೆಗಳಿವೆ. ಜೀವನವನ್ನು ಕೆಣಕುವ ಇತರ ಅನೇಕ ಸಮಸ್ಯೆಗಳಿವೆ. ಇದರಿಂದಾಗಿ ನಾವು ನಮ್ಮ ಪಾಲಿಗೆ ಉದಾರಿಗಳಾಗಿ, ನಮ್ಮ ದೃಷ್ಟಿಗೆ, ತಪ್ಪುಗಳಿಗೆ ಕ್ಷಮೆನೀಡಿ, ಲೋಕದ ತಪ್ಪು-ಒಪ್ಪುಗಳ ತೀರ್ಮಾನಕ್ಕೆ ಹೊರಡುವ ಸಂಭವ ಹೆಚ್ಚಾಗಿದೆ. ತಮ್ಮ ಸಾಹಿತ್ಯದಿಂದ ಲೋಕವನ್ನು ಉದ್ಧರಿಸಲು ಹೊರಡುವ ಮಹಾನುಭಾವರಲ್ಲಿ ಇಂತಹ ಗುಣ ಇನ್ನೂ ಹೆಚ್ಚು.

ನಮ್ಮ ಬರೆವಣಿಗೆ. ಸಾಹಿತ್ಯ ಇತರರಿಗೆ ಒಂದಲ್ಲ ಒಂದು ವಿಧದಿಂದ ತಿಳಿವು, ನೆಮ್ಮದಿ, ಸುಖ ಸಮಾಧಾನಗಳನ್ನು ತಂದು ಕೊಡಬೇಕಾದರೆ, ವಿರಸದಿಂದಾಗುವ ದುಃಖವನ್ನು ತಪ್ಪಿಸಬೇಕಾದರೆ, ಸರಸದಿಂದಾಗುವ ಸುಖ ಹೆಚ್ಚಿಸಬೇಕಾದರೆ—ಮೊದಲಿಗೆ ಅವು ನಮ್ಮ ಬದುಕನ್ನೇ ಬೆಳಗಿಸಿರಬೇಕಲ್ಲವೆ? ನಮ್ಮ ದೃಷ್ಟಿಯನ್ನು ವಿಶಾಲಿಸುವಂತೆ ಮಾಡಿರಬೇಕಲ್ಲವೆ? ತನಗಲ್ಲದ ಉಪದೇಶ ಪರರಿಗೇನು?

ಒಟ್ಟಿನಲ್ಲಿ ಹೇಳುವಲ್ಲಿ ನಾವು ಬೆಳೆಯದೆ ದೊಡ್ಡವರಾಗದೆಯೆ—ನಮ್ಮ ನುಡಿ ಇಲ್ಲವೆ ಸಾಹಿತ್ಯ. ದೊಡ್ಡದಾದೀತು, ಬೆಳೆದೀತು, ಎಂದು ನಾನು ನಂಬುವುದಿಲ್ಲ

ಇನ್ನು ಕನ್ನಡ ಭಾಷೆಯ ಮೂಲಕ ನಾವು ಜನಕ್ಕೆ ಸಲ್ಲಿಸಬಹುದಾದ—ಇತರ ಸೇವೆಗಳನ್ನು ಕುರಿತು ನಾಲ್ಕು ಮಾತು ಹೇಳುತ್ತೇನೆ. ಅದಕ್ಕಿಂತ ಮುಂಚಿತವಾಗಿ ನಮ್ಮ ಕನ್ನಡ ಜನಗಳನ್ನು, ನಾವು ಗುರುತಿಸಬೇಕಾಗಿದೆ ಅವರ ಆಡುಭಾಷೆ ಒಂದೊಂದೂ ಒಂದು ತೆರನಾಗಿದೆ. ಪ್ರಪಂಚದ ಎಲ್ಲ ದೊಡ್ಡ ಭಾಷೆಗಳ ಗತಿಯೂ ಹೀಗೇನೆ. ಆದರೆ, ನಾವು ಬರೆಯುವುದು ಜನಕ್ಕೆ ತಿಳಿಯಬೇಕಾದಲ್ಲಿ—ನಾವು ಭಾಷೆಯ ಏಕರೂಪತೆಗೆ ಗಮನ ಕೊಡಬೇಕಾಗುತ್ತದೆ. ಇಂದು ಮೈಸೂರು ಕನ್ನಡ, ಧಾರವಾಡ ಕನ್ನಡ—ಎಂದು ಹೇಳುವ ಸಂಪ್ರದಾಯ ನಮ್ಮ ಬರೆವಣಿಗೆಯಿಂದಾಗಿ ಬಂದು ಬಿಟ್ಟಿದೆ. ನಮ್ಮದು ಅಷ್ಟೊಂದು ದೊಡ್ಡ ದೇಶವಲ್ಲ; ಆದರೂ ಒಂದು ಕಡೆಯ ಜನ, ಇನ್ನೊಂದು ಕಡೆಯವರು ಬರೆದ ಪುಸ್ತಕಗಳನ್ನು, ಪತ್ರಿಕೆಗಳನ್ನು, ಓದಿ ತಿಳಿಯುವುದಕ್ಕೆ ಕಷ್ಟವಾಗಿ ಬಂದಲ್ಲಿ, ಆಗ ಬರೆಹಗಾರರಾದ ನಾವೇ ನಮ್ಮ ಮಾತಿನ ವಿಸ್ತಾರಕ್ಕೆ, ಅಡಚಣೆ ತಂದುಕೊಳ್ಳುತ್ತೇವೆ. ಅಲ್ಲಲ್ಲಿನ ಸ್ಥಳಿಕ ಗ್ರಾಮ್ಯಪದಗಳನ್ನು ಹಟದಿಂದ, ಪುಸ್ತಕಗಳಲ್ಲಿ ತುಂಬಿಸುವ ಪ್ರಯತ್ನದಿಂದ, ಯಾವ ದೇವರಿಗೆ ಪ್ರೀತಿಯೋ ನಾನು ಕಾಣೆ. ಬ್ರಿಟಿಷರಿಂದ ಬಂದ ಪ್ರಾಂತದ ಅಡ್ಡಗೋಡೆಗಳನ್ನು ಮುರಿಯಬೇಕು—ಅನ್ನುತ್ತಿರುವ ನಾವು, ಇನ್ನೊಂದು ದಾರಿಯಿಂದ ಅದನ್ನು ಏರಿಸುತ್ತ ಹೋದರೆ ಹೇಗೆ? ಯಾವೊಂದು ವಿಷಯದಲ್ಲೂ ನಮ್ಮಲ್ಲಿ—ಗ್ರಂಥ,

ಪುಸ್ತಕ, ಲೇಖನ, ಪತ್ರಿಕೆಗಳ ಬಾಹುಳ್ಯವಿಲ್ಲ ಇರುವುದನ್ನು ಎಲ್ಲ ಭಾಗದ ಕನ್ನಡಿಗರೂ ಓದಬಾರದೆ? ನಮ್ಮ ಸ್ಥಳಿಕ ಅಭಿಮಾನವನ್ನು ಬದಿಗಿರಿಸಿ, ಎಲ್ಲ ಕನ್ನಡಿಗರಿಗೂ ಅರ್ಥವಾಗುವ ರೀತಿಯಲ್ಲಿ ಸಾಮಾನ್ಯವಾದ ಒಂದು ಭಾಷೆಯ ರೂಪ ಬೆಳೆಯುವಂತೆ ನಾವು ಮಾಡಬೇಡವೆ? ಪರಿಷತ್ತಿನಂತಹ ಒಂದು ಸಂಸ್ಥೆ– ಇಂತಹ ವಿಷಯದಲ್ಲಿ ಹೊಣೆಯನ್ನು ಹೊತ್ತು, ಮುಂದೆ ಬರಬೇಕಾಗಿದೆ.

ಇವೊತ್ತಿನ ದಿನ, ಜನಗಳಲ್ಲಿ ವಾಚನಾಭಿರುಚಿ ಹೆಚ್ಚಾಗಿ ಬೆಳೆದಿಲ್ಲ, ಅಥವಾ ಸಾಕಷ್ಟು ಬೆಳೆದಿಲ್ಲ—ಎಂಬುದು ನಾವೆಲ್ಲರೂ ಒಪ್ಪುವ ಮಾತು. ನಮ್ಮಲ್ಲಿ ಓದು-ಬರೆಹ ಕಲಿತವರ ಸಂಖ್ಯೆ ಕಡಿಮೆ (ನೇಕಡಾ ೧೫ ರಷ್ಟು) ಎಂಬುದು ನಿಜ. ಜನಗಳಲ್ಲಿ ವಾಚನಾಭಿರುಚಿ ಬೆಳೆಯುವುದಕ್ಕೆ ನಾವು ಏನು ಪ್ರಯತ್ನ ಮಾಡುತ್ತಿದ್ದೇವೆ; ಅದು ಪರಿಣಾಮಕಾರಿಯಾಗಿದೆಯೆ—ಎಂಬುದನ್ನು ಕುರಿತು ವಿಚಾರ ಮಾಡಬೇಕು. ನಮ್ಮ ಹೆಚ್ಚಿನ ಬರೆವಣಿಗೆಗಳು ಅಪ್ರಬುದ್ಧತೆಯ ಪ್ರದರ್ಶನವಾಗಿ ಕಾಣಿಸುತ್ತವೆಯಾದರೂ, ನಾವು ಬರೆಯುತ್ತಿರುವುದೆನೋ ಪ್ರಬುದ್ಧರಿಗಾಗಿ. ಆ ಪ್ರಬುದ್ಧಾವಸ್ಥೆ ಬರುವ ತನಕ, ಎಂದರೆ ಐದಾರು ವರ್ಷಗಳಿಂದ ತೊಡಗಿ, ಸುಮಾರು ಇಪ್ಪತ್ತು ವರ್ಷ ಪ್ರಾಯ ಆಗುವ ತನಕ, ನಮ್ಮ ಜನರು ಏನನ್ನು ಓದಬೇಕು? ಹತ್ತು ಹದಿನೆರಡು ವಯಸ್ಸಿನ ಬಾಲಕರು ಕೂಡ ಶಾಲೆಯ ವಾಚನಾಲಯಗಳಿಂದ 'ರಮೇಶ-ಲಲಿತೆಯರ ಪ್ರಣಯ' ಕಥಾನಕವನ್ನೇ ಕೊಂಡು ಓದಬೇಕಲ್ಲದೆ, ಅಲ್ಲಿ ಬೇರೇನಿದೆ? ಶಿಶುಸಾಹಿತ್ಯವೆಷ್ಟಿದೆ? ಮಕ್ಕಳ ಸಾಹಿತ್ಯದಲ್ಲಿ ಭೇತಾಳ, ಬ್ರಹ್ಮರಾಕ್ಷಸ, ಇವರುಗಳೆಲ್ಲ ತುಂಬಿದ್ದರೆ ಸಾಕೆ? ಬೇರೇನೂ ವಿಷಯ, ವೈವಿಧ್ಯಗಳು ಬೇಡವೆ? ಪ್ರಪಂಚವನ್ನು ಕುರಿತು ಅವರಲ್ಲಿ ಆಸಕ್ತಿ, ಅಭಿರುಚಿ ಬೆಳೆಯುವುದಕ್ಕೆ, ಅವರ ಮನಸ್ಸು ಅರಳುವುದಕ್ಕೆ, ಅವರಿಗೆ ಪ್ರಿಯವಾದ ಪ್ರಪಂಚದಲ್ಲಿ ಆಸಕ್ತಿ ಹುಟ್ಟುವುದಕ್ಕೆ— ತಕ್ಕ ಪುಸ್ತಕಗಳಿವೆಯೆ? ಇರುವುವುಗಳ ಅಂದ ಚೆಂದವಾದರೂ ಏನು?

ತಾರುಣ್ಯದಲ್ಲಿ ಕಾಲಿರಿಸುತ್ತಿರುವ ಹುಡುಗ–ಹುಡುಗಿಯರ ಮನಸನ್ನರಳಿಸುವ ಯಾವ ಕಥೆಗಳುಂಟು? ಯಾವ ಬಣ್ಣನೆಗಳುಂಟು? ವೈಜ್ಞಾನಿಕ ಕುತೂಹಲ ಕೆರಳಬಲ್ಲ ಯಾವ ಬರೆಹವುಂಟು? ನಮ್ಮ ಅಬಾಲವೃದ್ಧರೆಲ್ಲರೂ ಚಂದಮಾಮದ ಕಥೆಗಳಿಂದ ರಮೇಶ–ಲಲಿತೆಯರ ಕನಸಿನ ಪ್ರಣಯಗಳಿಂದ, ತಮ್ಮ ಹೃದಯ ಮನಸ್ಸುಗಳೆರಡನ್ನೂ ತುಂಬಿಸಿಕೊಂಡು ಬೆಳೆಯಬೇಕಾದಲ್ಲಿ, ಅಗ ಹೇಗೆ ಬೆಳೆದಾರು? ನಾವು ವಾಚನಾಭಿರುಚಿಯನ್ನು ಬೆಳೆಯಿಸಬೇಕಾದ ಈ ಪ್ರಾಮುಖ್ಯ ವಯಸ್ಸಿನಲ್ಲಿಯೇ ಅವರಿಗೆ ತಕ್ಕ ಆಹಾರವನ್ನು ಒದಗಿಸದೆ ಹೋದರೆ, ಅದು ಹೇಗೆ ತಾನೆ ಬೆಳೆದೀತು?

ಇಂದು ನಮ್ಮ ಜನರು ಪ್ರಬಂಧ ಓದುತ್ತಲಿಲ್ಲ; ಅವರಿಗೆ ಕವನ, ಕಾವ್ಯಗಳು ಬೇಡ; ಜ್ಞಾನಸಾಹಿತ್ಯದಲ್ಲಿ ಅವರಿಗೆ ಅಭಿರುಚಿಯಿಲ್ಲ. ಓದುವ ಕೆಲವರು ಬರಿದೆ— ಕತೆ, ಕಾದಂಬರಿ ಓದುತ್ತಾರೆ. ಕತೆ ಕಾದಂಬರಿಗಳನ್ನೇಕೆ ಓದುತ್ತಾರೆಂದರೆ— ಅದರಿಂದ ಮನಸ್ಸು ಸಂಸ್ಕಾರಗೊಳ್ಳುತ್ತದೆ ಎಂಬ ಕುರುಡುನಂಬಿಕೆಯಿಂದಲ್ಲ. ಅವರಿಗೆ ಕತೆ ಬೇಕು, ಬರಿಯ ಕತೆ ಬೇಕು. 'ಶೀಲ ನಿರೂಪಣೆ' 'ಭಾವವಿಸ್ತರಣೆ' ಇದೊಂದೂ ಬೇಡ. ಅದಕ್ಕೆ ತಕ್ಕಂತೆ— ನಾವು ಸಹ "ಅಜಗೂಳಜ್ಜಿ ಮೊಮ್ಮಕ್ಕಳಲ್ಲಿ ಎಳೆತನದಲ್ಲಿ ಕೆರಳಿದ, ಕತೆ ಕೇಳುವ ಈ ಆಸೆಯನ್ನು ಪೂರೈಸಿಬಿಟ್ಟೆವೆಂದರೆ, ಮಹಾ ಸಾಹಿತಿಗಳಾದೆವೆಂದು ತಿಳಿಯುವಷ್ಟು ಕೆಳಮಟ್ಟಕ್ಕೆ ಬರುತ್ತಿದ್ದೇವೆ. ಎಷ್ಟೊ ಪುಟ ತುಂಬಿಸುವ, ಎಷ್ಟೊ ಗಾತ್ರದ ಕತೆಗಳನ್ನು ವಾರಕ್ಕೊಂದರಂತೆ ಬೇಕಾದರೂ ಹಣೆದು ಚೆಲ್ಲಿಬಿಡುತ್ತೇವೆ. ಇದನ್ನೇ ನಾವು 'ಸಾಹಿತ್ಯ'ವೆನ್ನುವುದಾದರೆ, ಅದನ್ನು ಓದದಿರುವ ಜನಗಳಿಗೆ ಯಾವ ನಷ್ಟವೂ ಬರಲಾರದೆಂದು ನಾನು ತಿಳಿಯುತ್ತೇನೆ.

ಇಂದು ಸಾಹಿತ್ಯಕ್ಷೇತ್ರದಲ್ಲಿ ವಿವಿಧ ಪ್ರಯೋಗಗಳು ನಡೆಯುತ್ತಿರುವುದು ನಿಜ; ಅದು ಜೀವಂತ ಸಾಹಿತ್ಯದ ಒಂದು ಗುಣ. ಆದರೆ– ತಂತ್ರ, ಶೈಲಿ, ಪ್ರಕಾರಗಳ ಸಾಫಲ್ಯ ಅವುಗಳ ಕೆಲಸದಲ್ಲಿ. ಅವುಗಳು ಸಾಹಿತಿಯ ಕಲ್ಪನೆ, ಭಾವನೆ, ಆದೇಶಗಳನ್ನು ಓದುಗನ ಹೃದಯ ಮನಸ್ಸುಗಳಿಗೆ ಮುಟ್ಟಿಸಲು ಬೇಕಾದ ಶಕ್ತಿಯನ್ನು ತಳೆಯುವುದರಲ್ಲಿ. ಈ ಶಕ್ತಿ, ಚೈತನ್ಯ ಅವನ ಹೃದಯದಲ್ಲಿ ಮೊದಲು ಹುಟ್ಟಿರಬೇಕು; ಮಾತಿನ ಗುಡುಗು, ತಂತ್ರದ ವೈಚಿತ್ರ್ಯ—ಹೃದಯಸ್ಫೂರ್ತಿಯ ಪ್ರತೀಕವಾಗಿರಬೇಕಿಲ್ಲ! ಅದು ಸಹಜವಾಗಿದ್ದರೆ, ಇದು ತನ್ನಂತೆಯೇ ಶಕ್ತಿಯುತವಾಗುತ್ತದೆ. ಆಗ ಪರರ ಹೃದಯವನ್ನು ಪ್ರವೇಶಿಸುವ ಶಕ್ತಿ ಇದಕ್ಕೆ ಬರುತ್ತದೆ. ಇಲ್ಲದೆ ಹೋದರೆ ಕಾವ್ಯ, ಕವನ— ಚೀರಾಟವಾಗುತ್ತದೆ; ಪ್ರೇತಗೀತವಾಗುತ್ತದೆ!

ಹೊಲಿಗೆಯ ಪುಸ್ತಕಗಳು

ಹೊಲಿಗೆಯ ಅತ್ಯಾಧುನಿಕ ಜ್ಞಾನಕೊಡುವ ಪುಸ್ತಕಗಳನ್ನು ಇಂದೇ ತರಿಸಿಕೊಂಡು ನಿಮ್ಮ ಉದ್ಯೋಗ ಬೆಳೆಸಿಕೊಳ್ಳಿರಿ.

೧. ಮನೆಯಲ್ಲಿ ಹೊಲಿಗೆ — ೧-೮-೦
(ಮಕ್ಕಳ, ಮಹಿಳೆಯರ ಉಡುಪುಗಳು)

೨. ಸೂಚಿ ಶಿಲ್ಪಕಲೆ (ಭಾಗ ೨) — ೨-೦-೦
(ಕೋಟು, ಪ್ಯಾಂಟು, ಶೇರವಾನಿ ಮುಂ.)

೩. ಕಟಿಂಗ್ (ಕನ್ನಡ) ಮುಂಬೈಪ್ರಕಟನೆ. — ೪-೮-೦
(ಮಕ್ಕಳ, ಮಹಿಳೆಯರ ಫ್ಯಾಶನೆಬಲ್ ಬಟ್ಟೆಗಳು.)

೪. ಕಸೂತಿಕಲೆ (೨ ಭಾಗಗಳು ಕೂಡಿ) — ೨-೮-೦
(ಕೈ, ಹಾಗೂ ಯಂತ್ರದ ಕಸೂತಿ)

ವಿವರಕ್ಕೆ :— **ಹಳಪೇಟೆ ಮತ್ತು ಕಂಪನಿ**
ಗಾಂಧೀಚೌಕ, ಧಾರವಾಡ

ಮುಕ್ತಿ!!

(ಒಂದು ಚಿಕ್ಕ ಕತೆ)

ಶ್ರೀ. ಎಚ್. ಎಸ್. ದೇಶಪಾಂಡೆ ಬಿ. ಎ. (ಆನರ್ಸ್)
ಎಲ್ ಎಲ್. ಬಿ. ಮುಂಬಯಿ

卐

ಹೆಣ್ಣುತನ, ಪರದಾಸ್ಯ, ಪಾವಿತ್ರ್ಯಪ್ರೀತಿ ಒಂದೆ ಎಡೆಯಲ್ಲಿ ಇರಬಲ್ಲವೆ? ಸೈರಂಧ್ರಿಯಾದ ದ್ರೌಪದಿಯನ್ನು ಬಯಸಿದ ಕೀಚಕನನ್ನು, ಆಕೆಯ ಬಲ್ಲಿದನಾದ ವಲ್ಲಭ ಭೀಮಸೇನ ಕೊಂದುಹಾಕಿದ. ಪಾಪ, ನಿರಾಶ್ರಿತ ಅಬಲೆಯಾದ ಮಿಶ್ರಾಣಿ, ಸಮಾಜದಲ್ಲಿಯ ಕೀಚಕವೃತ್ತಿಗಾಗಿ ತನ್ನನ್ನು ತಾನೇ ಕೊಂದುಕೊಂಡಳು.—

卐

ಅಹುದು, ಎಲ್ಲೆಡೆಯಲ್ಲಿಯೂ ನಿರಾಶ್ರಿತರೇ. ಮುಂಬಯಿಯಲ್ಲಿ ನಿರಾಶ್ರಿತರೆಂದು ಬಂದವರಲ್ಲಿ ಬಡವರೂ ಇದ್ದರು; ಶ್ರೀಮಂತರೂ ಇದ್ದರು. ಅವರ ದೊಡ್ಡ ದೊಡ್ಡ ಅಂಗಡಿಗಳನ್ನು ಕಂಡಾಗ, ಜನ ಅವರನ್ನು ನಿರಾಶ್ರಿತರೆಂದು ಅನ್ನಲು ಕೂಡ ಹಿಂಜರಿಯುತ್ತಿತ್ತು. ಅವರಲ್ಲಿಯೂ ಕೆಲವೊಂದು ಜನರು ದಾರಿದ್ರ್ಯಕ್ಕೊಳಗಾದವರು ಇದ್ದಂತೆ ಕಾಣುತ್ತಿತ್ತು. ನಿರಾಶ್ರಿತರಾಗಿ ಬಂದವರಲ್ಲಿ ಮಿಶ್ರಾಣಿಯೊಬ್ಬಳು. ಅಲ್ಲಿ ಇಲ್ಲಿ ಅಲೆದಲೆದು ಮುಂಬಯಿಗೆ ಬಂದು, ಇಲ್ಲಿಯೂ ಯಾವುದೆ ಆಶ್ರಯಕಾಣದೆ, ಹಾಗೆಯೇ ತಿರುಗುತ್ತಿದ್ದಳು.

ಮಿಶ್ರಾಣಿ ದೊಡ್ಡಮನೆತನದಲ್ಲಿ ಹುಟ್ಟಿ ಬೆಳೆದವಳು. ಮನೆಯಲ್ಲಿ ಆಳುಮಕ್ಕಳು. ಪ್ರತಿಯೊಂದು ಕೆಲಸಕ್ಕೂ ಆಳುಗಳ ಸಹಾಯ. ತಂದೆ ದೊಡ್ಡ ವಕೀಲರು. ಶ್ರೀಮಂತಿಕೆಯಲ್ಲಿ ಬೆಳೆದದ್ದರಿಂದ ಅವಳಿಗೆ ಕಷ್ಟದ ದಿನಗಳು ಗೊತ್ತಿರಲಿಲ್ಲ; ಆದರೆ ಇಂದು ಮಿಶ್ರಾಣಿಯನ್ನು ನೋಡಿದ್ದರೆ ಕನಿಕರ ಬರುವಂತಿತ್ತು. ತಾಯಿಯೆಲ್ಲಿಯೋ ತಂದೆ ಎಲ್ಲಿಯೋ ಗೊತ್ತಿರಲಿಲ್ಲ. ಅವರಾದರೂ ತಮ್ಮ ಮಗಳು ಸತ್ತಿರಬಹುದೆಂದು ತಿಳಿದಿರಬಹುದು.

ಮುಂಬಯಿಯ ಬೀದಿಯಲ್ಲಿ ತಿರುಗಾಡುವ ಜನಕ್ಕೆ ಲೆಕ್ಕವಿಲ್ಲ, ಎಣಿಕೆಯಿಲ್ಲ. ಆದರೆ ಹೆಣ್ಣುಜೀವ ತಿರುಗಾಡುತ್ತಿದ್ದರೆ, ಮುದುಕರು ಕೂಡ ಕನ್ನಡಕ ತೆಗೆದು ನೋಡುವ ಸಂಭವ ವಿಶೇಷ. ಆದರಲ್ಲಿಯೂ ಮಿಶ್ರಾಣಿಯಂತಹ ಹದಿನೇಳು ವರ್ಷ ವಯಸ್ಸಿನ ಸುಂದರ ಬಾಲಿಕೆಯನ್ನು ಕಂಡರೆ, ಸಾಮಾನ್ಯವಾಗಿ ಯಾರೂ ನೋಡದೆ ಹೋಗುತ್ತಿರಲಿಲ್ಲ. ಮಿಶ್ರಾಣಿಗೆ ಮಾತ್ರ ಯಾರ ಕಡೆಗೂ ಲಕ್ಷ್ಯವಿರಲಿಲ್ಲ. ಆಕೆ ಸಾವಕಾಶವಾಗಿ ನಡೆಯುತ್ತ ಫರಾಸ್ ರೋಡಿಗೆ ಬಂದಿದ್ದಳೆಂಬುದು, ಅವಳಿಗೆ ಗೊತ್ತಿರಲಿಲ್ಲ. ಹೇಗೆ ಗೊತ್ತಾಗಬೇಕು? ಅಲ್ಲಿ ಒಂದೊಂದು ಕೋಣೆಯಲ್ಲಿ ಒಬ್ಬೊಬ್ಬರೇ ಹೆಣ್ಣುಮಕ್ಕಳು ನಗುಮುಖದಿಂದ ನಿಂತಿದ್ದುದನ್ನು ಕಂಡು, ಅವಳಿಗೆ ಆನಂದವೆನಿಸಿತು. ತನ್ನ ಜೀವನಕ್ಕೂ ಅವರ ಜೀವನಕ್ಕೂ ಎಷ್ಟೊಂದು ಅಂತರವಿದೆಯೆಂದು ಅವಳಿಗೆನಿಸಿತು. ಇದೆಲ್ಲವನ್ನೂ ಕಂಡು ಮುಂದೆ ಸಾಗುವುದರಲ್ಲಿದ್ದಳು; ಅಷ್ಟರಲ್ಲಿಯೆ ಯಾವಳೋ ಹೆಣ್ಣುಮಗಳು—ಅವಳ ತಾಯಿಯಷ್ಟು ವಯಸ್ಸಿನವಳಿರಬಹುದು—"ಯಾರವ್ವಾ ನೀನು? ಇಲ್ಲಿ ಬಂದಿರುವಿ?" ಎಂದು ಕೇಳಿದಳು. ಅವಳ ನುಡಿಯಲ್ಲಿ ಅಂತಃಕರಣ ಹಾಗೂ ಕೋಮಲತೆ ಇದ್ದಂತೆ ಕಾಣುತ್ತಿತ್ತು. ಮಿಶ್ರಾಣಿಗೆ ಯಾವುದೋ ಒಂದು—ಅವ್ಯಕ್ತ—ಆಶ್ರಯದ ಆಶೆ ಕಾಣತೊಡಗಿತು. ಆದುದರಿಂದಲೇ ಅವಳು ಸಣ್ಣ ಧ್ವನಿಯಲ್ಲಿ "ತಾಯೀ, ನನಗಾರೂ ಇಲ್ಲ. ನಾನೊಬ್ಬ ನಿರಾಶ್ರಿತಳು. ಹೀಗೆಯೇ ಹೊರಟಿದ್ದೇನೆ!" ಎಂದಳು. ಇದೇ ಸಂಧಿಯನ್ನು ಸಾಧಿಸಿ ಆ ಮುದುಕಿ "ಅಯ್ಯೊ, ನಿನಗೆ ಯಾರೂ ಇಲ್ಲವೆ? ಪಾಪ! ಇನ್ನೂ ಊಟ ಕೂಡ ಮಾಡಿರಲಿಕ್ಕಿಲ್ಲ. ಇಲ್ಲಿಯೇ ನನ್ನ ಮನೆಯಿದೆ. ನಡೆ!" ಎಂದಳು. ಮಿಶ್ರಾಣಿಯ ಬುದ್ಧಿ ಇನ್ನೂ ಬಾಲ್ಯದ ಬುದ್ಧಿ. ಜಗತ್ತಿನ ಅನುಭವವನ್ನು ಅದು ಇನ್ನೂ ಕಂಡಿರಲಿಲ್ಲ. ಅದರಲ್ಲಿಯೂ ಅವಳು ಜೀವನದ ಬಿರುಗಾಳಿಗೆ ಸಿಲುಕಿದ್ದುದು ಇದೇ ಮೊದಲನೆಯ ಸಲವಾದುದರಿಂದ, ಆಶ್ರಯ ಕಂಡಲ್ಲಿ ಸಂಶಯ ತೆಗೆದುಕೊಳ್ಳಲು ಹಿಂಜರಿಯುತ್ತಿದ್ದಳು.

ಮಿಶ್ರಾಣಿ ಅವಳ ಮನೆಯಲ್ಲಿ ಬಂದು ನೋಡುತ್ತಾಳೆ: ದೊಡ್ಡ ಪಲ್ಲಂಗ; ಅದರ ಬದಿಯಲ್ಲಿಯೇ ಎಲೆಯಡಿಕೆಯ ಪೆಟ್ಟಿಗೆ. ಸಮೀಪದಲ್ಲಿಯೇ ಸುಗಂಧದ್ರವ್ಯಗಳು! ನೋಡಲಿಕ್ಕೇನೋ ಇದೆಲ್ಲವೂ ಸೊಗಸಾಗಿ ಕಾಣುತ್ತಿತ್ತು; ಆದರೆ ಅದರ ಉದ್ದೇಶ ತಿಳಿಯಲಿಲ್ಲ. ಮಿಶ್ರಾಣಿಯನ್ನು ಅಲ್ಲಿಯೇ ಕುಳ್ಳಿರಲು ಹೇಳಿ, ತಾನು ಒಳಗೆ ಹೋಗಿ ಮೋಸಂಬಿಯನ್ನು ತಂದಿಟ್ಟಳು; ಅದರೊಂದಿಗೆ ಬೇರೆ ಹಣ್ಣುಗಳೂ ಇದ್ದುವು. ಮಿಶ್ರಾಣಿಗೆ ಅವೆಲ್ಲವನ್ನೂ ತಿನ್ನುವ ಮನಸ್ಸಾಯಿತು. ಅಷ್ಟರಲ್ಲಿಯೇ ಯಾರೋ ಬಾಗಿಲು ಬಡಿದ ಸಪ್ಪಳವಾಯಿತು. ಅದಾವನೋ ಒಬ್ಬ ಯುವಕ ಬಂದ. ಆತನ ಕಣ್ಣು ಕೆಂಪಗಾಗಿದ್ದುವು. ನಡೆಯುವುದಕ್ಕೆ ಶಕ್ತಿಯಿರಲಿಲ್ಲ. ಮೈಮೇಲೆ ಉತ್ತಮ ಅರಿವೆ. ಮಿಶ್ರಾಣಿಯನ್ನು ನೋಡಿ "ಇದೇನು, ಹೊಸ ಹೂವು ಏನು?" ಎಂದು ತೊದಲಿಸುತ್ತ ಕೇಳುತ್ತಿರುವಾಗಲೇ ಆ ಮುದುಕಿ, ಅವನ ಕೈ ಹಿಡಿದೆಳೆದು ಒಳಗೆ ಕರೆದುಕೊಂಡು ಹೋಗಿ, ಒಂದು ಕೋಣೆಯಲ್ಲಿ ಬಿಟ್ಟುಬಂದಳು. ಇದೆಲ್ಲ ಚಿತ್ರವನ್ನು ಕಂಡಾಗ, ತಾನೆಲ್ಲಿಯೋ ಎಂತಹದೋ ಬಲೆಯಲ್ಲಿ ಸಿಕ್ಕೆನೆಂದು ಮಿಶ್ರಾಣಿಗೆ ಎನಿಸುತ್ತಿತ್ತು. "ಏಕೆ? ಇನ್ನೂ ಹಣ್ಣು ತಿನ್ನಲಿಲ್ಲವೇ?" ಎಂದು

ಮಿಶ್ರಾಣಿಯನ್ನು ಆ ಮುದುಕಿ ಕೇಳಿದಳು. ಮಿಶ್ರಾಣಿ ಆ ಪ್ರಶ್ನೆಗೆ ಉತ್ತರ ಕೊಡದೆ "ಅಮ್ಮಾ, ಈಗ ಬಂದವರು ಯಾರು?" ಎಂದು ಕೇಳಿದಳು. ಮುದುಕಿ ಸಮಾಧಾನಹೇಳುವಂತೆ "ಅದೆಲ್ಲವೂ ಹಿಂದಿನಿಂದ ತಿಳಿಯುವುದು" ಎಂದಳು. "ಇಲ್ಲ, ನನಗೆ ಈಗಲೇ ತಿಳಿಯಬೇಕಾಗಿದೆ" ಎಂಬ ಮಿಶ್ರಾಣಿಯ ಆಗ್ರಹದ ಪ್ರಶ್ನೆಗೆ ಅವಳು ಸುಮ್ಮನೆ ಕೂಡುವಂತಿರಲಿಲ್ಲ. ಆದುದರಿಂದಲೇ "ನಿನಗಿನ್ನೂ ತಿಳಿಯುವುದಿಲ್ಲ. ನಿನಗೆ ತಂದೆ-ತಾಯಿಯಿಲ್ಲವಷ್ಟೆ? ನಿನಗೆ ನಿನ್ನ ಹೊಟ್ಟೆ ತುಂಬಿಕೊಳ್ಳುವುದು ಬೇಕಲ್ಲವೇ?" ಎಂದು ಕೇಳಿದಳು. ಎರಡೂ ಪ್ರಶ್ನೆಗಳ ಉತ್ತರವನ್ನು ಒಂದೇ ವಾಕ್ಯದಲ್ಲಿ ಹೇಳಬಯಸಿ "ಅಹುದು, ನನ್ನ ಹೊಟ್ಟೆಯನ್ನು ನಾನೇ ತುಂಬಿಕೊಳ್ಳಬೇಕಾಗಿದೆ!" ಎಂದು ಮಿಶ್ರಾಣಿ ಹೇಳಿದಳು. "ಹಾಗಾದರೆ ನಾನು ಹೇಳಿದಂತೆ ಕೇಳು. ನಿನ್ನಂತೆಯೆ ನಿನ್ನ ವಯಸ್ಸಿನ ಅದೆಷ್ಟೋ ಬಾಲಿಕೆಯರು ನನ್ನ ಹತ್ತಿರ ಬಂದಿದ್ದರು. ಅವರೆಲ್ಲರಿಗೂ ಜೀವನಮಾರ್ಗ ತೋರಿಸಿಕೊಟ್ಟಿದ್ದೇನೆ. ಅವರು ಇಂದು ಸೌಖ್ಯವಾಗಿದ್ದಾರೆ." ಎಂದುತ್ತರವಿತ್ತಳು ಮುದುಕಿ. ಸ್ವಲ್ಪ ಕುತೂಹಲ ಹುಟ್ಟಿದವರಂತೆ "ಅದಾವ ಮಾರ್ಗ ತಾಯಿ?" ಎಂದಳು ಮಿಶ್ರಾಣಿ. "ಹಾಗಾದರೆ ನನ್ನ ಜೊತೆಗೆ ಬಾ!" ಎಂದು ಆ ಮುದುಕಿ ಮಿಶ್ರಾಣಿಯನ್ನು ಒಳಗೆ ಕರೆದುಕೊಂಡು ಹೋದಳು. ಅವರು ಒಂದೊಂದೇ ಕೋಣೆಯನ್ನು ದಾಟುತ್ತ ಹೊರಟಿದ್ದರು. ಪ್ರತಿಯೊಂದು ಕೋಣೆಯಲ್ಲಿಯೂ ಸಣ್ಣ ಸಣ್ಣ ವಯಸ್ಸಿನ ಹುಡುಗಿಯರು, ಸೌಂದರ್ಯವರ್ಧಕ ಸಾಮಗ್ರಿಗಳನ್ನು ಮುಂದಿರಿಸಿಕೊಡು ಕುಳಿತಿದ್ದರು. ಇವಳಾವಳೋ ಹೊಚ್ಚ-ನವಳು ಬಂದಳೆಂದು, ಕೆಲವರು ಮತ್ಸರದ ನೋಟದಿಂದ ನೋಡುತ್ತಿದ್ದರು. ಕೊನೆಗೊಂದು ಕೋಣೆಯ ಬಾಗಿಲು ಇಕ್ಕಿದುದನ್ನು ತೋರಿಸಿ "ಇಕೋ, ಇದೀಗ ಬಂದ ಯಜಮಾನ ಇಲ್ಲಿದ್ದಾನೆ" ಎಂದು ಹೇಳಿದಳು. ಮಿಶ್ರಾಣಿಗೆ ಈಗ ಸಂಪೂರ್ಣ ಅರಿವು ಮೂಡಿತು: ತಾನು ಬಂದದ್ದು ವೇಶ್ಯಾಗೃಹ! ಈ ಮುದುಕಿ ಅದರ ಯಜಮಾನತಿ!! ಗತಿಗಾಣದೆ ಬಂದ ಅದೆಷ್ಟೋ ಯುವತಿಯರನ್ನು ಪಾಶದಲ್ಲಿ ಕೆಡಹಲು ಅವರ ದೇಹವಿಕ್ರಯದಿಂದ ತನ್ನ ಹೊಟ್ಟೆ ಹೊರೆದುಕೊಳ್ಳುವ ಈ ಮುದುಕಿಯ ಮುಖವನ್ನು ನೋಡುವುದು ಅಸಹ್ಯವೆನಿಸಿತು. ಹೆಣ್ಣಿನ ಜೀವಕ್ಕೆ ಹೆಣ್ಣು ಆಸರವೆಂದು ಕೇಳಿದ್ದಳು. ಹೆಣ್ಣಿನ ಜೀವಕ್ಕೆ ಹೆಣ್ಣು ಇಲ್ಲಿ ಒಂದು ಭಯದ ಭಾವಿಯಾಗಿ ಕಾಣುತ್ತಿತ್ತು. ಮಿಕ್ಕುದಾವುದನ್ನೂ ವಿಚಾರಮಾಡದೆ, ಮೊದಲು ಅವಳಿಗೆ ಅಲ್ಲಿಂದ ಪಾರಾಗುವುದು ಬೇಕಾಗಿತ್ತು. ಅಷ್ಟರಲ್ಲಿಯೆ, ಅವರಿಬ್ಬರೂ ಹೊರಗೆ ಬಂದಿದ್ದರು. ಮಿಶ್ರಾಣಿ ಮಾತನಾಡದೆ ಹೊರಟುದನ್ನು ಕಂಡು ಮುದುಕಿಗೆ ಸ್ವಲ್ಪ ಆಶೆ ಹುಟ್ಟಿತ್ತು. ಇನ್ನು ಮಾತನಾಡಬೇಕೆಂದು ಇರುವಷ್ಟರಲ್ಲಿಯೇ ಮತ್ತೆ ಯಾರೋ ಬಂದರು; ಅವರನ್ನು ಒಳಗೆ ಕರೆದುಕೊಂಡು ಹೋಗುತ್ತಲೇ "ಈಗಲೇ ಬರುತ್ತೇನೆ; ಇಲ್ಲಿಯೇ ಕೂಡ್ರಮ್ಮ" ಎಂದು ಹೇಳಿ, ಮುದುಕಿ ಒಳಗೆ ಹೋದಳು. ಮಿಶ್ರಾಣಿಗೆ ಇದು ಒಳ್ಳೆಯ ಸಮಯವೆನಿಸಿತು. ವಿಚಾರಮಾಡಲೂ ವೇಳೆಯಿರಲಿಲ್ಲ. ಒಮ್ಮೆಲೆ ಅಲ್ಲಿಂದ ಹೊರಬಿದ್ದು ಓಡಿಬಿಟ್ಟಳು.

ಅವಸರದಿಂದ ನಡೆಯುತ್ತ ಛಾಯುಖಳಾ ಬ್ರಿಜ್ಜಿನ ಸಮೀಪಕೆ ಬಂದಿದ್ದಳು. ಅಲ್ಲಿಯೇ ಒಂದು ಟ್ರಾಮು ಸಾಗುತ್ತಿತ್ತು. ಅದು ನಿಲ್ಲುತ್ತಲೆ, ಮಿಶ್ರಾಣಿ ಅದನ್ನು ಹಿಡಿದು ಏರಿದಳು. ಇನ್ನೂ ಎದೆ ಡವಡವ ಎನ್ನುವುದು ನಿಂತಿರಲಿಲ್ಲ. ಏಕೆಂದರೆ, ಆ ದೇಹವ್ಯಾಪಾರದ ಪೇಟೆಯ ಸೀಮೆ ಮುಗಿದಿದೆಯೆಂಬುದು ಅವಳಿಗೆ ಗೊತ್ತಿರಲಿಲ್ಲ. ಅಷ್ಟರಲ್ಲಿಯೆ ಕಂಡಕ್ಟರು "ಟಿಕ್ ಟಿಕ್" ಶಬ್ದದೊಂದಿಗೆ ಅವಳೆಡೆಗೆ ಬರುತ್ತಿದ್ದ. ತನ್ನ ಹತ್ತಿರವಿದ್ದ ಎರಡಾಣೆಯ ನಾಣ್ಯವನ್ನು ಅವನ ಕೈಯಲ್ಲಿಟ್ಟಳು ಮಿಶ್ರಾಣಿ. 'ಎಲ್ಲಿಗೆ?' ಎಂದು ಕೇಳಿದಾಗ, ಉತ್ತರ ಹೇಳಲೂ ಅವಳಿಗೆ ಬರಲಿಲ್ಲ. "ಟ್ರಾಮು ಎಲ್ಲಿಯ ವರೆಗೆ ಹೋಗುವುದೋ ಅಲ್ಲಿಯ ವರೆಗೆ ಕೊಡಿರಿ!" ಎಂದಳು. "ಟ್ರಾಮು ದಾದರದ ವರೆಗೆ ಹೋಗುವುದು" ಎಂದಾಗ, ಅವಳಿಗೆ ದಾದರವೆಂದರೆ ಏನೆಂಬುದು ಗೊತ್ತಿರಲಿಲ್ಲ. "ಹೂಂ ಅಲ್ಲಿಯ ವರೆಗೆ ಕೊಡಿರಿ!" ಎಂದಳು. ಯಾವಳೋ ಹೊಸಬಳಿರಬಹುದೆಂದು ಭಾವಿಸಿ ಕಂಡಕ್ಟರು ಮುಂದೆ ಸಾಗಿದ. ವಿಕ್ಟೋರಿಯಾ ಗಾರ್ಡನ್, ಲಾಲಬಾಗ, ಪರೇಳ ಒಂದೊಂದರಂತೆ ಬರುತ್ತಿದ್ದುವು. ಟ್ರಾಮು ದಾದರಕ್ಕೆ ಬಂದು ನಿಂತಿತು. ಎಲ್ಲ ಜನ ಇಳಿಯುತ್ತಿದ್ದರು. ಇದೇ ಸ್ಥಳವಿರಬಹುದೆಂದು ಮಿಶ್ರಾಣಿ ಕೂಡ ಅಲ್ಲಿಯೇ ಇಳಿದಳು. ಹಾಗೆಯೇ ಟಿಳಕ ಬ್ರಿಜ್ಜನ್ನು ಏರಿದಳು. ಸಾವಕಾಶವಾಗಿ ಬೀದಿಯಿಂದ ಬೀದಿಗೆ ನಡೆಯುತ್ತ ಶಿವಾಜಿ ಪಾರ್ಕಿನ ಹತ್ತಿರ ಬಂದಳು. ಅಲ್ಲಿರುವ ದೊಡ್ಡ ದೊಡ್ಡ ಮನೆಗಳನ್ನು ಕಂಡು, 'ಇಲ್ಲಿ ದೊಡ್ಡ ಜನ ಕೂಡಾ ಇರಬಹುದು' ಎಂದು ಆಶಿಸಿದಳು. ಸಂಜೆಯ ೭ ಗಂಟೆಯ ಸಮಯವಾದುದರಿಂದ, ಅದೆಷ್ಟೋ ಜನರು ಚೌಪಾಟಿಯಿಂದ ತಿರುಗಿ ಬರುತ್ತಿದ್ದರು. ಭಿಕ್ಷೆಗೆ ಕೈಯೊಡ್ಡಬೇಕೆಂದು ಮನಸ್ಸುಮಾಡಿದಳು; ಮತ್ತೆ ಹಿಂಜರಿದಳು. ಅನಿವಾರ್ಯಪ್ರಸಂಗ ಅವಳನ್ನು ಕೈಯೊಡ್ಡಿಸಿತು. ಅದೆಷ್ಟೋ ತರುಣರು ಖಾಲಿ ಜೇಬಿಗೆ ಹೋಗುವ ಆ ಕೈಯನ್ನು ಅರಿವೆ ಹಾಕಿ ಸಿಗಾರ್ ಸೇದುತ್ತ ನಡೆದಿದ್ದರು. ಅವರ ಹತ್ತಿರ ಒಂದಾಣೆ ಕೂಡ ಇರಲಿಕ್ಕಿಲ್ಲವೆಂದು ಅವಳಿಗೆ ಎನಿಸಿರಲಿಲ್ಲ. ಒಬ್ಬ-ರಾರೋ ಒಂದಾಣೆ ಒಗೆದರೆ, ಮತ್ತೊಬ್ಬ ಕೇವಲ ನಗುತ್ತ ಸಾಗಿದ. ಜನ ಏನೆಂದರೂ ಜನಕ್ಕೆ ತಿರುಗಿ ಹೇಳುವ ಬಾಯಿ ಅವಳಿಗಿರಲಿಲ್ಲ. ಅಷ್ಟರಲ್ಲಿಯೇ ಅದಾರೋ ಒಬ್ಬ ನಡುವಯಸ್ಸಿನ ಗೃಹಸ್ಥ ಬಂದು, ಹಣಕೊಡಬೇಕೆಂದು ಕಿಸೆಯಲ್ಲಿ ಕೈಹಾಕಿದ; ಚಿಲ್ಲರೆ ಇರಲಿಲ್ಲ. ರೂಪಾಯಿಯ ನೋಟು ಇತ್ತು. ಹಾಗೆಯೆ ಸಾಗಬೇಕೆಂದ; ಆದರೆ ಆ ಕತ್ತಲೆಯಲ್ಲಿಯೂ ಅವಳ ಮುಖ ಕಂಡಿತು. "ಯಾರವ್ವಾ ನೀನು?" ಎಂದು ಕೇಳಿದ. ಮಿಶ್ರಾಣಿ ಗಾಬರಿಯಾದಳು. ಇಷ್ಟೊಂದು ಹೊತ್ತಿನ ವರೆಗೆ ಅವಳನ್ನು ಹೀಗೆ ಯಾರೂ ಕೇಳಿರಲಿಲ್ಲ. ಇವನಾವನೋ ಪೋಲಿಸನಿರಬೇಕೆಂದು ಬಗೆದಳು. "ಗಾಬರಿಯಾಗಬೇಡವ್ವಾ ಹೇಳು!" ಎಂದು ಮತ್ತೊಮ್ಮೆ ಕೇಳಿದನು ಆ ಗೃಹಸ್ಥ. "ತಂದೇ, ನಾನೊಬ್ಬ ನಿರಾಶ್ರಿತಳು. ತಂದೆಯಿಲ್ಲ ತಾಯಿಯಿಲ್ಲ. ಹೊಟ್ಟೆಯ ಹಸಿವಿಗಾಗಿ ಭಿಕ್ಷೆ ಬೇಡುತ್ತಿದ್ದೇನೆ. ಏನಾದರು ಇದ್ದರೆ ಕೊಡಬೇಕು. ಪುಣ್ಯ ಬರುತ್ತದೆ" ಎಂದು ಆಕೆ ಹೇಳುವ ಮಾತುಗಳನ್ನು ಕೇಳುತ್ತಿದ್ದಾಗ, ಆ ಗೃಹಸ್ಥನ ಮನಸ್ಸು ಕರಗುವಂತೆ ಕಾಣುತ್ತಿತ್ತು. ಸ್ವಲ್ಪ ವಿಚಾರ

ಮಾಡಿದಂತೆ ಮಾಡಿ "ನೀನು ನಮ್ಮ ಮನೆಯಲ್ಲಿ ಕೆಲಸ ಮಾಡ-ಬಹುದೇನು?" ಎಂದು ಕೇಳಿದರು "ಬೇಕಾದುದನ್ನು ಹೇಳಿ ತಂದೆ" ಎಂದು ಮಿಶ್ರಾಣಿ ಉತ್ತರವಿತ್ತಳು. "ಹಾಗಾದರೆ ನಡೆ" ಎಂದ ಆ ಗೃಹಸ್ಥ.

× × × ×

ಹೊಸ ಮನೆ; ಹೊಸ ಅನುಭವ! ಇನ್ನು ಹಿಂದಿನ ಜೀವನದ ಕಹಿ ಅನುಭವಗಳು ತೀರಿದುವು ಎಂದು ಅವಳ ಮನಸ್ಸು ಸ್ವಲ್ಪ ನೆಮ್ಮದಿಯಾಗಿತ್ತು. ಬಂದು ನಾಲ್ಕು ತಿಂಗಳಾದರೂ ಕೆಲಸದಲ್ಲಿ ಯಾರಕಡೆಯಿಂದಲೂ ತಪ್ಪೆನಿಸಿಕೊಂಡಿರಲಿಲ್ಲ. ಆದುದರಿಂದಲೇ ಮನೆಯ ಯಜಮಾನ ನಾರಾಯಣರಾಯರು ಅವಳನ್ನು ಕಂಡರೆ ಅಂತಃಕರಣದಿಂದ ಮಾತನಾಡುತ್ತಿದ್ದರು. ಅವರನ್ನು ಕಂಡಾಗ ಮಿಶ್ರಾಣಿಗೂ, ಯಾವುದೋ ಒಂದು ಅವ್ಯಕ್ತ ಪಿತೃಪ್ರೇಮ ಕಂಡಂತೆ ಎನಿಸುತ್ತಿತ್ತು. ಆಗಾಗ ಅವಳ ದುಃಖದ ಕತೆಯನ್ನು ಕೇಳಿ ನಾರಾಯಣರಾಯರು ಕಣ್ಣೀರು ಸುರಿಸುತ್ತಿದ್ದರು. ತಮ್ಮ ದುಃಖದ ಆವೇಗದಲ್ಲಿ, ದೇಶದ ವಿಭಾಗ ಮಾಡಿದ ಧುರೀಣರನ್ನು ಕಂಡಂತೆ ದೂಷಿಸುತ್ತಿದ್ದರು.

ಇರುವುದಕ್ಕೆ, ಉಣ್ಣುವುದಕ್ಕೆ, ತಿನ್ನುವುದಕ್ಕೆ ಯಾವುದಕ್ಕೂ ತೊಂದರೆಯಿರಲಿಲ್ಲ; ಆದರೆ ಮಿಶ್ರಾಣಿಯ ಮನಸ್ಸಿನಲ್ಲಿ ಒಂದು ವಿಚಾರ ಮಾತ್ರ ಸುಳಿಯುತ್ತಿತ್ತು: ತಾನು ಬಂದಂದಿನಿಂದ ರಾಯರ ಮಗ ಶ್ರೀನಿವಾಸ ಆಗಾಗ ತನ್ನನ್ನು ದಿಟ್ಟಿಸಿ ನೋಡುತ್ತಿದ್ದ. ಆ ನೋಟದ ಬಿರುಸುತನ ಕಂಡು, ಮತ್ತೆಲ್ಲಿಯೋ ಕೆಲಸವಿದ್ದಂತೆ ನಟಿಸಿ ಮುಂದೆ ಹೋಗುತ್ತಿದ್ದಳು ಮಿಶ್ರಾಣಿ. ರಾಯರ ಮಗ ಶ್ರೀನಿವಾಸ ನವತರುಣ. ರೂಪದಲ್ಲಿ ಸುಂದರ; ಈಗ ಇಂಟರಿನಲ್ಲಿ ಕಲಿಯುತ್ತಿ-ದ್ದಾನೆ. ಓದುವುದಕ್ಕಿಂತಲೂ ಆಟಪಾಟಗಳಲ್ಲಿ ಅವನಿಗೆ ಹೆಚ್ಚು ಆಸಕ್ತಿ. ಮಿಶ್ರಾಣಿ ಮನೆಯಲ್ಲಿ ಕೂಲಿಯವಳಾದರೂ, ಅವಳನ್ನು ಕಂಡಾಗ ತನ್ನ ಶ್ರೀಮಂತಿಕೆಯನ್ನು ಮರೆತು, ತಾನೂ ಅವಳಂತೆ ಸ್ವತಂತ್ರಜೀವಿಯಾಗಬಾರದಾಗಿತ್ತೇ? — ಎಂದುಕೊಳ್ಳುವನು. ಒಮ್ಮೊಮ್ಮೆ ನೆಪತೆಗೆದು ಕಾಲೇಜನ್ನು ಬಿಟ್ಟು ಶೀಘ್ರ ಮನೆಗೆ ಬರುವನು. ಇವನು ಮಿಶ್ರಾಣಿಯೊಂದಿಗೆ ಏನಾದರೂ ಮಾತನಾಡಿದರೆ, ಆಕೆ ಅಷ್ಟಕ್ಕಷ್ಟೇ ಉತ್ತರ ಕೊಡುತ್ತಿದ್ದಳು.

ನಾರಾಯಣರಾಯರು ಕಳೆದ ಎರಡು ದಿನಗಳಿಂದ ಊರಲ್ಲಿರಲಿಲ್ಲ. ಇದೇ ಸಮಯದಲ್ಲಿ ಶ್ರೀನಿವಾಸನ ತಲೆಯಲ್ಲಿ ಒಂದು ವಿಚಾರ ಹೊರಟಿತು. ರಾತ್ರಿ ಊಟಕ್ಕೆ ಕುಳಿತಾಗ ತನ್ನ ತಾಯಿಯ ಮುಂದೆ ಮಾತನ್ನು ಪ್ರಾರಂಭಿಸಿದ: "ತಿಂಗಳೊಂದಕ್ಕೆ ಐದು ರೂಪಾಯಿ ಆ ಆಳುಮನುಷ್ಯನಿಗೆ ಕೊಡುವುದಕ್ಕಿಂತ, ನಮ್ಮ ಮಿಶ್ರಾಣಿಯನ್ನು ದಿನಾಲು ಕಾಲೇಜಿಗೆ ಮಧ್ಯಾಹ್ನದಲ್ಲಿ ಟಿಫಿನ್ ಕ್ಯಾರಿಯರ್ ಕೊಟ್ಟು ಏಕೆ ಕಳಿಸಬಾರದು?" ಎಂದ. ತಾಯಿಗೆ ಮಗನ ಮಾತು ಸರಿಯೆನಿಸಿದರೂ "ಅವಳಿಗೆ ಆ ತರದ ಕೆಲಸ ಬೇಡವಪ್ಪಾ" ಎಂದಳು. "ಸರಿ, ಹಾಗಾದರೆ ನಾನು ಹೇಳಿದ್ದು ನಿಮಗೆ ಯಾವುದೂ ಸರಿ ಕಾಣುವುದಿಲ್ಲ. ನಿಮ್ಮ ಮನಸ್ಸಿಗೆ ಬಂದಂತೆ ಮಾಡಿರಿ!" ಎಂದು ಸ್ವಲ್ಪ ಸಿಟ್ಟಿಗೆ ಬಂದವರಂತೆ ನಟಿಸಿದ. ಮಗನು ಅಸಂತುಷ್ಟನಾಗುವುದು ತಾಯಿಗೆ ಬೇಕಾಗಿರಲಿಲ್ಲ. "ನಿನ್ನಂತೆಯೇ ಆಗಲಿ ಶ್ರೀನಿವಾಸ" ಎಂದು ಉತ್ತರವಿತ್ತರು. ಇದ್ದೊಬ್ಬ ಮಗ ಸಲುಗೆಯಿಂದ ಬೆಳೆದುಬಂದವನೆಂದು ತಾಯಿ ಯಾವುದಕ್ಕೂ ಇಲ್ಲವೆನ್ನುತ್ತಿರಲಿಲ್ಲ.

ಈ ವಿಚಾರ ಮಿಶ್ರಾಣಿಗೆ ತಿಳಿಯಿತು. ಅನಿವಾರ್ಯವಾಗಿ ಸುಮ್ಮನೆ ಇರಬೇಕಾಯಿತು. ತಿರುಗಿ ಮಾತನಾಡಲು ಬರುತ್ತಿರಲಿಲ್ಲ. ಮಧ್ಯಾಹ್ನದ ಒಂದು ಗಂಟೆಯಾಗಿರಬಹುದು; "ಇಕೋ ಮಿಶ್ರಾಣಿ, ರೂಯಿಯಾ ಕಾಲೇಜಿಗೆ ಹೋಗಿ ಈ ಡಬ್ಬಿಯನ್ನು ಕೊಟ್ಟು ತಿರುಗಿ ಬೇಗ ಬಾ!" ಎಂದು ಒಡತಿಯ ಆಜ್ಞೆಯಾಯಿತು. ರೂಯಿಯಾ ಕಾಲೇಜು ಎಲ್ಲಿದೆಯೆಂಬುದೂ ಅವಳಿಗೆ ಸ್ಪಷ್ಟವಾಗಿ ಗೊತ್ತಿರಲಿಲ್ಲ. ಕೇಳುತ್ತ ನಿಂತರೆ ವೇಳೆಯಾಗುವುದೆಂದು ಹಾಗೆಯೇ ಹೊರಟೇ ಬಿಟ್ಟಳು ಮಿಶ್ರಾಣಿ.

ಶ್ರೀನಿವಾಸ ದಾರಿಕಾಯುತ್ತಲೇ ಇದ್ದ. ದೂರದಿಂದಲೇ ಜನರನ್ನು ದಾರಿಕೇಳುತ್ತ ಮಿಶ್ರಾಣಿ ಬರುತ್ತಿರುವುದನ್ನು ಕಂಡಿದ್ದ. ಅವನಿಗೆ ಈ ಹೊತ್ತು ಅಭ್ಯಾಸದಲ್ಲಿ ಮನಸ್ಸೇ ಇರಲಿಲ್ಲ. ಮೇಲ್ಮಾಳಿಗೆಯಲ್ಲಿ ಕಾಮನ್‌ರೂಮು (Common Room). ಮಧ್ಯಂತರ ಸೂಟಿಯನಾಗಿರಲಿಲ್ಲವೆಂದು ಇನ್ನೂ ಯಾರೂ ಅಲ್ಲಿಗೆ ಬಂದಿರಲಿಲ್ಲ. ಮಿಶ್ರಾಣಿ ಅಲ್ಲಿಗೆ ಬಂದಳು. ಅವಳನ್ನು ಕಂಡು ಕ್ಲಾಸಿನಲ್ಲಿಯ ಹುಡುಗರು ಹೊರಗೆ ಇಣುಕಿ ನೋಡುತ್ತಿದ್ದರು. ಅವಾವುದನ್ನೂ ಅವಳು ನೋಡದೆ ಮೇಲೆ ಬಂದಳು. ಶ್ರೀನಿವಾಸನಿಗೆ ಮಿಷ್ಟಾನ್ನ ಕೈಯಲ್ಲಿಯೇ ಸಿಕ್ಕಂತೆ ಆಗಿತ್ತು! ಅತ್ತಿತ್ತ ನೋಡಿದ; ಯಾರೂ ಇರಲಿಲ್ಲ. ಮಿಶ್ರಾಣಿಯನ್ನು ಕಾಮನ್‌ರೂಮಿಗೆ ಕರೆದುಕೊಂಡು ಹೋಗಿ, ಅಲ್ಲಿ ಡಬ್ಬಿಯನ್ನು ಇಡಹೇಳಿದ. ಅವಳು ಡಬ್ಬಿ ಇಡುವುದೊಂದೇ ತಡ; ಅವಳ ಸೆರಗನ್ನು ಹಿಡಿದು ಜಗ್ಗಿದ! ಮಿಶ್ರಾಣಿ ಗಾಬರಿಯಾಗಿ ಹೊರಗೆ ಬಂದಳು. ಇನ್ನು ಅವಳ ಬೆನ್ನು ಹತ್ತುವದರಲ್ಲಿಯೇ ಇದ್ದ ಶ್ರೀನಿವಾಸ; ಅಷ್ಟರಲ್ಲಿಯೇ ಅವನ ಮಿತ್ರನೊಬ್ಬ ಸಹಜವಾಗಿ ಮೇಲೆ ಬಂದ. ಮಿಶ್ರಾಣಿಗೆ ಬದುಕಿ ಉಳಿದಂತೆ ಎನಿಸಿತು. ಶ್ರೀನಿವಾಸನಿಗೆ ಮಾತ್ರ 'ಈತ ಈಗೇಕೆ ಬಂದನೋ' ಎಂದು ಸಂತಾಪವಾಯಿತು. ಅವರೂ ಏನನೂ ಮಾತನಾಡದೆ, ಹಸಿವೆಯಿಲ್ಲದವನಂತೆ ಅರ್ಧಮರ್ಧ ತಿಂದು, ಡಬ್ಬಿಯನ್ನು ಮುಚ್ಚಿ, ಮಿಶ್ರಾಣಿಯ ಮುಂದಿಟ್ಟು ತನ್ನ ಕ್ಲಾಸಿಗೆ ಹೊರಟು ಹೋದ. ಮಿಶ್ರಾಣಿ ಒಂದೂ ಮಾತನ್ನಾಡದೆ ಡಬ್ಬಿಯನ್ನು ತೆಗೆದುಕೊಂಡು ಮನೆಗೆ ಹೊರಟಳು.

ದಾರಿಯಲ್ಲಿ ಬರುವಾಗ ಮಿಶ್ರಾಣಿಗೆ ತಲೆಯ ತುಂಬ ಒಂದೇ ವಿಚಾರ! "ಶ್ರೀನಿವಾಸನು ಹೀಗೇಕೆ ಮಾಡುತ್ತಿರಬಹುದು?.... ಅವನು ನನ್ನನ್ನು ಇಷ್ಟೊಂದು ಪ್ರಬಲವಾಗಿ ಪ್ರೀತಿಸುತ್ತಿರಬಹುದೇ? ಅಥವಾ ಅದೊಂದು ಮೋಹದ ಬಲೆಯಿರಬಹುದೇ? ಅವನು ಇಷ್ಟೊಂದು ಪ್ರೀತಿಸುತ್ತಿದ್ದರೆ, ನಾನು ಅವನಿಂದ ದೂರ ಇರುವುದು

ಸರಿಯಾದೀತೆ? ಅಹುದು—ದೂರ ಇರಲೇಬೇಕು... ನಾನೆಲ್ಲಿ ಅವನೆಲ್ಲಿ! ಬೀದಿಯ ಭಿಕಾರಿಯಾಗಿದ್ದವಳನ್ನು ಸಾಕಿದ ಅವರ ತಂದೆಗೆ ದ್ರೋಹ ಬಗೆದಂತಾಗುವುದು." ಇದೆಲ್ಲ ವಿಚಾರ ಬಂದಾಗ, ಮಿಶ್ರಾಣಿಗೆ ಜೀವನ ನಿಸ್ಸಾರವೆನಿಸಿತು. ಮೊದಲು ದಾಳಿಗಾರರ ಕೈಯಿಂದ ಪಾರಾಗಿ ಬಂದನಂತರ ಅತ್ತಿತ್ತ ಅಲೆದಾಡಿದುದು, ಅನಂತರ ಫರಾಸ್ ರೋಡಿನಲ್ಲಿ ಮುದುಕಿಯ ಕೈಯಿಂದ ಪಾರಾದುದು, ಇಂದು ಶ್ರೀನಿವಾಸನ ಬಲೆಯಲ್ಲಿ ಸಿಕ್ಕದ್ದು—ಎಲ್ಲವೂ ಅವಳಿಗೆ ಒಂದೇ ಬಗೆಯಾಗಿ ಕಾಣುತ್ತಿತ್ತು. ದಾಳಿಗಾರರ ಹೊಡೆತಕ್ಕೆ ಸಿಕ್ಕಿ ನಿರ್ವಾಸಿತರಾದೆವೆಂದು ಎಲ್ಲರಿಗೂ ಕರುಣೆ ಬರಬಹುದು. ಆದರೆ ಸಮಾಜದಲ್ಲಿರುವ ಫರಾಸರೋಡಿನ ಮುದುಕಿ, ನಾರಾಯಣರಾಯರ ಮಗ ಶ್ರೀನಿವಾಸನಂಥವರ ದಾಳಿಯನ್ನು ಯಾರೂ ತಿಳಿಯರು!! ಸಮಾಜದಲ್ಲಿರುವ ಇಂತಹ ದಾಳಿಗಾರರಿಂದ ನೈತಿಕಜೀವನದ ದಿವಾಳಿಯಾದರೂ ಅದು ಯಾರಿಗೂ ಕಾಣುವುದಿಲ್ಲ. ಮಿಶ್ರಾಣಿಗೆ ಮಾತ್ರ ಅಂದಿನ ದಾಳಿಯ ಚಿತ್ರ ಹಾಗೂ ಸಮಾಜದಲ್ಲಿ ಬೂದಿಯಲ್ಲಿ ಹುದುಗಿದ ಬೆಂಕಿಯಂತಿರುವ ಇಂದಿನ ದಾಳಿಯ ಚಿತ್ರದಲ್ಲಿ ಯಾವುದೂ ವ್ಯತ್ಯಾಸವೆನಿಸಲಿಲ್ಲ. ಇಷ್ಟರಲ್ಲಿಯೆ ಹಿಂದೆ ಟ್ಯಾಕ್ಸಿಯವನು ಹಾರ್ನ್ ಬಾರಿಸಿದ. ವಿಚಾರಗಳೆಲ್ಲವೂ ಕದಡಿದುವು. ಸುಮ್ಮನೆ.... ಮನೆಗೆ ಬಂದಳು. ಡಬ್ಬಿಯಲ್ಲಿ ಇನ್ನೂ ಅನ್ನವಿದ್ದುದನ್ನು ಕಂಡು "ಏಕೆ ಈಹೊತ್ತು ನೀನೂ ಉಣ್ಣಲಿಲ್ಲವೆ?" ಎಂದರು ತಾಯಿ. "ಇಲ್ಲ—ಹಸಿವೆಯಿದ್ದಂತೆ ಕಾಣಲಿಲ್ಲ" ಎಂದು ಉತ್ತರವಿತ್ತು ಸುಮ್ಮನಾದಳು ಮಿಶ್ರಾಣಿ.

ಶ್ರೀನಿವಾಸ ಸಂಜೆಯ ಊಟಕ್ಕೆ ಕುಳಿತು ಇನ್ನೂ ಎರಡು ನಿಮಿಷವಾಗಿರಲಿಲ್ಲ; ಆಗ ತಾಯಿಗೆ ಹೇಳತೊಡಗಿದ: "ಅಮ್ಮಾ' ನಾಳೆನಿಂದ ಇವಳನ್ನು ಕಳಿಸಬೇಡ. ಈ ಹೊತ್ತು ಮಧ್ಯಾಹ್ನದಲ್ಲಿ ಮೂರು ಗಂಟೆಗೆ ಬಂದಿದ್ದಾಳೆ. ಆಗ ನನಗೆ ನನ್ನ ಅಭ್ಯಾಸದ ಅವಸರ. ನಾನು ಹೇಗೆ ಉಣ್ಣಬೇಕು?" ಎಂದು ಹೇಳುವುದೊಂದೇ ತಡ; ಅವರು "ಹೀಗೇಕೆ ಮಾಡಿದೆಯೇ? ದಾರಿಯಲ್ಲಿ ಎಲ್ಲಿಯಾದರೂ ಕುಳಿತಿದ್ದೆಯೇನು?" ಎಂದು ಅಲ್ಲಿಯೇ ನಿಂತ ಮಿಶ್ರಾಣಿಯ ಮೇಲೆ ರೇಗಿದರು. ನಿಜವಿದ್ದ ಸಂಗತಿಯನ್ನು ಆಡಬೇಕೆಂದಳು. ಆದರೆ ಆ ಭೀರುಸ್ವಭಾವದ ಮಿಶ್ರಾಣಿಯ ನಾಲಗೆ ಏಳಲಿಲ್ಲ. 'ಇಷ್ಟೊಂದು ಪ್ರೀತಿಸುವ ಮಗನ ಮೇಲೆ ತಾಯಿ ಎಂದಿಗೂ ಸಂಶಯ ತೆಗೆದುಕೊಳ್ಳಲಾರಳು' ಎಂಬುದು ಅವಳಿಗೆ ಗೊತ್ತು.... ಸುಮ್ಮನಾದಳು.

ರಾತ್ರಿ ೯ ಗಂಟೆಯಾಗಿತ್ತು. ಮಿಶ್ರಾಣಿಗೆ ನಿದ್ರೆಯೆ ಬರಲೊಲ್ಲದು. ನಾರಾಯಣರಾಯರು ಎಂದು ಬರುವರೆಂಬುದೂ ಅವಳಿಗೆ ಗೊತ್ತಿರಲಿಲ್ಲ. ಇಂದು ಅವರು ಮನೆಯಲ್ಲಿದ್ದರೆ, ಇದ್ದ ಸಂಗತಿಯನ್ನು ಇದ್ದಂತೆ ತಿಳಿಸಬಹುದಾಗಿತ್ತು. ಅವಳಿಗೆ ಅವರಲ್ಲಿ ಅಷ್ಟೊಂದು ವಿಶ್ವಾಸ. ಆದರೆ ಅವರು ಬರುವವರೆಗೆ ಏನು ಮಾಡಬೇಕೆಂಬುದು ತಿಳಿಯದಾಯಿತು. ನಡೆದ ಸಂಗತಿಯನ್ನು ಹೇಳಿದರೆ, ಯಜಮಾನಿತಿ ತನ್ನ ಮಾತನ್ನು ನಂಬಲಿಕ್ಕಿಲ್ಲ. ಸುಮ್ಮನೆ ಇದ್ದುದಾದರೆ ದೂಷಿತ ಮನಸ್ಸಿನ ಶ್ರೀನಿವಾಸನಿಂದ ನಿತ್ಯವೂ ಅಪವಾದದ ಹೊರೆ ಹೊರಬೇಕಾಗುವುದು. ಈ ಭಯದ ಸೆಳವಿನಲ್ಲಿ, ಎತ್ತ ಹೋದರೂ ಅವಳಿಗೆ ಆಶ್ರಯ ಕಾಣಲಿಲ್ಲ. ಬೇರೆ ಕಡೆಗೆ ಎಲ್ಲಿ ಹೋದರೂ ಇದೇ ದಾಸ್ಯಜೀವನ! ಮತ್ತೆ ಸಂಶಯ—ಅಪಮಾನಗಳ ಮಳೆ!! ಈ ದಾಸ್ಯಪಾಶದಿಂದ ಮುಕ್ತಿಯಿರಲಿಕ್ಕಿಲ್ಲವೇ? ಇದೆ—ಮುಕ್ತಿಯ ಮಾರ್ಗ ಇರಲೇಬೇಕು! ಅದೇ ರಾತ್ರಿಯಲ್ಲಿಯೆ ಮನೆಯಿಂದ ಹೊರಬಿದ್ದಳು.

× × × ×

ಮರುದಿನ ರಾಯರು ಊರಿಂದ ಬಂದನಂತರ, ದಿನದಂತೆ ಆಫೀಸಿಗೆ ಹೋಗಿ ಸಂಜೆಗೆ ಬಂದು—"ಸಾಯಂಕಾಲ ಸಮಾಚಾರ" ಓದುತ್ತ ಕುಳಿತಿದ್ದಾರೆ.

"ಆತ್ಮಹತ್ಯೆ—ದಾದರ ಸ್ಟೇಶನಿನ ಹತ್ತಿರ....! ೧೭ ವರ್ಷದ ಹುಡುಗಿ—".... ಸುದ್ದಿ ಸ್ವಲ್ಪ ಆಶ್ಚರ್ಯಜನಕವಿದ್ದಂತೆ ಕಂಡಿತು. ಮತ್ತೆ ಮುಂದೆ ಓದತೊಡಗಿದರು...." ಮೃತಳ ಮುಖವೆಲ್ಲವೂ ಸುಟ್ಟುಹೋಗಿತ್ತು. ಅವಳು ನಿರಾಶ್ರಿತಳಿದ್ದಳೆಂದು ಕಾಣುತ್ತಿತ್ತು. ಅವಳ ಆತ್ಮಹತ್ಯೆಯ ಕಾರಣ ತಿಳಿದಿಲ್ಲ. ಮೃತಳ ಬಟ್ಟೆಯಲ್ಲಿ ಒಂದು ಕಾಗದವಿತ್ತು. ಅದರಲ್ಲಿ ಈ ಕೆಳಗಿನಂತೆ ಬರೆದಿದೆ:

"ನನ್ನ ಮರಣಾನಂತರ ಯಾರಿಗೂ ತೊಂದರೆ ಕೊಡಬಾರದೆಂಬುದು ನನ್ನ ಆಶೆ. ನನ್ನ ಮರಣಕ್ಕೆ ನಾನೇ ಕಾರಣಳು. ಸಮಾಜದಲ್ಲಿಯ ಬಡ ಹೆಣ್ಣಿನ ಬಾಳನ್ನು ಕಂಡು ನನಗೆ ಅಸಹ್ಯವೆನಿಸಿತು. ಹೆಣ್ಣು ಬಡತನದಲ್ಲಿ ಹುಟ್ಟಿದರೆ ಅಥವಾ ಬಡತನ ಬಂದರೆ, ಅದೊಂದು ಶಾಪ! ಮತ್ತು ಆ ಬಡತನದಲ್ಲಿ ಹೆಣ್ಣಿಗೆ ರೂಪವಿದ್ದರೆ ತೀರಿತು. ಸಮಾಜದಲ್ಲಾಗುವ ನೈತಿಕಅವನತಿಗೆ ಅವಳ ಬಡತನವನ್ನು ಹೊಣೆ ಮಾಡುತ್ತಾರೆ. ಆದರೆ ಸಮಾಜದ ಒಳಗಡೆ ಹುದುಗಿರುವ ಭೀಕರ ಸಮಸ್ಯೆಗಳನ್ನು ಅರಿಯುವವರು ಕಡಿಮೆ. ಇಂತಹ ಸಮಾಜದೊಂದಿಗೆ ಹೋರಾಡಿ ತನ್ನ ನೈತಿಕಜೀವನವನ್ನು ಕಾಪಾಡುವುದು ಅಸಾಧ್ಯ. ಈ ಪರಿಸ್ಥಿತಿಯಲ್ಲಿ ಅವಳಿಗೆ ಹೆಣ್ಣುಹೃದಯ ಕೂಡ ಸಹಾಯ ಮಾಡಲಾರದು. ಅದೆಲ್ಲವನ್ನೂ ದೂರಮಾಡಿ ಇಂದು ಮುಕ್ತಿಯನ್ನು ಪಡೆಯಲು ನಾನು ಈ ಮಾರ್ಗವನ್ನು ಹಿಡಿದಿದ್ದೇನೆ!"

ನಾರಾಯಣರಾಯರಿಗೆ ಆ ಪ್ರತಿಯೊಂದು ವಾಕ್ಯದ ಹಿಂದೆ ಅನುಭವವಿದ್ದಂತೆ ಕಾಣುತ್ತಿತ್ತು. ಅದನ್ನು ಮಿಶ್ರಾಣಿಗೆ ತೋರಿಸಬೇಕೆಂದು ಅವಳನ್ನು ಕೂಗಿದರು. ಅವಳಿಂದ ಉತ್ತರಬರಲಿಲ್ಲ. ಎರಡನೆಯ ಸಲ ಕೂಗಿದರು. ಆಗಲೂ ಉತ್ತರವಿಲ್ಲ. "ಏಕೆ ಕೂಗ್ತಾ ಇದ್ದೀರಿ?—ನಿನ್ನೆ ಸಂಜೆಗೆ ಹೋದವಳು ಇನ್ನೂ ಮನೆಗೆ ಬಂದಿಲ್ಲ!" ಎಂದು ಅವರ ಹೆಂಡತಿಯಿಂದ ಉತ್ತರಬಂದಿತು. ಅವಳು ಎರಡು ದಿನಗಳವರೆಗೆ ಬಾರದೆ ಇದ್ದುದು ಸಂಶಯಕ್ಕೆ ಕಾರಣವಾಯಿತಾದರೂ, ಹೆಂಡತಿಯನ್ನು ಹೆಚ್ಚಿಗೆ ಕೇಳಲಿಲ್ಲ. ಅಥವಾ ಇಷ್ಟೊತ್ತಿನವರೆಗೆ ಆ ಪತ್ರವನ್ನು ಜೋರಿನಿಂದ ಓದುವಾಗ ಅಲ್ಲಿಯೇ ನಿಂತಿದ್ದ ಮ್ಲಾನಮುಖದ ಶ್ರೀನಿವಾಸನನ್ನು ಕೇಳಿದರೆ ತಿಳಿಯಬಹುದಾಗಿತ್ತೇ? ಏಕೆಂದರೆ ಪ್ರತಿಯೊಂದು ವಾಕ್ಯವೂ ಅವನನ್ನೇ ನಿರೀಕ್ಷಿಸಿ ಬರೆದಂತೆ ಅವನಿಗೆ ಕಾಣುತ್ತಿತ್ತಲ್ಲವೇ?

ಪುಸ್ತಕ ವಿಮರ್ಶೆ

ಶ್ರೀರಂಗರ ಕೃತಿ "ಪ್ರಕೃತಿ"

(ಕಾದಂಬರಿಯ ವಿಮರ್ಶೆ)

ಶ್ರೀ. ಪಡಾರು ಮಹಾಬಲೇಶ್ವರಭಟ್ಟ ಕೊಳನಾಡು, ದ. ಕನ್ನಡ

ಪ್ರಗತಿಯು ಪ್ರಕೃತಿಯ ನಿಯಮ. ಮಾನವಸಮಾಜದಲ್ಲಿ ದಿನೇ ದಿನೇ ವಿವಿಧ ಸುಧಾರಣೆಗಳು ಕಂಡುಬರುತ್ತಿವೆ. ಸಮಾಜದ ಕಟ್ಟು-ನಿಟ್ಟುಗಳು ಸಡಿಲಾಗುತ್ತಿವೆ; ಸುಖಸಾಧನಗಳು ಹೆಚ್ಚುತ್ತಿವೆ. ಇಂದು ಕುಲೀನನೆನಿಸಿದವನು ಮುಂದೆ, ಕುಲಹೀನನೆನಿಸಲ್ಪಟ್ಟವನ ಅಡಿಯಾಳಾಗಬಹುದು. ಅಂಬುಧಿಯ ಅಲೆಅಲೆಗಳಂತೆ ಅಡಿಮೇಲಾಗುವ ಸಂಭವಗಳೇ ಹೆಚ್ಚು. ಆದರೆ ಇದು ಬಾಹ್ಯಪ್ರಪಂಚದಲ್ಲಿ ಮಾತ್ರ; ಒಳಗಿನ ಜಗತ್ತು ಏನೇನೂ ಬದಲಾಗಿಲ್ಲ. ಹಸಿವು, ಕಾಮ, ಪ್ರೇಮಗಳೇ ಮೊದಲಾದ ಮಾನವನ ಸ್ವಾರ್ಥಮನಃಪ್ರವೃತ್ತಿಗಳು ಹಾಗೆಯೇ ಉಳಿದುಕೊಂಡಿವೆ. ಇದರಿಂದ "ಬಾಹ್ಯಶುದ್ಧಿಯಾದರೂ ಅಂತಃಶುದ್ಧಿಯಾಗಿಲ್ಲ" ಎಂಬುದನ್ನು ಮನಗಂಡು, ಅದರ ವಿಚಾರ-ವಾಗಿ ಹಲವಾರು ವರ್ಷಗಳಿಂದ ಆಳವಾಗಿ ಯೋಚಿಸುತ್ತಿದ್ದು, ಇನ್ನೂ ಸಮಾಧಾನಗೊಳ್ಳದೆ ಕಂಡಷ್ಟನ್ನಷ್ಟೇ ಚಿತ್ರಿಸಲು ಯತ್ನಿಸಿದ್ದಾರೆ ಶ್ರೀರಂಗರು ತಮ್ಮ ಕಾದಂಬರಿಕೃತಿ "ಪ್ರಕೃತಿ"ಯಲ್ಲಿ.

ಏನೇ ಇರಲಿ, ಶ್ರೀರಂಗರು ಸಮಾಜಪ್ರಕೃತಿಯ ಸಹಜ ಚಿತ್ರಣವನ್ನೇ ರೂಪಿಸಿದ್ದಾರೆ. ಪ್ರಾಯಶಃ ಕನ್ನಡದ ಯಾವ ಬರೆಹ-ಗಾರನೂ ಇಷ್ಟು ಯಶಸ್ವಿತೆಯನ್ನು ಹೊಂದಿರಲಾರನು. ಸಮಾಜದ ವಿವಿಧಮುಖಗಳ ಕಡೆಗೆ ಶ್ರೀಯುತರು ಆಳವಾಗಿ ದೃಷ್ಟಿಹರಿಸಿ ನಿಷ್ಪಕ್ಷಪಾತಿಯಾಗಿ ಅಭಿಪ್ರಾಯ ಸೂಚಿಸಿದ್ದಾರೆ. ತಾನು ಇಂತಹದೇ ಪಂಗಡಕ್ಕೆ ಸೇರಿದ ಬರೆಹಗಾರನೆಂಬ ಕ್ಷುಲ್ಲಕ ಮನೋವೃತ್ತಿ ಅವರಲ್ಲಿ ಇಲ್ಲ. ಹತ್ತುಮಂದಿಯ ಕೂಟವೇ ಸಮಾಜ; ಅಲ್ಲಿಲ್ಲದ ಸಮಸ್ಯೆಗಳಿಲ್ಲ—ಅವುಗಳೆಲ್ಲವುಗಳ ಪರಿಚಯವು ಶ್ರೀರಂಗರಿಗಿದೆ. ಅಲ್ಲದೆ ಸಮಾಜದ ಸಹಜಸ್ವಭಾವವನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಇದನ್ನೇ ಅವರು "ಮಾನವನ ಮಹಾಭಾರತ" ಎಂದು ಕರೆದಿದ್ದಾರೆ. ಈ ಮಹಾಭಾರತದಲ್ಲಿ ಮೇಲು—ಕೀಳೆಂಬ ಎರಡು ತಂಡಗಳಿವೆ. ಈ ತಂಡ-ದ್ವಂದ್ವಗಳೊಳಗೆ ನಡೆಯುವ ಪ್ರಚ್ಛನ್ನ ಯುದ್ಧ (Edd-war)ವೇ ಮಹಾಭಾರತಯುದ್ಧ. ಈ ಹೋರಾಟದ ಎದುರಿನಲ್ಲಿ ನಾವು ಧೃತರಾಷ್ಟ್ರನಂತೆ ಕುರುಡರಾಗಿದ್ದೇವೆ. ನಮ್ಮ ಜ್ಞಾನದೃಷ್ಟಿ ಇನ್ನೂ ತೆರೆದಿಲ್ಲ. ಶ್ರೀರಂಗರು ಸಂಜಯನ ತೆರದಲ್ಲಿ ನಮಗೇನನ್ನೋ ಹೇಳುತ್ತಿದ್ದಾರೆ. ಅವರು ಕಾದಂಬರೀ ರೂಪದಲ್ಲಿ ನಮ್ಮ ಸಮಾಜ-ದರ್ಶನವನ್ನು ನಮಗೆ ಮಾಡಿಸಿಕೊಟ್ಟಿದ್ದಾರೆ.

ಕಾದಂಬರಿಯು ಎರಡು ಮುಖ್ಯ ಮನೆತನಗಳ ಪರಂಪರೆಗಳಿಂದ ಸಾಗುತ್ತಿದೆ. ಒಂದು—ಸಮಾಜದಲ್ಲಿ ಮಡಿವಂತ-ಸಿರಿವಂತರೆನಿಸಿದ ಬ್ರಾಹ್ಮಣರ ತಲೆಮಾರುಗಳು; ಇನ್ನೊಂದು— ಅಸ್ಪೃಶ್ಯರೆನಿಸಿದ ಬಡ ಹೊಲೆಯರ ಪೀಳಿಗೆಗಳು. ಬ್ರಾಹ್ಮಣವರ್ಗದ ರಘುನಾಥರಾಯರ ಹಿರಿಯರ ಕಾಲದಿಂದಲೂ ಪರಸ್ಯಾ (ಪರಶುರಾಮ)ನ ಹಿರಿಯರು, ಬ್ರಾಹ್ಮಣರ ಅಡಿಯಾಳಾಗಿದ್ದರು. ಆಗ ಹೊಲೆಯರೆಂದರೆ ಸಮಾಜ-ದಲ್ಲಿ ಅಯೋಗ್ಯರು. ಅವರು ಬಹಳ ದೂರವಿರಬೇಕು— ಎಂಬ ನಂಬಿಕೆ ಹರಡಿತ್ತು. ಇದಕ್ಕೆ ಸರಿಯಾಗಿ ಹೊಲೆಯರೂ ತಾವು ಅಸ್ಪೃಶ್ಯರು ಎಂದೆಣಿಸಿಕೊಂಡು, ಬ್ರಾಹ್ಮಣರಿಗೆ ತಮ್ಮ ನೆರಳು ಕೂಡಾ ತಾಗಬಾರದು ಎಂಬ ಮೂಢಭಾವನೆಯಿಂದ ದೂರವಾಗಿಯೇ ಇದ್ದರು; ಆದರೆ ಕಾಲಚಕ್ರವು ತಿರುಗುತ್ತಲೇ ಇತ್ತು.

ರಘುನಾಥರಾಯರು ಮತ್ತು ಪರಸ್ಯಾ ಸುಮಾರು ಒಂದೇ ಪ್ರಾಯದವರು. ಪರಸ್ಯಾ ಧನಿಗಳ ಮನೆಗೆ ಆಗಾಗ ಬಂದುಹೋಗು-ತ್ತಿದ್ದ. ಇದರಿಂದ ಪುಟ್ಟ ಪರಸ್ಯಾನಿಗೂ ಸಮವಯಸ್ಕರಾದ ರಘುನಾಥರಾಯರಿಗೂ ಸ್ನೇಹ ಬೆಳೆಯಿತು. ಒಟ್ಟಿಗೆ ಆಡುತ್ತಿದ್ದರು; ಇದನ್ನು ಕಂಡ ರಘುನಾಥರಾಯರ ತಂದೆ, ಪರಸ್ಯಾನನ್ನು ಕೈಮುರಿದು ಹೋಗುವಂತೆ ಹೊಡೆದರು. ಅಂದಿಗೇ ಹರಿಜನರಲ್ಲಿ ಮಡಿಜನರು ವೈಷಮ್ಯದ ವಿಷಬೀಜವನ್ನು ಬಿತ್ತಿದರೆನ್ನಬೇಕು. ಆದರೂ ಪರಸ್ಯಾನು ಮುಂದೆಯೂ ಮಡಿವಂತರ ಅಡಿಯಾಳಾಗಿಯೇ ಇದ್ದ.

ರಘುನಾಥರಾಯರಿಗೆ ಒಬ್ಬಳೇ ತಂಗಿ, ಸರಸ್ವತಿ. ಅಣ್ಣ-ತಂಗಿ ಇಬ್ಬರೇ ಉಳಿಯುವುದು ರಘುನಾಥರಾಯರ ವಂಶಪಾರಂಪರ್ಯದಿಂದ ಬಂದ ಒಂದು ವಿಶೇಷವಾದ ಸಂಪ್ರದಾಯವೆನ್ನಬೇಕು. ಅದಕ್ಕೆ ಸರಿ-ಯಾಗಿ ರಘುನಾಥರಾಯರಿಗೆ ಒಬ್ಬನೇ ಮಗ ಗುಂಡುರಾಯ; ಹಾಗೆಯೆ ಮಗಳು ಶಾಂತಕ್ಕ. ಸರಸ್ವತಿಯು ಬಾಲ್ಯದಲ್ಲೇ ವಿಧವೆಯಾಗಿ ತನ್ನ ತವರುಮನೆ ಸೇರುತ್ತಾಳೆ. ಅವಳಿಗೂ ಒಬ್ಬಳೇ ಮಗಳಿರುವಳು; ಅವಳೇ ಸುಬ್ಬಕ್ಕ.

ರಘುನಾಥರಾಯರಿಗೆ ತಮ್ಮ ಮನೆತನದ ಗೌರವ, ಮಾನ-ಮರ್ಯಾದೆಗಳನ್ನೆಲ್ಲಾ ಉಳಿಸಿಕೊಂಡು ಬರುವ ಆಶೆ. ಹಾಗೆಯೇ ತಮ್ಮ ಸಿರಿವಂತಿಕೆಯನ್ನು ಉಳಿಸಿ ಬೆಳೆಸಿ, ಬೆಳಗಿಸುತ್ತಿದ್ದರು. ಆದರೆ ಅವರ ಮಗ ಗುಂಡಣ್ಣನು ಪೋಲಿಯಾಗುತ್ತಾನೆ; ಇಲ್ಲಸಲ್ಲದ

ಅತ್ಯಾಚಾರ–ಅನಾಚಾರಗಳನ್ನು ಮಾಡುತ್ತಾನೆ. ರಘುನಾಥರಾಯರ ಗೌರವದ ಮನೆತನದಲ್ಲಿ ಉದಿಸಿದ ಉತ್ಪಾತಕೇತುವಾಗುತ್ತಾನೆ.

ಇದೇ ವೇಳೆ ಪರಸ್ಯಾನ ಮಗ ಕಾಳ್ಯಾನೂ ಬೆಳೆಯುತ್ತಾನೆ. ಅವನು ಗುಂಡಣ್ಣನ ಸಮವಯಸ್ಕನು. ಇವರಿಬ್ಬರ ಬಾಲ್ಯವೂ ಬಹಳ ನಿಕಟವಾಗಿಯೇ ಸಾಗುತ್ತದೆ. ರಘುನಾಥರಾಯರೂ ಇದನ್ನು ವಿರೋಧಿಸುತ್ತಿದ್ದರು. ಕಾಳ್ಯಾನು ಪರಸ್ಯಾನಂತಲ್ಲ! 'ಹೊಲೆಯರೂ ಬ್ರಾಹ್ಮಣರಂತೆ ಮನುಷ್ಯಜೀವಿಗಳೇ!' ಎಂಬ ಭಾವನೆ ಅವನಲ್ಲಿ ಹುಟ್ಟುತ್ತದೆ. ಅವನು ಅಸ್ಪೃಶ್ಯತಾನಿವಾರಣೆಯ ಚಳವಳಿಯಲ್ಲಿ ಭಾಗವಹಿಸುತ್ತಾನೆ. ಆದರೆ ಅವನ ಮಡದಿ ಅಷ್ಟರಲ್ಲೇ ಬೀದಿಗಿಳಿಯುತ್ತಾಳೆ; ಅತಿಕಾಮಿಯಾದ ಗುಂಡಣ್ಣನ ಸೂಳೆಯಾಗುತ್ತಾಳೆ. ಗುಂಡಣ್ಣನಿಗೆ ಕಾಳ್ಯಾನ ಮಡದಿಯಲ್ಲಿ ಮೊದಲು ಮೊದಲು ಅನುರಾಗವಿದ್ದರೂ ಕೊನೆಗೆ ಅವಳನ್ನು ಬಿಟ್ಟು, ಚೆನ್ನಿ ಎಂಬ ಇನ್ನೊಬ್ಬ ಸ್ತ್ರೀಯನ್ನು ಸೂಳೆಯನ್ನಾಗಿ ಮಾಡಿಕೊಳ್ಳುವನು. ಅಂತೂ ಅಂತ್ಯದಲ್ಲಿ ಅವನು ತನ್ನ ಮನೆಯ ಮರ್ಯಾದೆ, ಘನವಂತಿಕೆ, ಸಿರಿವಂತಿಕೆ ಎಲ್ಲದರ ನಾಶಕ್ಕೆ ಕಾರಣನಾಗುತ್ತಾನೆ.

ಕಾಳ್ಯಾನಿಗೆ ಸಮಾಜದಲ್ಲಿ ಮುಂದೆ ಬರುವ ಹಂಬಲ. ತನ್ನ ಜೀವನದಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸುಧಾರಣೆಗಳನ್ನು ಮಾಡಿಕೊಳ್ಳುವನು. ಅಸ್ಪೃಶ್ಯತಾನಿವಾರಣೆಗಾಗಿ ಹೋರಾಡುತ್ತಿರುವ ಶ್ಯಾಮಣ್ಣನೊಡನೆ ಆಶ್ರಯವನ್ನು ಪಡೆಯುತ್ತಾನೆ ಆದರೆ ತನ್ನ ಮಡದಿ ಗಂಗಿಯನ್ನು ಹಾಳುಗೈದ ಗುಂಡಣ್ಣನಲ್ಲಿ ಅವನ ದ್ವೇಷ ಬೆಳೆಯುತ್ತದೆ. ಅಂತೆಯೇ ಗುಂಡಣ್ಣನಿಗೆ ಕಾಳ್ಯಾನ ಮೇಲೆ ವೈರ. ಈ ವೈರವೇ ಕಾಳ್ಯಾನನ್ನು ಅವನ ಹುಟ್ಟೂರಾದ ಬಿಟ್ಟೂರಿನಿಂದ ಮುಂಬಯಿಗೆ ಅಟ್ಟುವುದು. ಕಾಳ್ಯಾನು ಬಿಟ್ಟೂರನ್ನು ಬಿಟ್ಟಗಲುವಾಗ, ತನ್ನ ಐದು ವರ್ಷದ ಭರಮಪ್ಪನನ್ನು ಕರೆದೊಯ್ಯುವನು. ಮುಂಬಯಿಯಲ್ಲಿ ಅತಿ ಕಷ್ಟದಿಂದ ಮಗನಿಗೆ ಓದಿಸಿ ವಿದ್ಯಾವಂತನನ್ನಾಗಿ ಮಾಡುತ್ತಾನೆ. ಕಾಳ್ಯಾನ ಹಿರಿಯರು ಕನಸಿನಲ್ಲೂ ಕಂಡಿರದ ಮಟ್ಟಕ್ಕೆ ಭರಮಪ್ಪನು ಬರುತ್ತಾನೆ. ಅವನು ಮುಂದೆ ದೊಡ್ಡ ಸರಕಾರೀ ನೌಕರಿಯನ್ನು ನೋಡುತ್ತಿರುವ 'ಬಿ. ರಾಮು' ಆಗುತ್ತಾನೆ.

ಇತ್ತ ಗುಂಡಣ್ಣನು ಹೊಂಡಕ್ಕೆ ಬಿದ್ದಂತೆಯೇ. ಅವನಿಗೆ ಊರಲ್ಲಿ ಎಲ್ಲರೊಡನೆಯೂ ದ್ವೇಷ ಬೆಳೆಯುತ್ತದೆ. ಸರಸ್ವತಿಯ ಮಗಳು ಸುಬ್ಬಕ್ಕನನ್ನು ಮದುವೆ ಮಾಡಿಕೊಳ್ಳುತ್ತಾನೆ. ಇದೂ ಹಿರಿಯರ ಒತ್ತಾಯದಿಂದ. ಆದರೆ ಈ ಸತಿ–ಪತಿಗಳ ಜೀವನವು ತೀರ ನೀರಸವಾಗುವುದು. ಈ ಕಂಬನಿಯ ಕುಯಿಲಿನಲ್ಲೇ ಸುಬ್ಬಕ್ಕ, ರಾಗಣ್ಣ ಮತ್ತು ಒಬ್ಬ ಮಗಳನ್ನು ಹಡೆಯುತ್ತಾಳೆ ಗುಂಡಣ್ಣನ ತಂಗಿ ಶಾಂತಕ್ಕ, ವಿಧವೆಯಾಗಿ ತವರುಮನೆ ಸೇರುತ್ತಾಳೆ. ಈ ಎಲ್ಲಾ ದುಃಖಸಾಗರದಲ್ಲಿ ಮುಳುಗಿ ರಘುನಾಥರಾಯರು ತುಂಬಾ ಕಷ್ಟಪಡುತ್ತಾರೆ. ಲೋಕದಲ್ಲಿ ನಡೆಯುತ್ತಿರುವ ಈ ಎಲ್ಲಾ ಅದಲು–ಬದಲು ಅವರನ್ನು ಹುಚ್ಚರನ್ನಾಗಿ ಮಾಡುವುದು. ಅವರೇ ಬದಲಾಗಿಬಿಡುವರು. ಕೊನೆಗೆ ತನ್ನ ವಿಧವೆಯಾದ ಮಗಳು ಶಾಂತಕ್ಕನನ್ನು, ಶಾಮಣ್ಣನೊಡನೆ ಮದುವೆಯಾಗಲು ಒಪ್ಪಿಬಿಡುವರು. ಶಾಂತಕ್ಕನೂ ಶಾಮಣ್ಣನೂ ಸತ್ಯಾಗ್ರಹದಲ್ಲಿ ಸೇರಿ ಸೆರೆಮನೆ ಸೇರುವ ಸುದ್ದಿ ಕೇಳಿದ ದಿನವೇ ರಘುನಾಥರಾಯರು ಇಹಲೋಕವನ್ನು ತ್ಯಜಿಸುತ್ತಾರೆ. ಶಾಮಣ್ಣನೇ ರಾಗಣ್ಣನ ಮುಂದಿನ ವಿದ್ಯಾಭ್ಯಾಸದ ಹೊಣೆಯನ್ನು ಹೊತ್ತಿದ್ದನು. ಈ ಮಧ್ಯೆ ಗುಂಡಣ್ಣನನ್ನು ಯಾರೋ ಕೊಲೆ ಮಾಡುತ್ತಾರೆ. ಸುಬ್ಬಕ್ಕನ ಕುಂಕುಮಭಾಗ್ಯ ಅಳಿಯುತ್ತದೆ. ಶಾಮಣ್ಣನ ಸೆರೆಮನೆವಾಸ ಮುಗಿದಿಲ್ಲವಾದ್ದರಿಂದ, ರಾಗಣ್ಣನ ವಿದ್ಯಾಭ್ಯಾಸದ ಭಾರವನ್ನು ಸುಬ್ಬಕ್ಕ ಬಹಳ ಕಷ್ಟದಿಂದ ಹೊರುತ್ತಾಳೆ. ಕೊನೆಗೆ ರಾಗಣ್ಣ ಎಂ. ಎ. ಪ್ಯಾಸು ಮಾಡಿಕೊಳ್ಳುವನು. ಒಂದು ದಿನ ಬಿ. ರಾಮುನ ಅಡಿಯಾಳಾಗಿ ದುಡಿಯತೊಡಗುವನು.

ರಾಗಣ್ಣನನ್ನು ಆಫೀಸಿನ ಸಾಹೇಬರಾದ ಬಿ. ರಾಮು, "ನಿನ್ನ ಊರು ಬಿಟ್ಟೂರಲ್ಲವೇ? ಹೌದು, ನಾನು ಬಿಟ್ಟೂರನ್ನು ಚೆನ್ನಾಗಿ ಬಲ್ಲೆ" ಎನ್ನುತ್ತಾನೆ. ಆದರೆ ಇಬ್ಬರಿಗೂ ಬಿಟ್ಟೂರಿನ ವಿಷಯದಲ್ಲಿ ಗೊತ್ತಿರುವುದಾದರೊ ಪ್ರವಾಹದಿಂದ ನೊಗೆದ ಒಂದು ಬಿಂದುವಿನಷ್ಟು ಮಾತ್ರ.

ಈ ರೀತಿಯಲ್ಲಿ ಕಾದಂಬರಿ ಸರಾಗವಾಗಿ ಓಡುತ್ತದೆ. ಇದರಲ್ಲಿ ಬರುವ ಪ್ರತಿಯೊಂದು ಸನ್ನಿವೇಶಗಳೂ ನೈಜವನ್ನೆ ಪ್ರತಿಬಿಂಬಿಸುತ್ತವೆ. ಕಾದಂಬರಿಯು ಆರಂಭವಾಗುವುದು ಸಮಾಜದ ಕಟ್ಟು-ನಿಟ್ಟುಗಳು ಸಡಿಲಾದಲ್ಲಿಂದ. ಬ್ರಾಹ್ಮಣನಾದ ರಾಗಣ್ಣನು ಹೊಲೆಯನಾದ ಬಿ. ರಾಮುನ ಆಳಾದಲ್ಲಿಂದ. ಮೂರು ತಲೆಮಾರುಗಳ ಹಿಂದೆ ಇಂತಹ ಪರಿಸ್ಥಿತಿಯೊದಗೀತೆಂದು ಬಹುಶಃ ಯಾರೂ ಕನಸಿನಲ್ಲೂ ಎಣಿಸಿರಲಾರರು. ರಾಗಣ್ಣನ ಹೆಸರನ್ನೆಣಿಸಿಯೇ ಬಿ. ರಾಮು ಬಿಟ್ಟೂರನ್ನು ನೆನಸುವನು. ಇದರಿಂದಲೇ ಅವನು "ನಾನು ಬಿಟ್ಟೂರನ್ನು ಚೆನ್ನಾಗಿ ಬಲ್ಲೆನು" ಎನ್ನುವನು. ಆದರೆ ಅವನಿಗೆ ಹೆಚ್ಚೇನು ತಿಳಿದಿಲ್ಲ; ಅವನಿಗೆ ತಿಳಿಯದ ಸಂಗತಿಯೇ ಕಥಾವಸ್ತು.

ಆದರೆ ಈ ಕಥಾನಕದಲ್ಲಿ ಹಲವಾರು ತತ್ತ್ವಗಳು ಪ್ರತಿಪಾದಿತವಾಗುತ್ತವೆ. 'ಮಾನವನು ಬದಲಾಗುವುದಿಲ್ಲ, ಕೇವಲ ಕಾಲವು ಬದಲಾಗುವುದು' ಎಂದು ರಘುನಾಥರಾಯರೇ ಹೇಳುತ್ತಾರೆ. ಕಾಲವೆಂದರೆ ಬಾಹ್ಯಪ್ರಪಂಚವಿಷ್ಟೆ. ಮಾನವನ ಅಂತರದಲ್ಲಿ ಒಂದಿಷ್ಟೂ ಬದಲಿಗೆಡೆಯಿಲ್ಲ. ಅವನ ಆಚಾರ, ನಡೆವಳಿಕೆಗಳಲ್ಲಿ ಏನೋ ಒಂದಿಷ್ಟು ಸುಧಾರಣೆಯಾಗಬಹುದು, ಆದರೆ ಅವನ ಹುಟ್ಟುಗುಣ ಗಟ್ಟ ಹತ್ತಿದರೂ ಬಿಡದು—ಎಂಬಂತಾಗಿದೆ. ನೆಲದ ಮೇಲೆ ಬಳ್ಳಿ ಬೆಳೆಯುತ್ತಿದೆ. ಬಳ್ಳಿಯ ಎಲೆ ಉದುರಿ ಬಳ್ಳಿಗೇ ಗೊಬ್ಬರವಾಗುತ್ತದೆ. ಪುನಃ ಎಲೆಯಾಗುತ್ತದೆ ಇದರಿಂದ ನಮ್ಮ ಹೊರಗಿನ ಕಣ್ಣಿಗೆ ಪ್ರಕೃತಿಯ ಪ್ರತಿಯೊಂದು ಪ್ರವೃತ್ತಿಗಳೂ ಬದಲಾಗಿಯೂ ಬದಲಾಯಿಸದಂತಿದ್ದ ಪ್ರವಾಹವಾಗಿದೆ. ಇದು ಸೃಷ್ಟಿನಿಯಮ. ಇದನ್ನೇ ಸುಬ್ಬಕ್ಕನ ಅನುಭವದ ನುಡಿಯಿಂದ ಹೇಳಿಸುತ್ತಾ ಶ್ರೀರಂಗರು, ಕಾದಂಬರಿ-

ಯನ್ನು ಪೂರ್ತಿಗೊಳಿಸುವರು. ತನ್ನ ಮಾವ-ತಾಯಿಯರ ಛಾಯೆ-ಯನ್ನು ಸುಬ್ಬಕ್ಕ ತನ್ನ ಮಕ್ಕಳಾದ ಸರಸ್ವತಿ-ರಾಗಣ್ಣರಲ್ಲಿ ಕಾಣುತ್ತ " ಬಡಲು ಅನ್ನೋದೇ ಇಲ್ಲ ಈ ಹಾಳು ಜನ್ಮದಾಗ " ಎನ್ನುತ್ತಾಳೆ.

ಈ ಪ್ರಕೃತಿ ತನ್ನ ಪ್ರವಾಹದಲ್ಲಿ ಮಾನವನನ್ನು ಕೊಚ್ಚಿಕೊಂಡು ಹೋಗುತ್ತದೆ. ಅವನು ಕೇವಲ ಮರದ ತುಂಡು. ಒಮ್ಮೊಮ್ಮೆ ಒಟ್ಟಿಗೆ ಎರಡು ಮರದ ಕೊರಡುಗಳು ಪ್ರವಾಹಕ್ಕೆ ತುತ್ತಾಗಿ ತಮ್ಮ ಸಾಗಾಟವನ್ನು ಪರಿಸ್ಥಿತಿಗೆ ತಕ್ಕಂತೆ ಬದಲಿಸಿ, ಕೆಲವೊಮ್ಮೆ ಪರಸ್ಪರ ತಾಟಿಕೊಂಡು ಮುಂದುವರಿಯುತ್ತವೆ ಇಂತಹ ತತ್ತ್ವಗಳು ಓದುಗನ ಹೃದಯವನ್ನು ವಿಕಾಸಗೊಳಿಸದೆ ಉಳಿಯಲಾರವು.

ಇನ್ನು ಈ ಕಾದಂಬರಿಯಲ್ಲಿ ಪ್ರತಿಪಾದಿತ ವಿಚಾರವೆಂದರೆ ಸಮಾಜದಲ್ಲಿ ಎಷ್ಟೆಲ್ಲಾ ಸಮಸ್ಯೆಗಳು ಎದ್ದು ಕಾಣುತ್ತಿವೆ; ಕಾಡುತ್ತಿವೆ ಎಂದು. ಹೆಣ್ಣು-ಗಂಡಿನ ಸಮಸ್ಯೆ, ಜಾತಿ-ನೀತಿಯ ಸಮಸ್ಯೆ, ತರುಣರ ಸಮಸ್ಯೆ, ಹಣದ ಸಮಸ್ಯೆ ಇನ್ನೂ ಎಷ್ಟೆಷ್ಟೋ ಸಮಸ್ಯೆಗಳನ್ನು ನಾವು ಇಲ್ಲಿ ಕಾಣಬಹುದು. ಕಾದಂಬರೀಕಾರನು ಅವುಗಳ ನೈಜಸ್ವರೂಪ-ವನ್ನಷ್ಟೇ ಕೊಡಬಲ್ಲನು. ಅದರ ಹಿತಮಿತಗಳನ್ನು ನಾವು ತರ್ಕಿಸಿ-ಕೊಳ್ಳಬೇಕು. ಓದುಗನು ಕೇವಲ Spoon feed ಆಗಬಾರದು. ವಿವೇಚನಾಶಕ್ತಿಯು ಅವನಲ್ಲಿ ಹೆಚ್ಚಬೇಕೆಂದೇ ಶ್ರೀರಂಗರ ಮತ-ವಿರಬೇಕು. ಮತ್ತು ಅವರು ಪಕ್ಷಪಾತಿಯಲ್ಲವೆಂಬುದು ಇಲ್ಲಿ ಸ್ಪಷ್ಟ-ವಾಗಿ ಕಾಣುತ್ತದೆ. ತಾನು ಇಂತಹದೇ ಜಾತಿಗೆ ಸೇರಿದ ಬರೆಹ-ಗಾರನು; ಇದೇ fashion ನಲ್ಲಿ ಬರೆಪವನು ಎಂಬ ಹಟಮಾರಿತನ ಅವರಲ್ಲಿಲ್ಲ. ಇದರಿಂದ ಸಮಾಜದ ಮೂಲೆ-ಮೂಲೆಗೆ ಅವರು ತಮ್ಮ ದೃಷ್ಟಿಯನ್ನು ಹರಿಯಿಸಿ, ಅದರ ನಿಜರೂಪವನ್ನು ನಮ್ಮ ಮುಂದಿಟ್ಟಿ-ರುವರು. ಇದು ಯಾರಿಗೆ ತಾನೇ ಬೇಡವಾದೀತು ?

ಕೊನೆಯದಾಗಿ ಶ್ರೀರಂಗರ ವ್ಯಕ್ತಿಚಿತ್ರಣ. ಈ ವಿಚಾರದಲ್ಲಿ ಶ್ರೀಯುತರು ತುಂಬಾ ಪಳಗಿದವರೆನ್ನಬೇಕು. ಸಮಾಜದ ಯಾವ ವ್ಯಕ್ತಿಯಲ್ಲಾಗಲಿ, ಬದಲಾವಣೆ ಕಾಣದಿರುವುದು ಅಪರೂಪ; ಒಬ್ಬ-ನನ್ನು ಆದರ್ಶವ್ಯಕ್ತಿಯನ್ನಾಗಿ ಮಾಡಲು ಇಂದು ಹಲವು ಲೇಖಕರು ಸ್ವರ್ಗಲೋಕದ ಇಂದ್ರನನ್ನೇ ತಮ್ಮ ಪುಸ್ತಕದೊಳಗೆ ಕೂಡಿಸಿಬಿಡು-ತ್ತಾರೆ.....ಅದು ಸರಿಯಲ್ಲ. ಮನುಷ್ಯನಲ್ಲಿ ತಪ್ಪು-ಒಪ್ಪುಗಳು ಇದ್ದೇ ಇರುತ್ತವೆ. ಹೆಚ್ಚು ಕಡಿಮೆ ಇಷ್ಟೆ. ಈ ಕಾದಂಬರಿಯಲ್ಲಿ ಬರುವ ರಘುನಾಥರಾಯರು ಹೇಗಿದ್ದವರು ಹೇಗಾಗಿಬಿಟ್ಟರು ! ಆದಿಯಲ್ಲಿ ಶುದ್ಧಂಭಟ್ಟರಾದ ಅವರು ಅಂತ್ಯಕಾಲದಲ್ಲಿ ವಿಧವಾವಿವಾಹಕ್ಕೂ ಒಪ್ಪಿಗೆ ಕೊಡುವರು. ಆದರ್ಶ ಜೀವಿಯಾದ ರಾಮಣ್ಣನು ಕೂಡ ತನ್ನ ಬ್ರಹ್ಮಚರ್ಯವ್ರತಕ್ಕೆ ತಿಲಾಂಜಲಿಯಿತ್ತು, ವಿಧವೆಯನ್ನು ಉದ್ಧರಿಸಲೋಸುಗ ಕಾಂತಕ್ಕನ ಕೈ ಹಿಡಿಯುತ್ತಾನೆ. ಇನ್ನು ಗುಂಡಣ್ಣ, ಕಾಳಪ್ಪರ ವಿಚಾರ: ಗುಂಡಣ್ಣ ಅಧಃಪತನ ಹೊಂದುವಾಗ ಸಂಪೂರ್ಣ-ವಾಗಿ ತನ್ನ ಅಂದವನ್ನೇ ಕಳೆದುಕೊಂಡಿದ್ದಾನೆ. " ವಿನಾಶಕಾಲೇ ವಿಪರೀತ ಬುದ್ಧಿ " ಯನ್ನು ಅವನು ಹೊಂದಿ ಹಾಳಾಗುತ್ತಾನೆ. ಕಾಳ-ಪ್ಪನಿಗೆ ತನ್ನ ಮಗನನ್ನು ಉತ್ತಮ ಪಟ್ಟಕ್ಕೆ ತಂದು, ಸಮಾಜದಲ್ಲಿ ಒಂದು ಸ್ಥಾನವನ್ನು ಗಳಿಸುವ ಆಶೆ. ಈ ಆದರ್ಶದಲ್ಲಿ ಕಾಳಪ್ಪನು ಹೆಣ್ಣಿನ ಪುಟ್ಟಿಗೆ ಸಾಧನೆಯನ್ನು ಮಾಡಿ ಗೆದ್ದಿರುವನು. ಇದೇ ರೀತಿ ಸುಬ್ಬಕ್ಕನೂ ಒಬ್ಬಳು. ನಾವು ಎಂದೆಂದೂ ಕಾಣಬಹುದಾದ ಆದರ್ಶ-ಮಹಿಳೆ ಅವಳು ಗಂಡನನ್ನು ಸರಿದಾರಿಗೆ ತರಲು ಅವಳು ಸತತ ಯತ್ನಿಸುತ್ತಾಳೆ. ಕಡೆಗೆ ತನ್ನ ಮಕ್ಕಳನ್ನು ಸರಿದಾರಿಯಲ್ಲೇ ಕೊಂಡೊಯ್ಯುತ್ತಾಳೆ. ಇದರ ಫಲವಾಗಿ ರಾಗಣ್ಣ ಯೋಗ್ಯ ಹುಡುಗ-ನಾಗುತ್ತಾನೆ. ಕಾದಂಬರಿಯಲ್ಲಿ ಸ್ವಾರ್ಥಿಗಳಾದ ವ್ಯಕ್ತಿಗಳೆಂದರೆ ರಾಮಣ್ಣ ಮತ್ತು ಗಂಗಿ.

ಇಷ್ಟೆಲ್ಲ ಮಹತ್ತ್ವಪೂರ್ಣವಾಗಿಯೂ ಪ್ರತಿಭಾಪೂರ್ಣವಾಗಿಯೂ ಶ್ರೀರಂಗರು "ಪ್ರಕೃತಿ"ಯನ್ನು ಚಿತ್ರಿಸಿದ್ದಾರೆ. ಹಿರಿಯ ಸಾಹಿತಿಗಳಾದ ಅವರ ಸಾಹಿತ್ಯಕೌಶಲ್ಯದ ಕುರಿತು ನಾನೇನೂ ಹೆಚ್ಚು ಹೇಳುವ ಅವಶ್ಯವಿಲ್ಲ. ಕಾವ್ಯಮಯವಾಗಿ ಹರಿಯುತ್ತಿದೆ ಅವರ ಭಾಷೆ. ಓದುಗನ ಓಟವು, ಭಾಷೆ. ಭಾವಗಳೊಂದಿಗೆ ಬರೆಹಗಾರನ ಹಿಂದೆಯೇ ಸಾಗು-ತ್ತದೆ. ಕೊನೆಗೆ ಇಬ್ಬರೂ ಐಕ್ಯರಾಗುವಷ್ಟು ಸತ್ತ್ವಪೂರ್ಣವಾಗಿದೆ ಈ ಕೃತಿ! ಸಮಾಜದಲ್ಲಿ ಬರುವ ಪ್ರತಿ ಸನ್ನಿವೇಶ-ಸಮಸ್ಯೆಗಳಿಗೂ ಇಲ್ಲಿ ಸ್ಥಾನವಿದೆ; ಪ್ರತೀಕವಿದೆ. ಎಂದೆಂದೂ ಬದಲಾಗದಂತಹ ಹಸಿವು, ಆಸರು, ಪ್ರೇಮ-ಕಾಮಗಳನ್ನು ನಾವಿಲ್ಲಿ ಸ್ಪಷ್ಟವಾಗಿ ಕಾಣುತ್ತೇವೆ. ಅವು ಎಲ್ಲೆಲ್ಲೂ, ಎಂದೆಂದೂ ಅಳಿಯದೆ ಉಳಿದಿವೆ; ಆದರೆ ಮಾನ-ವನ ಬಾಹ್ಯಪ್ರಪಂಚವನ್ನು ದಿನೇ ದಿನೇ ಅದಲು ಬದಲು ಮಾಡುತ್ತ ಅಂತರ್ಯದೊಳಗೆ ಯಥಾಪ್ರಕಾರವಾಗಿಯೇ ಹೆಡೆಯಾಡುತ್ತಲೇ ಇದೆ. ಇವೆಲ್ಲವುಗಳ ವಿಚಾರಗಳು ಪ್ರಶ್ನಾಕಾರವಾಗಿ ಓದುಗನ ಮುಂದೆ ಬಂದು ನಿಲ್ಲುತ್ತವೆ. ಕೃತಿಯೇನೋ ಚಿಕ್ಕದು; ರೀತಿಯೇನೋ ಚೊಕ್ಕದು; ಗತಿ ಮಾತ್ರ ಸಿಕ್ಕದ್ದು. ಈ ಕೃತಿಯನ್ನೋದಿ ಮುಗಿಸಿದಾಗ, ಏನೋ ! ದೊಡ್ಡ ಸಾಹಸವನ್ನು ನಾವು ಮಾಡಿಮುಗಿಸಿದಂತೆ ನಮಗೆ ಭಾಸ-ವಾಗುತ್ತದೆ. "ಪ್ರಕೃತಿ"ಯನ್ನು ಪೂರಾ ಓದಿ, ಪುಟ ಮುಚ್ಚಿ ಕುಳಿತಾಗ, ಕಣ್ಣು ತನ್ನಿಂದ ತಾನೇ ಮುಚ್ಚಿಕೊಳ್ಳುವುವು. ಆದರೆ "ಮಾನವನ ಮಹಾಭಾರತವು" ಎದುರಿನಲ್ಲೇ ಕುಣಿಯುವುದು ಕಾಣುತ್ತದೆ, ದಿವ್ಯದೃಷ್ಟಿಗೆ.

ಇಂತಹ ಸುಕೃತಿಯನ್ನು ಕನ್ನಡಬಂಧುಗಳಿಗೆ ಒದಗಿಸಿಕೊಟ್ಟ ಶ್ರೀರಂಗರು ಕೃತಾರ್ಥರೇ ಸರಿ. ಇವರಿಂದ ಇನ್ನೂ ಇನ್ನೂ ಇಂತಹ ಉತ್ತಮಕೃತಿಗಳು ಬರಲಿ.

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಚಂದ್ರರೋದನ' ಎಂಬ ನವ್ಯಕವನದ ವಿಮರ್ಶೆ ಒಬ್ಬರೇ ಒಬ್ಬರಿಂದ ಬಂದಿದೆ; 'ಪತಿವ್ರತೆ'ಎಂಬ ಕಥೆಯನ್ನು ವಿಮರ್ಶಿಸಿದ ಲೇಖನಗಳು ೧೦ ಜನರಿಂದ ಬಂದಿವೆ. ವಿಮರ್ಶಕರ ವಿವರ ಹೀಗಿದೆ:

'ಚಂದ್ರರೋದನ' ವನ್ನು ವಿಮರ್ಶಿಸಿದವರು:

೧. ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ), ಹಳ್ಳೂರ.

'ಪತಿವ್ರತೆ' ಯನ್ನು ವಿಮರ್ಶಿಸಿದವರು:

೧. 'ಅಗಜಾಪತಿ' ಅಕ್ಕಲಕೋಟೆ. ೨. ಶ್ರೀ. ಭೀಮಪ್ಪ ನಡುವಿನಮನಿ, ತರ್ಲಘಟ್ಟ. ೩. ಶ್ರೀ. ಕಂ. ರಮಾನಾಥರಾಯ, ಬಾಳಗ್ರಾಮ—ಕುಂಬಳಕೆರೆ. ೪. ಶ್ರೀ. ಕುಂಬ್ಳೆಕೆರೆ ಭಾಸ್ಕರರಾಯ, ಸುರತಕಲ್ಲು. ೫. ಶ್ರೀ ಕೆ ಎಸ್. ಶರ್ಮಾ, ಕಾಸರಗೋಡು. ೬. ಶ್ರೀ. ಪಡಾರು ನರಸಿಂಹಶಾಸ್ತ್ರಿ (ದ. ಕ.). ೭. ಶ್ರೀ. ಲಕ್ಷ್ಮಣ ಜೋಶಿ, ಕೂಡ್ಲಿಗಿ (ಬಳ್ಳಾರಿ ಜಿಲ್ಲಾ). ೮. ಶ್ರೀ. ಪಂಚಾಕ್ಷರಿ ಶಿ. ಹೊಸಮಠ, ಎಂ. ಎಚ್. ಸ್ಕೂಲ್, ಗೋಕಾಕ ೯. ಶ್ರೀ. ಉ ಮೋಹನರಾವ್, ಉಡುಪಿ. ೧೦. ಎಂ. ಆರ್. ಭಟ್ಟ, ಮದ್ಗುಣಿ (ಉ. ಕ.).

ಎಲ್ಲ ವಿಮರ್ಶೆಗಳನ್ನು ನಮ್ಮ ಸಂಪಾದಕ ಸಮಿತಿಯವರೇ ಪರೀಕ್ಷಿಸಿ ತಮ್ಮ ತೀರ್ಮಾನವನ್ನು ಕೊಟ್ಟಿರುವರು:

೧. ನವ್ಯಕವನಗಳನ್ನು ಅರ್ಥಮಾಡಿಕೊಳ್ಳುವವರೆಷ್ಟು ಜನರೋ! ಒಂದು ಕಾಲದಲ್ಲಿ ಗೂಢವಾದವೆಂಬ ಹೆಸರಿನಿಂದ ಸಾಮಾನ್ಯಜನರಿಗೆ ತಿಳಿಯದಂತಹ ಕವನಗಳ ನಿರ್ಮಿತಿಯಾಗುತ್ತಿತ್ತು. ವಾಸ್ತವವಾದಿಗಳೆನಿಸಿಕೊಳ್ಳುವವರಿಂದ ಅವು ಟೀಕೆ ಮಾಡಿಸಿಕೊಳ್ಳುತ್ತಿದ್ದುವು. ಇಂದು ವಾಸ್ತವವಾದಿಗಳೆನಿಸಿಕೊಂಬವರಿಂದಲೇ ನವ್ಯತೆಯ ಹೆಸರಿನಿಂದ, ಸಾಮಾನ್ಯರಿಗೆ ತಿಳಿಯದಂತಹ ಕವನಗಳು ನಿರ್ಮಾಣವಾಗುತ್ತಲಿವೆ. ಸಂಕೇತವು ಕಲೆಯನ್ನು ಸುಂದರಗೊಳಿಸುವುದೇನೋ ಸರಿಯೆ; ಆದರೆ ಸಂಕೇತಗಳ ಸಮುದಾಯದಲ್ಲಿ ಕೃತಿಯ ಅರ್ಥ-ಭಾವಗಳೇ ಅಡಗಿಹೋದಂತಿದ್ದರೆ, ಅವುಗಳನ್ನು ಹುಡುಕಿತೆಗೆಯಲು ಎಷ್ಟು ಜನರು ಸಿದ್ಧರಾದಾರು? ಇದೇ ಕಾರಣವಾಗಿಯೆ ಇರಬಹುದು; ಒಬ್ಬರಿಗಿಂತ ಹೆಚ್ಚು ಜನರು 'ನವ್ಯಕವಿತೆ' ಯನ್ನು ವಿಮರ್ಶಿಸುವುದಕ್ಕೆ ಮುಂದೆ ಬಂದಿಲ್ಲ. ನವ್ಯಕವಿತೆಯ ವಿಮರ್ಶೆಯ ಮಾದರಿಯೆಂದು, ಬಂದಿರುವ ಒಂದು ವಿಮರ್ಶೆಯನ್ನೇ ಜಯಂತಿಯಲ್ಲಿ ಪ್ರಕಟಿಸಬಹುದು.

೨. ಕಥೆಯ ವಿಮರ್ಶೆಗಳಲ್ಲಿ **ಶ್ರೀ. ಕೆ. ಎಸ್. ಶರ್ಮಾ** ಅವರ ವಿಮರ್ಶೆ ಅತ್ಯುತ್ತಮವಾಗಿದೆ. ಶ್ರೀ. ಲಕ್ಷ್ಮಣ ಜೋಶಿ, ಶ್ರೀ. ಪಡಾರು ನರಸಿಂಹಶಾಸ್ತ್ರಿ, ಶ್ರೀ. ಕುಂಬ್ಳೆಕೆರೆ ಭಾಸ್ಕರರಾಯ ಇವರ ವಿಮರ್ಶೆಗಳು ಉತ್ತಮವಾಗಿವೆ. ಮಿಕ್ಕುವೆಲ್ಲ ಸಾಮಾನ್ಯವಾಗಿವೆ. 'ಅಗಜಾಪತಿ' ಅವರು ಅಂಚೆಯ ಕಾರ್ಡಿನಲ್ಲಿ ಕಥೆಯ ಗುಣವನ್ನು ಕೊಂಡಾಡಿ ಬರೆದಿದ್ದಾರಷ್ಟೆ. ವಿಸ್ತಾರವಾದ ವಿಮರ್ಶೆಯನ್ನವರು ಮಾಡಿಲ್ಲ. ಆದರೂ ಗುಣಪ್ರಶಂಸೆಯು ಅವರ ಮಾತುಗಳಲ್ಲಿ ಔಚಿತ್ಯವಿದೆ.

ಮುಂದಿನ ಸಂಚಿಕೆಗಾಗಿ '**ಮುಕ್ತಿ**' ಎಂಬ ಕತೆಯನ್ನಾಗಲಿ, 'ಮರಾನ್ವೇಷಣೆ' ಎಂಬ ರೂಪಕವನ್ನಾಗಲಿ ವಿಮರ್ಶಿಸಿ ಕಳುಹಬೇಕು. ಕೇವಲ ಗುಣೈಕದೃಷ್ಟಿ, ಕೇವಲ ದೋಷೈಕದೃಷ್ಟಿ ಎರಡರಿಂದಲೂ ವಿಮರ್ಶನ ಕಾರ್ಯ ಸರಿಯಾಗಿ ನಡೆಯದೆಂಬುದನ್ನು ತರುಣ ವಿಮರ್ಶಕರು ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕು. ಗುಣ-ದೋಷವಿವೇಚನೆಗಳಿ ತಕ್ಕ ಉಚಿತ ಪ್ರಮಾಣಗಳನ್ನು ಕೊಟ್ಟು, ಅನುಭವಿಕರಾದ ಸಹೃದಯರು ಒಪ್ಪುವಂತೆ ಅವನ್ನು ಸಿದ್ಧಗೊಳಿಸಿ ತೋರಿಸಬೇಕು.

—ಸಂಪಾದಕ

ಚಂದ್ರರೋದನ

(ಕವನವಿಮರ್ಶೆ)

ಶ್ರೀ. ಆರ್. ಜಿ. ಕುಲಕರ್ಣಿ (ಬೆನಕಟ್ಟಿ) ಹಳ್ಳೂರ

卐

"ನವ್ಯಕವನ" ಎಂಬುದೊಂದಿದೆಯೆ ?— ಎಂದು ಕೇಳಿದವರಿಗೆ 'ಚಂದ್ರರೋದನ'ವೊಂದು ಉತ್ತಮ ಉತ್ತರವಾಗಿದೆ. ಕಾವ್ಯದ ನವ್ಯತೆಯು ಅನುಭವದ ಹೊಸ ಪದರುಗಳನ್ನು ತೋರಿಸುವುದರಲ್ಲಿದೆ. ಶ್ರೀ. ಅರವಿಂದ ನಾಡಕರ್ಣಿಯವರು ತಮ್ಮ ಕವನದಲ್ಲಿ, ಅನುಭವದ ಆ ನವೀನತೆಯನ್ನು ವಿಸ್ತಾರವಾಗಿ ಚಿತ್ರಿಸಿದ್ದಾರೆ.

'ಕನಸುಣಿಯಾದ ಮಾನವನಿಗೆ ನಿತ್ಯ ನಿರಾಶೆ ಕಾದಿದೆ' ಎಂಬ ಅನುಭವ ಬಹುಜನರಿಗಾಗಿದೆ; ಆದರೆ ಈ ಸಾಮಾನ್ಯವಾದ ವಿಚಾರ-ಪ್ರಣಾಲಿಯು—ಒಂದು ವಿಶಿಷ್ಟವ್ಯಕ್ತಿಯಲ್ಲಿ ರೂಪುಗೊಂಡ ಬಗೆ ಯಾವುದು ? ಬಾಳಿನ ಯಾವ ಯಾವ ಪದರುಗಳಲ್ಲಿ ಈ ವಿಚಾರವು ಖಂಡಖಂಡವಾಗಿ ಮೂಡಿ, ಕೊನೆಯಲ್ಲಿ ಒಂದು ಅಖಂಡ ತತ್ತ್ವವಾಗಿ ರೂಪುಗೊಂಡಿತು ? ಈ ಅಂಶಗಳನ್ನು ಅರಿಯುವುದರಲ್ಲಿಯೇ ಶ್ರೀ. ನಾಡಕರ್ಣಿಯವರ ಕವನದ ನವ್ಯತೆ ಸ್ಪಷ್ಟವಾಗುತ್ತದೆ.

"ತಾಯ ಬಾಹು ಬಳ್ಳಿಗಣ್ಣಿಯಲಿ ಆಳುವನು ರಾಮ ಚಂದ್ರನ ಕೊಡು ಎಂದು..........." ಎನ್ನುವ ಸೂತ್ರವಚನದಲ್ಲಿ ಕವಿಗಳು, ಮಾನವರ ಶಾಶ್ವತವಾದ ಕನಸನ್ನು ಮೂರ್ತೀಕರಿಸಿದ್ದಾರೆ. ಬಾಲ-ರಾಮನು ಚಂದ್ರನಿಗಾಗಿ ಹಂಬಲಿಸಿದರೆ, ಅವನೆದುರು ಭವಿಷ್ಯದ ಕನ್ನಡಿ ಹಿಡಿದು ಮಸುಕುಬಿಂಬವನ್ನು ತೋರಿಸುತ್ತಾರೆ.

ಕವಿಗಳು ಈವೊಂದು ಮೂಲ ಅನುಭವವನ್ನೂ, ಅದರ ಪರಿ-ಣಾಮದ ಅನಂತಮುಖಗಳನ್ನೂ (೧) ವಿಶಿಷ್ಟವಾದ ಪ್ರತಿಮಾ ಸೃಷ್ಟಿ, (೨) ಪಾರಿಭಾಷಿಕ ಶೈಲಿ (೩) ಅನುಭವದ ತೀವ್ರತೆಯಲ್ಲಿ ಮುಳುಗಿಹೋಗದ ವಿಷಾದಪೂರ್ಣ ನಗುವಿನ ಛಾಯೆ (೪) ಭಾವನೆಯನ್ನು ಬುದ್ಧಿಯ ಬೆಳಕಿನಲ್ಲಿ 'ಕ್ಷ' ಕಿರಣ ಬಿಟ್ಟು ಹಿಂಜಿ ನೋಡುವ ಪರಿ— ಈ ಎಲ್ಲ ವಿಧಾನಗಳ ಮೂಲಕ ಬಹು ಸುಂದರವಾಗಿ ಚಿತ್ರಿಸಿದ್ದಾರೆ.

ಮಾನವನ ಬಾಲ್ಯ, ಯವ್ವನ, ಮುಪ್ಪುಗಳು ಕವಿಗಳಿಗೆ ಮೂರು 'ಮಜಲು'ಗಳಾಗಿ ಕಂಡಿವೆ. ಜೀವಿಯು ಈ ಮೂರು ಮಜಲು-ಗಳಲ್ಲಿ ನಿಂತು :—

"ಅರಗಿಣಿಯ ಹಿಡಿಯಲು ಬೇಕೆಂಬುದೇ ಮಹದಾಶೆ."
ಅದರದೊಂದು ಜಾದು ಉಂಟು ಮಹಾಮಾಯಾ !"

ತೊಟ್ಟಿಲ ಕೂಸು ಬೆಳೆದು ಅಂಬೆಗಾಲಿಕ್ಕಿ ಮಳಲ ಮನೆ ಮಾಡಿ ಆಡುತ್ತಾನೆ, ಆದರೆ ಈ ಸ್ವಚ್ಛಂದ ಸ್ವಪ್ನಜೀವನ ಬಹುದಿನ ಬಾಳುವುದಲ್ಲ. ಲೋಕದ ಸಂತೆಯಲ್ಲಿ ಆತ ಸೇರಿ ಕುಬ್ಜನಾಗುತ್ತಾನೆ. "ಒಂದೊಂದು ಸಹ್ಯಾದ್ರಿ ಸಮಸ್ಯೆ ನಾಗಪಾಶ ಹಾಕಿ" ಆತನನ್ನು ಬಿಗಿಯುತ್ತದೆ. ಆಗ ಕೂಗುತ್ತಾನೆ :—

"ಮೈ ಬಿಗಿದ ನಾಗಪಾಶವ ಕಡಿಯ ಬಾರೋ ಗರುಡ ಮಹಾ-ಶಯ......."

ಇಲ್ಲಿಂದ ಮುಂದುವರಿದು ಮೂರನೆಯ ಮಜಲಿಗೆ ಜೀವಿಯು ಏರಿದಾಗ, ಅನುಗೋಲಿಗೆ ಆತು ನಿಂತ, ತತ್ತರಿಸುತ್ತಿರುವ ಮುಪ್ಪು ಅಡರುತ್ತದೆ. ಅದೆಂತಹ ಅಸಹ್ಯವಾಗಿದೆ !

"ಚರ್ಮವು ಗುಟ್ಟಿಕ್ಕೆ ತೂಗುವ ಹರಕು ಧೋತರ; ಥೂ ಒಗೆಯದನು !"

ದೇಹದ ಬಂಧನ ! ಬಾಳಿನ ಬಂಧನ ! ಎಲ್ಲಕ್ಕೂ ಹೇಸಿ ಆತ ಚೀರುತ್ತಾನೆ. ಓಡಿಹೋಗಲು ಹಂಬಲಿಸುತ್ತಾನೆ, ಎಲ್ಲಿಗೆ ? ಸರ್ವ-ಸುಖದುಃಖಾತೀತವಾದ ಸ್ವಪ್ನಸುಂದರ ಚಂದ್ರಲೋಕಕ್ಕೆ ! ಆದರೆ ಆತನಿಗೆ ನಿಜವಾದ ಚಂದ್ರ ಸಿಗುವುದೇ ಇಲ್ಲ. "ಬರೇ ಬಿಂಬವಷ್ಟೇ!"

"ಇದೊಂದು ನಿರಂತರ ಚಂದ್ರರೋದನ ಗೆಳೆಯಾ ?"

ಈ ಅನುಭವವನ್ನು ಕವಿಗಳು ಎಷ್ಟೊಂದು ಸುಂದರವಾಗಿ ಮನ ಹಿಡಿಯುವಂತೆ ಚಿತ್ರಿಸಿದ್ದಾರೆ ! ಈ ಸೌಂದರ್ಯದ ಮೂಲವಿರುವುದು— ಅವರ ವಿಶಿಷ್ಟವಾದ ಪ್ರತಿಮಾಸೃಷ್ಟಿಯಲ್ಲಿ.

ವ್ಯಕ್ತಿಗೆ "ಆಯಸ್ಕ್ರೀಮ್ ಚಪ್ಪರಿಸಬೇಕೆಂದು" ಆಶೆ; ಆದರೆ ಆತನ "ಪಾಲಿಗೆ ಕುಂಬಳಕಾಯೇ ಬರೆದಿದೆಯೇನು ?" ಎನ್ನುವ ಮಾತಿನಲ್ಲಿ ಆಶೆ ಮತ್ತು ವಾಸ್ತವತೆಗಳ ನಡುವಿನ ಅಂತರ ಎಷ್ಟೊಂದು ಪರಿಸ್ಫುಟವಾಗಿದೆ !

ಕನಸಿಗೊಂದು ಪರಿಮಿತಿಯುಂಟು. ಆಶೆ ಅತಿಯಾಗಿ "ಸಪ್ತ-ರೇಖೆಗಳ ದಾಟಿದರೆ ಸೊಂಟಕ್ಕೆ ಬೀಳುವುದು ಭಾರಿ ಒದೆತ !" ಎಂಬಲ್ಲಿ ಪೌರಾಣಿಕ 'ಸಪ್ತರೇಖೆ' ದಾಟಿದ ಸೀತೆಯ ದುರಂತಚಿತ್ರ ಕಣ್ಣಿಗೆ ಕಟ್ಟುತ್ತದೆ.

ಇವೆಲ್ಲವುಗಳಿಗೆ ಶಿಖರವಿಟ್ಟಂತೆ, ಜೀವನದ ಸಮಸ್ಯೆಗಳನ್ನು ಬಿಡಿಸಲಾರದೆ, ಆಟಪಾಟದಲ್ಲಿ ಮೈಮರೆವ ಗಂಡುಸಿನ ಚಿತ್ರ ಅಮೋಘವಾಗಿದೆ :—

"ಇಗೋ, ಸುಗ್ಗಾಯಿತು ಅಭಿಮನ್ಯು ಶರೀರ ಸಾಕಿನ್ನು ! ಮೀಸೆ-ಗಡ್ಡ ಬೋಳಿಸು. ಮೋರೆ ಥಳಥಳಿಸಲಿ. ಕೈಯಲ್ಲಿ ಹಿಡಿ ಪಾಟಿ ಪುಸ್ತಕ ಚೀಲ. ನಡೆ ಮೈದಾನಕ್ಕೆ ಚೆಂಡಾಡಲು..........."

ಹೀಗೆ ಆಧುನಿಕ ಜೀವನದ ಆಶೆ–ನಿರಾಶೆಗಳನ್ನು ಆಧುನಿಕ ಜೀವನದ ಚಿತ್ರಸೃಷ್ಟಿಯಿಂದಲೇ ವ್ಯಕ್ತಗೊಳಿಸುವಲ್ಲಿ ಒಂದು ಔಚಿತ್ಯ-ಪೂರ್ಣ ವ್ಯಂಜಕಶಕ್ತಿಯಿದೆ. ಈ ವ್ಯಂಜಕಶಕ್ತಿಯು ಹೊಸತನ ಹೆಚ್ಚಿದಷ್ಟೂ, ಪ್ರತಿಯೊಂದು ದೇಶ–ಕಾಲಗಳ ಕಾವ್ಯಗಳಲ್ಲಿ ನವ್ಯತೆ ಮೂಡುತ್ತದೆ. ಅಂತೆಯೇ ಕಾವ್ಯದೇವತೆ "ನವನವೋನ್ಮೇಷಶಾಲಿನೀ" ಎನ್ನಿಸಿಕೊಂಡಿದ್ದಾಳೆ.

ಉಪಮಾಸೃಷ್ಟಿಯಲ್ಲಿರುವ ಈ ಹೊಸತನಕ್ಕೆ ಮುಖ್ಯ ಕಾರಣವೆಂದರೆ, ಸೃಷ್ಟಿಯ ಸಮಸ್ತ ವಸ್ತುನಿಚಯಗಳಲ್ಲಿಯ ಕಾವ್ಯಾಂಶವನ್ನು ಗುರುತಿಸಿದ್ದೇ ಸರಿ ! ಇದರಂತೆಯೇ ಈ ಕವನವು ಬುದ್ಧಿ-

ಪ್ರಧಾನವಾಗಲಿಕ್ಕೂ ಇದೇ ಕಾರಣವಾಗಿದೆ. ಕಾವ್ಯದ ಮುಖ್ಯ ಲಕ್ಷಣವು - ದರ್ಶನ ಅಥವಾ ನಿರ್ಮಾಣ. ಎಂದರೆ ಕವಿಯು ಸಾಂಕೇತಿಕ ಸೃಷ್ಟಿಯ ಮುಖಾಂತರ ಜೀವನದ ಅರ್ಥವನ್ನು ತಾನು ಗ್ರಹಿಸಿ, ಇತರರಿಗೆ ವಿಶದಪಡಿಸುತ್ತಾನೆ ಆತ ಹೇಳುವುದಿಲ್ಲ; ತೋರಿಸುತ್ತಾನೆ. ಆದುದರಿಂದ ಆತನ ನಿರ್ಮಾಣದ ವೈವಿಧ್ಯದಲ್ಲಿ ಅವನ ಕಾವ್ಯದ ನವ್ಯತೆ ರೂಪುಗೊಳ್ಳುತ್ತದೆ. ಇದೀಗ ಕವಿಯು, ಇಪ್ಪತ್ತನೆಯ ಶತಮಾನದ ವೈಜ್ಞಾನಿಕ ಪ್ರಪಂಚದಲ್ಲಿ ನಿಂತುಕೊಂಡಿದ್ದಾನೆ. ಇಲ್ಲಿಯೂ ಕಾವ್ಯನಿರ್ಮಿತಿ ಸಾಧ್ಯವೆ? ವಿಜ್ಞಾನಿಗಳಿಂದ ನಿರ್ಮಿತವಾದ "ಆಯಸ್ಕ್ರೀಮ್" "ಪೆಟ್ರೋಲ್" "ಎಂಜಿನ್" ಮೊದಲಾದ ಶಬ್ದಗಳನ್ನೂ ತನ್ನವನ್ನಾಗಿ ಮಾಡಿಕೊಳ್ಳುವ ಹಂಬಲು ಕವಿಗಿದೆ. ಆ ಚಿತ್ರ ವಿಚಿತ್ರ ಶಬ್ದಗಳಲ್ಲಿ ಒಂದು 'ನಾದ' ತುಂಬಲು ಆತ ಪ್ರಯತ್ನಿಸುತ್ತಿದ್ದಾನೆ. ಕನ್ನಡಜನತೆ ನವ್ಯಕಾವ್ಯದ ಈ ಪರಿಶ್ರಮವನ್ನೂ, ಅದರ ಸಾರ್ಥಕತೆಯನ್ನೂ ಗುರುತಿಸಬೇಕು.

ಕೊನೆಯದಾಗಿ, ಶ್ರೀ. ನಾಡಕರ್ಣಿಯವರು ಈ ಕವನದಲ್ಲಿ ಬಳಸಿದ ಛಂದಸ್ಸಿನ ಬಗೆಗೆ ಒಂದು ಮಾತನ್ನು ಹೇಳಬೇಕು. ಮೇಲ್ನೋಟಕ್ಕೆ ಇದು ಸರಳರಗಳೆಯ ಇನ್ನೊಂದು ಮುಖವೆಂದು ಕಾಣುತ್ತದೆ; ಆದರೆ ವಾಸ್ತವಿಕವಾಗಿ ಅದು ಹಾಗಿಲ್ಲ. ಹಿಂದಿನ ಕಾಲದ ಕಾವ್ಯವು ಗದ್ಯದ ಕಡೆಗೆ ತಿರುಗುವಾಗ "ರಗಳೆ"ಯ ಜಾತಿ ಹುಟ್ಟಿತು. ಇಂಗ್ಲೀಷಿನ Blank Verse (ಸ್ವಚ್ಛಂದಛಂದ) ಕೂಡ ಇಂತಹದೊಂದು ಪ್ರಯತ್ನದ ಫಲ. ಕೊನೆಯಲ್ಲಿ ಸಾಹಿತ್ಯಪ್ರಪಂಚವು ಅದ್ಭುತವಾದ ಗದ್ಯಶೈಲಿಯನ್ನು ಹುಟ್ಟಿಸಿತು. ಕಡೆಗೆ 'ಕಾವ್ಯದ ಅವಶ್ಯಕತೆಯೇ ಇಲ್ಲ' ಎನ್ನುವ ಮಟ್ಟಿಗೆ ಮಹಾ ಕಾದಂಬರಿಗಳೂ, ಸುಂದರ ಗದ್ಯದ ವಚನಶೈಲಿಯೂ ಹುಟ್ಟಿದುವು. ಆದರೆ ಈಗ ಪುನಃ ಸಾಹಿತ್ಯಪ್ರಪಂಚವು ತನ್ನ ಹೊಸ ಅನುಭವವಿಸ್ತಾರವನ್ನು ನೂತನವಾದ ಬಂಧದಲ್ಲಿ ಹಿಡಿದಿಡಲು ಹಂಬಲಿಸುತ್ತದೆ. ಇದರ ಫಲವೇ ನವ್ಯಛಂದ. ಈ ಛಂದಸ್ಸಿನಲ್ಲಿ ವೈಜ್ಞಾನಿಕಜೀವನದ ಖಂಡಾನುಭವ, ವಿಸ್ತಾರ, ಪಾರಿಭಾಷಿಕ ಶಬ್ದಗಳ ಭಾರವನ್ನು ಹೊರುವ ಶಕ್ತಿಯುಂಟು. ಅದು ರಗಳೆಗಿಲ್ಲ. ಇದರಲ್ಲಿ ರಗಳೆಯ ವಿಸ್ತಾರವುಂಟು. ಅಲ್ಲದೆ ಅದಕ್ಕಿಲ್ಲದ ಅಣುರೂಪವೂ ಉಂಟು. ಇದು ಹಿಗ್ಗಬಲ್ಲದು. ಕುಗ್ಗಬಲ್ಲದು. ಅಣಕವನ್ನು ವ್ಯಕ್ತಪಡಿಸುವಾಗ "ಬರೇ ಬಿಂಬವಷ್ಟೇ" ಎಂದು ತುಣುಕಾಗಿ, ಅದೇ ಅಣಕವು ವಿಸ್ತಾರವಾದಾಗ "ಓಹೋ, ಸಂತೆಯನ್ನು ಹೊಕ್ಕಿದ್ದಾನೆ ಅವನೀಗ" ಎಂದು ವಿಸ್ತಾರವಾಗಿ ಬರುತ್ತದೆ.

ಹೀಗೆಯೇ ಸೂಕ್ಷ್ಮವಿಚಾರಗಳನ್ನು ಚಿತ್ರಿಸುವಾಗ ಈ ಶೈಲಿಯು 'ಕ್ಷ' ಕಿರಣಗಳಂತೆ ತೀಕ್ಷ್ಣವಾಗುತ್ತದೆ ಇಲ್ಲಿ ನೋಡಿ, ಕವಿಯು ಚಿಂತಾಗ್ರಸ್ತ ಮಾನವ ಪ್ರಾಣಿಯನ್ನು ಚಿತ್ರಿಸಿದ್ದಾನೆ:—

"ಇಗೋ ಬಿದ್ದಿದೆ ಪ್ರಾಣಿ ಹೋಟೆಬುರುಡೆ ಕೈಯಲಿ ಹೊತ್ತು
ಸೊಳ್ಳೆಯ ಜಾಲದ ಒಳಗೆ.

ಜಾಲ ಚಿರಿ ಚಿರಿ ಹರಿದು ಒಳಹೊಕ್ಕು ಚುಚ್ಚುತಿವೆ ಸೂಜಿ;
ರಕ್ತ ಹೀರುತಿವೆ. ಗುಂಗಾಡು ಪಡೆ—ಪಡೆ!"

ಇಲ್ಲಿ ಉಪಯೋಗಿಸಿರುವ "ಚಿರಿ ಚಿರಿ" "ಸೂಜಿ" "ಗುಂಗಾಡುಪಡೆ" ಎಂಬ ಪದಗಳ ಔಚಿತ್ಯವನ್ನು ಗಮನಿಸಿದರೆ, ನವ್ಯಛಂದದ ಶಕ್ತಿ ಏನೆಂಬುದು ಗೊತ್ತಾಗುವುದು.

ಶ್ರೀ. ನಾಡಕರ್ಣಿಯವರು ತಮ್ಮ ಈ "ಚಂದ್ರರೋದನದ" ಮುಖಾಂತರ ಕನ್ನಡಿಗರಿಗೆ ನವ್ಯತೆಯ ಚೆಲುವನ್ನು ತೋರಿಸಿದ್ದಾರೆ. ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

— ——

ಪತಿವ್ರತೆ

(ಸಣ್ಣಕತೆಯ ವಿಮರ್ಶೆ)

ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು

ಶ್ರೀ. ಪಾಂಡೇಯ ಬೇಚನ ಶರ್ಮಾ ಅವರು ಹಿಂದಿಯಲ್ಲಿ ಬರೆದ ಕತೆಯೊಂದನ್ನು —ಶ್ರೀಮತಿ ಸರೋಜಿನಿ ಮಹಿಷಿನೂರ ಅವರು ಕನ್ನಡಿಸಿದ್ದಾರೆ. ಪತಿವ್ರತೆ—ಎಂಬುದು ಸ್ತ್ರೀ ಜೀವನದ ದುರಂತಾವಸ್ಥೆಯ ಒಂದು ಮಾರ್ಮಿಕಚಿತ್ರ! ದಾಂಪತ್ಯಜೀವನದಲ್ಲಿ ನೆಲಸಿರಬೇಕಾದ ಮಧುರ ಹೃದಯಾನುಭಾವದ ಎರಕವಿರದೆ, ಯಾಂತ್ರಿಕ ಜೀವನದ ಸಾಗಿನಲ್ಲಿ, ಗಂಡನೆತ್ತಿದ ಹೃದಯದ್ರವಶೂನ್ಯವಾದ ಪ್ರವೃತ್ತಿಯಲ್ಲಿ ಬಸವಳಿದು—ಗತಿಗಾಣದೆ—ನೊಂದೆದೆಯ ಬಿಸಿಯುಸಿರನ್ನು ಸುಯ್ದು, ಕೊನೆಗೊಂದು ದಿನ ಜೀವನೇತಿವೃತ್ತವನ್ನೇ ಕೊನೆಗಾಣಿಸಿ. ಜೀವನ್ಮುಕ್ತಳಾದ ಹೆಣ್ಣೊಬ್ಬಳ ಕತೆಯು ಬಾಳಬೇನೆ ಇದು. ಸುಶಿಕ್ಷಣ-ಸೌಶೀಲ್ಯಗಳು ಮಾತಿನ ಕಟ್ಟಿನಲ್ಲಿ ಬಿಗಿವಡೆದು ಒಡೆದು ಚೂರಾಗಿ ಚೆಲ್ಲಾಡಿದ ವೃತ್ತವಿದು! ಸಮಾಜದ ಮುಂದೆ ಅಬಲೆಯಾಗಿ, ತಂದೆಯ ಮುಂದೆ ಆಜ್ಞಾಧೀನಳಾಗಿ, ಕೈಹಿಡಿದವನ ಮುಂದೆ ನಿರಾಶೋದ್ರಿಕ್ತಮನಸ್ಥಿತಿಯವಳಾಗಿ, ಸಾವನ್ನು ಬಯಸಿನಿಂತ 'ಪತಿವ್ರತೆ'ಯ ಜೀವನ ವ್ರತವಾಗಿದೆ-ಪ್ರಸ್ತುತ ನಿರೂಪಿತಕಥನವು.

ಹಾಗಾದರೆ--ಪತಿವ್ರತೆ?

ರಾಣಿ-ತಾಯಿಯನ್ನುಳಿದ ತಬ್ಬಲಿಯಾದರೂ, ತಂದೆಯ ಒಲವಿನಲ್ಲಿ ಬೆಳೆದು ಬಂದವಳು. ಸ್ವಭಾವತಃ ಜಾಣೆಯಾದ ಆಕೆ ಮೆಟ್ರಿಕನ್ನು ತೀರಿಸಿ ಮುಂದಿನ ವಿದ್ಯೆಗಾಗಿ ಹಂಬಲಿಸಿದಳು. ಅಶಕ್ತನಾದ ತಂದೆ ತನ್ನೂರಲ್ಲೇ ಅತಿ ಶ್ರೀಮಂತಿನಿಯಾದ ಒಬ್ಬಾಕೆ ವಿಧವೆಯಿಂದ ಸಾಲ ತೆಗೆದು, ಮಗಳನ್ನು ಬಿ. ಎ. ವರೆಗೆ ಓದಿಸಿದ. ಈ ಓದುವಿಕೆಯ ಹಿನ್ನೆಲೆಯಲ್ಲೇ ಒಂದು ವಿಚಿತ್ರವಾತಾವರಣ ನೆಲೆಗೊಂಡಿತ್ತು. ಇದುವೆ ರಾಣಿಯ ದುರಂತಕ್ಕೆಡೆವಾದ ವಾತಾವರಣ. ಇದನ್ನಾಕೆ ಸ್ವತಃ ಸೃಷ್ಟಿಸಿದಳೋ, ಇಲ್ಲವೆ ವಿಧಿಯೆ ಕೈವಾಡವನ್ನು ಪ್ರಕಾಶಿಸಿತೋ, ಅಲ್ಲವೆ ಮಾನವ ಸಹಜವಾದ ಚಾಪಲ್ಯವೇ ಕಾರಣವಾಯಿತೋ—ಅಂತೂ ರಾಣಿ ನೆಲೆಯಿಲ್ಲದ ಸುಳಿಗೆ ಬಲಿಯಾದಳು. ಆ ಶ್ರೀಮಂತಿನಿಗೊಬ್ಬ ಮಗ; ಚಂದ್ರವದನ! ಆತ ರಾಣಿಯ ಸಹಾಧ್ಯಾಯಿ. ಮೆಟ್ರಿಕ್ ಪರೀಕ್ಷೆಯಲ್ಲಿ ಚಂದ್ರವದನ ಫೈಲಾದರೆ, ಅದೇ ಪರಿಸ್ಥಿತಿಯಲ್ಲಿ ರಾಣಿ-

ಚಂದ್ರವದನರಲ್ಲಿ ಮೂದಲಿಕೆಯು ಪ್ರತಿಧ್ವನಿಸಿ, ಪ್ರಕೃತಿಯನ್ನು ವಿಕೋಪಕ್ಕೀಡಾಗಿಸಿತು. ಉರಿದೆದ್ದ ಶ್ರೀಮಂತಿನಿ ಅದುವೆ ಸಂದರ್ಭದಲ್ಲಿ "ಚಂದ್ರವದನನನ್ನೇ ಮದುವೆಯಾಗುವ ಮಾತಿನಲ್ಲಿ" ರಾಣಿಯು ವಿದ್ಯೆಗೆ ಸಹಾಯನೀಡಲು ಮುಂದಾದಳು. 'ಮೆಟ್ರಿಕಿನ ಬಳಿಕಲೇ-ಸಾಗಲಿ' ಎಂದಾಡಿದ ತಂದೆಯು ಮಾತಿಗೆ ಎದುರು ಮಾತಾಡಿದ ರಾಣಿ-ವಿದ್ಯೆಯಲ್ಲೇ ಮನಸೋತು, ಭಾವಿಯನ್ನು ಯೋಚಿಸದೆ, ಮುಂದೆ ನೋಡದಿರಾಯಿತು—ಎಂದು ತನ್ನ ಜೀವನಕ್ಕೆ ಕೊಡಲಿಯೇಟನ್ನಿತ್ತಳು. ಇತ್ತ ರಾಣಿ ಬಿ. ಎ. ಮುಗಿಸಿದಳು. ಚಂದ್ರವದನ ಮೆಟ್ರಿಕ್ ಮುಗಿ-ಸುವುದನ್ನು ಬಿಡು ಸಂಸ್ಕೃತಾಭ್ಯಾಸಕ್ಕೆ ಕಾಲಿಕ್ಕಿದರೂ, ಸೋಲನ್ನೊಪ್ಪಿ-ಕೊಳ್ಳಬೇಕಾಯಿತು. ಈ ಅಘಟಿತ ವಿದ್ಯಾಮಾನದಲ್ಲಿ, ಅನನುರೂಪ ರೂಪಘಟನೆಯಲ್ಲಿ— ತಂದೆಯ ಭೀಕರಪ್ರತಿಜ್ಞೆಯ ಸುಳಿಗಾಳಿಯಲ್ಲಿ ರಾಣಿಯ ಜೀವನ ಚಂದ್ರವದನನ ದುರಿತಕೃತ್ಯದಲ್ಲಿ ಸಮರ್ಪಿತ-ವಾಯಿತು. ಈ ವಿವಾಹಸಂಬಂಧದಿಂದ ಪಾರಾಗಲೆಳಸಿದ ರಾಣಿ—; ಕಂಡುದು, ವಿಧವೆ ಶ್ರೀಮಂತಿನಿಯ ಘೋರಾಟ್ಟಹಾಸದ ಭಾಷಣವನ್ನು ನಿಂದಾಮಯವಾದ ತಿರಸ್ಕಾರವಚನನಿಚಯವನ್ನು. ವೃದ್ಧಹೃದಯದ ಭಾವತಂತುವು ಮಿಡಿಯಲಾರದ ಉದ್ಧತ ಸ್ವರಗತಿಗಳನ್ನು. ಮುಂದೆ ತಲೆದೋರಿದ ಚಂದ್ರವದನನ ಪಲ್ಲವಿಗಳಲ್ಲಿ ರಾಣಿ ಸೋತು ಬೆಂಡಾದಳು. ಯಾವ ರೀತಿಯ ಮನೋಧರ್ಮವೂ ಎರಕಹೊಂದದ ಆ ರುದ್ರ-ಭೂಮಿಯಲ್ಲಿ ನಲಿದಾಡಿದ ರಾಣಿ, ಚಂದ್ರವದನನ ಅಗ್ರಹಪೂರ್ವಕ-ವಾದ ಪಿಪಾಸೆಗೆ ಬಲಿಯಾಗಿ—ಏಳುಮಕ್ಕಳ ತಾಯಿಯಾಗಿ-ಪುತ್ರ ಪ್ರೇಮದ ಹೃದಯವನ್ನೂ ಕಳೆದುಕೊಂಡು, ವಿಶ್ರಾಂತಿಯನ್ನು ಹೊಂದಿ-ದಳು. ಆದರೂ ಚಂದ್ರವದನನೆತ್ತಿದ "ಹನ್ನೊಂದು ಮಕ್ಕಳ ತಾಯಿ" ಯಾಗಬೇಕೆಂಬುದಕ್ಕೆ ಉತ್ತರಿಸಿದ ರಾಣಿ, ಅದನ್ನು ಸಲಿಸಲು ಅಶಕ್ತ-ಳಾಗಿ ಸಮಾಜದ ಸ್ವೈರ್ಣ್ಯದ ಮುಂದೆ ಪ್ರಶ್ನೆಯಾಗಿಯೇ ಉಳಿದಳು—ಅಂತೂ ಪತಿವ್ರತೆಯಾದಳು!

ಕಥೆಯು ಆರಂಭವಾದ ರೀತಿ ಹೊಸತು. ಸಹೋದರನೊಬ್ಬ 'ಅಕ್ಕ'ನ ಜೀವಿತಕಥೆಯನ್ನು ಹೇಳುದ ಬಗೆಯಲ್ಲಿ ಆರಂಭವಾಗು-ವುದು. ಕತೆಯು ಆದಿಯಲ್ಲಿ ಕೆಲವೊಂದೆಡೆಯಲ್ಲಿ ಸಮಾಜದ ಮುಂದೆ ಹೆಣ್ಣು ಬಲಿಯಾಗುವ ರೀತಿಯನ್ನು ಲೇಖಕರು ತೋರಿಸುತ್ತ, ಇವೆಲ್ಲಕ್ಕಿಂತ ಹೊಸತಾದ ಬಗೆಯಲ್ಲಿ ಅಕ್ಕನ ಕೊನೆಯು ಸಾಗಿದೆ ಎಂಬುದನ್ನು ಕಾಣಿಸುತ್ತಾರೆ. ಇದಾದ ಬಳಿಕ ಅಕ್ಕನು (ರಾಣಿ) ವಿದ್ಯೆಯನ್ನು ಪಡೆಯುವಂತಾದ ಬಗೆಯ ಕಾರಣವನ್ನೂ—ಮೆಟ್ರಿಕ್ ಪರೀಕ್ಷೆ ಪಾಸಾದ ಗಳಿಗೆಯಲ್ಲಿ ಅಕ್ಕನು ತನಗರಿಯದೇನೇ ತನ್ನ ಜೀವನದಲ್ಲೆಳೆದುಕೊಂಡ ರುದ್ರಾಧ್ಯಾಯವನ್ನೂ ವಿವರಿಸಿ, ಅಲ್ಲಲ್ಲಿ ಜೀವನವಿಮರ್ಶೆಯನ್ನಿರಿಸುತ್ತ, ಲೇಖಕರು ಕಥಾಮಧ್ಯದಲ್ಲಿ ದಾರುಣ ವಾದ ಸ್ತ್ರೀಚಾರಿತ್ರ್ಯನಿರೂಪಣೆಯನ್ನೆಸಗುತ್ತಾರೆ. ಈ ಭಾಗದಲ್ಲೇ ಶ್ರೀಮಂತಿನಿಯ ದರ್ಪೋದ್ರಿಕ್ತ ಮಾತುಗಳನ್ನೂ—ಚಂದ್ರವದನನ ಕುರಿತು ರಾಣಿಗಿದ್ದ ಭಾವನೆಗಳನ್ನೂ, ಒಡೆದು ಚೆಲ್ಲಾಡಿದ ಚಂದ್ರವದನನ ಬಲಾತ್ಕಾರದ ಕಾಮಪಿಪಾಸೆಯ ಪರಾಕಾಷ್ಠೆಯನ್ನೂ ತೋರಿಸಿ, ಮಧ್ಯದಲ್ಲೇ ಸುಶಿಕ್ಷಿತಳಾದರೂ ಸ್ತ್ರೀಗಿರುವ ಸಮಾಜದ ಸ್ಥಾನವನ್ನು ಲೇಖಕರು ತೋರಿ—ತಾಯಿಯಾಗಿ ಬಸವಳಿದ ರಾಣಿಯ ದುರಂತ-ಜೀವನದ ಕೊನೆಯನ್ನೂ ತೋರಿದ್ದಾರೆ. ಅಂತೂ ಸಹೋದರನೊಬ್ಬನು ಅಕ್ಕನ ಜೀವನಕಥೆಯನ್ನು ಕಡಿದೂಡೆಯದ ಭಾವಗತಿಯಲ್ಲಿ ಹೇಳುವ ಬಗೆಯಲ್ಲಿದು ರಚಿತವಾಗಿದೆ.

ಪ್ರಸ್ತುತ ಕಥೆಯು ವಸ್ತುಗತ ಘಟನೆಗಳನ್ನೂ—ಸಂವಿಧಾನವನ್ನೂ ಪರಿಶೀಲಿಸುವ ಪೂರ್ವಭಾವಿಯಾಗಿ, ಒಂದೆರಡು ವಿಚಾರಗಳನ್ನು ಪರಿಶೀಲಿಸುವುದು ಮುಖ್ಯವಿದೆ. ಮುಖ್ಯವಾಗಿ, ಈ ಕಥೆಯು ಭಾವಾನುವಾದಕ್ಕಿಂತ ಮಿಗಿಲಾಗಿ ಭಾಷಾನುವಾದದಂತಿದೆ. ಆದುದ-ರಿಂದಲೆ ಇದರ ಓಟ ಅಲ್ಲಲ್ಲಿ ಕುಸಿದಿದೆ. ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಕಥೆಯನ್ನು ಪರಿವರ್ತಿಸುವಾಗ, ಸ್ವಾಯತ್ತ ಭಾಷಾಸಂಪ್ರದಾಯಕ್ಕನುಗುಣವಾಗಿ ಅನುಗೊಳಿಸುವುದು ಬಹು-ಮುಖ್ಯವಾಗಿದೆ. ಪ್ರಸ್ತುತ ಕಥೆಯು ಹಿಂದಿಯ ಅನುವಾದ. ಹಿಂದೀ ಭಾಷಾಸಂಪ್ರದಾಯಕ್ಕೂ, ಕಥನಸಂಪ್ರದಾಯಕ್ಕೂ ಕನ್ನಡಕ್ಕಿಂತ ತೀರ ಬೇರೆಯಾದ ರೀತಿಯೊಂದಿದೆ. ಹಾಗೆಂದಾದರೆ ಭಾಷಾಂತರದಿಂದ, ವಸ್ತುವೊಂದನ್ನಾಯ್ದುಕೊಳ್ಳುವಾಗ, ಸ್ವ ಭಾಷಾಸಂಪ್ರದಾಯವನ್ನು ಚೆನ್ನಾಗಿ ಅರಿತು ಕಥೆಯ ಭಾವ ಕೆಡದಂತೆ ಅನುವಾದಿಸುವುದು ಅನು-ವಾದಕನ ಹೊಣೆ; ಇದಿಲ್ಲದೆ ಕೇವಲ ಭಾಷಾನುವಾದವನ್ನು ಅನುಲಕ್ಷಿಸಿ ಕಥೆಯನ್ನು ಪರಿವರ್ತಿಸುವುದಾದರೆ, ಶೈಲಿಯಬಿಗುವನ್ನೂ, ಮಧುರ-ವಾದ ಪ್ರಯೋಗಗಳನ್ನೂ ನೋಡಿಕೊಳ್ಳುವುದು ಅನುವಾದಕನ ಹೊಣೆ-ಯಾಗಿದೆ. ಇದಿಲ್ಲವೆಂದಾದರೆ, ಪಾತ್ರಾನುಗತ ಸಂಭಾಷಣೆಗಳ ಸ್ಪಷ್ಟ-ತೆಯೂ, ನಿರೂಪಣೆಯ ಸೊಗಸೂ ಮಾಯವಾಗಿ, ಅಲ್ಲಲ್ಲಿ ಸಂದೇಹಗಳು ನೆಲೆಗೂಡುವವು! ಅಂತೆಯೆ ಈ ಕಥೆಯಲ್ಲೂ ಅಲ್ಲಲ್ಲಿ, ಅನಸ್ಯೂತವಾಗಿ ನಡೆಯುತ್ತಿರುವ ಸಂಭಾಷಣೆಗಳಲ್ಲಿ, ಕೆಲವೆಡೆ ಅಸ್ಪಷ್ಟತೆ ಮೂಡಿದ್ದಂತೆ ಭಾವದ ಬಿಗುವೂ ಕಡಿಮೆಯಾದಂತಿದೆ. ಕೆಲವೆಡೆ "ಶುದ್ಧಾಶುದ್ಧ ಭಾಷಾಸಂಮಿಶ್ರಣವೂ, (ಅರ್ಥಾತ್ ಪಾತ್ರವೊಂದರ ನುಡಿಯು ಸರ್ವತಃ ಒಂದೇ ತೆರನಿರಬೇಕು. ಅಲ್ಲೂ ಅನುವಾದಿತವೆಂದಾದರೆ ಈ ಮರ್ಯಾದೆಗೆ ಬೆಲೆ ಹೆಚ್ಚು.) ದ್ವಿತೀಯಾ ವಿಭಕ್ತಿಯ ಸುರುಚಿರ ಪ್ರಯೋಗದ ಮುಂದೆ ಷಷ್ಠೀವಿಭಕ್ತಿಯ ತಾಕಲಾಟವೂ, ವಿಶೇಷಾರ್ಥಕ ಚಿಹ್ನೆಯೊಳಗಡಗಿದ ವಿಚಾರವು ಪೂರ್ಣವಾಗುವುದರ ಮುನ್ನ— 'ವಾಕ್ಯಾಂತರವು ತಲೆದೋರಿ ಪುನಃ ಮುಂದುವರಿದು ಬಿಗುವನ್ನುಳಿಸದೆ ಸಾಗುವುದೂ; ಬಹುವಿಚಾರ ಸಂಮಿಶ್ರಣವು ಒಂದೇ 'ಪಾರಾ'ದಲ್ಲಿ ತಲೆದೋರಿ ಮತ್ತೊಂದು ಪಾರಾದೊಡನೆ ವಿಶೇಷಸಂಬಂಧವನ್ನಿರಿಸಿ ಕೊಳ್ಳದೆ ಸಾಗುವುದೂ—ಕಥೆಯ ಓಟವನ್ನು ಕೆಡಿಸಿದೆಯೆಂಬುದರಿಂದ ವಾಚಕನು ತುಸು ಬೇಸತ್ತರೂ, "ಚಿಕ್ಕ ಚಿಕ್ಕ ವಾಕ್ಯಗಳ ರಚನೆ-ಗಳಿಂದಲೂ, ಶ್ರೀಮಂತಿನಿ ಯಾವ ಭಾಷಣ ಸಮಾಲೋಕನದಿಂದಲೂ ಅಲ್ಲಲ್ಲಿ ಕಾಣಿಸುತ್ತಿರುವ ಚರಿತ್ರನಿರೂಪಣೆಗಳಿಂದಲೂ—ಚೇತನೋ-ನ್ಮುಖನಾಗಿ ಕಥೆಯನ್ನು ಓದಿ ಮುಗಿಸುವನೆಂಬುದರಲ್ಲಿ ಸಂಶಯವಿಲ್ಲ. ಅನ್ಯಭಾಷಾಗತೇತಿವೃತ್ತವನ್ನು ಸ್ವಭಾಷೆಯಲ್ಲಿಳಿಸುವುದು ಸುಲಭವಲ್ಲ. ಈ ಪ್ರಯತ್ನದಲ್ಲಿ ಲೇಖಕಿಯರು ವಸ್ತುವನ್ನೂ—ಸಂವಿಧಾನ—ಘಟಕ ಗಳನ್ನೂ ಉಳಿಸಿದ್ದಾರೆಂಬುದು ತೋರಿಬರುವ ವಿಚಾರವು—

ಕಥೆಯು ಆದಿಯಲ್ಲಿ "ಸ್ತ್ರೀಚಿತ್ರಪ್ರಕರಣ"ದ ಒಂದು ಉಲ್ಲೇಖವಿದೆ. ಮುಂದೆ ರಾಣಿ ವಿದ್ಯೆ ಕಲಿಯುತಿರುವ ವ್ಯವಸ್ಥೆಯನ್ನು ನಿರೂಪಿಸುವಲ್ಲಿಂದ ಸುಮಾರು ಒಂದೆರಡು ಪುಟಗಳವರೆಗೆ ಕಥೆಗೆ ಓಟವೇ ಇಲ್ಲ. ಇದಾರದೋ ಏನೋ ನಮಗರಿಯದು. ಇಲ್ಲಿ ರಾಣಿಯ ಜೀವನಕ್ಕೆ ಕೊಡಲಿಯೇಟುಬಿದ್ದ "ಮೆಟ್ರಿಕ್" ಪರೀಕ್ಷೆಯ ಇತಿವೃತ್ತ, ಚಂದ್ರವದನ–ರಾಣಿಯರ ಮೂದಲಿಕೆ, ಶ್ರೀಮಂತಿನಿ ಮತ್ತು ರಾಣಿಯ ತಂದೆಯ ಒಪ್ಪಂದ, ತಂದೆ-ಮಗಳೊಳಗಾದ ವಿರಸ ಪ್ರಕರಣ ಕೊನೆಗೆ ಹೇಗೂ ಶ್ರೀಮಂತಿನಿಯ ಮನೆಗೆ ಕಾಲಿರಿಸಬೇಕಾಗಿ ಬಂದ ಪ್ರಕರಣಗಳು ಬೆಳೆದುಬಂದಿವೆ. ಆದರೆ ಸಹೋದರರನ ಮುಂದೆ ಸ್ವತಃ ಅಕ್ಕನೇ ಮರೆಮೋಸವಿಲ್ಲದೆ ತನ್ನ ವೈಯಕ್ತಿಕ ಜೀವನದ ಗುಪ್ತಚರಿತ್ರೆಯನ್ನು ಹೇಳುವಲ್ಲಿಂದ ಕಥೆಯು ರಭಸದಿಂದ ಓಡಿ, ಮನವನ್ನು ಸೆರೆಹಿಡಿಯುತ್ತದೆ. ಅಬಲೆಯ ಜೀವನದ ನೋವಿನ ಮುಂದೆ ಮರುಗುತ್ತದೆ ಮನ. ಕಲ್ಲಾದರೂ ದ್ರವಿಸುವ ಬಗೆಯ ಭೀಕರಚಿತ್ರವದು. ಅದರಲ್ಲೂ ಆಕೆ ಅನುಭವಿಸಿದ ಪ್ರಥಮ ಗರ್ಭಧಾರಣೆಯ ರಾತ್ರಿಯ ವಿರಸಪ್ರಕರಣ–ಮಾನವಸಹಜವಾದ ಬಯಕೆಯ ವಿಕ್ಷಿಪ್ತ ಭಾವಸಂಧಿ. ಚಂದ್ರವದನನು ಕ್ರೂರದೇವನಾಗಿ ಮುಂದುವರಿದಾಗ, ಮನೋಧರ್ಮದ ಎರಕವಿಲ್ಲದೆ ಸ್ತ್ರೀಸಹಜವಾದ ಲಾಲಸೆಯಿಂದ ಕೂಡಿದ ರಾಣಿ ಕರುಣಾವೇಷಿಯಾಗಿ ಬೇಡಿದಾಗ–ಒಲ್ಲೆನೆಂದಾಗ, ಚಂದ್ರವದನನ ಬಲಾತ್ಕಾರ—ಧಿಃಕ್ಕಾರ–ನಿಂದೆ ಇವುಗಳಿಗೆ ಕಟುವಾಗಿ ಉತ್ತರಿಸಿದ ರಾಣಿ "ರುದ್ರ" ಭಾವದಿಂದ ಕೂಡಿ ಮೆರೆದುದು ತಪ್ಪಲ್ಲ; ಆದರೂ ಅಬಲೆಯ ಮುಂದಡಿ, ಬಲಾತ್ಕಾರ—ಸಬಲ ಪುರುಷನ ತೋಳತೆಕ್ಕೆಯ ಕಠಿಣ ಬಂಧದಲ್ಲಿ! ನಿಷ್ಕರುಣಿ ಚಂದ್ರವದನನ ಹೃದಯವು ವಿಷದಿಂದ ತುಂಬಿದುದರಿಂದಲೇ ಆತ ಆಕೆಯ ಜೀವನವನ್ನು ಯಂತ್ರವೆಂದೇ ಬಗೆದ. ಅದಕ್ಕಾಗಿಯೆ ತವಕಿಸಿದ. ಹನ್ನೊಂದು ಮಕ್ಕಳನ್ನು ಪಡೆದು ಆಕೆಯನ್ನು ಸ್ಮಶಾನದಲ್ಲಿ ಮಲಗಿಸಬೇಕೆಂಬ ಬಯಕೆಯ ಅತೃಪ್ತಿಯನ್ನು-ಏಳನೆಯ ಜನನದಲ್ಲೆ ಹೊಂದಿ ತಣಿದ. ಇದುವೆ ಆ ಶ್ರೀಮಂತಿನಿಯ ಹಟ; ಚಂದ್ರವದನನ ಲಾಲಸೆ; ಪ್ರಯೋಗದ ರುದ್ರಸ್ಮಶಾನದ ಹೊಗೆ!

ಸುಶಿಕ್ಷಿತಳಾದ–ಸುಶೀಲೆಯಾದ ತರುಣಿ ಪತಿಗೃಹಕ್ಕೆ ತೆರಳಿದರೂ ಪತಿಯೊಡನಿರಬೇಕಾದ ಹೃದಯದ್ರವದಿಂದ ಶೂನ್ಯಳಾದರೆ. ಆಗ ಅವಳು ಅನುಭವಿಸುವ ಹೃದಯವೇದನೆ, ಸಮಾಜನೈಷ್ಠುರ್ಯ, ಪರಾಧೀನತೆ ಇವನ್ನು ಚೆಲುವಾಗಿ ಬಿಂಬಿಸಿದ ಈ ಕಥೆಗೆ ಪೂರ್ವಪೀಠಿಕೆಯಾಗಿ ಬಲಿತುನಿಂತ ಭಾಗವು ವಿಸ್ತೃತವಾಗಿಬಂದುದು ಅನವಶ್ಯವಾದರೂ, ಕೆಲವೊಂದು ಚರಿತ್ರೆಗಳನ್ನದು ತೋರುತ್ತಿದೆಯೆಂಬುದರಿಂದ ಗ್ರಾಹ್ಯವಿದೆ. ಸಹೋದರನೊಬ್ಬನು ಹೇಳಹೊರಟ ಈ ಕಥೆಯಲ್ಲಿ ಒಂದು ಮಾರ್ಮಿಕ ಆತ್ಮಸಂವೇದನೆಯಿದೆ. ಅಂತೂ ವಸ್ತುದೃಷ್ಟಿಯಿಂದಿದು ಚೆಲುವಾಗಿದೆ.

ಬೇಸಗೆ

"ಚಿದಾನಂದ" ಮುಂಬಯಿ

ಉರಿಬಿಸಿಲು–ಸಿಡಿಬಿಸಿಲು–ನೆತ್ತಿನೇಸರ ಬಿಸಿಲು
    ದಾಹಪಡುತಿದೆ ಜೀವ ಬಯಸುತಿದೆ ಬಹು ತೇವ,
    ಕಂಗೆಟ್ಟು ಕರಟಿಹುದು ಗ್ರೀಷ್ಮಋತುವಿನ ಭಾವ.
ನೋಡತ್ತ–ಕಾಣುತಿದೆ, ಗೋಳಿಡುವ ತರು-ವೃಕ್ಷ
ಮಕ್ಕಳನು ಮಸಣಿಸಿದ ವಿಕಟವಿಧಿ ದಿವಿಯಕ್ಷ
    ನಂದದಲಿ ನಿಂದಿಹವು; ಅಯ್ಯೊ ಈ ಎಳಲತೆಯು
    ಬಾಲ್ಯದಲಿ ಕಮರಿಹುದು; ರಾತ್ರಿಕವಿದಿತೆ ದಿನವು
ಮೂಡುವ ಮುನ್ನ, ತೊರೆ ಬಿಕ್ಕಳಿಸುತ್ತಿದೆ ಅಳಲು!

ಚೈತನ್ಯರಸಯೋಗಿ ಚೈತ್ರನೆಲ್ಲಿಹನೀಗ?
ವರ್ಷನಿಗೆ ಅಳುಬರದೆ ಏತಕೀ ಪರಿ ರಾಗ!

    ದುಷ್ಟಮನು ಊರಾರು ಬಂಧುಬಳಗದಲೀತ
    ಕೆಡಿಸುತಿಹ ಸೋದರರ ವರುಷ ದುಡಿತದ ಬೀತ—
ನಿಡುಸುಯ್ವಳಿಂದು ಪ್ರಕೃತಿಮಾತೆಯು ಜೇಷ್ಠೆ
ಕಂಬನಿಯ ಕರೆಯುವಳು ರೋದಿಸುತ ಪರಕಾಷ್ಠೆ!

ಈ ಸಂದರ್ಶನಕೆ!

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

ಶಿಶಿರದೀ ಪ್ರಸವವೇದನೆಯುಂಡು ಭೂದೇವಿ
    ಪಡೆದಳಿದೊ ಪುತ್ರನಂ ಶುಭಚೈತ್ರನಂ ದಿಟಂ!
    ರುದಿತಮನಕೊದವಿದುದಿದೋ ಸಿರಿಸೊಗಂ ಸ್ಫುಟಂ!
ಸಂತಸದ ವಸಂತಂ ಬಂದ ಪೆಸಂ ತೀವಿ!
ಭಾವಪಿಕ ಕೂಜನದೊಳೆಲ್ಲವುಂ ತನ್ಮಯಂ:
    ಪಾಡುತಿರೆ ದುಂಬಿಗಳ್ ಬಯಕೆಗಳ ಜೋಗುಳಂ
    ಪೊಲ್ಲಮೆಯ ಸೊಲ್ಲಳಿದು ಜಗಕೆ ಸನ್ಮಂಗಳಂ!
    —ರಸಯೋಗದಿಂ ಚರಾಚರಂ ತಾನ್ ಚಿನ್ಮಯಂ!
ಬನದ ನುಣ್ಗ—ದಪಿನೆಳದಳಿರು ಕೆಂಪೇರ್ದಪುದು
    ಚುಂಬಿಸಲ್ ಹರ್ಷದೋಕುಳಿಯ ಋತುರಂಗಣಂ!
    ಪೇಳ್, ನಂದನಂ ನಾಚ್ಚದೇನ್?—ಶಿವಂ ಕಣಕಣಂ!
ಚೈತ್ರನೀ ಸಂದರ್ಶನಕೆ ನೋಡರಳ್ದಪುದು—
    ಕವಿಮಾನಸದ ಪುಣ್ಯಪದ್ಮದೀ ಕಾವ್ಯಾಕ್ಷಿ!
    ಭೂದೇವಿ ಶ್ರುತದೇವಿ - ಋತುರಾಜ ಸಾಕ್ಷಿ!!

ಸಾದರಸ್ವೀಕಾರ

೧೦. **ಸಮರ್ಪಣ**— (ಶ್ರೀ. ಅರವಿಂದ ಸಾಹಿತ್ಯದರ್ಪಣ). ಶ್ರೀ. ಅರವಿಂದರ ಸಾಹಿತ್ಯದ ಬೇರೆ ಬೇರೆ ಭಾಗಗಳನ್ನು ಬೇರೆ ಬೇರೆ ಲೇಖಕರು ಅನುವಾದ ಮಾಡಿದ್ದಾರೆ. ಪ್ರಕಾಶಕರು, ಶ್ರೀ ನಾಡಿಗೇರ ಲಕ್ಷ್ಮಣರಾಯರು, ಶ್ರೀ. ಅರವಿಂದ ಮತ್ತು ಶ್ರೀಮಾತಾ ಮಂಡಲ, ದೇಶಪಾಂಡೆ ನಗರ, ಹುಬ್ಬಳ್ಳಿ. ಡೆ. ಅ. ೧೧೨ ಪುಟಗಳು. ಬೆಲೆ ೨-೦-೦.

೧೧. **ಶಿಕ್ಷಣ** (ತತ್ತ್ವವಿವೇಚನಾತ್ಮಕ ಗ್ರಂಥ) ಶ್ರೀಮಾತಾಜಿಯವರ ಮೂಲ ಇಂಗ್ಲಿಷಗ್ರಂಥದ ಕನ್ನಡ ಭಾಷಾಂತರವಿದು. ಪ್ರಕಾಶಕರು ಶ್ರೀ. ನಲಿನೀಕಾಂತ ಗುಪ್ತ, ಕಾರ್ಯದರ್ಶಿ ಶ್ರೀ, ಅರವಿಂದಾಶ್ರಮ, ಪಾಂಡಿಚೇರಿ. ಕ್ರಾ. ಅ. ೬೦ ಪುಟಗಳು. ಬೆಲೆ ೧-೮-೦

೧೨. **ಭಾರತ ಹಾಗೂ ಜಾಗತಿಕ ಭವಿತವ್ಯ** ಶ್ರೀಮಾತೆಯವರ ಘೋಷಣೆ). ಪ್ರಕಾಶಕರು ಶ್ರೀ. ನಾಡಿಗೇರ ಲಕ್ಷ್ಮಣರಾಯರು ಶ್ರೀ. ಅರವಿಂದ ಮತ್ತು ಶ್ರೀಮಾತಾ ಮಂಡಲ, ದೇಶಪಾಂಡೆ ನಗರ, ಹುಬ್ಬಳ್ಳಿ. ಫೂ. ಕ್ಯಾ. ೨೪ ಪುಟಗಳು. ಬೆಲೆ ೦-೪-೦

೧೩. **ಶಕ್ತಿವಿಶಿಷ್ಟಾದ್ವೈತಮು** (ತೆಲಗು ಭಾಷೆಯಲ್ಲಿ ವೇದಾಂತ ಗ್ರಂಥ). ಅನುವಾದಕರು ಶ್ರೀಮಾನ್ ಬಂಡಾರು ತಮ್ಮಯ್ಯಗಾರು. ಪ್ರಕಾಶಕರು, ಶೈವ ಭಾರತೀಭುವನಮು, ಜಂಗಮವಾಡೀ ಮಠಮು, ಬನಾರಸ್ ಸಿಟಿ. ಕ್ರಾ. ಅ. ೪೮ ಪುಟಗಳು. ಬೆಲೆ ೦-೮-೦.

೧೪. **ಐದಳಮಲ್ಲಿಗೆ** (ಕವನ ಸಂಕಲನ) ಬರೆದವರು ಬೇರೆ ಬೇರೆ ಐದು ಜನ ತರುಣ ಕವಿಗಳು. ಪ್ರಕಾಶಕರು, ಸ್ನೇಹ ಪ್ರಕಾಶನ, ಶಮನೇವಾಡಿ ಜಿ. ಬೆಳಗಾಂವಿ. ಕ್ರಾ. ಅ. ೬೪ ಪುಟಗಳು ಬೆಲೆ ೦-೧೫-೦.

೧೫. **ಶ್ರೀಶಂಕರ ವಿಜಯು** (ಆದಿಗುರು ಶ್ರೀಶಂಕರಾಚಾರ್ಯರ ಜೀವನ ಚರಿತ್ರ). ಬರೆದವರು ವಿದ್ವಾನ್ ಶ್ರೀ. ಎಂ. ಎಸ್. ಗಂಗಾಧರನ್, ಅಧ್ಯಾಪಕರು, ಮಲ್ಲೇಶ್ವರಂ ಹಾಯಸ್ಕೂಲು, ಬೆಂಗಳೂರು. ಪ್ರಕಾಶಕರು ಆರ್. ಎಸ್. ನ್ಯೂಜ್ ಏಜನ್ಸಿ, ೬೬೫ ಚಿಕ್ಕಪೇಟೆ, ಬೆಂಗಳೂರು—೨. ಕ್ರಾ. ಅ. ೧೫೨ ಪುಟಗಳು. ಬೆಲೆ ೧-೪-೦.

೧೬. **ಗೊಂಚಲ್ ಮಿಂಚು** (ಜೀವನ ಚಿತ್ರ ಸಂಕಲನ) ಬರೆದವರು ಶ್ರೀಮಾನ್ ವಸುದೇವ ಭೂಪಾಲಂ ಅವರು. ಪ್ರಕಾಶಕರು ವಾಹಿನೀ ಪ್ರಕಾಶನ, ಬೆಂಗಳೂರು —೨. ಕ್ರಾ. ಅ. ೮೮ ಪುಟಗಳು. ಬೆಲೆ ೦-೧೫-೦.

ಪ್ರಕಟವಾಗಿವೆ ! ಪ್ರಕಟವಾಗಿವೆ !!

ಅಭಿನವ ಗಣಿತ

ಲೇ : ಹರಿಹರ

ಸನ್ ೧೯೫೫ರ ಹೊಸ ಅಭ್ಯಾಸ ಪತ್ರಿಕೆಯನ್ನು ಅನುಸರಿಸಿ ಬರೆಯಲಾದ ಶಾಸ್ತ್ರೀಯ ಗ್ರಂಥಗಳು ಇದೀಗ ಪ್ರಕಟವಾಗಿವೆ. ಇವು ಪ್ರಾ. ಶಾಲೆಗಳ ೨, ಮತ್ತು ೩ ತರಗತಿಗಳಿಗೆ ಅತ್ಯಂತ ಉಪಯುಕ್ತವಿದ್ದು, ಶಿಕ್ಷಕರಿಗೂ ಮಕ್ಕಳಿಗೂ ತುಂಬಾ ಮಾರ್ಗದರ್ಶಕವಾಗಿವೆ. ಪುಟಪುಟಕ್ಕೂ ಚಿತ್ರ ಆಕೃತಿಗಳ ಸೂರೆ !!! ಇಂದೇ ನಿಮ್ಮ ಪ್ರತಿ ಪಡೆಯಿರಿ.

- ಎರಡನೆಯ ತರಗತಿಗಾಗಿ ೦-೮-೦
- ಮೂರನೆಯ ತರಗತಿಗಾಗಿ ೦-೧೦-೦

ಮಾರಾಟಗಾರರು :

ಶ್ರೀ ಸಾಯಿ ಪಬ್ಲಿಶಿಂಗ್ ಹೌಸ್
ವಿಜಯರೋಡು, ಧಾರವಾಡ

೧೭. **ಮುಂಬಯಿ (ಮಾತುಂಗೆ) ಕನ್ನಡ ಸಂಘ** (೧೬ನೆಯ ವರ್ಷದ ವರದಿ). ಕಾರ್ಯದರ್ಶಿಗಳು ಶ್ರೀಮಾನ್ ವಿ. ಎನ್. ಪರಾಂಡೇ ಮತ್ತು ಶ್ರೀಮಾನ್ ಕೆ. ಜಿ. ಕಾಮತ ಅವರು. ಸಂಸ್ಥೆಯ ವಿಳಾಸ: ಮುಂಬಯಿ ಕನ್ನಡಸಂಘ, ವೆಂಕಟೇಶ ನಿವಾಸ, ಭಾವುದಾಜಿರೋಡ್, ಮುಂಬಯಿ ೧೯. ಡೆ. ಅ. ೧೬ ಪುಟಗಳು.

ಮುಂಬಯಿಯಲ್ಲಿ ಉತ್ಸಾಹದಿಂದ, ಕನ್ನಡ ಸಾಹಿತ್ಯಸಂಸ್ಕೃತಿಗಳ ಚಟುವಟಿಕೆಯನ್ನು ನಡೆಸುವ ಮತ್ತೊಂದು ಕನ್ನಡ ಸಂಸ್ಥೆಯಿದು. ೧೬ನೆಯ ವರ್ಷದಲ್ಲಿ ಮಾಡಿದ ಚಟುವಟಿಕೆಗಳು ಅಭಿನಂದನಾರ್ಹವಾಗಿವೆ.

೧೮. **ಸಂಯುಕ್ತ ರಾಷ್ಟ್ರಸಂಘ** (ಪರಿಚಯಾತ್ಮಕ ಗ್ರಂಥ) ಬರೆದವರು ಶ್ರೀಮಾನ್ ಎಚ್. ಎಸ್. ಪಾಟೀಲ ಎಂ. ಎ., ಬಿ. ಕಾಮ್. ನ್ಯೂ ದಿಲ್ಲಿ ಅವರು. ಧಾರವಾಡದ ಮಿಂಚಿನಬಳ್ಳಿಯ ೧೬ನೆಯ ವರ್ಷದ ೨ನೆಯ ಕುಡಿಯಿದು. ಕ್ರಾ. ಅ. ೧೪೮ ಪುಟಗಳು. ಬೆಲೆ ೧-೮-೦.

೧೯. **ಭಗವಾನ್ ಶ್ರೀ ರಮಣ ಮಹರ್ಷಿಗಳ ಉಪದೇಶ** ಸಾರ (ಪದ್ಯಗ್ರಂಥ) ಲೇಖಕರು ಶ್ರೀಮಾನ್ ಜಿ. ಎನ್. ಲಕ್ಷ್ಮಣ ಪೈ 'ವಿದ್ವಾನ್' ಸಿ. ಒ. ಎಲ್. ಪುತ್ತೂರು (ದ ಕ.) ಲೇಖಕರೇ ಪ್ರಕಾಶಕರು. ಕ್ರಾ. ೧/೧೬ ದ ೧೮ ಪುಟಗಳು. ಬೆಲೆ ೦-೩-೦.

ಶರತ್ ಪ್ರಕಾಶನ ಮಂದಿರ, ಧಾರವಾಡ.

(ಪುಸ್ತಕ ಪ್ರಕಾಶಕರು ಮತ್ತು ಪುಸ್ತಕವ್ಯಾಪಾರಿಗಳು)

ವಾಚನಾಲಯಗಳಿಗೆ ಬೇಕಾಗುವ ಯಾವ ಕನ್ನಡ ಪುಸ್ತಕಗಳನ್ನೂ ಯೋಗ್ಯ ಬೆಲೆಗೆ, ಸಮಯಕ್ಕೆ ಸರಿಯಾಗಿ ಪೂರಯಿಸಲಾಗುವುದು.

ನಮ್ಮ ಮಂದಿರ ಪ್ರಕಟಿಸಿದ ಶ್ರೀ ಆನಂದಕಂದರ ಕೃತಿಗಳು

೧ ಮಗಳ ಮದುವೆ

ಸಾಮಾಜಿಕ ಕಾದಂಬರಿ, ಕ್ರಾ. ಅ. ೩೫೦ ಪುಟಗಳು ಬೆಲೆ ಸಾದಾ ಪ್ರತಿ ೪ ರೂ.

೨ ಬೆಳವಡಿ ಮಲ್ಲಮ್ಮ	೩ ಕಾರಹುಣ್ಣಿವೆ	೪ ಬೆಂದಹೃದಯ
(ತರಂಗ ನಾಟಕ)	(ಕವನ ಸಂಕಲನ)	ರೂಪಕ ಸಂಕಲನ
ಪುಟ ೧೧೬ ಬೆಲೆ ೧-೮-೦	ಪುಟ ೧೦೮ ಬೆಲೆ ೨-೦-೦	ಪುಟ ೧೧೨ ಬೆಲೆ ೧-೪-೦

ಈ ನಾಲ್ಕೂ ಪುಸ್ತಕ ಒಮ್ಮೆಲೆ ತರಿಸಿಕೊಂಡರೆ ಏಳು ರೂ. ಮಾತ್ರ. ಅಂಚೆವೆಚ್ಚ ಬೇರೆ.

ನಮ್ಮಲ್ಲಿ ದೊರೆಯುವ 'ಆನಂದಕಂದ' ರ ಬೇರೆ ಗ್ರಂಥಗಳು

ಕಾದಂಬರಿ	ಕವನ ಸಂಕಲನ	ಕಥಾಸಂಕಲನ	ಇತರ ಗ್ರಂಥಗಳು
ರಾಜಯೋಗಿ	ಒಡನಾಡಿ	ಬಡತನದ ಬಾಳು	ಕರ್ನಾಟಕ ಜನಜೀವನದರ್ಶನ
ಸುದರ್ಶನ		ನಮ್ಮ ಬದುಕು	ಶ್ರೀ. ಬಸವಣ್ಣನ
ಅಶಾಂತಿಪರ್ವ		ಸಂಸಾರ ಚಿತ್ರ	
		ಮಾತನಾಡುವ ಕಲ್ಲು	

ಅಲ್ಲದೆ ಶ್ರೀ ಹುದ್ದಾರರ '**ಚಿತ್ರಕಲಾಪ್ರವೇಶ**'ವೂ ಚಾಡಿಯ ಚಾಣಕ್ಯನ '**ಜಾತೀಯ ಸಮಸ್ಯೆ**' '**ಕರ್ನಾಟಕ ಏಕೀಕರಣ**' ಈ ಕಿರುಹೊತ್ತಿಗೆಗಳೂ ದೊರೆಯುವವು.

ವ್ಯಾಪಾರಿಗಳಿಗೆ ಧಾರಾಳ ಕಮೀಶನ್ ಕೊಡಲಾಗುವದು.

ಸಂಚಾಲಕ :

ಎಸ್. ಡಿ. ಧರಮಟ್ಟಿ, ಶರತ್ ಪ್ರಕಾಶನ ಮಂದಿರ, ಧಾರವಾಡ.

Printed by N. A. Hoskeri at the Vijaya Press, Dharwar and published for the Proprietors Jayanti publications, by S. D. Dharmatti at the Jayanti Office, Dharwar

ಆಗಸ್ಟ್ ೧೯೫೫

ಬೆಲೆ:
೮ ಆಣೆಗಳು

ಸಮಾಜದೈವತ

೧

ಸಾಸಿರ ವಕ್ತ್ರದ ಸಾಸಿರ ನೇತ್ರದ
ಸಾಸಿರ ಪದಗಳ ವ್ಯಕ್ತಿ—
ಸಾಸಿರ ಚಿತ್ತದ ಸಾಸಿರ ಹೃದಯದ
ಸಾಸಿರ ಬುದ್ಧಿಯ ಶಕ್ತಿ!

೨

ಈ ಶಕ್ತಿಯೆ ದಿಟನಿಂದಿನ ದೈವತ,
ಪೂಜೆಯಿದಕೆ ಬೇಕು!
ಪೂಜೆ ದೊರೆಯದಿರೆ ದೈವತವಲ್ಲಿದು
ದೆವ್ವವಯ್ಯೊ! ಸಾಕು!

೩

ಒಳಿತು–ಹದುಳಗಳ ಗೆಲವು–ನೋಲುಗಳ–
ನೆಳೆದು ತರುವುದೀ ಶಕ್ತಿ—
ಮುಳಿದರೆ ಇದು ಮನುವಿನ ಕುನ್ನಿಗಳಿಗೆ
ಇರುವುದೆಲ್ಲಿಯಾ ಮುಕ್ತಿ?

ಈ ಸಂಚಿಕೆಯಲ್ಲಿ :

●

ಕನ್ನಡಿಗರ ಮೇಲೆ ಬೀಳುತ್ತಿರುವ ಪೆಟ್ಟುಗಳು (ಸಂಪಾದಕೀಯ)
ಸಂಪಾದಕರು ೮೧

ನಾಡನಡೆ (ಸಾಂದರ್ಭಿಕ ಟಿಪ್ಪಣಿಗಳು)
'ಕಾಲಭೈರವ' ೮೩

ಜಗತ್ತಿಗಾಗಿ (ಅನುವಾದಿತ ಕಥೆ)
ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ ೮೫

ಸಾಹಿತ್ಯದಲ್ಲಿ ಸಹಜತೆ (ವಿವೇಚನಾತ್ಮಕ ಪ್ರಬಂಧ)
ಶ್ರೀ. ಎನ್. ಭೀಮಭಟ್ಟ 'ಸಾಹಿತ್ಯಶಿರೋಮಣಿ' ಕಸ್ಯಾನ ೯೪

ಕ್ರಾಂತಿ (ಕವನ)
ಶ್ರೀ. ರಂಗರಾವ ದೇಶಪಾಂಡೆ, ಅಲದಕಟ್ಟಿ ೯೭

ಒಲವಿನಾಟ (ಕವನ)
ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ., ಬಿ. ಟಿ. ಗುಳೇದಗುಡ್ಡ ೯೭

ಮಾತೃತ್ವ (ಸಣ್ಣ ಕತೆ)
ಶ್ರೀ. ಅ. ಅ. ಮುತಾಲಿಕದೇಸಾಯಿ, ನಂದೀಕುರ್ಲಿ ೯೮

ಪ್ರಾಣಾಯಾಮ ಮತ್ತು ಕ್ಷಯರೋಗ ನಿವಾರಣೆ (ಶರೀರಸ್ವಾಸ್ಥ್ಯವಿಚಾರ)
ಶ್ರೀ. ಲಕ್ಷ್ಮಣ ಜೋಷಿ ಬಿ. ಎ., ಬಿ. ಟಿ. ಕೂಡ್ಲಿಗಿ ೧೦೨

ಸಮುದ್ರಮೋಹಿನಿ (ನವ್ಯಕವನ)
ಶ್ರೀ. ಅರವಿಂದ ನಾಡಕರ್ಣಿ ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬಯಿ ೧೦೫

ತಂದೆಯ ಪಾತಕ (ಸಣ್ಣ ಕತೆ)
ಶ್ರೀ. ಆನಂದ ವರ್ಟಿ, ಬೆಳಗಾಂವಿ ೧೦೭

ರಾಷ್ಟ್ರಗೀತದ ಉಗಮ ಹಾಗೂ ಪ್ರಭಾವ (ಸಂಚಯಾತ್ಮಕ)
ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ., ಎಲ್‌ಎಲ್. ಬಿ. ಧಾರವಾಡ .. ೧೧೨

ಸಾಹಿತ್ಯ ವಿಮರ್ಶೆಯ ಶಿಕ್ಷಣರಂಗ ('ಮುಕ್ತಿ' 'ಸತ್ಯಾನ್ವೇಷಣ'ಗಳ ವಿಮರ್ಶೆ)
ಶ್ರೀ ಎನ್. ಭೀಮಭಟ್ಟ ಮತ್ತು ಶ್ರೀ. ಕೆ. ಎಸ್. ಶರ್ಮಾ ೧೧೫

ಪುಸ್ತಕ ವಿಮರ್ಶೆ (ಶ್ರೀ. ಮಿರ್ಜಿ ಅಣ್ಣಾರಾಯರ 'ಶ್ರೇಯಾಂಸ' ಕಾದಂಬರಿ)
ಶ್ರೀ. ಬ್ರಹ್ಮಪ್ಪ ಬಿ. ಎ. (ಆನರ್ಸ್), ಮೈಸೂರು ೧೧೯

ಸಾದರ ಸ್ವೀಕಾರ ಹೊದಿಕೆಯ ೩ನೆಯ ಪುಟದಲ್ಲಿ

ಜಯಂತಿ

ಸಂಪುಟ ೧೮ ಸಂಚಿಕೆ ೩

ಕುಟುಂಬದಲ್ಲಿಯ
ಜ್ಞಾನವನ್ನೂ ರಸಾನಂದವನ್ನೂ
ಪಡೆಯಬಹುದಾದ
ಮಾಸಪತ್ರಿಕೆ

●

ಸಂಪಾದಕರು:
ಶ್ರೀ. ಬೆಟಗೇರಿ ಕೃಷ್ಣಶರ್ಮ

●

ಸಂಚಿಕೆ ಪ್ರತಿತಿಂಗಳ
ಮೊದಲನೆಯ ತಾರೀಖಿಗೆ
ಪ್ರಕಟವಾಗುವುದು.

卐

ವಾರ್ಷಿಕ ವರ್ಗಣಿ-೫ ರೂ.
ಬಿಡಿ ಸಂಚಿಕೆ ೮ ಆಣೆ

**

**

ಜಾಹೀರಾತು ಕೊಡಬಯಸುವವರು
ದರಗಳಿಗಾಗಿ ಬರೆದು ಕೇಳಬೇಕು

●

ಅನೇಕ ಊರುಗಳಲ್ಲಿ
ಜಯಂತಿ ಮಾರುವ
ಏಜಂಟರು
ಬೇಕಾಗಿದ್ದಾರೆ.

ಸಂಪಾದಕೀಯ

●

ಕನ್ನಡಿಗರ ಮೇಲೆ ಬೀಳುತ್ತಿರುವ ಏಟುಗಳು

'ಯಾವ ರಾಯ ಬಂದರೂ ನಮ್ಮ ರಾಗಿಯ ಬೀಸುವುದು ತಪ್ಪಲಿಲ್ಲ' ಎಂಬುದೊಂದು ಒಕ್ಕಲಿಗರಲ್ಲಿಯ ಹಳೆಯ ಕಾಲದ ಗಾದೆ. ಈ ಗಾದೆಯನ್ನೇ ತಿರುಗಿಸಿ ಇಂದಿನ ಕನ್ನಡಿಗರ ಜೀವನಕ್ಕೆ ಅನ್ವಯಿಸಿ ಹೇಳಬೇಕೆಂದರೆ 'ಯಾರ ಆಳಿಕೆ ಬಂದರೂ ಕನ್ನಡಿಗರ ಬೀಳಿಕೆ ತಪ್ಪಲಿಲ್ಲ!' ಎಂದು ಹೇಳಬಹುದು. ಆದರಲ್ಲಿಯೂ ಮುಂಬಯಿ, ಮದ್ರಾಸು, ಹೈದರಾಬಾದ್ ರಾಜ್ಯಗಳ ಆಳಿಕೆಗಳಿಗೆ ಒಳಪಟ್ಟ ಅಲ್ಪಸಂಖ್ಯಾಕ ಕನ್ನಡಿಗರು ಆಗಾಗ ತಿನ್ನಬೇಕಾಗುವ ಏಟುಗಳಿಗೆ ಎಣಿಕೆಯೇ ಇಲ್ಲ.

ಈಗ ಮುಂಬೈ ರಾಜ್ಯಸರಕಾರವು, ಮೊನ್ನೆ ಮೊನ್ನೆಯೇ ಕನ್ನಡಿಗರ ಕೆನ್ನೆಗೆ ಕೊಟ್ಟಿರುವ ಅವಮಾನಕರವಾದ ಏಟೊಂದನ್ನು ಕುರಿತು ವಿಚಾರ ಮಾಡೋಣ:

ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನಲ್ಲಿ 'ಸಂಕೇಶ್ವರ' ಎಂಬ ಹೆಸರಿನ ದೊಡ್ಡ ಗ್ರಾಮವೆನ್ನಿ—ಚಿಕ್ಕ ಪಟ್ಟಣವೆನ್ನಿ—ಇದೆ. ವ್ಯಾಪಾರಕ್ಕೆ ತುಂಬ ಹೆಸರಾದ ಸ್ಥಳವದು. ೮-೧೦ ಸಾವಿರಕ್ಕಿಂತ ಹೆಚ್ಚು ಜನವಸತಿಯಿದೆ. ಅಲ್ಲಿಯ ಜನರಲ್ಲಿ ನೂರಕ್ಕೆ ಎಪ್ಪತ್ತಕ್ಕಿಂತ ಹೆಚ್ಚು ಜನ ಕನ್ನಡಿಗರು. ಆದರೂ ಬ್ರಿಟಿಷರ ವೈಶಿಷ್ಟ್ಯಪೂರ್ಣ ಆಳಿಕೆಯಲ್ಲಿ, ಬಹಳ ದಿನಗಳ ವರೆಗೆ ಅಲ್ಲಿ ಒಂದು ಕೂಡ ಕನ್ನಡ ಶಾಲೆಯಿರಲಿಲ್ಲ. ಹೊಸ ರಾಜಕೀಯ ಸುಧಾರಣೆಯೊಂದಿಗೆ ಜಿಲ್ಲಾ ಬೋರ್ಡುಗಳು ಅಸ್ತಿತ್ವದಲ್ಲಿ ಬಂದಮೇಲೆ, ಬೆಳಗಾಂವಿ ಜಿಲ್ಲಾಬೋರ್ಡು ಅಲ್ಲಿ ಕನ್ನಡ ಶಾಲೆಯನ್ನು ಪ್ರಾರಂಭಿಸಿತು. ಮೊದ-ಮೊದಲು ಕಿಣಿ-ಕಿಣಿ ಕೂಸಿನಂತೆಯೇ ಇದ್ದ ಅಲ್ಲಿಯ ಕನ್ನಡ ಶಾಲೆಗಳು ಈಗ ಬೆಳೆದು ದೊಡ್ಡವಾಗಿ ಮರಾಠೀ ಶಾಲೆಗಳನ್ನು ಮೂಲೆಗೆ ತಳ್ಳಿಬಿಟ್ಟಿವೆ. ಸಂಕೇಶ್ವರದಲ್ಲಿ ಕನ್ನಡ ಶಾಲೆಗಳಿಲ್ಲದಿರುವಾಗಲೂ—ಆ ಊರಿಗೆ ಹೋದ ಹೊಸಬರಿಗೆ ಕೂಡ—ಅದು ಮರಾಠೀ ಭಾಷಾ ಪ್ರಧಾನವಾದ ಗ್ರಾಮವೆಂದು ಎನಿಸುತ್ತಿರಲಿಲ್ಲ. ಜನಸಾಮಾನ್ಯರು ಆಡುವ ಮಾತುಗಳೆಲ್ಲ ಕನ್ನಡವೆ. ಪೇಟೆಯ ವ್ಯವಹಾರದ ಭಾಷೆಯೂ ಕನ್ನಡವೆ. ಕಲಿತ ಮುಂದಾಳುಗಳಲ್ಲಿ ಮಾತ್ರ ಮರಾಠಿಯ ಹುಚ್ಚು ಪ್ರೀತಿ-ಆದರಗಳು ಕಂಡುಬರುತ್ತಿದ್ದುವು.

ಸಂಕೇಶ್ವರದಲ್ಲಿ ಕನ್ನಡ ಶಿಕ್ಷಣವು ಪ್ರಾರಂಭವಾದಂದಿನಿಂದ ಎನ್ನಿ, ಪರಿಸ್ಥಿತಿಯ ಪ್ರಭಾವದಿಂದ ಎನ್ನಿ, ಅಲ್ಲಿಯ ಜನರಲ್ಲಿ ಕನ್ನಡತನದ ಅರಿವು ಮೂಡತೊಡಗಿದುವು. ಕನ್ನಡ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ದಿನದಿನಕ್ಕೆ ಹೆಚ್ಚತೊಡಗಿದೆ. ಅಲ್ಲಿ ಕನ್ನಡ ಶಾಲೆಗಳು ಅಭಿವೃದ್ಧಿಯ ಸ್ಥಿತಿಯಲ್ಲಿ ಇವೆಯಲ್ಲದೆ, ಕನ್ನಡದ ಅಭಿಮಾನಿಗಳು ಪ್ರಾರಂಭಿಸಿದ ಮಾಧ್ಯಮಿಕ ಶಾಲೆಯೊಂದೂ ತನ್ನ ಪ್ರಭಾವವನ್ನು ಹೆಚ್ಚಿಸತೊಡಗಿದೆ. ಮರಾಠಿಯ ಬೆನ್ನುಹತ್ತಿದ್ದ ಹಳೆಯ ತಲೆಗಳು ಮರೆಯಾಗಿ ಕನ್ನಡ ತರುಣರ ಕನ್ನಡಾಭಿಮಾನದ ಉತ್ಸಾಹದ ಧ್ವನಿಯು ಅಲ್ಲಿ ಮೊಳಗತೊಡಗಿದೆ. ಕನ್ನಡಿಗರು ಮೈಮರೆದು ಮಲಗಿದಾಗ, ತಾನೆತಾಗಿ ಆಕ್ರಮಿಸಿಕೊಂಡಿದ್ದ ಮರಾಠೀಭಾಷೆಗೆ ಈಗ ನಿಲುಗಡೆಯಿಲ್ಲದಂತಾಗಿದೆ. ಇದಕ್ಕಾಗಿ ಸಂಕೇಶ್ವರದಲ್ಲಿರುವ ಅಲ್ಪಸಂಖ್ಯಾಕ ಮರಾಠಿಗರು, ಎಂದಿನಂತೆ ಮರಾಠಿಗೇ ಅಲ್ಲಿ ಮುಖ್ಯಸ್ಥಾನವನ್ನು ಕೊಡಬೇಕೆಂದು ಅನ್ಯಾಯದ ಕೂಗನ್ನು ಎಬ್ಬಿಸಿರುವರು. ಭಾಷಾವಿಚಾರದಲ್ಲಿ ನಿಷ್ಪಕ್ಷಪಾತಭಾವವನ್ನು ತೋರಿಸದ ಮುಂಬಯಿ ಸರಕಾರ, ಅವರಿಗೆ ಬೆಂಬಲ ಕೊಟ್ಟಿದೆ. ಕನ್ನಡಿಗರ ನ್ಯಾಯ್ಯವಾದ ಹಕ್ಕುಗಳನ್ನು ತುಳಿದುಬಿಟ್ಟಿದೆ. ಅದು ಹೇಗೆ ಗೊತ್ತೋ?

ಎಲ್ಲ ಕಡೆಗಳಲ್ಲಿಯಂತೆ ಸಂಕೇಶ್ವರದಲ್ಲಿಯೂ ಗ್ರಾಮಪಂಚಾಯತಿಯಿದೆ. ಅದರ ಸದಸ್ಯರಲ್ಲಿ ಮುಕ್ಕಾಲು ಪಾಲು ಜನರು ಅಚ್ಚ ಕನ್ನಡಿಗರು. ಮಿಕ್ಕ ಕಾಲುಪಾಲು ಜನರು ಅಚ್ಚ ಮರಾಠಿಗ-

ರೇನೂ ಅಲ್ಲವಾದರೂ, ಮರಾಠೀಭ್ರಾಂತರು. ಜಾಗೃತ ಕನ್ನಡಿಗರು ಪಂಚಾಯತಿಯ ಎಲ್ಲ ವ್ಯವಹಾರಗಳನ್ನು ಕನ್ನಡದಲ್ಲಿಯೇ ನಡೆಯಿಸಬೇಕೆಂದು ಬಹುಮತದಿಂದ ಗೊತ್ತುಮಾಡಿಕೊಂಡರು; ಅದನ್ನು ಜಾರಿಯಲ್ಲಿಯೂ ತಂದರು. ಸರಪಂಚನೆನಿಸಿಕೊಳ್ಳುವವನಿಗೆ ಅದೇನು ಮರಾಠಿಯ ಮೋಹವೋ! ಇದನ್ನು ವಿರೋಧಿಸಿ ಮೇಲಧಿಕಾರಿಗಳಲ್ಲಿ ದೂರಿಟ್ಟ. ಜಿಲ್ಲಾ ಬೋರ್ಡಿನವರೂ ಸ್ಥಳೀಯಸಂಸ್ಥೆಯ ಅಧಿಕಾರಿಗಳೂ ಕನ್ನಡಿಗರ ನ್ಯಾಯವಾದ ಪಕ್ಷವನ್ನೊಪ್ಪಿ, ಕನ್ನಡದ ವ್ಯವಹರಣೆಗೆ ಸಮ್ಮತಿಯನ್ನು ಕೊಟ್ಟರು. ಹಟವನ್ನು ಸಾಧಿಸಬೇಕೆಂಬ ಸರಪಂಚರು ಸುಮ್ಮಗೆ ಬಿಡುವರೇ? ಜಿಲ್ಲಾಧಿಕಾರಿಗಳಲ್ಲಿ ದೂರಿಟ್ಟರು. ಜಿಲ್ಲಾಧಿಕಾರಿಗಳು ನ್ಯಾಯಾನ್ಯಾಯದ ವಿಚಾರವಿಲ್ಲದೆ, ಎಂದಿನಂತೆ ಮರಾಠಿಯೇ ಇರಲೆಂದರು. ಸಂಕೇಶ್ವರದ ಜನತೆ ಇದನ್ನೊಪ್ಪಲಿಲ್ಲ. ಪಂಚಾಯತಿಯ ವ್ಯವಹಾರವನ್ನು ಕನ್ನಡದಲ್ಲಿಯೇ ಸಾಗಿಸಿದರು. ತಮ್ಮ ಅಪ್ಪಣೆಯನ್ನು ಮನ್ನಿಸಲಿಲ್ಲವೆಂದು ಜಿಲ್ಲಾಧಿಕಾರಿಗಳು ಸ್ಥಳೀಯ ಸಂಸ್ಥೆಗಳ ಮಂತ್ರಿಗೆ ತಿಳಿಸಿದರು. ಅವರು ಕೂಡ ಮರಾಠಿಗರೇ ಆದುದರಿಂದ, ಕನ್ನಡಿಗರ ಹಕ್ಕು-ಬಾಧ್ಯತೆಗಳ ವಿಚಾರವನ್ನೇ ಮಾಡದೆ, ಸಂಕೇಶ್ವರದ ಗ್ರಾಮಪಂಚಾಯತಿಯನ್ನು ರದ್ದುಗೊಳಿಸಿ, ತಾಲ್ಲೂಕಿನ ಮಾಮಲೇದಾರರ ಕಡೆಗೆ ಅದರ ಆಡಳಿತವನ್ನು ಒಪ್ಪಿಸಿ, ಅದರ ವ್ಯವಹಾರವನ್ನೆಲ್ಲ ಮರಾಠಿಯಲ್ಲಿಯೇ ಸಾಗಿಸಬೇಕೆಂದು ಅನ್ಯಾಯದ ಕಟ್ಟಪ್ಪಣೆ ವಿಧಿಸಿದ್ದಾರೆ. ಮಾದರಿಗಾಗಿ ಇದೊಂದನ್ನು ಇಲ್ಲಿ ಹೇಳಲಾಗಿದೆ. ಈ ಬಗೆಯವುಗಳು ಅನೇಕ ಕಡೆಗೆ ನಡೆದಿವೆ, ನಡೆಯುತ್ತಲಿವೆ. ಬೆಳಗಾಂವಿಯ ನಗರಸಭೆಯವರು ಕನ್ನಡಿಗರ ಮೇಲೆ ನಡೆಯಿಸಿರುವ ಅಭಿಯೋಗವಂತೂ ಅಸಹನೀಯವಾದುದಾಗಿದೆ. ಎರೆಂಟು ವರ್ಷಗಳಿಂದ ಅಲ್ಲಿಯ ಕನ್ನಡಿಗರು, ತಮ್ಮ ಕನ್ನಡತನದ ಹಕ್ಕಿನ ಸಂರಕ್ಷಣೆಗಾಗಿ ಕೂಗಾಡುತ್ತಿದ್ದರೂ, ಇದುವರೆಗೂ ಅವರ ದೂರನ್ನು ಕೇಳುವ ಪಾಪವನ್ನು ಯಾರೂ ಮಾಡಿಲ್ಲ.

ಮುಂಬಯಿಸರಕಾರದ ಸ್ಥಾನಿಕಸಂಸ್ಥೆಗಳ ಮಂತ್ರಿಗಳಾದ ಮಾನ್ಯ ಚವ್ಹಾಣಮಹಾಶಯರು, ಮೊನ್ನೆ ಮೊನ್ನೆ ಕರ್ನಾಟಕ ಪ್ರದೇಶದಲ್ಲಿ ದಿಗ್ವಿಜಯ ಬೆಳೆಸಿಹೋದರು. ಆಗ ಹುಬ್ಬಳ್ಳಿಯಲ್ಲಿಯ ಕೆಲವು ಮುಂದಾಳುಗಳು ಸೇರಿ, ಸಂಕೇಶ್ವರದ ಅನ್ಯಾಯವನ್ನು ಕುರಿತು ಪ್ರಶ್ನೆಗಳನ್ನು ಕೇಳಿದಾಗ, ಪ್ರಜಾಪ್ರಭುತ್ವದ ಪ್ರಾತಿನಿಧ್ಯವನ್ನು ವಹಿಸಿದ ಈ ಮಾನ್ಯಮಂತ್ರಿಗಳು, ವಾಸ್ತವಕ್ಕೆ ಸರಿಯೆನಿಸದ ಏನೇನೋ ಮಾತುಗಳನ್ನಾಡಿ ಪಾರಾಗುವ ಪ್ರಯತ್ನ ಮಾಡಿದರು. ಸಂಕೇಶ್ವರ ಗ್ರಾಮಪಂಚಾಯತಿಯ ವಿಷಯದಲ್ಲಿ ಅವರು ಆಡಿದ ಮಾತುಗಳೆಲ್ಲ ಸತ್ಯವಲ್ಲವೆಂಬುದನ್ನು, ಸಂಕೇಶ್ವರದ ಮುಂದಾಳುಗಳೂ ಬೆಳಗಾಂವಿ ಜಿಲ್ಹಾ ಬೋರ್ಡಿನ ಅಧ್ಯಕ್ಷರೂ, ಕಾಂಗ್ರೆಸಿನ ಹಿರಿಯರೂ ಲೋಕದೆದುರು ಸಾರಿದಾಗ, ಮಾನ್ಯ ಮಂತ್ರಿಗಳು ಎಷ್ಟೊಂದು ಸುಳ್ಳು ಹೇಳಿದರೆಂಬುದು ಜನರಿಗೆ ಗೊತ್ತಾಯಿತು. ಕೇವಲ ಅಧಿಕಾರಲೋಲುಪರಾದ ಕುಟಿಲರಾಜಕಾರಣಿಗಳಿಗೆ ಈ ಬಗೆಯ ಸುಳ್ಳು-ಆಟಮಟಗಳು ಸರಿಹೋಗಬಹುದು; ಆದರೆ ಮಹಾತ್ಮರ ಸತ್ಯ-ಅಹಿಂಸೆಗಳ ಹೆಸರು ಹೇಳುತ್ತ ಆಡಳಿತ ನಡೆಸುವ ಪ್ರಜಾಸೇವಕರು ಹೀಗೆ ಸುಳ್ಳು-ವಂಚನೆಗಳನ್ನು ಅನುಸರಿಸುವುದೆಂದರೆ, ದೇವರೇ ಕಾಪಾಡಬೇಕು ನಮ್ಮನ್ನು.

ಪ್ರಾಥಮಿಕ ಶಾಲೆಯ ಪಾಠ್ಯಪುಸ್ತಕಗಳ ವಿಚಾರದಲ್ಲಿಯೂ ಕನ್ನಡಿಗರ ಮೇಲೆ ಇದೇ ಬಗೆಯ ಆಕ್ರಮಣವಾದುದು ಕಂಡು ಬರುತ್ತದೆ. ಕನ್ನಡ ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳು ಓದಬೇಕಾದ ೨೦೦ ಪುಟಗಳ ಇತಿಹಾಸಪುಸ್ತಕದಲ್ಲಿ, ಕನ್ನಡ ಮಹಾಪುರುಷರ ಪಾಲಿಗೆ ಹತ್ತು-ಹನ್ನೆರಡು ಪುಟಗಳೂ ಬಂದಿಲ್ಲ. ಇನ್ನೊಂದು ಸವಾಡವೆಂದರೆ, ಕನ್ನಡ ಲೇಖಕರೇ ಬರೆದ ಈ ಇತಿಹಾಸ ಪುಸ್ತಕಗಳು ಎಷ್ಟೊಂದು ಚೆನ್ನಾಗಿದ್ದರೂ, ಅವುಗಳಿಗೆ ಸರಿಯಾದ ಮನ್ನಣೆಯು ಸರಕಾರದಿಂದ ದೊರೆತಿಲ್ಲ. ಮರಾಠಿ ಲೇಖಕರು ಬರೆದುವುಗಳ ಕನ್ನಡ ಭಾಷಾಂತರಗಳಿಗೇ, ನಮ್ಮ ಶಾಲೆಗಳಲ್ಲಿ ಪಾಠ್ಯಪುಸ್ತಕಗಳೆಂಬ ಮನ್ನಣೆ ದೊರೆತಿದೆ. ಕನ್ನಡ ಲೇಖಕರೂ, ಪ್ರಕಾಶಕರೂ ಪುಸ್ತಕ ಬರೆದು ಪ್ರಕಟಿಸಿ, ಹಣ ಕಳೆದುಕೊಂಡು ಬರಿಯ ಜೇಬಿನವರಾಗಿ ಕುಳಿತರು; ಮರಾಠೀ ಲೇಖಕರು ತಮ್ಮ ಪ್ರದೇಶವಲ್ಲಲ್ಲದೆ, ಕನ್ನಡಿಗರಿಂದಲೂ ಹಣವನ್ನು ಸೆಳೆದು ತುಂಬಿದ ಜೇಬಿನವರಾಗಿರುವರು. ನಾಲ್ಕನೆಯ ಇಯತ್ತೆಯ ಇತಿಹಾಸವೊಂದೇ ಹೀಗೆಂದಲ್ಲ; ಬೇರೆ ಅನೇಕ ಪಾಠ್ಯಪುಸ್ತಕಗಳೂ ಇನ್ನೊಬ್ಬರ ಜೇಬನ್ನೇ ತುಂಬುವಂತಹವಾಗಿವೆ. ಕನ್ನಡಿಗರೆನಿಸಿಕೊಳ್ಳುವ ಹೊಣೆಗಾರ ಜನರು, ಸಕಾಲದಲ್ಲಿ ಇದರ ವಿಚಾರವನ್ನು ಮಾಡಬಾರದೇನು?

ಈಗ ಮೇಲಧಿಕಾರಿಗಳಾಗಿ ಪರಭಾಷೆಯ ಮಹಾಶಯರು ನಮ್ಮ ಜಿಲ್ಲೆಗಳಿಗೆ ಬರುವರು ಅವರೆಲ್ಲ ಇಲ್ಲಿ ಇದ್ದು ಮಾಡುವುದೆಂದರೆ, ಸ್ವಭಾಷೆಯವರ ಕಲ್ಯಾಣವನ್ನಲ್ಲದೆ ಕನ್ನಡಿಗರ ಕಲ್ಯಾಣದ ಕಡೆಗೆ ಲಕ್ಷ್ಯವನ್ನೇ ಕೊಡುವುದಿಲ್ಲ. ಕನ್ನಡದ ಕೇಂದ್ರನಗರಗಳಲ್ಲಿಯೂ ಈ ಬಗೆಯ ಅನ್ಯಾಯಗಳು ಎಷ್ಟೋ ನಡೆಯುತ್ತವೆ. ಮೇಲಧಿಕಾರಿಗಳೆಂಬ ದಾಕ್ಷಿಣ್ಯ-ಭೀತಿಗಳಿಗಾಗಿ ಕನ್ನಡಿಗರು ಅವರ ಆಘಾತ ಅಭಿಯೋಗಗಳನ್ನು, ಬಾಯಿಮುಚ್ಚಿ ಸುಮ್ಮನೆ ಸಹಿಸುತ್ತಲಿದ್ದಾರೆ. **ಕನ್ನಡಿಗರ ಮೇಲಾಗುತ್ತಿರುವ ಈ ಅನ್ಯಾಯ-ಅಭಿಯೋಗಗಳಿಗೆ** ಎಂದಾದರೂ ಕೊನೆಯಿದೆಯೋ ಇಲ್ಲವೋ-ಎಂದೆನಿಸುತ್ತಿದೆ. ಕೌನ್ಸಿಲು-ಅಸೆಂಬ್ಲಿಗಳಲ್ಲಿ ಕನ್ನಡಿಗರ ಪ್ರತಿನಿಧಿಗಳಾಗಿ ಹೋದವರ ಪರಿಸ್ಥಿತಿಯು, ಜೂಜಿನಾಟದಲ್ಲಿ ಸರ್ವಸ್ವವನ್ನೂ ಕಳೆದುಕೊಂಡ ಪಾಂಡವರಂತೆ ಆಗಿದೆ. ದುಶ್ಶಾಸನನು ದ್ರೌಪದಿಯ ಸೀರೆಯನ್ನು ಸೆಳೆಯುತ್ತಿದ್ದರೂ, ಧರ್ಮಕ್ಕೆ ಕಟ್ಟುಬಿದ್ದ ಅವರು ಸುಮ್ಮಗಿದ್ದರಂತೆ! ಅವರಿವರಲ್ಲಿ ಇಷ್ಟೇ ವ್ಯತ್ಯಾಸ: ಅವರು ಧರ್ಮಕ್ಕೆ ಕಟ್ಟುಬಿದ್ದರಂತೆ; ಇವರು ಅಸೆಂಬ್ಲಿ-ಕೌನ್ಸಿಲುಗಳ ಕುರ್ಚಿಗೆ ಕಟ್ಟುಬಿದ್ದಿದ್ದಾರೆ! ಕನ್ನಡ ತಾಯಿಯ ದುರ್ದೈವ!

ನಾಡನಡೆ

ಜಯಂತಿಗೆ ಸಹಾಯಧನ

ಜಯಂತಿ ಬಹುಕಾಲ ಬಾಳಬೇಕೆಂದು ಮನವಾರೆ ಬಯಸುವ ಮಹನೀಯರು ಕನ್ನಡನಾಡಿನಲ್ಲಿ ಇಲ್ಲದೆ ಇಲ್ಲ. ಅವರೆಲ್ಲರೂ ಮನಸ್ಸು ಮಾಡಿದರೆ, ಜಯಂತಿಯು ಸದ್ಯದ ತನ್ನ ಆರ್ಥಿಕ ಆಪತ್ತಿನಿಂದ ದಾಟುವುದೆಂದು ನನ್ನ ಭರವಸೆ. ಮುಂಬಯಿಯ ತರುಣ ಕನ್ನಡಿಗರೊಬ್ಬರಿಂದ ಬಂದ ಸಹಾನುಭೂತಿಯ ಪತ್ರವು ನನ್ನನ್ನು ತುಂಬ ಆಶಾವಾದಿಯನ್ನಾಗಿ ಮಾಡಿದೆ. ಇವರು ತಮ್ಮ ಹೆಸರನ್ನು ಬೆಳಕಿಗೆ ತರಬಾರದೆಂದು ತಿಳುಹಿರುವರು. ಜಯಂತಿಗೆ ಪ್ರತಿ ತಿಂಗಳೂ ೧ ರೂಪಾಯಿಯನ್ನು ಕಳುಹುವುದಾಗಿ ಸಂಕಲ್ಪಿಸಿದ ಇವರು, ತಮ್ಮ ಮೊದಲ ಕಂತದೊಂದಿಗೆ ಬರೆದ ಕಾಗದದಲ್ಲಿ ಹೀಗೆಂದಿದ್ದಾರೆ:

“ನಾನು ೬ನೆಯ ತಾರೀಖಿಗೆ ಮಾಡಿದ ಮನಿಯಾರ್ಡರು ತಮಗೆ ತಲ್ಪಿರಲು ಸಾಕು. ಕನ್ನಡದ ಒಂದೇ ಒಂದು ಪ್ರಸಿದ್ಧ ಪತ್ರಿಕೆಯಾದ ‘ಜಯಂತಿ’ಯು ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿದೆಯೆಂದು ತಿಳಿದು ನನಗೆ ಬಹಳೇ ವಿಷಾದವೆನಿಸಿತ್ತು. ನನ್ನ ಪ್ರೀತಿಯ ಪತ್ರಿಕೆಗೆ ಇಂದು ಸಹಾಯ ಮಾಡಲು ಸಾಧ್ಯವಾದುದಕ್ಕೆ ಬಹಳೇ ಆನಂದವಾಗಿದೆ. ನಾನು ನೌಕರಿಗೆ ಹತ್ತಿ ಇಂದಿಗೆ ೩ ವರ್ಷಗಳಾದರೂ ತಮಗೆ ಸಹಾಯ ಮಾಡಲಿಕ್ಕಾಗಿರಲಿಲ್ಲ. ಪ್ರತಿ ತಿಂಗಳೂ ಸಂಬಳ ಬಂದನಂತರ ತಮಗೆ ರೂಪಾಯಿ ಕಳುಹಬೇಕೆಂದು ಮಾಡಿರುತ್ತಿದ್ದೆ; ಆದರೆ ಸಂಬಳ ಬಂದ ದಿನವೇ ಎಲ್ಲ ಹಣವೂ ತೀರಿಹೋಗುತ್ತಿತ್ತು. ಮುಂಬಯಿಯ ಜೀವನಕ್ಕಾಗಿ ಎಷ್ಟು ಹಣ ಸಂಪಾದಿಸಿದರೂ ಅಷ್ಟೇ! ತಮ್ಮ ಮೇ ತಿಂಗಳ ಸಂಚಿಕೆಯಲ್ಲಿ ಜಯಂತಿಯ ಭೀಕರಪರಿಸ್ಥಿತಿಯನ್ನು ಓದಿ ‘ನಾನು ಇಂದು ೧೪೫ ರೂಪಾಯಿಗಳನ್ನು ಗಳಿಸುತ್ತಿದ್ದರೂ ನನ್ನ ಒಂದು ಅತ್ಯಂತ ಪ್ರೀತಿಯ ಪತ್ರಿಕೆ ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿದೆಯೆಂಬುದನ್ನು ಅರಿತೂ ಸ್ವಲ್ಪವೂ ಸಹಾಯ ಮಾಡುತ್ತಿಲ್ಲವಲ್ಲ!’ ಎಂದು ನಾಚಿಕೆಯೆನಿಸಿತು.... ಜೂಲೈ ತಿಂಗಳ ಪಗಾರ ಬಂದೊಡನೆಯೇ, ಅಂದೇ ೧ ರೂ. ಯನ್ನು M. O. ಮಾಡುವುದಾಗಿ ನಿರ್ಧರಿಸಿದೆ. ಅದರಂತೆಯೆ ಪ್ರತಿ ತಿಂಗಳೂ ನನ್ನ ಎಲ್ಲ ತೊಂದರೆಗಳನ್ನೂ ಬದಿಗಿರಿಸಿ ಸಂಬಳ ಬಂದ ದಿನವೇ ೧ ರೂಪಾಯಿಯನ್ನು ತಮಗೆ ತಪ್ಪದೆ ಮನಿಯಾರ್ಡರ್ ಮಾಡುವುದಾಗಿ ನಿರ್ಧರಿಸಿದ್ದೇನೆ........”

ಈ ಬಗೆಯ ಪ್ರೀತಿಯ ಜನರಿದ್ದಾರೆಂತಲೇ ಜಯಂತಿ ಬದುಕಿ ಬಹುಕಾಲ ಬಾಳಬೇಕೆಂಬ ಆಶೆ ತಾಳಿ, ಎಂತಹ ಕಷ್ಟ-ನಷ್ಟಗಳನ್ನೂ ಎದುರಿಸಿ ಹೊರಟಿದೆ. ಮೇಲಿನ ಮುಂಬಯಿಯ ತರುಣ ಮಿತ್ರರ ಸಹಾಯ, ಸಾಮಾನ್ಯ ದೃಷ್ಟಿಗೆ ಚಿಕ್ಕದೆನಿಸಬಹುದಾದರೂ, ಪ್ರೀತಿ-ಸಹಾನುಭೂತಿಗಳ ಹೊರೆಯನ್ನು ಹೊತ್ತುಕೊಂಡು ಬಂದಿರುವ ಆ ರೂಪಾಯಿಯ ಬೆಲೆ ಜಯಂತಿಗೆ ತುಂಬ ಎನಿಸುತ್ತಿದೆ. ಅಲ್ಲದೆ ಕೆಳಗೆ ಕಾಣಿಸಿದ ಮಹನೀಯರೂ ಜಯಂತಿಗೆ ಸಹಾಯಧನವನ್ನು ಕಳುಹಿದ್ದಾರೆ:

ಶ್ರೀಮಾನ್ ರಂ. ಶ್ರೀ. ಮುಗಳಿ ಎಂ. ಎ., ಬಿ. ಟಿ.
ವೈಸ್ ಪ್ರಿನ್ಸಿಪಾಲ್, ವಿಲಿಂಗ್ಡನ್ ಕಾಲೇಜು, ಸಾಂಗಲಿ

೧೦ ರೂಪಾಯಿಗಳು.

(ಇವರು ಕಳೆದ ವರ್ಷವೂ ೧೦ ರೂ. ಗಳನ್ನು ಕಳುಹಿದ್ದಾರೆ.)

‘ಜಯಂತಿ’ಯ ಅಭಿಮಾನಿಗಳು, ಧಾರವಾಡ

(ಇವರು ಮೊದಲಿನಿಂದಲೂ ಜಯಂತಿಯನ್ನು ಪ್ರೀತಿಸುವವರು. ಅದರ ಸುಖಜೀವನಕ್ಕಾಗಿ ಮನವಾರೆ ಹಾರೈಸುವವರು.)

೧೫ ರೂಪಾಯಿಗಳು

ಸಹಾಯ ಸಲ್ಲಿಸಿದ ಮಹನೀಯರಿಗೆ ಕೃತಜ್ಞತೆಗಳು.

—ಬೆಟಗೇರಿ ಕೃಷ್ಣಶರ್ಮ

ಪಾಕಿಸ್ತಾನಿಗಳ ರಾಜಕಾರ್ಯದ ಪೀಕಲಾಟ

ಅನಧಿಕೃತ ಜನರ ಕೈಗೆ ಅಧಿಕಾರಸೂತ್ರಗಳು ದೊರೆತರೆ, ಎಂತಹ ಹಾಡಾಗುವುದೆಂಬುದಕ್ಕೆ, ಪಾಕಿಸ್ತಾನದ ರಾಜಕೀಯ ಅವಸ್ಥೆಯೇ ಪ್ರತ್ಯಕ್ಷ ಉದಾಹರಣೆಯಾಗಿದೆ. ಪಾಕಿಸ್ತಾನದಲ್ಲಿಯ ರಾಜಕೀಯ ಸ್ವಾತಂತ್ರ್ಯವೆಂದರೆ, ಸಿಂಹವೊಂದು ಬೇಟೆಯಾಡಿಕೊಂಡು ಚೆಲ್ಲಿದ ಆನೆಯ ಶವದಂತಾಗಿದೆ. ಬೇಟೆಯಾಡಿದ ಕಾಯದೇ ಆಜಮ್ ಜಿನ್ನಾ ಸಿಂಹ ಕಣ್ಮರೆಯಾಗಿಹೋಗಿದೆ. ಅದು ಬೇಟೆಯಾಡಿ ಬಿಟ್ಟುಹೋದ ಆನೆಯ ಶವವನ್ನು ತಿನ್ನುವುದಕ್ಕೆಂದು, ನರಿ-ನಾಯಿಗಳಂತೆ, ಅಲ್ಲಿಯ ಮುಂದಾಳುಗಳು ತಮ್ಮ-ತಮ್ಮೊಳಗೆ ಕಚ್ಚಾಟ ನಡೆಸಿದ್ದಾರೆ.

ಮಾನವಸ್ವಭಾವದ್ದೊಂದು ವಿಶೇಷಗುಣ: ಸ್ವತಃ ಕಷ್ಟ ಸಹಿಸಿ ದುಡಿದು ಸಂಪಾದಿಸಿದ ಫಲದ ಬೆಲೆ ಆ ದುಡಿದವನಿಗೆ ಗೊತ್ತು. ಕಷ್ಟವಿಲ್ಲದೆ ದೊರೆತ ಫಲದ ಬೆಲೆ ಅದನ್ನು ಪಡೆದವನಿಗೆ ಗೊತ್ತಿರುವುದೇ ಇಲ್ಲ. ಭಾರತೀಯರು ಅಖಂಡವಾಗಿ ಹೋರಾಡಿ ಅಖಂಡ ಭಾರತಕ್ಕೆ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟರು. ನಡುವೆ ಎದ್ದ ಜಾತೀಯ

ಭೂತವು, ಭಾರತವನ್ನು ಒಡೆದು ಪಾಕಿಸ್ತಾನದ ನಿರ್ಮಾಣವಾಗುವಂತೆ ಮಾಡಿತು. ಸ್ವಾತಂತ್ರ್ಯದ ಆವಶ್ಯಕತೆ-ಅರ್ಥಗಳನ್ನು ಅರಿಯದ ಸ್ವಾರ್ಥಿಗಳ ಕೈಯಲ್ಲಿ ಪಾಕಿಸ್ತಾನದ ಪ್ರಭುತ್ವ ಸಿಕ್ಕಿಕೊಂಡಿತು. ಪಾಕಿಸ್ತಾನ ಹುಟ್ಟಿದಂದಿನಿಂದಲೂ ಅಲ್ಲಿ ರಾಜ್ಯಾಧಿಕಾರದ ವಿಷಯವಾಗಿ ಅಂತರಿಕ ಕಲಹ-ಹೋರಾಟಗಳು ನಡೆದಿವೆ.

ಭಾರತದ ಸ್ವಾತಂತ್ರ್ಯಸೈನಿಕರೊಂದಿಗೆ ಕೂಡಿ ಕಾರ್ಯ ಮಾಡಿದ ಪಾಕಿಸ್ತಾನ ಪ್ರದೇಶದಲ್ಲಿಯ ಜನರನ್ನೂ ಜನನಾಯಕರನ್ನೂ, ಜಿನ್ನಾ ಸಾಹೇಬರ ಸರ್ವಾಧಿಕಾರತ್ವದ ಆಡಳಿತ ಹತ್ತಿಕ್ಕಿಬಿಟ್ಟಿತು. ಸ್ವಾತಂತ್ರ್ಯ-ಪ್ರಜಾಪ್ರಭುತ್ವಗಳ ಬೆಲೆ ಎಂತಹದೆಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಆದರೆ ಜಿನ್ನಾ ಸಾಹೇಬರೂ ಅವರ ತರುವಾಯದ ರಾಜಕೀಯ ಸೂತ್ರಚಾಲಕರೂ ಪ್ರಭುತ್ವದ ಬಳಿ ಅವರನ್ನು ಸುಳಿಯಗೊಡಲಿಲ್ಲ. ಇಷ್ಟೇ ಅಲ್ಲ, ನಿಜವಾದ ಜನನಾಯಕರಾದ ಅಬ್ದುಲ್ ಗಫಾರ್‌ಖಾನರಂತಹರನ್ನು ಸೆರೆಮನೆಗೆ ದಬ್ಬಿಬಿಟ್ಟರು.

ಸರಿ! ಅಲ್ಲಿ ಪ್ರಭುತ್ವಸೂತ್ರ ಕೈಕೊಂಡವರು ಮಾಡಿದುದೇನು? ಕೈ ಸಾಧಿಸಿದವರೆಲ್ಲ ಸ್ವಾರ್ಥಹಿತ ನೋಡಿಕೊಂಡರು; ಕೈ ಸಾಧಿಸದವರು ಹೊಟ್ಟೆಕಿಚ್ಚಿನಿಂದ ಉರಿಯತೊಡಗಿದರು. ಈ ಉರಿಯು ಸುಮ್ಮಗಿರುವುದೆ? ಪಾಕಿಸ್ತಾನದ ಪ್ರಜರ ಜೀವನವನ್ನೇ ಬೇಯಿಸತೊಡಗಿತು. ಮುಸ್ಲಿಂ ಲೀಗ್ ಸಂಸ್ಥೆಯ ಸಂಘಟನೆಯನ್ನು ಸುಟ್ಟುಹಾಕಿತು. ಛಾಯಾಮಾತ್ರವಾಗಿದ್ದ ಸರಕಾರ ನಿಷ್ಕ್ರಿಯವಾಯಿತು. ಒಂದರಹಿಂದೊಂದು ರಾಜ್ಯಗಳ ಮಂತ್ರಿಮಂಡಲಗಳುರುಳಿದುವು. ಕೇಂದ್ರ ಸರಕಾರದಲ್ಲಿಯೂ ಶಾಸನವಿರುದ್ಧವಾದ ಹೆಚ್ಚು-ಕಡಿಮೆಗಳಾದುವು. ಹೇಗಾದರೂ ಮಾಡಿ ತಮ್ಮ ಮಾನ ಉಳುಹಿಕೊಳ್ಳಬೇಕೆಂದು ಅಲ್ಲಿಯ ನಾಯಕಬ್ರುವರು, ಬೇರೆ ಬೇರೆ ರಾಜಕೀಯ ಪ್ರಯೋಗಗಳನ್ನು ನಡೆಸಿದರು. ಈ ಪ್ರಯೋಗದ ಫಲವಾಗಿ, ಹಳೆಯ ರಾಜ್ಯಘಟನಾ ಸಮಿತಿಯನ್ನು ಹುಡಿಗೂಡಿಸಿ, ಹೊಸ ಘಟನಾಸಮಿತಿಯನ್ನು ರಚಿಸಿದರು. ಏನು ಮಾಡಿದರೂ ಅಲ್ಲಿಯ ರಾಜಕೀಯ ಪೀಕಲಾಟ ಬಗೆಹರಿಯದಂತಾಗಿದೆ.

ಪಾಕಿಸ್ತಾನದ ಘಟನಾಸಮಿತಿಯ ಗಟ್ಟಿತನ

ಕೇವಲ ಸ್ವಾರ್ಥಲುಬ್ಧರ ಹಟವಾದ ಬಗೆಹರಿಯಬೇಕಾದರೂ ಹೇಗೆ, ಈ ಗೊಂದಲದಲ್ಲಿ ಹೇಗೋ ಏನೋ, ಅಬ್ದುಲ್ ಗಫಾರ್‌ಖಾನರಿಗೆ ಸೆರೆಮನೆಯಿಂದ ಬಿಡುಗಡೆ ದೊರೆತಿದೆ. ಈ ತತ್ತ್ವನಿಷ್ಠ ನಾಯಕನ ಸತ್ಯನಿಷ್ಠುರ ವಾಣಿಗಳು ಅಲ್ಲಿಯ ಪ್ರಜಾಸಾಮಾನ್ಯರನ್ನು ಬಡಿದೆಬ್ಬಿಸುತ್ತಲಿವೆ. ಅಧಿಕಾರಲೋಭಿಗಳಾದ ಮಿಕ್ಕ ಮುಂದಾಳುಗಳ ಗುಂಡಿಗೆಯನ್ನು ಒಡೆಯುತ್ತಲಿವೆ. 'ಗಫಾರ್‌ಖಾನರನ್ನು ಕಾಲವಲ್ಲದ ಕಾಲದಲ್ಲಿ ಹೊರಗೆ ಬಿಟ್ಟೆವಲ್ಲ!' ಎಂದು ಅಲ್ಲಿಯ ಅಧಿಕಾರಿವರ್ಗ ಈಗ ಪಶ್ಚಾತ್ತಾಪಪಡುತ್ತಿರಬಹುದು. ಅವರನ್ನು ಈಗ ಮತ್ತೆ ಹಿಡಿದಿಡುವುದೂ ಕಷ್ಟ; ಹೊರಗೆ ಬಿಡುವುದೂ ಕಷ್ಟ! ಗಫಾರ್‌ಖಾನರು ಆಡುತ್ತಿರುವ ಮಾತುಗಳು, ಲೋಕದ ಸಮಂಜಸ ರಾಜಕಾರಣಿಗಳೆಲ್ಲರೂ ಒಪ್ಪುವಂತಹವು; ಆದರೆ ಪಾಕಿಸ್ತಾನದ ಸರಕಾರಿ ಅಧಿಕಾರಿಗಳಿಗೆ ಅವು ತೀರ ವಿಷಕವಳಗಳಾಗಿ ಪರಿಣಮಿಸುತ್ತಿವೆ. ಈಗ ಪ್ರಸ್ಥಾಪಿತವಾದ ಘಟನಾಸಮಿತಿಯ ಶಾಸನಬದ್ಧತೆಯನ್ನು ಕುರಿತೇ ಅವರು ಪ್ರಶ್ನೆಗಳನ್ನು ಒಡ್ಡುತ್ತಿದ್ದಾರೆ. ಪಾಕಿಸ್ತಾನದ ಇಂದಿನ ಘಟನಾಸಮಿತಿಯನ್ನು ಒಪ್ಪಬಹುದಾದಲ್ಲಿ, ಭಾರತ ಕಾಶ್ಮೀರದ ಘಟನಾಸಮಿತಿಯನ್ನು ಏಕೆ ಒಪ್ಪಬಾರದು? ಈ ಬಗೆಯ ಘಟನಾಸಮಿತಿಯು ನಿರ್ಮಿಸಿದ ಸರಕಾರಕ್ಕೆ ಕಾಶ್ಮೀರದ ಪ್ರಶ್ನೆಯನ್ನು ಎತ್ತುವ ಅಧಿಕಾರವು ಹೇಗೆ ಬರುತ್ತದೆ? ಭಾರತದ ಸಂರಕ್ಷಣಮಂತ್ರಿ ಗೋವಿಂದವಲ್ಲಭ ಪಂತರು ಕಾಶ್ಮೀರದ ವಿಷಯದಲ್ಲಿ ತೆಗೆದ ವೈಯಕ್ತಿಕ ಉದ್ಗಾರಗಳ ಬಗೆಗೆ; ಪಾಕಿಸ್ತಾನ್ ಸರಕಾರದ ಮೇಲಾಳುಗಳು ಆಕಾಶ-ಪಾತಾಳಗಳು ಒಂದಾಗುವಂತೆ ಕೂಗಾಟವೆಬ್ಬಿಸಿದರು. ಇವರು ತಮ್ಮ ಘಟನಾಸಮಿತಿಯು ರಚನೆಗೊಂಡ ರೀತಿಯ ಕಡೆಗೆ ಸರಿಯಾಗಿ ನೋಡಿಕೊಂಡಿದ್ದರೆ, ಗೋವಿಂದ ವಲ್ಲಭಪಂತರ ಮಾತಿನ ಅರ್ಥವು ನಿಚ್ಚಳವಾಗಿ ಗೊತ್ತಾಗುತ್ತಿತ್ತು.

ಹೋಗಲಿ, ಈಗ ರಚನೆಗೊಂಡ ಘಟನಾಸಮಿತಿಯಿಂದಲಾದರೂ ಪಾಕಿಸ್ತಾನದ ರಾಜಕೀಯ ತೊಡಕು ಬಿಡುವುದೆ? ಮುಖ್ಯ ಮಂತ್ರಿಪದವು ತಮಗೆ ದೊರೆಯದೆ ಹೋದರೆ, ಸುಹ್ರವರ್ದಿಯವರು ಸುಮ್ಮಗಿರಲಾರರು. ಪಂಜಾಬದ ಮುಸಲ್ಮಾನರಿಗೆ ಸುಹ್ರವರ್ದಿಯವರು ಬೇಕು; ಅವರು ಮುಖ್ಯಮಂತ್ರಿಗಳಾಗುವುದು ಬೇಕಿಲ್ಲ. ಒಟ್ಟಿನಲ್ಲಿ ಮುಸ್ಲಿಂ ಲೀಗಿನ ಸದಸ್ಯರು ಅಲ್ಪಸಂಖ್ಯಾಕರು; ಪೂರ್ವ ಪಾಕಿಸ್ತಾನದಲ್ಲಿ ಸುಹ್ರವರ್ದಿಯವರ ಅವಾಮಿ ಲೀಗಿನ ಸದಸ್ಯರು ಅಲ್ಪಸಂಖ್ಯಾಕರು. ಹೊಸತಾಗಿಯೆ ಮಂತ್ರಿಪದದಿಂದ ತಳ್ಳಲಾದ ಗಡಿನಾಡಿನ ಮಂತ್ರಿಗಳಾದ ರಶೀದರು, ಮುಸ್ಲಿಮ್ ಲೀಗಿನವರಾದರೂ ಗಾಯಗೊಂಡ ಹುಲಿಯಂತಾಗಿದ್ದಾರೆ. ಅಲ್ಲದೆ ಅಲ್ಲಿ ಅಬ್ದುಲ್ ಗಫಾರ್‌ಖಾನರೂ ಮಂಕೀ ಶರೀಫರೂ ಸೇರಿ, ಘಟನಾಸಮಿತಿಯ ವಿರೋಧಪ್ರಚಾರವನ್ನೇ ನಡೆಸಿದ್ದಾರೆ. ಸಿಂಧದ ಇಂದಿನ ಮುಖ್ಯ ಮಂತ್ರಿ ಖುರ್ರೋ ಅವರು ವಿರೋಧಿಗಳ ಕೂಗಿನಿಂದ ತತ್ತರಿಸತೊಡಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಪಾಪ, ಪಾಕಿಸ್ತಾನದ ಘಟನಾಸಮಿತಿ ಗಟ್ಟಿಯಾಗಿ ನಿಂತು ಯಾವ ಕೆಲಸವನ್ನು ಮಾಡಲು ಶಕ್ತವಾದೀತು?

ಜಗತ್ತಿಗಾಗಿ

(ಅನುವಾದಿತ ಕಥೆ)*

ಶ್ರೀ. ಮುದೇನೂರ ಸಂಗಣ್ಣ, ಚಿಗಟೇರಿ

●

ಇದೊಂದು ಮಹಾಭಾರತದಲ್ಲಿಯ ಕಥಾವಸ್ತು. ಮಾನವನ ವೈವಾಹಿಕಜೀವನವು ಏತಕ್ಕಾಗಿ? — ಎಂಬುದನ್ನು ಸಾಂಕೇತಿಕವಾಗಿ ಅರುಹುವುದಕ್ಕಾಗಿ ರಚಿತವಾದ ಸುಂದರ ಕಥೆಯಿದು. ಕೇವಲ ಪ್ರೇಮವೆನ್ನುವ ಭ್ರಾಂತ ಆದರ್ಶ-ಪ್ರೇಮಿಗಳನ್ನೂ ಕೇವಲ ಕಾಮವೆನ್ನುವ ತಿಳಿಗೇಡಿ ವಾಸ್ತವ-ವಾದಿಗಳನ್ನೂ ಎಚ್ಚರಗೊಳಿಸುವಂತಹ ಕಥೆಯಿದು !

●

ಅವನ ಹೆಸರು ಆದಿತ್ಯದೇವ. ಜನರು ಅವನನ್ನು ಜಗದ ಜ್ಯೋತಿ ಎಂದು ಕರೆಯುತ್ತಿದ್ದರು; ಏಕೆಂದರೆ ಜಗತ್ತಿನ ಕಲ್ಯಾಣವೇ ಅವನ ಜೀವನದ ಗುರಿಯಾಗಿತ್ತು.

"ಜಗತ್ತಿನ ಕಲ್ಯಾಣ" ಎಂಬ ಮಾತು ಹೊಸತಾಗಿ ಚಲಾವಣೆಗೆ ಬಂದ ನಾಣ್ಯವೇನೂ ಅಲ್ಲ; ಅಥವಾ ಹೊಸತಾಗಿ ಶೋಧಿಸಿದ ಒಂದು ಗುರಿಯೂ ಅಲ್ಲ. ಸಮಾಜಸೇವೆಯನ್ನೇ ಜೀವನದ ಗುರಿಯನ್ನಾಗಿಟ್ಟುಕೊಂಡು ದುಡಿದ ಧ್ಯೇಯನಿಷ್ಠ ಜೀವಿಗಳು ಅನೇಕರಿದ್ದಾರೆ.

ಆದರೆ ಆದಿತ್ಯನ ಕೀರ್ತಿ ಇದನ್ನಾಧರಿಸಿದುದಲ್ಲ. ಸಮಾಜದ ಕಲ್ಯಾಣಕ್ಕಾಗಿ, ಅತ್ಯದ್ಭುತವಾದ—ತನ್ನದೇ ಆದ—ಒಂದು ನಿಯಮವನ್ನು ಮುಂದುಮಾಡಿದ್ದ ಅವನು! ನಿಷ್ಪಕ್ಷಪಾತತನವೇ ಆ ನಿಯಮ. ಯೋಗ್ಯನಲ್ಲಿರಿಸುವಷ್ಟೇ ಪ್ರೀತಿ ಮತ್ತು ಮರ್ಯಾದೆಗಳನ್ನು ಅಯೋಗ್ಯನಲ್ಲಿಯೂ ಆತ ಇರಿಸುತ್ತಿದ್ದ. ಯೋಗಿಯೊಡನೆ ವರ್ತಿಸುವಂತೆಯೇ ಪಾಪಿಯೊಡನೆಯೂ ನಡೆಯುತ್ತಿದ್ದ.

ಪಂಡಿತರು ಆದಿತ್ಯನ ಈ ಆಚರಣೆಯಲ್ಲಿ ಏನೋ ತಪ್ಪಿದೆಯೆಂದು ಭಾವಿಸಿದ್ದರು. ಅವರು ಒಮ್ಮೆ ಕೇಳಿದರು :—"ಇರುಳ ಕತ್ತಲೆಯನ್ನು ಕಳೆದು, ನೀರಡಿಸಿದ ಹರಿಣಿಗೆ ಚಿಲುಮೆಯ ದಾರಿ ತೋರಿಸುವ ನಿನ್ನ ಬೆಳಕೇ, ಹಸಿದ ಸಿಂಹಕ್ಕೆ ಅದರ ಆಹಾರವನ್ನು ತೋರಿಸುತ್ತದೆ. ನಿನ್ನ ಬೆಳಕು ಹರಿಣಿಗೆ, ಬಯಸಿದ ಅದರ ಸರಿಯಾದ ಮಾರ್ಗವನ್ನು ತೋರಿಸುತ್ತದೆ, ನಿಜ. ಆದರೆ ಅದೇ ಬೆಳಕು ಆ ಹರಿಣಿಯ ನಾಶದ ಹಾದಿಯನ್ನೂ ಸೂಚಿಸುತ್ತದೆ. ಆದ್ದರಿಂದ ಇದು ನಿಷ್ಪಕ್ಷಪಾತ-ದೃಷ್ಟಿ ಹೇಗಾಗುತ್ತದೆ?"

ಆದಿತ್ಯ ಉತ್ತರಿಸಿದ :—"ಮತ್ತೊಮ್ಮೆ ಅದೇ ಬೆಳಕು ಬೇಟೆಗಾರನಿಗೆ ಆ ಸಿಂಹವನ್ನು ತೋರಿಸುತ್ತದೆ!"

ಪಂಡಿತರು ಇನ್ನೂ ವಾದಿಸಿದರು :—"ಹಾಗಾದರೆ ಈ ನಿಷ್ಪಕ್ಷಪಾತತನದ ಉಪಯೋಗವೇನು? ಆ ಎಳೆಯ ಹರಿಣಿ ಸಿಂಹನಿಂದ ಕೊಲ್ಲಲ್ಪಟ್ಟಿತು. ಸರತಿಯ ಮೇರೆಗೆ ಆ ಸಿಂಹವೂ ಬೇಟೆಗಾರನಿಂದ ಕೊಲ್ಲಲ್ಪಟ್ಟಿತು. ಮತ್ತೆ ಆ ಬೇಟೆಗಾರನೂ ಕೊಲ್ಲಲ್ಪಡುವ ಸಂಭವ ...."

ಒಡನೆಯೆ ನಡುವೆ ಬಾಯಿಹಾಕಿ ಆದಿತ್ಯ ಹೇಳಿದ :—"ಹೌದು ಅದೇ ಬೆಳಕಿನ ಸಹಾಯದಿಂದಲೇ ಬೇಟೆಗಾರನ ವೈರಿಯು ಬೇಟೆಗಾರನನ್ನೇ ಕೊಲ್ಲಲಿಕ್ಕೂ ಸಾಧ್ಯ. ಆದರೆ ಇದು ಜೀವನದ ಒಂದು ಪಾರ್ಶ್ವ ಮಾತ್ರ. ಎಲ್ಲಾ ಜೀವಿಗಳ ಹಣೆಬರೆಹವೂ ದೈವಿಕವಾದ ಒಂದು ನಿಷ್ಪಕ್ಷಪಾತ ನಿಯಮದಿಂದ ನಿರ್ಧರಿಸಲ್ಪಡುತ್ತದೆ. ನನ್ನ ಕಾರ್ಯ ಕೇವಲ ಆ ದೈವಿಕನಿಯಮಕ್ಕೆ ನೆರವಾಗುವುದು ಮಾತ್ರ."

ಆದರೂ ಆ ಪಂಡಿತರು ಆದಿತ್ಯನ ಈ ವಾದಸರಣಿಯಿಂದ ತೃಪ್ತರಾಗಲಿಲ್ಲ. ಅವರ ಈ ವಾದ ನಡೆಯುತ್ತಿರುವಾಗಲೇ, ತಪತಿ—ಆದಿತ್ಯದೇವನ ಮಗಳು—ಬಂದಳು.

ಅವಳೂ ವಾದದಲ್ಲಿ ಪ್ರವೇಶಿಸಿದದಳು :—"ಇರುಳ ಕತ್ತಲೆಯನ್ನು ಓಡಿಸುವ ಆ ಬೆಳಕೇ ನಿದ್ರಿಸುತ್ತಿರುವ ತಾವರೆಯನ್ನು ಅರಳಿಸುತ್ತದೆ. ಅದೇ ಬೆಳಕೇ ಜೇನುನೊಣಗಳಿಗೆ ತಾವರೆಯಿಂದ ಮಧುವನ್ನು ಹೀರುವಾಗ ನೆರವಾಗುತ್ತದೆ. ಆ ಮಧುವೇ ನಮ್ಮ ಜೀವನಕ್ಕೆ ಪೋಷಕವಾಗಿ ವರ್ತಿಸುತ್ತದೆ. ವಿನಾಶ ಒಂದೇ ಅಲ್ಲ, ಸೃಷ್ಟಿಯೂ ಒಂದು ದೈವಿಕವಾದ ನಿಷ್ಪಕ್ಷಪಾತ ನಿಯಮದಿಂದ ಮುನ್ನಡೆಸಲ್ಪಡುತ್ತದೆ!"

ಪಂಡಿತರು ದಿಙ್ಮೂಢರಾದರು. ಆದಿತ್ಯನು ಪ್ರೀತಿಯ ಓರೆನೋಟದಿಂದ ತಪತಿಯನ್ನು ನೋಡಿದ. ಅವನು ತೋರುತ್ತಿದ್ದ ಪ್ರೀತಿ ಮತ್ತು ಕೊಡುವ ಶಿಕ್ಷಣಗಳಿಂದಾಗಿ, ತಪತಿ ತನ್ನನ್ನು ತಾನೇ ತಿಳಿದ ಯೋಗಿನಿಯಂತಿದ್ದಳು.

ಪಂಡಿತರಲ್ಲಿ ಸಾಕಷ್ಟು "ಪುಸ್ತಕ-ಜ್ಞಾನ" ಇದ್ದರೂ, ಅವರು ಈ ಸರಳವಾದ ಸಹಜಸತ್ಯವನ್ನು ತಿಳಿಯಲು ತಪ್ಪಿದ್ದರು; ಆದರೆ ತಪತಿ ಕೇವಲ ಆಗಸದತ್ತ ನಿಟ್ಟಿಸುವುದರಿಂದಲೇ ಈ ಸತ್ಯವನ್ನು ತಿಳಿದುಕೊಂಡಳು. ಅವಳ ತಂದೆಯಾದ ಆದಿತ್ಯನ ಉಪದೇಶ ಅಂತಹದಿತ್ತು! ಬೆಳಕಿನ ಕಾರಂಜಿಯ ದೇವನಾದ ಸೂರ್ಯನು ತನ್ನ ಆಶೀರ್ವಾದಗಳನ್ನು ಭೂಮಿಯ ಮೇಲಿನ ಸಕಲ ಜಡಪದಾರ್ಥಗಳ ಮೇಲೂ ಧಾರೆಯಾಗಿ ಸುರಿಸುತ್ತಿದ್ದಾನೆಂದು ಅವಳು ತಿಳಿದಿದ್ದಳು. ಎಲ್ಲವನ್ನೂ ಸಮದೃಷ್ಟಿಯಿಂದ ಕಾಣುವುದೇ ಎಲ್ಲಕ್ಕೂ ಮಿಗಿಲಾದ ತ್ಯಾಗ. ಯಾರಲ್ಲೂ ಸೂರ್ಯದೇವನಿಗೆ ಪ್ರತ್ಯೇಕ ಪ್ರೀತಿ ಅಥವಾ ಅಪ್ರೀತಿ ಇಲ್ಲ. ಅವನ ಈ ವಿಧದ ಆಶೀರ್ವಾದಗಳನ್ನು ಹಂಚುವಿಕೆಯೂ ವಿಶ್ವಾನಂದದಂತೆ ಸೃಷ್ಟಿಯೊಡನೆಯೇ ಹುಟ್ಟಿಬಂದದ್ದು!

"ಎಲ್ಲರಲ್ಲಿಯೂ ಸಮಾನುಭೂತಿಯನ್ನಿಡು" ಎಂಬುದೊಂದೇ ತಪತಿಗೆ ಆದಿತ್ಯನಿತ್ತ ಆಶೀರ್ವಾದ. "ಸೌಂದರ್ಯ, ಯೌವನ,

* ವಂಗಸಾಹಿತಿ ಶ್ರೀ. ಸು-ಬೋಧಘೋಷರ ಕತೆಯ ಅನುವಾದ.

ಪ್ರೇಮ, ವಿವಾಹ, ವಿಶ್ವಾಸ, ತ್ಯಾಗ-ಯಾವುದೂ ವೈಯಕ್ತಿಕ ಸುಖಸಾಧನೆಗಾಗಿ ಇಲ್ಲ; ಎಲ್ಲವೂ ಸಮಾಜದ ಕಲ್ಯಾಣಕ್ಕಾಗಿ ಇವೆ. ಈ ವಿಶ್ವನಿಯಮವನ್ನು ಅನುಸರಿಸಿ ನಡೆಯುವವನು ಮಾತ್ರವೇ ಸಂತೋಷದಿಂದ ಜೀವಿಸಬಲ್ಲ. ಇದನ್ನು ಕಡೆಗಣಿಸಿ ನಡೆಯುವವನು ಯಾವಾಗಲೂ ಅಸುಖಿಯಾಗಿ ಬಾಳುತ್ತಾನೆ.

ಆದಿತ್ಯನ ಈ ಉಪದೇಶ—ಈ ಆಶೀರ್ವಾದ—ಯುವತಿಯಾದ ತಪತಿಯ ಮುಖಕ್ಕೆ ಅಸಾಧಾರಣವಾದ ಲಾವಣ್ಯವನ್ನಿತ್ತಿದ್ದುವು. ಪವಿತ್ರತೀರ್ಥದಲ್ಲಿ ಮಿಂದ ಪುಷ್ಪಗುಚ್ಛದಂತೆ ಅವಳ ಮೊಗ ಪ್ರಶಾಂತ ಸೌಂದರ್ಯದಿಂದ ಶೋಭಿಸುತ್ತಿತ್ತು. ತಪತಿಯ ರೂಪದ ಗಾಡಿಯಲ್ಲಿ ಪೊಳಪಿತ್ತು; ಆದರೆ ಥಳುಕಿರಲಿಲ್ಲ. ಅವಳ ಅಂಗಾಂಗಗಳು ಲಾವಣ್ಯವನ್ನು ಸೂಚಿಸುತ್ತಿದ್ದರೂ ಅದರಲ್ಲಿ ಒಯ್ಯಾರವಿರಲಿಲ್ಲ. ಅವಳ ಕಣ್ಣುಗಳು ಕಣ್ಣು ಕುಕ್ಕುವ ಕೋಲ್ಮಿಂಚಿನಂತೆ ಕ್ಷಣಭಂಗುರವಾಗಿರಲಿಲ್ಲ; ಆದರೆ ನಿರಂತರವೂ ಹಸುಕಾಂತಿಯಿಂದ ಮಿನುಗುವ ತಾರೆಗಳಂತಿದ್ದುವು. ನಿಜವಾಗಿಯೂ ಅವಳು, ಸೌಂದರ್ಯವೇ ಅವತರಿಸಿದಂತೆ ಕಾಣುತ್ತಿದ್ದಳು. ಛಂದಸ್ಸಿನಿಂದ ಶಿಸ್ತುಗೊಂಡ ಕಾವ್ಯದಂತೆ ಅವಳ ಯೌವನದ ಪರಿಪೂರ್ಣತೆ ಹೃದಯನೈರ್ಮಲ್ಯದಿಂದಾಗಿ ಹದಗೊಂಡಿತ್ತು.

ಪಂಡಿತರು ಆದಿತ್ಯನ ಸಮಾಜಸೇವೆ ಮತ್ತು ಸಮತಾಭಾವನೆಗಳ ಬಗ್ಗೆ ಎಷ್ಟೇ ವಿರೋಧವಾಗಿ ಮಾತಾಡಿದರೂ ಒಬ್ಬನು ಅದನ್ನು ಒಪ್ಪುತ್ತಿದ್ದ—ಅವನೇ ಸಾಂಬರಾಣ. ಹಿಂದೆಂದೂ ಕಾಣದ ಸುಖ-ಶಾಂತಿಗಳನ್ನು ಪ್ರಜೆಗಳು ಅವನ ಕಾಲದಲ್ಲಿ ಅನುಭವಿಸುತ್ತಿದ್ದರು.

ಸಾಂಬರಾಣನಿಗೆ ರಾಜ್ಯವಿತ್ತು, ಸಂಪತ್ತಿತ್ತು; ಸೌಂದರ್ಯ ಮತ್ತು ಯೌವನಗಳೂ ಇದ್ದುವು. ಆದರೂ ಅವನು ಬ್ರಹ್ಮಚಾರಿಯಾಗಿಯೇ ಇರಲಾಶಿಸಿದ್ದ. ಅವನು ಸ್ವಸುಖದ ಸರ್ವಸಾಧನೆಗಳನ್ನೂ ಅಳಿದಿದ್ದ. ಸಾಮಾಜಿಕ ಕಲ್ಯಾಣಕ್ಕಾಗಿ, ತನ್ನ ಜೀವನವನ್ನು ಮುಡುಪಿಡಲು ನಿರ್ಧರಿಸಿದ ಪ್ರತಿಯೊಬ್ಬನೂ, ಎಲ್ಲದರ ಮೇಲೂ ಒಂದೇ ರೀತಿಯಲ್ಲಿ ತನ್ನ ಪವಿತ್ರಕಿರಣಗಳನ್ನು ಪಸರಿಸುವ ಸೂರ್ಯದೇವನಂತೆ ವರ್ತಿಸಬೇಕೆಂಬುದು ಅವನ ನಂಬುಗೆಯಾಗಿತ್ತು. ಏಕೆಂದರೆ ಸೂರ್ಯನು ಮೇಲು-ಕೀಳುಗಳೆಂದು ಯಾವ ವ್ಯತ್ಯಾಸಗಳನ್ನೂ ಕಲ್ಪಿಸುವುದಿಲ್ಲ. ಇಡಿ ವಿಶ್ವವನ್ನೇ ಅವನು ಆಶೀರ್ವದಿಸಿ ಪೋಷಿಸುತ್ತಿದ್ದಾನೆ. ತಾನು ಅಸ್ತಂಗತನಾದರೆ ಅವನು ಎಲ್ಲವನ್ನೂ ಒಂದೇ ವಿಧದಲ್ಲಿ ಕತ್ತಲೆಯಿಂದ ಮುಚ್ಚುತ್ತಾನೆ. ಈ ವಿಧದ ನಿಷ್ಪಕ್ಷಪಾತಬುದ್ಧಿಯಿಂದಲೇ ಸಾಂಬರಾಣಾ ತನ್ನ ಪ್ರಜರ ಏಳಿಗೆಗಾಗಿ ಕಾರ್ಯಮಾಡುತ್ತಿದ್ದ.

ಅವನಿಗೆ ನಿಜವಾಗಿಯೂ ವಿವಾಹವಾಗುವ ಇಚ್ಛೆ ಇರಲಿಲ್ಲ. ವಿವಾಹವು ತನ್ನ ಸಮತಾಭಾವನೆ ಮತ್ತು ಸಮಾಜಸೇವೆಗಳ ಮಧ್ಯೆ ಅಸಖ್ಯ ಹುಟ್ಟಿಸುವುದೆಂದು ಅವನು ಭಾವಿಸಿದ್ದ. ಅನೇಕರಲ್ಲಿ ಒಬ್ಬಳನ್ನು ಮಾತ್ರ ಆರಿಸಿಕೊಂಡು, ಅವಳ ಮೇಲೆ ಎಲ್ಲಾ ಪ್ರೀತಿಯನ್ನೂ ಧಾರೆ ಎರೆಯುವುದರಿಂದ, ಉಳಿದವರನ್ನು ತನ್ನ ಹೃದಯಮಂದಿರದಿಂದ ಹೊರಗಟ್ಟುವ ಅಸಮಂಜಸ ಕೃತಿಯನ್ನು ಮಾಡಿದಂತಾಗುವುದೆಂದು ಅವನು ಹೆದರಿದ್ದ.

೨

ಅಂದು ಸಾಂಬರಾಣಾನು ಹುಟ್ಟಿದ ದಿನ. ಜೀವನದ ಅತ್ಯುನ್ನತ ಗುರಿಯನ್ನು ತೋರಿಸಿಕೊಟ್ಟ ತನ್ನ ಗುರುವಿಗೆ ವಂದಿಸಲು ಅವನು ಆದಿತ್ಯನ ಆಶ್ರಮಕ್ಕೆ ಬಂದಿದ್ದ. ಅನೇಕವಿಧದ ಕಾಣಿಕೆಗಳನ್ನು ಗುರುವಿಗರ್ಪಿಸಲು ತನ್ನೊಡನೆ ತಂದಿದ್ದ. ಸಾಂಬರಾಣಾನ ದೇಹವು ಆಹ್ನಿಕ, ಉಪವಾಸ-ವ್ರತಗಳಿಂದಾಗಿ ಪವಿತ್ರವಾಗಿತ್ತು. ಅವನ ಮುಖವು ಅರುಣೋದಯದ ಚಿಂಬಣ್ಣದಂತೆ ಹೊಳೆಯುತ್ತಿತ್ತು. ಆದಿತ್ಯನು ಅವನನ್ನು ಆತ್ಮೀಯ ಹಾಗೂ ಪ್ರಶಂಸಾಪೂರ್ಣ ದೃಷ್ಟಿಯಿಂದ ನೋಡಿದ. ಅವನ ಸತೇಜ ನೇತ್ರದ್ವಯವು, ಸಾಂಬರಾಣಾನ ಮೇಲೆ ತನ್ನ ಆಶೀರ್ವಾದಗಳ ಸುರಿಮಳೆಗರೆಯಿತು.

ಆದರೂ ಅಂದೇಕೋ ಗೊತ್ತಿಲ್ಲದ ಚಿಂತೆಯೊಂದು ಆದಿತ್ಯನ ಮನವನ್ನು ಕೊರೆಯುತ್ತಿತ್ತು. ಬಹುಶಃ ಸಾಂಬರಾಣಾನ ನಡತೆಯಲ್ಲಿ ಎಲ್ಲಿಯೋ ಒಂದು ಕಡೆಗೆ ಸ್ವಲ್ಪ ತಪ್ಪಿರಬೇಕು. ಇಂತಹ ಕಠಿನ ತಪಸ್ಸಿನಿಂದ ದೇಹವನ್ನು ದಂಡಿಸುವುದು ಅವನಂತಹ ಯುವಕನಿಗೆ ಅನಾವಶ್ಯಕವಿತ್ತು. ಈ ವಿಧದ ತಪಸ್ಸು ಕೇವಲ ಕಾನನದಲ್ಲಿ ವಾಸಿಸುವ ಸಂನ್ಯಾಸಿಗೆ ಮಾತ್ರ ತಕ್ಕುದೇ ಹೊರತು, ಪ್ರಜೆಗಳಿಗಾಗಿ ಮೀಸಲಿರುವ ಸಾಂಬರಾಣಾನಂತಹ ಪ್ರಭುವಿಗಲ್ಲ.

ಆಶೀರ್ವದಿಸಿದ ನಂತರ ಸಾಂಬರಾಣಾನಿಗೆ ಆದಿತ್ಯ ಹೇಳಿದ: —

"ಸಾಂಬರಾಣಾ, ನಿನ್ನಲ್ಲಿ ನನ್ನದೊಂದು ಬೇಡಿಕೆ ಇದೆ."

"ಅಪ್ಪಣೆಯಾಗಲಿ. ಅದೇನು ಹೇಳಿ!"

"ನಿನ್ನ ನಿಷ್ಪಕ್ಷಪಾತ ಪ್ರಜಾಪರಿಪಾಲನೆ ನಿನ್ನ ಜನರನ್ನು ಸುಖವಾಗಿರಿಸಿದೆ; ಆದರೆ ವೈವಾಹಿಕಜೀವನವು ನಿನ್ನ ಜೀವನದ ಗುರಿಗೆ ಧಕ್ಕೆ ತರತಕ್ಕದ್ದೆಂಬ ನಿನ್ನ ಅಭಿಪ್ರಾಯವು ಕೇವಲ ತಳಹದಿ ಇಲ್ಲದ ಭಯ."

"ಅದು ತಳಹದಿ ಇಲ್ಲದ್ದಲ್ಲ ಆದಿತ್ಯದೇವಾ" ಆದಿತ್ಯನು ಸಾಂಬರಾಣಾನ ಮಾತುಗಳನ್ನು ಕೇಳಿ ಸ್ವಲ್ಪ ಚಕಿತನಾದ. ಸಾಂಬರಾಣಾನು ತನ್ನ ಇಡಿ ಜೀವಮಾನದಲ್ಲಿ ಗುರುವಿನ ಬೋಧನೆಗೆ ಪ್ರತಿವಾದ ಹೂಡಿದ್ದು ಇದೇ ಮೊದಲಸಲ.

ಸಾಂಬರಾಣಾ ಹೇಳಿದ:—"ನನ್ನ ಸ್ವಸುಖವನ್ನು ತೃಪ್ತಿಪಡಿಸಲು ನಾನು ಯತ್ನಿಸಿದ್ದೇ ಆದರೆ, ನಿಜವಾಗಿಯೂ ನನ್ನಲ್ಲಿ ಸ್ವಾರ್ಥಸಾಧನೆಯು ಮೇಲುಗೈಯಾಗುತ್ತದೆ."

ಆದಿತ್ಯ ಉತ್ತರಿಸಿದ:—"ಇಲ್ಲ ಸಾಂಬರಾಣಾ, ವಿವಾಹವು ಸ್ವಾರ್ಥಸುಖಕ್ಕಾಗಿ ಇಲ್ಲ; ಸಮಾಜದ ಕಲ್ಯಾಣಕ್ಕಾಗಿ ಇದೆ. ಮಗು, ಪರಿತ್ಯಾಗ ನಿನ್ನ ಧರ್ಮವಾಗಲಾರದು. ಸಮಾಜದಲ್ಲಿಯೇ ಇದ್ದು ಅದರ ಒಳಿತನ್ನು ಸಾಧಿಸುವುದೇ ನಿನ್ನ ಗುರಿ. ಈ ಗುರಿಯನ್ನು ಸಾಧಿಸುವವರು ವಿವಾಹವಾಗುವುದು ಕೇವಲ ಸಮಾಜಸೇವೆಗಾಗಿ. ಗಂಡು-ಹೆಣ್ಣಿನ ವೈವಾಹಿಕಜೀವನವು ಸಮಾಜಸೇವೆಯನು

ಮಾಡಲು ಕೈಕೊಳ್ಳುವ ಇರ್ವರ ಒಕ್ಕೊರಲಿನ ಪ್ರತಿಜ್ಞೆಯಲ್ಲದೆ ಬೇರೆಯಲ್ಲ. ವಿವಾಹಕ್ಕೆ ಇದನ್ನು ಬಿಟ್ಟು ಬೇರೆ ಮಾನ್ಯತೆ ಉಂಟೆ? ಉದಾಹರಣೆಗಾಗಿ ನನ್ನನ್ನೇ ನೋಡು. ವಿವಾಹಿತನಾಗಿದ್ದರೂ ನನ್ನಲ್ಲಿ ನಿಷ್ಪಕ್ಷಪಾತದೃಷ್ಟಿ ಇದೆ. ನಾನು ಕೂಡ ನನ್ನ ಮಕ್ಕಳು-ಮರಿಗಳೊಂದಿಗೆ ಸಾಂಸಾರಿಕ ಜೀವನವನ್ನು ನಡೆಸುತ್ತಿದ್ದೇನೆ. ಇಷ್ಟೇ ಅಲ್ಲ; ಕೆಲವು ಸಲ ನನ್ನ ಮಗಳ ಮದುವೆಯ ಬಗ್ಗೆ ಚಿಂತಿಸುತ್ತೇನೆ ಕೂಡ."

ಸಾಂಬರಾಣಾನು ಆಸಕ್ತಿಯಿಂದ ಕೇಳಿದ:—"ನಿಮ್ಮ ಅವಿವಾಹಿತ ಮಗಳು?"

"ಹೌದು, ಅವಳೇ ತಪತಿ. ಅವಳಿಗೊಬ್ಬ ಅನುರೂಪನಾದ ವರನು ದೊರೆತ ನಂತರ ಮಾತ್ರ ನನ್ನ ಮನಸ್ಸು ಶಾಂತಿಯಿಂದ ಇರಬಲ್ಲದು."

ಸಾಂಬರಾಣಾನ ಆಸಕ್ತಿ ಹೆಚ್ಚಿತು—"ನೀವಿದನ್ನೇನು ಹೇಳುತ್ತಿರುವಿರಿ ಆದಿತ್ಯದೇವಾ?"

"ನೀನೇ ಅವಳನ್ನೇಕೆ ಲಗ್ನವಾಗಬಾರದೆಂದು ನಿನ್ನನ್ನು ಕೇಳುತ್ತೇನೆ."

ಸಾಂಬರಾಣಾ ಕೇಳಿದ:—"ಯಾರನ್ನು ನಾನು ಮದುವೆಯಾಗಬೇಕು ಗುರುದೇವಾ?"

ಒಡನೆಯೆ ಆದಿತ್ಯನಿಗೆ ಉತ್ತರಿಸಲಾಗಲಿಲ್ಲ. ಸಾಂಬರಾಣಾನ ಪ್ರಶ್ನೆಯಿಂದ ಆವನಿಗೆ ಕಳವಳವಾಯಿತು.

ಸಾಂಬರಾಣಾ ಮತ್ತೆ ಹೇಳಿದ: "ನಾನು ನಿಮ್ಮನ್ನು ಪೂಜ್ಯಭಾವದಿಂದ ಕಾಣುತ್ತಿದ್ದೇನೆ, ಆದಿತ್ಯದೇವಾ! ನೀವೇ ಅಲ್ಲವೆ ನನಗೆ ಸಮತಾಭಾವನೆಯ ತತ್ತ್ವವನ್ನು ಕಲಿಸಿದ್ದು? ನೀವೇ ನನ್ನ ಗುರು! ಆದುದರಿಂದ ನಿಮ್ಮ ಬಗ್ಗೆ ನನಗಿರುವ ನಿರ್ಮಲಭಕ್ತಿಯನ್ನು ಹಾಳು ಮಾಡಬಹುದಾದ ಯಾವ ಮಾತನ್ನೂ ಹೇಳಬೇಡಿರೆಂದು ನಮ್ರನಾಗಿ ಪ್ರಾರ್ಥಿಸುತ್ತೇನೆ."

ಆದಿತ್ಯ ಅನುಮಾನಗೊಂಡು ನುಡಿದ:—"ನನ್ನಲ್ಲಿರಿಸಿದ ನಿನ್ನ ಗೌರವಕ್ಕೆ ಕುಂದು ತರಬಹುದಾದ ಮಾತನ್ನು ನಾನು ನಿನಗೆ ಹೇಳಿದೆನೇನು?"

"ಹಾಗೆ ನಾನು ಭಾವಿಸುತ್ತೇನೆ. ನಿಮ್ಮ ಮಗಳ ವಿವಾಹವನ್ನು ಮಾಡಬೇಕೆಂಬುದರಲ್ಲಿ ಹಾಗೂ ನನ್ನ ಮದುವೆಯೂ ಆಗಬೇಕೆಂಬ ನಿಮ್ಮ ಉತ್ಕಟಾಭಿಲಾಷೆಯಲ್ಲಿ ಸಂಬಂಧವಿಲ್ಲದಿಲ್ಲವೆಂದು ನನಗೆ ಭಯವಾಗುತ್ತಿದೆ."

ಆದಿತ್ಯ ಕೆಲವು ಕ್ಷಣಗಳ ವರೆಗೆ ಮೂಕನಾಗಿದ್ದ. ಅವನು ನುಡಿದ ಮಾತುಗಳಲ್ಲಿ ಕೆಲವು ಭಾಗ ಸತ್ಯವಿತ್ತು. ಹೌದು, ಆದಿತ್ಯನು ತನ್ನ ಮಗಳಿಗಾಗಿ ಸರಿಯಾದ ವರನನ್ನು ಹುಡುಕುತ್ತಿದ್ದ. ತಪತಿಯಂತಹ ಕನ್ಯೆಗೆ ಸಾಂಬರಾಣಾನೇ ತಕ್ಕ ವರನೆಂದು ಅವನಿಗೆ ಹೊಳೆಯಿತು. ಅಥವಾ ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ಮೊದಲಿನಿಂದಲೂ ತನ್ನ ಮಗನಂತೆ ಕಾಣುತ್ತಿದ್ದ ಶಿಷ್ಯ ಸಾಂಬರಾಣಾನಿಗೆ ಸರಿಯಾದ ಜೋಡಿ ಎಂದರೆ ತಪತಿಯೆಂದೇ ಅವನು ನಿರ್ಧರಿಸಿದ್ದ. ತನ್ನ ಮಗಳ ಸುದೈವವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ಅವನನ್ನು ವರನನ್ನಾಗಿ ಆರಿಸಲು ತಾನು ಆಶಿಸುತ್ತಿರಬಹುದೇ ಎಂಬುದನ್ನು ಕಂಡು ಹಿಡಿಯಲಿಕ್ಕಾಗಿ ಆದಿತ್ಯ ತನ್ನ ಮನಸ್ಸನ್ನು ಚೆನ್ನಾಗಿ ಪರಿಶೋಧಿಸಿ ನೋಡಿದ. ಆದರೆ ಆ ವಿಧದ ಸ್ವಾರ್ಥದ ಕಳಂಕವನ್ನವನು ಕಾಣಲಿಲ್ಲ! ಆದರೂ ಸಾಂಬರಾಣಾನು ಆದಿತ್ಯನ ಮೇಲೆ ಹೊರಿಸಿದ ಅಪಾದನೆ ಎಂತಹ ಭಯಂಕರವಾದುದು!

ಆದಿತ್ಯ ಸಹಜಸ್ವರದಲ್ಲಿ ಕೇಳಿದ:—"ಎರಡರಲ್ಲೂ ಸ್ವಲ್ಪ ಸಂಬಂಧವಿದ್ದರೆ, ಅದರಲ್ಲಿ ಏನಾದರೂ ತಪ್ಪನ್ನು ಕಾಣುತ್ತಿದ್ದೀಯೇನು ಸಾಂಬರಾಣಾ?"

ಸಾಂಬರಾಣಾ ಮಾರ್ನುಡಿದ:—"ನಿಮ್ಮ ಬೇಡಿಕೆಯ ಈ ಹಿನ್ನೆಲೆಯಲ್ಲಿ ಈ ವಿಧದ ಬಯಕೆ ಇರುವುದಾದರೆ, ಖಂಡಿತವಾಗಿಯೂ ನಿಮ್ಮನ್ನು ನಾನು ನಿಷ್ಪಕ್ಷಪಾತಿ ಎಂದು ಕರೆಯಲು ಇಷ್ಟಪಡಲಾರೆ. ಹಾಗಾದರೆ ನಿಮ್ಮ ಅಭಿಲಾಷೆ ಸರ್ವಸಮಾನ ದೃಷ್ಟಿಗಾಗಲಿ, ಸಮಾಜದ ಕಲ್ಯಾಣಕ್ಕಾಗಲಿಯಾಗಲಿ ಇರದೆ, ಕೇವಲ ನಿಮ್ಮ ಪುತ್ರಿಯ ಮದುವೆಯನ್ನು ಮಾಡುವುದಕ್ಕಾಗಿ ಇದೆಯೆಂದಂತಾಯಿತು."

ಆದಿತ್ಯನು ಸಾಧುವಾಗಿಯಾದರೂ ದೃಢವಾಗಿ ಉತ್ತರಿಸಿದ:—"ನಿನ್ನ ಭಾವನೆ ತಪ್ಪು ಮಗು. ಈಗಲೂ ನಾನು ನಿಷ್ಪಕ್ಷಪಾತಿಯಾಗಿಯೇ ಇದ್ದೇನೆ. ನೀನು ನನ್ನ ಸ್ವಂತ ಮಗನಲ್ಲ ನಿಜ. ಆದರೂ ನೀನು ನನ್ನ ತಪತಿಯಷ್ಟೇ ನನಗೆ ಪ್ರೀತಿಪಾತ್ರನು. ಅದ್ದರಿಂದ ಕೇವಲ ನನ್ನ ತಪತಿಯ ಮದುವೆ ಮಾಡುವುದೊಂದೇ ನನ್ನ ಆಕಾಂಕ್ಷೆಯಲ್ಲ; ಸಾಂಬರಾಣಾನಿಗೂ ಒಂದು ಅನುಕೂಲ ಕನ್ಯೆಯನ್ನು ಹುಡುಕುವುದೂ ನನ್ನ ಕರ್ತವ್ಯವಾಗಿದೆ. ಈ ವಿವಾಹದಿಂದಾಗಿ ಯುವಕ-ಯುವತಿ-ಇವರೀರ್ವರೂ, ಸುಂದರವಾಗಿ ರಚಿಸಲ್ಪಟ್ಟ ಒಂದು ಗೀತೆಯಂತೆ, ಒಂದು ದೀಕ್ಷೆಯಂತೆ, ಒಂದು ಸಂಕಲ್ಪದಂತೆ, ಒಂದು ಬಲಿದಾನದಂತೆ ಒಂದಾಗಿ, ತಮ್ಮ ಜೀವನದ ಗುರಿಯನ್ನು ಸಾಧಿಸುತ್ತಾರೆಂದು ನಂಬುತ್ತೇನೆ. ಮಗು, ಇದರಲ್ಲಿ ಸ್ವಾರ್ಥಸಾಧನೆಯೂ ಇಲ್ಲ; ಭೇದಭಾವವೂ ಇಲ್ಲ!"

ಆದಿತ್ಯ ಮತ್ತೆ ಮೌನಿಯಾದ. ಆದರೂ ಸಾಂಬರಾಣಾನಿಗೆ ತನ್ನ ಸ್ವಾರ್ಥದಲ್ಲಿದ್ದ ಹೆಮ್ಮೆ ಕಡಿಮೆಯಾಗಲಿಲ್ಲ.

ಅವನು ಹೇಳಿದ:—"ಕ್ಷಮಿಸುವ ಕೃಪೆಮಾಡು ಗುರುದೇವ! ನಿಮ್ಮ ಸರ್ವಸಮಾನದೃಷ್ಟಿಯ ಈ ಸಮರ್ಥನೆಯನ್ನು ನಾನು ಒಪ್ಪಲಾರೆ. ಈಗಲೂ ನಿಮ್ಮವಾದ ತಪ್ಪಿದೆಯೆಂದು ನಾನು ನಂಬುತ್ತೇನೆ. ನಿರ್ಮಲಜೀವನದ ತತ್ತ್ವಗಳನ್ನನುಸರಿಸಿ ನಾನು ನಡೆಯುತ್ತಿದ್ದೇನೆ. ನನ್ನ ಮನಸ್ಸಿನ ಪ್ರೇರಣೆಯ ಮೇಲೆ ನನಗೆ ಪೂರ್ಣ ಅಧಿಕಾರವಿದೆ. ನಿಃಸ್ವಾರ್ಥ ಸಮಾಜಸೇವೆಯೇ ನನ್ನ ಧ್ಯೇಯ. ನಾನೀಗ ವಿವಾಹಿತನಾದರೆ ನಿಜವಾಗಿಯೂ ನನ್ನ ಜೀವನವನ್ನು ಸ್ವಾರ್ಥದ ಬಲೆಗಳು ಆವರಿಸುತ್ತವೆ. ಒಬ್ಬಳೇ ಸ್ತ್ರೀಯನ್ನು ಪ್ರೀತಿಸುತ್ತಿದ್ದೇನೆಂದು ರುಜುಪಡಿಸುವುದರಲ್ಲಿ ನಾನು ನನ್ನ ಕರ್ತವ್ಯಗಳಾದ ಸಮಾಜಸೇವೆ, ವಿಶ್ವಕಲ್ಯಾಣ ಮತ್ತು ನಿಷ್ಪಕ್ಷಪಾತಬುದ್ಧಿ—ಮುಂತಾದುವುಗಳನ್ನು ಮರೆಯುತ್ತೇನೆ."

ಅಪಿತ್ಯನು ತನ್ನ ಶಿಷ್ಯನಿಗೆ ಮತ್ತೇನನ್ನೂ ಹೆಚ್ಚಿಗೆ ಹೇಳ ಹೋಗಲಿಲ್ಲ. ಸಾಂಬರಾಣಾನು ಹಿಂತಿರುಗಿದ—ಆದರೆ ತನ್ನ ಗುರುವಿನಿಂದ ಹೊಸ ಜ್ಞಾನವನ್ನು ಸಂಪಾದಿಸಿಕೊಂಡಲ್ಲ; ತನ್ನ ಜ್ಞಾನದ ಹೆಚ್ಚಳದಿಂದ ಗುರುವನ್ನೇ ಸೋಲಿಸಿದೆನೆಂಬ ಹಮ್ಮು-ಬಿಮ್ಮುಗಳಿಂದ !

೩

ಸಾಂಬರಾಣಾ ಅಡವಿಯಲ್ಲಿ ಅತ್ತಿತ್ತ ತಿರುಗಾಡುತ್ತಿದ್ದ. ಗುಡಿಸಿಲುಗಳಲ್ಲಿ ವಾಸಿಸುವ ಬೇಟೆಗಾರ, ಸಂನ್ಯಾಸಿ ಇತ್ಯಾದಿ ಅರಣ್ಯ ನಿವಾಸಿಗಳ ಸಂಕಷ್ಟಗಳನ್ನು ತನ್ನ ಕಣ್ಣುಗಳಿಂದಲೇ ನೋಡಿ, ಅವನ್ನು ನಿವಾರಿಸುವುದೇ ಅವನ ಈ ತಿರುಗಾಟದ ಗುರಿಯಾಗಿತ್ತು ಅವನು ನಿಷ್ಪಕ್ಷಪಾತಿ. ಪುರ-ಪಟ್ಟಣಗಳಲ್ಲಿ ವಾಸಿಸುವ ಪ್ರಜೆಗಳ ಮೇಲೂ ಕಾಡು ಪ್ರದೇಶದಲ್ಲಿ ವಾಸಿಸುವ ಪ್ರಜೆಗಳ ಮೇಲೂ ಒಂದೇ ವಿಧವಾದ ದೃಷ್ಟಿಯನ್ನಿಟ್ಟಿದ್ದ. ಗೂಢಚಾರರ ಹೇಳಿಕೆಗಳ ಮೇಲೆ ಅವನು ಎಂದೂ ಅವಲಂಬಿಸಿರಲಿಲ್ಲ. ಎಲ್ಲವನ್ನೂ ತಾನೇ ಸ್ವತಃ—ನೋಡಿಕೊಳ್ಳುತ್ತಿದ್ದ.

ಸಂಚಾರ ಮುಗಿದನಂತರ, ಕಾನನದ ಗಡಿಯಲ್ಲಿ' ಅವನು ಸ್ವಲ್ಪ ಹೊತ್ತು ವಿಶ್ರಮಿಸಿದ. ಭೂದೇವಿಯ ಸುತ್ತಲಿನ ಆಶ್ಚರ್ಯಕರ ಸೌಂದರ್ಯವನ್ನು ನಿಟ್ಟಿಸತೊಡಗಿದ. ಮುಳುಗುವ ಸೂರ್ಯನ ಚೆಂಬಣ್ಣದಿಂದ ಬಳಿಯಲ್ಪಟ್ಟ ನೀಲಾಕಾಶ ಮೇಲೆ ವಿಸ್ತರಿಸಿದೆ. ಕೆಳಗಡೆ ದಟ್ಟವಾದ ಕಾನನದ ಹಚ್ಚಹಸಿರು ಹಬ್ಬಿದೆ. ದೂರದಲ್ಲಿ ಬೂದಿಬಣ್ಣದ ಬೆಟ್ಟಗಳ ಸಾಲು ಕಾಣುತ್ತಿದೆ. ಸಾಂಬರಾಣಾನ ಕಾಲಡಿಗೆ ಸೊಕ್ಕಿನಿಂತ ಹೂಗಳ ಪೊದೆಗಳಿವೆ. ಬೆಟ್ಟಗಳನ್ನೇರಿ, ಮತ್ತೆ ಹುಲ್ಲುಗಾವಲುಗಳಲ್ಲಿಳಿದು, ಮುಂದೆ ಹೋಗಿರುವ ನೀಳವಾದ ದಾರಿಯಿದೆ. ಸ್ವಲ್ಪ ದೂರದಲ್ಲಿಯೇ ಮಾನವರ ವಾಸವನ್ನು ಸೂಚಿಸುವ ಗುಡಿಸಿಲುಗಳ ಸಾಲೂ ಕಾಣಿಸುತ್ತದೆ. ಅವನು ಹೊರಡಲನುವಾದ. ಆದರೆ ಹೊರಡಲಾಗಲಿಲ್ಲ. ಬೆಟ್ಟಗಳ ಸಾಲಿನಿಂದ ಯಾರೋ ಬರುತ್ತಿದ್ದರು. ಆ ಆಕೃತಿ ಕಾಡು ನಿವಾಸಿಯಾದ ಸಂನ್ಯಾಸಿಯದಾಗಿರಲಿಲ್ಲ, ಬೇಟೆಗಾರನದೂ ಆಗಿರಲಿಲ್ಲ; ಆ ವ್ಯಕ್ತಿಯು ದೇಹವನ್ನು ಬಳುಕಿಸುತ್ತ ಒಂದು ವಿಧದ ಗತಿಯೊಡನೆ ಅವನ ಕಡೆಗೇ ಮೆಲ್ಲಗೆ ನಡೆದು ಬರುತ್ತಿತ್ತು.

ಆ ಆಕೃತಿಯು ಅವನಿಂದ ಸ್ವಲ್ಪ ದೂರದಲ್ಲಿಯೆ ಮುಂದುವರಿಯುವುದನ್ನು ನಿಲ್ಲಿಸಿತು. ಅವನು ಈಗ ಆ ಆಕೃತಿಯು ಒಬ್ಬ ಬೆಳೆದೆಳೆಯ ಯುವತಿಯದೆಂದು ತಿಳಿದುಕೊಂಡ.

ಸಾಂಬರಾಣಾ ಹಾದಿಯಲ್ಲಿ ಮೂಕನಾಗಿ ನಿಂತ; ಯುವತಿಯೂ ಮೂಕಳಾಗಿ ನಿಂತಳು. ಇಬ್ಬರೂ ತಮ್ಮ ಹೆಜ್ಜೆಗಳನ್ನು ಮುಂದಿಡಲಿಲ್ಲ. ಅವನು ಸ್ವಲ್ಪ ಆಲೋಚಿಸಿ, ಅವಳೆಡೆಗೆ ಮುಂದುವರಿದ; ಅವಳ ಮುಖವನ್ನೂ ನೋಡಿ ಚಕಿತನಾದ. ಈ ವಿಚಿತ್ರ ಜಗತ್ತಿನ ಸೌಂದರ್ಯದಲ್ಲಿ ಏನೋ ಕೊರತೆ ಇದೆ. ನಾನಾಬಣ್ಣಗಳಿಂದ ಕೂಡಿದ ಸೃಷ್ಟಿವೈಚಿತ್ರ್ಯದಲ್ಲಿ ಯಾವುದೋ ಒಂದು ಬಣ್ಣದ ಆವಶ್ಯಕತೆ ಇದೆ. ಆ ಎಳೆಯ ಯುವತಿ ಈ ಸುಂದರ ವಿಸ್ತೃತ ದೃಶ್ಯಕ್ಕೆ ಅನುಪಮ ಸೌಂದರ್ಯವನ್ನು ತುಂಬಿ ಪೂರ್ಣಗೊಳಿಸಲಿಕ್ಕಾಗಿ ಅಲ್ಲಿ ನಿಂತಿರುವಂತೆ ಕಾಣುತ್ತದೆ.

ಮರುಚಣದಲ್ಲಿಯೇ ಅವನು ಯೋಚಿಸಿದ:—ಅಡವಿಯ ಈ ಎಳೆಯ ಯುವತಿಯೇ ಜಗತ್ತಿನ ಈ ಎಲ್ಲ ಸುಂದರವಸ್ತುಗಳ ಸಾರ. ಸೌಂದರ್ಯದ ಈ ಶುದ್ಧಸತ್ತ್ವವು ಸೃಷ್ಟಿಯಲ್ಲಿ ಎಲ್ಲೆಲ್ಲಿಯೂ ಹರಿಯುತ್ತಿದೆ. ಕುಸುಮಗಳಿಗೆ ಸುಗಂಧವನ್ನು ಕೊಟ್ಟಿದೆ. ಬಳ್ಳಿಗಳನ್ನು ಬಳುಕಿಸುತ್ತಿದೆ. ಮೊಳೆಯುವ ಗಿಡಗಳಿಗೆ ಮೃದುತ್ವವನ್ನು ಕೊಡುತ್ತಿದೆ. ಕೋಮಲ ಕುಸುಮಗಳಿಗೆ ಜೀವರಸವನ್ನೀಯುತ್ತಿದೆ. ಪ್ರವಾಹಗಳಿಗೆ ಕಲಕಲರವವನ್ನೀಯುತ್ತಿದೆ. ಇಂದು ತೀರ ಅನಿರೀಕ್ಷಿತವಾಗಿ ಈ ದಿವ್ಯರೂಪಿಯಾದ ಈ ಸೌಂದರ್ಯದ ದರ್ಶನವನ್ನು ಪಡೆದದ್ದು ಸಾಂಬರಾಣಾನ ಪುಣ್ಯವಲ್ಲದೆ ಮತ್ತೇನು ?

ಬಹಳ ಹೊತ್ತಿನವರೆಗೆ ಅವನು ಅವಳನ್ನೇ ನಿಟ್ಟಿಸಿದ. ಪಕ್ಕಕ್ಕೆ ಸರಿದು ಅವಳಿಗೆ ಮುಂದೆ ಹೋಗಲು ಹಾದಿಯನ್ನು ಮಾಡಿಕೊಡಬಹುದಿತ್ತು; ಆದರೆ ಅವನು ಈ ಸಾಧಾರಣವಾದ ಸಭ್ಯತೆಯನ್ನು ಕೂಡ ಮರೆತಂತೆ ತೋರುತ್ತಿತ್ತು.

ಸಾಂಬರಾಣಾನ ಚಕಿತದೃಷ್ಟಿಯನ್ನು ಕಂಡು ಯುವತಿಗೆ ನಾಚಿಕೆಯಾಯಿತು. ಆದರೆ ಅವಳ ಲಜ್ಜೆ ಲಂಗು-ಲಗಾಮಿಲ್ಲದ ಈ ವಿಷಯಾಸಕ್ತ ಜಗತ್ತಿನದಾಗಿರಲಿಲ್ಲ. ಅವನು ನುಡಿದ:—" ಸುಂದರ ಯುವತಿಯೇ, ನೀನಾರೋ ನನಗೆ ತಿಳಿಯದು. ಆದರೂ ಪರಿಚಯ ಮಾಡಿಕೊಳ್ಳಲು ನೀನೇನೂ ಅಪರಿಚಿತಳಂತೆ ತೋರುವುದಿಲ್ಲ. "

ಯುವತಿಯ ಮನಮೋಹಿಸುವ ವಿಶಾಲನೇತ್ರಗಳು ಗಾಬರಿಗೊಂಡಂತೆ ಕಂಡುವು. ತನ್ನ ಜೀವನವನ್ನೆಲ್ಲಾ ಈ ಸುಂದರ ಯುವಕನನ್ನೇ ಹುಡುಕುವುದರಲ್ಲಿ ಕಳೆದು, ಕೊನೆಗೊಮ್ಮೆ ಭೆಟ್ಟಿಯಾದಂತೆ ಅವಳಿಗೆ ತೋರಿತು. ಎಲೆಗಳ ಈ ಸಂಗೀತ, ಕಾನನದ ಈ ಕಂಪನ, ಈ ಪ್ರದೇಶದ ಏಕಾಂತತೆ ಮತ್ತು ಮೀಸಲಿಟ್ಟಂತೆ ಕಾಣುವ ಈ ಸಂದರ್ಭ—ಇವೆಲ್ಲವೂ ಸೃಷ್ಟಿಯ ಆರಂಭದಿಂದಲೇ ಇವರಿರ್ವರ ಸಂದರ್ಶನಕ್ಕಾಗಿಯೇ ಇದ್ದಂತೆ ಕಂಡಿತು. ಆ ಸುಂದರ ಯುವಕ ಈ ಲೋಕಕ್ಕೆ ಅಥವಾ ಈ ಕಾಲಕ್ಕೆ ಸಂಬಂಧಿಸಿದವನಂತೆ ಕಾಣಲಿಲ್ಲ. ಅವನು ಕಾಲ-ದೇಶಗಳ ಎಲ್ಲೆಯನ್ನು ಮೀರಿ ಬೆಳೆದ ಅಮರಪ್ರೀತಿಯಾಗಿದ್ದ. ಹೆಂಗಳೆಯರನ್ನು ಯೌವನದ ಆರಂಭದಲ್ಲಿ ಒಮ್ಮೆಗೇ ಅಪ್ಪಿ, ಹೊಂಗನಸಿನ ಮನಃಕಾತರತೆಯನ್ನುಂಟುಮಾಡುವ ದಿವ್ಯ ಪ್ರೇಮವಾಗಿದ್ದ ಅವನು ! ಇಂತಹ ಗಂಡುಸಿನೊಡನೆ ವೈವಾಹಿಕ ಕುಸುಮಮಾಲೆಯನ್ನು ಅದಲು ಬದಲು ಮಾಡಲು ಯಾರ ಕೈಗಳಾದರೂ ತಡೆಯಿಲ್ಲದೆ ಮುಂದೆ ಬಂದಾವು.

ಇದೆಲ್ಲವೂ ಒಂದು ಕ್ಷಣದ ಗಾಬರಿಯಾಗಿತ್ತು. ಮರುಕ್ಷಣದಲ್ಲಿಯೇ ಆ ಯುವತಿ ಅಚ್ಚರಿಯಿಂದ ಕೇಳಿದಳು:—" ನೀವು ಯಾರು ?"

" ನಾನು ಈ ನಾಡಿನ ಒಡೆಯ. ನನ್ನ ಹೆಸರು ಸಾಂಬರಾಣ. "

ಆಶ್ಚರ್ಯದ ಬಲವಾದ ಪೆಟ್ಟೊಂದು ಅವಳನ್ನು ಒಮ್ಮೆಗೇ ಕೆಲವು ಹೆಜ್ಜೆ ಹಿಂದೆ ಸರಿಸಿತು. ಅವಳು ತನ್ನ ಮುಖವನ್ನು ಅವನಿಂದ ಬೇರೆ ಕಡೆಗೆ ತಿರುಹಿ, ದೂರದ, ಬಹುದೂರದ ದಿಗಂತವನ್ನು ನಿಟ್ಟಿಸತೊಡಗಿದಳು. ಯಾವುದೋ ಅಪಮಾನಕರ ಸ್ಪರ್ಶದಿಂದ ರಕ್ಷಿಸಲೆಂಬಂತೆ ಹೇಮವರ್ಣದ ಉಡುಗೆಯೊಂದು ಅವಳ ದೇಹವನ್ನು ಬಿಗಿಯಾಗಿ ಬಿಗಿದಿತ್ತು.

ಸಾಂಬರಾಣಾ ಪುಳಕಗೊಂಡು ಹೇಳಿದ:—" ನೀನು ಸ್ವಪ್ನ-ಸಾಮ್ರಾಜ್ಯದ ಬಯಕೆಯೊಂದು ಪ್ರತ್ಯಕ್ಷಗೊಂಡಂತೆ ತೋರುತ್ತಿರುವಿ."

" ಅಲ್ಲ ರಾಜ, ನಾನು ಈ ನೆಲದ ಮಣ್ಣಿನ ಸೇವಕಳು ! "

" ನೀನು ಬೆಳಕಿನ ಪ್ರತಿರೂಪು. ನೀನೇ ನಿನ್ನ ಪರಿಚಯವನ್ನು ಮಾಡಿಕೊಡುವ ಪೀಠಿಕೆಯಾಗಿರುತ್ತೀ ! "

" ಅಲ್ಲ. ಸೂರ್ಯನು ಆ ಬೆಳಕಿನ ಪರಿಚಯವನ್ನು ಮಾಡಿಕೊಡುವನು ! "

" ನೀನು ವಿಕಸಿಸುವ ಕುಸುಮದಂತೆ ಚೆಲುವೆಯಾಗಿರುವೆ. "

" ಕುಸುಮದ ಕೀರ್ತಿ ಯಾವಾಗಲೂ ಅದರ ಮರವನ್ನಾಶ್ರಯಿಸಿದೆ. "—

" ನೀನು ಸಮುದ್ರದ ತರಂಗದಂತೆ ತಾಳಬದ್ಧವಾಗಿರುವೆ. "

" ಆದರೆ ಆ ತರಂಗವನ್ನು ತಿಳಿಯಲು ಸಮುದ್ರ ಬೇಕಾಗುತ್ತದೆ. "

" ನೀನು......."

" ನಾನೊಂದು ಕುಟುಂಬದ ಸಾಮಾನ್ಯ ಕನ್ನೆಯೊಬ್ಬಳು. ಇಷ್ಟೇ ನನ್ನ ಪರಿಚಯ. "

" ಆದರೆ ನೀನು ನನ್ನ........"

ಮುಗುಳುನಗೆಯ ನಿರುಗೆಯೊಂದು ಅವಳ ಮುಖದಲ್ಲಿ ಮೂಡಿನಿಂತಿತು: -" ನನ್ನ ತಂದೆಯ ವಾತ್ಸಲ್ಯವನ್ನುಂಡು ಬೆಳೆದ ಬಾಲೆ ನಾನು. ನನಗೆ ನನ್ನದೆಂಬ ಸಮಾಜವಿದೆ. ಆದರ ಒಪ್ಪಿಗೆಯನ್ನು ಪಡೆಯದೆಯೆ ನಾನು ನನಗಿಷ್ಟ ಬಂದ ಗಂಡನನ್ನಾರಿಸಿಕೊಳ್ಳುವಂತಿಲ್ಲ. "

" ನಿನ್ನ ಮಾತೇ ನನಗೆ ಅರ್ಥವಾಗಲೊಲ್ಲದು. "

" ಸಮಾಜದ ಮಧ್ಯೆ ಜೀವಿಸುವ ಬಾಲೆ ಪರಪುರುಷರನ್ನು, ಮದುವೆಯಾದ ಮೇಲೆ, ಪತಿಯನ್ನಾಗಿ ಭಾವಿಸಿ ಮಾತ್ರ ಕೈ ಹಿಡಿಯಲು ಸಾಧ್ಯ. "

ಸಾಂಬರಾಣಾನ ಆಶೆಗೆ ಅವಳ ಈ ಸತ್ಯವಾಣಿ ಬಲವಾದ ಪೆಟ್ಟನ್ನಿತ್ತಿತು. ನೀರು ಕುಡಿಯುತ್ತಿದ್ದಾಗ, ಒಣಗಿದ ತುಟಿಗಳೆರಡರ ಮಧ್ಯದಿಂದ ಬಟ್ಟಲು ಕೈಜಾರಿ ಬಿದ್ದಂತಾಯಿತು.

ಸಾಂಬರಾಣಾ ಹೇಳಿದ :—" ಪ್ರಿಯೆ, ಹಾಗಾದರೆ ನನ್ನನ್ನು ನಿನ್ನ ಪತಿಯನ್ನಾಗಿ ಸ್ವೀಕರಿಸು. "

" ನನ್ನ ಸ್ವೇಚ್ಛೆಯಿಂದ ಹಾಗೆ ಒಪ್ಪಲಾರೆ. ನೀವು ನನ್ನ ತಂದೆಯವರನ್ನು ಕೇಳುವುದೊಳಿತು. "

" ಏಕೆ ? "

" ನಾನು ಸಮಾಜಕ್ಕೆ ಸಂಬಂಧಿಸಿದವಳೆಂದು ಆಗಲೇ ಹೇಳಲಿಲ್ಲವೆ ? ನನ್ನನ್ನು ರಕ್ಷಿಸುವ ನನ್ನ ತಂದೆಯೂ ಇದ್ದಾರೆ. "

" ನಿನ್ನ ಸಮಾಜವೆಲ್ಲಿದೆ ? "

" ಅಲ್ಲಿ ನೋಡಿ, ಆ ಗುಡಿಸಿಲುಗಳ ಸಾಲನ್ನು ! "

" ನೀನು ಏತಕ್ಕಾಗಿ ಇಲ್ಲಿಗೆ ಬಂದಿದ್ದೆ ? "

" ದಿವ್ಯಾನಂದದ ಮೂಲವಾದ ಸೂರ್ಯದೇವರಿಗೆ ನಮಸ್ಕರಿಸಲಿಕ್ಕಾಗಿ ಈ ಸಾಯಂಕಾಲ ಬಂದಿದ್ದೇನೆ. ನನ್ನ ನಿತ್ಯದ ದಿನಚರಿಯ ಕೆಲಸಗಳಲ್ಲಿ ಇದೂ ಒಂದು. "

ಅವನು ಆಶ್ಚರ್ಯಗೊಂಡು ಕೇಳಿದ:—" ಯಾರು ನೀನು ? "

" ನಾನೇನೂ ಕನಸಲ್ಲ, ಬಯಕೆಯಲ್ಲ; ಒಂದು ತಪವೂ ಅಲ್ಲ. ನಾನು ತಪತಿ; ಜಗಜ್ಜ್ಯೋತಿಯಾದ ಆದಿತ್ಯನ ಮಗಳು. " ಕನ್ನೆ ಉತ್ತರಿಸಿದಳು.

ತನ್ನ ಕಣ್ಣುಗಳಿಗೆ ಯಾರಾದರೂ ಬಿಸಿ ಮಳಲನ್ನು ಎಸೆದರೇನೋ—ಎನ್ನುವಂತೆ, ಅವನು ಒಮ್ಮೆಲೇ ತಲೆ ತಗ್ಗಿಸಿದ. ಮರಳಿ ತಲೆಯೆತ್ತಿದಾಗ ಅವನ ಮುಂದೆ ಯಾರೂ ಇರಲಿಲ್ಲ

ಸೂರ್ಯ ಅಸ್ತಮಿಸಿದ್ದ. ಕಾನನವನ್ನೆಲ್ಲಾ ಕತ್ತಲೆ ಸುತ್ತಿತ್ತು. ತಪತಿ ಅಲ್ಲಿರಲಿಲ್ಲ. ಅವನೊಬ್ಬನೇ ನಿಂತಿದ್ದ. ಇಡೀ ಪ್ರಪಂಚವೇ ಅವನಿಗೆ ಬುಡಮೇಲಾದಂತೆ ಕಂಡಿತು. ತನ್ನ ಧ್ಯೇಯನಿಷ್ಠ ಜೀವನದ ಬಗ್ಗೆ ಅವನಿಗಿದ್ದ ಹೆಮ್ಮೆ,—ತನ್ನ ತಪಸ್ಸಿನ ಬಗ್ಗೆ ಅವನಿಗಿದ್ದ ಅಹಂಕಾರ—ಎಲ್ಲವೂ, ವಿಚಿತ್ರ ಮಾಟಗಾತಿಯೊರ್ವಳ ಮೂದಲಿಕೆಯಿಂದ ಮಣ್ಣುಗೂಡಿದ್ದುವು.

ಸಾಂಬರಾಣಾ ಸೋಲೊಪ್ಪಿದ. ಈಗಲೂ ಕೂಡ ಆ ಸ್ವಪ್ನ-ಸಾಮ್ರಾಜ್ಯದ ವ್ಯಕ್ತಿಯನ್ನು ಯಾವ ವಿಧದಿಂದಲೂ ಮರೆಯುವುದು ಸಾಧ್ಯವಿಲ್ಲವೆಂದು ಅವನ ಹೃದಯದ ಒಳಗಿನ ಒಳದನಿ ಹೇಳುತ್ತಿತ್ತು. ಅವನ ನಿಷ್ಪಕ್ಷಪಾತ ಬುದ್ಧಿಯ ನಿಯಮಗಳು, ಅವನ ಕಠಿನ ತಪಸ್ಸು, ಅವನ ಬ್ರಹ್ಮಚರ್ಯದ ಪ್ರತಿಜ್ಞೆ—ಇವೆಲ್ಲವೂ ಎಲ್ಲಿ ಹೋದುವೊ ! ಅವನಿಗೆ ತಪತಿಯೊಬ್ಬಳನ್ನುಳಿದು ಅನ್ಯ ಸತ್ಯವೇ ಅಸ್ತಿತ್ವದಲ್ಲಿದ್ದಂತೆ ಕಾಣಲಿಲ್ಲ.

ಹೆಚ್ಚುತ್ತಿರುವ ಕತ್ತಲೆಯಲ್ಲಿ ತನ್ನ ಮೂರ್ಖತನ ಮತ್ತು ಮಿಥ್ಯಾ ಹೆಮ್ಮೆಗಳೊಡನೆ ಅವನು ಅವಿತುಕೊಳ್ಳಲು ಯತ್ನಿಸಿದ. ಅವನು ಹಿಂದಕ್ಕೂ ಸರಿಯದಾದ; ಮುಂದಕ್ಕೂ ಬಾರದಾದ. ಅವನು ಇಡೀ ಜಗತ್ತಿನೆದುರಿಗೆ ತನ್ನ ನಿಜರೂಪದಲ್ಲಿ ನಿಂತಿದ್ದಾನೆ. ಇಂದು ಸರ್ವ ಜೀವನವನ್ನೂ ಮುಡುಪಿಟ್ಟು ಆಶಿಸುತ್ತಿರುವ ಆ ಹೊಂಗನಸನ್ನು, ಅವನು ಹೆಮ್ಮೆಯಿಂದ ಎಂದೋ ತುಚ್ಛೀಕರಿಸಿದ್ದ. ಆದರೆ ಎಂದೋ ತನ್ನದಾಗುತ್ತಿದ್ದ ಅದನ್ನು ಇಂದು ಬಯಸಲು ಅವನಿಗೆ ಹಕ್ಕಿದೆಯೇನು ?

ಸಾಂಬರಾಣಾ ಮರಳಿ ತನ್ನ ಅರಮನೆಗೆ ಹೋಗಲಿಲ್ಲ.

೪

ಇಡಿ ದೇಶಾದ್ಯಂತ ಜನರು, ಸ್ವಯಂಸ್ಫೂರ್ತಿಯಿಂದರಾಜನು, ತನ್ನನ್ನು ತಾನೇ ಗಡಿಪಾರು ಮಾಡಿಕೊಂಡದ್ದಕ್ಕಾಗಿ ಚಕಿತರಾದರು

"ಏಕೆ?........ರಾಜನು ತನ್ನ ಪ್ರೀತಿಯ ರಾಜ್ಯ, ಸಮಾಜ ಮತ್ತು ಜನರಿಗೆ ಸಲ್ಲಿಸುತ್ತಿದ್ದ ಸೇವೆ ಇವುಗಳನ್ನೆಲ್ಲ ಪರಿತ್ಯಾಗ ಮಾಡಿದನೇಕೆ? ಅವನ ಮನೋವ್ಯಾಧಿಯ ನಿಜವಾದ ಕಾರಣ-ವೇನು? ಅವನ ಸಂಕಟವಾದರೂ ಏನು? ಇದೆಲ್ಲಾ ಅವನಿಗೆ ಅವನ ತ್ಯಾಗಬುದ್ಧಿಯಿತ್ತ ಪ್ರೇರಣೆ ಇರಬಹುದೇ?........"

ಎಲ್ಲರೂ ಈ ರೀತಿ ಆಲೋಚಿಸತೊಡಗಿದರು. ಆದಿತ್ಯದೇವ ಕೂಡ ಇದೇ ಅಭಿಪ್ರಾಯವುಳ್ಳವನಾಗಿದ್ದ. ಆದರೆ ಆ ಘಟನೆಯ ನಿಜವಾದ ಗುಟ್ಟನ್ನರಿತವಳು ಮಾತ್ರ ಮೌನವಾಗಿದ್ದಳು.

ತಪತಿ ಮೌನವಾಗಿಯೇ ಇರಬೇಕಿತ್ತು. ಅಂದು ಕಾನನದ ಮುಚ್ಚಂಜೆಯಲ್ಲಿ ಅವಳ ಹೃದಯಾಂತರಾಳದಲ್ಲಿ ಪ್ರೇಮವು ಪ್ರಥಮ ಹೆಜ್ಜೆಯನ್ನಿರಿಸುವ ಶಬ್ದವನ್ನು ಕೇಳುವಂತೆ ಮಾಡಿದ ಆ ಮನುಷ್ಯನ ಮೊಗವನ್ನು ಅವಳೆಂದೂ ಮರೆಯಲಾರಳು. ಆ ಸುಂದರ ಅರಸು-ಗುವರನನ್ನು ತನ್ನ ಸ್ವಂತ ಕಣ್ಣುಗಳಿಂದಲೇ ಅವಳು ನೋಡಿದ್ದಾಳೆ. ಅವನು ತನ್ನನ್ನು ಮಾತನಾಡಿಸಿದ್ದನ್ನೂ ಸ್ವಂತ ಕಿವಿಗಳಿಂದಲೇ ಅವಳು ಕೇಳಿದ್ದಾಳೆ. ಆದರೂ ಅವಳು ಈ ಘಟನೆಯನ್ನು ಸ್ವಪ್ನವೆಂದೇ ತಿಳಿಯಬೇಕಿತ್ತು. ಅವನು ಮತ್ತೆಂದೂ ಸಮಾಜಕ್ಕೆ ಹಿಂದಿರುಗಿ ಬಾರನೆಂದು ಅವಳು ತಿಳಿದಳು. ಏಕೆಂದರೆ ತನ್ನ ಅಹಂಕಾರದ ಸೋಲಿನ ಅವಮಾನದಿಂದ ಚೇತರಿಸಿಕೊಳ್ಳುವುದು ಅವನಿಗೆ ಎಂದೂ ಸಾಧ್ಯವಿರಲಿಲ್ಲ! ಕಾನನದ ಅಂಚಿನಲ್ಲಿ ಅದೊಂದು ಸಂಜೆಯ—ಯುವಕ-ಯುವತಿಯರಿರ್ವರ ಭೆಟ್ಟಿ, ಇಬ್ಬರಲ್ಲೂ ಚಿರವಿರಹದ ತೀವ್ರವೇದನೆಯನ್ನುಂಟುಮಾಡಿದೆಯೆಂದು ಯಾರಿಗಾದರೂ ಎಂದಾದರೂ ಗೊತ್ತಾಗಲು ಸಾಧ್ಯವೆ?

ಸಾಂಬರಾಣನ ಕುಲಗುರುಗಳಾದ ವಸಿಷ್ಠರಿಗೆ ಮಾತ್ರ ಸುಮ್ಮನೆ ಕೈಕಟ್ಟಿಕೊಂಡಿರಲು ಸಾಧ್ಯವಿರಲಿಲ್ಲ. ಅರಸನಿಲ್ಲದೆ ದುರಾ-ಡಳಿತ, ವಿಪತ್ತು, ಕಳವಳ, ಸಂಕಟ, ಗಡಬಿಡಿಗಳು ರಾಜ್ಯದಲ್ಲಿ ತಲೆಯೆತ್ತಿದ್ದವು. ಎಲ್ಲೆಲ್ಲಿಯೂ ಅವ್ಯವಸ್ಥೆ ಮತ್ತು ಅರಾಜಕತೆಗಳು ಮೆರೆಯುತ್ತಿರುವುದನ್ನು ನೋಡಿ ಸಹಿಸಲಾರದೆ, ವಸಿಷ್ಠರು ಸಾಂಬರಾಣನಲ್ಲಿಗೆ ಬಂದರು.

ಸಾಂಬರಾಣ ತೀರ ಸೊರಗಿ ಹೋಗಿದ್ದ. ಉಗ್ರವಾದ ತಪೋವಿಧಾನಗಳನ್ನು ಕೈಕೊಂಡಂತೆಲ್ಲಾ ಅವನು ಮತ್ತಷ್ಟು ಕೃಶನಾದ. ವಸಿಷ್ಠರು ವ್ಯಸನದ ಧ್ವನಿಯಲ್ಲಿ ಕೇಳಿದರು:—"ಹೀಗೇಕೆ—ಆಕಸ್ಮಿಕವಾಗಿ—ಈ ರೀತಿ ವರ್ತಿಸಿದೆ ಮಗು?"

"ನನ್ನಲ್ಲಿರುವ ತಪ್ಪುಗಳನ್ನು ನಾನು ಕಂಡುಕೊಂಡದ್ದರಿಂದ ಗುರುವೇ!"

"ಯಾವ ತಪ್ಪುಗಳನ್ನು?"

ಸಾಂಬರಾಣನು ಅವರ ಪ್ರಶ್ನೆಗೆ ಉತ್ತರಿಸಲಿಲ್ಲ. ಮತ್ತೊಮ್ಮೆ ಗುರುಗಳು ಕೇಳಿದರು:—"ನೀನೆಂತಹ ತಪ್ಪುಗಳನು ಮಾಡಿರುವೆಯೋ ನಾನರಿಯೆ. ಆದರೆ ಆ ತಪ್ಪುಗಳಿಗೆ ಪ್ರಾಯಶ್ಚಿತ್ತ ತೆಗೆದು-ಕೊಳ್ಳಲಿಕ್ಕಾಗಿ ನೀನು ಇಲ್ಲಿಯೇಕೆ ಇರಬೇಕಾಗಿದೆ?"

"ಹೌದು, ನಾನಿಲ್ಲಿರಬೇಕಾಗಿದೆ ಗುರುಗಳೇ. ಈ ಕಾನನದ ಅಂಚಿಗಿರುವ ಆ ಶೃಂಗವೇ ನನ್ನ ಪುಣ್ಯಕ್ಷೇತ್ರ. ಪರಮಸುಖದ ಮೂಲವಾದ ಸೂರ್ಯದೇವನ ಉದಯಾಸ್ತಗಳನ್ನು ನಿರುಕಿಸುತ್ತಾ ಇಲ್ಲಿಯೆ ಇದ್ದು, ನನ್ನ ಜೀವನದ ಶಾಂತಿಯ ನೆಲೆಯನ್ನು ಹುಡುಕಿಕೊಳ್ಳಬೇಕಾಗಿದೆ."

ವಸಿಷ್ಠರು ನಗುತ್ತ ಹೇಳಿದರು:—"ತಪ್ಪು ತಿಳಿದುಕೊಳ್ಳಬೇಡ ಕುಮಾರಾ! ಈ ಉಗ್ರತಪಸ್ಸಿಗೆ ಮುಂಗೋಪವೇ ಕಾರಣವೆಂದು ನಿನ್ನ ಮುಖವೇ ಹೇಳುತ್ತಿದೆ. ಸದ್ಭಕ್ತನಿಗಿರಬೇಕಾದ ಮನೋ-ನೈರ್ಮಲ್ಯ ಮತ್ತು ಚಿತ್ತಶಾಂತಿಗಳು ನಿನ್ನಲ್ಲಿಲ್ಲ ಈ ವಿಧದ ಕಪಟ-ತ್ಯಾಗದಿಂದ ಮತ್ತು ಆತ್ಮಹೀನಧ್ಯಾನದಿಂದ ನೀನು ನಿನ್ನ ವ್ಯಸನವನ್ನು ಮುಚ್ಚಿಕೊಳ್ಳಲು ವ್ಯರ್ಥವಾಗಿ ಯತ್ನಿಸುತ್ತಿರುವೆಯಷ್ಟೇ!"

ತಾನು ಗೈದ ತಪ್ಪಿಗಾಗಿ, ಪಾಪಕ್ಕಾಗಿ, ಅಸಹ್ಯಪಡುತ್ತಿರುವ ಅಪರಾಧಿಯಂತೆ ಸಾಂಬರಾಣನು ಮೌನವಾದ. ಆದರೆ ವಸಿಷ್ಠರು ತೀಕ್ಷ್ಣವಾಗಿ ಪ್ರಶ್ನಿಸುತ್ತಿರುವಂತೆ ಅವನನ್ನೇ ನಿಟ್ಟಿಸಿದರು.

ಅವನು ಹೇಳಿದ:—"ಹುಸಿಹೆಮ್ಮೆಯಿಂದ ಅಂಧನಾಗಿ, ಆದಿತ್ಯದೇವನಲ್ಲಿ ಅವಿಧೇಯನಾಗಿ ನಡೆದೆ. ಅದರ ಪ್ರಾಯಶ್ಚಿತ್ತಕ್ಕಾಗಿ ಈ ತಪಸ್ಸು."

ಇನ್ನೂ ಹೆಚ್ಚಿನದೇನನ್ನೋ ತಿಳಿಯಬಯಸುತ್ತಿರುವಂತೆ ವಸಿಷ್ಠರ ನೇತ್ರಗಳು ಮತ್ತಷ್ಟು ಪ್ರಶ್ನಾರ್ಥಕವಾದ ತೀಕ್ಷ್ಣ ನೋಟವನ್ನು ಬೀರುತ್ತಿದ್ದುವು.

ಸಾಂಬರಾಣ ಹೇಳಿದ:—"ಆದಿತ್ಯದೇವನ ಪುತ್ರಿಯಾದ ತಪತಿ........"

ವಸಿಷ್ಠರು ಪ್ರೀತಿಗೊಂಡು ನುಡಿದರು:—"ಓಹೋ! ಹಾಗೋ! ನೀನು ಒಮ್ಮೆ ತಪ್ಪು ಮಾಡಿರುವೆ. ಮತ್ತೆ ಅದೇ ರೀತಿ ಮಾಡುವುದು ಅನಾವಶ್ಯಕ ಮಗು! ನೀನು ಸಮಾಜದ ಒಬ್ಬ ನಿಷ್ಪಕ್ಷಪಾತ ಸೇವಕ. ಈ ರೀತಿ ಸಮಾಜಬಾಹಿರನಾಗಿ, ಏಕಾಕಿಯಾಗಿ ದೂರ-ವಿರುವುದು ನಿನಗೆ ತಕ್ಕುದಲ್ಲ. ನಾನೀಗ ಹೋಗಬೇಕು. ನೀನೂ ಹೊರಡಲಣಿಯಾಗಿರು. ಇಲ್ಲಿಂದ ನಿನ್ನನ್ನು ಕರೆದುಕೊಂಡು ಹೋಗಲು ಈಗ ಬರುತ್ತೇನೆ."

ವಸಿಷ್ಠರು ಕಾನನದಿಂದ ನೇರವಾಗಿ ಆದಿತ್ಯನಿದ್ದ ತಾಣಕ್ಕೆ ಹೋದರು. ಆದಿತ್ಯನಿಂದ ತಮ್ಮೆಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಪಡೆದರು. ಈ ಎಲ್ಲಾ ಘಟನೆಗಳ ಗುಟ್ಟನ್ನರಿತು ಆದಿತ್ಯನು ಕೂಡ ಅಚ್ಚರಿಪಟ್ಟ. ತಪತಿಯು ಆಗಮಿಸಿ ಇರ್ವರಿಗೂ ವಂದಿಸಿದಳು. ಅವಳ ಸೌಮ್ಯಮುಖ ಕೆಂಪೇರಿದ್ದನ್ನು ಕಂಡು ಇಬ್ಬರೂ ಸಂತಸ-ಗೊಂಡರು.

“ನಿರ್ಮಲ ಹೃದಯಿಯಾದ ಮಗಳೇ, ನಿನ್ನ ಪ್ರೇಮಕ್ಕೆ ಗೆಲವು ದೊರೆಯಲಿ. ಸೂರ್ಯದೇವನ ಕೃಪೆ ನಿನ್ನ ಪ್ರೇಮದ ರಕ್ಷಣೆಗಿರಲಿ.” ಎಂದು ವಸಿಷ್ಠರು ಆಶೀರ್ವದಿಸಿದರು.

೫

ತಪತಿ ತನ್ನ ಪತಿದೇವನ ಗೃಹಕ್ಕೆ ತೆರಳಿದಳು. ಸೂರ್ಯದೇವನ ಭಕ್ತರಾದ ಸಾಂಬರಾಣಾ ಮತ್ತು ತಪತಿ—ಇವರಿರ್ವರ ವೈವಾಹಿಕಜೀವನವು ಜಗತ್ತಿಗೆ ಕಲ್ಯಾಣಕರ ನವಪ್ರಕಾಶವನ್ನು ತರಬಹುದೆಂಬ ನಂಬುಗೆ ಆದಿತ್ಯದೇವನನ್ನು ಸಂತುಷ್ಟಗೊಳಿಸಿತು.

ಆದರೆ ಚಿಂತೆಯ ಚಿಕ್ಕ ಮೋಡ ಒಂದು ಉದಯವಾಯಿತು. ಆದಿತ್ಯನು ವ್ಯಾಕುಲನಾದ. ಅರಸನು ತನ್ನ ಪ್ರಜೆಗಳ ಆಡಳಿತದ ಸೂತ್ರಗಳನ್ನೆಲ್ಲಾ ತನ್ನ ಮಂತ್ರಿಗೆ ಒಪ್ಪಿಸಿ, ತಪತಿಯೊಡನೆ ದೂರದ ವನಮಂದಿರವನ್ನು ಸೇರಿದ್ದಾನೆಂಬ ವಾರ್ತೆಯನ್ನು ಅವನು ಅತೀವ ಭಾರವಾದ ಹೃದಯದಿಂದ ಕೇಳಿದ.

ಆದಿತ್ಯ ಇದಕ್ಕಿಂತ ಬಲವಾದ ಪೆಟ್ಟನ್ನು ತನ್ನ ಜೀವಮಾನದಲ್ಲೆಂದೂ ತಿಂದಿರಲಿಲ್ಲ. ತನ್ನ ತತ್ತ್ವಗಳನ್ನೆಲ್ಲಾ ಅವರಿರ್ವರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಾರೆಂದು ಇದುವರೆಗೂ ಅವನು ನಂಬಿದ್ದ. ಆದರೆ ಇಂದು ಅವರಿರ್ವರೂ ಈ ಪ್ರಪಂಚದಿಂದಲೇ ದೂರವಾಗಿದ್ದಾರೆ. ಸಮಾಜಕ್ಕಾಗಿಯಾಗಲಿ, ಜಗತ್ತಿಗಾಗಿಯಾಗಲಿ ಅವರು ಮದುವೆಯಾಗಿರದೆ, ಕೇವಲ ವಿವಾಹವಾಗುವುದಕ್ಕಾಗಿ ವಿವಾಹವಾದಂತೆ ಕಾಣುತ್ತಿದ್ದಾರೆ. ಅವರಿರ್ವರ ಸೌಂದರ್ಯವನ್ನು ರಾಕ್ಷಸೀಕಾಮವು ನಾಶಮಾಡುತ್ತಿದೆ. ವಸಿಷ್ಠರು ಆದಿತ್ಯನಲ್ಲಿಗೆ ಬಂದು ಚಿಂತಾಕ್ರಾಂತರಾಗಿ ಕುಳಿತರು.

(ಸಾಂಬರಾಣಾನು ವನಮಂದಿರದ ಏಕಾಂತದಲ್ಲಿ, ಜಗತ್ತಿನಿಂದ ದೂರವಾಗಿರುವಂತೆ, ಸ್ವಪ್ನದ ಹಕ್ಕಿಗೂಡೊಂದನ್ನು ಕಟ್ಟಿಕೊಳ್ಳಬೇಕೆಂದುಕೊಂಡ. ಅಲ್ಲಿ ತಪತಿಯೊಬ್ಬಳನ್ನುಳಿದು ಅನ್ಯ ಸತ್ಯವಿರಲಿಲ್ಲ. ಆ ಸುಂದರ ಯುವತಿಯ ಕೇಶರಾಶಿಯೊಂದನ್ನುಳಿದು ಬೇರೆ ಯಾವ ವನವೂ ಆ ವಿಧದ ಸುಗಂಧವನ್ನು ಸೂಚಿಸಿದಂತೆ ಕಾಣಲಿಲ್ಲ. ಅವಳ ನೇತ್ರಗಳ ಮುಂದೆ ತಾರೆಗಳೆಲ್ಲಾ ಮಸುಕಾಗಿ ಕಂಡುವು. ಅವಳ ಚುಂಬನ ಅರುಣೋದಯವನ್ನು ತರುತ್ತಿತ್ತು. ಅವಳ ಅಪ್ಪುಗೆ ಇರುಳನ್ನು ಬರಮಾಡುತ್ತಿತ್ತು. ಅವಳ ಆ ಸುಂದರ ಶರೀರ ಮೇರೆಯಿರದ ಕಾಮಮಯವನವಾಗಿತ್ತು. ಸಾಂಬರಾಣಾ ಆ ವನದಲ್ಲಿ ಪುಷ್ಪಪರಾಗವನ್ನು ಎಡೆಬಿಡದಂತೆ ಪ್ರತಿಕ್ಷಣವೂ ಊಟಿ ಮಾಡಿ, ತೃಪ್ತಿಗೆ ಮೀರಿದ ಅತಿ ತೃಪ್ತಿಯನ್ನು ಪಡೆಯಲು ವ್ಯಾಮೋಹಗೊಂಡಿದ್ದಾನೆ!)

ತಪತಿ ಇದನ್ನು ಕಂಡು ಹೆಸಿಕೆಗೊಂಡಳು. ಕಾನನದ ಮೆಲು-ಗಾಳಿ ಕೂಡ ಅವಳಿಗೆ ಉರಿಯನ್ನಿತ್ತಿತು. ಸಮಾಜ ಮತ್ತು ಸಮಾಜ ಸುಧಾರಣೆಯ ಗುರಿಗಳೆಲ್ಲಿಹೋದುವು? ಪೂಜೆಯಿಂದ ಪಡೆದ ಸೂರ್ಯದೇವನ ಪ್ರಸನ್ನತೆಯೆಲ್ಲಿ? ಆದಿತ್ಯನ ನಿಷ್ಪಕ್ಷಪಾತಬುದ್ಧಿಯನ್ನನುಸರಿಸುವುದಾಗಿ ಕೈಕೊಂಡ ಪ್ರತಿಜ್ಞೆ ಎಲ್ಲಿ?.. ....ಇದು ಗಂಡ-ಹೆಂಡತಿ—ಇರ್ವರ ವೈವಾಹಿಕ ಜೀವನವಾಗಿರದೆ, ಕೇವಲ ಗಂಡು-ಹೆಣ್ಣುಗಳ ವಾಸನಾಮಯ ಮಿಲನವಾಗಿದೆ!

ಆದಿತ್ಯ ಚಿಂತಾಕ್ರಾಂತನಾಗಿದ್ದಾನೆಂಬ ಸುದ್ದಿಕೇಳಿ ವಸಿಷ್ಠರು ವ್ಯಸನಕ್ಕೊಳಗಾದರು. ರಾಜನ ಅರಮನೆ ರಣಗುಟ್ಟುತ್ತಿದೆ. ರಾಜ್ಯದಲ್ಲಿ ಅಶಾಂತಿ, ದುರಾಡಳಿತ, ಕ್ರಾಂತಿಗಳು ಪ್ರಾರಂಭವಾಗಿವೆ. ವೈರಿಯಾದ ಇಂದ್ರನು ಈ ಸಂದರ್ಭದ ಸದುಪಯೋಗ ಮಾಡಿಕೊಂಡು, ಇಡಿರಾಜ್ಯದ ಬೆಳೆಗಳನ್ನೆಲ್ಲಾ ನಾಶಮಾಡಿದ್ದಾನೆ. ಕ್ಷಾಮದ ಮಾರಿಗೆ ಬಲಿಯಾದ ಜನಜಂಗುಳಿಯ ಅಸಹಾಯ ಕಿರಚುವಿಕೆ ದೇಶಾದ್ಯಂತ ಕೇಳುತ್ತಿದೆ. ಅದರೂ ಸಾಂಬರಾಣಾನ ಮನಸ್ಸು ಬದಲಾಗಲಿಲ್ಲ. ಬವಣೆಯ ಮತ್ತು ದುಃಖಗಳ ಈ ಆಸ್ಫೋಟಗಳೆಲ್ಲಾ ಬೇರೆಯ ಲೋಕಕ್ಕೆ ಸಂಬಂಧಿಸಿದ್ದಂತೆ, ತನ್ನ ಮನೋಮಂದಿರದ ಏಕಾಂತ ವಿಲಾಸೀಜೀವನಕ್ಕೆ ಯಾವ ವಿಧದ ಬಾಂಧವ್ಯವೂ ಇಲ್ಲವೆಂಬಂತೆ ಅವನಿದ್ದ. ತಪತಿ ವ್ಯಸನಪೂರ್ಣ ದೃಷ್ಟಿಯಿಂದ

ಮಕ್ಕಳ ಸದ್ಬೃಢತೆಗಾಗಿ

“ಬಗನ ಬಾಲಾಮೃತ”

ಹಲ್ಲು ಬರುವಾಗ

“ಎಸ್ಟೈನ್ ಗ್ರಾಇಪ್” ಹೀಲರ್

ಜಂತು ಆದರೆ



“ವರ್ಮ ಆಯಿಲ್”

ಉಪಯೋಗಿಸಿರಿ. ಇವು ಪ್ರತಿಯೊಬ್ಬ ಕುಟುಂಬಸ್ಥರಿ ಉಪಯೋಗಬೇಕುವ ಔಷಧಗಳು

The National Pharmacies & Pharmaceuticals Ltd., Dharwar

ಅವನನ್ನು ನಿಟ್ಟಿಸಿದಳು. ಸಮಾಜಸೇವೆ ಮತ್ತು ಸರ್ವಸಮತಾ-ಭಾವವನ್ನು ಕೈಕೊಳ್ಳುವುದಾಗಿ ಪ್ರತಿಜ್ಞೆಮಾಡಿದ ಅವನು, ಈ ರೀತಿ ಹೀನಾವಸ್ಥೆಗೆ ಬರುತ್ತಾನೆಂದು ಅವಳೆಂದೂ ಎಣಿಸಿರಲಿಲ್ಲ.

ಸಾಂಬರಾಣಾನ ಭೆಟ್ಟಿಗಾಗಿ ಅವನ ಗುರುಗಳಾದ ವಸಿಷ್ಠರು ವನಮಂದಿರದ ಬಾಗಿಲಲ್ಲಿ ಕಾಣಿಸಿಕೊಂಡಾಗ, ತಪತಿಯ ದುಃಖ ಪರಮಾವಧಿಯನ್ನು ಮುಟ್ಟಿತು. ವಸಿಷ್ಠರ ಆಗಮನದ ವಾರ್ತೆ-ಕೂಡ, ತನ್ನ ಗುರುಗಳನ್ನು ಕಾಣಬೇಕೆಂಬ ಉತ್ಸಾಹವನ್ನು ಸಾಂಬರಾಣಾನಲ್ಲಿ ಹುಟ್ಟಿಸಲಿಲ್ಲ! ಬಹಳಕಾಲ ವಸಿಷ್ಠರು ಬಾಗಿಲಲ್ಲಿ ಕಾದು ನಿಲ್ಲಬೇಕಾಯಿತು!

ಸಾಂಬರಾಣಾನ ವ್ಯಾಮರೆಯುವಿಕೆಯನ್ನು ನೋಡಿ ತಪತಿ ಭಯಗೊಂಡಳು. ತಾನು ಕೂಡ ಅಪರಾಧಿ ಎಂದುಕೊಂಡಳು. ಅವಳು ಇದುವರೆಗೆ ನಡೆದುದನ್ನೆಲ್ಲಾ ನೆನೆದಳು. ಮುಂದೆ ಬರ-ಬಹುದಾದುದನ್ನೆಲ್ಲಾ ಎದುರಿಸಲು ಸಿದ್ಧಳಾದಳು.

ಸೂರ್ಯ ನಡುನೆತ್ತಿಯ ಮೇಲಿದ್ದಾನೆ. ವಸಿಷ್ಠರು ಹೊರಗೆ ಕಾಯುತ್ತಲೇ ಇದ್ದಾರೆ. ವನಮಂದಿರದ ಒಳಗಡೆ ಬಳ್ಳಿಗಳ ಮತ್ತು ಅವುಗಳ ಕುಡಿಗಳ ಕಿರುಪೊದೆಯೊಂದರ ನೆರಳಲ್ಲಿ ಸುವಾಸಿತ ತೈಲದ ದೀವಿಗೆಯೊಂದು ಉರಿಯುತ್ತಿದೆ. ಸಾಂಬರಾಣಾ ತನ್ನ ತೋಳು-ಗಳನ್ನು ತಪತಿಯ ಕೊರಳಿಗೆ ಸುತ್ತಿಕೊಂಡು, ಸಿರಿಗನಸುಗಳಲ್ಲಿ ಮುಗ್ನನಾಗಿದ್ದಾನೆ.

ಮಧುವಿಗಾಗಿ ಕಾತರಗೊಂಡ ಜೇನ್ನೊಣದಂತೆ ಅವಳ ತುಟಿ-ಗಳತ್ತ ಮುಖ ಒಯ್ದ ಸಾಂಬರಾಣಾ. ಆದರೆ ಅವಳು ಮುಖ ತಿರುಹಿದಳು. ಅವನ ಕಾಳಿಂಗದಂತಹ ಅಪ್ಪುಗೆಯಿಂದ ಕೊಸರಿ ಕೊಂಡು ತಪತಿ ದೂರ ಹೋಗಿನಿಂತಳು.

ಅವನು ಅಚ್ಚರಿಗೊಂಡು ಕೇಳಿದ:—" ಏನಿದು ತಪತಿ ?"

" ನಾನು ತಪತಿಯಲ್ಲ. "

" ಇದೇನನ್ನು ಹೇಳುತ್ತಿರುವೆ ನೀನು ? "

" ತಪತಿಯು ವನಮಂದಿರದ ಗಂಡುಸೊರ್ವನ ವಿಲಾಸದಲ್ಲಿ ಭಾಗವಹಿಸಲಿಕ್ಕಾಗಿ ಇಲ್ಲ "

ಸಾಂಬರಾಣಾ ದಿಙ್ಮೂಢನಾದ. ಅವಳನ್ನೇ ಸ್ವಲ್ಪ ಹೊತ್ತು ನೀರವವಾಗಿ ನಿಟ್ಟಿಸುತ್ತ ಅವಳ ಮಾತಿನ ಅರ್ಥವನ್ನು ತಿಳಿದು-ಕೊಳ್ಳಲು ಯತ್ನಿಸಿದ. ತಪತಿಯ ವೇಷದಲ್ಲಿ ಬೇರೆ ಯಾರೋ ಒಬ್ಬರು ತನ್ನನ್ನೇ ಬಿರುಗಣ್ಣಿನಿಂದ ನೋಡುತ್ತಿದ್ದಂತೆ ಅವನಿಗೆ ಭಾಸವಾಯಿತು. ಮಬ್ಬು ಹಿಡಿದವನಂತೆ ಅವನು ಕೇಳಿದ:—

" ಯಾರು ನೀನು ? "

" ನಾನೊಬ್ಬ ಸ್ತ್ರೀದೇಹಿ. "

ಬೆದರಿಕೆಯಿಂದ ಅಳ್ಳೆದೆಗೊಂಡವನಂತೆ ಅವನು ಬೆಚ್ಚಿಬಿದ್ದ.

ತಪತಿಯ ಮಾತುಗಳು ಚೂರಿಯ ಅಲಗಿನಂತೆ ಕೂರಾಗಿದ್ದುವು; ಕಠೋರವಾಗಿದ್ದುವು. ತನ್ನ ಮನೋಹರ ಸೌಂದರ್ಯದ ಹೊರಭಾಗವನ್ನು ಸೀಳಿ, ತನ್ನಲ್ಲಿ ತಪತಿ ಎಂಬವರಾರೂ ಇಲ್ಲವೆಂದು ತೋರಿಸುತ್ತಿರುವಂತೆ ಕಂಡಳು ಅವಳು!

ಸಾಂಬರಾಣಾ ಅಸಹಾಯನಾಗಿ ಕೇಳಿದ:—" ತಪತಿ ಯಾರು ಹಾಗಾದರೆ ? "

" ತಪತಿಯ ಈ ದೇಹ ಆದಿತ್ಯನಿಂದ ಭೋಗಕ್ಕಾಗಿಯೇ ಹುಟ್ಟಿಲ್ಲ. ದಿವ್ಯತೆಯ ಮೂಲವಾದ ಸೂರ್ಯದೇವನು, ತನ್ನ ತಂದೆಯ ತಪಕ್ಕೆ ಮೆಚ್ಚಿ ಇತ್ತ ಒಂದು ಮೆಚ್ಚು ನಾನು. ಈ ಮನಸ್ಸು ಆತ್ಮಪೂರ್ವಕವಾಗಿ ತನ್ನನ್ನು ಪ್ರೀತಿಸಬಲ್ಲ ಇನ್ನೊಂದು ಗಂಡಿನ ಮನಕ್ಕಾಗಿ ಈ ಪ್ರಪಂಚವನ್ನೇ ಹುಡುಕುತ್ತಿದೆ. ಹಾಗೆ ಹುಡುಕು ತ್ತಿರುವ ಮನಸ್ಸಿನ ಹೆಸರೇ ತಪತಿ. ಅವಳು ಸೂರ್ಯದೇವನ ಕೃಪಾ ಛತ್ರದ ಕೆಳಗಿರುವ ಪ್ರತಿಯೊಂದು ವಸ್ತುವಿನೊಡನೆ, ಆ ಗಂಡಿನ ಸಹಾಯದಿಂದ, ಒಂದುಗೂಡಲು ಯತ್ನಿಸುತ್ತಿದ್ದಾಳೆ. ನೀನು ಆ ತಪತಿಯ ಪುಟಗೊಂಡ ಜ್ಞಾನಮಯ, ಮಂಗಲಮಯ, ಪ್ರೇಮಪೂರ್ಣ ಮನಸ್ಸನ್ನು ಹುಡುಕಿಲ್ಲ; ಕಂಡಿಲ್ಲ. "

" ಹಾಗಾದರೆ ಇಷ್ಟುದಿನಗಳವರೆಗೆ ... ... "

" ತಪತಿಯ ಮನ ಇದುವರೆಗೂ ಅವಳನ್ನು ನಿನ್ನ ಆಟಕ್ಕಾಗಿ ಕಳುಹಿತ್ತು. "

" ನಿನಗೆ ಈ ವಿಲಾಸದಲ್ಲಿ ಯಾವ ವಿಧವಾದ ಆನಂದವೂ ದೊರೆಯಲಿಲ್ಲವೇನು ? "

" ಎಳ್ಳಷ್ಟು ಕೂಡ ಇಲ್ಲ. "

ವನಮಂದಿರದ ಹೊಂಗನಸು ನುಚ್ಚುನೂರಾಯಿತು. ಏಕಾಂತ ಮರುಭೂಮಿಯೊಂದರಲ್ಲಿ ತಾನೊರ್ವನೇ ನಿಂತಂತೆ ಭಾಸವಾಯಿತು

ಹೊಲಿಗೆಯ ಪುಸ್ತಕಗಳು

ಹೊಲಿಗೆಯ ಅತ್ಯಾಧುನಿಕ ಜ್ಞಾನಕೊಡುವ ಪುಸ್ತಕಗಳನ್ನು ಇಂದೇ ತರಿಸಿಕೊಂಡು ನಿಮ್ಮ ಉದ್ಯೋಗ ಬೆಳೆಸಿಕೊಳ್ಳಿರಿ.

೧. ಮನೆಯಲ್ಲಿ ಹೊಲಿಗೆ (ಮಕ್ಕಳ, ಮಹಿಳೆಯರ ಉಡುಪುಗಳು)	೧-೮-೦
೨. ಸೂಚಿ ಶಿಲ್ಪಕಲೆ (ಭಾಗ ೨) (ಕೋಟು, ಪ್ಯಾಂಟು, ಶೇರವಾನಿ ಮುಂ.)	೨-೦-೦
೩. ಈರ್ಝುಕಟಿಂಗ್ (ಕನ್ನಡ) ಮುಂಬೈಪ್ರಕಟನೆ. (ಮಕ್ಕಳ, ಮಹಿಳೆಯರ ಫ್ಯಾಶನೆಬಲ್ ಬಟ್ಟೆಗಳು.)	೪-೮-೦
೪. ಕಸೂತಿಕಲೆ (೨ ಭಾಗಗಳು ಕೂಡಿ) (ಕೈ, ಹಾಗೂ ಯಂತ್ರದ ಕಸೂತಿ)	೨-೮-೦

ವಿವರಕ್ಕೆ :— **ಹಳಪೇಟಿ ಮತ್ತು ಕಂಪನಿ**
ಗಾಂಧೀಚೌಕ, ಧಾರವಾಡ

ಸಾಂಬರಾಣಾನಿಗೆ. ತಪತಿ ತನಗೆ ತೀರ ಹತ್ತಿರದಲ್ಲಿ ನಿಂತಿದ್ದರೂ ಬಹು ದೂರದಲ್ಲಿರುವ ಬಿಸಿಲ್ಗುದುರೆಯಂತೆ ಕಂಡಳು. ಅವನು ಇದುವರೆಗೂ ಸೌಂದರ್ಯದೊಡನೆ ವಿಹರಿಸಿರಲಿಲ್ಲ; ಆ ಸೌಂದರ್ಯದ ಶವದೊಡನೆ ವಿಹರಿಸಿದ್ದ !

"ನೀನೇಕೆ ಈ ವಿಧದ ಶಿಕ್ಷೆಯನ್ನು ನನಗೆ ವಿಧಿಸುತ್ತಿರುವೆ ತಪತಿ ? ನೀನು ಪ್ರತ್ಯೇಕವಾಗಿ ನನ್ನವಳಾಗಿರುವಿ. ನನ್ನ ವೈವಾಹಿಕ ಜೀವನದ ಪಾಲುಗಾತಿಯಾಗಿರುವಿ."

"ನಿಜ ಸಾಂಬರಾಣಾ, ಆದರೆ ನಾನು ಕೇವಲ ವಿವಾಹಕ್ಕಾಗಿ ವಿವಾಹವಾಗಿಲ್ಲ"

"ಹಾಗಾದರೆ ಮತ್ತೆ ಯಾವುದಕ್ಕಾಗಿ ?"

"ಜಗತ್ತಿಗಾಗಿ !"

"ಜಗತ್ತಿಗಾಗಿ !" ತಪತಿಯ ಉತ್ತರ ಸಂಗೀತದಂತೆ ಇಡಿ ವನಮಂದಿರವನ್ನೇ ಜುಮ್ಮುಗುಟ್ಟಿಸಿದಂತೆ ಕಂಡಿತು:

"ಜಗತ್ತಿಗಾಗಿ !"

ಸುಗಂಧತೈಲದ ದೀವಿಗೆಯ ಪ್ರಕಾಶ ಇಮ್ಮಡಿಸಿತು. ಸೂರ್ಯಕಿರಣಗಳು ಇಡಿ ವನಮಾರ್ಗದ ಮರಗಳ ಮಸ್ತಕಗಳನ್ನು ಚುಂಬಿಸಿ, ಎಲೆಗಳ ನಿಬಿಡಬಲೆಯಲ್ಲಿ ಒಳತೂರಿ, ಪೊದೆಯ ನೆರಳಲ್ಲಿ ಚೆಲ್ಲವರಿದುವು. ಇದುವರೆಗೂ ಬೆಳೆದು ಕಠಿನವಾಗಿದ್ದ ಮರೆವಿನ ತೆರೆಯನ್ನೂ ಹರಿದು, ಹಿಂದೆಂದೋ ಕೇಳಿದ್ದ ಈ ವಾಕ್ಯ ಪ್ರತಿಧ್ವನಿಸಿತು: —'ಜಗತ್ತಿಗಾಗಿ !' ಯುವಕ ಮತ್ತು ಯುವತಿ ಲಗ್ನವಾಗುವುದು ಸಮಾಜದ ಸೇವೆಗಾಗಿ. ವಿವಾಹವೆನ್ನುವುದು ಒಂದು ಪ್ರತಿಜ್ಞೆ, ಒಂದು ದೀಕ್ಷೆ, ಒಂದು ತ್ಯಾಗ—ಇವಲ್ಲದೆ ಬೇರೆಯಲ್ಲ. ವಿವಾಹ ಕೇವಲ ಸ್ವಾರ್ಥಕ್ಕಾಗಿ ಇಲ್ಲ; ಏಕಾಂತವಾಸಕ್ಕಾಗಿಯೂ ಇಲ್ಲ. ಆದರೆ ಜಗತ್ತಿಗಾಗಿ ಇದೆ.

ಸಾಂಬರಾಣಾನ ಕಣ್ಣುಗಳು ನೀರಿನಿಂದ ತುಂಬಿ ತುಳುಕುತ್ತಿದ್ದುವು. ಸೂರ್ಯನ ರಶ್ಮಿಗಳು ಇಡಿ ವಿಶ್ವವನ್ನೇ ಸ್ಪರ್ಶಿಸುವಂತೆ, ಇದುವರೆಗೂ ತಾನು ಅಲಕ್ಷಿಸಿದ್ದ ರಾಜ್ಯ-ಸಮಾಜಗಳು ಅವನ ಹೃದಯವನ್ನು ತಟ್ಟಿದುವು.

ನಿಜವಾಗಿಯೂ ಈ ದೃಶ್ಯ ದುಃಖದಾಯಕವಾಗಿತ್ತು. ಆದರೆ ತಪತಿ ಇದೆಲ್ಲವನ್ನೂ ಶಿಲಾವಿಗ್ರಹದಂತೆ—ಅಚಲಳಾಗಿ—ನಿರೀಕ್ಷಿಸುತ್ತಿದ್ದಳು.

ಅವನು ಮೆಲ್ಲಗೆ ನುಡಿದ :—"ತಪತಿ, ನಾನು ಮತ್ತೆ ಮೂರನೆಯ ಸಲ ತಪ್ಪುಮಾಡಿದೆ. ಈ ವಿಧದ ದೊಡ್ಡ ಶಿಕ್ಷೆಯನ್ನು ವಿಧಿಸಿ ನೀನು ನನ್ನನ್ನು ತಿದ್ದಿರುವಿ."

ತಪತಿ ಉತ್ತರಿಸಲಿಲ್ಲ. ಅವಳು ಈ ವಿಧದ ತಮ್ಮ ಜೀವನವನ್ನು ಹೇಗೆ ಕೊನೆಗಾಣಿಸುವುದೆಂಬುದನ್ನು ಕುರಿತು ಚಿಂತಿಸುತ್ತಿದ್ದಳು.

ದಿ ನ್ಯಾಶನಲ್ ಮ್ಯುಜಿಕಲ್ ಹಾಲ್
ಧಾರವಾಡ

ಗಡಿಯಾರ, ಚಾಳೀಸು, ರೇಡಿಯೊ, ಗ್ರಾಮೊಫೊನ್
ಮಾರಾಟಮಾಡುವವರು, ರಿಪೇರಿ ಮಾಡುವವರು.
ನಂಬುಗೆಯ ಮಾಲು! ಪ್ರಾಮಾಣಿಕ ವ್ಯವಹಾರ
ಧಾರವಾಡದಲ್ಲಿ ಹಲವು ವರ್ಷಗಳಿಂದ ನಮ್ಮ ವ್ಯವಹಾರ
ನಡೆದಿದ್ದು ಗ್ರಾಹಕರ ವಿಶ್ವಾಸಾದರಗಳನ್ನು ಗಳಿಸಿದೆ.
ಮಾಲಕರು: ಬಿ. ಜೆ. ಮುತ್ತಗಿ

ಸಾಂಬರಾಣಾ ಮೆಲುದನಿಯಲ್ಲಿ ಹೇಳಿದ :—"ತಪತಿ, ನಾನಿನ್ನೂ ನಿನ್ನನ್ನು ಪಡೆದಿಲ್ಲ. ಆದರೆ ಈಗ ನಿನ್ನನ್ನು ನಾನು ಜಯಿಸಿಯೆ ತೀರಬೇಕಾಗಿದೆ."

ತಪತಿ ಚಡಪಡಿಸಿದಳು. ಅವನೇನು ನುಡಿದನೆಂಬುದು ಅವಳಿಗೆ ತಿಳಿಯಲೇ ಇಲ್ಲ.

ಅವನು ತಪತಿಯ ಕೈಗಳನ್ನು ಹಿಡಿದುಕೊಳ್ಳಲು ತನ್ನ ಕೈಗಳನ್ನು ಮುಂದೆ ಚಾಚುತ್ತಾ ಹೇಳಿದ :—"ನಾವಿನ್ನು ತೆರಳೋಣ !"

ತಪತಿ ಕೇಳಿದಳು "ಎಲ್ಲಿಗೆ ?"

"ಮನೆಗೆ, ಸಮಾಜದೆಡೆಗೆ, ಜಗತ್ತಿನೆಡೆಗೆ."

ಅವನ ಈ ಉತ್ತರದಿಂದ ತಪತಿ ಅಚ್ಚರಿಗೊಂಡಳು.

"ಗುರು ವಸಿಷ್ಠರು ಹೊರಗೆ ಬಾಗಿಲಲ್ಲಿ ನಮಗಾಗಿ ಕಾಯುತ್ತಿದ್ದಾರೆ." ಎಂದು ಅವನು ನುಡಿದಾಗ, ತಪತಿ ಮತ್ತಷ್ಟೂ ಚಕಿತಳಾದಳು.

ಅವಳು ತನ್ನ ತೋಳುಗಳಿಂದ ಅವನ ಕೊರಳನ್ನು ಸುತ್ತಿ ಅವನ ಎದೆಯ ಮಡಿಲಲ್ಲಿ ತನ್ನ ಮೊಗವನ್ನಿರಿಸಿದಳು.

ಕೊನೆಗೊಮ್ಮೆ ಅವರ ಇಡಿ ಜೀವನದ ತೃಷೆ ತಣಿದಂತೆ ಕಂಡಿತು. ಸಾಂಬರಾಣಾನ ನಗುಮುಖ ತೃಪ್ತಿಯಿಂದ ಬೆಳಗಿತು.

ಅವನು ಹೇಳಿದ :—"ತಪತಿ, ನೀನು ಶಿಕ್ಷಿಸಿ ಪ್ರೀತಿಸಬೇಕೆನ್ನುತ್ತೀ."

ತಪತಿ ತಕ್ಕ ಉತ್ತರವಿತ್ತಳು :—"ನೀವು ಪ್ರೀತಿಸಿ ಶಿಕ್ಷಿಸಬೇಕೆನ್ನುತ್ತೀರಿ."

ಸಾಹಿತ್ಯದಲ್ಲಿ ಸಹಜತೆ

ಶ್ರೀ. ಎನ್. ಭೀಮಭಟ್ಟ 'ಸಾಹಿತ್ಯಶಿರೋಮಣಿ' ಕನ್ಯಾನ ದ. ಕ.

卐

ಇಂದು ಸಾಹಿತ್ಯಪ್ರಪಂಚದಲ್ಲಿ 'ಸಹಜತೆ' 'ವಾಸ್ತವತೆ' ಎಂಬ ಕೂಗು ಹೆಚ್ಚಾಗಿ ಕೇಳುತ್ತಲಿದೆ. ಸಾಹಿತ್ಯದಲ್ಲಿ ಅವು ಬೇಕೇಬೇಕು; ಆದರೆ ಅವುಗಳ ಸಾಹಿತ್ಯದ ಸ್ವರೂಪ ಎಂತಹದಿರುವುದೆಂಬುದರ ವಿವೇಚನೆ ಈ ಲೇಖನದಲ್ಲಿದೆ.

卐

ಸಹಜತೆ, ನೈಜತೆ, ಸ್ವಾಭಾವಿಕತೆ ಮುಂತಾದ ಶಬ್ದಗಳನ್ನೆಲ್ಲಾ ಸಾಹಿತ್ಯಕ್ಷೇತ್ರದಲ್ಲಿ ಆಗಾಗ ಬಳಸುತ್ತಿರುವುದನ್ನು ಕಾಣುತ್ತೇವೆ. ವಿಮರ್ಶಕರಿಗಂತೂ ಈ ಶಬ್ದಗಳಿಲ್ಲದೆ ಗತ್ಯಂತರವಿಲ್ಲವೆನ್ನುವಷ್ಟು ಇವುಗಳ ಪ್ರಯೋಗ ನಡೆಯುತ್ತಿದೆ. ಸಹಜತೆ ಎಂದರೇನು ? ಸಾಹಿತ್ಯದಲ್ಲಿ ಅದಕ್ಕಿರುವ ಔಚಿತ್ಯ–ಆವಶ್ಯಕತೆಗಳೇನು ? ಎಂಬುದನ್ನು ವಿಚಾರಿಸುವುದು ಅತ್ಯಗತ್ಯ. ಆಗ ನಮಗೆ ಸಹಜತೆಯ ನೈಜಾರ್ಥವು ಗೋಚರಿಸಬಹುದು.

ಆದಿಯಲ್ಲಿ ಪ್ರತಿಯೊಂದೂ ಪ್ರಕೃತವಾಗಿರುತ್ತದೆ; ಆ ಮೇಲೆ ಸಂಸ್ಕೃತಿಯ ಪ್ರಭಾವ ಬೀಳುತ್ತದೆ. ಇದು ಜಗತ್ತಿನ ಕ್ರಮ. ಒಂದು ಕಲ್ಲು ಪ್ರಕೃತಿ. ಅದರಿಂದ ಕಡೆದ ಉತ್ತಮಮೂರ್ತಿ ಸಂಸ್ಕೃತಿ. ಅದು ಉತ್ತಮ ಕಲಾಕೃತಿಯೆನಿಸುತ್ತದೆ. ವಿನಾಯಕನ ಮೂರ್ತಿಯನ್ನು ಕಡೆಯ ಹೊರಟು ಅದು ಮಂಗನ ರೂಪವಾದರೆ ಅದೇ ವಿಕೃತಿ. ಪ್ರಕೃತಿ-ಸಂಸ್ಕೃತಿ-ವಿಕೃತಿಗಳ ಬಗ್ಗೆ ನಾವು ಈ ಉದಾಹರಣೆಯ ಮೂಲಕ ಅನಂತವಿಶ್ವವನ್ನು ವಿಚಾರಿಸಿನೋಡಬಹುದು. ಬಂಡೆಗಲ್ಲನ್ನು ನೋಡಿದಾಗ ಆಗುವುದಕ್ಕಿಂತ ಮಿಗಿಲಾದ ಆನಂದ, ನಮಗೆ ಅದರಿಂದ ರಚಿಸಿದ ಶಿಲ್ಪವನ್ನು ಕಂಡಾಗ ಆಗುತ್ತದೆ. ಬಂಡೆಗಲ್ಲಿನಲ್ಲಿ ತಜ್ಜಾತೀಯವಾದ ಸಹಜತೆಯಿದೆಯಾದರೂ, ಶಿಲ್ಪದಲ್ಲಿರುವ ಕಲಾವಿಶಿಷ್ಟ ಸಹಜತೆ ಅದರಲ್ಲಿಲ್ಲ. ಸಾಹಿತ್ಯದಲ್ಲೂ ಹಾಗೆಯೇ. 'ನಾಯಿಕೂತಿದೆ, ಬೆಕ್ಕುಓಡಿದೆ' ಎಂಬುದಾಗಿ ಇದ್ದುದನ್ನಿದ್ದಂತೆ ಹೇಳುವುದೇ ನೈಜಚಿತ್ರಣವೆಂದಾದರೆ, ಸಾಹಿತ್ಯದಲ್ಲಿ ವೈಶಿಷ್ಟ್ಯವೆಲ್ಲುಳಿಯಿತು ? ಸಾಹಿತ್ಯದಲ್ಲಿ ಕಂಡುಬರುವ ಸಂಸ್ಕೃತಿಯ ಪ್ರಭಾವವೇನಾಯಿತು ? ಇದೇ ಪ್ರಮುಖ–ಪ್ರಶ್ನೆಯನ್ನುತ್ತರಿಸಿದಾಗ ಸಹಜತೆಯ ಸ್ವರೂಪದ ಅರಿವಾಗುತ್ತದೆ.

ಕಲಾವಿದನೊಬ್ಬ ವನಿತೆಯೊಬ್ಬಳನ್ನು ಚಿತ್ರಿಸುತ್ತಾನೆನ್ನಿ. ಆ ಚಿತ್ರದಲ್ಲಿ ಆತನು ಕೇವಲ ಸ್ತ್ರೀಯ ಪ್ರಕೃತಿ, ಅಂಗೋಪಾಂಗಗಳನ್ನಷ್ಟೆ ಚಿತ್ರಿಸಿದರೆ ಸಾಲದು. ಆಕೆಗೊಂದು ಸೀರೆ ಉಡಿಸಿ ಕುಪ್ಪಸತೊಡಿಸಿ, ಬೈತಲೆಹಾಕಿ, ಅಲಂಕಾರಮಾಡಿ, ಸೌಂದರ್ಯರೂಪಿಸಿದಾಗ ಸ್ತ್ರೀ–ಪ್ರಕೃತಿಯ ನಿರ್ಮಾಣವನ್ನು ಸಹಜವಾಗಿ ಮಾಡಿದಂತಾಯಿತು. ಅಷ್ಟು ಮಾಡಿದ ಮಾತ್ರಕ್ಕೆ ಆಕೆ ಸ್ತ್ರೀತ್ವವನ್ನು ಕಳೆದುಕೊಳ್ಳುವುದಿಲ್ಲ. ಪ್ರಕೃತಿಚಿತ್ರವೆಂದು ನಗ್ನವಾಗಿ ಚಿತ್ರಿಸುವುದು ಅಸಭ್ಯ. ಸುಂದರಿಯೊಬ್ಬಳು ನಮ್ಮ ಮನೋದೃಷ್ಟಿಗೆ ಗೋಚರಿಸಿದಾಗ ಆಕೆಯ ಶರೀರದೊಂದಿಗೆಬೆರೆತ ಸಹಜಸಂಸ್ಕಾರಗಳು, ಮುತ್ತೈದೆತನದ ಲಕ್ಷಣಗಳೆಲ್ಲಾ ಗೋಚರಿಸುವುವು ತಾನೇ ? ಅಲ್ಲಿ ಸಂಸ್ಕೃತಿಯೂ ಇದೆ, ಸಹಜ ಸುಂದರವಾದ ಸ್ತ್ರೀ ಚಿತ್ರವೂ ಇದೆ. ಆ ಚಿತ್ರದಲ್ಲಿ ಅಲ್ಲಲ್ಲಿಗೆ ಬೇಕಾದ ಬಣ್ಣಗಳನ್ನು ಕಲಾವಿದನು ತನ್ನ ಕುಂಚದಿಂದ ಹಾಕಿ ಚೆನ್ನಾಗಿ ರೂಪಿಸಿಕೊಳ್ಳಬೇಕು. ಆಗಲೇ ಅದು ಭವ್ಯ ಕಲಾಕೃತಿಯಾಗುತ್ತದೆ. ಉತ್ತಮ ಕಲಾಕೃತಿಗೆ ಸಹಜತೆ ಅತ್ಯವಶ್ಯವೆಂಬುದು ಇದರಿಂದ ದೃಢವಾಗುವುದಿಲ್ಲವೆ ? ಮಾತ್ರವಲ್ಲದೆ, ನಗ್ನಚಿತ್ರವೇ ಪ್ರಕೃತಿಚಿತ್ರವೆಂಬ ವಾದವೂ ನಿರಸ್ತವಾಯಿತಲ್ಲವೆ ? ಸುಸಂಸ್ಕೃತ ಚಿತ್ರದಲ್ಲೇ ಸಹಜತೆ ಇದೆ—ಎಂಬುದಕ್ಕೆ ಬೇರೆ ಉಪಪತ್ತಿ ಬೇಡ ತಾನೆ ?

ಸುಂದರವಾಗಿ ರಸಪ್ರಧಾನವಾಗಿ ಹೇಳುವುದೇ ಸಾಹಿತ್ಯದ ವೈಶಿಷ್ಟ್ಯ. ಸೌಂದರ್ಯವು ಅಸಹಜವಲ್ಲ. ಸಹಜವಾಗಿ ಹೇಳುವುದೆಂದರೆ ಮನಮುಟ್ಟುವಂತೆ ತಿಳಿಸುವ ಕೌಶಲವೇ ಆಗಿರುತ್ತದೆ. ನಮಗೆ ಮುಖಪರಿಚಯವಿಲ್ಲದವನೊಬ್ಬನನ್ನು ಅವಶ್ಯ ಕಾಣಬೇಕಾಗಿದೆಯೆನ್ನಿ. ಸಾವಿರಾರು ಜನರ ಮಧ್ಯೆ ಅವನನ್ನು ಗುರುತಿಸಬೇಕಾದರೆ, ಆತನ ಸಂಪೂರ್ಣ ಆಕಾರಪರಿಚಯ–ವಿಶಿಷ್ಟ ಬಾಹ್ಯಗುಣಗಳ ಅರಿವು ನಮಗೆ ಬೇಕೇ ಬೇಕು. ಆತನನ್ನು—ಪರಿಚಿತರು ನಮಗೆ ಸ್ಪಷ್ಟವಾಗಿ ಬಣ್ಣಿಸಿದಾಗ—ಗುರುತಿಸಲು ಕಷ್ಟವಾಗುವುದಿಲ್ಲ. ಆ ವರ್ಣನೆ ವ್ಯತಿಕ್ರಮವಾದಲ್ಲಿ ಒಬ್ಬನ ಬದಲು ಮತ್ತೊಬ್ಬನನ್ನು ಮಾತನಾಡಿಸಿ ನಾವು ತಪ್ಪಿಬೀಳುತ್ತೇವೆ. ಅಂತಹ ತಪ್ಪಿಗೆ ಎಡೆಕೊಡದಂತೆ ವ್ಯಕ್ತಿ ಬದಲಾವಣೆಯಾಗದಂತೆ ಆತನ ಆಕಾರಸಂಸ್ಥಾನಪರಿಚಯ ಅತ್ಯಗತ್ಯ. ಸಹಜತೆಯ ಪ್ರಯೋಜನ ಲೌಕಿಕವ್ಯವಹಾರದಲ್ಲಿ ಹೀಗೆ ಕಂಡುಬಂದರೆ, ಸಾಹಿತ್ಯದಲ್ಲಿ ಸಹೃದಯಹೃದಯಕ್ಕೆ ಅದರ ಪರಿಣಾಮ ಚೆನ್ನಾಗಿ ಆಗುತ್ತದೆ. ಉದಾಹರಣೆಗಾಗಿ, ನಾವು ಮಹಾಕವಿ ಕಾಳಿದಾಸನ ಮೇಘದೂತವನ್ನು ನೋಡಬಹುದು: ಕಾಂತಾವಿರಹಕಾತರನಾದ ಯಕ್ಷನು, ತನ್ನಪ್ರಿಯತಮೆಗೆ ಮೇಘದ ಮೂಲಕ ಸಂದೇಶವನ್ನು ಕಳುಹಬಯಸುತ್ತಾನೆ. ಮೊದಲಾಗಿ ಮೇಘಕ್ಕೆ ಸರಿಯಾದ ದಾರಿಯನ್ನು

ತಿಳಿಸುತ್ತಾನೆ. ಹೋಗಬೇಕಾದ ದಾರಿತಿಳಿಸುವುದರೊಂದಿಗೆ, ಅಲ್ಲಲ್ಲಿ ತಂಗಬೇಕಾದ ಸ್ಥಾನಗಳು, ಮಾಡಬೇಕಾದ ಕಾರ್ಯ, ಹೆಜ್ಜೆಹೆಜ್ಜೆಗೂ ಇರುವ ಪ್ರೇಕ್ಷಣೀಯ ಸ್ಥಳ, ಅಲ್ಲಲ್ಲಿಯ ಸ್ಥಳವೈಶಿಷ್ಟ್ಯಗಳನ್ನುಹೇಳಿ, ದಾರಿತಪ್ಪದಂತೆ, ಎಲ್ಲಾ ವಿಚಾರಗಳೂ ಚಿತ್ತಭಿತ್ತಿಯಲ್ಲಿ ಅಚ್ಚಳಿಯದೆ ಉಳಿಯುವಂತೆ ಚೆನ್ನಾಗಿ ವಿವರಿಸುತ್ತಾನೆ. ಓದುಗನೂ ಆಗ ಆ ಮೇಘದೊಂದಿಗೆ ಹಾರುತ್ತಿರುತ್ತಾನೆ. ಸಕಲವೈಶಿಷ್ಟ್ಯಪ್ರಮುಖ- ಸಂಕೇತಗಳನ್ನೆಲ್ಲಾ ಕವಿಯು ಹೃದಯಸ್ಪರ್ಶಿಯಾಗಿ ನಿರೂಪಿಸಿರು-ವುದು ಸತ್ಯಾನುಭವಕ್ಕೆ ಸಹಕಾರಿಯಾಗಿದೆ. ಆ ದಾರಿಯಲ್ಲಿ ಮುಂದು-ವರಿದು ಹೋಗಿ, ಕುಬೇರನ ರಾಜಧಾನಿಯನ್ನು ಸೇರಿದರೆ, ಅಲ್ಲಿ ಯಕ್ಷನ ಮನೆಯಿದೆ ಅದೆಲ್ಲಿದೆಯೆಂದು ಮೇಘ ಹೇಗರಿಯಬೇಕು ? ನಮಗೇನು ಗೊತ್ತು ? ಇದಕ್ಕಾಗಿ ಅದರ ಗುರುತು ಬೇಕು. "ಕುಬೇರನ ಮನೆಯ ಉತ್ತರಕ್ಕೆ ಇಂದ್ರಚಾಪದಂತೆ ದೂರದಿಂದಲೇ ಕಾಣಬಹು-ದಾದ ತೋರಣ! ಸನಿಯದಲ್ಲೇ ಬಾಲಮಂದಾರವೃಕ್ಷ! ಮರಕತ ಶಿಲಾಖಚಿತ ಸೋಪಾನಗಳುಳ್ಳ ಜಲಾಶಯ! ವೈಡೂರ್ಯನಾಲಗಳಲ್ಲಿ ಅರಳಿದ ಬಂಗಾರದ ಕಮಲಗಳು! ಮಳೆಗಾಲ ಬಂದರೂ ಅಲ್ಲಿಂದ ಹಂಸಗಳು ಮಾನಸಕ್ಕೆ ಓಡಿ ಹೋಗುವುದಿಲ್ಲ! ಇಂತಹ ವೈಶಿಷ್ಟ್ಯ-ವಿದೆ ಆ ಜಲಾಶಯಕ್ಕೆ! ಇನ್ನು ಅದರ ತಟದಲ್ಲಿ ಕನಕಕದಲೀವೇಷ್ಟನ; ಪ್ರೇಕ್ಷಣೀಯವಾದ ಕ್ರೀಡಾಶೈಲ! ರಕ್ತಾಶೋಕ-ಬಕುಲವೃಕ್ಷಗಳು! ಅವುಗಳ ನಡುವೆ ಬಂಗಾರದ್ದೊಂದು ವಾಸಯಷ್ಟಿ" ಇತ್ಯಾದಿ ಲಕ್ಷಣ-ಗಳನ್ನು ಯಕ್ಷನು ಹೇಳುತ್ತಾನೆ. ಆ ಮೇಲೆ ಆಕೆಯನ್ನು ಕಾಣುವ ಕಾಲ, ಕ್ರಮಗಳನ್ನು ಹೇಳಿ ಸ್ವರೂಪವರ್ಣನೆಮಾಡಿ ಸಂದೇಶ ತಿಳಿಸುತ್ತಾನೆ. ಸ್ವರೂಪವರ್ಣನೆ, ಮನೆಯ ಲಕ್ಷಣಗಳೆಲ್ಲಾ ತಪ್ಪಿ, ಮೇಘ ಸೋತುಹೋಗಬಾರದೆಂದು, ಅದೆಷ್ಟು ಜಾಗರೂಕತೆ ಆ ಯಕ್ಷನಿಗೆ! ಯಕ್ಷನ ಹೆಂಡತಿಯೆಂದು ಕಾಣಹೋಗಿ ಆಕೆ ಮತ್ತೊಬ್ಬಳಾದ-ರೇನು ಗತಿ? ಅದಕ್ಕಾಗಿ ಕಣ್ಣಿಗೆ ಕಟ್ಟುವಂತೆ, ಸಹಜವಾಗಿ ನಿರೂಪಿಸಿದ ಕ್ರಮ ಅನುಕರಣೀಯವಾಗಿದೆ. ಸರಸವಾಗಿದೆ. ಆ ಸೌಂದರ್ಯ-ವೆಷ್ಟು? ಆನಂದವೆಷ್ಟು? ವಿರಹಜೀವನದ ನೈಜಚಿತ್ರವಿಲ್ಲಿದೆ. ಇದು ಸಹೃದಯಹೃದಯಸ್ಪರ್ಶಿಯಾಗದಿರದು. ಹೀಗೆ ಇದು ಸತ್ಯಸುಂದರ-ವಾದ ಕೃತಿ.

ವರ್ಣ್ಯವಸ್ತುವಿನ ಕುರಿತು ಉಂಟಾಗುತ್ತಿರುವ ಭಾವತುಮುಲ-ಗಳು, ರಸತಾದಾತ್ಮ್ಯ-ರಸಾನುಭವಗಳಿಗೆಲ್ಲಾ ಪ್ರಕೃತಿವಸ್ತು ವಾತಾ-ವರಣ ವ್ಯಕ್ತಿಗಳು ಸಹಜತೆಯ ಸಾಕ್ಷ್ಯವೊದಗಿಸಬೇಕು. ಆಗ ಸಹಜತೆಯ ಪ್ರಯೋಜನ ಕಂಡುಬರುತ್ತದೆ. 'ಇದು ನಿಜ' ಎಂಬು-ದಾಗಿ ಸಹೃದಯನು ನಂಬದೆ ಹೋದರೆ ರಸಾವಿರ್ಭಾವಕ್ಕೆ ಸರ್ವಥಾ ಅವಕಾಶವಿಲ್ಲ. 'ಇದು ನಿಜ' ಎಂಬುದಾಗಿ ಬಾಯಿಮಾತಿನಿಂದ ಕವಿ ಹೇಳಿದರೆ ಸಾಲದು. ಉದ್ದುದ್ದ ವಣ್ಣುಡಿ ಬರೆದರೂ ಸಾಲದು. ಮಂತ್ರಿಗಳ ಇಲ್ಲವೇ ಎಂ ಎಲ್. ಎ.—ಎಂ. ಪಿ ಗಳ 'ಸರ್ಟಿಫಿಕೇಟ್' ಕೊಡಿಸಿದರೂ ಆಗದು. ಅಲ್ಲಿ ನೈಜತೆ ಕಂಡುಬರುವಂತೆ ಆತ ಚಿತ್ರಿಸ-ಬೇಕು. ಆತನ ಚಿತ್ರಣವೆಷ್ಟು ಸಹಜವಾಗಿರಬೇಕು. ಆಗ ಸಾಹಿತ್ಯ-ದಲ್ಲಿ ಸತ್ಯವೂ ಸೌಂದರ್ಯವೂ ರಸಾನಂದವೂ ಕೂಡಿ ತ್ರಿವೇಣೀ-

ಹಳ್ಳಿ-ಪಟ್ಟಣಗಳಲ್ಲಿ, ಬೀದಿ-ಬೀದಿಗಳಲ್ಲಿ

ಪ್ರಚಾರವಾಗಬೇಕಾಗಿದ್ದರೆ,

- ಧ್ವನಿವಾಹಕ ಯಂತ್ರದ ಮೂಲಕ
- ಉತ್ತಮ ಚಿತ್ರಗಳ ಮೂಲಕ
- ಮ್ಯಾಜಿಕ್ ಲ್ಯಾಂಟರ್ನ್-ಸ್ಲೈಡುಗಳ ಮೂಲಕ

ನಾವು ನಿಮ್ಮ ಯಾವುದೇ ಸರಕಿನ ಪ್ರಚಾರ ಮಾಡುವೆವು.

ಅರವಿಂದ ಪಬ್ಲಿಸಿಟಿ ಅ್ಯಂಡ್ ಪೇಂಟಿಂಗ್ ವರ್ಕ್ಸ್

ಗಾಂಧಿಚೌಕ, ಧಾರವಾಡ

ಸಂಗಮವಾಗಿ ಹರಿಯುತ್ತದೆ. ಆ ರಸಗಂಗೆಯಲ್ಲಿ ಸತತಸ್ನಾನ-ಗೈಯಲು ಸಹೃದಯನಿಗೆ ಅತ್ಯಂತ ಆನಂದವಿದೆ.

ಭಿನ್ನ ಭಿನ್ನ ರಾಷ್ಟ್ರ, ಭಿನ್ನ ಭಿನ್ನ ಜನತೆಗಳ ಸಂಸ್ಕೃತಿ-ಆಚಾರ-ವಿಚಾರ-ವ್ಯವಹಾರಗಳು ಭಿನ್ನಭಿನ್ನವಾಗಿರುವುದು ಸಹಜ. ಒಂದು ಸಮಾಜದ ನಡೆವಳಿಗೆಯನ್ನು ಮತ್ತೊಂದು ಅನ್ವಯಿಸುವುದು ತಪ್ಪು. ಅವುಗಳ ಪ್ರತ್ಯೇಕ ಅಸ್ತಿತ್ವ, ಪ್ರತ್ಯೇಕ ತಿಳಿವಳಿಕೆ ಅತ್ಯವಶ್ಯ. ತನಗೆ ಚೆನ್ನಾಗಿ ಗೊತ್ತಿರುವ ವಿಚಾರವನ್ನೇ ಬರೆಹಗಾರನು ಬರೆದಾಗ ಅದು ಸಹಜವಾಗಿ ಬರಬಹುದು. ಕಲ್ಪನೆಯ ರಾಜ್ಯಕ್ಕೆ ಕಾಲಿಟ್ಟಾಗ, ಊಹೆಯನ್ನು ಶರಣಾದಾಗ ಅಸಹಜತೆ ತಲೆಹಾಕಿಯೇ ಹಾಕುತ್ತದೆ. ಕನಸಿನಲ್ಲಿ ಕಾಣುವ ಸುರಭೋಗ, ಕ್ಷಣಿಕಾನಂದಗಳಷ್ಟೇ ಆ ನಿರ್ಮಿ-ತಿಯು ಸತ್ಯವೆನಿಸೀತು. ಬರೆಹಗಾರನಿಗೆ ಪೂರ್ಣಪರಿಜ್ಞಾನವಿದ್ದು, ಯಾವುದೊಂದು ಅಂಶವನ್ನೂ ಮೊಟಕುಮಾಡದೆ, ವಿಕೃತಗೊಳಿಸದೆ ಬರೆದಾಗ, ಆ ವಿಚಾರವು ಸ್ಪಷ್ಟವಾಗಿ ಓದುಗನ ಮನೋದರ್ಪಣದಲ್ಲಿ ಪ್ರತಿಬಿಂಬಿಸುತ್ತದೆ. ತಾಜಮಹಲನ್ನಾಗಲಿ, ಬೇಲೂರಿನ ಶಿಲ್ಪಕಲಾ-ವೈಭವವನ್ನಾಗಲಿ, ಮಲೆನಾಡುಪ್ರದೇಶವನ್ನಾಗಲಿ, ಗ್ರಾಮಾಂತರಗಳ ಜೀವನವನ್ನಾಗಲಿ, ಕಾಶ್ಮೀರದ ಪ್ರಕೃತಿಸೌಂದರ್ಯವನ್ನಾಗಲಿ ಬರೆಹಗಾರನು ಸಹಜವಾಗಿ ಚಿತ್ರಿಸಿದಾಗ, ಅವುಗಳನ್ನೋದಿದ ರಸಿಕನಿಗೆ ಅವುಗಳ ನೈಜಕಲ್ಪನೆ ಬರಲು ಸಾಧ್ಯವಿದೆ. ಬರೆಹಗಾರನಿಗೆ ಅವುಗಳ ಸೂಕ್ಷ್ಮಪರಿಜ್ಞಾನವಿದ್ದಾಗ ಯಥಾವತ್ತಾದ ಚಿತ್ರಣ ಸಿಗುತ್ತದೆ. ಅದರಿಂದ ಓದುಗರು ಆಕೃಷ್ಟರಾಗುತ್ತಾರೆ. ಸಹಜತೆಯಲ್ಲಿ ಇಂತಹ ಆಕರ್ಷಣೆಯಿದೆ. ಆ ಆಕರ್ಷಣೆಯೇ ಲೇಖಕನಿಗೆ ಬೇಕಾದ ಅವಶ್ಯ ಸಾಮಗ್ರಿ. ಅದರಿಂದಲೇ ಆತನು ಕೃತಿಯ ಭವ್ಯತೆಯನ್ನು ಹೆಚ್ಚಿಸು-ತ್ತಾನೆ.

ಉತ್ತಮಲೇಖಕನು ವಸ್ತುವೈವಿಧ್ಯ—ವಿಚಾರವೈಶಾಲ್ಯ—ಅನುಭವ ಬಾಹುಲ್ಯಗಳಿಂದಾಗಿ ವಿವಿಧಕೃತಿಗಳನ್ನು ಹೊರತರುತ್ತಾನೆ. ಶ್ರೀಮಂತರ ವೈಭವಜೀವನವನ್ನು ಚಿತ್ರಿಸಿದ, ಮುಂಬಯಿಯಂತಹ ಮಹಾನಗರದ ಜನಜೀವನವನ್ನು ನಿರೂಪಿಸಿದ ಬರೆಹಗಾರನು, ಹಳ್ಳಿಗಳ

ಕೂದಲನ್ನು ಸೊಂಪಾಗಿ ಮೃದುವಾಗಿ ಗುಂಗುರು ಗುಂಗುರಾಗಿ ನೀಳವಾಗಿ ಬೆಳೆಸುತ್ತದೆ

ದಿ ಸದ್ವೈದ್ಯಶಾಲಾ ಲಿ., ನಂಜನಗೂಡು

ಬ್ರಾಂಚುಗಳು: ಬೆಂಗಳೂರು. ಮೈಸೂರು. ಮಂಗಳೂರು. ಹುಬ್ಬಳ್ಳಿ

ಯಾವಾಗಲೂ ನಂಜನಗೂಡು ಟೂತ್ ಪೌಡರ್ ಉಪಯೋಗಿಸಿ

ಗಿರಿ-ತೊರೆಗಳ ಗ್ರಾಮಜೀವನದ ಚಿತ್ರವನ್ನು, ಅನುಭವಿಯಾದಲ್ಲಿ ಧಾರಾಳಕೊಡಬಹುದು. ಆದರೆ ಶ್ರೀಮಂತರ ಬೃಹನ್ಮಂದಿರಗಳ ವೈಭವವನ್ನು ವರ್ಣಿಸಿದಾಗ ಮತ್ತು ಬಡವರ ಗುಡಿಸಲುಗಳ ದಾರಿದ್ರ್ಯದ ವರ್ಣನೆಯಿತ್ತಾಗ ಆತನ ನಿರೂಪಣಾಶಕ್ತಿಯ ಪರೀಕ್ಷೆಯಾಗುತ್ತದೆ. ಎರಡನ್ನೂ ಆತನು ಚೆನ್ನಾಗಿ ಬಲ್ಲವನಾದರೆ ಮಾತ್ರ ಎರಡೂ ಸಹಜವಾಗುತ್ತದೆ. ಹಳ್ಳಿಗಳ ಪರಿಜ್ಞಾನವಿಲ್ಲದೆ ಅವುಗಳ ನೈಜಚಿತ್ರವನ್ನು ಕೊಡಲು ಸಾಧ್ಯವಿಲ್ಲ. ಕೃತ್ರಿಮಚಿತ್ರವನ್ನು ಸಹೃದಯನು ಒಪ್ಪಲಾರ. ಹರುಕುಗುಡಿಸಿಲಿನ ದರಿದ್ರದಾರುಣ ಜೀವನವನ್ನು ಸಹಜವಾಗಿ ಬಣ್ಣಿಸಿದಾಗ ಸಹೃದಯನ ಹೃದಯ ಸತ್ಯವನ್ನೊಪ್ಪಿಕೊಳ್ಳುತ್ತದೆ. ಸೌಂದರ್ಯಾಸ್ವಾದನೆ ನಡೆಯುತ್ತದೆ. ಶೋಕತಪ್ತಜೀವನದ ಮೂಕವೇದನೆಯನ್ನು ಕಂಡಾಗ ಸೌಂದರ್ಯವೆಲ್ಲಿ? ಆನಂದವೆಲ್ಲಿ?—ಎಂಬ ಪ್ರಶ್ನೆ ಬಂದೀತು. ಸಹೃದಯನ ಹೃದಯವು ಕರಗಿಹೋದರೆ ಅದೇ ಸಹಜತೆಯ ಪರಿಣಾಮದ ಕಾವ್ಯಾನಂದ ಚರ್ವಣೆ. ಸಹಜತೆಯಿರುವಲ್ಲಿ ಸೌಂದರ್ಯವಿದೆ. ಆನಂದವಿದೆ. ಅದು ಸಾಹಿತ್ಯಾನಂದದ ವೈಶಿಷ್ಟ್ಯ. ಪ್ರಣಯ, ಹಾಸ್ಯ, ಧೈರ್ಯ, ಭೀತಿ, 'ದುಃಖ, ರೌದ್ರ, ಅದ್ಭುತ, ಬೀಭತ್ಸ ಶಾಂತಿ ಪ್ರತಿಯೊಂದರಲ್ಲೂ ಆನಂದವುಂಟು. ಅದು ಸಾಹಿತ್ಯಲೋಕದ ವೈಶಿಷ್ಟ್ಯ.

ಕಥೆ, ಕಾದಂಬರಿ, ಕಾವ್ಯ, ನಾಟಕ ಯಾವುದರಲ್ಲಾದರೂ ಸಹಜತೆ ಬೇಕೇ ಬೇಕು. ಏನೇನೋ ಬರೆಯುತ್ತಾ ಹೋದರೆ, ಅದೇನೇನೋ ಆಗಿಬಿಡುವುದು ನಿರ್ಣಯ. ಒಂದು ಘಟನೆ ಹೀಗೆ ನಡೆಯಬಲ್ಲುದೆ? ಎಂಬುದಕ್ಕೆ ಆ ಕೃತಿಯಲ್ಲೇ ಉತ್ತರಸಿಗಬೇಕು. ಅಂತಹ ಪ್ರಶ್ನೆಗೆ ಅವಕಾಶ ಬಾರದಿದ್ದರೆ ಮತ್ತಷ್ಟು ಒಳಿತು. ಪ್ರಶ್ನೆ ಬಂದಾಗಲೂ ಪರಿಹಾರ ದೊರೆಯದಿದ್ದರೆ ಹೇಗೆ? 'ನಡೆದ ಘಟನೆಯೊಂದರ ಆಧಾರದಿಂದ ಬರೆದುದೆಂದು ಕೆಲವರು ಹೇಳಿಕೊಳ್ಳುತ್ತಾರೆ. ಅಲ್ಲಿ ಹಾಗೆ ನಡೆಯುವ ಪ್ರಮೇಯವೇ ಇಲ್ಲವಾದರೂ, ಆ ಮಾತನ್ನೋದಿದ ಮೇಲೆ "ಅದು ಸಹಜ" ಎಂದು ಓದುಗರು ತೆಪ್ಪಗಿರಬೇಕು ಎಂದು ಕೆಲವರ ಭಾವನೆ ಇರಬಹುದು. ಆದರೆ, ನಿರೂಪಣೆ ಅಸಹಜವಾಗಿ ಅಸಂಭವವಾಗಿ ಸತ್ಯಾಪೇತವಾಗಿದ್ದರೆ ಅದರಿಂದೇನೂ ಫಲವಿಲ್ಲ. 'ತಾನು ಯಾರನ್ನು ದ್ವೇಶಿಸಿಯೂ ಬರೆದುದಲ್ಲ" ಎಂದು ಕೆಲವರು ಹೇಳಿಕೊಳ್ಳುತ್ತಾರೆ, ಅದು ಕೆಲವರ ಜೀವನಕ್ಕೆ ಹೊಂದುವಂತಿರುವುದರಿಂದ ಹಾಗೆ ಬರೆದುದಾಗಿ ಜನ ಭಾವಿಸಬೇಕೆಂದೂ, ಅದು ಸಹಜಚಿತ್ರವೆಂದಾಗಲೆಂದೂ ಅವರ ಆಶಯವಿರಬಹುದು. ಅದಕ್ಕೆ ಈ ತಂತ್ರ ಬೇಡ.

ಸಮಾಜವನ್ನನುಲಕ್ಷಿಸದವನು ಸಮಾಜದ ಚಿತ್ರ ತೆಗೆಯಲು ಸಾಧ್ಯವಿಲ್ಲ. ಕುರುಡರು ಆನೆಯನ್ನು ಮುಟ್ಟಿ ಬೇರೆ ಬೇರೆ "ರಿಮಾರ್ಕು" ಬರೆದರಂತೆ. ಒಬ್ಬನಿಗೆ ಗೋಡೆಯಾದರೆ, ಮತ್ತೊಬ್ಬನಿಗೆ ಹಲಗೆ, ಬೇರೊಬ್ಬನಿಗೆ ಗೆರಸೆ, ಮಗುದೊಬ್ಬನಿಗೆ ಕಂಭ, ಇನ್ನೊಬ್ಬನಿಗೆ ಇನ್ನೊಂದು—ಎಂದಾಗಿತ್ತು ಆನೆಯ ರೂಪ! ಆನೆಯನ್ನು ನೋಡದೆ ನೈಜಚಿತ್ರ ಹೇಗೆ ತಿಳಿಯಬೇಕು? ದನವನ್ನರಿಯದವನು ದನದ ಚಿತ್ರ ಬರೆಯಲರ್ಹನಲ್ಲ. ಕೋಣವನ್ನು ನೋಡಿದ್ದೇನೆಂದು ಬೆಕ್ಕಿನ ಚಿತ ಬರೆದು ಬೆಕ್ಕಿಗೂ ಕೋಡು ಬರಿಸಿದರಾದೀತೆ? ಅದಕ್ಕಾಗಿ ಅವುಗಳ ನಿಜ ಪರಿಜ್ಞಾನ ಬೇಕು. ಸಮಾಜಪರಿಸರಗಳನ್ನುದ್ವೇಶಿಸದೆ ಯಾವ ಉತ್ತಮ ಕೃತಿಯೂ ಸರ್ವಥಾ ಇರಲಾರದು. ಒಂದು ಕಥೆಯನ್ನೋದಿದರೆ 'ಈ ವಸ್ತು ತನ್ನ ಸುತ್ತು-ಮುತ್ತಲಿನದೇ ಆಗಿದೆ. ಇದು ನಿಜ' ಎಂದು ಓದುಗನ ಅಂತರಾತ್ಮ ಹೇಳಬೇಕು. ಆಗ ಅದು ಸಹಜ-ಚಿತ್ರವೆನ್ನಲು ಆಕ್ಷೇಪವಿಲ್ಲ.

ಸಾಹಿತ್ಯದಲ್ಲಿ ಸ್ವಭಾವೋಕ್ತಿಯೆಂಬ ಅಲಂಕಾರವೊಂದಿದೆ. ಸ್ವಭಾವವನ್ನು ಸರಸವಾಗಿ ಹೇಳುವುದರಿಂದಲೇ ಸ್ವಭಾವೋಕ್ತಿಗೆ ಮನ್ನಣೆಯಿದೆ. "ನಸುಗೆಂಪಾದ ಕೊಕ್ಕು, ಹಸುರು ಹಾಗೂ ಮೃದುವಾದ ಪಕ್ಕಗಳು, ತ್ರಿವರ್ಣರಂಜಿತ ಕಂಠ, ಮಂಜುಲವಾಣಿ ಇವುಗಳುಳ್ಳ ಪಕ್ಷಿ ಎಂದಿಷ್ಟು ಹೇಳಿದಾಗ, ಅದು ಗಿಳಿಯೆಂದು ಯಾರೂ ಹೇಳದೆ ನಾವು ತಿಳಿದುಕೊಳ್ಳುತ್ತೇವೆ. ಇದು ಸ್ವಭಾವೋಕ್ತಿಯ ವೈಶಿಷ್ಟ್ಯ. ಸಾಹಿತ್ಯದಲ್ಲಿ ಸಹಜತೆಯು ನಿರೂಪಿತವಾಗಲು, ಸ್ವಭಾವೋಕ್ತಿಯು ಬಹಳ ಸಹಕಾರಿಯಾಗಿರುತ್ತದೆ. ಸ್ವಭಾವೋಕ್ತಿಯೇ ಕಾವ್ಯಜೀವಿತವೆಂದೊಬ್ಬರು ಹೇಳಿದ ಮಾತು, ಲಾಕ್ಷಣಿಕವಾಗಿ ಸಹಜತೆ-ಸರಸತೆಯ ಪ್ರತಿಪಾದನೆಯೇ ಆಗಿರುತ್ತದೆ.

ಹಾಗಿದ್ದರೆ ಅತಿಶಯೋಕ್ತಿಯು ರಸವಿಘಾತುಕವಾದೀತೆ?—ಎಂಬ ಪ್ರಶ್ನೆಯನ್ನು ಅಲಂಕಾರವಿವೇಚನಾಶೂನ್ಯರು ಕೇಳಲೂ ಬಹುದು. ಕಾವ್ಯದಲ್ಲಿ ಕೆಲವೆಡೆ ಅತಿಶಯೋಕ್ತಿ ಬಂದರೂ ಸಹಜತೆಗೆ ಕುಂದಿಲ್ಲ. ಸ್ವಭಾವತಃ ಸುಂದರವಾದುದನ್ನು ರಮ್ಯವಾಗಿ ಅತಿಶಯವಾಗಿ ಹೊಗಳಿದರೆ ಅಲ್ಲಿ ಕವಿಚಮತ್ಕೃತಿಯು, ಸಹಜತೆಯ ಮೇಲಿನ ಪ್ರೇಮಾತಿಶಯದಿಂದ ಸುಂದರವಾಗಿದೆ ಎಂದೇ ತಿಳಿಯಬೇಕು. ಸತ್ಯ-ವಾಸ್ತವಾಂಶಗಳ ಹಿನ್ನಲೆಯಿಲ್ಲದೆ ಯಾವುದನ್ನೂ ಕವಿ ನಿರೂಪಿಸುವುದಿಲ್ಲ ತಾನೆ? ಒಟ್ಟಿನಲ್ಲಿ ಸಾಹಿತ್ಯದಲ್ಲಿ ಸಹಜತೆ ಅತ್ಯವಶ್ಯವೆಂದು ಇನ್ನು ಬೇರೆ ಹೇಳಬೇಕಾಗಿಲ್ಲ. ಸತ್ಯ-ಸೌಂದರ್ಯ ಸ್ವಾರಸ್ಯಗಳೆಲ್ಲಾ ಸಹಜತೆಯನ್ನೇ ಅವಲಂಬಿಸಿವೆ. ಎಂದ ಮೇಲೆ ಮತ್ತೇನು ಬೇಕು?

ಕ್ರಾಂತಿ !

ಶ್ರೀ. ರಂಗರಾವ ದೇಶಪಾಂಡೆ, ಆಲದಕಟ್ಟಿ

ಎಲೆ ಕ್ರಾಂತಿ ಭಲೆಭಲರೆ ನಿನ್ನದ್ರುತಗತಿಗೆ—
ಸಲೆ ವೈರಿ ನೀನಾದೆ ಜಗದ ಸುಸ್ಥಿತಿಗೆ !

ಸುಸ್ಥಾರಣೆಯೆಂದು ಸಿನ್ನೊಡೆಯು ಕಲಿರಾಯು
ಇಟ್ಟು ಮೋಹಕ ಪೆಸರನಟ್ಟಿಹನು ಜಗಕಿಂದು—
ಕೊಟ್ಟಿಹನೆ ಆಣತಿಯ ಲೋಕಸಂಪನ್ನತೆಯು
ಸುಟ್ಟುಬಿಡೆ—ಅವನಿಷ್ಟ ಸಾಧಿಸಲಿ ಎಂದು ? ೧

ಸತ್ಯ–ಔಚಿತ್ಯಗಳನಸ್ತಮಿಸಿ ಜಗದೊಳು ಅ-
ಸತ್ಯ–ಅಪ್ರಾಮಾಣಿಕತೆಗಿತ್ತೆ ಇಂಬು—
ಎತ್ತ ನೋಡಿದಡತ್ತ ಹೂಂಕಾರ ಹಾಕಾರ
ನಿತ್ಯಗಡುಚಿಕ್ಕುತಿದೆ ಕದನಕೊಂಬು ! ೨

ತವ ಪ್ರತಾಪದ ಭೇರಿ ಮೊಳಗುತಿದೆ ಮನೆ-ಮಠದಿ
ಕುವಿಚಾರ ಉಗ್ಗಡಿಸಿ ಅಸ್ಪೃಶ್ಯರ ಮನದಿ—
ಸವಿಸುಖದ ಬಾಂಧವ್ಯರವಿಯನಡ್ಡಯಿಸಿ ನೀ
ಕವಿಯಿಸಿದೆ ಜೀವನದಿ ಗಾಢಾಂಧಕಾರ ! ೩

ಧರ್ಮದಲಿ ಕೈಯಿಕ್ಕಿ ಕರ್ಮಕಾಂಡವನಳಿಸಿ
ಸರ್ವರೂ ಒಂದೆಂಬ ಗುರುಮಂತ್ರದಿ—
ನರ್ಮ-ನಯ-ನೀತಿಗಳ ವರ್ಮ ಚಾತುರ್ವರ್ಣ್ಯ
ಉರ್ವಿಯೊಳು ಉಳಿಯದೊಲು ಹೊರದಬ್ಬುವಿ ! ೪

ಬುಧಮಾನ್ಯ ಸಾಹಿತ್ಯಸಾರಸನ ಪಾವಿತ್ರ್ಯ
ಹದಗೆಡಿಸಿ ಗ್ರಾಮ್ಯಕಾದಂಬರಿಯು ಕಶ್ಮಲದಿ -
ಇದು ಪ್ರಗತಿಪಥದ ಹೆಗ್ಗುರುತೆಂದು ಹೆಮ್ಮೆಯಲಿ
ಕದವನಿಕ್ಕುವೆ ಜ್ಞಾನಭಾಂಡಾರದಾ ! ೫

ದೈವಶಕ್ತಿಯು ತೆಗಳಿ ನವ್ಯಸೃಷ್ಟಿಯು ರಚಿಸೆ
ಭವ್ಯ ಸಾಮರ್ಥ್ಯ-ದುರ್ಭಾವಗಳ ಬೀಡೇ
ಕ್ರವ್ಯಸ್ವಭಾವಿ ಭವದೀಯ ಉಗ್ರತೆಯಾಗ
ಸುವ್ಯಕ್ತವಾಗುತಿದೆ ದಿನ ನಿತ್ಯ ಕ್ರಾಂತಿ ! ೬

ತೆರತೆರದ ರೂಪದಲಿ ತೋರುತಿಹ ಈ ಕ್ರಾಂತಿ !
ತರುತಿಹುದು ಕ್ಲೇಶದುಸ್ತರ ಮೋಣಶಾಂತಿ—
ನರಗುಸಿರ್ದ ಯೋಗೀಶ ಶ್ರೀಹರಿಯ ಗೀತೋಕ್ತಿ
ಭರವಸೆಯೆ ಸಜ್ಜನರ ಮನಕೆ ಸುಖಶಾಂತಿ ! ೭

ಒಲವಿನಾಟ

ಶ್ರೀ. ಎಸ್. ಎಸ್. ಬಸುಪಟ್ಟದ ಎಂ. ಎ. ಗುಳೇದಗುಡ್ಡ

ನಿನ್ನ ನೆನೆಯುತ ನಾನು ಮನೆಗೆ ಮರಳಿದುದಾಯ್ತು,
ಇದು ನಿನಗೆ ಚೆಂದವೆನ್ನಿಸಿತೆ ಇಂದು— ?
ಮನದ ಮಿಡುಕನು ನೀನು ಕಂಡೆಯಾದೊಡೆ ಚಿನ್ನ,
ಒಬ್ಬನನೆ ಕಳುಹಿಸಿದೆ ಎಂತು ನಿಂದು ?
ಒಯ್ಯನೊಯ್ಯನೆ ಒಂದು ಒಂದೆ ಹೆಜ್ಜೆಯನಿರಿಸಿ
ಎನ್ನರಸಿ, ಹತ್ತಿರದಿ ಬಂದು ನಿಂದೆ—;
" ಹೆಜ್ಜೆಹೆಜ್ಜೆಗೆ ಹೃದಯಸ್ಪಂದನವ ಹೆಚ್ಚಿಸುವ
ಮಾಯಾವಿ ನೀನೆಂ"ದು ಮನದಿಯೆಂದೆ—.
ನವಿಲ ಕುಣಿತವ ನಿನ್ನ ನಡಿಗೆಯಲಿ ರೂಹಿಸುತ
ನವಿಲುವಾಹನೆಯಾದೆ ಕಣ್ಣಮುಂದೆ—;
ಭಾವಗಳ ಸಂತೆಯನು ನೆರೆಯಿಸಿದೆ ನೀನಂತೆ
ಮನದಲ್ಲಿ ತರತರದ ಬಣ್ಣದಿಂದೆ—.
ಬಣ್ಣಬಣ್ಣದ ಉಡಿಗೆಯಲಿ ನೀನು ಮಾಟಾಗಿ
ಬೆಡಗ ತೂರುತ ಬಂದು ನಿಂದೆ ರಾಣಿ—;
ಮಾತಿಗೂ ಮಿಗಿಲಾದ ಭಾವವನು ಮೌನದಲಿ
ಮಿಂಚಿಸಿದೆಯಲ್ಲೆ ನೀನೆಂಥ ಜಾಣೆ— !
ನೀನೆರಡು ನುಡಿ ನುಡಿಯೆ, ಅಕ್ಕರೆಯು ಸಕ್ಕರೆಯು
ಹಾಲು–ಜೇನಿನ ಹೊಳೆಯೆ ಹರಿದು ಬಂತು—;
ಕಣ್ಣಮಿಂಚದು ತಾನು ಸಾಂದ್ರಚಂದ್ರಿಕೆಯಾಗಿ
ಹೃದಯದಂಗಳವನ್ನು ಬೆಳಗಿತಿಂತು—.
ತುದಿಬೆರಳ ಸ್ಪರ್ಶದಲಿ ಸ್ವರ್ಗಬಾಗಿಲು ತೆರೆಯೆ
ಒಳಹೊಗಲು ಬಂದಾಗ ಮುಚ್ಚಿತಲ್ಲ— ;
ಎಂದೊ ತಡೆಹಿಡಿದಿದ್ದ ಮನದ ಕಟ್ಟನು ಇಂದು
ನಿನ್ನ ಬೆರಳದು ಕ್ಷಣದಿ ಬಿಚ್ಚಿತಲ್ಲ—.
ಕಣ್ಮುಕಡಿದರು ನಿದ್ರೆಬಾರದಿದೆ ನನಗಿಲ್ಲಿ
ಒಲವಿನಾಟದ ಪರಿಯದೆಂಥ ಚಿತ್ರ !
ರಂಗವಲ್ಲಿಯ ಜಾಣೆ, ಹಾಕಿ ತೋರಿಸಬಾರೆ
ನುಸಿಲಾಟದೀ ದಿವ್ಯ ಮಧುರಚಿತ್ರ....

× × ×

ಆಗಸದಿ ಬಂದ ಚಂದಿರನು ಕರಚಾಚಿ
ಮೈಮುಟ್ಟಿ ಕಿಲಕಿಲನೆ ನಗುತಲಿರುವ—;
ಮಂದಮಾರುತನವನು ಒಲುಮೆಗೀತವನುಲಿದು.
ಗಳಿಗೆ-ಗಳಿಗೆಗೆ ಇಲ್ಲಿ ಬರುತಲಿರುವ.

ಮಾತೃತ್ವ

(ಸಣ್ಣ ಕತೆ)

ಶ್ರೀ. ಅ. ಅ. ಮುತಾಲಿಕ ದೇಸಾಯಿ, ನಂದೀಕುರ್ಲಿ

●

ಲೈಂಗಿಕ ಕಾಮವನ್ನು ಉದಾತ್ತಗೊಳಿಸಿಕೊಳ್ಳದೆ ಹೋದರೆ, ಹೆಣ್ಣಿಗಾಗಲಿ, ಗಂಡಿಗಾಗಲಿ, ತಾರುಣ್ಯದ ಉದ್ವೇಗವನ್ನು ತಡೆದುಕೊಳ್ಳಲಿಕ್ಕೆ ಸಾಧ್ಯವಿಲ್ಲ. ಹೆಣ್ಣಿಗೆ ತಾಯಾಗ-ಬೇಕೆಂಬ ಅಪೇಕ್ಷೆ ಪ್ರಕೃತಿಸಿದ್ಧ. ಸಾಮಾಜಿಕ ಕಟ್ಟಳೆಗಳು ತಾಯ್ತನದ ಅಪೇಕ್ಷೆಗೆ ತಡೆಯನ್ನು ಒಡ್ಡಲಾರವು !

●

ನಾನು ವಿಧವೆ! ಸೌಭಾಗ್ಯತಿಲಕ ನನ್ನ ಹಣೆಯ ಮೇಲಿಲ್ಲ. ಕೈಗಳಲ್ಲಿ ಬಳೆಗಳನ್ನು ತೊಡಲಾರೆ. ಬಣ್ಣ-ಬಣ್ಣದ ವಸ್ತ್ರಗಳನ್ನು - ತೊಡುವ ಅಧಿಕಾರ ನನಗಿಲ್ಲ. ಆದರೆ ಬಳೆಗಳನ್ನು ತ್ಯಜಿಸುವುದರಿಂದ—ಸೌಭಾಗ್ಯದ ಚಿಹ್ನವನ್ನು ಅಳಿಸುವುದರಿಂದ—ತಾರುಣ್ಯದ ಆವೇಗ ಕಡಿಮೆಯಾಗುವುದೇ? ಮಹತ್ವಾಕಾಂಕ್ಷೆಗಳ ಗಾಳಿ ತಡೆಯಬಲ್ಲುದೇ? ಕುರುಡು ಸಮಾಜಕ್ಕೆ ಇದರ ಅರಿವಿಲ್ಲ. ನಾನು ಯುವತಿ! ನನ್ನ ಆಕಾಂಕ್ಷೆಗಳು ಹೊರಹೊಮ್ಮುತ್ತಿವೆ. ತಾರುಣ್ಯದ ಅನುರಾಗ ನನ್ನ ನಾಳನಾಳಗಳಲ್ಲಿ ಹರಿಯುತ್ತಿದೆ. ಎಂದಮೇಲೆ ಮುದುಕಿಯ ಸೋಗು ಹಾಕಲು ಹೇಗೆ ಸಾಧ್ಯ ?

ನಾವು ಪ್ರತಿಷ್ಠಿತ ಮನೆತನದವರು. ತಂದೆಯವರು ಸಮಾಜದ ಮುಂದಾಳುಗಳು. ದುರ್ಭಾಗ್ಯಗಳಾದ ನಾನು ಹುಟ್ಟುತ್ತಲೇ, ಅವರು ತೀರಿಕೊಂಡರು. ಮೊದಲೇ ಕೆಡುತ್ತ ಹೊರಟಿರುವ ಆರೋಗ್ಯವು ನನ್ನ ತಾಯಿಯದು; ಮುಂದೆ ನಾಲ್ಕು ವರುಷಗಳಲ್ಲಿ ಅವಳೂ ತೆರಳಿದಳು. ಆಗ ನಾನು ನಾಲ್ಕು ವರ್ಷದವಳು. ನನ್ನ ಅಜ್ಜಿ ಹಾಗೂ ಅಣ್ಣನ ಪೋಷಣೆಯಲ್ಲಿ ಬೆಳೆದೆ. ಅಜ್ಜಿಯ ಪ್ರೇಮಮಯ ಪಾಲನೆಯ ವಾತಾವರಣದಲ್ಲಿ ದೊಡ್ಡವಳಾದೆ.

ತಾರುಣ್ಯ ಕುರುಡಾಗಿರುತ್ತದೆಂಬುದರಲ್ಲಿ ನನಗೆ ವಿಶ್ವಾಸವಿಲ್ಲ. ಆದರೆ ತಾರುಣ್ಯದ ಮೆಟ್ಟಲುಗಳನ್ನೇರುವಾಗ ಹೊಸ ಹೊಸ ಪ್ರಯೋಗಗಳನ್ನು ಮಾಡುವ ಇಚ್ಛೆಯಾಗುತ್ತದೆಂಬುದು ಮಾತ್ರ ನಿಜ. ನಿನ್ನಿನ ಕೂಸು ತಾರುಣ್ಯದ ಗಾಳಿಯನ್ನು ಪಡೆದ ಕೂಡಲೆ ನವ-ಯುವಕರ ಕಣ್ಮಣಿಯಾಗುತ್ತಾಳೆ. ಪ್ರೇಮದ ಸ್ಥಾನ ಮೋಹದಿಂದ ಆಕ್ರಮಿಸಲ್ಪಡುತ್ತದೆ.

ಸತ್ಯೇಂದ್ರ ನಮ್ಮ ನೆರೆಮನೆಯವ; ನಾನು ಬಾಲ್ಯದಿಂದ ಅವನ ಸಂಗಡ ಆಡಿದ್ದೇನೆ. ಬಾಲ್ಯದ ಎಲ್ಲ ಲೀಲೆಗಳನ್ನು ನಾವು ಅನು-ಭವಿಸಿದ್ದೇವೆ. ಆದರೆ ಒಂದು ದಿನ ಅಜ್ಜಿ ಕಡ್ಡಾಯಮಾಡಿದಳು: "ನರ್ಮದಾ, ಈಗ ನೀನು ದೊಡ್ಡವಳಾದೆ; ಸತ್ಯೇಂದ್ರನ ಸಂಗಡ ಇನ್ನು ಕೂಡಿಕೊಂಡಿರಕೂಡದು!" ನನ್ನದು ಸತ್ಯೇಂದ್ರನ ಸಂಗಡ ವಿಶೇಷ ಆತ್ಮೀಯತೆ ಇರಲಿಲ್ಲ. ನೆರೆಹೊರೆಯವರಾದುದರಿಂದ ಮಧ್ಯೆ ಮಧ್ಯೆ ಚಿಕ್ಕಪುಟ್ಟ ಮಾತುಕತೆಗಳಾಗುತ್ತಿದ್ದುವು. ಅಜ್ಜಿಯ ಸುಗ್ರೀವಾಜ್ಞೆಯಿಂದ ಅದೂ ನಿಂತುಹೋಯಿತು.

× × × ×

ರಾತ್ರಿ ಸುಮಾರು ೯॥ ಗಂಟೆಯ ಸಮಯ; ನಾನು ಪಡಸಾಲೆ-ಯಲ್ಲಿ ನಿಂತಿದ್ದೆ. ಅಣ್ಣ ಹಾಗೂ ಸತ್ಯೇಂದ್ರರ ನಡುವೆ ವಾದ-ವಿವಾದ ನಡೆದಿತ್ತು. ನಾನು ಕೇಳುತ್ತ ಹೊರಗೆ ನಿಂತೆ. ಸತ್ಯೇಂದ್ರನ ಮಾತು ಕೇಳಿಸಿತು: "ವಾಸನೆ, ಪುರುಷ ಹಾಗೂ ಸ್ತ್ರೀಯರಲ್ಲಿ ಸಮನಾಗಿರುವುವು. ಪುರುಷ ಅದನ್ನು ತೋರಿಸುತ್ತಾನೆ; ಸ್ತ್ರೀ ಅದನ್ನು ಒಳಗಿಂದೊಳಗೇ ದಬ್ಬಲು ಯತ್ನಿಸುತ್ತಾಳೆ. ಆದರೆ ಅವಳ ಈ ನಿಸರ್ಗವಿರುದ್ಧವಾದ ಹೋರಾಟ ವ್ಯರ್ಥವಾದುದು." ಅಣ್ಣ ಇದನ್ನು ವಿರೋಧಿಸುತ್ತ ಉತ್ತರವಿತ್ತ: "ನಿನ್ನ ಮಾತನ್ನು ನಂಬ-ಲಾರೆ. ಏಕೆಂದು ಮಾತ್ರ ಕೇಳಬೇಡ. ನಂಬಲಾರೆ. ಅಷ್ಟೆ!"

ವಾದ ವಿವಾದ ಅಷ್ಟಕ್ಕೇ ನಿಂತಿತು. ನಾನು ಕಲ್ಲಿನ ಮೂರ್ತಿ-ಯಂತೆ ನಿಂತಿದ್ದೆ. ಮೇಲೆ ಆಕಾಶದಲ್ಲಿ ಚಂದ್ರ ಹೊಳೆಯುತ್ತಿದ್ದ. ರಾತ್ರಿಯೂ ಯವ್ವನದಂತಿದ್ದಿತು. ಕತ್ತಲೆ ತಾರುಣ್ಯದ ಉಯ್ಯಾಲೆ-ಯಲ್ಲಿ ತೂಗುತ್ತಿತ್ತು. ಚಂದ್ರನು ತಾರುಣ್ಯಸಹಜವಾದ ಆಲಸ್ಯ-ವನ್ನು ಪ್ರಕಟಿಸುತ್ತಿದ್ದ. ನವತರುಣಿ ಚಂದ್ರಿಕೆ ಮೋಹಾಂಧಳಾಗಿ ಮುಂದೆ ಸರಿಯುತ್ತಿದ್ದಳು. ಎಲ್ಲೆಡೆಯಲ್ಲಿಯೂ ತಾರುಣ್ಯ ಉಕ್ಕಿ ಬರುತ್ತಿದ್ದಂತೆ ಕಂಡುಬಂದಿತು. ನನ್ನ ಅಂಗಾಂಗಳೂ ಕಂಪಿಸುತ್ತಿ-ದ್ದುವು. ಇಷ್ಟರಲ್ಲಿ ಅಣ್ಣನ ಕೂಗು ಕೇಳಿ ಬೆಚ್ಚಿ ಒಳಗೆ ಹೋದೆ.

× × × ×

ಕೆಲವು ತಿಂಗಳು ಸಂದನಂತರ ಸತ್ಯೇಂದ್ರನ ಕೋಣೆಯಲ್ಲಿ ಹೋದೆ. ಅವನ ಸಂಗಡ ಮಾತನಾಡಿಯಂತೂ ಬಹಳ ದಿನಗಳಾಗಿ-ದ್ದುವು. ನಾನು ಬಾಗಿಲ ಬಳಿ ನಿಂತು ನೋಡಿದೆ. ಸತ್ಯೇಂದ್ರ ಸ್ಟೋವ್ ಹೊತ್ತಿಸಿ ತನ್ನಲ್ಲಿ ತಾನು ವಿಚಾರಮಗ್ನನಾಗಿದ್ದ. ನಾನಲ್ಲಿ ಇರುವೆನೆಂಬುದರ ಅರಿವಿಲ್ಲದೆ ಮಾತಾಡಿದ: "ಸಮುದ್ರನಂತೆ ತುಂಬಾ ಎತ್ತರವಿರುತ್ತದೆ. ತೆರೆಗಳು ಮುಂದೆ ಸಾಗಲಾರದೆ ಚೂರು-ಚೂರಾಗಿ ಹಿಂದೆ ಹೋಗಿ ಸಮುದ್ರದಲ್ಲಿ ಬೀಳುತ್ತವೆ. ತೆರೆಗಳಿಗೆ—ಮುಂದೆ ವಿಶಾಲವಾದ ಬಂಡೆಗಲ್ಲುಗಳಿವೆಯೆಂಬುದೂ ಗೊತ್ತಿರುತ್ತದೆ. ಢಿಕ್ಕಿಹೊಡೆದರೆ ತಾವು ಚೂರುಚೂರಾಗಬಹುದೆಂಬ ಅರಿವೂ ಇರುತ್ತದೆ. ಆದರೆ ಹಾಗೆ ಸಾಯುವುದರಲ್ಲಿಯೇ ಆನಂದವಿದೆ ಅಲ್ಲವೇ ರಾಘವೇಂದ್ರ?" ಎಂದು ಹೇಳಿ ಮುಖ ಮೇಲೆ ಮಾಡಿದ. ಆದರೆ ಅಣ್ಣನು ಅಲ್ಲಿ ಇರದ್ದರಿಂದ ಸುಮ್ಮನಾದ..........

ಆ ದಿವಸ ಪ್ರತಿದಿನದಂತೆ ಚಹದ ಎರಡು ಕಪ್ಪುಗಳೊಂದಿಗೆ ಅವನ ಕೋಣೆಗೆ ಹೋದೆ. ಅಣ್ಣ ಅಲ್ಲಿರಲಿಲ್ಲ. ಸತ್ಯೇಂದ್ರ ಪುಸ್ತಕ-ಗಳ ರಾಶಿಯಲ್ಲಿ ತನ್ನನ್ನೇ ಮರೆತಂತೆ ಕಾಣುತ್ತಿದ್ದ. ನಾನು

ಸಂಕೋಚವನ್ನು ಬದಿಗಿರಿಸಿ ಕಪ್ಪುಗಳನ್ನು ಮೇಜಿನಮೇಲಿಟ್ಟು, ನಸುನಕ್ಕು ಕೇಳಿದೆ: "ಅಣ್ಣ ಬರಲಿಲ್ಲವೇ?" ಆತ "ಇಲ್ಲ. ಇನ್ನೂ ಬರಲಿಲ್ಲ. ನಾವೇ ಕುಡಿದುಬಿಡೋಣ!" ಎಂದ. ನಾನು ಅವನ ಮುಂದೆ ಖುರ್ಚಿಯ ಮೇಲೆ ಕುಳಿತೆ. ಸತ್ಯೇಂದ್ರ ಪುಸ್ತಕವನ್ನು ಬಿಟ್ಟು ಚಹವನ್ನು ಕುಡಿಯುತ್ತಿದ್ದನಾದರೂ, ಇನ್ನೂ ಅದೇ ವಿಚಾರಗಳಲ್ಲಿದ್ದಂತೆ ಕಾಣುತ್ತಿದ್ದ. ಎಷ್ಟೋ ದಿನಗಳಿಂದ ಒತ್ತಿಟ್ಟ ಉತ್ಸುಕತೆಯನ್ನು ಒಮ್ಮೆ ಹೊರದೆಗೆದು ಅವನನ್ನು ಕೇಳಿದೆ. "ಸತ್ಯೇಂದ್ರ! ಸ್ತ್ರೀ-ಪುರುಷರ ನಿಜವಾದ ಸ್ವರೂಪವೇನು?" ನಿತ್ಯದಂತೆ ಮೇಜಿನ ಮೇಲೆ ಕಾಲುಚೆಲ್ಲಿ ಹೇಳತೊಡಗಿದ: "ಹೆಂಗುಸು ಬೆಂಕಿ—ಗಂಡುಸು ನೀರು: ಬೆಂಕಿ ಯಾವಾಗಲೂ ಪವಿತ್ರವಿರುತ್ತದೆ. ನೀರು ಮಾತ್ರ ಪವಿತ್ರ—ಅಪವಿತ್ರ—ಎರಡೂ ರೂಪ ಧಾರಣಮಾಡಬಹುದು. ಮಲಿನ ನೀರು ಶುದ್ಧ ಬೆಂಕಿಯನ್ನು ಅಪವಿತ್ರಗೊಳಿಸುತ್ತದೆ. ಆದರೆ ಬೆಂಕಿ ಉದಾರ ಮನಸ್ಸಿನದು. ಮಲಿನವಿರಲಿ-ಶುದ್ಧವಿರಲಿ; ನೀರಿನ ಆಗಮನವನ್ನು ನಿರ್ಮಲಮನಸ್ಸಿನಿಂದ ಸ್ವಾಗತಿಸುತ್ತದೆ. ನೀರು ಬೆಂಕಿಯ ಸಮೀಪ ಬಂದ-ಬಂದಂತೆ, ಬೆಂಕಿ ಇನ್ನಿಷ್ಟು ಪ್ರಜ್ವಲಿತವಾಗುವುದರಲ್ಲಿಯೋ ಅದಕ್ಕೆ ಸುಖಾನುಭವವಾಗುತ್ತದೆ: ಇನ್ನಿಷ್ಟು ಆವೇಗದಿಂದ ನೀರಿನೊಂದಿಗೆ ಕಾದುತ್ತದೆ—ಹಾಗು ಕೊನೆಗೆ ಶಾಂತವಾಗುತ್ತದೆ. ಎರಡೂ ಕೊನೆಗೊಳ್ಳುತ್ತವೆ. ನೀರು ಪ್ರಚಂಡ ಅಗ್ನಿಯಲ್ಲಿ ಬೆರೆತು ಉಗಿಯಾಗುತ್ತದೆ. ಹಾಗೂ ಬೆಂಕಿ ನಿದಾನವಾಗಿ ಶಾಂತವಾಗುತ್ತದೆ." ಈ ಮುಕ್ತಾಫಲಗಳನ್ನು ಕೇಳುತ್ತ ಕೇಳುತ್ತ ತಲ್ಲೀನಳಾದೆ. ಮತ್ತೊಂದು ದಿವಸ ಪ್ರೇಮವಿಷಯದ ಪ್ರಶ್ನೆಯನ್ನು ಕೇಳಿದೆ. ಸತ್ಯೇಂದ್ರ ನನ್ನ ಮಾತನ್ನು ಕೇಳಿ ನಸುನಕ್ಕು ವಿಚಾರಮಾಡಿದ: "ಗಂಡುಸರು ನಿರ್ಮೋಹಿಗಳೇ? ದೈಹಿಕ ಇಚ್ಛೆಯೇ ಅವರ ಪ್ರೀತಿ ಎಂಬುದು ಸತ್ಯವೇ? ನಿಜವಾದ ಪ್ರೀತಿ ಅವರಲ್ಲಿರುವುದಿಲ್ಲವೇ?" ತುಂಬ ಕಠಿಣಸಮಸ್ಯೆ ಅವನ ಮುಂದೆ ನಿಂತಂತೆ ತೋರಿತು. ಆತ ತನ್ನದೇ ಆದ ದನಿಯಲ್ಲಿ ಹೇಳತೊಡಗಿದ: "ಪ್ರೇಮಪ್ರವಾಹ ಸ್ತ್ರೀ-ಪುರುಷರಿಬ್ಬರಲ್ಲಿಯೂ ಸಮಪ್ರಮಾಣದಲ್ಲಿದೆ. ಆದರೆ ಸ್ತ್ರೀಯ ಪ್ರವಾಹ ಎಂದೂ ಬತ್ತಲಾರದು" ನಾನು ಪುನಃ ಕೇಳಿದೆ. "ಸ್ತ್ರೀಯು ಅಬಲೆಯೋ ಹೇಗೆ?" ಆತ ತುಂಬ ಅಭಿಮಾನದಿಂದ ಉತ್ತರಿಸಿದ: "ಹೆಂಗುಸು ಕೆಲವು ಅಸಹಾಯಕತೆಗಳ ಮೂಲಕ ಸಬಲೆಯಾಗಿಯೂ ಅಬಲೆಯಾಗಿದ್ದಾಳೆ. ಪುರುಷನ ಸಂಗಡ ಜಗಳ ವಾಡಲು, ನ್ಯಾಯ ಮಾಡಲು, ತನ್ನ ಅಧಿಕಾರಗಳನ್ನು ಸಂರಕ್ಷಿಸಲು—ಅದೇಕೆ ಎಲ್ಲವನ್ನೂ ಮಾಡಬಲ್ಲಳು. ಇದೆಲ್ಲ ಆಕೆಯ ವ್ಯಕ್ತಿತ್ವದ ಮೇಲೆ ಅವಲಂಬಿಸಿದೆ. ಆದರೆ ಒಂದು ಪ್ರಸಂಗದಲ್ಲಿ ಸ್ತ್ರೀಯು ಪುರುಷನ ಹೊರತಾಗಿ ಏನನ್ನೂ ಮಾಡಲಾರಳು." ನಾನು ಮನಸ್ಸು ದೃಢಮಾಡಿ ಕೇಳಿದೆ: "ಅದಾವ ಪ್ರಸಂಗ?" ಸತ್ಯೇಂದ್ರ ಹೇಳಿದ: "ಅದಾವ ಪ್ರಸಂಗ? ಮಾತೃಪದದ ಅಭಿಲಾಷೆ ಹುಟ್ಟಿದಾಗ ......" ಮುಂದಿನ ಶಬ್ದಗಳನ್ನು ಕೇಳುವ ಧೈರ್ಯ ನನ್ನಲ್ಲಿರಲಿಲ್ಲ. ಅಧೀರತೆಯಿಂದ ಅಲ್ಲಿಂದ ಒಮ್ಮೆಲೆ ಹೊರಬಿದ್ದು ಬಂದೆ. ಸಂಜ್ಞಾಹೀನಳಾಗಿ ಹಾಸಿಗೆಯ ಮೇಲೆ ದೇಹ ಚೆಲ್ಲಿದೆ.

ಪ್ರತಿ ಸ್ತ್ರೀಯಲ್ಲಿ ತಾಯಿಯಾಗಬೇಕೆಂಬ ಇಚ್ಛೆ ಒಮ್ಮೆಯಾದರೂ ಪ್ರಬಲವಾಗುತ್ತದೆ. ಇದು ಧ್ರುವ-ಸತ್ಯ. ನಾನು ದಿನಾಲ ೩–೪ ಗಂಟೆ ಪೂಜಾಪಾಠಗಳಲ್ಲಿ ಕಳೆಯುತ್ತಿದ್ದೆ. ಆದರೆ ಮನಸ್ಸೆಲ್ಲಿ? ಆದರೆ ದಿನಗಳು ಉರುಳುತ್ತಿದ್ದುವು. ಬ್ರಹ್ಮ ಮೊದಲೇ ಕಷ್ಟಮಯವಾದ ಈ ಜೀವನವನ್ನು ಇನ್ನಿಷ್ಟು ತೊಂದರೆಗಳಿಂದೊಡಗೂಡಿಸುತ್ತಿದ್ದಾನೆಂಬಂತೆ ತೋರುತ್ತಿತ್ತು. ಜೀವ ಪ್ರತಿಕ್ಷಣಕ್ಕೆ ಬೇಡವೆಂದು ಮೊರೆ ಇಡುತ್ತಿತ್ತು ...... ಆ ದಿವಸ ಅಣ್ಣ ಹಾಗೂ ಅಜ್ಜಿಯಲ್ಲಿ ವಾದ-ವಿವಾದ ನಡೆದಿದ್ದಿತು. ನನ್ನ ಜೀವನದ ನಿರ್ಣಯ ಅಂದು ಆಗುವುದಿದ್ದಿತು. ಅಜ್ಜಿ ಉದಾಸೀನಳಾಗಿ ಹೇಳುತ್ತಿದ್ದಳು: "ರಘು! ಏನಾದರೂ ಉಪಾಯ ತೆಗೆ! ವಿಚಾರಮಾಡು. ನಮ್ಮ ಮನೆತನದ ಗೌರವದ ಪ್ರಶ್ನೆಯಿದೆ. ಏನಾದರೂ ಮಾಡು ರಘು!" ಅಣ್ಣ ವಿಮನಸ್ಕನಾಗಿ ಕೇಳಿದ: "ಏನು....ಇಂತಹದು ಆದದ್ದಾದರೂ ಏನು? ಸ್ವಚ್ಛವಾಗಿ ಹೇಳಬಾರದೇ?" ಅಜ್ಜಿ ಅತ್ತಿತ್ತ ನೋಡುತ್ತ ಹೇಳಿದಳು: "ರಘು, ನರ್ಮದೆಗೆ ೫ ತಿಂಗಳಾಗಿವೆ. ೫ ತಿಂಗಳು! ಹಾಯ್ ರಾಮ! ಇನ್ನೇನು ಮಾಡಲಿ? ನೋಡು ಈ ಪಿಶಾಚಿ ಸತ್ತಿದ್ದರೂ ಒಳ್ಳೆಯದಿತ್ತು! ಇನ್ನು ಮೃತ್ಯುವೇ ನಮ್ಮ ಪ್ರತಿಷ್ಠೆಯನ್ನು ಉಳಿಸಬೇಕು." ಅಣ್ಣ ಮೊದಲೇ ದೊಡ್ಡವಾದ ತನ್ನ ಕಣ್ಣುಗಳನ್ನು ಇನ್ನಿಷ್ಟು ಹಿಗ್ಗಿಸಿ ಆಶ್ಚರ್ಯ ವ್ಯಕ್ತಮಾಡಿದ. ಅತ್ಯಂತ ಅಸ್ವಸ್ಥನಾದ. ಆದರೆ ಅಜ್ಜಿಯನ್ನೇ ದೂಷಿಸತೊಡಗಿದ. "ನಿನ್ನ

ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಹೆಣ್ಣಿನ ಜೀವನದ ಸುಂದರಚಿತ್ರಣದ
ಎರಡು ಕಾದಂಬರಿಗಳು

(೧) ವಿಧಿತಂದ ವಧು .... ೧—೮—೦
(೨) ಕುಲವಿಲ್ಲದ ಹೆಣ್ಣು .... ೧—೮—೦

ಹೆಣ್ಣಿನ ಬಾಳನ್ನು ಚಿತ್ರಿಸುವ ಸುಂದರ ಕತೆಗಳು
ಶ್ರೀಮತಿ ಶಾಂತಾದೇವಿ ಮಾಳವಾಡ

(೩) ಕುಂಕುಮಬಲ .... ೧—೦—೦
(ಶ್ರೀ. ವಿ. ಕೃ. ಗೋಕಾಕರ ಮುನ್ನುಡಿ ಸಹಿತ)

ಪ್ರಸಿದ್ಧ ಲಾವಣಿಕಾರರಾದ ಕವಿ
ಶ್ರೀಧರ ಖಾನೋಳಕರ

(೪) ಹೂಗಂಪು (ಲಾವಣಿಗಳು) .... ೦—೧೨—೦

ಈ ಮೇಲಿನ ನಾಲ್ಕು ಪುಸ್ತಕಗಳು ತರಿಸಿದವರಿಗೆ
ಅಂಚೆವೆಚ್ಚ ಉಚಿತ

ಗವಳೀಗಲ್ಲಿ ವ್ಯವಸ್ಥಾಪಕರು
ಹುಬಳ್ಳಿ ಆನಂದ ಗ್ರಂಥಮಾಲಾ, ಹುಬ್ಬಳ್ಳಿ

ಮೂಲಕವೇ ನರ್ಮದಾ ಕೆಟ್ಟಳು. ನಿನ್ನ ಮಮತೆಯ ಪರಿಣಾಮವಿದು! ನಾನು ಮೊದಲೇ ಹೇಳಿದ್ದಿಲ್ಲವೇ ?—ಪುನಃ ವಿವಾಹ ಮಾಡೋಣವೆಂದು? ಆದರೆ ನೀನೇ ಆಕೆ ಅಂತಹವಳಲ್ಲ—ಹಾಗೆ—ಹೀಗೆ—ಎಂದು ಹೇಳಿದೆ. ಈಗ ನೋಡು ! ” ಅಜ್ಜಿ ನನ್ನ ಹತ್ತಿರ ಬಂದು ಗಲ್ಲಗಳ ಮೇಲೆ ನಾಲ್ಕಾರು ಏಟುಗಳನ್ನು ಬಿಗಿದಳು. ಮರುದಿವಸವೂ ಬೆರಳಿನ ಚಿಹ್ನಗಳು ಅಚ್ಚೊತ್ತಿದಂತೆ ಎದ್ದು ಕಾಣುತ್ತಿದ್ದುವು.

× × × ×

ಪಂಢರಪುರಕ್ಕೆ ನಾವು ತೀರ್ಥಸ್ಥಾನವೆನ್ನುತ್ತೇವೆ. ಇದೇ “ತೀರ್ಥ”ಸ್ಥಾನಕ್ಕೆ ಸಾವಿರಾರು ಬಾಲೆಯರು, ತಮ್ಮ ತಾಯ್ತನವನ್ನು ಕಂಡುಕೊಳ್ಳಲು, ಸಮಾಜದ ವಿಕರಾಳ ನಾಲಗೆಯಿಂದ ತಪ್ಪಿಸಿಕೊಳ್ಳಲು—ಹೋಗುತ್ತಾರೆ. ಅಜ್ಜಿ ಕೂಡ ನನ್ನನ್ನು ಇದೇ ಪಂಢರಪುರಕ್ಕೆ ಕರೆದೊಯ್ದಳು. ಆದರೆ ಉಳಿದ ಜನರಿಗೆ ಮಾತ್ರ: “ನರ್ಮದಾಳನ್ನು ತೀರ್ಥಯಾತ್ರೆಗೆ ಒಯ್ಯುತ್ತಿದ್ದೇನೆ!” ನಾವು ಅಲ್ಲಿ ಇಳಿದುಕೊಂಡ ಕೋಣೆ ತುಸು ಚಿಕ್ಕದಿತ್ತು. ದಾಯಿಯನ್ನು ಅಜ್ಜಿಯೇ ನಿಯೋಜಿಸಿದ್ದಳು. ನನ್ನ ಸಂಗಡ ಮಾತ್ರ, ಆವಶ್ಯಕವಷ್ಟು ಬಿಟ್ಟು, ಮಾತನ್ನೇ ಆಡುತ್ತಿರಲಿಲ್ಲ. ನನ್ನನ್ನು ಕೋಣೆಯಲ್ಲಿ ಇಟ್ಟು ಕೀಲಿ ಹಾಕಿ, “ವಿಟ್ಠಲ” ದರ್ಶನಕ್ಕೆ ಹೋಗುತ್ತಿದ್ದಳು. ಬಹುಶಃ ಅವಳು ದೇವರಲ್ಲಿ ನನ್ನ ಮೃತ್ಯುವಿಗಾಗಿ ಮೊರೆಯಿಡುತ್ತಿರಬಹುದು. ನನ್ನ ದೇಹ ಒಣಗುತ್ತಿದ್ದಿತು. ಕೋಣೆಯ ಬಾಗಿಲು ಯಾವಾಗಲೂ ಮುಚ್ಚಿರುತ್ತಿದ್ದುದರಿಂದ, ಪ್ರಕಾಶದ ದರ್ಶನವೂ ಇರಲಿಲ್ಲ. ಸಂಸಾರವನ್ನು ಇನ್ನೊಮ್ಮೆ ಈ ಅಭಾಗ್ಯ ಕಣ್ಣುಗಳಿಂದ ನೋಡಬೇಕೆಂದರೆ, ಅದೂ ನನ್ನ ಹಣೆಬರೆಹದಲ್ಲಿ ಇದ್ದಂತೆ ಕಾಣಲಿಲ್ಲ.

ಆ ದಿವಸ ಅಸಹ್ಯ ತೊಂದರೆ. ಮುಂಜಾವಿನಿಂದಲೇ ನಾನು ವಿಹ್ವಲಳಾಗಿದ್ದೆ. ಅಜ್ಜಿ, ದಾಯಿಯನ್ನು ನನ್ನ ಬಳಿ ಬಿಟ್ಟು ಎಲ್ಲಿಯೋ ಮಾಯವಾಗಿದ್ದಳು. ಆಕೆಗೆ ನನ್ನ ಕಲಂಕವನ್ನು ಸಾಕಾರರೂಪದಲ್ಲಿ ನೋಡುವ ಇಚ್ಛೆ ಇರಲಿಲ್ಲವೇನೋ! ಪಾಪದ ಮುದ್ದೆ ಶಿಶುರೂಪ ಧರಿಸಿ ಬಂದುದನ್ನು ಕಂಡು, ಆಕೆಗೆ ಬಹುಶಃ ಮರಣಪ್ರಾಯವೆನಿಸುತ್ತಿರಬಹುದು. ಆದುದರಿಂದಲೇ ಅದೃಶ್ಯಳಾಗಿದ್ದಳು. ಮೃತ್ಯು ಮತ್ತು ಜೀವನಗಳಿಗೆ ಪ್ರೇಮಾಲಿಂಗನ ಕೊಡುತ್ತ, ಸಮಾಜದ ನಾಚಿಕೆಯ ಮಧ್ಯೆ ನಾನು ತಾಯಾದೆ. ಆ ದಿವಸ ಸೂರ್ಯ ತುಂಬ ಪ್ರಖರನಾಗಿದ್ದ. ನನ್ನ “ಪಾಪ”ದ ದರ್ಶನದಿಂದ ಆತನು ಸಿಟ್ಟಾಗಿದ್ದನೇನೋ ನಾ ಅರಿಯೆ! ಆದರೆ ಸ್ವತಃಕ್ಕೆ ಧನ್ಯಳೆಂದು ತಿಳಿದೆ—ತಾಯಿಯಾಗಿ! ತುಟಿಗಳ ಮೇಲೆ ತನ್ನಿಂದ ತಾನೆ ನಸುನಗೆ ಓಡಿಬರುತ್ತಿತ್ತು. ಅದೇ ಆ ಕೋಣೆ—ನಿತ್ಯದ ದರಿದ್ರಕೋಣೆ—ನನಗೆ ವಿಶಾಲ ಅರಸುಮನೆಯಂತೆ ಕಂಡುಬರುತ್ತಿತ್ತು. ಆನಂದ ಪರವಶಳಾಗಿ ದಾಯಿಯನ್ನು ಕೇಳಿದೆ: “ನನ್ನ ಮಗುವೆಲ್ಲಿ ? ” ಆಕೆ ಮೆಲ್ಲನೆ ಎದ್ದು ಮಗುವನ್ನು ತಂದು ನನ್ನತ್ತ ಚಾಚಿದಳು. ನನ್ನ ಕಣ್ಣುಗಳಲ್ಲಿ ಅಪೂರ್ವ ಕಾಂತಿ ಹೊಳೆದಂತಾಯಿತು. ಕೈಗಳಲ್ಲಿ ಅನನುಭೂತಸ್ಫೂರ್ತಿ ಬಂದಿದ್ದಿತು. ನನ್ನ ಮಗುವನ್ನು ಹೃದಯಕ್ಕೆ ಅಂಟಿಸಿಕೊಂಡು, ತನ್ಮಯಳಾದೆ. ಮಗುವಿನ ಸ್ಪರ್ಶ ನನಗೆ ಸುಖ ಮತ್ತು ಶಾಂತಿಯ ಆಗರವೆಂದೆನಿಸಿತು. ಮಗು ಅಳುವುದನ್ನು ಕಂಡು ನನಗೂ ಅಳಬೇಕೆಂದೆನಿಸಿತು. ಮಗುವನ್ನು ದಾಯಿಯ ಕೈಯಲ್ಲಿ ಕೊಡುತ್ತ ತೊಟ್ಟಿಲಲ್ಲಿ ಮಲಗಿಸೆಂದು ಹೇಳಿದೆ.

ಅಂದು ಶನಿವಾರ ಕೂಸು ಮಲಗಿದ್ದರಿಂದ, ತಾಯಿ ಹೋಗಿದ್ದಳು. ಅಜ್ಜಿ ಮಾತ್ರ ಮಗುವನ್ನು ಇನ್ನೂ ನೋಡಿರಲಿಲ್ಲ. ನೋಡುವ ಇಚ್ಛೆ ಇದ್ದಂತೆಯೂ ತೋರಲಿಲ್ಲ. ನನ್ನ ಬಳಿ ಕುಳಿತು, ತುಸು ಅತ್ತು, ಹೇಳತೊಡಗಿದಳು : “ನರ್ಮದಾ, ಇದೇನು ಮಾಡಿದೆ? ನಾನು ನಿನ್ನನ್ನು ನಂಬಿದ್ದೆ. ನನ್ನ ವಿಶ್ವಾಸದ ದುರುಪಯೋಗ ಮಾಡಿದ ದುಷ್ಟೆ ನೀನು ! ಇರಲಿ, ಆದದ್ದಾಯಿತು ! ಮುಂದೆ ಹೇಗೆ ? ಮನಸ್ಸನ್ನು ಗಟ್ಟಿಮಾಡು. ಧೈರ್ಯದಿಂದ ಕಾರ್ಯ ಪೂರ್ಣಗೊಳಿಸಬೇಕಾಗಿದೆ.” ನನ್ನ ಹೃದಯದಲ್ಲಿ ಮಾತ್ರ ಆಳವಾದ ಕಲ್ಲೋಲ ನಡೆಯಿತು. ಅಜ್ಞಾತಸಂಶಯದಿಂದ ನನ್ನ ಮನಸ್ಸು ಕಂಪಿಸಿತು. ಜೀವ ಅಳುಕಿತು. ಕೈಕಾಲುಗಳಲ್ಲಿ ನಿರ್ಬಲತೆ ಮೂಡಿತು. ಮರುದಿವಸ, ಸಂಜೆ ಕೂಡ ಅಳುತ್ತಿರುವಂತೆ ಕಂಡಿತು. ಸೂರ್ಯ ಮುಳುಗಿ, ಕತ್ತಲೆ ತನ್ನ ಕರಾಳಸಾಮ್ರಾಜ್ಯವನ್ನು ಸ್ಥಾಪಿಸಿತು. ರಾತ್ರಿಯಲ್ಲಿ ಭಯಂಕರ ಬಿರುಗಾಳಿ ತುಂಬಿಬಂದಂತೆ ತೋರಿತು. ಅಂದಿನ ಇರುಳು ತನ್ನ ಮುಖಕ್ಕೆ ಭಯಾನಕತೆಯ ಹೊದಿಕೆಯನ್ನು ಹೊದ್ದಂತೆ ಎನಿಸಿತು. ಕೋಣೆಯಲ್ಲಿಯ ಎಲ್ಲ ವಸ್ತುಗಳು ನನ್ನನ್ನೇ ದಿಟ್ಟಿಸುತ್ತಿದ್ದಂತೆ ಕಾಣಿಸಿತು— ಮುಂಬರುವ ಘಾತದ ಪೂರ್ವಸೂಚನೆಯನ್ನು ಕೊಡುವಂತೆ! ಅಜ್ಜಿ ಅರ್ಧಗಂಟೆಯನಂತರ ಬಂದಳು. ಸಂಗಡ ೧೦–೧೨ ವರುಷದ, ಕಪ್ಪುಬಣ್ಣದ, ತೆಳ್ಳಗಿನ ದೇಹದ ಚಂಚಲವೃತ್ತಿಯ, ಹುಡುಗನನ್ನು ಕರೆತಂದಿದ್ದಳು. ಆತ ಮೈಯಲ್ಲಿ ಹರಕು ಅಂಗಿಯೊಂದನ್ನು ತೊಟ್ಟಿದ್ದ. ಕೂದಲು ಎಣ್ಣೆಕಾಣದೆ ಅತ್ತಿತ್ತ ಪಸರಿಸಿದ್ದುವು. ಹಂಚಿಕೆಯನ್ನು ಹಾಕುತ್ತಿರುವಂತೆ, ಆ ಹುಡುಗ ಕೋಣೆಯಲ್ಲಿ ನೋಡಹತ್ತಿದ. ಅಜ್ಜಿ ಅವನನ್ನು ತನ್ನ ಬಳಿ ಕುಳ್ಳಿರಿಸಿಕೊಂಡು, ಬಾಗಿಲನ್ನು ಭದ್ರವಾಗಿ ಮುಚ್ಚಿದಳು. ನಾನಂತೂ ಕಣ್ಣುಮುಚ್ಚಿ ಬಿದ್ದುಬಿಟ್ಟಿದ್ದೆ. ಮನಸ್ಸು ಎಲ್ಲಿಲ್ಲದ ವ್ಯಗ್ರತೆಯಿಂದ ತುಂಬಿಕೊಂಡಿದ್ದಿತು. ಹೃದಯ ಬಲವಾಗಿ ಬಡಿದುಕೊಳ್ಳುತ್ತಿದ್ದಿತು. ಅಜ್ಜಿ ಮಾತನಾಡತೊಡಗಿದಳು: “ಹುಂ, ಹೇಳು ಎಷ್ಟು ರೂಪಾಯಿ? ಆದರೆ ನೋಡು, ಯಾರಿಗೂ ಗೊತ್ತಿಲ್ಲದ ಸ್ಥಳದಲ್ಲಿ ಬಿಟ್ಟುಬರಬೇಕು. ಯಾರಪ್ಪನಿಗೂ ಗೊತ್ತಾಗಿರಬಾರದು. ತಿಳಿಯಿತೇ? ” ಹುಡುಗ ಅತ್ಯಂತ ಚತುರತೆಯಿಂದ ಉತ್ತರಿಸಿದ— ಆ ಕೆಲಸದಲ್ಲಿ ನಿಪುಣನಿದ್ದಂತೆ! “ಅದರ ಚಿಂತೆ ನಿಮಗೇಕೆ? ಗಾಳಿಯೂ ಸುಳಿದಾಡದಂಥ ಸ್ಥಳದಲ್ಲಿ ಬಿಟ್ಟುಬರುವೆನು. ಆದರೆ ನನಗೆ ೫ ರೂಪಾಯಿ ಬೇಕು!” ಅಜ್ಜಿ ಒಮ್ಮೆಲೆ ಒಪ್ಪಿ ೧೧ಗಂಟೆಗೆ ಬರಲು ಹೇಳಿ, ಅವನನ್ನು ಕಳಿಸಿದಳು. ನನ್ನ ಹತ್ತಿರ ಕುಳಿತುಕೊಂಡು, ನನ್ನ ಮೇಲೆ ಕೈಯಾಡಿಸುತ್ತ ಹೇಳತೊಡಗಿದಳು : “ನರ್ಮದಾ ! ಇನ್ನು ನಾವು ಮನೆಗೆ ಹೋಗಬೇಡವೆ? ಇಲ್ಲಿ ಬಂದು ಬಹಳದಿವಸಗಳಾದುವು. ಇಂದೇ

ನಾನು ಈ 'ಪ್ರಕರಣ' ವನ್ನು ಮುಗಿಸಿಬಿಡುತ್ತೇನೆ. ಈಗ ಹುಡುಗ ಬಂದಿದ್ದನಲ್ಲ! ಆತನೇ ನಿನ್ನ ಈ ಪಾಪದ ಮುದ್ದೆಯನ್ನು ದೂರ ಬಿಟ್ಟುಬರುತ್ತಾನೆ. ಏಕೆ?... ನಿನಗೆ ಈ ಉಪಾಯ ಸೇರಿ-ತಲ್ಲವೇ? ನಿನಗಾಗಿಯೇ ಇದನ್ನೆಲ್ಲ ಮಾಡುತ್ತಿರುವೆನೆಂಬುದು ನಿನ್ನ ಲಕ್ಷ್ಯದಲ್ಲಿ ಬಂದಿತಲ್ಲವೇ? ಇನ್ನುಮುಂದೆಯಾದರೂ ದಕ್ಷತೆಯಿಂದ ಇರಬೇಕು." ನನ್ನ ಮನಸ್ಸು ಭಯಾಂಕಿತವಾಯಿತು. ರಾತ್ರಿ ೧೦ ಹೊಡೆಯಿತು. ಇನ್ನು ಒಂದೇ ತಾಸು! ಇಷ್ಟೇ ಸಮಯದಲ್ಲಿ ನನಗೆ ಏನೆಂಬುದನ್ನು ನಿಶ್ಚಯಿಸಬೇಕಾಗಿತ್ತು.

ವಿಚಾರಗಳ ತಾಕಲಾಟದಲ್ಲಿ ಒಂದು ತಾಸು ಹೇಗೆಕಳೆಯಿತೋ ತಿಳಿಯಲಿಲ್ಲ. ಯಾರೋ ಬಾಗಿಲನ್ನು ಬಡಿದರು. ನನ್ನ ಹೃದಯವನ್ನೇ ಬಡಿದಂತಾಯಿತು. ಅದೇ ಹುಡುಗ ಒಂದು ಬುಟ್ಟಿಯನ್ನು ತಕ್ಕೊಂಡು ಬಂದಿದ್ದ. "ಹುಂ ಬೇಗ" ಎಂದಿಷ್ಟೇ ಉಸುರಿದ. ಅಜ್ಜಿ, ಕಣ್ಣು ಮುಚ್ಚಿ ನನ್ನ ಮುದ್ದುಮಗುವನ್ನು ಆ ಬುಟ್ಟಿಯಲ್ಲಿ ಮಲಗಿಸಿದಳು. ನಾನು ನಿರ್ನಿಮೇಷ ಕಣ್ಣುಗಳಿಂದ ಆ ದೃಶ್ಯವನ್ನು ನೋಡತೊಡಗಿದೆ. ನಡೆದುದೆಲ್ಲವೂ ನಡೆಯಬಾರದೆಂದು ಎನಿಸುತ್ತಿದ್ದರೂ ಅಸಹಾಯ-ಳಾಗಿ ನೋಡುತ್ತಿದ್ದೆ. ಆ ಹುಡುಗ ಕೊನೆಗೆ ಹೇಳಿದ: "ಐದು ರೂಪಾಯಿ ಕೊಡಿರಿ. ತಡಮಾಡಬೇಡಿರಿ. ಕೂಸನ್ನು ತಾಯಿ ಕೊನೆಯ ಬಾರಿ ನೋಡುತ್ತಿದ್ದರೆ ತೋರಿಸಿರಿ." ಅಜ್ಜಿ ಚಟ್ಟನೆ ೫ ರೂಪಾಯಿ ಅವನ ಕೈಯಲ್ಲಿಟ್ಟಳು. ಬುಟ್ಟಿಯಲ್ಲಿ ಮಲಗಿದ್ದ ನನ್ನ ಮಗು ಅಳತೊಡಗಿತು. ಕೂಸಿಗೆ ಕಸಿವಿಸಿಯಾಗಿ, ರಕ್ಷಣೆಗಾಗಿ ಕರೆಯುವಂತೆ ನನಗೆ ಭಾಸವಾಯಿತು. ತಾಯಿ ತನ್ನ ಅಪತ್ಯದ ರಕ್ಷಕಳು! ಎಂದಮೇಲೆ ರಕ್ಷಕಳು ಭಕ್ಷಕಳಾಗಬಹುದೆ? ವಿಚಾರ ಮಾಡುವಂತಹ ಸಂಗತಿ......ಮನುಷ್ಯರ ಸುಳಿವಿಲ್ಲದ ಅರಣ್ಯ—ಸ್ಮಶಾನಶಾಂತಿಯದೇ ಅಲ್ಲಿ ಸಾಮ್ರಾಜ್ಯ—ಗಿಡಗಂಟೆಗಳು ಕೂಡ ಅಂಜಿ ಸ್ತಬ್ಧವಾಗಿ ನಿಂತಿವೆ—ಮತ್ತು ಈ ಕರಾಳ ಹುಡುಗ ನನ್ನ ಸುಕುಮಾರನನ್ನು....ನನ್ನ ಹೃದಯದ ತುಣುಕನ್ನು....ನನ್ನ ಆಕಾಂಕ್ಷೆಗಳ ನಕ್ಷತ್ರವನ್ನು ಮುಳ್ಳುಗಳಿಂದ ತುಂಬಿದ ಹುಲ್ಲಿನ ಮೇಲೆ ಮಲಗಿಸುತ್ತಾನೆ—ಆತನ ರಕ್ತಪಿಪಾಸು ಕೈಗಳು ನನ್ನ ಮಗುವಿನ ಕುತ್ತಿಗೆಗೆ ಹೋಗುತ್ತಿವೆ—ಮತ್ತು ಮರುಕ್ಷಣದಲ್ಲಿ.......ತಾಯಿ ತನ್ನ ಸಂತಾನದ ಇಂತಹ ಕೊಲೆಯನ್ನು ತನ್ನ ಕಣ್ಣಿನಿಂದ ನೋಡ-ಲಾರಳು. ಅಶಕ್ಯವಿದೆ. ಜಗತ್ತಿನ ಯಾವುದೇ ಶಕ್ತಿ, ಮಮತೆಯ ಈ ಪಾಶವನ್ನು ಹರಿಯಲಾರರು.

ನಿಮಗೆ ಆಶ್ಚರ್ಯವಾಗಬಹುದು-ಆ ಸಮಯ ನನಗೆ ನೂರು ಆನೆಯ ಬಲವು ಬಂದಂತಾಯಿತು. ನನ್ನ ಮಗುವನ್ನು ಬದುಕಿಸುವು-ದಕ್ಕಾಗಿ, ನಾನು ಏನನ್ನು ಮಾಡಲೂ ಸಿದ್ಧಳಾದೆ. ಸ್ಫೂರ್ತಿಯ ಬಿರುಗಾಳಿಯೇ ನನ್ನನ್ನೆಬ್ಬಿಸಿ ನಿಲ್ಲಿಸಿತು. ನಾನು ಜಿಗಿದೆದ್ದು ಆ ಬುಟ್ಟಿಯನ್ನು ಕಸಿದುಕೊಂಡೆ. ಆ ಹುಡುಗ ಅದನ್ನು ಕೊಡಲು ನಿರಾಕರಿಸಿದ. ಅಜ್ಜಿ ನಡುವೆ ಬಂದಳು. ಇಬ್ಬರೂ ಅದನ್ನು ಜಗ್ಗ-ಹತ್ತಿದರು. ಅಜ್ಜಿ ನನ್ನನ್ನು ಒದೆಯಹತ್ತಿದಳು. ಗರ್ಜಿಸಿ ನುಡಿದಳು: "ನೀಚ ಭೋ...., ಇದನ್ನು ತಗೊಂಡು ಜಗತ್ತಿಗೆ ಯಾವ ಮೋರೆ-ಯನ್ನು ತೋರಿಸಬೇಕೆನ್ನುತ್ತೀ? ಎಲ್ಲರೂ ನಿನ್ನ ಮೇಲೆ ಬಹಿಷ್ಕಾರ-ಹಾಕಲಿಕ್ಕಿಲ್ಲವೇ? ಮಾನವನ್ನು ಕಾಯ್ದುಕೊಳ್ಳಬೇಕಾದರೆ ಸುಮ್ಮ-ನಿರು. ಬುಟ್ಟಿಯನ್ನು ಬಿಟ್ಟುಕೊಡು. ಬಿಡು ಬಿಡು!" ಆದರೆ ನಾನು ಚುಂಬಕದಂತೆ ಅಂಟಿಕೊಂಡೆ. ಲತ್ತಾಪ್ರಹಾರಗಳನ್ನು ಸಹಿಸಿದೆ. ಅಜ್ಜಿ ಹತಾಶಳಾಗಿ ತನ್ನ ದೀನಭಾವನ್ನು ಪ್ರದರ್ಶಿಸುತ್ತ ವಿನಂತಿಸಿ-ದಳು: "ನಿನಗೆ ಭ್ರಮ ಇದೆ ನರ್ಮದಾ! ನಾನು ಹೇಳುವುದನ್ನು ಕೇಳು. ಈ ಹುಚ್ಚುತನವನ್ನು ಬಿಡು. ಸಮಾಜಕ್ಕೆ ಅಂಜಬೇಕಾ-ಗುತ್ತದೆ. ಹುಚ್ಚೀ, ಮಾತೃತ್ವವು ವ್ಯಕ್ತಿತ್ವ, ಮತ್ತು ಸತೀತ್ವಕ್ಕಿಂತ ಹೆಚ್ಚಿನದಲ್ಲ. ಸಂಸಾರಕ್ಕೆ ಅಂಜಿ ಪಾಪವನ್ನು ಮುಚ್ಚಬೇಕಾಗುತ್ತದೆ. ಇನ್ನೂ ವೇಳೆ ಇದೆ—ವಿಚಾರಮಾಡು." ಅಜ್ಜಿಯ ಬುದ್ಧಿವಾದದ ಸಲುವಾಗಿ ನನಗೆ ಅಂತಹ ಗಂಭೀರ ಪರಿಸ್ಥಿತಿಯಲ್ಲಿಯೂ ನಗೆಬಂದಿತು. "ನೀನು ನನ್ನ ಅಜ್ಜಿಯೆಂಬುದನ್ನು ಬಲ್ಲೆ! ನಿನ್ನ ಮಾತನ್ನು ಕೇಳುವುದು ನನ್ನ ಕರ್ತವ್ಯವೆಂಬುದನ್ನೂ ಅರಿತಿದ್ದೇನೆ. ಆದರೆ ತಾಯಿಯಾಗಿ ನನಗೆ ಇನ್ನೊಂದು ಮಹತ್ತ್ವದ ಕರ್ತವ್ಯವಿದೆ. ಈ ಚಿಕ್ಕ, ಅಬೋಧ, ನಿರಪರಾಧೀ ಮಗುವನ್ನು ಮೃತ್ಯುವಿಗೆ ಒಪ್ಪಿಸಿದರೆ, ಜಗತ್ತಿನ ಎಲ್ಲ ಮಕ್ಕಳಿಗೆ ತಾಯಿಯ ಮೇಲಿನ ವಿಶ್ವಾಸವೇ ಹಾರಿ-ಹೋದೀತು. ಮಮತೆಯೆಂಬ ವಸ್ತು ಮಾಯವಾದೀತು. ತಾಯ್ತನ ನನ್ನನ್ನು ಕರೆಯುತ್ತಿದೆ. ನಾನು ಸುಮ್ಮನಿರಲಾರೆ. ದೂರ ಸರಿ! ನಾನು ಸಮಾಜದಲ್ಲಿಯೇ ಇರುವೆ. ಇವನ ತಂದೆಯ ಕಡೆಗೆ ಹೋಗುವೆನು. ಅವರು ಉದಾರರಿದ್ದಾರೆ. ಆದರೆ ಮಾತೃತ್ವದ ಈ ಕರೆಯನ್ನು ಕಡೆಗಣಿಸಲಾರೆ!"

ಆ ಹುಡುಗ ಸಮಯಸಾಧಿಸಿ ಓಡಿಹೋದ. ಅಜ್ಜಿ ಅವನ ಬೆನ್ನುಹತ್ತಿ ಒದರಿದಳು: "ಏ, ಎಲ್ಲಿ ಹೋದೆ? ನನ್ನ ರೂಪಾಯಿ ತಾ ಇಲ್ಲಿ.... ನನ್ನ ರೂಪಾಯಿ—ಕೇಳಿದೆಯಾ?"

ಎರಡನೆಯ ದಿವಸವೇ ನಾನು ಹೈದ್ರಾಬಾದಿಗೆ ಎಕ್ಸಪ್ರೆಸ್ ತಂತಿ ಕಳಿಸಿದೆ. ಮೂರನೆಯ ದಿನ ಸಂಜೆ ಸತ್ಯೇಂದ್ರ ಹೊರಟುಬಂದ. ನನ್ನ ಮುದ್ದುಮಗುವನ್ನು ಅವನ ಕೈಯಲ್ಲಿ ಒಪ್ಪಿಸಿ, ಅವನನ್ನಪ್ಪಿ, ಮನಸ್ಸು ತುಂಬುವಷ್ಟು ಅತ್ತುಬಿಟ್ಟೆ!

ಪ್ರಾಣಾಯಾಮ ಮತ್ತು ಶ್ವಾಸಕೋಶದ ಕ್ಷಯರೋಗ ನಿವಾರಣೆ

ಶ್ರೀ. ಲಕ್ಷ್ಮಣ ಜೋಷಿ, ಕೂಡ್ಲಿಗಿ

卐

ಶ್ವಾಸಕೋಶದೊಳಗಿಂದ ಪ್ರವೇಶಿಸಿ ಪುಪ್ಪುಸಗಳಲ್ಲಿ ಮನೆಮಾಡಿ ಕುಳಿತುಕೊಳ್ಳುವ ಧೂಳಿಯ ಕಣಗಳ ಸಮುದಾಯವೇ ಮಾನವನ ರೋಗಗಳಿಗೆ ಮೂಲಕಾರಣವಾಗಿದೆ. ಆ ಧೂಳಿಕಣಗಳನ್ನು ಹೊರಹಾಕುವುದಕ್ಕೆ, ಸಂಪ್ರದಾಯಶುದ್ಧರೀತಿಯಿಂದ ನಡೆಸುವ ಪ್ರಾಣಾಯಾಮವೇ ಮಹೋಪಾಯವಾಗಿದೆ.

卐

ಪ್ರಾಣಾಯಾಮವು ಶರೀರದ ಆರೋಗ್ಯ-ಆಯುಷ್ಯಗಳನ್ನು ಹೆಚ್ಚಿಸಲಿಕ್ಕೆ ಅತ್ಯುತ್ತಮ ಸಾಧನೆ; ಮತ್ತು ಅದರಷ್ಟು ಸುಲಭೋಪಾಯವು ಬೇರೊಂದಿಲ್ಲ. ಆದರೆ ಉತ್ಸಾಹದಲ್ಲಿ, ಅದರ ಮಾರ್ಗದಲ್ಲಿರುವ ಅಪಾಯವನ್ನು ಗುರುತಿಸದೆ ಅನೇಕರು ಕೇಡಿಗೀಡಾಗುವರು.

ಶರೀರದಲ್ಲಿ ಸಮಗ್ರವಾಗಿ ಸಂಚರಿಸುತ್ತಿರುವ ಪ್ರಾಣವನ್ನು ಉಚ್ಛ್ವಾಸ-ನಿಶ್ವಾಸಗಳಿಂದ ನಿಯಂತ್ರಿಸಿಕೊಳ್ಳುವುದೇ ಪ್ರಾಣಾಯಾಮ.

ಶರೀರದಲ್ಲಿಯ ಅಸಂಖ್ಯಾತ ಜೀವಕಣಗಳಿಗೆ ಆಮ್ಲಜನಕವನ್ನೊದಗಿಸಿಕೊಡಬೇಕು. ಆ ಕೆಲಸವನ್ನು ರಕ್ತವು ಮಾಡುತ್ತದೆ. ಶ್ವಾಸಕೋಶಗಳಲ್ಲಿಯ ಗಾಳಿಯ ಚೀಲಗಳಲ್ಲಿ ಬಂದ ಆಮ್ಲಜನಕವನ್ನು ಹೀರಿಕೊಂಡು, ರಕ್ತವು ಅದನ್ನು ತೆಗೆದುಕೊಂಡು ಜೀವಕಣಗಳಿಗೆ ಒಯ್ಯುತ್ತದೆ. ಈ ಆಮ್ಲಜನಕವನ್ನುಪಯೋಗಿಸಿಕೊಂಡು ರಕ್ತಗತ ಆಹಾರಸಾರವನ್ನು ತನ್ನ ಬೆಳವಣಿಗೆ ಮತ್ತು ಪುನರ್ರಚನೆಗೆ ಬೇಕಾದ ರೂಪಕ್ಕೆ ಬದಲಾಯಿಸಿಕೊಳ್ಳುವುದು ಜೀವಕಣದ ವೈಶಿಷ್ಟ್ಯ.

ಈ ಕಾರ್ಯಕ್ಕೆ ಸಹಾಯಮಾಡುವುದೇ ಪ್ರಾಣಾಯಾಮದ ಮುಖ್ಯೋದ್ದೇಶ. ಇದರಿಂದಾಗಿ ತಾನಾಗಿಯೇ ಒದಗಬಹುದಾದ ಲಾಭಗಳು ಬೇರೆ ಇರಬಹುದು. ಅವುಗಳ ವಿಚಾರ ಈ ಲೇಖನದ ಪರಿಮಿತಿಯಲ್ಲಿ ಬರುವುದಿಲ್ಲ. ಶರೀರವ್ಯವಹಾರದ ದೃಷ್ಟಿಯಿಂದ ಪ್ರಾಣಾಯಾಮದ ವಿಚಾರವನ್ನು ಮಾತ್ರ ಇಲ್ಲಿ ಮಾಡುವೆನು.

ಶರೀರದ ವಿವಿಧಾಂಗಗಳ ವ್ಯಾವಹಾರಿಕ ಮತ್ತು ಸ್ಥಾನಿಕ ಜ್ಞಾನವು ಇಂದು ಸರ್ವರಿಗೂ ಇದೆ. ನಾವು ತೆಗೆದುಕೊಂಡ ವಾಯುವು ಶ್ವಾಸಕೋಶಗಳಿಗೆ ಹೋಗಿ, ಗಾಳಿಚೀಲಗಳನ್ನು ಸೇರುತ್ತದೆ. ಆ ಹೊತ್ತಿಗೆ ಹೃದಯದಿಂದ ಬಂದ ಆಹಾರಸಾರ, ಅಂಗಾರಾಮ್ಲ-ಅನಿಲ, ನೀರಾವಿ (ಉಗಿ) ಉಷ್ಣಗಳಿಂದೊಡಗೂಡಿದ ರಕ್ತವು ಗಾಳಿಚೀಲಗಳಿಗೂ ರಕ್ತನಾಳಗಳಿಗೂ ನಡುವೆ ಸಾಮಾನ್ಯವಾಗಿರುವ ತೆಳ್ಳನೆಯ ಸಚ್ಛಿದ್ರ ಪೊರೆಯಮೂಲಕ ಆಮ್ಲಜನಕವನ್ನು ಹೀರಿಕೊಳುವುದು. ಈ ಕೆಲಸವು ಅನಿಲವಿನಿಮಯವೆನಿಸಿಕೊಳ್ಳುತ್ತದೆ. ಉಷ್ಣವೂ ಗಾಳಿಚೀಲಗಳಿದ್ದ ವಾಯುವನ್ನು ಸೇರುತ್ತದೆ. ಶರೀರಕ್ಕೆ ಬೇಡವಾದ ಈ ವಸ್ತುಗಳು ಹೀಗಾಗಿ ಹೊರಗೆ ಬರುತ್ತವೆ.

ಉಸಿರಾಟದಲ್ಲಿ ಅತಿ ಮುಖ್ಯವಾದುದೆಂದರೆ ಈ ಕಶ್ಮಲಗಳನ್ನು ಹೊರದೂಡುವುದು. ಆಮ್ಲಜನಕವು ದೊರಕುವುದು ಸ್ವಲ್ಪವಾಗುವುದರಿಂದ ಒದಗುವ ಅಪಾಯಕ್ಕಿಂತ ಈ ಕಶ್ಮಲಗಳು ಗಾಳಿಚೀಲಗಳಲ್ಲಿ ಉಳಿದುಕೊಂಡರೆ ಶರೀರಕ್ಕೆ ಉಂಟಾಗುವ ಅಪಾಯವು ಹೆಚ್ಚು. ಇದು ರೋಗಾದಿಗಳನ್ನು ಆಹ್ವಾನಿಸುವ, ಒಳಹೊಕ್ಕ ಗುಪ್ತಶತ್ರು ಇದ್ದಂತೆ; ಆದುದರಿಂದ ಉಚ್ಛ್ವಾಸಕ್ಕಿಂತ ನಿಶ್ವಾಸವು ಹೆಚ್ಚು ದೀರ್ಘವಾಗಿಯೂ, ಸಂಪೂರ್ಣವಾಗಿಯೂ ಇರಬೇಕು. ಈ ಉದ್ದೇಶವನ್ನು ಸಾಧಿಸುವುದಕ್ಕೆ ಪ್ರಾಣಾಯಾಮವು ಬೇಕು.

ನಾನಿಲ್ಲಿ ಪ್ರಾಣಾಯಾಮದ ಸಾಂಪ್ರದಾಯವನ್ನಾಗಲಿ, ಅದರ ಸಾಂಪ್ರದಾಯಿಕ ವಿಧಾನಗಳನ್ನಾಗಲಿ, ಅವುಗಳಿಂದ ಆಗುವ — ದೊರೆಯುವ ಆಧ್ಯಾತ್ಮಿಕ ಅನುಕೂಲತೆಗಳನ್ನೂ ಫಲಗಳನ್ನೂ ಆಗಲಿ ವಿವೇಚಿಸುವುದಿಲ್ಲ. ಶರೀರದ ಆರೋಗ್ಯಕ್ಕೆ ಸಾಮಾನ್ಯರೂಪದಲ್ಲಿ ಬೇಕಾದ ವಿಧಾನವನ್ನು ವಿವರಿಸಿ, ಈ ಸಾಂಪ್ರದಾಯಿಕ ವಿಧಾನಗಳಲ್ಲಿ ಯಾವುದಾದರೊಂದನ್ನು ತೆಗೆದುಕೊಂಡು, ಅದಕ್ಕೆ ಪೂರ್ವಸಿದ್ಧತೆ ಯೆಷ್ಟಿರಬೇಕು ? ಅದನ್ನು ನಡೆಸುವಾಗ ಅದರ ಮಾರ್ಗದಲ್ಲಿ ಇರುವ ಅಪಾಯಕರ ಪರಿಸ್ಥಿತಿಗಳನ್ನೂ, ಅವು ಎಷ್ಟು ಸಹಜವೆಂಬುದನ್ನೂ ತಿಳಿಸಲು ಯತ್ನಿಸುವೆನು.

ದೀರ್ಘವಾಗಿ, ಸಾವಕಾಶವಾಗಿ, ನಿಶ್ಶಬ್ದವಾಗಿ, ಮಿತಿಮೀರದೆ, ಹಿಡಿತತಪ್ಪದೆ, ಉಸಿರಾಡಿಸುವುದು ಪ್ರಾಣಾಯಾಮದ ಸಾಮಾನ್ಯ ವಿಧಾನ. ಇದನ್ನು ಯಾವ ಸ್ಥಿತಿಯಲ್ಲಿಯಾದರೂ ಯಾವಾಗಲೂ ಮಾಡಬಹುದು—ಮಾಡಲೇ ಬೇಕು. ಈಗ ನಮ್ಮ ಉಸಿರಾಟವು ನಮ್ಮ ಅರಿವಿನಿಂದ ಕೂಡದೆ ಆಗುತ್ತಿದ್ದರೆ, ಅದನ್ನು ಮನಸ್ಸಿಟ್ಟು ಮಾಡುವುದುತ್ತಮ. ಆದರೆ ಒಂದು ಮಾತು: ದೇಹದ ಯಾವ ಸ್ಥಿತಿಯಲ್ಲಿದ್ದರೂ ಬೆನ್ನೆಲುಬನ್ನು ಮಾತ್ರ ನೆಟ್ಟಗೆ ಇಟ್ಟುಕೊಂಡಿರುವುದು ತಪ್ಪದ ನಿಯಮ. ವಕ್ಷಸ್ಥಳವನ್ನು ಕುಗ್ಗಿಸುವುದರಿಂದ, ಡೂಗು ಮಾಡುವುದರಿಂದ—ಶ್ವಾಸಕೋಶಗಳ ಸಂಕೋಚ-ವ್ಯಾಕೋಚಗಳಿಗೆ ಅಡೆತಡೆಯಾಗಿ, ಅವುಗಳ ಅಂತರಪರಿಮಾಣದ ಮೇಲೆ ಅನನುಕೂಲ ಪರಿಣಾಮವನ್ನುಂಟುಮಾಡುತ್ತದೆ.

ಯೋಗವು ರಹಸ್ಯವಿದ್ಯೆಯೆಂತಲೂ, ಪ್ರಾಣಾಯಾಮಾದಿಗಳನ್ನು ಸಾಮಾನ್ಯರಿಗೆ ತಿಳಿಸಬಾರದೆಂತಲೂ, ಯೋಗಾಭ್ಯಾಸದಿಂದ ಹುಚ್ಚುಹಿಡಿಯುವುದೆಂತಲೂ ಅನೇಕವಿಧವಾದ ತಪ್ಪುಕಲ್ಪನೆಗಳಿವೆ. ಪ್ರಾಣಾಯಾಮವು ಸಮಸ್ತಪ್ರಾಣಿಗಳಲ್ಲಿ ನಡೆಯುತ್ತಿದೆ. ಇಷ್ಟೆ; ಅದು ಸಂಕಲ್ಪಯುಕ್ತವಾದುದಲ್ಲ. ಸಂಕಲ್ಪಮಾಡುವ ಯೋಗ್ಯತೆಯುಳ್ಳ ಪ್ರಾಣಿಗಳೆಲ್ಲ ಪ್ರಾಣಾಯಾಮ ಮಾಡಬಹುದು. ಅದಕ್ಕೆ ಜಾತಿ, ಮತ, ಪಂಥ ಲಿಂಗ ಮತ್ತು ವಯಸ್ಸುಗಳ ಲೆಕ್ಕವಿಲ್ಲ. ಇನ್ನು ಯೋಗದಿಂದ ಹುಚ್ಚುಹಿಡಿಯುವುದೆನ್ನುವ ಮಾತನ್ನೂ ತೆಗೆದುಕೊಳ್ಳುವ. ಇದರಲ್ಲಿ ಸ್ವಲ್ಪ ಸತ್ಯಾಂಶವಿದೆ; ಆದರೆ ಈ ಹುಚ್ಚುಹಿಡಿಯುವುದರ ಕಾರಣವನ್ನರಿಯದೆ ಯೋಗಾಭ್ಯಾಸವನ್ನೇ ತೆಗಳುವುದು ಯಾವ ಊರಿನ ನ್ಯಾಯ? ಯೋಗಾಭ್ಯಾಸದಲ್ಲಿ ಚತುರ್ಥಾಂಗವಾದ ಪ್ರಾಣಾಯಾಮವೇ ಇದಕ್ಕೆ ಕಾರಣ. ಇದು ಎರಡು ಮೊನೆಗಳ ಕೂರಸಿಯಿದ್ದಂತೆ. ಸರಿಯಾಗಿ ವ್ಯವಹರಿಸಿ ಇದನ್ನು ಉಪಯೋಗಿಸಿದರೆ, ಇದರಷ್ಟು ಉಪಯುಕ್ತವಾದುದು—ಫಲಕಾರಿಯಾದುದು—ಮತ್ತೊಂದಿಲ್ಲ. ಹಾದಿ ತಪ್ಪಿದರೆ ಮಾತ್ರ ಅದರಷ್ಟು ಅಪಾಯಕರವಾದುದು ಬೇರೊಂದಿಲ್ಲ.

ಶಿರಸ್ಸಂಪುಟದ ತಳವು ಮುಖದ ಮೇಲ್ಛಾವಣಿಯಾಗಿದೆ. ಇದು ಸಚ್ಛಿದ್ರವಾಗಿದೆ. ಮಿದುಳಿಗೆ ಹೋಗುವ ನರಗಳಿಗೆಲ್ಲ ಶಿರಸ್ಸಂಪುಟದ ಈ ಅಡಿಭಾಗದಲ್ಲಿ ರಂಧ್ರಮಾರ್ಗಗಳಿವೆ. ಕಣ್ಣು, ಕಿವಿ, ಮೂಗು ಮೊದಲಾದ ಜ್ಞಾನೇಂದ್ರಿಯಗಳಿಗೆ ಸಂಬಂಧಪಟ್ಟ ನರಗಳೂ ಈ ಛಿದ್ರಗಳ ಮುಖೇನ ಮಿದುಳಿನ ಸಂಬಂಧವನ್ನು ಇಟ್ಟುಕೊಂಡಿರುವುವು.

ಇವುಗಳಲ್ಲಿ ಈ ಪ್ರಾಣಾಯಾಮದ ಸಂಬಂಧವನ್ನಿಟ್ಟುಕೊಂಡ ನರಗಳ ಬಗ್ಗೆ ವಿಚಾರಿಸುವ: ಗಂಧವಾಹೀನರಾಗ್ರಗಳು ಶಿರಸ್ಸಂಪುಟದ ಅಡಿಭಾಗದ ಛಿದ್ರಗಳ ದ್ವಾರಾ ಇಳಿದಿರುತ್ತವೆ. ವಾಯುವು ಮೂಗಿನೊಳಗಿಂದ ಏರಿ ಭೂತಳಕ್ಕೆ ಸಮಾನಾಂತರವಾಗಿ ತೆರಳಿ, ಅಲ್ಲಿಂದ ಶ್ವಾಸನಾಳದೊಳಕ್ಕೆ ಕೆಳಗೆ ಇಳಿಯುತ್ತದೆ. ಈ ವಾಯುವಿನ ಕ್ಷಿತಿಜ ಸಮಾನಾಂತರ ಮಾರ್ಗದಲ್ಲಿ, ಮೇಲಿಂದ ಊಡುಗಳು ಇಳಿದಂತೆ Olfactory ನರಗಳ ಅಗ್ರಗಳು ಇಳಿದಿರುತ್ತವೆ. ಉಸಿರಾಡಿಸುವಾಗ ವಾಯುವು ನರಾಗ್ರಗಳಿಗೆ ತಾಗುತ್ತ ಹೋಗುತ್ತದೆ. ಉಚ್ಛ್ವಾಸಗಳಲ್ಲಿ, ಶಬ್ದವಾಗುವಂತೆ ರಭಸದಿಂದ ವಾಯುವನ್ನು ಎಳೆದುಕೊಂಡರೆ ಅಥವಾ ಹೊರಗೆ ಬಿಟ್ಟರೆ, ಆ ರಭಸದ ಪೆಟ್ಟು ಈ ನರಾಗ್ರಗಳಿಗೆ ಬೀಳುವುದು. ಈ ಪೆಟ್ಟಿನ ಪರಿಣಾಮವು ಮಿದುಳಿನಲ್ಲಿಯ Olfactory ನರಕೇಂದ್ರಕ್ಕೆ ಆಗುವುದು. ಹೀಗೆ ಸತತೋಚ್ಛ್ವಾಸ-ನಿಶ್ವಾಸಗಳ ರಭಸದ ತಾಡನದಿಂದ, ಆ ನರಕೇಂದ್ರವು ಕೆಡುವುದು ಇದು ಸಾಮಾನ್ಯವಾಗಿ ನಮ್ಮ ಗೋಚರಕ್ಕೆ ಬಾರದು. ಆದರೆ ಮಿದುಳಿನ ಈ ಭಾಗವು ನಿರಂತರವಾಗಿ ತಾಡಿತವಾಗುವುದರಿಂದ, ಮಿದುಳಿನ ಬುಡವೇ ಸಡಿಲಾಗುವುದು. ಹೀಗಾಗಿ ಮಿದುಳು ಕೆಡುವುದು ಕಷ್ಟವಲ್ಲ. ಯೋಗಾಭ್ಯಾಸದಲ್ಲಿ ಅತಿರೇಕದ ಆತುರತೆಯಿಂದಾಗಿ ಯುಕ್ತಾಯುಕ್ತತೆಗಳನ್ನಾಲೋಚಿಸದೆ, ಶರೀರವ್ಯಾವಹಾರಿಕ ತಿಳಿವಳಿಕೆ ಇಲ್ಲದೆ, ಪುಸ್ತಕಗಳಲ್ಲಿ ಕಂಡುಬರುವ ಸಲಹೆ-ಸೂಚನೆಗಳನ್ನನುಸರಿಸಲು ಯತ್ನಿಸಿ, ಈ ಆಧುನಿಕರು ಸುಲಭದಲ್ಲಿ ಉನ್ಮಾದವನ್ನು ಪಡೆದರೆ ಯೋಗಶಾಸ್ತ್ರದ ತಪ್ಪೆ? ಅದರ ಒಂದಂಗವಾದ ಪ್ರಾಣಾಯಾಮದ ತಪ್ಪೆ?

ಪ್ರಾಣಾಯಾಮವನ್ನು ಮಾಡುವುದಾದರೆ, ಸೂರ್ಯೋದಯಕ್ಕೆ ಮುಂಚಿತವಾಗಿಯಾದರೆ ನೆಟ್ಟಗೆ. ಆ ಸಮಯದಲ್ಲಿ ವಾತಾವರಣದಲ್ಲಿ ಧೂಳಿ ಅಷ್ಟೊಂದು ಇರಲಾರದು. ಪ್ರಶಾಂತವಾಗಿಯಿದ್ದು ಮಾನಸಿಕ

ಶಾಂತಿ ಸೇವಾಸದನದ ಹೊಸ ಪ್ರಕಟಣೆಗಳು

ಜೈನಧರ್ಮ ಶ್ರೀ. ಮಿರ್ಜಿ ಅಣ್ಣಾರಾಯರು	೧೫-೦-೦
ಹಾಲು-ಹಣ್ಣು (ಕವನ ಸಂಗ್ರಹ) ಶ್ರೀ. ಭುಜೇಂದ್ರ ಮಹಿಷವಾಡಿ	೧-೮-೦
ಮೂಲ ಶಿಕ್ಷಣದ ಮೌಲ್ಯಮಾಪಣ ಶ್ರೀ. ಮಿರ್ಜಿ ಅಣ್ಣಾರಾಯರು	೦-೧೨-೦
ಬಾಳ-ಬಂಡಿ (ಕವನ ಸಂಗ್ರಹ) ಶ್ರೀ. ಬಾಳ ಬಿ. ಉಪಾಧ್ಯೆ	೦-೮-೦
ಭರತೇಶನ ನಾಲ್ಕು ಚಿತ್ರಗಳು ಶ್ರೀ. ಮಿರ್ಜಿ ಅಣ್ಣಾರಾಯರು	೧-೪-೦

ಅಚ್ಚಿನಲ್ಲಿ :

ಸಂಸ್ಕೃತಿಯ ಹೃದಯ

ಭಾರತದ ಬೆಳಕು

ಪ್ರತಿಗಳಿಗಾಗಿ ಬರೆಯಿರಿ:

ಶಾಂತಿ ಸೇವಾ ಸದನ, ಸೇಡಬಾಳ

ಪೋ. : ಸೇಡಬಾಳ (ಜಿಲ್ಲಾ ಬೆಳಗಾಂವಿ)

ಸ್ತಿಮಿತತೆಗೂ ಕಾರಣವಾಗುತ್ತದೆ. ನೇತಿಕ್ರಿಯೆಯು ಪ್ರಾಣಾಯಾಮಕ್ಕೆ ಪೂರ್ವಕ್ರಿಯೆಯಾಗಬೇಕು. ಪ್ರಾಣಾಯಾಮವನ್ನು ಯಾವ ಸ್ಥಿತಿಯಲ್ಲಾದರೂ ಮಾಡಬಹುದಾದರೂ, ಪದ್ಮಾಸನಾದಿ ಧ್ಯಾನಾನುಕೂಲ ಆಸನಗಳಲ್ಲಿ ಯಾವುದಾದರೊಂದರಲ್ಲಿ ಮಾಡುವುದು ಲೇಸು. ಯಾವ ಸ್ಥಿತಿಯಲ್ಲಿ ಪ್ರಾಣಾಯಾಮವನ್ನು ಮಾಡಿದರೂ ಒಂದು ಮಾತನ್ನು ಮಾತ್ರ ನೆನಪಿನಲ್ಲಿಡಬೇಕಾಗಿದೆ ಬೆನ್ನೆಲುಬನ್ನು ನೆಟ್ಟಗೆ ಇಟ್ಟುಕೊಳ್ಳಬೇಕು. ಸ್ಥಳವು ಪರಿಶುದ್ಧವೂ, ಪ್ರಶಾಂತವೂ ವಾಯುಸಂಚಾರದ ಅನುಕೂಲತೆ ಇದ್ದುದೂ ಆಗಿರಬೇಕು.

ಇಷ್ಟು ಹೇಳಿದಮೇಲೆ, ಮತ್ತೊಂದು ಮಾತನ್ನು ಹೇಳದೆ ಈ ಲೇಖನವನ್ನು ಮುಗಿಸಲಾರೆನು. ಇದೀಗ ರಾಷ್ಟ್ರದಲ್ಲಿ ಕ್ಷಯರೋಗ ನಿವಾರಣೋಪಾಯಗಳು ನಡೆಯುತ್ತಿವೆ. ರಾಷ್ಟ್ರದಲ್ಲಿ ಔದ್ಯೋಗಿಕ ಪ್ರಗತಿ, ವಾಹನಗಳ ವೇಗ ಮತ್ತು ಆಹಾರಪದ್ಧತಿಗಳಲ್ಲಿಯ ದೋಷಗಳಿಂದ ಕ್ಷಯದ ಪ್ರಾಬಲ್ಯವು ಹೆಚ್ಚಾಗುತ್ತಿದೆ. ಯಾವುದೇ ಪಟ್ಟಣದಲ್ಲಿ ನೋಡಿದರೂ ವಾತಾವರಣವು ಧೂಳಿಯ ಸಮುದ್ರದಂತೆ ಇರುತ್ತದೆ. ಉಸಿರಾಡಿಸುವ ಜನರ ಶ್ವಾಸಕೋಶಗಳು ಧೂಳಿಯ ಕಣಗಳಿಂದ ತುಂಬಿ ಹೋಗುತ್ತವೆ. ಶ್ವಾಸಕೋಶಗಳು ತ್ರಿಕೋಣಾಕಾರದುವಾಗಿದ್ದು ಅವುಗಳ ಶೃಂಗಗಳು ಮೇಲ್ಗಡೆ ಇರುತ್ತವೆ. ನಾವು ಉಸಿರಾಡಿಸುವಾಗ ವಾಯುವಿನಲ್ಲಿರುವ ಧೂಳಿಯ ಕಣಗಳು ಶ್ವಾಸಕೋಶಗಳಲ್ಲಿ ಹೋಗುವುವು. ಅವು ಎಲ್ಲಾ ಗಾಳಿಚೀಲಗಳನ್ನು ಸೇರುವುವು. ಪಾದದ ಕಡೆ ಇರುವ ಗಾಳಿಚೀಲಗಳಲ್ಲಿ ಹೊಕ್ಕ ಧೂಳಿಯ ಕಣಗಳು ಹಿಂದಿರುಗಿ ಕರಗಿ ಹೊರಗೆ ಬರುವುದಕ್ಕೆ, ಸಾಮಾನ್ಯವಾದ ಉಸಿರಾಟಕ್ಕಿಂತ ಸ್ವಲ್ಪ ಹೆಚ್ಚು ಬಲವಾದ ಉಸಿರಾಟವು ಅಗತ್ಯ. ಆದರೆ ಶೃಂಗಗಳಲ್ಲಿಯ ಗಾಳಿಚೀಲಗಳಲ್ಲಿಯ ಧೂಳಿಯ ಕಣಗಳು ಹೊರಬರುವುದು ಅಷ್ಟು ಸುಲಭವಲ್ಲ. ಹೀಗಾಗಿ ಬರುಬರುತ್ತ ಆ ಮೂಲೆಗಳು ಕಸದ ಬುಟ್ಟಿಗಳಾಗುವುವು. ಆಗ ಅವು ರೋಗಾಣುಗಳಿಗೆ ಆಗರವಾಗುವುವು. ಇದಾಗದಂತೆ ನೋಡಿಕೊಳ್ಳುವುದಾದರೆ ರೋಗಕ್ಕೆ ಕಾರಣವೇ ಇಲ್ಲವಲ್ಲ! ಈ ಕಸವನ್ನಾದರೂ ಎಷ್ಟು ಸುಲಭವಾಗಿ ಹೊರಚೆಲ್ಲಬಹುದಲ್ಲ! ದೀರ್ಘ ಉಚ್ಛ್ವಾಸ-ನಿಶ್ವಾಸದ ಅಭ್ಯಾಸಗಳಲ್ಲಿ ಕಾಲು ಅಗಲವಾಗಿಟ್ಟು ನಿಂತು, ಕೈಗಳನ್ನು ಮೇಲಕ್ಕೆತ್ತುತ್ತ ಉಸಿರನ್ನೆಳೆದುಕೊಂಡು, ಕೈಗಳ ಜೊತೆಗೆ ಶಿರವನ್ನು ಅವುಗಳ ನಡುವೆ ಇಟ್ಟುಕೊಂಡು, ಕೈಗಳ ಜೋಡಣೆಯನ್ನು ಕಾಲುಗಳ ನಡುವೆ ಹಾಯಿಸಿ, ಹಿಂದಕ್ಕೆ ಹೋಗುವಾಗ ಉಸಿರನ್ನು ಬಿಡುತ್ತ ಹೋದರೆ, ಅದರಿಂದ ಸಾಕಷ್ಟು ಸಹಾಯವಾಗುವುದು. 'ಭಸ್ತ್ರಿಕೆ' 'ಕಪಾಲಭಾತಿ' ಇವುಗಳಲ್ಲಿ ಯಾವುದನ್ನಾದರೂ ಒಂದನ್ನು ಮಾಡಿದಲ್ಲಿ, ಊದುತಿದಿಗಳನ್ನಿಟ್ಟು ಕಣಗಳನ್ನು ಹೊರದೂಡಿಸಿದಂತಾಗುವುದು. ಅದೂ ಅಲ್ಲದೆ ಶೀರ್ಷಾಸನವಾಗಲಿ ಮತ್ತಾವ ತಲೆ ಕೆಳಗಾಗಿರುವ ಆಸನದಲ್ಲಿ ದೀರ್ಘ ಸತತ, ಭರದ ನಿಶ್ವಾಸದಿಂದ ಕಶ್ಮಲವನ್ನು ಹೊರಗೆಡಹಬಹುದು. ಆದರೆ ಈ ರೋಗವು ಬಾರದಂತೆಯೇ ನೋಡಿಕೊಳ್ಳಲು, ಅಥವಾ ಪ್ರಾರಂಭಾವಸ್ಥೆಯಲ್ಲಿ— ಈ ಪ್ರಾಣಾಯಾಮವು ಅತ್ಯನುಕೂಲ; ಆದರೆ ಬಹಳ ಪ್ರಕೋಪಕ್ಕೆ ಬಂದಮೇಲೆ ಪ್ರಾಣಾಯಾಮವು ನಿರುಪಯೋಗಿ.

ಆದರೆ ಮತ್ತೊಮ್ಮೆ ನಾನು ಹೇಳಬಯಸುವುದೇನೆಂದರೆ, ನಾನು ಹೇಳಿದ ಎಚ್ಚರಿಕೆಗಳನ್ನು ಮನದಲ್ಲಿಟ್ಟುಕೊಂಡು, ಗುರುವಿನ ಸಮ್ಮುಖದಲ್ಲಿ ಮಾಡುತ್ತ, ಪ್ರಾಣಾಯಾಮವನ್ನು ಅಭ್ಯಾಸಗತ ಮಾಡಿಕೊಳ್ಳುವುದೇ ನಿರಪಾಯಕರ.

ಸರಸ ಸಣ್ಣಕಥೆಗಳ ಸಂಕಲನ!

"ಜೀವನರಂಗ"

ಸುಪ್ರಸಿದ್ಧ ಸಣ್ಣಕಥೆಗಾರರಾದ
ಶ್ರೀಮಾನ್ ಬೆಟಗೇರಿ ಕೃಷ್ಣಶರ್ಮರ ಮುನ್ನುಡಿಯು
ಈ ಸಂಕಲನಕ್ಕೆ ಇದೆ.

ಬರೆದವರು:
ಶ್ರೀ. ಬಿ. ಆರ್. ವಾಡಪ್ಪಿ ಎಂ. ಎ. ಬಿ. ಟಿ.

ಬೆಲೆ: ೧-೪-೦ ಮಾತ್ರ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಶನ್!
ಮುಖ್ಯ ಮಾರಾಟಗಾರರು:
ಮನೋಹರ ಗ್ರಂಥ ಭಾಂಡಾರ, ಧಾರವಾಡ

ಸಮುದ್ರ ಮೋಹಿನಿ

[ನವ್ಯಕವನ]

ಶ್ರೀ. ಅರವಿಂದ ನಾಡಕರ್ಣಿ, ಬಿ. ಎಸ್‌ಸಿ., ಎಲ್‌ಎಲ್. ಬಿ. ಮುಂಬಯಿ

卐

[ಸಂದರ್ಭ ಸೂಚನೆ:— ಕಾರವಾರದ ರಮಣೀಯ ಪರಿಸರದ ನಡುವೆ ತೆರೆತೆರೆಯಾಗಿ ತುಳುಕುವ ಸಮುದ್ರದ ನಿರಂತರ ಕರೆಯನ್ನು ನೆನೆದು ಬರೆದ ಕವನ. ಸುತ್ತಲೂ ಬೆಳಗುವ ದೈವಸೃಷ್ಟಿ, ಅದನ್ನು ಕಂಡವನ ಅಂತರಂಗದಲ್ಲಿ ಉಕ್ಕುವ ಆನಂದ, ಇವುಗಳ ಪ್ರತೀಕವೇ ಆ ಸಮುದ್ರ. ಅದನ್ನೇ ಕ್ರಮೇಣ ೧ನೆಯ ಮತ್ತು ೨ನೆಯ ಭಾಗಗಳಲ್ಲಿ ಬಳಸಲಾಗಿದೆ.]

"The world is eharged with the grandeur of God."

G. M. Hopkins.

(೧)

ಸಮುದ್ರ ನಗುತ್ತಿತ್ತು ಬುರುಗಿನ ದುಗ್ಧಹಾಸದಲಿ.
ಸುತ್ತುಮುತ್ತಲಿನ ರೆಂಬೆ-ಕೊಂಬೆಗಳಿಂದೆದ್ದ ಕೋಲಾಹಲಧ್ವನಿ
ಹಕ್ಕಿಕಿಲಕಿಲದ ಗೆಜ್ಜೆ ಕಿಂಕಿಣಿಯ ಗಂಧರ್ವಗೀತ
ಮರಮರ ಹನಿಸುವ ಹೂಮಳೆಯ ಏಕತಾನ
ವಿವಿಧವರ್ಣದ ಹೂಗೊಂಚಲುಗಳಿಂದುಕ್ಕಿ ಜಿಗಿದ
ಜೇಕಳನೀರಿನ ಮಂಜುಳರವ
ಎಲ್ಲವೂ ಒಂದುಗೂಡಿ ಲೀನವಾಗಿತ್ತು ಕಡಲ ನಗೆಯಲ್ಲಿ.

ಅದು ಯಾವ ಸ್ಥಳ ನೋಡಿದೆಯಾ ಗೆಳೆಯ?
ವೃಕ್ಷದ್ವಯದಿಂದ ಕುಬೇರಸಂತತಿಯೆದ್ದ ನೆಲ.
ಆಜಗರ–ಆನೆಗಳ ತೊಗಲ ಕಳೆದು ಅರಸರೆದ್ದ ಸ್ಥಳ.
ಬಂಡೆಗಲ್ಲಿನಿಂದ ತೇಜವತಿಯೆದ್ದ ಕ್ಷೇತ್ರ.
ಇದನ್ನರಿತ,ಆ ಸಮುದ್ರಬಳಿಯ ಮೇರುವನ್ನು ಕೇಳು.
ವರುಷ–ವರುಷಗಳಿಂದ ಕಾಣುತ್ತ ನಿಂತ
ಆ ಮಹಾಮಹಿಮನನ್ನು ಕೇಳು
ಮತ್ತೆ ನಿನ್ನ ಗೆಳೆಯನ ತೃಪ್ತಿಪಡಿಸಿಕೋ.

ಅಗೋ ಸಮುದ್ರ ನಗುತಿದೆ ಬುರುಗಿನ ದುಗ್ಧಹಾಸದಲಿ.
ಅದರ ನೋಟಮಾತ್ರಕೆ
ಆದರ ವಿದ್ಯುತ್‌ಸ್ಪರುಶ ಮಾತ್ರಕೆ
ಸೆಟೆದು ನಿಂತ ರೋಮ–ರೋಮಗಳ ಅಂಚಿನಲಿ
ಕುಣಿಯುತಿದೆ ಜೀವ.
ಅಗೋ ನೋಡು ಈ ನೃತ್ಯ ಮಹೋತ್ಸವ ಎಲ್ಲೆಲ್ಲೂ.
ಆ ಸಾಗರಸಲಿಲದಲಿ ತೆರೆತೆರೆ ಮುದ್ದಾಡಿ ಎದ್ದೆದ್ದು
ಹೊಡೆಯುತಿವೆ ಲಾಗಲಗ್ಗೆ ದೂರದಿಗಂತದನಕವೂ.

ಸುತ್ತುಮುತ್ತು ಮಗ್ನವಾಗಿವೆ ಲಾಗಲಹರಿಯಲಿ
ಹೂ ಹಕ್ಕಿ ತಳಿರು ರೆಂಬೆ ದುಂಬಿ ಚಿಟ್ಟೆ ಎಲ್ಲವೂ.
ವಿಶ್ವ ಕುಣಿಸುವ ಆ ಸಂಜೀವನೀ ರಸ
ಹರಿಯುತಿದೆ ಎಲ್ಲೆಲ್ಲೂ ಝುರಿಝುರಿಯಾಗಿ
ಸಮುದ್ರದೊಡಲಿಂದ ಹೊಮ್ಮಿ!

(೨)

ಆಹಾ ಸಮುದ್ರವೇ!
ವಿಶ್ವವ್ಯಾಪಿ ಸಮುದ್ರಲಹರಿಯೇ!
ನಾ ಹುಂಬ, ಮಣ್ಣಿನ ಮಡಿಕೆಯಲಿ ಪ್ರಾಣವ ಹೂಳಿಟ್ಟು
ಚಪ್ಪರಿಸುತ್ತಿದ್ದೆ ಹೊಟೇಲಿನ ಆಯ್ಸ್‌ಕ್ರೀಮು.
ಸವಿಯುತ್ತಿದ್ದೆ ಚಿತ್ರಪಟದ ಪ್ರೇಮಕಸರತ್ತು.
ವಿಹರಿಸುತಿದ್ದೆ ಹೊಸಕಾರಿನಲಿ ಹಣಚೀಲವ ಎದೆಗೊತ್ತಿ
ಪೌಡರುಮೊಗಗಳ ಕಂಡು ಕಣ್ಣು ಹೊಡೆಯುತ್ತ!

ಭೂಗರ್ಭದ ಮಣ್ಣಿನ ಕಾವು ತೀರಲು
ಸೂರ್ಯ ಇಳಿದಿದ್ದ ಆ ಸಮುದ್ರದ ಬಳಿ
ಅದರ ಜಲವಿಸ್ತಾರ ಬೆಳಗಿಸುತ್ತ.
ಆಗ ನಾ ನಡೆದಿದ್ದೆ ತೀರಕ್ಕೆ.

ಆಗ ಕಂಡಿತ್ತು ಸಮುದ್ರ ಸಮೀಪವಾಗಿ.
ಊರಲ್ಲಿ ಹೊಡೆದ ರಸದೂಟ ರಾಶಿಯೆಲ್ಲಾ
ಆ ಸಮುದ್ರದ ಒಂದೇ ತೆರೆಯೆದುರು
ಶುಷ್ಕಮಳಲ ಹುಡಿಹುಡಿಯಾಗಿ ಬಿತ್ತಲ್ಲ!
ನಾ ನಿಂತೆನು ಅಧೋಮುಖನಾಗಿ ನನ್ನನ್ನೇ ಹಳಿದು.

ಎದುರು ನಗುತ್ತಿತ್ತು ಸಮುದ್ರ ನೊರೆಯ ಕ್ಷೀರಹಾಸದಲಿ
ಉಸಿರುಗಟ್ಟಿದ ಜೀವಕೆ ಪ್ರಾಣವಾಯು ನೀಡುವ
ಪಯೋಮಯ ಶಾಂತ ಸದ್ದು!
ಕಾಲ್ಕೆಳಗೆ ಹರಹಿದ ಬೆಸ್ತನ ಜಾಲಜಾಲಗಳ ದಾಟಿ
ಸಮೀಪಿಸಿದೆ ಜಲಪ್ರದೇಶ.

ಹತ್ತಾರು ಮಹಾಯಾಗಗಳ ಮಾಡಿದ ಅರಸನಂತೆ
ತಲೆದೂಗುತೆಂದೆ ಹೊಸವಿಜಯದುತ್ಸಾಹದಿ—
"ನಾನೀಗ ಬದುಕಲರ್ಹನು ಈ ಮರ್ತ್ಯಲೋಕದಲಿ."
ಎಡಬಲಕೆ ಕೂತಿದ್ದರು ಎಷ್ಟೋಜನ ಹರಟೆ ಹೊಡೆಯುತ್ತ.
ವಿಶೇಷ ಘಟನೆಗಳ ಕುರಿತು ಚರ್ಚಿಸುತ್ತ
ಭವಿಷ್ಯಸುಖದ ನಕ್ಷೆಬಿಡಿಸುತ್ತ ಮಳಲಲ್ಲಿ
ನೌಕರಿ–ಧಂದೆಗಳ ಪ್ರಗತಿಲಕ್ಷಣ ಅಭ್ಯಸಿಸಿ.

ಜನ ಎದ್ದೆದ್ದು ಹಿಂದಿಟ್ಟರು ಹೆಜ್ಜೆ ಮನೆಯೆಡೆಗೆ
ಬಾವಿ–ಕೆರೆಗಳ ನೀರಿನಲಿ ಕೈಯಾಡಿಸಲು.
ಸೂರ್ಯಕಿರಣ ಹಿಂದೆಗೆಯುತಿದ್ದುವು ಕ್ರಮೇಣ
ಕತ್ತಲು ಕಲುಕುತ್ತಿತ್ತು ಮನಮನ.

ಎದುರು ನಗುತ್ತಿತ್ತು ಸಮುದ್ರ ನೊರೆಯ ಕ್ಷೀರಹಾಸದಲಿ.
ಸರ್ವರೂ ಬರುತ್ತಾರೆ ಸಮುದ್ರದೆಡೆಗೆ ದಿನದ ಹೋರಾಟ. ದಂತ್ಯದಲಿ
ಸಕಲಜೀವಿಗಳ ಹಂಬಲವೇ ಅದು....
ಆದರೆ
ಕಣ್ಣೆದುರು ದಿಗಂತ ವ್ಯಾಪಿಸಿದ ಜಲವಿಸ್ತಾರ ನೋಡದೇ
ಬೊಬ್ಬುಳಿಗಳಲಿ ಅರಸುವರಲ್ಲ, ಜಲಬಿಂದುಬಿಂದು!

ಓ ನನ್ನ ಬಂಧು-ಭಗಿನಿಯರೇ
ಸ್ತಂಭಿತ ಕೆರೆ–ಬಾವಿನೀರಿನಲಿ ಈಸಾಡಬಯಸುವ ಜೀವಿಗಳೇ

ಇಗೋ ಬನ್ನಿರಿ ಈ ತೀರಕ್ಕೆ
ಎಲ್ಲೆಲ್ಲೂ ಸೆಲಿಸೆಲೆಯಾಗಿ ಹೊಳೆಹೊಳೆಯಾಗಿ ಹರಿವ
ಈ ಸಮುದ್ರಜಲದಲ್ಲಿ ಈಸಾಡಬನ್ನಿರಿ.
ಆದರ ಜಲಬಿಂದುಸ್ಪರುಶಕ್ಕೆ ಮರೆಯಿರಿ
ಈ ಮಳಲಲಿ ಹರಹಿದ ಬೆಸ್ತನ ಜಾಲಗಳನ್ನು.
ಆದರ ಪಾನಮಾತ್ರಕೆ ತೊಳೆಯಿರಿ ನಿಮ್ಮ ಮನ-ಪ್ರಾಣ-ಗಳನ್ನು
ಹೊಸ ಚೈತನ್ಯ ಪಡೆದು ಕೃತಕೃತ್ಯರಾಗಿರೀ ಮಿಟುಕು. ಬದುಕಿನಲಿ.

ನನ್ನನು ವಶಪಡಿಸಿತ್ತು ಆ ಸಮುದ್ರದ ಮೋಹಿನಿ

ಆದಾಗ ಕೇಳಿತ್ತು ಜಡಹೆಜ್ಜೆಯ ಸದ್ದು.
ಎಡ ಬಲ ಎಡಬಲ ಎಡ ಬಲ.
ಹಾ ತಿಳಿಯಿತು, ನಿರಂತರ ಗಸ್ತುಹಾಕುವವನೇ ಬಂದಿದ್ದನಾಗ
ನನ್ನ ಸಮೀಪಿಸಿ ಅಪ್ಪಣೆಯಿತ್ತ ಅಧಿಕಾರವಾಣಿಯಲಿ ಕರ್ನಲ್‌ನಂತೆ.

ಅಂತೂ ಇಂತೂ ಹೊರಡಬೇಕಾಯ್ತು ಅವನನ್ನನುಸರಿಸಿ,
ಸೈನಿಕನಂತೆ ದಿನದ ಹೋರಾಟಕ್ಕೆ.
ಇದು ಎಂದೆಂದಿಗೂ ನಡೆಯುವುದೇ.
ಅದಕಾಗಿ ಬೇಸರಪಡುವ ಕಾರಣವಿಲ್ಲ.
ನಾನೆಲ್ಲಿದ್ದರೂ ಮನ ವ್ಯಾಪಿಸುತಿದೆ
ಕಣ್ಣು ಸೆಳೆಯುತಿದೆ ಪ್ರಾಣ ಕುಣಿಸುತಿದೆ
ಸಮುದ್ರ ಮೋಹಿನಿ.
ಭಗ್ನಬಂಧನದ ನಿರಂತರ ಸಮುದ್ರಮೋಹಿನಿ.

ತಂದೆಯು ಪಾತಕ

(ಸಣ್ಣಕತೆ) *

ಶ್ರೀ. ಆನಂದ ವರ್ಟಿ, ಬೆಳಗಾಂವಿ

●

ಇದು ಗೋವಾಂತಕದಲ್ಲಿಯ ಇಂದಿನ ಜೀವನಚಿತ್ರ. ಯಾವುದೇ ಪರಾಧೀನ ಪ್ರದೇಶದಲ್ಲಿ ಶಾಬಬಾಬನಂತಹ ಸ್ವಾರ್ಥಸಾಧಕ ದೇಶದ್ರೋಹಿಗಳೂ ಇರುವರು; ಸೋನೂನಂತಹ ನಿಸ್ವಾರ್ಥಿಗಳಾದ ದೇಶಸೇವಕರೂ ಇರುವರು. ನಿಸ್ವಾರ್ಥಕ್ಕೆ ಯಾವಾಗಲೂ ಜಯವು ಕಟ್ಟಿಟ್ಟದ್ದು !

●

ಸೋನೂ ಕೋಣೆಯಲ್ಲಿ ಕುಳಿತು ಮಹಾತ್ಮಾ ಗಾಂಧಿಯವರ ಆತ್ಮಚರಿತ್ರೆಯನ್ನೋದುತ್ತಿದ್ದ. ನಿನ್ನೆಯೇ ಅವನು ಪಣಜಿಯಿಂದ ಮನೆಗೆ ಬಂದಿದ್ದ. ಎರಡು ದಿನಗಳ ರಜೆ ದೊರೆತಿತ್ತು ಅವನಿಗೆ.

ಬೇರೆಯ ಕೋಣೆಯಲ್ಲಿ ಅವನ ತಾಯಿ ಮತ್ತು ತಂದೆಯವರು ಮಾತಾಡುತ್ತಿದ್ದರು. ಅವರ ಮಾತುಗಳು ಅವನ ಕಿವಿಯಮೇಲೆ ಬೀಳುತ್ತಿದ್ದುವು.

ತಾಯಿ ಅನ್ನುತ್ತಿದ್ದಳು: " ಬಾಂದೆಯ ಆ ಹೂಗಾರ್ತಿ ನನ್ನ ಹತ್ತರ ಹೇಳಿದ್ದು ನಿಜವೇ ? "

" ಏನೆನ್ನುತ್ತಿದ್ದಳು ಆ ಫೂಲೂ ? ಬಹಳ ಬಾಯ್ಬಡಿಕಿ ಆಕೆ. ಆಕೆಗೆ ಒಂದು ದಿನ ನನ್ನ ಕೈ ತೋರಿಸಿ ಬಿಡುತ್ತೇನೆ. ನನ್ನನ್ನು ಅರಿಯಳಾಕೆ ! "

" ಅವಳ ಮಗನನ್ನು ನೀವು ಬಡಿದಿರೆಂದು ಹೇಳುತ್ತಿದ್ದಳು ! "

" ಹೌದ್ಹಾದು ! ಹೊಡೆಯದೆ ಮತ್ತೇನು ಮಾದುವುದು ? ಮತ್ತೂ ಸ್ವಲ್ಪದರಲ್ಲಿಯೇ ತಪ್ಪಿಸಿಕೊಂಡ ! ಅವನನ್ನು ನಾನು ನುಚ್ಚು-ನೂರು ಮಾಡಿ ಬಿಡುತ್ತಿದ್ದೆ ! " ಶಾಬಾಶೆಣ್ಯೆ ಕೈಗಳನ್ನು ಬೀಸುತ್ತ ಅಂದನು.

" ಅಂತಹದೇನು ಮಾಡಿದ ಅಂವ ? " ಶಾಂತಾಬಾಯಿ ಕೇಳಿದಳು.

" ಏನು ಮಾಡಿದನೆಂದು ಕೇಳುತ್ತೀಯಾ ? ಆ ಭೋಸಡಿ ಹೇಳಲಿಲ್ಲವೇ ನಿನಗೆ ? "

" ಅವಳೇನೋ ಹೇಳಿದಳು; ಆದರೆ ನನಗೆ ನಿಮ್ಮ ಬಾಯಿಂದ ಕೇಳಬೇಕಾಗಿದೆ. "

" ಕೇಳು ಹಾಗಾದರೆ ! ಫೂಲೂನ ಮಗ ಬಹಳ ತುಂಟ. ಊರಲ್ಲೆಲ್ಲ ಹೆಸರನ್ನು ಕೆಡಿಸಿಕೊಂಡಿದ್ದಾನೆ. ಮಾವಿನಮರಕ್ಕೆ ಹೂ ಬರಲು ಕೂಡ ಕೊಡುವುದಿಲ್ಲ, ಕಲ್ಲನ್ನು ಬೀಸಿದನೇ ! ಅತ್ಯಂತ ಕಿಡಿಗೇಡಿ ! "

" ಆದಿರಲಿ, ಈಗ ಅವನೇನು ಮಾಡಿದ ? ಅಷ್ಟು ಹೇಳಿರಲ್ಲ ! " ಶಾಂತಾಬಾಯಿ ನುಡಿದಳು.

" ಆ ಮಗನು, ನಾರಾಯಣದೇವರ ಗುಡಿಯನ್ನು ಹತ್ತಿ ಬಾವುಟ ಏರಿಸಿದನಂತೆ, ಬಾವುಟ !.

" ಕೆಟ್ಟದೇನು ಅದರಲ್ಲಿ ? "

" ಅಯ್ಯೋ, ಆ ಬಾವುಟ ಹಿಂದುಸ್ಥಾನದ್ದು. ನಿನಗೆ ಹೇಳು-ವಾಗಲೂ ನನ್ನ ಮೈ ಕಂಪಿಸುತ್ತಿದೆ ನೋಡು. "

" ಚಿಕ್ಕವನಲ್ಲವೇ ಅವನು ? ನಿಮ್ಮಷ್ಟು ಜ್ಞಾನ ಅವನಿಗೆಲ್ಲಿ-ಯದು ? ನೀವು ಅವನಿಗೆ ಬುದ್ಧಿ ಹೇಳಬೇಕಾಗಿತ್ತು ? " ಕಳವಳದಿಂದ ಶಾಂತಾಬಾಯಿ ನುಡಿದಳು.

" ನಾನು ರೇಜಿದೋರ (ಊರಿನ ಪಟೇಲ) ನಿದ್ದದ್ದು ನೀನು ಮರೆತಂತೆ ಕಾಣುತ್ತದೆ. "

" ಹಾಗೆ ಹೇಗಾಗುವುದು ? "

" ಈಗ ಅವನನ್ನು ಸಡಿಲು ಬಿಟ್ಟರೆ, ನಾಳೆ ನನ್ನ ಮನೆಯ ಮೇಲೆಯೇ ಕೊಳ್ಳಿ ಇಡಲಾರನೇ ಅವನು ? "

" ಕಾಲ್ಮೆಟ್ಟಿನಿಂದ ನೀವು ಅವನನ್ನು ಗಲ್ಲದಮೇಲೆ ಹೊಡಿದಿರಂತೆ ನಿಜವೇ ಇದು ? "

" ಇಲ್ಲವೆಂದು ನಾನೆಲ್ಲಿ ಹೇಳುತ್ತೇನೆ ? "

" ಮತ್ತು ಆ ಶಿಕ್ಷಕನನ್ನು ಜೇಲಿಗೆ ಕಳಿಸಿದಿರಂತೆ ! "

" ಆ ಶಿಕ್ಷಕನಿಗೆ ಹಾಗೆಯೇ ಆಗಬೇಕು. ಚಿಕ್ಕ ಮಕ್ಕಳಿಗೆ ಇಂತಹೆ ಸಂಗತಿಗಳನ್ನು ಕಲಿಸಲು ನಾವು ಶಿಕ್ಷಕರನ್ನು ಪೋಷಿಸುವುದಿಲ್ಲ ! "

" ಅವನನ್ನು ನೀವು ಹೊಡೆದುದನ್ನು ನೋಡಿ, ನಮ್ಮ ಸೋನೂ ಮನೆಗೆ ಬಂದು ಬಿಕ್ಕಿ ಬಿಕ್ಕಿ ಅಳತೊಡಗಿದ; ಗೊತ್ತಿದೆ ಏನು ನಿಮಗೆ ? ಅವನನ್ನು ಸಂತೈಸಬೇಕಾದರೆ ನನಗೆ ಸಾಕುಬೇಕಾಗಿ ಹೋಯಿತು. "

" ನೀನೂ ಅಳಲಿಲ್ಲವೇ ? ಈಗ ದೊಡ್ಡ ಆಕ್ರೋಶವನ್ನೇ ನಡೆಸಿ-ದ್ದೀಯಲ್ಲ ನೀನು ! ನಾನು ರೇಜಿದೋರ್ ! ನನಗೆ ಬೇಕಾದುವನ್ನು ನಾನು ಮಾಡುವವ ! ಮನಸ್ಸಿಗೆ ಬಂದಂತೆ ಮಾಡಲು ನನಗೆ ಅಧಿಕಾರವಿದೆ. ಈ ಹೊತ್ತು ಯಾರಾದರನ್ನೂ ಹೊಡೆದು ಹುಗಿದರೂ ನಾನ-ದನ್ನು ಜೀರ್ಣಿಸಿಕೊಳ್ಳಬಲ್ಲೆ. " ಶಾಬಾಶೆಣ್ಯೆ ಎದೆಯಮೇಲೆ ಕೈಯನ್ನು ಬಡಿದು, ಮೈಯಲ್ಲಿ ದೆವ್ವ ಬಂದಂತೆ ಒದರಿದ.

" ಹೌದು, ಈ ಹೊತ್ತೇನೋ ಇದು ದಕ್ಕುತ್ತದೆ. ನಾಳೆ ದಕ್ಕು-ವುದಿಲ್ಲ. ಒಂದು ವೇಳೆ ದಕ್ಕಿದರೂ ಮನಸ್ಸಿಗೆ ಬಂದಂತೆ ಆಚರಿಸುತ್ತಾರೇನು ಯಾರಾದರೂ ? "

" ಅಂದರೆ ಏನು ಮಾಡಬೇಕೆಂದು ಹೇಳುತ್ತೀ ? ಎಂತಹ ಹೆಂಗ-ಸಪ್ಪಾ ಈಕೆ ! ಯಾರ ಮೇಲೂ ಕೈಯನ್ನೆತ್ತಲಿಕ್ಕಾಗದು. ಯಾರಿಗೂ ಕಟುವಾಗಿ ಮಾತಾಡಲಿಕ್ಕಾಗದು. ಹಾಗಾದರೆ ನಾನೇಕೆ ರೇಜಿದೋರ್ ಆಗಿರಬೇಕು ? "

" ಆಗಬಾರದಿತ್ತು ! "

* ಪ್ರೊ. ಲಕ್ಷ್ಮಣರಾವ ಸರದೇಸಾಯಿಯವರ ಒಂದು ಕೊಂಕಣೀ ಭಾಷೆಯ ಕತೆಯ ಅನುವಾದ. ಲೇ.

"ನಿನ್ನ ಬುದ್ಧಿಯಂತೆ ನಡೆದರೆ ವಿಶ್ವದಲ್ಲೆಲ್ಲ ನನ್ನ ಬೆಳಕು ಬಿದ್ದೀತು!"

"ಈಗೇನು, ಬಂಗಾರದ ಹಂಚನ್ನು ಹಾಕಿಸಿದ್ದೀರಾ?"

"ಆಲ್ಮಿಸ್ತ್ರಾದೋರ್, ಕೋಮೋನಾತ್ (ಮೇಲಿನ ಪೋಲಿಸ ಅಧಿಕಾರಿಗಳು) ಇಲ್ಲಿ ಮೇಲಿಂದಮೇಲೆ ಬಂದೇ ಬರುತ್ತಾರೆ. ಅವರೊಡನೆ ನಾನು ಕೈ ಕುಲುಕಿಸುವುದನ್ನು ನೀನು ನೋಡಿಲ್ಲವೆ? ಸುಮ್ಮನೇಕೆ ಈಗ? ಮಾತಾಡಲ್ಲ!"

"ನಿಮ್ಮ ಮುಂದೆ ನಾನೇನು ಮಾತಾಡಲಿ? ಜನರ ಶಾಪಗಳನ್ನು ಪಡೆದು ನಿಮಗೇಕೆ ಬೇಕಾಗಿತ್ತು ಈ ರೇಜಿದೋರತನ? ಸರಿ, ಸ್ವೀಕರಿಸಿದರೂ ಮನುಷ್ಯತ್ವದಿಂದ ಬಾಳುವುದು! ಅಡಿಗಡಿಗೆ ಊರ ಜನರನ್ನು ಪೀಡಿಸುತ್ತೀರಿ. ಇದೆಲ್ಲ ಒಳ್ಳೆಯದಲ್ಲವೇ?

"ಜನರಂತೆ ಜನರು! ಅವರಿಗೆ ನಾನೇಕೆ ಸೊಪ್ಪು ಹಾಕುವುದು? ಇದು ನೋಡು. ಪ್ರತಿಯೊಬ್ಬನ ಮನುಷ್ಯತ್ವ ಬೇರೆ ಬೇರೆ ಬಗೆಯ ದಾಗಿ ಇರುವುದೆಂಬುದು ನಿನ್ನ ಲಕ್ಷ್ಯದಲ್ಲಿರಲಿ."

"ರೇಜಿದೋರರು ಮನುಷ್ಯತ್ವವನ್ನು ಬಿಡಬೇಕೆಂಬುದೇ ನಿಮ್ಮ ವಾದವಲ್ಲವೇ?"

"ಕೋಮೋನಾತ್, ಆಲ್ಮಿಸ್ತ್ರಾದೋರ್ ಅವರು ಹೇಳಿದಂತೆ ನಡೆಯುವುದೇ ರೇಜಿದೋರನ ಮನುಷ್ಯತ್ವ. ಜನರು ಮಾಡುವುದನ್ನು ಮೂಕನಾಗಿ ನೋಡುತ್ತ ಕುಳಿತರೆ, ನಾಳೆ ಚಿಕ್ಕಪುಟ್ಟ ಮಕ್ಕಳೂ ನನ್ನ ಅಂಗಳದಲ್ಲಿ ಬಂದು, 'ಜಯಹಿಂದ್'-'ಜಯಹಿಂದ್' ಎಂದು ಕಿರಿಚುವರು. ಎಲ್ಲೆಲ್ಲೂ ಬಾವುಟಗಳನ್ನೇರಿಸಿ ನನ್ನನ್ನು ದಣಿಸಿ ಬಿಡುವರು!"

"ರೇಜಿದೋರ್ ಆದಾಗಿನಿಂದ ಎಷ್ಟು ಜನರನ್ನು ನೋಯಿಸಿ-ದ್ದೀರಿ, ಗೊತ್ತಿದೆಯಲ್ಲವೇ ನಿಮಗೆ?"

"ಗೊತ್ತಿರುವುದು ಬೇಡ ನನಗೆ! ಜನರು ನನಗೇನು ಮಾಡು-ವರು? ಅವರೇನು ನನ್ನನ್ನು ಪೋಷಿಸುವುದಿಲ್ಲ!"

"ನನ್ನ ಮಾವಂದಿರು ಹೀಗೆಂದಿಗೂ ಮಾಡುತ್ತಿದ್ದಿಲ್ಲ. ಅವರು ಜನರನ್ನು ಅಕ್ಷರಶಃ ತಮ್ಮ ತಲೆಯಮೇಲಾಡಿಸಿದರು. ಅವರು ತೀರಿ-ಕೊಂಡಾಗ ಇಡಿಯ ಊರೇ ಅತ್ತಿತು."

"ಮತ್ತು ನಾನು ಸತ್ತರೆ...... ಅನ್ನುತ್ತೀಯಲ್ಲವೇ?"

"ಅಯ್ಯೋ ದೇವರೆ! ಹೀಗೇಕೆ ಅಭದ್ರ ಮಾತಾಡುತ್ತೀರಿ? ಈ ರೇಜಿದೋರತನವನ್ನು ವಹಿಸಿದಂದಿನಿಂದ ನಿಮ್ಮ ತಲೆ ಸರಿಯಾಗಿಲ್ಲ. ಇಡಿಯ ದಿನವೆಲ್ಲ ಉರಿದು ಬೇಯುತ್ತೀರಿ."

"ಉರಿಯದೆ ಏನು ಮಾಡುವುದು? ಹೇಳಿದುದನ್ನು ಕೇಳ-ಬಾರದೆಂದರೆ? ಮೆರೆವಣಿಗೆಗಳನ್ನು ತೆಗೆ, ಬಾವುಟ ಏರಿಸು, ಸಭೆ ಕೂಡಿಸು, 'ಜಯಹಿಂದ' ಎಂತ ಒದರು--- ಹೀಗೆ ಮಾಡಿ ಊರನ್ನು ಹಾಳುಗೆಡವಿ ಬಿಟ್ಟಿದ್ದಾರೆ.... ಈ ಉಪಾಧ್ಯಾಯಿ ತುಂಟರು! ಅವರ ಸೊಕ್ಕನ್ನು ಇಳಿಸದೆ ಇರಲಾರೆ."

"ಆದರೆ, ಅವರ ಸೊಕ್ಕನ್ನು ಇಳಿಸುವುದರಲ್ಲಿ ನಿಮಗೆ ಹುಚ್ಚು-ತಾಗದೇ ಇರಲೆಂದು ನಾನು ದೇವರನ್ನು ಪ್ರಾರ್ಥಿಸುತ್ತೇನೆ. ನೀವು ಜನರನ್ನು ಹತ್ತಿಕ್ಕುತ್ತೀರಿ, ದಂಡಿಸುತ್ತೀರಿ. ನಮ್ಮ ಸೋನೂಗೆ ಕೂಡ ಅದು ಮನಸ್ಸಿಗೆ ಬರುವುದಿಲ್ಲ."

"ಸೋನೂ ನನ್ನ ತಂದೆಯೋ, ಅಥವಾ ನಾನು ಅವನ ತಂದೆಯೊ? ಸೋನೂನ ಬೆದರಿಕೆ ನನಗೆ ಹಾಕುತ್ತೀಯಾ? ನಾನು ಇಂತಹದಕ್ಕೆ ಮಣಿಯುವುದಿಲ್ಲ. ನನಗೆ ಬೇಕಾದದ್ದನ್ನು ನಾನು ಮಾಡುವೆ."

"ಇಂತಹ ನಡತೆಯಿಂದ ಜನರ ಕ್ಷೋಭೆ ನಮ್ಮ ಮೇಲೆ ತಿರುಗ ಬಹುದು. ನಿಮಗೆ ಗೊತ್ತಿಲ್ಲವೇನು?"

"ಎಲ್ಲಿಯ ಕ್ಷೋಭೆ? ಎಲ್ಲಾ ಹುಡುಗಾಟ! ನಾನು ಪೇಟೆಯಲ್ಲಿ ಕಂಡರೆ ಸಾಕು; ನನ್ನ ಮುಂದೆ ಕುಳಿತುಕೊಳ್ಳಲು ಯಾರಿಗೆ ಧೈರ್ಯವಿದೆ? ನನ್ನ ಬಾಯಿಂದ ಒಂದು ಶಬ್ದ ಹೊರಬಿದ್ದರೆ ಸಾಕು; ಹತ್ತೆಂಟು ಜನರು ಓಡಿ ಬರುವರು. ರೇಜಿದೋರರ ಮನೆಗೆ ಮೀನಿನ ಸರಗಳು ಬರುತ್ತವೆ. ಬಾಳೆಯ ಗೊನೆಗಳೂ ಬರುತ್ತವೆ. ಎಂದಮೇಲೆ ಜನರ ಕ್ಷೋಭೆ ಎನ್ನುವುದೆಲ್ಲಿ ಉಳಿಯಿತು?"

"ಹೊಡೆತ-ಬಡಿತಗಳ ಭಯದಿಂದ ಜನರು ಹೀಗೆ ವರ್ತಿಸು-ತ್ತಾರೆಂಬುದು ನಿಮಗೆ ಹೇಗೆ ತಿಳಿಯದು?"

"ತಿಳಿಯಿತು, ತಿಳಿಯಿತು! ಇರಲಿ ನಿನ್ನ ಆ ಜಾಣತನ! ಮೋಟಾರು ಬರುವಂತೆ ಕಾಣುತ್ತದೆ. 'ಪೊಂಕ್ ಪೊಂಕ್' ಸಪ್ಪಳ ಕೇಳುವುದಿಲ್ಲವೆ? ಆ ಅರ್ಜುನ ಮೊಚ್ಚೆಗಾರನನ್ನು ನಾನು ಈ ಹೊತ್ತು ಜೇಲಿಗೆ ಕಳಿಸಬೇಕಾಗಿದೆ. ಅವನಿಗೆ ಚೆನ್ನಾಗಿ ಶಿಕ್ಷೆ ಭೋಗಿಸಹಚ್ಚ-ದಿದ್ದರೆ, ನನ್ನ ಹೆಸರು ಶಾಬಾಶೆಣ್ಯೆ ಅಲ್ಲ."

"ಅಂತಹ ಯಾವ ಅಪರಾಧ ಮಾಡಿದನವ?"

"ನಿನ್ನೆಯೇ ನಾನು ಪೇಟೆಯಿಂದ ಮನೆಗೆ ಬರುತ್ತಿದ್ದೆ. ಅರ್ಜುನ ಹಾದಿಯಲ್ಲಿಯೇ ಇದ್ದ. ನನ್ನನ್ನು ನೋಡಿದೊಡನೆಯೇ ಭೂಮಿಗೆ ಕೈಹಚ್ಚಿ ನಮಸ್ಕರಿಸಿದ; ಮತ್ತು ನನ್ನ ಮುಖ ತಿರುಗಿದ ಕೂಡಲೆ ತುಟಿ-ಗಳನ್ನು ಕಚ್ಚುತ್ತ, ನನ್ನ ಕಡೆಗೆ ಮುಷ್ಟಿಮಾಡಿ ತೋರಿಸುತ್ತಿದ್ದ! ನನ್ನ ದೃಷ್ಟಿ ಅವನತ್ತ ಬಿದ್ದೊಡನೆ, ಇದ್ದಲ್ಲಿಯೆ ತಣ್ಣಗಾದ. ನಾನಾಗ ಸುಮ್ಮಗುಳಿದೆನೆ? ಎರಡೂ ಕೆನ್ನೆಯ ಮೇಲೆ ಬಿಗಿದೇಬಿಟ್ಟೆ. ಈ ಹೊತ್ತು........"

"ನಾನೆನ್ನುವುದೂ ಇದೇ! ಮುಖದ ಮುಂದೆ ನಮಸ್ಕರಿಸಿ ಬೆನ್ನ ಹಿಂದೆ ಮುಷ್ಟಿ ಬಿಗಿಯುತ್ತಾರೆ. ಇದಕ್ಕೆ ಕ್ಷೋಭೆ ಎನ್ನುತ್ತಾರೆ. ಇದೇ ಒಂದು ದಿನ ನಮ್ಮ ಘಾತಮಾಡಿ ಬಿಡುವುದು. ಅದಕ್ಕೆಂತಲೇ ನಾನು ಹೇಳುವದು: ಬೇಡ ಆ 'ರೇಜಿದೋರತನ'! ದೇವರದಯೆಯಿಂದ ಮನೆಮಾರಿದೆ, ಹೊಲ-ತೋಟಗಳೂ ಇವೆ. ಇದೆಲ್ಲ ಬೇಡದ ಸಂಗತಿ-ಗಳೇಕೆ ಬೇಕು? ನಿಮ್ಮ ಕಾಲುಬೀಳುತ್ತೇನೆ ಬಿಟ್ಟುಬಿಡಿರಿ ಈ ರೇಜಿದೋರತನವನ್ನು!"

"ಈಗ ಬಿಟ್ಟುಬಿಡುವುದೇ? ಜನರು ಉಗುಳುವರು ನನ್ನ ಮುಖದ ಮೇಲೆ. ಮೊದಲು ಅವರನ್ನಷ್ಟು ಮೆತ್ತಗೆ ಮಾಡುತ್ತೇನೆ. ಅನಂತರ ನೋಡು ನನ್ನ ಪ್ರತಾಪ! ಇದ್ದೋ, ಬಂತು ಮೋಟಾರು. ಒಬ್ಬ ಹವಾಲ್ದಾರ್ ಮತ್ತು ಇಬ್ಬರು ಪೋಲೀಸರೂ ಬಂದಿದ್ದಾರೆ. ಅರ್ಜುನನ ಗಂಟು ಬಿಗಿದು ಬರುತ್ತೇನೆ!"

"ಬೇಡ, ಬೇಡ ನಿಲ್ಲಿಸಿರಿ ಈ ಪೀಡೆಯ ಸತ್ರ! ನಿನ್ನ ಮುಂದೆ ನನ್ನ ಎಲ್ಲ ಉಪಾಯಗಳೂ ತೀರಿದುವು. ನಿಮ್ಮ ಈ ಪಾತಕದಿಂದ ಎಂತಹ ಸಂಕಟ ಒದಗುವುದೋ ನನಗೆ ತಿಳಿಯದಾಗಿದೆ. ಅಯ್ಯೋ ದೇವರೆ! ನೀನೇ ಕಾಪಾಡಬೇಕು ನಮ್ಮನ್ನು!"

ತಂದೆ-ತಾಯಿಗಳ ಈ ಮಾತನ್ನು ಕೇಳಿ ಸೋನೂನಿಗೆ ಬಹಳ ದುಃಖವಾಯಿತು. ತಂದೆಯ ಬಗ್ಗೆ ಜುಗುಪ್ಸೆ ಹುಟ್ಟಿತು. ಅವನಲ್ಲಿ, ಇದ್ದಕ್ಕಿದ್ದಂತೆಯೇ ತಂದೆಯವರ ಹತ್ತಿರ ಹೋಗಿ ಹೇಳಬೇಕೆನಿಸಿತು: 'ಅಪ್ಪಾ, ಇಂತಹ ಕೆಲಸಗಳಿಂದ ನಮ್ಮೆಲ್ಲರ ಘಾತ ಮಾಡುವಿ ನೀನು!' ಆದರೆ ವಿವೇಕ ಅವನನ್ನು ಹಿಂದೆಳೆಯಿತು.

ತನ್ನ ತಂದೆಯ ಅಪಕೀರ್ತಿ ಎಲ್ಲೆಡೆ ಹಬ್ಬಿತ್ತು. ಹೀಗಾಗಿ ಅವನ ಸಂಗಡಿಗರೂ ಅವನನ್ನು ಅಣಕಿಸುತ್ತಿದ್ದರು. ತನ್ನ ತಂದೆಯು ಒಳ್ಳೆಯ ರೀತಿಯಿಂದ ನಡೆದು ಜನರ ಪ್ರೇಮವನ್ನು ಗಳಿಸಿಕೊಳ್ಳಬೇಕೆಂದು ಯಾವ ಮಗನಿಗೆ ಎನಿಸುವುದಿಲ್ಲ? ಸೋನೂನ ದೈವದಲ್ಲಿ ಮಾತ್ರ ವಿಪರೀತವನ್ನು ನೋಡುವುದೇ ಇತ್ತು.

ಎರಡು ದಿನಗಳಲ್ಲಿಯೇ ಸೋನೂ ಪಣಜಿಗೆ ಹೊರಟುಹೋದ. ಊರಿಗೆ ಏಕೆ ಬಂದೆನೋ ಎನ್ನುವ ಹಾಗಾಗಿತ್ತು ಅವನಿಗೆ. ಪ್ರತಿಯೊಬ್ಬರೂ ಅವನೆದುರು ತಂದೆಯ ವಿರುದ್ಧ ದೂರು ಹೇಳುವವರೇ. ಅರ್ಜುನ ಮೊಚ್ಚೆಗಾರ, ಸದೂಭಟ್ಟ, ಸೋನೂಬಡಿಗ, ತುಕೋ ಅಂಬಿಗ....... ಒಬ್ಬಿಬ್ಬರಲ್ಲ, ಎಲ್ಲರೂ ಅವನ ತಂದೆಯನ್ನು ಬಯ್ಯುವವರೇ. ಆ ಬಯ್ಗಳನ್ನು ಕೇಳಿ ಅವನಿಗೆ ಅತ್ಯಂತ ವ್ಯಸನವಾಯಿತು.

× × × ×

ದಿನಗಳು ಕಳೆದಂತೆ ತನ್ನ ರೇಜಿದೋರ್‌ತನದ ದೊಡ್ಡಸ್ತಿಕೆಯಲ್ಲಿ ಶಾಬಾಶೆಣ್ಯೆ ಸೊಕ್ಕಿಬಿಟ್ಟ. 'ಸರಕಾರವೆಂದರೆಯೇ ಸರ್ವವೂ' ಎಂಬ ತಿಳಿವಳಿಕೆ ಅವನಲ್ಲಿ ಹುಟ್ಟಿಕೊಂಡಿತು. 'ಸರಕಾರಕ್ಕೆ ಅಡೆ-ತಡೆಗಳನ್ನುಂಟು ಮಾಡುವವರು ಉಪದ್ರವಿಗಳು; ಅಂತಹರನ್ನು ಹಣಿಯಲೇಬೇಕು. ಸರಕಾರಕ್ಕೆ ಸಹಾಯ ಮಾಡಿ ಅದರ ಸತ್ತೆಯನ್ನು ಸ್ಥಿರಗೊಳಿಸುವುದೇ ತನ್ನ ಕರ್ತವ್ಯ' ಎಂದು ಅವನು ತಿಳಿಯತೊಡಗಿದ. 'ಸ್ವಾತಂತ್ರ್ಯ ಏತಕ್ಕೆ ಬೇಕು?' ಎಂದವನಿಗೆ ಎನಿಸತೊಡಗಿತು. "ಸ್ವಾತಂತ್ರ್ಯ ಏಕೆ ಬೇಕು?" ಎಂದು ಅವನು ನಿರ್ಲಜ್ಜೆಯಿಂದ ಕೇಳಹತ್ತಿದ, "ನಾಲ್ಕುನೂರಾ ಐವತ್ತು ವರುಷ ಪರಕೀಯರ ಅಧಿಕಾರದ ಕೆಳಗೆ ಗೋಮಾಂತಕೀಯರೇನು ಜೀವಿಸಲೇ ಇಲ್ಲವೆ?"

ನ್ಯಾಯನೀತಿ ಇಲ್ಲ, ಕಾಯದೆ ಇಲ್ಲ—ಎಂದಮೇಲೆ ಶಾಬಾಶೆಣ್ಯೆ ಯಾರಿಗೆ ಹೆದರುವವನು? ಮೇಲಿನ ಅಧಿಕಾರಿಗಳ ಆಧಾರ ಸಿಕ್ಕಿದೆಂದಿನಿಂದಂತೂ ಅವನು ಮತ್ತನಾಗಿಬಿಟ್ಟ. ತನ್ನ ವೈಯಕ್ತಿಕ ವೈರವಿದ್ಧವನ್ನು ಹಿಡಿದುತಂದು ಬಡಿಯತೊಡಗಿದ; ಲಾಕಪ್ಪಿಗೆ ಸೇರಿಸತೊಡಗಿದ. ಎರಡು ವರ್ಷಗಳ ಹಿಂದೆ ಒಬ್ಬ ಮೀನುಗಾರನು ಅವನಿಗೆ ಪುಕ್ಕಟೆಯಾಗಿ ಮೀನನ್ನು ಕೊಟ್ಟಿದ್ದಿಲ್ಲ; ಆ ಸಿಟ್ಟನ್ನು ಅವನೀಗ ಹೊರಪಡಿಸಿ, ಅವನ ಮೇಲೆ ಬಾವುಟವೇರಿಸಿದ ಆರೋಪವನ್ನು ಹೊರಿಸಿ, ಅವನನ್ನು ನೆತ್ತರ ಕಾರುವಂತೆ ಹೊಡೆದ. ಅಗಸ, ನಾಪಿತ, ಬಡಿಗ, ಮೊಚ್ಚೆಗಾರ ಎಲ್ಲರನ್ನೂ ಅವನು ಥಳಿಸಿಬಿಟ್ಟ. ತನ್ನ ಅಧಿಕಾರಬಲದಿಂದ ಅವನು ಜನರನ್ನು ಗೆದ್ದಿದ್ದ. ಅವರನ್ನು ಕೊಂದು ಹುಗಿದರೂ ಅವನ ವಿರುದ್ಧ ಹೆಜ್ಜೆಯೆತ್ತಲು ಜನರಿಂದಾಗದು. ಎಂದಮೇಲೆ ಅವನು ಅವತಾರ ತಾಳಿದವನಂತೆ ನಡೆದುದರಲ್ಲಿ ಏನು ಆಶ್ಚರ್ಯ? ಅದರಲ್ಲಿಯೂ ಇಬ್ಬರು ಪೋಲೀಸರು ಅವನ ಕೈಕೆಳಗೆ. ಯಾರಾದರೂ ಸ್ವಲ್ಪ ಬಿರುಸುನುಡಿಗಳನ್ನು ಹೊರದೆಗೆದರೆ ಸಾಕು; ಅವರಿಗೆ ಪೆಟ್ಟು ಬೀಳಲು ತಡವಾಗುತ್ತಿದ್ದಿಲ್ಲ. ತನ್ನ ಮನಸ್ಸಿನ ಸಂತಪ್ತಭಾವವನ್ನು ಅವನು ಬಡವರ ಮೇಲೆ, ರೈತರ ಮೇಲೆ ಪ್ರದರ್ಶಿಸುತ್ತಿದ್ದ. ಅವನನ್ನು ಕಂಡರೆ ಸಾಕು, ಬಡವರ ಮೈ ನಡುಗುತ್ತಿತ್ತು. ರಸ್ತೆಯ ಮೇಲಿಂದ ಯಾರಾದರೂ ಗಾಂಧೀಟೊಪ್ಪಿಗೆಗಳನ್ನು ಧರಿಸಿ ಹೋಗುತ್ತಿದ್ದರೆ, ಅವರನ್ನು ತಡೆದು ನಿಲ್ಲಿಸುವನು. ಅನಂತರ ಅವನಿಗೆ ಕೊಡುವ ಪೀಡೆ ಅಷ್ಟಿಷ್ಟಲ್ಲ. ಹತ್ತು ಜನರ ಮುಂದೆ ಅವನ ತಂದೆ-ತಾಯಿಗಳ ಉದ್ಧಾರವನ್ನು ಮಾಡುವನು. ಮರ್ಯಾದೆವಂತ ಗೃಹಸ್ಥರಿಗಂತೂ ಊರಲ್ಲಿ ನಿಲ್ಲುವುದೂ ಅಸಾಧ್ಯವಾಯಿತು. ಮನೆಯ ಜಗುಲಿಯ ಮೇಲೆ ಕುಳಿತು ಊರ ಸುದ್ದಿಯನ್ನು ಯಾರಾದರೂ ಚರ್ಚಿಸಿದರೆ, ಗುಪ್ತ ಪೋಲೀಸರ ಮುಖಾಂತರ ಅದೆಲ್ಲ ಅವನಿಗೆ ತಪ್ಪದೆ ತಿಳಿಯುತ್ತಿತ್ತು. ಅನಂತರ ಆ ಬಡವರನ್ನು ಪೋಲೀಸರಿಂದ ಕರೆಯಿಸಿ ಚೆನ್ನಾಗಿ ದಂಡಿಸುತ್ತಿದ್ದ. ಶಾಲೆಯ ಸಮಾರಂಭವಿದ್ದರೆ, ಈ ದೈತ್ಯ ಅಲ್ಲಿ ಇರುವವನೇ. ರಾಷ್ಟ್ರ, ಸ್ವಾತಂತ್ರ್ಯ, ದೇಶಭಕ್ತಿ, ಗಾಂಧಿ-ನೆಹರೂ ಈ ಶಬ್ದಗಳು ಅಲ್ಲಿ ಕೇಳಲು ಬರುವಂತಿಲ್ಲ. ಶಾಲೆಯ ಗೋಡೆಯ ಮೇಲಿದ್ದ ಗಾಂಧಿ-ನೆಹರೂರವರ ಭಾವಚಿತ್ರಗಳನ್ನು ಅವನು ತೆಗೆಯಿಸಿ, ಅಲ್ಲಿ **ಕಾರ್ಮೋನ್** ಮತ್ತು ಸಾಲ್‌ಝಾರರ ಚಿತ್ರಗಳನ್ನು ಹಚ್ಚಿಸಿದ. ಶಿಕ್ಷಕನಂತೂ ಊರಲ್ಲಿ ಹೆಚ್ಚುಕಾಲ ಬಾಳುತ್ತಿದ್ದಿಲ್ಲ. ದೇವಾಲಯದಲ್ಲಿ ನಡೆಯುತ್ತಿದ್ದ ಗ್ರಾಮಪಂಚಾಯತಿ ರೇಜಿದೋರರ ಹೊರತು ನಡೆಯುತ್ತಿದ್ದಿಲ್ಲ. ಈ ರೀತಿಯಾಗಿ ಊರಲ್ಲೆಲ್ಲ ಅವನು ಸೀಕಲಾಟಕ್ಕಾರಂಭಿಸಿದ.

ಜನರು ಅವನ ಈ ಕೃತಿಗೆ ಹೇಸಿದರು. ಅವನ ಮುಖವನ್ನೂ ನೋಡಬಾರದಾಗಿ ಅವರಿಗೆನಿಸುತ್ತಿತ್ತು. ಅವನ ಆ ಪೀಡೆಗೆ ಬೇಸತ್ತು ಜನರು ಊರನ್ನು ಬಿಟ್ಟು ನಡೆದರು. ಕೆಲವರು ಮುಂಬಯಿಗೆ ಹೋದರು. ಹಲವರು ಬೆಳಗಾಂವಿಗೆ ನಡೆದರು. ಪ್ರತಿ ದಿವಸವೂ ಇಂತಹ ವಿಪತ್ತನ್ನು ಯಾರು ಸಹಿಸುವರು? ಅರಿಷ್ಟ ಬರುವುದಾದರೆ ಒಂದೇ ದಿನದಲ್ಲಿ ಬರುವುದು ಲೇಸು. ದಿನವೂ ಬರುವ ಈ ಅರಿಷ್ಟವನ್ನು ಅವರು ಎಷ್ಟೆಂದು ಸಹಿಸುವರು? ಚಿಕ್ಕಮಕ್ಕಳು ಕಕ್ಕಾವಿಕ್ಕಿಯಾದರು. ಪ್ರತಿಯೊಬ್ಬರೂ ಅವನನ್ನು ದ್ವೇಷಿಸಹತ್ತಿದರು. 'ಈ ರಾಕ್ಷಸ ಯಾವಾಗ ಊರಿಂದ ಹೊರಗಾದಾನು' ಎಂಬ ವಿಚಾರವೇ ಜನರ ಮನಸ್ಸಿನಲ್ಲಿ!

ಒಂದು ದಿನ ವಿಪರೀತವಾಯಿತು. ಬೇತೂ ಎಂಬ ತರುಣ: ಮೀನಿನ ಬುಟ್ಟಿಯನ್ನು ತಕ್ಕೊಂಡು ಪೇಟೆಯಲ್ಲಿ ಕುಳಿತಿದ್ದ. ಶಾಬಾಶೆಣ್ಯೆ ಅಲ್ಲಿ ಆಕಸ್ಮಾತ್ತಾಗಿ ಬಂದನು. ಅವನನ್ನು ನೋಡಿ ಬೇತೂ ಎದ್ದ. ರೇಜಿದೋರ ಅವನಿಗೆ ಆಜ್ಞೆ ವಿಧಿಸಿದ: "ಬೇತೂ! ಹತ್ತು ಸಾವಿರ ಖುಬೆ (ಒಂದು ತರದ ಚಿಕ್ಕ ಮೀನು)ಗಳನ್ನು ಮನೆಗೆ ಮುಟ್ಟಿಸಿ ಬಾರೋ!"

"ನಾನು ಹೋದರೆ ಇಲ್ಲಿ ಬುಟ್ಟಿಯ ಬಳಿ ಯಾರೂ ಇಲ್ಲ. ಎಲ್ಲವನ್ನೂ ಮಾರಿ ಆದಕೂಡಲೇ, ಒಯ್ದು ಮುಟ್ಟಿಸುತ್ತೇನೆ." ಬೇತೂ ನುಡಿದ.

"ಕಳ್ಳಾ ! ನನಗೆ ಉತ್ತರ ಕೊಡುತ್ತೀಯಾ ? ಅರೆ ವಾ ! ಯಾರೆಂದು ತಿಳಿದುಕೊಂಡಿ ನಾನೆಂದರೆ ?"

"ನಾನು ಗುರುತಿಸುತ್ತೇನೆ ನಿಮ್ಮನ್ನು.... ಶಾಬಬಾಜ ! ನೀವು ಊರಿನ ರೇಜಿದೋರ್."

"....ಮಗನೇ !"

"ಶಾಬಬಾಬಾ, ನೀವು ನನ್ನನ್ನು ಬಯ್ಯಬೇಡಿರಿ ತಿಳಿಯಿತೆ ?"

"ನೀನೇನು ಮಾಡುವೆ ? ಬಹಳ ಬಹಳ ಹಾರುತ್ತೀಯಲ್ಲ! ಮಣ್ಣು ಹುಳುವಲ್ಲವೇ ನೀನು ? ಹಾಗೇ ಹಿಚುಕಿ ಬಿಡುವೆನು !"

ಬೇತುವಿನ ಸ್ವೈಯಲ್ಲಿ ದೆವ್ವ ಸಂಚರಿಸಿತು. ಎಲ್ಲ ಜನರ ಮುಂದೆ ತನ್ನನ್ನು ಹೀಗೆ ತಿರಸ್ಕರಿಸಿದುದು ಅವನಿಗೆ ಸರಿಬರಲಿಲ್ಲ. ಅವನು ರೇಗಿಗೆದ್ದ. ರೈತ—ಶೂದ್ರನಾದರೇನಾಯಿತು ? ಅವನೇನು ಮನುಷ್ಯನಲ್ಲವೇ ?

"ಶಾಬಬಾಬಾ, ನೀನೇನು ನನ್ನನ್ನು ಸಾಕುವುದಿಲ್ಲ; ನಿನ್ನ ಮನೆಯಲ್ಲಿ ನೀನು ಹಿರಿಯ, ನಾನೇನು ಒಯ್ಯುವದಿಲ್ಲ ಖುಬೆಗಳನ್ನು !"

ಈ ಉತ್ತರ ಕೇಳಿದೊಡನೆ ಶಾಬಾಶೆಣ್ಸೈ ಸುಮ್ಮನಿರುವನೆ ? ಬೇತೂನನ್ನು ಕೈಹಿಡಿದು ಜಗ್ಗಿ ತನ್ನ ಕೈಯನ್ನೆತ್ತಿದ !

ಬೇತೂನೂ ತಡಮಾಡಿದನೇ ? ಅದೇ ವೇಳೆಯಲ್ಲಿ ಎಡಗೈಯಿಂದ ಅವನ ಕೈಯನ್ನು ಹಿಂಡಿ, ಟೊಂಕದಲ್ಲಿದ್ದ ಕುಡುಗೋಲನ್ನು ಬಲಗೈಯಲ್ಲಿ ಹಿಡಿದು, ಅದನ್ನು ಎತ್ತಿ ಹೇಳಿದನು: "ಇದರ ಗುರುತಿದೆಯಲ್ಲವೇ ನಿನಗೆ ? ನೀನು ರೇಜಿದೋರ; ಮತ್ತು ನಿನ್ನ ಆ ತಂದೆ ಕೊರ್ಮೇನಾತ್ ಮತ್ತು ಆಲ್ಮಿಸ್ತ್ರಾದೋರ್ ಇವರನ್ನು ಒಂದೇ ಏಟಿಗೆ ಕತ್ತರಿಸಿಬಿಡುವೆನು. ಆ ಮೇಲೆ ಕಳಿಸಿರಿ ನನ್ನನ್ನು ಕರೆಸೀರಿಗೆ !"

ಎಲ್ಲರೂ ಧೈರ್ಯಗುಂದಿ ನೋಡತೊಡಗಿದರು. ರೇಜಿದೋರನ ಮುಖ ಬಿಳಿಚಿಹೋಯಿತು. ತನ್ನ ಮುಂಗೈ ಈಗ ಕಳಚಿ ಬೀಳುವುದೇನೋ ಎನ್ನಿಸಿತು ಅವನಿಗೆ "ಅಯ್ಯೋ ! ಅಮ್ಮಾ! ಅಯ್ಯೊ !" ಅವನು ಕಿರಿಚಿದ.

"ರೇಜಿದೋರ್ ಅಂತೆ ಇವ ! ನಾನೇ ನಿನ್ನ ಹೊಂಡ ಹುಗಿಯುವೆನು. ಸಾಯಲಿಕ್ಕೇ ನಾನೀಗ ಮುಂದಾಗಿದ್ದೇನೆ! ಒಂದು ಮಾತನ್ನು ಹೇಳುತ್ತೇನೆ: ನನ್ನ ಮೇಲೆ ಕೇಸನ್ನು ಹಾಕಿ ಬೆನ್ನಹಿಂದೆ ಪೋಲೀಸರನ್ನು ಹಚ್ಚಿದರೆ, ಲಕ್ಷ್ಯದಲ್ಲಿಡು; ತುಂಡರಿಸಿಬಿಡುವೆನು !"

ರೇಜಿದೋರನ ಕೈಯನ್ನು ಬಿಡಿಸಲು ಆಗ ಯಾರು ಮುಂದಾಗುವರು ? ನೂರು–ನೂರೈವತ್ತು ಜನರು ಅಲ್ಲಲ್ಲಿ ದೂರದಲ್ಲೇ ನಿಂತು ಈ ಆಶ್ಚರ್ಯವನ್ನು ನೋಡತೊಡಗಿದ್ದರು:

ಬೇತೂನ ನಿಶ್ಚಯ ಮತ್ತು ಕುಡುಗೋಲಿನ ಹರಿತವನ್ನು ನೋಡಿ ರೇಜಿದೋರನಿಗೆ ಸಿಡಿಲುಬಡಿದಂತಾಯಿತು. ಅವನ ಕಣ್ಣು ಬೆಳ್ಳಗಾದುವು. ಕೈಕಾಲು ಕಂಪಿಸತೊಡಗಿದುವು. ಅವನ ಬಾಯಿಂದ ಎರಡೇ ಮಾತುಗಳು ಹೊರಬಂದುವು.

"ಬೇತೂ, ಬಿಟ್ಟುಬಿಡು ನನ್ನನ್ನು, ನಿನ್ನ ದೇವರಿಗೆ ಕೈ ಮುಗಿಯುತ್ತೇನೆ !"

ಬೇತೂ ಕೈಬಿಟ್ಟ. ರೇಜಿದೋರ್ ಅಲ್ಲಿಯೇ ಇದ್ದ ಕಟ್ಟೆಯ ಮೇಲೆ ಹೋಗಿ ಕುಳಿತ. ಮೈ ಎಲ್ಲವೂ ಬೆವತಿತ್ತು. ಒಬ್ಬ ನೀರು ತಂದುಕೊಟ್ಟ. ಮತ್ತೊಬ್ಬ ಗಾಳಿ ಹಾಕಿದ. ಊರ ಜನರಿಗೆ ಆ ದಿನ ತಿಳಿದುಬಂತು: "ಧೈರ್ಯವಿದ್ದ ಒಬ್ಬನೇ ಸಾಕು ಈ ರೇಜಿದೋರ ಮತ್ತು ಅವನ ಹಿಂದಿನ ಆ ಸತ್ತೆಯನ್ನು ಎತ್ತಿ ಬೀಸಾಡಲು !"

ಆ ದಿನದಿಂದ ಶಾಬಾಶೆಣ್ಸೈ, ಬೇತೂ ಎಂದರೆ ನಡುಗತೊಡಗಿದ. ಪೇಟೆಗೆ ಹೋಗುವುದನ್ನು ಅವನು ಬಿಟ್ಟುಬಿಟ್ಟ. ರಸ್ತೆಯ ಮೇಲಿಂದಲೂ ಕಳ್ಳನಂತೆ ನಡೆಯತೊಡಗಿದ. ರಸ್ತೆಯಮೇಲಿಂದ ಹೋಗುವವರನ್ನು ದಂಗುಬಡಿದವನಂತೆ ನೋಡತೊಡಗಿದ. ಬೇತೂನ ಕುಡುಗೋಲು ಜನರಲ್ಲಿಯ ಭೀತಿಯನ್ನು ನಷ್ಟಮಾಡಿತು. ಸ್ವರ್ಗಕ್ಕೇರಿದ ರೇಜಿದೋರ್ ಧಮ್ಮನೆ ಭೂಮಿಗೆ ಅಪ್ಪಳಿಸಿದ.

ಊರಲ್ಲೆಲ್ಲ ಸುದ್ದಿ ಹರಡಿತು. ಎಲ್ಲೆಡೆಯೂ ಒಂದೇ ಮಾತು! ಮನೆಯ ಗೋಡೆಗಳಮೇಲೆ ಮಕ್ಕಳು ಇದ್ದಲಿಯಿಂದ ಬರೆದುಬಿಟ್ಟರು: 'ಕುಡುಗೋಲು ಮತ್ತು ರೇಜಿದೋರ್,' 'ರೇಜಿದೋರನನ್ನು ಬಡಿದರು,' 'ರೇಜಿದೋರ್ ನಡೆದ ಪೋರ್ತುಗಾಲಕ್ಕೆ ! '

ಪೋಲೀಸರಿಗೆ ಈಗ ಜನರು ಹೆದರದಾದರು. ಸಾಯಲು ಮುಂದಾದ ಮನುಷ್ಯನ ಒಂದೇ ಮಾತಿನಿಂದ ಎಂತಹ ಚಮತ್ಕಾರವಾಯಿತು ನೋಡಿರಿ ! ಬೇತೂ ಈಗ ಚೌಕಿನಲ್ಲಿ, ದೇವಾಲಯದಲ್ಲಿ, ಪೂಲಿನಮೇಲೆ–ಜನರು ಎಲ್ಲೆಲ್ಲಿ ಕೂಡುತ್ತಾರೋ ಅಲ್ಲಲ್ಲಿ–ರೇಜಿದೋರನ ಮೇಲೆ, ಆಲ್ಮಿಸ್ತ್ರಾದೋರನ ಮೇಲೆ ಬೆಯ್ಗಳನ್ನು ಸುರಿಯತೊಡಗಿದ. 'ಜಯಹಿಂದ್' ಎನ್ನತೊಡಗಿದ. ಉಳಿದವರಿಗೂ ಹೇಳತೊಡಗಿದ. "ಹುಲ್ಲಿನ ಬೊಂಬೆಗಳಿವು ! ಇವರಿಗೇಕೆ ಹೆದರುತ್ತೀರಿ ? ನಾನಿದ್ದೇನೆ; ಏರಿಸಿರಿ ಬಾವುಟ ! ಬರಲಿ ಅವರು !"

ಈ ಅಶಿಕ್ಷಿತ ಮೀನುಗಾರನನ್ನು ನೋಡಿ ದೊಡ್ಡ ದೊಡ್ಡ ಬ್ರಾಹ್ಮಣರು, ಭಟ್ಟರು ನಾಚಿಕೆಯಿಂದ ತಲೆ ಕೆಳಗೆ ಹಾಕತೊಡಗಿದರು. 'ಇವನ ಮೇಲೆ ಯಾವ ಭೂತ ಕೂತಿದೆ ?' ಎಂಬುದೇ ತಿಳಿಯದಾಗಿತ್ತು ಅವರಿಗೆ. ರೇಜಿದೋರನನ್ನು ಕೊಲ್ಲುವ ಮಾತನ್ನೆತ್ತುವವನೇನೂ ಸಾಮಾನ್ಯನಲ್ಲ.

ಒಲೆಯ ಮೇಲಿಟ್ಟಿದ್ದ ಪಾತ್ರೆಯ ಮುಚ್ಚಳವನ್ನು ತೆಗೆದೊಡನೆ ಒಮ್ಮೆಲೆ ಉಗಿಯು ಹೊರಗೆ ನುಗ್ಗಿ, ಒಳಗಿನ ನೀರು ಕತಕತ ಕುದಿಯುವಂತೆ, ಬೇತೂ ಕುಡುಗೋಲನ್ನು ತೋರಿಸಿದೊಡನೆ ಜನಮನವು ಕುದಿಯತೊಡಗಿತು ಬಹಳಷ್ಟು ಜನರ ಭ್ರಾಂತಿಯನ್ನು ಅವನು ಊದಿಬಿಟ್ಟ. ಅವರ ತ್ವೇಷ, ದ್ವೇಷ ಉಕ್ಕಿಬಂದುವು. ಸಣ್ಣ ಚಿಣ್ಣರೂ ಹೆಂಗುಸರೂ, ಮುದುಕರೂ, ಪ್ರತಿಯೊಬ್ಬರೂ ಕೆರೆಯಮೇಲೆ, ಗುಡಿಯಲ್ಲಿ, ನದಿದಂಡೆಯ ಮೇಲೆ, ಬಿಚ್ಚುಮನಸ್ಸಿನಿಂದ ಚಳವಳಿಯ ಸಂಗತಿಗಳನ್ನು ಪ್ರಸ್ತಾಪಿಸತೊಡಗಿದರು. ಬೇತೂನಿಗೆ ರೇಜಿದೋರನ ಬೆಲೆ ಗೊತ್ತಾಯಿತು. 'ಪೋರ್ತುಗೀಜರ ಸತ್ತೆ ತಮ್ಮ ಭಯದ ಮೇಲೆ ಅವಲಂಬಿಸಿದೆ' ಎಂಬ ಮಹಾಮಂತ್ರವನ್ನು ಆ ಹಳ್ಳಿಗೆ ಉಸುರಿದ. ಅಂದಿನಿಂದ ರೇಜಿದೋರ ಕೈಯಲ್ಲಿ ಪ್ರಾಣಹಿಡಿದು ತಿರುಗತೊಡಗಿದ. ಹೋದ-ಹೋದಲ್ಲಿ ಅವನಿಗೆ ಬೇತೂ ಕಾಣತೊಡಗಿದ. ರಾತ್ರಿ ಅವನು ಹೊರಬೀಳದಾದ. ದಿನವೂ ಸಂಗಡ ಪೋಲೀಸರಿಲ್ಲದೆ

ತಿರುಗಾಡುತ್ತಿದ್ದಿಲ್ಲ. ತಾನು ಪೀಡಿಸಿದ, ಹೊಡೆದ, ಬಡಿದ, ಅಪಮಾನಿಸಿದ, ದಂಡಿಸಿದ ನೂರಾರು ಗೃಹಸ್ಥರು, ಜಮೀನುದಾರರು, ತೋಟಿಗರು, ರೈತರು ಈಗ ಒಂದಾಗಿ ತನ್ನ ವಿರುದ್ಧ ನಿಲ್ಲುವರು, ಕಾರಸ್ಥಾನಗಳನ್ನು ಕಟ್ಟುವರು, ಮತ್ತು ತನ್ನನ್ನು ಏಕಾಏಕಿ ಇದ್ದಲ್ಲಿ ಸಂಧಿಸಿ ಕಡಿಯುವರು, ಕೊಲ್ಲುವರು— ಎಂಬ ಭಾಸ ಅವನಿಗಾಗತೊಡಗಿತ್ತು. ತನ್ನನ್ನು ಕೊಲ್ಲಲಿಕ್ಕೆ ಇಷ್ಟೆಲ್ಲ ಜನರಾದರೂ ಏಕೆ ಬೇಕು? ಒಬ್ಬ ಬೇತೂನೇ ಸಾಕು. ಜೀವದ ಬಗ್ಗೆ ಮೊದಲೇ ಉದಾಸೀನನಾಗಿದ್ದಾನೆ. ಒಳ್ಳೇದು, ಅವನನ್ನು ಹಿಡಿದರೂ ಸಂಕಟವೇ. ಅಕಸ್ಮಾತ್ ಅವನ ಸಂಗಡಿಗ ಕತ್ತಲಲ್ಲಿ ನಿಂತು ತನ್ನ ಮೇಲೆ ಬಂದೂಕನ್ನು ನಡೆಯಿಸಲೂ ಹಿಂಜರಿಯಲಾರ....

ಇದೇ ವೇಳೆಗೆ ಸತ್ಯಾಗ್ರಹ ಪ್ರಾರಂಭವಾಯಿತು. ಸರಕಾರ ಜನರನ್ನು ಹಿಡಿದು ಬಡಿದು ಸೆರೆಮನೆಗೆ ಹಾಕತೊಡಗಿತು. ನೋಡಿದಲ್ಲೆಲ್ಲ ಬಾವುಟಗಳು ಕಾಣತೊಡಗಿದುವು ಹಿಂದುಸ್ಥಾನದ ವರ್ತಮಾನಪತ್ರಗಳಲ್ಲಿಯೂ, ಹೊರಗಿನ ಜನರು ಗೋವೆಯಲ್ಲಿ ನುಗ್ಗಿ ಪೋರ್ತುಗೀಜರ ಸತ್ತೆಯನ್ನು ಮುರಿದುಹಾಕುವರೆಂದು ಅಚ್ಚಾಗಿಬಂತು. ದೊಡ್ಡ ದೊಡ್ಡ ಗುಂಪುಗಳಲ್ಲಿ ಈ ಸತ್ಯಾಗ್ರಹಿಗಳು ಒಳನುಗ್ಗುವರೆಂದು ಸರಕಾರವು ಹಡಗುಗಳನ್ನು ತಡೆಯಿತು, ಮೋಟಾರ ಓಡಾಟವನ್ನು ನಿರ್ಬಂಧಿಸಿತು, ಉಗಿಬಂಡಿಗಳನ್ನು ತಡೆಯಿಸಿಬಿಟ್ಟಿತು. ನಾಲ್ಕೂ ದಿಕ್ಕುಗಳಲ್ಲಿ ಸುದ್ದಿಹಬ್ಬಿತು: 'ಹದಿನೈದನೆಯ ಆಗಸ್ಟಿಗೆ ಗೋವೆ ಸ್ವತಂತ್ರವಾಗುತ್ತದೆ!'

ಶಾಬಾಶೆಣ್ವೈನಿಗಂತೂ ಜೀವವೇ ಹಾರಿದಂತಾಯಿತು. ತನ್ನ ಆಯುಷ್ಯ ಮುಗಿಯಿತೆಂದೇ ಅವನು ತಿಳಿದುಕೊಂಡ. ಹೊರಗಿನ ಜನರು ಒಳಗೆ ಬಂದೊಡನೆಯೇ ಆಗುವ ಆ ಮಹಾಗದ್ದಲದಲ್ಲಿ ತಾನು ನುಚ್ಚುನೂರಾಗುವೆನು. ಆಗ ಪೋಲೀಸರೆಲ್ಲಿ? ಕೋಮೇನಾತನೆಲ್ಲಿ? ಅವರಾದರೂ ತನ್ನ ಪ್ರಾಣವನ್ನು ಉಳಿಸುವವರೇ? ಒಬ್ಬ ಬೇತುವೇ ಸಾಕು ತನ್ನನ್ನು ಸದೆಬಡೆಯಲು. ಬೇತೂನ ಆ ಮಿನುಗುವ ಕುಡುಗೋಲು ಅವನ ದೃಷ್ಟಿಯ ಮುಂದೆ ಕುಣಿಯತೊಡಗಿತು. ಅವನ ಕಣ್ಣ ಮುಂದೆ ಕತ್ತಲೆ ಕವಿಯತೊಡಗಿತು.

ತನ್ನ ಗಂಡನಿಗೊದಗಿದ ಈ ಅವಸ್ಥೆಯನ್ನು ನೋಡಿ ಶಾಂತಾಬಾಯಿ ಸಂಕಟಕ್ಕೊಳಗಾದಳು. ಆಕೆಯು ಮೊದಲೇ ಈ ಭವಿಷ್ಯವನ್ನು ಗುರುತಿಸಿದ್ದಳು. ಗಂಡನ ಪಾತಕಗಳ ಫಲಗಳನ್ನು ಒಂದು ದಿನ ಅವನಷ್ಟೇ ಎಲ್ಲರೂ ಅನುಭವಿಸಬೇಕಾಗುವುದೆಂದು ಆಕೆ ಮೊದಲೇ ಅರಿತಿದ್ದಳು. ದೈವದಲ್ಲಿದ್ದಂತೆ ಆಗುವುದೆಂಬ ವಿವೇಕವನ್ನು ತಾಳಿ ಸುಮ್ಮನೆ ಕೂತಹೊರತು ಗತ್ಯಂತರವಿದ್ದಿಲ್ಲ. ಈ ದಿನಗಳಲ್ಲಿ ಅವಳ ನಿದ್ದೆಯೇ ಹಾರಿಹೋಯಿತು, ಹಸಿವೆ ಹಿಂಗಿತು. ನೂರಾರು ಜನರು ತಮ್ಮ ಮನೆಯ ಮೇಲೆ ದಾಳಿ ಮಾಡಿಬಿಟ್ಟರೆ ತಮ್ಮನ್ನು ಸಂರಕ್ಷಿಸುವವರು ಯಾರು? ಪ್ರಸಂಗ ಬಹಳೇ ಘಾತುಕವಾಗಿತ್ತು. ಈ ವಿಪತ್ತಿನಿಂದ ತಾನು, ತನ್ನ ಪತಿ ಮತ್ತು ಮಕ್ಕಳು ಹೇಗೆ ಪಾರಾಗುವರೆಂದೇ ಆಕೆಗೆ ತಿಳಿಯದು. ಆಕೆ ಗೊಂದಲದಲ್ಲಿ ಸಿಲುಕಿಬಿದ್ದಳು.

ಹದಿನೈದನೆಯ ಆಗಸ್ಟ್ ಮೂಡಿತು. ಶಾಬಾಶೆಣಯಿಯ ಮನೆಯ ಕದಗಳು ಮುಚ್ಚಿದುವು. ಊರಲ್ಲಿ ಹಿಂದುಸ್ಥಾನದ ತ್ರಿವರ್ಣಧ್ವಜಗಳೇರಿದುವು. 'ಜಯಹಿಂದ'ದ ಘೋಷಣೆಗಳು ಮೊಳಗತೊಡಗಿದುವು. ಶಾಬಾಶೆಣ್ವೈ ಇನ್ನಷ್ಟು ನಡುಗತೊಡಗಿದ. ಈಗ ಏನಾಗುವುದೆಂಬುದು ತಿಳಿಯಲಾರದ ವ್ಯಾಕುಲತಿವಸ್ಥೆಯಲ್ಲಿ, ಶಾಂತಾಬಾಯಿ ಅಡಿಗಡಿಗೆ ನಾರಾಯಣದೇವರನ್ನು ಪ್ರಾರ್ಥಿಸತೊಡಗಿದಳು.

ಸಂಜೆಯ ಐದು ಗಂಟೆಯಾಯಿತು. ನಾಲ್ಕೈದುನೂರು ಜನರದೊಂದು ಗುಂಪು ಗರ್ಜನೆ ಮಾಡುತ್ತ, ಘೋಷಣೆಗಳನ್ನು ಮೊಳಗಿಸುತ್ತ ಶಾಬಾಶೆಣ್ವೈನ ಮನೆಯನ್ನು ಮುಟ್ಟಿತು. ಶಾಬಾಶೆಣ್ವೈಗೆ ಈಗ ಸಂಶಯವೇ ಉಳಿಯಲಿಲ್ಲ. ತನ್ನ ಆಯುಷ್ಯ ಈಗ ತುಂಬಿ ಬಂತು, ಕೆರಳಿದ ಈ ಜನರು ತನ್ನ ಮನೆಮಾರಿಗೆ ಕೊಳ್ಳಿ ಇಡುವರು, ತನ್ನನ್ನೂ ಜೀವಂತ ಸುಟ್ಟು ಬಿಡುವರು .. .... ಹೆಂಡತಿಯನ್ನಪ್ಪಿ ಅವನು ಅಳಲು ಪ್ರಾರಂಭಿಸಿದ. ರೇಜಿದೋರತನದ ಮದವು ಈಗ ಸಂಪೂರ್ಣ ಇಳಿಯಿತು. ಈಗ ಕಣ್ಣು ತೆರೆದುವು. ಆದರೆ ಹೃದಯ ಬಡಿಯುತ್ತಿತ್ತು, ಮೂರ್ಛೆ ಬರುವಂತಾಯ್ತು, ಎದೆ ಸಿಡಿಯತೊಡಗಿತು.

ಶಾಂತಾಬಾಯಿ ದೇವರನ್ನಿಟ್ಟಿದ್ದ ಕೋಣೆಯಲ್ಲಿ ಬಂದು ಭೂಮಿಯ ಮೇಲೆ ಬಿದ್ದಳು. ಪುನಃ ವ್ಯಾಕುಲತೆಯಿಂದ ಆಕೆ ದೇವರಿಗೆ ಮೊರೆಯಿಟ್ಟಳು. ಇಷ್ಟರಲ್ಲಿ ಅಂಗಳದಲ್ಲಿ ನೆರೆದಿದ್ದ ಜನರು ಜಯಜಯಕಾರವನ್ನು ಮಾಡಿದರು: 'ಸೋನೂಬಾಬಕೀ ಜಯ' ಎಂಬ ಘೋಷಣೆ ಅವಳ ಕಿವಿಯಮೇಲೆ ಬಿದ್ದುದೇ ತಡ; ಮಿಂಚು ಹೊಡೆದಂತಾಯಿತು ಆಕೆಗೆ. ತಾನೇನು ಕೇಳುತ್ತೇನೆ! ಓಡುತ್ತ ತೇಕುತ್ತ ಕದವನ್ನು ತೆರೆದು ಆಕೆ ಹೊರಬಂದಳು. ಹೊರಗೆ ನೋಡಿದರೇನು! ಸೋನುವಿನ ಜಯಜಯಕಾರ! ಆಕೆ ಇನ್ನಷ್ಟು ಗೊಂದಲದಲ್ಲಿ ಬಿದ್ದಳು. ತನ್ನ ಮನೆಮಾರನ್ನು, ತನ್ನ ಜನರನ್ನು ವಿಧ್ವಂಸಮಾಡಲು ಬಂದಿದ್ದ ಈ ಊರ ಜನರು, ತನ್ನ ಸೋನೂನ ಹೆಸರಿನ ಘೋಷಮಾಡುತ್ತಿದ್ದಾರೆ! ಆನಂದದಿಂದ, ಉತ್ಸಾಹದಿಂದ ಕುಣಿಯುತ್ತಿದ್ದಾರೆ! ಇದೇನು ಆಶ್ಚರ್ಯ! ಇದೆಂತಹ ಚಮತ್ಕಾರ!

ಎಲ್ಲರಮುಂದೆ ಬೇತೂ ನಿಂತಿದ್ದ. ಅವನ ಕೈಯಲ್ಲಿ ಕುಡುಗೋಲು ಇದ್ದಿಲ್ಲ. ಬಾವುಟವಿತ್ತು! ಅವನ ಕಣ್ಣಲ್ಲಿ ಕೆಂಡಗಳು ಕೆರಳಿದ್ದಿಲ್ಲ, ಹೂಗಳು ಅರಳಿದ್ದುವು! ಶಾಂತಾಬಾಯಿ ಹೀಗೆ ಬೆರಗಾದುದನ್ನು ನೋಡಿ ಅವನು ಓಡುತ್ತ ಮುಂದೆ ಬಂದು ಅವಳ ಪಾದವನ್ನು ಹಿಡಿದನು.

" ಅರೇ ಏನಾಯಿತು! " ಆಕೆ ಕೇಳಿದಳು.

" ತಂದೆಯ ಪಾತಕವನ್ನು ಮಗನು ಅಳಿಸಿಬಿಟ್ಟ! "

" ಏನಾಯಿತೋ—ಏಳಲ್ಲ, ಏಳು! "

" ನಿಮ್ಮ ಸೋನೂ ಈ ಹೊತ್ತು ಬೆಳಿಗ್ಗೆ ಮುಖ್ಯ ಕಚೇರಿಯ ಮೇಲೆ ಬಾವುಟ ಏರಿಸಿದ. ಅವನನ್ನು ಹಿಡಿದರು; ಆದರೂ ಬಾವುಟವನ್ನು ಬಿಡಲಿಲ್ಲ. ನಮ್ಮ ಊರಿಗೇ ಕೀರ್ತಿ ತಂದನಲ್ಲವೆ ಅವನು? ಶಾಬಬಾಬಗೆ ಹೇಳಿರಿ, ಅಂಜಬೇಡಿರಿ."

ಶಾಂತಾಬಾಯಿ ಸದ್ಗದಿತಳಾದಳು. ಇಷ್ಟು ವೇಳೆಯವರೆಗೆ ಪತಿಯ ಪಾತಕಕ್ಕಾಗಿ ಅಳುತ್ತಿದ್ದ ಆಕೆಯೇ ಈಗ, ತನ್ನ ಮಗನ ಪರಾಕ್ರಮದಿಂದ ಮನಸ್ಸಿನಲ್ಲಿಯೇ ನಗತೊಡಗಿದಳು.

ರಾಷ್ಟ್ರಗೀತದ ಉಗಮ ಹಾಗೂ ಪ್ರಭಾವ

(ಆಕಾಶವಾಣೀ ಭಾಷಣ)*

ಶ್ರೀಮತಿ ಸರೋಜಿನಿ ಮಹಿಷಿ ಎಂ. ಎ, ಎಲ್‌ಎಲ್. ಬಿ., ಧಾರವಾಡ

卐

ದೈವೀಭಾವಕ್ಕೇ ಪ್ರಾಧಾನ್ಯವು ಇದ್ದ ಭಾರತೀಯರ ಹೃದಯದಲ್ಲಿ ರಾಷ್ಟ್ರೀಯ ಭಾವನೆಯು ಜಾಗೃತವಾದುದು, ಬ್ರಿಟಿಷರ ಆಡಳಿತದ ಪರದಾಸ್ಯಜೀವನದಲ್ಲಿಯೇ ! 'ಚಪ್ಪನ್ನ' ದೇಶಗಳಲ್ಲಿ ವಿಭಾಗಿತವಾದ ಭಾರತವು ಅಖಂಡರಾಷ್ಟ್ರವಾಗಿ ರೂಪುಗೊಂಡುದೂ ಆ ಕಾಲದಲ್ಲಿಯೆ. ರಾಷ್ಟ್ರವಾಗಿ ರೂಪುಗೊಂಡಾಗಲೇ ಅದಕ್ಕೊಂದು ರಾಷ್ಟ್ರಗೀತವು ಆವಶ್ಯಕವೆನಿಸಿತು.

卐

ರಾಷ್ಟ್ರವು ಅಖಂಡವಾಗಿದ್ದು, ಜನರು ಏಕಚ್ಛತ್ರಾಧಿಪತ್ಯದಲ್ಲಿ ಸುಖ-ಸಮಾಧಾನಗಳಿಂದ ನೆಲಸಿರುವುದು. ಪ್ರಾರಂಭಾವಸ್ಥೆಯಲ್ಲಿ ಗ್ರೀಕ್ ಸಂಸ್ಕೃತಿಯನ್ನೋ, ರೋಮನ ಸಂಸ್ಕೃತಿಯನ್ನೋ, ಅಥವಾ ನಮ್ಮ ಭಾರತೀಯ ಸಂಸ್ಕೃತಿಯನ್ನೋ ಕುರಿತು ಹೇಳುವ ಕಾಲ ಬರುವುದು ಹಲವಾರು ಶತಮಾನಗಳಾದ ಮೇಲೆ....ಆದರೆ ನಾಡು ತುಂಡು ತುಂಡಾಗಿ ಹಂಚಿ ಹೋದಾಗ....ಬೇರೆ ಬೇರೆ ಜನಾಂಗಗಳು ಒಂದು ಗೂಡದೇ ಕಾದಾಡುತ್ತಿರುವಾಗ, ರಾಷ್ಟ್ರೀಯತೆಯ ಭಾವನೆಗೆ ಅದರ ಪ್ರಸಾರಕ್ಕೆ ಹೆಚ್ಚಿನ ಮಹತ್ತ್ವವಿದೆ. ಈ ರಾಷ್ಟ್ರೀಯ ಭಾವನೆಗೆ ಅವಕಾಶ ದೊರೆಯಲು ರಾಷ್ಟ್ರದಲ್ಲಿ, ರಾಷ್ಟ್ರಕ್ಕೆ ಒಂದೇ ಆದ ಭಾಷೆಯು ಜನತೆಯಲ್ಲಿ ಆತ್ಮೀಯತೆಯನ್ನುಂಟು ಮಾಡಲು ಸಹಾಯಕಾರಿಯಾಗುತ್ತದೆ. ರಾಷ್ಟ್ರಗೀತ ರಾಷ್ಟ್ರದ ಬಗ್ಗೆ ಪ್ರೇಮಾಭಿಮಾನಗಳನ್ನೂ ಆದರವನ್ನೂ ನಿರ್ಮಾಣ ಮಾಡುತ್ತದೆ.

ರಾಷ್ಟ್ರೀಯತೆಯ ಭಾವನೆ ಒಂದು ಕಾಲಕ್ಕೆ ಜನತೆಯಲ್ಲಿ ಬೇರೂರಿದ್ದಿತೆಂದು ನಂಬಿದರೂ, ಕಾಲ ಉರುಳಿದಂತೆ ಪರಿಸ್ಥಿತಿಯಲ್ಲಿ ಗುರುತಿಸಲಾರದಷ್ಟು ವ್ಯತ್ಯಾಸ ಕಂಡುಬಂದಾಗ, ರಾಷ್ಟ್ರೀಯ ಭಾವನೆ ಬಹುಜನಸಮಾಜದಿಂದ ಕಾಲ್ತೆಗೆದುದೂ ಉಂಟು. ಭಾರತ-ವರ್ಷವೆಂದು ನಮ್ಮ ರಾಷ್ಟ್ರಕ್ಕೆ ಹೆಸರುಕೊಟ್ಟ ಭರತನ ವರ್ಣನೆ ಐತರೇಯ ಬ್ರಾಹ್ಮಣದಲ್ಲಿ ಬರುತ್ತದೆ:

"ಭರತಃ ಸಮಾತಂ ಸರ್ವತಃ ಪೃಥ್ವೀಂ ಜಯತ್" ಎಂದು. ಉತ್ತರದಲ್ಲಿ ನೆಲೆಯೂರಿದ ಆರ್ಯರು ದೇಶದ ನದಿಗಳನ್ನು ಪಂಜಾಬಿನ ಪಂಚನದಿಗಳ ಬೆಳೆಯನ್ನು ಪೂಜಿಸಿದರು. ನದಿಗಳ ದಡದಲ್ಲಿ ತೀರ್ಥ-ಕ್ಷೇತ್ರಗಳು ನೆಲೆಗೊಂಡುವು ಕಾಶಿ-ರಾಮೇಶ್ವರಗಳ ಯಾತ್ರೆ ರಾಷ್ಟ್ರದ ಸಮಗ್ರಸೌಂದರ್ಯವನ್ನೂ ವ್ಯಾಪಕತೆಯನ್ನೂ ಯಾತ್ರಿಕರೆದುರು ತಂದು ನಿಲ್ಲಿಸಿತು.

* ತಾ. ೨೨-೫-೫೫ರಂದು ಧಾರವಾಡದ ಆಕಾಶವಾಣೀ ಕೇಂದ್ರದಿಂದ ಬಿತ್ತರಗೊಂಡುದು. ಸಂ. ಜ. ಧಾ.

ದೃಷ್ಟಿಯು ವಿಕಾಸಹೊಂದಿತು. ದೇಶಾಭಿಮಾನ; ಧರ್ಮ-ಪಾವಿತ್ರ್ಯಗಳ ರೂಪುತಾಳಿತು. ಕ್ರಮೇಣ ಆರ್ಯರು ದಕ್ಷಿಣದಲ್ಲಿ ಸರಿದಂತೆ, ದಕ್ಷಿಣದ ನದಿಗಳೂ ಅವರ ಪೂಜೆಯಲ್ಲಿ ಸ್ಥಾನಪಡೆದುವು. ದೇಶಮಾತೆ ತನ್ನ ಸ್ವರೂಪವನ್ನು ವಿಸ್ತರಿಸಿದಳು. ಬಳಿಕ ಉತ್ತರದ ನದಿಗಳನ್ನಷ್ಟೇ ಒಳಗೊಂಡ ಋಗ್ವೇದದ ನದೀಸೂಕ್ತವು ದಕ್ಷಿಣದ ನದಿಗಳನ್ನೂ ಒಳಗೊಂಡು

'ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತೀ'

ನರ್ಮದಾ ಸಿಂಧು ಕಾವೇರೀ ಜಲೇಸ್ಮಿನ್ ಸನ್ನಿಧಿಂ ಕುರು ||.

ಎಂದು ಪರಿವರ್ತಿಸಲ್ಪಟ್ಟಿತು.

ನಾಡಿನಲ್ಲಿ ಕಾಲಕಾಲಕ್ಕೆ ಧರ್ಮಸಂಸ್ಥಾಪನೆಗಾಗಿ ಬಂದ ಆಚಾರ್ಯರುಗಳು ಏಕರಾಷ್ಟ್ರೀಯತೆಯ ಭಾವನೆಯನ್ನುಂಟುಮಾಡಲು ಸತತವಾಗಿಯೂ ಯತ್ನಿಸಿದ್ದಾರೆ. "ದೇವನೊಬ್ಬ ನಾಮ ಹಲವು" "ದೇಹಭಿನ್ನ ಆತ್ಮವೊಂದು" ಎಂಬ ನುಡಿಗಳು ಸಮಗ್ರಜನತೆಯನ್ನೂ ಒಟ್ಟಿಗೆ ತರಲು ಯತ್ನಿಸಿವೆ. ಉತ್ತರ-ದಕ್ಷಿಣಗಳಲ್ಲಿಯೂ ಸಂಸ್ಥಾಪಿಸಲ್ಪಟ್ಟ ಶ್ರೀಶಂಕರಾಚಾರ್ಯರ ಮಠಗಳು, ಚೈತನ್ಯ ಪಂಥಕ್ಕೆ ಬೆಂಬಲ ನೀಡಿದ ಮಾಧ್ವಮತ, ಹರಪ್ಪಾ-ಮೋಹೆಂಜೋ-ದಾರೋದಲ್ಲಿಯ ಶೈವಧರ್ಮದ ಪ್ರತೀಕವಾಗಿ ದೊರೆತ ಮೂರ್ತಿಗಳು ದೇಶದಾದ್ಯಂತ ವ್ಯಾಪಿಸಿದ ಧರ್ಮದ ಏಕರೂಪತೆಯನ್ನೇ ಎತ್ತಿ ತೋರಿಸುತ್ತವೆ. ಹೊಣೆಯನ್ನು ತಪ್ಪಿಸಿಕೊಳ್ಳಲು ಬ್ರಿಟಿಶರ ಆಳಿಕೆಯಲ್ಲಿ ಸೌಲಭ್ಯದೊರೆತು ರಾಷ್ಟ್ರೀಯತೆಯ ಭಾವನೆಯ ಮೇಲೆ ಮುಸುಕು ಕವಿದಿರಬಹುದು ಬ್ರಿಟಿಶರಲ್ಲಡಗಿದ ರಾಷ್ಟ್ರೀಯಭಾವನೆ, ಎಚ್ಚರುಳ್ಳವರನ್ನು ಎದ್ದು ಕುಳ್ಳಿರಿಸಿರಲೂ ಬಹುದು ಆದರೆ 'ಬ್ರಿಟಿಶರಿಂದಲೇ ನಾವು ದೇಶಾಭಿಮಾನವನ್ನು ಕಲಿತದ್ದು' ಎಂದು ತಿಳಿಯುವುದು ಮಾತ್ರ ತಪ್ಪು. "ಫಂಡಾಮೆಂಟಲ್ ಯುನಿಟಿ ಆಫ್ ಇಂಡಿಯಾ"— ಎಂಬ ಪುಸ್ತಕದಲ್ಲಿ ಡಾ. ರಾಧಾಕುಮುದ ಮುಕರ್ಜಿಯವರು ಇದನ್ನೇ ವಿಶದವಾಗಿ ಹೇಳಿದ್ದಾರೆ:

ನದೀ–ಪರ್ವತ–ಖನಿಜದ್ರವ್ಯಗಳ ಭೌಗೋಲಿಕ ಸಂಪತ್ತಿನಿಂದಲೂ ಭೂಪತಿಗಳ ನರಪತಿಗಳ ಅಪಾರಶೌರ್ಯದಿಂದಲೂ ಮುನಿಗಳ ತಪೋಮಹಿಮೆಯಿಂದಲೂ ರಾಷ್ಟ್ರದಲ್ಲೆಲ್ಲ ಉಂಟಾದ ಆತ್ಮೀಯಭಾವನೆ, ಸ್ಥಾನೇಶ್ವರದ ರಣಭೂಮಿಯಲ್ಲಿ, ಸಂಯುಕ್ತೆಯ ಸ್ವಯಂವರದಲ್ಲಿ ಹಿಂದೆ ಸರಿಯಿತು ಘಜ್ನಿ, ಘೋರಿ, ಒಬ್ಬೊಬ್ಬರಾಗಿ ಬಂದು ಇನ್ನುಳಿದವರಿಗೂ ಅವಕಾಶವನ್ನು ಕಲ್ಪಿಸಿ ಕೊಟ್ಟರು. ಹಿಂದೂರಾಜ್ಯಗಳನ್ನು ಕಟ್ಟುವ ಪ್ರಯತ್ನ ಆ ತರುವಾಯ ಅಲ್ಲಲ್ಲಿ ನಡೆದರೂ, ರಾಷ್ಟ್ರೀಯ ಭಾವನೆ ಹೆಚ್ಚಾಗಿ ಪ್ರಚಾರ ಪಡೆಯಲಿಲ್ಲ ಕೊನೆಗೆ ಎರಡುವರೆನೂರು ವರುಷಗಳ ಇತಿಹಾಸ, ರಾಷ್ಟ್ರವನ್ನು ಪರಕೀಯರ ವಶಕ್ಕೆ ಕೊಟ್ಟುಬಿಟ್ಟಿತು. ಮೊಗಲರಾಜ್ಯದ ಅವನತಿಯ ಕಾಲಕ್ಕೆ ಇಂಗ್ಲಿಷರು ವ್ಯಾಪಾರಿಗಳಾಗಿ ಭಾರತಕ್ಕೆ ಬಂದವರು, ಎರಡುನೂರು ವರುಷಗಳವರೆಗೂ ರಾಜ್ಯವನ್ನೇ ನಡೆಸಿಬಿಟ್ಟರು. ಕಾಲಗತಿಸಿದಂತೆ ಹಿಂದುಸ್ಥಾನದ ಇತಿಹಾಸದಲ್ಲಿ ಇದೊಂದು ರಾಜಕೀಯ ಘಟನೆಯೆಂದಿಷ್ಟೇ ಅಸ್ತಿತ್ವವನ್ನು ಪಡೆಯಬಹುದು; ಆದರೆ, ರಾಷ್ಟ್ರಾಭಿಮಾನದ ಕಿಚ್ಚಿನಲ್ಲಿ ಬೆಂದ ಜನ ಪರಕೀಯರ ದಬ್ಬಾಳಿಕೆಯನ್ನು ಸಹಿಸದಾದರು. ಕಷ್ಟಗಳನ್ನು ಎದುರಿಸಿ ಕಾರಾಗೃಹವನ್ನನುಭವಿಸಿ, ಜನತೆಯಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸುವ ಯತ್ನ ಮಾಡಿದರು. ಆ ಸತತಪ್ರಯತ್ನದ ಫಲವೇ ಇಂದಿನ ರಾಜಕೀಯ ಸ್ವಾತಂತ್ರ್ಯ.

ಬ್ರಿಟಿಶರ ಆಳಿಕೆಯಿಂದ ಪಾಶ್ಚಾತ್ಯದೇಶದ ಸಾಹಿತ್ಯ, ಸಂಸ್ಕೃತಿಗಳ ರೂಪರೇಷೆಗಳು ನಮಗೆ ತಿಳಿದುವೇನೋ ಸರಿ; ಆದರೆ ದೇಶಾಭಿಮಾನವನ್ನೂ ಸ್ವಾತಂತ್ರಪ್ರೀತಿಯನ್ನೂ ಬೆಳೆಸುವ ಪ್ರಯತ್ನವನ್ನು ಮಾತ್ರ ಅವರು ಮಾಡಲಿಲ್ಲ. ವಥಸ್ತಂಭಕ್ಕೆಳೆಯುವ ಸ್ಪರ್ಧೆಯಲ್ಲಿ ಭಾಗವಹಿಸಲು ಹೊರಟಾಗ ಕೂಡ, ದೇಶಾಭಿಮಾನವು ವಿಲಿಯಂ ಟೆಲ್‌ನನ್ನು ರಾಷ್ಟ್ರಧ್ವಜದೆದುರು ನಿಲ್ಲಿಸಿ ತಲೆಬಾಗಿಸಲು ಬಿಟ್ಟದ ಕಥೆ ಮಾತ್ರ, ನಮ್ಮ ದೇಶಾಭಿಮಾನವನ್ನು ಕೆಣಕಿತು. ಏಳನೆಯ ಎಡ್ವರ್ಡರು ಹಿಂದುಸ್ಥಾನಕ್ಕೆ ಬಂದಾಗ, ಬಂಗಾಲೀ ಗೃಹಸ್ಥರೊಬ್ಬರು, ಎರಡು ಶ್ಲೋಕಗಳಲ್ಲಿ ಭಾರತವು ಎಷ್ಟುಮಟ್ಟಿಗೆ ಪಾರುಪತ್ಯದಲ್ಲಿದೆ ಎಂಬುದನ್ನು ಬಹಳ ಮಾರ್ಮಿಕವಾಗಿ ಹೇಳಿದರು. ಮ್ಯಾಂಚೆಸ್ಟರಿನ ಬಟ್ಟೆಯೇ ನಮ್ಮನ್ನು ಕಾಪಾಡಬೇಕು–ಎಂದು; ಕಂಪನಿಯ ಆಳಿಕೆ ಎಷ್ಟೇ ಉದಾರವಾಗಿ ಕಂಡರೂ ಅವರಲ್ಲೊಂದು ಉದ್ದೇಶವಿತ್ತು. ಕೊನೆಗೆ ೧೮೫೭ ರಲ್ಲಿ ಜನರಲ್ಲಡಗಿದ ಅಸಂತೋಷವು ಬಂಡಾಯದ ರೂಪವಾಗಿ ಹೊರಬಂದಿತು. ಬ್ರಿಟಿಷರು ಸಾಮಾನ್ಯ ಜನತೆಯ ಮನಸ್ಸನ್ನು ಒಲಿಸಿದರೂ ಅದು ಸಾಧ್ಯವಾಗಲಿಲ್ಲ, ಆದರು ರಾಷ್ಟ್ರೀಯಭಾವನೆಯನ್ನು ದೇಶದಾದ್ಯಂತ ಹರಡುವ ಪ್ರಯತ್ನ ಮಾಡಿದರು. ಈ ಜನರ ಸಮೂಹವೇ ರಾಷ್ಟ್ರೀಯ ಸಭೆ ಅಥವಾ ನ್ಯಾಶನಲ್ ಕಾಂಗ್ರೆಸ್ ಎಂದು, ಕ್ರಮೇಣ ಪರಿವರ್ತನೆ ಹೊಂದಿತೆಂದು ಹೇಳಬಹುದು. ರಾಷ್ಟ್ರೀಯ ಭಾವನೆಯನ್ನು ಪ್ರಸಾರ ಮಾಡಿದ ಮಹನೀಯರಲ್ಲಿ ಶ್ರೀ. ಚಿಪಳೂಣಕರ, ರಾಜೇಂದ್ರ ಬಾಲಮಿತ್ರ, ಉಮೇಶಚಂದ್ರ ಬ್ಯಾನರ್ಜಿ ಮೊದಲಾದವರು ಮುಖ್ಯರು. ಬಂಗಾಲದ ಸುಪ್ರಸಿದ್ಧ ಕಾದಂಬರಿಕಾರರಾದ ಬಂಕಿಮ ಚಂದ್ರರು ಬರೆದ 'ಆನಂದಮಠ'ವು ದೇಶಾಭಿಮಾನವನ್ನು ಜನರಲ್ಲುಂಟುಮಾಡಲು ಮಹತ್ತ್ವಯಪಾಲವನ್ನು ವಹಿಸಿದೆ. 'ವಂದೇ ಮಾತರಂ' ಎಂಬುದು ಈ ಕಾದಂಬರಿಯು ಕೊಟ್ಟ ಬೀಜಮಂತ್ರವು.

ಇಂದು ರಾಷ್ಟ್ರಗೀತ ಎಂದು ನಾವೆಲ್ಲರೂ ಹೇಳುವ 'ವಂದೇ ಮಾತರಂ' ಗೀತವು 'ಆನಂದಮಠ' ಕಾದಂಬರಿಯಲ್ಲಿ ಸಂನ್ಯಾಸಿಗಳ ಸಂಭಾಷಣೆಯಲ್ಲಿ ಬರುತ್ತದೆ. ಯಾವುದೇ ದೇಶದ ಇತಿಹಾಸವನ್ನು ತೆರೆದು ನೋಡಿದರೆ ವೀರ ಪೂಜೆಯಿಂದ, ರಣಾಂಗಣದ ಶೌರ್ಯದಿಂದ ಪ್ರೇರಿತವಾದ ವೀರಗಾಥಾಗಳೇ ಕ್ರಮೇಣ ರಾಷ್ಟ್ರಗೀತಗಳಾಗಿ ಪರಿಣಮಿಸಿದ್ದನ್ನು ಕಾಣುತ್ತೇವೆ. ವೀರರನ್ನು ಹೋರಾಟಕ್ಕೆ ಅಣಿಗೊಳಿಸುವಂತಹ, ಅವರಿಗೆ ಉತ್ಸಾಹವೀಯುವಂತಹ ದೇಶಪ್ರೇಮ ಈ ಗೀತದಲ್ಲಿ ಅಡಕವಾಗಿರುತ್ತದೆ. ರಾಷ್ಟ್ರದಿನ – ರಾಷ್ಟ್ರಗೀತಗಳು ದೇಶದ ಸ್ವಾತಂತ್ರ್ಯಸೂಚಕಗಳು. ಗ್ರೀಸ ದೇಶದ ರಾಷ್ಟ್ರಗೀತವು ವೀರಗೀತವೇ ಆಗಿದೆ. ಅಲ್ಲಿಯ ಅತ್ಯುತ್ತಮ ಸಾಹಿತ್ಯವು ವೀರಪೂಜೆಯಲ್ಲಿಯೇ ಉತ್ಪನ್ನವಾಗಿದೆ. ಭರತನ ಏಕಚ್ಛತ್ರಾಧಿಪತ್ಯ ಭಾರತೀಯರಲ್ಲಿ ಆತ್ಮೀಯತೆಯ ಭಾವನೆಯನ್ನುಂಟು ಮಾಡಿದಂತೆ. ಹಿಂದೀ ಸಾಹಿತ್ಯದಲ್ಲಿ ಪೃಥ್ವೀರಾಜರಾಸೋ, ಹಮ್ಮೀರ ರಾಸೋರ ಕೃತಿಗಳು ವೀರಗೀತಗಳಾಗಿ ಸೈನಿಕರನ್ನು ಹುರಿದುಂಬಿಸಿ ದೇಶಾಭಿಮಾನವನ್ನು ಕುದುರಿಸಿದುವು. ಕರ್ನಾಟಕದ ಮೂಲೆಮೂಲೆಗಳಲ್ಲಿ ದೊರೆಯುವ ವೀರಗಲ್ಲುಗಳು, ಶಿಲಾಶಾಸನಗಳು, ವೀರರ ದೇಶಾಭಿಮಾನದ ಕುರುಹಾಗಿ ನಿಂತಿವೆ. ಅವುದೇ ಅಜ್ಞಾತಶಕ್ತಿಯ ಅಸಿಪ್ಪ, ಸೆಳವಿಗೆ ಸಿಕ್ಕಿ ಮಲಗಿದ ವೀರರನ್ನು ಎಚ್ಚರಿಸಲು, ಸಾಹಿತ್ಯಿಕರೂ ಪರಿಶ್ರಮ ಪಟ್ಟಿದ್ದಾರೆ. ರಾಷ್ಟ್ರೀಯ ಜಾಗ್ರತಿಯೊಡನೆ ಕಾಂಗ್ರೆಸ್ಸಿನ ಉದಯಕ್ಕೆ ಮೊದಲು, ಹಿನ್ನೆಲೆಯಾಗಿ ಪರಕೀಯ ದಬ್ಬಾಳಿಕೆಯು ಅಸಹನೀಯವಾಗಿದೆ—ಎಂಬ ವಿಚಾರ, ಮೊದಲು ಬಂಗಾಲದಲ್ಲಿ ತಲೆದೋರಿತು. ಅದಕ್ಕೆ ಬಂಗಾಲದ ಮಟ್ಟಿಗೇ ಇದ್ದ ಬ್ರಿಟೀಶರ ಆಪಳಿತದ ಧೋರಣವೂ ಕಾರಣವಾಗಿತ್ತು. 'ದೇಶಾಭಿಮಾನವನ್ನು ಮರೆತು, ಅವರ ಆಡಳಿತದ ನೀತಿಯನ್ನು ಅನುಸರಿಸುವುದು ದಾಸ್ಯದ ಪರಮಾವಧಿ' ಎಂಬ ಭಾವನೆ ಬಂಗಾಲದಲ್ಲಿ ಮೊದಲು ತಲೆದೋರಿತು. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರಿಯಸಿ' ಎಂಬುದು ಅವರಿಗೆ ಮನವರಿಕೆಯಾಯಿತು. 'ಆನಂದಮಠ' ಕಾದಂಬರಿಯಲ್ಲಿ 'ವಂದೇಮಾತರಂ' ಗೀತ ಪದೇಪದೇ ಬರುತ್ತದೆ. ವಿಪುಲವಾದಂತಹ ನೈಸರ್ಗಿಕ ಸಂಪತ್ತುಳ್ಳದ್ದು ನಮ್ಮ ದೇಶ; ಯಾವ ಸಂಪತ್ತಿಗೂ ಇಲ್ಲಿ ಕೊರತೆ ಇಲ್ಲ; ಅಖಿಲ ಸಂಪತ್ತಿನಿಂದ ನಮ್ಮನ್ನು ಪೋಷಿಸುವ ತಾಯಿಯನ್ನು—ದೇಶಮಾತೆಯನ್ನು—ನಾನು ವಂದಿಸುತ್ತೇನೆ.....ಎಂಬುದೇ ಈ ಗೀತದ ಆಶಯ ! ಸಾಮಾನ್ಯವಾಗಿ ನಾವು ಹೇಳುವುದು 'ವಂದೇಮಾತರಂ' ಗೀತದ ಒಂದು ಪದ್ಯವನ್ನು ಮಾತ್ರ; ಆದರೆ ಅದರಲ್ಲಿ ದೇಶಮಾತೆಯ ಸ್ವರೂಪವನ್ನು ವರ್ಣಿಸುವ ಇನ್ನೂ ಅನೇಕ ಪದ್ಯಗಳಿವೆ. ಮೊದಲು ಈ ಗೀತ 'ಸಪ್ತಕೋಟಿ

ಕಂಠ ಕಲಕಲ ನಿನಾದಕರಾಲೇ! ದ್ವಿಸಪ್ತಕೋಟಿ ಭುಜೈರ್ಧೃತ ಖರಕರವಾಲೇ!' ಎಂದು ಬಂಗಾಲದ ಏಳುಕೋಟಿ ಜನರನ್ನು ಮಾತ್ರ ಸೂಚಿಸುತ್ತಿದ್ದುದುಂಟು. ಆದರೆ ರಾಷ್ಟ್ರಗೀತವೆಂದು, ನಾಡಿನ ಜನರು ಇದನ್ನು ಎತ್ತಿಕೊಂಡಾಗ, ಅದರಲ್ಲಿ ಪರಿವರ್ತನೆಯಾಗಿ 'ಸಪ್ತಕೋಟಿ' ಎಂಬುದು 'ತ್ರಿಂಶತ್ ಕೋಟಿ ಕಂಠಕಲಕಲ ನಿನಾದಕರಾಲೇ!' ಎಂದು ಮಾರ್ಪಟ್ಟಿತು. ಇಲ್ಲಿ ಬರುವ ಭಾರತಮಾತೆಯ ಅಖಂಡವಾದಂತಹ ವಿರಾಟಸ್ವರೂಪವು ಅವಳನ್ನು ಬಂಧಮುಕ್ತಳನ್ನಾಗಿ ಮಾಡಲು ಜನತೆಯನ್ನು ಹುರಿದುಂಬಿಸಿತು. ೧೮೭೬ರಲ್ಲಿ ಮಹಾರಾಷ್ಟ್ರದಲ್ಲಿ ರಾಜಕೀಯ ಚಳವಳಿಗೆ ಒಂದು ವ್ಯವಸ್ಥಿತವಾದಂತಹ ರೂಪು ದೊರೆಯಿತು. ೧೮೭೭ರಲ್ಲಿ ಲಾರ್ಡ್ ಲಿಟನ್ನನ ಆಡಳಿತವು ಈ ಚಳವಳಿಗೆ ಇನ್ನೂ ಹೆಚ್ಚಿನ ಅವಕಾಶ ಕೊಟ್ಟಿತು. ಆಗಲೇ ಕಲಕತ್ತೆಯಲ್ಲಿ ಇಂಡಿಯನ್ ಅಸೋಸಿಯೇಶನ್ನಿನ ಸ್ಥಾಪನೆಯಾಯಿತು. ಸುರೇಂದ್ರನಾಥ ಬ್ಯಾನರ್ಜಿಯಂತಹ ಕಾರ್ಯಕ್ಷಮ ವಿದ್ಯಾವಂತರು, ಉತ್ಸಾಹೀ ಜನರನ್ನು ಸ್ವಾತಂತ್ರ್ಯದ ಚಳವಳಿಗಾಗಿ ಹುರಿದುಂಬಿಸಿದರು. ಹಿಂದೀಯರು ಸಿವ್ಹಿಲ್‌ಸರ್ವ್ಹಿಸ್ ಪರೀಕ್ಷೆಗೆ ಕಟ್ಟಬಾರದೆಂಬ ಪರಿಸ್ಥಿತಿಯನ್ನು ದಾದಾಭಾಯಿ ನವರೋಜಿಯವರು ಪ್ರಬಲವಾಗಿ ನಿಷೇಧಿಸಿದರು. ಹಿಂದೀ ನ್ಯಾಯಾಧೀಶರು ಯುರೋಪಿಯನರ ಫೌಜದಾರೀ ಖಟ್ಲೆಗಳಲ್ಲಿ ತೀರ್ಪು ಕೊಡಲು ಅಸಮರ್ಥರೆಂಬುದನ್ನೂ, ಹಿಂದೀಯರು ವಿರೋಧಿಸಿದರು. ಆದರೂ ಯುರೋಪಿಯನರ ತೀವ್ರ ಚಳವಳಿಯ ಮೂಲಕ, ಇದು ಅಷ್ಟು ಯಶಸ್ವಿಯಾಗಲಿಲ್ಲ. ಬಳಿಕ ಲಾರ್ಡ್ ಡಫರಿನ್ನರ ಕಾಲದಲ್ಲಿ, ನ್ಯಾಶನಲ್ ಕಾಂಗ್ರೆಸ್ಸಿನ ಸ್ಥಾಪನೆಯಾಯಿತು. ಸುಶಿಕ್ಷಿತ ಭಾರತೀಯ ಪ್ರತಿನಿಧಿಗಳು ಒಂದೆಡೆ ಕಲೆತು ವಿಚಾರವಿನಿಮಯ ಮಾಡಿದರೆ, ಆಡಳಿತವು ಇನ್ನೂ ಸುಸೂತ್ರವಾಗಿ ಸಾಗಬಹುದೆಂದು ಡಫರಿನ್ನರಿಗೂ ಕಂಡುಬಂದಿತು. ಅದಕ್ಕನುಸಾರವಾಗಿ ೧೮೮೫ರಲ್ಲಿ ಮೊದಲನೆಯ ಕಾಂಗ್ರೆಸ್ಸು, ಬ್ಯಾರಿಸ್ಟರ್ ಉಮೇಶಚಂದ್ರ ಬ್ಯಾನರ್ಜಿಯವರ ಅಧ್ಯಕ್ಷತೆಯಲ್ಲಿ ಮುಂಬಯಿಯಲ್ಲಿ ಕೂಡಿತು. ಅಲ್ಲಿಂದ ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಕಾಲ ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯಕ್ಕಾಗಿ ಕಾಂಗ್ರೆಸ್ಸು ಸತತವೂ ಹೋರಾಡಿದೆ. ಮಹಾತ್ಮಾ ಗಾಂಧೀಯವರು ೧೯೨೪ರಲ್ಲಿ ಬೆಳಗಾಂವಿಯಲ್ಲಿ ಕೂಡಿದ ಅಖಿಲ ಭಾರತ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಅಧ್ಯಕ್ಷರಾಗಿದ್ದರೂ, ಕಾಂಗ್ರೆಸ್ಸಿನ ಎಲ್ಲ ಕಾರ್ಯಕಲಾಪಗಳ ಯೋಜನೆಗಳ ಸೂತ್ರಧಾರಿಯೇ ಅವರು. ಶ್ರೀ. ದಾದಾಭಾಯಿ ನವರೋಜಿಯವರು ಅಧ್ಯಕ್ಷರಾಗಿದ್ದ ೨ನೇಯ ಅಧಿವೇಶನದ ಸಮಯಕ್ಕೆ ಬಂಗಾಲೀ ಕವಿಯೊಬ್ಬರು 'ರಾಖೀ ಬಂಧನ' ಎಂಬ ಗೀತವೊಂದನ್ನು ರಚಿಸಿದ್ದರು. ನಾವು ಹೇಳುವ 'ವಂದೇ ಮಾತರಂ' ಗೀತದ ಮೊದಲ ನುಡಿಯನ್ನೊಳಗೊಂಡು ಇನ್ನೆರಡು ನುಡಿಗಳಿಂದ ಕೂಡಿದೆ ಈ ಗೀತ:

"ಭಾರತ ಆಕಾಶೇ ನವ ಸೂರ್ಯೋದಯ,
ನವೀನ ಕಿರಣ ಟಾಲಿಲ
ಗಾವೋರೆ ಯಮುನೇ ಗಾವೋ ಭಾಗೀರಥೀ!
ಸಜೇ ಬಲ ಜಯ ಭಾರತೀರ ಜಯ ಜಯ ಭಾರತ ಜನನೀ
ಜಾಗಿಲ!"

ಎಂದು, ಭಾರತ ಜನತೆ ಎಚ್ಚತ್ತಿದೆ ಎಂಬುದನ್ನು ಹೇಳುತ್ತಿದೆ. ಅಂದಿನ ಕಾಂಗ್ರೆಸ್ ಅಧಿವೇಶನಗಳಲ್ಲಿ ಸ್ವಾಗತಗೀತವನ್ನೂ ರಾಷ್ಟ್ರಗೀತವನ್ನೂ ಹೇಳುತ್ತಿದ್ದವರು ರವೀಂದ್ರನಾಥ ಟಾಗೋರರು, ಮತ್ತು ಪಲೂಸ್ಕರರು. ಗೀತವು ಕೂಡಿದ ಜನತೆಯಲ್ಲಿ ನವಚೈತನ್ಯವನ್ನು ತುಂಬುತ್ತಿತ್ತು.

'ವಂದೇ ಮಾತರಂ' ಗೀತವು ರಾಷ್ಟ್ರಗೀತವಾದಂತೆ 'ಜನಗಣಮನ'ವೂ ರಾಷ್ಟ್ರಗೀತವೆಂದು ೧೯೫೦ನೆಯ ಜನವರಿ ೨೪ರಂದು ಭಾರತ ಸರಕಾರದಿಂದ ಮಾನ್ಯತೆ ಪಡೆದಿದೆ. 'ರಾಷ್ಟ್ರಗೀತವೆಂಬ ಮಾನ್ಯತೆಯನ್ನು ಇದಕ್ಕೆ ಕೊಡಬೇಕೋ, ಕೊಡಬಾರದೋ?' ಎಂಬ ಬಗ್ಗೆ ನಮ್ಮ ಸಂಸತ್ತಿನಲ್ಲಿಯೇ ವಾದ-ವಿವಾದ ನಡೆಯಿತು. ಈ ಗೀತವು ಭಾರತದ ವಿವಿಧ ಜಾತಿ, ಮತ, ಪಂಥ, ಭಾಷೆಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದ್ದರೂ, ಈ ಗೀತದ ರಚನೆಯಾದದ್ದು ಐದನೆಯ ಜಾರ್ಜರು ಹಿಂದುಸ್ಥಾನಕ್ಕೆ ಸಂದರ್ಶನವೀಯಲು ಬಂದಾಗ; 'ಭಾರತ ಭಾಗ್ಯವಿಧಾತಾ' ಅಥವಾ 'ಭಾರತದ ಭಾಗ್ಯವನ್ನು ಬರೆಯುವ ಬ್ರಹ್ಮನು' ಎಂಬ ಪದವು ಬ್ರಿಟಿಷ್ ಸಮ್ರಾಟರನ್ನುದ್ದೇಶಿಸಿ ಬರೆದದ್ದು! ರಚಿತವಾದ ಕಾಲಕ್ಕೆ ಇದ್ದ ಉದ್ದೇಶವನ್ನು ಬಿಟ್ಟರೆ, ಈ ಗೀತ ಇಂದಿಗೂ ರಾಷ್ಟ್ರಗೀತವಾಗಿರಬಹುದು. 'ಅಧಿನಾಯಕ' ಹಾಗು 'ಭಾಗ್ಯವಿಧಾತ' ಎಂಬ ಪದಗಳು ಇಂದು ಭಾರತದ ಪ್ರಜೆಗಳನ್ನೇ ಅನ್ವಯಿಸಬಹುದು. ಇಂದು ಜನಗಣದ ಮನಸ್ಸೇ 'ಅಧಿನಾಯಕ.' 'ತವಶುಭನಾಮೇ ಜಾಗೇ ತವಶುಭ ಆಶಿಷ ಮಾಗೇ ಗಾಹೇ ತವ ಜಯಗಾಥಾ.' ಎಂಬುದು ಪ್ರಜಾರಾಜ್ಯದ ಹಿರಿಮೆಯನ್ನೂ ಪಾವಿತ್ರ್ಯವನ್ನೂ ಎತ್ತಿ ತೋರಿಸುತ್ತದೆ. 'ಜನಗಣಮನ' ಗೀತದಲ್ಲಿಯೂ ಭಾರತೀಯ ಭೌಗೋಲಿಕ, ಯುಗ-ಯುಗಗಳ ಐತಿಹಾಸಿಕ ವರ್ಣನೆ ಅಡಕವಾಗಿದೆ—ಇದರಲ್ಲಿ ವೀರರಿಗೆ ಆಹ್ವಾನವಿದೆ. ಕವಿಗಳಿಗೆ ಆಹಾರವಿದೆ. ಹೇಳಿದಾಗ ಸಮಗ್ರ ಹಿಂದುಸ್ಥಾನದ ಕಲ್ಪನೆಯೂ ಕಣ್ಣೆದುರು ಬರುತ್ತದೆ. ವಿವಿಧ ಭಾಷೆ, ಮತ, ಪಂಥಗಳ ನೈಸರ್ಗಿಕ ಸಂಪತ್ತಿನಿಂದ ಕಂಗೊಳಿಸುವ ನದೀ-ಪರ್ವತ-ವೃಕ್ಷಗಳು ದೇಶದಲ್ಲಿಯ ಐಕ್ಯವನ್ನು ಸಾರುತ್ತವೆ. ಎತ್ತರದಲ್ಲಿ ಅಗಮ್ಯವಾದ ಹಿಮಾಲಯವು ಅಚಲಯೋಗಿಯಂತೆ ನಿಂತು, ಪದತಲದಲ್ಲಿ ಪವಡಿಸಿದ ಜನತೆಯನ್ನು ಕೂಗಿ ಎಬ್ಬಿಸುತ್ತದೆ. ಗಂಗಾ, ಯಮುನೆ, ಕಾವೇರಿಯರು ಕಲಕಲನಿನಾದದಿಂದ ಜಯಘೋಷಗೆಯ್ಯುತ್ತಾರೆ. ದಕ್ಷಿಣದ ಚಂದನವೃಕ್ಷಗಳಲ್ಲಿ ಹಾಯುವ ಶೀತಲ ಸಮೀರಣ, ಉತ್ತರಕ್ಕೆ ಸಂದೇಶವನ್ನು ತಲುಪಿಸುತ್ತಾನೆ.

ಈ ರಾಷ್ಟ್ರಗೀತಗಳಲ್ಲಿ ಐಕ್ಯ-ವಿಸ್ತೀರ್ಣಗಳ ಕಲ್ಪನೆ, ಇವನ್ನು ಹತ್ತಿಕ್ಕಿ ಉಕ್ಕಿಬರುವ ದಾರಿದ್ರ್ಯ, ಪಾರತಂತ್ರ್ಯಗಳ ದಾಳಿ, ಭಾರತದ ಪ್ರತಿಪ್ರಾಂತದಲ್ಲಿಯೂ ಪ್ರತೀಕಾರ ಶಕ್ತಿಯನ್ನು ಕಲ್ಪಿಸಿತು. ಕನ್ನಡ, ಮರಾಠಿ, ಆಂಧ್ರಕವಿಗಳು ಜನರನ್ನು ಕೂಗಿ

(೧೧೮ನೆಯ ಪುಟ ನೋಡಿರಿ)

ಸಾಹಿತ್ಯವಿಮರ್ಶೆಯ ಶಿಕ್ಷಣರಂಗ

ಕಳೆದ ಸಂಚಿಕೆಯಲ್ಲಿ ಅಪೇಕ್ಷಿಸಿದಂತೆ 'ಮುಕ್ತಿ' ಎಂಬ ಸಣ್ಣಕತೆಯನ್ನು ವಿಮರ್ಶಿಸಿ ೧೩ ಜನರಿಂದಲೂ **ವರಾನ್ವೇಷಣೆ**' ಎಂಬ ಕಿರುನಾಟಕವನ್ನು ವಿಮರ್ಶಿಸಿ ೬ ಜನರಿಂದಲೂ ಲೇಖನಗಳು ಬಂದಿವೆ.

'ಮುಕ್ತಿ' ಕಥೆಯ ವಿಮರ್ಶಕರು

೧. ಶ್ರೀ. ಗೋಪಾಲಕೃಷ್ಣ ಹುನಗುಂದ, ಮುಳುಂದ (ಮುಂಬಯಿ) ೨. ಶ್ರೀ. ಕಾಳಪ್ಪ ಅ. ಪತ್ತಾರ, ಪಿ. ಬಿ. ಹೈಸ್ಕೂಲ್, ಜಮಖಂಡಿ. ೩. ಶ್ರೀ. ಸೂಗಣ್ಣ ಹುಂಡೇಕಾರ, ಯಾದಗಿರಿ. ೪. "ವಾಣಿ" ಹುಬ್ಬಳ್ಳಿ. ೫. ಶ್ರೀ. ಪಿ. ಅನಂತ ಜಹಾಗಿರದಾರ, ಕಲ್ಬುರ್ಗಿ. ೬. ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಕಾಸರಗೋಡು. ೭. ಶ್ರೀ. ಪಿ. ನರಸಿಂಹಶಾಸ್ತ್ರಿ, ಕೊಳನಾಡು (ದ. ಕ.). ೮. ಕುಮಾರಿ ಕುಸುಮಾ ಕುಲಕರ್ಣಿ, ಮುಧೋಳ. ೯. ಶ್ರೀ. ಜೆ. ಮಲ್ಲಾರಿಭಟ್ಟರು, ಎಸ್. ಪಿ ಹಾಯ್‌ಸ್ಕೂಲ್, ಹೊಸಪೇಟೆ. ೧೦. ಶ್ರೀ. ಭೀಮಪ್ಪ ನಡುವಿನಮನಿ, ತರ್ಲಘಟ್ಟ. ೧೧. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು (ದ. ಕ.). ೧೨. ಶ್ರೀ. ಕುಸುಗಲ್ಲ ರಾಮಚಂದ್ರ ಬಿ. ಎ. (ಆನರ್ಸ್), ವಿಜಾಪುರ. ೧೩. ಶ್ರೀ. ಎನ್. ಭೀಮಭಟ್ಟ, ಕನ್ಯಾನ (ದ. ಕ.).

'ವರಾನ್ವೇಷಣ' ನಾಟಕದ ವಿಮರ್ಶಕರು

೧. ಶ್ರೀ. ಪಿ. ಅನಂತ ಜಹಾಗಿರದಾರ, ಕಲ್ಬುರ್ಗಿ. ೨. ಶ್ರೀ. ಪಡಾರು ಮಹಾಬಲೇಶ್ವರಭಟ್ಟ, ಕೊಳನಾಡು. ೩. ಶ್ರೀ. ಪಿ. ನರಸಿಂಹಶಾಸ್ತ್ರಿ, ಕೊಳನಾಡು (ದ. ಕ.). ೪. ಶ್ರೀ. ಕೆ. ಎಸ್. ಶರ್ಮಾ, ಕಾಸರಗೋಡು. ೫. ಶ್ರೀ. ಎನ್. ಭೀಮಭಟ್ಟ, ಕನ್ಯಾನ. ೬. ಶ್ರೀ. ರಾಮಚಂದ್ರ ಎ. ಕುಸಗಲ್ ಬಿ. ಎ. (ಆನರ್ಸ್), ವಿಜಾಪುರ.

ಎಲ್ಲ ವಿಮರ್ಶೆಗಳನ್ನೂ ಸಂಪಾದಕ ಸಮಿತಿಯವರೇ ನೋಡಿ, ತಮ್ಮ ತೀರ್ಮಾನವನ್ನು ಕೊಟ್ಟಿದ್ದಾರೆ:

'ಮುಕ್ತಿ' ಕಥೆಯ ವಿಮರ್ಶಕರಲ್ಲಿ **ಶ್ರೀ. ಎನ್. ಭೀಮಭಟ್ಟ, ಕನ್ಯಾನ ಮತ್ತು ಶ್ರೀ. ಕೆ. ಎಸ್. ಶರ್ಮಾ** ಅವರ ವಿಮರ್ಶೆಗಳು ಅತ್ಯುತ್ತಮವಾಗಿವೆ. ಶ್ರೀ. ಪಡಾರು ನರಸಿಂಹಶಾಸ್ತ್ರಿ, ಕುಮಾರಿ ಕುಸುಮಾ ಕುಲಕರ್ಣಿ ಮತ್ತು ಶ್ರೀ. ಗೋಪಾಲಕೃಷ್ಣ ಹುನಗುಂದ ಅವರ ವಿಮರ್ಶೆಗಳು ಉತ್ತಮವಾಗಿವೆ. ಶ್ರೀ. ಕುಸುಗಲ್ ರಾಮಚಂದ್ರ ಬಿ. ಎ., ಶ್ರೀ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ ಮತ್ತು ಶ್ರೀ. ಪಿ. ಅನಂತ ಜಹಾಗಿರದಾರ ಇವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವೆಲ್ಲ ತೀರ ಸಾಮಾನ್ಯವಾಗಿವೆ.

'**ವರಾನ್ವೇಷಣೆ**'ಯ ವಿಮರ್ಶೆಗಳಲ್ಲಿ ಶ್ರೀ. ಕೆ. ಎಸ್. ಶರ್ಮಾ ಅವರದು ಅತ್ಯುತ್ತಮವಾಗಿದೆ. ಶ್ರೀ. ಪಡಾರು ಮಹಾಬಲೇಶ್ವರಭಟ್ಟ, ಶ್ರೀ. ಎನ್. ಭೀಮಭಟ್ಟ ಮತ್ತು ಶ್ರೀ. ರಾಮಚಂದ್ರ ಕುಸುಗಲ್ ಬಿ. ಎ. (ಆನರ್ಸ್) ಅವರ ವಿಮರ್ಶೆಗಳು ಚೆನ್ನಾಗಿವೆ. ಮಿಕ್ಕುವು ಸಾಮಾನ್ಯವಾಗಿವೆ.

ಈ ಸಂಚಿಕೆಯಲ್ಲಿ ಮೂರು ಸಣ್ಣ ಕತೆಗಳು ಅಚ್ಚಾಗಿವೆ. ಎರಡು ಅನುವಾದಿತ; ಒಂದು ಸ್ವತಂತ್ರ. ಮೂರೂ ಕತೆಗಳೂ ಒಂದೊಂದು ಬಗೆಯಲ್ಲಿ ವೈಶಿಷ್ಟ್ಯಪೂರ್ಣವಾಗಿರುವುವು. ಆದುದರಿಂದ 'ನಾನು ಮೆಚ್ಚಿದ ಕಥೆ' ಎಂಬ ತಲೆಬರೆಹವನ್ನಿರಿಸಿ, ತಮಗೆ ಒಳ್ಳೆಯದೆಂದು ತೋರಿದ ಒಂದು ಕತೆಯ ವಿಮರ್ಶೆಯನ್ನು ಬರೆದು, ಆಗಸ್ಟ್ ೨೨ನೆಯ ದಿನಾಂಕದೊಳಗಾಗಿ ತಲ್ಪುವಂತೆ ಕಳುಹಬೇಕು. ೨೪ನೆಯ ದಿನಾಂಕದಂದೇ ತೀರ್ಮಾನಿಸಬೇಕಾಗುವುದರಿಂದ, ವಿಲಂಬವಾಡಿ ಕಳುಹಿದವರು ನಿರಾಶೆಗೆ ಒಳಗಾಗಬೇಕಾದೀತು. ದಿನದಿನಕ್ಕೆ ಈ ವಿಭಾಗವು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿರುವುದು ಸಂತೋಷದ ಸಂಗತಿ.

—ಸಂಪಾದಕ

ಮುಕ್ತಿ

(ಸಣ್ಣಕತೆಯ ವಿಮರ್ಶೆ)

ಶ್ರೀ. ಎನ್. ಭೀಮಭಟ್ಟ, ಕನ್ಯಾನ (ದ. ಕ.)

ಯುವತಿಯೊಬ್ಬಳು ಜೀವನದ ಜಂಜಾಟದಿಂದ ಕಾಮುಕರ ಸೆರೆಯಿಂದ ಮುಕ್ತಿಪಡೆದುದು ಪ್ರಕೃತದ ವಸ್ತು. ನಿರಾಶ್ರಿತರ ಬಳಗದವಳಾದ ಮಿಶ್ರಾಣಿ ಮುಂಬಯಿಗೆ ಬಂದು, ಗತಿಯಿಲ್ಲದೆ ಅಲೆದಾಡುತ್ತಾ ಫರಾಸ್‌ರೋಡಿನಲ್ಲಿ ಸಿಕ್ಕಿಬೀಳುವುದು, ಅಲ್ಲಿದ್ದ ಮುದುಕಿಯಿಂದ ತಪ್ಪಿಸಿಕೊಂಡು ಮುಂದೆ ಸಾಗಿದಾಗ ನಾರಾಯಣರಾಯರ ಆಕಸ್ಮಿಕ ನಿಷ್ಕಲ್ಮಷ ಹಸ್ತಾವಲಂಬನ—ಉದಾರಾಶ್ರಯ—ಪಡೆಯುವುದು, ಅಲ್ಲಿ ಕ್ರಮೇಣ ರಾಯರ ಮಗ ಶ್ರೀನಿವಾಸನ ಕಾಮದೃಷ್ಟಿಗೆ ಗುರಿಯಾಗಿ ವಿಷಮಯ ಜೀವನದಿಂದ ಮುಕ್ತಿಪಡೆಯಲೆಂದು ಆತ್ಮಹತ್ಯೆ ಮಾಡುವುದು—ಪ್ರಕೃತದ ಕಥೆಯಲ್ಲಿ ನಿರೂಪಿತವಾಗಿದೆ.

ನಿರಾಶ್ರಿತ ಸ್ತ್ರೀ ಜೀವನಕ್ಕೆ ಆತ್ಮಹತ್ಯೆಯೇ ಕೊನೆಯ ಮಾರ್ಗವೆಂಬ ಭಾವವಿಲ್ಲಿ ಚೆನ್ನಾಗಿ ವ್ಯಕ್ತವಾಗಿದೆ.

ಫರಾಸ್‌ರೋಡಿನಿಂದ ತಪ್ಪಿಸಿ ಹೋಗಿದ್ದಾಗ ಶ್ರೀನಿವಾಸನು ಸಿಕ್ಕಿರಲಿಲ್ಲ. ಆತನ ತಂದೆ ಸಿಕ್ಕುವುದು ಕಥೆ ಮುಂದುವರಿಯಲು ಕಾರಣವಾದಷ್ಟೇ 'ಒಳ್ಳೆ ತಂದೆಯ ಕೆಟ್ಟ ಮಗ'ನ ಚಿತ್ರಣವನ್ನು ಆಂಶಿಕವಾಗಿ ನೀಡಿದೆಯೆನ್ನಬಹುದು. ನಾರಾಯಣರಾಯರ ಚಿತ್ರಣ ಸೊಗಸಾಗಿದೆ.

ಫರಾಸ್‌ರೋಡಿನ ವರ್ಣನೆ ಈ ಕಥೆಯಲ್ಲಿ ಬಂದಿದೆ. ಮುಂಬಯಿಗೆ ದೂರದಿಂದ ಬಂದ ಯುವತಿಗೆ ಅಲ್ಲಿಗೆ ಹೋದ ಮೇಲೂ ವೇಶ್ಯಾಗೃಹದ ಕಲ್ಪನೆ ಬಂದಿರಲಿಲ್ಲ ಪಾಪ! ಆಕೆ ಅಬೋಧೆಯಿದ್ದಿರಬಹುದೆ? ಅಥವಾ, ಆ ವಿಚಾರದಲ್ಲಿ ಹಾಗೆಂದೇ ಇಟ್ಟುಕೊಳ್ಳೋಣ. ಹಾಗಿದ್ದರೆ ನಿರಾಶ್ರಿತೆಯಾಗಿದ್ದವಳು, ಮುಂಬಯಿಗೆ ಬರುವ ಮೊದಲೇ ಎಷ್ಟೋ ಯುವಕರ ಉಪಟಳದಿಂದ ಸಾಯಬಹುದಾಗಿತ್ತಲ್ಲವೆ? ಈ ಪ್ರಶ್ನೆಗೆ ಈ ಕಥೆಯಲ್ಲಿ ಉತ್ತರವಿಲ್ಲ. ಲೇಖಕರು ಕೇವಲ ಮುಂಬಯಿಗೆ ಬಂದ ಮೇಲಿನ ಕಥೆಯನ್ನಷ್ಟೇ ಚಿತ್ರಿಸಿದ್ದಾರೆ ಆಕೆಯ ಬಾಳಿನ ಹಿನ್ನೆಲೆಯನ್ನು ಚುಟುಕಾಗಿಯಾದರೂ ಹೃದಯವಿದ್ರಾವಕವಾಗಿ ಚಿತ್ರಿಸಿದ್ದರೆ ಪ್ರಕೃತ ಕಥೆ ಉತ್ತಮವಾಗುತ್ತಿತ್ತು. ನಿರಾಶ್ರಿತೆಯೊಬ್ಬಳು ಫರಾಸ್‌ರೋಡಿನಲ್ಲಿ ಸಿಕ್ಕಿಬಿದ್ದುದಲ್ಲದೆ 'ಕೀಚಕ'ನ ವಶಳಾಗದೆ ಆತ್ಮಹತ್ಯೆ ಮಾಡಿದಳೆಂಬುದರಿಂದ, ಲೇಖಕರಿಗೆ ಹೆಣ್ಣಿನ ಜೀವನದ ಮೇಲೆ ಇರುವ ಕರುಣೆ, ಅಬಲಾಜೀವನದ ಅಸಹಾಯಕತೆಗಳನ್ನು ಚಿತ್ರಿಸಬೇಕೆಂಬ ಹಂಬಲವಿರುವುದು ನಮಗೆ ವ್ಯಕ್ತವಾಗುತ್ತದೆ. ಆದರೆ ಇಷ್ಟರಲ್ಲೇ ಒಂದೆರಡು (ಲೇಖಕರ ದೃಷ್ಟಿಯಲ್ಲಿ) ಗಂಡಾಂತರಗಳನ್ನು ಇದಿರಿಸಿದ ಆಕೆ, ಶ್ರೀನಿವಾಸನ ಬಗ್ಗೆ ನಾರಾಯಣರಾಯರಿಗೆ ದೂರು ಕೊಡಬಹುದಿತ್ತು. ಅವರು ನಂಬದಿದ್ದರೆ, ಬಂದು ನಾಲ್ಕು ತಿಂಗಳಾದ ಮೇಲೆ ಸಾಕಷ್ಟು ಪರಿಚಿತವಾದ ಮುಂಬಯಿಯಲ್ಲಿ ಏನಾದರೊಂದು ಜೀವನೋಪಾಯ ಹುಡುಕಬಹುದಿತ್ತು. ಅದೂ ಸಾಧ್ಯವಾಗದೆ ಹೋದಲ್ಲಿ, ಕೊನೆಗೆ ಆತ್ಮಹತ್ಯೆಯಾದರೆ ಆತ್ಮಹತ್ಯೆ! ಆದರೆ ಇಷ್ಟರಲ್ಲೇ ಆಕೆಗೆ ಸಾಯಲು ಮನಸ್ಸಾದರೆ ಯಾರೇನು ಮಾಡಲು ಸಾಧ್ಯ? ಒಂದೋ ಆಕೆ ಹೆಡ್ಡುತನದವಳಿರಬೇಕು; ಇಲ್ಲವಾದರೆ, ಆಕೆಯ ದುಃಖದ ಒತ್ತಡ, ಹಿನ್ನೆಲೆಯನ್ನು ಲೇಖಕರು ಸಾಕಷ್ಟು ಚಿತ್ರಿಸಿಲ್ಲವೆನ್ನಬೇಕು. ಘಟನೆ ಹೀಗೆ ನಡೆಯಲಾರದೆಂದೇನೂ ನಾವು ಸಾಧಿಸುವುದಿಲ್ಲ. ಆದರೆ ಈ ರೀತಿಯ ಕೆಲವು ಪ್ರಶ್ನೆಗಳಿಗಿಲ್ಲಿ ಉತ್ತರವಿಲ್ಲದಾಗಿದೆ ಎಂದು ಹೇಳದಿರಲಾರೆವು. ಅಷ್ಟು ಅಲ್ಲದೆ ನಾರಾಯಣರಾಯರ ಮನೆ ಸೇರಿದ ದಿನ ಇಲ್ಲವೆ ಮರುದಿನ, ಶ್ರೀನಿವಾಸನ ತಂಟೆ ಉಂಟಾಗಿದ್ದರೆ, ಆಕೆ ನಿರುಪಾಯಳಾಗಿ ಸಾಯಬಹುದಾಗಿತ್ತು. ಆದರೆ ಇಲ್ಲಿ ನಾಲ್ಕು ತಿಂಗಳು ಕಳೆದಿರುವಲ್ಲಿ ಹಿಂದಿನ ನೋವು ಸಾಕಷ್ಟು ಕಡಿಮೆಯಾಗಿದ್ದರೂ ಇರಬಹುದು. ಕೆಚ್ಚೆದೆಯಿದ್ದರೆ, ಬುದ್ಧಿವಂತಿಕೆಯಿದ್ದರೆ ಬದುಕಲು ಸಾಧ್ಯವಿತ್ತು. ಉಪಕಾರಿಗಳಾದ ನಾರಾಯಣರಾಯರೇ ಒಂದು ಆಶ್ರಯವನ್ನೋ ದಾರಿಯನ್ನೋ ತೋರಿಸಲೂಬಹುದಿತ್ತು. ಯಾವಾಗಲೂ ಆತ್ಮಹತ್ಯೆಗೆ ಸಾಕಷ್ಟು ಹಿನ್ನೆಲೆ ಬೇಕು. ಪರಿಸ್ಥಿತಿಯ ಒತ್ತಡ ಬೇಕು. ಹಿಂದೆ ಆಕೆ ತುಂಬ ನೊಂದಿದ್ದರೂ, ಮುಂಬಯಿತನಕ ಬಂದಿದ್ದಾಳೆನ್ನುವಾಗ—ಆಕೆ ಕೆಚ್ಚೆದೆಯವಳೆಂದಾಯಿತು. ಸಾಯುವವಳು ಭೀರುವೇ ಸರಿ. ಹೀಗಿದ್ದು, ಹಿಂದಿನ ಚಿತ್ರಣವನ್ನು ಲೇಖಕರು ಬಿಟ್ಟಿರುವುದರಿಂದ, ಈ ಕಥೆ ಅಸಮಗ್ರವಾಗಿದೆ. ಆತ್ಮಹತ್ಯೆಯಿಂದಲೇ ಸ್ತ್ರೀಗೆ ಮುಕ್ತಿ-ಎಂಬುದನ್ನು ಲೇಖಕರು ಸಾಧಿಸಿರುವುದು ದೃಷ್ಟಿಭಿನ್ನತೆಯ ಸಂಕೇತ. ಹಿಂದಿನ ಕೆಟ್ಟ ಪರಿಸ್ಥಿತಿಯ ಒತ್ತಡವನ್ನು ಲೇಖಕರು ಚಿತ್ರಿಸದೆ ಬಿಟ್ಟಿರುವುದು ಮತ್ತು ನಾಲ್ಕು ತಿಂಗಳ ಅನಂತರದ ಆತ್ಮಹತ್ಯೆ ಚಿತ್ರಿಸಿರುವುದು ಸರಿಯೆನಿಸುವುದಿಲ್ಲ. ಇದು ನನ್ನ ಅಭಿಪ್ರಾಯ.

ಲೇಖಕರು ಕಥೆಯನ್ನು ವರದಿಯಂತೆ ಹೇಳುತ್ತಾ ಹೋಗಿದ್ದಾರೆ. ಕಥನತಂತ್ರದಲ್ಲಿ ನಾವೀನ್ಯವಿಲ್ಲ. ಹೇಳಿದ ಕ್ರಮದಲ್ಲಿ ಕೃತ್ರಿಮತೆಯಿಲ್ಲವಾದರೂ ಅತ್ಯಾಕರ್ಷಕತೆಯಿಲ್ಲ. ಭಾಷೆ ನಿರ್ದುಷ್ಟವಾಗಿದೆ. ನಾರಾಯಣರಾಯರ ಚಿತ್ರಣದ ಬಗ್ಗೆ ಲೇಖಕರಿಗೆ ಅಭಿನಂದನೆ ಸಲ್ಲಬೇಕು. ಕಥೆಯು ಓದಿಸಿಕೊಂಡುಹೋಗುತ್ತದೆ. ನಿರಾಶ್ರಿತೆಯ ಮೇಲೆ ಲೇಖಕರಿಗಿರುವ ಕರುಣೆಯೂ ಪ್ರಶಂಸಾರ್ಹವಾಗಿದೆ. ಆದರೆ ಮೇಲಿನ ಕೆಲವು ವಿಚಾರಗಳಿಂದಾಗಿ ಇದು ಉತ್ತಮ ಕಥೆಯೆನಿಸಲಾರದು. ಎಂಬುದು ನನ್ನ ಅಭಿಪ್ರಾಯ.

ವರಾನ್ವೇಷಣ

ಶ್ರೀ. ಕೆ. ಎಸ್. ಶರ್ಮಾ ಪಾಣೇಮಂದಿರಂ, ಕಾಸರಗೋಡು

ಇದೊಂದು ಬಾಳಿನ ಅಣಕವನ್ನು ಬಿಂಬಿಸುವ ಚಿಕ್ಕದೊಂದು ರೂಪಕ. ಸತಿ ಪತಿಯರ ಸಂಭಾಷಣೆಯಲ್ಲಿ ನೆಲೆಗೊಂಡು 'ವರಾನ್ವೇಷಣ'ದ ಮಧುರವಿನೋದದಲ್ಲಿ ಕೊನೆಗೊಂಡ ಬಾಳಿನ ಚಿತ್ರ. ಅರ್ಥಾತ್ ಇದೊಂದು ಮೂರುದೃಶ್ಯಗಳಲ್ಲಿ ಕೊನೆಗಾಣುವ ಪ್ರಹಸನ

ಕೇವಲ ಸಂಭಾಷಣೆಗಳಿಂದಲೂ, ಸೂಚಕ ವಿಚಾರಗಳಿಂದಲೂ ಒಡಸೇರಿ ಸಾಗುತ್ತ, ಎಲ್ಲಾ ಪಾತ್ರಗಳ ಪೂರ್ಣ ಪರಿಚಯದೊಡನೆ ಇತಿವೃತ್ತವನ್ನು ಬೆಳಗಬೇಕಾದುದು ರೂಪಕಧರ್ಮ. ಆದುದರಿಂದಲೆ ನಾಟಕರಚನೆಯೆಂಬುದು ತುಸು ಕಷ್ಟವಿದೆ; ಮಾತ್ರವಲ್ಲದೆ ನಾಟಕ-ಕರ್ತನು ತಾನೆತ್ತಿದ ಎಲ್ಲಾ ಭಾಗಗಳಲ್ಲೂ ರಸಾನುಗುಣವಾದ ಇತಿವೃತ್ತರೂಪಣೆಯನ್ನು ಅವಧಾನವಿಟ್ಟು ಮಾಡಬೇಕು; ಅಲ್ಲೂ ಹಾಸ್ಯರಸದಿಂದಲೇ ತುಂಬಿರುವ ನಾಟಕದ ರಚನೆಯೆಂತೂ, ಅನುಭಾವೀ ಲೇಖಕನ, ಭಾವುಕ ಲೇಖಕನ ಪ್ರತಿಭೆಯ ತಳಹದಿಯಲ್ಲಿದೆ.

"ರಾಯರು ಆವುದೋ ಲೇಖನ ವ್ಯವಸಾಯದಲ್ಲಿ ಅವಧಾನ-ಚಿತ್ತರಿದ್ದಾಗ, ಅವರ ಪತ್ನಿ ತನ್ನ ತಂಗಿ ಸುಧಾನ ವಿವಾಹಪ್ರಸ್ತಾಪವನ್ನೆತ್ತುವಳು. ಈ ಪ್ರಸ್ತಾಪದ ಮಧುರಗತಿಯಲ್ಲಿ ಸಾಂಸಾರಿಕ ವಿಚಾರಗಳು ಹೊರಹೊಮ್ಮಿ, ಅತ್ತಿಂದಿತ್ತ ರಸಾವಹವಾದ ಸನ್ನಿವೇಶ-ಗಳನ್ನು ಕೆಣಕಿತೋರುವುದು. ಸಂಭಾಷಣೆಯ ಕೊನೆಯಲ್ಲಿ ವಿವಾಹ-ವಿಚಾರಾಸಕ್ತನಾದ ಗುಂಡೂರಾಯನ ಪ್ರವೇಶವನ್ನು ಸೂಚಿಸುವಲ್ಲಿಗೆ, ಕಥೆಯ ಮೊದಲ ನೋಟ ಕೊನೆಗಂಡರೆ, ಮುಂದಿನ ದೃಶ್ಯದಲ್ಲಿ ಗುಂಡೂರಾಯ ಮತ್ತು ರಾಯರ ಸಂಭಾಷಣೆಯು ತಲೆದೋರುವುದು. ಈ ಸಂಭಾಷಣೆಯು ಒಳಗೆ ಕೆಲಸದಲ್ಲಿದ್ದ ರಾಯರ ಪತ್ನಿಗೆ ಕೇಳಿಸುವ ತೆರನಲ್ಲೇ ಅವ್ಯಕ್ತ ನಾದದಲ್ಲೇ ರೂಪುದೋರುವುದು. ಗುಂಡೂರಾಯ-ರಾಯರ ಮಾತುಗಳಲ್ಲಿ ರಾಯರ ತಂಗಿ ಸುಧಾನ ವಿವಾಹವಿಚಾರ ತಲೆದೋರಿದರೆ— ಎಲ್ಲವೂ ತನಗಾಗಿ ಎಂದರಿತಿರುವ ರಾಯರ ಪತ್ನಿ ಸ್ವವಿಚಾರಾನುಬಂಧಿಯಾಗಿ ತಿಳಿಯುವುದದು ಸ್ವಾಭಾವಿಕವಿದ್ದಂತೆ ಮಧುರವೂ ಆಗಿದೆ. ಮುಂದಿನ ಅಧ್ಯಾಯದಲ್ಲಿ ತಂಗಿ ಸುಧಾನ ವಿವಾಹವಿಚಾರ, ಕುತುಹಲಿನಿಯಾಗಿ ಸಾಗಿನಿಂತ ರಾಯರ ಪತ್ನಿಯ ಉತ್ಸಾಹಪೂರ್ಣ ಭಾವಲಹರಿಯ ಮೇಲೆ ವಿಚಾರವನ್ನು ವ್ಯಕ್ತ-ಗೊಳಿಸದೆ ಸಾಗಿದ ರಾಯರ ಮಾತಿನಮಾಲೆಯೂ,—ಕೊನೆಗೆ ಮಾತಿನ ವ್ಯಕ್ತಿಯು ತಲೆದೋರಿದಾಗ, ತನ್ನೆಲ್ಲಾ ಕುತೂಹಲವನ್ನು ಕಳಕೊಂಡ ರಾಯರ ಪತ್ನಿಯ ನಿಲುವೂ ಚೆಲುವಾಗಿ ಹೆಣೆಯಲ್ಪಟ್ಟಿದೆ. ಅಂತೂ ತಪ್ಪುತಿಳಿವಿನ ತಾರಸ್ವರದಲ್ಲಿ ಕಡಿದುಹೋದ ತಂತಿಯ ನಿಲುವೇ ಈ ಬಾಳ ಅಣಕದ ಒಳನೋಟ !

ಇತಿವೃತ್ತದ ಆಯ್ಕೆಯಲ್ಲಿ ಹೊಸತಿಲ್ಲವಾದರೂ, ವಿಚಾರ-ಮಹತ್ತಿಕೆಯಿಲ್ಲವಾದರೂ, ನಾಟಕೀಯ ಸಂವಿಧಾನಕೌಶಲದಲ್ಲಿ ಹಿರಿತನವಿದೆ ಮಧುರ ಸಂಭಾಷಣೆಯ ಒಲವಿದೆ. ಕೆಲವೊಂದೆಡೆಯಲ್ಲಂತೂ ಮಾತುಗಳು ಭರದಿಂದ ವಿವಿಧಜೀವನದ ಇತಿವೃತ್ತವನ್ನೇ ರಸಾವಹವಾಗುವಂತೆ ಸೂಚಿಸುತ್ತವೆ. ಮಾತಿನ ಒಳದನಿಯಲ್ಲೇ ಹಾಸ್ಯವನ್ನು ತುಂಬಿದ ಮಾದರಿಯಿದು ರುಚಿರವಿದ್ದಂತೆ, ಅರಿವಿನ ಮರೆಯಲ್ಲಿ ಅಡಗಿ ಕೊನೆಗೆ ಕಾಣಿಸಿದ ವಿಚಾರಸಂವೇದನೆಯಲ್ಲೂ ಮಾಧುರ್ಯವನ್ನು ತುಂಬಿ, ಓದುಗನನ್ನು ಸೆರೆಹಿಡಿಯುತ್ತಿದೆಯೆನ್ನ-ಬಹುದು.

ನಾಟಕಾರಂಭದಲ್ಲೇ— ತನ್ನ ತಂಗಿ ಸುಧಾನ ಮದುವೆಯ ಪ್ರಸ್ತಾಪವನ್ನೆತ್ತಬಯಸಿದ ರಾಯರ ಪತ್ನಿ, ಊರ-ಪರವೂರ ವರಾನ್ವೇ-ಷಣದ ವಿಚಾರವನ್ನು ಮುಂದೆತ್ತಿ, ಹುಡುಗಿಯರನ್ನು ಅಣಕಿಸುವುದು, ಲೇಖನಾಸಕ್ತ ರಾಯರನ್ನು ಒರಟಾಗಿ ಸೆಳೆಯುವಂತೆಸಗಿದ ಸಂವಿಧಾನ-ಕೌಶಲ.— ಪತ್ನಿಯ ಒರಟುಮಾತನ್ನು ತಡೆಗಟ್ಟುತ್ತ ರಾಯರು, ಒಂದೇಸವನೆ ಹೊರಡುತ್ತಿರುವ ಮಾತಿಗೆ "ಇಲೆಕ್ಶನ್ ಕಾರಿನ್ಹಾಂಗ" ಎಂಬ ಹೋಲಿಕೆಯೀವುದು ಒಂದು ರಸಾವರ್ಜಕವಾದ ಒಳದನಿ. ಇಲೆಕ್ಶನ್ ಸಂದರ್ಭದ ಅರಿವುಳ್ಳ ಓದುಗನಿಗೆ, ಇದಕ್ಕಿಂತ ಹೆಚ್ಚಿನ ವಿವರಣೆ ಇನ್ನೊಂದು ಮಾತಿನಿಂದಾಗದು. ಇದಕ್ಕುತ್ತರ ಬರುವ ರಾಯರ ಪತ್ನಿಯ ಮಾತಿನ ರುಚಿ ಇನ್ನೊಂದು ಬಗೆ: "ಹಾಂಗ್ಯಾಕ ಸಿಟ್ಟಿಗೇಳ್ತೀರಿ ರೇಶನ್ ಅಂಗಡೀ ಕಾರಕೂನನ್ಹಾಂಗ?" ಈ ಮಾತಿನ ರುಚಿಯನ್ನು ರೇಶನ್ ಅಂಗಡಿ ಬಳಿ ನಿಂತು, ಬೇಕೆಂದೇ ಕೆಂಪು ಮುಖ ಮಾಡುವ ಕಾರಕೂನನನ್ನು ಕಂಡವರು ಧಾರಾಳವಾಗಿ ಸವಿಯಬಹುದು. ಈ ಎರಡೂ ಮಾತುಗಳ ಪೂರ್ಣವಿರಾಮ— "ರೇಶನ್ ಅಂಗಡಿ ಕಾರಕೂನ ಮತ್ತು, ಸಂಸಾರ ಸೆಕ್ರೆಟರಿ ಎರಡೂ ಒಂದ" ಎಂಬ ಮಾತಿನ ಮುಂದೆ, ಆ ಬಳಿಕ ಸಾಗುವ ಮಾತಿನ ರುಚಿಯು ಮುಂದೆ, ರಾಯರನ್ನು ಕೆಣಕುತ್ತ ಸುಧಾನ ಪ್ರಸ್ತಾಪವನ್ನೆತ್ತುವಾಗ-ಕಾಣಿಸುವ ಮಾತೊಂದು ನಗುವನ್ನೆಬ್ಬಿಸುತ್ತದೆ. ರಾಯರನ್ನು ಅವರ ಪತ್ನಿ— "ವಿಶ್ವಾಮಿತ್ರನಿಗೆ" ಹೋಲಿಸುವಾಗ, ತಡೆಯಲಾರದ ರಾಯರು "ಕೆಣಕಬಂದ ಮೇನಕೆಗೆ" ಹೋಲಿಸಿ ಆಕೆಯನ್ನು ಕೆಣಕುವಾಗ, ಆ ಪತಿ-ಪತ್ನಿಯರೊಳಗೆ ಸಾಗುವ ಮಧುರಕಲಹದ ಪರಿಯನ್ನು ಪರಿಭಾವಿಸಬಹುದು.

ಈ ಕಲಹದ ಮುಂದೆ ರಾಯರ ಪತ್ನಿ, ಮದುವೆ ಕುರಿತು ತಂದೆ ಕಾಗದ ಬರೆದಿದ್ದಾರೆನ್ನುವಾಗ ರಾಯರು: "ಯಾರಿಗೆ? ನಿನಗ?" ಎಂದೆನ್ನುವುದೂ,— ತಾನಾಗಿ ಮದುವೆಯ ವಿಚಾರಕ್ಕೆ ಹೋಗಲಾರೆ. ನೆಂದು ಹೇಳುತ್ತ "ಹತ್ತು ಸಾವಿರ ರೂಪಾಯಿಗೆ ಜಾಮೀನು ಆಗೂ ಅಂದರ ಆಗಬಹುದು—ಆದರೆ ಈ ಗಂಡು-ಹೆಣ್ಣಿನ ವಿಚಾರ ಬೇಡ.' ವೆಂದೆನ್ನುತ್ತ, ವಿವಾಹದ ಬಳಿಕ ಬಂದೊದಗುವ ಅನಂತವಾದ ದೂರುಗಳನ್ನು ಹೆಂಗಳೆಯರ ನುಡಿಯಲ್ಲೇ ಎತ್ತಿ, ತನ್ನ ಪತ್ನಿಗೆ ಎದಿರೇಟನ್ನು ಕೊಡುವುದೂ, ಮಧುರವಿದ್ದಂತೆ ಬಾಳಿನ ಅಣಕವನ್ನು ತೋರುತ್ತಿದೆ. ಸಾಮಾನ್ಯವಾಗಿ ಸಂಸಾರದಲ್ಲಿ ಬರಬಹುದಾದ ವಿರಸ ಪ್ರಕರಣವನ್ನು ಕನ್ನಡಿಸಿ ತೋರುತ್ತಿದೆ. ಅಂತೂ ಪತಿ-ಪತ್ನಿಯರ ಮಾತು ತುಸು ವೈಷಮ್ಯದಲ್ಲಿ ಕೊನೆಗಂಡರೂ, ದೃಶ್ಯವಿದು "ಈ ಹೆಂಗಸರ ಸಿಟ್ಟು ಅಂದರ ಏನಂದ್ರಿ? ಹೊಟ್ಟೆಗೆ ಕೊಡೋತನಕಾ ಹುಡುಗರು ಅತ್ಹಾಂಗ!" ಎಂಬ ಮಾತಿನ ಕೊನೆಯಲ್ಲಿ ಮೆಲುವಾಗಿ ತೆರೆ ಬೀಳಿಸುವುದು.

ಮುಂದಿನ ಅಧ್ಯಾಯದಲ್ಲಿ ಗುಂಡೂರಾಯ-ರಾಯರ ಸಂಭಾ-ಷಣೆ. ರಾಯರ ತಂಗಿ ಸುಧಾನ ವರಾನ್ವೇಷಣದಲ್ಲಿ ಸಫಲರಾದ್ದ ಗುಂಡೂರಾಯರು ವರನ ಗುಣಕಥನ, ಉದ್ಯೋಗದ ಗುರಿಗಳನು ಹೇಳುತ್ತಿರುವುದು ನಿಧಾನವಾಗಿ ಹರಿಯುವ ಪ್ರವಾಹವಾದರೆ, ಅದ

ರೊಳಗೆ ಹುದುಗಿನಿಂತ ಸೆ ಳೆತ ರಾಯರ ಪತ್ನಿಯನ್ನು ಉತ್ಸುಕಳನ್ನಾಗಿ ಮಾಡಿ, ನವಚೈತನ್ಯವನ್ನೊದಗಿಸುವುದು. ಈ ಭಾಗದಲ್ಲಿ, ಧರ್ಮಕ್ಕೆ ಸಿಗುವ ಮದ್ದಿದ್ದರೆ ರೋಗವಿರಲಾರದೆಂದೂ, ಮದುವೆಯ ಕಾಲದಲ್ಲಿ ಹೆಂಗುಸರು ಕಾಣಿಸುವ ಕಾರ್ಯಸಂಭ್ರಮವದು ತೋರಿಕೆಯೆಂದೂ ಹೇಳುವ ಮಾತಿನ ಕೊನೆಯಲ್ಲೇ ಮುಂದಿನ ದೃಶ್ಯದ ಮಧುರವಾದ ಸೆಳೆತವು ಸಮೀಪಗತವಾಗುವುದು.

ಈ ದೃಶ್ಯದ ಮೊದಲಲ್ಲೇ ನಗುಮೊಗದಿಂದ ಕಾಣಿಸುವ ಪತ್ನಿ-ಯನ್ನು ಕಂಡ ರಾಯರು "ಸ್ವಲ್ಪ ಹೊತ್ತಿನ ಹಿಂದ ನಿನ್ನ ಮುಖಾ ಅಂದರ ಹುರಿಯೋ ಹಂಚಿನ ತಳಾ ಆಗಿತ್ತು; ಈಗಾಗಲೇ ಸ್ಟೇನ್‌ಲೆಸ್ ಸ್ಟೀಲಿನ ಡಬರಿ ಆಗೇದಲ್ಲ" ಎಂದಾಡುವಾಗ, ಗುಂಡೂರಾಯರ ಮಾತನ್ನು ಒಳಗಿಂದಲೇ ಕೇಳಿದ, ಅದಕ್ಕಾಗಿ ನಗುವೇರಿದ, ರಾಯರ ಪತ್ನಿಯ ಸೌಹಾರ್ದಪೂರ್ಣ ಮುಖವರ್ಣವು ವ್ಯಕ್ತವಾಗಿ ಕಾಣಿಸು-ವುದು. ಆ ಬಳಿಕ ರಾಯರು ಪತ್ನಿಯನ್ನು ಹೊಗಳುತ್ತಾ ಸಾಗುವುದೂ, ಈ ಹೊಗಳಿಕೆಗನುವಾಗಿ ತಾಳವಿರಿಸಿ ರಾಯರ ಪತ್ನಿ ಸಾಗುವುದೂ ಕಥೆಯ ಓಟವನ್ನು ಹೆಚ್ಚಿಸುವುದರೊಡನೆ, ಉಪಸಂಹಾರದಲ್ಲಿ ಮಿರುಗೇರಲಿರುವ ಆಣಕಕ್ಕೂ ತಳಹದಿಯನ್ನಿತ್ತು ಬೆಳಗಿ ನಿಂತಿದೆಯೆನ್ನ ಬೇಕು. ಸಂಭಾಷಣೆಯ ಅನಸ್ಯೂತಗತಿಯಲ್ಲಿ ರಾಯರ ಪತ್ನಿ–"ತನ್ನ ತಂಗಿ ಸುಧಾನ ಕುರಿತಾಗಿಯೆ ಇಷ್ಟೆಲ್ಲ ನಡೆಯುತ್ತಲಿದೆ" ಎಂದು ತಿಳಿಯುತ್ತಿರುವುದೂ, ಪತ್ನಿಯ ಇಂಗಿತವನ್ನರಿತೂ ಕೆಣಕುವ ಬಗೆ-ಯಿಂದಲೆ ವಿಚಾರವನ್ನು ಪ್ರಸ್ತಾಪಿಸದೆ ಪತ್ನಿಯ ಮಾತಿಗನುಗುಣವಾಗಿ ಸಾಗುವುದೂ ಈ ಭಾಗದಲ್ಲಿ ನೆಲೆಗೊಂಡ ರಸತರಂಗಿಣಿಯು. ಕೊನೆ-ಯಲ್ಲ ರಾಯರೆತ್ತಿದ "ಅತ್ತೆ" ಎಂಬ ಮಾತಿನಿಂದಲೇ ತಣಿದುಹೋದ ರಾಯರ ಪತ್ನಿಯ ನಿಲುವನ್ನು ನಾವಿಲ್ಲಿ ಕಾಣಬೇಕು! ತಂದೆ ಕೊಟ್ಟು ಕಳುಹಿದ ಹತ್ತು ರೂಪಾಯಿಗಳನ್ನು ಸಂತೋಷಭರದಲ್ಲಿ ಖರ್ಚು-ಮಾಡಿ ಆನಂದಗೊಂಡು, ಸುಧಾನ ವಿವಾಹಕ್ಕಾಗಿ ಆತುರದಿಂದ ಇದ್ದು ತಣಿದುಹೋದ ರಾಯರ ಪತ್ನಿಯ ನಿಲುವನ್ನಿಲ್ಲಿ ಕಾಣಬೇಕು. ರಂಗಸ್ಥಳದಲ್ಲಿದ್ದು ಪರಿಣಾಮಕಾರಿಯಾಗಿ ನೆಲೆ ನಿಲ್ಲುವ ಸನ್ನಿವೇಶ. ವಾಚಕನು ಪ್ರೇಕ್ಷಕನು ಅನಿರೀಕ್ಷಿತವಲ್ಲವಾದರೂ ಅವಾಕ್ಕಾಗಿ ನಗ-ಬೇಕಾದ ಪ್ರಸಂಗವಿದು.

ಈ ಪರಿಸ್ಥಿತಿಯಲ್ಲೆ ನಾಟಕವು ನಿಲ್ಲದೆ, ಮುಂದೆ ರಾಯರು ಸಭೆಗೆ ಹೋಗುವ ವಿಚಾರದವರೆಗೆ ಕಥೆ ಸಾಗುತ್ತದೆ. ಆದುದರಿಂದಲೇ, ಕೇವಲ ಕೊನೆಯ ಒಂದು ಮಾತನ್ನುಳಿದರೆ— ಉಳಿದುವೆಲ್ಲಾ ಮನೋಜ್ಞವಾಗಿವೆ ಕೊನೆಯಮಾತಿನ ಅವಶ್ಯಕತೆಯೇ ಈ ನಾಟಕಕ್ಕೆ ಬೇಕಿಲ್ಲ. ಕೊನೆಯ "ಅಂದರ.... ಗಂಡನ ತಂಗಿ ಅಂದರ ಕಿಮ್ಮತ್ತು ಇಲ್ಲೇನು?" ಎಂಬಲ್ಲಿ ನಿಂತಿದ್ದರೆ ಇನ್ನೂ ಚೆಲುವಾಗುತ್ತಿತ್ತೋ ಏನೊ!?

ಹಾಸ್ಯರಸವು ತೀರ ಕಡಿಮೆಯಾಗಿ ಕಾಣಿಸುತ್ತಿರುವ ಪ್ರಸ್ತುತ ವಾತಾವರಣದಲ್ಲಿ, ಅಲ್ಲೊಂದು ಇಲ್ಲೊಂದು ಅಣಕಗಳು ಕಾಣಿಸಿದರೂ, ಅವು ಹುರುಳಿಲ್ಲವೆಂದು ತೋರುವ ಸಂದರ್ಭ ಕಡಿಮೆಯಲ್ಲ! ಆದರೆ ವರಾನ್ವೇಷಣವೆಂಬುದು ಅಶ್ಲೀಲವಲ್ಲದ ತೆರದಲ್ಲಿ ಹೊಸೆಯಲ್ಪಟ್ಟು— ನಗುವಿನ ತೆರೆಯನ್ನೇಳಿಸಿದ ಮಧುರಚಿತ್ರವಾಗಿದೆ. ಮಾತು-ಮಾತಿಗೆ ಹೊಂದಿಕೊಂಡು ಸಾಗುವ ನಗುವಿನ ಸೆಳೆತವಿದೆ. ಈ ಸೆಳೆತದಲ್ಲಿ ಬಾಳಿನ ಬಹುಭಾಗದ ಒಳನೋಟಗಳಿವೆ. ಕೆಲವೆಡೆ ನೆಲೆನಿಂತ ಒಂದೊಂದೇ ಮಾತುಗಳು–ಒಂದೊಂದು ವಿಚಾರವಿಭಾಗದ ಪೂರ್ಣತೆ-ಯನ್ನೇ ಬಲಿದುನಿಂತಿವೆ. ರಾಯರ ಗಂಭೀರವಾದ ಹಾಸ್ಯಪ್ರವೃತ್ತಿಯು ಮನೋಭಾವವೂ, ರಾಯರ ಪತ್ನಿಯ ಸ್ತ್ರೀ ಸಹಜವಾದ ಅತ್ಯಾತುರ-ತೆಯ ಒಳನೋಟದ ಕುಲುಕುಲು ಶಬ್ದವೂ, ಗುಂಡೂರಾಯನಂತಹ ರಸಿಕವ್ಯಕ್ತಿಯ ಚತುರಬುದ್ಧಿಯ ಗತಿಯೂ ಈ ವರಾನ್ವೇಷಣದಲ್ಲಿ ಪೂರ್ಣವಾಗಿ ನಿರೂಪಿಸಲ್ಪಟ್ಟಿವೆ. ಆದರೆ ಕೆಲವೊಂದೆಡೆ ಬರುವ ಮಾತುಗಳು ಮಾತ್ರ ದೇಶೀಯಗಳಾಗಿದ್ದು, ಸಾರ್ವತ್ರಿಕವಾಗಿ ಅರ್ಥವಾಗದ ತೆರದಲ್ಲಿದ್ದುದು ಎಂದೆಂದರೆ, ಅದು ನಾಟಕೀಯ ಸಂಪ್ರ-ದಾಯವನ್ನು, ಭಾಷೆಯ ಮಾಧುರ್ಯವನ್ನು ಕಾರಣವಾಗಿ ನೆಲೆಗೊಳಿಸಿದ ಲೇಖಕರ ಮುಂದೆ ನಿಲ್ಲುವ ದೋಷವಲ್ಲ. ಅಂತೂ ಇದೊಂದು ಬಾಳ ಅಣಕವನ್ನು ರೂಪಿಸಿದ ಒಂದು ಉತ್ತಮರೂಪಕ.

(೧೧೬ನೆಯ ಪುಟದಿಂದ ಮುಂದುವರಿದುದು)

ಎಬ್ಬಿಸಿದರು. ಆಹ್ವಾನವಿತ್ತರು: 'ಕಂಭಗಳನೊಡೆದು ಬನ್ನಿ ಡಿಂಭಗಳ-ನೊಡೆದು ಬನ್ನಿ!' ಎಂದು ಕಹಳೆಯೂದಿದರು. 'ಬಣ್ಣ–ಬಣ್ಣದ ಜೀವ ಕತಕತನೆ ಕುದಿಯುವುವು ಮನೆಯಾಯ್ತು ಮಲ್ಲಸಾಲೆ' ಎಂದು ಮದುಗಿದರು— ನಾಡಿನಲ್ಲಿಯ ಕಾದಾಟ ಕಂಡು.

ದೇಶಮಾತೆಯ ಕೃಪಾಛತ್ರದಡಿಯಲ್ಲಿ ರಾಷ್ಟ್ರಧ್ವಜದ ನೆರಳಿನಲ್ಲಿ ರಾಷ್ಟ್ರಗೀತವನ್ನು ನುಡಿಸುತ್ತ ಭಾರತೀಯ ಸೈನಿಕರು ಮುಂದು-ವರಿದರು. ಅರ್ಧಶತಮಾನಕ್ಕಿಂತ ಹೆಚ್ಚು ಕಾಲ ಹೋರಾಡಿ ಜಗತ್ತಿನ ಇತಿಹಾಸದಲ್ಲಿಯೇ ಅಪೂರ್ವವಾದ ಅಹಿಂಸಾ ಸಾಧನದಿಂದ ಸ್ವಾತಂತ್ರ್ಯ ಪಡೆದರು. ಇಂದು ಏಶಿಯಾಖಂಡದಲ್ಲಿ ಹಿಂದುಸ್ಥಾನದ ಪಾತ್ರ ಬಹು ಮಹತ್ತ್ವದ್ದಾಗಿದೆ. ದೇಶ-ವಿದೇಶಗಳಿಂದ ಹಿಂದು-ಸ್ಥಾನಕ್ಕೆ ರಾಯಭಾರಿಗಳು ಬರುತ್ತಿದ್ದಾರೆ; ಹಿಂದುಸ್ಥಾನದಿಂದ ಹೋಗುತ್ತಲೂ ಇದ್ದಾರೆ ಪರದೇಶಗಳಿಗೆ. ರಾಜಧಾನಿಯಲ್ಲಿ 'ಜನಗಣಮನ' ಗೀತದಿಂದ ಪ್ರಾರಂಭವಾಗಿ 'ವಂದೇಮಾತರಂ' ಗೀತದಿಂದ ಕೊನೆಗೊಳ್ಳುವ ಸ್ವಾತಂತ್ರ್ಯದಿನಾಚರಣೆಗೆ ನೆರೆದ ಜಗತ್ತಿನ ಜನಸಮೂಹದಿಂದ ಒಂದು ಅಪೂರ್ವ ಶೋಭೆಯುಂಟಾ-ಗಿರುತ್ತದೆ. ಅಂದಿನ ಭಾರತಸಂದೇಶವನ್ನು ರಾಯಭಾರಿಗಳು ತಮ್ಮ ದೇಶಗಳಿಗೆ ತಲುಪಿಸುತ್ತಾರೆ!

ಪುಸ್ತಕವಿಮರ್ಶೆ

ಶ್ರೇಯಾಂಸ

(ಸಾಮಾಜಿಕ ಕಾದಂಬರಿ)

ಶ್ರೀಮಾನ್ ಮಿರ್ಜಿ ಅಣ್ಣಾರಾಯರು ಬರೆದುದು.

ಮಿರ್ಜಿ ಅಣ್ಣಾರಾಯರು ಇಂದಿನ ಕಾದಂಬರಿಕಾರರಲ್ಲಿ ಹೆಸರಾಂತವರು. ಸಾಮಾಜಿಕ ವಸ್ತುಗಳನ್ನಾರಿಸಿಕೊಂಡು ಹೃದಯಂಗಮವಾಗಿ ಕಾದಂಬರಿಗಳನ್ನು ಇವರು ರಚಿಸಿದ್ದಾರೆ. ಪ್ರತಿಕೂಲದಾಂಪತ್ಯದ ಪರಿಣಾಮವನ್ನು "ನಿಸರ್ಗ"ದಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಗಂಡು–ಹೆಣ್ಣಿನ ಸಂಬಂಧದ ಮೇಲೆ ಇವರು ಬೀರುವ ನೋಟದಲ್ಲಿ ಕಂದಾಚಾರದ ಕರ್ಕಶತೆಯಿಲ್ಲ; ಬದಲಾಗಿ ಕವಿಸಹಜವಾದ ಅನುಕಂಪವಿದೆ. ಇವರ "ಅಶೋಕಚಕ್ರ"ದಲ್ಲಿ ಸ್ವಬುದ್ಧಿಯಿಲ್ಲದ ಮತ್ತು ಹೇಳಿದ ಮಾತನ್ನು ಕೇಳದ ಕಥಾನಾಯಕನ ವಿಶದಚಿತ್ರ ಬಂದಿದೆ; ಅಂಥವನನ್ನು ಕೈಹಿಡಿದ ಸಾಧ್ವೀಮಣಿ ಪುಟ್ಟವ್ವಾಡಿನ ಸಮಗ್ರಚಿತ್ರ ಮೂಡಿನಿಂತಿದೆ. ಹಾಳಾಗುವ ಸಂಸಾರವನ್ನು ಉಳಿಸದೆ, ಇನ್ನೂ ಜಾಗ್ರತೆ ಹಾಳಾಗುವಂತೆ ಸದಾ ಹಂಬಲಿಸುವ ಸಮಾಜದ್ರೋಹಿಗಳ, ಸ್ವಾರ್ಥಪರರ ಪಾತ್ರಗಳನ್ನೂ ಪರಿಣಾಮಕಾರಿಯಾಗಿ ಬಿಡಿಸಿದ್ದಾರೆ. ಈಗ "ಶ್ರೇಯಾಂಸ"ನತ್ತ ಹೊರಳೋಣ.

"ಶ್ರೇಯಾಂಸ" ಸಾಮಾಜಿಕ ಕಾದಂಬರಿ. ಜೈನಸಮಾಜದ ಹುಳುಕು ಹಾಗು ಹೊಲಸನ್ನೆಲ್ಲ ಇಲ್ಲಿ ಕಾಣಬಹುದು. ನಾನಾಮನೋವೃತ್ತಿಯ ಪಾತ್ರಗಳನ್ನು ಶ್ರೀ. ಮಿರ್ಜಿಯವರು ಸರ್ವಾಂಗಸುಂದರವಾಗಿ ಚಿತ್ರಿಸಿದ್ದಾರೆ. ಬಾಳಪ್ಪ ರೈತ; ಭೂದೇವಿಯನ್ನು ನಂಬಿ ಬಾಳಿದವ. ತನ್ನ ಹಳ್ಳಿಯಿಂದ ಹೊರಗಿನ ಜಗತ್ತಿನ ಅನುಭವ ಆತನಿಗೆ ಅಷ್ಟಾಗಿಲ್ಲ. ದುಡಿದು ತಿನ್ನಬೇಕು, ಬೆವರುಸುರಿಸಿ ಬಾಳಬೇಕು; ನೇಗಿಲಯೋಗಿಯಾಗಿ ಹುಟ್ಟಿ ನೇಗಿಲಯೋಗಿಯಾಗಿಯೆ ಸತ್ತರೆ ಸಾಕು–ಇದೇ ಬಾಳಪ್ಪನ ಮನೋಧರ್ಮ. ಯಾರಿಗೂ ಅಹಿತವನ್ನು ಬಯಸದೆ ಬದುಕಿದ ಜೀವ ಬಾಳಪ್ಪನದು; ಈತನ ಮಡದಿ ಸರಸವ್ವ: ಪತಿಗನುಕೂಲವಾಗಿ ಬಾಳಿದ ಸತೀಮಣಿ. ಇವರ ಜೊತೆಯಾಗಿ ಬಾಳಿದವರು ಸುಂದರವ್ವ ಮತ್ತು ಪದ್ಮಪ್ಪ. ಇಹಕ್ಕಿಂತ ಪರದ ಕಡೆಗೆ ಹೆಚ್ಚು ಗಮನ ಪದ್ಮಪ್ಪನಿಗೆ. ಸುಂದರವ್ವನ ಮನೋಧರ್ಮ ದೇವರ ಕಡೆಯಿದ್ದರೂ, ಮಾನವಸಹಜವಾದ ಮೋಹವೂ ಅವರಲ್ಲಿ ಸುಮಧುರವಾಗಿ ಬೆರೆತಿದೆ. ಹೇಗೋ, ಇವರಿಬ್ಬರಿಗೂ ದೇವರು ಗಂಟುಹಾಕಿದ್ದಾನೆ. ಸುಂದರವ್ವ ಎಂದೂ ಪದ್ಮಪ್ಪನ ಹಾದಿಯಲ್ಲಿ ಅಡ್ಡಬರಲಿಲ್ಲ. ಬಾಳಪ್ಪನ ಏಕಮಾತ್ರ ಪುತ್ರ ಶ್ರೇಯಾಂಸ. ಸುಂದರವ್ವನ ಅಚ್ಚುಮೆಚ್ಚಿನ ಸೋದರಳಿಯ ಈತ. ಎಲ್ಲರೂ ಅಪಾರಪ್ರೇಮವನ್ನು ತೋರಿ ಶ್ರೇಯಾಂಸನನ್ನು ಸಾಕಿ ಸಲಹಿದರು.

ಶ್ರೇಯಾಂಸನ ಗಮನ ಹೊಲದತ್ತ ಹೊರಳಲಿಲ್ಲ. ಆತನ ಕೈ ನೇಗಿಲು ಹಿಡಿಯಲು ಎಂದೂ ಒಡಂಬಡಲಿಲ್ಲ. ಬಾಳಪ್ಪ–ಸರಸವ್ವರ ದೃಷ್ಟಿ ದುಡಿದು, ತಿಂದುಂಡು, ಯಾವ ಜೀವಕ್ಕೂ ನೋವುಕೊಡದೆ ಬಾಳಿದರೆ ಸಾಕೆಂದು. ಆದರೆ ಶ್ರೇಯಾಂಸ ಲೋಕದ ನಾನಾ ಮನೋದೌರ್ಬಲ್ಯಗಳನ್ನು ಕಂಡು, ಅವನ್ನು ನಿವಾರಿಸಬೇಕೆಂದು ಸದಾ ಚಡಪಡಿಸುವನು. ಸಾಹಿತ್ಯ, ಕಲೆ, ಸಮಾಜಸುಧಾರಣೆ ಇವನ್ನು ತಲೆಯಲ್ಲಿ ಹಾಕಿಕೊಂಡು, ನಿರಂತರ ಕುದಿಯುವುದು ಶ್ರೇಯಾಂಸನ ಕರುಣಾಪೂರಿತಹೃದಯ.

ಲೋಕವನ್ನು ಸುಧಾರಿಸುವಂತಹ ವಿದ್ಯೆಗಾಗಿ ಈತ ನಿರಂತರ ತೊಳಲಿದ. ಆತ್ಮಾರಾಮರಂತಹ ಸದ್ಗುರು ಶ್ರೇಯಾಂಸನನ್ನು ಒಂದು ಮೂರ್ತಿಯನ್ನಾಗಿ ಮಾಡಿ, ಅದರಲ್ಲಿ ತನ್ನ ಸರ್ವಸ್ವವನ್ನೂ ತುಂಬಿ ತಣಿದರು. ಮಗ ಓದಿ ಪರದಾಡುವುದಕ್ಕಿಂತ ತಮ್ಮೆದುರು ನಲಿದಾಡಿಕೊಂಡಿರಲೆಂದು ಬಾಳಪ್ಪನ ಆಶಯ. ಪ್ರತಿಕೂಲವಾತಾವರಣಕ್ಕೆ ಸಿಕ್ಕದೆ ಶ್ರೇಯಾಂಸನಲ್ಲಿ ಅಗೋಚರವಾಗಿ, ಅದ್ಭುತಶಕ್ತಿಗಳ ಸಂಚಯವಾಯಿತು. ಇದ್ದ ಅನುಕೂಲಗಳಂದಲೇ ಎಷ್ಟು ಜ್ಞಾನವನ್ನು ಗಳಿಸಬಹುದಾಗಿತ್ತೋ, ಅಷ್ಟನ್ನೂ ಗಳಿಸಿದ. ಶ್ರದ್ಧೆ ಹಿರಿದಾದರೆ, ಇದ್ದುದರಲ್ಲೇ ದೊಡ್ಡವನಾಗಬಹುದೆಂಬುದಕ್ಕೆ ಶ್ರೇಯಾಂಸನೇ ಸಾಕ್ಷಿ. ಏಕಲವ್ಯನಂತೆ, ಶ್ರದ್ಧಾಜೀವಿಯಾಗಿ ಮುಂದಕ್ಕೆ ಬಂದವನು ಶ್ರೇಯಾಂಸ. ಇವನ ಮನೋಧರ್ಮ ಕ್ರಾಂತಿಕಾರಿಯಾದುದು. ಆದರೂ ಎಡರುಗಳನ್ನು ಕಿತ್ತೊಗೆಯುವ ಮನೋದಾರ್ಢ್ಯ ಈತನಲ್ಲಿ ಅಷ್ಟಾಗಿಲ್ಲ. ಆದರೆ ಎಂದೂ ತನಗೊಪ್ಪದ ಕಂದಾಚಾರಕ್ಕೆ ಅಂಟಿ ಬಾಳಿದವನಲ್ಲ. ಈತನಲ್ಲಿ ಕಾರ್ಯದಕ್ಷತೆ ತುಂಬಿ ತುಳುಕಿದರೂ, ಕಾರ್ಯವಿಚಕ್ಷಣತೆಯಿಲ್ಲ. ಶ್ರೇಯಾಂಸನದು ಭಾವಪ್ರಪಂಚ. ರಸಲೋಕದಲ್ಲಿ ಸದಾ ವಿಹರಿಸುತ್ತ, ಅಲ್ಲಿ ತನಗೆ ಸರಿಕಂಡಂತೆ ಭವ್ಯಸೌಧಗಳನ್ನು ಕಟ್ಟಿಕೊಳ್ಳುತ್ತಿದ್ದ. ವಾಸ್ತವಿಕ ಲೋಕದ ಅನುಭವ ಈತನಿಗೆ ಸಾಲದು. ಈತನ ಸರಳ ಮನೋಧರ್ಮವನ್ನು ಕಂಡು, ಜನರು ಸುಲಭವಾಗಿ ಈತನಿಗೆ ದ್ರೋಹವೆಸಗಿದರು. ಭಾವೋದ್ರೇಕದಿಂದ ಕಾರ್ಯತತ್ಪರನಾಗುತ್ತಿದ್ದ ಈತನಿಗೆ ಕಲಾವತಿಯಾಗಲಿ, ಲಲಿತೆಯಾಗಲಿ ಹೇಳುತ್ತಿದ್ದ ಹಿತವಚನ ಹಾಗೂ ತೋರುತ್ತಿದ್ದ ಮಾರ್ಗದರ್ಶನ ಈತನ ಗಮನಕ್ಕೇ ಬೀಳುತ್ತಿರಲಿಲ್ಲ. ಒಟ್ಟಿನಲ್ಲಿ ಈ ಭಾವನಾಜೀವಕ್ಕೆ ರಕ್ಷಣೆಯಾಗಿ ಕಲಾವತಿಯೋ, ಇಲ್ಲವೇ ಲಲಿತೆಯೋ ಸದಾಕಾಯುತ್ತಿರಬೇಕು; ರಕ್ಷಣೆಯ ಜೊತೆಗೆ ಸ್ಫೂರ್ತಿಯನ್ನೂ ಇವರು ನೀಡುತ್ತಿರಬೇಕು.

ಶ್ರೇಯಾಂಸನ ಬಾಳು ಲೋಕವನ್ನು ಸರಿಪಡಿಸಲು ಹಾತೊರೆದು ಹೆಣಗಾಡಿತು. ಆದರೆ ಲಕ್ಷ್ಮಿಯನ್ನು ಕಡೆಗಣಿಸಿ, ಮಾಡಬಾರದ

ಅನ್ಯಾಯವನ್ನು ಆ ಹಳ್ಳಿಯ ಮುದ್ದುಹುಡುಗಿಗೆ, ಶ್ರೇಯಾಂಸ ಮಾಡಿದ್ದಾನೆ. ಲಕ್ಷ್ಮಿಯ ಮನ ಸದಾ ಶ್ರೇಯಾಂಸನ ಶ್ರೇಯಸ್ಸನ್ನೇ ಬಯಸಿ ಬಾಳಿತು; ಶ್ರೇಯಾಂಸನ ಸಂತಸವೇ ತನ್ನ ಸಂತಸವೆಂದು ತಿಳಿದು ಬಾಳಿದಳು ಲಕ್ಷ್ಮಿ. ಲಕ್ಷ್ಮಿಗೆ ತನ್ನತನವಿಲ್ಲ ಹಾಗೂ ವ್ಯಕ್ತಿತ್ವವಿಲ್ಲ. ಪಾಲಿಗೆ ಬಂದುದು ಪಂಚಾಮೃತವೆಂದು ಸಹನೆಯಿಂದ ಬಾಳಿದ ಭಾಗ್ಯಲಕ್ಷ್ಮಿ ಈಕೆ. ರಾಮಾಯಣದಲ್ಲಿ ಬರುವ ಊರ್ಮಿಳೆಗೆ ಯಾವ ವಿಧದಲ್ಲೂ ಅಣ್ಣಾರಾಯರ ಲಕ್ಷ್ಮಿ ಕೀಳಲ್ಲ; ಇನ್ನೂ ಒಂದು ಕೈ ಮೇಲು! ಪತಿಯನ್ನು ಸಂತೋಷಪಡಿಸುವುದು ತನ್ನ ಕೈಯಿಂದಾಗಲಿಲ್ಲವೆಂದು ತಿಳಿದ ಈಕೆ, ಕಲಾವತಿಗೆ ತನ್ನ ಪತಿದೇವನನ್ನು ಅರ್ಪಿಸಲೂ ಹಿಂಜರಿಯಲಿಲ್ಲ. ಈಕೆಯ ಪ್ರೇಮ ಅಂತರ್ಮುಖವಾದುದು. ವಿದ್ಯೆಯಿಲ್ಲದಿದ್ದರೂ ಸುಸಂಸ್ಕೃತಳಾಗಿ ಬಾಳಿದಳು. ಪತಿ ತನಗೊಲಿಯದುದಕ್ಕಾಗಿ ಮನಸ್ಸನ್ನು ಕೆಡಿಸಿಕೊಂಡು ಅಡ್ಡಹಾದಿಗೆ ಬೀಳುವ ಅಸಂಸ್ಕೃತರಂತೆ ಲಕ್ಷ್ಮಿ ಎಂದೂ ದುರಾಲೋಚನೆ ಮಾಡಿಲ್ಲ. ಲಕ್ಷ್ಮಿಯ ಬಾಳಿಗೆ ಬೆಳಕು ಬೀರಬಹುದಾಗಿದ್ದ ಶ್ರೇಯಾಂಸ, ಸ್ವಾರ್ಥಪರನಾಗಿ ಮನೋದೌರ್ಬಲ್ಯಕ್ಕೆ ಸಿಕ್ಕಿ ಕಲಾವತಿಯನ್ನು ಕೈಹಿಡಿದ. ಒಂದು ಬಾರಿಯಾದರೂ, ಮನಃಪೂರ್ವಕ ಲಕ್ಷ್ಮಿಯನ್ನು ಈತ ಪ್ರೀತಿಸಲಿಲ್ಲ. ನಿರಾಶಳಾದ ಲಕ್ಷ್ಮಿ ರೊಚ್ಚಿಗೇಳದೆ, ಸಹನೆಯಿಂದ ಸಹಿಸಿ, ಸಂಸಾರಜೀವಿಗಳಿಗೆ ಹೊಸಬೆಳಕಿತ್ತಿರುವಳು. ಶ್ರೇಯಾಂಸ ಮಾತಾಡಿ ಸಾಧಿಸಿದುದಕ್ಕಿಂತ ಲಕ್ಷ್ಮಿ ಮೌನವಾಗಿ ಪಡೆದ ಸಿದ್ಧಿ ಲೋಕದ ಗಮನಕ್ಕೆ ಬೀಳದಿದ್ದರೇನಂತೆ!

ಕಲಾವತಿ ಹಾಗು ಲಲಿತೆಯರ ಮನೋಧರ್ಮದಲ್ಲಿ ಸಾಮ್ಯ ಕಾಣುವೆವು. ಹಿರಿಯ ಜೀವಕ್ಕೆ ಆಶ್ರಯವಿತ್ತು ಬೆಳೆಸುವ ಹಿರಿಯ ಗುಣವನ್ನು ಅವರಿಬ್ಬರೂ ಪಡೆದಿದ್ದಾರೆ. ಶ್ರೇಯಾಂಸನ ಮನೋಧರ್ಮವನ್ನು ಅರಿಯುವ ಇಂಗಿತಜ್ಞಾನ ಇವರಿಬ್ಬರಲ್ಲೂ ಇದೆ. ಶ್ರೇಯಾಂಸನ ಕಲ್ಯಾಣವನ್ನು ಸಾಧಿಸಬೇಕೆಂದು ಇವರಿಬ್ಬರೂ ಅಹರ್ನಿಶಿ ತೊಳಲಾಡಿದರು. ಕಲಾವತಿ ಸತ್ಕುಲಸಂಪನ್ನೆ; ಲಲಿತೆ ವೇಶ್ಯೆಯ ಪುತ್ರಿ. ಕೆಸರಿನಲ್ಲಿ ಪುಟ್ಟಿ ವಿಕಸಿತವಾದ ಕಮಲದಂತೆ ಲಲಿತೆ. ನಾನಾ ಸಂದರ್ಭಗಳಲ್ಲಿ ಈಕೆಯೆಸಗಿದ ಉಪಕಾರ ಚಿರಸ್ಮರಣೀಯವಾದುದು. ಶ್ರೇಯಾಂಸನೊಡನೆ ದೈಹಿಕಸಂಬಂಧವನ್ನಿಟ್ಟುಕೊಳ್ಳುವ ಆಶೆ ಆಕೆಗೆ ಇದ್ದರೂ, ಅದನ್ನು ಹೇಗೋ ದಮನಮಾಡಿಕೊಂಡು ನಿಷ್ಕಲಂಕಪ್ರೇಮವೊಂದನ್ನೇ ಇಟ್ಟುಕೊಂಡು ಬಾಳಿದ ಕನ್ಯಾರತ್ನ ಲಲಿತೆ! ನಾನಾ ವೇಳೆ ತನ್ನ ಬಾಳನ್ನು ಅಡ್ಡಮಾರ್ಗಕ್ಕೆಳೆಯುವ ಪರಿಸ್ಥಿತಿಯೊದಗಿಬಂದರೂ, ಅವುಗಳನ್ನೆಲ್ಲ ನಿಭಾಯಿಸಿಕೊಂಡು, ಬಾಳಿದ ಧೀರೆ ಈ ಲಲಿತೆ! ಈಕೆಯಲ್ಲೂ ಕಲಾವತಿಯಲ್ಲೂ ಕಾರ್ಯದಕ್ಷತೆಯ ಜೊತೆಗೆ ಕಾರ್ಯವಿಚಕ್ಷಣೆಯೂ ಸೇರಿ, ಇವರ ಎಲ್ಲ ಶಕ್ತಿಗಳೂ ಶ್ರೇಯಾಂಸನ ಶ್ರೇಯಸ್ಸಿಗೆ ಮೀಸಲಾದುವು. ಆದರೂ ಇವರಿಬ್ಬರೂ ಲಕ್ಷ್ಮಿಯಂತೆ ವ್ಯಕ್ತಿತ್ವಹೀನರಲ್ಲ. ಇವರಿಬ್ಬರ ಪ್ರೇಮ ಶ್ರೇಯಾಂಸನನ್ನಾಕರ್ಷಿಸಿತು. ಇವರಿಬ್ಬರೂ ತಮ್ಮ ತಮ್ಮ ಪ್ರಭಾವದಿಂದ ಶ್ರೇಯಾಂಸನನ್ನು ಆಳಿದರು. ಶ್ರೇಯಾಂಸನನ್ನು ಆಳಿದರಾದರೂ ಎಂದೂ ಆತನನ್ನು ಅಳಿಸದೆ ಬಾಳಿದ ಭವ್ಯಾತ್ಮರು ಕಲಾವತಿ ಮತ್ತು ಲಲಿತೆಯರು!

ಇನ್ನು ಜಿನಗೌಡ ಮತ್ತು ನೇರಲಕಟ್ಟೆಯವರ ವಿಚಾರಕ್ಕೆ ಬರೋಣ. ಇವರಿಬ್ಬರೂ ಸ್ವಾರ್ಥಪರರು. ತಮ್ಮ ವಿಷಯಲಂಪಟತನಕ್ಕಾಗಿ, ತಮ್ಮ ದುರಾಶೆಗಾಗಿ ಯಾವ ಲೋಕಕ್ಕೆ ಬೇಕಾದರೂ ಹಿಂದು ಮುಂದು ನೋಡದೆ ಬೆಂಕಿ ಹಚ್ಚುವಂತಹ ದುರಾತ್ಮರಿವರು. ಇವರನ್ನು ವಿಶ್ವಾಸಘಾತಕರೆಂದರೂ ಸರಿ; ಗೋಮುಖವ್ಯಾಘ್ರರೆಂದರೂ ಸರಿ. ಎಂದೂ ಸರಿಪಡಿಸಲಾಗದಂತಹ ಕುಸಂಸ್ಕೃತರು; ಎಂದೂ ಪರಹಿತವನ್ನು ಯೋಚಿಸದ ಚಂಡಾಲರಿವರು. ಶ್ರೇಯಾಂಸನಿಂದ ಆಗಬಹುದಾಗಿದ್ದ ಲೋಕಸೇವೆಗೆ ಅಡ್ಡಬಂದು ಅಡ್ಡಿಯೊಡ್ಡಿದರು. ಈ ಪ್ರತಿಶಕ್ತಿಗಳನ್ನು ಎದುರಿಸಿ ಬಾಳುವ ಸಾಮರ್ಥ್ಯವಾಗಲಿ, ಕೆಚ್ಚಾಗಲಿ ಶ್ರೇಯಾಂಸನಲ್ಲಿಲ್ಲದುದರಿಂದ, ಇವರು ಇಷ್ಟು ಬೆಳೆಯಲು ಅವಕಾಶ ದೊರೆಯಿತು. ಈ ಕುತಂತ್ರಿಗಳನ್ನು ಭೂಗತಮಾಡಲು ವಕ್ರಮಾರ್ಗವೊಂದೇ ಸರಿ. ಆದರೆ ಶ್ರೇಯಾಂಸನ ಬಾಳು ಹಾಗೂ ಮನೋಧರ್ಮ ಸಹಜವಾದುದು, ಸರಳವಾದುದು.

ಅಕ್ಕಸಾನಿ ನಿಜವಾದ ವೇಶ್ಯೆ. ವೇಶ್ಯೆಗಿರಬಹುದಾದ ಹಾಗು ಇರಬೇಕಾದ ತಾಟಗಿತ್ತಿತನವೆಲ್ಲ ಈಕೆಗಿದೆ. ಧನಸಂಗ್ರಹಕ್ಕಾಗಿ ಏನುಮಾಡಲೂ ಈಕೆ ಸಿದ್ಧ. ಮಗಳನ್ನೂ ತನ್ನ ಮಾರ್ಗದತ್ತ ಸೆಳೆದು ಭಾಗ್ಯವನ್ನು ದೋಚುವ ಹವಣಿಕೆ ಈಕೆಯದು. ಜಿನಗೌಡರೆಸಗಿದ ನೀಚಕಾರ್ಯಕ್ಕೆ ಈ ಸಾನಿ, ಹಣದಾಶೆಯಿಂದ ಬೆಂಬಲಿಗಳಾಗುತ್ತಿದ್ದಳು. ಮಗಳನ್ನು ತನ್ನ ಮಾರ್ಗಕ್ಕೆ ಸೆಳೆಯಲು ಯತ್ನಿಸಿ ವಿಫಲಳಾದಳು ಈ ಸಾನಿ.

ಸುಂದರವ್ವನ ಪಾತ್ರವೂ ಸುಂದರವಾಗಿಯೆ ಚಿತ್ರಿತವಾಗಿದೆ. ಆಕೆಗೆ ದೇವರೂ ಬೇಕು; ಅದಕ್ಕಿಂತ ಹೆಚ್ಚಾಗಿ ಮಾನವರೂ ಬೇಕು. ಭಕ್ತಿಗಿಂತ ಹೆಚ್ಚಾಗಿ ಈಕೆಯಲ್ಲಿ ಮೋಹವೂ ಇದೆ. ಮೋಹ ಅಂತೆ ಮರುಕ ಈಕೆಯಲ್ಲಿ ನೆಲೆ. ಶ್ರೇಯಾಂಸನ ಹಿತಕ್ಕಾಗಿ ಲಕ್ಷ್ಮಿಗೆ ದ್ರೋಹವೆಸಗುವ ಪ್ರೇರಣೆಯನ್ನು ಪುಟಗೊಳಿಸಿತು. ಸಲ್ಲೇಖನದಲ್ಲೂ ಈಕೆಯ ಗಮನ ಶ್ರೇಯಾಂಸನತ್ತ. ಶ್ರೇಯಾಂಸನಿಗೆ ಒಳ್ಳೆಯದಾಗದಿದ್ದರೆ ಈಕೆಗೆ ಮುಕ್ತಿಬೇಕಿಲ್ಲ. ಅಂತ್ಯದಲ್ಲಿ ಶ್ರೇಯಾಂಸನನ್ನೂ ಕಲಾವತಿಯನ್ನೂ ಒಂದುಗೂಡಿಸಿ, ಸಮಾಧಾನಚಿತ್ತಳಾಗಿ, ಸುಂದರವ್ವ ಪರಂಧಾಮವನ್ನೈದಿದಳು.

ಪದ್ಮಪ್ಪ ನಿರ್ಲಿಪ್ತ; ನಿರ್ವಿಕಾರಿ; ನಿಜವಾದ ಯತೀಶ್ವರ. ಸಂಸಾರಕ್ಕೆ ಅಂಟಿಯೂ ಅಂಟದಂತೆ ಕೆಲದಿನ ಬಾಳಿ, ಅಂತ್ಯದಲ್ಲಿ ಬಾಹ್ಯಾಭ್ಯಂತರದ ಬಂಧನಗಳನ್ನೆಲ್ಲ ಮನಃಪೂರ್ವಕ ಕಿತ್ತೊಗೆದು, ಜಿನಮುನಿಗಳಿಗೆ ಮಾದರಿಯಾಗಿದ್ದಾನೆ ಪದ್ಮಪ್ಪ.

ಮುನಿಗಳಿಗೆ ಆಹಾರ ನೀಡುವಾಗಿನ ಸಂದರ್ಭ ಜೈನೇತರರಿಗೆ ಹಿಡಿಸುವಂತೆ, ಶ್ರೀ ಮಿರ್ಜಿ ಅಣ್ಣಾರಾಯರು ಚಿತ್ರಿಸಿದ್ದಾರೆ. ಅಲ್ಲಿಯ ಶ್ರಾವಕರ ಮನೋಧರ್ಮ ಹಾಗು ಮುನಿಧರ್ಮಗಳೆರಡೂ ವಿವರವಾಗಿ ಮೂಡಿಬಂದಿವೆ.

(ಹೊದಿಕೆಯ ೩ನೆಯ ಪುಟನೋಡಿರಿ.)

ಸಾದರ ಸ್ವೀಕಾರ

೨೦. [illegible]ಂಗಾರದಾಸ (ಅನುವಾದಿತ ಐತಿಹಾಸಿಕ ನಾಟಕ) ಮೂಲ ಬಂಗಾಲೀ ಲೇಖಕರು: ದಿವಂಗತ ದ್ವಿಜೇಂದ್ರಲಾಲರಾಯ ಅವರು. ಕನ್ನಡ ಅನುವಾದಕರು: ಶ್ರೀ. ಪಿ. ಎಸ್. ರಾಮಪ್ಪ. ಪ್ರಕಾಶಕರು: ಶ್ರೀ ನೀಲಕಂಠೇಶ್ವರ ನಾಟ್ಯಸೇವಾ ಸಂಘ, ಹೆಗ್ಗೋಡು (ಸಾಗರ ತಾಲ್ಲೂಕು, ಶಿವಮೊಗ್ಗಾ ಜಿಲ್ಲಾ). ಕ್ರಾ. ಅ. ೧೩೪ ಪುಟಗಳು. ಬೆಲೆ ೧-೪-೦.

೨೧. ಅವಿವಾಹಿತೆ (ಸಾಮಾಜಿಕ ಸಮಸ್ಯೆಯೊಂದರ ವಿವೇಚನೆ). ಲೇಖಕರು: ಶ್ರೀನಿವಾಸ ಹಾವನೂರ (ಐರಣಿ) ಪ್ರಕಾಶಕರು: ರಾಕಾಕು ಪ್ರಕಾಶನ, ಕುಮಟಾ. ಕ್ರಾ. ಅ. ೮೮ ಪುಟಗಳು. ಬೆಲೆ ೧-೪-೦.

೨೨. ಶೇಷಪುರಿ ಸಮ್ಮೇಳನ (ಬೆಂಗಳೂರಲ್ಲಿ ಸೇರಿದ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನದ ಅಧ್ಯಕ್ಷಣೀಯ ಭಾಷಣ.) ಭಾಷಣಕಾರರು: ಡಾಕ್ಟರ ಎಂ. ಗೋಪಾಲಕೃಷ್ಣರಾಯರು ಎಲ್. ಎ. ಎಂ. ಎಸ್, ಸಂಪಾದಕರು, 'ಕಲಿಯುಗ' ಮಂಗಳೂರು. ಪ್ರಕಾಶಕರು: ನಿಖಿಲ ಕರ್ನಾಟಕದ ಆಯುರ್ವೇದ ಮಹಾಮಂಡಳದ ೨೦ನೆಯ ಅಧಿವೇಶನ, ಬೆಂಗಳೂರು. ಕ್ರಾ. ಅ. ೧೬ ಪುಟಗಳು.

ಡಾ. ಗೋಪಾಲಕೃಷ್ಣರಾಯರು ಹೊಸ ದೃಷ್ಟಿಯಿಂದ ಆಯುರ್ವೇದವನ್ನು ಅಭ್ಯಾಸಿಸಿ, ಅದರ ಕೂಲಂಕಷವಾದ ಜ್ಞಾನವನ್ನು ಸಂಪಾದಿಸಿರುವರು ತಮ್ಮ ಭಾಷಣದಲ್ಲಿ ಅವರು ಸ್ಪಷ್ಟಪಡಿಸಿದ ಆಯುರ್ವೇದದ ಮಹತ್ತ್ವದ ವಿಚಾರಗಳು, ಜನತೆಯಲ್ಲಿ ಆಯುರ್ವೇದದ ವಿಚಾರದಲ್ಲಿ ಆದರ-ವಿಶ್ವಾಸಗಳನ್ನು ಹುಟ್ಟಿಸುವಂತಿವೆ.

೨೩. ಬಾಳನನಸು (ಕವನ ಸಂಕಲನ) ತರುಣ ಕವಿಗಳಾದ ಶ್ರೀ. ಎಂ. ಭಾಲಚಂದ್ರ ಮತ್ತು ಶ್ರೀ. ಖೋತ ಅಪ್ಪಾಸಾಹೇಬ ಇವರ ಕವನಗಳು ಇದರಲ್ಲಿ ಸಂಕಲಿತವಾಗಿವೆ. ಪ್ರಕಾಶಕರು: ಶ್ರೀ. ರಾಜಾರಾಮ ಮಜಲೀಕರ, ಸಾಹಿತ್ಯ ಸೇವಾನಿಲಯ, ಗೋಕಾಕ. ಕ್ರಾ. ಅ. ೫೪ ಪುಟಗಳು. ಬೆಲೆ ೦-೮-೦.

(೧೩೦ನೆಯ ಪುಟದಿಂದ ಮುಂದುವರಿದುದು)

ಶ್ರವಣಬೆಳುಗೊಳದ ಯಾತ್ರಾಸಂದರ್ಭ ಕಲಾಯುಕ್ತವಾಗಿದೆ. ಭಕ್ತಿಯ ಜೊತೆಯಾಗಿ, ಕಲೆಯ ಮೆರುಗೂ ಬೆರೆತು ಅಪೂರ್ವ ಕಳೆಯಿಂದ ಕೃತಿಯ ಈ ಭಾಗ ರಾರಾಜಿಸಿದೆ.

ಶ್ರೇಯಾಂಸ ಪೊಲೀಸರ ವಶನಾಗಿದ್ದ ಪಾರಾದ ಸಂದರ್ಭವನ್ನು ಚಿತ್ರಿಸುತ್ತ, ಆ ಸಂದರ್ಭದಲ್ಲಿ ಲಲಿತೆ ಹೇಗೆ ಶ್ರೇಯಾಂಸನ ಬಿಡುಗಡೆಗೆ ಕಾರಣಳಾದಳೆಂಬುದನ್ನು ಅಸ್ಪಷ್ಟವಾಗಿಸಿದ್ದಾರೆ ಮಿರ್ಜಿ ಅಣ್ಣಾರಾಯರು. ಮೊದಲೇ ಸೂಳೆಯ ಮಗಳಾದ ಲಲಿತೆ ಆಗ ಏನಾದರೂ ತನ್ನ ನ್ನೈಯಿತ್ತು, ಶ್ರೇಯಾಂಸನ ಬಿಡುಗಡೆಗೆ ಕಾರಣಳಾದಳೋ ಏನೋ ಎಂಬ ಸಂದೇಹ ವಾಚಕರಲ್ಲಿ ಮೂಡದಿರದು. ಇಲ್ಲಿಯ ನಿಜಾಂಶವನ್ನು ಸ್ಪಷ್ಟಪಡಿಸಿದ್ದರೆ ಮೇಲಾಗಿತ್ತು.

ಒಟ್ಟಿನಲ್ಲಿ ಶ್ರೇಯಾಂಸನ ಕಲಾಮಯವಾದ ಬಾಳು ಸಹಜ ಸುಂದರವಾಗಿ ಸ್ಫುಟಗೊಂಡಿದೆ. ಶ್ರೇಯಾಂಸನ ಬಾಳು ಸೌರವ್ಯೂಹದಂತಿದೆ. ನಾನಾ ಉಪಗ್ರಹಗಳು ಸೂರ್ಯನ ಸುತ್ತ ಸುತ್ತುವಂತೆ ಲಲಿತೆ, ಕಲಾವತಿ, ಬಾಳಪ್ಪ, ಸರಸವ್ವ, ಸುಂದರವ್ವ, ಲಕ್ಷ್ಮಿಯರು ಶ್ರೇಯಾಂಸನನ್ನು ಸುತ್ತುಗಟ್ಟಿದ್ದಾರೆ. ನೀರಲಕಟ್ಟಿ ಹಾಗೂ ಜಿನಗೌಡ ರಾಹು-ಕೇತುಗಳಾಗಿ ಅವನ ಶ್ರೇಯಸ್ಸನ್ನು ಹಾಗೂ ಯಶಸ್ಸನ್ನು ಕಬಳಿಸಿದ್ದಾರೆ. ಅನುಕೂಲಶಕ್ತಿಗಳ ಹಾಗು ಪ್ರತಿಕೂಲಶಕ್ತಿಗಳ ತಿಕ್ಕಾಟ ಮತ್ತು ಪರಿಣಾಮ ಸರ್ವಾಂಗಸುಂದರವಾಗಿ ಒಡಮೂಡಿದೆ.

ದತ್ತಮೂರ್ತಿ ಲೋಕಾನುಭವವುಳ್ಳಾತ. ತನಗೆ ಸರಿಗಂಡದ್ದನ್ನು ಸರಿಯೆನ್ನುವಾತ. ಈತನ ಗುರಿಯೂ ಶ್ರೇಯಾಂಸನಂತೆ ಲೋಕಕಲ್ಯಾಣಕಾರಿಯಾದುದೇ; ಆದರೆ ಇವರಿಬ್ಬರ ಮಾರ್ಗ ಬೇರೆ ಬೇರೆ. ಈತನಲ್ಲಿ ಸಂಘಟನಾಶಕ್ತಿಯಿದೆ ಹಿಡಿದುದನ್ನು ಸಾಧಿಸುವ, ಮನೋದಾರ್ಢ್ಯವಿದೆ; ತನ್ನತ್ತ ಜನತೆಯನ್ನು ಸೆಳೆಯುವ ಸಾಮರ್ಥ್ಯವಿದೆ. ಶ್ರೇಯಾಂಸನಿಗೂ, ತನಗೂ, ಅಭಿಪ್ರಾಯಭೇದಬಂದರೂ, ಮರೆಯಾಗಿ ನಿಂತು ಶ್ರೇಯಾಂಸನ ಹಿತವನ್ನು ಬಯಸಿದವ ದತ್ತಮೂರ್ತಿ. ಪ್ರತ್ಯಕ್ಷವಾಗಿ ದತ್ತಮೂರ್ತಿ ಶ್ರೇಯಾಂಸನಿಗೆಸಗಿದ ಉಪಕಾರ ಕಾದಂಬರಿಯಲ್ಲಿ ತುಂಬಿದೆ; ತನ್ನನ್ನು ತೊರೆದು ಶ್ರೇಯಾಂಸ ಹೊರಟುಹೋದ ಮೇಲೂ ಈತನಲ್ಲಿ ದ್ವೇಷ ಮೂಡಲಿಲ್ಲ; ಶ್ರೇಯಾಂಸನ ಮೇಲಿದ್ದ ಪ್ರೇಮ ನೂರ್ಮಡಿಯಾಯಿತೇ ವಿನಾ ನುಚ್ಚಾಗಲಿಲ್ಲ. ದತ್ತಮೂರ್ತಿಯ ಪಾತ್ರವೂ ಸಹ ಶ್ರೇಯಾಂಸನಷ್ಟೇ ಹಿರಿದಾದುದು.

ಆತ್ಮಾರಾಮ ಮಾಸ್ತರ ಬಾಳು ಧನ್ಯವಾದ ಬಾಳು. ಶ್ರೇಯಾಂಸನ ಭವಿಷ್ಯಕ್ಕಾಗಿ ತೊಳಲಾಡಿದವರು; ಶ್ರೇಯಾಂಸನ ಅಭಿರುಚಿಯನ್ನು ತಿಳಿದವರು; ಅಂತ್ಯದಲ್ಲಿ ಅವನ ಶ್ರೇಯಸ್ಸಿಗಾಗಿ ಅವರು ತಮ್ಮ ಪವಿತ್ರಜೀವನವನ್ನೇ ಧಾರೆಯೆರೆದ ಆದರ್ಶಗುರು. ಕೀರ್ತಿಕಾಮಿನಿಯನ್ನು ಎಂದೂ ಬಯಸಿದವರಲ್ಲ ಅವರು. ಆತ್ಮಾರಾಮ ಮಾಸ್ತರ ಬಾಳು, ತ್ಯಾಗಮಯ ಜೀವನ, ಶ್ರೇಷ್ಠವಾದುದು; ಅನುಕರಣೀಯವಾದುದು.

ಮಿರ್ಜಿ ಅಣ್ಣಾರಾಯರ ಈ "ಶ್ರೇಯಾಂಸ" ಕಾದಂಬರಿ ಉತ್ತಮವಾಗಿ ಮೂಡಿಬಂದಿದೆ. "ನಿಸರ್ಗ" ಕಾದಂಬರಿಯನ್ನು ಬರೆದು ಕನ್ನಡನಾಡಿನಾದ್ಯಂತ ಪ್ರಖ್ಯಾತರಾಗಿರುವ ಇವರು, ಇನ್ನೂ ಅನೇಕ "ಕೃತಿರತ್ನ"ಗಳನ್ನು ಕನ್ನಡನುಡಿಯಲ್ಲಿ ನೀಡುವರೆಂದು ನಿರೀಕ್ಷಿಸೋಣ.

—ಬೃಹಸ್ಪತಿ ಬಿ. ಎ. (ಆನರ್ಸ್), ಮೈಸೂರು

ಅನುಭವಸ್ಥರನ್ನು ಅನುಕರಿಸಿರಿ

ನಿಮ್ಮ ಎಂಜಿನ್ನಿಗೆ ಶಕ್ತಿಯನ್ನು ಕೊಡಲು ಭಾರತದ ಅತ್ಯುತ್ಕೃಷ್ಟವಾದ ಪೆಟ್ರೋಲು, ಅದನ್ನು ರಕ್ಷಿಸಲು ಇಂದಿನ ಅತ್ಯುತ್ತಮವಾದ ಮೋಟಾರೆಣ್ಣೆ — ಎಂದಮೇಲೆ ಅನೇಕ ಟ್ರಕ್ಕು ಮತ್ತು ಟ್ಯಾಕ್ಸಿಗಳನ್ನು ನಡೆಸುವವರು ಮೋಬಿಲ್‌ಗ್ಯಾಸ್ ಮತ್ತು ಮೋಬಿಲಾಯಿಲ್ ಉಪಯೋಗಿಸುವುದರಲ್ಲಿ ಏನಾಶ್ಚರ್ಯ!

ಯಾವಾಗಲೂ ಇವುಗಳೇ ಬೇಕೆಂದು ಕೇಳಿರಿ:

ದ್ವಿಶಕ್ತಿಯುತವಾದ

ಮೋಬಿಲ್‌ಗ್ಯಾಸ್

- ★ ಇದು ಅನೇಕ ಅಡಿಟಿವ್‌ಗಳ ಮಿಶ್ರಣವಾದ ಮೋಬಿಲ್ ಪವರ್ ಕಾಂಪೌಂಡನ್ನೊಳಗೊಂಡಿದೆ. ಈ ಕಾಂಪೌಂಡಿನಷ್ಟು ಬಲವಾದ ಅಡಿಟಿವ್‌ಗಳ ಮಿಶ್ರಣವು ಪೆಟ್ರೋಲಿನಲ್ಲಿ ಇದುವರೆಗೆ ಸೇರಿಸಲ್ಪಟ್ಟಿರಲೇ ಇಲ್ಲ.
- ★ ಇದು ನೀವು ಕೊಂಡುಕೊಳ್ಳಬಹುದಾದ ಬೇರೆ ಯಾವ ಪೆಟ್ರೋಲಿನಕಿಂತಲೂ ಹೆಚ್ಚು ಎಂಜಿನ್ ತೊಂದರೆಗಳನ್ನು ನಿವಾರಣೆ ಮಾಡುತ್ತದೆ.

ದ್ವಿವಿಧ ರಕ್ಷಣೆ ಕೊಡುವ

ಮೋಬಿಲಾಯಿಲ್

- ★ ಒಂದಕ್ಕೆ ಎರಡರಷ್ಟು ಶುದ್ಧೀಕರಣ ಗುಣ — ನಿಮ್ಮ ಕಾರು ಹೆಚ್ಚು ಸುಗಮವಾಗಿ ನಡೆಯುವಂತೆ ಮಾಡಿ, ಎಂಜಿನ್ನಿಗೆ ಹೆಚ್ಚು ಶಕ್ತಿಯನ್ನು ಕೊಟ್ಟು, ಪ್ರತಿ ಗ್ಯಾಲನ್ ಪೆಟ್ರೋಲಿಗೂ ಹೆಚ್ಚು ಮೈಲೇಜನ್ನು ಕೊಡುತ್ತದೆ.
- ★ ಸನೆತದಿಂದ ಎರಡರಷ್ಟು ರಕ್ಷಣೆ — ನಿಮ್ಮ ಎಂಜಿನ್ನಿನ ಜೀವಮಾನವನ್ನು ಹೆಚ್ಚಿಸಿ, ಓವರ್‌ಹಾಲ್ ಮಾಡುವ ಅಗತ್ಯತೆಯನ್ನು ಕಡಿಮೆ ಮಾಡುತ್ತದೆ.

ಹಾರುವ ಕೆಂಪು ಕುದುರೆಯ ಗುರುತಿರುವಲ್ಲಿ ತುಂಬಿಸಿ
ಕೊಂಡು ಉಪಯೋಗಿಸಲು ಇಂದೇ ಶುರು ಮಾಡಿರಿ!

ಸ್ಟ್ಯಾಂಡರ್ಡ್-ವ್ಯಾಕ್ಯೂಮ್ ಆಯಿಲ್ ಕಂಪೆನಿ
(ಕಂಪೆನಿಯ ಮೆಂಬರುಗಳ ಹೊಣೆಗಾರಿಕೆಯು ಮಿತಿಸಿದೆ)

V. 1873

Printed by N. A. Hoskeri at the Vijaya Press, Dharwar and published for the Proprietors Jayanti publications, by K. S. Betgeri at the Jayanti Office, Dharwar